ಸಾಮಾನ್ಯ ಅಧ್ಯಯನ

ಇತಿಹಾಸ

ಭಾರತದ ಇತಿಹಾಸ

I. ಪ್ರಾಚೀನ ಭಾರತ

ಪ್ರಾಚೀನ ಭಾರತ ಇತಿಹಾಸದ ಕಾಲಾನುಕ್ರಮಣಿಕೆ

ಕ್ರಿ.ಪೂ

4000–3000	ಸಿಂಧೂ ನಾಗರಿಕತೆಯ ನೆಲೆಸುವಿಕೆ.
2700	ಸಿಂಧೂ ನಾಗರಿಕತೆಯ ಮುದ್ರೆಗಳು ಮೆಸಪಟೋಮಿಯಾದ ಕಿಷ್‌ನಲ್ಲಿ ದೊರೆತವು.
1500–1000	ಋಗ್ವೇದದ ಕಾಲ
1000	ಕಬ್ಬಿಣ ಯುಗ
1000–600	ಉತ್ತರ ವೈಧಿಕ ಯುಗ
817	ಜೈನರ ಪಾರ್ಶ್ವನಾಥನ ಜನನ
600	2ನೇ ನಗರೀಕರಣ
563–483	ಬುದ್ಧನ ಕಾಲ
542–413	ಮಗಧ ರಾಜ್ಯ (ಹರ್ಯಾಂಕ)
540–468	ವರ್ಧಮಾನ ಮಹಾವೀರನ ಕಾಲ
518	ಪರ್ಶಿಯನ್ ರಾಜ್ಯ
413–364	ಶಿಶುನಾಗ ಸಂತತಿಯ ಕಾಲ
364–321	ನಂದರ ಕಾಲ
327–325	ಅಲೆಗ್ಸಾಂಡರ್‌ನ ಕಾಲ
326	ಹೆಡಾಸ್ಪಸ್ ಕದನ
321 –184	ಮೌರ್ಯ ಸಾಮ್ರಾಜ್ಯ
305–303	ಚಂದ್ರಗುಪ್ತ ಮೌರ್ಯ & ಸೆಲ್ಯೂಕಸ್ ನಡುವಿನ ಕದನ
268–232	ಅಶೋಕನ ಕಾಲ
257	ಅಶೋಕನು ಬೌದ್ಧ ಮತಕ್ಕೆ ಮತಾಂತರ
250	3ನೇ ಬೌದ್ಧ ಮಹಾ ಸಮ್ಮೇಳನ
184–75	ಶುಂಗರ ಕಾಲ
182	ಇಂಡೋ ಗ್ರೀಕರ ರಾಜ್ಯ ಸ್ಥಾಪನೆ
75–28	ಕಣ್ವ ಸಂತತಿಯ ಕಾಲ
58	ವಿಕ್ರಮ ಸಂವತ್ಸರ
50	ಶಾತವಾಹನರು

ಕ್ರಿಸ್ತ ಶಕ.

20–46	ಗೊಂಡೆ ಫೆರಸ್ (ಪಾರ್ಥಿಯನ್ಸ್)ನ ಕಾಲ
46	ಗ್ರೀಕ್ ನಾವಿಕ ಹಿಪ್ಪೋಲಸ್ ಮಾನ್ಸೂನ್‌ನನ್ನು ಶೋಧಿಸಿದನು.
77	ಪ್ಲಿನಿಯಿಂದ ನ್ಯಾಚುರಲ್ ಹಿಸ್ಟರಿ ಕೃತಿ ರಚನೆ.
78	ಕಾನಿಷ್ಕನು ಶಕ ವರ್ಷ ಆರಂಭಿಸಿದನು.
78–110	ಕಾನಿಷ್ಕನ ಕಾಲ
130–150	ರುದ್ರದಾಮನ ಆಳ್ವಿಕೆ ಕಾಲ
250	ಶಾತವಾಹನರ ಪತನ
320	ಗುಪ್ತರ ಕಾಲ
320–335	ಒಂದನೇ ಚಂದ್ರಗುಪ್ತ
335–380	ಸಮುದ್ರ ಗುಪ್ತ
405–411	ಫಾಹಿಯಾನ್ ಭೇಟಿ
543–775	ಬಾದಾಮಿ ಚಾಲುಕ್ಯರು.
560–903	ಕಂಚಿಯ ಪಲ್ಲವರು
606–647	ಹರ್ಷವರ್ಧನನ ಕಾಲ
622	ಮುಸ್ಲಿಂ ಹಿಜಿರಾ ಶಕೆ ಆರಂಭ
630–643	ಹ್ಯೂಯನ್‌ತ್ಸಾಂಗ್ ಭಾರತದಲ್ಲಿದ್ದನು.
630–1070	ವೆಂಗಿ ಚಾಲುಕ್ಯರು.
634	ಐಹೊಳೆ ಶಿಲಾ ಶಾಸನ
641	ಹರ್ಷವರ್ಧನನು ಚೀನಾಕ್ಕೆ ರಾಯಭಾರಿ ಕಳುಹಿಸಿದ್ದನು.
642	1ನೇ ನರಸಿಂಹವರ್ಮನಿಂದ ಬಾದಾಮಿಯ ವಶ
643	ದೇವಪ್ರಯಾಗದಲ್ಲಿ ಬೌದ್ಧ ಮಹಾಸಭೆ.
700–728	2ನೇ ನರಸಿಂಹ ವರ್ಮನ ಕಾಲ

1. ಮೂಲಾಧಾರಗಳು (Sources)

- ಇತಿಹಾಸವು ವೈಜ್ಞಾನಿಕ ನೆಲಗಟ್ಟುಗಳಲ್ಲಿ ಮಾನವನ ನಾಗರೀಕತೆ ಮತ್ತು ಸಂಸ್ಕೃತಿ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ವಿಜ್ಞಾನ, ತಂತ್ರಜ್ಞಾನ ಮತ್ತು ಕಲೆ ವಾಸ್ತುಶಿಲ್ಪಗಳ ಬಗ್ಗೆ ಅಧ್ಯಯನ ಮಾಡುವ ಮೂಲಕ ಸಮಾಜಕ್ಕೆ ಮತ್ತು ಮುಂದಿನ ಪೀಳಿಗೆಗೆ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
- ಪ್ರಾಚೀನ ಕಾಲದ ಬರವಣಿಗೆಗಳು ತಾಳೆಗರಿ ಮತ್ತು ತಾಮ್ರಪಟಗಳಲ್ಲಿ ಹೆಚ್ಚು ಅಡಕಗೊಂಡಿವೆ. ವಿದೇಶಿ ಸಾಹಿತ್ಯವು ಹೆಚ್ಚಾಗಿ ಗ್ರೀಕ್, ಲ್ಯಾಟಿನ್, ಚೀನಿ, ಅರೇಬಿಕ್, ಟಿಬೆಟಿಯನ್ ಹಾಗೂ ಪರ್ಶಿಯನ್ ಭಾಷೆಯಲ್ಲಿವೆ. ಬ್ರಾಹ್ಮೀ ಲಿಪಿಯನ್ನು ಎಡದಿಂದ ಬಲಕ್ಕೆ ಹಾಗೂ ಖರೋಷ್ಠಿ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು.
- ವಿಶ್ವದ ಸಾಹಿತ್ಯ ಕ್ಷೇತ್ರದ ಅತಿ ಪ್ರಾಚೀನ ಕೃತಿ ಋಗ್ವೇದ. ಇದರ 03 ಸೂತ್ರಗಳು ಇತಿಹಾಸವನ್ನು **'ಪೂರ್ವ ವೃತ್ತಾಂತ'** ಎಂಬರ್ಥದಲ್ಲಿ ವ್ಯಾಖ್ಯಾನಿಸಿವೆ. ಆದ್ದರಿಂದ ಋಗ್ವೇದದ 03 ಸೂತ್ರಗಳನ್ನು **"ಇತಿಹಾಸ ಸೂಕ್ತ"**ಗಳೆಂದು ಕರೆಯುವರು. ಋಗ್ವೇದದಲ್ಲಿ ಬ್ರಾಹ್ಮಣಕಗಳು ಮತ್ತು ಉಪನಿಷತ್ತುಗಳು ಇತಿಹಾಸವೆಂದರೆ "ಗತಕಾಲದ ಘಟನೆಗಳನ್ನು ಉದ್ದೇಶ ಪೂರ್ವಕವಾಗಿ ನಿರೂಪಿಸುವುದು" ಎಂದಿವೆ.
- **ಮಹಾಭಾರತ–** ಇತಿಹಾಸ ಎಂಬ ಪದದ ವಿಶಾಲವಾದ ಹಾಗೂ ನಿಖರವಾದ ಅರ್ಥ ವ್ಯಾಪ್ತಿಯು ಈ ಮಹಾಕಾವ್ಯದಲ್ಲಿ ಕಂಡುಬರುತ್ತದೆ.
- **ಜಿನಸೇನ** – 9ನೇ ಶತಮಾನದಲ್ಲಿದ್ದ ಜೈನ ಆದಿ ಪುರಾಣದ ಕರ್ತೃವಾದ ಇವನು ಇತಿಹಾಸವು ಬಹು ಆಸಕ್ತಿಯುತವಾದ ವಿಷಯ ಪರಂಪರೆಯ ಪ್ರಕಾರ ಇದು ನೈಜವಾಗಿ ಸಂಭವಿಸಿತು ಎಂಬುದನ್ನು ಕುರಿತದ್ದಾಗಿದೆ ಎಂದಿದ್ದಾನೆ.
- ವೇದ ಸಾಹಿತ್ಯದಲ್ಲಿ ರಾಜವಂಶಗಳ ಪ್ರಶಸ್ತಿಗಳು ದೊರೆತಿವೆ. ಇತಿಹಾಸಕ್ಕೆ ಸಂಬಂಧಪಡದ ಕೃತಿಗಳಾದ ಪತಂಜಲಿಯ **'ಮಹಾಭಾಷ್ಯ'** ಹಾಗೂ ಗಾರ್ಗಿಯ ಸಂಹಿತೆಗಳಲ್ಲಿ ಅಮೂಲ್ಯ ಆಧಾರಗಳು ಸಿಗುತ್ತವೆ.
- ಪ್ರಾಚೀನ ಇತಿಹಾಸಕಾರರಲ್ಲಿ ಕಲ್ಹಣನು ಅಗ್ರಗಣ್ಯ. ಇವನು ಕಾಶ್ಮೀರದ ಎಲ್ಲಾ ಶಿಲಾಶಾಸನಗಳು & ನಾಣ್ಯಗಳನ್ನು ಗುರುತಿಸಿದ್ದನು. ಆದ್ದರಿಂದ ಇವನನ್ನು **'ಭಾರತದ ಥುಸಿಡೈಡ್ಸ್'** ಎಂದು ಕರೆಯಲಾಗಿದೆ.

1) ಪ್ರಾಕ್ತನ ಆಧಾರಗಳು (Primitive sources)

- ಇವು ಬರವಣಿಗೆ ಗೊತ್ತಿಲ್ಲದ ಶಿಲಾಯುಗದ ಅವಶೇಷಗಳಿಂದಿಡಿದು 12ನೇ ಶತಮಾನದ ಶಿಲಾ ಸ್ಮಾರಕಗಳವರೆಗೆ ವ್ಯಾಪಿಸಿವೆ.
- 1784 ರಲ್ಲಿ ಸರ್ ವಿಲಿಯಂ ಜೋನ್ಸ್ ರಿಂದ ಕಲ್ಕತ್ತಾದಲ್ಲಿ **'Royal Asiatic Society'** ಸ್ಥಾಪಿತವಾಯಿತು.
- ಜೇಮ್ಸ್ ಪ್ರಿನ್ಸೆಪ್‌ರವರು ಅಶೋಕನ ಹಲವು ಶಾಸನಗಳನ್ನು ಓದಿ 1837 ರಲ್ಲಿ Asiatic Society Paper ನಲ್ಲಿ ಪ್ರಕಟಿಸಿದರು. ಇದರಿಂದ **'ಬ್ರಾಹ್ಮೀ ಲಿಪಿಯನ್ನು'** ಅರ್ಥ ಮಾಡಿಕೊಳ್ಳಲು ಸಹಾಯಕವಾಯಿತು.
- 1904ರಲ್ಲಿ **ಲಾರ್ಡ್ ಕರ್ಜನ್‌ನು** 'ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯ್ದೆ' ಜಾರಿಗೆ ತಂದನು.

1. ಭೂ ಉತ್ಖನನ

ಎ) **ಸಮತಲ ಭೂ ಉತ್ಖನನ:–** ಭೂಮಿಯ ಒಳಪದರಿನಲ್ಲಿ ಅಡಗಿಹೋದ ಅವಶೇಷಗಳನ್ನು ಅಗೆಯುವುದು, ಇದು ಕಾಲಾನುಕ್ರಮಣಿಕೆ ಹಾಗೂ ನಿವೇಶನದ ಭೂ ವಿಸ್ತಾರವನ್ನು ತಿಳಿಸುತ್ತದೆ.

ಬಿ) **ಲಂಬ ಭೂ ಉತ್ಖನನ:–** ಭೂಮಿಯ ಆಳವಾದ ಒಳ ಪದರವನ್ನು ಸಂಶೋಧನೆ ಮಾಡುವುದು.

- ಭೂ ಉತ್ಖನನದ ವೈಜ್ಞಾನಿಕ ಕ್ರಮವೆಂದರೆ **'ಕಾರ್ಬನ್–14'**. ಇದರಿಂದ ಕಾಲವನ್ನು ನಿರ್ಣಯಿಸಲಾಗುತ್ತದೆ. **'ಪೊಟಾಸಿಯಂ'** ಎಂಬ ಹೊಸ ವಿಧಾನದಿಂದಲೂ ಕಾಲವನ್ನು ನಿರ್ಣಯಿಸಲಾಗುವುದು.
- ಪ್ರಪಂಚದ ಬೃಹತ್ ದೇವಾಲಯ ಕಾಂಬೋಡಿಯಾದ ಅಂಗ್ಕೋರ್‌ವಾಟ್, ಬೋರಾಬಂದರ್‌ನ ಸ್ಮಾರಕಗಳ ಸಂಶೋಧನೆಯಿಂದಾಗಿ ಭಾರತ ಮತ್ತು ಆಗ್ನೇಯ ರಾಷ್ಟ್ರಗಳ ವಾಣಿಜ್ಯ ಸಂಬಂಧದ ಬಗ್ಗೆ ತಿಳಿಯಬಹುದು.

ಎ. ಶಾಸನಗಳು (Inscriptions)

- ಶಾಸನಗಳನ್ನು ಅಧ್ಯಯನ ಮಾಡುವುದೇ ಶಾಸನಶಾಸ್ತ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ ಸಿಂಧೂ ನಾಗರಿಕತೆಯ 'ಮುದ್ರೆಗಳು' ಬಹು ಪ್ರಾಚೀನವಾದವು ಹಾಗೂ ಅವು 'ಚಿತ್ರಗಳಿಂದ ಕೂಡಿವೆ' ಆದರೆ "ಅವುಗಳನ್ನು ಓದಲಾಗಿಲ್ಲ" ಓದಲಾಗಿರುವ ಅತಿ ಪ್ರಾಚೀನ ಶಾಸನಗಳೆಂದರೆ 'ಅಶೋಕನ ಶಾಸನಗಳಾಗಿವೆ'.

1) **ಸೋಹ್ಗಾರ್ ಶಾಸನ:–** ಭಾರತದ ಶಾಸಗಳಲ್ಲೇ ಅತಿ ಪ್ರಾಚೀನವಾದುದು.

- ಶಿಲಾ ಶಾಸನಗಳ ಪಿತಾಮಹ ಅಶೋಕ. ಅಶೋಕನ 14 ಶಿಲಾ ಶಾಸನಗಳು, 7 ಗೌಣ ಶಿಲಾಶಾಸನಗಳು ಹಾಗೂ ಕಳಿಂಗದ 02 ಶಿಲಾಶಾಸನಗಳು ದೊರೆತಿವೆ. ಅಶೋಕನು ತನ್ನ ಶಾಸನಗಳನ್ನು ಸ್ಥಳೀಯರಿಗೆ ಅರ್ಥವಾಗಲೆಂದು ದಕ್ಷಿಣದಲ್ಲಿ–**ಬ್ರಾಹ್ಮೀ ಲಿಪಿಯನ್ನು** ಮನ್ಸೇರ ಮತ್ತು ಶಹಭಾಜ್ ಶಾಸನಗಳಲ್ಲಿ **'ಖರೋಷ್ಠಿ ಲಿಪಿ'** ಬಳಸಿದ್ದಾನೆ.

2) **ಮಸ್ಕಿ ಶಾಸನ (1915):** ಅಶೋಕನ ಪೂರ್ಣ ಹೆಸರು "ದೇವನಾಂಪ್ರಿಯ ಅಶೋಕ" ಎಂದು ತಿಳಿಸಿದೆ.

3) **ಗುಜರ್ರಾ ಶಾಸನ (ಮಧ್ಯಪ್ರದೇಶ):** 'ದೇವನಾಂಪ್ರಿಯಸ ಪ್ರಿಯದರ್ಶನೋ ಅಶೋಕ' ಎಂದಿರುವ ಇದು ಅಶೋಕನ

ಹೆಸರು ಮತ್ತು ಬಿರುದುಗಳನ್ನು ತಿಳಿಸುತ್ತದೆ. ಬಿ.ಸಿ ಚಬ್ರರವರಿಂದ ಇದು ಶೋಧಿಸಲ್ಪಟ್ಟಿದೆ.

4) **ಹಾಥಿಗುಂಪ ಶಾಸನ (ಪ್ರಾಕೃತ ಮತ್ತು ಬ್ರಾಹ್ಮಿಲಿಪಿ)**

- ಕಳಿಂಗದ ಖಾರವೇಲನ ಬಗ್ಗೆ ಮಾಹಿತಿ ನೀಡುತ್ತದೆ.
- ಮೌರ್ಯರ ಅನಂತರದ ಕಳಿಂಗದ ಇತಿಹಾಸವನ್ನು ತಿಳಿಸುವ ಏಕೈಕ ಕೃತಿಯಾಗಿದೆ.

5) **ಗಿರ್ನಾರ್ ಶಾಸನ (ಗುಜರಾತ್)**

ಶಕರ ಮಹಾಕ್ಷತ್ರಪನಾದ ರುದ್ರದಾಮ ಮತ್ತು ಚಂದ್ರಗುಪ್ತನ ಕಾಲದಲ್ಲಿ ನಿರ್ಮಿತವಾದ **'ಸುದರ್ಶನ ಕೆರೆಯ'** ಬಗ್ಗೆ ತಿಳಿಸುತ್ತದೆ. ಸ್ಕಂದಗುಪ್ತನು ಈ ಶಾಸನದ ಕೆಳಗೆ ಕೆರೆಯ ಬಗ್ಗೆ ವಿವರಣೆ ಕೆತ್ತಿಸಿದ್ದಾನೆ. ಇದನ್ನು **"ಸುದರ್ಶನ ತಟಾಕ ಸಂಸ್ಕಾರ ಗ್ರಂಥ"** ಎಂದಿದ್ದಾರೆ.

6) **ಅಲಹಾಬಾದ್ ಸ್ತಂಭ ಶಾಸನ**

ಈ ಶಾಸನದ ಕರ್ತೃ ಹರಿಸೇಣ. ಗುಪ್ತರ ಚರಿತ್ರೆ ಮತ್ತು ಸಮುದ್ರಗುಪ್ತನ ದಂಡಯಾತ್ರೆಗಳ ಬಗ್ಗೆ ತಿಳಿಸುತ್ತದೆ. ಇದು ಕೌಸಾಂಬಿಯಲ್ಲಿ ಸ್ಥಾಪಿಸಲಾಗಿದ್ದು ಇದನ್ನು ಫಿರೋಜ್ ಷಾ-ತುಘಲಕ್‌ನು ಅಲಹಾಬಾದ್‌ಗೆ ವರ್ಗಾಯಿಸಿದನು.

7) **ಐಹೊಳೆ ಶಾಸನ**

- ಇದು ಸಂಸ್ಕೃತ ಕವಿ **ರವಿಕೀರ್ತಿ**ಯಿಂದ ರಚನೆಯಾಗಿದ್ದು ಮೇಗುತಿ ದೇವಾಲಯದಲ್ಲಿದೆ.
- **2ನೇ ಪುಲಿಕೇಶಿಯ** ದಿಗ್ವಿಜಯ ಮತ್ತು ಚಾಲುಕ್ಯರ ವೃತ್ತಾಂತವನ್ನು ತಿಳಿಸುತ್ತದೆ.
- ಈ ಶಾಸನದಲ್ಲಿ **'ಶಾಲಿವಾಹನ ಶಕೆ' ಕ್ರಿ.ಶ. 556-634** ಎಂದು ಉಲ್ಲೇಖಿಸಲಾಗಿದೆ.

8) **ಮೆಹ್ರೌಲಿಯ ಕಬ್ಬಿಣ ಸ್ತಂಭ**

2ನೇ ಚಂದ್ರಗುಪ್ತ ವಿಕ್ರಮಾದಿತ್ಯನ ಚರಿತ್ರೆಯನ್ನು ತಿಳಿಸುತ್ತದೆ. ಚಂದ್ರಗುಪ್ತನುII ಬಂಗಾಳದ ರಾಜರು ಮತ್ತು ವಹಿಕ ಬುಡಕಟ್ಟು ಜನರನ್ನು ಸೋಲಿಸಿದ್ದರ ಬಗ್ಗೆ ತಿಳಿಸುತ್ತದೆ.

9) **ಉತ್ತರ ಮೆರೂರು ಶಾಸನ**

- ಇದರ ಕರ್ತೃ **1ನೇ ಪರಾಂತಕ** ಚೋಳರ ಸ್ಥಳೀಯ ಸರ್ಕಾರ ಮತ್ತು ಚುನಾವಣಾ ಪದ್ಧತಿಯ ಬಗ್ಗೆ ತಿಳಿಸುತ್ತದೆ.

10) **ಕುಡಿಮಿಯಾ ಮೇಲೈ ಶಾಸನ**

- ಇದರ ಕರ್ತೃ ಪಲ್ಲವರ 1ನೇ ಮಹೇಂದ್ರವರ್ಮ **'ದಕ್ಷಿಣದ ಸಂಗೀತದ ರೀತಿ ನೀತಿಗಳ'** ಬಗ್ಗೆ ತಿಳಿಸುತ್ತದೆ.

11) **ಗ್ವಾಲಿಯಾರ್ ಪ್ರಶಸ್ತಿ**

12) **ಬೋಗಾಜ್ ಕಾಯ್ ಶಾಸನ (ಏಷ್ಯಾ ಮೈನರ್)**

ಆರ್ಯರ ದೇವತೆಗಳ ಹೆಸರು ಹಾಗೂ ಆರ್ಯರು ಭಾರತದ ಕಡೆಗೆ ಹೇಗೆ ವಲಸೆ ಬಂದರೆಂಬುದನ್ನು ತಿಳಿಸುತ್ತದೆ.

13) **ರುಮಿಂಡೈ ಶಾಸನ (ಅಶೋಕನದು)**

ಬುದ್ಧನು **'ಲುಂಬಿನಿವನ'**ದಲ್ಲಿ ಜನಿಸಿದನೆಂದು ತಿಳಿಸುತ್ತದೆ.

14) **ಎರನ್ ಶಾಸನ:**- ಸತಿ ಬಗ್ಗೆ ಹೇಳುತ್ತದೆ.

- ವಿ.ಎ.ಸ್ಮಿತ್ ರವರು **ಶಾಸನಗಳು** ನಂಬಲಾರ್ಹ ಆಧಾರಗಳು ಎಂದಿದ್ದಾರೆ.
- ಶಾಸನಗಳಲ್ಲದೆ ಭಾಷೆಯ ಆಧಾರದ ಮೇಲೆ ಗುಪ್ತರ ಪೂರ್ವಯುಗವು ಪ್ರಾಕೃತವೆಂದು ನಂತರದ್ದು ಸಂಸ್ಕೃತದ ಕಾಲವಾಗಿದೆ.
- **ತೋಪ್ರ ಮತ್ತು ಮೀರತ್** ಶಾಸನಗಳನ್ನು ಫಿರೋಜ್ ಷಾ ತುಘಲಕ್‌ನು ದೆಹಲಿಗೆ ವರ್ಗಾಯಿಸಿದನು ಹಾಗೂ ಬೈರತ್ **ಶಾಸನವನ್ನು** ಕನ್ನಿಂಗ್‌ಹ್ಯಾಂನು ಕಲ್ಕತ್ತಾಗೆ ವರ್ಗಾಯಿಸಿದನು.

ನಾಣ್ಯಗಳು (Numismatics)

- ಭಾರತದಲ್ಲಿ ಆರಂಭವಾದ ಪ್ರಾಚೀನ ನಾಣ್ಯಗಳು ಯಾವುದೇ ಬರಹಗಳನ್ನು ಹೊಂದಿರದೆ ಕೆಲವು ಚಿತ್ರ ಮತ್ತು ಮುದ್ರೆಗಳನ್ನು ಹೊಂದಿದ್ದವು ಅವುಗಳಲ್ಲಿ ಮುಖ್ಯವಾದವೆಂದರೆ.
- ದಿನಾರ್ – ಚಿನ್ನದ ನಾಣ್ಯ
- ಕೃಷ್ಣಾಲಿ, ಮಷ, ಧಾರಣ, ಶತಮಾನ – ಬೆಳ್ಳಿ ನಾಣ್ಯಗಳು
- ಕರ್ಷಪಣ – ತಾಮ್ರದ ನಾಣ್ಯ
- ಕುಶಾನರು ಚಿನ್ನದ ನಾಣ್ಯ(ದಿನಾರ ನಾಣ್ಯ)ಗಳನ್ನು ಭಾರತದಲ್ಲಿ ಹೆಚ್ಚು ಚಲಾವಣೆ ಮಾಡಿದವರಲ್ಲಿ ಮೊದಲಿಗರು. ಆದರೆ ಬೆಳ್ಳಿಯ ನಾಣ್ಯಗಳನ್ನೇ ಅವರು ಹೊರಡಿಸಲಿಲ್ಲ. ಕುಶಾನರ ನಾಣ್ಯಗಳಲ್ಲಿ ಕಂಡುಬರುವ ಟೋಪಿ ಮತ್ತು ಕುಳಿತ ಭಂಗಿಯು ರೋಮನ್ ಶೈಲಿಯದಾಗಿರುವುದರಿಂದ ಕುಶಾನರ ಮೇಲೆ ರೋಮನ್ನರ ಪ್ರಭಾವ ಹೆಚ್ಚಾಗಿತ್ತೆಂದು ತಿಳಿಯುತ್ತದೆ.
- ಗ್ರೀಕರು ಪರಿಚಯಿಸಿದ ನಾಣ್ಯಗಳು **– ದಿನಾರ್, ಸ್ತೇತರ್, ಡೇರಿಕ್**
- ಪರ್ಶಿಯನ್ ನಾಣ್ಯಗಳು – **ಡೇರಿಕ್ (ಚಿನ್ನದ ನಾಣ್ಯ) & ಸಿಗ್ಲೋಯಿ (ಬೆಳ್ಳಿ ನಾಣ್ಯ)**
- ಕುಶಾನರ 1ನೇ ಕಾಡ್‌ಪಿಸಸ್ ನಾಣ್ಯಗಳಲ್ಲಿ ಗ್ರೀಕ್ ದೇವತೆ **ಹೆರಾಕ್ಲಸ್** ಚಿತ್ರವಿತ್ತು. ವಿಮಾಕಡ್‌ಫಿಸಸ್ ನಾಣ್ಯಗಳಲ್ಲಿ ಶಿವನ ಚಿತ್ರವಿದೆ.
- ಆಗಸ್ಟಸ್ ಮತ್ತು ಟೈಬಿರಿಯಸ್ ಚಕ್ರವರ್ತಿಗಳ ಕಾಲದ ಸುಮಾರು 200 ರೋಮನ್ ನಾಣ್ಯಗಳು ಬೆಂಗಳೂರು ವಿಮಾನ ನಿಲ್ದಾಣ ಬಳಿ ದೊರೆತಿವೆ. ಹಾಗೆಯೇ ಚಂದ್ರವಳ್ಳಿ, ತಲಕಾಡು, ತಮಿಳುನಾಡು ಅರಿಕಮೇಡು ನಾಣ್ಯಗಳು ರೋಮ್‌ನೊಂದಿಗಿನ ವ್ಯಾಪಾರದ ಬಗ್ಗೆ

ತಿಳಿಸುತ್ತವೆ.

- **ಸಮುದ್ರಗುಪ್ತನು** ಅಶ್ವಮೇಧಯಾಗದ ನಾಣ್ಯ, ವೀಣಾಪಾಣಿ ನಾಣ್ಯ, ಹುಲಿ ಬೇಟೆಯ ನಾಣ್ಯಗಳು ಮುಂತಾದ **08 ರೀತಿಯ** ನಾಣ್ಯಗಳನ್ನು ಹೊರಡಿಸಿದ್ದಾನೆ.
- ಸಮುದ್ರಗುಪ್ತನು ತನ್ನ ನಾಣ್ಯಗಳ ಮೇಲೆ ಯುದ್ಧ ಕೊಡಲಿಯನ್ನಿಡಿದ ಚಿತ್ರವಿದ್ದು ಕೊಡಲಿಯು ಯಮನ ಆರಾಧಕವಾಗಿದೆ ಅನೇಕ ನಾಣ್ಯಗಳ ಮೇಲೆ **'ಅಶ್ವಮೇಧ ರಾಜನ್'** ಎಂಬುದಿದೆ.
- 2ನೇ ಚಂದ್ರಗುಪ್ತನು ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದನು. ಗುಪ್ತರ ನಾಣ್ಯಗಳ ಮೇಲೆ **ಲಕ್ಷ್ಮಿಯ ಚಿತ್ರವೂ,** ಕುಶಾನರ ನಾಣ್ಯಗಳ ಮೇಲೆ **'ಶಿವನ ಚಿತ್ರ'** ಹೆಚ್ಚಾಗಿರುವುದು ಕಂಡುಬರುತ್ತದೆ.
- ಮೊದಲ ವ್ಯವಸ್ಥಿತ ನಾಣ್ಯಗಳನ್ನು (ಬರಹ ಸಹಿತ) ಹೊರಡಿಸಿದವರು **ಇಂಡೋಗ್ರೀಕರು**
- ಚಿನ್ನದ ನಾಣ್ಯಗಳನ್ನು ಹೊರಡಿಸಿದವರು **ಕುಶಾನರು**
- ಅತ್ಯಧಿಕ ಚಿನ್ನದ ನಾಣ್ಯಗಳನ್ನು ಹೊರಡಿಸಿದವರು **ಗುಪ್ತರು.**
- ಕ್ರಿ.ಪೂ. 6ನೇ ಶತಮಾನದಿಂದ ನಾಲ್ಕನೇ ಶತಮಾನದವರೆಗೆ ಒಂದು **'ಕರ್ಷಪಣ'** ನಾಣ್ಯ 140ಗ್ರೈನ್ ತೂಕವನ್ನು ಹೊಂದಿತ್ತು. ಹಚ್ಚೊತ್ತಿನ ನಾಣ್ಯಗಳು ಬಳಕೆಯಲ್ಲಿದ್ದವು.

ಸಿ. ಸ್ಮಾರಕಗಳು (Monuments)

- ಸ್ಮಾರಕಗಳನ್ನು ಅಧ್ಯಯನ ಮಾಡಿದಾಗ ಭಾರತದ ಕಲೆಯ ಮೇಲೆ ರೋಮನ್ ಪ್ರಭಾವ ಅಗಾಧವಾಗಿರುವುದು ಕಂಡುಬರುತ್ತದೆ. ಭಾರತದಲ್ಲಿನ ಪುರಾತನ ಸ್ಮಾರಕಗಳೆಂದರೆ ಬೌದ್ಧ ಸ್ತೂಪಗಳು ವಿಹಾರಗಳು, ಜೈನ ಚೈತ್ಯಾಲಯಗಳು ಮುಂತಾದವು.
- ಪಾಟಲೀಪುತ್ರದ ಸಂಶೋಧನೆಯಿಂದ **'ಅರಮನೆಗಳು'** ದೊರೆತಿವೆ. ಇವುಗಳ ಮೇಲೆ **ಪರ್ಷಿಯನ್ ಕಲೆಯ** ಪ್ರಭಾವವಿದೆ.
- ಸ್ಮಾರಕಗಳು ರಾಜರ ಧಾರ್ಮಿಕ ನೀತಿ, ನಂಬಿಕೆಗಳನ್ನು ತಿಳಿಸುತ್ತವೆ. ದೇವಾಲಯಗಳ ನಿರ್ಮಾಣ ಕಲೆಯು ಗುಪ್ತರ ನಂತರ ಬೆಳೆಯಲು ಜೈನ ಹಾಗೂ ಬೌದ್ಧ ಕಲೆಗಳು ಪ್ರಭಾವ ಬೀರಿದವು.
- **ಮಥುರಾ ಮತ್ತು ಸಾರನಾಥಗಳಲ್ಲಿ** ಬುದ್ಧನ ವಿಗ್ರಹಗಳು ಹೆಚ್ಚು ದೊರೆತಿವೆ. ಒಟ್ಟಾರೆ ಒಂದು ರಾಷ್ಟ್ರದ ಸಂಸ್ಕೃತಿಯ ತಿರುಳನ್ನು ಆ ರಾಷ್ಟ್ರದ ಅಳಿಯದೇ ಉಳಿದ ಕಲಾ ಸ್ಮಾರಕಗಳು ಪ್ರತಿಬಿಂಬಿಸುತ್ತವೆ.

ಸಾಹಿತ್ಯಕ ಆಧಾರಗಳು (Literary sources)

- ನಾಗಾರ್ಜುನಕೊಂಡದ ಕ್ರಿ.ಪೂ.2ನೇ ಶತಮಾನದಲ್ಲಿ ರಚನೆಯಾದ ಶಿಲ್ಪಕಲೆಯಲ್ಲಿ ಭಗವಾನ್ ಬುದ್ಧನ ತಾಯಿ ಮಾಯಾದೇವಿ, ಕನಸನ್ನು ರಾಜ ಶುದ್ಧೋದನನಿಗೆ ವಿವರಿಸುವ ದೃಶ್ಯವಿದೆ. ಇದು ಭಾರತದ ಬರವಣಿಗೆಯ ಕಲೆಯನ್ನು ಸೂಚಿಸುವ ಪ್ರಥಮ ಚಾರಿತ್ರಿಕ ದಾಖಲೆಯಾಗಿದೆ.
- ಪ್ರಾಚೀನ ಮಾನವನು ತನ್ನ ಬರವಣಿಗೆಯನ್ನು ಹತ್ತಿಬಟ್ಟೆ ಮರದ ತೊಗಟೆ ಮತ್ತು ತಾಳೆಗರಿ ಮೇಲೆ ಹಾಗೂ ಮಧ್ಯ ಏಷ್ಯಾದವರು ಕುರಿ ಚರ್ಮದ ಮೇಲೆ ಬರೆಯುತ್ತಿದ್ದರು.
- ಸಂಸ್ಕೃತ ಬರಹಗಳು ದಕ್ಷಿಣ ಭಾರತ, ಕಾಶ್ಮೀರ & ನೇಪಾಳದಲ್ಲಿ ಹೆಚ್ಚು ದೊರೆತಿವೆ.

ದೇಶಿಯ ಬರವಣಿಗೆಗಳು

1. ವೈಧಿಕ ಸಾಹಿತ್ಯ

ಎ. ನಾಲ್ಕು ವೇದಗಳು

- ಋಗ್ವೇದ, ಸಾಮವೇದ, ಯರ್ಜುವೇದ ಮತ್ತು ಅಥರ್ವಣ ವೇದ ಎಂಬ 4 ವೇದಗಳಿವೆ.
- ಮೊದಲ 03 ವೇದಗಳನ್ನು **'ತ್ರಯಿ'** ಎನ್ನುತ್ತಾರೆ. ಇವು ಮೊದಲಿನ ಆರ್ಯರು ಸ್ಥಳೀಯ ದಸ್ಯುಗಳ ವಿರುದ್ಧ ಹೋರಾಡಿ ಅಧಿಪತ್ಯ ಸ್ಥಾಪಿಸಿದ ಬಗ್ಗೆ ತಿಳಿಸುತ್ತವೆ.
- ವೇದಗಳು ಆರ್ಯರ ರಾಜಕೀಯ ಸಂಸ್ಥೆಗಳಾದ **ಸಭಾ** ಮತ್ತು **ಸಮಿತಿ**ಗಳ ಬಗ್ಗೆ ತಿಳಿಸುತ್ತವೆ.
- ಋಗ್ವೇದವು ತಿಳಿಸುವ 10 ರಾಜರ ನಡುವಣ ಯುದ್ಧದಂತಹ ಘಟನೆಗಳು ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸುವ ಮೊದಲ ಪ್ರಯತ್ನಗಳಾದವು.

ಬಿ. ಬ್ರಾಹ್ಮಣಕಗಳು

- ಇವು ವೇದಗಳಲ್ಲಿನ ಮಂತ್ರಗಳನ್ನು ವಿವರಿಸುತ್ತವೆ.
- ಐತ್ತರೇಯ ಬ್ರಾಹ್ಮಣವು ಆಗಿನ ಕಾಲದ ಸಮಾಜ, ರಾಷ್ಟ್ರ ಜೀವನದ ಉಗಮ, ರಾಜರ ಗುಣ ಮತ್ತು ಕರ್ಮಗಳನ್ನು ತಿಳಿಸುತ್ತದೆ.
- ಗೋಪಥ ಬ್ರಾಹ್ಮಣವು ವೈಧಿಕ ಆಚರಣೆಗಳ ಬಗ್ಗೆ ತಿಳಿಸುತ್ತದೆ.
- ಶತಪಥ ಬ್ರಾಹ್ಮಣವು ಶಾಸ್ತ್ರಗಳು, ಭೂಮಿಯ ಉಳುಮೆ & ಬಡ್ಡಿ ದರದ ಬಗ್ಗೆ ತಿಳಿಸುತ್ತದೆ.

ಸಿ. ಪುರಾಣಗಳು

- ವಾಯುಪುರಾಣವು ಗುಪ್ತರ ಆಡಳಿತ ವ್ಯವಸ್ಥೆಯ ಬಗ್ಗೆ ತಿಳಿಸುತ್ತದೆ.
- ವಿಷ್ಣು ಪುರಾಣವು ಮಹಾಭಾರತದ **ಅವಧಿಯಿಂದ,** ಹಸ್ತಿನಾಪುರದಲ್ಲಿ ಆಳಿದ ರಾಜರುಗಳ ಬಗ್ಗೆ ತಿಳಿಸುತ್ತದೆ.
- ಮತ್ಸ್ಯ ಪುರಾಣದಲ್ಲಿ ವೈಷ್ಣವ ಮತ & ಸೌರವ್ಯೂಹದ ಉಗಮದ ಉಲ್ಲೇಖವಿದೆ.

ಡಿ. ರಾಮಾಯಣ ಮತ್ತು ಮಹಾಭಾರತ

- ರಾಮಾಯಣವು ಆರ್ಯರ ಧರ್ಮವು ಭಾರತಕೆಲ್ಲಾ ಹೇಗೆ ವ್ಯಾಪಿಸಿತು ಎಂಬುದನ್ನು ತಿಳಿಸುತ್ತದೆ.
- ಮಹಾಭಾರತವು ಭಾರತೀಯ ನಾಗರೀಕತೆಯ ಸಂಸ್ಕೃತಿಯ ವಿವಿಧ ಮುಖಗಳ ಬಗ್ಗೆ ತಿಳಿಸುತ್ತದೆ. ಇದರ **'ಭಗವದ್ಗೀತೆಯು'** ಭಾರತೀಯ ದರ್ಶನದ ಕರ್ಮಮಾರ್ಗ ಮತ್ತು ಭಕ್ತಿ ಮಾರ್ಗಗಳನ್ನು ಬೋಧಿಸುತ್ತದೆ.

ಬೌದ್ಧ ಸಾಹಿತ್ಯ

- ಬೌದ್ಧ ಸಾಹಿತ್ಯವು **'ಪಾಳಿ ಭಾಷೆಯಲ್ಲಿ'** ಹೆಚ್ಚು ರಚಿತವಾಗಿದೆ.
- ಪಾಳಿ ಎಂದರೆ **ಸರಳ/ ಪವಿತ್ರ/ ಸಾಲು** ಎಂದರ್ಥ
- ಬೌದ್ಧ ಧರ್ಮಶಾಸ್ತ್ರ / ತ್ರಿಪಿಟಕವು ಪಾಳಿ ಭಾಷೆಯಲ್ಲಿದೆ.
- ತ್ರಿಪಿಟಕಗಳಲ್ಲಿ ಬುದ್ಧ ಮತ್ತು ಅವನ ಶಿಷ್ಯರ ಬೋಧನೆಗಳ ಸಂಗ್ರಹವಿದೆ,

1) **ವಿನಯ ಪೀಟಕ:** ಆನಂದ ಇದನ್ನು ಸಂಗ್ರಹಿಸಿದ್ದಾನೆ. ಇದು ಮುಖ್ಯವಾಗಿ ಬೌದ್ಧ ಧರ್ಮದಲ್ಲಿನ ಸನ್ಯಾಸಿ ಮತ್ತು ಸನ್ಯಾಸಿನಿಯರಿಗೆ ನಿಯಮ ಮತ್ತು ನಿಬಂಧನೆಗಳ ಬಗ್ಗೆ ಹಾಗೂ ಬೌದ್ಧ ಧರ್ಮದ ಬೆಳವಣಿಗೆ, ಬುದ್ಧನ ಜೀವನ, ಉಪದೇಶಗಳು ಭಿಕ್ಷು ಮತ್ತು ಭಿಕ್ಷುಣಿಯರಿಗೆ ಆಚಾರ ಮತ್ತು ವಿಚಾರಗಳನ್ನು ತಿಳಿಸುತ್ತದೆ.

2) **ಸುತ್ತಪೀಟಕ:**– ಉಪಾಲಿ ಇದನ್ನು ಸಂಗ್ರಹಿಸಿದ್ದಾನೆ. ಇದು ಬುದ್ಧನ ಬೋಧನೆಗಳ ತಾತ್ಪರ್ಯಗಳನ್ನು ಒಳಗೊಂಡಿದೆ. ಬುದ್ಧನ ಶಿಷ್ಯರಾದ ಆನಂದ, ಮೊಗ್ಗಲನ ಆಚಾರ ಸಂಹಿತೆ ಒಳಗೊಂಡಿದೆ.

3) **ಅಭಿದಮ್ಮ ಪೀಟಕ:** ಇದು ಬುದ್ಧೋಪದೇಶದ ತತ್ವ ಸಾಗರವನ್ನು ಹಾಗೂ ಬೌದ್ಧಿಕ ವ್ಯಾಖ್ಯಾನಗಳನ್ನು ಒಳಗೊಂಡಿದೆ, ಇದರಲ್ಲಿ 7 ಅಧ್ಯಾಯಗಳಿವೆ.

ಸುತ್ತಪೀಟಕದಲ್ಲಿ ದೀಘನಿಕಾಯ, ಮಜ್ಜಮ ನಿಕಾಯ, ಸಂಯುಕ್ತ ನಿಕಾಯ, ಅಂಗೊತ್ತರ ನಿಕಾಯ ಮತ್ತು ಕ್ಷುದ್ರಕ ನಿಕಾಯಗಳೆಂಬ ಭಾಗಗಳಿವೆ.

1. **ದೀಘ ನಿಕಾಯ:**– ಇದು ಆತ್ಮದ ಮೇಲಿದ್ದ ವೇದಾಂತಿಕ ಕಲ್ಪನೆಗಳನ್ನು ಅಲ್ಲಗಳೆದಿದೆ ಹಾಗೂ ಬುದ್ಧನ ಸಾಮಾಜಿಕತೆ ಕಟ್ಟುನಿಟ್ಟಾಗಿರಲಿಲ್ಲ ಎಂದಿದೆ.
2. **ಅಂಗೋತ್ತರ ನಿಕಾಯ :**– ಪ್ರಾಚೀನ ಭಾರತದ 16 ಮಹಾಜನ ಪದಗಳ ಬಗ್ಗೆ ವಿಶಿಷ್ಟವಾಗಿ ತಿಳಿಸುತ್ತದೆ.

- **ದಮ್ಮ ಪಾದವು** ಬುದ್ಧನ 423 ಬೋಧನೆಗಳ ಸಂಗ್ರಹ ಕೃತಿಯಾಗಿದೆ.
- **ತೇರಗಾಥವು** ಬೌದ್ಧ ಸನ್ಯಾಸಿಗಳಿಂದ ರಚಿತವಾದ ಕವಿತೆಗಳ ಸಂಗ್ರಹವಾಗಿದೆ.
- **ತೇರಿಗಾಥವು** ಬೌದ್ಧ ಸನ್ಯಾಸಿನಿಯರಿಂದ ರಚಿತವಾದ ಕವಿತೆಗಳ ಸಂಗ್ರಹವಾಗಿದೆ.
- **ಬುದ್ಧವಂಶವು** ಬುದ್ಧನ 24 ಜನ್ಮಗಳ ದಂತಕತೆಗಳ ಸಂಗ್ರಹವನ್ನು ಒಳಗೊಂಡಿದೆ.
- **ಕಥಾವಸ್ತುವು** ಕ್ರಿ.ಪೂ. 234ರಲ್ಲಿ ಅಶೋಕನ ಕಾಲದ 3ನೇ ಬೌದ್ಧ ಸಮಾವೇಶದಲ್ಲಿ ಕೈಗೊಂಡ ತೀರ್ಮಾನಗಳನ್ನು ಒಳಗೊಂಡಿದೆ. ಇದರಲ್ಲಿ ಬೌದ್ಧ ಧರ್ಮ ಪ್ರಚಾರದ ಬಗ್ಗೆ ಸ್ಥೂಲ ವಿವರಣೆಯಿದೆ.

5) **ಸಿಲೋನಿನ ವೃತ್ತಾಂತಗಳು:**– ದೀಪವಂಶ ಮತ್ತು ಮಹಾವಂಶಗಳನ್ನು ಸಿಲೋನಿನ ವೃತ್ತಾಂತಗಳೆನ್ನುವರು. ಮಹಾವಂಶವು ಮಹಾನಮನನಿಂದ ರಚಿಸಲ್ಪಟ್ಟಿದೆ. ಇವು ಸಿಲೋನಿನ ಧಾರ್ಮಿಕ ಇತಿಹಾಸ, ಭಾರತೀಯ ರಾಜಕೀಯ ಪರಿಸ್ಥಿತಿಯ ಬಗ್ಗೆ ತಿಳಿಸುತ್ತದೆ.

6) **ಮಹಾವಿಭಾಷ ಗ್ರಂಥ :**– ಕಾನಿಷ್ಕನ ಕಾಲದಲ್ಲಿ ಕಾಶ್ಮೀರದಲ್ಲಿ ನಡೆದ 4ನೇ ಬೌದ್ಧ ಸಮ್ಮೇಳನದ ತೀರ್ಮಾನಗಳನ್ನು ಕ್ರೋಢಿಕರಿಸಲಾಗಿದೆ.

7) **ಮಿಲಿಂದ ಪನ್ಹ:**– ಬೌದ್ಧ ಪಂಡಿತ **ನಾಗಸೇನ** ನೊಡನೆ ಇಂಡೊ–ಗ್ರೀಕರ **ಮೆನಾಂಡರನು** ನಡೆಸಿದ ಧಾರ್ಮಿಕ ವಿಚಾರದ ಪ್ರಶ್ನೆಗಳನ್ನು ಹೊಂದಿದೆ.

8) **ಬೌದ್ಧ ಜಾತಕ ಕಥೆಗಳು :**– ಬೌದ್ಧ ಕಲಾ ಕೇಂದ್ರಗಳಾದ ಬಾರುಟ್, ಸಾಂಚಿ, ಅಮರಾವತಿ ಮತ್ತು ಅಜಂತಾಗಳ ಚಿತ್ರಗಳಲ್ಲಿ ಜಾತಕ ಕಥೆಗಳ ದೃಶ್ಯವಿದೆ. ಬುದ್ಧನ ಕಾಲದ ಸಾಮಾಜಿಕ, ಆರ್ಥಿಕ ವಿಚಾರಗಳನ್ನು ಪುನರ್ ರಚಿಸಲು ಸಹಾಯವಾಗಿದೆ.

9) **ಬುದ್ಧ ಚರಿತ :**– ಅಶ್ವಘೋಷ ರಚಿಸಿರುವ ಇದು ಬುದ್ಧನ ಜೀವನ ಚರಿತ್ರೆಯನ್ನು ಒಳಗೊಂಡಿದೆ. ಇವನ ಇತರ ಕೃತಿಗಳೆಂದರೆ ಸಾರಿಪುತ್ರ ಪ್ರಕರಣ, ಮಹಾಯಾನ, ಶುದ್ಧೋತ್ಪಾದ, ಸೌಂದರ್ಯಾನಂದ ಕಾವ್ಯ, ವಜ್ರಸೂಚಿ ಇತ್ಯಾದಿ.

10) **ಲಲಿತ ವಿಸ್ತಾರ :**– ಸಂಸ್ಕೃತ ಕೃತಿಯಾದ ಇದು ಬುದ್ಧನ ಜೀವನ ಚರಿತ್ರೆಯನ್ನು ಒಳಗೊಂಡಿದೆ. ಇದು ಮಹಾಯಾನ ಪಂಥದ ಮೊದಲ ಕೃತಿ. ಈ ಕೃತಿಯ ಆಧಾರದ ಮೇಲೆ ಸರ್ ಎಡ್ವಿನ್ ಅರ್ನಾಲ್ಡ್‌ರ **'ಲೈಟ್ ಆಫ್ ಏಷ್ಯಾ'** ಕೃತಿ ಬರೆಯಲ್ಪಟ್ಟಿದೆ.

11) **ವೈಫಲ್ಯ ಸೂತ್ರಗಳು :**– ಇವು ಸಂಸ್ಕೃತದಲ್ಲಿ 9 ಸಂಪುಟಗಳಲ್ಲಿವೆ. ಬೌದ್ಧ ಸಿದ್ಧಾಂತವನ್ನೊಳಗೊಂಡಿವೆ.
ಇತರ ಮಹಾಯಾನ ಪಂಥದ ಕೃತಿಗಳೆಂದರೆ–
1) **ಸುಧರ್ಮ**–ಪುಂಡರಿಕ 2) ವಜ್ರವೇಧಿಕ 3) ಕರಂಡ ವ್ಯೂಹ 4) ಅಷ್ಟಸಹಸ್ರೀ ಪ್ರಜ್ಞಾ ಪರಿಮಿತ

12) **ಅಭಿಧಮ್ಮ ಕೋಶ :**– ಕ್ರಿ.ಶ 5ನೇ ಶತಮಾನದಲ್ಲಿ ವಸುಬಂಧು ರಚಿಸಿದ್ದಾನೆ.

13) **ತಥಾಗತವನ್ನು** ಗುಹಾಕನು ರಚಿಸಿದನು.

ಜೈನ ಸಾಹಿತ್ಯ

- ಜೈನರು ಸಂಸ್ಕೃತವನ್ನು ತಿರಸ್ಕರಿಸಿ **ಪ್ರಾಕೃತ ಭಾಷೆಯಲ್ಲಿ** ಬೋಧಿಸಿದರು.
- ಮೊದ ಮೊದಲ ಜೈನ ಕೃತಿಗಳು ಅರ್ಧಮಾಗಧಿ ಭಾಷೆಯಲ್ಲಿವೆ.
- ಜೈನ ಧರ್ಮದ ಗ್ರಂಥಗಳನ್ನು ಅಂಗಗಳು ಮತ್ತು ಉಪಾಂಗಗಳು ಎನ್ನುವರು. ಉದಾ:– ಆಚಾರಾಂಗಧವಳ, ಜಯಧವಳ– ಇತ್ಯಾದಿ.
- ಪಂಪನ ವಿಕ್ರಮಾರ್ಜುನ ವಿಜಯ, ರವಿಕೀರ್ತಿಯ ಐಹೊಳೆ ಶಿಲಾಶಾಸನ, ಭದ್ರಬಾಹುವಿನ ಜೈನ ಕಲ್ಪಸೂತ್ರವು ಪಾರ್ಶ್ವನಾಥನ ಬಗ್ಗೆ ವಿವರಿಸುತ್ತದೆ.
- ಜೈನರು ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಅಸ್ತಿಭಾರ ಹಾಕಿದರು.

ಐತಿಹಾಸಿಕ ಮಹಾಕಾವ್ಯಗಳು

1) **ಕಾಳಿದಾಸ (ರಘುವಂಶ, ಮಾಳವಿಕಾಗ್ನಿ ಮಿತ್ರ, ವಿಕ್ರಮೋರ್ವಶಿಯ, ರಿತುಸಂಹಾರ)**

- ರಘುವಂಶ– ಗುಪ್ತರ ರಘುವಿನ ದಂಡಯಾತ್ರೆ ಬಗ್ಗೆ ವಿವರಿಸುತ್ತದೆ.
- ಮಾಳವಿಕಾಗ್ನಿ ಮಿತ್ರ ವಿದೀಶಾ ಮತ್ತು ವಿದರ್ಭ ರಾಜ್ಯಗಳ ಯುದ್ಧದ ಬಗ್ಗೆ ತಿಳಿಸುತ್ತದೆ.

2) **ವಿಶಾಖದತ್ತನ: ಮುದ್ರಾರಾಕ್ಷಸ**

- ಈ ನಾಟಕದಲ್ಲಿ **ಕೌಟಿಲ್ಯನೇ** ನಾಯಕ, ನಾಟಕದ ಆದಿಯಿಂದ ಅಂತ್ಯದವರೆಗೆ ರಾಜಕೀಯ ಪ್ರಭಾವವಿದೆ. ನಂದರ ಧನನಂದನ ಮತ್ತು ಚಂದ್ರಗುಪ್ತ ಮೌರ್ಯನ ನಡುವಿನ ಯುದ್ಧದ ವಿವರಣೆಯಿದೆ.
- ವಿಶಾಖದತ್ತನನ್ನು **'ಭಾರತದ ಕರ್ನೆಲ್'** ಎನ್ನುವರು.

3) **ಬಾಣನ: ಹರ್ಷಚರಿತೆ.**

- ಒಟ್ಟು 08 ಅಧ್ಯಾಯಗಳಿವೆ. ಹರ್ಷನ ಜೀವನ ಚರಿತ್ರೆ ತಿಳಿಸುತ್ತದೆ.
- ಗೌಡ ದೇಶದ ಶಶಾಂಕನಿಂದ ರಾಜ್ಯ ವರ್ಧನನ ಕೊಲೆಯಾಯಿತು ಎಂದಿದೆ.
- ಬಂಗಾಳದ ರಾಮಪಾಲನ ಆತ್ಮಕಥನ **'ರಾಮಚರಿತದ'** ಬಗ್ಗೆ ತಿಳಿಸುತ್ತದೆ.

4) **ಕಲ್ಹಣನ : ರಾಜತರಂಗಿಣಿ**

- ಭಾರತದ ಪ್ರಪ್ರಥಮ ಹಾಗೂ ಏಕೈಕ ಐತಿಹಾಸಿಕ ಕೃತಿ.
- ಕಾಶ್ಮೀರದ ಇತಿಹಾಸ ತಿಳಿಸುವ ಏಕೈಕ ಕೃತಿಯಾಗಿದೆ.
- ಈ ಗ್ರಂಥವು ಅಶೋಕನು ಕಳಿಂಗ ಯುದ್ಧಕ್ಕಿಂತ ಮೊದಲು ಶೈವ ಧರ್ಮದವನಾಗಿದ್ದನೆಂದು ತಿಳಿಸಿದೆ.

5) **ಚಾಂದ್ ಬರ್ದಾಯಿ– ಪೃಥ್ವಿರಾಜರಾಸೋ**
ರಜಪೂತರ ಪ್ರಸಿದ್ಧ ದೊರೆ ಪೃಥ್ವಿರಾಜ್ ಚೌಹಾಣ್ ಬಗ್ಗೆ ತಿಳಿಸುತ್ತದೆ.

6) **ಬಿಲ್ಹಣ – ವಿಕ್ರಮಾಂಕ ದೇವ ಚರಿತ**
ಚಾಲುಕ್ಯ ಚಕ್ರವರ್ತಿ 6ನೇ ವಿಕ್ರಮಾದಿತ್ಯನ ಬಗ್ಗೆ ತಿಳಿಸುತ್ತದೆ.

7) **ರಸಮಾಲ ಕೃತಿ** – ಗುಜರಾತಿನ ಇತಿಹಾಸ ತಿಳಿಸುತ್ತದೆ.

8) **ಜನ್ನ** – ಯಶೋಧರ ಚರಿತ್ರೆ.

9) **ಜಯಸಿಂಹ** – ಕುಮಾರಪಾಲ ಚರಿತ್ರೆ.

10) **ಮಯೂರ ಜಂಗ್** –ಚಿಂತಾಮಣಿ ನಾಟಕ

11) **ರಾಜಶೇಖರ** – ಪ್ರಬಂಧ ಕೋಶ

12) **ಮೇರುತುಂಗ** – ಪ್ರಬಂಧ ಚಿಂತಾಮಣಿ.

ವೈಜ್ಞಾನಿಕ ಸಾಹಿತ್ಯ

1) ಚರಕನ **ಚರಕ ಸಂಹಿತೆಯಲ್ಲಿ** ಆರ್ಯ ವೈದ್ಯಶಾಸ್ತ್ರದ ವಿಚಾರಗಳಿವೆ.
2) ಶುಶ್ರುತನ **ಶುಶ್ರುತ ಸಂಹಿತೆಯಲ್ಲಿ** ಖನಿಜ, ಗಿಡಮೂಲಿಕೆ, ಔಷಧಿಗಳ ವಿವರಗಳಿವೆ.
3) ವರಾಹಮಿಹಿರನ **ಪಂಚಸಿದ್ಧಾಂತಿಕ** ಮತ್ತು **ಬೃಹತ್‌ಕಥಾ** ಕೃತಿಗಳು.
4) ಆರ್ಯಭಟನ **ಆರ್ಯಭಟೀಯಂದಲ್ಲಿ** ಖಗೋಳ ವಿಜ್ಞಾನದ ವಿವರಗಳಿವೆ.

ಪದ್ಧತಿಯ ವಿವರಣೆ ಇದೆ'.

6) ಕೀರ್ತಿ ವರ್ಮನ **ಗೋವೈದ್ಯದಲ್ಲಿ** ವೈದ್ಯಕೀಯ ವಿವರಗಳಿವೆ.
7) ಉಗ್ರಾದಿತ್ಯ ಕಲ್ಯಾಣ ಕಾರಕದಲ್ಲಿ ರಾಷ್ಟ್ರಕೂಟರ ವೈದ್ಯಕೀಯ ವಿವರಗಳಿವೆ.
8) ಶಿವಮಾರನ ಗಜಾಷ್ಟಕ.
9) ದುರ್ವಿನಿತನ ಗಜಶಾಸ್ತ್ರ
10) ಸಾಲಿಹೋತ್ರಿಯ ಅಶ್ವಶಾಸ್ತ್ರ
11) ನಾಗಾರ್ಜುನನ ರಸವೈದ್ಯ.
12) ವಾಗ್ಭಟನ **ಅಷ್ಟಾಂಗ ಹೃದಯದಲ್ಲಿ** ಆಯುರ್ವೇದ ವೈದ್ಯಕೀಯ ಪದ್ಧತಿ ಮತ್ತು ವೈದ್ಯಕೀಯ ಶಸ್ತ್ರ ಚಿಕಿತ್ಸೆಯ ವಿಧಾನಗಳಿವೆ.
13) 2ನೇ ನಾಗಾರ್ಜನನ್ನು ಭಾರತದ **'ರಸಾಯನ ಶಾಸ್ತ್ರದ ಪಿತಾಮಹ** ಎನ್ನುವರು.

ವಿದೇಶಿ ಬರವಣಿಗೆಗಳು

1) ಗ್ರೀಕ್ ಬರವಣಿಗೆಗಳು

- ಪರ್ಶಿಯಾದ ಸೈರಸ್‌ನು ಭಾರತದ ಮೇಲೆ ದಂಡಯಾತ್ರೆ ಕೈಗೊಳ್ಳುವುದರ ಮೂಲಕ ಪರ್ಶಿಯ ಮತ್ತು ಭಾರತಗಳ ನಡುವೆ ಸಂಪರ್ಕ ಉಂಟಾಯಿತು. ಸೈರಸ್‌ನ ಮಗ ಡೇರಿಯಸ್‌ನು ಸಿಂದ್, ರಜಪೂತ ಪ್ರದೇಶವನ್ನು ವಶಪಡಿಸಿಕೊಂಡನು.
- ಹೆರೋಡಟಸ್‌ನು "ಉತ್ತರ ಭಾರತವು ಡೇರಿಯಸ್ ಸಾಮ್ರಾಟನ ಸಾಮ್ರಾಜ್ಯದ ಭಾಗವಾಗಿದೆ ಮತ್ತು 20ನೇ ಸತ್ರಪಿಯ ಒಂದು ಪ್ರಾಂತ್ಯವಾಗಿದೆ ಎಂದಿದ್ದಾನೆ.
- ಮೂರು ಜನ ಗ್ರೀಕ್ ರಾಯಭಾರಿಗಳು ಪಾಟಲೀಪುತ್ರಕ್ಕೆ ಬಂದಿದ್ದರು ಅವರಲ್ಲಿ ಮೆಗಾಸ್ತನೀಸ್ ಒಬ್ಬನು.
- "The periplus of The Erythraean sea" ಗ್ರೀಕ್ ಅನಾಮಧ್ಯೇಯ ಕೃತಿಯಾಗಿದೆ. ಇದು ದಕ್ಷಿಣ ಭಾರತದ ಇತಿಹಾಸ ರಚನೆಗೆ ಉಪಯುಕ್ತವಾಗಿದೆ.
- ಲ್ಯಾಟಿನ್‌ನ ಟ್ರೊಗ್ರಿಸ್ ಪೊಂಪಿಯಸ್‌ನು Historia Philipica ಕೃತಿ ರಚಿಸಿದನು. ಇದು ಸೆಲ್ಯೂಕಸ್‌ನ ಭಾರತದೊಂದಿಗಿನ ಸಂಬಂಧ ಹಾಗೂ ಭಾರತದ ಮೇಲೆ ಬ್ಯಾಕ್ಟ್ರಿಯನ್ನರ ದಾಳಿಯ ಬಗ್ಗೆ ವಿವರಿಸುತ್ತದೆ.

2) ಚೀನಿ ಬರವಣಿಗೆಗಳು.

- ಬೌದ್ಧ ಯತಿಗಳು ಯಾತ್ರೆ ಮತ್ತು ವ್ಯಾಸಂಗ ದೃಷ್ಟಿಯಿಂದ ಭಾರತಕ್ಕೆ ಬಂದರು ಎಂದಿವೆ.

1. ಫಾಹಿಯನ್

- ಗುಪ್ತರ 2ನೇ ಚಂದ್ರಗುಪ್ತನ ಆಸ್ಥಾನಕ್ಕೆ ಕ್ರಿ.ಶ. **411**ರಲ್ಲಿ ಭೇಟಿ ಕೊಟ್ಟಿದ್ದನು.
- ಫಾಹಿಯಾನ್ ಕ್ರಿ.ಶ.399ರಲ್ಲಿ ಚೀನಾದಿಂದ ಹೊರಟು ಕ್ರಿ.ಶ.405ರಲ್ಲಿ ಭಾರತಕ್ಕೆ ಬಂದನು. ಈತನ ಕೃತಿ – **ಫೋ–ಕೊ–ಕಿ.**

2) ಹ್ಯೂಯತ್ಸಾಂಗ್

ಇವನು ಚೀನಾವನ್ನು ಕ್ರಿ.ಶ.629 ರಲ್ಲಿ ಬಿಟ್ಟು ಭಾರತಕ್ಕೆ ಬಂದು ಕ್ರಿ.ಶ.645ರಲ್ಲಿ ವಾಪಾಸ್ಸಾದನು. ಈತನ ಕೃತಿ **ಸಿ–ಯು–ಕಿ.**

3) ಇತ್ಸಿಂಗ್

ಕ್ರಿ.ಶ. 671–95 ರ ಅವಧಿಯಲ್ಲಿ ಭಾರತದ ಪ್ರವಾಸ ಮಾಡಿ ರಾಜಗೃಹ, ಕಾಶಿ, ಬುದ್ಧಗಯಾಕ್ಕೆ ಭೇಟಿ ನೀಡಿ ನಳಂದದಲ್ಲಿ ಬಹುದಿನ ತಂಗಿದ್ದನು.

2. ಅರಬ್ ಬರವಣಿಗೆಗಳು.

ಎ. **ಸುಲೈಮಾನ್:–** ಇವನ ಬರವಣಿಗೆಗಳಿಂದ ದಕ್ಷಿಣ ಭಾರತ, ಸಿಂಹಳ ದ್ವೀಪ ಹಾಗೂ ಚೀನಾಕ್ಕೆ ಸಂಬಂಧಿಸಿದ ಉಪಯುಕ್ತ ಮಾಹಿತಿ ಲಭಿಸುತ್ತದೆ.

ಬಿ.) **ಅಲ್ಬೆರೋನಿ:–** ಇವನು ಮಹಮದ್ ಘಸ್ನಿಯ ಭಾರತದ ದಾಳಿಯ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ್ದನು. **'ತಾರಿಖ್–ಐ–ಹಿಂದ್'** ಕೃತಿ ರಚಿಸಿದ್ದಾನೆ. ಇವನು 'ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಇರಲಿಲ್ಲ' ಎಂದಿದ್ದಾನೆ.

2. ಭಾರತದ ಶಿಲಾಯುಗದ ಸಂಸ್ಕೃತಿ (Stone Age Culture)

ಶಿಲಾಯುಗವನ್ನು ಪ್ರಮುಖವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

ಎ. ಹಳೆಯ ಶಿಲಾಯುಗ (Paleolithic Age)

- 'Paleolithic' ಎಂಬ ಶಬ್ದ ಗ್ರೀಕ್‌ನದು. ಇದರರ್ಥ 'ಹಳೆಯ ಶಿಲೆ" ಎಂದಾಗಿದೆ. ಈ ಯುಗದ ಮಾನವನು ಬಳಸುತ್ತಿದ್ದ ಆಯುಧ 'ಬೆಣಚುಕಲ್ಲು'. ಆದ್ದರಿಂದ **ಬೆಣಚುಕಲ್ಲು ಮಾನವ** ಎಂದು ಕರೆಯುವರು. ಅಲ್ಲದೆ ಅಖಿಲಿಯನ್ (ಫ್ರಾನ್ಸ್ ಶಿಲಾಯುಗ) & ಅಶದ್ಯಾಲಯನ್ (ಆಫ್ರಿಕನ್ ಶಿಲಾಯುಗ) ರು ಈ ಆಯುಧಗಳನ್ನು ಬಳಸುತ್ತಿದ್ದರು.
- ಶಿಲಾಯುಧಗಳಿಗೆ ಮೂಳೆಯ ಮತ್ತು ಮರದ ಹಿಡಿಗಳನ್ನು ಬಳಸುತ್ತಿದ್ದರು. ಮಾನವನ ವಾಸಸ್ಥಳ ಪೊಟರೆ, ಗುಹೆಗಳಾಗಿದ್ದವು.
- **ಬೌದ್ಧ ಮಾನವ (Homosepience)** 4000 ವರ್ಷಗಳ ಹಿಂದೆ ಕಾಣಿಸಿಕೊಂಡನು ಕರ್ನೂಲ್ ಪ್ರಾಂತ್ಯದ ಮಾನವರು ಬೆಂಕಿ ಉಪಯೋಗಿಸುತ್ತಿದ್ದರು.
- ದಕ್ಷಿಣ ಭಾರತದಲ್ಲಿ ದೊರೆತಿರುವ ಬೆಣಚುಕಲ್ಲಿನ ಆಯುಧಗಳ ಜನರ ನೆಲೆಗಳನ್ನು **'ಮದ್ರಾಸ್ ಉದ್ಯಮ'** ಎನ್ನುವರು. ಉತ್ತರಪ್ರದೇಶದ ಬೊಲಾನ್ ಕಣಿವೆ ಈ ಕಾಲದ ಮುಖ್ಯ ವಲಸೆ ತಾಣವಾಗಿದೆ.
- ಈ ಮಾನವರು **'ನೈಗ್ರಿಟೊ'** ಜನಾಂಗಕ್ಕೆ ಸೇರಿದವರು. ಇವರು ನೀರು ದೊರೆಯುವ ಸ್ಥಳಗಳಲ್ಲಿ ವಾಸಿಸುತ್ತಿದ್ದು ಹಣ್ಣು ಹಂಪಲು ಇವರ ಮುಖ್ಯ ಆಹಾರವಾಗಿದ್ದವು.

ಹಳೆಯ ಶಿಲಾಯುಗದ ನೆಲೆಗಳು

ರಾಜ್ಯ	ನೆಲೆಗಳು
ಕರ್ನಾಟಕ	ಹುಣಸಗಿ, ಕಿಬ್ಬನಹಳ್ಳಿ, ನಿಟ್ಟೂರು, ಕಂಬದಹಳ್ಳಿ.
ಮಧ್ಯಪ್ರದೇಶ	ನರ್ಮದಾ ಕಣಿವೆ, ಬಿಂಬೇಟ್ಕ
ಉತ್ತರ ಪ್ರದೇಶ	ಮಿರ್ಜಾಪುರ, ಬೋಲಾನ್ ಕಣಿವೆ.
ರಾಜಸ್ಥಾನ	ಜೈಪುರ.
ತಮಿಳುನಾಡು	ಚಂಗಲ್ ಪೇಟೆ, ಅತ್ತಿರಂಪಕಂ(ಚನ್ನೈ)
ಆಂಧ್ರಪ್ರದೇಶ	ಕರ್ನೂಲು

- ಸೋಹಾನ್ ಮತ್ತು ಬಿಯಾಸ್ ನದಿ ಕಣಿವೆಗಳು.

ಬಿ. ಮಧ್ಯ / ಸೂಕ್ಷ್ಮ ಶಿಲಾಯುಗ (ಕ್ರಿ.ಪೂ.10,000–6000) Mesolithic/ Microlithic Age

- ಈ ಕಾಲದ ಮಾನವ ಉಪಯೋಗಿಸುತ್ತಿದ್ದ ಕಲ್ಲಿನ ಉಪಕರಣಗಳು ಸಣ್ಣಗಿದ್ದವು ಅದು **01 ಅಂಗುಲದಷ್ಟು** ಉದ್ದವಾಗಿದ್ದವು. ಬೆಣಚುಕಲ್ಲು ಉಪಯೋಗಿಸದೆ ಕ್ಯಾಲ್ಸಡೆನಿ ಎಂಬ ಪ್ರಶಕ್ತ ಶಿಲೆ ಮತ್ತು ಇತರ ಶಿಲೆಗಳಿಂದ ಆಯುಧ ತಯಾರಿಕೆ ಮಾಡುತ್ತಿದ್ದನು.
- ಮುಖ್ಯ ಆಯುಧಗಳೆಂದರೆ– ಕಲ್ಲಿನ ಬಾಚಿ ಮತ್ತು ಕೊಡಲಿ. (ಆಯುಧಗಳ ಅಳತೆ 5 ಸೆ.ಮೀ/2ಸೆ.ಮೀ.)
- ಈ ಕಾಲದ ಮಾನವನು ಮಣ್ಣಿನಿಂದ ಮಡಿಕೆ ಮಾಡುವುದನ್ನು ಕಲಿತನು ಹಾಗೂ ಬೆಂಕಿಯನ್ನು ಕಂಡುಕೊಂಡನು.

ಮಧ್ಯ ಶಿಲಾಯುಗದಲ್ಲಾದ ಬೆಳವಣಿಗೆಗಳು

- ಬೇಟೆಗಾರಿಕೆ ಮುಖ್ಯ ಕಸುಬಾಗಿತ್ತು.
- ಕೃಷಿ ಮಾಡಲು ಆರಂಭಿಸಿದನು
- ಶವ ಹೂಳುವ ಪದ್ಧತಿ ರೂಢಿಗೆ ತಂದನು.
- ನಾಯಿಯ ಮೂಳೆಗಳ ಜೊತೆ ಅಸ್ಥಿ ಪಂಜರಗಳು **ಕಾಶ್ಮೀರದಲ್ಲಿ** ದೊರೆತಿವೆ.
- ಬೆಟ್ಟ ಗುಡ್ಡ ಮತ್ತು ಗವಿಗಳು ಈ ಯುಗದ ಮಾನವನ ವಾಸಸ್ಥಳವಾಗಿದ್ದವು.
- ಗುಜರಾತಿನಲ್ಲಿ ಮಡಿಕೆಗಳು ಹಾಗೂ ಮಾನವನ ಅರೆ ಪಳೆಯುಳಿಕೆ ಅಸ್ಥಿ ಪಂಜರಗಳು ದೊರೆತಿವೆ.
- ಮಧ್ಯ ಶಿಲಾಯುಗದ ಕಲೆ ಮತ್ತು ವರ್ಣ ಚಿತ್ರಗಳು ಆದಮ್‌ಘರ್, ಪ್ರತಾಪ್‌ಘರ್, ಮಿರ್ಜಾಪುರದಲ್ಲಿ ಕಂಡು ಬಂದಿದೆ.
- ಉತ್ತರಪ್ರದೇಶದ ಅಲಹಾಬಾದ್ ಜಿಲ್ಲೆಯ **ಚೋಪ್ನಿಮಂಡ್‌**ನಲ್ಲಿ ವಿಶ್ವದ ಮೊದಲ ಮಡಿಕೆಯ ಕುರುಹುಗಳು ದೊರೆತಿವೆ.

ಮಧ್ಯ ಶಿಲಾಯುಗದ ನೆಲೆಗಳು

ರಾಜ್ಯಗಳು	ನೆಲೆಗಳು
ಕರ್ನಾಟಕ	ಸಂಗನಕಲ್ಲು, ಜಾಲಹಳ್ಳಿ, ಬ್ರಹ್ಮಗಿರಿ.
ಗುಜರಾತ್	ಲಂಗನಾಜ್.

ತಮಿಳುನಾಡು	ಮರಳು ದಿಬ್ಬಗಳು, ತಿರುನವ್ವೇಲಿ
ಪಶ್ಚಿಮ ಬಂಗಾಳ	ಬಿಲ್ಬನ್‌ಪುರ
ಮಧ್ಯಪ್ರದೇಶ	ಬೋಲಾನ್ ಕಣಿವೆ
ಉತ್ತರಪ್ರದೇಶ	ಸರೈಯ್‌ನಹರ್‌ರಾಯ್

ಸಿ. ನೂತನ ಶಿಲಾಯುಗ (ಕ್ರಿ.ಪೂ.6000.1000)
Neolithic-age

- ಈ ಕಾಲದ ಮಾನವರಿಗೆ ಚಿನ್ನದ ಹೊರತು ಬೇರೆ ಲೋಹಗಳ ಪರಿಚಯವಿರಲಿಲ್ಲ. ಕಲ್ಲಿನ ಕೊಡಲಿ, ಹರವೆ, ಬಾಚಿ, ಸುಂದರ ಆಯುಧಗಳನ್ನು ಬಳಸುತ್ತಿದ್ದರು. ಕೃಷಿ ಇವರ ಮುಖ್ಯ ಕಸುಬಾಯಿತು.
- ವಿಶೇಷತೆ ಎಂದರೆ ಮೂಳೆಗಳಿಂದ ಆಯುಧಗಳನ್ನು ತಯಾರಿಸುತ್ತಿದ್ದುದು **ಬೂರ್ಜಹಾಂ** ಮತ್ತು **ಪಾಟ್ನಾ** ನೆಲೆಗಳಲ್ಲಿ ಕಂಡು ಬಂದಿದೆ.
- ಇವರು ವಲಸೆ ಹೋದ ಕಡೆ **'ಬೂದಿ ದಿಬ್ಬಗಳ ನಿರ್ಮಾಣ'** ಮಾಡುತ್ತಿದ್ದರು.
- ಈ ಕಾಲದ ಸಮಾಧಿಗಳನ್ನು **'ಡಾಲ್ಮೇನ್ಸ್'** ಎನ್ನುತ್ತಿದ್ದರು. **ಶವಸಂಸ್ಕಾರ ಪದ್ಧತಿ** ರೂಢಿಯಲ್ಲಿತ್ತು.
- ಕ್ರಿ.ಪೂ.6000 ಸುಮಾರಿಗೆ ಅಲಹಾಬಾದ್ ಹತ್ತಿರ **'ಭತ್ತ'** ಬೆಳೆಯಲು ಆರಂಭಿಸಿದ. ಅಲ್ಲದೆ 'ಪೌರನಾಗಿ ಬಾಳುವ' ಸ್ಥಿತಿಗೆ ಬಂದನು.
- ನೂತನ ಶಿಲಾಯುಗದ ಬೂದಿ ದಿಬ್ಬಗಳು ಉತ್ನೂರು, ಕುಪ್ಗಾಲ್, ಕೊಡೆಕಲ್, ಪಲವೈಗಳಲ್ಲಿ ಕಂಡುಬಂದಿವೆ.

ನೂತನ ಶಿಲಾಯುಗದ ನೆಲೆಗಳು

ರಾಜ್ಯ	ನೆಲೆಗಳು
ಜಮ್ಮು-ಕಾಶ್ಮೀರ	ಬೂರ್ಜುಹಾಂ
ಕರ್ನಾಟಕ	ತೆಕ್ಕಲಕೋಟೆ
ತಮಿಳುನಾಡು	ಪಯಂಪಲ್ಲಿ
ಆಂಧ್ರಪ್ರದೇಶ	ಪಿಕ್ಲಿಹಾಳ್
ಮೇಘಾಲಯ	ಗಾರೋ ಬೆಟ್ಟಗಳು
ಕರ್ನಾಟಕ	ಮಸ್ಕಿ, ಬ್ರಹ್ಮಗಿರಿ

ಡಿ. ಲೋಹಯುಗ

1. ತಾಮ್ರಯುಗ (ಕ್ರಿ.ಪೂ.2100-1500) (Chalcolithic Age)

- ಈ ಕಾಲದ **ತಾಮ್ರದ ಕತ್ತಿಗಳು,** ಗಂಗಾನದಿ ತೀರದ ಪತೇಪುರ್‌ನಲ್ಲಿ ದೊರೆತಿವೆ. ಇದರ ಬಗ್ಗೆ ಮೆಸಪಟೋಮಿಯಾದ **'ಚಾಲ್ಡಿಯನ್ ಶಾಸನ'** ಹೇಳುತ್ತದೆ.
- ಭಾರತದಲ್ಲಿ ಲೋಹ ಮತ್ತು ಶಿಲೆಗಳನ್ನು ಬಳಸುತ್ತಿದ್ದ ಸಂಸ್ಕೃತಿಯೇ **ಚಾಲ್ಕೋಲಿಥಿಕ್ ಸಂಸ್ಕೃತಿ.** ಇವರದು ಗ್ರಾಮೀಣ ಸಂಸ್ಕೃತಿಯಾಗಿದೆ.
- ಹರಪ್ಪ ಸಂಸ್ಕೃತಿ ಈ ಯುಗಕ್ಕೆ ಸೇರಿದೆ. **ನವ್ವತೋಲಿಯಲ್ಲಿ** ಆಹಾರಧಾನ್ಯ ಮತ್ತು ಲಿನ್‌ಸಿಡ್ ಬಳಸುತ್ತಿದ್ದರು. ಹಸಿ ಇಟ್ಟಿಗೆಯಿಂದ
- ತಾಮ್ರಯುಗದ ಮಾನವನು ಕಂಚಿನ ಯುಗಕ್ಕೆ ಬರಲಾರಂಭಿಸಿದನು.
- ಕೋಟೆ ನಿವೇಶನಗಳು **ಮಧ್ಯಪ್ರದೇಶ** ಮತ್ತು **ಮಹಾರಾಷ್ಟ್ರದಲ್ಲಿದ್ದವು.**
- ವಸತಿ ನಿವೇಶನಗಳು ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿದ್ದವು.
- ತಾಮ್ರದ ಗಣಿಗಳು ದಕ್ಷಿಣೇಶ್ವರದಲ್ಲಿದ್ದವು.
- ಮುಖ್ಯ ಕಸುಬು ಮೀನು ಹಿಡಿಯುವುದು.
- ಮಾನವನಿಗೆ ಮೊದಲು ಪರಿಚಯವಾದ ಲೋಹ - **ಚಿನ್ನ**
- ಮಾನವನು ಮೊದಲು ಅವಿಷ್ಕರಿಸಿದ ಲೋಹ - **ತಾಮ್ರ.**

ತಾಮ್ರಯುಗದ ನೆಲೆಗಳು

ರಾಜ್ಯ	ನೆಲೆಗಳು
ರಾಜಸ್ಥಾನ	ಗೆಲ್ಲುಂಡ್
ಮಹಾರಾಷ್ಟ್ರ	ಜೋರ್‌ವೇ, ನಿವಾಸ್, ದೈಮಬಾದ್, ಇನಾಂಗನ್, ನಾಸಿಕ್, ನವದತ್ತೋಲಿ
ಪಶ್ಚಿಮ ಬಂಗಾಳ	ಪಾಂಡು, ರಾಜರ್‌ದಿಬಿ
ಮಧ್ಯಪ್ರದೇಶ	ಕಾಯತ, ಯರನ್

2. ಕಬ್ಬಿಣ ಯುಗ - (ಕ್ರಿ.ಪೂ. 1000) Iron Age

- ಆಯುಧಗಳ ಪ್ರಾಬಲ್ಯ ಹೆಚ್ಚಾಗಿದ್ದರಿಂದ ಬೃಹತ್ ಸಾಮ್ರಾಜ್ಯಗಳು ಸ್ಥಾಪನೆಯಾದವು. ಕಬ್ಬಿಣದ ಬಳಕೆಯು ಬೃಹತ್ ಶಿಲಾಯುಗದ ಸಂಸ್ಕೃತಿಯಾಗಿದೆ. ಇದು ಲೇಖನ ಕಲೆ ವ್ಯಾಪಕವಾಗಿ ಹರಡುತ್ತಿದ್ದ ಸ್ಥಿತ್ಯಂತರ ಕಾಲವಾಗಿದೆ.
- ಪಾಕ್‌ನ ತಿಮ್ರಘರ್‌ನಲ್ಲಿ ಕಬ್ಬಿಣ ಯುಗದ ಕಬ್ಬಿಣದ ತುಣುಕುಗಳು ಹಾಗೂ ಕ್ರಿ.ಪೂ.1000 ದಲ್ಲಿ ದಕ್ಷಿಣ ಭಾರತದಲ್ಲಿ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಸಹ ದೊರೆತಿವೆ.
- ಶಿಲಾಯುಗದ ಕಾಲದ ಶವ ಸಂಸ್ಕಾರ ಪದ್ಧತಿ ಗಮನಿಸಿದಾಗ ಮಹಾರಾಷ್ಟ್ರದಲ್ಲಿ ಶವವನ್ನು ಉತ್ತರ ದಕ್ಷಿಣವಾಗಿ, ದಕ್ಷಿಣ ಭಾರತದಲ್ಲಿ ಪೂರ್ವ-ಪಶ್ಚಿಮವಾಗಿ, ಪಶ್ಚಿಮ ಭಾರತದಲ್ಲಿ ಪೂರ್ಣ ವಿಸ್ತರಿಸಿದ ಸಮಾಧಿಗಳು ಮತ್ತು ಪೂರ್ವ ಭಾರತದಲ್ಲಿ ಅಪೂರ್ಣ ಸಮಾಧಿಗಳು ಕಂಡುಬಂದಿವೆ.

3. ಸಿಂಧೂ ಬಯಲಿನ ನಾಗರಿಕತೆ (Indus –valley-civilization)

- 1826ರಲ್ಲಿ **'ಚಾರ್ಲ್ಸ್ ಮೇಸನ್'** ಮೊಟ್ಟ ಮೊದಲ ಬಾರಿಗೆ ಹರಪ್ಪ ನಾಗರಿಕತೆಯನ್ನು' ಕಂಡು ಹಿಡಿದನು. ಪಶ್ಚಿಮ ಪಂಜಾಬಿನಲ್ಲಿ ಮೊದಲ ಬಾರಿಗೆ ದಯರಾಂ ಸಹಾನಿ 1921ರಲ್ಲಿ **'ಹರಪ್ಪ'** ಉತ್ಖನನ ಹಾಗೂ **ಆರ್.ಡಿ.ಬ್ಯಾನರ್ಜಿ**ಯವರು 1922ರಲ್ಲಿ **'ಮೊಹೆಂಜಾದಾರೋ'** ನಗರದಲ್ಲಿ ಉತ್ಖನನ ಮಾಡಿದರು.
- ಹರಪ್ಪ ಮತ್ತು ಮಹೆಂಜಾದಾರೋ ನೆಲೆಗಳ ಅವಶೇಷಗಳ ಆಧಾರದ ಮೇಲೆ ಸರ್‌ಜಾನ್ ಮಾರ್ಷಲ್ ರವರು 1924ರ ಸಂಶೋಧನಾ ಪ್ರಬಂಧದಲ್ಲಿ ಬರೆದು "illustrated London News" ಪತ್ರಿಕೆಯಲ್ಲಿ ಪ್ರಕಟಿಸಿದರು.
- ಸಿಂಧೂ ಬಯಲಿನ ನಾಗರಿಕತೆಯು **ಕಂಚಿನ** ಯುಗಕ್ಕೆ ಸೇರಿದ್ದಾಗಿದ್ದು ಕ್ರಿ.ಪೂ 3000–1750 ರ ಸಮಯದಲ್ಲಿ ಅಸ್ತಿತ್ವದಲ್ಲಿದ್ದು ಇದರ ಉನ್ನತ ಹಂತದ ಅವಧಿಯು ಕ್ರಿ.ಪೂ. 2500–1750 ರ ಕಾಲವಾಗಿದೆ.
- **ವ್ಯಾಪ್ತಿ** :–ಪಶ್ಚಿಮದಲ್ಲಿ ಸುಕ್ತಜೆಂಡರ್, ಪೂರ್ವದಲ್ಲಿ ಆಲಂಗೀರ್‌ಪುರ್, ಉತ್ತರದಲ್ಲಿ ಮುಂಡಾ ಹಾಗೂ ದಕ್ಷಿಣದಲ್ಲಿ ದೈಮಾಬಾದ್‌ವರೆಗೆ ಹರಡಿತ್ತು. ಈಜಿಪ್ಟ್ ಸುಮೇರಿಯನ್ ನಾಗರಿಕತೆಗಿಂತ ಸಿಂಧೂ ನಾಗರಿಕತೆ ದೊಡ್ಡದಾಗಿತ್ತು.
- ಸಿಂಧೂ ನಾಗರಿಕತೆಯು 1500 ಪಟ್ಟಣಗಳನ್ನು ಕಂಡುಹಿಡಿಯಲಾಗಿದ್ದು, ಅದರಲ್ಲಿ 971 ಪಟ್ಟಣಗಳು ಭಾರತದಲ್ಲಿ, 400 ಪಟ್ಟಣಗಳು ಪಾಕಿಸ್ಥಾನದಲ್ಲಿ, 02 ಪಟ್ಟಣಗಳು ಅಫ್ಘಾನಿಸ್ತಾನದಲ್ಲಿವೆ.
- **ಪೂರ್ವ ಹರಪ್ಪ ಸಂಸ್ಕೃತಿ** – ಕೊಡ್ಜಿ, ಕಾಲಿಬಂಗಾನ್, ಬನವಾಲಿ (ಕಾಕೊಬ) ಪ್ರದೇಶಗಳು
- **ನಂತರದ ಹರಪ್ಪ ಸಂಸ್ಕೃತಿ** – ಲೋಥಾಲ್, ಸುಕೋರ್ಟತ್ಥ, ಹರಪ್ಪ, ಬನವಾಲಿ ಪ್ರದೇಶಗಳು

ಜನಾಂಗ

1) ಪ್ರೊಟೋ ಅಸ್ಟ್ರಲಾಯ್ಡ್ (ಉದಾ:ಕಂಚಿನ ನರ್ತಕಿ ವಿಗ್ರಹ)
2) ಮಂಗೋಲಾಯ್ಡ್ (ಉದಾ:ಗಡ್ಡದಾರಿ ಮನುಷ್ಯನ ವಿಗ್ರಹ)
3) ಮೆಡಿಟರೇನಿಯನ್
4) ಆಲ್ಪೈನ್ ಬುಡಕಟ್ಟು

- ಹರಪ್ಪದ ಪೂರ್ವ ನೆಲೆಗಳನ್ನು (ಗುಜರಾತ್, ರಾಜಸ್ಥಾನ, ಸಿಂಧ್, ಬಲೂಚಿಸ್ಥಾನ್, ಪಂಜಾಬ್) **'ಸೋಥಿ ಸಂಸ್ಕೃತಿ'** ಎನ್ನುವರು.
- **ನಾಗರಿಕತೆಯ ವೈಶಿಷ್ಟ್ಯತೆಯೆಂದರೆ** ಒಂದೇ ವಿಧದ ನಗರಾಡಳಿತ, ಸಮರೂಪತೆ, ಒಂದೇ ಬಗೆಯ ಸಲಕರಣೆ, ಆಯುಧಗಳು ಒಂದೇ ಅಳತೆ, ಒಂದೇ ಮಾದರಿಯ ಮನೆಗಳು ಹಾಗೂ ಒಂದೇ ರೀತಿಯ ಇಟ್ಟಿಗೆಗಳು ಕಂಡುಬರುತ್ತವೆ.
- ಈಜಿಪ್ಟ್, ಮೆಸಪಟೋಮಿಯ ಮತ್ತು ಸುಮೇರಿಯನ್ ನಾಗರಿಕತೆಗಳು ಹರಪ್ಪನ್ ನಾಗರಿಕತೆಯ ಸಮಕಾಲಿನವು.

ನಗರ ಯೋಜನೆ

- ಸಿಂಧೂ ನಗರ ರಾಜ್ಯಗಳನ್ನು **'ವರ್ತಕ ವರ್ಗ'** ಆಳುತ್ತಿದ್ದರೆನ್ನಲಾಗಿದೆ. ನಗರ ಯೋಜನೆ ಮತ್ತು ಬಹು ಯೋಜಿತವಾದ ಮನೆಗಳ ಸಾಲು ಹಾಗೂ ಪಟ್ಟಣಗಳನ್ನು **'ಚೌಕಾಕಾರ'** ವಿನ್ಯಾಸಗಳಲ್ಲಿ ವಿಂಗಡಿಸಿರುವರು.
- ಸಿಂಧೂ ನಾಗರಿಕತೆಯ ಹೆಚ್ಚಿನ ಪಟ್ಟಣಗಳು ಕೋಟೆಗಳಿಂದಾವೃತವಾಗಿ ಪ್ರವೇಶ ದ್ವಾರಗಳಿವೆ. ಇವು ವಿದೇಶಿ ಆಕ್ರಮಣ ತಡೆಯುವುದಕ್ಕಿಂತ ಹೆಚ್ಚಾಗಿ ಡಕಾಯತರು ಮತ್ತು ಪಶು ಕಳ್ಳರನ್ನು ತಡೆಗಟ್ಟುವುದಾಗಿತ್ತು.
- ಸಾಮಾನ್ಯವಾಗಿ ಹರಪ್ಪ ನೆಲೆಗಳು **ಮೇಲಿನ ಪಟ್ಟಣ** ಮತ್ತು **ಕೆಳಗಿನ ಪಟ್ಟಣ**ವನ್ನು ಹೊಂದಿವೆ. ಆದರೆ **ದೋಲವಿರ** (ಮಧ್ಯಪಟ್ಟಣ) 03 ಪಟ್ಟಣಗಳನ್ನು ಹೊಂದಿದೆ.
- ನಗರ ಯೋಜನೆಯನ್ನು ಸಮನಾಂತರ **ಗ್ರೀಡ್ ಮಾದರಿ**ಯಲ್ಲಿ ನಿರ್ಮಿಸುತ್ತಿದ್ದರು. ರಸ್ತೆಗಳು ಮತ್ತು ಬೀದಿಗಳು ಉತ್ತರದಿಂದ ದಕ್ಷಿಣಕ್ಕೆ ಹಬ್ಬಿದ್ದವು. ಮುಖ್ಯ ರಸ್ತೆಗಳು 33 ಅಡಿಗೂ ಹೆಚ್ಚು ಅಗಲ, ಅರ್ಧ ಮೈಲಿಗೂ ಉದ್ದವಿದ್ದವು.
- ಮಹೆಂಜಾದಾರೋವಿನಲ್ಲಿ ಮುಖ್ಯರಸ್ತೆ ಕೂಡುವ ಸ್ಥಳಕ್ಕೆ ಪ್ರಾಕ್ತನಶಾಸ್ತ್ರಜ್ಞರು **"Oxford Circle"** ಎಂದು ಕರೆದಿದ್ದಾರೆ.
- ಸಿಂಧೂ ಜನರು ಹರಪ್ಪಾ ಮತ್ತು ಮಹೆಂಜಾದಾರೋ ನಗರಗಳನ್ನು ಸಂಪೂರ್ಣವಾಗಿ ಸುಟ್ಟ ಇಟ್ಟಿಗೆ, ಮಣ್ಣು ಮತ್ತು ಗಾರೆಗಳಿಂದ ನಿರ್ಮಿಸಿದ್ದಾರೆ.
- ಒಳಚರಂಡಿಯ ವೈಶಿಷ್ಟ್ಯತೆಯೆಂದರೆ ಮಡಿಕೆಯ ಕೊಳವೆಗಳ ಉಪಯೋಗ (ದೋಷವೆಂದರೆ– ಕೆಲವು ಕಡೆ ಬಾವಿಯ ಸಮೀಪದಲ್ಲೇ ಚರಂಡಿಗಳಿರುವುದು) ಮಾಡಿರುವುದನ್ನು ವೆಗೆಟ್ ರವರು **"ಪ್ರಾಚೀನ ಜಗತ್ತಿನ ಒಂದು ವಿಸ್ಮಯ'** ಎಂದಿದ್ದಾರೆ.
- ಮನೆಗಳನ್ನು **English Bond** ಮಾದರಿಯಲ್ಲಿ ನಿರ್ಮಿಸುತ್ತಿದ್ದರು. ಹೆಚ್ಚಿನ ಮನೆಗಳು ಕಿಟಕಿಗಳನ್ನು ಹೊಂದಿಲ್ಲದಿರುವುದು ವೈಶಿಷ್ಟ್ಯವಾಗಿದೆ.
- ಸರ್ಕಾರದ ಯೋಜನೆಗನುಗುಣವಾಗಿ ನಿರ್ಮಿಸಿದಂತಿರುವ ಕಟ್ಟಡಗಳನ್ನು **"ಕೂಲಿಗಳ ಮನೆಗಳು"** ಎಂದು ಕರೆಯಲಾಗಿದೆ.

ಸಾಮಾಜಿಕ ಜೀವನ

- ಸಿಂಧೂ ಜನರ ಸಮಾಜವು **ಮಾತೃ ಪ್ರಧಾನ** ಸಮಾಜವಾಗಿದ್ದು 'ಅವಿಭಕ್ತ ಕುಟುಂಬ' ಸಾಮಾನ್ಯವಾಗಿತ್ತು. ಸಮಾಜದಲ್ಲಿ ವಿದ್ಯಾವಂತ ವರ್ಗ, ವ್ಯಾಪಾರಿ ವರ್ಗ, ಯೋಧರು ಮತ್ತು ಕಾರ್ಮಿಕರೆಂಬ ವರ್ಗಗಳಿದ್ದವು. ಪುರುಷರು ಧೋತಿ ಮತ್ತು ಉತ್ತರಿ ಧರಿಸುತ್ತಿದ್ದರು. ಹತ್ತಿ ಮತ್ತು ಉಣ್ಣೆ ಬಟ್ಟೆಗಳ ಪರಿಚಯವಿತ್ತು.

- ಸ್ತ್ರೀ–ಪುರುಷರು ಆಭರಣ ಪ್ರಿಯರಾಗಿದ್ದು ಇವರ ಸೌಂದರ್ಯ ವರ್ಧಕಗಳು **'ಚುನ್ಹುದಾರೋ'**ದಲ್ಲಿ ದೊರೆತಿವೆ. (ಉದಾ:ಪುರೋಹಿತನ ವಿಗ್ರಹ)
- ಮಹೆಂಜಾದಾರೋದಲ್ಲಿ **'ಹತ್ತಿಯ ಬಟ್ಟೆ ಚೂರು'** ದೊರೆತಿದೆ ಹಾಗೂ ನರ್ತಕಿಯ ಕಂಚಿನ ಪ್ರತಿಮೆ ದೊರೆತಿರುವುದರಿಂದ ಸಂಗೀತ ನೃತ್ಯ ಮಾಡುವ ಕಲೆ ಗೊತ್ತಿತ್ತೆಂದು ನಂಬಲಾಗಿದೆ.
- ಸಿಂಧೂ ಜನರ ಮುಖ್ಯ ಕ್ರೀಡೆ **ಚದುರಂಗ/ಚೆಸ್**. ಇತರೆ ಕ್ರೀಡೆಗಳೆಂದರೆ ಬೇಟೆಯಾಡುವುದು, ಮೀನು ಹಿಡಿಯುವುದು, ಪ್ರಾಣಿ, ಪಕ್ಷಿಗಳ ಜೊತೆ ಕಾಳಗ, ಪಗಡೆಯಾಟ, ಗೋಲಿ ಇತ್ಯಾದಿ...
- **ಆಹಾರ ವಸ್ತುಗಳು** – ಅಕ್ಕಿ, ಗೋಧಿ, ಖರ್ಜೂರ, ಎಳ್ಳು, ಸಾಸಿವೆ ಇತ್ಯಾದಿಗಳು.
- ಭತ್ತದ ಹೊಟ್ಟು ಲೋಥಾಲ್ ಮತ್ತು ರಂಗಪುರಗಳಲ್ಲಿ ದೊರೆತಿದೆ.
- **ಪ್ರಾಣಿಗಳು** – ಗೂಳಿ, ಹಂದಿ, ಎಮ್ಮೆ ಮೇಕೆ, ಹುಂಜ. ಆನೆ, ಒಂಟೆ, ಕತ್ತೆ ಮುಂತಾದ ಪ್ರಾಣಿಗಳ ಪರಿಚಯವಿತ್ತು.

ಧಾರ್ಮಿಕ ಜೀವನ

- **ಪಶುಪತಿ ಶಿವ:** ಸಿಂಹಾಸನದ ಮೇಲೆ ಯೋಗಿಯ ಮುದ್ರೆಯಲ್ಲಿ ಕುಳಿತಿರುವ ಮೂರು ಮುಖದ ಪಶುಪತಿ ಶಿವನೆಂದು ನಂಬಲಾದ ದೇವತೆ, ಪಶುಪತಿ ಶಿವನ ಸುತ್ತ ಆನೆ, ಹುಲಿ, ರೈನೋಸಾರ್ ಮತ್ತು ಎಮ್ಮೆಗಳ ಚಿತ್ರವಿದೆ.
- ಯಜ್ಞಯಾಗಾದಿಯ ಅಗ್ನಿ ಕುಂಡಗಳು ಕಾಲಿಬಂಗಾನ್, ಲೋಥಾಲ್‌ಗಳಲ್ಲಿ ದೊರೆತಿವೆ.
- ಸಿಂಧೂ ಜನರು ಭೂಮಿಯನ್ನು **'ಜನನಿ'** ಎಂದು ಪೂಜಿಸುತ್ತಿದ್ದರು.
- ಈಜಿಪ್ಟಿಯನ್ನರು ನೈಲ್ ದೇವತೆಯನ್ನು **'ಇಸಿಸ್'** ಎಂದು ಪೂಜಿಸುತ್ತಿದ್ದಂತೆ ಇಲ್ಲಿಯೂ ಶಕ್ತಿಪೂಜೆ ಪ್ರಚಲಿತವಿತ್ತು.
- ಸಿಂಧೂ ಜನರ ಪ್ರಿಯವಾದ ಪ್ರಾಣಿ **ಡುಬ್ಬದ ಗೂಳಿಯು** ಪವಿತ್ರವೆನಿಸಿತ್ತು.
- ಸಿಂಧೂ ಜನರು ಪಾರಿವಾಳವನ್ನು ಪೂಜಿಸುತ್ತಿದ್ದರು.
- ಮನುಷ್ಯ ಮುಖದ ಗೂಳಿ ಮತ್ತು ಗೂಳಿ ಮುಖದ ಆನೆಯಂತಹ ಸಂಯುಕ್ತ ಪ್ರಾಣಿಗಳನ್ನು ಅಸಾಧಾರಣ ಪ್ರಭಾವಶಾಲಿ ಎಂಬಂತೆ ಪೂಜಿಸುತ್ತಿದ್ದರು.
- ದಯಾರಾಂ ಸಹಾನಿಯವರು ಕನ್ಯೆಯ ಚಿತ್ರ ಕಂಡುಹಿಡಿದು ಆಗಿನ ಸಾಂಪ್ರದಾಯಿಕ ನಾಟ್ಯವನ್ನು ಈಗಿನ ದೇವದಾಸಿ ಪದ್ಧತಿಯಂತಿದೆ ಎಂದಿದ್ದಾರೆ.
- ಲೋಥಾಲ್‌ನ ಎಲ್ಲಾ ಬಡಾವಣೆಗಳಲ್ಲಿ ಯಜ್ಞ ಕುಂಡಗಳು ಗೋಚರಿಸಿದ್ದು ಅಲ್ಲಿ ಅಗ್ನಿ ಪೂಜೆ ವ್ಯಾಪಕವಾಗಿತ್ತೆಂದು ತಿಳಿಯಬಹುದು.
- ಶವ ಸಂಸ್ಕಾರ ಪದ್ಧತಿಯಲ್ಲಿ 03 ವಿಧಗಳಿದ್ದವು.

1. ಮೃತ ದೇಹದ ಕೆಳಗೆ ಆಭರಣ, ನಾಯಿಯನ್ನು ಹಾಕಿ ಹೂಳುವುದು.
2. ಮೃತ ದೇಹವನ್ನು ಸುಡುವ ಪದ್ಧತಿ
3. ಪ್ರಾಣಿ ಪಕ್ಷಿಗಳು ಮೃತ ದೇಹ ತಿಂದ ನಂತರ ಮೂಳೆಗಳನ್ನು ಮಡಿಕೆಯಲ್ಲಿಟ್ಟು ಹೂಳುವುದು. ಅಲ್ಲದೆ ಒಂದೇ ಗುಂಡಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಹೂಳುತ್ತಿದ್ದರು.

- ಮುದ್ರಿಕೆಯಲ್ಲಿನ ಸ್ತ್ರೀ ಚಿತ್ರಗಳಿಂದಾಗಿ ಮಾತೃ ದೇವತೆಯ ಆರಾಧನ ಕ್ರಮ ರೂಢಿಯಲ್ಲಿತ್ತೆಂದು ತಿಳಿದು ಬಂದಿದೆ.

ಆರ್ಥಿಕ ಜೀವನ

- ಸಿಂಧೂ ಜನರ ಮುಖ್ಯ ಕಸುಬು ಕೃಷಿ. ಇವರು ಹತ್ತಿಯನ್ನು ಬೆಳೆದ ಮೊದಲಿಗರು. ಪ್ರಮುಖ ಬೆಳೆಗಳಾದ ಅಕ್ಕಿ, ಗೋಧಿ, ಬಾರ್ಲಿ, ಸಾಸಿವೆ, ಮೆಂತ್ಯ ಬೆಳೆಯುತ್ತಿದ್ದರು.
- ಲೋಥಾಲ್‌ನಲ್ಲಿ ಅಕ್ಕಿ ಹೊಟ್ಟು (ರಂಗಪುರ ಕೂಡ) ದೊರೆತಿದೆ. ಬನವಾಲಿ ಮತ್ತು ಕಾಲಿಬಂಗಾನ್‌ನಲ್ಲಿ, ಬಾರ್ಲಿ ಹಾಗೂ ರಂಗಪುರ ಮಡಕೆಯೊಂದರಲ್ಲಿ ರಾಗಿ ದೊರೆತಿವೆ.
- ಮೆಸಪಟೋಮಿಯನ್ನರು ಸಿಂಧೂ ನಾಗರಿಕತೆಯನ್ನು **'ಮೆಲುಹ'** ಎನ್ನುತ್ತಿದ್ದರು.
- ವಿಶ್ವದಲ್ಲಿ ಮೊದಲ ಬಾರಿಗೆ ಹರಪ್ಪನ್ನರು **ಗೋಧಿಯನ್ನು** ಬೆಳೆಯುತ್ತಿದ್ದರೆಂದು ತಿಳಿಯಲಾಗಿದೆ.
- ವಸ್ತು ವಿನಿಮಯ ಪದ್ಧತಿಯ ಮೂಲಕ ವ್ಯಾಪಾರ ನಡೆಯುತ್ತಿತ್ತು.

ಆಮದು ಸರಕುಗಳು

ಸರಕುಗಳು	ಮೂಲಗಳು
ಚಿನ್ನ	ಅಫ್ಘಾನಿಸ್ತಾನ, ಕರ್ನಾಟಕ, ಪರ್ಶಿಯಾ
ಬೆಳ್ಳಿ	ಅಫ್ಘಾನಿಸ್ತಾನ, ಇರಾನ್
ಸೀಸ	ರಾಜಸ್ಥಾನ, ದ.ಭಾರತ, ಅಫ್ಘಾನಿಸ್ತಾನ, ಇರಾನ್
ತವರ	ಅಫ್ಘಾನಿಸ್ತಾನ, ಮಧ್ಯ ಏಷ್ಯಾ,
ಸಾರ್ಡ್	ಪ.ಭಾರತ
ಚಾಲ್ಸಿಡೇನಿ	ಸೌರಾಷ್ಟ್ರ
ಲೆಪಿಸ್‌ಲಾಜುಲಿ	ಬದಕ್‌ಷಾನ್, ಕಾಶ್ಮೀರ
ಜೇಡ್	ಮಧ್ಯ ಏಷ್ಯಾ,
ವೈಢೂರ್ಯ	ಮಧ್ಯ ಏಷ್ಯಾ, ಇರಾನ್
ಪದ್ಮರಾಗ	ಮಹಾರಾಷ್ಟ್ರ
ಮಂದಗೆಂಪು (Carnelian)	ಸೌರಾಷ್ಟ್ರ

ರಫ್ತು ಸರಕುಗಳು

ಸರಕುಗಳು	ಮೂಲಗಳು
ತಾಮ್ರ	ಖೇತ್ರಿ, ಬಲೂಚಿಸ್ತಾನ್
ತೇಗ	ಗುಜರಾತ್
ಸೀಸ	ಕಾಶೀರ ಮತ್ತು ದ.ಭಾರತ

ಶಂಖ	ಸೌರಾಷ್ಟ್ರ, ದಖನ್
ಚಾಲ್ಸಿಡೇನಿ	ಸೌರಾಷ್ಟ್ರ
ಅಮೇಜೋನೈಟ್	ಗುಜರಾತ್

- **ಪ್ರಮುಖ ರಫ್ತುಗಳು** – ಲೋಹಗಳು ಮತ್ತು ಬೆಲೆಬಾಳುವ ಕಲ್ಲುಗಳು. ಇತರೆ ವಸ್ತುಗಳಾದ ಹತ್ತಿಬಟ್ಟೆ, ಕೃಷಿ ವಸ್ತುಗಳು, ಮಡಿಕೆಗಳು, ದಂತದ ವಸ್ತುಗಳು. ಇವುಗಳನ್ನು ಮೆಸಪಟೋಮಿಯಾ, ಮಧ್ಯ ಏಷ್ಯಾ, ಅಫ್ಘಾನಿಸ್ತಾನ ಮತ್ತು ಬಹ್ರೇನ್‌ಗಳಿಗೆ ರಫ್ತು ಮಾಡುತ್ತಿದ್ದರು.
- ವಜ್ರ ವೈಢೂರ್ಯದ ವ್ಯಾಪಾರದ ನೆಲೆ ಆಫ್ಘಾನಿಸ್ತಾನ ಇಲ್ಲಿಂದ ಮಧ್ಯ ಏಷ್ಯಾದ ಜೊತೆ ವ್ಯಾಪಾರ ಮಾಡುತ್ತಿದ್ದರು.
- **ವ್ಯಾಪಾರ ಕೇಂದ್ರಗಳು** – ಲೋಥಾಲ್, ಸುರ್ಕೊತ್ಥಾ, ಬಾಲ್‌ಕೋಟ್‌ಗಳು (ಮುಖ್ಯ ಬಂದರುಗಳಾಗಿದ್ದವು)
- ಮೆಸಪಟೋಮಿಯಾ ಮತ್ತು ಸಿಂಧೂ ಜನರ ವ್ಯಾಪಾರ ಕೇಂದ್ರಗಳೆಂದರೆ ದಿಲ್ಮನ್(ಬಹ್ರೇನ್), ಮೆಕೆನ್‌ಗಳು ಇವು ವ್ಯಾಪಾರ ಮಾರ್ಗದ ಮಧ್ಯಸ್ಥ ನಗರಗಳಾಗಿದ್ದವು.
- ಲೋಥಾಲ್ ಮುಖ್ಯ ಬಂದರು ಮತ್ತು ಹಡಗುಕಟ್ಟೆ ಕೇಂದ್ರವಾಗಿತ್ತು.
- ಪ್ರಮುಖ ವ್ಯಾಪಾರ ಸರಕಾದ **ತಾಮ್ರವು** ರಾಜಸ್ಥಾನದಿಂದ ಬರುತ್ತಿತ್ತು. ಇವರಿಗೆ **ಕಬ್ಬಿಣದ ಪರಿಚಯವಿರಲಿಲ್ಲ**.
- ಲೋಥಾಲ್‌ನಲ್ಲಿ 5 ಕಲ್ಲಿನ ಲಂಗರುಗಳು ದೊರೆತಿವೆ.
- ಸಾಮಾನು ಇಳಿಸುವ ಇಟ್ಟಿಗೆಯ ಕಟ್ಟೆಗಳು, ಲೋಥಾಲ್, ಕುಂತಸಿ ಮತ್ತು ಮಲ್ವಾನ್‌ಗಳಲ್ಲಿ ಸಿಕ್ಕಿವೆ.
- ಮುದ್ರೆಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದರು.
- ಪ್ರಪಂಚದಲ್ಲಿ ಮೊದಲ ಬಾರಿಗೆ ಸಮುದ್ರ ಅಲೆಗಳು ಮತ್ತು ಅದರ ಕ್ರಿಯಾ ಸಹಾಯದಿಂದ ಸಮುದ್ರಯಾನ ಮಾಡಬಹುದೆಂದು ತಿಳಿದಿದ್ದರು.
- ರೋಜೈ ಇಲ್ಲಿ ಮಡಿಕೆ ಚೂರಿನ ಮೇಲೆ ಮನುಷ್ಯನೊಬ್ಬನು ಕುದುರೆ ಕರೆದೊಯ್ಯುತ್ತಿರುವ ಚಿತ್ರವಿದೆ.
- **ತೂಕ ಮತ್ತು ಅಳತೆಗಳು** – ಚಿಕ್ಕ ತೂಕದ ಬಟ್ಟುಗಳಿಗೆ **ದ್ವಿಮಾನ ಪದ್ಧತಿಯನ್ನು** ದೊಡ್ಡ ತೂಕದ ಬಟ್ಟುಗಳಿಗೆ **ದಶಮಾನ ಪದ್ಧತಿಯನ್ನು** ಬಳಸುತ್ತಿದ್ದರು. (ಅವರ ಗಣಕದಲ್ಲಿ 2, 4, 8, 32, 64 ಸಮಾನ ವ್ಯವಸ್ಥೆ ರೀತಿಯಲ್ಲಿದೆ)
- ಮಹೆಂಜಾದಾರೋದಲ್ಲಿ ತಾಮ್ರದ ಕೊಡಲಿ ಹಾಗೂ ಹರಪ್ಪಾದಲ್ಲಿ ಕಂಚಿನ ಕೊಡಲಿ ದೊರೆತಿವೆ.
- **ಹತ್ತಿ ಬಟ್ಟೆ ನೇಯ್ಗೆ** ಮತ್ತು **ಮಡಕೆ ತಯಾರಿಕೆಗಳು** ಬೃಹತ್ ಉದ್ದಿಮೆಗಳಾಗಿದ್ದವು
- ಸಿಂಧೂ ಜನರಿಗೆ ಕಬ್ಬು ಬೆಳೆ ಗೊತ್ತಿರಲಿಲ್ಲ.

ಕಲೆ ಮತ್ತು ಕುಶಲ ಕಲೆ

- ಸಿಂಧೂ ಜನರ ಪ್ರಸಿದ್ಧ ಕಲೆಯು ಟೆರ್ರಾಕೋಟ ಮತ್ತು ಮಾನವ ಚಿತ್ರಗಳಲ್ಲಿ ವ್ಯಕ್ತವಾಗಿದೆ.
- ಮುದ್ರೆಗಳನ್ನು ಸ್ಟಿಯರೈಟ್, ಮೃದುಕಲ್ಲು ಮತ್ತು ಟೆರ್ರಾಕೋಟ ಮಣ್ಣಿನಿಂದ ತಯಾರಿಸುತ್ತಿದ್ದರು.
- ಸಮುದ್ರದ ಚಿಪ್ಪುಗಳಿಂದ ಆಭರಣ ತಯಾರಿಸುತ್ತಿದ್ದುದು, ಸಿಯಾಲ್‌ಕೋಟ್ ಮತ್ತು ಮೆಹೆಂಜಾದಾರೋಗಳಲ್ಲಿ ಕಂಡುಬಂದಿದೆ.

ಕಲೆ ಮತ್ತು ವಾಸ್ತುಶಿಲ್ಪ

- ಹರಪ್ಪಾದಲ್ಲಿ ದೊರೆತಿರುವ **ಗಡ್ಡದಾರಿ ಮನುಷ್ಯನ** ವಿಗ್ರಹದ ಮೂಲಕ ಜನಾಂಗೀಯ ಲಕ್ಷಣಗಳನ್ನು ಅರಿಯಬಹುದು.
- ಮೆಹೆಂಜದಾರೋದಲ್ಲಿ ಸಿಕ್ಕಿರುವ ನೃತ್ಯದ **'ಸ್ತ್ರೀ ಭಂಗಿಯ ಪ್ರತಿಮೆ'** ವಿಶಿಷ್ಟವಾದುದು. ಅದು ದಕ್ಷಿಣದ ಭಾರತ ಮತ್ತು ಬಲೂಚಿಸ್ತಾನದ ಮೂಲವಾಸಿಯನ್ನು ಸೂಚಿಸುತ್ತದೆ.
- ಸಾಮಾನ್ಯವಾಗಿ **ಚದುರಾಕಾರದ ಮುದ್ರೆಗಳು** ಲಿಪಿ ಮತ್ತು ಆಕೃತಿಗಳೆರಡನ್ನೂ, ಆಯತಾಕಾರದ ಮುದ್ರೆಗಳು ಕೇವಲ ಲಿಪಿಯನ್ನು ಒಳಗೊಂಡಿವೆ.

ಭಾಷೆ ಮತ್ತು ಲಿಪಿ

- ಸಿಂಧೂ ಜನರ ಲಿಪಿಯು **ಪಿಕ್ಟೋಗ್ರಾಫಿಕ್ (ಚಿತ್ರರೂಪದ ಸಂಕೇತ)** ಲಿಪಿಯಾಗಿದ್ದು ಬರಹವು ಬಲದಿಂದ ಎಡಕ್ಕೆ, ಅನಂತರ ಎಡದಿಂದ ಬಲಕ್ಕೆ ಬರೆಯುತ್ತಿದ್ದರು. ಆದರೆ ಇವರ ಲಿಪಿಯನ್ನು ಓದಲಾಗಲಿಲ್ಲ.
- ಬರಹವನ್ನು **'ಬೊಸ್ಟ್ರೋಫೆಡನ್ ಶೈಲಿ'** ಎಂದು ಕರೆಯಲಾಗಿದೆ.
- ಐರಾವತ ಮಹಾದೇವನ್, ಪಾರಪೋಲ. ಎಸ್.ಆರ್.ರಾವ್, ನಟವರ್‌ಜಾರವರು ಈ ಲಿಪಿಯ ಬಗ್ಗೆ ಅಧ್ಯಯನ ನಡೆಸಿದರು.
- ಹರಪ್ಪನ್ನರ ಲಿಪಿಯು ತಮ್ಮದೇ ಆದ ಪಿಲಿಯಾಗಿದ್ದು, ಮೆಸಪಟೋಮಿಯಾ ಲಿಪಿಗಿಂತ ಭಿನ್ನವಾಗಿದೆ. ಸರ್‌ಜಾನ್ ಮಾರ್ಷಲ್‌ರು ಹರಪ್ಪ ಸಂಸ್ಕೃತಿಯನ್ನು ಸಿಂಧೂ ಬಯಲಿನ ನಾಗರಿಕತೆ ಎಂದು ಕರೆದರು. ಅನೇಕ ವಿದ್ವಾಂಸರು ಸಿಂಧೂ ಜನರ ಭಾಷೆ ದ್ರಾವಿಡ ಭಾಷೆ ಎಂದೂ, ಮೊಟ್ಟ ಮೊದಲಿನ ದ್ರಾವಿಡರೇ ಮೂಲ ನಿವಾಸಿಗಳು ಎಂದಿದ್ದಾರೆ.

ಸಿಂಧೂ ನಾಗರಿಕತೆಯ ನಿವೇಶನಗಳು

1. ಹರಪ್ಪ

- **ರಾವಿ** ನದಿ ದಂಡೆ ಮೇಲಿರುವ ಇದು ಪಾಕ್‌ನ ಮಾಂಟೆಗೊಮರಿ ಜಿಲ್ಲೆಯಲ್ಲಿದೆ 1921ರಲ್ಲಿ ಇದನ್ನು ದಯಾರಾಂ ಸಹಾನಿ ಶೋಧಿಸಿದರು.
- ಹರಪ್ಪಾದಲ್ಲಿ ಶವ ಪೆಟ್ಟಿಗೆಗಳು, ಬೃಹತ್ ಭತ್ತದ ಕಣಜ, ಕಂಚಿನ ಅಳತೆಯ ಸಾಧನ, ಕಾರ್ಮಿಕರ ವಸತಿ ಗೃಹಗಳು, ಜಿಂಕೆಯನ್ನು ಬೇಟೆಯಾಡುತ್ತಿರುವ ಮುದ್ರೆ, ಸಾರ್ವಜನಿಕ ಉಗ್ರಾಣ ಹಾಗೂ ಎತ್ತಿನ ಗಾಡಿ ದೊರೆತಿವೆ.
- ಧಾನ್ಯ ಒಣಗಿಸುವ ಬಯಲು, ಯಕ್ಷಚಿತ್ರ ಪ್ರೋಟೋಟೈಪ್ ಮಾದರಿ ಜನಾಂಗ ಗುರುತಿಸುವ ನಗ್ನ ರೂಪದ ಶಿರ ಭಾಗದ

- ವಿಶ್ವದಲ್ಲಿ ಮೊಟ್ಟ ಮೊದಲಿಗೆ ಬೆಳ್ಳಿ ಬಳಕೆ ಇಲ್ಲಿ ಕಂಡುಬರುತ್ತದೆ.
- ಋಗ್ವೇದವು ಹರಪ್ಪವನ್ನು **'ಹುರೂಪಿಯಾ'** ಎಂದು ಕರೆದಿದೆ.
- ಇಲ್ಲಿ ತಾಮ್ರದ ರಥ ಮತ್ತು ಶಿಲೆಯ ಲಿಂಗಗಳು ದೊರೆತಿವೆ.

2. ಮೆಹೆಂಜಾದಾರೋ

- ಸಿಂಧೂ ನದಿ ಮೇಲಿರುವ ಇದು ಪಾಕ್‌ನ ಸಿಂಧ್ ಪ್ರಾಂತ್ಯದ ಲಾರ್ಕಾನ್ ಜಿಲ್ಲೆಯಲ್ಲಿದೆ. ಇದನ್ನು 1922ರಲ್ಲಿ ಆರ್.ಡಿ.ಬ್ಯಾನರ್ಜಿ ಶೋಧಿಸಿದರು.
- ಮೆಹೆಂಜಾದಾರೋ ಎಂದರೆ **'ಮಡಿದವರ ದಿಬ್ಬ'** ಎಂಬರ್ಥ.
- ಅತಿ ದೊಡ್ಡ ಕಟ್ಟಡ ಬೃಹತ್ ಭತ್ತದ ಕಣಜ, ಬೃಹತ್ ಸ್ನಾನದ ಕೊಳ ಮತ್ತು ಸಭಾ ಭವನಗಳು ದೊರೆತಿವೆ.
- ಗಡ್ಡದಾರಿ ಮನುಷ್ಯನ ಚಿತ್ರ, ನೃತ್ಯಭಂಗಿಯ ಸ್ತ್ರೀ ಕಂಚಿನ ಪ್ರತಿಮೆ. ಮಣ್ಣಿನ ಮುದ್ರೆಯ ಮೇಲಿನ ಭಾರತೀಯ ಹಡಗಿನ ಗುರುತು. ಪುರೋಹಿತ ಮತ್ತು ಪಶುಪತಿ ಶಿವನ ಚಿತ್ರಗಳು, ಹತ್ತಿಬಟ್ಟೆ ಚೂರು ಹಾಗೂ ಚಿಪ್ಪಿನ ಅಳತೆ ಸಾಧನಗಳು ದೊರೆತಿವೆ.
- ಸ್ತ್ರೀ-ಪುರುಷರ ಅಸ್ಥಿ ಪಂಜರಗಳನ್ನು ಒಟ್ಟಿಗೆ ಹೂಳಲ್ಪಟ್ಟಿರುವುದು ಕಂಡುಬಂದಿದೆ. ಇದು ಸತಿ ಸಹಗಮನ ಪದ್ಧತಿಯಿತ್ತು ಎಂಬುದನ್ನು ಸೂಚಿಸುತ್ತದೆ.
- ಎಮ್ಮೆಯನ್ನು ಅಲಂಕರಿಸಿರುವ ಚಿತ್ರ ಹಾಗೂ ಮಂಗಗಳನ್ನು ಅಪ್ಪಿಕೊಂಡಿರುವ ಚಿತ್ರಗಳು ದೊರೆತಿವೆ.
- ಇದು ನೆರೆಹಾವಳಿಯಿಂದ ನಾಶಗೊಂಡು 07 ಭಾರಿ ಪುನರ್‌ನಿರ್ಮಿತ ನಗರವಾಗಿದೆ.

3. ಚುನ್ಹುದಾರೋ

- ಸಿಂಧೂ ನದಿ ದಂಡೆಯ ಮೇಲಿರುವ ಇದು ಸಿಂದ್ ಪ್ರಾಂತ್ಯದಲ್ಲಿದೆ. 1931ರಲ್ಲಿ ಇದನ್ನು **ಎನ್.ಜಿ. ಮಜುಂದಾರ್** ಕಂಡುಹಿಡಿದರು.
- ಶಾಹಿ ಮಡಿಕೆ, ಮುತ್ತು, ರತ್ನ ತಯಾರಿಸುವ ಕಾರ್ಖಾನೆ ಇಲ್ಲಿ ಕಂಡುಬಂದಿದೆ.
- ಇದು **ಕೋಟೆಯೇ** ಇಲ್ಲದ ಸಿಂಧೂ ನೆಲೆಯಾಗಿದೆ.
- ಇದು ಬೊಂಬೆ, ಆಟಿಕೆಗಳ ತಯಾರಿಕಾ ಕೇಂದ್ರ ಹಾಗೂ ಕೈಗಾರಿಕಾ ಕೇಂದ್ರವಾಗಿದೆ.
- ಹರಪ್ಪಾ ಪೂರ್ವ ಸಂಸ್ಕೃತಿ **ತೋರಿಸುವ ಜೂಕಾರ್** ಮತ್ತು **ಚಾಂಗರ್ ಸಂಸ್ಕೃತಿ** ಕುರುಹುಗಳು ಇಲ್ಲಿ ದೊರೆತಿವೆ.

4. ಸುತ್ಕ ಜೆಂಡಾರ್

- ಗಸ್ತ್ ನದಿ ದಂಡೆಯ ಮೇಲಿನ ಇದು ಪಾಕ್ ಮತ್ತು ಇರಾನ್ ದೇಶದಲ್ಲಿದೆ. ಇದನ್ನು **ಆರ್.ಎಲ್.ಸ್ಟೈನ್** ರವರು ಕಂಡುಹಿಡಿದರು.
- ಇದು ಪ.ಕರಾವಳಿಯ ನಿವೇಶನ. ತಾಮ್ರದ ಕೊಡಲಿ, ಬಳೆಗಳು ಮತ್ತು ಬಣ್ಣದ ಮಡಿಕೆಗಳು ಇಲ್ಲಿ ದೊರೆತಿವೆ.
- ಮೆಸಪಟೋಮಿಯಾದೊಂದಿಗಿನ ವ್ಯಾಪಾರ ಕೇಂದ್ರ ಇದಾಗಿತ್ತು.

5. ಕಾಲಿಬಂಗಾನ್ (3ನೇ ರಾಜಧಾನಿ)

- **ಸರಸ್ವತಿ** ನದಿ ದಂಡೆಯ ಮೇಲಿನ ಇದು ರಾಜಸ್ಥಾನದಲ್ಲಿದೆ. (ಘಗ್ಗಾರ್ ನದಿ) ಇದನ್ನು **1935**ರಲ್ಲಿ **ಎ.ಘೋಷ್**ರವರು ಕಂಡುಹಿಡಿದರು.
- ಗದ್ದೆಗಳ ಉಳುಮೆ ಮಾಡಿರುವುದು. ಅಗ್ನಿ-ಕುಂಡಗಳು, ರಥದ ಗಾಲಿ, ಮಡಿಕೆಯಲ್ಲಿ ಶವವನ್ನು ಹೂತಿರುವುದು. ಜಿಂಕೆ, ಒಂಟೆ ಅವಶೇಷಗಳು, ಬಾರ್ಲಿ ಬೆಳೆಯುವ ಪ್ರದೇಶ ಹಾಗೂ ಜೇಡಿಮಣ್ಣಿನ ಅಳತೆ ಸಾಧನಗಳು ಕಂಡುಬರುತ್ತವೆ.
- ಕಾಲಿಬಂಗಾನ್ ಎಂದರೆ ಕಪ್ಪು ಬಳೆಗಳು.
- ಕಾಲಿಬಂಗಾನ್ ಪೂರ್ವ ಹರಪ್ಪ ಮತ್ತು ಹರಪ್ಪ ಸಂಸ್ಕೃತಿಯ ನಗರವಾಗಿತ್ತು.

6. ರೂಪಾರ್

- **ಸಟ್ಲೆಜ್** ನದಿ ದಂಡೆಯ ಮೇಲಿರುವ ಇದು ಪಂಜಾಬ್‌ನಲ್ಲಿದೆ. 1953ರಲ್ಲಿ ಇದನ್ನು **ವೈ.ಡಿ.ಶರ್ಮ**ರು ಪತ್ತೆ ಹಚ್ಚಿದರು.
- ಮನುಷ್ಯನ ಮೃತ ದೇಹದ ಕೆಳಗೆ ನಾಯಿಯನ್ನು ಹಾಕಿ ಹೂಳುವ ಪದ್ಧತಿ ಕಂಡುಬರುತ್ತದೆ. ಮೆರುಗುಳ್ಳ ಮಡಕೆಗಳು (ತಾಮ್ರದ ಕೊಡಲಿ) ದೊರೆತಿವೆ.
- ಹರಪ್ಪ ಮತ್ತು ಹರಪ್ಪೋತ್ತರ ನಾಗರಿಕತೆಗೆ ಒಳಪಟ್ಟಿತ್ತು.

7. ಲೋಥಾಲ್

- **ಬೋಗವ ನದಿ** ಮೇಲಿನ ಇದು ಗುಜರಾತಿನ ಕ್ಯಾಂಬೆ ಕೊಲ್ಲಿ ಬಳಿಯಿದೆ. 1957ರಲ್ಲಿ ಇದನ್ನು **ಎಸ್.ಆರ್.ರಾವ್** ಪತ್ತೆ ಹಚ್ಚಿದರು.
- ಅಕ್ಕಿ ಗುರುತು, ಅಗ್ನಿಕುಂಡಗಳು ಹಾಗೂ ಯಜ್ಞಕುಂಡಗಳು ಇಲ್ಲಿ ದೊರೆತಿವೆ.
- ಲೋಥಾಲ್ ಪ್ರಮುಖ ಬಂದರು ಮತ್ತು ಹಡಗುಕಟ್ಟೆ ಕೇಂದ್ರ.
- ಚೆಸ್ ಬಗ್ಗೆ ಮಾಹಿತಿಗಳು, ದಂತದಿಂದ ತಯಾರಿಸಿದ ಅಳತೆ ಸಾಧನಗಳು, ಜೇಡಿ ಮಣ್ಣಿನ ಕುದುರೆ ಅವಶೇಷಗಳು, ಮುತ್ತುರತ್ನ ತಯಾರಿಸುವ ಕಾರ್ಖಾನೆ, ಹಾಸಿಗೆ ತಯಾರು ಕಾರ್ಖಾನೆ ಮತ್ತು ಪರ್ಶಿಯನ್ ಮುದ್ರೆಗಳು ದೊರೆತಿವೆ.
- ಇಲ್ಲಿ ಪಂಚತಂತ್ರದ ಕಥೆಯನ್ನು ನೆನೆಪಿಸುವ ಚಿತ್ರಣಗಳು ದೊರೆತಿವೆ.
- ಇಲ್ಲಿ ಸ್ತ್ರೀ-ಪುರುಷರ ಜೋಡಿಯ ಸಮಾಧಿಗಳಿವೆ.

8. ದೋಲವಿರಾ

- ಇದು ಆರ್.ಎಸ್.ಬಿಸ್ತ್‌ರವರು (1991) ಇತ್ತೀಚೆಗೆ ಶೋಧಿಸಿದ ಪಟ್ಟಣವಾಗಿದೆ.
- ಇಲ್ಲಿನ ಪಟ್ಟಣವನ್ನು 3 ವಿಧಗಳಾಗಿ ವಿಂಗಡಿಸಲಾಗಿದೆ.
- ಪಟ್ಟಣ ವ್ಯವಸ್ಥೆಗೆ ಋಗ್ವೇದದ ಆರ್ಯನ್ನರ ಕೊಡುಗೆ ಪ್ರಮುಖವಾಗಿದೆ.
- ಬೃಹತ್ ನೀರು ಸಂಗ್ರಹಾಗಾರವು ಇಲ್ಲಿ ಕಂಡುಬಂದಿದೆ.

9. ಸುರ್ಕೋತ್ಡಾ

- ಗುಜರಾತಿನಲ್ಲಿರುವ ಇದನ್ನು **1972–75ರಲ್ಲಿ ಜೆ.ಪಿ.ಜೋಷಿಯವರು** ಕಂಡುಹಿಡಿದರು
- ಕುದುರೆಯ ಅವಶೇಷಗಳು ಇಲ್ಲಿ ಕಂಡುಬಂದಿವೆ.
- ಇದರ ಕೆಳಪಟ್ಟಣವು ಕೋಟೆಯಿಂದ ಆವೃತವಾಗಿತ್ತು.

10. ಕೋಟ್ ಡಿಜಿ

- ಸಿಂಧೂ ನದಿ ದಂಡೆ ಮೇಲಿರುವ ಇದು ಪಾಕ್‌ನಲ್ಲಿದೆ. 1953ರಲ್ಲಿ ಎಸ್.ಎ ಖಾನ್ ಶೋಧಿಸಿದ್ದಾರೆ. (ಕೋಟ್ ಡಿಜಿ ಗ್ರಾಮ ಜೀವನ ಕಂಡು ಬರುವ ಏಕೈಕ ನಗರ)
- ಇದು ಅಗ್ನಿ ಅನಾಹುತದಿಂದ ನಾಶವಾದ ಪಟ್ಟಣವಾಗಿದೆ.
- ಕಿವಿಯೋಲೆಗಳು ಮತ್ತು ಪಂಚ ಮಾತೃಕೆಗಳು, ಮಣ್ಣಿನ ಮಹಡಿ ಮೇಲೆ ನಿರ್ಮಿಸಿದ ನೀರಿನ ಜಾರುಗಳು ಕಂಡುಬಂದಿವೆ.

11) ರಂಗಪುರ್

- ಗುಜರಾತಿನಲ್ಲಿರುವ ಇದನ್ನು **1953ರಲ್ಲಿ ಎಸ್.ಆರ್ ರಾವ್** ಕಂಡುಹಿಡಿದರು.
- ಭತ್ತದ ಗುರುತು ಮತ್ತು ಟೆರ್ರಾಕೋಟಾ ಮುದ್ರೆಗಳು ಇಲ್ಲಿ ದೊರೆತಿವೆ.
- ಇದು ಪೂರ್ವ ಹರಪ್ಪ ಮತ್ತು ಉತ್ತರ ಹರಪ್ಪ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ.

12) **ಅಮ್ರಿ** :– ಸಿಂದ್ ಪ್ರಾಂತ್ಯದ ಸಿಂಧೂ ದಂಡೆಯಲ್ಲಿದೆ. 1935ರಲ್ಲಿ ಮಜುಂದಾರ್ ಶೋಧಿಸಿದ್ದಾರೆ.

13. ಆಲಂಗೀರ್‌ಪುರ್:

- ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಇದು ಹರಪ್ಪ ನಾಗರೀಕತೆಯ ಪೂರ್ವಭಾಗವಾಗಿದೆ. ಸಿಂಧೂ ನಾಗರೀಕತೆಯ ಕೊನೆಯ ಹಂತದ ಲಕ್ಷಣಗಳನ್ನು ಪ್ರತಿನಿಧಿಸುವ ಪ್ರದೇಶವಾಗಿದೆ.

14. **ಗನ್ವೇರಿವಾಲಾ**:– ಇದು ಪಾಕಿಸ್ತಾನದಲ್ಲಿದೆ. ರಫೀಕ್ ಮೊಘಲ್‌ರು ಶೋಧಿಸಿದ್ದಾರೆ.

15. **ರಾಖಿಘರಿ**: ಸ್ತ್ರೀಯರ ಸಮಾಧಿಗಳು ಇಲ್ಲಿ ದೊರೆತಿವೆ. ಇದು ಹರಿಯಾಣಾದಲ್ಲಿದೆ. ರಫೀಕ್ ಮೊಘಲ್‌ರು ಇದನ್ನು ಶೋಧಿಸಿದ್ದಾರೆ.

16. **ಬನವಾಲಿ**: (ಹರಿಯಾಣ ಹಿಸ್ಸಾರ್ ಜಿಲ್ಲೆ):– ಇಲ್ಲಿ ಬಾರ್ಲಿ ಧಾನ್ಯ ಹಾಗೂ ಮಾತೃದೇವತಾ ಮೂರ್ತಿಗಳು ದೊರೆತಿವೆ.

ಇತರ ಅಂಶಗಳು

ನಿರ್ಮಾಪಕರು

- ಮಾರ್ಟಿಮರ್ ವ್ಹೀಲರ್‌ರವರು ಹರಪ್ಪ ಮತ್ತು ಸುಮೇರಿಯನ್ ಲಿಪಿ ಆಧರಿಸಿ ಅವರೀರ್ವರು ಒಂದೇ ವಂಶದವರೆಂದಿದ್ದಾರೆ.
- ಡಾ.ಗುಹಾರವರು ಪ್ರೋಟೊ ಅಷ್ಟ್ರಲಾಯ್ಡ್, ಮಂಗೊಲಾಯ್ಡ್
- ಎಸ್.ಆರ್.ರಾವ್ ರವರು ಹರಪ್ಪ ಸಂಸ್ಕೃತಿಯ ಕರ್ತೃಗಳು **'ಆರ್ಯರು'** (ಆರ್ಯರ ಸಾಮಾಜಿಕ, ಧಾರ್ಮಿಕತೆಯ ಆಧಾರ) ಎಂದಿದ್ದಾರೆ.
- ಡಾ.ಮಾರ್ಷಲ್‌ರು ಹರಪ್ಪ ನಿರ್ಮಾಪಕರು ದ್ರಾವಿಡರೆಂದು ತಿಳಿಸಿದ್ದಾರೆ. ಹರಪ್ಪ ಮತ್ತು ಆರ್ಯ ಸಂಸ್ಕೃತಿಗಳು ವಿಭಿನ್ನ ಸಂಸ್ಕೃತಿಗಳು ಎಂದಿದ್ದಾರೆ.
- ಮಹೆಂಜಾದಾರೊದಲ್ಲಿ ದೊರೆತಿರುವ ಅಸ್ಥಿಪಂಜರದ ಆಧಾರದ ಮೇಲೆ ಸಿಂಧೂ ಜನರ 4 ಜನಾಂಗಗಳೆಂದರೆ:–ಮೆಡಿಟರೇನಿಯನ್, ಪ್ರೊಟೊ ಅಸ್ಟ್ರಲಾಯ್ಡ್, ಅಲ್ಪೆನಾಯ್ಡ್, ಮತ್ತು ಮಂಗೋಲಾಯ್ಡ್.
- ಸಿಂಧೂ ನಾಗರೀಕತೆಯ ಬಹು ಸಂಖ್ಯಾತರು ಮೊದಲೆರಡು ಗುಂಪಿಗೆ ಸೇರಿದವರಾಗಿದ್ದರು.

ವಾಸದ ಗೃಹಗಳು

- ಕಿಟಕಿಗಳನ್ನು ರಸ್ತೆಯ ಕಡೆಗೆ ಇಡದೆ ಹಿಂಬಾಗಕ್ಕೆ ಇಟ್ಟಿದ್ದಾರೆ. ಅದೇ ರೀತಿ ಬಾಗಿಲುಗಳನ್ನು ರಸ್ತೆ ಕಡೆ ಇಡದೆ ಉಪಬೀದಿಯ ಕಡೆ ಇಡುತ್ತಿದ್ದರು.
- ಲೋಥಾಲ್ ನಲ್ಲಿ ಮಾತ್ರ ಮನೆಗಳ ಹೆಬ್ಬಾಗಿಲುಗಳು ಮುಖ್ಯ ಬೀದಿಗಳ ಕಡೆಗಿವೆ.
- ಮನೆಗಳ ಮೇಲ್ಛಾವಣಿ ಚಪ್ಪಟೆಯಾಗಿದ್ದು, ಕಟ್ಟಿಗೆಯಿಂದ ನಿರ್ಮಿಸಲಾಗಿತ್ತು.
- ಪ್ರತಿ ಮನೆಗೂ ಒಂದೊಂದು ಶುದ್ಧ ನೀರಿನ ಬಾವಿ ಇದೆ. ಪ್ರತ್ಯೇಕ ಶೌಚ ವ್ಯವಸ್ಥೆ ಇಹೆ.
- ಸಿಂಧೂ ನಗರಗಳು ಸಮೃದ್ಧವಾಗಿ ಬೆಳೆಯಲು ಕಾರಣ ಅವುಗಳಿಗೆ ದೊರೆತ ವಿಫುಲವಾದ ನೀರು ಪೂರೈಕೆಯಿಂದ.
- ಸಾರ್ವಜನಿಕ ಕಟ್ಟಡಗಳಾದ ಮಹೆಂಜಾದಾರೊವಿನ ಕಾಲೇಜು ಕಟ್ಟಡ ಅಥವಾ ಪುರೋಹಿತ ವಸತಿ ಗೃಹ, ಉಗ್ರಾಣ, ಅಸೆಂಬ್ಲಿಹಾಲ್ (ಪುರಭವನ) (ಮೆಕೆಯವರು ಇದನ್ನು ಮಾರುಕಟ್ಟೆ ಸ್ಥಳ ಎಂದಿದ್ದಾರೆ) ಹಾಗೂ ನಗರದ ಪ್ರಮುಖ ಅರಮನೆ/ದೇವಾಲಯ ಕಟ್ಟಡ ಇವುಗಳನ್ನು ಸರ್ ಜಾನ್ ಮಾರ್ಷಲ್ ಕಂಡುಹಿಡಿದಿದ್ದಾರೆ.
- ಬೃಹತ್ ಈಜುಕೊಳದ ಶೋಧನೆ ಹಾಗೂ ಸಾರ್ವಜನಿಕ ಉಗ್ರಾಣವನ್ನು **ಮಾರ್ಟಿಮರ್ ವೀಲ್ಹರ್**‌ರವರು ಶೋಧಿಸಿದ್ದಾರೆ.
- ಕಾಲಿಬಂಗಾನ್ ನಗರದ ದಕ್ಷಿಣ ಭಾಗದಲ್ಲಿ ಕಣಜಗಳಾಗಿ ಬಳಸಬಹುದಾದ ಇಟ್ಟಿಗೆ ಜಗಲಿಗಳಿವೆ.
- ಎಎಲ್. ಬಾಷ್ಯಂ 'The Wonder That Was India' ಎಂಬ ಕೃತಿಯಲ್ಲಿ ರೋಮನ್ ನಾಗರಿಕತೆವರೆಗೂ ಯಾವುದೇ ಪುರಾತನ ನಾಗರಿಕತೆಯು ಸಿಂಧೂ ಜನರಂತಹ ಅತ್ಯಾಧುನಿಕ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರಲಿಲ್ಲ" ಎಂದಿದ್ದಾರೆ.

ಹರಪ್ಪ ನಾಗರಿಕತೆ ಮೂರು ಮುಖ್ಯ ಲಕ್ಷಣಗಳು

1) ನಗರ ನಾಗರಿಕತೆ 2) ಕೃಷಿ–ವಾಣಿಜ್ಯ ನಾಗರಿಕತೆ.

- ಸಿಂಧ್‌ನಲ್ಲಿ ಹರಪ್ಪ ನಾಗರೀಕತೆಯನ್ನು ಜೋಕಾರ ಸಂಸ್ಕೃತಿಯವರು ಹಿಂಬಾಲಿಸಿದರು. ಪೂರ್ವ ಪಂಜಾಬಿನಲ್ಲಿ ಹಳದಿ ಬಣ್ಣದ ಮಡಕೆ ಸಂಸ್ಕೃತಿ ಮತ್ತು ಗುಜರಾತಿನಲ್ಲಿ ಕೆಂಪು ಬಣ್ಣದ ಮಡಕೆ ಸಂಸ್ಕೃತಿಯನ್ನು ಹಿಂಬಾಲಿಸಿದವು.
- **ಕುದುರೆ ಅವಶೇಷಗಳು:** ಸುರ್ಕೋಟ್ಡಾ, ಲೋಥಾಲ್, ಮಹೆಂಜದಾರೋಗಳಲ್ಲಿ ದೊರೆತಿವೆ.
- **ಒಂಟೆಯ ಅವಶೇಷಗಳು:** ಹರಪ್ಪಾ, ಮಹೆಂಜಾದಾರೋ, ಕಾಲಿಬಂಗಾನ್‌ಗಳಲ್ಲಿ ಸಿಕ್ಕಿವೆ.
- ಸಿಂಧೂ ಜನರು ಭಾರತದಲ್ಲಿ ಶಾಸನಗಳನ್ನು ಹೊರಡಿಸಿದ ಮೊದಲಿಗರು

ವಿವಿಧ ಸಂಸ್ಕೃತಿಗಳು

- ಕುಲ್ಲಿ ಸಂಸ್ಕೃತಿ – ಸಿಂಧ್.
- ಮಾಳ್ವ ಸಂಸ್ಕೃತಿ – ಮಧ್ಯ ಭಾರತ.
- ಜುಕಾರ್ ಸಂಸ್ಕೃತಿ – ದೋ ಅಬ್ (ಗಂಗಾ–ಯಮುನಾ)
- ಗಾಂಧಾರ ಗ್ರಾಮ – ವಾಯುವ್ಯ ಗಡಿ.
- ತಾಮ್ರ ಗ್ರಾಮ – ಬಲೂಚಿಸ್ತಾನ್.
- ಬನಾಸ್ ಗ್ರಾಮ – ನೈರುತ್ಯ ರಾಜಸ್ಥಾನ್.
- ಜೋರ್ವೆ ಗ್ರಾಮ – ಉತ್ತರ ದಖನ್.
- ಚಿತ್ರಿತ ಬಿಳಿ ಮಡಿಕೆ – ದೋ ಅಬ್ (ಗಂಗಾ ಯಮುನಾ)
- ಬೆಳೆಗಳು, ಹೂಳುವ ಆಚರಣೆಗಳು ಮತ್ತು ವಾಸದ ಮನೆಗಳ ಗಾತ್ರ ಇವು ಮೂರು ಸಿಂಧೂ ಜನರ ವಿಭಿನ್ನತೆ ತೋರಿಸುತ್ತದೆ.
- ಸಿಂಧೂ ನಾಗರೀಕತೆ ಜಗತ್ತಿನ ಮೊದಲ ನಗರ ನಾಗರಿಕತೆ, ಭಾರತದ ನಾಗರೀತೆಯ ತೊಟ್ಟಿಲು ಹಾಗೂ ಈಜಿಪ್ಟ್ ಮತ್ತು ಮೆಸಪಟೋಮಿಂಯಾ ನಾಗರಿಕತೆಂಯ ಸಮಕಾಲೀನ ನಾಗರಿಕತೆಯಾಗಿದೆ. ಇದು ಪೂರ್ವ ಹರಪ್ಪ ಮತ್ತು ಹರಪ್ಪ ಸಂಸ್ಕೃತಿಯನ್ನು ಕೂಡಿಸುತ್ತದೆ.
- 1906ರಲ್ಲಿ ಲಾರ್ಡ್ ಕರ್ಜನ್ ಭಾರತದ ಪುರಾತತ್ವ ಇಲಾಖೆಯನ್ನು ಸ್ಥಾಪಿಸಿ ಅದರ ಮೊದಲ ಡೈರಕ್ಟರ್ ಜನರಲ್ ಆಗಿ ಸರ್ಜಾನ್ ಮಾರ್ಷಲ್‌ರನ್ನು ನೇಮಿಸಲಾಯಿತು.
- ಸ್ವಾತಂತ್ರ್ಯ ನಂತರ ಮೊದಲ ನಿವೇಶನ – **ರೂಪಾರ್** (ಪಂಜಾಬ್) ಇದನ್ನು **ವೈ.ಡಿ. ಶರ್ಮಾರವರು** ಹುಡುಕಿದರು.
- ಹರಪ್ಪ ಸಂಸ್ಕೃತಿಯನ್ನು ಕೆ.ಎನ್.ದೀಕ್ಷಿತ್‌ರವರು ಪ್ರೊಟೋ ಇಂಡಕ್ ಸಂಸ್ಕೃತಿ ಎಂದೂ, ಮೆಸಪಟೋಮಿಯನ್ನರು **'ಮೆಲುಹಾ'** ಎಂದು ಕರೆದಿದ್ದಾರೆ.

4. ವೈದಿಕ ಯುಗ (Vedic Age)

- "ಸಂಸ್ಕೃತವು ಯುರೋಪಿನ ಭಾಷೆಗಳಿಗೆ ಮಾತೃಭಾಷೆ ಹಾಗೂ ಸೋದರ ಭಾಷೆಯಾಗಿದೆ" ಎಂದು **ವಿಲಿಯಂ ಜೋನ್ಸ್‌ರವರು** ಹೇಳಿದ್ದಾರೆ.
- ಬ್ರಿಟಿಷರು ಪ್ರಚುರ ಪಡಿಸಿದ **'ಬಿಳಿಯರ ಮೇಲಿನ ಅಧಿಕ ಹೊರೆ'** ಎಂಬ ಸಿದ್ಧಾಂತದ ಪರಿಣಾಮವಾಗಿ ಉತ್ತರ ಭಾರತೀಯರು **ಆರ್ಯರೆಂದು** ಮತ್ತು ದಕ್ಷಿಣ ಭಾರತೀಯರು **ದ್ರಾವಿಡರು** ಎಂದು ಗುರುತಿಸಿಕೊಳ್ಳುವಂತಾಯಿತು.
- ಮ್ಯಾಕ್ಸ್‌ಮುಲ್ಲರ್‌ರವರು "ಆರ್ಯ ಜನಾಂಗವೆಂಬುದು ರಕ್ತದಲ್ಲಿಲ್ಲ ಆರ್ಯ ಎಂಬುದು ಒಂದು ಭಾಷೆಯೇ ಹೊರತು ಜನಾಂಗವಲ್ಲ" ಎಂದಿದ್ದಾರೆ. ಮ್ಯಾಕ್ಸ್‌ಮುಲ್ಲರ್‌ರವರು ಆರ್ಯರು ಮಧ್ಯ ಏಷ್ಯಾದಿಂದ ಬಂದವರೆಂದು ಹೇಳಿದ್ದಾರೆ. ಆಧಾರ **'ಜಂಡ್ ಅವೆಸ್ತಾ'**ವಾಗಿದೆ.
- ಋಗ್ವೇದದಲ್ಲಿ ಆರ್ಯರು ಇಂದ್ರನನ್ನು **'ಪ್ರಾತ್ನ ಒಕಾಸ್'** ಅಥವಾ **'ಪ್ರಾಚೀನ ವಾಸಸ್ಥಾನ'** ಎಂದು ಪ್ರಾರ್ಥಿಸುತ್ತಿದ್ದರು. ಪರ್ಶಿಯಾದ ಪಶು ಅಥವಾ ಪರಶು ಎಂಬ ಕುಲಗಳೊಡನೆ ಸಂಬಂಧ ವಿಟ್ಟುಕೊಂಡಿದ್ದರು.

ನದಿಗಳ ನಾಡು) ಎನ್ನುವರು. ಇಂದಿನ ಸಪ್ತ ಸಿಂಧವ ಪ್ರದೇಶವು ಕಾಬೂಲ್, ಕಾಂಧಹಾರ್, ಕಾಶ್ಮೀರ, ಪಂಜಾಬ್, ಪಶ್ಚಿಮ ಉತ್ತರ ಪ್ರದೇಶಗಳನ್ನು ಒಳಗೊಂಡಿದೆ. ಸಪ್ತ ಸಿಂಧವ ಪ್ರದೇಶವನ್ನು ಆರ್ಯರು, **'ಬ್ರಹ್ಮಾವರ್ತ'** ಎಂದು ಕರೆಯುತ್ತಿದ್ದರು.

- 1933ರ ನಂತರ ಜರ್ಮನ್ ದೇಶೀಯರಿಂದ ಕೂಡಿದ ಜನಾಂಗವೇ ಪರುಶುದ್ಧ ಆರ್ಯ ಜನಾಂಗ ಎಂದು ಕರೆಯಲಾಯಿತು.
- ಉತ್ತರ ಭಾರತದ ಭೌಗೋಳಿಕ ವಿಶೇಷತೆಯನ್ನು ಯಜುರ್ವೇದ ತಿಳಿಸುತ್ತದೆ.
- **ಬ್ರಾಹ್ಮಣಕಗಳು:** ವಿಂಧ್ಯ ಪರ್ವತದ ಈಚೆಗಿನ ಅನೇಕ ವರ್ಗದ ಜನರನ್ನು ಮತ್ತು ಜನಾಂಗದವರನ್ನು ಕುರಿತು ವಿವರಿಸುತ್ತವೆ.
- **ರಾಮಾಯಣವು:** ದಕ್ಷಿಣ ಭಾರತದಲ್ಲಿ ಆರ್ಯಸಂಸ್ಕೃತಿಯು ಪ್ರಚಾರಗೊಳ್ಳಲು **ಅಗಸ್ತ್ಯ ಮಹಾಮುನಿಗಳು** ಪ್ರಯತ್ನಿಸಿದರು. ರಾಮಾಯಣದ ರಾಮನು ವಿಂಧ್ಯ ಪರ್ವತ ದಾಟಿ ದಕ್ಷಿಣ ಭಾರತದಲ್ಲಿ ಸಂಚರಿಸಿ ಶ್ರೀಲಂಕೆಯನ್ನು ತಲುಪಿದ ದುಷ್ಟಾಂತಗಳೊಂದಿಗೆ ಆರ್ಯ ಸಂಸ್ಕೃತಿಯು ದಕ್ಷಿಣದಲ್ಲಿ ಪ್ರಸಾರವಾದುದನ್ನು ರಾಮಾಯಣವು ತಿಳಿಸುತ್ತದೆ.

ಜೈನ ಮತಗಳು, ಉದಯಿಸುವವರೆಗಿನ ನಡುವಣ ಕಾಲವೇ ವೈದಿಕ ಕಾಲವಾಗಿದೆ.

- ಆರ್ಯರು ಭಾರತಕ್ಕೆ ಬಂದು ನೆಲೆಸಿದಂದಿನಿಂದ ಕ್ರಿ.ಪೂ.1000 ದವರೆಗಿನ ಕಾಲವನ್ನು ಋಗ್ವೇದ ಕಾಲ ಅಥವಾ ಪೂರ್ವವೈದಿಕ ಯುಗವಾಗಿದೆ ಕ್ರಿ.ಪೂ.1000 ದಿಂದ ಹೊಸ ಧರ್ಮಗಳ ಉದಯದವರೆಗಿನ ಮಹಾಕಾವ್ಯಗಳ ಕಾಲ ಉತ್ತರ ವೈದಿಕ ಕಾಲವಾಗಿದೆ.
- **ಆರ್ಯರ ಮೂಲದ ಬಗ್ಗೆ ವಿದ್ವಾಂಸರು ವಿವಿಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.**

1. ಮಧ್ಯ ಏಷ್ಯಾ – ಮ್ಯಾಕ್ಸ್ ಮುಲ್ಲರ್
2. ಟಿಬೆಟ್ – ದಯಾನಂದ ಸರಸ್ವತಿ
3. ಜರ್ಮನಿ ಬಯಲು – ಪ್ರೊ.ಪೆಂಕಾ
4. ಆರ್ಕ್ಟಿಕ್ ಪ್ರದೇಶ – ಬಾಲಗಂಗಾಧರ ತಿಲಕ್
5. ಆಸ್ಟ್ರೋ ಹಂಗೇರಿ – ಮ್ಯಾಕ್‌ಡೊನಾಲ್ಡ್
6. ಟರ್ಕಿಸ್ಥಾನ್ – ಹರ್ಜ್‌ಫೆಲ್ಡ್
7. ಬ್ಯಾಕ್ಟ್ರಿಯ – ಜೆ.ಸಿ.ರಾಡ್
8. ಪಾಮಿರ್ ಪರ್ವತ – ಮೇಯರ್
9. ಸ್ಟೆಪ್ಪೀಸ್ – ಬಿ.ಕೆ.ಘೋಷ್ ಮತ್ತು ಬ್ರಾಂಡ್ ಸ್ಟೈಟ್
10. ಹಂಗೇರಿ – ಪಿ.ಗಿಲೆಸ್
11. ಪಶ್ಚಿಮ ಬಾಲ್ಟಿಕ್ – ಮಾಚ್
12. ಜರ್ಮನಿ – ಪೆಂಕಾ ಮತ್ತು ಹರ್ಟ್
13. ಸಪ್ತಸಿಂಧು – ಎ.ಸಿ.ದಾಸ್
14. ಕಾಶ್ಮೀರ – ಎಲ್.ಡಿ.ಕಾಳ
15. ಮಧ್ಯ ಭಾರತ – ರಾಜಬಾಲಿ ಪಾಂಡೆ

4.1 ಋಗ್ವೇದ ಕಾಲ ಅಥವಾ ಪೂರ್ವವೈದಿಕ ಯುಗ (ಕ್ರಿ.ಪೂ.1500–1000) Rigvedic Age

- ಮ್ಯಾಕ್ಸ್‌ಮುಲ್ಲರ್‌ರವರು ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದರು ಹಾಗೆ ಭಾರತಕ್ಕೆ ಬರುವ ಮುನ್ನ ಇರಾನ್‌ನಲ್ಲಿ ಸ್ವಲ್ಪ ಕಾಲ ನೆಲೆನಿಂತರು. ಇರಾನಿಯನ್ನರನ್ನು ಸಹ ಆರ್ಯನ್ನರೆಂದು ಕರೆಯಲಾಗಿದೆ ಎಂದು ತಿಳಿಸಿದ್ದಾರೆ.
- ಋಗ್ವೇದವು ಆರ್ಯರ ಭಾಷೆಯಾದ ಇಂಡೋ–ಯುರೋಪಿಯನ್ ಭಾಷೆಯ ಮೊದಲ ಕುರುಹಾಗಿದೆ. ಈ ಕೃತಿಯು ಭಾರತದಲ್ಲಿ ಆರ್ಯರ ಬಗೆಗಿನ ಮೊದಲ ಲಿಖಿತ ದಾಖಲೆಯಾಗಿದೆ.
- ಋಗ್ವೇದದಲ್ಲಿ 2 ಮತ್ತು 7ನೇ ಮಂಡಲ (Family Books) ಮೊದಲ ಕಾಲವೆಂದು, 1 ಮತ್ತು 10ನೇ ಮಂಡಲ ನಂತರದ್ದು ಎಂದು ಗುರುತಿಸಲಾಗಿದೆ. ಇದರಲ್ಲಿ 1028ಸ್ತೋತ್ರಗಳಿವೆ.
- ಋಗ್ವೇದದ ಪ್ರಕಾರ ಆರ್ಯರು ಸಪ್ತ ಸಿಂಧವ (7 ನದಿಗಳ ನಾಡು) ಎಂದು ಕರೆಯಲ್ಪಡುವ ಕಾಬೂಲ್, ಕಾಶ್ಮೀರ, ಕಾಂದಹಾರ್ ಹಾಗೂ ಪಂಜಾಬ್‌ನಲ್ಲಿ ನೆಲೆನಿಂತರು. ಇವರಿಗೆ ಗಂಗಾ, ಯಮುನಾ, ಸರಸ್ವತಿ, ಸರಯೂ, ಸಿಂಧೂ ಮತ್ತು ಅದರ ಉಪನದಿಗಳು ತಿಳಿದಿದ್ದವು.

ರಾಜಕೀಯ ವ್ಯವಸ್ಥೆ

- ಋಗ್ವೇದ ಕಾಲದ ಜನರ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಗಳಿಗೆ ಆಧಾರವಾದುದು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಾಗಿದೆ.
- **ಗ್ರಾಮ** – ಕುಟುಂಬಗಳ ಸಮೂಹವಾಗಿದೆ.
- **ವಿಶ್** – ಹಲವು ಗ್ರಾಮಗಳಿಂದ ಕೂಡಿದ ಸಮೂಹ.
- **ಜನ** – ಹಲವು ವಿಶ್‌ಗಳು ಸೇರಿ ಆದಂತಹ (ಪಂಗಡಗಳು ಸೇರಿ) ಸಮೂಹ.
- ವೈದಿಕ ಕಾಲದಲ್ಲಿ ಅನೇಕ ರಾಜ ಪ್ರಭುತ್ವವಿಲ್ಲದ ಪ್ರದೇಶಗಳಿದ್ದವು ಅವುಗಳನ್ನು ಋಗ್ವೇದದಲ್ಲಿ **ಗಣ**ಗಳೆಂದು ಉಲ್ಲೇಖಿಸಲಾಗಿದೆ.
- ಋಗ್ವೇದ ಕಾಲದಲ್ಲಿ ಪ್ರಪಂಚದಲ್ಲೇ **ಗಣರಾಜ್ಯಗಳ** ಬಗೆಗಿನ ಪ್ರಥಮ ಉಲ್ಲೇಖವಿದೆ. ರಾಜ ಪ್ರಭುತ್ವದ ಶೀಘ್ರ ಬೆಳವಣಿಗೆಗೆ **ಸಭಾ** ಮತ್ತು **ಸಮಿತಿ** ಎಂಬ ಸಭೆಗಳು ತಡೆಯಾಗಿದ್ದವು
- ಐತ್ತರೇಯ ಬ್ರಾಹ್ಮಣದಲ್ಲಿ ರಾಜತ್ವದ ಉಗಮದ ಬಗ್ಗೆ ತಿಳಿಸುತ್ತಾ "ಮನುಷ್ಯ ದಿನನಿತ್ಯದ ಅವಶ್ಯಕತೆ ಮತ್ತು ಸೈನಿಕ ರಕ್ಷಣಾ ಅವಶ್ಯಕತೆಗಾಗಿ ರಾಜತ್ವ ಉದಯವಾಯಿತು. ಋಗ್ವೇದ ಕಾಲದಲ್ಲಿ ರಾಜ್ಯವನ್ನು **'ರಜನ್'** ಎಂದು ಕರೆಯುತ್ತಿದ್ದ ಸ್ವತಂತ್ರ ಅಧಿಕಾರಿ ಆಳುತ್ತಿದ್ದನು. ಪ್ರಾರಂಭ ವೇದ ಕಾಲದ ರಾಜನು ಸೈನಿಕ ಮುಂದಾಳಾಗಿದ್ದನು.
- ಆರ್ಯರು ಎರಡು ರೀತಿಯ ಸಂಘರ್ಷಗಳಲ್ಲಿ ತೊಡಗಿದ್ದರು. ಒಂದು ಆರ್ಯೇತರ ಜೊತೆ ಮತ್ತು ಆರ್ಯರ ಬಣಗಳ ನಡುವೆ ನಡೆಯುತ್ತಿದ್ದು, ಆರ್ಯರ 02 ಬಣಗಳೆಂದರೆ ಶ್ರೀಂಜಯರು ಭರತ ಕುಲಗಳು ಹಾಗೂ ಯದುಗಳು, ತೂರ್ವಾಸರು, ದಹ್ಯರು ಅಣುಗಳು ಮತ್ತು ಪುರುಗಳು ಇದ್ದರು.
- ಈ ಎರಡೂ ಬಣಗಳು (ರಾವಿ ನದಿಯ ನೀರಿನ ಹಂಚಿಕೆಗಾಗಿ) ರಾವಿ ನದಿಯ ದಡದಲ್ಲಿ ಸಮರ ನಡೆಸಿದವು. ಈ 10 ರಾಜರ ಕದನದಲ್ಲಿ ಭರತರಾಜ ಸುಧಾಸ ನೇತೃತ್ವದ ಬಣವು ಪುರು ರಾಜ ಪುರಕತ್ಸ ಬಣವನ್ನು ಸೋಲಿಸಿತು.
- ಯುದ್ಧ ನಂತರ **ಭರತರು ಮತ್ತು ಪುರುಗಳು** ಒಂದಾಗಿ ಕುರು ವಂಶವಾಯಿತು. ಇವರು ದೆಹಲಿ ಮತ್ತು ದೋಅಬ್‌ನ ಮೇಲ್ಭಾಗವನ್ನು ಆಕ್ರಮಿಸಿದರು. ಇದನ್ನು **'ಕುರುಕ್ಷೇತ್ರ'** ಎಂದು ಕರೆಯಲಾಯಿತು. ನಂತರ ಕುರುಗಳು ಪಾಂಚಾಲರೊಂದಿಗೆ ಕೈಜೋಡಿಸಿ ಗಂಗಾ ಬಯಲಿನಲ್ಲಿ ಪ್ರಭುತ್ವ ಸಾಧಿಸಿದರು.
- ಕುರು ಕುಲಕ್ಕೆ ಸೇರಿದ **ಪಾಂಡವ ಮತ್ತು ಕೌರವ** ದಾಯಾದಿಗಳಲ್ಲಿ ನಡೆದ ಸಮರವೇ ಮಹಾಭಾರತ ಯುದ್ಧ. ಇದು ಕ್ರಿ.ಪೂ. 950

ರ ಸುಮಾರಿಗೆ ನಡೆಯಿತು. ಇದರಿಂದ ಕುರುವಂಶ ಭಾಗಶಃ ನಿರ್ನಾಮವಾಯಿತು.

- ಆಂತರಿಕ ಯುದ್ಧಗಳಲ್ಲದೆ ಆರ್ಯರು, ಆರ್ಯೇತರರಾದ ದಾಸ-ದಸ್ಯು ಬಣಗಳೊಂದಿಗೆ ಸಂಘರ್ಷ ನಡೆದಿದ್ದವು. ಆರ್ಯ ನಾಯಕ ದಿವೋದಾಸನು ವಿರೋಧಿ ಬಣದ ಸಂಬರನನ್ನು ಸೋಲಿಸಿದ ಉಲ್ಲೇಖವಿದೆ.
- ರಾಜನ್ ಪದವಿಯ ಜೊತೆಗೆ **ಸಾಮ್ರಾಟ್** ಎಂಬ ಪದವಿ ಸಾಮ್ರಾಟ್ ಎಂಬ ಪದವಿಗೆ **ಸರ್ವಶ್ರೇಷ್ಠ** ರಾಜನೆಂಬ ಅರ್ಥವಿದೆ ಜೊತೆಗೆ **ವಿಶ್ವಾಧಿಪತಿ** ಎಂಬ ಪರಿಕಲ್ಪನೆಯಿತ್ತು.
- ಅತ್ಯಂತ ಪ್ರಭಲವಾಗಿದ್ದ ಬಣಗಳೆಂದರೆ **ಪುರು** ಮತ್ತು **ತಿತ್ಸುಗಳು**.
- ಹೀಗೆ ಪ್ರಾರಂಭವಾದ ಋಗ್ವೇದದ ರಾಜ್ಯಾಡಳಿತವು ನಂತರದ ಕಾಲದಲ್ಲಿ ಬೃಹತ್ ಸಾಮ್ರಾಜ್ಯಗಳ ಮಟ್ಟಕ್ಕೇರಿಯಿತು.
- ರಾಜನ್‌ನ ಮೊದಲ ಕರ್ತವ್ಯ, ಬಣದ ಜನರ ಮತ್ತು ಬಣಕ್ಕೆ ಸೇರಿದ ಭೂಮಿ ಹಾಗೂ ಪಶುಗಳನ್ನು ರಕ್ಷಿಸುವುದಾಗಿತ್ತು. ರಾಜನು ತನ್ನ ಸೇವೆಗೆ ಪ್ರತಿಫಲವಾಗಿ ಬಲಿ ಅಥವಾ ದಾನದತ್ತಿಗಳನ್ನು ತೆರಿಗೆಯಾಗಿ ಪಡೆಯುತ್ತಿದ್ದನು. ಮಂತ್ರಿ ಪರಿಷತ್ ಸಹಾಯದಿಂದ ರಾಜನು ಆಡಳಿತ ನಡೆಸುತ್ತಿದ್ದನು.

ಮುಖ್ಯ ಆಡಳಿತಾಧಿಕಾರಿಗಳು

- ಗ್ರಾಮಿಣಿ –ಗ್ರಾಮದ ನಾಗರಿಕ ಮತ್ತು ಸೈನಿಕ ಆಡಳಿತ.
- ವಿಶ್ಪತಿ – ಗ್ರಾಮಗಳ ನೋಡಿಕೊಳ್ಳುವಿಕೆ.
- ಗೋಪ – ವಿಶ್‌ಗಳಿಂದ ಕೂಡಿದ ಜನರ ಮುಖ್ಯಸ್ಥ.
- ಭಗದುಘ – ಕಂದಾಯ ಸಂಗ್ರಹಣಾಧಿಕಾರಿ.
- ಸಂಗಹಿತ್ರ – ಬೊಕ್ಕಸ ಅಧಿಕಾರಿ
- ಅಕ್ಷನಪ – ಮುಖ್ಯ ಲೆಕ್ಕಾಧಿಕಾರಿ.
- ಕ್ಷತ್ರಿ – ಅರಮನೆ ಉಸ್ತುವಾರಿ ಅಧಿಕಾರಿ.
- ಗೋವಿಕೃತ – ಅರಣ್ಯ ಸಂರಕ್ಷಣೆ ಅಧಿಕಾರಿ.
- ಸುತ – ರಾಜನ ಕಾಗದ ಪತ್ರಗಳ ರಕ್ಷಣೆ.
- ಸೇನಾನಿ – ಪ್ರಾಂತ್ಯಗಳ ಗವರ್ನರ್.
- ಸ್ಪಾಸ – ಗೂಡಾಚಾರಿ ವ್ಯವಸ್ಥೆ.

ಪ್ರಸಿದ್ಧ ಸಭಾ ಮತ್ತು ಸಮಿತಿಗಳು

- ಸಭಾ ಮತ್ತು ಸಮಿತಿಗಳಿಗಿಂತ ಪ್ರಾಚೀನವಾದ ಹಾಗೂ ಪ್ರಬಲ ರಾಜಕೀಯ ಸಂಸ್ಥೆಯೆಂದರೆ **'ವಿದಾತ'** ಇದು ಬುಡಕಟ್ಟು ಸಭೆಯಾಗಿದ್ದು, ಧಾರ್ಮಿಕ ಸೈನಿಕ ಕಾರ್ಯಾಚರಣೆ ನಡೆಸುತ್ತಿತ್ತು. ಸ್ತ್ರೀಯರಿಗೆ ಇದರಲ್ಲಿ ಪ್ರವೇಶವಿತ್ತು. ಋಗ್ವೇದದಲ್ಲಿ ವಿಧಾತವು ಬುಡಕಟ್ಟುಗಳನ್ನು ರಕ್ಷಿಸುವವನೆಂಬ ಉಲ್ಲೇಖವಿದೆ.
- **ಸಭಾ** – ಹಿರಿಯರ ಸಭೆ (ಕಾರ್ಯಾಂಗಾಧಿಕಾರಿಗಳು) ಈಗಿನ ರಾಜ್ಯಸಭೆ.
- **ಸಮಿತಿ** – ಸಾಮಾನ್ಯ ಸಭೆ (ಶಾಸಕಾಂಗಾಧಿಕಾರಿಗಳು) ಈಗಿನ ಲೋಕಸಭೆ.
- **ವಿಧಾತ** – ಅತ್ಯಂತ ಹಳೆಯ ಸಭೆ (ನ್ಯಾಯಾಂಗ ಮತ್ತು ಧಾರ್ಮಿಕ ಅಧಿಕಾರಿಗಳು).
- ಸಭಾ ಮತ್ತು ಸಮಿತಿಗೆ ಪಿತೃ ಸಮಾನ ಸಂಸ್ಥೆ **ವಿಧಾತ**ವಾಗಿತ್ತು.
- ವಿಧಾತವು ಮುಖ್ಯ ದೇವತೆ **ಅಗ್ನಿ** ಯಜ್ಞ ಮತ್ತಿತ್ತರ ಧಾರ್ಮಿಕ ಚಟುವಟಿಕೆಗಳನ್ನು ಸಂಘಟಿತವಾಗಿ ನಡೆಸಲು ಮುಖ್ಯ ವೇದಿಕೆಯಂತಿತ್ತು.
- ಸಭಾದ ಸದಸ್ಯರನ್ನು **'ಸಭ್ಯರೆಂದು'**, ಸಮಿತಿಯ ಸದಸ್ಯರನ್ನು **'ವಿಶಾ'** ಎಂದು ಕರೆಯುತ್ತಿದ್ದರು. ಋಗ್ವೇದದ ಕೊನೆಯ ಸ್ತೋತ್ರವು ಈ ಸಭೆಗಳ ಏಕತೆಯ ಬಗ್ಗೆ ತಿಳಿಸುತ್ತದೆ.
- ಸಭಾ ಮತ್ತು ಸಮಿತಿಗಳ ಅಧ್ಯಕ್ಷತೆಯನ್ನು **ಸಭಾಪತಿ** ವಹಿಸುತ್ತಿದ್ದನು. ಸಭಾದಲ್ಲಿ ಸ್ತ್ರೀಯರಿಗೆ ಪ್ರವೇಶವಿರಲಿಲ್ಲ.

ಋಗ್ವೇದದಲ್ಲಿ ಬಳಕೆಯಾದ ಪದಗಳು.

ಪದಗಳು	ಉಲ್ಲೇಖ
ವಿದಾತ	122
ಸಭಾ	08
ವಿಶ್	171
ಜನ	275
ಅಶ್ವ	215
ಗೋವು	176

ಆರ್ಥಿಕ ವ್ಯವಸ್ಥೆ

- ಋಗ್ವೇದ ಕಾಲದ ಆರ್ಯರು ಅರೆ ಅಲೆಮಾರಿ ಜನಾಂಗದವರಾಗಿದ್ದು **ಪಶು ಸಂಗೋಪನೆ** ಅವರ ಜೀವನಾಧಾರವಾಗಿತ್ತು. ಋಗ್ವೇದದ, ನೇಗಿಲಿನ ಬಗ್ಗೆ ಉಲ್ಲೇಖವಿದೆ ಇದರಿಂದ ಕೃಷಿ ಅವರಿಗೆ ತಿಳಿದಿತ್ತು.
- ಪ್ರಮುಖ ಆಹಾರ **ಬಾರ್ಲಿ (ಯವ)** ಆಗಿತ್ತು. ಕೃಷಿ ಭೂಮಿಗೆ ಖಾಸಗಿ ಒಡೆತನವಿರಲಿಲ್ಲ. ಋಗ್ವೇದದಲ್ಲಿ 176 ಬಾರಿ ಹಸುವಿನ ಉಲ್ಲೇಖವಿದೆ. ಹಸುವನ್ನು ಸಂಪತ್ತೆಂದು ಕರೆಯುತ್ತಿದ್ದರು ಹಾಗೂ ಹಸುವು ವಿನಿಮಯ ಮಾಧ್ಯಮವಾಗಿತ್ತು.
- ಋಗ್ವೇದದಲ್ಲಿ ಯುದ್ಧವನ್ನು **ಗವಿಷ್ಠಿ** (ಹಸುಗಳ ಹುಡುಕಾಟ) ಎನ್ನುತ್ತಿದ್ದರು. ಹಸುವನ್ನು **'ಅಘನ್ಯ'** (ಸಾಯಿಸಬಾರದು) ಅತಿಥಿಯನ್ನು **'ಗೋಘ್ನ'** (ಹಂತಕ) ಎಂದು ಕರೆದಿರುವುದು ಗೋಮಾಂಸ ಔತಣದ ಪ್ರತೀಕವಾಗಿದೆ. ಮಗಳನ್ನು **'ದುಹಿತ್ರಿ'** (ಹಾಲು ಕರೆಯುವವಳು) ಹಾಗೂ ತಾಮ್ರವನ್ನು **ಅಯಾಸ್** ಎನ್ನುತ್ತಿದ್ದರು.
- ಇವರಿಗೆ **ಚಿನ್ನ(ಹಿರಣ್ಯ), ಕಬ್ಬಿಣ (ಶ್ಯಾಮ)** ಮತ್ತು **ತಾಮ್ರ (ಅಯಸ್)** ಲೋಹಗಳು ತಿಳಿದಿದ್ದವು.

ಸಾಮಾಜಿಕ ಜೀವನ

- ಋಗ್ವೇದ ಕಾಲದಲ್ಲಿ ಪಿತೃಪ್ರಧಾನ ಅವಿಭಕ್ತ ಕುಟುಂಬ ಪ್ರಧಾನವಾಗಿತ್ತು. ಇದು ಮೂಲ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯಾಗಿತ್ತು.
- ಮಹಿಳೆಯರ ಸ್ಥಾನಮಾನ ಪುರುಷರಿಗೆ ಸರಿಸಮಾನವಾಗಿತ್ತು. ಮುಖ್ಯ ಸ್ತ್ರೀಯರಾದ **ವಿಶ್ವವರ, ಗಾರ್ಗಿ, ಮೈತ್ರೆಯ, ಅಪಲ, ಘೋಷ** ಮುಂತಾದವರು. ಮುಖ್ಯ ತತ್ವಜ್ಞಾನಿಯಾಗಿ ವಿಶ್ವವರ ಮತ್ತು ಮುಖ್ಯ ವಿಸ್ವಾಂಸೆಯಾಗಿ ಗಾರ್ಗಿಯರಿದ್ದರು.
- ಗಾಂಧರ್ವ ವಿವಾಹ, ವಿಧವಾ ಪುನರ್ ವಿವಾಹ, ಬಹುಪತ್ನಿತ್ವ ಮತ್ತು ಬಹುಪತಿತ್ವ ವ್ಯವಸ್ಥೆಗಳಿದ್ದವು. ನಿಯೋಗ ಪದ್ಧತಿ ರೂಢಿಯಲ್ಲಿತ್ತು.
- ಋಗ್ವೇದ ಕಾಲದ ಜನಪ್ರಿಯ ಕ್ರೀಡೆ **ಪಗಡೆಯಾಟ.** ಅನಾರ್ಯರನ್ನು ದಾಸ ಮತ್ತು ದಸ್ಯುಗಳೆಂದರು.
- ಋಗ್ವೇದ ಕಾಲದಲ್ಲಿ ಚಾತುರ್ವರ್ಣ ವ್ಯವಸ್ಥೆಯಿದ್ದರೂ ವಂಶಪಾರಂಪರ್ಯವಾಗಿರಲಿಲ್ಲ.
- 'ನಾನು ಕವಿ, ನನ್ನ ತಂದೆ ವೈದ್ಯ ಮತ್ತು ನನ್ನ ತಾಯಿ ಬೀಸುವವಳು' ಎಂಬ ಹೇಳಿಕೆಯು ಋಗ್ವೇದದಲ್ಲಿದ್ದು ವೃತ್ತಿ ಬದಲಾವಣೆಗೆ ಅವಕಾಶವಿತ್ತು.
- ಋಗ್ವೇದದ **10ನೇ ಮಂಡಲದಲ್ಲಿ** ಪುರುಷ ಸೂಕ್ತ ಕಂಡುಬರುತ್ತದೆ. ಇದು ಸಮಾಜವನ್ನು 4 ವರ್ಗಗಳಾಗಿ ವಿಂಗಡಿಸಿತು.
- **ಪಂಚಜನ್ಯರು:** ಯದು, ಅನು, ದ್ರಯು, ಪುರು ಮತ್ತು ತುರ್ವಾಸ.
- **ಸೋಮಪಾನದ ಮೂಲ:** ಹಿಮಾಲಯದ ಮುಜವಂತ್ ಶಿಖರ.
- **ತ್ರೀಮೂರ್ತಿ ಪರಿಕಲ್ಪನೆಯು:** ಮೈತ್ರೇಯಾನ ಉಪನಿಷತ್ತಿನಲ್ಲಿ ಮೊದಲಿಗೆ ಕಂಡುಬಂದಿದೆ.

ಧಾರ್ಮಿಕ ಜೀವನ

- ಈ ಕಾಲದ ಧರ್ಮವನ್ನು ಏಕದೇವೋಪಾಸನೆಂದು ಧರ್ಮವೆನ್ನಲಾಗಿದೆ. ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರಾರ್ಥನೆ ಸಲ್ಲಿಸುವುದರ ಮೂಲಕ ದೇವತೆಗಳನ್ನು ಸಂಪ್ರಿತಗೊಳಿಸಬಹುದೆಂದು ನಂಬಲಾಗಿತ್ತು.

ಪ್ರಮುಖ ದೈವಗಳು

1) **ಇಂದ್ರನಿಗೆ** ಮೊದಲ ಸ್ಥಾನವಿದೆ. ಆರ್ಯ ಯೋಧನ ಆದರ್ಶವಾದ ಇಂದ್ರನ ಬಗ್ಗೆ ಋಗ್ವೇದದಲ್ಲಿ **250 ಸೂತ್ರಗಳು** ಇವನಿಗೆ ಅರ್ಪಿತವಾಗಿವೆ. ಇವನು **ಯುದ್ಧ ಮತ್ತು ವಾಯುಗುಣ** ದೇವತೆಂಯಾಗಿದ್ದನು. ಆರ್ಯೇತರ ನಗರಗಳನ್ನು ನಾಶಮಾಡಿದವನೆಂದು ಕರೆಯುವರು. ಇಂದ್ರನು **ವಜ್ರಾಯುಧ** ಹೊಂದಿದ್ದು ಇವನನ್ನು **'ಪುರಂದರ'** ಎನ್ನುತ್ತಿದ್ದರು.

2) **ಅಗ್ನಿ** – ಶ್ರೇಣಿಯಲ್ಲಿ ಅಗ್ನಿಗೆ 2ನೇ ಸ್ಥಾನ ಸುಮಾರು **200 ಸೂತ್ರಗಳು** ಇವನಿಗೆ ಅರ್ಪಿತವಾಗಿವೆ. **ಕುಟುಂಬದ ದೈವವಾದ** ಇವನು ಮನುಷ್ಯ ಮತ್ತು ದೈವದ ನಡುವಿನ ಕೊಂಡಿ ಎಂದು ಭಾವಿಸಲಾಗಿತ್ತು.

3) **ವರುಣ** – 3ನೇ ಪ್ರಮುಖ ದೈವನಾದ ವರುಣನನ್ನು **ಮೊದಲ ರಾಜ** ಎಂದು ಗುರುತಿಸಲಾಗಿದೆ. ಇವನು ಋತ ಅಂದರೆ ವಿಶ್ವ ನಿಯಮದ ಪರಿಪಾಲಕನು, ದೇವತೆಗಳಲ್ಲೆಲ್ಲ ಅತಿ ನೀತಿವಂತನು.

4) **ಸೋಮ** – ಮೂಲತಃ ಸಸ್ಯ ಮತ್ತು ಸಸ್ಯಗಳ ಆದಿದೈವ

5) **ರುದ್ರ** – ಇವನು ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದು ಗ್ರೀಕರ **ಅಪೋಲೋ** ದೇವತೆಗೆ ಸರಿಸಮಾನನು. ಔಷಧಿ ಸಸ್ಯಗಳ ಮೇಲ್ವಿಚಾರಕನಂತಿದ್ದನು.

6) **ರಿಬುಗಳು** – ಲೋಹ ಶಕ್ತಿ.

7) **ಅಶ್ವಿನಿ ಮತ್ತು ನಾಸತ್ಯ** – ವೈದ್ಯ ದೇವತೆಗಳಾದ ಹಗಲು ಮತ್ತು ಸಂಜೆಯ ಧಾರೆಗಳು ಎನಿಸಿದ್ದರು.

8) **ಗಂಧರ್ವರು** – ದೈವಿಕ ಸಂಗೀತ ಹರಿಕರು ಎಂದು ಪ್ರಸಿದ್ಧರಾಗಿದ್ದರು.

9) **ಅದಿತಿ** – ಶಾಶ್ವತೆಯ ದೇವತೆ

10) **ಉಷೆ** – ಬೆಳಕಿನ ದೇವತೆ.

ಸೈನಿಕ ವ್ಯವಸ್ಥೆ

- ಸೇನೆಯು **ಪದಾತಿ** ಮತ್ತು ಅಶ್ವದಳದಿಂದ ಕೂಡಿತ್ತು. ಪದಾತಿ ದಳವನ್ನು **ಪತ್ತಿ** ಎಂದು ಕರೆಯಲಾಗಿದೆ. **ಪರಿಚರಿಷ್ಣುವಿಗೆ** ಚಲಿಸುವ ಕೋಟೆ ಎಂಬರ್ಥದ ಉಲ್ಲೇಖವಿದೆ. ಸೇನಾನಿಯು ಸೈನ್ಯಗಳ ಮುಖ್ಯಸ್ಥನಾಗಿದ್ದನು.

ನ್ಯಾಯ ಮತ್ತು ಕಾನೂನು

- ರಾಜನು ಪುರೋಹಿತರ ಸಲಹೆಯ ಮೇರೆಗೆ ನ್ಯಾಯ ತೀರ್ಮಾನಿಸುತ್ತಿದ್ದನು. ಗೋವನ್ನು ಅಪಹರಿಸುವುದು ಮುಖ್ಯ ಅಪರಾಧವಾಗಿತ್ತು ಅಪರಾಧಿಗೆ 100 ನಾಣ್ಯ ಶತಾದಾಯ ದಂಡ ಶಿಕ್ಷೆಯನ್ನು ವಿಧಿಸುತ್ತಿದ್ದರು.
- ಹಣವನ್ನು ಸಾಲವಾಗಿ ಪಡೆಯುವುದಕ್ಕೆ **ರೀನಾ** ಎನ್ನುತ್ತಿದ್ದರು. ವೈಯಕ್ತಿಕ ಭೂಮಿಯ ಹಕ್ಕನ್ನು ಊರ್ವರ ಅಥವಾ ಕ್ಷೇತ್ರ ಎನ್ನುತ್ತಿದ್ದರು. ಬಲಿ ಎನ್ನುವ ಕೊಡುಗೆ/ ತೆರಿಗೆ ವಿಧಿಸುತ್ತಿದ್ದರು.
- ಗೋವುಗಳ ಕಿವಿಯ ಮೇಲೆ **'8'ರ ಗುರುತು** ಹಾಕಿ ಅದನ್ನು **'ಅಷ್ಟಕರ್ಣಿ'** ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಪುರಾತನ ಸಾಹಿತ್ಯವು ಭಾರತವನ್ನು 5 ವಿಭಾಗಗಳಾಗಿ ವಿಂಗಡಿಸಿದೆ

1. ಉತ್ತರ ಪಥ – ವಾಯುವ್ಯ ಭಾರತ
2. ದಕ್ಷಿಣ ಪಥ – ದಕ್ಷಿಣ ಭಾರತ
3. ಮಧ್ಯ ಪಥ – ಸರಸ್ವತಿ ಮತ್ತು ರಾಜಮಹಲ್ ಬೆಟ್ಟಗಳವರೆಗೆ
4. ಪೂರ್ವ ಪಥ – ಪೂರ್ವ ಭಾರತ
5. ಅಪರಾಂತ – ಪಶ್ಚಿಮ ಭಾರತ

ನದಿಗಳು ಮತ್ತು ಅವುಗಳ ಪುರಾತನ ಹೆಸರುಗಳು

1. ರಾವಿ – ಪುರುಷ್ಣಿ
2. ಜೀಲಂ – ವಿತಿಷ್ಪ
3. ಬಿಯಾಸ್ – ಬಿಪಾಸ್
4. ಸಟ್ಲೆಜ್ – ಶತುದ್ರು
5. ಗಗ್ಗರ್ – ಸರಸ್ವತಿ
6. ಕಾಬೂಲ್ – ಕುಬ
7. ಚೀನಾಬ್ –ಅಸ್ಕಿನಿ
8. ಇಂಡಸ್ – ಸಿಂಧು
9. ಗೋಮಾಲ್ – ಗೋಮತಿ
10. ಕುರ್ರಂ – ಕ್ರುಮಿ
11. ಯಮುನ – ಜಮುನ
12. ಸ್ವಾತ್ – ಸುವಾಸ್ತು

4.2 ಉತ್ತರ ವೈದಿಕ ಯುಗ (Later Vedic Age)

- ಈ ಕಾಲವನ್ನು **'ಚಿತ್ರಿತ ಬೂದು ಕುಂಬಾರಿಕೆ ಹಂತ'**ವೆಂದು ಕರೆಯಲಾಗಿದೆ. ಋಗ್ವೇಗದ ನಂತರ ರಚಿತವಾದ ಸಾಮವೇದ, ಯರ್ಜುವೇದ, ಮತ್ತು ಅಥರ್ವಣ ವೇದಗಳ ಸಹಾಯದಿಂದ ಈ ಕಾಲದ ಇತಿಹಾಸ ರಚನೆ ಮಾಡುವುದರಿಂದ ಇದನ್ನು **'ನಂತರದ ವೇದಗಳ ಕಾಲ'** ಎನ್ನುತ್ತಾರೆ. ಈ ಅವಧಿಯಲ್ಲಿ, ಆರ್ಯರು ಭಾರತದ ಪೂರ್ವ ಭಾಗದತ್ತ ಹಾಗೂ ವಿಂಧ್ಯದ ಕಡೆಗೆ ಚಲಿಸಿದರು. ಅದು ಸರಸ್ವತಿ ನದಿಯಿಂದ ಗಂಗಾ ದೋಅಬ್ ವರೆಗೆ ಹಬ್ಬಿತ್ತು. ಇದು ಕುರು ಮತ್ತು ಪಾಂಚಾಲರ ನಾಡಾಗಿತ್ತು. ಇಲ್ಲಿಂದಲೇ ಬ್ರಾಹ್ಮಣ ಸಂಸ್ಕೃತವು ದೇಶದ ಉಳಿದೆಡೆ ಹರಡಿತು.

ವೇದಗಳು ಮತ್ತು ಅವುಗಳ ಬ್ರಾಹ್ಮಣಗಳು

1. **ಋಗ್ವೇದ (Book of Hymns)**– ಐತ್ತರೇಯ ಬ್ರಾಹ್ಮಣ ಮತ್ತು ಕೌಶಿತಕ ಬ್ರಾಹ್ಮಣ.
2. **ಸಾಮವೇದ (Book of Music)** – ತಾಂಡ್ಯ ಬ್ರಾಹ್ಮಣ ಮತ್ತು ಜೈಮಿನಿ ಬ್ರಾಹ್ಮಣ.
3. **ಯಜುರ್‌ವೇದ (Book of Sacrifices)**– ತೈತ್ತರೇಯ ಬ್ರಾಹ್ಮಣ ಮತ್ತು ಶತಪಥ ಬ್ರಾಹ್ಮಣ.
4. **ಅಥರ್ವಣವೇದ (Book of Magical Formula)**–ಗೋಪಥ ಬ್ರಾಹ್ಮಣ

- ತೈತ್ತರೇಯ ಬ್ರಾಹ್ಮಣದಲ್ಲಿ ಕ್ರೌಂಚ ಎಂಬ ಪರ್ವತದ ಹೆಸರಿದ್ದು ಅದನ್ನು ಮಾನಸ ಸರೋವರವಿರುವ ಕೈಲಾಸ ಪರ್ವತವೆಂದು ಗುರುತಿಸಲಾಗಿದೆ. ಹಾಗೆಯೇ ಹಿಮಾಲಯವನ್ನು **'ಮೈನಕ'** ಎಂದು ಗುರುತಿಸಲಾಗಿದೆ.

  ಹಿಮಾಲಯವನ್ನು **'ತ್ರಿಕಾಕುಡು'** (ಮೂರು ಶಖರ) ಎಂದು ಕರೆಯುತ್ತಿದ್ದರು. ಇದನ್ನು ಇಂದಿನ ಆಧುನಿಕ ತ್ರಿಕೋಟ ಎಂದು ಕರೆಯಲಾಗಿದೆ.

- ಉತ್ತರ ವೈದಿಕ ಸಾಹಿತ್ಯದಲ್ಲಿ ಸಮುದ್ರ ಎಂಬ ಪದ ...

ಗೋಚರಿಸಿದೆ.

- ಸತಪತ ಬ್ರಾಹ್ಮಣವು ಉಲ್ಲೇಖಿಸಿರುವ **ಪರಿಚಕ್ರ** ಎಂಬುದು ಪಾಂಚಾಲ ನಗರದ ಹೆಸರಾಗಿದ್ದು ಅಲ್ಲಿ **ಕ್ರೈವ್ಯ** ಎಂಬ ರಾಜ ಅಶ್ವಮೇಧ ಯಾಗ ಮಾಡಿದನೆಂದು ಪರಿಚಕ್ರವನ್ನು ಏಕಚಕ್ರವೆಂದು ಕರೆದು ಇಂದಿನ **ಕಪಿಲ** ಎನ್ನಲಾಗಿದೆ.
- ಸತಪತ ಮತ್ತು ಐತ್ತರೇಯ ಬ್ರಾಹ್ಮಣವು **ಅಸವಂದಿತ್** ಎಂಬ ಸ್ಥಳದ ಹೆಸರು ಸೂಚಿಸಿದ್ದು ಅದು ಜನಮಜೇಯ ಪರೀಕ್ಷಿತನ ರಾಜಧಾನಿಯಾಗಿತ್ತು. ನಂತರ ಇದನ್ನು ತೊರೆದ ರಾಜ **ನಗನಹ್ವಯ** (ಹಸ್ತಿನಾಪುರ) ಪಟ್ಟಣ ಎಂದು ಕರೆಯಲಾಗಿದೆ.
- ಕೌಸಾಂಬಿಯನ್ನು ಇಂದಿನ ಆಧುನಿಕ **ಕೋಸಂ** ಎನ್ನಲಾಗಿದೆ.

ಕುರು ಮತ್ತು ಪಾಂಚಾಲ ರಾಜ್ಯಗಳು

- ಪ್ರಸಿದ್ಧ ಆರ್ಯ ಮನೆತನಗಳೆಂದರೆ ಕುರು ಮತ್ತು ಪಾಂಚಾಲರು ಕ್ರಮವಾಗಿ ಅಸವಂದಿತ್ ಮತ್ತು ಕಾಂಪಿಲ ನಗರಗಳು ಇವರ ರಾಜಧಾನಿಗಳಾಗಿದ್ದವು.
- ಕುರು ರಾಷ್ಟ್ರವು ಋಗ್ವೇದ ಕಾಲದ ಪ್ರಖ್ಯಾತ ಪಂಗಡಗಳಾದ ಭರತ ಹಾಗೂ ಪುರು ಜನಾಂಗಗಳಿಂದ ಕೂಡಿತ್ತು. ಕುರು ರಾಜ್ಯದ ಪ್ರಖ್ಯಾತ ದೊರೆಗಳೆಂದರೆ ಬಲ್ಹಿಕಾ, ಪ್ರಾತಪೀಯ, ಪರೀಕ್ಷಿತ ಮತ್ತು ಜನಮಜೇಯರು.
- ಪಾಂಚಾಲ ರಾಷ್ಟ್ರವು **ಸೃಂಜಯರು** ಮತ್ತು **ತೂರ್ವಾಸರು** ಎಂಬ ಋಗ್ವೇದ ಕಾಲದ ಕಿವಿಸ್ ಎಂಬ ಜನಾಂಗಕ್ಕೆ ಸೇರಿದವರಿಂದ ರಚಿತವಾಗಿತ್ತು.
- ಯಜ್ಞವಲ್ಕ್ಯನ ಪೋಷಕನಾಗಿ ವಿದೇಹ ದೇಶದ ಸಾಮ್ರಾಟ್ ಬಿರುದನ್ನು ಪಡೆದ **ಜನಕರಾಜ**ನಿಂದ ಪಾಂಚಾಲ ದೇಶದ ಬಲ ಕುಗ್ಗಿತು.

ರಾಜಕೀಯ ವ್ಯವಸ್ಥೆ

- ವೇದಗಳ ಕಾಲದಲ್ಲಿ ರಾಜತ್ವದ ಅಧಿಕಾರ ಪ್ರಭಾವಳಿ ವಿಸ್ತಾರವಾಯಿತು. ಪ್ರತಿನಿಧಿ ಸಭೆಗಳು ಮೇಲ್ವರ್ಗದವರ ಹಿಡಿತಕ್ಕೆ/ ಏಕಸ್ವಾಮ್ಯಕ್ಕೆ ಒಳಗಾದವು. ಮಹಿಳೆಯರು ಪ್ರತಿನಿಧಿ ಸಭೆಗಳಲ್ಲಿ ಭಾಗವಹಿಸುವ ಅವಕಾಶಗಳಿಂದ ವಂಚಿತರಾದರು.
- **ಸಭಾ** ಮತ್ತು **ಸಮಿತಿಗಳು** ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡರೆ, **ವಿಧಾತವು** ಸಂಪೂರ್ಣವಾಗಿ ಕಣ್ಮರೆಯಾಯಿತು. ರಾಜತ್ವವು ನಿರಂಕುಶ ರೂಪ ಪಡೆಯಿತು. ರಾಜನ ಪ್ರಮುಖ ಕಾರ್ಯಗಳು ಸೈನಿಕ ಮತ್ತು ನ್ಯಾಯಿಕ ಸ್ವರೂಪವಾಗಿದ್ದವು.
- ರಾಜನು ಈ ಕೆಳಗಿನ ಯಾಗಗಳನ್ನು ಮಾಡುವ ಮೂಲಕ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡನು.

1. **ರಾಜಸೂಯ ಯಾಗ** – ಪಟ್ಟಾಭಿಷೇಕ ಸಂದರ್ಭದಲ್ಲಿ ನಡೆಸುವ ಯಾಗ ಅಂದರೆ ರಾಜಪ್ರತಿಷ್ಠಾನ.
2. **ವಾಜಪೇಯಿ ಯಾಗ** – ಶಕ್ತಿಗಾಗಿ ಪಾನ ಅಂದರೆ ರಥಗಳ ಸರ್ಧೆ. ರಾಜನು ತನ್ನ ಕುಲೀನರ ಜೊತೆ ಗೆಲುವು ಪಡೆಯುತ್ತಾನೆ.

ಇದು 17 ದಿನದಿಂದ 1 ವರ್ಷದವರೆಗೆ ನಡೆಯುತ್ತದೆ.

3. **ಅಶ್ವಮೇಧ ಯಾಗ** – ಮೂರು ದಿನಗಳ ಕಾಲ ನಡೆಯುತ್ತದೆ. ರಾಜನು ಕುದುರೆ ಸುತ್ತುವ ಪ್ರದೇಶಗಳಲ್ಲಿ ರಾಜನ ಪರಮಾಧಿಕಾರ ಸ್ಥಾಪಿತವಾಗುತ್ತದೆ.

ವಿವಿಧ ಪ್ರದೇಶಗಳ ರಾಜರುಗಳ ಬಿರುದುಗಳು

- ಪೂರ್ವದ ದೊರೆಗಳು – ಸಾಮ್ರಾಟರು
- ಪಶ್ಚಿಮದ ದೊರೆಗಳು – ಸ್ವರಾಟರು
- ಮಧ್ಯದ ದೊರೆಗಳು – ರಾಜರು
- ಉತ್ತರದ ದೊರೆಗಳು – ವಿರಾಟರು
- ದಕ್ಷಿಣದ ದೊರೆಗಳು – ಭೋಜರು ಎಂದು ಕರೆಯಲ್ಪಡುತ್ತಿದ್ದರು.
- ರಾಜತ್ವವು ಅನುವಂಶಿಕವಾಗಿದ್ದರೂ ಅಥರ್ವಣ ವೇದದಲ್ಲಿ ಆಯ್ಕೆಯ ಉದಾಹರಣೆಗಳಿವೆ. ಇದು ರಾಜವಂಶದ ಸದಸ್ಯರೊಳಗೆ ನಡೆಯುತ್ತಿತ್ತು.

ಅಧಿಕಾರ ವರ್ಗಗಳು

- ಸಂಗ್ರಹಿತ್ನ – ಕೋಶಾಧಿಕಾರಿ.
- ಭಗದುಘ – ತೆರಿಗೆ ವಸೂಲಿಗಾರ.
- ಸುತ – ರಾಜಸಾರಥಿ.
- ಅಕ್ಷವಾಪ – ದ್ಯೂತ ಅಧಿಕಾರಿ.
- ಕ್ಷತ್ರಿ – ಮನೆವಾರ್ತೆಗಾರ.
- ಸ್ಥಪತಿ ಮತ್ತು ಶತಪತಿ – ಪ್ರಾಂತೀಯ ಆಡಳಿತ.
- ಸ್ಥಪತಿ – ಮೂಲನಿವಾಸಿಗಳಿಂದ ಕೂಡಿದ ಹೊರ ಪ್ರಾಂತ್ಯ.
- ಶತಪತಿ – ನೂರು ಗ್ರಾಮಗಳ ಆಡಳಿತ.
- ಈ ಕಾಲದ ಸೈನ್ಯದಲ್ಲಿ ಗಜ ಸೈನ್ಯವು ಅತಿ ಪ್ರಮುಖವಾದುದಾಗಿತ್ತು.
- ಕ್ರಿ.ಪೂ. 1000 ಹೊತ್ತಿಗೆ ಗಾಂಧಾರ ಪ್ರದೇಶದಲ್ಲಿ ಕಬ್ಬಿಣದ (ಕೃಷ್ಣಅಯಾಸ್) ಬಳಕೆ ಪ್ರಾರಂಭವಾಯಿತು.

ಆರ್ಥಿಕ ವ್ಯವಸ್ಥೆ

- ಜನಕ ಮಹಾರಾಜನು ನೇಗಿಲನ್ನು ಹೊಡೆದ ಉದಾಹರಣೆ ಇದೆ. ಬಲರಾಮನನ್ನು **ಹಲಾಧರ** (ನೇಗಿಲನು ಧರಿಸುವ) ಎಂದು ಕರೆಯಲಾಗುತ್ತಿತ್ತು. **ಕೃಷಿ** ಪ್ರಮುಖ ಕಸುಬಾಯಿತು ಮತ್ತು **ಭತ್ತ** (ವ್ರೀಹಿ) ಮುಖ್ಯ ಬೆಳೆಯಾಯಿತು.
- ಋಗ್ವೇದ ಕಾಲವು ಕೇವಲ ಚಿನ್ನ, ತಾಮ್ರ, ಕಂಚನ್ನು ಉಲ್ಲೇಖಿಸಿದರೆ ನಂತರದ ವೇದಗಳು ಅವುಗಳ ಜೊತೆಗೆ ಸೀಸ, ಸತು, ತವರ, ಬೆಳ್ಳಿ ಮತ್ತು ಕಬ್ಬಿಣವನ್ನು ಉಲ್ಲೇಖಿಸಿವೆ.
- ಇತರ ವೇದಗಳ ಕಾಲದ ಜನರಿಗೆ ಅರಬ್ಬೀ ಮತ್ತು ಬಂಗಾಳಕೊಲ್ಲಿ ತೀರಗಳು ತಿಳಿದಿದ್ದವು. **ನೇಯ್ಗೆ ಉತ್ಪಾದನೆ** ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿತ್ತು.
- ಭಾರತ ಮತ್ತು ಬ್ಯಾಬಿಲೋನಿಯನ್ನರ ನಡುವೆ ವ್ಯಾಪಾರ ಸಂಪರ್ಕ ಇತ್ತು. ವ್ಯಾಪಾರ **ನಿಷ್ಕ, ಶತಮಾನ, ಕೃಷಾಲ** ಮುಂತಾದ ಮೌಲ್ಯಮಾಪನಗಳಿಂದ ನಡೆಯುತ್ತಿತ್ತು. ಇವು ನಾಣ್ಯಗಳಾಗಿರದೆ ಆಭರಣಗಳಾಗಿದ್ದವು.
- ವರ್ತಕರು ಗಣಗಳು ಅಥವಾ ಸಂಸ್ಥೆಗಳು ಹಾಗೂ **ಶ್ರೇಷ್ಟಿನ್** ಅಥವಾ **ಶ್ರೇಷ್ಠ** ಎಂಬ ವೃತ್ತಿ ಸಂಘಗಳನ್ನು ತಮ್ಮ ತಮ್ಮಲ್ಲಿಯೇ ರಚಿಸಿಕೊಂಡಿದ್ದರು.

ಸಾಮಾಜಿಕ ವ್ಯವಸ್ಥೆ

- ಸಮಾಜದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳಿದ್ದವು ಬ್ರಾಹ್ಮಣರು ಶ್ರೇಣಿಕೃತ ಸಮಾಜದ ಮೇಲ್ಪಂಕ್ತಿಯಲ್ಲಿದ್ದರು.
- ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು **ದ್ವಿಜರೆಂದು** ಪರಿಗಣಿಸಲಾಗಿತ್ತು. ಶಿಕ್ಷಣ ಮತ್ತು ವೇದಾಧ್ಯಯನ ದ್ವಿಜರ ಸ್ವತ್ತಾಗಿತ್ತು.
- **ಗೋತ್ರ ಪರಿಕಲ್ಪನೆ** ಆರಂಭವಾಗಿ ಸ್ವಗೋತ್ರ ವಿವಾಹ ನಿಷಿದ್ಧವಾಯಿತು. ಮಾಂಸಾಹಾರದ ಕೀಳು ಭಾವನೆ ಬೆಳೆಯಿತು.
- ಸತಿ ಪದ್ಧತಿ ಮತ್ತು ಬಾಲ್ಯ ವಿವಾಹಗಳ ಉಲ್ಲೇಖ ಮೊದಲ ಬಾರಿಗೆ ಕಂಡುಬರುತ್ತದೆ. ಬಹುಪತ್ನಿತ್ವ ಆಚರಣೆಯಲ್ಲಿತ್ತು. ಈ ನಾಲ್ಕು ವರ್ಣಗಳ ಹೊರಗೆ ವೈಶ್ಯರು ಹಾಗೂ ನಿಷಾಧರೆಂಬ ಜನರಿದ್ದರು. ಮುಂದೆ ಇವರು ಪಂಚಮರೆನಿಸಿದರು.
- ಮಹಿಳೆಯರ ಸಾಮಾಜಿಕ ಸ್ಥಾನಮಾನ ಇಳಿಮುಖವಾಯಿತು.

ವಿವಿಧ ವೈವಾಹಿಕ ಪದ್ಧತಿಗಳು

1. **ಬ್ರಹ್ಮ** – ಸೂಕ್ತ ವರದಕ್ಷಿಣೆಯೊಂದಿಗೆ ಒಂದೇ ವರ್ಣದ ಜೋಡಿಯ ನಡುವಿನ ವಿವಾಹ.
2. **ದೈವ** – ಧಾರ್ಮಿಕ ಸಂಸ್ಕಾರದ ಶುಲ್ಕವಾಗಿ ಪುರೋಹಿತನಿಗೆ ಮನೆಯ ಯಜಮಾನ ತನ್ನ ಮಗಳನ್ನು ಕೊಡುವುದು.
3. **ಅರ್ಶ** – ವರದಕ್ಷಿಣೆ ಬದಲಾಗಿ ಸಾಂಕೇತಿಕವಾಗಿ ಹಸು ಅಥವಾ ಗೂಳಿಯನ್ನು ನೀಡಲಾಗುತ್ತದೆ.
4. **ಪ್ರಜಾಪತ್ಯ** – ತಂದೆಯು ವರದಕ್ಷಿಣೆ ಮತ್ತು ಕನ್ಯಾ ಶುಲ್ಕವಿಲ್ಲದೆ ವಿವಾಹ ಮಾಡುವುದು.
5. **ಗಾಂಧರ್ವ** – ಸ್ತ್ರೀ ಪುರುಷರಿಬ್ಬರು ಪರಸ್ಪರ ಒಪ್ಪಿಗೆಯಿಂದಾಗುವ ವಿವಾಹ.
6. **ಅಸುರ** – ಕನ್ಯೆಯನ್ನು ಖರೀದಿಸಿ ವಿವಾಹವಾಗುವುದು
7. **ಪೈಶಾಚ** – ಕನ್ಯೆಯರು ನಿದ್ರೆಯಲ್ಲಿರುವಾಗ/ಮದ್ಯಪಾನ ಮಾಡಿದ್ದಾಗ/ಮತಿ ಭ್ರಮಣರಾಗಿದ್ದಾಗ ಆಕೆಯೊಂದಿಗೆ ಕೂಡುವ ಪದ್ಧತಿಯಾಗಿದೆ.
8. **ರಾಕ್ಷಸ** – ಸೆರೆ ಹಿಡಿದು ವಿವಾಹವಾಗುವುದು.

ಧಾರ್ಮಿಕ ವ್ಯವಸ್ಥೆ

- **ಇಂದ್ರ ಮತ್ತು ಅಗ್ನಿ** ದೇವತೆಗಳು ತಮ್ಮ ಮಹತ್ವವನ್ನು ಕಳೆದುಕೊಂಡವು. **ಪ್ರಜಾಪತಿಯು** ವೇದಗಳ ಕಾಲ ಹಾಗೂ ಉತ್ತರ ವೈದಿಕ ಕಾಲದ ಪ್ರಮುಖ ದೇವರು.

- ವಿಷ್ಣುವು ಸ್ಥಿತಿಕಾರ ಹಾಗೂ ರಕ್ಷಕನೆಂದು ಜನಪ್ರಿಯನಾದನು. ಇದೇ ಅವಧಿಯಲ್ಲಿ ಶೂದ್ರರಿಗಾಗಿ **'ಪುಷನ್'** ಎಂಬ ಪ್ರತ್ಯೇಕ ದೇವತೆ ಉಗಮವಾಯಿತು.
- ವೇದಗಳ ಕಾಲದ ಕೊನೆ ಕೊನೆಗೆ ಈ ಬ್ರಾಹ್ಮಣರ ಪಾರಮ್ಯತೆ ಹಾಗೂ ಸಂಸ್ಕಾರಗಳನ್ನು ಪ್ರಶ್ನಿಸಿ ಕ್ರಿಪೂ. 600ರ ವೇಳೆಗೆ ಪಾಂಚಾಲ ಮತ್ತು ವಿದೇಹ ರಾಜ್ಯಗಳಲ್ಲಿ ಉಪನಿಷತ್ತುಗಳು ರಚನೆಯಾದವು.

ವೈದಿಕ ಸಾಹಿತ್ಯ

- ವೇದ ಎಂದರೆ **'ಜ್ಞಾನ'** ಎಂದರ್ಥ. ಇದು **ವಿದ್** ಪದದಿಂದ ಬಂದಿದೆ. ಇವುಗಳನ್ನು ಅಪೌರುಷೇಯ ಹಾಗೂ ನಿತ್ಯ ಎಂದು ಭಾವಿಸಲಾಗಿದೆ.
- ವೇದಗಳು ಪ್ರಪಂಚದಲ್ಲೇ **ಅತಿ ಪ್ರಾಚೀನ ಕೃತಿಗಳು. ಶ್ರುತಿಗಳಿಗೆ** ದೈವತ್ವದ ಕಲ್ಪನೆಯಿತ್ತು ಸ್ಮೃತಿಗಳಿಗೆ ದೈವತ್ವದ ಕಲ್ಪನೆ ಇರಲಿಲ್ಲ.

I. ಸಂಹಿತೆಗಳು/ವೇದಗಳು (2500-1700 ಬಿ.ಸಿ)

- ಸಂಹಿತೆಗಳು ಧಾರ್ಮಿಕ ಪ್ರಾರ್ಥನೆಗಳು ಹಾಗೂ ಮಂತ್ರಗಳನ್ನು ಒಳಗೊಂಡಿವೆ. ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ಅಥರ್ವಣ ವೇದಗಳೆಂಬ 04 ಸಂಹಿತೆಗಳಿವೆ. ಮೊದಲ 03 ವೇದಗಳನ್ನು 'ತ್ರಯಿ' ಎನ್ನುವರು.

ಎ) ಋಗ್ವೇದ (ಹೊಗಳಿಕೆ) (Book of Hymns)

- ಇದು ಪ್ರಪಂಚದಲ್ಲೇ ಅತಿ ಪ್ರಾಚೀನ ಧಾರ್ಮಿಕ ಕೃತಿಯಾಗಿದೆ. ಸುಮಾರು **ಕ್ರಿ.ಪೂ.1500- 1000** ದಲ್ಲಿ ರಚಿತವಾಗಿರಬಹುದು. ಇದು ವಿವಿಧ ದೈವಗಳ ಪ್ರಾರ್ಥನೆಗಳ ಸಂಗ್ರಹವಾಗಿದೆ. ಋಗ್ವೇದದಲ್ಲಿ ಪ್ರಸಿದ್ಧ **ಗಾಯಿತ್ರಿ ಮಂತ್ರವಿದೆ.**
- ಇದರಲ್ಲಿ **10 ಮಂಡಲಗಳಿದ್ದು, 1028 ಮಂತ್ರಗಳಿವೆ.** 4 ವರ್ಣವ್ಯವಸ್ಥೆಗಳನ್ನು ತಿಳಿಸುವ ಪುರುಷ ಸೂಕ್ತ ಇದರಲ್ಲಿದೆ. ಈ ಮಂತ್ರಗಳನ್ನು **ವಿಶ್ವಾಮಿತ್ರ, ವಾಸುದೇವ, ಅತ್ರಿ ನಾಮದೇವ ಭಾರದ್ವಾಜ** ಮತ್ತು **ವಿಶಿಷ್ಟರು** ರಚಿಸಿದ್ದಾರೆ.
- ಈ ವೇದದ ಮಂತ್ರಗಳನ್ನು **'ಹೋತ್ರಿ'** ಎಂಬ ಪುರೋಹಿತರು ಪಠಿಸುತ್ತಿದ್ದರು.
- ಮ್ಯಾಕ್ಸ್ ಮುಲ್ಲರ್ ರವರು ಋಗ್ವೇದವನ್ನು **'ಮನುಕುಲದ ಪ್ರಥಮ ಗ್ರಂಥ'** ಎಂದಿದ್ದಾರೆ.

ಬಿ) ಸಾಮವೇದ : ಗಾಯನ ಗ್ರಂಥ : ಸಂಗೀತವೇದ (Book of chants)

- ಸಾಮವೇದವು ಪ್ರಾರ್ಥನೆಗಳನ್ನು ಹಾಡಲು ಅನುಕೂಲವಾಗುವಂತೆ ರಾಗ ಸಂಯೋಜನೆ ಹೊಂದಿದೆ. ಇದನ್ನು **'ಸಂಗೀತ ವೇದ'** ಎನ್ನುವರು.
- ಇದರಲ್ಲಿ 75 ಪದ್ಯ ಬಿಟ್ಟು ಉಳಿದವು ಋಗ್ವೇದ ಪದ್ಯಗಳ ಪುನರಾವರ್ತನೆಯಾಗಿವೆ.
- ಸಾಮವೇದದ ಹಾಡುಗಳನ್ನು **ಉದ್ಗಾತ್ರು** ಎಂಬ ಪುರೋಹಿತರು
- ಆರ್.ಸಿ.ಮಜುಂದಾರ್‌ರವರು ಸಾಮವೇದವು ಭಾರತದ ಸಂಗೀತದ ಇತಿಹಾಸ ಮತ್ತು ಯಜ್ಞಗಳ ಬೆಳವಣಿಗೆಯ ಬಗೆಯನ್ನು ತಿಳಿಸುತ್ತದೆಂದಿದ್ದಾರೆ.

ಸಿ) ಯಜುರ್ವೇದ (ಮತಾಚರಣೆ) (Book of Sacrifies)

- ಇದು ನಂಬಿಕೆಗಳನ್ನು ಒಳಗೊಂಡ ಕೃತಿ.
- ಯಜ್ಞದ ಪಾತ್ರಗಳ ಬಗ್ಗೆ ಹೇರಳ ಸ್ತೋತ್ರಗಳಿವೆ.
- ಇದರಲ್ಲಿ 40 ಅಧ್ಯಾಯಗಳಿದ್ದು **ಶ್ವೇತ ಯಜುರ್ವೇದ** ಮತ್ತು **ಕೃಷ್ಣ/ಕಪ್ಪು ಯಜುರ್ವೇದ**ವೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. (ಕಾಠಕ, ಕಪಿತ್ಥಲ, ತೈತ್ತರಿಯ ಮೇತ್ರಾಯಣ ಕಪ್ಪು ಯಜುರ್ವೇದದ ಶಾಖೆಗಳು).
- ಈ ವೇದವನ್ನು **'ಅಧ್ವೈರ್ಯ'** ಎಂಬ ಪಂಡಿತನು ಪಠಿಸುತ್ತಿದ್ದನು.

ಡಿ) ಅಥರ್ವಣವೇದ (Book of Magical Formula)

- ಇದು ಆರ್ಯೇತರ ನಂಬಿಕೆಗಳನ್ನೊಳಗೊಂಡ ಕೃತಿಯಾಗಿದೆ.
- ಇದರಲ್ಲಿ ಮಾಯಮಂತ್ರ, ತಾಯತ ಹಾಗೂ ಔಷಧಿಗಳ ಬಗ್ಗೆ ಮಾಹಿತಿಯಿದೆ
- ಇದರಲ್ಲಿ **711 ಮಂತ್ರಗಳಿದ್ದು 20 ಖಂಡ**ಗಳಾಗಿ ವಿಭಾಗಿಸಲಾಗಿದೆ.
- ಈ ವೇದವನ್ನು **'ಬ್ರಹ್ಮವೇದ'** ಎನ್ನುವರು. ಇದನ್ನು **'ಅಥರ್ವ ಮಹರ್ಷಿ'** ಪಠಿಸುತ್ತಿದ್ದನು.
- ವೇದಗಳು ಮೊದಲಿನ ಆರ್ಯರು ಸ್ಥಳೀಯ ಧಸ್ಯುಗಳ ವಿರುದ್ಧ ಹೋರಾಡಿ ಅಧಿಪತ್ಯವನ್ನು ಸ್ಥಾಪಿಸಿದ ವೀರಗಾಥೆಯನ್ನು ಒಳಗೊಂಡಿವೆ.

2) ಬ್ರಾಹ್ಮಣಕಗಳು (ಕ್ರಿ.ಪೂ.600)

- ಇವು ವೇದಗಳ ಮೇಲೆ ರಚಿಸಿದ ಅನುಬಂಧಗಳು/ ವಾಖ್ಯಾನಗಳಾಗಿವೆ. ಯಜ್ಞ ಯಾಗಾದಿಗಳ ಆಚರಣೆಯ ಬಗ್ಗೆ ದೀರ್ಘ ವಿವರಣೆ ನೀಡುತ್ತವೆ.

1. **ಋಗ್ವೇದ** – ಐತ್ತರೇಯ ಮತ್ತು ಕೌಷೀತಕ ಬ್ರಾಹ್ಮಣಗಳು (ರಚನೆ – ಹೋತ್ರಿ)
2. **ಸಾಮವೇದ** – ತಾಂಡ್ಯೆಮಹಾ/ಪಂಚವಂಶ, ಷಡ್ವಂಶ ಮತ್ತು ಜೈಮಿನಿ ಬ್ರಾಹ್ಮಣಗಳು (ರಚನೆ – ಉದ್ಗಾತೃ).
3. **ಯಜುರ್ವೇದ** – ಶತಪತ ಮತ್ತು ತೈತ್ತರಿಯ ಬ್ರಾಹ್ಮಣಗಳು. (ರಚನೆ:ಅದ್ವೈರ್ಯ)
4. **ಅಥರ್ವಣವೇದ** – ಗೋಪಥ ಬ್ರಾಹ್ಮಣ.

3) ಅರಣ್ಯಕಗಳು (ಕ್ರಿ.ಪೂ.1000)

- ಇವು ಬ್ರಾಹ್ಮಣಕಗಳ ಮೇಲಿನ ಅನುಬಂಧಗಳಾಗಿವೆ. ಇವುಗಳನ್ನು ಬ್ರಾಹ್ಮಣಗಳೊಂದಿಗೆ ಜೋಡಿಸಲಾಗಿದೆ. ಅರಣ್ಯಗಳಲ್ಲಿ ವಾಸಿಸುವ ಸನ್ಯಾಸಿಗಳಿಗಾಗಿ ಅಥವಾ ಅವರಿಂದ ರಚಿತವಾದ ಕೃತಿಗಳಾಗಿವೆ. ಇವು ತತ್ವಶಾಸ್ತ್ರ ಮತ್ತು ಆಧ್ಯಾತ್ಮಿಕತೆಗೆ ಸಂಬಂಧಿಸಿದ್ದು ಧ್ಯಾನಕ್ಕೆ ಒತ್ತು ನೀಡಿವೆ. ಕೌಶಿತಕ, ತೈತರೇಯ, ಐತರೇಯ, ಜೈಮಿನಿ

ಮತ್ತು ಬೃಹದಾರಣ್ಯಕಗಳು ಮುಖ್ಯವಾದವು.

4) ಉಪನಿಷತ್ತುಗಳು / ವೇದಾಂತಗಳು (ಕ್ರಿ.ಪೂ.1000-500)

- ಉಪನಿಷತ್ತುಗಳು ವೈಧಿಕ ಸಾಹಿತ್ಯದ ಕಟ್ಟಕಡೆಯ ಭಾಗಗಳಾಗಿವೆ.
- ಅರಣ್ಯಕಗಳ ಕೊನೆಯ ಭಾಗವನ್ನು ಉಪನಿಷತ್‌ಗಳು ಎನ್ನುವರು.
- ಇವುಗಳನ್ನು **'ವೇದಾಂತ ಕೊನೆ'** ಎನ್ನುವರು.
- ಉಪನಿಷತ್ ಎಂದರೆ ಬೇರೊಬ್ಬರ ಹತ್ತಿರ ಕುಳಿತಿರುವುದು ಎಂದರ್ಥ.
- ಉಪನಿಷತ್‌ಗಳಲ್ಲಿ **ಬ್ರಹ್ಮನ್** ಮತ್ತು **ಆತ್ಮನ್** ಎಂಬ 2 ಕಲ್ಪನೆಗಳಿವೆ.
- ಅಕ್ಬರನ ಕಾಲದಲ್ಲಿ ಅಲೋಪನಿಷತ್‌ನಂತಹ ಉಪನಿಷತ್‌ಗಳ ಸಂಖ್ಯೆ 200 ಆಗಿದ್ದವು. ಇದು ಇಸ್ಲಾಂ ಧರ್ಮವನ್ನು ಪ್ರತಿಪಾದಿಸುತ್ತದೆ.
- ಉಪನಿಷತ್‌ಗಳನ್ನು ಪರ್ಶಿಯನ್‌ಗೆ ಭಾಷಾಂತರಿಸಿದವರು **ದಾರಶುಕೋ**
- ಉಪನಿಷತ್ತುಗಳು ಆತ್ಮ ಮತ್ತು ಸೃಷ್ಟಿಕರ್ತ ಬ್ರಹ್ಮನ ನಡುವಿನ ಸಂಬಂಧ ಮುಕ್ತಿ ಪಡೆಯಲು ಕರ್ಮ, ಪುನರ್ಜನ್ಮ, ಜ್ಞಾನ ಮಾರ್ಗ, ಆತ್ಮ, ಜಗತ್ತು, ಸೃಷ್ಟಿ ಇವುಗಳನ್ನು ಒಳಗೊಂಡಿವೆ.
- ಮ್ಯಾಕ್ಸ್ ಮುಲ್ಲರ್‌ರವರು ಉಪನಿಷತ್‌ಗಳು ಮಾನವ ಬುದ್ಧಿಶಕ್ತಿಯ ಅದ್ಭುತ ರಚನೆಗಳೆಂದಿದ್ದಾರೆ.

5) ಸ್ಮೃತಿಗಳು

- ಧಾರ್ಮಿಕ ಹಾಗೂ ರಾಜ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳೇ ಸ್ಮೃತಿಗಳು, ಪ್ರಮುಖ ಸ್ಮೃತಿಗಳೆಂದರೆ ಮನುಸ್ಮೃತಿ, ಯಜ್ಞವಲ್ಕ್ಯನ ಸ್ಮೃತಿ, ನಾರದಸ್ಮೃತಿ ಹಾಗೂ ವಿಷ್ಣು ಸ್ಮೃತಿಗಳು.
- ಉಪನಿಷತ್ತುಗಳಲ್ಲಿ ನ್ಯಾಯ ನಿಬಂಧನೆ, ವರ್ಣಾಶ್ರಮ, ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳಿವೆ.

6) ಪುರಾಣಗಳು

- 18 ಪುರಾಣಗಳಿದ್ದು ಇವು ರಾಜವಂಶಾವಳಿಗಳ ಬಗ್ಗೆ ಮಾಹಿತಿ ಒಳಗೊಂಡಿವೆ.
- ಸಂಹಿತೆಗಳ ಕಾಲದಲ್ಲಿ ದಾನಸ್ತುತಿ, ಗಾಥಾ, ನಾರಸಾಂಶಿ, ಇತಿಮತ್ತ, ಮುಂತಾದ ರೂಪಗಳಲ್ಲಿ ಅರಸರ ವಂಶಾವಳಿಗಳನ್ನು ಮತ್ತು ಪ್ರಶಸ್ತಿಗಳನ್ನು ಉಲ್ಲೇಖಿಸುವ ಸಾಹಿತ್ಯ ಭಾಗಗಳಿದ್ದವು.
- ನಿಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುಚರಿತ (ಪ್ರತಿಸರ್ಗವು ವಿಶ್ವ ಒಡೆದುದರ ಮತ್ತು ಒಂದಾದುದರ ಬಗ್ಗೆ ವಂಶವು ದೇವರ ಬಗ್ಗೆ, ಮನ್ವಂತರ ಮನುವಿನ ಬಗ್ಗೆ, ವಂಶಾನುಚರಿತವು ಸೂರ್ಯ ಚಂದ್ರ ಕಾಲಮಾನದ ಬಗ್ಗೆ) ಎಂಬ 05 ಲಕ್ಷಣಗಳ ಪ್ರಾಚೀನ ಗ್ರಂಥಗಳೇ ಪುರಾಣಗಳು.
- ಮತ್ಸ್ಯ ಪುರಾಣ – ಶಾತವಾಹನರ ಇತಿಹಾಸಕ್ಕೆ ಸಂಬಂಧಿಸಿದೆ
- ವಾಯುಪುರಾಣ – ಗುಪ್ತರ ಆಡಳಿತದ ವಿವರಗಳು.
- ವಿಷ್ಣುಪುರಾಣ – ಮಹಾಭಾರತದ ಅವಧಿಯಿಂದ ಹಸ್ತಿನಾಪುರದಲ್ಲಿ ಆಳಿದ ರಾಜರುಗಳ ಬಗ್ಗೆ ತಿಳಿಸುತ್ತದೆ.
- ಸಾತ್ವಿಕ ಪುರಾಣವು ಜ್ಞಾನದ ಬಗ್ಗೆ, ತಾಮಸ ಪುರಾಣವು ಅಜ್ಞಾನ ಮತ್ತು ಜಡತ್ವದ ಬಗ್ಗೆ, ರಾಜಸ ಪುರಾಣವು ಕ್ರಿಯಾಶೀಲತೆ ಮತ್ತು ಬ್ರಹ್ಮನ ಬಗ್ಗೆ ತಿಳಿಸುತ್ತವೆ.

7) ವೇದಾಂಗಗಳು

1. ಕಲ್ಪ (ಸಂಸ್ಕಾರಶಾಸ್ತ್ರ)ಧಾರ್ಮಿಕ ಆಚರಣೆಗಳು.
2. ಶಿಕ್ಷ (ಧ್ವನಿಶಾಸ್ತ್ರ) ವಿಧಿಯುಕ್ತ ಉಚ್ಚಾರಣೆ
3. ನಿರುಕ್ತ (ವ್ಯುತ್ಪತ್ತಿ ಶಾಸ್ತ್ರ)
4. ವ್ಯಾಕರಣ (ಭಾಷಾ ಶಾಸ್ತ್ರ)
5. ಛಂದಸ್ಸು
6. ಜೋತಿಷ್ಯ

- ಶಿಕ್ಷಾ ಗ್ರಂಥದ ವಿಶಿಷ್ಟ ರಚನೆಯೆಂದರೆ, ಪ್ರಾತಿ ಸಖ್ಯ ಸೂತ್ರಗಳು.
- ಕಲ್ಪ ಗ್ರಂಥವು ಯಜ್ಞ ಯಾಗಾದಿಗಳನ್ನು ಹೇಗೆ ಮಾಡಬೇಕೆಂಬುದನ್ನು ತಿಳಿಸುತ್ತದೆ.

8) ದರ್ಶನಗಳು / ಷಾಡ್ಡನಗಳು

1. ಗೌತಮನ ನ್ಯಾಯದರ್ಶನ (ವಿವರಣೆ: ದೇವರ ಸ್ವರೂಪ ಅರಿಯುವ ಕರ್ಮಮಾರ್ಗವಾಗಿದೆ.)
2. ಕುಣಾದನ ವೈಶೇಶಿಕ ದರ್ಶನ (ಪ್ರತಿಪಾದನೆ: ದೇವರ ನಿರಾಕರಣೆ ಅಣುಸಿದ್ಧಾಂತವಾಗಿದೆ).
3. ಕಪಿಲನ ಸಾಂಖ್ಯ ದರ್ಶನ (ಪ್ರತಿಪಾದನೆ: ಪ್ರಕೃತಿ ಮತ್ತು ಆತ್ಮಗಳ ಅಮರತ್ವವಾಗಿದೆ)
4. ಪತಂಜಲಿಯ ಯೋಗ ದರ್ಶನ (ವಿವರಣೆ: ಧ್ಯಾನ)
5. ಜೈಮಿನಿಯ ಪೂರ್ವ ಮೀಮಾಂಸೆ (ಮುಕ್ತಿ ಸಾಧನೆಗೆ ಕರ್ಮಮಾರ್ಗ)
6. ಬಾದರಾಯಣ(ವ್ಯಾಸ)ನ ಉತ್ತರ ಮೀಮಾಂಸೆ (ವಸ್ತು ಅಸತ್ಯ, ದೇವರು ಸರ್ವಶಕ್ತ ಎಂದಿದೆ)

9) ಉಪವೇದಗಳು

1. **ಧನುರ್ವೇಧ** – ಯುದ್ಧ ಕಲೆಯ ಬಗ್ಗೆ ತಿಳಿಸುತ್ತದೆ (ಯಜುರ್ವೇದದ ಉಪವೇದ)
2. **ಗಂಧರ್ವವೇದ** – ಸಂಗೀತದ ಬಗ್ಗೆ ತಿಳಿಸುತ್ತದೆ (ಸಾಮವೇದದ ಉಪವೇದ)
3. **ಆಯುರ್ವೇದ**–ವೈದ್ಯಕೀಯದ ಬಗ್ಗೆ ತಿಳಿಸುತ್ತದೆ (ಋಗ್ವೇದದ ಉಪವೇದ)
4. **ಶಿಲ್ಪವೇದ** – ವಾಸ್ತುಶಿಲ್ಪದ ಬಗ್ಗೆ ತಿಳಿಸುತ್ತದೆ (ಅಥರ್ವಣವೇದದ ಉಪವೇದ)

10) ಮನುಸ್ಮೃತಿ

- ಮನುಸ್ಮೃತಿಯು ಹಿಂದೂ ಧರ್ಮದ ಪ್ರಮುಖ ಧಾರ್ಮಿಕ ಕೃತಿಯಾಗಿದೆ.
- ಮನುವು ನಾಲ್ಕು ಆಶ್ರಮಗಳಾದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮ ಎಂದು ವಿಭಾಗಿಸಿದ್ದಾನೆ.

11) ಮಹಾಕಾವ್ಯಗಳು

ಎ. ರಾಮಾಯಣ

- ರಾಮಾಯಣವು ಆರ್ಯರ ಪ್ರಾರಂಭ ಕಾಲದ ಬಗ್ಗೆ ಕುರಿತದ್ದಾಗಿದೆ.
- ಇದು ಕೋಸಲ ಅಧಿಪತಿಯಾದ **ರಾಮನ** ಬಗ್ಗೆ ಕುರಿತದ್ದಾಗಿದೆ.
- ರಾಮಾಯಣದ ಕಾಲವನ್ನು **ತ್ರೇತಾಯುಗ** ಎನ್ನುವರು.
- ರಾಮಾಯಣದ ಕರ್ತೃ **ವಾಲ್ಮೀಕಿ ಮಹರ್ಷಿಗಳು.**
- ರಾಮಾಯಣವು ಆರ್ಯರ ನಾಗರಿಕತೆ, ರಾಜಕೀಯ, ಭೌಗೋಳಿಕತೆ, ಸಾಮಾಜಿಕ, ಹಾಗೂ ಧಾರ್ಮಿಕ ಪರಿಸ್ಥಿತಿಯ ಬಗ್ಗೆ ತಿಳಿಸುತ್ತದೆ.
- ರಾಮಾಯಣವನ್ನು **ಆದಿಕಾವ್ಯ** ಎನ್ನುವರು. 7 ಖಂಡಗಳಿದ್ದು, ಸುಮಾರು 24000 ಶ್ಲೋಕಗಳಿವೆ.
- ರಾಮಾಯಣವು ಆರ್ಯ ಧರ್ಮವೆಂಬುದು ಭಾರತಕ್ಕೆಲ್ಲ ಹೇಗೆ ವ್ಯಾಪಿಸಿತು ಎಂಬುದನ್ನು ತಿಳಿಸುತ್ತದೆ.

ಬಿ. ಮಹಾಭಾರತ

- ಮಹಾಭಾರತವು ವೇದಗಳ ನಂತರದ ಕಾಲವನ್ನು ಕುರಿತದ್ದಾಗಿದೆ.
- ಮಹಾಭಾರತದ ಪ್ರಥಮ ಉಲ್ಲೇಖವು ಗಹ್ಯಸೂತ್ರದಲ್ಲಿ ಹಾಗೂ ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಕಂಡುಬರುತ್ತದೆ.
- ಮಹಾಭಾರತವು 18 ಪರ್ವಗಳನ್ನು ಒಳಗೊಂಡಿದೆ. ಶಾಂತಿ ಪರ್ವವು ರಾಜ್ಯಶಾಸ್ತ್ರದ ವಿಷಯದ ಕೈಪಿಡಿಯಂತಿದೆ.
- ಭಗವಾನ್ ಕೃಷ್ಣನಿಂದ ಅರ್ಜುನನಿಗೆ ಬೋಧಿಸಿದ **ಭಗವದ್ಗೀತೆಯು** ಭಾರತದ ದರ್ಶನದ ಕಲಶದಂತಿದೆ. ಮಹಾಭಾರತದ ಭೀಷ್ಮ ಪರ್ವ ಮತ್ತು ಸಭಾ ಪರ್ವದಲ್ಲಿ ಕರ್ನಾಟಕದ ಉಲ್ಲೇಖವಿದೆ.

ವಿಷಯ ಮತ್ತು ಮೂಲಗಳು (Themes and Sources)

ವಿಷಯ	ಮೂಲ
ವಿಶ್ವದ ಉದಯದ ಮೂಲ	ಋಗ್ವೇದದ 10ನೇ ಮಂಡಲ
ಗಾಯಿತ್ರಿ ಮಂತ್ರ	ಋಗ್ವೇದದ 03ನೇ ಮಂಡಲ
ಸೋಮಪಾನ	ಋಗ್ವೇದದ 09ನೇ ಮಂಡಲ
ಚತುರ್ವರ್ಣ	ಋಗ್ವೇದದ 10ನೇ ಮಂಡಲ
ಗೋತ್ರ	ಅಥರ್ವಣ ವೇದ
ಆಶ್ರಮ ವ್ಯವಸ್ಥೆಯ ಸ್ಪಷ್ಟ ಉಲ್ಲೇಖ	ಐತ್ತರೇಯ ಬ್ರಾಹ್ಮಣ
ಮೂರು ಆಶ್ರಮಗಳ ಉಲ್ಲೇಖ	ಛಂದೋಗ್ಯ ಉಪನಿಷತ್
ಆಶ್ರಮ ವ್ಯವಸ್ಥೆಯ ಸ್ಪಷ್ಟ ಉಲ್ಲೇಖ	ಜಬಾಲ ಉಪನಿಷತ್
ಅಲೆಮಾರಿ (Trans Migration)	ಬೃಹದಾರಣ್ಯಕ ಉಪನಿಷತ್
ಪೂರ್ವಭಾರತದಲ್ಲಿ ಆರ್ಯರೀಕರಣ	ಶತಪತ ಬ್ರಾಹ್ಮಣ
ಕಾಸ್ಮಿಕ್ ಓಸಿಯನ್	ಶತಪತ ಬ್ರಾಹ್ಮಣ
ಸಾವಿನ ಮೊದಲ ಉಲ್ಲೇಖ	ಶತಪತ ಬ್ರಾಹ್ಮಣ
ಸಮುದ್ರಗಳ ಮೊದಲ ಉಲ್ಲೇಖ	ಶತಪತ ಬ್ರಾಹ್ಮಣ
ಬಂಧುತ್ವದ ಉಗಮದ ಉಲ್ಲೇಖ	ಐತ್ತರೇಯ ಬ್ರಾಹ್ಮಣ
ನಚಿಕೇತದ ಉಲ್ಲೇಖ	ಕಥಾ ಉಪನಿಷತ್
ಸತ್ಯಮೇವ ಜಯತೇ	ಮಂಡೋಕ ಉಪನಿಷತ್
ನಗರದ ಮೊದಲ ಉಲ್ಲೇಖ	ತೈತ್ತರೇಯ ಬ್ರಾಹ್ಮಣ
ಸರ್ಕಾರದ ವರ್ಗೀಕರಣ	ತೈತ್ತರೇಯ ಬ್ರಾಹ್ಮಣ

5. ಸಂಘಂ ಯುಗ (Sangam Age)

- ಸಂಘಂ ಯುಗವು ಮೌರ್ಯರ ನಂತರ ಮತ್ತು ಗುಪ್ತರ ಪೂರ್ವದ ಕಾಲವಾಗಿದೆ. 'ಸಂಘಂ' ಎಂಬುದು **'ಸಾಹಿತಿಗಳ ಮತ್ತು ದಾರ್ಶನಿಕರ ಒಂದು ಸಂಸ್ಥೆಯಾಗಿದೆ'** ಮಧುರೈ ಅದರ ಕೇಂದ್ರವಾಗಿತ್ತು.
- ತಮಿಳು ಭಾಷೆಯ ಸಾಹಿತ್ಯದ ಪ್ರಾರಂಭ ಕಾಲವೇ ಸಂಘಂ ಯುಗವಾಗಿದೆ. ಸಾಹಿತಿಗಳ 3 ಸಂಘಗಳಾದ ಮೊದಲ ಸಂಘ **ಹಳೆ ಮಧುರೈ** ಅಥವಾ **ತಿನ್ನದುರೈ** 2ನೇ ಸಂಘ ಕಕಟಾಪುರ (ಇಲ್ಲಿ ಅಪಾರ ಸಾಹಿತ್ಯ ರಚನೆಯಾಯಿತು.) 3ನೇ ಸಂಘ ಈಗಿನ ಮುಧುರೈನಲ್ಲಿ ಸ್ಥಾಪಿತಗೊಂಡಿತು.
- ಸಂಘಂ ಸಾಹಿತ್ಯವು 03 ರಾಜ ಮನೆತನಗಳ ಬಗ್ಗೆ ಮಾಹಿತಿ ನೀಡುತ್ತದೆ. ಅವೆಂದರೆ **ಚೇರರು, ಚೋಳರು** ಮತ್ತು **ಪಾಂಡ್ಯರು** ಅಶೋಕನ 2ನೇ ಮತ್ತು 3ನೇ ಬಂಡೆಗಲ್ಲು ಶಾಸನವು ಈ 3 ಸಾಮ್ರಾಜ್ಯಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಸಾಮ್ರಾಜ್ಯಗಳನ್ನು **'ತಮಿಲಕ್ಕಂ'** ಎಂದು ಕರೆಯಲಾಗುತ್ತದೆ.
- ಸಂಘಂ ಕಾಲವು ಕ್ರಿ.ಪೂ. 3ನೇ ಶತಮಾನದಿಂದ ಕ್ರಿ.ಶ.3ನೇ ಶತಮಾನಗಳ ನಡುವಿನದು ಎಂದು ತೀರ್ಮಾನಿಸಬಹುದು. ತಮಿಳು ಸಾಹಿತ್ಯದ ಮೊದಲ ಲಿಪಿ **ಬ್ರಾಹ್ಮಿ ಲಿಪಿ** ಮುಂದೆ ಅವರು **ಗ್ರಂಥ ಲಿಪಿ** ಬಳಸಿದರು.
- ಕ್ರಿ.ಶ. 1 ಮತ್ತು 2ನೇ ಶತಮಾನದಲ್ಲಿ ಟಾಲಮಿ, ಪ್ಲಿನಿ, ಸ್ಟ್ರಾಬೋ ಮತ್ತು ಪೆರಪ್ಲಸ್‌ನ ಅನಾಮಧೇಯ ಕೃತಿಗಳು ಮುಂತಾದ ಗ್ರೀಕ್ ಹಾಗೂ ರೋಮನ್ ಬರವಣಿಗೆಗಳಲ್ಲಿ ಸಂಘಂ ಸಾಹಿತ್ಯದ ಅಂಶಗಳ ಕಾಲ ನಿರ್ಧಾರದಲ್ಲಿ ನೆರವಾಗಿವೆ.

ಸಂಘಂ–ಸಾಹಿತ್ಯ (2 ಭಾಗಗಳು)

ಸಂಘಂ ಕಾಲದಲ್ಲಿ ವಿಫುಲ ಸಾಹಿತ್ಯಕ ಕೃತಿಗಳು ರಚನೆಯಾದವು.

1) **ತೋಳ್ಕಾಪಿಯಂ** – ತೊಳ್ಕಾಪಿಯರ್ ರಚಿಸಿರುವ ತಮಿಳು ವ್ಯಾಕರಣ ಗ್ರಂಥ.
2) **ಅಗತ್ತಿಯಂ** – ಸಂತ ಅಗತ್ತಿಯರ್ ರಚಿಸಿದ್ದಾನೆ. ಸಂತ ಅಗಸ್ತ್ಯನ 12 ಅನುಯಾಯಿಗಳಿಂದ ರಚಿತವಾಗಿವೆ. (ತಮಿಳು ಸಾಹಿತ್ಯದ ಪಿತಾಮಹಾ **ಅಗಸ್ತ್ಯಮುನಿ**).
3) **ತಿರುಕ್ಕುರಳ್** – ತಿರುವಳ್ಳವರ್ ರಚಿಸಿರುವ ಇದು ತಮಿಳಿನ ಬೈಬಲ್ ಆಗಿದೆ. ಇದನ್ನು ದಕ್ಷಿಣದ ವೇದ ಅಥವಾ 5ನೇ ವೇದ ಎನ್ನುವರು.
4) **ಶಿಲಪ್ಪದಿಗಾರಂ** – ಇಳಂಗೋವಡಿಗಲ್ ರಚಿಸಿದ್ದಾನೆ. ಸಾಹಿತ್ಯಕವಾಗಿ ಇದನ್ನು ಅನರ್ಘ್ಯರತ್ನ ಎನ್ನುವರು,
5) **ಮಣಿಮೇಖಲೈ** – ಸತ್ತಾನರ್ ರಚಿಸಿದ್ದಾನೆ. ತಮಿಳಿನ ಮಹಾಕಾವ್ಯವಾಗಿದೆ.
6) **ಜೀವಕ ಚಿಂತಾಮಣಿ** – ತಿರುತಕ್ಕದೇವರ್.
7) **ಪಟ್ಟಪಾಟ್ಟು** – 10 ಕವಿತೆಗಳು.
8) **ಎಟ್ಟು ತೊಗೈ** – 08 ಕವಿತೆಗಳು.

- ಸಂಘಂ ಕಾಲವನ್ನು ಸುವರ್ಣಯುಗ / ಅಗಸ್ತ್ಯ ಯುಗ ಎನ್ನುವರು.

ಸಂಘಂ ಕಾಲದ ಪದಗಳು

ಪದಗಳು	ಅರ್ಥ
ಮನರ	ಗ್ರಾಮ ಆಡಳಿತಾಂಗ
ಓರಾರ್	ಗೂಢಾಚಾರ್ಯರು
ಮರುದಂ	ಸಾಗುವಳಿ ಭೂಮಿ
ಪಾಲೈ	ಒಣಭೂಮಿ
ಮಲೈ	ಅರಣ್ಯ
ತೈವ್ರ	ಒತ್ತಾಯ ತೆರಿಗೆ
ಕುರಿಂಜಿ	ಬೆಟ್ಟಗಳು
ನೈದಾಲ್	ತೀರಪ್ರದೇಶ
ಮುಲ್ಲರ್	ಹುಲ್ಲುಗಾವಲು
ಆಗಂ	ಪ್ರೀತಿ
ಪಿಲ್ಯೆ	ಶಿಷ್ಯ
ಕರೈ	ರಾಜನ ಕೃಷಿ ಆದಾಯದ ಭಾಗ
ಇರೈ	ಲೂಟಿ ಮಾಡಿದ ಸಂಪತ್ತು
ಕಲಂ	ಭತ್ತ ಅಳೆಯುವ ಸಾಧನ
ಇನಾಡಿ	ಸೈನ್ಯದ ಮುಖ್ಯಸ್ಥ
ಇರಾಯಿಕರಾಯಿ	ಭೂ ತೆರಿಗೆ
ವೆಡರ್ಸ್	ಬೇಟೆಗಾರರು
[illegible]	[illegible]

ಸಂಘಂ ಕಾಲದ ರಾಜ್ಯಗಳು

- ಮೆಗಾಸ್ತನೀಸ್‌ನ ಬರವಣಿಗೆಗಳ ಮೂಲಕ ದಕ್ಷಿಣ ಭಾರತದ ರಾಜ್ಯಗಳ ಬಗ್ಗೆ ಮೊದಲ ಲಿಖಿತ ದಾಖಲೆ ದೊರೆಯುವುದು.
- ಖಾರವೇಲನು ತಮಿಳು ರಾಜ್ಯಗಳ ಒಕ್ಕೂಟವಾದ **"ತಮಿಳುದೇಶ ಸಂಘಟಂ"** ನಾಶಗೊಳಿಸಿದನು.
- ರೋಮನ್ನರು ಅಗಸ್ಟಸ್‌ನ ದೇವಾಲಯವನ್ನು ಮುಜರಿಸ್‌ನಲ್ಲಿ ನಿರ್ಮಿಸಿದರು.

ಪಾಂಡ್ಯರು (Pandyas)

- ಪಾಂಡ್ಯ ರಾಜರು ದಕ್ಷಿಣ ತಮಿಳುನಾಡಿನಲ್ಲಿ ನೆಲೆಯೂರಿದ್ದು, ವೆಗೈ ನದಿ ದಂಡೆ ಮೇಲಿನ **ಮಧುರೈ** ಇವರ ರಾಜಧಾನಿ. **'ಮೀನು'** ಇವರ ರಾಜ ಲಾಂಛನವಾಗಿತ್ತು.
- ಪಾಂಡ್ಯ ರಾಜರು ಸಂಘಂ ಕಾಲದ 3 ಸಂಘಗಳನ್ನು ಘೋಷಿಸಿದ್ದರೆಂಬ ಮಾಹಿತಿ ತಿಳಿದು ಬಂದಿದೆ.
- ಅಶೋಕನ ಶಾಸನಗಳು ಮತ್ತು ಮೆಗಾಸ್ಥನೀಸನ ಇಂಡಿಕಾ, ಕೌಟಿಲ್ಯನ ಅರ್ಥಶಾಸ್ತ್ರ ಪಾಂಡ್ಯ ನಾಡಿನ ಬಗ್ಗೆ ಮಾಹಿತಿ ನೀಡುತ್ತವೆ.
- ಇಂಡಿಕಾ ಮತ್ತು ಅರ್ಥಶಾಸ್ತ್ರದ ಪ್ರಕಾರ ಪಾಂಡ್ಯ ರಾಜ್ಯವು **'ಮುತ್ತುಗಳಿಗೆ'** ಪ್ರಸಿದ್ಧಿ ಯಾಗಿತ್ತು ಎಂಬ ಉಲ್ಲೇಖವಿದೆ.
- ಪಾಂಡ್ಯರ ಪ್ರಸಿದ್ಧ ದೊರೆ **ನೆಡುಂಜಳಿಯನ್**. ಇವನು ಚೇರರು ಮತ್ತು ಚೋಳರನ್ನು **'ತಲಾಯ್ ಲಂಗನಂ ಯುದ್ಧದಲ್ಲಿ'** ಸೋಲಿಸಿದನು.
- **ನೆಡುಂಜಳಿಯನ್ ಆಸ್ಥಾನದ ಕವಿಗಳು** – ಮಾಂಗುಡಿ ಮುರುದನ, ನಕ್ಕೀರರು. ಮಾಂಗುಡಿ ಮುರುದನ ಕೃತಿ 'ಮಧುರೈ ಕೈಂಜಿ'ಯಾಗಿದೆ.
- ರೋಮ್ ಸಾಮ್ರಾಜ್ಯದೊಂದಿಗೆ ವ್ಯಾಪಾರ ಮತ್ತು ರೋಮ್ ಸಾಮ್ರಾಟರಾದ ಆಗಸ್ಟಸ್ ಮತ್ತು ಟ್ರೋಜನ್ ರೊಂದಿಗೆ ರಾಯಭಾರ ಸಂಬಂಧವಿತ್ತು.
- ರಾಮಾಯಣ ಮತ್ತು ಮಹಾಭಾರತದಲ್ಲಿ ಪಾಂಡ್ಯ ದೊರೆಗಳ ಉಲ್ಲೇಖವಿದೆ.

ಚೋಳರು (Cholas)

- ಚೋಳರು ಉತ್ತರ ತಮಿಳುನಾಡು ಮತ್ತು ದಕ್ಷಿಣ ಆಂಧ್ರದಲ್ಲಿ ನೆಲೆಸಿದ್ದರು. ತೊಂಡೈಮಂಡಲ ಹಾಗೂ ಚೋಳ ಮಂಡಲಂ ಎಂದು ಪ್ರಸಿದ್ಧಿಯಾಗಿದ್ದರು.
- **ಉರೈಯೂರು** ಇವರ ಮೊದಲ ರಾಜಧಾನಿ. ನಂತರ **ಪುಹುರ್ /ಕಾವೇರಿ ಪಟ್ಟಣಂ**ಗೆ ವರ್ಗಾಯಿಸಿದರು. ಇದು ಅವರ ಮುಖ್ಯ ಬಂದರಾಗಿತ್ತು.
- ಚೋಳ ರಾಜ್ಯ ಸ್ಥಾಪಕ **ಇಳೈಯಾನ್ ಚೋಳ**. ರಾಜಲಾಂಛನ ಹುಲಿ. (ಕರಿಕಾಲ ಚೋಳ ಶಿಲಪ್ಪದಿಗಾರಂ ಗ್ರಂಥದ ನಾಯಕ)
- ಉರೈಯೂರು ಮತ್ತು ರತ್ನಗಳಿಗೆ ಪ್ರಸಿದ್ದಿಯಾಗಿತ್ತು.

ಚೇರರು (Cheras)

- ಇವರು ಕೇರಳದಲ್ಲಿ ನೆಲೆಯೂರಿದ್ದರು. ಇವರ **ರಾಜಧಾನಿ ವಜ್ಜ/ಕರೂರ** ಅಥವಾ **ತಿರುವಂಜಿ** ಪಟ್ಟಣವಾಗಿತ್ತು.
- ಚೇರರ ಮೊದಲ ದೊರೆ – **ಉದಿಯೆಂಜಿರಲ್**.
- ಚೇರರ ಪ್ರಸಿದ್ಧ ದೊರೆ – **ಸಂಗುತ್ತವನ್**.

ಇವನ ಆಸ್ಥಾನ ಕವಿ **'ಪರನಾರ್'** ರಾಜಲಾಂಛನ **ಧನಸ್ಸು** ಎಂಬುದಾಗಿತ್ತು.

- ಚೇರರ ಮುಖ್ಯ ಬಂದರು ಮಜ್ರಿಸ್ ಇದರ ಮೂಲಕ ರೋಮ್ ನಡುವಿನ ವ್ಯಾಪಾರ ಬಿರುಸಾಗಿ ನಡೆಯುತ್ತಿತ್ತು ಎಂಬುದಕ್ಕೆ ಕರೂರ ಸುತ್ತಮುತ್ತ ಸಿಕ್ಕಿರುವ ಸಾವಿರಾರು ರೋಮನ್ ನಾಣ್ಯಗಳು ಮತ್ತು ಬರಹಗಳು (ಟಾಲಮಿ) ಸಾಕ್ಷಿಯಾಗಿವೆ.

ರಾಜಕೀಯ ವ್ಯವಸ್ಥೆ

- ರಾಜನೇ ಆಡಳಿತದ ಕೇಂದ್ರಬಿಂದು ಈತನನ್ನು **ಕೊ.ಮನ್ನವರ್, ವೆಂಡಾಸ್, ಕೇಂದ್ರವನ್ ಹಾಗೂ ಇರೈವನ್** ಎಂದು ಕರೆಯುತ್ತಿದ್ದರು.
- ರಾಜಪ್ರಭುತ್ವ ಸರ್ಕಾರವು ಸಾಮಾನ್ಯ ಮಾದರಿಯಾಗಿತ್ತು. **ಅವ್ವೈ** ಎಂಬುದು ಗ್ರಾಮ ಸಭೆಯಾಗಿತ್ತು ಮತ್ತು **ಸಭಾ ಅಥವಾ ರಾಜಮುದ್ರಂ** ಉನ್ನತ ನ್ಯಾಯಾಲಯವಾಗಿತ್ತು.
- ರಾಜ್ಯವನ್ನು ಮಂಡಲಂ, ಪ್ರಾಂತ್ಯ (ನಾಡು) ಮತ್ತು ಊರುಗಳಾಗಿ ವಿಂಗಡಿಸಿದ್ದರು. ಚಿಕ್ಕ ಹಳ್ಳಿ(ಸಿರುರ್) ಹಾಗೂ ದೊಡ್ಡ ಹಳ್ಳಿ(ಪೆರುರ್) ಎಂಬುವವಿದ್ದವು.
- ಅಮೆಚ್ಚರ್ (ಮಂತ್ರಿಗಳು) ಪುರೋಹಿತರ್, ಸೇನಾಪತಿಯರ್ ಧೂತರ್ ಹಾಗೂ ಓರ್ರರ್ ಎಂಬ ಅಧಿಕಾರಿಗಳಿದ್ದರು.
- ಕರೈ ಎಂದರೆ ಕಂದಾಯ. **'ಮೆ'** ಮತ್ತು **'ವೇಲು'** ಭೂಮಾಪನಗಳು ಬಳಕೆಯಲ್ಲಿದ್ದವು.

ಸಾಮಾಜಿಕ ಜೀವನ

- ಸಂಘಂ ಕಾಲವು ವೈದಿಕ ಮತ್ತು ಬ್ರಾಹ್ಮಣ ಮತದ ಅಭಿವೃದ್ಧಿಯ ಕಾಲವಾಗಿದೆ. ಸಮಾಜವು ಸಂಪೂರ್ಣವಾಗಿ ಬ್ರಾಹ್ಮಣಶಾಹಿ ಸಮಾಜವಾಗಿರಲಿಲ್ಲ.
- 4ನೇ ವರ್ಗಕ್ಕೆ ಸೇರಿದ ಕೃಷಿಕರನ್ನು **'ವಲ್ಲಾಳರು'** ಎಂದು ಕರೆಯುತ್ತಿದ್ದರು.
- ಕಡೈಸಿಯಾರ್ – ಕೃಷಿ ಕಾರ್ಮಿಕರು, ಪುಲಿಯಾನ್ಸ್ – ಹಗ್ಗ ತಯಾರಿಸುವವರು.
- ಸೈನ್ಯಾಧಿಕಾರಿಗೆ ಎನಾದ, ಮಂತ್ರಿಗಳಿಗೆ ಕವಡಿ ಹಾಗೂ ರಾಜರಿಗೆ ಅರಸ್ ಎಂಬ ಬಿರುದುಗಳಿದ್ದವು.

ಧಾರ್ಮಿಕ ಜೀವನ

- ಸಂಘಂ ಕಾಲದ ಜನರು ಪ್ರಕೃತಿ ಆರಾಧಕರು ಮತ್ತು ಮಾತೃ ದೇವತಾ ಆರಾಧಕರಾಗಿದ್ದರು. **ಮುರುಗನ್ ಅಥವಾ ಸುಬ್ರಮಣ್ಯ** [illegible] ಕೊಟ್ಟಂ ಮತ್ತು ಪುದ್ಯೆ ಎಂದು ಕರೆಯುತ್ತಿದ್ದರು.
- **ಮಣಿ ಮೇಖಲೈ** ಗ್ರಂಥವು ಬೌದ್ಧ ದರ್ಶನದ ವಿವರಣೆ ಒಳಗೊಂಡಿದೆ.
- **ಬೌದ್ಧ ಕೇಂದ್ರಗಳು** – ಕಂಚಿ, ಮದುರೈ ಮತ್ತು ನಾಗಪಟ್ಟಣಂಗಳು.
- **ಜೈನ ಕೇಂದ್ರ** – ಮಧುರೈ.
- **ತೋಲ್ಕಾಪಿಯಂ** ಕೃತಿಯು 8 ರೀತಿಯ ವಿವಾಹ ಪದ್ಧತಿಗಳನ್ನು ತಿಳಿಸುತ್ತದೆ. ವಿಧವಾ ವಿವಾಹವಿರಲಿಲ್ಲ.
- **ನಾಣ್ಯಗಳು:**– ನಿಷ್ಕ, ಸುವರ್ಣ ಫಲ – ಚಿನ್ನದ ನಾಣ್ಯಗಳು.
- **ಶತಮಾನ** ಎಂಬ ಬೆಳ್ಳಿಯ ನಾಣ್ಯ, **ತಾರೆನಿ** ಎಂಬ ತಾಮ್ರದ ನಾಣ್ಯಗಳಿದ್ದವು.
- ಅರಿಕ ಮೇಡು ಪ್ರದೇಶವು ರೋಮನ್ ವ್ಯಾಪಾರ ಕೇಂದ್ರವಾಗಿತ್ತು.
- ಭತ್ತವು ವಿನಿಮಯ ಘಟಕವಾಗಿತ್ತು.
- ವೈಗೈ ನದಿ ದಂಡೆ ಮೇಲಿನ ಮಧುರೈ ಮೆಡಿಟರೇನಿಯನ್ ಸಮುದ್ರದ ಪ್ರಮುಖ ವ್ಯಾಪಾರಿ ನಗರವಾಗಿತ್ತು.

ಆರ್ಥಿಕ ಜೀವನ

- **ಅವಣಂ** ಎಂಬುದು ಮಾರುಕಟ್ಟೆ ಸ್ಥಳವಾಗಿತ್ತು.
- ಆಗಸ್ಟ್‌ಸ‌ನ ಕಾಲದ **ರೋಮನ್ ನಾಣ್ಯಗಳು** ಅರಿಕಮೇಡುವಿನಲ್ಲಿ ದೊರೆತಿವೆ.
- ಕಾವೇರಿಪಟ್ಟಣ / ಪುಹುರ್ & ಸಲಯೂರು ಮುಖ್ಯ ಬಂದರುಗಳಾಗಿದ್ದವು.
- ಪಾಂಡ್ಯ ರಾಜರು ಇಬ್ಬರು ರಾಯಭಾರಿಗಳನ್ನು ಆಗಸ್ಟಸ್‌ನ ಆಸ್ಥಾನಕ್ಕೆ ಕಳುಹಿಸಿದ್ದರು.
- ಪೆರಿಪ್ಲೆಸ್‌ನ ಗ್ರಂಥದಲ್ಲಿ ಅರೇಬಿಯಾ, ಈಜಿಪ್ಟ್, ರೋಮ್‌ಗಳೊಡನೆ ತಮಿಳುನಾಡಿನ ವ್ಯಾಪಾರ ಸಂಪರ್ಕವಿತ್ತು. ಎಂಬುದು ತಿಳಿದು ಬರುತ್ತದೆ.
- ಸಂಘಂ ರಾಜರೊಂದಿಗೆ ವ್ಯಾಪಾರ ಸಂಬಂಧವು ಮುಜ್ರಿಸ್ ನಲ್ಲಿ ಆಗಸ್ಟಸ್‌ನ ದೇವಾಲಯ ನಿರ್ಮಾಣಕ್ಕೆ ಕಾರಣವಾಗಿತ್ತು.
- ಊರೈಯೂರು ಮುತ್ತು ರತ್ನಗಳು ಮತ್ತು ಮೆಸ್ಲಿನ್ ಬಟ್ಟೆಗೆ ಪ್ರಸಿದ್ಧವಾಗಿತ್ತು. ಮೆಣಸನ್ನು **'ಯವನಪ್ರಿಯ'** ಎನ್ನುತ್ತಿದ್ದರು.
- ಮಾಮಲ್ಲನರ್ ರಚಿಸಿದ ಪುರಾಣನೂರು ಕೃತಿಯಲ್ಲಿ ಚಕ್ರವರ್ತಿ ಪದದ ಬಳಕೆ ಇದೆ.
- ಮಣಿಮೇಖಲೈ ಕೃತಿಯಲ್ಲಿ **'ಸರಸ್ವತಿ'** ದೇವಾಲಯದ ಬಗ್ಗೆ ಉಲ್ಲೇಖವಿದೆ.
- ಪುಹರ್ ನಗರದಲ್ಲಿ ಪ್ರಸಿದ್ಧ ಹಬ್ಬವಾದ **ಇಂದ್ರವಿಜವನ್ನು** ಆಚರಿಸುತ್ತಿದ್ದರು.
- **ಪಟ್ಟಿಣಿ** ಎಂಬ ಧರ್ಮ ಪಂಥವನ್ನು (ಆರಾಧನಾ) ಸೆಂಗೊಟ್ಟವನ್‌ನು ಪ್ರಾರಂಭಿಸಿದನು. ಇವನನ್ನು ರೆಡ್‌ಚೇರ ಎನ್ನುವರು.

6. ಧಾರ್ಮಿಕ ಸುಧಾರಣಾ ಚಳುವಳಿಗಳು (Religious Reform Movements)

ಕ್ರಿ.ಪೂ 6ನೇ ಶತಮಾನವನ್ನು ಭಾರತದ ಮತ್ತು ಜಗತ್ತಿನ ಇತಿಹಾಸದಲ್ಲಿ **ಆಶ್ಚರ್ಯಕಾರಕ ಶತಕ** ಎಂದು ಕರೆಯಲಾಗಿದೆ. ಚೀನಾದಲ್ಲಿ ಕನ್‌ಫ್ಯೂಸಿಯಸ್, ಇರಾನ್‌ನಲ್ಲಿ ಜೊರಾಸ್ಟರ್ ಮತ್ತು ಭಾರತದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳು ಉದಯವಾದವು ಬ್ರಾಹ್ಮಣರ ಶ್ರೇಷ್ಟತೆಯ ವಿರುದ್ಧ ಜೈನ ಮತ್ತು ಬೌದ್ಧ ಧರ್ಮಗಳು ಉದಯವಾದವು.

6.1 ಜೈನ ಧರ್ಮ (Jainism)

- ವೈದಿಕ ಧರ್ಮದ ವಿರುದ್ಧ ಪ್ರತಿಭಟಿಸಿದ ಮೊದಲ ಧರ್ಮ ಜೈನಧರ್ಮ. ಇದು **24 ತೀರ್ಥಂಕರರ** ಮೂಲಕ ಬೆಳೆದು ಬಂದಿದೆ.
- ಜೈನಧರ್ಮ ಗ್ರಂಥಗಳ ಪ್ರಕಾರ ಮೊದಲ ತೀರ್ಥಂಕರ **ವೃಷಭದೇವ,** 23 ನೇ ತೀರ್ಥಂಕರ ಪಾರ್ಶ್ವನಾಥ ಹಾಗೂ **24ನೇ ತೀರ್ಥಂಕರ ಮಹಾವೀರರು** ಪ್ರಮುಖ ತೀರ್ಥಂಕರರು.
- ಕ್ರಿ.ಪೂ. 8ನೇ ಶತಮಾನದಲ್ಲಿ ಪಾರ್ಶ್ವನಾಥನು ಜೀವಿಸಿದ್ದನು. **ಜೈನಕಲ್ಪಸೂತ್ರದ** (ಭದ್ರಬಾಹು) ಪ್ರಕಾರ ಇವನು ಕಾಶಿ ರಾಜನಾದ ಆಶ್ವಸೇನನ ಮಗ.
- ಜಾಕೋಬಿ ಅವರ ಪ್ರಕಾರ ಜೈನಧರ್ಮದ ನಿಜವಾದ ಸ್ಥಾಪಕ **ಪಾರ್ಶ್ವನಾಥ**. ಇವನು ಅಹಿಂಸೆ, ಸತ್ಯ, ಆಸ್ತೇಯ (ಕದಿಯದಿರುವುದು) ಮತ್ತು ಅಪರಿಗ್ರಹ (ಸಂಪತ್ತಿನ ವ್ಯಾಮೋಹವಿಲ್ಲದೆ) ಎಂಬ 04 ತತ್ವಗಳನ್ನು ತಿಳಿಸಿದರೆ 5 ನೇಯದಾದ **ಬ್ರಹ್ಮಚರ್ಯವನ್ನು** ಮಹಾವೀರನು ಸೇರ್ಪಡೆ ಮಾಡಿದನು. ಪಾರ್ಶ್ವನಾಥನ ಕಾಲದಲ್ಲೇ ಮಗಧ ಮತ್ತು ಅಂಗ ರಾಜ್ಯಗಳು ಅಸ್ತಿತ್ವದಲ್ಲಿದ್ದವು.

ಹೊಸ ಚಳುವಳಿಗೆ ಕಾರಣಗಳು

1. ವೈದಿಕ ಜ್ಞಾನವು ತನ್ನ ಮೂಲ ಪರಾಕಷ್ಟತೆ ಕಳೆದುಕೊಂಡಿತು.
2. ಬ್ರಾಹ್ಮಣರ ಶ್ರೇಷ್ಟತೆ ಮತ್ತು ವೈದಿಕ ಸಂಸ್ಕೃತಿಯ ಕಟ್ಟುಪಾಡುಗಳು.
3. ಪೂರ್ವ ಭಾರತದಲ್ಲಿ ನವ ಕೃಷಿ ಅರ್ಥವ್ಯವಸ್ಥೆಯ ಪರಿಚಯವಾಯಿತು.

ವರ್ಧಮಾನ ಮಹಾವೀರ (599-527 ಬಿ.ಸಿ)

- ಮಹಾವೀರನು **ಕ್ರಿ.ಪೂ. 500**ರಲ್ಲಿ ಬಿಹಾರದ ಮುಜಾಫರಪುರ ಜಿಲ್ಲೆಯ **ಕುಂದ** ಗ್ರಾಮದಲ್ಲಿ ಜನಿಸಿದನು. **ಜ್ಞಾತ್ರಿಕ ಪಂಗಡದ**ವನಾದ ಸಿದ್ದಾರ್ಥ ಮತ್ತು ತ್ರಿಶಲ ದೇವಿ ಇವರ ತಂದೆ ತಾಯಿಗಳು. ತಾಯಿ ಲಿಚ್ಛವಿ ಮನೆತನದವಳು. (ಹೆಂಡತಿ – ಯಶೋಧೆ, ಮಗಳು– ಅನೊಝಾ, ಅಳಿಯ– ಜಮೇಲಿ)
- ಮಹಾವೀರನು ತನ್ನ 30ನೇ ವಯಸ್ಸಿನಲ್ಲಿ ಸಂಸಾರದಿಂದ ವಿರಕ್ತನಾದ ಇವನು ಸುಮಾರು 12 ವರ್ಷಗಳ ಕಾಲ ಅಲೆದಾಡಿ 42ನೇ ವಯಸ್ಸಿನಲ್ಲಿ **ಜುಂಬಕ ಗ್ರಾಮ** ಎಂಬಲ್ಲಿ ಇವನಿಗೆ ಜ್ಞಾನೋದಯ (ಕೈವಲ್ಯ) ವಾಯಿತು. **ಋಜುಪಾಲಿಕೆಯ** ದಂಡೆಯ ಮೇಲಿನ ಸಾಲ್ ವೃಕ್ಷದ ಕೆಳಗೆ ತಪಸ್ಸನ್ನು ಆಚರಿಸಿದನು.
- ಜ್ಞಾನಾರ್ಜನೆಗೆ ಮೊದಲು ಮಹಾವೀರನು ಅಜೀವಿಕ ಪಂಥದ **ಗೋಸಾಲ ಮಸ್ಕರೀಪುತ್ರ** ಎಂಬುವವನೊಡನೆ ಕೆಲಕಾಲ ಸಾಧನೆಯಲ್ಲಿ ತೊಡಗಿದ್ದನು. ನಂತರ ಇಬ್ಬರೂ ಪ್ರತ್ಯೇಕಗೊಂಡು ಪ್ರತ್ಯೇಕ ಪಂಥಗಳನ್ನು ಪ್ರಚಾರ ಮಾಡಿದರು.
- ಕೇವಲಿನ್ ಎಂದರೆ **ತತ್ವಜ್ಞಾನಿ/ಜಿನ** ಎಂಬುದಾಗಿದೆ. ಈ ಪದಗಳಿಂದಾಗಿ ಮಹಾವೀರನ ಅನುಯಾಯಿಗಳಿಗೆ ಜೈನರು / ಜಿನನ ಅನುಯಾಯಿಗಳೆಂದು ಹಾಗೂ ನಿರ್ಗ್ರಂಥರು (ಬಂಧನಗಳಿಲ್ಲದ ಪಂಥದವರೆಂದು) ಎಂದು ಪ್ರಸಿದ್ದರಾದರು.
- ಮಹಾವೀರನ ತತ್ವಗಳನ್ನು ಮಗಧದ ಬಿಂಬಸಾರ, ಆವಂತಿ-ಪ್ರದ್ಯೋತ ಚಂಪಾ-ದೇದಿವರ್ಧನ ಮುಂತಾದವರು ಪ್ರೋತ್ಸಾಹಿಸಿದ್ದರು.
- ಮಹಾವೀರನು ತನ್ನ ಸಿದ್ದಾಂತಗಳನ್ನು ಕೋಸಲ, ಮಗಧ, ಮಿಥಿಲ, ಚಂಪ, ಆವಂತಿ ಮುಂತಾದೆಡೆ ಸಂಚರಿಸಿ ಬೋಧಿಸಿದನು. ಕೊನೆಗೆ ತನ್ನ 72ನೇ ವಯಸ್ಸಿನಲ್ಲಿ **ಪಾವಾಪುರಿ** ಎಂಬಲ್ಲಿ ನಿಧನನಾದನು.

ಜೈನ ಧರ್ಮದ ತತ್ವಗಳು

1. ಅಹಿಂಸೆ – ಪ್ರಾಣಿ ಹಿಂಸೆ ಮಾಡದಿರುವುದು
2. ಸತ್ಯ – ಸುಳ್ಳನ್ನು ಹೇಳದಿರುವುದು
3. ಆಸ್ತೇಯ – ಕಳ್ಳತನ ಮಾಡದಿರುವುದು
4. ಅಪರಿಗ್ರಹ – ಆಸ್ತಿ ಸಂಗ್ರಹಿಸದಿರುವುದು
5. ಬ್ರಹ್ಮಚರ್ಯ – ವಿವಾಹವಾಗದಿರುವುದು.

- ಮಹಾವೀರನು ಕೈವಲ್ಯ ಪಡೆದ ನಂತರ ಅವನ ಮೊದಲ ಶಿಷ್ಯ ಜಮೇಲಿ.
- ಜೈನ ಧರ್ಮವು ಅಗೋಚರವಾದ ಶಕ್ತಿಯಾಗಿ ದೇವರಿರುವನೆಂಬುದನ್ನು ಒಪ್ಪಲಿಲ್ಲ. ಅದು ಅಹಿಂಸೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿತು.
- ಜೈನ ಧರ್ಮದವರು ಹೊಸಕರ್ಮ ಅಂಟಿಕೊಳ್ಳದಂತೆ ತಡೆಯಲು ಸನ್ಯಾಸ ಅವಶ್ಯಕವೆಂದು, ಹಳೆಯ ಕರ್ಮ ಹೋಗಲಾಡಿಸಲು ತಪಸ್ಸು ಅಗತ್ಯವೆಂದು ತಿಳಿಸಿದ್ದಾರೆ.

ಜೈನರ ತ್ರಿರತ್ನಗಳು

- ತ್ರಿರತ್ನಗಳು ಕರ್ಮವೆಂಬ ಚಕ್ರದಿಂದ ಹೊರಬರಲು ಪ್ರಮುಖ ಮಾರ್ಗಗಳಾಗಿವೆ. ಅವುಗಳೆಂದರೆ

1. ಸಮ್ಯಕ್ ನಡತೆ
2. ಸಮ್ಯಕ್ ನಂಬಿಕೆ
3. ಸಮ್ಯಕ್ ಜ್ಞಾನ

- ಜೈನ ಧರ್ಮವು ಸ್ತ್ರೀಯರಿಗೆ ನಿರ್ವಾಣ ಹೊಂದಲು ಅವಕಾಶ

ಸ್ತ್ರೀಯರಿದ್ದರು.

- ತೀರ್ಥಂಕರರು ಎಂದರೆ ಜೀವನದಿಯನ್ನು ದಾಟಿಸುವವನು ಎಂದರ್ಥ. ಇದರ 4 ವಿಧದ ಸದಸ್ಯರೆಂದರೆ–

1. ಸನ್ಯಾಸಿಗಳು
2. ಸನ್ಯಾಸಿನಿಯರು
3. ಶ್ರವಕರು
4. ಶ್ರವಿಕರು

- ಮಹಾವೀರನ ಆತ್ಮೀಯ 11 ಜನ ಅನುಯಾಯಿಗಳನ್ನು **'ಗಣಾಧರರು/ಗಾಂಧಾರರು'** ಎನ್ನುವರು.
- **ಶ್ರವಕರು** ಮತ್ತು **ಶ್ರವಿಕರೆಂದರೆ** ಸಂಸಾರ ಹೊಂದಿದ ಸ್ತ್ರೀಪುರುಷರು. ಈ ವರ್ಗದ ಸದಸ್ಯರ ಬೆಂಬಲ ಹಾಗೂ ಸಹಕಾರವಿರುವ ಜೈನಧರ್ಮ ವಿಸ್ತೃತವಾಗಿ ಪ್ರಚಾರವಾಗುವುದಕ್ಕೆ ಹಾಗೂ ಇಂದು ಭಾರತದಲ್ಲಿ ಅಳಿಯದೇ ಉಳಿದಿರುವುದಕ್ಕೆ ಕಾರಣರಾಗಿದ್ದಾರೆ.
- ಜೈನ ಧರ್ಮದ ಒಡಕು **ಜಮಾಲಿಯ** ಕಾಲದಲ್ಲಿ ಉಂಟಾಯಿತು. ಈತನು ರುದ್ರಧಾಮ ಸಂಘದ ಮುಖ್ಯಸ್ಥನಾಗಿದ್ದನು.

ಜೈನ ಧರ್ಮದ ಪ್ರಚಾರ

- ಮಹಾವೀರನು ತನ್ನ 11 ಜನ ಅನುಯಾಯಿಗಳಿಗೆ **ಗಾಂಧಾರರು** ಎಂದು ಕರೆದನು. ಮಹಾವೀರನ ನಂತರ ಜೈನ ಧರ್ಮದ ಮುಖ್ಯಸ್ಥರಾದವರೆಂದರೆ ಗಾಂಧಾರದ ಸುಧರ್ಮ, ನಂತರ ಜಂಬೂ, ನಂದರ ಕಾಲದಲ್ಲಿ ಭದ್ರಬಾಹು ಮತ್ತು ಶಂಭುತವಿಜಯ ಮೌರ್ಯರ ಕಾಲದಲ್ಲಿ ಭದ್ರಬಾಹು ಅತ್ಯಂತ ಪ್ರಮುಖರು.
- ಮಹಾವೀರನು ತನ್ನ ಜೀವಿತದಲ್ಲಿ ಮಗಧ, ವಿದೇಹ, ಅಂಗ ಹಾಗೂ ಮಿಥಿಲ ರಾಜ್ಯಗಳಲ್ಲಿ ಜೈನ ಧರ್ಮ ಪ್ರಸಾರ ಮಾಡಿದನು.
- ಶತೃಂಜಯ ಮತ್ತು ಅಬು ಪರ್ವಗಳು ಉತ್ತರದ ಜೈನ ಕ್ಷೇತ್ರಗಳು ಹಾಗೂ ಕರ್ನಾಟಕದ ಜೈನ ಕ್ಷೇತ್ರಗಳಾದ ಶ್ರವಣಬೆಳಗೊಳ ಮತ್ತು ಗೋಕರ್ಣಗಳು ಪ್ರಮುಖವಾಗಿವೆ.
- ಉತ್ತರ ಭಾರತದ ಜೈನ ಧರ್ಮ ಪ್ರಸಾರಕ್ಕೆ ಕಾರಣ **ಸ್ಥೂಲ ಭದ್ರ**, ದಕ್ಷಿಣ ಭಾರತದ ಜೈನ ಧರ್ಮ ಪ್ರಸಾರಕ್ಕೆ ಕಾರಣ **ಭದ್ರಬಾಹು**. ಭದ್ರಬಾಹುವಿನ ಶಿಷ್ಯನೇ ಚಂದ್ರಗುಪ್ತ ಮೌರ್ಯ.

ಜೈನ ಧರ್ಮದ 02 ಪಂಗಡಗಳು

1. **ಶ್ವೇತಾಂಬರರು** - ಬಿಳಿಯುಡಿಗೆ ತೊಟ್ಟವರು. ಉತ್ತರ ಭಾರತದಲ್ಲಿ ಸ್ಥೂಲಭದ್ರನ ನೇತೃತ್ವದಲ್ಲಿ ಪ್ರಸಿದ್ಧರಾದರು.
2. **ದಿಗಂಬರರು** - ವಸ್ತ್ರ ಧರಿಸದವರು. ದಕ್ಷಿಣ ಭಾರತದಲ್ಲಿ ಭದ್ರಬಾಹು ನೇತೃತ್ವದಲ್ಲಿ ಪ್ರಸಿದ್ಧರಾದರು.

ಜೈನ ಮಹಾಸಭೆಗಳು ಮತ್ತು ಜೈನ ಸಾಹಿತ್ಯ

ಮೊದಲ ಜೈನ ಮಹಾಸಭೆ – ಕ್ರಿ.ಪೂ.300

- 1ನೇ ಜೈನ ಸಭೆಯು ಜೈನಯತಿ **ಸ್ಥೂಲಭದ್ರನ** ಅಧ್ಯಕ್ಷತೆಯಲ್ಲಿ ಪಾಟಲೀಪುತ್ರದಲ್ಲಿ ಜರುಗಿತು.
- ಇಲ್ಲಿ ಮಹಾವೀರನ ಬೋಧನೆಗಳನ್ನು **ದ್ವಾದಶಾಂಗಗಳಲ್ಲಿ** ಕ್ರೋಢೀಕರಿಸಲಾಯಿತು.

ಎರಡನೇ ಜೈನ ಮಹಾಸಭೆ – ಕ್ರಿ.ಶ.512

- 2 ನೇ ಜೈನ ಸಭೆಯು **ದೇವರ್ದಿ ಕ್ಷಮಾ ಶ್ರವಣನ** ಅಧ್ಯಕ್ಷತೆಯಲ್ಲಿ ವಲ್ಲಭಿಯಲ್ಲಿ ನಡೆಯಿತು.
- ಇಲ್ಲಿ ಜೈನ ಧಾರ್ಮಿಕ ಕೃತಿಗಳನ್ನು **ಅರ್ಧಮಾಗಧಿಯಲ್ಲಿ** ರಚಿಸಲಾಯಿತು.

ಜೈನ ಸಾಹಿತ್ಯ

- ಜೈನ ಧರ್ಮದ ಸಾಹಿತ್ಯಗಳನ್ನು **ಪೂರ್ವಗಳೆಂದು** ಕರೆಯಲಾಗಿದೆ ಒಟ್ಟು 14 ಪೂರ್ವಗಳು ಹಾಗೂ 12 ಅಂಗಗಳಿವೆ. ಇವು ಮೊದಲ ಮಹಾಸಭೆಯಲ್ಲಿ ರಚನೆಯಾದವು.
- **ಪ್ರಮುಖ ಅಂಗಗಳು:** ಅಚರಾಂಗ ಸೂತ್ರ, ಮೂಲಸೂತ್ರ, ಚಿತಸೂತ್ರಗಳು ಮುಖ್ಯವಾದವು ಮಹಾವೀರನು ಮಾತ್ರ ಅರ್ಧಮಾಗಧಿಯಲ್ಲಿ ಬೋಧಿಸುತ್ತಾನೆ. ನಂತರ ಸಂಸ್ಕೃತ ಬಿಟ್ಟು **ಪಾಳಿ ಭಾಷೆ** ಅಳವಡಿಸಲಾಯಿತು.
- **'ಅಪಭ್ರಮಸ'** ಜೈನ ಧರ್ಮದ ಮೊದಲ ವ್ಯಾಕರಣ ಕೃತಿಯಾಗಿದೆ.

ಕೃತಿಗಳ 06 ಮುಖ್ಯ ವರ್ಗಗಳು

1. **12 ಅಂಗಗಳು:–** ಇವು ಜೈನರ ನೀತಿ ನಿಯಮಗಳು, ಸನ್ಯಾಸಿಗಳ ನಿಯಮಗಳು, ಜೈನ ತತ್ವಗಳನ್ನು ವಿವರಿಸುವ ಐತಿಹ್ಯ ಮತ್ತು ಸಿದ್ಧಾಂತಗಳಾಗಿವೆ.
2. **12 ಉಪಾಂಗಗಳು** – ಇವು ಸಾಹಿತ್ಯಾತ್ಮಕ ಉಪಾಂಗಗಳಲ್ಲ.
3. **10 ಪ್ರಕಿರಣಗಳು** – ಇವು ಪದ್ಯ ಪಂಕ್ತಿಯ ರೂಪದಲ್ಲಿದ್ದು ಜೈನ ಸಿದ್ಧಾಂತದ ವಿವರಗಳನ್ನು ಒಳಗೊಂಡಿವೆ.
4. **6 ವೇದ ಸೂತ್ರಗಳು :** ಜೈನಯತಿಯು ಸಂಘದಲ್ಲಿ ಅನುಸರಿಸಬಹುದಾದ ನಿಯಮಗಳು ಮತ್ತು ಅವುಗಳನ್ನು ತಪ್ಪಿದರೆ ಶಿಕ್ಷೆ ವಿಧಿಸಬಹುದಿತ್ತು ಎಂದು ತಿಳಿಸಿವೆ.
5. **ವೇದ ಸೂತ್ರದ ಕಲ್ಪಸೂತ್ರ** – ಇದು ಭದ್ರಬಾಹುವಿನಿಂದ ರಚಿತವಾಗಿದೆ. ಕಲ್ಪಸೂತ್ರದಲ್ಲಿ ಜೈನ ಸಂಘಗಳ ಇತಿಹಾಸ ಮತ್ತು 24 ತೀರ್ಥಂಕರರ ಜೀವನ ಚರಿತ್ರೆಗಳಿವೆ.
6. **ತತ್ವಾರ್ಥದಿಗಮ ಸೂತ್ರ –** ಇದರಲ್ಲಿ ತತ್ವಜ್ಞಾನದ ಕ್ರಮಬದ್ಧ ಪ್ರತಿಪಾದನೆಯಿದೆ. ಇದರ ಕರ್ತೃ ಉಮಾಸ್ವಾತಿ.

- ಶ್ವೇತಾಂಬರರು ಮತ್ತು ದಿಗಂಬರರು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿದರು.
- ಜೈನರು ಬಸದಿಗಳಲ್ಲಿ ಜೈನ ತೀರ್ಥಂಕರರ ಮೂರ್ತಿಗಳನ್ನು ಸ್ಥಾಪಿಸುತ್ತಿದ್ದರು. ಜಗದ್ವಿಖ್ಯಾತಿಯಾದ ಶ್ರವಣಬೆಳಗೊಳದ **ಬಾಹುಬಲಿಯ 57 ಅಡಿ ಎತ್ತರದ ಬೃಹತ್ ಶಿಲಾ ವಿಗ್ರಹವನ್ನು ಗಂಗರ ರಾಜಮಂತ್ರಿಯಾದ ಚಾವುಂಡರಾಯನು ಕಟ್ಟಿಸಿದನು.** ಕರ್ನಾಟಕದ ಇನ್ನಿತರ ಸ್ಥಳಗಳಾದ ಕಾರ್ಕಳ, ಮೂಡಬಿದರೆ,

- ಜೈನ ತೀರ್ಥಂಕರರ ಮೂರ್ತಿಗಳು ಮಥುರದ **ಕಂಕಲಿ** ತೀರದಲ್ಲಿ ಕಂಡು ಬರುತ್ತವೆ. **ಗಂಗರು** ಜೈನ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಜೈನವಾಸ್ತು ಶಿಲ್ಪಗಳಾದ ಉದಯಗಿರಿಯ ಹುಲಿಗುಹೆ, ಎಲ್ಲೋರದ ಇಂದ್ರ ಸಭೆ ಗುಹೆ, ಪಲಿತಾನ, ಮೌಂಟ್ ಅಬು ಪರ್ವತ, ಖಜರಾಹೋ, ಚಿತ್ತೂರಿನ ಅನಾಥ ದೇಗುಲ ಮತ್ತು ಒರಿಸ್ಸಾದ ಹಾಥಿಗುಂಪಾ ಗುಹಾಂತರ ದೇವಾಲಯಗಳು ಅತ್ಯಂತ ಪ್ರಮುಖವಾದವು.

ಸಾಧಕರ 5 ವರ್ಗಗಳು

1. ತೀರ್ಥಂಕರ – ಮೋಕ್ಷ ಸಾಧಿಸಿದವನು.
2. ಅರ್ಹಾತ್ – ನಿರ್ವಾಣ ಹೊಂದಿದವನು.
3. ಆಚಾರ್ಯ – ಸನ್ಯಾಸಿಗಳ ಮುಖ್ಯಸ್ಥ.
4. ಉಪಧ್ಯಾಯ – ಗುರು/ಋಷಿ.
5. ಸಾಧು – ಸನ್ಯಾಸಿ.

ತೀರ್ಥಂಕರರ ಚಿನ್ಹೆಗಳು

1. ವೃಷಭನಾಥ (1ನೇ ತೀರ್ಥಂಕರ) ಚಿಹ್ನೆ ಎತ್ತು.
2. ಪಾರ್ಶ್ವನಾಥ (23ನೇ ತೀರ್ಥಂಕರ) ಚಿಹ್ನೆ ಹಾವು.
3. ಮಹಾವೀರ (24ನೇ ತೀರ್ಥಂಕರ) ಚಿಹ್ನೆ ಸಿಂಹ.

6.2 ಬೌದ್ಧ ಧರ್ಮ – ಗೌತಮ ಬುದ್ಧ (ಕ್ರಿ.ಪೂ.563-483)

- ಬೌದ್ಧ ಧರ್ಮದ ಸ್ಥಾಪಕನಾದ ಗೌತಮಬುದ್ಧನು **ಕ್ರಿಪೂ 563** ರಲ್ಲಿ ಕಪಿಲ ವಸ್ತುವಿನ **ಲುಂಬಿನಿವನ**ದಲ್ಲಿ ಜನಿಸಿದನು. ಇವರ ತಂದೆ ಕಪಿಲವಸ್ತುವಿನ ಶಾಕ್ಯ ಕ್ಷತ್ರಿಯ ಕುಲದ ಶುದ್ಧೋದನ. ತಾಯಿ ಕೋಸಲದ ರಾಜಕುಮಾರಿ ಮಾಯಾದೇವಿ. (ಹೆಂಡತಿ ಯಶೋಧರ, ಮಗ ರಾಹುಲ).
- ಗೌತಮಬುದ್ಧನ ಸಾಕುತಾಯಿ ಪ್ರಜಾಪತಿ ಗೌತಮಿ ಲಾಲನೆಯಲ್ಲಿ ಬೆಳೆದ ಹೀಗಾಗಿ ಗೌತಮನೆಂದು ಕರೆಯಲಾಗುತ್ತದೆ.
- ಮೌರ್ಯರ ಅಶೋಕನ **ರುಮಿಂಡೈ ಶಾಸನವು** ಬುದ್ಧನು ಲುಂಬಿನಿವನದಲ್ಲಿ ಕ್ರಿ.ಪೂ.563ರಲ್ಲಿ ಜನಿಸಿದನೆಂದು ತಿಳಿಸುತ್ತದೆ.
- ಬುದ್ಧನು ತನ್ನ 16ನೇ ವಯಸ್ಸಿನಲ್ಲಿ **ಯಶೋಧರಾ/ಬುದ್ಧ ಕಚ್ಛಾನ/ ಸುಬದ್ರಕ ಬಿಂಬ/ಗೋಪ** ಎಂಬ ಕನ್ಯೆಯೊಂದಿಗೆ ವಿವಾಹವಾದನು.
- ಬುದ್ಧನು ಒಮ್ಮೆ ರಾಜಧಾನಿಯಲ್ಲಿ ಸಂಚರಿಸುತ್ತಿದ್ದಾಗ ಓರ್ವ ವೃದ್ಧ, ಓರ್ವ ರೋಗಿ, ಶವಯಾತ್ರೆ ಹಾಗೂ ಓರ್ವ ಪರಿವ್ರಾಜ (ಯೋಗಿ) ನನ್ನು ನೋಡಿದ ನಂತರ ಸಂಸಾರದಲ್ಲಿ ವಿರಕ್ತ ಹೊಂದಿ, ಒಂದು ರಾತ್ರಿ ತನ್ನ ಸೇವಕನಾದ ಚೆನ್ನನೊಂದಿಗೆ ಪ್ರೀತಿಯ ಕುದುರೆಯಾದ **ಕಂತಕ** ವನ್ನೇರಿ ಮಾನವಕೋಟಿಯ ತೊಳಲಾಟಕ್ಕೆ ಕಾರಣ ಹುಡುಕಲು ಪ್ರಯತ್ನಿಸಿದನು.
- ಬುದ್ಧ ತನ್ನ **29ನೇ** ವಯಸ್ಸಿನಲ್ಲಾದ ಈ ಘಟನೆಯನ್ನು **'ಮಹಾಪರಿತ್ಯಾಗ'** ಎನ್ನುವರು. ಇವನು ಅರಿವನ್ನು ತಿಳಿಯಲು **ಅಲಾರಕಮ(ವೈಶಾಲಿ)** ಎಂಬ ಗುರುವಿನ ಬಳಿ ವಪ್ಪ, ಬೈದ್ಯ, ಅಸ್ಸಜಿ ಮತ್ತು ಮಹಾನಾಮ ಎಂಬುವರೊಂದಿಗೆ ಧ್ಯಾನ ಕಲಿತನು. ನಂತರ ರಾಜಗೃಹಕ್ಕೆ ತೆರಳಿ ಉದಕನ ಬಳಿ ಧ್ಯಾನ ಕಲಿತನು.
- ಕಠಿಣ ಸಾಧನೆಯ ಫಲವಾಗಿ ತನ್ನ **35ನೇ ವಯಸ್ಸಿನಲ್ಲಿ** ನಿರಂಜನಾ ನದಿ ದಂಡೆಯ ಮೇಲಿನ **ಬುದ್ಧಗಯಾದಲ್ಲಿ** ಬೋಧಿ ವೃಕ್ಷದ ಕೆಳಗೆ ಜ್ಞಾನೋದಯವಾಗಿ ಅಂದಿನಿಂದ ಬುದ್ಧನೆಂದು ಕರೆಯಲ್ಪಟ್ಟನು.
- ಬುದ್ಧನು ತನ್ನ ಬೋಧನೆಗಳನ್ನು **ಸಾರಾನಾಥದ ಜಿಂಕೆವನ**ದಿಂದ ಆರಂಭಿಸಿದನು. ನಂತರ ಹರಿಣೋದ್ಯಾನದಲ್ಲಿ ಅವನ ಮೊದಲ 5 ಜನ ಸಂಗಾತಿಗಳು ಶಿಷ್ಯರಾದರು. ಇವರಿಗೆ ಬೋಧನೆ ಮಾಡಿದ್ದನ್ನು **'ಧರ್ಮ ಚಕ್ರ ಪರಿವರ್ತನ'** ಎಂದು ಕರೆಯುವರು.
- ಬುದ್ಧನಿಗೆ ರಾಜಗೃಹದ **ಬಿಂಬಸಾರ,** ಜೊತೆಗೆ ಸಾರಿಪುತ್ರ ಮತ್ತು ಮೊಗ್ಗಲರು ನಂತರ ಕೋಸಲದ **ಪ್ರಸೇನಜಿತನು** ಶಿಷ್ಯರಾದರು.
- ಕಪಿಲವಸ್ತುವಿಗೆ ತೆರಳಿದಾಗ ಅವನ ಹೆಂಡತಿ ಮತ್ತು ಮಗ ಶಿಷ್ಯರಾದರು. ಹೀಗೆ ಬುದ್ಧನು ಜೀವನ ಚರಿತ್ರಾಕಾರನಾದರೆ, ದೇವದದತ್ತನು ಬೌದ್ಧರಲ್ಲಿ ಪರಮ ದ್ರೋಹಿಯಾದನು.
- ಬುದ್ಧನು ತನ್ನ ಬೋಧನೆಗಳನ್ನು **ಪಾಳಿ ಭಾಷೆಯಲ್ಲಿ** ನೀಡಿದನು ಇವನು ವೈಶಾಲಿಯಲ್ಲಿದ್ದಾಗ ಸ್ತ್ರೀ ಭಿಕ್ಷು ಸಂಘ ಸ್ಥಾಪನೆಗೆ ಅನುಮತಿ ನೀಡಿದನು.
- ಬುದ್ಧನು ತನ್ನ **80ನೇ ವಯಸ್ಸಿನಲ್ಲಿ** ಉತ್ತರಪ್ರದೇಶದ **ಕುಶೀನಗರ** ಎಂಬಲ್ಲಿ ನಿರ್ವಾಣ ಹೊಂದಿದನು.

ಬೌದ್ಧ ಧರ್ಮದ ಮುಖ್ಯ ತತ್ವಗಳು

- ಬುದ್ಧನು ಉಪದೇಶಿಸಿದ ತತ್ವಗಳನ್ನು ಶಾಸನಗಳೆಂದು ಕರೆಯುತ್ತಾರೆ.
- ಬುದ್ಧನು ಬೋಧಿಸಿದ 4 ಆರ್ಯ ಸತ್ಯಗಳೆಂದರೆ:–

1. ಜೀವನ ದುಃಖಮಯ.
2. ಆಸೆಯೇ ದುಃಖಕ್ಕೆ ಕಾರಣ.
3. ಆಸೆ, ಲೋಭಗಳನ್ನು ತೊರೆದರೆ ದುಃಖ ಮಾಯವಾಗುತ್ತದೆ.
4. ಮೋಕ್ಷವನ್ನು ಪಡೆಯಲು ಅಷ್ಟಾಂಗ ಮಾರ್ಗಗಳಿವೆ.

ಅಷ್ಟಾಂಗ ಮಾರ್ಗಗಳು

1. ಒಳ್ಳೆಯ ನಂಬಿಕೆ
2. ಒಳ್ಳೆಯ ಯೋಚನೆ
3. ಒಳ್ಳೆಯ ಮಾತು
4. ಒಳ್ಳೆಯ ನಡತೆ
5. ಉತ್ತಮ ಜೀವನ
6. ಒಳ್ಳೆಯ ಪ್ರಯತ್ನ
7. ಉತ್ತಮ ವಿಚಾರಗಳ ನೆನಪು
8. ಯೋಗ್ಯ ರೀತಿಯ ಧ್ಯಾನ. ಇವುಗಳನ್ನು **'ಮಧ್ಯ ಮಾರ್ಗ'** ಎಂದು ಕರೆಯುವರು.

- **ನಿರ್ವಾಣ ಎಂದರೆ** ಸಕಲ ಆಸೆ ಆಕಾಂಕ್ಷೆಗಳೆಲ್ಲವೂ ಹೋಗಿ ಇಹದ ಯಾತನೆಗಳಿಂದ ಪಾರಾಗಿ ಆತ ಕೇವಲ ಪಡೆಯುವವನು

ಎಂದರ್ಥ.

- ಬೌದ್ಧ ಧರ್ಮದಲ್ಲಿ ದೇವರ ಗೊಡವೆಯಿಲ್ಲ. ಯಜ್ಞಯಾಗಾದಿಗಳ ಜಂಜಾಟವಿಲ್ಲ. ವಿಚಾರವಂತಿಕೆಗೆ, ಸ್ವಯಂ ಪ್ರಯತ್ನಕ್ಕೆ ಮಾನ್ಯತೆಯಿದೆ.
- ಬುದ್ಧನು ತನ್ನ ಅನಯಯಾಯಿಗಳು **ಪಬ್ಬಜ್ಜ** ಮತ್ತು **ಉಪಸಂಪದಾ** ದೀಕ್ಷೆಗಳನ್ನು ಕೈಗೊಳ್ಳಬೇಕೆಂದು ಆಪೇಕ್ಷಿಸಿದ್ದನು.
- **ವಿನಯಪೀಟಕವು** ಬೌದ್ಧ ಭಿಕ್ಷು ಸಂಘಗಳ ನಡವಳಿಕೆಯ ನಿಯಮಗಳಿಗೆ ಸಂಬಂಧಿಸಿದ ಶಿಸ್ತನ್ನು ಬೋಧಿಸುತ್ತದೆ. ಬುದ್ಧನಿಂದ ಸ್ಥಾಪಿಸಲ್ಪಟ್ಟ ಸಂಘ ಘತಿಮೊಕ್ಕವಾಗಿದೆ.
- ಬೌದ್ಧ ಯತಿಗಳಿಗೆ 10 ಆದೇಶಗಳಿದ್ದವು.

ಬೌದ್ಧ ಸನ್ಯಾಸಿಗಳು

1. ಸಾರಿಪುತ್ರ – ಅಭಿದಮ್ಮದಲ್ಲಿ ಪ್ರವೀಣ.
2. ಮೊಗ್ಗಲ – ಮಾಯಾವಿದ್ಯೆಯಲ್ಲಿ ಪ್ರವೀಣ.
3. ಮಹಾನ್ಯೆ – ಕಠೋರ ಮತ್ತು ಕಾರ್ಯನಿರತ ಜೀವನ.
4. ಉಪಾಲಿ – ಕ್ಷೌರಿಕನಾಗಿದ್ದನು.

- ಇತರರು – ಆನಂದ ಅನಿರುದ್ಧ, ಮಹಾತಚ್ಛಯನ್.

ಸಂಘದ ಸ್ತ್ರೀ ಸನ್ಯಾಸಿನಿಯರು / ಭಿಕ್ಷುಣಿಯರು

- ಆನಂದನು ಸಂಘದಲ್ಲಿ ಸ್ತ್ರೀಯರಿಗೂ ಪ್ರವೇಶವಿರಬೇಕೆಂದು ಪ್ರತಿಪಾದಿಸಿದನು. 23 ಜನ ಸನ್ಯಾಸಿನಿಯ ಕವನ ಸಂಕಲನವಾದ **ಥೇರಿಗಾಥಾ** ಅಥವಾ ಸೋದರಿಯರ ಕವನಗಳಲ್ಲಿ ಸ್ತ್ರೀಯರ ಸನ್ಯಾಸತ್ವಕ್ಕೆ ಕಾರಣಗಳಿವೆ.
- ಬುದ್ಧನು ಸನ್ಯಾಸಿಗಳು ಮತ್ತು ಸನ್ಯಾಸಿನಿಯರಿಗೆ ನೀಡಿದ 10 ಆದೇಶಗಳಲ್ಲಿ ಮೊದಲಿನ 5 ಆದೇಶಗಳು ಜನ ಸಾಮಾನ್ಯರಿಗೂ ಅನ್ವಯಿಸಿದನು.
- ವಿಶ್ವದಲ್ಲೇ ಧಾರ್ಮಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಪ್ರಥಮವಾಗಿ ಸ್ಥಾಪಿತವಾದ ಸಂಘ ಬೌದ್ಧ ಸಂಘವಾಗಿದೆ.

ಬೌದ್ಧ ಧರ್ಮದ ಪ್ರಸಾರ

- ಮಧ್ಯ ಭಾರತವು ಬೌದ್ಧ ಧರ್ಮದ ಪ್ರಮುಖ ಕೇಂದ್ರವಾಯಿತು. **ಅಶೋಕ** ಮತ್ತು **ಕಾನಿಷ್ಕನ** ಕಾಲದಲ್ಲಿ ಬೌದ್ಧ ಧರ್ಮವು ರಾಜ್ಯದ ಅಧಿಕೃತ ಧರ್ಮವಾಗಿ ಬೆಳೆಯಿತು.
- ಅಶೋಕನು ಬೌದ್ಧ **'ಮಹಾಮಾತ್ರರೆಂಬ'** ಬೌದ್ಧ ಪ್ರಚಾರಕರನ್ನು ನೇಮಿಸಿ ಬರ್ಮಾ ಹಾಗೂ ಸಿಂಹಳಕ್ಕೆ ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘ ಮಿತ್ರೆಯರನ್ನು ಕಳುಹಿಸಿದ್ದನು.
- ಕಾನಿಷ್ಕನ ಕಾಲದಲ್ಲಿ ಬೌದ್ಧ ಧರ್ಮವು ಭಾರತದ ವಾಯವ್ಯ ಗಡಿಭಾಗ ಹಾಗೂ ಆಫ್ಘಾನಿಸ್ತಾನದವರೆಗೆ ಹಬ್ಬಿತು.
- **ಕಶ್ಯಪ ಮಾತಂಗನು** ಬೌದ್ಧ ಗ್ರಂಥಗಳನ್ನು ಚೀನಿ ಭಾಷೆಗೆ ಭಾಷಾಂತರಿಸಿದ್ದರಿಂದ ಬೌದ್ಧ ಧರ್ಮ ಚೀನಾದಲ್ಲಿ ಪ್ರಸಾರವಾಯಿತು.
- ಬೌದ್ಧ ಶಿಲ್ಪಕಲೆಯ 3 ರೂಪಗಳು: **ಸ್ತೂಪ, ಚೈತ್ಯ** ಹಾಗೂ **ವಿಹಾರಗಳು.**
- ಲುಂಬಿಣಿ, ಬುದ್ಧಗಯ, ಸಾರನಾಥ ಮತ್ತು ಕುಶೀನಗರ, ಬುದ್ಧನ ಜೀವನ ಚರಿತ್ರೆಗೆ ಸಂಬಂಧಿಸಿದರೆ, ಶ್ರಾವಸ್ತಿ, ರಾಜಗೃಹ, ವೈಶಾಲಿ ಮತ್ತು ಸಂಕಷ್ಠ ಎಂಬ ಸ್ಥಳಗಳನ್ನು ಸೇರಿಸಿ ಅಷ್ಟ ಮಹಾಸಂಸ್ಥಾನಗಳು ಎನ್ನುವರು.

ಬೌದ್ಧ ಕೇಂದ್ರಗಳು

- ಮಹಾರಾಷ್ಟ್ರದ ಅಜಂತಾ, ಎಲ್ಲೋರ ಮತ್ತು ಅಮರಾವತಿ, ಆಂಧ್ರಪ್ರದೇಶದ ನಾಗಾರ್ಜುನಕೊಂಡ, ತಮಿಳುನಾಡಿನ ಕಂಚಿ, ಬಿಹಾರದ ನಳಂದಾ, ಗುಜರಾತ್‌ನ ಜುನಾಗಡ ಮತ್ತು ವಲ್ಲಭಿ, ಮಧ್ಯಪ್ರದೇಶದ ಸಾಂಚಿ ಮತ್ತು ಬಹರತ್, ಒಡಿಸ್ಸಾದ ದೌಲಗಿರಿ, ಉತ್ತರ ಪ್ರದೇಶದ ಕನೂಜ್ ಮತ್ತು ಕೌಸಾಂಬಿ, ಪಶ್ಚಿಮ ಬಂಗಾಳದ ಜಗದಗಲಿ ಮತ್ತು ಸೋಮಪುರಗಳು ಮುಖ್ಯ ಬೌದ್ಧ ಕೇಂದ್ರಗಳು.
- ರಾಜಸ್ಥಾನದ ಬೆಂಬಲವು ಬೌದ್ಧ ಧರ್ಮ ವಿಶಾಲವಾಗಿ ಬೆಳೆಯಲು ಕಾರಣವಾಯಿತು.

ಬೌದ್ಧ ಮಹಾಸಭೆಗಳು (Budhist Councils)

1. ಮೊದಲ ಬೌದ್ಧ ಮಹಾಸಭೆ – ಕ್ರಿ.ಪೂ. 483

- ರಾಜಾಶ್ರಯ – ಮಗಧದ ರಾಜ ಅಜಾತಶತ್ರು.
- ಮಹಾಕಶ್ಯಪನ ನೇತೃತ್ವದಲ್ಲಿ ರಾಜಗೃಹದಲ್ಲಿ ನಡೆಯಿತು.
- ಧಾರ್ಮಿಕ ತತ್ವಗಳನ್ನು ಪಾಳಿ ಭಾಷೆಯಲ್ಲಿ ಕ್ರೋಢೀಕರಿಸಿರುವುದೇ ತ್ರಿಪಿಟಕವಾಗಿದೆ.
- ಈ ಸಭೆಯಲ್ಲಿ **'ವಿನಯಪೀಟಕ'** (ರಚನೆ: ಉಪಾಲಿ), **'ಸುತ್ತಪೀಟಕ'** (ರಚನೆ: ಆನಂದ)ಗಳು ರಚನೆಯಾದವು.

2. ಎರಡನೇ ಬೌದ್ಧ ಮಹಾಸಭೆ – ಕ್ರಿ.ಪೂ.383

- ರಾಜಾಶ್ರಯ–ಮಗಧ ದೊರೆ ಕಾಲಶೋಕ.
- ಸಭಾಕಮಿ ಅಧ್ಯಕ್ಷತೆಯಲ್ಲಿ ವೈಶಾಲಿಯಲ್ಲಿ ನಡೆಯಿತು.
- ಬೌದ್ಧಧರ್ಮದಲ್ಲಿ ಥೇರವಾದಿಗಳು ಮತ್ತು ಮಹಾಸಿಂಘಿಕರು ಎಂಬ 2 ಪಂಗಡಗಳಾದವು.

3. ಮೂರನೇ ಬೌದ್ಧ ಮಹಾಸಭೆ – (ಕ್ರಿ.ಪೂ 234)

- ರಾಜಾಶ್ರಯ – ಮೌರ್ಯ ದೊರೆ ಅಶೋಕ.
- ಮೊಗ್ಗಲಿಪುತ್ತತಿಸ್ಯ ಅಧ್ಯಕ್ಷತೆಯಲ್ಲಿ ಪಾಟಲೀಪುತ್ರದಲ್ಲಿ ನಡೆಯಿತು.
- ಬುದ್ಧನ ಬೋಧನೆಗಳನ್ನು ಒಳಗೊಂಡ ಅಭಿದಮ್ಮ (ಕರ್ತೃ: ಸಾರಿಪುತ್ರ) ಪಿಟಕ ಎಂಬ ಹೊಸ ಕೃತಿ ರಚನೆಯಾಯಿತು.
- ಈ ಸಮ್ಮೇಳನದಲ್ಲಿ ವಿದೇಶಗಳಿಗೆ ಧರ್ಮ ಪ್ರಚಾರಕರನ್ನು ಕಳುಹಿಸಲು ನಿರ್ಧರಿಸಲಾಯಿತು (ಕಥಾವಸ್ತು ಆಧರಿಸಿ).

4. ನಾಲ್ಕನೇ ಬೌದ್ಧ ಮಹಾಸಭೆ – ಕ್ರಿ.ಶ. 1ನೇ ಶತಮಾನ

ನಡೆಯಿತು. (ಉಪಾಧ್ಯಕ್ಷ ಅಶ್ವಘೋಷ).

- ಕಾಶ್ಮೀರ ಮತ್ತು ಗಾಂಧಾರದ ಸರ್ವಸ್ಥಿವಾದಿಗಳ ಗುರುಗಳಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಚರ್ಚಿಸಲು ಈ ಸಭೆ ಸೇರಿದ್ದಿತು.
- ಇಲ್ಲಿ ಬೌದ್ಧ ಧರ್ಮವು ಹೀನಾಯಾನ ಮತ್ತು ಮಹಾಯಾನ ಎಂಬ ಪಂಥಗಳಾಗಿ ವಿಭಜಿತವಾದವು.

ಬೌದ್ಧ ಧರ್ಮದ ಪಂಥಗಳು

1. ಹೀನಾಯಾನ ಅಥವಾ ಹಿರಿಯ ತತ್ವ ಸಿದ್ಧಾಂತ

- ಇದು ಬೌದ್ಧ ಧರ್ಮದ ಸಾಂಪ್ರದಾಯಿಕ ತಾತ್ವಿಕತೆಯ ಅನುಯಾಯಿಗಳಿಂದ ಕೂಡಿತ್ತು. ಇವರು **ಕಮಲ, ಬುದ್ಧನ ಪಾದದ ಚಿಹ್ನೆ** ಪೂಜಿಸುತ್ತಿದ್ದರು. ಆದರೆ ಬುದ್ಧನ ಮೂರ್ತಿ ಪೂಜೆಯಲ್ಲಿ ನಂಬಿಕೆಯಿರಲಿಲ್ಲ.
- ಹೀನಾಯಾನವು ದೇವರ ಬದಲಿಗೆ ಕರ್ಮಕ್ಕೆ ಹೆಚ್ಚಿನ ಸ್ಥಾನ ಕಲ್ಪಿಸಿತ್ತು.
- ನಿರ್ವಾಣ ಎಂಬುದು **'ಎಲ್ಲದರ ಅಂತ್ಯ'** ಎಂದು ತಿಳಿಸಲಾಗಿದೆ.
- ಹೀನಾಯಾನದ ಹಳೆಯ ಸಂಘವು **ಥೇರವಾದವಾಗಿತ್ತು**
- ಇದು ಸಂಸ್ಕೃತಕ್ಕೆ ಪರ್ಯಾಯವಾಗಿದ್ದು ಹೆಚ್ಚಿನ ತಾತ್ವಿಕ ಮಾರ್ಗವನ್ನು ಅನುಸರಿಸಿತು
- ಸರ್ವಸ್ಥಿವಾದ/ವೈಭಾಷಿಕ ಶಾಖೆಯು, ಸೌತಂತ್ರಿಕ ಎಂಬ ಮತ್ತೊಂದು ಶಾಲೆಯಾಗಿ ಬೆಳೆಯಲ್ಪಟ್ಟಿತು.
- **ಮಹಾವಸ್ತು** ಹೀನಾಯಾನ ಸಂಘದ ಮುಖ್ಯ ಗ್ರಂಥವಾಗಿದೆ.
- ಹೀನಾಯನ ಪಂಥವು **ಶ್ರೀಲಂಕಾ, ಬರ್ಮಾ**ದಲ್ಲಿ ಪ್ರಸಿದ್ದಿಯಾಯಿತು.

2. ಮಹಾಯಾನ ಪಂಥ

- ಈ ಪಂಥದವರು **ಬುದ್ಧನ ಮೂರ್ತಿ** ಪೂಜೆಯನ್ನು ಆರಂಭಿಸಿದರು. ಇದು ಭಾರತದಲ್ಲಿ ಜನಪ್ರಿಯವಾಗಿದ್ದು ಬೌದ್ಧ ತತ್ವದ ಮೇಲೆ ನಂಬಿಕೆಯಿಟ್ಟಿತ್ತು.
- ಇದು ಮಾಧ್ಯಮಿಕ ಮತ್ತು ಯೋಗಾಚಾರ ಎಂಬ 2 ತತ್ವಜ್ಞಾನದ ಶಾಲೆಗಳನ್ನು ಹೊಂದಿತ್ತು.
- ಯೋಗಶಾಲೆ ಮೈತ್ರೇಯನಾಥನಿಂದ ಸ್ಥಾಪಿತವಾಗಿ ಹೀನಾಯಾನ ತತ್ವವನ್ನು ಪೂರ್ಣವಾಗಿ ತಿರಸ್ಕರಿಸಿತು.
- ಮಾಧ್ಯಮಿಕ ಶಾಲೆಯು ಹೀನಾಯಾನ ತತ್ವ ಮತ್ತು ಯೋಗಾಚಾರ ತತ್ವಗಳ ಮಧ್ಯಮ ಮಾರ್ಗವನ್ನು (ನಾಗಾರ್ಜುನ ಸ್ಥಾಪಿಸಿದ) ಅನುಸರಿಸಿತು.
- ಇವರು **ಸಂಸ್ಕೃತ ಭಾಷೆಯನ್ನು** ಬೆಳೆಸಿದರು.
- **'ಲಲಿತ ವಿಸ್ತಾರ'** ಈ ಪಂಥದ ಪ್ರಮುಖ ಗ್ರಂಥ.
- ಮಹಾಯಾನ ಪಂಥವು **ಚೀನಾ, ಜಪಾನ್, ಆಫ್ಘನ್, ಮಧ್ಯ ಏಷ್ಯಾ** ರಾಷ್ಟ್ರಗಳಲ್ಲಿ ಪ್ರಸಿದ್ಧಿ ಪಡೆಯಿತು.

3. ವಜ್ರಯಾನ

- ಕ್ರಿ.ಶ. 8ನೇ ಶತಮಾನದಲ್ಲಿ ಈ ಪಂಥದ ಉಗಮವಾಯಿತು. ಇದು **ಬಿಹಾರ** ಮತ್ತು **ಬಂಗಾಳದ** ಸ್ಥಳೀಯ ತಾಂತ್ರಿಕ ಪಂಥಗಳಿಂದ ಪ್ರಭಾವಿತವಾಗಿತ್ತು.
- ಇವರು ಮಾಂತ್ರಿಕ ಶಕ್ತಿ ಗಟ್ಟಿಗೊಳಿಸುವುದರ ಮೂಲಕ ಮೋಕ್ಷ ಪಡೆಯಬಹುದೆಂದು ನಂಬಿದ್ದರು.
- ಈ ಹೊಸ ಪಂಥವನ್ನು ದೈವಾಂಶಗಳು, ಥೇರರು ಎಂದು ಕರೆಯಲ್ಪಡುತ್ತಿದ್ದರು.
- ಇವರು ಮುಖ್ಯ ಭೋಧನಾ ಕೇಂದ್ರ **ವಿಕ್ರಮಶೀಲ** ವಿ.ವಿ.ಯಾಗಿದೆ.
- ಈ ಪಂಥವು **ಸಿಕ್ಕಿಂ, ಟಿಬೆಟ್** ಮತ್ತು **ಭೂತಾನ್**ನಲ್ಲಿ ಪ್ರಸಿದ್ಧವಾಯಿತು.

ತ್ರಿರತ್ನಗಳು – ಬುದ್ಧ, ದಮ್ಮ, ಸಂಗ

ಬೌದ್ಧ ಸಾಹಿತ್ಯ (Budhist Scriptures)

1. ವಿನಯ ಪೀಟಕ (ಕರ್ತೃ ಉಪಾಲಿ)

- ಇದರಲ್ಲಿ ಬುದ್ಧನು ಸೂಚಿಸಿದ ನೀತಿ ನಿಯಮಾವಳಿಗಳು, ಸಂಘದ ಅಭಿವೃದ್ಧಿಯ ವಿವರಣೆಯಿದೆ ಹಾಗೂ ಬುದ್ಧನ ಜೀವನ ಮತ್ತು ಬೋಧನೆಗಳನ್ನು ಒಳಗೊಂಡಿದೆ.

2. ಸುತ್ತಪೀಟಕ (ಕರ್ತೃ ಆನಂದ)

- ವಿವಿಧ ಸಂದರ್ಭಗಳಲ್ಲಿ ಬುದ್ಧನು ಬೋಧಿಸಿದ ಮುಖ್ಯ ತತ್ವಗಳು.
- ಸಾರಿಪುತ್ರ, ಆನಂದ, ಮೊಗ್ಗಲ ಮತ್ತಿತರ ನೀಡಿದ ಬೋಧನೆಗಳು.
- ಬೌದ್ಧ ತತ್ವಗಳನ್ನು ಒಳಗೊಂಡಿದೆ.

3. ಅಭಿದಮ್ಮಪೀಟಕ – (ಕರ್ತೃ ಸಾರಿಪುತ್ರ)

- ಬುದ್ಧನ ಬೋಧನೆಗಳ ತತ್ವಜ್ಞಾನವನ್ನು ಒಳಗೊಂಡಿದೆ.
- ಭೌತಿಕ ವ್ಯವಸ್ಥೆಯ ಸತ್ಯವನ್ನು ತಿಳಿದುಕೊಳ್ಳಲು ನೆರವಾಗುವ ಮನಸ್ಸು ಮತ್ತು ಮಾರ್ಗಗಳ ವಿವರಣೆಯನ್ನು ಒಳಗೊಂಡಿದೆ.

4. **ಖಾಂಡಕಗಳು:–** ಇವು ಸನ್ಯಾಸಿಗಳ ಜೀವನ ವಿಧಾನವನ್ನು ಒಳಗೊಂಡಿವೆ. ಇದರಲ್ಲಿ ಮಹಾವಗ್ಗ ಮತ್ತು ಕುಲ್ಲವಗ್ಗ ಎಂಬ 02 ಮಾರ್ಗಗಳಿವೆ.

- **ಇತರೆ ಕೃತಿಗಳು:–** ಮಿಲಿಂದ ಪನ್ಹ, ದೀಪವಂಶ ಮತ್ತು ಮಹಾವಂಶಗಳು.

ಬುದ್ಧನ ಜೀವನದ 5 ಮಹಾನ್ ಘಟನೆಗಳು ಮತ್ತು ಚಿಹ್ನೆಗಳು

ಬುದ್ದನ ಜೀವನ	ಚಿಹ್ನೆಗಳು
ಜನನ	ಕಮಲ & ಎತ್ತು
ಮಹಾಭಿನಿಷ್ಕ್ರಮಣ	ಕುದುರೆ
ನಿರ್ವಾಣ	ಬೌದ್ಧ ವೃಕ್ಷ
ಧರ್ಮಚಕ್ರಪರಿವರ್ತನ	ಧರ್ಮಚಕ್ರ
ಪರಿನಿರ್ವಾಣ	ಸ್ತೂಪ

ಬೌದ್ಧ ಧರ್ಮದ ಅವನತಿಗೆ ಕಾರಣಗಳು

- ಗುಪ್ತ ದೊರೆಗಳು ವೈದಿಕ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದುದು.

- ವೈದಿಕ ಧರ್ಮವು ಬುದ್ಧನನ್ನು ವಿಷ್ಣುವಿನ ಅವತಾರ ಎಂದು ಪ್ರಚುರಪಡಿಸಿತು.
- ಬೌದ್ಧ ಧರ್ಮವು ವೈದಿಕ ಧರ್ಮದ ಒಂದು ಭಾಗವಾಯಿತು.
- ಹೂಣರ ದೊರೆಯಾದ **ಮಿಹಿರಗುಲನು** ಸಾವಿರಾರು ಬೌದ್ಧ ಸನ್ಯಾಸಿಗಳನ್ನು ಕಗ್ಗೊಲೆ ಮಾಡಿದನು ಮತ್ತು ಬೌದ್ಧವಿಹಾರಗಳನ್ನು ಹಾಳುಗೆಡವಿದನು.
- ಟರ್ಕಿಯನ್ನರ ಆಕ್ರಮಣ.
- ಬಿಹಾರದಲ್ಲಿದ್ದ ಬೌದ್ಧ ವೃಕ್ಷವನ್ನು ಗೌಡ ದೇಶದ ದೊರೆ ಶಶಾಂಕನು ನಾಶಗೊಳಿಸಿದನು.

ಜೈನ ಧರ್ಮ	ಬೌದ್ಧ ಧರ್ಮ
ಅಹಿಂಸೆಗೆ ಹೆಚ್ಚಿನ ಮಹತ್ವ	ಅಹಿಂಸೆಗೆ ಅಷ್ಟು ಮಹತ್ವವಿಲ್ಲ
ಜೈನ ತೀರ್ಥಂಕರರ ಪೂಜೆ	ಬೋಧಿಸತ್ವದ ಪೂಜೆ
ಆತ್ಮದಲ್ಲಿ ನಂಬಿಕೆ	ಆತ್ಮವನ್ನು ನಂಬುವುದಿಲ್ಲ
ಮುಕ್ತಿ ಮರಣದ ನಂತರ ಸಿಗುತ್ತದೆ	ಮುಕ್ತಿ ಮರಣಕ್ಕೆ ಮುನ್ನವೇ ಸಿಗುತ್ತದೆ
ದೇಹ ನಗ್ನತೆಯಲ್ಲಿ ನಂಬಿಕೆ	ದೇಹ ನಗ್ನತೆಯಲ್ಲಿ ನಂಬಿಕೆಯಿಲ್ಲ
ದೇಹ ದಂಡನೆಗೆ ಮಹತ್ವ	ದೇಹ ದಂಡನೆಗೆ ಮಹತ್ವವಿಲ್ಲ
ಭಾರತದಲ್ಲಿ ಮಾತ್ರ ಜನಪ್ರಿಯವಾಯಿತು	ಹೊರ ದೇಶಗಳಲ್ಲಿ ಜನಪ್ರಿಯವಾಯಿತು
ಹಿಂದೂ ಧರ್ಮದೊಂದಿಗೆ ನಿಕಟ ಸಂಬಂಧವಿದೆ	ಹಿಂದೂ ಧರ್ಮದಿಂದ ಸ್ವಲ್ಪ ಪ್ರತ್ಯೇಕ

7. ಪೂರ್ವ ಮೌರ್ಯರ ಕಾಲ (Pre-Mauryan Age)

- ಕ್ರಿಪೂ 6ನೇ ಶತಮಾನದಲ್ಲಿ ಭಾರತದ ಇತಿಹಾಸದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿ ವೈದಿಕ ಧರ್ಮದ ವಿರುದ್ಧ ಪ್ರತಿಭಟಿಸಿ ಜೈನ ಮತ್ತು ಬೌದ್ಧ ಧರ್ಮಗಳು ಉದಯವಾದವು. ಜೊತೆಗೆ ಜನಸಂಖ್ಯೆ ಏರಿಕೆ, ನಗರೀಕರಣ, ಕೃಷಿಯ ವಿಸ್ತರಣೆ, ನಾಣ್ಯ ಚಲಾವಣೆ, ಸೈನಿಕ ಬಲ ಹಾಗೂ ಕಬ್ಬಿಣದ ಬಳಕೆ ವ್ಯಾಪಕವಾಗಿ ರಾಜಪ್ರಭುತ್ವದ ಹುಟ್ಟಿಗೆ ಕಾರಣವಾದವು.

7.1 ಮಹಾಜನಪದಗಳು (ಕ್ರಿ.ಪೂ.652-335) (Mahajanapads)

- ಮಹಾಜನಪದಗಳು ಗಂಗಾನದಿ ಬಯಲಿನಲ್ಲಿ ಕೇಂದ್ರೀಕೃತವಾಗಿದ್ದವು. ಇವುಗಳಿದ್ದರ ಬಗ್ಗೆ ಬೌದ್ಧ ಮತ್ತು ಜೈನ ಕೃತಿಗಳಲ್ಲಿ ಉಲ್ಲೇಖಗಳಿರುವುದು ಕಂಡುಬರುತ್ತದೆ. ಮಹಾಜನಪದಗಳಲ್ಲಿ ರಾಜತ್ವದ ಲಕ್ಷಣಗಳು ಪ್ರಬಲವಾಗಿದ್ದವು. ಬೌದ್ಧಧರ್ಮದ ಅಂಗುತ್ತರ ನಿಕಾಯವು ಪೂರ್ವ ಮೌರ್ಯರ ಕಾಲದಲ್ಲಿ 16 ಮಹಾಜನಪದಗಳ ಬಗ್ಗೆ ಮಾಹಿತಿ ನೀಡುತ್ತದೆ.
- ಬುದ್ಧನ ಸಮಕಾಲೀನ ಮಹಾಜನಪದಗಳು ಸಂಖ್ಯೆ 16.

1. ಕಾಶಿ (ರಾಜಧಾನಿ ವಾರಣಾಸಿ / ಬನಾರಸ್)

- ಇದು 16 ಮಹಾಜನಪದಗಳಲ್ಲಿ ಮೊದಲು ಪ್ರವರ್ಧಮಾನಕ್ಕೆ ಬಂದಿತು.
- ನಂತರದಲ್ಲಿ ಕಾಶಿ ರಾಜ್ಯವು ಕೋಸಲದಲ್ಲಿ ವಿಲೀನವಾಯಿತು.

2. ಕೋಸಲ (ರಾಜಧಾನಿ ಅಯೋಧ್ಯೆ ನಂತರ ಶ್ರಾವಸ್ತಿ)

- ಇದು ಕೇಶಪುತ್ರ ಮತ್ತು ಕಪಿಲವಸ್ತು ಪ್ರದೇಶವನ್ನು ಒಳಗೊಂಡಿತ್ತು.
- ಅಜಾತಶತ್ರು ಕೋಸಲವನ್ನು ಮಗಧಕ್ಕೆ ಸೇರಿಸಿ ಕೊಂಡನು

3. ಅಂಗ (ರಾಜಧಾನಿ ಚಂಪಾ)

ಅಂಗ ರಾಜ್ಯವು ಮಗಧದ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ರಾಜಮಹಲ್ ಪರ್ವತ ಪ್ರದೇಶದಲ್ಲಿ ನೆಲೆಗೊಂಡಿತ್ತು.

4. ಮಗಧ (ರಾಜಧಾನಿ ರಾಜಗೃಹ)

ಮಗಧವನ್ನು ಆಳಿದ ಮೊದಲ ಮನೆತನ ಹರ್ಯಂಕ ಮನೆತನ.

5. ವೃಜ್ಜಿ / ವಜ್ಜಿ (ರಾಜಧಾನಿ ವೈಶಾಲಿ)

ಲಿಚ್ಛವಿ, ವಿದೇಹ, ಜ್ಞಾತ್ರಿಕ ಮತ್ತು ವಜ್ಜಿ ಮುಂತಾದ 08 ಬುಡಕಟ್ಟುಗಳು ಸೇರಿ / ಒಗ್ಗೂಡಿದ ರಾಜ್ಯವಾಗಿತ್ತು.

6. ಮಲ್ಲ / ಮಾಳವ (ರಾಜಧಾನಿ ಕುಶಿನಾರ)

- ಇದರಲ್ಲಿ ಎರಡು ವಿಭಾಗಗಳು. ಒಂದು ಭಾಗದ ರಾಜಧಾನಿ **ಪವ** ಮತ್ತೊಂದು ಭಾಗದ ರಾಜಧಾನಿ **ಕುಶೀನಾರ**
- ಅಲೆಗ್ಸಾಂಡರನು ಭಾರತದ ಮೇಲೆ ದಾಳಿ ಮಾಡಿದಾಗ ಮಲ್ಲ ಗಣರಾಜ್ಯವಿತ್ತು.

7. ಚೇದಿ (ರಾಜಧಾನಿ ಸೂಕ್ತಿ ಮತಿ)

- ಋಗ್ವೇದದಲ್ಲಿ ಚೇದಿ ಎಂಬ ನಿವಾಸಿಗಳ ಹೆಸರು ಕಂಡುಬಂದಿದೆ. ಈ ರಾಜ್ಯವು ಯಮುನಾ ಮತ್ತು ನರ್ಮದಾ ನದಿಗಳ ಮಧ್ಯಭಾಗದಲ್ಲಿತ್ತು.
- ಖಾರವೇಲನ ಹಾಥಿಗುಂಪಾ ಶಾಸನದ ಪ್ರಕಾರ ಕಳಿಂಗ ರಾಜ್ಯ ಸ್ಥಾಪನೆ ಮಾಡಿದ ಚೇದಿಗಳ ಒಂದು ಪಂಗಡ ಬಹು ಪ್ರಾಚೀನವಾದುದೆಂದಿದೆ.

8. ವತ್ಸ / ಮಮ್ಸ (ರಾಜಧಾನಿ ಕೋಸಾಂಬಿ)

ಇದು ಗಂಗಾ ನದಿಯ ದಕ್ಷಿಣಕ್ಕೆ ಇಂದಿನ ಅಲಹಾಬಾದ್ ಪ್ರಾಂತ್ಯದಲ್ಲಿತ್ತು.

9. ಕುರು (ರಾಜಧಾನಿ ಇಂದ್ರಪ್ರಸ್ಥ / ಹಸ್ತಿನಾಪುರ)

ಪಾಳಿ ಗ್ರಂಥದ ಪ್ರಕಾರ ಕುರು ರಾಜ್ಯದ ರಾಜರು ಯುಧಿಷ್ಟರ

10. ಪಾಂಚಾಲ (ರಾಜಧಾನಿ ಕಾಂಪಿಲ್ಯ)

ಪಾಂಚಾಲ ರಾಜ್ಯವು ಸುಂಜಯರು ಮತ್ತು ತುರ್ವಾಸ ಎಂಬ ಋಗ್ವೇದ ಕಾಲದ ಕೆವಿಸ್ ಎಂಬ ಜನಾಂಗಕ್ಕೆ ಸೇರಿದವರಿಂದ ರಚಿತವಾಗಿತ್ತು.

11. ಮತ್ಸ್ಯ (ರಾಜಧಾನಿ ವಿರಾಟನಗರ)

ಚಂಬಲ್ ಮತ್ತು ಸರಸ್ವತಿ ನದಿಗಳ ಪ್ರದೇಶಗಳಲ್ಲಿ ವ್ಯಾಪಿಸಿತ್ತು.

12. ಶೂರ್‌ಸೇನ (ರಾಜಧಾನಿ ಮಥುರ)

- ಇಲ್ಲಿನ ಅರಸನಾದ ಅವಂತಿ ಪುತ್ರನು ಬುದ್ಧನ ಶಿಷ್ಯನಾಗಿದ್ದನು.
- ಈ ರಾಜ್ಯವನ್ನು ಜಾದು/ಜಾದವರು ಆಳ್ವಿಕೆ ಮಾಡಿದರು.

13. ಅಸ್ಮಾಕ (ರಾಜಧಾನಿ ಪೋತಾಲಿ / ಪಾಟ್ನ)

ವಾಯುಪುರಾಣದಲ್ಲಿ ಅಸ್ಮಾಕದ ರಾಜರನ್ನು ಈಕ್ಷ್ವಾಕು ವಂಶದವರೆಂದಿದೆ.

14. ಅವಂತಿ (ರಾಜಧಾನಿ ಉಜ್ಜಯಿನಿ)

- ಪ್ರದ್ಯೋತರ ಪ್ರಮುಖ ದೊರೆ ಪ್ರದ್ಯೋತ ಮಹಾಸೇನ. ಇವನಿಗೂ ಹಾಗೂ ವತ್ಸ್ಯ ರಾಜ್ಯದ ಉದಯನ ನಡುವಿನ ಯುದ್ಧಗಳು ಪ್ರಖ್ಯಾತವಾಗಿವೆ.
- ಉತ್ತರ ಭಾಗಕ್ಕೆ ಉಜ್ಜಯಿನಿ, ದಕ್ಷಿಣಕ್ಕೆ ಮಹಾಶ್ವತಿ ರಾಜಧಾನಿಗಳಾಗಿದ್ದವು.
- ಈ ರಾಜ್ಯದ ಕೊನೆಯ ದೊರೆ ನಂದಿ ವರ್ಧನ.

15. ಗಾಂಧಾರ (ರಾಜಧಾನಿ ತಕ್ಷಶಿಲೆ)

- ಪುಕ್ಕಸತಿ ಎಂಬುವನು ಇಲ್ಲಿ ಆಳುತ್ತಿದ್ದನು
- ಗಾಂಧಾರವನ್ನು ಪರ್ಶಿಯಾದ ದೊರೆ ಡೇರಿಯಸ್‌ನು ಆಳುತ್ತಿದ್ದನು

16. ಕಾಂಬೋಜ (ರಾಜಧಾನಿ ರಾಜ್‌ಪುರ್)

- ಇದು ವಾಯುವ್ಯ ಭಾರತವನ್ನು ಒಳಗೊಂಡಿತ್ತು.

7.2 ಗಣರಾಜ್ಯಗಳು (ಕ್ರಿ.ಪೂ.650–325) (Republics)

- ಗಣರಾಜ್ಯಗಳು ಉತ್ತರ ಭಾರತದ ಅಂಚಿನಲ್ಲಿ ನೆಲೆಸಿದ್ದವು. ಇವು ಮಹಾಜನ ಪದಗಳಿಗಿಂತ ಪ್ರಾಚೀನವಾದವು. ಬೌದ್ಧ ಸಾಹಿತ್ಯದಲ್ಲಿ 10 ಗಣರಾಜ್ಯಗಳು ಕಂಡುಬರುತ್ತವೆ. ಅವುಗಳೆಂದರೆ

1. ಕಪಿಲವಸ್ತು – ಶಾಕ್ಯರು
2. ಕಸಘಟ್ಟ – ಕಳಮಾರರು
3. ಮಿಥಿಲದ – ವಿದೇಹರು
4. ವೈಶಾಲಿ – ನಾಯರು/ಜ್ಞಾತ್ರಿಕರು
5. ಪವದ – ಮಲ್ಲರು
6. ಅಲ್ಲಕಪ್ಪ – ಬುಲ್ಲಿಯರು
7. ಸಮಸುಮಾಬೆಟ್ಟ – ಭಗ್ಗರು
8. ವೈಶಾಲಿ – ಲಿಚ್ಛವಿಗಳು
9. ಪಿಪ್ಪಲಿವನ – ಮೌರ್ಯರು
10. ಕುಶಿನಾರ – ಮಲ್ಲರು

ಕಪಿಲವಸ್ತು – ಶಾಕ್ಯರು

ಇದೇ ಗಣರಾಜ್ಯದಲ್ಲಿ ಬುದ್ಧನು ಜನಿಸಿದನು. ಆದ್ದರಿಂದ ಬುದ್ಧ ಮುನಿಯನ್ನು **ಶಾಕ್ಯಮುನಿ** ಎಂದು ಕರೆಯುತ್ತಿದ್ದರು. ರಾಜಧಾನಿ ಕಪಿಲವಸ್ತು. ಗಣರಾಜ್ಯದ ಸರ್ವರೂ ಸೇರುತ್ತಿದ್ದ ಜಾಗವನ್ನು / ಸಭಾಂಗಣವನ್ನು ಸಂತಗಾರ ಎಂದು ಕರೆಯುತ್ತಿದ್ದರು.

ವೈಶಾಲಿಯ ಲಿಚ್ಛವಿಗಳು

ಇವರು ಬೌದ್ಧ ಅನುಯಾಯಿಗಳು. ಬುದ್ಧನನ್ನು ಗೌರವಿಸಲು ಹೆಸರಾಂತ **ಕುಟೋಗಶಾಲವನ್ನು** ನಿರ್ಮಿಸಿದರು.

7.3 ವಿದೇಶೀಯರ ದಾಳಿಗಳು (Foreign Invasions)

- ಭಾರತದ ಮೇಲೆ ದಾಳಿಯಿಟ್ಟ ಪ್ರಥಮ ವಿದೇಶಿಯರೆಂದರೆ **ಪರ್ಶಿಯನ್ನರು,** ನಂತರ ಮ್ಯಾಸಿಡೋನಿಯನ್ನರು, ಗ್ರೀಕರು, ಬ್ಯಾಕ್ಟ್ರಿಯನ್ನರು, ಪಾರ್ಥಿಯನ್ನರು ಅಥವಾ ಪಹ್ಲವರು, ಕುಶಾನರು ದಾಳಿ ಮಾಡಿದರು.

ಸೈರಸ್ (ಕ್ರಿ.ಪೂ.558–530)

ಸೈರಸ್‌ನು ಮೊದಲು ಗೋಡ್ರೋಷಿಯಾದ ಮೂಲಕ ಭಾರತದ ಮೇಲೆ ದಾಳಿ ಮಾಡಿ ಇಂಡೊ – ಪರ್ಶಿಯನ್ ಭಾಗಗಳನ್ನು ಆಕ್ರಮಿಸಿದನು. ಇವನು ಪಶ್ಚಿಮ ಭಾಗಗಳನ್ನು ಒಂದುಗೂಡಿಸಿ **'ಅಖೀಮಿನಿಯನ್ ಚಕ್ರಾಧಿಪತ್ಯ'** ಸ್ಥಾಪಿಸಿದನು.

ಡೇರಿಯಸ್ (ಕಿ.ಪೂ.522–486)

- ಸೈರಸ್‌ನ ಉತ್ತರಾಧಿಕಾರಿಗಳಲ್ಲೇ ಅತ್ಯಂತ ಪ್ರಮುಖನಾದವನು ಡೇರಿಯಸ್. ಇವನು **'ದಾರ'** ಎಂಬ ಹೆಸರಿನಿಂದ ಕರೆಯಲ್ಪಟ್ಟಿದ್ದನು.
- ಇವನ ಸಾಧನೆಗಳನ್ನು ಇವನ ಬೆಹಿಸ್ಥಾನ್ ಮತ್ತು ಪರ್ಸ್‌ಪೊಲಿಸ್ ಮತ್ತು ನಕ್ಷ–ಐ–ರುಸ್ತುಂ ಶಾಸನಗಳಿಂದ ತಿಳಿಯಬಹುದು.
- ಸಿಂಧೂ ಭಾಗವು ಡೇರಿಯಸ್‌ನ ಕಾಲದಲ್ಲಿ 20ನೇ ಪ್ರಾಂತ್ಯವಾಗಿತ್ತು.

ಕ್ಸರ್‌ಕ್ಸಸ್ (ಕ್ರಿ.ಪೂ 486–465)

- ಇವನು 1ನೇ ಡೇರಿಯಸ್‌ನ ಮಗ. ಇವನ ಸೈನ್ಯದಲ್ಲಿ ಬಹುಸಂಖ್ಯಾತ ಸೈನಿಕರು ಭಾರತೀಯರಾಗಿದ್ದರು. ಈ ಸೈನಿಕರನ್ನು **"ಗಾಂಧಾರಿಯನ್ನರೆಂದು"** ಕರೆಯುತ್ತಿದ್ದರು.
- ಭಾರತೀಯ ಸೈನಿಕರು ಪರ್ಶಿಯಾದ ದಂಡನಾಯಕ ಮಾರ್ಡೊನ್ಯೂಸ್‌ನ ನೇತೃತ್ವದಲ್ಲಿ ಬೊಯೆಷಿಯನ್ ಯುದ್ಧದಲ್ಲಿ ಭಾಗವಹಿಸಿದ್ದರು.
- ಇವನ ಕಾಲದಲ್ಲಿ 1ನೇ ದೈವಸ್ ರಾಜನ ದೇವಾಲಯಗಳ ತಳಹದಿಯು ಇಲ್ಲವಾಯಿತು.
- ಪರ್ಶಿಯನ್ನರು ಭಾರತದ ಪ್ರದೇಶಗಳ ಮೇಲಿನ ಆಳ್ವಿಕೆಯು ಕ್ರಿ.ಪೂ.330 ರವರೆಗೆ ಮುಂದುವರಿಯಿತು.
- 3ನೇ ಡೇರಿಯಸ್‌ನು ಭಾರತೀಯ ಸೈನಿಕರನ್ನು ಅಲೆಗ್ಸಾಂಡರ್

ಭಾರತದ ಮೇಲೆ ಪರ್ಶಿಯನ್ನರ ಪ್ರಭಾವಗಳು

- ಭಾರತದ ವಾಯುವ್ಯ ಭಾಗವು ದಾಳಿ ಮಾಡಲು ಹೆದ್ದಾರಿಯಾಯಿತು. ಮುಂದೆ ಗ್ರೀಕರು, ಬ್ಯಾಕ್ಟ್ರಿಯನ್ನರು ದಾಳಿ ಮಾಡಿದರು.
- ಭಾರತೀಯರು ಶಿಲೆಗಳ ಮೇಲೆ ಶಾಸನ ಕೊರೆಯಿಸುವುದನ್ನು ಕಲಿತರು.
- **'ಖರೋಷ್ಠಿ ಲಿಪಿ'**ಯನ್ನು ಭಾರತೀಯರು ಕಲಿತರು. ಬಲ ಭಾಗದಿಂದ ಎಡಕ್ಕೆ ಬರೆಯುತ್ತಿದ್ದ ಈ ಲಿಪಿಯು ವಾಯುವ್ಯದಲ್ಲಿ ಕ್ರಿ.ಪೂ.3000 ವರೆಗಿತ್ತು.
- ಚಂದ್ರಗುಪ್ತ ಮೌರ್ಯ ಪರ್ಷಿಯನ್ನರಿಂದ ಬೃಹತ್ ಸಾಮ್ರಾಜ್ಯ ಕಟ್ಟುವ ಕಲ್ಪನೆಯನ್ನು ಕಲಿತನು.
- ಪರ್ಷಿಯನ್ನರು ಜಾರಿಗೆ ತಂದ ಚಿನ್ನ ಮತ್ತು ಬೆಳ್ಳಿ ನಾಣ್ಯಗಳ ಪದ್ಧತಿಯನ್ನು ಮುಂದಿನ ಭಾರತೀಯ ರಾಜರು ತಮ್ಮ ನಾಣ್ಯಗಳಲ್ಲಿ ಬಳಸಿಕೊಂಡರು.
- ನವೀನ ಮಾದರಿಯ ಯುದ್ಧ ವಿಮಾನ ಮತ್ತು ಯುದ್ಧೋಪಯೋಗಿ ಉಪಕರಣಗಳ ಪರಿಚಯವಾಯಿತು.
- ಪರ್ಶಿಯನ್ನರಂತೆ ಭಾರತೀಯ ರಾಜರು ತಮ್ಮ ಅಂಗರಕ್ಷಕ ಪಡೆಗೆ ಸ್ತ್ರೀಯರನ್ನು ನೇಮಿಸಿಕೊಂಡರು.

ಮ್ಯಾಸಿಡೋನಿಯನ್ನರ ದಾಳಿ

- ಭಾರತದ ಮೇಲೆ ದಾಳಿ ಮಾಡಿದ 2ನೇಯವರು ಮ್ಯಾಸಿಡೋನಿಯನ್ನರು. ಇವರು 2ನೇ ಫಿಲಿಪ್ಪನ ನಾಯಕತ್ವವಲ್ಲಿ ಪ್ರಾಬಲ್ಯಕ್ಕೆ ಬಂದರು.
- 2ನೇ ಪಿಲಿಪ್ಪನ ಮಗ ಅಲೆಗ್ಸಾಂಡರ್ ಮ್ಯಾಸಿಡೋನಿಯಾದ ರಾಜನಾದನು. ಇವನು ಅರಿಸ್ಟಾಟಲ್‌ನ ಶಿಷ್ಯನಾಗಿದ್ದನು.
- ಅಲೆಗ್ಸಾಂಡರ್‌ನ ಪ್ರೀತಿ ಪಾತ್ರ ವಸ್ತುಗಳಾದ ಖಡ್ಗ ಮತ್ತು ಹೋಮರನ ಕಾವ್ಯ.
- ಕ್ರಿ.ಪೂ.300 ರಲ್ಲಿ ಪರ್ಶಿಯನ್ ದೊರೆ ಮೃತನಾದ್ದರಿಂದ ಅಲೆಗ್ಸಾಂಡರ್ **'ಅಖೀಮಿನಿಯನ್ ಸಾಮ್ರಾಜ್ಯ'** ದ ಚಕ್ರವರ್ತಿಯಾದನು.

ಅಲೆಗ್ಸಾಂಡರ್ ದಾಳಿಯ ಕಾಲದ ರಾಜಕೀಯ ಸ್ಥಿತಿ

- ಗ್ರೀಕ್‌ನ ಮ್ಯಾಸಿಡೋನಿಯಾದ ದೊರೆ ಅಲೆಗ್ಸಾಂಡರ್ **ಕ್ರಿಪೂ.327** ರಲ್ಲಿ ಹಿಂದೂಕುಶ್‌ನ್ನು ದಾಟಿ ಭಾರತವನ್ನು ಪ್ರವೇಶಿಸಿದನು. ಇಲ್ಲಿ ಕೈಗೊಂಡ ಮೊದಲ ಕ್ರಮವೆಂದರೆ ಕಾಬೂಲಿನ ಬಳಿ ರಕ್ಷಣಾ ಸೈನ್ಯಗಳನ್ನಿಟ್ಟನು.
- ಇವನ ದಾಳಿಯ ಕಾಲದ ರಾಜ್ಯ **ತಕ್ಷಶಿಲೆಯ ಅಂಬಿಯ ಪೋರಸ್** ಸಾಮ್ರಾಜ್ಯವಾಗಿತ್ತು.
- ತಕ್ಷಶಿಲೆಯ ಅಂಬಿಯು ಯುದ್ಧ ಮಾಡದೆ ಶರಣಾದನು. ಪುರೂರವನನ್ನು ಸೋಲಿಸಲು ಅಲೆಗ್ಸಾಂಡರನನ್ನು ಅಂಬಿಯು
- ಅಲೆಗ್ಸಾಂಡರ್ ಮತ್ತು ಪುರೂರವನ ನಡುವೆ **ಹೆಡಾಸ್ಪಸ್** (ಝೀಲಂ ನದಿ ದಂಡೆ) **ಕದನ** ನಡೆಯಿತು. ಅಲೆಗ್ಸಾಂಡರನು ನದಿ ದಾಟಿದ ಈ ಪ್ರದೇಶವನ್ನು ಝೀಲಂ ಪಟ್ಟಣವೆಂದು ಕರೆಯಲಾಗಿದೆ.
- ಅಲೆಗ್ಸಾಂಡರ್‌ನು ಪುರೂರವನನ್ನು 'ನಿನ್ನನ್ನು ಯಾವ ರೀತಿ ಕಾಣಲಿ' ಎಂದು ಕೇಳಿದಾಗ ಪುರೊರವ ದಿಟ್ಟತನದಿಂದ ' ನನ್ನನ್ನ ರಾಜನಂತೆ ಕಾಣು' ಎಂದನು. ಇವನ ದಿಟ್ಟತನ ಮೆಚ್ಚಿದ ಅಲೆಗ್ಸಾಂಡರ್ ಅವನ ಸಾಮ್ರಾಜ್ಯವನ್ನು ಹಿಂದಿರಿಗಿಸಿದನು.
- ಅಲೆಗ್ಸಾಂಡರ್ ರಾವಿ ನದಿ ದಾಟಿ ತಕಾಯ್ ಬುಡಕಟ್ಟಿನ **ಮಾಳವರು** ಮತ್ತು **ಕ್ಷತ್ರಿಕರ** ಮೇಲೆ ಯುದ್ಧ ಮಾಡಿದನು. ಮಾಳವರ ನಡುವಿನ ಒಪ್ಪಂದದಿಂದಾಗಿ 'ಪಿಲಿಪ್ಪನನ್ನು' ಪ್ರಾಂತ್ಯಾಧಿಕಾರಿ ಯಾಗಿ ನೇಮಿಸಿದನು.
- ಕ್ರಿ.ಪೂ.**323**ರಲ್ಲಿ ಬಲೂಚಿಸ್ಥಾನದ ಮೂಲಕ ಬ್ಯಾಬಿಲೋನ್ ತಲುಪಿ ತನ್ನ 33ನೇ ವಯಸ್ಸಿನಲ್ಲಿ ನಿಧನನಾದನು.

ಅಲೆಗ್ಸಾಂಡರ್ ದಾಳಿಯ ಪರಿಣಾಮಗಳು

- ಭಾರತದ ಪ್ರದೇಶಗಳನ್ನು 2 ಭಾಗಗಳಾಗಿ ಮಾಡಿ ಪಂಜಾಬ್ ಪ್ರಾಂತ್ಯಕ್ಕೆ ಫಿಲಿಪ್‌ನನ್ನು ಸಿಂದ್ ಪ್ರಾಂತ್ಯಕ್ಕೆ ಪೈಥಾನನ್ನು ಆಡಳಿತಾಧಿಕಾರಿಯಾಗಿ ನೇಮಿಸಿದನು.
- ಹೊಸ ಯುದ್ಧ ವಿಮಾನ ಮತ್ತು ಯುದ್ಧೋಪಕರಣಗಳ ಪರಿಚಯವಾಯಿತು.
- ಇವನ ದಾಳಿಯ ವರ್ಷ **ಕ್ರಿಪೂ 326** ಎಂಬುದು ನಿಖರವಾಗಿದ್ದು. ಇದಕ್ಕೆ ಭಾರತದ ಇತರೆ ಘಟನೆಗಳನ್ನು ಹೋಲಿಸಿ ನಿರ್ದಿಷ್ಟ ಕಾಲಗಣನೆ ಮಾಡಲಾರಂಭಿಸಲಾಯಿತು.
- ಭಾರತ ಮತ್ತು ಯುರೋಪ್ ರಾಷ್ಟ್ರಗಳ ನಡುವೆ 03 ಭೂ ಮಾರ್ಗಗಳನ್ನು ಹಾಗೂ ಒಂದು ನೌಕಾಮಾರ್ಗ ಸ್ಥಾಪಿತವಾದವು.
- ಭಾರತೀಯರು ಮತ್ತು ಗ್ರೀಕರ ನಡುವಿನ ಸಂಪರ್ಕವು ಸಾಂಸ್ಕೃತಿಕ ಸಂಬಂಧ ಬೆಳೆಯಲು ಅವಕಾಶವಾಯಿತು. ಭಾರತೀಯ ಗ್ರಂಥಗಳು ಗ್ರೀಕ್ ಭಾಷೆಗೆ ತರ್ಜುಮೆಯಾದವು.
- ಭಾರತೀಯರು ತಮ್ಮ ಕಲೆಯಲ್ಲಿ ಗ್ರೀಕ್ ಮತ್ತು ಭಾರತೀಯ ಅಂಶಗಳನ್ನೊಳಗೊಂಡ **'ಗಾಂಧಾರ ಶಿಲ್ಪಕಲೆ'** ಪರಿಚಯವಾಯಿತು.

7.4 ಮಗಧ ರಾಜ್ಯ Magadha

- ಮಗಧ ರಾಜ್ಯವು ಇಂದಿನ ಬಿಹಾರದ ದಕ್ಷಿಣ ಭಾಗದ ಪಾಟ್ನ ಮತ್ತು ಗಯಾ ಜಿಲ್ಲೆಗಳನ್ನೊಂಡಿತ್ತು. ಪುರಾಣಗಳ ಪ್ರಕಾರ ಮಗಧ ರಾಜ್ಯ ಸ್ಥಾಪಕರು **ಜರಾಸಂದ** ಮತ್ತು **ಬೃಹದ್ರತ**. ಬೃಹದ್ರತ ಸಂತತಿಯ ನಂತರ ಪ್ರದ್ಯೊತ ಸಂತತಿಯವರು ಅಧಿಕಾರಕ್ಕೆ ಬಂದರು.
- ಪ್ರದ್ಯೋತ ಸಂತತಿಯನ್ನು **ಶಿಶುನಾಗನು** ಮೂಲೆಗೆ ತಳ್ಳಿ ಶಿಶುನಾಗ ಸಂತತಿ ಸ್ಥಾಪಿಸಿದನು. ಬೌದ್ಧ ಲೇಖಕರು ಶಿಶುನಾಗ ಸಂತತಿಯನ್ನು ಹರ್ಯಂಕ ಮತ್ತು ಶಿಶುನಾಗ ಎಂಬ 2 ಭಾಗಗಳಾಗಿ ವಿಂಗಡಿಸಿದ್ದಾರೆ.

ಬಿಂಬಸಾರನು ಆಳುತ್ತಿದ್ದನು. ಈ ರಾಜ್ಯಕ್ಕೆ ಗಿರಿವ್ರಜವು (ರಾಜಗೃಹ) ರಾಜಧಾನಿಯಾಗಿತ್ತು. ನಂತರ ಪಾಟಲೀಪುತ್ರಕ್ಕೆ ಬದಲಾಯಿತು.

- (ಸಂತತಿಗಳು ಕ್ರಮವಾಗಿ ಬೃಹದ್ರತ-ಪ್ರದ್ಯೋತ- ಶಿಶುನಾಗ- ಹರ್ಯಂಕ- ನಂದರು- ಮೌರ್ಯರು ಆಳ್ವಿಕೆ ಮಾಡಿದರು.)

ಬಿಂಬಸಾರ (ಕ್ರಿ.ಪೂ.547 - 495)

- ಅಶ್ವಘೋಷನು ಬಿಂಬಸಾರನನ್ನು **ಹರ್ಯಂಕ ಸಂತತಿಗೆ** ಸೇರಿದವನೆಂದು ತಿಳಿಸಿದ್ದಾನೆ. ಇವನ ರಾಜಧಾನಿ **ಪಾಟಲೀಪುತ್ರವು** 05 ಬೆಟ್ಟಗಳಿಂದ ಸುತ್ತು ವರೆದಿದ್ದ ಕೋಟೆಯಿಂದ ಆವೃತ್ತವಾಗಿತ್ತು.
- ಮಗಧವನ್ನು ಆಳಿದ ಮೊದಲ ಮನೆತನ ಹರ್ಯಂಕ ಇದರ ಸ್ಥಾಪಕನಾದ ಬಿಂಬಸಾರನು ಬುದ್ಧನ ಸಮಕಾಲೀನ. ಮೊದಲ ರಾಜಧಾನಿ ರಾಜಗೃಹ, ಇವನ ಮೊದಲ ಹೆಂಡತಿ ಕೋಸಲದ ಪ್ರಸೇನಜಿತನ ಸೋದರಿ ಕೋಸಲೆ, ಎರಡನೇ ಹೆಂಡತಿ ಚೆಲ್ಲನ. ಇವಳು ಲಿಚ್ಛವಿ ದೊರೆ ಚೇತಕನ ಮಗಳು, ಮೂರನೇ ಹೆಂಡತಿ ಪಂಜಾಬಿನ ಮಾತೃವಂಶದ ಮಗಳು.
- ಇವನ ಕಾಲದಲ್ಲಿ ಗಯಾದ ಮೂಲಕ ವ್ಯಾಪಾರ ನಡೆಯುತ್ತಿತ್ತು.
- ಬಿಂಬಸಾರನ ಸೈನಿಕ ಸಾಧನೆಯೆಂದರೆ **ಚಂಪಾನಗರವನ್ನು** ರಾಜಧಾನಿಯಾಗಿ ಹೊಂದಿದ್ದ ಅಂಗ ರಾಜ್ಯವನ್ನು ವಶಪಡಿಸಿಕೊಂಡನು. ಗಜಸೈನ್ಯವು ಅವನ ದಿಗ್ವಿಜಯಗಳಲ್ಲಿ ಪ್ರಮುಖ ಪಾತ್ರ ವಹಿಸಿತು.
- ಆಡಳಿತದಲ್ಲಿ ಬಿಂಬಸಾರನ ಹೆಂಡತಿ **ಚೆಲ್ಲನಳು** ಸಹಾಯ ಮಾಡುತ್ತಿದ್ದಳು. ಇವನು ಬೌದ್ಧ ಅನುಯಾಯಿಯಾಗಲು ಅವನ ಹೆಂಡತಿ ಖೇಮಾ ಕಾರಣಳಾದಳು.
- ಬಿಂಬಸಾರ ತನ್ನ ಕೊನೆಯ ದಿನಗಳಲ್ಲಿ ಶತ್ರುವಾಗಿದ್ದ ಅವಂತಿಯ ಜೊತೆ ಒಳ್ಳೆಯ ಸಂಬಂಧ ಬೆಳೆಸಿದ್ದನು. ಅವಂತಿಯ ದೊರೆ ಪ್ರದ್ಯೋತನು ಕಾಮಾಲೆಯಿಂದ ಬಳಲುತ್ತಿದ್ದಾಗ ಅವನ ಆಸ್ಥಾನಕ್ಕೆ ವೈದ್ಯನಾದ **ಜೀವಕನನ್ನು** ಕಳುಹಿಸಿದ್ದನು.

ಅಜಾತ ಶತ್ರು (ಕ್ರಿ.ಪೂ. 491-462)

- ಅಜಾತಶತ್ರುವಿಗೆ **'ಪಿತೃಘಾತುಕ'** ಎಂಬ ಅಪವಾದವಿತ್ತು. ಕೋಸಲದ ಪ್ರಸೇನಜಿತ್‌ನು ಇವನಿಂದ ಸೋತು, ಕಾಶಿಯನ್ನು ವಾಪಾಸ್ ಕೊಟ್ಟನು. ಇವನು ಮಿಲಿಟರಿ ಪರಾಕ್ರಮಗಳಿಂದ ತನ್ನ ರಾಜ್ಯ ವಿಸ್ತರಿಸಿದನು.
- ರಾಜಗೃಹ ಕೋಟೆಯನ್ನು ನಿರ್ಮಿಸಿ ಕೋಸಲ ಮತ್ತು ವಜ್ಜಿ ವಶಪಡಿಸಿಕೊಂಡನು.
- ವೈಶಾಲಿಯ ಲಿಚ್ಛವಿಗಳ ನೇತೃತ್ವದ 36 ಗಣರಾಜ್ಯಗಳ ಒಕ್ಕೂಟವನ್ನು ಬೇಧಿಸಲು ಕೌಪಿಲಿಯ ಪದ್ಧತಿಯನ್ನು ಉಪಯೋಗಿಸಿದನು. ಇವನು ಗಂಗಾ ಮತ್ತು ಯಮುನಾ ನದಿಗಳ ಸಂಗಮವಾದ ಪಾಟಲೀಪುತ್ರಕ್ಕೆ ಕೋಟೆಯನ್ನು ಕಟ್ಟಿಸಿ ಭದ್ರ ನೆಲೆಯಾಗಿಸಿದನು.
- ಇವನು ಲಿಚ್ಛವಿಗಳನ್ನು ಸೋಲಿಸಲು 2 ಯುದ್ಧ ತಂತ್ರಗಳನ್ನು ಅನುಸರಿಸಿದನು ಅವೆಂದರೆ-

1. **ಮಹಾಶೀಲಕಂಠಕ** – ದೊಡ್ಡ ಕಲ್ಲುಗಳನ್ನು ವೈರಿಗಳ ಮೇಲೆ ಎಸೆಯುವುದು.
2. **ರಸಮುಸುಲಿ** – ಇದು ಒಂದು ರಥವಾಗಿದೆ.

- ಅಜಾತಶತ್ರು ಬೌದ್ಧಮತದ ಪೋಷಕ ಮತ್ತು ದೇವದತ್ತನ ಭಿನ್ನಪಂಥೀಯ ಗಣದವನಾಗಿದ್ದನು. ರಾಜಗೃಹದಲ್ಲಿ ಬುದ್ಧನ ಅವಶೇಷಗಳ ಮೇಲೆ ಸ್ತೂಪಗಳನ್ನು ಕಟ್ಟಿಸಿದನು.
- ಬರ್ಹಾತ್ ಶಾಸನವು ಗೌತಮಬುದ್ಧನನ್ನು ಅಜಾತಶತ್ರುವು ಭೇಟಿಯಾಗಿದ್ದರೆಂದು ತಿಳಿಸುತ್ತದೆ.
- ಪುರಾಣಗಳ ಪ್ರಕಾರ ಅಜಾತಶತ್ರುವಿನ ನಂತರ **'ದರ್ಶಕ'** ಆಳಿದನು. ಬಾಸನ ಸ್ವಪ್ನವಾಸವದತ್ತ ನಾಟಕದಲ್ಲಿ ದರ್ಶಕನ ಹೆಸರು ಕಂಡುಬರುತ್ತದೆ.

ಉದಯನ್ (ಕ್ರಿ.ಪೂ.460-444)

- ಇವನು ಅವಂತಿಯ ದೊರೆಯಾಗಿ ಆಡಳಿತ ನಡೆಸಿದನು. ತನ್ನ ರಾಜಧಾನಿಯನ್ನು ರಾಜಗೃಹದಿಂದ ಪಾಟಲೀಪುತ್ರಕ್ಕೆ ವರ್ಗಾಯಿಸಿದನು. ಸೋನಾ-ಗಂಗಾ ನದಿಗಳ ಸಂಗಮದಲ್ಲಿ **'ಪಾಟಲೀಪುತ್ರ ನಗರ'** ನಿರ್ಮಿಸುತ್ತಾನೆ. ಇದನ್ನು **'ಜಲದುರ್ಗ'** ಎನ್ನಲಾಗುತ್ತಿತ್ತು.
- ಉದಯನ ನಂತರ ನಂದಿವರ್ಧನ ಮತ್ತು ಮಹಾನಂದಿನ್ ಆಳ್ವಿಕೆ ಮಾಡಿದರು.

ನಂದರು (Nandas)

- ನಂದ ವಂಶದ ಸ್ಥಾಪಕ **ಮಹಾಪದ್ಮನಂದ.** ಪುರಾಣಗಳು ಇವನನ್ನು ಕ್ಷತ್ರಿಯ ನಿಗ್ರಹ ಎಂಬುದಾಗಿ ಕರೆದಿವೆ.
- ನಂದರ ಅವನತಿಯೊಂದಿಗೆ ಚಂದ್ರಗುಪ್ತ ಮೌರ್ಯನು ಭಾರತದಲ್ಲಿ ಪ್ರಬಲ ಸಾಮ್ರಾಜ್ಯ ಸ್ಥಾಪನೆಗೆ ಅಡಿಪಾಯ ಹಾಕಿದನು.

ಶಿಶುನಾಗ ಸಂತತಿ (Sisunagas)

- ಹರ್ಯಂಕ ವಂಶದ ನಂತರ ಶಿಶುನಾಗ ವಂಶವು ಅಧಿಕಾರಕ್ಕೆ ಬಂದಿತು. ಶಿಶುನಾಗನು ಹರ್ಯಂಕ ವಂಶದಲ್ಲಿ ಸಚಿವನಾಗಿದ್ದನು. ಇವನು ಪಾಟಲೀಪುತ್ರದಿಂದ ರಾಜಧಾನಿಯನ್ನು **'ವೈಶಾಲಿಗೆ'** ವರ್ಗಾಯಿಸಿದನು.
- ಕಾಲಾಶೋಕ ಶಿಶುನಾಗನ ಉತ್ತರಾಧಿಕಾರಿ. 2ನೇ ಬೌದ್ಧ ಮಹಾಸಭೆ ಇವನ ಕಾಲದಲ್ಲಿ ವೈಶಾಲಿಯಲ್ಲಿ ನಡೆಯಿತು.
- ನಂದರು ಶಿಶುನಾಗನನ್ನು ಸೋಲಿಸಿ ಅಧಿಕಾರಕ್ಕೆ ಬಂದರು. **ನಂದರನ್ನು ಭಾರತದ ಮೊಟ್ಟ ಮೊದಲ ಸಾಮ್ರಾಜ್ಯ ಸ್ಥಾಪಕರು** ಎನ್ನಲಾಗಿದೆ. ನಂದರ ಪ್ರಸಿದ್ಧ ದೊರೆ ಮಹಾಪದ್ಮನಂದನಿಗೆ **'ಏಕರಾಟ್'** ಬಿರುದಿತ್ತು. ನಂದ ವಂಶದ ಕೊನೆಯ ದೊರೆ ಧನನಂದನನನ್ನು ಚಂದ್ರಗುಪ್ತ ಮೌರ್ಯನು ಸೋಲಿಸುವ ಮೂಲಕ ಮೌರ್ಯ ವಂಶ ಸ್ಥಾಪಿಸಿದನು.

8. ಮೌರ್ಯ ಸಾಮ್ರಾಜ್ಯ (The Mauryan Empire)

- ಭಾರತದಲ್ಲಿ ಏಳಿಗೆಗೆ ಬಂದ ಸಾಮ್ರಾಜ್ಯಗಳಲ್ಲಿ ಮೌರ್ಯ ಸಾಮ್ರಾಜ್ಯ ಮೊದಲನೆಯದು. ಚಂದ್ರಗುಪ್ತ ಮೌರ್ಯ ನಂದರ ಕೊನೆಯ ದೊರೆ ಧನನಂದನನನ್ನು ಸೋಲಿಸುವ ಮೂಲಕ ಮೌರ್ಯ ಸಾಮ್ರಾಜ್ಯ ಸ್ಥಾಪಿಸಿದನು.
- ವಿ.ಎ.ಸ್ಮಿತ್ ರವರು "ಮೌರ್ಯರ ಕಾಲವು ಭಾರತದ ಇತಿಹಾಸದಲ್ಲಿ ಇತಿಹಾಸಕಾರರನ್ನು ಕತ್ತಲೆಯಿಂದ ಬೆಳಕಿನತ್ತ ಒಯ್ಯುವ ಪರ್ವಕಾಲ" ಎಂದಿದ್ದಾರೆ.

ಆಧಾರಗಳು

- **ಮೆಗಾಸ್ತನೀಸನ ಇಂಡಿಕಾ** :- ಚಂದ್ರಗುಪ್ತ ಮೌರ್ಯನು ಅಲೆಗ್ಸಾಂಡರನ ಸಮಕಾಲೀನ ಎಂದಿದೆ. ಮೆಗಾಸ್ತಾನೀಸನು ಗ್ರೀಕ್ ರಾಯಭಾರಿಯಾಗಿ ಚಂದ್ರಗುಪ್ತನ ಆಸ್ಥಾನಕ್ಕೆ ಬಂದಿದ್ದರಿಂದ ಹಲವು ಅಂಶಗಳ ಪರಿಚಯವಿತ್ತು. ಇಂಡಿಕಾವು ಪಾಟಲೀಪುತ್ರ ನಗರದ ಚಿತ್ರಣ ಹಾಗೂ ಚಂದ್ರಗುಪ್ತನ ವೈಯಕ್ತಿಕ ವಿಚಾರಗಳನ್ನು ಹೇರಳವಾಗಿ ಒಳಗೊಂಡಿದೆ.

ಕೌಟಿಲ್ಯನ ಅರ್ಥಶಾಸ್ತ್ರ

- 1904ರಲ್ಲಿ ಇದನ್ನು ಆರ್.ಶಾಮಶಾಸ್ತ್ರಿಯವರು ಸಂಶೋಧಿಸಿ, 1909ರಲ್ಲಿ ಸಂಪಾದನೆ ಮಾಡಿ ಸಂಸ್ಕೃತದಲ್ಲಿ ಪ್ರಕಟಿಸಿದರು. ಇದು ಆಡಳಿತ ಮತ್ತು ರಾಜನೀತಿ ತತ್ವಕ್ಕೆ ಸಂಬಂಧಿಸಿದ ವಿಚಾರಗಳು. ಸರ್ಕಾರ ಹೇಗೆ ರಚನೆ ಮಾಡಬೇಕೆಂಬ ಬಗ್ಗೆ ಮತ್ತು ಗೂಢಾಚಾರ ಪದ್ಧತಿಯ ಬಗ್ಗೆ ತಿಳಿಸುತ್ತದೆ. ಚಾಣಕ್ಯನ ಚಂದ್ರಗುಪ್ತ ಕಥಾವು ಚಂದ್ರಗುಪ್ತ ಮೌರ್ಯನ ಜೀವನದ ಬಗ್ಗೆ ತಿಳಿಸುತ್ತದೆ.
- **ವಿಶಾಖದತ್ತನ ಮುದ್ರರಾಕ್ಷಸ:** ಮೌರ್ಯರ ಕಾಲದ ಖಚಿತ ಆಧಾರಗಳನ್ನು ಇದು ಒದಗಿಸುತ್ತದೆ. ರಾಜಕೀಯ ಚಟುವಟಿಕೆಗಳು ಅದರಲ್ಲೂ ಚಂದ್ರಗುಪ್ತನು ಹಾಗೂ ಚಾಣಕ್ಯರು ನಂದರ ವಿರುದ್ಧ ನಡೆಸಿದ ಕ್ರಾಂತಿಯ ವಿಷಯ ತಿಳಿಸುತ್ತದೆ. ಈ ಕೃತಿ ಚಂದ್ರಗುಪ್ತನನ್ನು ನಂದರ ವಂಶದವನೆಂದು ಆದರೆ ವಿಭಿನ್ನ ಗೋತ್ರಕ್ಕೆ ಸೇರಿದವನೆಂದಿದೆ.
- **ಪುರಾಣಗಳು** (ವಾಯು ಪುರಾಣ, ಮತ್ಸ ಪುರಾಣ):- ಇವು ಮೌರ್ಯರ ರಾಜರ ಪಟ್ಟಿಯನ್ನು ಒಳಗೊಂಡಿವೆ. ಮಗಧವನ್ನು ಮೌರ್ಯರು ಆಳುವುದಕ್ಕೆ ಮುಂಚೆ ನಂದರು ಆಳುತ್ತಿದ್ದರೆಂದು ತಿಳಿಸುತ್ತವೆ.
- **ಜೈನ ಮತ್ತು ಬೌದ್ಧ ಸಾಹಿತ್ಯ:**- ಚಂದ್ರಗುಪ್ತನು ನಂದರನ್ನು ಸೋಲಿಸಿದ ಬಗ್ಗೆ ಹಾಗೂ ಅಶೋಕನ ಧರ್ಮದ ಬಗ್ಗೆ ತಿಳಿಸುತ್ತವೆ. ಆದರೆ ಕಳಿಂಗ ಯುದ್ಧದ ಬಗ್ಗೆ ಏನನ್ನೂ ಹೇಳಿಲ್ಲ.
- **ಜೈನ ಸಾಹಿತ್ಯ:**- ಚಂದ್ರಗುಪ್ತನು ಜೈನಧರ್ಮ ಸ್ವೀಕರಿಸಿ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತ ಕೈಗೊಂಡು ಮೃತನಾದ ಎಂದು ತಿಳಿಸುತ್ತದೆ.
- **ಬೌದ್ಧ ಸಾಹಿತ್ಯ:**- ಎ) ಜಾತಕಗಳು- ಮೌರ್ಯರ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಬಗ್ಗೆ ತಿಳಿಸುತ್ತವೆ. ಬಿ) ದೀಘನಿಕಾಯ- ಮೌರ್ಯರ ರಾಜಾಡಳಿತದ ಮೇಲೆ ಬೌದ್ಧ ಧರ್ಮದ ಪ್ರಭಾವದ ಬಗ್ಗೆ ತಿಳಿಸುತ್ತದೆ. ಸಿ) ವಂಸತ ಪಕಾಸಿನಿ- ಮೌರ್ಯರ ಮೂಲದ ಬಗ್ಗೆ ತಿಳಿಸುತ್ತದೆ. ಡಿ) ಸಿಲೋನಿನ ವೃತ್ತಾಂತಗಳು (ದೀಪವಂಶ ಮತ್ತು ಮಹಾವಂಶ).

ಇತರೆ ಆಧಾರಗಳು

- ಕಲ್ಹಣನ – ರಾಜ ತರಂಗಿಣಿ.
- ಸೋಮದೇವನ – ಕಥಾಚರಿತಸಾಗರ.
- ವಿಜ್ಜಿಕಾಳ – ಕೌಮುದಿ ಮಹೋತ್ಸವ.
- ದೀಪವಂಶ ಮತ್ತು ಮಹಾವಂಶ ಕೃತಿಗಳು.
- ಜಾತಕ ಕಥೆಗಳು.

ಶಾಸನಗಳು

- ಅಶೋಕನ ಶಾಸನಗಳು ಹೆಚ್ಚಾಗಿ ಬ್ರಾಹ್ಮೀ, ಅರೇಬಿಕ್, ಖರೋಷ್ಠಿ ಮತ್ತು ಗ್ರೀಕ್ ಲಿಪಿಯಲ್ಲಿವೆ.
- ಶಬಾನ್ಸ್‌ಗಿರಿ ಮತ್ತು ಮನ್ಸರ ಶಾಸನಗಳು ಖರೋಷ್ಠಿಯಲ್ಲಿ, ತಕ್ಷಶಿಲೆ ಮತ್ತು ಕಾಂದಹಾರ ಶಾಸನಗಳು ಅರೇಬಿಕ್ ಮತ್ತು ಗ್ರೀಕ್ ಹಾಗೂ ಉಳಿದ ಶಾಸನಗಳು ಬ್ರಾಹ್ಮೀ ಲಿಪಿಯಲ್ಲಿವೆ.
- ಬ್ರಾಹ್ಮೀ ಲಿಪಿಯನ್ನು '**ಎಲ್ಲಾ ಭಾರತೀಯ ಲಿಪಿಗಳ ತಾಯಿ**' ಎಂದು ಕರೆಯಲಾಗುತ್ತದೆ.

1) **ಮಸ್ಕಿ ಶಾಸನ:**- ಅಶೋಕನ ಹೆಸರು 'ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ' ಎಂಬುದನ್ನು ತಿಳಿಸುತ್ತದೆ.
2) **ಬಬ್ರು ಶಾಸನ:**-3ನೇ ಬೌದ್ಧ ಮಹಾಸಭೆಯಲ್ಲಿ ಉಪಗುಪ್ತ ಮೊಗ್ಗಲಿಪುತ್ತತಿಸ್ಯ ಅಶೋಕನನ್ನು ಬೌದ್ಧ ಧರ್ಮಕ್ಕೆ ಮತಾಂತರ ಮಾಡಿದನು.
3) **ಸನ್ನತಿ ಶಾಸನ (ಗುಲ್ಬರ್ಗಾ):**- ಇದು ಕರ್ನಾಟಕದಲ್ಲಿನ ಅಶೋಕನ ದೊಡ್ಡ ಶಾಸನ. ಅಶೋಕನು ಆಂಧ್ರ ಪ್ರದೇಶ ಜಯಿಸಿದ ಬಗ್ಗೆ ತಿಳಿಸುತ್ತದೆ.
4) **ಪಾಲಿ ಮತ್ತು ಜುನಾಗಡ ಶಾಸನ** (ಒರಿಸ್ಸಾ):- ಅಶೋಕನ ಈ ಶಾಸನದಲ್ಲಿ 'ಎಲ್ಲ ಪ್ರಜೆಗಳು ನನ್ನ ಮಕ್ಕಳು' ಎಂದು ತಿಳಿಸಿದ್ದಾನೆ.
5) **ನಾಗಾರ್ಜುನ ಗುಹಾ ಶಾಸನ (ಬಿಹಾರ):**- ಈ ಶಾಸನವನ್ನು ಅಶೋಕ ತನ್ನ ಮೊಮ್ಮಗ ದಶರಥನಿಗೆ ಅರ್ಪಿಸಿದನು.
6) **ಬಾರ್ಬರ ಗುಹಾ ಶಾಸನ (ಬಿಹಾರ):**- ಅಶೋಕ ಈ ಶಾಸನವನ್ನು ಅಜೀವಿಕ ಪಂಥದವರಿಗೆ ಅರ್ಪಿಸಿದ್ದಾನೆ.
7) **ಗಿರ್ನಾರ್/ಜುನಾಗರ ಶಾಸನ (ಗುಜರಾತ್):**- ಈ ಶಾಸನವನ್ನು ಶಕರ ದೊರೆ 1ನೇ ರುದ್ರದಾಮನ್ ರಚಿಸಿದ್ದಾನೆ. ಇದು ಸಂಸ್ಕೃತದ ಮೊಟ್ಟ ಮೊದಲ ಶಾಸನವಾಗಿದೆ. ಇದರ ಪ್ರಕಾರ ಚಂದಗುಪ

ಮೌರ್ಯರ ಗೌರ್ನರ್ ಪುಶ್ಯಗುಪ್ತನು **ಸುದರ್ಶನ** ಸರೋವರವನ್ನು ನಿರ್ಮಿಸಿದನೆಂದಿದೆ.

8) ಅಶೋಕನ 13 ಬಂಡೆಗಲ್ಲು ಶಾಸನಗಳು.

ಇವು ಪ್ರಾಕೃತ ಭಾಷೆಯಲ್ಲಿ ರಚಿತವಾಗಿದ್ದು, ಬ್ರಾಹ್ಮೀ ಲಿಪಿಯಲ್ಲಿವೆ.

1 ಮತ್ತು 2ನೇ ಶಾಸನ	ಅಶೋಕನಿಗಿದ್ದ ಮನುಷ್ಯ ಮತ್ತು ಪ್ರಾಣಿಗಳ ಬಗೆಗಿನ ಕಳವಳವನ್ನು ಕುರಿತದ್ದಾಗಿದೆ.
3ನೇ ಶಾಸನ	ನೈತಿಕ ಸಂಹಿತೆಯ ಮಾಹಿತಿಯಿದೆ.
4ನೇ ಶಾಸನ	ಅಶೋಕನ ಅಹಿಂಸಾ ತತ್ವದ ವಿವರಣೆ ಇದೆ.
5ನೇ ಶಾಸನ	ಬೌದ್ಧ ಧರ್ಮ ಪ್ರಚಾರ ಮಾಡಲು ಧರ್ಮ ಮಹಾಮಾತ್ರರ ನೇಮಕ ಮಾಡಿದ ಬಗ್ಗೆ ತಿಳಿಸಿದೆ.
6ನೇ ಶಾಸನ	ಜನರ ಕಲ್ಯಾಣದ ವಿವರಣೆ.
7ನೇ ಮತ್ತು 8ನೇ ಶಾಸನ	ಬೌದ್ಧ ಗಯಕ್ಕೆ ತೀರ್ಥಯಾತ್ರೆಯ ವಿವರ.
9ನೇ ಶಾಸನ	ಧಾರ್ಮಿಕ ಆಚರಣೆಗಳ ವಿವರ.
10 ಮತ್ತು 11ನೇ ಶಾಸನ	ಧರ್ಮದ ಬಗೆಗಿನ ಮಾಹಿತಿ ಇದೆ.
12ನೇ ಶಾಸನ	ಧಾರ್ಮಿಕ ಸಂಹಿತೆಯ ವಿವರವಿದೆ.
13ನೇ ಶಾಸನ	ಕಳಿಂಗ ಯುದ್ಧದ ವಿವರಣೆ.
14 ನೇ ಶಾಸನ	13 ಶಾಸನಗಳ ಬಗೆಗಿನ ಮಾಹಿತಿಯನ್ನು ಒಳಗೊಂಡಿದೆ.

ವಿದೇಶಿ ಸಾಹಿತ್ಯ

1) ಮೆಗಾಸ್ಥನೀಸ್ – ಇಂಡಿಕಾ
2) ಅನಾಮಿಕ – ದಿ ಪೆರಿಪ್ಲಸ್ ಆಫ್ ಎರಿಥ್ರಿಯನ್ಸಿ.
3) ಪ್ಲೀನಿ – ನಾಚುರಲ್ ಹಿಸ್ಟರಿ.
4) ಟಾಲಾಮಿ – ನಾಚುರಲ್ ಜಿಯೋಗ್ರಫಿ

ನಾಣ್ಯಗಳು

- ಮೌರ್ಯರ ನಾಣ್ಯಗಳು 'ಮುದ್ರೆ' ರೂಪದಲ್ಲಿವೆ.
- ಇವರ ನಾಣ್ಯಗಳಲ್ಲಿ ಪಶುಪಕ್ಷಿಗಳ ಚಿತ್ರ ಕಂಡುಬರುತ್ತದೆ.

ಚಂದ್ರಗುಪ್ತ ಮೌರ್ಯ (ಕ್ರಿ.ಪೂ 321 – 299)

- ಮೌರ್ಯ ಸಾಮ್ರಾಜ್ಯದ ಸ್ಥಾಪಕನಾದ ಚಂದ್ರಗುಪ್ತ ಮೌರ್ಯನ ಮೂಲದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಇವನು ತನ್ನ ಗುರುವಾದ ವಿಷ್ಣುಗುಪ್ತ ಅಥವಾ ಕೌಟಿಲ್ಯ (ನಂದರಿಂದ ಅವಮಾನಕ್ಕೀಡಾಗಿದ್ದ) ಎಂಬ ಬ್ರಾಹ್ಮಣನ ನೆರವಿನಿಂದ ಚಂದ್ರಗುಪ್ತನು ನಂದರ ಕೊನೆಯ ದೊರೆ ಧನನಂದನನ್ನು ಸೋಲಿಸಿ ಕ್ರಿ.ಪೂ.321ರಲ್ಲಿ ರಾಜ್ಯ ಕಟ್ಟಿದನು.

ಚಂದ್ರಗುಪ್ತನ ಮೂಲ

ಸಾಕುವವನ ಮಗ' ಎಂದಿದೆ ಹಾಗೂ ಜೈನ ಧರ್ಮಕ್ಕೆ ಮತಾಂತರಗೊಂಡಿದ್ದರ ಬಗ್ಗೆ ತಿಳಿಸುತ್ತದೆ.

- ಬ್ರಾಹ್ಮಣ ಪುರಾಣಗಳು ಚಂದ್ರಗುಪ್ತನು **ಮುರ** ಎಂಬ ಶೂದ್ರ ಹೆಂಗಸಿಗೆ ಜನಿಸಿದ ಕಾರಣ ಮೌರ್ಯ ಎಂದು ಕರೆದಿವೆ.
- ವಿಶಾಖದತ್ತನ ಮುದ್ರಾರಾಕ್ಷಸವು ಚಂದ್ರಗುಪ್ತನನ್ನು **'ಕುಲಹೀನ'** ಎಂದು ಕರೆದಿದೆ.
- ಬೌದ್ಧ ಮೂಲಗಳು ಚಂದ್ರಗುಪ್ತನು **'ಕ್ಷತ್ರಿಯನಾಗಿದ್ದ'** ಎಂದಿವೆ.
- ಸಂಪ್ರದಾಯಗಳ ಪ್ರಕಾರ ಚಂದ್ರಗುಪ್ತನು ಮಯೂರ (ನವಿಲು)ಗಳನ್ನು ಸಾಕುವ ಕುಟುಂಬದವನಾದ್ದರಿಂದ **'ಮೌರ್ಯ'** ಎಂಬ ಹೆಸರು ಬಂದಿದೆ.
- ಗ್ರೀಕರ ಪ್ರಕಾರ ಚಂದ್ರಗುಪ್ತ **'ಮೊರೀಸ್'** ವಂಶಕ್ಕೆ ಸೇರಿದವನೆಂದಿದ್ದಾರೆ.
- ಮುದ್ರಾರಾಕ್ಷಸವು ಚಂದ್ರಗುಪ್ತನಿಗೆ **'ವೃಷಲ'** ಎಂಬ ಉಪನಾಮವಿದೆ ಎಂದಿದೆ.
- ಚಂದ್ರಗುಪ್ತನು ಪಂಜಾಬ್‌ನಲ್ಲಿ ಅಲೆಗ್ಸಾಂಡರ್‌ನ ವಿರುದ್ಧ ಹೋರಾಡಲು ಹೋಗಿದ್ದಾಗ ವಿದ್ಯಾರಣ್ಯದಲ್ಲಿ ಕೌಟಿಲ್ಯನನ್ನು ಮೊದಲ ಬಾರಿಗೆ ಸಂಧಿಸಿದನು. 'ಪ್ರವರ್ತಕ' ಎಂಬ ರಾಜನ ಸಹಾಯದಿಂದ ವಾಯುವ್ಯ ಭಾರತದಲ್ಲಿದ್ದ ಗ್ರೀಕರ ಮೇಲೆ ಧಾಳಿ ಮಾಡಿದನು.
- ಅಲೆಗ್ಸಾಂಡರನು ವಾಯುವ್ಯ ಪ್ರಾಂತ್ಯಕ್ಕೆ ಪಿಲಿಪ್ ಮತ್ತು ನಿಕೆಟರ್‌ನನ್ನು ಪ್ರಾಂತ್ಯಾಧಿಕಾರಿಗಳಾಗಿ ನೇಮಿಸಿದ್ದನು.
- ಚಾಣಕ್ಯನ ನೆರವಿನಿಂದ ಚಂದ್ರಗುಪ್ತನು ಮಗಧವನ್ನು ಆಕ್ರಮಿಸಿದನು.
- ಕ್ರಿ.ಪೂ.321ರಲ್ಲಿ **"ಟ್ರಿಪಾರ್ಡಿಯಾಸಸ್"** ಒಪ್ಪಂದದ ಪ್ರಕಾರ ಸೆಲ್ಯೂಕಸ್ ಅಲೆಗ್ಸಾಂಡರನ ರಾಜ್ಯ ವಿಭಜನೆಯಲ್ಲಿ ತನ್ನ ಪಾಲಾಗಿ ಬ್ಯಾಬಿಲೋನಿಯಾದ ಸತ್ರಪಿಯನ್ನು ಪಡೆದು ರಾಜನೆಂದು ಘೋಷಿಸಿಕೊಂಡನು.
- ಇದೇ ವೇಳೆಗೆ ವಾಯುವ್ಯ ಭಾರತದಲ್ಲಿ ಅಲೆಗ್ಸಾಂಡರ್‌ನ ರಾಜ್ಯಪಾಲ ಸೆಲ್ಯೂಕಸ್ ನಿಕೆಟಿನ್ ಪ್ರಬಲನಾಗುತ್ತಿದ್ದನು. ಕ್ರಿ.ಪೂ.303ರಲ್ಲಿ ಸೆಲ್ಯೂಕಸ್ ಮತ್ತು ಚಂದ್ರಗುಪ್ತನಿಗೆ ಯುದ್ಧ ಜರುಗಿ ಸೆಲ್ಯೂಕಸ್‌ನು ಪರಾಜಿತನಾದನು.
- ಸೋತ ಸೆಲ್ಯೂಕಸ್ 500 ಆನೆಗಳನ್ನು ಪಡೆದು ಕಾಬೂಲ್, ಹೀರತ್, ಗಾಂಧಾರ ಮತ್ತು ಬಲೂಚಿಸ್ಥಾನಗಳನ್ನು ಚಂದ್ರಗುಪ್ತನಿಗೆ ನೀಡಿದ್ದರ ಜೊತೆಗೆ ಸೆಲ್ಯೂಕಸ್‌ನು ತನ್ನ ಮಗಳನ್ನು ಚಂದ್ರಗುಪ್ತನಿಗೆ ಕೊಟ್ಟು ವಿವಾಹ ಮಾಡಿಕೊಟ್ಟನು.
- ಚಂದ್ರಗುಪ್ತನ ಆಸ್ಥಾನಕ್ಕೆ ಸೆಲ್ಯೂಕಸ್‌ನು ಮೆಗಾಸ್ಥನೀಸನನ್ನು ರಾಯಭಾರಿಯಾಗಿ ಕಳುಹಿಸಿದ್ದನು. ಇವನು ಗ್ರೀಕ್ ಭಾಷೆಯಲ್ಲಿ **'ಇಂಡಿಕಾ'** ಗ್ರಂಥ ರಚಿಸಿದನು.
- ರುದ್ರದಾಮನ ಜುನಾಗಡ ಶಾಸನವು ಗುಜರಾತ್ ಚಂದ್ರಗುಪ್ತನಿಂದ

ನೇಮಿಸಿದನು ಎಂದಿದೆ.

- ಚಂದ್ರಗುಪ್ತನ ರಾಜ್ಯವು ಆಗ್ನೇಯಕ್ಕೆ ಪರ್ಶಿಯಾ, ಪೂರ್ವಕ್ಕೆ ಬಂಗಾಳ, ಉತ್ತರಕ್ಕೆ ಕಾಶ್ಮೀರ ಹಾಗೂ ದಕ್ಷಿಣದ ಮೈಸೂರಿನವರೆಗೆ ಗಡಿ ಹೊಂದಿತ್ತು.
- ಸೌರಾಷ್ಟ್ರದಲ್ಲಿ ಸುದರ್ಶನ ಎಂಬ ಜಲಾಶಯವನ್ನು **ಪುಷ್ಯಗುಪ್ತ** ನಿರ್ಮಿಸಿದನೆಂದು **ಗಿರ್ನಾರ್** ಶಾಸನ ತಿಳಿಸಿದೆ.
- ಜೈನ ಸಾಹಿತ್ಯದ ಪ್ರಕಾರ ಚಂದ್ರಗುಪ್ತನು ತನ್ನ ಕೊನೆಯ ದಿನಗಳಲ್ಲಿ ಜೈನಧರ್ಮ ಸ್ವೀಕರಿಸಿ ಭದ್ರಬಾಹುವಿನೊಂದಿಗೆ ಶ್ರವಣಬೆಳಗೊಳಕ್ಕೆ ಬಂದು "ಸಲ್ಲೇಖನ ವ್ರತ" ಕೈಗೊಂಡು ಮೃತನಾದನು.
- ಚಂದ್ರಗುಪ್ತನ ಪ್ರಧಾನಮಂತ್ರಿ ಕೌಟಿಲ್ಯ.

ಕೌಟಿಲ್ಯನ ಅರ್ಥಶಾಸ್ತ್ರ

- **ವ್ಯಾಖ್ಯೆ:-** ಭೂಮಿಯನ್ನು ಪಡೆದು ಪರಿಪಾಲಿಸುವ ಶಾಸ್ತ್ರವೇ ಅರ್ಥಶಾಸ್ತ್ರ. ಈ ಕೃತಿಗೆ ರಾಜದಂಡಶಾಸ್ತ್ರ, ದಂಡನೀತಿ, ಸರ್ಕಾರ ರಚನಾಶಾಸ್ತ್ರ ಎಂಬ ಉಪನಾಮಗಳಿವೆ. ಇದರಲ್ಲಿ 6000 ಶ್ಲೋಕಗಳು, 15 ವಿಭಾಗಗಳು ಹಾಗೂ 180 ಉಪ ವಿಭಾಗಗಳು ಇವೆ.
- ಈ ಕೃತಿಯನ್ನು ಮೈಸೂರಿನ ಓರಿಯಂಟಲ್ ಲೈಬ್ರರಿಯ ಕ್ಯೂರೇಟರ್ ಆಗಿದ್ದ ಶಾಮಶಾಸ್ತ್ರಿಗಳು 1909ರಲ್ಲಿ ಜಗತ್ತಿಗೆ ಪರಿಚಯಿಸಿದರು.
- ಅರ್ಥಶಾಸ್ತ್ರದ ಮೊದಲ 5 ಭಾಗಗಳು ತಂತ್ರ ಅಥವಾ ಆಡಳಿತದ ಬಗ್ಗೆ, 8 ವಿಭಾಗಗಳು ಅವಪ/ ನೆರೆ ರಾಷ್ಟ್ರಗಳೊಂದಿಗಿನ ಸಂಬಂಧ ಇನ್ನುಳಿದ 02 ಭಾಗಗಳು ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸುತ್ತವೆ.
- ಕೌಟಿಲ್ಯನಿಗೆ ವಿಷ್ಣುಗುಪ್ತ, ವಾತ್ಸಾಯನ, ದ್ರಾವಿಡಾಚಾರ್ಯ ಹಾಗೂ ಚಾಣಕ್ಯ ಎಂಬ ಹೆಸರುಗಳಿದ್ದವು.
- ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಪಾಂಡಿತ್ಯ ಪಡೆದ ಕೌಟಿಲ್ಯನ ಕೃತಿಯಾದ ಅರ್ಥಶಾಸ್ತ್ರವು ಸಂಸ್ಕೃತ ಸಾಹಿತ್ಯದಲ್ಲೇ ಅದ್ವಿತೀಯ ವಾದುದು.
- ಕೌಟಿಲ್ಯನನ್ನು 'ಭಾರತದ ಮೆಕೆವಲ್ಲಿ' ಎಂದು ಕರೆಯಲಾಗಿದೆ.

ಸಾಮ್ರಾಜ್ಯ (ಚಕ್ರಾಧಿಪತ್ಯ)

- ಸಾಮ್ರಾಜ್ಯವು 05 ಪ್ರಮುಖ ಸಂಸ್ಥಾನ ಅಥವಾ ಪ್ರಾಂತ್ಯಗಳಾಗಿ ವಿಭಜನೆಯಾಗಿದ್ದವು.

	ಸಂಸ್ಥಾನ	ರಾಜಧಾನಿ
1)	ಉತ್ತರ ಪಥ	– ತಕ್ಷಶಿಲೆ.
2)	ದಕ್ಷಿಣ ಪ್ರಾಂತ್ಯ	– ಸುವರ್ಣಗಿರಿ.
3)	ಮಧ್ಯ ಪ್ರಾಂತ್ಯ (ಮಗಧ)	– ಪಾಟಲೀಪುತ್ರ.
4)	ಪೂರ್ವ ಪ್ರಾಂತ್ಯ (ಅವಂತಿಪುರ)	– ತೋಸಾಲಿ.
5)	ಪಶ್ಚಿಮ ಪ್ರಾಂತ್ಯ	– ಉಜ್ಜೈಯಿನಿಗಳು ರಾಜಧಾನಿಗಳಾಗಿದ್ದವು.

ಕಾಲದಲ್ಲಿ ಪುಷ್ಯಗುಪ್ತನಿಂದ ಹಾಗೂ ಅಶೋಕನ ಕಾಲದಲ್ಲಿ ಯವನರ ತುಷಪನಿಂದ ಆಳಲ್ಪಟ್ಟಿತು.

ಮೆಗಾಸ್ತನೀಸನ ಇಂಡಿಕಾ

ಮೆಗಾಸ್ತಾನೀಸನು ರಾಜನು ಪರ್ಶಿಯನ್ ಮಾದರಿಯ ಆಸ್ಥಾನವನ್ನು ಒಳಗೊಂಡ ಅರಮನೆಯಲ್ಲಿ ವಾಸವಾಗಿರುತ್ತಾನೆ ಎಂದಿದ್ದಾನೆ. ಪಾಟಲೀಪುತ್ರವು ಭಾರತದಲ್ಲೇ ಅತ್ಯಂತ ಶ್ರೇಷ್ಠ ಪಟ್ಟಣವೆಂದಿದ್ದಾನೆ.

ಬಿಂದುಸಾರ (ಕ್ರಿ.ಪೂ 299-273)

- ಚಂದ್ರಗುಪ್ತನ ಉತ್ತರಾಧಿಕಾರಿಯಾಗಿ ಅವನ ಮಗ ಬಿಂದುಸಾರ ಅಧಿಕಾರಕ್ಕೆ ಬಂದನು. ಗ್ರೀಕ್ ದಾಖಲೆಗಳು ಬಿಂದುಸಾರನನ್ನು **"ಅಮಿತ್ರಘಾತ/ಅಮಿತ್ರಖಾಡ"** (ಶತ್ರುನಾಶಕ) ನೆಂದು ಕರೆದಿವೆ.
- ಟಿಬೆಟ್ ಇತಿಹಾಸಕಾರ ತಾರನಾಥನ ಪ್ರಕಾರ ಬಿಂದುಸಾರನು 16 ನಗರಗಳ ರಾಜರು ಮತ್ತು ಮಂತ್ರಿಗಳನ್ನು ಕೌಟಿಲ್ಯನ ಸಹಾಯದಿಂದ ನಾಶಪಡಿಸಿ ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ನಡುವೆ ಸಾಮ್ರಾಜ್ಯ ಸ್ಥಾಪಿಸಿದನು. ಮೈಸೂರು ರಾಜ್ಯದ ಚಿತ್ರದುರ್ಗ ಒಳಗೊಂಡಂತೆ ದಖ್ಖನಿನ ಸ್ವಲ್ಪ ಭಾಗ ಸೇರಿತ್ತು.
- ಪಶ್ಚಿಮ ದೇಶಗಳು, ಗ್ರೀಕರು ಹಾಗೂ ಸಿರಿಯಾದ ದೊರೆ 1ನೇ ಆಂಟಿಯಾಕಸ್ ಜೊತೆ ಒಳ್ಳೆಯ ಸಂಬಂಧವಿಟ್ಟುಕೊಂಡಿದ್ದನು.
- ಒಮ್ಮೆ ಬಿಂದುಸಾರನು ಗ್ರೀಕ್ ದೊರೆಗೆ ಮದ್ಯ, ಅಂಜೂರದ ಹಣ್ಣು ಮತ್ತು ಒರ್ವ ತತ್ವಜ್ಞಾನಿಯನ್ನು ಕಳುಹಿಸಲು ಕೇಳಿದ್ದನು. ಆಂಟಿಕಸ್‌ನು ಮದ್ಯ, ಅಂಜೂರದ ಹಣ್ಣು ಕಳುಹಿಸಿ ಗ್ರೀಕ್ ತತ್ವಜ್ಞಾನಿಗಳು ರಫ್ತು ಸರಕುಗಳಲ್ಲ ಎಂದು ಪ್ರತ್ಯುತ್ತರ ನೀಡಿದ್ದನು.
- ಬಿಂದುಸಾರನು ತನ್ನ ಕೊನೆಯ ದಿನಗಳಲ್ಲಿ ' ಅಜೀವಿಕ ಪಂಥದ ಅನುಯಾಯಿಯಾಗಿದ್ದ. ಈ ಪಂಥದ ಜ್ಯೋತಿಷ್ಯನಾದ **ವತ್ಸ್ಯ** ಬಿಂದುಸಾರನ ಆಸ್ಥಾನದಲ್ಲಿದ್ದನು.

ಅಶೋಕ (ಕ್ರಿ.ಪೂ.268-232)

- ಎಚ್.ಜಿ.ವೇಲ್ಸ್ ರವರು : "ಇತಿಹಾಸ ಬಾಂದಳದಲ್ಲಿ ಎಂದೋ ಮಿನುಗಿ ಅಂದೇ ಮಾಯವಾಗಿರುವ ರಾಜ ಮಹಾರಾಜರುಗಳ ನಡುವೆ ಇಂದಿಗೂ ಬೆಳಗುತ್ತಿರುವ ಧ್ರುವತಾರೆ ಎಂದರೆ ಅಶೋಕ" ಎಂದಿದ್ದಾರೆ.
- ಯುವರಾಜನಾಗಿದ್ದಾಗ ಅಶೋಕನು **ತಕ್ಷಶಿಲೆ** ಮತ್ತು **ಉಜ್ಜೈನಿಗಳ** ರಾಜ್ಯಪಾಲನಾಗಿದ್ದನು. ಬೌದ್ಧ ಕೃತಿಗಳಾದ ದೀಪವಂಶ ಮತ್ತು ಮಹಾವಂಶಗಳು ಅಶೋಕನು ತನ್ನ 99 ಸಹೋದರರನ್ನು ಕೊಂದು ಅಧಿಕಾರಕ್ಕೆ ಬಂದನೆಂದು ತಿಳಿಸುತ್ತವೆ.
- ಬೌದ್ಧ ಮಹಾವಂಶದ ಪ್ರಕಾರ ಅಶೋಕನು ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವುದಕ್ಕೆ ಮೊದಲು ಚಂಡಾಶೋಕನಾಗಿದ್ದ ನಂತರ ಧರ್ಮಾಶೋಕನಾದನೆಂದು ಹಾಗೂ ಅವನ ಆರಂಭಿಕ ಜೀವನದ ಬಗ್ಗೆ ತಿಳಿಸುತ್ತದೆ.

ಪ್ರೀತಿಯ ಮೂಲಕ ವಿಜಯ ಸಾಧಿಸಿದ ನವಯುಗದ ಪ್ರವರ್ತಕ" ಎಂದಿದ್ದಾರೆ.

- ಕಲ್ಹಣನ ರಾಜತರಂಗಿಣಿಯು ಅಶೋಕನು ಕಾಶ್ಮೀರ ಜಯಿಸಿದ್ದನು ಎಂದಿದೆ.

ಕಳಿಂಗ ಯುದ್ಧ (ಕ್ರಿ.ಪೂ.261- 260)

- ಅಶೋಕನು ತನ್ನ 13ನೇ ಬಂಡೆಗಲ್ಲು ಶಾಸನದಲ್ಲಿ ತಾನು ಸಿಂಹಾಸನವೇರಿದ 9ನೇ ವರ್ಷದಲ್ಲಿ ಕಳಿಂಗಾದ ಮೇಲೆ ಆಕ್ರಮಣ ಮಾಡಿದನು ಎಂದಿದೆ. ಈ ಯುದ್ಧದಲ್ಲಿ ವಿಜಯಿಯಾದ ಅಶೋಕನು ಯುದ್ಧದಲ್ಲಾದ ಅಪಾರ ರಕ್ತಪಾತ, ಸಾವು ನೋವುಗಳಿಂದ ಮನಃ ಪರಿವರ್ತನೆ ಹೊಂದಿ ಮುಂದೆಂದೂ ಯುದ್ಧ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದನು.
- ಬಿಂದುಸಾರನು ದಕ್ಷಿಣ ಭಾರತದ ದಂಡಯಾತ್ರೆಯಲ್ಲಿ ವಿಫಲನಾಗಿದ್ದ. ಆದರೆ ಅಶೋಕನು ಆ ಕೆಲಸವನ್ನು ತಾನು ಮಾಡಬೇಕೆಂಬ ಸಂಕಲ್ಪವೇ ಈ ಕಳಿಂಗ ಯುದ್ಧವಾಗಿದೆ.
- **ಯುದ್ಧದ ಪರಿಣಾಮ:** ಅಶೋಕನು "ದಿಗ್ವಿಜಯಕ್ಕಿಂತ ಧರ್ಮ ವಿಜಯವೇ" ಮೇಲು ಎಂಬುದಾಗಿ ಆತನು ಯುದ್ಧಗಳಿಂದ ದೇಶಗಳನ್ನು ಗೆಲ್ಲುವ ಪ್ರತಿಯಾಗಿ ಧರ್ಮಶ್ರದ್ದೆಯಿಂದ ವಿಜಯ ಸಾಧಿಸುವ 'ಧರ್ಮವಿಜಯ ನೀತಿ'ಯನ್ನು ಅನುಷ್ಠಾನಕ್ಕೆ ತಂದನು.
- ಉಪಗುಪ್ತ ಎಂಬ ಸನ್ಯಾಸಿಯಿಂದ ಪ್ರಭಾವಿತನಾದ ಅಶೋಕ ಬೌದ್ಧ ಧರ್ಮಕ್ಕೆ ಮತಾಂತರಗೊಂಡು, ಧರ್ಮಯುದ್ಧ ಕೈಗೊಂಡು ತನ್ನ ಆಳ್ವಿಕೆಯ 21ನೇ ವರ್ಷದಲ್ಲಿ ಬುದ್ಧನ ಜನ್ಮಸ್ಥಳ **'ಲುಂಬಿನಿಯನ್ನು'** ಸಂದರ್ಶಿಸಿದನು.
- ಕಲ್ಹಣನ ರಾಜತರಂಗಿಣಿ ಕಳಿಂಗ ಯುದ್ಧಕ್ಕಿಂತ ಮೊದಲು ಅಶೋಕನು ಶಿವನ ಆರಾಧಕ, ಬೇಟೆಗಾರ, ನಂತರ ಬೌದ್ಧ ಧರ್ಮ ಸ್ವಿಕರಿಸಿದ ಎಂದಿದೆ.
- ಅಶೋಕನು ರಾಜ್ಯ ವಿಸ್ತರಣೆಯಲ್ಲಿ 'ರಾಜಧರ್ಮನೀತಿ' ಜಾರಿಗೆ ತಂದನು.
- ಅಶೋಕನ ಮರಣದ ನಂತರ ರಾಜ್ಯ 2 ಭಾಗಗಳಾದವು. 1) ಪೂರ್ವ ಭಾಗದಲ್ಲಿ ದಶರಥ 2) ದಕ್ಷಿಣದಲ್ಲಿ ಕುನಾಲರು ಆಳ್ವಿಕೆ ನಡೆಸಿದರು.
- ಮಸ್ಕಿ ಶಾಸನವು ಅಶೋಕನನ್ನು **'ಶಾಕ್ಯ ಉಪಾಸಕ'** ಎಂದಿದೆ.
- ಅಶೋಕನ ರಾಜ್ಯವು ಉತ್ತರದಲ್ಲಿ ಕಾಶ್ಮೀರ, ನೇಪಾಳ, ದಕ್ಷಿಣದಲ್ಲಿ ಮೈಸೂರು, ವಾಯುವ್ಯದಲ್ಲಿ ಆಫ್ಘಾನಿಸ್ತಾನ ಹಾಗೂ ಪೂರ್ವದಲ್ಲಿ ಅಸ್ಸಾಂ ಮತ್ತು ಬಂಗಾಳದವರೆಗೆ ಹಬ್ಬಿತ್ತು.

ಅಶೋಕನ ಧಮ್ಮ - ಬೌದ್ಧ ಧರ್ಮಕ್ಕಿಂತ ಹೇಗೆ ಭಿನ್ನ

- ಬಬ್ರು ಶಾಸನವು ಅಶೋಕನ ಧರ್ಮದ ಬಗ್ಗೆ ನಿರ್ಧಿಷ್ಟವಾಗಿ ತಿಳಿಸುತ್ತದೆ. ಅಶೋಕನ ಧರ್ಮ್ಮದಲ್ಲಿ ಬುದ್ಧನ ಮತ್ತು ಆರ್ಯ ಸತ್ಯಗಳಾಗಲೀ, ಅಷ್ಟಾಂಗ ಮಾರ್ಗಗಳಾಗಲೀ, ಬುದ್ಧನ ಅಸದೃಶ್ಯ, [illegible] ಕಂಡುಬರುವುದಿಲ್ಲ, ಬದಲಿಗೆ ಅದು ಸಮಾಜದಲ್ಲಿನ ಬಣ್ಣೀಯ ಸಂಘರ್ಷಗಳನ್ನು ವಿವರಿಸುವ, ಏಕತೆ ಮತ್ತು ಶಾಂತಿ ಕಾಪಾಡುವುದಾಗಿತ್ತು.
- ಇದರಿಂದ ಅಶೋಕನ ಧರ್ಮವು ಬೌದ್ಧ ಧರ್ಮಕ್ಕಿಂತ ವಿಭಿನ್ನವಾಗಿತ್ತು. ಅದು ಬೌದ್ಧ ಧರ್ಮವಾಗಿರದೆ, ಆತನದೇ ಆದ ನೈತಿಕತೆಯ ಧರ್ಮವಾಗಿತ್ತು. ಅದು ಎಲ್ಲಾ ಧರ್ಮಗಳಿಗೂ ಹೊಂದಿಕೆಯಾಗುವ ನೈತಿಕ ನಡಾವಳಿ ಒಳಗೊಂಡಿತ್ತು.
- ಅಶೋಕನ ಧಮ್ಮದ ಜಾರಿಯ ಉದ್ದೇಶ ಸಾಮಾಜಿಕ ಹೊಣೆಗಾರಿಕೆ, ಒಬ್ಬನ ಕೂಡಿ ಇನ್ನೊಬ್ಬನ ನಡತೆಗಳು, ಬಹಳ ಮಹತ್ವ ಪೂರ್ಣವಾದವೆಂದು ಪರಿಗಣಿಸಲಾಗದ ಒಂದು ಮನೋಭಾವನೆ ಸೃಷ್ಟಿಸುವುದು ವಿಶಾಲವಾದ ಸಾಮ್ರಾಜ್ಯವನ್ನು ಅಖಂಡವಾಗಿ ಒಟ್ಟಾಗಿಡುವುದುದಾಗಿತ್ತು.
- ಅಶೋಕನು ಧರ್ಮ ವಿಜಯದ ಮೂಲಕ ತಮಿಳು ಹಾಗೂ ಸಿಂಹಳದ ದೊರೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು. ಗ್ರೀಕ್ ದೊರೆಗಳಾದ ಸಿರಿಯಾದ 2ನೇ ಆಂಟಿಕಸ್, ಈಜಿಪ್ಟಿನ 2ನೇ ಟಾಲಮಿ, ಮ್ಯಾಸಿಡೊನಿಯಾದ ಆಂಟಿಗೋನಾಸ್, ಕೈರೋದ ಮಾರ್ಗನ್ ಮತ್ತು ಎಪಿರಸ್‌ನ ಅಲೆಗ್ಸಾಂಡರ್ ನೊಂದಿಗೆ ರಾಜತಾಂತ್ರಿಕ ಬಾಂಧವ್ಯ ಹೊಂದಿದ್ದನು.
- ಅಶೋಕನ ಧರ್ಮವು ಹೊಸ ಧರ್ಮವಾಗಿರದೆ ಹೊಸ ಜೀವನ ವಿಧಾನವಾಗಿತ್ತು. ಅದು ಅಹಿಂಸಾ ತತ್ವದ ಆಧಾರದ ಮೇಲೆ ರಚಿತವಾಗಿತ್ತು.
- **11ನೇ ಬಂಡೆಗಲ್ಲು ಶಾಸನದಲ್ಲಿ** ಅಶೋಕನು 'ಮಂಗಲ' (ಹುಟ್ಟು, ವಿವಾಹ, ಪ್ರವಾಸ ಇತರೆ) ಕಾರ್ಯಗಳನ್ನು ಮಾಡುವುದು ನಿಷ್ಪ್ರಯೋಜಕ ಎಂದಿದ್ದಾನೆ. ಆದರೆ 'ಧರ್ಮ ಮಹಾಮಂಗಲ (ಗುಲಾಮರು ಮತ್ತು ಸೇವಕರನ್ನು ಸರಿಯಾಗಿ ನಡೆಸಿಕೊಳ್ಳುವುದು, ಶೈವರ ಬಗ್ಗೆ ಗೌರವ, ಅಹಿಂಸೆ) ಪ್ರಯೋಜನಕಾರಿ ಎಂದಿದ್ದಾನೆ.

ಅಶೋಕನ ಪರಧರ್ಮ ಸಹಿಷ್ಣತೆ.

- **1ನೇ ಬಂಡೆಗಲ್ಲು ಶಾಸನದಲ್ಲಿ** ಎಲ್ಲಾ ಮತಗಳಿಗೆ ಗೌರವ ನೀಡುತ್ತೇನೆ ಎಂದಿದ್ದಾನೆ.
- **12ನೇ ಬಂಡೆಗಲ್ಲು ಶಾಸನ :** ಅಶೋಕನ ಧಾರ್ಮಿಕ ಮನೋಭಾವನೆ ಬಗ್ಗೆ ತಿಳಿಸುತ್ತದೆ.
- ಪರಧರ್ಮ ಸಹಿಷ್ಣತೆಯ ಬಗ್ಗೆ ಮೊಟ್ಟ ಮೊದಲು ಅಶೋಕನು ಶಾಸನ ಕೆತ್ತಿಸಿದನು.
- ಅಶೋಕನು **"ತಾನು ದೇವತೆಗಳ ಭಕ್ತ"** ಎಂದು ಹೇಳಿಕೊಂಡಿದ್ದಾನೆ.
- ನಿರ್ಗ್ರಂಥರು ಎಂದರೆ : ಜೈನರು ಸೇರಿದಂತೆ ಎಲ್ಲಾ ಧರ್ಮಗಳನ್ನು ರಕ್ಷಿಸುವ ಹಾಗೆ ಅಶೋಕನು ತನ್ನ ಧರ್ಮ ಮಹಾಮಾತ್ಯವಿಗೆ ತಿಳಿಸಿದ್ದನು.
- **"ಎಲ್ಲಾ ಪ್ರಜೆಗಳು ನನ್ನ ಮಕ್ಕಳು"**, "ಸರ್ವಲೋಕದ ಹಿತವೇ ನನ್ನ ಕರ್ತವ. ಅದಕಿಂತ ಮಿಗಿಲಾದ ಕರ್ತವ.ವೇ ಇಲ". ಎಂದು

- ಅಜೀವಿಕರಿಗೆ ಗಯಾದ ಬಳಿ ಬಂಡೆಗಲ್ಲು ಕೊರೆಯಿಸಿ ಆಶ್ರಯ ನೀಡಿದನು.
- ಅಶೋಕನಿಗೆ ಆಡಳಿತದಲ್ಲಿ ನೆರವು ನೀಡಿದ ರಾಣಿ **ಕಾರುವಾಕಿ.**
- ಪ್ರಪಂಚದಲ್ಲೇ ಮೊಟ್ಟ ಮೊದಲ ಬಾರಿಗೆ "ಕಲ್ಯಾಣ ರಾಜ್ಯವನ್ನು ಸ್ಥಾಪಿಸಿದ ಕೀರ್ತಿ" ಅಶೋಕನಿಗೆ ಸಲ್ಲುತ್ತದೆ.

ಅಶೋಕನ ಧರ್ಮ ಪ್ರಚಾರ

- ಅಶೋಕನ ಕಾಲದಲ್ಲಿ 3ನೇ ಮಹಾಬೌದ್ಧ ಸಭೆ ಪಾಟಲೀಪುತ್ರದಲ್ಲಿ ಸಮಾವೇಶಗೊಂಡು ಬರ್ಮ, ಸಿಲೋನ್, ಸುಮಾತ್ರ, ಮುಂತಾದ ದೇಶಗಳಿಗೆ ಧರ್ಮ ಪ್ರಚಾರಕರನ್ನು ಕಳುಹಿಸಲು ನಿರ್ಧರಿಸಲಾಯಿತು. **'ಥೇರವಾದಿಗಳು'** ತಮ್ಮ ಪಂಥವೇ ನಿಜವಾದ ಬುದ್ಧನ ಪಂಥವೆಂದು **'ಕಥಾವಸ್ತು'** ಆಧರಿಸಿ ಧರ್ಮ ಪ್ರಚಾರ ಮಾಡಲು ತೀರ್ಮಾನಿಸಿದರು.
- 13ನೇ ಬಂಡೆಗಲ್ಲು ಶಾಸನವು ಬೌದ್ಧ ಧರ್ಮ ಪ್ರಚಾರ ಮಾಡಲು **"ಮಾಹಾಮಾತ್ರ"**ರೆಂಬ ವಿಶೇಷ ಅಧಿಕಾರಿಗಳನ್ನು ನೇಮಿಸಿದನು. ಇವರು ಕೇವಲ ಬೌದ್ಧ ಧರ್ಮದವರು ಮಾತ್ರವಾಗಿರದೆ ಎಲ್ಲಾ ಧರ್ಮದವರು ನೇಮಿತರಾಗಿದ್ದರು ಎಂದಿದೆ.
- 12ನೇ ಬಂಡೆಗಲ್ಲು ಶಾಸನವು ಸ್ತ್ರೀ ಧರ್ಮ ಮಹಾಮಾತ್ರರು ನೇಮಕವಾಗಿದ್ದರೆಂದಿದೆ.
- ಮಹಾವಂಶವು ಬೌದ್ಧ ಧರ್ಮ ಪ್ರಚಾರಕ್ಕಾಗಿ ಅಶೋಕನು ಬೌದ್ಧ ಭಿಕ್ಷುಗಳನ್ನು ನೇಮಿಸಿದ್ದನೆಂದು ತಿಳಿಸಿದೆ. ಅಲ್ಲದೆ ಬೌದ್ಧ ಪ್ರಚಾರಕ್ಕಾಗಿ ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರರನ್ನು ಸಿಂಹಳಕ್ಕೆ ಕಳುಹಿಸಿದ್ದನು.
- ಬೌದ್ಧ ಧರ್ಮ ಪ್ರಚಾರಕ್ಕೆ ಸಿಲೋನಿನ ರಾಜ ತಿಸ್ಯನ ಕೋರಿಕೆಯ ಮೇರೆಗೆ ತನ್ನ ಮಕ್ಕಳನ್ನು ಕಳುಹಿಸಿದನು. ಶ್ರೀಲಂಕಾದ ಅನುರಾಧಪುರದಲ್ಲಿರುವ **'ಬೋಧಿವೃಕ್ಷ'** ವು ಅಶೋಕನು ಕಳುಹಿಸಿದ ವೃಕ್ಷದ ಕೊಂಬೆಯಾಗಿದ್ದು ಇದು ಪ್ರಪಂಚದಲ್ಲೇ ಅತಿ ಪ್ರಾಚೀನವಾದ ಬೋಧಿ ವೃಕ್ಷವಾಗಿದೆ.
- ಸಿಲೋನಿನ ವೃತ್ತಾಂತಗಳು ಸಂಘವು ಸಂಘಟಿಸಿದ ವಿವಿಧ ಧರ್ಮ ಪ್ರಚಾರಕ ಸಂಘಟನೆಗಳ ಪಟ್ಟಿಯನ್ನು ನೀಡುತ್ತವೆ.
- ಸಾರನಾಥ ಮತ್ತು ಸಾಂಚಿ ಶಾಸನಗಳು ಅಶೋಕನು ಬೌದ್ಧ ಧರ್ಮದ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದನೆಂದು ತಿಳಿಸುತ್ತವೆ.
- ಅಶೋಕನ ಧರ್ಮ ಯಾತ್ರಾ ಸ್ಥಳಗಳು ಲುಂಬಿನಿ, ಸಾರನಾಥ, ಶ್ರಾವಸ್ತಿ, ಕುಶೀನಾರವಾಗಿದ್ದವು. ಬೌದ್ಧ ಬಿಕ್ಷುಗಳ ಅನುಕೂಲಕ್ಕಾಗಿ ಅಶೋಕನು ಬೌದ್ಧ ವಿಹಾರ ಸಂಘರಾಮ ಮತ್ತು ಸ್ತೂಪಗಳನ್ನು ಕಟ್ಟಿಸಿದನು.
- ಬೌದ್ಧ ವೃತ್ತಾಂತಗಳ ದೋಷವೆಂದರೆ ಗ್ರೀಕ್ ದೇಶದಲ್ಲಿ ಬೌದ್ಧ ಧರ್ಮದ ಪ್ರಚಾರದ ಬಗ್ಗೆ ಏನನ್ನು ಹೇಳುವುದಿಲ್ಲ.

ಅಶೋಕನ ಶಾಸನಗಳು

ಓದಲಾಗಿರುವ ಅತಿ ಪ್ರಾಚೀನ ಲಿಖಿತ ದಾಖಲೆಗಳೇ ಅಶೋಕನ ಶಾಸನಗಳು. ಇವನನ್ನು **"ಶಿಲಾ ಶಾಸನಗಳ ಪಿತಾಮಹ"**ಎಂದು ಕರೆಯಲಾಗಿದೆ.

- ಅಶೋಕನ ಶಿಲಾ ಶಾಸನಗಳನ್ನು ಮೊದಲಿಗೆ ಜೇಮ್ಸ್ ಪ್ರಿನ್ಸೆಪ್‌ರು (1837) ಓದಿದರು. ಇವು ಬ್ರಾಹ್ಮೀ, ಪ್ರಾಕೃತ, ಖರೋಷ್ಠಿ ಮತ್ತು ಗ್ರೀಕ್ ಭಾಷೆಯಲ್ಲಿವೆ.
- **ಖರೋಷ್ಠಿ ಲಿಪಿ :–** ಬಲ ಭಾಗದಿಂದ ಎಡಕ್ಕೆ ಬರೆಯಲಾಗುತ್ತಿತ್ತು.
- **ಬ್ರಾಹ್ಮೀಲಿಪಿ :–** ಚಿತ್ರ ಮತ್ತು ಅಕ್ಷರಗಳಿಂದ ಕೂಡಿದ ಲಿಪಿಯಾಗಿದೆ.
- ಭಾರತದ ಶಾಸನಗಳು ಪ್ರಾಕೃತ ಮತ್ತು ಬ್ರಾಹ್ಮೀ ಲಿಪಿಯಲ್ಲಿವೆ
- ವಾಯುವ್ಯ ಭಾರತದ ಶಾಸನಗಳು ಅರಾಮಿಕ್, ಗ್ರೀಕ್ ಮತ್ತು ಖರೋಷ್ಠಿ ಲಿಪಿಯಲ್ಲಿವೆ.

1) **ಬಬ್ರುಶಾಸನ (ರಾಜಸ್ಥಾನ):** ಅಶೋಕನು ಬೌದ್ಧ ಧರ್ಮಕ್ಕೆ ಮತಾಂತರವಾದ ಬಗ್ಗೆ ತಿಳಿಸುತ್ತದೆ.
2) **ಗಿರ್ನಾರ್ ಶಾಸನ (ಗುಜರಾತ್):–** ಮನುಷ್ಯರಿಗೆ ಪ್ರಾಣಿಗಳಿಗೆ ವೈದ್ಯಕೀಯ ಸೌಲಭ್ಯ, ಬಾವಿಗಳು ತೆಗಿಸಿದ್ದು ಹಾಗೂ ಸಾಲು ಮರಗಳ ನಡೆಸಿದ್ದರ ಬಗ್ಗೆ ತಿಳಿಸುತ್ತದೆ. ಜೊತೆಗೆ ಸೌರಾಷ್ಟ್ರದಲ್ಲಿ ಸುದರ್ಶನ ಕೆರೆಯನ್ನು ಪುಷ್ಯಗುಪ್ತನು ಕಟ್ಟಿಸಿದನೆಂದಿದೆ.
3) **ತೋಪ್ರತುಂಟ ಶಾಸನ (ದೆಹಲಿ):–** 1837 ರಲ್ಲಿ ಜೇಮ್ಸ್ ಪ್ರಿನ್ಸೆಪ್ ಓದಿದರು. ಇದನ್ನು ಫಿರೋಜ್ ಷಾ ತುಘಲಕ್‌ನು ಫಿರೋಜ್‌ಬಾದ್‌ಗೆ ಕೊಂಡೊಯ್ದು ತನ್ನ ಅರಮನೆ ಮೇಲೆ ಸ್ಥಾಪಿಸಿದನು.
4) **ಸಾಂಚಿ ಸ್ತಂಭ ಶಾಸನ:–** ಇದರಲ್ಲಿ 4 ತಲೆಯುಳ್ಳ ಸಿಂಹ ಲಾಂಛನವಿದೆ.
5) **ರುಮಿಂಡೈ ಶಾಸನ (ನೇಪಾಳ ತರೈನ್):** ಇದು ಬುದ್ಧನ ಜನನದ ಬಗ್ಗೆ ತಿಳಿಸುತ್ತದೆ.
6) **ಗುಜರ್ರಾ ಶಾಸನ (ಮಧ್ಯಪ್ರದೇಶ):–** ಇದು ಅಶೋಕನ ಪೂರ್ಣ ಹೆಸರು ಮತ್ತು ಬಿರುದುಗಳನ್ನು ತಿಳಿಸುತ್ತದೆ.
7) **ಮಸ್ಕಿ ಶಾಸನ:–** ಬಿ.ಸಿ. ಸೀಡ್ ರವರು 1915ರಲ್ಲಿ ಶೋಧಿಸಿದರು. ಇದು ಅಶೋಕನನ್ನು 'ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ' ಎಂದಿದೆ.
8) **ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟ್ಟಿಂಗ ರಾಮೇಶ್ವರ ಶಾಸನಗಳು:–** 1892 ರಲ್ಲಿ ಬಿ.ಎಲ್. ರೈಸ್ ಶೋಧಿಸಿದರು.
9) **ಗವಿಮಠ, ಪಾಲ್ಕಿಗೊಂಡ ಶಾಸನಗಳು:–** ಇವನ್ನು 1931ರಲ್ಲಿ ಎನ್.ಬಿ ಶಾಸ್ತ್ರಿಯವರು ಶೋಧಿಸಿದರು.
10) **ಗುಜರ್ರಾ ಶಾಸನ (ಮಧ್ಯಪ್ರದೇಶ):–** ಇದನ್ನು ಬಿ.ಸಿ.ಚಬ್ರರವರು ಕಂಡುಹಿಡಿದರು. ಇದು ಅಶೋಕನ ಪೂರ್ಣ ಹೆಸರು, ಬಿರುದು ಎಲ್ಲವನ್ನು ಒಳಗೊಂಡಿರುವ ಏಕೈಕ ಶಾಸನವಾಗಿದೆ.
11) **ಅಲಹಾಬಾದ್ ಕೋಸಂ ಸ್ತಂಭ ಶಾಸನ:–** ಇದು ಅಲಹಾಬಾದ್

ಜಹಾಂಗೀರನ ಶಾಸನ. ಈ ಶಾಸನಗಳ ಪಂಕ್ತಿಗಳ ನಡುವೆ ನಾಗರ ಶೈಲಿಯಲ್ಲಿ ರಚಿಸಿರುವ ದಾಖಲೆಗಳಾಗಿವೆ.

12) **ಸಾಂಚಿ ಸ್ತಂಭ ಶಾಸನ (ಮಧ್ಯಪ್ರದೇಶ):**– ಸಾಂಚಿ ಸ್ತೂಪದ ದಕ್ಷಿಣದ ಹೆಬ್ಬಾಗಿಲ ಬಳಿಯಿದೆ.

13) **ಸಾರನಾಥ ಸ್ತಂಭ ಶಾಸನ:**– ಎಫ್.ಓ ಓಯರ್ಟರ್ ರವರು ಶೋಧಿಸಿದರು. ಇದರ ಮೇಲೆ "ಧರ್ಮಚಕ್ರವಿದೆ".

14) **ನೀಲಗಾರ್ ಸ್ತಂಭ ಶಾಸನ:**– ಈ ಸ್ತಂಭವನ್ನು "ಭೀಮಸೇನನ ಧೂಮಕೊಳ" ಎನ್ನುವರು.

15) **ಗುಹಾ ಶಾಸನಗಳು(ಗಯಾ–ಬಾರಾಬರ್ ಬೆಟ್ಟ ಪ್ರದೇಶ):**– ಬಾರಾಬರ್ ನಾಗಾರ್ಜುನದಲ್ಲಿ ಮೂರು ಗುಹೆಗಳಿದ್ದು, ಒಂದೊಂದು ಗುಹೆಯಲ್ಲಿ ಅಶೋಕನ ಮೊಮ್ಮಗ ದಶರಥ ದೇವನಾಂಪ್ರಿಯ ಶಾಸನಗಳಿವೆ. ಧಾರ್ಮಿಕ ಸಹಿಷ್ಣುತೆಯ ಸೂಚಕವಾಗಿವೆ.

16) **ತರಾಯ್ ಸ್ತಂಭ ಶಾಸನ:**– ಅಶೋಕನ ಬೌದ್ಧ ಧರ್ಮದ ಬಗೆಗಿನ ಸೂಚಕವಾಗಿದೆ.

ಅಶೋಕನ ಉತ್ತರಾಧಿಕಾರಗಳು

- ಜೈನ ಪುರಾಣ ಮತ್ತು ಬೌದ್ಧ ಸಾಹಿತ್ಯಗಳ ಪ್ರಕಾರ ಅಶೋಕನ ಒಬ್ಬ ಮಗನಾದ **ಜಲೋಕನು** ಕಾಶ್ಮೀರದಲ್ಲಿ ಆಳಿದರೆ, ಮತ್ತೊಬ್ಬ ಮಗ **ಕುಣಾಲನು** ಪಾಟಲೀಪುತ್ರದಲ್ಲಿ ಆಳಿದರು ಎಂದಿವೆ.
- ತದ ನಂತರ ಕುಣಾಲನ ಮಗನಾದ ದಶರಥ, ನಂತರ ಅವನ ಸೋದರ ಸಂಪ್ರತಿ ಉತ್ತರಾಧಿಕಾರಿಯಾದರು.
- ಮೌರ್ಯರ ಕೊನೆಯ ದೊರೆಯಾದ **'ಬೃಹದ್ರಥ'**ನನ್ನು ಶುಂಗರ ದೊರೆ **ಪುಶ್ಯಮಿತ್ರಶುಂಗನು** ಕೊಲೆಗೈದನೆಂದು ಬಾಣ ಕವಿಯು ತಿಳಿಸಿದ್ದಾನೆ.
- ಕ್ರಿಪೂ 3ನೇ ಶತಮಾನದ ಕೊನೆಯ ಹೊತ್ತಿಗೆ "ಭಾರತದ ಸಾಮ್ರಾಟ" ಎಂಬ ಬಿರುದು ಹೊಂದಿದ **'ಸಭಾಗಸೇನ'** ರಾಜನ ಆಳ್ವಿಕೆಗೆ ಗಾಂಧಾರ ಒಳಗೊಂಡ ಕಾಬೂಲ್ ಪ್ರದೇಶ ಒಳಪಟ್ಟಿತ್ತು.
- ಅಶೋಕನು ದುರಾಡಳಿತ ತಡೆಗಟ್ಟಲು ಪಂಚವಾರ್ಷಿಕ ಮತ್ತು ತ್ರೈವಾರ್ಷಿಕ ಅನುಸಂಯಾನ ಹಾಗೂ ಮಹಾಮಾತ್ರಿಕ ಯಾತ್ರೆಗಳನ್ನು ಸಂಘಟಿಸಿದ್ದನು.

ಮೌರ್ಯರ ಕಾಲದ ಆಡಳಿತ

- ಕೌಟಿಲ್ಯನ ಅರ್ಥಶಾಸ್ತ್ರವು ಮೌರ್ಯರ ಆಡಳಿತದ ಬಗ್ಗೆ ಮಾಹಿತಿ ನೀಡುತ್ತದೆ. ಕೌಟಿಲ್ಯನು 18 ತೀರ್ಥಗಳೆಂಬ ಇಲಾಖೆಗಳನ್ನು 27 ಅಧ್ಯಕ್ಷರೆಂಬ ಅಧಿಕಾರ ಪಟ್ಟಿಯನ್ನು ನೀಡುತ್ತಾನೆ.
- ಮೌರ್ಯರ ಆಡಳಿತದ ಪ್ರಮುಖ ಲಕ್ಷಣವೆಂದರೆ **'ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು'** ಭಾರತದಲ್ಲಿ ಪ್ರಥಮ ಬಾರಿಗೆ ಸ್ಥಾಪಿಸಿದರು.

ಮೌರ್ಯರ ಕಾಲದ ಪ್ರಮುಖ ಅಧಿಕಾರಿಗಳು

1) ಮಹಾಮಾತ್ಯಸ –ಪ್ರಧಾನಮಂತ್ರಿ
2) ಅಮಾತ್ಯ – ನ್ಯಾಯಾಂಗ ಅಧಿಕಾರಿ
4) ಘನ್ಯಾಧ್ಯಕ್ಷ – ವಾಣಿಜ್ಯ ಅಧೀಕ್ಷಕ
5) ನಾವಾಧ್ಯಕ್ಷ – ಹಡಗುಗಳ ಅಧೀಕ್ಷಕ
6) ಸಮರ್ಥ – ಕಂದಾಯ ಸಂಗ್ರಹಣೆ
7) ಸನ್ನಿದಾತ –ಮುಖ್ಯ ಖಜಾನೆ ಅಧಿಕಾರಿ
8) ರಜ್ಜುಕ – ನ್ಯಾಯಾಂಗ ಆಡಳಿತ
9) ಸಂಸ್ಥಾಧ್ಯಕ್ಷ – ಮಾರುಕಟ್ಟೆ ಮೇಲ್ವಿಚಾರಕ
10) ಪೌತಾಧ್ಯಕ್ಷ – ತೂಕ ಮತ್ತು ಅಳತೆಗಳ ಮೇಲ್ವಿಚಾರಕ
11) ಶುಲ್ಕಧ್ಯಕ್ಷ – ಸುಂಕಗಳ ಮೇಲ್ವಿಚಾರಕ
12) ಅಕಾರಾಧ್ಯಕ್ಷ – ಗಣಿಗಳ ಮೇಲ್ವಿಚಾರಕ
13) ಲೋಹಾಧ್ಯಕ್ಷ – ಕಬ್ಬಿಣದ ಮೇಲ್ವಿಚಾರಕ
14) ಗುದ ಪುರುಷ – ಗೂಢಾಚಾರಿಗಳು
15) ಸೂತ್ರಾಧ್ಯಕ್ಷ – ಬಟ್ಟೆ ಮತ್ತು ನೇಕಾರರ ಮೇಲ್ವಿಚಾರಕ
16) ದುರ್ಗಪಾಲ – ಕೋಟೆ ಅಧೀಕ್ಷಕ
17) ಅಂತಃಪಾಲ – ಗಡಿನಾಡ ರಾಜ್ಯಪಾಲ
18) ಪ್ರತಿಹಾರ – ಅರಮನೆ ರಕ್ಷಕ
19) ಪೌರ – ರಾಜಧಾನಿಯ ರಾಜ್ಯಪಾಲ
20) ಸಮಹರತೃ – ಜನಪದಗಳ ಅಧಿಕಾರಿ
21) ಅಗ್ರನೋಮೊಯ್–ಜಿಲ್ಲಾಧಿಕಾರಿಗಳು (ರಜ್ಜುಕರೆಂದು ಕರೆಯುವರು)
22) ಅಸ್ಟ್ರನೊಮೋಯ್ – ಕಮಿಷನರ್ಸ್ ಎಂಬ ಅಧಿಕಾರಿ ವರ್ಗವಿತ್ತು.

ನ್ಯಾಯಾಡಳಿತ

- ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ಮಹಾಮಾತ್ರರು ಮತ್ತು ರಜ್ಜುಕರೆಂಬ ನೇತೃತ್ವದಲ್ಲಿ ವಿಶೇಷ ನ್ಯಾಯಸ್ಥಾನಗಳಿದ್ದವು.
- ಮಹಾಮಾತ್ರರು ಮೌರ್ಯರ ಕಾಲದ ಮುಖ್ಯ ನ್ಯಾಯವಾದಿಗಳಾಗಿದ್ದು, ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ಧರ್ಮಬೋಧನೆ ಜೊತೆ ನ್ಯಾಯ ತೀರ್ಮಾನಿಸುತ್ತಿದ್ದರು.
- ನ್ಯಾಯಾಡಳಿತದ 2 ಮಾರ್ಗಗಳು:

1. **ಧರ್ಮಸ್ಥೆಯ** :– ವಿವಾಹ, ವರದಕ್ಷಿಣೆ, ಸಾಲ ವ್ಯವಹಾರ, ಪಿತ್ರಾರ್ಜಿತ ಆಸ್ತಿ ಇತ್ಯಾದಿಗಳ ವಿಚಾರಣೆ.
2. **ಕಂಠಕ ಶೋಧ:**– ಕಳ್ಳತನ, ದರೋಡೆ, ಕೊಲೆ, ಕ್ರಿಮಿನಲ್ ಕೇಸ್ ಇತ್ಯಾದಿಗಳ ವಿಚಾರಣೆ.

- ರಾಜಕೀಯ ಅಪರಾಧವೆಸಗಿದ ಶ್ರೀಮಂತರ ಮೇಲೆ ಅನ್ಯಾಯ ತೆರಿಗೆಗಳನ್ನು ಹೇರಲಾಗುತ್ತಿತ್ತು.
- **ಕೂಟಯುದ್ಧ** (ವಿಶ್ವಾಸಘಾತುಕ ಯುದ್ಧ):– ಭಾರತೀಯ ಸೈನಿಕರು ತುರ್ತು ಸಂದರ್ಭಗಳಲ್ಲಿ ಮಾಡುತ್ತಿದ್ದರು.
- ಮೌರ್ಯರು ಜನಗಣತಿಯನ್ನು ಜಾರಿಗೊಳಿಸಿದರರಲ್ಲಿ ವಿಶ್ವದಲ್ಲಿ **2 ನೇಯವರು.**

ಆಡಳಿತದ ವಿಭಾಗಗಳು & ಅಧಿಕಾರಿಗಳು

1. **ಪ್ರಾಂತ್ಯ** – ಕುಮಾರ (ರಾಜ್ಯಪಾಲ, ರಾಜನ ಮಕ್ಕಳು)
2. **ಆರ್ಯಪುತ್ರ** – ರಾಜ್ಯಪಾಲರು, ರಾಜ ಕುಟುಂಬದವರು
3. **ಜಿಲ್ಲೆ** – ಪ್ರಾದೇಶಿಕ (ಕಾನೂನು ವ್ಯವಸ್ಥೆ ಮತ್ತು ಕಂದಾಯ ವಸೂಲಿ) ಅಧಿಕಾರಿ.
4. **ರಜ್ಜುಕ** – ಗ್ರಾಮಾಡಳಿತ ಮತ್ತು ನ್ಯಾಯ ವ್ಯವಸ್ಥೆಯ ಮೇಲ್ವಿಚಾರಣೆ
5. **ಯುಕ್ತ** – ಸಚಿವಾಲಯ ಲೆಕ್ಕಪತ್ರ, ಜಿಲ್ಲಾ ಮಟ್ಟದ ಅಧೀನ ಕಂದಾಯಾಧಿಕಾರಿ.
6. **ಗ್ರಾಮಗಳ ಗುಂಪು** – ಸ್ಥಾನಿಕ (ತೆರಿಗೆ ಸಂಗ್ರಹಣೆ) ಗೋಪ (ಲೇಖಕ) ಅಧಿಕಾರಿ.
7. **ಗ್ರಾಮ** – ಗ್ರಾಮಿಕ (ಜನರಿಂದ ನೇರವಾಗಿ ಆಯ್ಕೆ) ಅಧಿಕಾರಿ.
8. **ಗ್ರಾಮವೃದ್ಧ**– ಗ್ರಾಮಿಕನಿಗೆ ನೆರವಾಗುತ್ತಿದ್ದ ಗ್ರಾಮದ ಹಿರಿಯರು.

ಪ್ರಮುಖ ಮಹಾಮಾತ್ತರು

1. ವಾಹರಿಕ ಮಹಾಮಾತ್ತಾ – ನ್ಯಾಯಾಂಗಾಧಿಕಾರಿ
2. ಸಬ್ಬತ್ತಕಾ ಮಹಾಮಾತ್ತಾ – ಮುಖ್ಯಮಂತ್ರಿ
3. ದೀನ್‌ಮಾಪಕ ಮಹಾಮಾತ್ತಾ – ಮೌಲ್ಯಮಾಪನ ಅಧಿಕಾರಿ
4. ದಮ್ಮ ಮಹಾಮಾತ್ತಾ – ಧರ್ಮಾಧಿಕಾರಿ ಎಂಬವವರಿದ್ದರು.

ಮೌರ್ಯರ ನಗರಾಡಳಿತ

- ಪಾಟಲೀಪುತ್ರದ ನಗರಾಡಳಿತವನ್ನು 5 ಸದಸ್ಯರುಗಳುಳ್ಳ 6 ಉಪಸಮಿತಿಗಳು ನೋಡಿಕೊಳ್ಳುತ್ತಿದ್ದರು.
- **1 ನೇ ಸಮಿತಿ** – ನಗರದ ಕೈಗಾರಿಕೆಗಳ ಮೇಲ್ವಿಚಾರಣೆ.
- **2ನೇ ಸಮಿತಿ** – ವಿದೇಶಿ ಪ್ರವಾಸಿಗರ ಯೋಗಕ್ಷೇಮ.
- **3ನೇ ಸಮಿತಿ** – ಜನನ ಮತ್ತು ಮರಣಗಳ ದಾಖಲೆ.
- **4ನೇ ಸಮಿತಿ** – ವ್ಯಾಪಾರ, ವಾಣಿಜ್ಯ ಚಟುವಟಿಕೆ.
- **5ನೇ ಸಮಿತಿ** – ಸಿದ್ಧ ವಸ್ತುಗಳ ಮೇಲ್ವಿಚಾರಣೆ.
- **6ನೇ ಸಮಿತಿ** – ಮಾರಾಟದ ತೈತ್ ಎಂಬ 1/10 ಭಾಗ ತೆರಿಗೆ ವಸೂಲಿ.

ಪ್ರಾಂತೀಯ ಸರ್ಕಾರ

- ಪ್ರಾಂತ್ಯಗಳನ್ನು ಅಹರ, ವಿಷಯ ಮತ್ತು ಪ್ರದೇಶಗಳೆಂದು ವಿಭಾಗಿಸಲಾಗಿತ್ತು.
- ರಾಜರ ಪ್ರತಿನಿಧಿಗಳನ್ನು **ಕುಮಾರ/ರಾಷ್ಟ್ರೀಯ/ಪ್ರಾದೇಶಿಕ** ಎನ್ನುತ್ತಿದ್ದರು. ಅನೇಕ ಪ್ರಾಂತ್ಯಗಳನ್ನು ಪ್ರಾಂತ್ಯಾಧಿಕಾರಿ ರಾಜನೆಂಬ ಬಿರುದನ್ನು ಪಡೆದಿರುತ್ತಿದ್ದ. ಈ ಬಿರುದು ಸಾಮಂತ ಪದವಿ/ ಊಳಿಗಮಾನ್ಯ ಪದ್ಧತಿಯನ್ನು ಸೂಚಿಸುವುದಾಗಿದೆ.

ಕಂದಾಯ & ಹಣಕಾಸು ವ್ಯವಸ್ಥೆ

- **ಭಾಗ** – ಭೂ ಕಂದಾಯ
- **ಕರ** – ಹಣ್ಣು & ಹೂದೋಟದ ಮೇಲಿನ ತೆರಿಗೆ
- **ತೈತ್** – ಮಾರಟವಾದ ಸರಕುಗಳ ಮೇಲಿನ 1/10 ಭಾಗ ತೆರಿಗೆ
- **ಪಿಂಡಕರ್** – ಗ್ರಾಮ ಗುಂಪುಗಳ ತೆರಿಗೆ
- ಗುಲಾಮ ಪದ್ಧತಿ ರೂಢಿಯಲ್ಲಿತ್ತು.
- ನೀರಾವರಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಆಗ್ರೋನೊಮೋಯ್ ಅಥವಾ ರಜ್ಜುಕನು ಕಂದಾಯ ವಸೂಲಿ ಮಾಡುತ್ತಿದ್ದನು.
- ಗಣಿಕ /ವೇಶ್ಯೆಯರ ಮೇಲ್ವಿಚಾರಣೆಗೆ ಒಬ್ಬ ಅಧಿಕಾರಿ ನೇಮಕವಾಗಿದ್ದನು.
- ಕ್ರೀಡೆಗಳು – ಪಗಡೆಯಾಟ, ಚೌಕಿಬಾರ ಮುಖ್ಯ ಆಟಗಳಾಗಿದ್ದವು.

ಆರ್ಥಿಕ ನೀತಿ

- ಸೀತಾಧ್ಯಕ್ಷನು ಭೂಮಿಯ ಒಂದೊಂದು ವಿಭಾಗದ ಮೇಲ್ವಿಚಾರಣೆ ಮಾಡುತ್ತಿದ್ದನು.
- ಆಂತರಿಕ ವ್ಯಾಪಾರದಲ್ಲಿ ಉತ್ತರ ಮತ್ತು ದಕ್ಷಿಣ ಭಾರತದಲ್ಲೇ ಪಾಟಲೀಪುತ್ರವು ದೊಡ್ಡ ನಗರ ಮತ್ತು ವ್ಯಾಪಾರ ಕೇಂದ್ರವಾಗಿತ್ತು.
- ಪಾಟಲೀಪುತ್ರದಿಂದ ಹಿಮಾಲಯದವರೆಗೂ ಹೆದ್ದಾರಿ ನಿರ್ಮಾಣ ಮಾಡಿದ್ದರಿಂದ ಚರ್ಮೋದ್ಯಮ, ಕಂಬಳಿ ಮತ್ತು ಕುದುರೆಗಳ ಸಾಗಾಣಿಕೆಗೆ ಅನುವು ಮಾಡಿಕೊಟ್ಟಿತು.
- ದಕ್ಷಿಣ ಭಾರತವು ಚಿನ್ನ, ವಜ್ರ, ಮುತ್ತುಗಳ ವ್ಯಾಪಾರ ವಹಿವಾಟಿಗೆ ಅನುಕೂಲವಾಗಿತ್ತು.
- ಮಾರಾಟ ತೆರಿಗೆಯಾದ 'ಶುಲ್ಕ' ಇದರಿಂದ ರಾಜ್ಯಕ್ಕೆ ಅಧಿಕ ಆದಾಯ ಬರುತ್ತಿತ್ತು.
- ಮೌರ್ಯರ ಕಾಲದಲ್ಲಿ ಭಾರತವು ಸಿರಿಯಾ, ಈಜಿಪ್ಟ್ ಮತ್ತು ಪಶ್ಚಿಮದ ಗ್ರೀಕ್ ರಾಜ್ಯಗಳೊಂದಿಗೆ ವ್ಯಾಪಾರ ಸಂಪರ್ಕ ಹೊಂದಿತ್ತು.
- ವಾಯುವ್ಯ ಭಾರತ ಹತ್ತಿ ಮತ್ತು ರೇಷ್ಮೆ ನೂಲು ತಯಾರಿಸುತ್ತಿದ್ದ ಪ್ರದೇಶವಾಗಿತ್ತು.

ನಾಣ್ಯ ಪದ್ಧತಿ

- ಮೌರ್ಯರ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಚಲಾವಣೆಯಲ್ಲಿದ್ದವು. ಅವುಗಳೆಂದರೆ ನಿಷ್ಕ, ಶತಮಾನ, ಪುರಾಣ, ಕರ್ಷಪಣ ಮುಂತಾದವು.
- ಮನು ಧರ್ಮಶಾಸ್ತ್ರದ ಪ್ರಕಾರ ಬೆಳ್ಳಿ ನಾಣ್ಯಕ್ಕೆ **ಪುರಾಣ/ ಧರಣ** ಎಂದು ಕರೆಯುತ್ತಿದ್ದರು. ತಾಮ್ರದ ನಾಣ್ಯ **ಕರ್ಷಪಣ** ಆಗಿತ್ತು.
- ಕರ್ಷಪಣ ನಾಣ್ಯ ಹೆಸರು ದಕ್ಷಿಣ ಭಾರತದ ಬೆಳ್ಳಿ ಮತ್ತು ಚಿನ್ನ ನಾಣ್ಯಗಳಿಗೆ ಅನ್ವಯಿಸುತ್ತಿತ್ತು.

ಮೌರ್ಯರ ಕಲೆ ಮತ್ತು ವಾಸ್ತು ಶಿಲ್ಪ

ಕಲೆ ಮತ್ತು ವಾಸ್ತು ಶಿಲ್ಪದ ಲಕ್ಷಣಗಳು

- ಭಾರತೀಯ ಕಲೆ ಮೌರ್ಯರಿಂದ ಆರಂಭವಾಯಿತು.

ಹೆಬ್ಬಂಡೆಯಿಂದ ತಯಾರಾದುದಾಗಿತ್ತು.

- ಸೊಗಸಾದ ಸಿಂಹ ಮತ್ತು ಗೂಳಿಯ ಪ್ರತಿಮೆಗಳು.
- ದೇಶದ ಎಲ್ಲೆಡೆಯಿಂದ ಸ್ತಂಭಗಳ ಏಕರೂಪತೆ ಅವು ಒಂದೇ ಪ್ರದೇಶದ ಶಿಲ್ಪಿಗಳಿಂದ ರಚಿತವಾಗಿರುವುದನ್ನು ತೋರಿಸುತ್ತವೆ.
- ಮೌರ್ಯರು ಮಥುರಾ ಮತ್ತು ಚುನಾರ್ ಗಣಿಗಳ ಕಲ್ಲನ್ನು ಬಳಸಿದ್ದಾರೆ.

ಸ್ತೂಪಗಳು

- ಬುದ್ಧನ ಅಥವಾ ಇನ್ನಾದರೂ ಒಬ್ಬ ಬೌದ್ಧ ಸನ್ಯಾಸಿಯ ಭಗ್ನಾವಶೇಷಗಳನ್ನು ತುಂಬಿಡಲು ಇಟ್ಟಿಗೆ ಮತ್ತು ಕಲ್ಲಿನಿಂದ ನಿರ್ಮಿಸಿದ ಗುಮ್ಮಟಾಕಾರದ ಕಟ್ಟಡಗಳೇ ಸ್ತೂಪಗಳು.
- ಸ್ತೂಪಗಳು ದೇಶದಾದ್ಯಂತ 84000 ದಷ್ಟಿದ್ದು ಸಾಂಚಿ ಸ್ತೂಪ ಪ್ರಮುಖವಾದುದು.

ಸ್ತಂಭಗಳು

- ಅಶೋಕನು ಸ್ತಂಭಗಳನ್ನು ಮರಳುಗಲ್ಲಿನಿಂದ ನಿರ್ಮಿಸಿದ್ದಾನೆ
- ಸಾರನಾಥದ ಬಳಿಯಿರುವ ಸ್ತಂಭದ ಮೇಲೆ 04 ಸಿಂಹಗಳನ್ನು ಕಡೆಯಲಾಗಿದೆ ಮಧ್ಯದಲ್ಲಿ ಧರ್ಮಚಕ್ರ ಮತ್ತು ಪೀಠ ಭಾಗದಲ್ಲಿ ಸಿಂಹ, ಆನೆ, ವೃಷಭ ಮತ್ತು ಕುದುರೆಗಳನ್ನು ಸುತ್ತಲೂ ಕೆತ್ತಲಾಗಿದೆ.
- ಜಾನ್ ಮಾರ್ಷಲ್‌ರು 'ಅಶೋಕನ ಏಕ ಶಿಲಾಸ್ತಂಭಗಳು ಮೌರ್ಯರ ಕಲೆಯ ಅತ್ಯಂತ ಆಕರ್ಷಿತವಾದ ಮತ್ತು ಅಸದೃಶ್ಯವಾದ ಕಲಾತ್ಮಕ ಕೃತಿಗಳೆಂದು ಪರಿಗಣಿಸಲ್ಪಟ್ಟಿವೆ' ಎಂದಿದ್ದಾರೆ.

ಗುಹಾಲಯಗಳು

- ಗುಹಾಲಯಗಳ ನಿರ್ಮಾಪಕನೆಂದು ದಶರಥನು ಪ್ರಸಿದ್ಧನಾಗಿದ್ದನು.
- ಗುಹಾಲಯಗಳನ್ನು ಬೌದ್ಧ, ಜೈನ, ಅಜೀವಿಕ ಪಂಥಗಳ ಸನ್ಯಾಸಿಗಳ ಜ್ಞಾನಾರ್ಜನೆಗೆ ಹಾಗೂ ವಸತಿಗಳಿಗಾಗಿ ನಿರ್ಮಿಸಲಾಗಿದೆ.
- ಗಯಾದ ಬಳಿಯಿರುವ ಬಾರಾಬರ್ ಬೆಟ್ಟಗಳಲ್ಲಿರುವ ಬಾರಾಬರ್ ಮತ್ತು ನಾಗಾರ್ಜುನ, ಸುಧಾಮ ಮತ್ತು ಲಾಮೋಷ ಋಷಿ ಗುಹಾಲಯಗಳಿವೆ.
- ಮೌರ್ಯರ ಕಲೆಯಲ್ಲಿ ಗ್ರೀಕ್ ಮತ್ತು ಪರ್ಶಿಯನ್ ಪ್ರಭಾವವಿರುವುದು ಕಂಡುಬರುತ್ತದೆ.
- ಬಬ್ರು ಶಾಸನದಲ್ಲಿ ಬುದ್ಧ, ಧಮ್ಮ ಮತ್ತು ಸಂಘದ ಉಲ್ಲೇಖಗಳಿವೆ.
- ಅಲಹಾಬಾದ್-ಕೋಸಂ ಶಾಸನವನ್ನು ರಾಣಿ ಶಾಸನ ಎನ್ನುವರು.
- ರುಮಿಂಡೈ ಶಾಸನದಲ್ಲಿ ಮೌರ್ಯರ ಕಾಲದ ತೆರಿಗೆ ಪದ್ಧತಿಯ ವಿವರಣೆ ಇದೆ.
- ಮೌರ್ಯರ ಕಾಲದಲ್ಲಿ ಮೆಗಸ್ತಾನೀಸ್, ಡೆಮಿಸ್ಟಿಯಸ್, ಡೈಯೋನಿಯಸ್ ಎಂಬ ಗ್ರೀಕ್ ರಾಯಭಾರಿಗಳಿದ್ದರು.

9. ಮೌರ್ಯರ ಉತ್ತರಾಧಿಕಾರಿಗಳು (Post Mouryan Period)

- ಮೌರ್ಯರ ನಂತರ ಅಧಿಕಾರಕ್ಕೆ ಬಂದವರು **ಕಾಯಸ್ಥರು**. ಮೌರ್ಯರ ಪತನದೊಂದಿಗೆ ಭಾರತದ ವಾಯವ್ಯ ಗಡಿ ಭಾಗಗಳಾಗಿದ್ದ ಗಾಂಧಾರ, ಕೋಸಲ ಪ್ರದೇಶಗಳ ಮೇಲೆ ವಿದೇಶಿಯರು ಹತೋಟಿ ಸಾಧಿಸಿದರು.

9.1 ಶುಂಗರು (ಇರಾನಿಯನ್ನರು)

- **ಮೂಲ:** ಮೌರ್ಯ ಸಂತತಿಯ ಕೊನೆಯ ದೊರೆ ಬೃಹದ್ರತನನ್ನು ಅವನ ಸೈನ್ಯಾಧಿಕಾರಿಯಾದ **ಪುಷ್ಯಮಿತ್ರಶುಂಗನು** ಕೊಲೆಗೈದು ಶುಂಗ ಸಂತತಿ ಸ್ಥಾಪಿಸಿದನೆಂದು ಬಾಣನ ಹರ್ಷಚರಿತ ಮತ್ತು ಟಿಬೆಟ್‌ನ-ತಾರಾನಾಥದಿಂದ ತಿಳಿಯುತ್ತದೆ.
- ಇವರು ಮೂಲತಃ ಇರಾನಿಯನ್ನರು. ಅಂದರೆ ರಾಜರು ತಮ್ಮ ಹೆಸರಿನಲ್ಲಿ ಮಿತ್ರ ಎಂದಿದ್ದು, ಇರಾನ್‌ನಲ್ಲಿ ಮಿತ್ರ ಎಂದರೆ ಸೂರ್ಯ ಎಂಬುದಾಗಿದೆ.
- ಕಾಳಿದಾಸನ, ಮಾಳವಿಕಾಗ್ನಿ ಮಿತ್ರ ನಾಟಕದ ನಾಯಕ **ಪುಷ್ಯಮಿತ್ರಶುಂಗ** ಇವನನ್ನು ಈ ಕೃತಿಯು ಬೈಂಬಿಕ ಅಥವಾ ಬಿಂಬಸಾರ ಸಂತತಿಗೆ ಸೇರಿದವನೆಂದಿದೆ.
- ಪುಷ್ಯಮಿತ್ರ ಶುಂಗನು ಅಧಿಕಾರಕ್ಕೆ ಬಂದಾಗ ಕಳಿಂಗ, ಕಾಶ್ಮೀರ, ... ಪ್ರಜ್ಞಾಪೀಡಕ ದೊರೆಯಾಗಿದ್ದನು.
- ಹಾಥಿಗುಂಪ ಶಾಸನವು ಕಳಿಂಗದ ಖಾರವೇಲನು ಪಾಟಲೀಪುತ್ರದ ಮೇಲೆ ದಾಳಿ ಮಾಡಿ ಪುಷ್ಯಮಿತ್ರನನ್ನು ಸೋಲಿಸಿ, ಈ ಹಿಂದೆ ನಂದ ರಾಜರು ಕೊಳ್ಳೆ ಹೊಡೆದಿದ್ದ ಜೈನ ಪ್ರತಿಮೆ (ವೃಷಭನಾಥ) ಯನ್ನು ವಾಪಸ್ ಪಡೆದನೆಂದು ತಿಳಿಸುತ್ತದೆ.
- ಪುಷ್ಯಮಿತ್ರನು ವೈದಿಕ ಮತಾವಲಂಬಿಯಾಗಿದ್ದನು. ಬೌದ್ಧರ ದಿವ್ಯಾವದಾನ ಎಂಬ ಗ್ರಂಥವು ಪುಷ್ಯಮಿತ್ರನು ಬೌದ್ಧ ಧರ್ಮದ ತೀವ್ರ ದ್ವೇಷಿಯಾಗಿದ್ದನೆಂದು, ಬೌದ್ಧ ಧರ್ಮ ಪರಮೋಚ್ಚಾಟನೆಯ ಉದ್ದೇಶ ಹೊಂದಿದ್ದು ಬೌದ್ಧ ಭಿಕ್ಷುಗಳನ್ನು ಸುಡಿಸಿದನು ಮತ್ತು ಬೌದ್ಧ ಭಿಕ್ಷುಗಳನ್ನು ಕೊಂದವರಿಗೆ ಬಹುಮಾನ ಹಣವನ್ನು ನೀಡಿದನೆಂದು ತಿಳಿಸುತ್ತದೆ.

ಅಗ್ನಿಮಿತ್ರ

- ಪುಷ್ಯಮಿತ್ರ ಶುಂಗನ ನಂತರ ಅವನ ಮಗನಾದ ಅಗ್ನಿ ಮಿತ್ರನು ಅಧಿಕಾರಕ್ಕೆ ಬಂದನು. ಕಾಳಿದಾಸನ ಮಾಳವಿಕಾಗ್ನಿಮಿತ್ರದ ನಾಯಕ ಅಗ್ನಿಮಿತ್ರನಾಗಿದ್ದಾನೆ.
- ಅಗ್ನಿಮಿತ್ರ ಮತ್ತು ಅವನ ಮಗ ವಸುಮಿತ್ರರು ಗ್ರೀಕರನ್ನು

- ಅಗ್ನಿಮಿತ್ರನು ಆಡಳಿತವು ಸುಗಮವಾಗಲು ಮಂತ್ರಿಪರಿಷತ್ ಮತ್ತು ಅಮಾತ್ಯ ಪರಿಷತ್ ಎಂಬ 2 ಸಭೆಗಳನ್ನು ಹೊಂದಿದ್ದವು

ಭಾಗಭದ್ರ

- ಇವನು ಶುಂಗರ ಪ್ರಸಿದ್ಧ ದೊರೆ. ಇವನು ಬೆಸ್ನ ನಗರದಲ್ಲಿ ಗರುಡ ಶಿಲೆಯನ್ನು ಸ್ಥಾಪಿಸಿ ಅದರ ಮೇಲೆ ಶಾಸನ ಕೆತ್ತಿಸಿದ್ದಾನೆ. ಇದರಲ್ಲಿ ಗ್ರೀಕ್ ದೊರೆ ಆಂಟಿಯಾಕಸ್‌ನ ಆಸ್ಥಾನದಿಂದ ಹಿಲಿಯೋಡರಸ್ ಎಂಬ ರಾಯಭಾರಿ ಭಾಗಭದ್ರನ ಆಸ್ಥಾನಕ್ಕೆ ಬಂದಿದ್ದನು.
- ಗ್ರೀಕರು ವೈಷ್ಣವ ಧರ್ಮ ಆಚರಿಸುತ್ತಿದ್ದರೆಂದು ತಿಳಿದುಬಂದಿದೆ.
- ಶೃಂಗರ ಕೊನೆ ದೊರೆ **ದೇವಭೂತಿ.**

9.2 ಕಣ್ವ ಸಂತತಿ (Kanvas)

- ಶೃಂಗರ ಕೊನೆ ದೊರೆ ದೇವಭೂತಿಯ ಮಂತ್ರಿ **ವಾಸುದೇವ ಕರ್ಣನು** ಕಣ್ವ ಸಂತತಿ ಸ್ಥಾಪಿಸಿದನು. ಕಣ್ವರನ್ನು ಶೃಂಗಭೃತ್ಯರೆಂದು ಕರೆಯಲಾಗಿದೆ.
- ವಾಸುದೇವನ ನಂತರ ಭೂಮಿತ್ರನು ನಂತರ ಅವನ ಮಗ ನಾರಾಯಣ ಮತ್ತು ಮೊಮ್ಮಗ ಸುಸವರ್ಮನ್‌ರವರು ಆಳ್ವಿಕೆ ಮಾಡಿದರು.

9.3 ಶಾತವಾಹನರು (Satavahanas)

ಆಧಾರಗಳು

- ಮೌರ್ಯರ ಸಾಮಂತರಾಗಿ ದಕ್ಷಿಣದಲ್ಲಿ ಶಾತವಾಹನರು ಅಧಿಕಾರಕ್ಕೆ ಬಂದರು.
- ಗುಣಾಢ್ಯನ **ಬೃಹತ್ಕಥವು** ಶಾತವಾಹನರ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತದೆ.
- **The periplus of the Erythraean Sea** ಯು ಶಾತವಾಹನರ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.
- ನಾಸಿಕ್, ನಾನಾಘಟ್ ಶಾಸನಗಳು.
- ಹಾಥಿಗುಂಪ, ಗಿರ್ನಾರ್ ಶಾಸನಗಳು, ತಾಳಗುಂದ ಶಾಸನಗಳು ಶಾತವಾಹನರ ಮೂಲ **'ಪಶ್ಚಿಮ ಭಾರತ'** ಎಂದಿವೆ.
- ಅಶೋಕನ 12ನೇ ಶಾಸನವು ಶಾತವಾಹನರನ್ನು "ಆಂಧ್ರಭೃತ್ಯರೆಂದು" ಶಾತವಾಹನರ ರಾಜಧಾನಿ **ಪೈಠಾನ್ / ಪ್ರತಿಸ್ಥಾನ್** ಎಂಬುದಾಗಿತ್ತು ಎಂದಿದೆ.
- **ಮತ್ಸ್ಯ ಪುರಾಣವು** ಶಾತವಾಹನರ ಸಂತತಿಯ ಬಗ್ಗೆ ತಿಳಿಸುತ್ತದೆ.

ರಾಜಕೀಯ ಇತಿಹಾಸ

ಸೀಮುಖ

- ಶಾತವಾಹನ ರಾಜ್ಯ ಸ್ಥಾಪಕ . **ಸೀಮುಖ.** ಇವನ ನಂತರ ಸೋದರ **'ಕನ್ಹ'** ಅಧಿಕಾರಕ್ಕೆ ಬಂದನು. ಇವನು ನಾಸಿಕ್ ನಲ್ಲಿ ಬೌದ್ಧ ಗುಹಾಲಯ ನಿರ್ಮಿಸಿದನು.

1ನೇ ಶಾತಕರ್ಣಿ.

- ರಥಿಕರು ಮತ್ತು ಬೋಜಕರನ್ನು ಸೋಲಿಸಿ ಪಶ್ಚಿಮ ಮಾಳವದವರೆಗೆ ರಾಜ್ಯ ವಿಸ್ತರಿಸಿದನು.
- 2ನೇ ಶಾತಕರ್ಣಿಗೆ **'ವಿಂಧ್ಯ ಪರ್ವತದ ಕುರುಹಾಗಿ' ದಕ್ಷಿಣ ಪಥ ಸಾರ್ವಭೌಮ** ಎಂಬ ಬಿರುದಿತ್ತು.

ಹಾಲರಾಜ

- ಇವನ ಆಳ್ವಿಕೆಯ ಬಗ್ಗೆ **'ಲೀಲಾವತಿ ಕೃತಿ'** ಮಾಹಿತಿ ನೀಡುತ್ತದೆ. ಹಾಲರಾಜನು ಪ್ರಾಕೃತ ಭಾಷೆಯಲ್ಲಿ **'ಗಾಥಾ ಸಪ್ತಸತಿ'** ಕೃತಿ ರಚಿಸಿದ್ದಾನೆ.
- ಹಾಲರಾಜನು **ಕ್ರಿ.ಶ. 78ರಲ್ಲಿ ಶಾಲಿವಾಹನ / ಶಕವರ್ಷ** ಆರಂಭಿಸಿದನು. ಇವನ ನಂತರ ಶಾತವಾಹನ ರಾಜ್ಯದ ಮೇಲೆ ಕ್ಷತ್ರಪರು ಧಾಳಿ ಮಾಡಿದರು.

ಗೌತಮೀಪುತ್ರ ಶಾತಕರ್ಣಿ (ಕ್ರಿ.ಶ.72-106)

- ಇವನು **ಶಾತವಾಹನರ ಅತ್ಯಂತ ಪ್ರಸಿದ್ಧ ದೊರೆ.** ಇವನು ನಹಪಾನ ಮತ್ತು ಆತನ ಅಳಿಯ ಉಷವದತ್ತನನ್ನು ಕೊಂದು ಕ್ಷತ್ರಪ ವಂಶವನ್ನು ನಿರ್ಮೂಲನೆ ಮಾಡಿದನು.
- ಗೌತಮಿಪುತ್ರನ ತಾಯಿ ಗೌತಮಿ ಬಾಲಶ್ರೀಯು ಕೆತ್ತಿಸಿರುವ ನಾಸಿಕ್ ಶಾಸನದಲ್ಲಿ ಗೌತಮಿಪುತ್ರನು ಮಹಾನ್ ದಿಗ್ವಿಜಯಿಯಾಗಿದ್ದನು ಎಂದು ಆತ ಶಕ ಯವನ ಪಹ್ಲವ ನಿರ್ಮೂಲಕನೆಂದು ಉಲ್ಲೇಖಿಸಲಾಗಿದೆ.
- ಗೌತಮಿಪುತ್ರನಿಗೆ **'ತ್ರೈ ಸಮುದ್ರ ತೋಯ ಪಿತಾವಾಹನ'** (ಮೂರು ಸಮುದ್ರಗಳ ನೀರು ಕುಡಿದ ಕುದುರೆ ವಾಹನ ಹೊಂದಿರುವವನು) ಎಂಬ ಬಿರುದಿತ್ತು.
- ರಾಜ್ಯದ ಗಡಿಯು ಪೂರ್ವದಲ್ಲಿ ಬಿರಾರ್, ಪಶ್ಚಿಮದಲ್ಲಿ ಕೊಂಕಣ, ಉತ್ತರದಲ್ಲಿ ಕಾಥೇವಾಡ ಹಾಗೂ ದಕ್ಷಿಣದಲ್ಲಿ ಕೃಷ್ಣ ನದಿಯ ವರೆಗೆ ಹಬ್ಬಿತ್ತು.
- **'ಏಕ ಬ್ರಾಹ್ಮಣ'** ಎಂಬ ಬಿರುದು ಗೌತಮಿ ಪುತ್ರ ಶಾತಕರಣಿಗಿತ್ತು.

2ನೇ ಪುಲುಮಾಯಿ (ಕ್ರಿ.ಶ.130-159)

- 2ನೇ ಪುಲುಮಾಯಿ **'ದಕ್ಷಿಣ ಪಥೇಶ್ವರ'** ಎಂಬ ಬಿರುದು ಪಡೆದ ದಕ್ಷಿಣದ ಮೊದಲ ದೊರೆಯಾಗಿದ್ದಾನೆ.
- ಉಜ್ಜೈಯಿನಿ ದೊರೆ ರುದ್ರದಾಮನ ಮಗಳನ್ನು ವಿವಾಹವಾಗಿದ್ದನು. ರುದ್ರದಾಮನ ಶಾಸನವು ರುದ್ರದಾಮನು ಎರಡು ಬಾರಿ ಪುಲುಮಾಯಿಯನ್ನು ಸೋಲಿಸಿದ್ದನು ಎಂದಿದೆ.
- ಶಾತವಾಹನರ ಕೊನೆ ದೊರೆ ಯಜ್ಞಶ್ರೀ ಶಾತಕರ್ಣಿ.

ಶಾತವಾಹನರ ಆಡಳಿತ

- ಮೌರ್ಯರು ರೂಪಿಸಿದ್ದ ಆಡಳಿತ ಪದ್ಧತಿಯನ್ನು ಶಾತವಾಹನರು ಮುಂದುವರೆಸಿದರು. ರಾಜನು ಆಡಳಿತ ವ್ಯವಸ್ಥೆಯ ಮುಖ್ಯಸ್ಥನಾಗಿದ್ದನು.

ಅಹರದಲ್ಲಿ ನಿಗಮವಿದ್ದು (ನಗರ) ಪ್ರತಿ ಅಹರಕ್ಕೆ ಅಮಾತ್ಯ ಮುಖ್ಯಾಧಿಕಾರಿಯಾಗಿದ್ದನು.

- ರಾಜನಿಗೆ ಆಡಳಿದಲ್ಲಿ 'ಮಂತ್ರಿಪರಿಷತ್' ನೆರವಾಗುತ್ತಿತ್ತು.

ಮಂತ್ರಿ ಪರಿಷತ್‌ನ ಪ್ರಮುಖರೆಂದರೆ:-

1) ಅಮಾತ್ಯ – ಅಹರಗಳ ಪ್ರಾಂತ್ಯಾಧಿಕಾರಿ.
2) ಭಂಡಾರಿಕಾ – ಭಂಡಾರಗಳ ಮೇಲ್ವಿಚಾರಣೆ
3) ಹೇರಣಿಕ – ಕೋಶಾಧ್ಯಕ್ಷ.
4) ಸೇನಾಧಿಪತಿ – ಸೇನಾ ಮುಖ್ಯಸ್ಥ.
5) ರಾಜಮಾತ್ಯ – ರಾಜನ ಸೇವಕರು.
6) ಲೇಖಕ – ರಾಜ್ಯದ ಮುಖ್ಯ ಕಾರ್ಯದರ್ಶಿ.

- ಆಡಳಿತದ ಕೊನೆಯ ಘಟಕ ಗ್ರಾಮವಾಗಿತ್ತು.
- ಶಾತವಾಹನರು ಭಾರತದಲ್ಲಿ ಮೊದಲ ಬಾರಿಗೆ **ಬ್ರಾಹ್ಮಣರಿಗೆ ಭೂದತ್ತಿಗಳನ್ನು** ಕೊಡಲು ಆರಂಭಿಸಿದರು.
- ಕೆಲವು ಪ್ರದೇಶಗಳ ಆಡಳಿತವನ್ನು ಮಹಾಬೋಜಕರು, ರಥಿಕರು ಹಾಗೂ ಮಾಂಡಲೀಕರ ಅಧೀನಕ್ಕೊಳಪಡಿಸಲಾಯಿತು.

ನಾಣ್ಯಗಳು

- ಸುವರ್ಣ & ದಿನಾರ – ಚಿನ್ನದ ನಾಣ್ಯಗಳು
- ಕುಷಣ – ಬೆಳ್ಳಿ ನಾಣ್ಯಗಳು.
- ಗದ್ಯಾಣ & ಪಣ – ಇತರೆ ನಾಣ್ಯಗಳು
- ನಾಣ್ಯಗಳ ಮೇಲೆ ಆನೆ, ಕುದುರೆ, ಬಾಣದ ಚಿಹ್ನೆಗಳಿದ್ದವು.

ಧಾರ್ಮಿಕ ಜೀವನ

- ಶಾತವಾಹನರು ವೈಧಿಕ ಮತಾವಲಂಬಿಗಳಾಗಿದ್ದು ವರ್ಣಾಶ್ರಮ ಪಾಲಿಸುತ್ತಿದ್ದರು. ಹಾಲರಾಜನ ಗಾಥಾಸಪ್ತಸತಿ ಕಾವ್ಯವು ಶಿವ ಮತ್ತು ಗೌರಿಯ ಸ್ತೋತ್ರದಿಂದಲೇ ಆರಂಭವಾಗುತ್ತದೆ.
- ಮಳವಳ್ಳಿ ಶಾಸನವು ಶಾತವಾಹನರ ಕಾಲದಲ್ಲಿ ಶೈವಧರ್ಮ ಆಚರಣೆಯಲ್ಲಿತ್ತು. ಬ್ರಹ್ಮದೇಯ ದಾನದ ವಿಚಾರ 'ವೈಧಿಕ ಧರ್ಮ'ದ ಏಳಿಗೆಯ ಬಗ್ಗೆ ತಿಳಿಸುತ್ತದೆ.
- ದಕ್ಷಿಣ ಭಾಗದಲ್ಲಿ ಬೌದ್ಧ ಧರ್ಮ ಆಚರಣೆಯಲ್ಲಿತ್ತು. ಬೌದ್ಧರ ಚೇತಿಯಗರ, ಲಯನ, ಕಾರ್ಲೆ ಗುಹಾಲಯಗಳು ಪ್ರಮುಖವಾಗಿವೆ.
- ದಿಗಂಬರ ಗುರು ಕುಂದಕುಂದಾಚಾರ್ಯ ಶಾತವಾಹನ ರಾಜರ ಗುರುಗಳಾಗಿದ್ದರು.

ಸಾಮಾಜಿಕ ಜೀವನ

- ಸಮಾಜವು ವರ್ಣಾಶ್ರಮದ ಆಧಾರದ ಮೇಲೆ ರೂಪುಗೊಂಡಿತ್ತು. ಧನ್ನಿಕ ಧಾನ್ಯ ವ್ಯಾಪಾರಿ, ಕೋಲಿಕ– ನೇಕಾರ, ಕಾಸಗಾರ– ಕಂಚುಗಾರ, ಕಮ್ಮಾರ, ಗಾಂಧಿಕ, ಮಣಿಕಾರ, ಬದಯಂತ್ರಿಕ– ನೀರಿನ ಕೆಲಸದವ, ವಟಕ–ಬಡಗಿ, ಸಂಪದ– ಕಲ್ಲು ಒಡೆಯುವವ ಮತ್ತು ದಾಶಕ–ಬೆಸ್ತ ಮುಂತಾದವರಿಂದ ಕೂಡಿತ್ತು.
- **ಅಮರಾವತಿ ಶಿಲ್ಪಗಳು** :– ಶಾತವಾಹನರ ಕಾಲದ ವೇಷಭೂಷಣಗಳ ಸಾಮಾಜಿಕ ಜೀವನ ಚಿತ್ರಣ ಅರಿಯಲು ಸಹಾಯಕವಾಗಿವೆ.

ಆರ್ಥಿಕ ಜೀವನ

- **The periplus of the Erythraean Sea** (ಅನಾಮಧ್ಯೇಯ ಕೃತಿ) ಇವರ ಆರ್ಥಿಕ ಸ್ಥಿತಿಗತಿಯ ಬಗ್ಗೆ ತಿಳಿಸುತ್ತದೆ. ಶಾತವಾಹನರ ಕಾಲದ "ವೃತ್ತಿಸಂಘಗಳು" ಸ್ವಾಯತ್ತ ಸಂಸ್ಥೆಗಳಾಗಿದ್ದವು.
- **The periplus of the Erythraean Sea** ಗ್ರಂಥದ ಪ್ರಕಾರ ಶಾತವಾಹನರ ಕಾಲದಲ್ಲಿ ರೋಮ್ ಚಕ್ರಾಧಿಪತ್ಯಕ್ಕೆ ದಕ್ಷಿಣ ಭಾರತದಿಂದ ಚಿನ್ನ, ವಜ್ರ, ಬೆಳ್ಳಿ ಆಭರಣಗಳು. ಮಸ್ಲಿನ್ ಬಟ್ಟೆ ಶ್ರೀಗಂಧ ಮತ್ತು ಸಾಂಬಾರ ಪದಾರ್ಥಗಳು ರಫ್ತಾಗುತ್ತಿದ್ದವು.
- **ವ್ಯಾಪಾರ ಕೇಂದ್ರಗಳು** – ಬನವಾಸಿ, ಭಟ್ಕಳ, ಪ್ರತಿಷ್ಠಾನ, ಜುನ್ನಾರ್ ನಾಸಿಕ್ ಮತ್ತು ವೈಜಯಂತಿ ಪ್ರದೇಶಗಳು.
- ಕಡಲು ವ್ಯಾಪಾರವು ಬ್ರೂಚ್, ಸೋಪಾರ, ಕಲ್ಯಾಣ ಮೂಲಕ ನಡೆಯುತ್ತಿತ್ತು.
- ಪಾಂಡಿಚೆರಿ ಬಳಿಯ 'ಅರಿಕಮೇಡು' ರೋಮ್ ವ್ಯಾಪಾರ ಕೇಂದ್ರವಾಗಿತ್ತು.

ಶಾತವಾಹನರ ಕಾಲದ ಸಾಹಿತ್ಯ

- ಶಾತವಾಹನರ ಕಾಲದ ರಾಷ್ಟ್ರ ಭಾಷೆ ಸಂಸ್ಕೃತ. ರಾಜ್ಯಭಾಷೆ ಪ್ರಾಕೃತ.
- ಜೈನ ವಿದ್ವಾಂಸ ಕುಂದಕುಂದಾಚಾರ್ಯರು ಪ್ರಾಕೃತ ಪಂಡಿತರು.
- ಶಾತವಾಹನರ ಶಿಲಾ ಶಾಸನಗಳು ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿವೆ.

ಕರ್ತೃ	ಕೃತಿ	ಭಾಷೆ
ಹಾಲರಾಜ	ಗಾಥಸಪ್ತಸತಿ	ಪ್ರಾಕೃತ
ಗುಣಾಢ್ಯ	ವಡ್ಡಕಥಾ	ಪ್ರಾಕೃತ, ಪೈಶಾಚಿ
ಸರ್ವವರ್ಮ	ಕಾತಂತ್ರ ವ್ಯಾಕರಣ	ಸಂಸ್ಕೃತ
ಕುಂದಕುಂದಾಚಾರ್ಯ	ಸಮಯಾನುಸಾರ	ಪ್ರಾಕೃತ

ಕಲೆ ಮತ್ತು ವಾಸ್ತುಶಿಲ್ಪ

- ಶಾತವಾಹನರ ವಾಸ್ತುಶಿಲ್ಪಗಳು ಹೆಚ್ಚಾಗಿ ಮಹಾರಾಷ್ಟ್ರ ಪ್ರಾಂತ್ಯದಲ್ಲಿವೆ.
- **ಲಕ್ಷಣ:–** ಪ್ರವೇಶ ದ್ವಾರದ ಮೇಲೆ ಕಮಾನು ಛಾವಣಿಗಳಿದ್ದು ಕುದುರೆ ಲಾಳಾಕಾರದ ಕಿಟಕಿಗಳಿಂದ ಕೂಡಿದ್ದವು (ಚೈತ್ಯಾಲಯಗಳು).
- **ಚೈತ್ಯಗಳು:–** ಅಜಂತ, ಭಾಜ, ಬೆರ್ಪ್, ಕೊಂಡನೆ, ನಾಸಿಕ್ ಇತರೆ ಕಡೆಗಳಲ್ಲಿ ಚೈತ್ಯಗಳನ್ನು ಉದ್ದವಾದ ಬೃಹತ್ ಬಂಡೆಗಳಿಂದ ಕೊರೆಯುತ್ತಿದ್ದರು. ಕಾರ್ಲೆ ಚೈತ್ಯಾಲಯ ಉರುಳಿ ಆಕಾರವಾಗಿದೆ. ಇದು ಭಾರತದ ಅತಿ ಉದ್ದವಾದ ಸುಂದರವಾದ ಚೈತ್ಯಾಲಯ.

- ಲೇನ ಗುಹೆ – ಬೌದ್ಧ ಭಿಕ್ಷುಗಳ ವಸತಿ ಗೃಹಗಳು ಮುಂತಾದವು.
- ಪ್ರತಿಯೊಂದು ಲಯನದಲ್ಲಿ ಪೋಧಿ, ಎಂಬ ನೀರಿನ ಕಲ್ಲು ತೊಟ್ಟಿ ಇರುತ್ತಿತ್ತು. ನಾಸಿಕ್‌ನ 3 ಲಯನಗಳು ನಹಪಾಣ ಮತ್ತು ಗೌತಮಿಪುತ್ರನ ಶಾಸನಗಳೊಂದಿಗಿವೆ.
- **ಸ್ತೂಪಗಳು** – ಕೋಲಿ, ಬಟ್ಟಿಪೋಲು, ಜಗಯ್ಯ ಪೇಟೆ, ಘಂಟಸಾಲ ಅಮರಾವತಿ, ನಾಗಾರ್ಜುನಕೊಂಡಗಳಲ್ಲಿ ಕಂಡುಬಂದಿವೆ.
- **ಮುಖ್ಯ ಸ್ತೂಪಗಳು** ಅಮರಾವತಿ ಮತ್ತು ನಾಗಾರ್ಜುನ ಕೊಂಡದಲ್ಲಿವೆ. ಅಮರಾವತಿ ಸ್ತೂಪವು ಕಲಾತ್ಮಕ ವಾಸ್ತುಶಿಲ್ಪ ವಾಗಿದ್ದು ಬುದ್ಧನ ಜೀವನವನ್ನು ಕುರಿತದ್ದಾಗಿದೆ ಹಾಗೂ ಬುದ್ಧನನ್ನು ಬೋಧಕ ಬಿಕ್ಷುವಾಗಿಸಿದೆ.
- **ವಿಹಾರಗಳು** – ಕೊಂಡನೆ, ನಾಸಿಕ್, ಅಜಂತಾ ಕಾರ್ಲೆ ಮುಂತಾದ ಕಡೆ ಕಂಡುಬಂದಿವೆ. ಚೈತ್ಯಾಲಯಗಳ ಸಮೀಪವಿದ್ದ ಇವು ಬೌದ್ಧ ಸನ್ಯಾಸಿಗಳ ವಾಸ ಸ್ಥಳವಾಗಿದ್ದವು.
- **ವರ್ಣಚಿತ್ರಕಲೆ** – ಅಜಂತಾ ಚಿತ್ರಕಲಾ ಶೈಲಿಯು ಆರಂಭವಾಯಿತು. ಇಲ್ಲಿನ **'9ನೇ ಗುಹೆಯು'** ಬರಾಬತ್ ಮತ್ತು ಸಾಂಚಿಯ ಸಮಕಾಲೀನದ್ದಾಗಿದೆ.

9.4 ಚೇದಿಗಳು (ಕ್ರಿ.ಪೂ.160-140) (Chetas)

- ಮಹಾಮೇಘ ವಾಹನ ಚೇದಿ ಸಂತತಿಯ ಸ್ಥಾಪಕ.
- ಖಾರವೇಲ ಚೇದಿ ಸಂತತಿಯ ಪ್ರಸಿದ್ಧ ದೊರೆ. ಉದಯಗಿರಿಯ ಬಳಿಯ **'ಹಾಥಿಗುಂಪ'** ಶಾಸನವು ಇವನ ಸಾಧನೆಗಳನ್ನು ವಿವರಿಸುತ್ತದೆ.
- ಖಾರವೇಲನು ತನ್ನ ಆಳ್ವಿಕೆಯ ಮೊದಲ ವರ್ಷದಲ್ಲಿ **ಭುವನೇಶ್ವರ ನಗರವನ್ನು** ನಿರ್ಮಿಸಿದನು.
- ನಂದ ರಾಜರು ಹಿಂದೆ ಕೊಳ್ಳೆ ಹೊಡೆದಿದ್ದ ಜಿನ ಪ್ರತಿಮೆಯನ್ನು ಖಾರವೇಲನು ಮರಳಿ ಪಡೆದನು.
- ಮಹಾವಿಜಯ ಪ್ರಸಾದ ಅರಮನೆ ಕಟ್ಟಿಸಿದನು. ಜೈನ ಧರ್ಮದ ಸಮ್ಮೇಳನ, ಸಂಘಟನೆ ಮತ್ತು ಜೈನ ಧರ್ಮಶಾಸ್ತ್ರವನ್ನು ರಚಿಸಲು ಪ್ರೋತ್ಸಾಹಿಸಿದನು.

9.5 ಇಂಡೋಗ್ರೀಕರು / ಬ್ಯಾಕ್ಟ್ರಿಯನ್ ಗ್ರೀಕರು (Indo Greeks)

- **1 ನೇ ಡೇರಿಯಸ್** ಇಂಡೋಗ್ರೀಕರ ಪ್ರಥಮ ದೊರೆ.
- **ಮಾನ್ಯಂದರ ಅಥವಾ ಮಿಲಿಂದ** ಇಂಡೋಗ್ರೀಕರ ದೊರೆ. ಇವನನ್ನು ಬೌದ್ಧ ಧರ್ಮಕ್ಕೆ ನಾಗಸೇನನು ಮತಾಂತರ ಮಾಡಿದನು ಎಂದು ಮಿಲಿಂದ ಪನ್ಹದಲ್ಲಿ ವಿವರಿಸಲಾಗಿದೆ.
- ಇವರು ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ **ಚಿನ್ನದ ನಾಣ್ಯಗಳನ್ನು** ಜಾರಿಗೆ ತಂದರು.
- ಇಂಡೋ ಗ್ರೀಕರು **ಖಗೋಳಶಾಸ್ತ್ರವನ್ನು** ಜಾರಿಗೊಳಿಸಿದ ಮೊಟ್ಟ ಮೊದಲಿಗರಾಗಿದ್ದಾರೆ..
- ಮೆನಾಂಡರ್ ಬ್ಯಾಕ್ಟ್ರಿಯನ್ ಗ್ರೀಕರ ಅತ್ಯಂತ ಪ್ರಸಿದ್ಧ ದೊರೆ. ಇವನು ಡಿಮಿಟ್ರಿಯಸ್‌ನ ಮಗಳನ್ನು ವಿವಾಹವಾಗಿದ್ದನು. ಇವನ ರಾಜಧಾನಿ **ಶಾಕಲ(ಸಿಯಲ್‌ಕೋಟೆ)** ಆಗಿತ್ತು.
- ಮೆನಾಂಡರನ ಆಡಳಿತದ ಬಗ್ಗೆ ಬೌದ್ಧ ಮತದ ಪಾಳಿ ಗ್ರಂಥ ಮಿಲಿಂದಪನ್ಹದಿಂದ ತಿಳಿದು ಬರುತ್ತದೆ.
- ಮೆನಾಂಡರನು ತನ್ನ ನಾಣ್ಯಗಳ ಮೇಲೆ ಡಿಕಾಯಿಸ್ ಅಥವಾ ಧಾರ್ಮಿಕ ಎಂಬ ಬರಹಗಳನ್ನು ಅಚ್ಚು ಹಾಕಿಸಿದ್ದಾನೆ.
- ಬ್ಯಾಕ್ಟ್ರಿಯನ್ ಗ್ರೀಕರ ಕೊನೆ ದೊರೆ ಹರ್ಮೆಯಸ್.

9.6 ಶಕರು (Sakas)

- ಶಕರು ಮಧ್ಯ ಏಷ್ಯಾದ ಯು-ಚಿ ಪಂಗಡದಿಂದ ಹೊರದೂಡಲ್ಪಟ್ಟ ಇವರು ದಕ್ಷಿಣದ ಕಡೆಗೆ ವಲಸೆ ಬಂದರು.
- ಹಿಂದುಕುಶ್ ಮತ್ತು ಸುಲೈಮಾನ್ ಕಣಿವೆಗಳ ಮೂಲಕ ಶಕರು ಭಾರತಕ್ಕೆ ಬಂದರು.

ಮೌಯೆಸ್

- ಈತ ಶಕರ ಮೊದಲ ದೊರೆ. ಈತನ ರಾಜಧಾನಿ ತಕ್ಷಶಿಲೆ ಗಾಂಧಾರ ಅದರ ಸುತ್ತಮುತ್ತಲ ಪ್ರದೇಶಗಳನ್ನು ವಶಪಡಿಸಿಕೊಂಡನು.
- ಮೌಯೆಸ್‌ನ ಬಿರುದು ರಾಜಾಧಿರಾಜ ಇವನ ಉತ್ತರಾಧಿಕಾರಿಯಾಗಿ 1 ನೇ ಏಜಸ್ ಅಧಿಕಾರಕ್ಕೆ ಬಂದನು.

ಪಶ್ಚಿಮದ ಕ್ಷತ್ರಪರು (Western Satrapas)

- ಶಕರು ರಾಜ್ಯವನ್ನು ಪ್ರಾಂತ್ಯಗಳಾಗಿ ವಿಂಗಡಿಸಿ ಸತ್ರಪಿಗಳೆಂದು ಕರೆಯುತ್ತಿದ್ದರು ಸತ್ರಪಿಗಳ ಮುಖ್ಯಸ್ಥ ಕ್ಷತ್ರಪ/ವೈಸ್‌ರಾಯ್ ಆಗಿದ್ದನು.
- ಇವರ ಪಶ್ಚಿಮ ಭಾಗಗಳೆಂದರೆ ತಕ್ಷಶಿಲೆ, ಮಥುರಾ, ಉಜ್ಜೈನಿ, ನಾಸಿಕ್‌ಗಳು.

ನಾಸಿಕ್‌ನ ಕ್ಷತ್ರಪರು

ಇವರು ಕ್ಷಹರಾತ ಪಂಗಡಕ್ಕೆ ಸೇರಿದ ಶಕ ನೃಪ ಸಂತತಿಯ ಶಾಖೆಯವರು. ನಹಪಾಣ್ ಇವರಲ್ಲಿ ಅತ್ಯಂತ ಪ್ರಸಿದ್ಧದೊರೆ.

ಉಜ್ಜೈಯಿನಿ ಕ್ಷತ್ರಪರು

1ನೇ ರುದ್ರದಾಮನ್(ಕ್ರಿ.ಶ.120-150): ಚೆಸ್ಟನ ಸಂತತಿಯಲ್ಲಿ ರುದ್ರದಾಮ ಹೆಸರಾಂತ ವ್ಯಕ್ತಿ. ಇವನ ಆಡಳಿತದ ಬಗ್ಗೆ ಜುನಾಗಡ ಶಾಸನ/ಗಿರ್ನಾರ್ ಪ್ರಶಸ್ತಿ ತಿಳಿಸುತ್ತದೆ.

9.7 ಪಾರ್ಥಿಯನ್‌ರು (Parthians)

- ಇವರು ವಾನೋನಸ ಮತ್ತು ಗೊಂಡೊ ಪೆರ್ನೆಸ್‌ನಿಂದ ಸ್ಥಾಪಿಸಲ್ಪಟ್ಟ ಮನೆತನಕ್ಕೆ ಸೇರಿದವರು
- ಇವರ ಮೊದಲ ದೊರೆ 1 ನೇ ಮಿತ್ರಡೇಟಸ್
- ಇವರ ಪ್ರಸಿದ್ಧ ದೊರೆ ಗೊಂಡೊ ಫೆರ್ನೆಸ್.

9.8 ಕುಶಾನರು (Kushanas)

ವಿಷ್ಯಾದ **ಯು-ಚಿ** ಎಂಬ ಬುಡಕಟ್ಟು ಜನಾಂಗಕ್ಕೆ ಸೇರಿದವರೆಂದಿವೆ.

- ಕಿ-ಷವಾಂಗ್ (ಕುಶಾನ) ಎಂಬ ವಿಭಾಗವು ಪ್ರಬಲವಾಗಿದ್ದು ಕಿಯುಟ್ಸಿಯುಕಿಯೋ ಎಂಬುವವನು ಎಲ್ಲಾ ಭಾಗಗಳನ್ನು ಸಂಘಟಿಸಿದನು, ಇವನನ್ನೇ ಕುಜಲ **'ಕಾಡ್‌ಪಿಜಸ್/1ನೇ ಕಾಡ್ ಫಿಸಸ್'**" ಎನ್ನಲಾಗಿದೆ.
- 'ದೈವಪುತ್ರ' ಎಂಬ ರಾಜ ಬಿರುದನ್ನು 'ಕುಶಾನರು' ಹೊಂದಿದ್ದರು.
- ಪಾರ್ಥಿಯನ್ ಗ್ರೀಕರ ಉತ್ತರಾಧಿಕಾರಿಗಳೇ ಕುಶಾನರು.

1ನೇ ಕಾಡ್‌ಫಿಸೆಸ್.

- ಇವನು ಪಾರ್ಥಿಯನ್ ಗ್ರೀಕರನ್ನು ಸೋಲಿಸಿ ಕೀಪಿನ್ ಮತ್ತು ಕಾಬೂಲ್‌ಗಳನ್ನು ಆಕ್ರಮಿಸಿದನು, ತನ್ನ ನಾಣ್ಯಗಳ ಮೇಲೆ 'ಮಹಾರಾಜ' 'ರಾಜಾಧಿರಾಜ' ಎಂಬ ಬಿರುದುಗಳನ್ನು **ಖರೋಷ್ಠಿ** ಲಿಪಿಯಲ್ಲಿ ಮುದ್ರಿಸಿದ್ದಾನೆ.

2ನೇ ಕಾಡ್‌ಫಿಸೆಸ್

- ಇವನನ್ನು **'ವಿಮಾಕಾಡ್ ಫಿಸೆಸ್'** ಎನ್ನುವರು. ಇವನು ತನ್ನ ನಾಣ್ಯಗಳ ಮೇಲೆ ಮಹೇಶ್ವರ 'ಸಮಗ್ರ ಪ್ರಪಂಚದ ಒಡೆಯ' ಎಂಬ ಬಿರುದುಗಳನ್ನು ಅಚ್ಚು ಹಾಕಿಸಿದ್ದಾನೆ.
- ವಿಮಾಕಾಡ್ ಫಿಸೆಸ್ ಚಿನ್ನದ ನಾಣ್ಯಗಳನ್ನು ಮೊದಲಿಗೆ ಜಾರಿಗೊಳಿಸಿದನು.

ಕಾನಿಷ್ಕ

- ಕುಶಾನರ ಅತ್ಯಂತ ಪ್ರಸಿದ್ಧ ದೊರೆ **ಕಾನಿಷ್ಕ.**
- ಕಾನಿಷ್ಕನು **ಕ್ರಿಶ78**ರಲ್ಲಿ ಸಿಂಹಾಸನ ರೂಢನಾದನು. **ಕ್ರಿಶ 78** ರಿಂದ ಎಣಿಕೆ ಯಾಗುವ **ಶಾಲಿವಾಹನ ಶಕೆಯ** ಸ್ಥಾಪಕನೆಂದು ಅಭಿಪ್ರಾಯ ಪಡಲಾಗಿದೆ.
- ಕಾನಿಷ್ಕನ ರಾಜಧಾನಿ **ಪುರುಷಪುರ/ಪೇಷಾವರ್** ಆಗಿತ್ತು.

ದಿಗ್ವಿಜಯಗಳು

- ಕಾನಿಷ್ಕನು ಕಾಶ್ಮೀರವನ್ನು ವಶಪಡಿಸಿಕೊಂಡು ಪಾಟಲೀಪುತ್ರ ಆಕ್ರಮಿಸಿದಾಗ ಬೌದ್ಧ ವಿದ್ವಾಂಸನಾದ ಅಶ್ವಘೋಷನು ಕಾನಿಷ್ಕನ ಕೈಸೇರಿದನು.
- ಕಾನಿಷ್ಕನ ದಿಗ್ವಿಜಯಗಳಲ್ಲಿ ಅತ್ಯಂತ ಪ್ರಮುಖವಾದುದು ಚೀನಾದ ಮೂರು ಪ್ರಾಂತ್ಯಗಳಾದ ಕಾಶ್ಗರ, ಯಾರ್ಖಂಡ ಮತ್ತು ಖೋತಾನ್ ಆಕ್ರಮಿಸಿದುದಾಗಿದೆ.
- ಕಾನಿಷ್ಕನಿಗೆ ಕೈಸರ್ ಮತ್ತು ದೈವಪುತ್ರ ಎಂಬ ಬಿರುದುಗಳಿದ್ದವು.
- ಕಾನಿಷ್ಕನು ಪ್ರಾಂತ್ಯಗಳಿಗೆ ಸತ್ರಪರನ್ನು ಮೇಲ್ವಿಚಾರಣೆಗಾಗಿ ನೇಮಿಸಿದ್ದನು.
- ಕಾನಿಷ್ಕನ ರಾಜ್ಯವು ಬ್ಯಾಕ್ಟ್ರಿಯಾ, ಅಫ್ಗನ್, ಪಂಜಾಬ್, ಸಿಂದ್, ಕಾಶ್ಮೀರ ಮಥುರಾ, ಪೇಶಾವರ್ ಒಳಗೊಂಡಿದ್ದವು.
- ಕಾನಿಷ್ಕನು ಬೌದ್ಧ ಬಿಕ್ಷು ಅಶ್ವಘೋಷನಿಂದ ಪ್ರಭಾವಿತನಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡು ಮಹಾಯಾನ ಪಂಥದ ಅನುಯಾಯಿಯಾದನು.
- ಕಾನಿಷ್ಕನು 4ನೇ ಬೌದ್ಧ ಮಹಾಸಭೆಯನ್ನು ಕಾಶ್ಮೀರದ ಕುಂಡಲೀವನ ಎಂಬಲ್ಲಿ ವಸುಮಿತ್ರನ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದನು.
- ಕಾನಿಷ್ಕನ ಕಾಲದಲ್ಲಿ ಬೌದ್ಧ ಧರ್ಮವು ಚೀನಾ, ಟಿಬೆಟ್, ಮಂಗೋಲಿಯಾ, ಜಪಾನ್, ಕೊರಿಯಾ ಮುಂತಾದೆಡೆ ಹಬ್ಬಿತ್ತು. ಬೌದ್ಧಧರ್ಮಕ್ಕೆ ಇವನು ನೀಡಿದ ಕೊಡುಗೆ ಯಿಂದಾಗಿ **'2ನೇ ಅಶೋಕ'** ಎಂದು ಕರೆಯಲಾಗಿದೆ.
- ಕಲ್ಹಣನ ರಾಜತರಂಗಿಣಿ ಪ್ರಕಾರ ಕಾಶ್ಮೀರದಲ್ಲಿ **ಕಾನಿಷ್ಕಪುರ** ಪಟ್ಟಣವನ್ನು ನಿರ್ಮಿಸಿದನು.
- ಕುಶಾನರ ಕೊನೆಯ ದೊರೆ **ವಾಸದೇವ.** ಇವನು ಹಿಂದೂ ಧರ್ಮ ಪ್ರಚಾರ ಮಾಡಿದನು.
- ಕುಶಾನರು ಭಾರತದಲ್ಲಿ ಅಸಂಖ್ಯಾತ **ಚಿನ್ನದ ನಾಣ್ಯ**ಗಳನ್ನು ಬಿಡುಗಡೆ ಮಾಡಿದರು.

ಕಾನಿಷ್ಕನ ಕಾಲದ ಸಾಹಿತ್ಯ ಮತ್ತು ವಿಜ್ಞಾನ

1) **ಅಶ್ವಘೋಷನು** ಪ್ರಸಿದ್ಧ ಕವಿ, ತತ್ವಜ್ಞಾನಿ, ಸಂಗೀತಗಾರನಾಗಿದ್ದನು. ಈತನ ಕೃತಿಗಳೆಂದರೆ- ಬುದ್ಧಚರಿತ, ಸುಂದರಾನಂದ, ಸೂತ್ರಲಂಕಾರ, ವಜ್ರಸೂಚಿ.
2) **ನಾಗಾರ್ಜುನನು** ವಿಜ್ಞಾನಿ, ಸರ್ವಶೂನ್ಯವಾದಕ್ಕೆ ಪ್ರಸಿದ್ಧನಾದ ತತ್ವಜ್ಞಾನಿ **'ಮಾಧ್ಯಮಿಕ ಸೂತ್ರ'** ದಲ್ಲಿ **'ಸಾಪೇಕ್ಷತಾ** ಸಿದ್ಧಾಂತ ಪ್ರತಿಪಾದಿಸಿದ್ದಾನೆ. ಇವನನ್ನು **'ಭಾರತದ ಐನ್‌ಸ್ಟೀನ್'** ಎನ್ನುವರು.
3) **ಚರಕನು** 'ಚರಕ ಸಂಹಿತೆ' ಕೃತಿ ರಚಿಸಿದನು. ಇದು 08 ಭಾಗಗಳಿಂದ ಕೂಡಿರುವ ಅಮೂಲ್ಯ **ವೈದ್ಯಶಾಸ್ತ್ರ** ಗ್ರಂಥವಾಗಿದೆ.
4) ಈ ಕಾಲದಲ್ಲಿ **ಸಂಘದಕ್ಷ** , **ವಾಸುಥರ**, **ವಸುಮಿತ್ರ** ಎಂಬುವವರಿದ್ದರು.

- 2ನೇ ಕಾಡ್‌ಫಿಸಸ್ ನಾಣ್ಯಗಳ ಮೇಲೆ **ಶಿವ** ಮತ್ತು **ಎತ್ತು**ಗಳ ಚಿತ್ರಗಳಿವೆ. ಕಾನಿಷ್ಕನ ನಾಣ್ಯಗಳ ಮೇಲೆ ಗ್ರೀಕ್ ದೇವತೆ ' **ಎಲಿಯೊಡೊರಸ್'** ಚಿತ್ರವಿದೆ.
- ಕುಶಾನರು ರೋಮನ್ ರೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ್ದರು.
- **ರಫ್ತು ಸರಕುಗಳು:** ಸಾಂಬಾರು ಪದಾರ್ಥ ಮತ್ತು ಜವಳಿ ಉತ್ಪನ್ನಗಳು.
- **ಆಮದು ಸರಕುಗಳು:** ಚಿನ್ನ , ಬೆಳ್ಳಿ, ತಾಮ್ರ, ಇತರೆ.

ಕಲೆ ಮತ್ತು ವಾಸ್ತುಶಿಲ್ಪ

ಗಾಂಧಾರ ಶೈಲಿ

- ಭಾರತದ ವಾಯುವ್ಯ ಭಾಗದಲ್ಲಿ ಕ್ರಿ.ಪೂ.1ನೇ ಶತಮಾನದಿಂದ ಕ್ರಿ.ಶ 5ನೇ ಶತಮಾನದವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ಶೈಲಿಗೆ **ಶಕರು** ಮತು **ಕುಶಾನರು** ಆಶಯದಾತರಾಗಿದರು. ಇದು

ಹೆಚ್ಚು ಮಹಾಯಾನ ಬೌದ್ಧ ಸಂಸ್ಕೃತಿಗೆ ಹೊಂದಿಕೊಂಡಿತ್ತು. ಇದಕ್ಕೆ **ಗ್ರೀಕ್ ಬೌದ್ಧ ಶೈಲಿ** ಎಂಬ ಹೆಸರಿದೆ. ಇದರ ಅವಶೇಷಗಳು ತಕ್ಷಶಿಲೆ, ಅಫ್ಘಾನಿಸ್ಥಾನ ಮತ್ತು ವಾಯುವ್ಯ ಭಾರತದಲ್ಲಿ ಕಂಡುಬಂದಿವೆ. ಈ ಶಿಲ್ಪಗಳನ್ನು **ಕಪ್ಪು ಶಿಲೆಯಲ್ಲಿ** ಕಡೆಯಲಾಗಿದೆ. ಈ ಗಾಂಧಾರ ಶಿಲೆ ಏಷ್ಯಾ ಮೈನರ್ ಮತ್ತು ರೋಮನ್ ಸಾಮ್ರಾಜ್ಯದ **ಎಲೆನಿಷ್ಟಿಕ್ ಕಲೆಯಿಂದ** ಬಂದಿದೆ.

ಮಥುರಾ ಶೈಲಿ

- ಇದು ಉತ್ತರ ಭಾರತದ ಮಥುರಾದಲ್ಲಿ ಕ್ರಿ.ಪೂ.2ನೇ ಶತಮಾನದಿಂದ ಕ್ರಿಶ 1ನೇ ಶತಮಾನದವರೆಗೆ ಬೆಳೆಯಿತು. ಇಲ್ಲಿ ಚುಕ್ಕಿಗಳಿರುವ **ಕೆಂಪುಕಲ್ಲನ್ನು** ಉಪಯೋಗಿಸುತ್ತಿದ್ದರು. ಮೂರ್ತಿ ಶಿಲ್ಪಿಗಳ ಹಿಂದೆ ಪ್ರಭಾವ ಶಾಲಿಯನ್ನು ಬೆಳೆಸಿ ಅದಕ್ಕೆ ಧಾರ್ಮಿಕತೆ ಕೊಡುವ ಕಲಾ ಶೈಲಿಯು ಮಥುರಾ ಶೈಲಿಯಿಂದ ಪ್ರಾರಂಭವಾಯಿತು.
- ರಾಜರ ಮೂರ್ತಿಗಳು ಬಹುಮಟ್ಟಿಗೆ ಮಥುರಾ ಹತ್ತಿರವಿರುವ ಮತ್‌ಹಳ್ಳಿಯಲ್ಲಿ ಕಂಡುಬಂದಿವೆ.

ಅಮರಾವತಿ ಶೈಲಿ :-

- ಇದು ಗೋದಾವರಿ ಮತ್ತು ಕೃಷ್ಣಾ ನದಿಗಳ ಕೆಳ ಭಾಗದ ಕಣಿವೆಗಳಲ್ಲಿ ಕ್ರಿ.ಪೂ.2ನೇ ಶತಮಾನದಿಂದ ಕ್ರಿ.ಶ.4ನೇ ಶತಮಾನದ ವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ಶೈಲಿಯ ಮುಖ್ಯ ಕೇಂದ್ರಗಳೆಂದರೆ ಅಮರಾವತಿ, ನಾಗಾರ್ಜುನ ಕೊಂಡ ಜಗ್ಗಯ್ಯಪೇಟೆಗಳು. ಇದರಲ್ಲಿ **ಬಿಳಿಯ ಅಮೃತಶಿಲೆ** ಉಪಯೋಗಿಸಲಾಗಿದೆ.
- ಅಮರಾವತಿಯ ಮಹಾನ್ ಸ್ತೂಪ ಸುಣ್ಣದ ಕಲ್ಲಿನಲ್ಲಿ ಸುತ್ತಲೂ ಕೆತ್ತಿರುವ ಬುದ್ಧನ ಜೀವನದ ಘಟನೆಗಳು, ಶಿಲ್ಪಗಳನ್ನು ಹಾಗೂ ಚಿತ್ರಣಗಳನ್ನು ಒಳಗೊಂಡಿದೆ.
- ಕಾನಿಷ್ಕನ ಕಾಲದ ಪ್ರಮುಖ ಶಿಲ್ಪಿ **'ಏಜಿಲಾಸ್'.**
- ಕಾನಿಷ್ಕನ ಕಿರಿಯ ಮಗ **ಹುವಿಷ್ಕನು** ಮಥುರಾದಲ್ಲಿ ಬೌದ್ಧ ವಿಹಾರ, ಹಾಗೂ ಕಾಶ್ಮೀರದಲ್ಲಿ **'ಹುವಿಷ್ಕಪುರ'**ಗಳನ್ನು ನಿರ್ಮಿಸಿದನು.
- ಮಾಳವಿಕಾಗ್ನಿ ಮಿತ್ರ ನಾಟಕದ ನಾಯಕ **ಅಗ್ನಿ ಮಿತ್ರ.**
- ಗ್ರೀಕ್‌ರ ರಾಜ ಡೆಮಿಟ್ರಿಯಸ್‌ನು ಗ್ರೀಕ್ ಕ್ಯಾಲೆಂಡರ್‌ನ್ನು ಭಾರತಕ್ಕೆ ಪರಿಚಯಿಸಿದನು.
- 4ನೇ ಬೌದ್ಧ ಸಮ್ಮೇಳನ ನಡೆಸಲು ಕಾನಿಷ್ಕನಿಗೆ ಪಾರ್ಶ್ವನು ತಿಳಿಸಿದ್ದನು.
- 2ನೇ ಕಾನಿಷ್ಕನಿಗೆ **ಸೀಜರ್(ಕೈಸರ)** ಎಂಬ ಬಿರುದಿತ್ತು.

10. ಗುಪ್ತ ಸಾಮ್ರಾಜ್ಯ (Gupta Empire)

- ಗುಪ್ತರು ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳ ಸಾಧನೆಗಳಿಂದಾಗಿ ಗುಪ್ತರ ಆಡಳಿತ ಕಾಲವನ್ನು **ಅಭಿಜಾತ ಯುಗ,** ಸುವರ್ಣಯುಗ ಎನ್ನಲಾಗಿದೆ.
- ಗುಪ್ತ ಸಾಮ್ರಾಜ್ಯವು ಕುಶಾನರ ಸಾಮ್ರಾಜ್ಯದ ಪಳಯುಳಿಕೆಗಳ ಆಧಾರದ ಮೇಲೆ ಪ್ರವರ್ಧಮಾನಕ್ಕೆ ಬಂದಿತು. ಇವರ ಸಾಮ್ರಾಜ್ಯ ಸ್ಥಾಪನೆಗೆ ನೆರವಾದ ಅಂಶಗಳೆಂದರೆ–
- ದಕ್ಷಿಣ ಬಿಹಾರ ಮತ್ತು ಮಧ್ಯ ಭಾರತದ ಗಣಿಗಳು ಇವರ ನಿಯಂತ್ರಣದಲ್ಲಿದ್ದವು.
- ಗಂಗಾ ಬಯಲಿನ ಫಲವತ್ತಾದ ಭೂಮಿ ಮತ್ತು ಬೈಜಾಂಟಿಯನ್ ಸಾಮ್ರಾಜ್ಯದೊಂದಿಗಿನ ವ್ಯಾಪಾರ ಮಾರ್ಗ ರೇಷ್ಮೆ ಹೆದ್ದಾರಿ ಇವರ ನಿಯಂತ್ರಣದಲ್ಲಿದ್ದವು.

ಆಧಾರಗಳು: 1 ಶಾಸನಗಳು

1) **ಅಲಹಾಬಾದ್ ಸ್ತಂಭ ಶಾಸನ :–** ಸಮುದ್ರಗುಪ್ತನ ಬಗ್ಗೆ ಕುರಿತದ್ದಾಗಿದೆ. ಇದರ ಕರ್ತೃ ಹರಿಸೇನ.
2) **ಇರಾನ್ ಸ್ತಂಭ ಶಾಸನ:–** ಮಧ್ಯ ಪ್ರದೇಶದ ಸತಿಸಹಗಮನ ಪದ್ಧತಿಯ ಬಗ್ಗೆ ತಿಳಿಸುತ್ತದೆ.
3) **ಮೆಹ್ರೌಲಿ ಕಬ್ಬಿಣ ಸ್ತಂಭ:–** ಇದು 2ನೇ ಚಂದ್ರಗುಪ್ತನಿಗೆ ಸೇರಿದುದಾಗಿದೆ.
4) **ಉದಯಗಿರಿ ಗುಹಾ ಶಾಸನ:–** 2ನೇ ಚಂದ್ರಗುಪ್ತನ ಸಾಹಸ ಮತ್ತು ದಿಗ್ವಿಜಯಗಳ ಬಗ್ಗೆ ವಿವರಿಸುತ್ತದೆ.
5) **ಪವಾರಪುರ ತಾಮ್ರದ ಶಾಸನ:–** ಇದು ಬುದ್ಧ ಗುಪ್ತನಿಗೆ ಸೇರಿದೆ. ಪುರಾತನ ಕಾಲದ ಭೂಮಾನ್ಯ ಪದ್ಧತಿ ಬಗ್ಗೆ ತಿಳಿಸುತ್ತದೆ.
6) **ನಳಂದಾ ಮತ್ತು ಗಯಾ ಶಾಸನಗಳು;–** ಸಮುದ್ರಗುಪ್ತನನ್ನು ಕುರಿತದ್ದಾಗಿವೆ.
7) **ಬಿಟಾರಿ ಸ್ತಂಭ ಶಾಸನ :–** ಸ್ಕಂದಗುಪ್ತ ,ಪುಷ್ಯಮಿತ್ರ ಹಾಗೂ ಹೂಣರ ಹೋರಾಟದ ಬಗ್ಗೆ ತಿಳಿಸುತ್ತದೆ.

2. ಸಾಹಿತ್ಯಕ ಆಧಾರಗಳು

- **ಧರ್ಮಶಾಸನಗಳು :–** ಗುಪ್ತರ ಸಾಮಾಜಿಕ ಮತ್ತು ಧಾರ್ಮಿಕತೆಯ ಬಗ್ಗೆ ತಿಳಿಸುತ್ತವೆ.
- **ದೇವಿಚಂದ್ರಗುಪ್ತಂ (ವಿಶಾಖದತ್ತ) :–** ಇದು 1ನೇ ಚಂದ್ರಗುಪ್ತ ಅಧಿಕಾರಕ್ಕೆ ಬಂದುದು ಹಾಗೂ ಲಿಚ್ಛವಿ ರಾಜಕುಮಾರಿಯನ್ನು ವಿವಾಹವಾದ ಬಗ್ಗೆ ತಿಳಿಸುತ್ತದೆ.
- ಇಮ್ಮಡಿ ಪ್ರವರ ಸೇನನ ಸೇತುಬಂಧ, ಬೋಜನ ಶೃಂಗಾರ ಪ್ರಕಾಶ.
- ವಿಜ್ಜಿಕಾಳ ಕೌಮುದಿ ಮಹೋತ್ಸವ, ರಾಮಚಂದ್ರನ ನ್ಯಾಯದರ್ಪಣ.
- ಅಭಿನವ ಗುಪ್ತನ ಅಭಿನವ ಭಾರತಿ.
- **ಬಾಣನ ಹರ್ಷ ಚರಿತೆ ;–** ಕೊನೆಯ ಗುಪ್ತ ರಾಜರ ಮತ್ತು [illegible]

- ಫಾಹಿಯಾನನ **ಫೊ.ಕೊ-ಕಿ.**
- ಕಾಸ್ಮಾನ್‌ನ (ಬೌದ್ಧಭಿಕ್ಷು) **ಕ್ರಿಶ್ಚಿಯನ ಟೋಪೋಗ್ರಫಿ.**
- ಹ್ಯುಯತ್ಸಾಂಗ್‌ನ **ಸಿ-ಯು-ಕಿ** ಗ್ರಂಥ.
- ಸುಲೈಮಾನ್‌ನ ಪ್ರವಾಸಿ ಕಥನ. ಇನ್ನಿತರ ಸಾಹಿತ್ಯಕ ಆಧಾರಗಳೆನಿಸಿವೆ.
- ವಿಷ್ಣು ಪುರಾಣವು ಗುಪ್ತರು **ವೈಶ್ಯರೆಂದು** ತಿಳಿಸುತ್ತದೆ.
- ವಿಷ್ಣುಪುರಾಣ ವಾಯುಪುರಾಣ , ಭಾಗವತ ಪುರಾಣಗಳು ಗುಪ್ತರ ಮೂಲ **'ಗಂಗಾನದಿ ಬಯಲು'** ಎಂದು ತಿಳಿಸಿವೆ.

ರಾಜಕೀಯ ಇತಿಹಾಸ

1ನೇ ಚಂದ್ರಗುಪ್ತ (ಕ್ರಿ.ಶ.320-335)

- ಗುಪ್ತ ಸಾಮ್ರಾಜ್ಯದ ಮೊದಲ ದೊರೆ 1ನೇ ಚಂದ್ರಗುಪ್ತ. ಇವನಿಗೆ **"ಮಹಾರಾಜಾಧಿ ರಾಜ"** ಎಂಬ ಬಿರುದಿತ್ತು.
- ಇವನು ಬಿಹಾರದ ಭಾಗಗಳು ಮತ್ತು ನೇಪಾಳದ ಭಾಗದಲ್ಲಿ **ಲಿಚ್ಛವಿ ಜನಾಂಗದೊಡನೆ** ವೈವಾಹಿಕ ಸಂಬಂಧ ಬೆಳಸಿ ರಾಜಕುಮಾರಿ ಕುಮಾರದೇವಿಯನ್ನು ವಿವಾಹವಾದನು. ಇವನು ತನ್ನ ನಾಣ್ಯಗಳಲ್ಲಿ ತಮ್ಮಿಬ್ಬರ ಪ್ರತಿಮೆ ಅಚ್ಚು ಹಾಕಿಸಿ ಕೆಳ ಭಾಗದಲ್ಲಿ **'ಲಿಚ್ಛವೀಯ'** ಎಂದಿದೆ. ಇದನ್ನು ಗಮನಿಸಿದರೆ ಇದೇ ವಿವಾಹವು ಗುಪ್ತರ ಉದಯಕ್ಕೆ ಕಾರಣವಾಯಿತೆಂದು ತಿಳಿಯಲಾಗಿದೆ.
- 1ನೇ ಚಂದ್ರಗುಪ್ತನು ತಾನು ಅಧಿಕಾರಕ್ಕೆ ಬಂದ ನೆನೆಪಿಗಾಗಿ ಕ್ರಿ.ಶ 320ರಲ್ಲಿ **'ಗುಪ್ತಶಕೆ'** ಯನ್ನು ಆರಂಭಿಸಿದನು.

ಸಮುದ್ರಗುಪ್ತ (335-380 ಎ.ಡಿ)

- ಇವನಿಗೆ **'ಕಚ' ಲಿಚ್ಛವಿದೌಹಿತ್ರ** ಹಾಗೂ **ಕವಿರಾಜ** ಎಂಬ ಹೆಸರುಗಳಿದ್ದವು.
- ಅಲಹಾಬಾದ್ ಸ್ತಂಭ ಶಾಸನವು ಸಮುದ್ರಗುಪ್ತನ ದಂಡನಾಯಕ ಮತ್ತು ಮಂತ್ರಿಯಾದ ಹರಿಸೇನನಿಂದ ರಚಿತವಾಯಿತು.ಇದು ಸಮುದ್ರಗುಪ್ತನ ದಿಗ್ವಿಜಯಗಳ ಬಗ್ಗೆ ತಿಳಿಸುತ್ತದೆ.
- ಸಮುದ್ರಗುಪ್ತನು ಅಚ್ಚುತನನ್ನು ಅಹಿಚ್ಛತ್ರದ (ರೊಹಿಲಖಂಡ) ಭಾಗ ಮತ್ತು ನಾಗಸೇನರನ್ನು ಸೋಲಿಸಿದನು.
- ಇವನು ಗಂಗಾ-ಯಮುನ. ದೋಅಬ್, ಪೂರ್ವ ಹಿಮಾಲಯ ರಾಜ್ಯಗಳು ಹಾಗೂ ವಿಂಧ್ಯ ಪರ್ವತದ ಅಟವಿಕ ರಾಜ್ಯಗಳನ್ನು ತನ್ನ ಸಾಮ್ರಾಜ್ಯದೊಳಗೆ ತಂದನು.
- ನಂತರ **ದಕ್ಷಿಣದ 12 ರಾಜರನ್ನು** ಸೋಲಿಸಿ ಅವರಿಂದ ಕಪ್ಪ ಪಡೆದನು. ಕೋಸಲದ-ಮಹೇಂದ್ರ, ಕಂಚಿ-ವಿಷ್ಣುಗೋಪ, ವೆಂಗಿಯ- ಹಸ್ತಿವರ್ಮನ್ ಮುಂತಾದವರನ್ನು ಸೋಲಿಸಿದನು.
- ಇವನು ಆರ್ಯವರ್ತ ದಂಡಯಾತ್ರೆಯಲ್ಲಿ ರುದ್ರದೇವ ನಾಗಸೇನ ಮತ್ತು ಅಚ್ಚುತ ಬಲದೇವ ವರ್ಮನ್ ರಾಜರನ್ನು ಸೋಲಿಸಿದನು.
- ಗಡಿ ರಾಜ್ಯಗಳಾದ -ಮಾಳವರು (ವೇದಾರ, ಆಗ್ನೇಯ ರಾಜಸ್ತಾನ) ಅರ್ಜುನ್ ನಾಯನರು (ಆಗ್ರ ಮಥುರಾ) ಯೌದೇಯರು [illegible] ಮುಂತಾದವರನ್ನು ಸೋಲಿಸಿದನು.
- ಅಲಹಾಬಾದ್ ಶಾಸನದ ಪ್ರಕಾರ "ಅವನು ನೂರು ಕದನಗಳ ಸರದಾರ ಎಂದೂ ಸೋಲನ್ನು ಅರಿಯದವನು" ಎಂದಿದೆ.
- ವಿ.ಎ ಸ್ಮಿತ್ ರವರು **"ಸಮುದ್ರಗುಪ್ತನನ್ನು 'ಭಾರತದ ನೆಪೋಲಿಯನ್'** ಎಂದಿದ್ದಾರೆ.
- ಚೀನಿ ಬರವಣಿಗೆಗಳ ಪ್ರಕಾರ ಸಿಂಹಳದ ರಾಜ ಮೇಘವರ್ಣನು ಇಬ್ಬರು ಬೌದ್ಧಭಿಕ್ಷುಗಳನ್ನು ಯಾತ್ರಾ ಸ್ಥಳ ಬುದ್ಧಗಯಕ್ಕೆ ಕಳುಹಿಸಿದ್ದನು.
- ಸಮುದ್ರಗುಪ್ತನ ನಾಣ್ಯಗಳ ಮೇಲೆ 'ಗರುಡದ (ಗುಪ್ತರ ಬಿರುದು) ಗುರುತನ್ನು ಕಾಣಬಹುದು.
- ಬಹಳ ಕಾಲ ನಿಂತು ಹೋಗಿದ್ದ ಹಿಂದೂ ಅಶ್ವಮೇಧ ಯಾಗಗಳನ್ನು ಮತ್ತೆ ಸಮುದ್ರಗುಪ್ತನು ಪರಿಷ್ಕರಿಸಿದನು.
- ಕ್ಷತ್ರಪರ ಆಡಳಿತ ಪದ್ಧತಿಯನ್ನು ವೈಧಿಕ ರಾಜ್ಯಶಾಸ್ತ್ರದ ವಿದಾಯಕ್ಕನುಗುಣವಾಗಿ ಬದಲಾಯಿಸಿದನು.
- ರಾಜ್ಯದ ಗಡಿಯು ಪೂರ್ವದಲ್ಲಿ ಬಂಗಾಳ, ಪಶ್ಚಿಮದಲ್ಲಿ ಪಂಜಾಬ್, ಉತ್ತರದಲ್ಲಿ ಹಿಮಾಲಯ ಹಾಗೂ ದಕ್ಷಿಣದಲ್ಲಿ ನರ್ಮದಾ ನದಿವರೆಗೆ ವಿಸ್ತರಿಸಿತ್ತು.
- ಸಮುದ್ರಗುಪ್ತನು **ಛತ್ರ, ಕಾಚ್, ವೀಣಾ, ಅಶ್ವಮೇಧ** ಹೀಗೆ 08 ಬಗೆಯ ಚಿನ್ನದ ನಾಣ್ಯಗಳನ್ನು ಜಾರಿಗೆ ತಂದನು. ಇವು ಸಮುದ್ರಗುಪ್ತನು ಸಂಗೀತ ಪ್ರಿಯನಾಗಿದ್ದನೆಂದು ತಿಳಿಸಿವೆ.
- ಸಮುದ್ರಗುಪ್ತನ ಬಿರುದುಗಳು: ಕವಿರಾಜ, ಸರ್ವದಕ್ಷಿಣ ಪಥರಾಜ.
- ಸಮುದ್ರಗುಪ್ತ ರಚಿಸಿದ ಗ್ರಂಥ **ಕೃಷ್ಣಚರಿತ (ಸಂಸ್ಕೃತ)**
- ಹೆಚ್.ಸಿ. ರಾಯ್‌ಚೌಧರಿಯವರು "ಸಮುದ್ರಗುಪ್ತನು ಏಕ್‌ರಾಟ್, ಆಡಳಿತಗಾರನಾಗಿ ಮಹಾಪದ್ಮನಂತೆ ಮೆರೆದಿದ್ದಾನೆ" ಎಂದಿದಾರೆ.
- ಆರ್.ಸಿ. ಮಜುಂದಾರ್‌ರವರು **'ಗುಪ್ತರ ಯುಗ ಸುವರ್ಣಯುಗ'** ಎಂದಿದ್ದಾರೆ.

2ನೇ ಚಂದ್ರಗುಪ್ತ (ಕ್ರಿ.ಶ.380-414)

- ಸಮುದ್ರಗುಪ್ತನ ರಾಣಿ ದತ್ತಾದೇವಿಯ ಪುತ್ರ 2ನೇ ಚಂದ್ರಗುಪ್ತ. ಇವನಿಗೆ **ದೇವಗುಪ್ತ** ಮತ್ತು **ದೇವಶ್ರೀ** ಎಂಬ ಹೆಸರುಗಳಿದ್ದವು.
- ಶಕರಿಂದ ಸೋತ ಗುಪ್ತ ದೊರೆ ರಾಮಗುಪ್ತನನ್ನು, 2ನೇ ಚಂದ್ರಗುಪ್ತನು ಕೊನೆಗಾಣಿಸಿ, ಶಕರ ದೊರೆಯಾದ ಬಾಸನನ್ನು ಕೊಂದು ಅಧಿಕಾರಕ್ಕೆ ಬಂದು ತನ್ನ ಅಣ್ಣನ ಹೆಂಡತಿಯಾದ ಧೃವಲದೇವಿಯನ್ನು ವಿವಾಹವಾದನೆಂದು ಬಾಣನ ಹರ್ಷಚರಿತೆ, ಬೋಜನ ಶೃಂಗಾರ ಪ್ರಕಾಶ, ಅಭಿನವಗುಪ್ತನ ಅಭಿನವ ಪ್ರಕಾಶ ಹಾಗೂ ಅಮೋಘವರ್ಷನ ಸಂಜನಾ ಶಾಸನಗಳು ದೃಢಪಡಿಸುತ್ತವೆ.
- ರಾಜಕೀಯ ಉದ್ದೇಶಗಳಿಗಾಗಿ ಏರ್ಪಡಿಸಿಕೊಳ್ಳುವ ವಿವಾಹ ಪದ್ಧತಿ ಗುಪ್ತರ ವಿದೇಶಿ ಕಾರ್ಯನೀತಿಯಲ್ಲಿ ಮೊದಲಿನಿಂದ ಪ್ರಮುಖ ಸ್ಥಾನ ಪಡೆದಿದೆ.

ಮಧ್ಯ ಭಾರತದ ನಾಗಾ ಅರಸರೊಂದಿಗೆ ಮೈತ್ರಿ ಬೆಳೆಸಿದ ಅದೇ ರೀತಿ ತನ್ನ ಮಗಳು **ಪ್ರಭಾವತಿಗುಪ್ತಳನ್ನು** ವಾಕಾಟರರ 2ನೇ ರುದ್ರಸಿಂಹನಿಗೆ ಕೊಟ್ಟು ವಿವಾಹ ಮಾಡಿದನು.

- 2ನೇ ಚಂದ್ರಗುಪ್ತನ ಬಿರುದುಗಳು **ವಿಕ್ರಮಾದಿತ್ಯ, ಶಕಾರಿ** ಮತ್ತು **ಸಾಹಸಾಂಕ.**
- ಗುಜರಾತ್ ಮತ್ತು ಸೌರಾಷ್ಟ್ರಗಳ ವಿಜಯದ ಕುರುಹಾಗಿ **ವಿಕ್ರಮಾದಿತ್ಯ** ಎಂಬ ಬಿರುದು ಪಡೆದು ಅಶ್ವಮೇಧಯಾಗವನ್ನು ಮಾಡಿದನೆಂದು ದೆಹಲಿ ಬಳಿಯ **ಮೆಹ್ರೌಲಿ ಕಬ್ಬಿಣ ಸ್ತಂಭ** ತಿಳಿಸುತ್ತದೆ. ಇವನ 2ನೇ ರಾಜಧಾನಿ **ಉಜ್ಜೈಯನಿಯಾಗಿತ್ತು.**
- ಆ ಕಾಲದಲ್ಲಿ ವಾಯವ್ಯ ಗಡಿಭಾಗದ ಕುಶಾನರ ನಾಣ್ಯಗಳನ್ನು ಹೋಲುವ ನಾಣ್ಯಗಳ ಮೇಲೆ ಚಂದ್ರ ಎಂದು ಮುದ್ರಿಸಿರುವುದರಿಂದ 2ನೇ ಚಂದ್ರಗುಪ್ತನ ವಹ್ಲಿಕರ ಮೇಲಿನ ಜಯವನ್ನು ಸೂಚಿಸುತ್ತದೆ.
- ಕಾಳಿದಾಸ, ವರಾಹಮಿಹಿರ ಸೇರಿದಂತೆ **ನವರತ್ನ ಪ್ರಿಯರಾದ** ವಿದ್ವಾಂಸರು 2ನೇ ಚಂದ್ರಗುಪ್ತನ ಆಸ್ಥಾನದಲ್ಲಿದ್ದರು.
- 2ನೇ ಚಂದ್ರಗುಪ್ತನ ಆಸ್ಥಾನಕ್ಕೆ **ಚೀನಿ ಯಾತ್ರಿಕ ಫಾಹಿಯಾನ್** (ಕ್ರಿ.ಶ.411-13) ಭೇಟಿ ನೀಡಿದ್ದನು. ಇವನ ಮೂಲ ಉದ್ದೇಶವು ಬೌದ್ಧ ಕೃತಿಗಳ ಸಂಗ್ರಹಣೆ. ಇವನ ಭೇಟಿಯ ಕಾಲಕ್ಕೆ ಗಯಾ ನಗರವು ಜನರಿಲ್ಲದಾಗಿತ್ತು. ಬೋಧಗಂಯಾವು ಅರಣ್ಯದಿಂದಾವೃತವಾಗಿತ್ತು.
- **ಚೀನಿ ಪ್ರವಾಸಿಗ ಇತ್ಸಿಂಗ್** ಕೂಡ ಇವನ ಕಾಲದಲ್ಲಿ ಭೇಟಿ ನೀಡಿದ್ದನು.
- 2ನೇ ಚಂದ್ರಗುಪ್ತನು **ದಿನಾರ್** ಚಿನ್ನದ ನಾಣ್ಯಗಳನ್ನು ಹೊರಡಿಸಿದ್ದನು.

1ನೇ ಕುಮಾರಗುಪ್ತ (ಕ್ರಿ.ಶ.415-455)

- 2ನೇ ಚಂದ್ರಗುಪ್ತನ ಮಗನಾದ ಇವನಿಗೆ **ಶಕ್ರಾಧಿತ್ಯ** ಎಂಬ ಹೆಸರಿತ್ತು. ಇವನ ರಾಜ್ಯವು ಉತ್ತರದಲ್ಲಿ ಹಿಮಾಲಯ, ದಕ್ಷಿಣದಲ್ಲಿ ನರ್ಮದಾ ಹಾಗೂ ಪೂರ್ವದಲ್ಲಿ ಬಂಗಾಳದವರೆಗೆ ಹಬ್ಬಿತ್ತು.
- 1ನೇ ಕುಮಾರಗುಪ್ತನ ಕಾಲದಲ್ಲಿ **ನಳಂದಾ ವಿಶ್ವವಿದ್ಯಾಲಯ** ಸ್ಥಾಪಿತವಾಯಿತು. ಇವನು ಝಾನ್ಸಿಯ ದಿಯೋಘರ್‌ನಲ್ಲಿ ದಶಾವತಾರ ದೇವಾಲಯ ನಿರ್ಮಾಣ ಮಾಡಿದನು.

ಸ್ಕಂದಗುಪ್ತ (ಕ್ರಿ.ಶ.455 - 467)

- ಗುಪ್ತರ ಪ್ರಖ್ಯಾತ ರಾಜರಲ್ಲಿ ಸ್ಕಂದಗುಪ್ತ ಕೊನೆಯವನು. ಇವನ ಕಾಲದಲ್ಲಿ ಮಧ್ಯ ಏಷ್ಯಾ ಮೂಲದವರಾದ ಅನಾಗರಿಕರು ಮತ್ತು ಯುದ್ಧ ಪ್ರಿಯ ಜನಾಂಗದ ಹೂಣರು ದಾಳಿಯಿಟ್ಟರು. ಇವರು **ಅಕ್ಸಾಸ್ ಕಣಿವೆಯ ಮೂಲಕ ಭಾರತ ಪ್ರವೇಶಿಸಿದರು. ಮೊದಲು ಗಾಂಧಾರವನ್ನು ವಶಪಡಿಸಿಕೊಂಡರು.**
- **ತೋಮಾರ** ಮತು **ಮಿಹಿರಗುಲ** ಇವರು ಹೂಣರ ಪ್ರಮುಖ
- ಸ್ಕಂದಗುಪ್ತನ ಬಿರುದುಗಳು **ಕ್ರಮಾದಿತ್ಯ ಮತ್ತು ವಿಕ್ರಮಾದಿತ್ಯ.**
- ಇವನ ನಾಣ್ಯಗಳ ಮೇಲೆ ಲಕ್ಷ್ಮೀ ದೇವತೆಯ ಮುದ್ರೆಯಿದೆ.
- ಇವನ ಕಾಲದಲ್ಲಿ **ಊಳಿಗಮಾನ್ಯ ಪದ್ಧತಿ** ಪ್ರಬಲವಾಗಿ, ಕೇಂದ್ರೀಕೃತ ಆಡಳಿತ ವ್ಯವಸ್ಥೆ ಕುಸಿಯಿತು.
- ಗುಪ್ತರ 2ನೇ ನರಸಿಂಹನು ಬೌದ್ಧ ಧರ್ಮದ ಅನುಯಾಯಿಯಾಗಿದ್ದು ಹೂಣರ ನಾಯಕ ಮಿಹಿರಗುಲನನ್ನು ಸೆರೆಹಿಡಿದನು.
- ಗುಪ್ತರ ಕೊನೆಯ ದೊರೆ ವಿಷ್ಣುಗುಪ್ತ.

ಗುಪ್ತರ ಕಾಲದ ಆಡಳಿತ

- ಗುಪ್ತರ ಕಾಲದಲ್ಲಿ ಏಕಾಧಿಪತ್ಯ ಆಡಳಿತ ವ್ಯವಸ್ಥೆಯಿತ್ತು. ಆಡಳಿತದಲ್ಲಿ ರಾಜನಿಗೆ ಮಂತ್ರಿಪರಿಷತ್ ಸಹಾಯ ಮಾಡುತ್ತಿತ್ತು.
- ಕಾಳಿದಾಸನ ಪ್ರಕಾರ **ಕಂಚುಕಿ** ಇವನು ರಾಜ ಮತ್ತು ಮಂತ್ರಿಪರಿಷತ್ತಿನ ನಡುವೆ ಏಜೆಂಟ್ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದನೆಂದು ತಿಳಿಸಿದ್ದಾನೆ.

ಪ್ರಮುಖ ಆಡಳಿತ ವರ್ಗ

- **ಅಮಾತ್ಯ** :- ಮಂತ್ರಿ ಪರಿಷತ್ತಿನ ತೀರ್ಮಾನಗಳನ್ನು ರಾಜನಿಗೆ ತಿಳಿಸುವುದು.
- **ಸಂಧಿವಿಗ್ರಹ** :- ಯುದ್ಧ ಮತ್ತು ಶಾಂತಿ ಖಾತೆಯ ಮಂತ್ರಿ.
- **ಅಕ್ಷಪಟಾಲಾಧಿಕೃತ**:- ದಾಖಲೆಗಳ ಕಾರ್ಯಭಾರ ನೋಡಿಕೊಳ್ಳುತ್ತಿದ್ದನು.
- **ಕುಮಾರ ಮಾತ್ಯ** :- ಯುದ್ಧ ಮತ್ತು ಶಾಂತಿ, ಜಿಲ್ಲಾಧಿಕಾರಿ ಕೂಡ ಆಗಿದ್ದನು.

ಕಂದಾಯ ಆಡಳಿತ

- ಭೂ ಕಂದಾಯವು ಫಲವತ್ತತೆಗನುಗುಣವಾಗಿ ಉತ್ಪನ್ನದ 1/4 ಅಥವಾ 1/6 ಭಾಗ ವಿಧಿಸುತ್ತಿದ್ದರು.
- **ಭೋಗ** – ನಗರ ತೆರಿಗೆ
- **ವಿಷ್ಟಿ** – ಕಡ್ಡಾಯ ಮತ್ತು ಉಚಿತ ಶ್ರಮ ಮಾಡುವ ಪದ್ಧತಿ ರೂಢಿಯಲ್ಲಿತ್ತು.

ನ್ಯಾಯಾಡಳಿತ

- ಈ ಕಾಲದಲ್ಲಿ ಮೊದಲ ಬಾರಿಗೆ ಅನೇಕ **ಕಾನೂನು ಗ್ರಂಥಗಳು** ರಚನೆಯಾದವು. ಉತ್ತರಾಧಿಕಾರಿತ್ವದ ಬಗ್ಗೆ ಕಾನೂನುಗಳು ರಚನೆಯಾದವು.
- ಜಿಲ್ಲೆಯ ನ್ಯಾಯಾಧೀಶರಿಗೆ ವಾಣಿಜ್ಯ ಹಾಗೂ ಅಧಿಕಾರ ವರ್ಗದ ಪ್ರತಿನಿಧಿಗಳಾಗಿದ್ದ **ಸೇಠ್** ಮತ್ತು **ಕಾಯಸ್ಥರು** ಸಹಾಯಕರಾಗಿದ್ದರು.
- ರಾಜಧಾನಿಯ ನ್ಯಾಯಾಲಯ ಧರ್ಮಸ್ಥಾನವಾಗಿತ್ತು.
- ಸ್ಕಂದಗುಪ್ತನ ಜುನಾಗಡ ಶಾಸನವು ಅಪರಾಧಿಗಳನ್ನು ನೀರಿನಲ್ಲಿ ಮುಳುಗಿಸುವ ಬೆಂಕಿಯಲ್ಲಿ ಸುಡುವ ಮತ್ತು ವಿಷ ಕುಡಿಸುವ

ಯುದ್ಧ ಸಂದರ್ಭದಲ್ಲಿ ...ಹಾಯ ಪಡೆಯುತ್ತಿದ್ದರು.

- ...ಳ ಮತ್ತು ಕಾಲ್ದಳದ ದಂಡನಾಯಕ.
- ...ಪತಿ – ಗಜಸೈನ್ಯದ ನಾಯಕ.
- ... – ರಥದಳ ನಾಯಕ.

ಖಾಯಂ ಸೇನೆಯಲ್ಲಿ ಮಹತ್ವ ಪಡೆದಿದ್ದ ರಥದಳ ತನ್ನ ಸ್ಥಾನವನ್ನು ಕಳೆದುಕೊಂಡು ಆ ಸ್ಥಾನವನ್ನು ಅಶ್ವದಳ ಆಕ್ರಮಿಸಿತು.

ಪ್ರಾಂತೀಯ ಆಡಳಿತ

- ಸಾಮ್ರಾಜ್ಯವನ್ನು ಭುಕ್ತಿ/ಪ್ರಾಂತ್ಯ, ವಿಷಯ/ಜಿಲ್ಲೆ ಮತ್ತು ಮಂಡಲಗಳಾಗಿ ವಿಂಗಡಿಸಿದ್ದರು.
- ಭುಕ್ತಿಯನ್ನು ಭೋಗಪತಿ/ಉಪಾರಿಕರು ನೋಡಿಕೊಳ್ಳುತ್ತಿದ್ದರು. ಪ್ರಾಂತ್ಯಾಧಿಕಾರಿಗೆ ಸಹಾಯಕನಾಗಿ ಬಲಾಧಿಕರಣಿಕ ಎಂಬ ಸೈನ್ಯಾಧಿಕಾರಿಯಿದ್ದನು.

ಪ್ರಮುಖ ಅಧಿಕಾರಿ ವರ್ಗ

- ದಂಡ ಪಸೌಧಿಕರಣಿಕ – ಪೋಲೀಸ್ ಇಲಾಖೆ ಮುಖ್ಯಸ್ಥ
- ರಣ ಬಂಡಾರಿಕ – ಸೈನ್ಯದ ದಂಡಾಧಿಕಾರಿ
- ವಿನಯಸ್ಥಿತಿಸ್ಥಾಪಕ – ಕಾನೂನು ಸುವ್ಯವಸ್ಥೆ
- ಭಟಸ್ವತಿ – ಅಶ್ವದಳ ಮತ್ತು ಕಾಲ್ದಳ ದಂಡನಾಯಕ
- ಮಹಾಪಿಲ್ಲುಪತಿ – ಗಜಸೈನ್ಯ ನಾಯಕ
- ನವನಿಕ – ಸಾಲ ಮತ್ತು ದಂಡಾಧಿಕಾರಿ
- ಹಿರಣ್ಯ ಸಮುದ್ರಕ – ನಾಣ್ಯಗಳ ಅಧಿಕಾರಿ
- ತದಾಯುಕ್ತಕ – ಬೊಕ್ಕಸ ಅಧಿಕಾರಿ
- ಔದ್ರಂಗಿಕ – ಉದ್ರಂಗ ತೆರಿಗೆ ವಸೂಲಿ
- ಜಾರ್ನಸ್ತಾನಿಕ – ರೇಷ್ಮೆ ಕೈಗಾರಿಕೆ ಅಧಿಕಾರಿ
- ವಿಷಯಪತಿ – ಜಿಲ್ಲಾ ಮುಖ್ಯಸ್ಥ
- ಪುರಪಾಲ – ನಗರಾಡಳಿತ
- ಪ್ರಾಂತೀಯ ಆಡಳಿತಕ್ಕೆ ತಕ್ಕಂತೆ ಕೆಳಗಿನ ಆಡಳಿತ ಘಟಕಗಳಲ್ಲಿ ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ವ್ಯತ್ಯಾಸವಿತ್ತು. ದಕ್ಷಿಣ ಪ್ರಾಂತ್ಯಗಳು ಮಂಡಲಗಳೆಂದು, ಮಂಡಲಗಳನ್ನು **ಕೊಹ್ಮಾನ್** ಎಂದು ವಿಭಾಗಿಸಿದ್ದರು.

ಗ್ರಾಮಾಡಳಿತ

- ಗ್ರಾಮವು ಆಡಳಿತದ ಅತ್ಯಂತ ಕೆಳ ಘಟಕ ಇದರ ಮುಖ್ಯಸ್ಥ ಗ್ರಾಮಿಕ. ಇವನಿಗೆ ನೆರವು ನೀಡಲು ದೂತರು ಇದ್ದರು
- ಗ್ರಾಮದ ವ್ಯವಹಾರಗಳನ್ನು ಮಹತ್ತರರ ಸಹಾಯದಿಂದ ಗ್ರಾಮಿಕನು ನೋಡಿಕೊಳ್ಳುತ್ತಿದ್ದನು.

ಧಾರ್ಮಿಕ ಜೀವನ

ಕಳೆದುಕೊಂಡಿತು. ಗುಪ್ತರು ನೀಡಿದ ಪ್ರೋತ್ಸಾಹದಿಂದ ಹಿಂದೂ ಧರ್ಮದ ಪುನರುತ್ಥಾನ ಪ್ರಕ್ರಿಯೆ ಈ ಕಾಲದಲ್ಲಿ ಮೊದಲಾಯಿತು.

- ವೈಷ್ಣವ ಧರ್ಮ, ಭಾಗವತ ಧರ್ಮ ಗುಪ್ತರ ಕಾಲದಲ್ಲಿದ್ದವು. ಗುಪ್ತರ ಪ್ರಮುಖ ದೇವತೆ ವಾಸುದೇವ ಕೃಷ್ಣ, ಗುಪ್ತರ ಕಾಲದಲ್ಲಿ ಸೂರ್ಯ ಪೂಜೆ ಸಾಮಾನ್ಯವಾಗಿ ಕಂಡುಬರುತ್ತಿತ್ತು.
- ಬಾಣನು ಭಾಗವತರು ಮತ್ತು ಪಂಚರಾತ್ರರು ಎಂಬ 2 ವೈಷ್ಣವ ಪಂಥಗಳ ಬಗ್ಗೆ ಉಲ್ಲೇಖಿಸಿದ್ದಾನೆ.
- ಶೈವ ಪಂಥದ ದೇವಾಲಯಗಳು ಭೂಮ್‌ರಾಹ್‌ನ ಶಿವದೇವಾಲಯ, ಅಜಯ್‌ಗರ್‌ನ ನಾಚನಾಕಟಾರದ ಪಾರ್ವತಿ ದೇವಾಲಯ ಮತ್ತು ಕೋಹ್-ಶಿವದೇವಾಲಯ ಪ್ರಮುಖವಾಗಿವೆ.
- ಧಾರ್ಮಿಕತೆಯ ಪ್ರಮುಖ ಅಂಶವೆಂದರೆ – ಭಕ್ತಿ ಪಂಥದ ಬೆಳವಣಿಗೆ ಮತ್ತು ಸಹಜೀವಿಗಳ ಪ್ರೀತಿ ಆಗಿತ್ತು.
- ಬೌದ್ಧ ನಿರೂಪಕರಾದ ಅಸಂಗ, ವಸುಬಂಧು, ಕುಮಾರ ಜೀವ ಮತ್ತು ದಿಜ್ಞಾಗ.
- ಹೂಣರು ವಾಯವ್ಯ ಭಾರತದಲ್ಲಿನ ಬೌದ್ಧ ವಿಹಾರಗಳನ್ನು ನಾಶ ಮಾಡಿದರು.
- ಗುಪ್ತರ ರಾಜ್ಯದ ಪಶ್ಚಿಮ ಭಾಗದಲ್ಲಿ ಜೈನಧರ್ಮ ಪ್ರಭಾವ ಬೀರಿತ್ತು.

ಸಾಮಾಜಿಕ ಜೀವನ

- ಗುಪ್ತರ ಸಮಾಜದಲ್ಲಿ ಚಾತುರ್ವರ್ಣ ವ್ಯವಸ್ಥೆ ಜಾರಿಯಲ್ಲಿತ್ತು. ಕ್ಷತ್ರಿಯ ವರ್ಣವು ಹೂಣರು, ಗುರ್ಜಹಾರರು ಮುಂತಾದ ವಿದೇಶಿಯರಿಂದ ಕೂಡಿದ ಕ್ಷತ್ರಿಯ ವರ್ಗ ಅಧಿಕಗೊಂಡಿತು.
- ಗುಪ್ತರ ಕಾಲದಲ್ಲಿ ಶೂದ್ರರ ಸ್ಥಾನಮಾನ ಸುಧಾರಣೆಯಾಯಿತು. ಫಾಹಿಯಾನ್ ಚಾಂಡಾಲರ ಬಗ್ಗೆ ಮಾಹಿತಿ ನೀಡಿದ್ದಾನೆ. ಅಂತರ್‌ಜಾತಿ ವಿವಾಹ ಸಾಮಾನ್ಯವಾಗಿತ್ತು.
- ಸತಿ ಪದ್ಧತಿ ಮತ್ತು ವಿಧವಾ ವಿವಾಹ ಅಸ್ತಿತ್ವದಲ್ಲಿತ್ತು. ಬಹು ಪತ್ನಿತ್ವ ವ್ಯವಸ್ಥೆ ಕಂಡುಬಂದಿದೆ.
- ಮೇಲ್ವರ್ಗದ ಸ್ತ್ರೀಯರು (ಕುಲೀನ ಸ್ತ್ರೀ) ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ಸ್ತ್ರೀಯರಿಗೆ ಸಾಮಾನ್ಯ ಶಿಕ್ಷಣ ನಿರಾಕರಿಸಲಾಯಿತು.
- **ಗಾಂಧರ್ವ ವಿವಾಹ ಪದ್ಧತಿ** ಜಾರಿಯಲ್ಲಿತ್ತು. ಪರ್ದಾ ಪದ್ಧತಿಯು ಉನ್ನತ ವರ್ಗದಲ್ಲಿ ಮಾತ್ರ ಇತ್ತು.

ಆರ್ಥಿಕ ಜೀವನ

- ಕೃಷಿ ಭೂಮಿಯು ಕುಟುಂಬಗಳ ವೈಯಕ್ತಿಕ ಆಸ್ತಿಯಾಗಿತ್ತು.
- **ಕ್ಷೇತ್ರ** – ಕೃಷಿ ಭೂಮಿ
- **ಕಲಾ** – ಬಂಜರು ಭೂಮಿ
- **ಅಪರತ** – ಅರಣ್ಯ ಭೂಮಿ ಎಂಬ ಮೂರು ವರ್ಗಗಳಿದ್ದವು.
- ಗುಜರಾತ್, ಬೆಂಗಾಲ್, ದಕ್ಷಿಣದಲ್ಲಿ ಬಟ್ಟೆ ಉದ್ದಿಮೆ ಬೆಳೆದಿತ್ತು. ವೃತ್ತಿ ಸಂಘಗಳು ಶ್ರೇಣಿಗಳೆಂದು ಕರೆಯಲ್ಪಟ್ಟಿದ್ದವು.

- ಪ್ರಮುಖ ವ್ಯಾಪಾರ ಕೇಂದ್ರಗಳಾದ ಮಥುರಾ, ವಾರಣಾಸಿ ಹಾಗೂ ಮುಖ್ಯ ಬಂದರುಗಳಾದ ಗಂಟಾಶಾಲಾ, ಕೇದಾರ ಮತ್ತು ತಾಮ್ರಲಿಪ್ತಿ ಮುಂತಾದವು.
- **ಮುಖ್ಯ ರಫ್ತುಗಳು** – ಸಾಂಬಾರು ಪದಾರ್ಥಗಳು, ಶಿಲೆಗಳು ಸುಗಂಧ ದ್ರವ್ಯ, ಇಂಡಿಗೋ, ತೆಂಗಿನಕಾಯಿ, ಟೀ ಮುಂತಾದ ವಸ್ತುಗಳು ಈಜಿಪ್ಟ್, ಅರೇಬಿಯಾ, ಗ್ರೀಕ್, ಸಿರಿಯಾಕ್ಕೆ ರಫ್ತಾಗುತ್ತಿದ್ದವು.
- **ಆಮದುಗಳು:**– ಚಿನ್ನ, ಬೆಳ್ಳಿ, ತಾಮ್ರ ಮತ್ತು ಕುದುರೆಗಳು.
- ಫಾಹಿಯಾನನು ತಿಳಿಸುವಂತೆ ಹಣದ ಮಾಧ್ಯಮವಾಗಿ **ಕೌರಿಸ್** (ಸಮುದ್ರಚಿಪ್ಪು) ಗಳನ್ನು ಬಳಸುತ್ತಿದ್ದರು.
- ಗುಪ್ತರ ಕಾಲದ ಅಂತಿಮ ಕಾಲದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿ ನಾಣ್ಯ ವ್ಯವಸ್ಥೆಯು ಕೆಳಮಟ್ಟದ ಬೆರಕೆ ನಾಣ್ಯಗಳಿಂದ ಸೂಚಿತವಾಗುತ್ತದೆ.
- ವಿದೇಶಿ ವ್ಯಾಪಾರದಿಂದಾಗಿ ಚಿನ್ನದ ಒಳಹರಿವು ಹೆಚ್ಚಾಗಿತ್ತು.

ನಾಣ್ಯ ಪದ್ಧತಿ

- ಗುಪ್ತರು ಭಾರತದಲ್ಲಿ ಅತ್ಯಧಿಕ ಸಂಖ್ಯೆಯ ಚಿನ್ನದ ನಾಣ್ಯಗಳನ್ನು ಟಂಕಿಸಿದ್ದಾರೆ.
- 2ನೇ ಚಂದ್ರಗುಪ್ತನು ಪ್ರಥಮ ಬಾರಿಗೆ **ಬೆಳ್ಳಿ ನಾಣ್ಯವನ್ನು** ಬಳಕೆಗೆ ತಂದನು.
- 2ನೇ ಕುಮಾರಗುಪ್ತನು ತಾಮ್ರ, ಸೀಸ ಹಾಗೂ ಬೆಳ್ಳಿಯ ನಾಣ್ಯಗಳನ್ನು ಜೊತೆ ಜೊತೆಯಲ್ಲೇ ಅಚ್ಚು ಹಾಕಿಸಿದನು.

ಗುಪ್ತರ ಕಾಲದ ಸಂಸ್ಕೃತ ಸಾಹಿತ್ಯ

- ಗುಪ್ತರ ಕಾಲವನ್ನು **'ಸಂಸ್ಕೃತ ಸಾಹಿತ್ಯದ ಸುವರ್ಣಯುಗ'** ಎಂದು ಕರೆಯಲಾಗಿದೆ. ಬ್ರಾಹ್ಮೀ ಲಿಪಿಯಿಂದಾಗಿ ನಾಗರಿ ಲಿಪಿಯು ಸಹ ವಿಕಸಿತವಾಯಿತು.
- ವಿದ್ವಾಂಸರು ಸಾಹಿತ್ಯ ಬೆಳವಣಿಗೆಯ ಶ್ರೇಷ್ಠತೆಯನ್ನು ಗ್ರೀಕ್‌ನ ಪೆರಿಕ್ಲಿಸ್‌ನ ಕಾಲಕ್ಕೂ ಇಂಗ್ಲೆಂಡಿನ ಎಲಿಜಬತ್ ಕಾಲಕ್ಕೂ ಹೋಲಿಸಿದ್ದಾರೆ
- ಗುಪ್ತರ ಕಾಲದಲ್ಲಿ ರಾಮಾಯಣ ಮತ್ತು ಮಹಾಭಾರತಗಳು ಈಗಿನ ರೂಪದಲ್ಲಿ ಗ್ರಂಥಸ್ಥವಾದವು.
- 2ನೇ ಚಂದ್ರಗುಪ್ತನ ಆಸ್ಥಾನದಲ್ಲಿ ನವರತ್ನ ಕವಿಗಳಿದ್ದರು ಅವರೆಂದರೆ:–

1. **ಕಾಳಿದಾಸ** 2ನೇ ಚಂದ್ರಗುಪ್ತ ಮತ್ತು 1ನೇ ಕುಮಾರಗುಪ್ತನ ಕಾಲದಲ್ಲಿದ್ದನು. ಇವನು ಉಜ್ಜೈನಿಗೆ ಸಂಬಂಧಪಟ್ಟವನೆಂದು ಹೇಳಲಾಗಿದೆ.

   ಇವನ ನಾಟಕಗಳು – ಶಾಕುಂತಲಾ, ಮಾಳವಿಕಾಗ್ನಿಮಿತ್ರ ಮತ್ತು ವಿಕ್ರಮೋರ್ವಶಿಯಾ.

   ಇವನ ಕಾವ್ಯಗಳು – ರುಘುವಂಶ, ಕುಮಾರ ಸಂಭವ,

2. **ವಿಶಾಖದತ್ತ** (... ಕರ್ನಲ್ ಎಂದು ... ಇವನ ನಾಟಕಗಳು – ಮು...
3. ಶೂದ್ರಕ – ಮೃಚ್ಛ ಕಟಿಕ
4. ಭಾರವಿ – ಕಿರಾತರ್ಜುನಿಯ
5. ಹರಿಸೇನ – ಅಲಹಾಬಾದ್ ಪ್ರಶಸ್ತಿ
6. ದಂಡಿ – ಕಾವ್ಯಾದರ್ಶ ಮತ್ತು ದಶಕುಮಾರ ಚರಿತೆ
7. ವಿಷ್ಣುಶರ್ಮ – ಪಂಚತಂತ್ರ (ರಾಜ್ಯ ಶಾಸ್ತ್ರದ ಬಗ್ಗೆ ತಿಳಿಸುತ್ತದೆ) ಇದು ಜಗತ್ತಿನ 150ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದವಾಗಿದೆ.
8. ಅಮರಸಿಂಹ – ಅಮರಕೋಶ ಮತ್ತು ನಾಮಲಿಂಗಾನುಶಾಸನಂ
9. ಮನುವಿನ – ಧರ್ಮಶಾಸ್ತ್ರ
10. ಶಬರನು – ಪೂರ್ವವಿಮಾಂಸ ಸೂತ್ರದ (ಜೈಮಿನಿ) ಮೇಲೆ ಬಾಷ್ಯ ಬರೆದನು.
11. ವಸುಮಿತ್ರ – ವೇದಗಳು 4 ಸಂಹಿತೆಗಳೆಂದು ತಾಳೆಗರಿಯಲ್ಲಿ ಸಂಗ್ರಹಿಸಿಟ್ಟನು
12. ಬಾಸ – ಸ್ವಪ್ನ ವಾಸವದತ್ತಂ

ವೈಜ್ಞಾನಿಕ ಸಾಹಿತ್ಯ

1. **ಆರ್ಯಭಟ** (ತತ್ವಜ್ಞಾನಿ, ವಿಜ್ಞಾನಿ & ಖಗೋಳತಜ್ಞ)
   - ಆರ್ಯಭಟೀಯಂ, ಸೂರ್ಯ ಸಿದ್ದಾಂತ: ಖಗೋಳ ಗ್ರಂಥಗಳು.
   - ಸೌರ ವರ್ಷದ ಅವಧಿಯನ್ನು 365 ದಿನಗಳೆಂದು ಅಳೆದನು.
   - ಮೊಟ್ಟ ಮೊದಲಿಗೆ ಭೂಮಿ ದುಂಡಾಗಿದೆ ಹಾಗೂ ಗ್ರಹಗಳ ಚಲನೆಯ ಬಗ್ಗೆ ತಿಳಿಸಿದನು.
2. **ವರಾಹಮಿಹಿರ**
   - ಖಗೋಳಶಾಸ್ತ್ರವನ್ನು ಖಗೋಳ ವಿಜ್ಞಾನ, ಜಾತಕಶಾಸ್ತ್ರ ಮತ್ತು ಜ್ಯೋತಿಷ್ಯ ಶಾಸ್ತ್ರವಾಗಿ ವಿಂಗಡಿಸಿದ್ದನು.
   - ಈತನ ಕೃತಿಗಳು – ಬೃಹತ್ ಸಂಹಿತೆ (ವಿಶ್ವಕೋಶ), ಪಂಚ ಸಿದ್ಧಾಂತಿಕ (ಖಗೋಳದ 5 ಪಂಥಗಳು)
3. **ಬ್ರಹ್ಮಗುಪ್ತ** – ಬ್ರಹ್ಮಸ್ಪುಟ ಸಿದ್ದಾಂತ (ಖಗೋಳ) ಮತ್ತು ಖಂಡ ಕಾವ್ಯಕ (ಗ್ರಹಗಳ ಲೆಕ್ಕಾಚಾರ)
4. **ವಾಗ್ಭಟ** – ಅಷ್ಟಾಂಗ ಸಂಗ್ರಹ (ಆರ್ಯುವೇದದ 8 ವಿಧದ ಶಸ್ತ್ರ ಚಿಕಿತ್ಸೆ)
5. **ನಾಗಾರ್ಜುನ** – ವೈದ್ಯಕೀಯ, ರಸಾಯನಶಾಸ್ತ್ರ ಮತ್ತು ಲೋಹ ವಿಜ್ಞಾನದ ಬಗ್ಗೆ ತಿಳಿಸಿದನು.
6. **ಧನ್ವಂತರಿ** – ಆರ್ಯುವೇದ ನಿಘಂಟು
7. **ವಾತ್ಸಾಯನ** – ಕಾಮಸೂತ್ರ

ತತ್ವಜ್ಞಾನ

1. **ನ್ಯಾಯ** – ಪಕ್ಷಿಯಲೋ ಸ್ವಾಮಿನ್

3. ಸಾಂಖ್ಯಾ – ಈಶ್ವರ ಕೃಷ್ಣನ್
4. ಯೋಗ – ವ್ಯಾಸ
5. ಪೂರ್ವ ವಿಮಾಂಸ – ಶೇಖರ ಸ್ವಾಮಿನ್
6. ಉತ್ತರ ವಿಮಾಂಸ – ಗೌಡಪಾದ.

ಲೋಹ ವಿಜ್ಞಾನ

- ದೆಹಲಿಯ ಕುತುಬ್‌ಮಿನಾರ್ ಬಳಿಯಿರುವ ಮಹ್ರೌಲಿ ಕಬ್ಬಿಣ ಸ್ತಂಭ ವನ್ನು 2ನೇ ಚಂದ್ರಗುಪ್ತನು ನಿರ್ಮಿಸಿದ್ದಾನೆ.

ಕಲೆ ಮತ್ತು ವಾಸ್ತುಶಿಲ್ಪ

- ಗುಪ್ತರ ಕಲಾ ಶೈಲಿಯು ಸಂಪೂರ್ಣ ಭಾರತೀಯ ಶೈಲಿಯಾಗಿತ್ತು ನಾಗರ ಮತ್ತು ದ್ರಾವಿಡ ಶಿಲ್ಪಕಲೆ ಅಸ್ತಿತ್ವದಲ್ಲಿತ್ತು.

ಕಲೆ ಮತ್ತು ವಾಸ್ತು ಶಿಲ್ಪದ ಲಕ್ಷಣಗಳು:–

1. ಸಮತಟ್ಟಾದ ಛಾವಣಿಯುಳ್ಳ ಚೌಕಾಕಾರದ ದೇವಾಲಯಗಳು.
2. ಸಮತಟ್ಟಾದ ಛಾವಣಿಯುಳ್ಳ ದೇವಾಲಯದ ಮೇಲೆ ಗೋಪುರ ನಿರ್ಮಾಣ.
3. ಸಮತಟ್ಟಾದ ಛಾವಣಿಯುಳ್ಳ 2 ಮಹಡಿಗಳ ದೇವಾಲಯ
4. ಆಯತಾಕಾರದ ದೇವಾಲಯಗಳನ್ನು ನಿರ್ಮಿಸುತ್ತಿದ್ದರು.

ಪ್ರಸಿದ್ಧ ದೇವಾಲಯಗಳು

- ದಿಯೋಘರ್‌ನ ವಿಷ್ಣುದೇವಾಲಯ, ಬೂಮ್‌ರಾಹ್‌ನ ಶಿವ ದೇವಾಲಯಗಳು.
- ದಿಯೋಘರ್‌ನ ದಶಾವತಾರ ದೇವಾಲಯ, ಸಾಂಚಿಯ ಶಿವ ದೇವಾಲಯಗಳು, ಎರಡೂ ಕಡೆಗಳಲ್ಲಿ ಶಿವ, ವಿಷ್ಣು, ರಾಮ, ಕೃಷ್ಣರ ಮೂರ್ತಿಗಳಿವೆ.
- ಕಲೆ ಮತ್ತು ವಾಸ್ತುಶಿಲ್ಪದ ಮುಖ್ಯ ಲಕ್ಷಣ – ಶಿಖರ ಮಾದರಿಯ ಕಟ್ಟಡಗಳನ್ನು ನಿರ್ಮಿಸಿರುವುದು
- ಬೌದ್ಧ ಸ್ಮಾರಕಗಳು ರಾಜಗೃಹ, ಜರಾಸಂದಕ ಬೈಟಕ ಮತ್ತು ಸಾರನಾಥದ ಧಮೇಕಾ ಸ್ತೂಪಗಳು ಮುಖ್ಯವಾದವು.

ವರ್ಣಚಿತ್ರಕಲೆ

- ಗುಪ್ತರ ವರ್ಣಚಿತ್ರಕಲಾ ಕೇಂದ್ರಗಳೆಂದರೆ ಗ್ವಾಲಿಯಾರ್ ಬಾಘ್‌ನ ಗುಹೆಗಳು, ಅಜಂತಾ ಗುಹೆಗಳು ಸಿತ್ತನವಾಸರ್ ದೇವಾಲಯ ಮತ್ತು ಸಿಲೋನ್ ಸಿಗರಿಯಾದ ಗುಹೆಗಳು
- ಅಜಂತಾ ಭಿತ್ತಿ ಚಿತ್ರಗಳು ಜಗದ್ವಿಖ್ಯಾತವಾಗಿವೆ.
- ಗುಪ್ತರ ಕಾಲದಲ್ಲಿ ವಿಮಲನು **ಜೈನ ರಾಮಾಯಣ**ವನ್ನು ಬರೆದನು.
- ಖಲೀಫ್ ಮನ್ಸೂರ್‌ನು ಶುಶ್ರುತನ **ಶುಶ್ರುತ ಸಂಹಿತೆ**ಯನ್ನು ಅರೇಬಿಕ್‌ಗೆ ಭಾಷಾಂತರಿಸಿದನು.

11. ಗುಪ್ತರ ಉತ್ತರಾಧಿಕಾರಿಗಳು The Post-Gupta period

11.1 ಥಾನೇಶ್ವರ ವರ್ಧನರು (Vardhanas of Thanesvar)

ಗುಪ್ತರ ಅವನತಿಯ ನಂತರ ಉತ್ತರ ಭಾರತದಲ್ಲಿ ಆಳ್ವಿಕೆ ನಡೆಸಿದವರು–

1) ವಲ್ಲಭಿ – ಮೈತ್ರಕರು.
2) ಥಾನೇಶ್ವರ – ವರ್ಧನರು.
3) ಮಾಳವ – ಯಶೋವರ್ಮನ್
4) ಕನೂಜ್ – ಮೌಖಾರಿಗಳು ಮುಂತಾದವು.

ಐತಿಹಾಸಿಕ ಆಧಾರಗಳು

1) **ಬಾಣನ ಹರ್ಷಚರಿತೆಯ ಪ್ರಕಾರ ಪುಷ್ಯಭೂತಿ** ವರ್ಧನ ವಂಶದ ಸ್ಥಾಪಕ ಪುಷ್ಯಭೂತಿ. ನಂತರ ಬಂದ ರಾಜವರ್ಧನನು (ಸೂರ್ಯೋಪಾಸಕ) ಹೂಣರ ವಿರುದ್ಧ ಗುಪ್ತರಿಗೆ ಸಹಾಯ ಮಾಡಿದ್ದನು. ನಂತರ ಆದಿತ್ಯವರ್ಮನು ಅಧಿಕಾರಕ್ಕೆ ಬಂದು ಗುಪ್ತರ ಮಹಾಸೇನಾಗುಪ್ತಳನ್ನು ವಿವಾಹವಾದನು ಈ ಮೂವರು **ಮಹಾರಾಜ** ಎಂಬ ಬಿರುದು ಪಡೆದಿದ್ದರು ಎಂದು ತಿಳಿಸಿದೆ.
2) ಹ್ಯುಯತ್ಸಾಂಗ್ ಬರವಣಿಗೆಗಳು.

ರಾಜಕೀಯ ಇತಿಹಾಸ

ಪ್ರಭಾಕರ ವರ್ಧನ (ಕ್ರಿ.ಶ.583–605)

- ವರ್ಧನ ಸಂತತಿಯಲ್ಲಿ ಮೊದಲ ಬಾರಿಗೆ ಮಹಾರಾಜಾಧಿರಾಜ, ಪರಮಭಟ್ಟಾರಕ ಎಂಬ ಬಿರುದುಗಳನ್ನು ಹೊಂದಿದ್ದು ಇವನು **'ಪ್ರತಾಪಶೀಲ'** ಎಂದು ಪ್ರಸಿದ್ದನಾಗಿದ್ದನು.
- ಪ್ರಭಾಕರ ವರ್ಧನನಿಗೆ ರಾಜವರ್ಧನ, ಹರ್ಷವರ್ಧನ ಮತ್ತು ರಾಜಶ್ರೀ ಎಂಬ ಮೂವರು ಮಕ್ಕಳಿದ್ದರು.
- ರಾಜಶ್ರೀಯನ್ನು ಮೌಖರಿಯ ರಾಜಕುಮಾರ ಗೃಹವರ್ಮನಿಗೆ ಕೊಟ್ಟು ವಿವಾಹ ಮಾಡಿದ್ದನು. ಇದರಿಂದ ಕೋಪಗೊಂಡ ಮಾಳವ ದೊರೆ ದೇವಗುಪ್ತನು ಕನ್ಯಾಕುಬ್ಜದ ಮೇಲೆ ದಾಳಿ ಮಾಡಿ ಗುಹವರ್ಮನನನ್ನು ಕೊಂದು ರಾಜಶ್ರೀಯನ್ನು ಬಂಧಿಸಿದನು. ಹಾಗೂ ರಾಜವರ್ಧನನ್ನು ಸೋಲಿಸಿದನು. ಆದರೆ ಗೌಡ ದೇಶದ ರಾಜ ಶಶಾಂಕನು ರಾಜವರ್ಧನನ್ನು ಮೋಸದಿಂದ ಕೊಲೆಗೈದನು.

ಹರ್ಷವರ್ಧನ (ಕ್ರಿ.ಶ.605–646)

- ಹರ್ಷನ ವರ್ಣರಂಜಿತ ಜೀವನ ಚರಿತ್ರೆಯನ್ನು ಬಾಣನ **ಹರ್ಷಚರಿತೆ** ಹಾಗೂ ಹ್ಯುಯನ್ ತ್ಸಾಂಗನ **ಸಿ–ಯು–ಕಿ**

♦ ಹರ್ಷನು ಅಧಿಕಾರಕ್ಕೆ ಬರಲು ಬೋಧಿಸತ್ವ, ಅವಲೋಕಿತೇಶ್ವರ ಮತ್ತು ರಾಜಲಕ್ಷ್ಮಿಯರು ಕಾರಣರಾದರು.

♦ ಇವನು ತನ್ನ ರಾಜಧಾನಿಯನ್ನು ಥಾನೇಶ್ವರದಿಂದ **'ಕನೂಜಿಗೆ'** ವರ್ಗಾಯಿಸಿದನು.

ದಿಗ್ವಿಜಯಗಳು

♦ ಹರ್ಷನು ತನ್ನ ಅಣ್ಣ ರಾಜವರ್ಧನ ಹಾಗೂ ತಂಗಿ ರಾಜಶ್ರೀಯ ಗಂಡನ ಸಾವಿಗೆ ಕಾರಣನಾಗಿದ್ದ ಗೌಡ ದೇಶದ ದೊರೆ ಶಶಾಂಕನನ್ನು ಸಂಹರಿಸಿದನು. ಇದಕ್ಕಾಗಿ ತನ್ನ ಮಿತ್ರ ರಾಜ್ಯವಾಗಿದ್ದ ಕಾಮರೂಪದ (ಅಸ್ಸಾಂ) ರಾಜ ಭಾಸ್ಕರವರ್ಮನೊಡನೆ ಮೈತ್ರಿಕೂಟ ಬೆಳೆಸಿದ್ದನು.

♦ ಹರ್ಷನು ಮಾಳವ, ಮಗಧಗಳ ಅನಂತರದ ಗುಪ್ತ ಸಂತತಿಗೆ ಸೇರಿದ ಮಾಧವಗುಪ್ತನ ಸ್ನೇಹ ಬೆಳೆಸಿದನು. ಮಾಳವದ ದೇವಗುಪ್ತನನ್ನು ಸೋಲಿಸಿ ರಾಜಶ್ರೀಯನ್ನು ಬಿಡುಗಡೆಗೊಳಿಸಿದನು.

♦ **ನರ್ಮದಾ ಕದನ (634–635) :–** ದಕ್ಷಿಣ ಭಾರತದತ್ತ ರಾಜ್ಯ ವಿಸ್ತರಿಸಲು ಬಯಸಿದ ಹರ್ಷನನ್ನು ಚಾಲುಕ್ಯರ 2ನೇ ಪುಲಕೇಶಿ ನರ್ಮದಾ ನದಿ ದಂಡೆಯ ಮೇಲೆ ಸೋಲಿಸಿದನು. ಇದರಿಂದ ಪುಲಿಕೇಶಿಯು **'ಪರಮೇಶ್ವರ'** ಎಂಬ ಬಿರುದು ಧರಿಸಿದನು. ಈ ಅಂಶವನ್ನು ಹರ್ಷನ ಬರವಣಿಗೆಗಳು ಸ್ಪಷ್ಟಪಡಿಸುತ್ತವೆ.

♦ ಹರ್ಷನ ರಾಜ್ಯವು **ಕಾಶ್ಮೀರ** ಹೊರತುಪಡಿಸಿ ಉಳಿದ ಉತ್ತರ ಭಾರತದ ಪ್ರದೇಶಗಳು ಹರ್ಷನ ಆಡಳಿತಕ್ಕೊಳಪಟ್ಟಿದ್ದವು. ರಾಜ್ಯವು ಥಾನೇಶ್ವರ (ಪೂರ್ವ ಪಂಜಾಬ್) ಕನೂಜ್ (ದೋಅಬ್ ಗಂಗಾ) ಅಹಿಚ್ಛತ್ರ (ರೋಹಿಲಖಂಡ) ಶ್ರಾವಸ್ತಿ (ಜೌದ್) ಪ್ರಯಾಗ, ಅಲಹಾಬಾದ್, ರಾಜಸ್ಥಾನ ಉತ್ತರ ಪ್ರದೇಶ ಬಿಹಾರ ಮತ್ತು ಓರಿಸ್ಸಾದವರೆಗೆ ಹಬ್ಬಿತ್ತು.

♦ ಹರ್ಷನ ಸಮಕಾಲೀನ ಚೀನಾದ ದೊರೆ ತ್ಸಾಂಗ್ ವಂಶದ ತಾಯ್‌ತ್ಸುಂಗ್‌ನು ಕ್ರಿ.ಶ. 643 ಮತ್ತು 647ರಲ್ಲಿ ಹರ್ಷನ ಆಸ್ಥಾನಕ್ಕೆ ಲಿಯಾಂಗ್ ಹೋಯ್, ಲೀ ವೈ ಐಯಾಮೊ ಮತ್ತು ವಾಂತ್ ಹೊನ್‌ನೆ ಎಂಬ ಇಬ್ಬರು ರಾಯಬಾರಿಗಳನ್ನು ಕಳುಹಿಸಿದ್ದನು.

♦ ಹರ್ಷನ ಮರಣ ನಂತರ ವರ್ಧನ ಸಂತತಿ ಕೊನೆಗೊಂಡಿತು.

ವರ್ಧನರ ಆಡಳಿತ

♦ ಹರ್ಷನು ತನ್ನ ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದನು. ಇದರ ಉದ್ದೇಶ ಹೆದ್ದಾರಿಗಳ ದರೋಡೆಗಳನ್ನು ತಡೆಗಟ್ಟುವುದು. ಆಡಳಿತ ಸಮೀಕ್ಷೆ ಮತ್ತು ರಾಜಕೀಯ ಗಡಿ ಪ್ರದೇಶಗಳ ಚಟುವಟಿಕೆಗಳನ್ನು ಗಮನಿಸುವುದು.

♦ **ಮಂತ್ರಿ ಪರಿಷತ್ :–** ಕನೂಜಿನ ಗಣ್ಯ ವ್ಯಕ್ತಿಗಳು ಮಂತ್ರಿಗಳಾಗಿದ್ದರು. ರಾಜ ಪ್ರತಿನಿಧಿ/ರಾಜ್ಯಪಾಲ/ಲೋಕಪಾಲ/ಸಾಮಂತ/ಉಪಾರಿಕ ಮಹಾರಾಜ ಎಂಬುವವರು ಗಡಿ ಪ್ರಾಂತ್ಯಗಳ ಮುಖ್ಯಸ್ಥರಾಗಿದ್ದರು.

ಪ್ರಮುಖ ಅಧಿಕಾರಿ ವರ್ಗ

1)	ಮಹಾಸಂಧಿವಿಗ್ರಹಾಧಿಕೃತ	– ಯುದ್ಧ ಮತ್ತು ಶಾಂತಿ ಸುವ್ಯವಸ್ಥೆ
3)	ಬೃಹದಶ್ವರ	– ಅಶ್ವಸೇನೆ ಮುಖ್ಯಸ್ಥ.
4)	ಕಟುಕ	– ಗಜಸೈನ್ಯ ಮುಖ್ಯಸ್ಥ
5)	ಕಾಟ–ಬಾಟ	– ನಿಯತ ಮತ್ತು ಅನಿಯತ ಯೋಧರು.
6)	ದೂತ	– ರಾಯಭಾರಿ
7)	ರಾಜಸ್ಥಾನಿಯ	– ರಾಜಪ್ರತಿನಿಧಿ
8)	ಮೀಮಾಂಸಕ	– ನ್ಯಾಯಾಧೀಶ.
9)	ವಿಷಯಪತಿ	– ಜಿಲ್ಲಾಧಿಕಾರಿ.
10)	ಬೋಗಪತಿ	– ಕಂದಾಯ ಸಂಗ್ರಹ
11)	ಅಕ್ಷಪಟಾಲಿಕ	– ದಾಖಲೆಗಳ ಮುಖ್ಯಸ್ಥ
12)	ಅಧ್ಯಕ್ಷರು	– ಇಲಾಖೆಗಳ ಮುಖ್ಯಸ್ಥ
13)	ಉಪಾರಿಕ ರಾಜ	– ಪ್ರಾಂತೀಯ ರಾಜ್ಯಪಾಲ
14)	ಆಯುಕ್ತಕ	– ಜಿಲ್ಲಾಧಿಕಾರಿ ಸಹಾಯಕ
15)	ಮಹಾಪ್ರತಿಹಾರ	– ಮುಖ್ಯ ಸಲಹೆಗಾರ.

ರಾಜ್ಯ ವಿಂಗಡಣೆ.

♦ ರಾಜ್ಯವನ್ನು ಭುಕ್ತಿ /ಪ್ರಾಂತ್ಯ, ವಿಷಯಗಳು ಮತ್ತು ಪಥಕ/ ತಾಲ್ಲೂಕ್ ಗಳಾಗಿ ವಿಂಗಡಿಸಿದ್ದರು.

ಭೂ ಕಂದಾಯ ಮತ್ತು ತೆರಿಗೆ ವ್ಯವಸ್ಥೆ.

♦ ವರ್ಧನರು ರಾಜ್ಯಾದಾಯಕ್ಕಾಗಿ ತಮ್ಮದೇ ಆದ ಭೂ ಕಂದಾಯ ಮತ್ತು ತೆರಿಗೆ ವ್ಯವಸ್ಥೆಯನ್ನು ಹೊಂದಿದ್ದರು.

ಭಾಗ ತೆರಿಗೆ	– ಸಣ್ಣ ಭೂ ಹಿಡುವಳಿ ಮೇಲೆ.
ಹಿರಣ್ಯ ತೆರಿಗೆ	– ರೈತರು ಮತ್ತು ವ್ಯಾಪಾರಿ ಮೇಲೆ.
ಬಲಿ ತೆರಿಗೆ	– ರಾಜನ ಪಾಲು.

♦ ಹರಿಗೋಲು ಮತ್ತು ಗಡಿ ದಾಟುವಲ್ಲಿ ವ್ಯಾಪಾರಸ್ಥರು ಕೆಲವು ತೆರಿಗೆ ನೀಡುತ್ತಿದ್ದರು.

ನ್ಯಾಯಾಡಳಿತ

♦ ರಾಜನು ಮುಖ್ಯ ನ್ಯಾಯಾಧೀಶನಾಗಿದ್ದು ಇವನಿಗೆ ನ್ಯಾಯದಾನ ಮಾಡಲು ಮೀಮಾಂಸಕರು ಸಹಾಯಕರಾಗಿದ್ದರು.

♦ ಅಪರಾಧಿಗಳಿಗೆ ನೀರು, ಬೆಂಕಿ, ತೂಕ ಮಾಡುವ, ವಿಷಪ್ರಾಸನದಂತಹ ಶಿಕ್ಷೆಗಳು ಹಾಗೂ ಕಿವಿ, ಮೂಗು, ಕೈಕಾಲು ಕತ್ತರಿಸುವ ಉಗ್ರ ಶಿಕ್ಷೆಗಳಿದ್ದವು.

ಸೈನ್ಯಾಡಳಿತ

♦ ಇವರಿಗೆ ಯಾವುದೇ ಖಾಯಂ ಸೇನೆ ಇರಲಿಲ್ಲ, ಆದರೆ ಯುದ್ಧ ಸಮಯದಲ್ಲಿ ಸಾಮಂತರು ಸೇನೆಯನ್ನು ಒದಗಿಸುತ್ತಿದ್ದರು.

♦ ಹರ್ಷನ ಕಾಲದಲ್ಲಿ 'ಗಜಸೈನ್ಯ'ಕ್ಕೆ ವಿಶೇಷ ಸ್ಥಾನವಿದ್ದರೆ **'ರಥದಳ'** ತನ್ನ ಪ್ರಾಮುಖ್ಯತೆ ಕಳೆದುಕೊಂಡಿತ್ತು.

♦ ಸೈನ್ಯದ ಮುಖ್ಯಸ್ಥ ಮಹಾಬಲಾಧಿಕೃತನಾಗಿದ್ದನು.

ಸಾಮಾಜಿಕ ಜೀವನ

- ಹರ್ಷನ ಕಾಲದಲ್ಲಿ ಮಹಿಳೆಯರ ಸ್ಥಾನಮಾನ ಅತ್ಯಂತ ಹೀನಾಯವಾಗಿತ್ತು. ವಿಧವಾ ವಿವಾಹಕ್ಕೆ ಅವಕಾಶವಿರಲಿಲ್ಲ. ಹತ್ತಿರ ಸಂಬಂಧಿಗಳ ವಿವಾಹ ನಿಷೇಧವಿತ್ತು ಹಾಗೂ ಸತಿ ಪದ್ಧತಿ ಆಚರಣೆಯಲ್ಲಿತ್ತು.
- ರಾಜರು, ಸಭಾಸದರು ಶ್ರೀಮಂತರು ವಿಲಾಸಿ ಬಟ್ಟೆಗಳು ಹಾಗೂ ಬೆಲೆ ಬಾಳುವ ಆಭರಣಗಳನ್ನು ಧರಿಸುತ್ತಿದ್ದರು. ಆದರೆ ಹೊಲಿದ ಬಟ್ಟೆಗಳನ್ನು ಧರಿಸುವ ಪದ್ಧತಿಯಿರಲಿಲ್ಲ. ಪಾದರಕ್ಷೆಗಳ ಬಳಕೆ ಅಪರೂಪವಾಗಿತ್ತು.

ಆರ್ಥಿಕ ಜೀವನ

- ಅಧಿಕಾರಿಗಳಿಗೆ ವೇತನ ನೀಡುವ ಬದಲು ಭೂಮಿಯನ್ನು ದಾನವಾಗಿ ನೀಡುವ ಪದ್ಧತಿ ಹರ್ಷನ ಕಾಲದಲ್ಲಿ ಜಾರಿಯಲ್ಲಿತ್ತು.
- ಭೂ ಮಾನ್ಯ ನೀಡುವ ಪದ್ಧತಿಯಿತ್ತು. ಕೃಷಿಕರು ಉತ್ಪತ್ತಿಯ 1/6 ಭಾಗದಷ್ಟು ರಾಜ್ಯಕ್ಕೆ ಸಲ್ಲಿಸುತ್ತಿದ್ದರು.
- ವಿನಿಮಯ ಮಾಧ್ಯಮಗಳಾಗಿ ಬಂಗಾರ, ಬೆಳ್ಳಿ ನಾಣ್ಯಗಳು, ಕವಡೆಗಳು ಮತ್ತು ಚಿಕ್ಕದಾದ ಮುತ್ತುಗಳು ಚಲಾವಣೆಯಲ್ಲಿದ್ದವು.

ಹರ್ಷ ಮತ್ತು ಬೌದ್ಧಧರ್ಮ

- ಹರ್ಷನ ಪೂರ್ವಿಕನಾದ ಪುಷ್ಯಭೂತಿಯು ಶಿವನ ಆರಾಧಕ, ಹರ್ಷನ ತಂದೆ ಪ್ರಭಾಕರ ವರ್ಧನ ಮತ್ತು ತಾತ ಆದಿತ್ಯವರ್ಮನು ಸೂರ್ಯನ ಆರಾಧಕರಾಗಿದ್ದರು. ಇವನ ಅಣ್ಣ ರಾಜವರ್ಧನ ಮತ್ತು ಸೋದರಿ ರಾಜಶ್ರೀ ಬೌದ್ಧರಾಗಿದ್ದರು.
- ಹರ್ಷನು ಹ್ಯುಯತ್ಸಾಂಗನ ನಿಕಟದಿಂದಾಗಿ **'ಮಹಾಯಾನ'** ಪಂಥಕ್ಕೆ ಬದಲಾದನು. ಇದಕ್ಕೂ ಮೊದಲು ಹೀನಯಾನ ಪಂಥದವನಾಗಿದ್ದನು.
- ಹರ್ಷನು ಗಂಗಾ ನದಿ ದಂಡೆಯ ಮೇಲೆ ಸಾವಿರಾರು ಸ್ತೂಪಗಳನ್ನು ನಿರ್ಮಿಸಿದ್ದನು. **'ಜೀವ ಹರಣ ಮಾಡುವ ಪದ್ಧತಿ'** ನಿಷೇಧಿಸಿದ್ದನು.
- ಕ್ರಿ.ಶ.628ರ ಬನ್ಸಖೇರ ಶಾಸನ ಹರ್ಷನನ್ನು **'ಪರಮಮಹೇಶ್ವರ'** ಎಂದು ವರ್ಣಿಸಿದೆ.

ಧಾರ್ಮಿಕ ಸಮ್ಮೇಳನಗಳು

1) ಕನೂಜಿನ ಮೊದಲ ಧಾರ್ಮಿಕ ಮಹಾಸಭೆ ಕ್ರಿ.ಶ.643

- **ಉದ್ದೇಶ:** 1) ಹ್ಯೂಯನ್ ತ್ಸಾಂಗನನ್ನು ವೈಭವ ರೀತಿಯಲ್ಲಿ ಸತ್ಕರಿಸುವುದು.
- 2)ಮಹಾಯಾನ ಪಂಥ ಪ್ರತಿಪಾದಿಸಿದುದು.

2) ಪ್ರಯಾಗದ – 2ನೇ ಮಹಾಸಭೆ – ಕ್ರಿ.ಶ.643

- ಹರ್ಷನು ತನ್ನ 6ನೇ ಪಂಚವಾರ್ಷಿಕ ಮಹಾಸಭೆ ಏರ್ಪಡಿಸಿದನು. ಇಲ್ಲಿ ವಲ್ಲಭಿಯ ಪ್ರವರಸೇನ, ಅಸ್ಸಾಂನ ಭಾಸ್ಕರ ಭಾಗವಹಿಸಿದ್ದರು.
- **ಉದ್ದೇಶ:–** ಧಾನ ಧರ್ಮಗಳನ್ನು ಮಾಡಲು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಹ್ಯೂಯಾತ್ಸಾಂಗನನ್ನು ಆಮಂತ್ರಿಸಲಾಗಿತ್ತು.

ವರ್ಧನರ ಕಾಲದ ಸಾಹಿತ್ಯ

- ವರ್ಧನರು ಉತ್ತಮ ಸಾಹಿತ್ಯ ಪೋಷಕರಾಗಿದ್ದರು.
- ಹರ್ಷನು ಬರೆದ 3 ನಾಟಕಗಳು

1) ರತ್ನಾವಳಿ
2) ಪ್ರಿಯದರ್ಶಿಕಾ –ಪ್ರೇಮ ಮತ್ತು ಆಸ್ಥಾನ ಕಲಹಗಳ ಬಗ್ಗೆ ತಿಳಿಸುತ್ತದೆ.
3) ನಾಗಾನಂದ – ಬೌದ್ಧ ಧರ್ಮದ ಬಗೆಗಿನ ಔದಾರ್ಯತೆಗಳು

- ಹರ್ಷನು ಜಿಮೂತವಾಹನನ ಕಥೆಯನ್ನು ಪಧ್ಯರೂಪದಲ್ಲಿ ರಚಿಸಿದ್ದಾನೆ.
- ಜಯದೇವ – ಗೀತಗೊಂವಿಂದ (ಹರ್ಷನನ್ನು ಬಾಸ ಮತ್ತು ಕಾಳಿದಾಸನಿಗೆ ಹೋಲಿಸಿದ್ದಾನೆ)
- **ಹರ್ಷನ ಆಸ್ಥಾನ ಕವಿಗಳು** – ಬಾಣ, ಮಯೂರ, ಮಾತಂಗ, ದಿವಾಕರ, ಸಿದ್ದಸೇನ ಮತ್ತು ಹರಿದೃತ ಎಂಬ ಪ್ರಖ್ಯಾತ ಕವಿ ತತ್ವಜ್ಞಾನಿ, ವ್ಯಾಕರಣಕಾರ ಬರ್ತೃಹರಿ ಎಂಬುವವರಿದ್ದರು.
- ಪ್ರಖ್ಯಾತ ಬೌದ್ಧ ಸಂತ – ದಿವಾಕರ ಮಿತ್ರ.
- ಬಾಣನ ಕೃತಿಗಳು – 1) ಹರ್ಷಚರಿತೆ.
  2) ಸೂರ್ಯ ಶತಕ
- ಆಗಿನ ವಿದ್ಯಾಲಯಗಳು ಧರ್ಮ ಜಾಗೃತಿ ಮತ್ತು ಪ್ರಸಾರ ಮಾಡಲಿಕ್ಕೆಂದೇ ಇದ್ದ ಆಶ್ರಮಗಳಾಗಿದ್ದವು.
- ಹರ್ಷನು ನಳಂದಾ ವಿ.ವಿ.ಗೆ ಅನೇಕ ಆಶ್ರಮಗಳನ್ನು ಕಟ್ಟಿಸಿದ್ದನು.

ನಳಂದಾ ವಿಶ್ವವಿದ್ಯಾಲಯ

- ಬಿಹಾರದ ಗುರಗಾವ್‌ನಲ್ಲಿರುವ ಇದನ್ನು ಕ್ರಿ.ಶ.1875ರಲ್ಲಿ **ಕನ್ನಿಂಗ್‌ಹ್ಯಾಂ** ಹಾಗೂ ಕ್ರಿ.ಶ.1913ರಲ್ಲಿ **ಡಾ.ಸ್ಪೂನರ್** ರವರು ಪತ್ತೆ ಹಚ್ಚಿದ್ದಾರೆ.
- ಗುಪ್ತರ 1ನೇ ಕುಮಾರಗುಪ್ತ/ಶಾಕ್ರಾಧಿತ್ಯನು ನಳಂದಾ ವಿ.ವಿ. ಕಟ್ಟಿಸಿದ್ದನು, ನಳಂದಾ ವಿ.ವಿ.ಯ ಭಾಷೆ ಸಂಸ್ಕೃತವಾಗಿತ್ತು.
- ವಿ.ವಿ.ಯಲ್ಲಿ ಅರ್ಹತೆ ಪಡೆಯಲು ದ್ವಾರಪಾಲಕರು ಎಂಬ ಪಂಚತಾರ ಮುಖೋದ್ಗತ ಪರೀಕ್ಷೆ ಎದುರಿಸಬೇಕಾಗಿತ್ತು.
- ನಳಂದಾ ವಿ.ವಿ. ಓರ್ವ ಪ್ರಾಧ್ಯಾಪಕ ಮತ್ತು ವಿ.ವಿ.ಮುಖ್ಯಸ್ಥ ಪಂಡಿತನಾಗಿದ್ದನು. ಪ್ರಸಿದ್ಧ ಪ್ರಾಧ್ಯಾಪಕರಾಗಿ– ದಿಜ್ಞಾಗ, ಸ್ಥಿಮತಿ, ಧರ್ಮಪಾಲ ಮತ್ತು ಶೀಲಭದ್ರರಿದ್ದರು.
- ಧರ್ಮಪಾಲನು ಕಂಚಿಯವನು ಬೌದ್ಧಶಾಸ್ತ್ರ, ಆದ್ಯಾತ್ಮ ಗ್ರಂಥಗಳ ರಚನೆ ಮಹಾನ್ ವಾದಗಾರನಾಗಿದ್ದು, ಮಹಾಯಾನ

- ಶೀಲಭದ್ರನು ಸಮತಟದವನು, ಹ್ಯೂಯತ್ಸಾಂಗನು ಭೇಟಿ ಕೊಟ್ಟಾಗ ವಿ.ವಿ.ಮುಖ್ಯಸ್ಥ ಮತ್ತು ವಿದ್ವಾಂಸನಾಗಿದ್ದನು.
- ಈ ಕೇಂದ್ರದ ಕೊನೆಯ ಪ್ರಾಧ್ಯಾಪಕ ಬುದ್ಧಕೀರ್ತಿ (12ನೇಶತಮಾನ)
- **ನಳಂದ ವಿ.ವಿ. ಪ್ರಮುಖ ವಿಷಯಗಳು:** ಹೀನಾಯಾನ ಮತ್ತು ಮಹಾಯಾನದ ಬೋಧನೆಗಳು. ಸ್ತ್ರೀಯರಿಗೂ ಪ್ರವೇಶವಕಾಶವಿತ್ತು.
- **ವಿದೇಶಿ ವಿದ್ಯಾರ್ಥಿಗಳು–** ಹ್ಯೂಯತ್ಸಾಂಗ್, ಇತ್ಸಿಂಗ್. ಹ್ಯೂಯತ್ಸಾಂಗನು ಧರ್ಮಚಾರ್ಯ, ಮೋಕ್ಷಾಚಾರ್ಯ, ಮಹಾಯಾನದೇವ ಎಂಬ ಪ್ರಶಸ್ತಿಗಳನ್ನು ಪಡೆದಿದ್ದನು.
- ನಳಂದಾ ವಿ.ವಿ. ಗ್ರಂಥ ಭಂಡಾರದ 3 ಕಟ್ಟಡಗಳು
  1) ರತ್ನೋದದಿ 2) ರತ್ನರಂಜಕ 3) ರತ್ನಸಾಗರ
- ಗ್ರಂಥಭಂಡಾರದ ಪ್ರವೇಶದ್ವಾರವನ್ನು **'ಧರ್ಮಗಂಜ್'** ಎನ್ನುತ್ತಿದ್ದರು.
- ವಿ.ವಿ.ಯ ಒಂದು ಮುದ್ರೆಯಲ್ಲಿ ಒಂದು ಕಡೆಗೆ ಧರ್ಮಚಕ್ರವಿದ್ದು ಎರಡೂ ಕಡೆಗಳಲ್ಲಿ ಹರಿಣಿಯ ಚಿತ್ರಗಳಿವೆ.
- ಆಗ್ನೇಯ ಏಷ್ಯಾದ ರಾಜ್ಯಗಳ **ದೇವಪಾಲ** ಮತ್ತು **ಬಲಪುತ್ರರು** ಈ ವಿ.ವಿ.ಗೆ ರಾಜಾಶ್ರಯ ನೀಡಿದ್ದರು.
- ಹರ್ಷನ ನಂತರ ವಿ.ವಿ.ಗೆ ಹೆಚ್ಚಿನ ಪ್ರೋತ್ಸಾಹ ನೀಡಿದವನು ದೇವಪಾಲ.
- ಹೂಣರ **ಮಿಹಿರಗುಲನು** ನಳಂದಾ ವಿ.ವಿ. ನಾಶಗೊಳಿಸಿದ ಮೇಲೆ ಅದನ್ನು ಬಲಾದಿತ್ಯ ಜೀರ್ಣೋದ್ದಾರ ಮಾಡಿದನು.
- ಆದರೆ ಕ್ರಿ.ಶ.12ನೇ ಶತಮಾನದಲ್ಲಿ ಬಿಹಾರ ಗೆದ್ದ **ಮಹ್ಮದ್–ಬಿನ್–ಭಕ್ತಿಯಾರ್ ಖಿಲ್ಜಿ** ದಾಳಿಯಿಂದ ನಳಂದಾ ವಿ.ವಿ. ನಾಶವಾಯಿತು.

ವಿಕ್ರಮಶೀಲ ವಿಶ್ವವಿದ್ಯಾಲಯ

- ಬಿಹಾರದ **ಭಗದಲ್ಪುರದಲ್ಲಿರುವ** ಇದನ್ನು **ಧರ್ಮಪಾಲನೆಂಬುವನು** ಕ್ರಿ.ಶ.769–815ರ ಅವದಿಯಲ್ಲಿ ಸ್ಥಾಪಿಸಿದನು. ಇಲ್ಲಿ ಬೌದ್ಧ ತಾಂತ್ರಿಕತೆಯನ್ನು ವಿಶೇಷವಾಗಿ ಅಭ್ಯಸಿಸಲಾಗುತ್ತಿತ್ತು.
- ದ್ವಾರಪಾಲಕರು ಭವನದ ವಿಚಾರಣೆ ಮತ್ತು ವ್ಯವಸ್ಥೆಗಳ ಬಗ್ಗೆ ಇದ್ದ ಪ್ರಾಧ್ಯಾಪಕರು. ಹೆಚ್ಚಾಗಿ ನೇಪಾಳದ ಪಂಡಿತರಿದ್ದರು.
- ಬಂಗಾಳದ ಅತಿಶಯನು ಹೊಳೆಯುವ ಶ್ರೇಷ್ಟ ರತ್ನದಂತಿದ್ದನು. 6 ಜನರಿದ್ದ ಒಂದು ಸಮಿತಿ (ಪ್ರಾಧ್ಯಾಪಕರುಗಳ) ಮಾಡಲಾಗಿತ್ತು.
- ವಿ.ವಿ.ಯ ಗೋಡೆಗಳ ಮೇಲೆ ನಾಗಾರ್ಜುನ ಮತ್ತು ಅತಿಶಯರ ಚಿತ್ರಗಳಿವೆ. 12ನೇ ಶತಮಾನದ ಮುಸ್ಲಿಂರ ದಾಳಿಯಿಂದಾಗಿ ಈ ವಿ.ವಿ. ನಾಶವಾಗಿತ್ತು.

11.2 ಬಾದಾಮಿ ಚಾಲುಕ್ಯರು (ಕ್ರಿ.ಶ.540–753) (Chalukyas of Badami)

- ಕರ್ನಾಟಕದಲ್ಲಿ ಮೊದಲ ವಿಶಾಲ ರಾಜ್ಯ ಕಟ್ಟಿ ಆಳಿದವರು ಬಾದಾಮಿ ಚಾಲುಕ್ಯರು. ಬಾದಾಮಿಗೆ **'ವಾತಾಪಿ'** ಎಂಬ ಹೆಸರಿತ್ತು. **'ಜಯಸಿಂಹ'** ನಾಗಿದ್ದಾನೆ.

ಚಾಲುಕ್ಯರ ಮೂಲ.

- ಬಿಎಲ್ ರೈಸ್, ಡಾ.ಫ್ಲೀಟ್, ಡಾ.ಬರ್ನೆಲ್‌ರ ಪ್ರಕಾರ ಚಾಲುಕ್ಯರು ತುರ್ಕಿಯ ಸೆಲ್ಯುಸಿಡ್ ಮೂಲದಿಂದ ಬಂದವರು ಎಂದಿದ್ದಾರೆ.
- ಬಿಲ್ಹಣನ **'ವಿಕ್ರಮಾಂಕದೇವಚರಿತಂ'** ಪ್ರಕಾರ ಚಾಲುಕ್ಯರ ಮೂಲ ನೆಲೆ ಅಯೋಧ್ಯೆ ಎಂದಿದೆ.

ರಾಜಕೀಯ ಇತಿಹಾಸ

1ನೇ ಪುಲಕೇಶಿ (547–566)

- ಇವನು ಚಾಲುಕ್ಯ ವಂಶದ ನಿಜವಾದ ಸ್ಥಾಪಕ. ಕದಂಬರನ್ನು ಸೋಲಿಸಿ ಸ್ವತಂತ್ರನಾದನು. ಬಾದಾಮಿಗೆ ಕೋಟೆ ನಿರ್ಮಿಸಿ ಅದನ್ನು ರಾಜಧಾನಿಯನ್ನಾಗಿಸಿದನು. ಅಲ್ಲದೆ ಗುಹಾಂತರ ದೇವಾಲಯಗಳ ನಿರ್ಮಾಣ ಕಾರ್ಯ ಆರಂಭಿಸಿದನು.
- **ಬಿರುದುಗಳು :–** ಸತ್ಯಾಶ್ರಯ, ಶ್ರೀವಲ್ಲಭ, ರಣವಿಕ್ರಮ ಮುಂತಾದವು.
- ಚಾಲುಕ್ಯರು ಕದಂಬ ಮನೆತನದ ಸಾಮಂತರಾಗಿದ್ದರು. ಚಾಲುಕ್ಯ ರಾಜ್ಯ ಸ್ಥಾಪನೆಗೆ ಮುನ್ನ ಕೊಂಕಣದ ಮೌರ್ಯರು, ಮಹಾರಾಷ್ಟ್ರದ ರಟ್ಟರು, ಬೀರಾರ್‌ನ ನಳರು, ಬನವಾಸಿಯ ಕದಂಬರು, ತಲಕಾಡಿನ ಗಂಗರು ಆಳ್ವಿಕೆ ಮಾಡುತ್ತಿದ್ದರು.
- ಚಾಲುಕ್ಯರು ತಮ್ಮ ಶಾಸನಗಳಲ್ಲಿ ತಾವು **ಹಾರತೀಪುತ್ರರೆಂದು** ಮಾನವ್ಯಗೋತ್ರಕ್ಕೆ ಸೇರಿದ ಕಾರ್ತಿಕೇಯನ ಮತ್ತು ಶ್ರೀಮನ್ ನಾರಾಯಣನ ಕೃಪೆಯಿಂದ **ವರಹಾ** ಲಾಂಛನವಾಗಿತ್ತೆಂದಿದ್ದಾರೆ.
- ಚಾಲುಕ್ಯ ರಾಜ್ಯದ ವ್ಯಾಪ್ತಿಯು ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದ ಕಾವೇರಿ ನದಿಯ ವರೆಗೆ, ಪೂರ್ವದಲ್ಲಿ ಆಂಧ್ರದಿಂದ ಪಶ್ಚಿಮದ ಗುಜರಾತ್‌ವರೆಗೆ ವಿಸ್ತರಿಸಿತ್ತು.

1ನೇ ಕೀರ್ತಿವರ್ಮ (566–596)

- 1ನೇ ಪುಲಕೇಶಿಯ ಮಗನಾದ ಇವನು ಬಾದಾಮಿಯಲ್ಲಿ **'ವಿಷ್ಣು ಗುಹಾಲಯ'** ನಿರ್ಮಿಸಿದನು. ಇವನನ್ನು **'ಪ್ರಥಮ ವಾತಾಪಿಯ ನಿರ್ಮಾಪಕ'** ಎನ್ನಲಾಗಿದೆ.
- ಐಹೊಳೆ ಶಾಸನವು ಇವನನ್ನು **"ನಳಮೌರ್ಯರ, ಕದಂಬರ ಕಾಳರಾತ್ರಿ"** ಎಂದು ವರ್ಣಿಸಿದೆ.

ಮಂಗಳೇಶ (598–609)

- ಇಮ್ಮಡಿ ಪುಲಕೇಶಿಯ ಚಿಕ್ಕಪ್ಪನಾದ ಇವನು ಗುಜರಾತ್ ಮತ್ತು ಖಾನ್ದೇಶ ಆಕ್ರಮಿಸಿದ ಇವನನ್ನು **ಚಾಲುಕ್ಯ ಕಲೆಯ ಪಿತಾಮಹ** ಎಂದು ಕರೆಯಲಾಗಿದೆ. 2ನೇ ಪುಲಕೇಶಿ ಜೊತೆ ಅಂತರ್ ಯುದ್ದದಲ್ಲಿ ಮಂಗಳೇಶನನ್ನು ಕೊಲೆ ಮಾಡಲಾಯಿತು.

ಇಮ್ಮಡಿ ಪುಲಕೇಶಿ (609–642)

- ಬಾದಾಮಿ ಚಾಲುಕ್ಯರ **ಅತ್ಯಂತ ಪ್ರಸಿದ್ಧ ದೊರೆ 2ನೇ ಪುಲಕೇಶಿ.** ಇವನು ರಾಷ್ಟ್ರಕೂಟರ ಅಪ್ಪಾಯಿಕ ಮತ್ತು ಗೋವಿಂದನನ್ನು,

ಮೌರ್ಯರನ್ನು ಸೋಲಿಸಿ ಮಹಾರಾಷ್ಟ್ರದ ಪುರಿ ಬಂದರು ಆಕ್ರಮಿಸಿದನು. ತನ್ನ ತಮ್ಮ ವಿಷ್ಣುವರ್ಧನನ್ನು ವೆಂಗಿ ಮತ್ತು ಜಯಸಿಂಹನನ್ನು ಗುಜರಾತ್ ಪ್ರಾಂತ್ಯಾಧಿಕಾರಿಗಳಾಗಿ ನೇಮಿಸಿದನು.

ನರ್ಮದಾ ಕದನ (630-634)

- ಉತ್ತರ ಪಥೇಶ್ವರ ಎಂಬ ಬಿರುದು ಧರಿಸಿದ್ದ ಹರ್ಷವರ್ಧನನನ್ನು ನರ್ಮದಾ ನದಿ ದಂಡೆಯ ಮೇಲೆ 2ನೇ ಪುಲಕೇಶಿ ಸೋಲಿಸಿ **'ಪರಮೇಶ್ವರ'** ಎಂಬ ಬಿರುದು ಪಡೆದನು. ನಂತರ ಪುಲಕೇಶಿ 99 ಸಾವಿರ ಗ್ರಾಮಗಳನ್ನೊಳಗೊಂಡ ಕರ್ನಾಟಕ, ಮಹಾರಾಷ್ಟ್ರ, ಕೊಂಕಣಗಳ ತ್ರೈರಾಷ್ಟ್ರಾಧಿಪತಿಯಾದನು.
- ಪುಲಕೇಶಿಯು ಪಲ್ಲವರ 1ನೇ ಮಹೇಂದ್ರವರ್ಮನನ್ನು **'ಪುಲ್ಲಲೂರು ಕದನ'**ದಲ್ಲಿ ಸೋಲಿಸಿದನು. ಮಹೇಂದ್ರವರ್ಮನು ಯುದ್ಧದಲ್ಲಿ ಮಡಿದನು. ನಂತರ 642ರಲ್ಲಿ ಪಲ್ಲವರ 1ನೇ ನರಸಿಂಹವರ್ಮ ತನ್ನ ತಂದೆಯ ಪ್ರತೀಕಾರ ತೀರಿಸಿಕೊಳ್ಳಲು ಪುಲಕೇಶಿಯ ಮೇಲೆ ದಂಡೆತ್ತಿ ಹೋದಾಗ **ಮಣಿಮಂಗಲ, ಸರಮಾರ** ಯುದ್ಧಗಳಲ್ಲಿ ಪುಲಕೇಶಿ ಹೋರಾಡುತ್ತಲೇ ಮಡಿದನು. ಬಾದಾಮಿ ಆಕ್ರಮಿಸಿದ ನರಸಿಂಹವರ್ಮನು **'ವಾತಾಪಿಗೊಂಡ'** ಎಂಬ ಬಿರುದು ಧರಿಸಿದನು.
- ಕ್ರಿ.ಶ.637 ರಲ್ಲಿ ಬಾಂಬೆ ಬಳಿಯ ಠಾಣಾ ಬಂದರಿನ ಮೇಲೆ ದಾಳಿ ಮಾಡಿದ ಪುಲಿಕೇಶಿ ಅಲ್ಲಿದ್ದ ಅರಬ್ಬರನ್ನು ಹೊರದೂಡಿದನು.
- ಕ್ರಿ.ಶ.641ರಲ್ಲಿ ಪುಲಕೇಶಿ ಆಸ್ಥಾನಕ್ಕೆ **ಚೀನಿ ಯಾತ್ರಿಕ ಹ್ಯೂಯನ್‌ತ್ಸಾಂಗ್** ಭೇಟಿ ನೀಡಿದ್ದನು. ಇವನು ತನ್ನ ಕೃತಿ ಸಿ.ಯು.ಕಿ ಯಲ್ಲಿ ಪುಲಕೇಶಿಯ ಪರಾಕ್ರಮ ರಾಜನಿಷ್ಠೆ ಬಗ್ಗೆ ಕೊಂಡಾಡಿದ್ದಾನೆ.
- ತಬರಿ ಇತಿಹಾಸಕಾರ ತಿಳಿಸುವಂತೆ ಪುಲಕೇಶಿಯು ತನ್ನ ರಾಯಭಾರಿಯನ್ನು ಪರ್ಶಿಯಾದ ದೊರೆ **2ನೇ ಖುಸ್ರು** ಆಸ್ಥಾನಕ್ಕೆ ಕಳುಹಿಸಿದ್ದನು. ಇದನ್ನು ಅಜಂತಾ ಗುಹೆಗಳ ಚಿತ್ರಗಳಲ್ಲಿ ಕಾಣಬಹುದು.

1ನೇ ವಿಕ್ರಮಾದಿತ್ಯ (655-680)

- 13 ವರ್ಷಗಳ ನಂತರ ಬಾದಾಮಿಯು ಪಲ್ಲವರಿಂದ ಪುಲಕೇಶಿಯ ಮಗನ ಕೈಸೇರಿತು. ಇವನು ಕಳೆದು ಹೋದ ಬಾದಾಮಿಯ ವೈಭವವನ್ನು ಮರು ಸ್ಥಾಪಿಸಿದನು. ಪಲ್ಲವರನ್ನು ಸೋಲಿಸಿ ಕಂಚಿ ಆಕ್ರಮಿಸಿದನು.
- **ಈತನ ಬಿರುದುಗಳು**-ರಣರಸಿಕ, ಶ್ರೀವಲ್ಲಭ, ಅವನೀತ ಮುಂತಾದವು.

ವಿನಯಾದಿತ್ಯ (681-696 ಎ.ಡಿ.)

- ಇವನ ಆಳ್ವಿಕೆಯ ಕಾಲ ಶಾಂತಿಯುತವಾಗಿತ್ತು. ಇವನು ಪಲ್ಲವರನ್ನು ಹಾಗೂ ಕನೂಜಿನ ಯಶೋವರ್ಮನನ್ನು ಸೋಲಿಸಿ **ಪಾಲಿಧ್ವಜ** ಮತ್ತು **ಶ್ವೇತಛತ್ರ, ಚಾಮರ** ಇತರೆ ರಾಜಲಾಂಛನಗಳನ್ನು ವಶಪಡಿಸಿಕೊಂಡನು.
- ಯುದ್ಧಮಲ್ಲ ಎಂಬ ಬಿರುದು ಹೊಂದಿದ ಇವನನ್ನು, ರನ್ನನ ಗದಾಯುದ್ಧದಲ್ಲಿ ದುರ್ದರಮಲ್ಲ ಎಂದು ಕರೆಯಲಾಗಿದೆ.

ವಿಜಯಾದಿತ್ಯ (696-734)

- ಇವನು ಕನೂಜಿನ ಯಶೋವರ್ಮನನ್ನು ಸೋಲಿಸಿದನು. ಪಲ್ಲವರನ್ನು ಸೋಲಿಸಿದ ನೆನಪಿಗಾಗಿ ಪಟ್ಟದಕಲ್ಲಿನ ವಿಜಯೇಶ್ವರ ದೇವಾಲಯ ನಿರ್ಮಿಸಿದನು. ಇವನು ಜೈನಧರ್ಮದ ಮಹಾ ಪೋಷಕನಾಗಿದ್ದನು.

2ನೇ ವಿಕ್ರಮಾದಿತ್ಯ (734-745 ಎ.ಡಿ.)

- ಇವನು ಗುಜರಾತಿನ ಮೇಲೆ ಆಕ್ರಮಣ ಮಾಡಿ ಅರಬ್ಬರನ್ನು ಹಿಮ್ಮೆಟ್ಟಿಸಿದನು. ಪಲ್ಲವರನ್ನು ಮೂರು ಬಾರಿ ಸೋಲಿಸಿ ಕಂಚಿಯನ್ನು ಪೂರ್ಣವಾಗಿ ಆಕ್ರಮಿಸಿದನು. ಇದರ ಜ್ಞಾಪಕಾರ್ಥವಾಗಿ ತನ್ನ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಪಟ್ಟದಕಲ್ಲಿನಲ್ಲಿ ವಿರೂಪಾಕ್ಷ ಮತ್ತು ತ್ರೈಲೋಕೇಶ್ವರ ಎಂಬ ದೇವಾಲಯಗಳನ್ನು ಕಟ್ಟಿಸಿದರು.

2ನೇ ಕೀರ್ತಿ ವರ್ಮ.

- ಚಾಲುಕ್ಯರ **ಕೊನೆಯ** ಅರಸನಾದ 2ನೇ ಕೀರ್ತಿವರ್ಮನನ್ನು ರಾಷ್ಟ್ರಕೂಟರ ದಂತಿದುರ್ಗನು ಸೋಲಿಸಿ ರಾಷ್ಟ್ರಕೂಟ ರಾಜ್ಯ ಸ್ಥಾಪಿಸಿದನು.

ಚಾಲುಕ್ಯರ ಕೊಡುಗೆಗಳು.

ಆಡಳಿತ

- ರಾಜ್ಯವನ್ನು→ಪ್ರಾಂತ್ಯ →ನಾಡು→ವಿಷಯ ಹಾಗೂ ಗ್ರಾಮಗಳಾಗಿ ವಿಂಗಡಿಸಿದ್ದರು. ಆಡಳಿತಾಧಿಕಾರಿಗಳೆಂದರೆ:-
- ವಿಷಯಾಧಿಪತಿ - ವಿಷಯಗಳ ಮುಖ್ಯಸ್ಥ.
- ರಾಜ್ಯಪಾಲ - ಪ್ರಾಂತ್ಯದ ಮುಖ್ಯಸ್ಥ.
- ಗಾವುಂಡ - ಗ್ರಾಮದ ಮುಖ್ಯಸ್ಥ.
- ಮಹಾಜನ ಮತ್ತು ಗ್ರಾಮ ಕೂಟಗಳು ಪಟ್ಟಣ ಹಾಗೂ ಗ್ರಾಮಗಳ ಪ್ರತಿನಿಧಿತ್ವ ಸಭೆಗಳಾಗಿದ್ದವು.

ಸೈನ್ಯಾಡಳಿತ

- ಚಾಲುಕ್ಯರ ಸೈನ್ಯವನ್ನು **'ಕರ್ನಾಟಕ ಬಲ'** ಎಂದು ಕರೆಯಲಾಗಿತ್ತು. ಅಶ್ವಪಡೆ, ಗಜಪಡೆ, ರಥಪಡೆ, ಒಂಟೆಪಡೆ ಮತ್ತು ಕಾಲ್ದಳಗಳಿಂದ ಕೂಡಿದ ಸೈನ್ಯದ ಮುಖ್ಯಸ್ಥ ದಂಡನಾಯಕನಾಗಿದ್ದನು.

ಕಂದಾಯ ವ್ಯವಸ್ಥೆ.

- ಭೂ ಕಂದಾಯ ರಾಜ್ಯದ ಮೂಲ ಇದನ್ನು **ಸಿದ್ದಯ** ಎನ್ನುತ್ತಿದ್ದರು. **ಬಿರ್ಕೊಡೆ** (ವ್ಯಾಪಾರ ತೆರಿಗೆ) **ಪನ್ನಯ** (ವೀಳ್ಯದೆಲೆ ತೆರಿಗೆ) **ವಡ್ಡರಾಮಲ** (ಅರಸ ಕುಟುಂಬದ ತೆರಿಗೆ)ಗಳು ಆದಾಯದ ಮೂಲಗಳಾಗಿದ್ದವು.

ಸಾಮಾಜಿಕ ವ್ಯವಸ್ಥೆ

- ವರ್ಣಾಶ್ರಮ ಪದ್ಧತಿ, ಜಾತಿಪದ್ಧತಿ, ವೃತ್ತಿಪರತೆ ಮತ್ತು ಏಕಪತ್ನಿತ್ವ

- ಸ್ತ್ರೀಯರಿಗೆ ಉನ್ನತ ಸ್ಥಾನಮಾನಗಳಿದ್ದವು. ಆದರೆ ಸತಿಪದ್ಧತಿ ಜಾರಿಯಲ್ಲಿರಲಿಲ್ಲ. ಸಂಗೀತ, ನೃತ್ಯ, ನಾಟಕ ಜನಪ್ರಿಯವಾಗಿದ್ದವು.

ಧಾರ್ಮಿಕ ಜೀವನ.

- ಆರಂಭ ಚಾಲುಕ್ಯರು ವೈಧಿಕ ಧರ್ಮದವರು ಅವರು ವಿಷ್ಣುವಿನ ಆರಾಧಕರು. ಆದರೂ ಎಲ್ಲಾ ಧರ್ಮಗಳ ಪೋಷಕರಾಗಿದ್ದರು. ಶೈವಧರ್ಮ ಪೋಷಿಸಿದ ಮಂಗಳೇಶ, ಮಹಾಕೂಟ ಶಿವ ದೇವಾಲಯ ಹಾಗೂ ರವಿಕೀರ್ತಿಯು ಜಿನನಾಗಿದ್ದು, ಐಹೊಳೆ ಜಿನಾಲಯವನ್ನು ಕಟ್ಟಿಸಿದರು.
- ಬೌದ್ಧ ಧರ್ಮವು ಕಡೆಯದಾಗಿ ಪೋಷಣೆಯಲ್ಲಿತ್ತು.

ಆರ್ಥಿಕ ವ್ಯವಸ್ಥೆ.

- ಕೃಷಿ ಪ್ರಧಾನ ಕಸುಬು, ಐಹೊಳೆಯಲ್ಲಿ 500 ಮಂದಿಯ ವೃತ್ತಿಪರ ಸಂಘವೊಂದು ಇತ್ತು. ಇದನ್ನು **'ಐಯ್ಯಾವಳೆ ಐನೋರ್ವರ್'** ಎನ್ನುತ್ತಿದ್ದರು. ಆಂತರಿಕ ವ್ಯಾಪಾರವು ವಸ್ತು ವಿನಿಮಯ ಪದ್ಧತಿ ಮೂಲಕ ನಡೆಯುತ್ತಿತ್ತು.
- ವಿದೇಶಿ ವ್ಯಾಪಾರವು ಆಫ್ರಿಕಾ ಚೀನಾದೊಂದಿಗಿತ್ತು.
- **ಮುಖ್ಯ ಬಂದರುಗಳು** – ಕಲ್ಯಾಣ, ಮಾಂಗುರತ್, ಮಲ್ಪೆ ಇತ್ಯಾದಿ
- **ವರಹ, ಗದ್ಯಾಣ** ಎಂಬ ಚಿನ್ನದ ನಾಣ್ಯಗಳು ಚಲಾವಣೆಯಲ್ಲಿದ್ದವು. ತೂಕ ಮತ್ತು ಅಳತೆ ಮಾಪಕಗಳಾದ **ವಿಶಾ** (ದ.ಕರ್ನಾಟಕ ತೂಕದ ಅಳತೆ) **ಬಂಡಿಪೇರು** (ಬಂಡಿಯ ಬಾರದಳತೆ) **ಮೆತ್ತರ**, ನಿರ್ವತನ ಎಂಬ ಭೂ ಅಳತೆ ಮಾಪಕಗಳಿದ್ದವು.

ಕಲೆ ಮತ್ತು ವಾಸ್ತುಶಿಲ್ಪ.

- ಚಾಲುಕ್ಯರು **'ಚಾಲುಕ್ಯ'** ಶೈಲಿ ಎಂಬ ಹೊಸ ಶೈಲಿಯ ಜನಕರಾಗಿದ್ದು, ಉತ್ತರದ ನಾಗರ ಶೈಲಿ, ದಕ್ಷಿಣದ ದ್ರಾವಿಡ ಶೈಲಿ ಬೆರೆಸಿ **'ವೇಸರ ಶೈಲಿ'** ಎಂಬ ವಾಸ್ತುಶಿಲ್ಪದ ನಿರ್ಮಾಣ ಆರಂಭಿಸಿದರು. ಇವರನ್ನು "ಕರ್ನಾಟಕ ದೇವಾಲಯ ವಾಸ್ತುಶಿಲ್ಪದ ಪ್ರವರ್ತಕರು" ಎನ್ನಲಾಗಿದೆ.
- **ಕಲೆ–ವಾಸ್ತುಶಿಲ್ಪದ ಲಕ್ಷಣಗಳು:–** ದೇವಾಲಯದ ತಳಭಾಗ ಚಿಕ್ಕದಾಗಿದ್ದು, ಚೌಕಾಕಾರದ ಗರ್ಭಗೃಹ ಅದರ ಸುತ್ತ ಪ್ರದಕ್ಷಿಣಾ ಪಥ, ಸಭಾಮಂಟಪ, ಮುಖಮಂಟಪ, ಸುಖನಾಸಿ ಭಾಗಗಳನ್ನೊಳಗೊಂಡಿದೆ. ಹಾಗೆಯೇ ದೇವಾಲಯವು 3 ಅಥವಾ 4 ಅಡಿ ಎತ್ತರದ ಪೀಠದ ಮೇಲೆ ನಿರ್ಮಾಣವಾಗಿವೆ.
- **ಬಾದಾಮಿ:–** 1ನೇ ಕೀರ್ತಿವರ್ಮ ಮತ್ತು ಮಂಗಳೇಶನಿಂದ ನಿರ್ಮಿತವಾದ 4 ಗುಹಾಂತರ ದೇವಾಲಯಗಳಿವೆ. 1ನೇ ಗುಹೆಯಾದ ಶೈವಗುಹೆಯಲ್ಲಿ ತ್ರಿಮೂರ್ತಿ ವಿಗ್ರಹ ಅರ್ಧನಾರೀಶ್ವರ ಹರಿಹರ, ಮಹಿಷಾಸುರ ಮರ್ಧಿನಿ ಶಿಲ್ಪಗಳಿವೆ. 2 ಮತ್ತು 3ನೇ ಗುಹೆಗಳಾದ ವೈಷ್ಣವ ಗುಹೆಗಳಲ್ಲಿ ವರಾಹ, ನರಸಿಂಹ ಶಿಲ್ಪಗಳಿವೆ. 4ನೇ ಗುಹೆಯಾದ ಜೈನ ಗುಹೆಯಲ್ಲಿ 24 ಜೈನ ತೀರ್ಥಂಕರ ವಿಗ್ರಹಗಳಿವೆ. ಬಾದಾಮಿಯ 3ನೇ ಗುಹೆಯು ಚಾಲುಕ್ಯರ ಬೃಹದ್ದೇವ ಗುಹಾಲಯವಾಗಿದೆ.

- **ಐಹೊಳೆ:–** ಚಾಲುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಐಹೊಳೆಯಿಂದ ಪ್ರಾರಂಭವಾಯಿತು. ಇಲ್ಲಿ ಸುಮಾರು 70 ದೇವಾಲಯಗಳಿದ್ದು, ಪರ್ಸಿಬ್ರೌನ್‌ರವರು ಐಹೊಳೆಯನ್ನು **"ಭಾರತೀಯ ಶಿಲ್ಪಕಲೆಯ ತೊಟ್ಟಿಲು"** ಎಂದಿದ್ದಾರೆ. ಇಲ್ಲಿನ ಪ್ರಮುಖ ದೇವಾಲಯಗಳೆಂದರೆ:–

1) **ಲಾಡಕಾನ್ ದೇವಾಲಯ–** ಲಾಡಕಾನ್ ಎಂಬ ಮುಸ್ಲಿಂ ಇಲ್ಲಿ ವಾಸವಾಗಿದ್ದನು.
2) **ದುರ್ಗಾ ದೇವಾಲಯ** – ಇದರ ತಳವಿನ್ಯಾಸ **'ಕುದುರೆ ಲಾಳಾಕಾರ'** ದಲ್ಲಿದೆ. ಬೌದ್ಧ ಚೈತ್ಯ ಮಂದಿರದ ಮಾದರಿಯಲ್ಲಿದೆ.
3) **ಮೇಗುತಿ ಜಿನ ಗುಹಾಲಯ** – ಇದನ್ನು ರವಿಕೀರ್ತಿ ನಿರ್ಮಿಸಿದನು. ದ್ರಾವಿಡ ಶೈಲಿಯಲ್ಲಿದೆ.
4) **ಹುಚ್ಚಿಮಲ್ಲಿ ಗುಡಿ** – ನಾಗರ ಶೈಲಿಯ ಗೋಪುರವಿದೆ. ಇದು 4 ಅಡಿ ಜಗುಲಿಯ ಮೇಲಿದೆ.
5) **ಮಾಲಗಿತ್ತಿ ದೇವಾಲಯ** – ದ್ರಾವಿಡ ಶೈಲಿಯಲ್ಲಿದೆ.
6) ಬೌದ್ಧ, ಜೈನ ಮತ್ತು ಹಿಂದೂ ಗುಹಾಲಯಗಳಿವೆ.

ಪಟ್ಟದ ಕಲ್ಲು (The World Heritage Site)

- ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯವನ್ನು ವಿಕ್ರಮಾದಿತ್ಯನ ರಾಣಿ ಲೋಕಮಹಾದೇವಿಯು ಪಲ್ಲವರ ವಿರುದ್ಧ ವಿಜಯದ ನೆನೆಪಿಗಾಗಿ ದ್ರಾವಿಡ ಶೈಲಿಯಲ್ಲಿ ಕಟ್ಟಿಸಲಾಗಿದೆ.
- ಮಲ್ಲಿಕಾರ್ಜುನ, ಸಂಗಮೇಶ್ವರ (ದ್ರಾವಿಡ ಶೈಲಿ), ಪಾಪನಾಥ (ನಾಗರ ಶೈಲಿ), ಕಾಶೀನಾಥ (ನಾಗರ ಶೈಲಿ) ದೇವಾಲಯಗಳು.
- **ಚಿತ್ರಕಲೆ :–** ಚಾಲುಕ್ಯರ ಚಿತ್ರ ಕಲೆಯನ್ನು ಅಜಂತಾದಲ್ಲಿ ಕಾಣಬಹುದು. ಇಲ್ಲಿನ 1ನೇ ಗುಹೆಯಲ್ಲಿ ಬುದ್ಧನ ಪ್ರಲೋಭನೆ ಮತ್ತು ಪುಲಕೇಶಿಯ ಹಾಗೂ ಪರ್ಶಿಯಾದ ಇಮ್ಮಡಿ ಖುಸ್ರುವಿನ ಆಸ್ಥಾನಗಳ ರಾಯಭಾರಿಗಳ ಪರಿಚಯದ ಚಿತ್ರವಿದೆ. 3ನೇ ಗುಹೆಯಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಇಲ್ಲಿನ **'ಶಿವ–ಪಾರ್ವತಿಯರ ನಿಶ್ಚಿತಾರ್ಥದ'** ದೃಶ್ಯವಿದೆ.

11.3 ಪಲ್ಲವರು (Pallavas)

- ಶಾತವಾಹನರ ಅವನತಿಯ ನಂತರ ದಕ್ಷಿಣ ಭಾರತದಲ್ಲಿ ಪ್ರಾಬಲ್ಯಕ್ಕೆ ಬಂದವರು ಪಲ್ಲವರು. ಇವರ ರಾಜಧಾನಿ **ಕಂಚಿಯಾಗಿತ್ತು.**
- ಪಲ್ಲವರ ಆರಂಭದ ಶಾಸನಗಳು ಪ್ರಾಕೃತದಲ್ಲಿದ್ದು ಅವರು ತಮ್ಮನ್ನು **ಭಾರದ್ವಾಜ ಗೋತ್ರದವರೆಂದು** ಕರೆದುಕೊಂಡು ಶಾತವಾಹನರ ಸಾಮಂತರಾಗಿದ್ದರು.
- ವಿ.ಎ. ಸ್ಮಿತ್. ಡಾ.ಫ್ಲೀಟ್, ಬಿ.ಎಲ್.ರೈಸ್ ಮುಂತಾದ ವಿದ್ವಾಂಸರು ಪಲ್ಲವರು ವಿದೇಶಿಯರು ಪಹ್ಲವ ಕುಟುಂಬಕ್ಕೆ ಸೇರಿದ್ದು, ಪಾರ್ಥಿಯದಲ್ಲಿ ವಾಸವಾಗಿದ್ದರೆಂದಿದ್ದಾರೆ.
- ಡಾ.ಸತ್ಯಾನಾಥ್ ಅಯ್ಯರ್, ನೀಲಕಂಠಶಾಸ್ತ್ರಿಯವರು ಪಲ್ಲವರು ತೊಂಡೈಮಂಡಲ ಅಥವಾ ತಮಿಳುನಾಡು ಮೂಲದವರು

- ಸತ್ಯನಾಥ ಅಯ್ಯರ್ ರವರು ಪಲ್ಲವರು ದಕ್ಷಿಣದ ಕುರುಂಬ ಅಥವಾ ಪುಳಿಂದ ಪಂಗಡದವರೆಂದು ಅಶೋಕನ ಶಾಸನಗಳಲ್ಲಿ ಉಲ್ಲೇಖಿಸಿರುವ **'ಪಲದ'** ಅಥವಾ **'ಪಲ್ಲವರು'** ಎಂದಿದ್ದಾರೆ.

ಆಧಾರಗಳು

1) ಪ್ರಾಕೃತ ಶಾಸನಗಳು ಕಾಲ (ಕ್ರಿ.ಶ.3ನೇ ಶತಮಾನ)
2) ಸಂಸ್ಕೃತ ಶಾಸನಗಳ ಕಾಲ (ಕ್ರಿ.ಶ350–550)
3) ಶಿಲಾಶಾಸನಗಳ ಕಾಲ (ಕ್ರಿ.ಶ575 – 600)

ರಾಜಕೀಯ ಇತಿಹಾಸ

ಶಿವಸ್ಕಂದ ವರ್ಮ

- ಈತನು ಪಲ್ಲವ ರಾಜ್ಯ ಸ್ಥಾಪಕ. ಇವನು ಭಾರದ್ವಾಜ ವಂಶದವನು. ಈತನ ರಾಜಧಾನಿ **ಕಂಚಿ**. ಇವನ ರಾಜ್ಯವು ಉತ್ತರದ ಕೃಷ್ಣಾನದಿ, ದಕ್ಷಿಣದ ಪೆನ್ನಾರ್ ನದಿಯವರೆಗೆ ವಿಸ್ತರಿಸಿತ್ತು.
- ಅಶ್ವಮೇಧ ಯಾಗ ಮಾಡಿದ ಇವನಿಗೆ **'ಧರ್ಮಮಹಾರಾಜ'** ಎಂಬ ಬಿರುದಿತ್ತು.
- ಪಲ್ಲವರ ರಾಜಕೀಯ ಇತಿಹಾಸ ತಿಳಿಯಲು ಪ್ರಾಕೃತ ಶಾಸನಗಳು ಮುಖ್ಯವಾಗಿವೆ.
- ಸಂಸ್ಕೃತ ಶಾಸನಗಳ ಸಂತತಿ(350–550) ಕಾಲದಲ್ಲಿ ಸಿಂಹವರ್ಮ, 1ನೇ ಸ್ಕಂದವರ್ಮ, ಕುಮಾರವಿಷ್ಣು, ಬುದ್ಧವರ್ಮ, ವಿಷ್ಣುಗೋಪ, ಮತ್ತು 2ನೇ ಸ್ಕಂದವರ್ಮರು ಪ್ರಮುಖರು.
- ಶಾಸನಗಳಲ್ಲಿ ಉಲ್ಲೇಖವಾಗಿರುವ ವಿಷ್ಣುಗೋಪನು ಗುಪ್ತರ ಸಮುದ್ರಗುಪ್ತನಿಂದ ಸೋಲಲ್ಪಟ್ಟನೆಂದು ಉಲ್ಲೇಖಿಸಿವೆ.
- ಪಲ್ಲವರ ಶಿಲಾ ಶಾಸನಗಳ ಸಂತತಿಯ ಆಳ್ವಿಕೆಯು ಸಿಂಹವಿಷ್ಣುವಿನಿಂದ ಪ್ರಾರಂಭವಾಗುತ್ತದೆ. ಇವನು ವೈಷ್ಣವ ಮತದವನು. ಈತನು ಭಾರವಿಯ ಪೋಷಕನಾಗಿದ್ದು, ಕಿರಾತರ್ಜುನಿಯ ಕೃತಿಯ ಕರ್ತೃ ಇವನಾಗಿದ್ದಾನೆ. ಸಿಂಹವಿಷ್ಣು ಕಾಲದಲ್ಲಿ ಪಲ್ಲವರ ರಾಜಕೀಯ ಮತ್ತು ಸಾಂಸ್ಕೃತಿಕ ಅಬ್ಯುದಯ ಆರಂಭವಾಯಿತು.

1ನೇ ಮಹೇಂದ್ರ ವರ್ಮ (ಕ್ರಿ.ಶ.580-630)

- ಇವನ ಕಾಲದಲ್ಲಿ ಬಾದಾಮಿ ಚಾಲುಕ್ಯರ ದೊರೆ 2ನೇ ಪುಲಕೇಶಿ ಕಂಚಿಗೆ ಮುತ್ತಿಗೆ ಹಾಕಿ ಮಹೇಂದ್ರ ವರ್ಮನನ್ನು ಸೋಲಿಸಿದನು. ಇದರಿಂದ ಮಹೇಂದ್ರವರ್ಮನಿಗೆ ಉತ್ತರದ ಭಾಗಗಳು ಕೈತಪ್ಪಿದವು. ಆದರೆ ದಕ್ಷಿಣ ಭಾಗವು ಸುಭದ್ರವಾಗಿತ್ತೆಂದು ತಿರುಚರಾಪಳ್ಳಿ ಶಾಸನ ತಿಳಿಸುತ್ತದೆ.
- ಇವನು ಶೈವ ಸಂತ ಅಪ್ಪಾರ್‌ನಿಂದ ಶೈವ ಮತಸ್ಥನಾದನು. ಉತ್ತರ ಆರ್ಕಾಟಿನಲ್ಲಿ **'ಭೈರವಕೊಂಡ'** ದೇವಾಲಯ ಮತ್ತು **'ಅನಂತೇಶ್ವರ'** ದೇವಾಲಯ ಕಟ್ಟಿಸಿದನು. ತಟಾಕದಲ್ಲಿ ವಿಷ್ಣುಗೃಹ ಕಟ್ಟಿಸಿದನು.
- **ಈತನ ಬಿರುದುಗಳು** – ವಿಚಿತ್ರ ಚಿತ್ತ ಮತ್ತು ಚಿತ್ರಕಾರಪುಲಿ.
- **1 ನೇ ಮಹೇಂದ್ರವರ್ಮನ ಕೃತಿಗಳು** 1) ಮತ್ತವಿಲಾಸ ಪ್ರಹಸನ (ಸಂಸ್ಕೃತ ನಾಟಕ) 2) ಭಗದಜ್ಜುಕೀಯ ಕೃತಿ.
- ಈತನು ಸಂಗೀತ ವಿದ್ವಾಂಸ ರುದ್ರಾಚಾರ್ಯರ ಶಿಷ್ಯನಾಗಿದ್ದನು.
- 1ನೇ ಮಹೇಂದ್ರವರ್ಮನು **'ಚಿತ್ರತಟಾಕ'** ಎಂಬ ಕೆರೆ ಕಟ್ಟಿಸಿದನು.

1ನೇ ನರಸಿಂಹವರ್ಮನ್ (ಕ್ರಿ.ಶ.630-655)

- ಇವನು **ಪಲ್ಲವರ ಅತ್ಯಂತ ಪ್ರಸಿದ್ಧ ದೊರೆ**. ಇವನು ತನ್ನ ಸೇನಾನಿಯಾದ **'ಪರಂಜ್ಯೋತಿ'** ನೇತೃತ್ವದಲ್ಲಿ ಚಾಲುಕ್ಯ ಸೈನ್ಯವನ್ನು ಪೆರಿಯಾಲ ಮತ್ತು ಮಣಿಮಂಗಲ ಸರಮಾರ ಯುದ್ಧಗಳಲ್ಲಿ ಸೋಲಿಸಿ ಕ್ರಿ.ಶ.642ರಲ್ಲಿ ಇಮ್ಮಡಿ ಪುಲಕೇಶಿಯನ್ನು ಸೋಲಿಸಿ ವಾತಾಪಿಗೆ ಮುತ್ತಿಗೆ ಹಾಕಿದನು. ಇದರಿಂದ **'ವಾತಾಪಿಗೊಂಡ'** ಎಂಬ ಬಿರುದು ಧರಿಸಿದನು. ಇವನಿಗೆ ಸಿಂಹಳದ ದೊರೆ ಮಾನವರ್ಮ ಸೈನಿಕ ಸಹಾಯ ನೀಡಿದ್ದನು.
- ನರಸಿಂಹವರ್ಮ ಪುಲಕೇಶಿಯನ್ನು ಸೋಲಿಸಿದ್ದರ ಬಗ್ಗೆ ಬಾದಾಮಿಯ ದೇವಾಲಯದ ಹಿಂಬಾಗದ ಬಂಡೆಗಲ್ಲಿನಲ್ಲಿ ಕೆತ್ತಲಾಗಿದೆ.
- ಈ ವಿಜಯದ ನಂತರ ಪರಂಜ್ಯೋತಿ ಶೈವ ಸಂತನಾಗಿ **'ಸಿರೊತ್ತುಂಡ ನಯನಾರ್'** ಎಂಬ ಹೆಸರು ಪಡೆದನು.
- ನರಸಿಂಹವರ್ಮನ ಸಿಂಹಳ ದ್ವೀಪದ ಆಕ್ರಮಣದ ವಿಷಯಗಳು ಬೌದ್ಧ ಗ್ರಂಥವಾದ **'ಮಹಾವಂಶ'**ದಿಂದ ತಿಳಿದು ಬರುತ್ತದೆ. ಮತ್ತು ಸಿಂಹಳದ ದಂಡಯಾತ್ರೆ ಬಗ್ಗೆ ಕಾಸಕ್ಕುಡಿ ಶಾಸನದಲ್ಲಿ ಉಲ್ಲೇಖಿಸಲಾಗಿದ್ದು ಈ ದಂಡಯಾತ್ರೆಯನ್ನು ಶ್ರೀರಾಮಚಂದ್ರನ ಲಂಕಾ ವಿಜಯ ಯಾತ್ರೆಗೆ ಹೋಲಿಸಲಾಗಿದೆ.
- ನರಸಿಂಹ ವರ್ಮನ 2ನೇ ರಾಜಧಾನಿ **ಮಹಾಬಲಿಪುರಂ/ ಮಾಮಲ್ಲಪುರಂ** ಆಗಿದ್ದು (ತನ್ನ ಬಿರುದುಗಳಲೊಂದಾದ ಮಾಮಲ್ಲ ಎಂಬ ಹೆಸರಿಟ್ಟನು) ಇದನ್ನು ತನ್ನ ದಿಗ್ವಿಜಯದ ನೆನಪಿಗಾಗಿ ನಿರ್ಮಿಸಿದನು.
- ನಂತರ ಕ್ರಿ.ಶ.655ರಲ್ಲಿ ಚಾಲುಕ್ಯರ 1ನೇ ವಿಕ್ರಮಾದಿತ್ಯನು ಗಂಗರ ದೊರೆ ಭೂವಿಕ್ರಮನ ಸಹಾಯದಿಂದ ಪಲ್ಲವರನ್ನು ಸೋಲಿಸಿ ಬಾದಾಮಿ ಮತ್ತು ಇನ್ನಿತರ ಚಾಲುಕ್ಯರ ಪ್ರದೇಶಗಳನ್ನು ಮರಳಿ ಪಡೆದನು.
- 1ನೇ ನರಸಿಂಹವರ್ಮನ ಆಸ್ಥಾನಕ್ಕೆ 629ರಲ್ಲಿ ಚೀನಾದ ಯಾತ್ರಿಕ **ಹ್ಯೂಯನ್‌ತ್ಸಾಂಗ್** ಭೇಟಿ ನೀಡಿದ್ದನು.
- ಈತನ ಬಿರುದುಗಳು – ವಾತಾಪಿಗೊಂಡ ಮತ್ತು ಮಹಾಮಲ್ಲ.

2ನೇ ನರಸಿಂಹವರ್ಮ ಅಥವಾ ರಾಜಸಿಂಹ (ಕ್ರಿ.ಶ.681-700)

- ಇವನು ಅರೇಬಿಯಾದ ವರ್ತಕರ ಪ್ರಾಬಲ್ಯ ಮುರಿಯಲು ಚೀನಾದ ದೊರೆಗೆ ನೆರವು ನೀಡಿದ್ದನು.
- ಇವನು ಕಂಚಿಯ ಕೈಲಾಸನಾಥ (ರಾಜಸಿಂಹಳೇಶ್ವರ), ಐರಾವತೇಶ್ವರ ತಾಳಗಿರೀಶ, ಶೋರ್ ದೇವಾಲಯ, ಈಶ್ವರ, ಮುಕುಂದ ಮತ್ತು ಮಾಮಲ್ಲಪುರದ ಕಡಲತೀರದ

ದೇವಾಲಯಗಳನ್ನು ಕಟ್ಟಿಸಿದನು.

- ಇವನ ಆಸ್ಥಾನದಲ್ಲಿ ದಂಡಿ ಕವಿಯಿದ್ದು **'ಕಾವ್ಯಾದರ್ಶ'** ಕೃತಿ ರಚಿಸಿದನು.

ನಂದಿವರ್ಮನ್ ಪಲ್ಲವಮಲ್ಲ (ಕ್ರಿ.ಶ.710-755)

- ವಿಕ್ರಮಾದಿತ್ಯನು ಕಂಚಿಯ ಕೈಲಾಸನಾಥ ದೇವಾಲಯದಲ್ಲಿ ಕೆತ್ತಿಸಿರುವ ಕನ್ನಡ ಶಾಸನಗಳು ಇವನ ಬಗ್ಗೆ ತಿಳಿಸುತ್ತವೆ.
- ಇವನು ಕಂಚಿಯ **ವೈಕುಂಠಪೆರುಮಾಳ್** ಮತ್ತು ಕೋರಮ್‌ನ **ಪೆರುಮಾಳ್** ದೇವಾಲಯಗಳನ್ನು ಕಟ್ಟಿಸಿದನು.

ದಂತಿವರ್ಮನ್(755-826)

- ಈತನ ಆಳ್ವಿಕೆಯ ಕಾಲದಲ್ಲಿ ಕಂಚಿಯನ್ನು ರಾಷ್ಟ್ರಕೂಟರ 3ನೇ ಗೋವಿಂದನು ಮುತ್ತಿಗೆ ಹಾಕಿದನು
- ಇವನು ಚನ್ನೈನ ಟೆಂಪ್ಲಟನ್‌ನಲ್ಲಿರುವ ಪಾರ್ಥಸಾರಥಿ ದೇವಾಲಯವನ್ನು ನಿರ್ಮಿಸಿದು.
- ಪಾಂಡ್ಯರ ವಿಜಯದ ನೆನಪಿಗೆ **'ತೆಲ್ಲಾರ ಎರಿಂದ'** ಎಂಬ ಬಿರುದು ಪಡೆದನು. ಅಪರಾಜಿತವರ್ಮನ ಸೋಲಿನೊಂದಿಗೆ ಪಲ್ಲವ ರಾಜ್ಯ ಅಂತ್ಯವಾಯಿತು.

ಪಲ್ಲವರ ಆಡಳಿತ

- ಪಲ್ಲವರು ಶಾತವಾಹನರ ಆಡಳಿತ ಪದ್ಧತಿಯನ್ನು ಅನುಸರಿಸಿದರು. ಶಿವಸ್ಕಂದವರ್ಮನ ಕಾಲದಲ್ಲಿನ ಶಾಸನವೊಂದರಲ್ಲಿ ರಾಜಕುಮಾರ, ಸೇನಾಪತಿ, ದಶಾಧಿಕೃತ, ಗ್ರಾಮ, ಬೋಜಕ ಗೌಮಾಳಿಕ ಎಂಬ ಅಧಿಕಾರಿಗಳಿದ್ದರು ಎಂಬ ಉಲ್ಲೇಖಗಳಿವೆ.
- **ಅಮಾತ್ಯ** ತೆರಿಗೆ ಸಂಗ್ರಹಣಾಧಿಕಾರಿ ಮತ್ತು **ಭೋಜಕರು** ಎಂಬ ಗ್ರಾಮಾಡಳಿತ ಅಧಿಕಾರಿಗಳಿದ್ದರು..
- ಪ್ರಾಂತ್ಯಗಳನ್ನು ಕೊಟ್ಟಂ/ಜಿಲ್ಲೆಗಳಾಗಿ ವಿಂಗಡಿಸಲಾಗಿತ್ತು. ರಾಜಪ್ರತಿನಿಧಿ ಪ್ರಾಂತ್ಯಾಧಿಕಾರಿಯಾಗಿದ್ದನು.
- ಗ್ರಾಮಗಳಲ್ಲಿ ಸುವ್ಯವಸ್ಥಿತವಾದ ಸ್ವಯಂ ಆಡಳಿತ ವ್ಯವಸ್ಥೆಯನ್ನು ಪ್ರತಿ ಗ್ರಾಮದಲ್ಲಿ ಊರ್ ಮಹಾಸಭಾ ಸಭೆಗಳಿದ್ದು ಗ್ರಾಮದ ವಿವಿಧ ಆಡಳಿತಗಳನ್ನು ನೋಡಿಕೊಳ್ಳುತ್ತಿದ್ದರು.
- ದೇವಾಲಯಗಳ ಮೇಲ್ವಿಚಾರಣೆಯು **ಅಮೃತರ್ಪಣ** ಸಂಸ್ಥೆಗೆ ಸೇರಿತ್ತು.
- ಶೈವ ಸಂತರನ್ನು **'ನಯಾನ್ಮಾರರು'** ಎಂದು ಕರೆಯಲಾಯಿತು. (ಮಾಣಿಕ್ಯ ವಾಚಕರ್, ಸಂಬಂಧರ್, ಅಪ್ಪರ್)
- ವೈಷ್ಣವ ಸಂತರನ್ನು **'ಆಳ್ವಾರರು'** ಎಂದು ಕರೆಯಲಾಯಿತು (ಪಿರುಮಂಗ್ಯೆ, ಆರ್ಯನ್, ತಿರುಮಳ ಶೈ)
- ಪಲ್ಲವರ ಸೈನವು **ಚದುರಂಗ** ಬಲದಿಂದ ಕೂಡಿತ್ತು.
- ಇವರ ಕಾಲದಲ್ಲಿ ಅನೇಕ ಶಿವ ಮತ್ತು ವಿಷ್ಣು ದೇವಾಲಯಗಳು ನಿರ್ಮಿತವಾದವು.
- ಪಲ್ಲವರು ರಾಜಕೀಯ ಪ್ರಭುತ್ವವನ್ನು ತಮಿಳುನಾಡು ಮತ್ತು ದಕ್ಷಿಣ ಆಂಧ್ರದಲ್ಲಿ ಸಾಧಿಸಿದ್ದರು.

ಸಾಹಿತ್ಯ

1. ಮಾಮಲ್ಲರ್ - ತಿರುಮಂದಿರಂ
2. ಬಾರವಿ - ಕಿರಾತರ್ಜುನೀಯ
3. ದಂಡಿ - ಕಾವ್ಯಾದರ್ಶ ಮತ್ತು ಆವಂತಿ ಸುಂದರಿಕಥಾ
4. ದಿಙ್ನಾಗ - ನ್ಯಾಯ ಪ್ರವೇಶ (ತರ್ಕಶಾಸ್ತ್ರ ಗ್ರಂಥ)
5. ತೇವಾರಂ - ನಾಲಾಯರ ಪ್ರಬಂಧಂ ಗ್ರಂಥಗಳು
6. ನಂದಿಕಳಂಕಂ ಗ್ರಂಥ ನಂದಿವರ್ಮನ ಕಾಲದಲ್ಲಿ ರಚಿತವಾದವು.

ಕಲೆ ಮತ್ತು ವಾಸ್ತುಶಿಲ್ಪ

ಪಲ್ಲವರ ಕಾಲದಲ್ಲಿ ಕಂಬಗಳಿಂದ ಕೂಡಿದ ವಿಶಾಲವಾದ ಸಭಾಂಗಣ ಮತ್ತು ಗೋಪುರ ಮತ್ತು ವಿಮಾನದ ಲಕ್ಷಣಗಳಿಂದ ಕೂಡಿದ ದೇವಾಲಯಗಳ ನಿರ್ಮಾಣ ಆರಂಭವಾಯಿತು. ಪಲ್ಲವರ ಕಾಲದಲ್ಲಿ ದ್ರಾವಿಡ ಶೈಲಿಯಲ್ಲಿ ಬೆಳೆದ ವಾಸ್ತು ಶಿಲ್ಪವನ್ನು ಕೆಳಗಿನ 04 ಹಂತಗಳಲ್ಲಿ ನೋಡಬಹುದು.

1. ಮಹೇಂದ್ರ ಗುಂಪು

- ಈ ಗುಂಪಿನಲ್ಲಿ ಗುಹೆ ಮಾದರಿಯ ವಾಸ್ತುಶಿಲ್ಪ ಕಾಣಬಹುದು
- ಕಲ್ಲಿನಿಂದ ಕೊರೆದ ಭೈರವ ಕೊಂಡ (ಉತ್ತರ ಆರ್ಕಾಟ್) ಉದವಹಳ್ಳಿ (ಗುಂಟೂರು) ಅನಂತೇಶ್ವರ ದೇವಾಲಯಗಳು ಪ್ರಮುಖವಾಗಿವೆ.

2. ನರಸಿಂಹ ಗುಂಪು

- ರಥಗಳು ಮತ್ತು ಏಕಶಿಲಾ ದೇವಾಲಯಗಳು ಪ್ರಮುಖವಾಗಿವೆ. ಪ್ರತಿಯೊಂದು ದೇವಾಲಯಗಳನ್ನು ಒಂದೇ ಬಂಡೆಯಿಂದ ಕೊರೆದು ಬಿಡಿಸಲಾಗಿದೆ.
- ಏಕಶಿಲಾ ದೇವಾಲಯಗಳು ಮಾಮಲ್ಲಪುರಂನಲ್ಲಿ ಕಂಡುಬಂದಿವೆ. ರಥಗಳು 7 ಪಗೋಡಗಳು ಎಂದು ಪ್ರಸಿದ್ಧ ಹೊಂದಿದ 08 ರಥಗಳಿವೆ. ಅವುಗಳೆಂದರೆ. ಧರ್ಮರಾಜ, ಭೀಮ, ಅರ್ಜುನ, ಸಹದೇವ, ದ್ರೌಪದಿ, ಗಣೇಶ, ಐದಾರಿ ಮತ್ತು ಪೊಳ್ಳೈಯನ್

3. ರಾಜಸಿಂಹ ಗುಂಪು

ಶೋರೆ, ಈಶ್ವರ ಮತ್ತು ಮುಕುಂದ ದೇವಾಲಯಗಳು ಮಹಾಬಲಿಪುರಂನಲ್ಲಿವೆ. ಪನಾಮಲೈನಲ್ಲಿ ಒಂದು, ಕಂಚಿಯಲ್ಲಿ ಕೈಲಾಸನಾಥ ದೇವಾಲಯ ಮುಖ್ಯವಾದುವು ಈ ಗುಂಪಿಗೆ ಸೇರಿವೆ.

4. ನಂದಿವರ್ಮನ ಗುಂಪು

- ಈ ಗುಂಪಿನಲ್ಲಿ ಸಣ್ಣ ಸಣ್ಣ ದೇವಾಲಯಗಳಿವೆ. ಆದರೆ ವೈಕುಂಠ ಪೆರುಮಾಳ್ ಮಾತ್ರ ದೊಡ್ಡದಾಗಿದೆ. ಇವುಗಳು ಹೆಚ್ಚು ಚೋಳರ ವಾಸ್ತುಶಿಲ್ಪವನ್ನು ಹೋಲುತ್ತವೆ. ಇವುಗಳನ್ನು ಮುಕ್ತೇಶ್ವರ ಮತ್ತು ಮಾತಂಗೇಶ್ವರ (ಕಂಚಿ) ನಾದಮಾಲೀಶ್ವರ ಮತ್ತು ರೇಣಿಗುಂಟಾದ

ದೇವಾಲಯ ಮುಖ್ಯವಾದವು.

- ಪಲ್ಲವರ ಶಿಲ್ಪಕಲೆಯು ಬೌದ್ಧ ಸಂಪ್ರದಾಯಕ್ಕೆ ಋಣಿಯಾಗಿದೆ. ಇವುಗಳು ಸ್ಮಾರಕ ಮತ್ತು ಸ್ಥಳ ರೂಪದ ಶಿಲ್ಪಗಳಾಗಿವೆ.
- ಮಹಾಬಲಿಪುರಂನಲ್ಲಿರುವ 'Decent of the Ganga' ಅರ್ಜುನನ ತಪಸ್ಸು ಎಂಬ ಶಿಲ್ಪಗುಚ್ಛ ಪ್ರಸಿದ್ಧಿ ಪಡೆದಿದೆ.
- ಪಲ್ಲವರ ಶೈಲಿಯು ಪಿರಿಮಿಡ್ಡಿನಾಕಾರದ ಗೋಪುರ, ಗರ್ಭಗುಡಿ, ಕಂಬಗಳ ನಿರ್ಮಾಣ, ಮುಖಮಂಟಪ ಹಾಗೂ ಸುತ್ತಲೂ ಚಚೌಕಾರದ ಗೋಡೆಗಳಿಂದಾವೃತವಾದ ವಿಶಾಲವಾದ ಪ್ರಾಕರಗಳಿಂದ ಕೂಡಿತ್ತು.
- 1ನೇ ನರಸಿಂಹನ ಕಾಲದಲ್ಲಿ ಮಂಟಪಗಳಲ್ಲಿ ಕೆತ್ತಲಾಗಿರುವ ಅನಂತಶಯನ ಮಹಿಷಾಸುರ ಮರ್ಧಿನಿ ಮತ್ತು ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದಿರುವ ಶಿಲ್ಪ ಕೃತಿಗಳನ್ನು ಕೆತ್ತಲಾಗಿದೆ.
- ಮಹಾಬಲಿಪುರಂ ಕಡಲ ತೀರದ ದೇವಾಲಯ ಪಲ್ಲವರ ಕಾಲದಲ್ಲೇ ಅತ್ಯಂತ ಪ್ರಾಚೀನವಾದುದು.

ಮಡಿಕೆ ತಯಾರಿಕೆಯ ವಿಕಾಸದ ಹಂತಗಳು

ಮಡಿಕೆಯ ವಿಧಗಳು	ಕಾಲಘಟ್ಟ
ನಸುಹಳದಿ ಕಂದು ಬಣ್ಣದ ಮಡಿಕೆ (Ochre Coloured Pottery)	ಕಂಚಿನ ಯುಗ (Chalcolithic Age)
ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆ (Black and Red ware)	ಹರಪ್ಪ ನಂತರದ ಕಾಲ
ಚಿತ್ರಿತ ಬೂದು ಕುಂಬಾರಿಕೆ (Painted Gray Ware)	ಉತ್ತರ ವೈಧಿಕ ಯುಗ
ನಾರ್ಥನ್ ಬ್ಲಾಕ್ ಪಾಲಿಷ್ ಮಡಿಕೆ (Northeren Black polish ware)	ಮೌರ್ಯರ ಕಾಲ
ಕೆಂಪು ಸ್ಲಿಪ್‌ಡ್ ಮಡಿಕೆ (Red Slipped ware)	ಗುಪ್ತರ ಕಾಲ

ಪ್ರಾಚೀನ ಭಾರತದ ವಿದೇಶಿ ಪ್ರವಾಸಿಗರು

ಪ್ರವಾಸಿಗರು	ದೇಶ	ಕಾಲ
ಮಿಲ್ಲೆಟ್ಸ್	ಗ್ರೀಸ್	ಕಿ.ಪೂ.6ನೇ ಶತಮಾನ
ನಿಯಾರ್ಚಸ್	ಗ್ರೀಸ್	ಅಲೆಗ್ಸಾಂಡರ್‌ನ ಕಾಲ
ಅರಿಸ್ಟೋ ಬುಲಸ್	ಗ್ರೀಸ್	ಅಲೆಗ್ಸಾಂಡರ್‌ನ ಕಾಲ
ಬನಕ್ರೈಟೀಸ್	ಗ್ರೀಸ್	ಗ್ರೀಕರ ದಾಳಿಯ ಕಾಲ
ಮೆಗಾಸ್ತನಿಸ್	ಗ್ರೀಸ್	ಚಂದ್ರಗುಪ್ತ ಮೌರ್ಯನ ಕಾಲ
ಸ್ಟ್ರಾಬೋ, ಪ್ಲಿನಿ	ಗ್ರೀಸ್	ಕ್ರಿ.ಶ.1ನೇ ಶತಮಾನ
ಫಾಹಿಯಾನ್	ಚೀನಾ	2ನೇ ಚಂದ್ರಗುಪ್ತನ ಕಾಲ
ಇತ್ಸಿಂಗ್	ಚೀನಾ	ಕ್ರಿ.ಶ.7ನೇ ಶತಮಾನ
ಹ್ಯೂಯೆನ್‌ತ್ಸಾಂಗ್	ಚೀನಾ	ಹರ್ಷವರ್ಧನ

ಪ್ರಾಚೀನ ಭಾರತದ ರಾಜರುಗಳ ಜನಪ್ರಿಯ ಹೆಸರುಗಳು ಅಥವಾ ಬಿರುದುಗಳು

ರಾಜರು	ಬಿರುದುಗಳು
ಅಜಾತಶತ್ರು	ಕುನಿಕ್
ಬಿಂಬಸಾರ	ಶ್ರೇನಿಕ್
ಮಹಾಪದ್ಮನಂಧ	ಅಗ್ರಸೇನ, ಸರ್ವಕ್ಷ ತರಂತಕ
ಧನನಂದನ	ಅಗ್ರಮೇನ್ಸ್
ಚಂದ್ರಗುಪ್ತ ಮೌರ್ಯ	ಚಂದ್ರಕುಟ್ಸೋಸ್, ಆಂಢ್ರೋ ಕುಟ್ಸೋಸ್
2ನೇ ಚಂದ್ರಗುಪ್ತ	ವಿಕ್ರಮಾದಿತ್ಯ, ಶಕಾರಿ
ಹರ್ಷವರ್ಧನ	ಶಿಲಾದಿತ್ಯ
ಹ್ಯೂಯನ್‌ತ್ಸಾಂಗ್	ಪ್ರವಾಸಿಗರ ರಾಜ
ನರಸಿಂಹ ವರ್ಮನ್	ವಾತಾಪಿಕೊಂಡ
ಪರಾಂತಕ	ಮಧುರೈಕೊಂಡ
2ನೇ ಪುಲಕೇಶಿ	ಪರಮೇಶ್ವರ
ಅಮೋಘ ವರ್ಷ	ನೃಪತುಂಗ

II. ಮಧ್ಯಯುಗೀನ ಭಾರತದ ಇತಿಹಾಸ

ಮಧ್ಯಯುಗೀನ ಭಾರತದ ಇತಿಹಾಸದ ಕಾಲಾನುಕ್ರಮಣಿಕೆ.

753–973	ದಖ್ಖನ್ನಿನಲ್ಲಿ ರಾಷ್ಟ್ರಕೂಟರ ಆಳ್ವಿಕೆ.
760–1142	ಪೂರ್ವಭಾರತದಲ್ಲಿ ಪಾಲರ ಆಳ್ವಿಕೆ.
850	ವಿಜಯಪಾಲ ಚೋಳನು ಪಾಂಡ್ಯರಿಂದ ತಂಜಾವೂರನ್ನು ಆಕ್ರಮಿಸಿಕೊಂಡನು.
915–927	3ನೇ ಇಂದ್ರನ ಕಾಲ ಮತ್ತು ಅರಬ್‌ಪ್ರವಾಸಿ ಅಲ್ ಮಸೂದಿಯ ಭೇಟಿ.
973–1189	ಕಲ್ಯಾಣಿ ಚಾಲುಕ್ಯರ ಆಳ್ವಿಕೆ ಕಾಲ
973–1192	ಚೌಹಾಣರ ಕಾಲ
974–1233	ಧಾರ್‌ನ ಪಾರಮಾರರ ಆಳ್ವಿಕೆ ಕಾಲ
974–1230	ಗುಜರಾತಿನ ಸೋಲಂಕಿಗಳ ಕಾಲ
985–1014	ರಾಜರಾಜ ಚೋಳನ ಆಳ್ವಿಕೆಯ ಕಾಲ
1014–1044	ರಾಜೇಂದ್ರ ಚೋಳನ ಆಳ್ವಿಕೆಯ ಕಾಲ
1020–1030	ಆಲ್ಬೆರೋನಿ ಭಾರತದಲ್ಲಿದ್ದ ಕಾಲ
1076–1435	ಒರಿಸ್ಸಾದಲ್ಲಿ ಪೂರ್ವ ಗಂಗರ ಆಳ್ವಿಕೆ.
1080–1194	ಕನೂಜಿನ ಗಹಿಡವಾಲರ ಕಾಲ
1118–1205	ಬಂಗಾಳದ ಸೇನರ ಕಾಲ
1189–1311	ದೇವಗಿರಿಯ ಯಾದವರ ಕಾಲ
1191	ಮೊದಲನೇ ತರೈನ್ ಯುದ್ಧ
1206–1290	ದೆಹಲಿಯಲ್ಲಿ ಗುಲಾಮಿ ಸಂತತಿಯ ಆಳ್ವಿಕೆ.
1216–1323	ಮಧುರೈ ಪಾಂಡ್ಯರ ಕಾಲ
1221	ವಾಯುವ್ಯ ಭಾರತದ ಮೇಲೆ ಚಂಗೀಸ್‌ಖಾನ ಧಾಳಿ.
1231	ಕತುಬ್‌ಮಿನಾರ್‌ನ ನಿರ್ಮಾಣ ಪೂರ್ಣ.
1266–1286	ಬಲ್ಬನ್‌ನ ಆಳ್ವಿಕೆ.
1290–1320	ಖಿಲ್ಜಿ ಸಂತತಿಯ ಆಳ್ವಿಕೆ.
1296–1316	ಅಲ್ಲಾವುದ್ದೀನ್ ಖಿಲ್ಜಿಯ ಕಾಲ
1320–1414	ದೆಹಲಿಯಲ್ಲಿ ತುಘಲಕ್ ಸಂತತಿಯ ಕಾಲ
1325–1351	ಮಹಮ್ಮದ್ ಬಿನ್ ತುಘಲಕ್‌ನ ಕಾಲ
1327	ದೆಹಲಿಯಿಂದ ದೌಲತಾಬಾದ್‌ಗೆ ರಾಜಧಾನಿ ಬದಲಾವಣೆ
1329	ತಾಮ್ರದ ನಾಣ್ಯಗಳ ಚಲಾವಣೆ.
1334–1337	ಮಧುರೈ ಸುಲ್ತಾನರ ಕಾಲ
1336–1652	ವಿಜಯ ನಗರದ ಕಾಲ.
1347–1518	ಬಹುಮನಿ ಸಾಮ್ರಾಜ್ಯದ ಆಳ್ವಿಕೆ.
1355–1388	ಫಿರೋಜ್ ಷಾ ತುಘಲಕ್‌ನ ಆಳ್ವಿಕೆ.
1398	ಭಾರತದ ಮೇಲೆ ತೈಮೂರ್ ಖಾನ ಧಾಳಿ.
1414–1451	ಸಯ್ಯದ್ ಸಂತತಿಯ ಕಾಲ
1429	ಗುಲ್ಬರ್ಗದಿಂದ ಬೀದರ್‌ಗೆ ರಾಜಧಾನಿ ವರ್ಗಾವಣೆ
1451–1526	ಲೋಧಿ ಸಂತತಿಯ ಕಾಲ
1490–1633	ಅಹಮದ್ ನಗರದ ನಿಜಾಂ ಷಾಹಿಗಳ ಕಾಲ
1518–1687	ಗೋಲ್ಕಂಡದ ಕುತುಬ್‌ಷಾಹಿಗಳ ಕಾಲ
1526	ಮೊದಲನೇ ಪಾಣಿಪತ್ ಕದನ
1528–1619	ಬೀದರ್‌ನ ಬರೀದ್‌ಷಾಹಿಗಳು
1540–1555	ದೆಹಲಿಯಲ್ಲಿ ಸೂರ್‌ಸಂತತಿಯ ಕಾಲ
1542	ಅಕ್ಬರ್‌ನ ಜನನ
1556–1605	ಅಕ್ಬರನ ಆಳ್ವಿಕೆ
1564	ಅಕ್ಬರ್‌ನು ಜೆಸಿಯಾ ಕಂದಾಯ ರದ್ದುಪಡಿಸಿದನು.
1565	ತಾಳಿಕೋಟೆ ಯುದ್ಧ.
1582	ಅಕ್ಬರ್‌ನಿಂದ ದೀನ್–ಇ– ಇಲಾಹಿ ಸ್ಥಾಪನೆ.
1602	ಅಬುಲ್ ಫಜಲ್‌ನ ಕೊಲೆ
1605–1627	ಜಹಂಗೀರ್‌ನ ಕಾಲ
1627–1658	ಷಹಜಹಾನನ ಕಾಲ
1631	ಮಮ್ತಾಜ್ ಮಹಲ್‌ಳ ಮರಣ
1658 –1707	ಔರಂಗಜೇಬ್‌ನ ಕಾಲ
1665	ಪುರಂದರ ಒಪ್ಪಂದ
1674	ಶಿವಾಜಿಯ ಕಿರೀಟಧಾರಣೆ
1679	ಔರಂಗ ಜೇಬನು ಪುನ: ಜೆಸಿಯಾ ತಲೆಗಂದಾಯ ವಿಧಿಸಿದನು.
1761	3ನೇ ಪಾಣಿಪತ್ ಕದನ.

12. ಇಸ್ಲಾಂ ಆಗಮನ (Advent of Islam)

12.1 ಅರಬ್ಬರ ಆಗಮನ (Advent of Arab)

- **ಇಸ್ಲಾಂನ ಏಳಿಗೆ:–** ಕ್ರಿ.ಶ.570ರಲ್ಲಿ ಮಹಮ್ಮದ್ ಪೈಗಂಬರನು ಅರೇಬಿಯಾದ ಪವಿತ್ರ ನಗರ ಮೆಕ್ಕಾದಲ್ಲಿ ಜನಿಸಿದನು. ಇವನು **"ಕುರಿಶ್ ಬುಡಕಟ್ಟಿಗೆ"** ಸೇರಿದವನಾಗಿದ್ದು, ಏಕದೇವತಾ ಧರ್ಮವನ್ನು ಬೋಧಿಸಿ ಜನರಲ್ಲಿ ಜಾಗೃತಿ ಮೂಡಿಸಿದನು.
- ಪ್ರವಾದಿ ಮಹಮ್ಮದ್‌ರ ಇಸ್ಲಾಂ ಧರ್ಮವನ್ನು ಮೊದಲು ಅರಬ್ಬರು ಅಂಗೀಕರಿಸಿ ಅದನ್ನು ವಿಶ್ವದಾದ್ಯಂತ ಹರಡಲು ಪ್ರಮುಖ ಕಾರಣಕರ್ತರಾದರು. ಅರಬ್ಬರ ಪತನದೊಂದಿಗೆ ಪರ್ಷಿಯನ್ನರು ನಂತರ ಟರ್ಕರು ಈ ಧರ್ಮವನ್ನು ಏಷ್ಯಾದ ಪ್ರಮುಖ ಧರ್ಮವನ್ನಾಗಿಸಲು ಶ್ರಮಿಸಿದರು.
- ಪ್ರವಾದಿ ಮಹಮ್ಮದ್‌ನ ನಂತರ ಅವನ ಉತ್ತರಾಧಿಕಾರಿಗಳಾದ (4 ಜನ ಖಲೀಫರು) ಅಬೂಬಕರ್, ಓಮರ್, ಓಸ್ಮಾನ್ ಮತ್ತು ಆಲಿಯವರ ಕಾಲದಲ್ಲಿ (ಕ್ರಿ.ಶ.632ರ ನಂತರ) ಇಸ್ಲಾಂ ಧರ್ಮವು ವಿಶ್ವದಾದ್ಯಂತ ವಿಸ್ತೃತಗೊಂಡಿತು.

ಅರಬ್ಬರಿಂದ ಸಿಂದ್‌ನ ಆಕ್ರಮಣ

- 2ನೇ ಪುಲಕೇಶಿಯ ಆಳ್ವಿಕೆಯ ಕಾಲದಲ್ಲಿ ಬೊಂಬಾಯಿ ಸಮೀಪ ಥಾನಾಕ್ಕೆ ಕ್ರಿ.ಶ. 637ರಲ್ಲಿ ಖಲೀಫನಾದ ಓಮರನು ಅರಬ್ಬರ ನೌಕೆ ಕಳುಹಿಸಿದ್ದನು.
- ಕ್ರಿ.ಶ. 644ರಲ್ಲಿ ಓಸ್ಮಾನ್‌ನು ಅಬ್ದುಲ್ ಬಿನ್ ಅಮರ್ ನೇತೃತ್ವದಲ್ಲಿ ಮಕ್ರಾನ್ ಮತ್ತು ಸಿಂಧ್ ರಾಜರುಗಳನ್ನು ಸೋಲಿಸಿದನು. ನಂತರ ಹೆಲ್ಮಂಡ್ ಕಣಿವೆಯ ಸಮೀಪದ ಜಾಬೂಲ್ ರಾಜ್ಯದ ರತಬಿಲ್ಲನ ಮೇಲೆ ದಾಳಿ ಮಾಡಿದರು. ಇದು 1870 ರಲ್ಲಿ ವಶವಾಯಿತು.
- ನಂತರ ಅರಬ್ಬರು ಕ್ರಿ.ಶ.659ರಲ್ಲಿ ಅಲ್ ಹ್ಯಾರಿಸ್ ನೇತೃತ್ವದಲ್ಲಿ ಬೋಲಾನ್ ಕಣಿವೆ ಮೂಲಕ ಕ್ರಿಕನ್ ಪ್ರಾಂತ್ಯದ ಮೇಲೆ ದಾಳಿ ಮಾಡಿದರು. ಹೀಗೆ ಸತತ ದಾಳಿಗಳಿಂದ ಅರಬ್ಬರು ಬಲೂಚಿಸ್ಥಾನವನ್ನು ಜಯಿಸಿ ಸಿಂಧ್ ಆಕ್ರಮಣಕ್ಕೆ ಮುಂದಾದರು.
- ಅರಬ್ಬರು ಸಿಂದ್ ಆಕ್ರಮಿಸಲು ಪ್ರಮುಖ ಕಾರಣ "ಅರಬ್ಬರು ಹೊಸದಾಗಿ ಸ್ವೀಕರಿಸಿದ ಇಸ್ಲಾಂ ಧರ್ಮವನ್ನು ವಿಶ್ವದಾದ್ಯಂತ ಹರಡುವುದಾಗಿತ್ತು".
- ತತ್ ಕ್ಷಣದ ಕಾರಣ ಸರ್ ಸ್ಲೆಹೇಗ್ ಪ್ರಕಾರ :– ಇರಾಕ್ ಪ್ರಾಂತ್ಯದ ಮುಸ್ಲಿಂ ರಾಜ್ಯಪಾಲನಾದ 'ಹಜಾಜ್‌ನಿಗೆ' ಸಿಲೋನಿನ ರಾಜ ತನ್ನ ನಾಡಿನಲ್ಲಿ ಮೃತರಾದ ಮುಸ್ಲಿಂ ವ್ಯಾಪಾರಿಯ ಕುಟುಂಬದ ಕೆಲವು ಸ್ತ್ರೀಯರು ಹಾಗೂ ಅವರ ಸಂಪತ್ತನ್ನು ಹಡಗಿನಲ್ಲಿ ತುಂಬಿ ಕಳುಹಿಸಿದನು. ಇದು ದೇಬಾಲ್ (ಕರಾಚಿ) ಪ್ರಾಂತ್ಯದಲ್ಲಿ ಲೂಟಿಗೊಳಗಾಯಿತು. ಆಗ ಹಜಾಜ್‌ನು ಸಿಂದ್‌ನಲ್ಲಿ ಆಳುತ್ತಿದ್ದ ರಾಜ ದಾಹಿರ್‌ಗೆ ಲೂಟಿಗೊಳಗಾದ ಸ್ತ್ರೀಯರನ್ನು ಮುಕ್ತಗೊಳಿಸಿ ತಮಗಾದ ನಷ್ಟವನ್ನು ಭರಿಸಬೇಕೆಂದು ಬೇಡಿಕೆಯಿತ್ತನು. ಆಗ ದಾಹಿರ್‌ನು ಇದಕ್ಕೂ ನನಗೂ ಸಂಬಂಧವಿಲ್ಲವೆಂದನು.
- ಕ್ರಿ.ಶ.711ರಲ್ಲಿ ಸಿಂಧ್ ಮೇಲೆ ಪ್ರಥಮ ದಾಳಿಯು ಉಬೇದುಲ್ಲಾಖಾನ್ ನೇತೃತ್ವದಲ್ಲಿ ನಡೆಯಿತು. ಇದು ವಿಫಲವಾಗಿ ಉಬೇದುಲ್ಲಾ ಮರಣ ಹೊಂದಿದನು. ನಂತರ ಹಜಾಜನು ತನ್ನ ಅಳಿಯನಾದ "ಮಹಮದ್ ಬಿನ್ ಖಾಸಿಂನನ್ನು" ದಂಡನಾಯಕನನ್ನಾಗಿ ಮಾಡಿ, ಕ್ರಿ.ಶ 712ರಲ್ಲಿ ಮತ್ತೊಂದು ದಾಳಿಗೆ ಕಳುಹಿಸಿದನು. ಮಕ್ರಾನ್ ಗೌರ್ನರ್ ಮಹಮ್ಮದ್ ಅರುಣ್‌ನು ಖಾಸಿಂ ಸೇನೆಯೊಡನೆ ತನ್ನ ಸೈನ್ಯ ಸೇರ್ಪಡೆ ಮಾಡಿದನು.
- ಮಹಮ್ಮದ್ ಬಿನ್ ಖಾಸಿಂನು ಮಕ್ರಾನ್ ಮೂಲಕ ದೇಬಾಲ್‌ನ್ನು ಆಕ್ರಮಿಸಿ ರಜಪೂತರನ್ನು ಸೋಲಿಸಿದನು.

ರಾವೂರ್ ಯುದ್ಧ (ಕ್ರಿ.ಶ ಜೂನ್ 20-712)

- ರಾಜ ದಾಹಿರ್‌ನನ್ನು ತ್ಯಜಿಸಿ ದಾಳಿಕೋರರೊಡನೆ ಸೇರಿದ ಬೌದ್ಧ ಸನ್ಯಾಸಿಗಳು ಮಹಮ್ಮದ್ ಖಾಸಿಂನ ಸೈನ್ಯ ಹಾಗೂ ದಾಹಿರ್‌ನ ಸೈನ್ಯ ಸಿಂಧೂ ನದಿ ದಾಟಿ ರಾವೂರ್‌ನಲ್ಲಿ ಸಮೀಪಿಸಿದವು. ದಾಹಿರ್ ಮತ್ತು ಖಾಸಿಂನ ನಡುವೆ ಯುದ್ಧ ನಡೆದು ಆರಂಭದಲ್ಲಿ ದಾಹಿರ್ ಕೈ ಮೇಲಾದರೂ ಕೊನೆಗೆ ಸೋಲುಂಡನು.
- ನಂತರ ಅವನ ರಾಣಿ 'ರಾಣಿಬಾಯಿಯು' ಕೋಟೆ ರಕ್ಷಿಸಲು ಶತೃಗಳ ಮೇಲೆ ಗುಂಡಿನ ಮಳೆಗರೆದಳು. ರಕ್ಷಣೆ ಸಾಧ್ಯವಿಲ್ಲದಿದ್ದಾಗ ರಾಣಿಬಾಯಿ ತನ್ನ ಸಂಗಾತಿಯರೊಂದಿಗೆ ಪಾವಿತ್ರ್ಯ ರಕ್ಷಣೆಗಾಗಿ **"ಜೌಹರ್"** ಪದ್ಧತಿ ಅನುಸರಿಸಿದಳು. ನಂತರ ಖಾಸಿಂನು ರಾವೂರ್‌ನಿಂದ ಬ್ರಹ್ಮನಾದ್‌ಗೆ ತೆರಳಿ ದಾಹಿರ್‌ನ ಮತ್ತೊಬ್ಬ ಪತ್ನಿ 'ಲಾಡಿ ಮತ್ತು ಇಬ್ಬರು ಹೆಣ್ಣು ಮಕ್ಕಳಾದ ಸೂರ್ಯದೇವಿ ಮತ್ತು ಪರ್ಮಲ್ ದೇವಿಯರನ್ನು ಸೆರೆ ಹಿಡಿದನು.
- ಖಾಸಿಂನು ಬಳಿಕ ಸಿಂದ್ ರಾಜಧಾನಿಯಾದ "ಆರೋಲ್ ಮತ್ತು ಚಿನ್ನದ ನಗರವೆಂದು ಅರಬ್ಬರು ಕರೆದ "ಮುಲ್ತಾನ"ವನ್ನು ವಶಪಡಿಸಿಕೊಂಡನು. 'ಅಬುಹಕಿಂ' ನೇತೃತ್ವದಲ್ಲಿ ಕನೂಜ್ ಮೇಲೆ ಆಕ್ರಮಣ ಮಾಡಿದರು.

ಮಹಮದ್ ಬಿನ್ ಖಾಸಿಂನ ಅಂತ್ಯ

- "ಚಹನಾಮದ" ಪ್ರಕಾರ ಖಾಸಿಂನು ದಾಹಿರ್‌ನ ಇಬ್ಬರು ಮಕ್ಕಳಾದ ಸೂರ್ಯದೇವಿ ಮತ್ತು ಪರ್ಮಲ್ ದೇವಿಯರನ್ನು ಕಾಣಿಕೆಯಾಗಿ ಖಲೀಫನಿಗೆ ಕಳುಹಿಸಿಕೊಟ್ಟನು. ಖಲೀಫನಿಗೆ ಸೂರ್ಯದೇವಿಯು ತನ್ನನ್ನು ಮತ್ತು ತನ್ನ ಸಹೋದರಿಯನ್ನು ಈ ಮೊದಲೇ ಖಾಸಿಂನು ಅಪವಿತ್ರಗೊಳಿಸಿರುವನೆಂದು ಹೇಳಿದಳು. ಇದರಿಂದ ಕೋಪಗೊಂಡ ಖಲೀಫನು ಖಾಸಿಂನನ್ನು ಅಂತ್ಯಗೊಳಿಸಲು ಆಜ್ಞೆ ಮಾಡಿದನು.

ಅರಬ್ಬರ ಆಡಳಿತ

- ಅರಬ್ಬರು ಸಿಂಧ್‌ನ್ನು ಅನೇಕ ಜಿಲ್ಲೆಗಳಾಗಿ ವಿಂಗಡಿಸಿದ್ದರು.

ಜಿಲ್ಲೆಗಳನ್ನು ಸೈನಿಕ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಸೈನಿಕರಿಗೆ ಜಮೀನುಗಳನ್ನು ಜಹಗೀರುಗಳಾಗಿ ನೀಡಲಾಯಿತು.

- ರಾಜಧಾನಿಯಲ್ಲಿ **"ಖಾಜಿಯೆಂಬ"** ನ್ಯಾಯಾಂಗಾಧಿಕಾರಿಯಿದ್ದನು. ಅದರಂತೆ ಜಿಲ್ಲೆಗಳಲ್ಲಿ ಖಾಜಿ ಎಂಬ ಅಧಿಕಾರಿಗಳಿದ್ದರು. ಹಿಂದೂಗಳಿಗೂ ಇಸ್ಲಾಂ ಕಾನೂನುಗಳನ್ನು ಹೇರಿದರು. (ಹಿಂದೂವೊಬ್ಬ ಕಳ್ಳತನ ಮಾಡಿದರೆ ಅವನನ್ನು ಜೀವಂತವಾಗಿ ಸುಡಲಾಗುತ್ತಿತ್ತು.)
- ಹಿಂದೂಗಳ ಮೇಲಿನ ಜೆಸಿಯಾ ತಲೆಕಂದಾಯವನ್ನು 48, 24 ಮತ್ತು 12 ದಿರ್ಹಾಮ್ ಗಳೆಂದು ಮೂರು ರೀತಿಯಲ್ಲಿ ವಿಧಿಸುತ್ತಿದ್ದರು.
- ಭೂಕಂದಾಯ /ಖಿರಾಜ್ ಉತ್ಪಾದನೆಯ ಆಧಾರದ ಮೇಲೆ ವಿಧಿಸುತ್ತಿದ್ದರು.

ಅರಬ್ಬರ ಸಿಂದ್ ಆಕ್ರಮಣದ ಪರಿಣಾಮಗಳು

- ಸಿಂಧ್‌ನ ಜನಸಂಖ್ಯೆಯ ಒಂದು ಭಾಗವನ್ನು ಇಸ್ಲಾಂಗೆ ಮತಾಂತರಗೊಳಿಸುವಲ್ಲಿ ಯಶಸ್ವಿಯಾಗಿದ್ದರು.
- ರಸಾಯನಿಕಶಾಸ್ತ್ರ, ಔಷಧಶಾಸ್ತ್ರ, ಖಗೋಳ, ಗಣಿತ ಹಾಗೂ ತತ್ವಶಾಸ್ತ್ರ ಮುಂತಾದ ವಿಷಯಗಳನ್ನು ತಿಳಿಯಲು ಅರಬ್ಬರು ಭಾರತೀಯ ಪಂಡಿತರ ಪಾದಗಳ ಬಳಿ ಕುಳಿತರು.
- ಯುರೋಪಿನ ಸಂಸ್ಕೃತಿಯ ಮೇಲೆ ಅಪಾರ ಪ್ರಭಾವ ಬೀರಿದ ಅರೇಬಿಕ್ ಸಂಸ್ಕೃತಿಯ ಅಂಶಗಳು ಮೂಲಭೂತವಾಗಿ ಭಾರತೀಯ ಸಂಸ್ಕೃತಿಯಿಂದ ಎರವಲಾಗಿ ಪಡೆದವಾಗಿದ್ದವು. **ಬಾಗ್ದಾದಿನ ಖಲೀಫ ಮನ್ಸೂರನು** ಅನೇಕ ಭಾರತೀಯ ವಿದ್ವಾಂಸರನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿದ್ದನು.
- ಖಾಸಿಂನ ಸಿಂಧ್ ಆಕ್ರಮಣವು ಧಾರ್ಮಿಕ ಯುದ್ಧದ ಪರಿಣಾಮವಾಗಿರಲಿಲ್ಲ. ಖಾಸಿಂ ದಾಳಿಯಲ್ಲಿ ಹಿಂದೂ ನಾಯಕರಾದ ದಾಹಿರ್‌ನ ಮಂತ್ರಿಗಳಾದ ಸಿಸಾಕರ್, ಮೊಕಬಿಸಾಯ ಪಾಲ್ಗೊಂಡಿದ್ದರು
- ಬಾಗ್ದಾದ್‌ನಲ್ಲಿ ಅಬ್ಬಾಸಿದ್ ಸಂತತಿಯ ಆಳ್ವಿಕೆ ಅಂತ್ಯವಾದ ಮೇಲೆ ಸಿಂದ್ ಪ್ರಾಂತ್ಯವು ಸ್ವತಂತ್ರಗೊಂಡಿತು.

ಅರಬ್ಬರ ಪತನಕ್ಕೆ ಕಾರಣಗಳು

1) ಕ್ರಿ.ಶ.712ರ ರಾವೂರ್ ಯುದ್ಧವನ್ನು ಗೆದ್ದ ಮಹಮ್ಮದ್‌ಖಾಸಿಂನ ಅನಿರೀಕ್ಷಿತ ಮರಣ.
2) ಸಿಂಧ್ ಪ್ರದೇಶ ಬಹಳ ಫಲವತ್ತಾದ ಪ್ರದೇಶ ಎಂದು ಖಲೀಫನ ನಿರೀಕ್ಷೆ.
3) ಅರಬ್ಬರು ಇನ್ನಿತರ ಪೌರ್ವಾತ್ಯ ದೇಶಗಳ ಆಕ್ರಮಣದ ಒಲವು.
4) ಭಾರತಕ್ಕೆ ಬರಲು ಸುಗಮವಾದ ಮಾರ್ಗ ಪಂಜಾಬ್. ಆದರೆ ಅರಬ್ಬರು ಈ ಹಾದಿಯನ್ನು ತೊರೆದು ಸಿಂಧ್ ಮೂಲಕ ಪ್ರವೇಶಿಸಿದುದು.
5) ಖಲೀಫರು ಬಲಹೀನಗೊಂಡಂತೆ ಸಿಂಧ್‌ನ ಅರಬ್ಬರು ಸ್ವತಂತ್ರರಾಗಿ 2 ಪಂಗಡಗಳಾದುವು.
6) ಕ್ರಿ.ಶ.750 ರಲ್ಲಿ ಉಮಾಯ್ಯದ್ ಖಲೀಫರನ್ನು ಕೆಳಗಿಳಿಸಿ ಅಬ್ಬಾಸಿದ್ ಖಲೀಫರು ಅಧಿಕಾರಕ್ಕೆ ಬಂದರು.

12.2 ಟರ್ಕರ ಆಗಮನ (Advent of Turks)

- ಭಾರತದ ಮೇಲೆ ಆಕ್ರಮಣ ಮಾಡಿದ ಪ್ರಥಮ ಮುಸ್ಲಿಂರೆಂದರೆ **ಅರಬ್ಬರು**. ಆದರೆ ಇವರ ಅಧಿಕಾರವು ಕೇವಲ ಸಿಂದ್ ಪ್ರಾಂತ್ಯಕ್ಕೆ ಸೀಮಿತವಾಗಿತ್ತು. ನಂತರ ಬಂದ ಟರ್ಕರು ಭಾರತದ ಇನ್ನಿತರ ಪ್ರದೇಶಗಳನ್ನು ಆಕ್ರಮಿಸಿ ಭಾರತದಲ್ಲಿ ಮುಸ್ಲಿಂರು ಶಾಶ್ವತವಾಗಿ ನೆಲೆಸುವಂತೆ ಮಾಡಿದರು.
- ಟರ್ಕರು ಬಾಗ್ದಾದಿನ ಖಲೀಫರ ಮೇಲೆ ಮೇಲುಗೈ ಸಾಧಿಸಿದ್ದರು. ಅಬ್ಬಾಸಿದ್ ಖಲೀಫನ ಪತನದ ನಂತರ ಮಧ್ಯ ಏಷ್ಯಾದಲ್ಲಿ ಅವನ ಸಾಮಂತನಾದ **ಸಮನಿದ್ ಮನೆತನದವರು** ಏಳಿಗೆಗೆ ಬಂದರು. **ಅಬ್ದುಲ್ ಮಾಲಿಕ್** ಎಂಬುವವನು ಸಮನಿದ್ ಮನೆತನದ ಅರಸನಾಗಿದ್ದು ಅವನ ನೆಚ್ಚಿನ ಸೇವಕನಾದ **ಅಲಿಪ್ತಗೀನ್‌ನು ಘಜ್ನಿಯಲ್ಲಿ** (ಆಫ್ಘಾನಿಸ್ತಾನ) ಬಂದು ಸ್ವತಂತ್ರವಾದ ರಾಜ್ಯ ಸ್ಥಾಪಿಸಿದನು.

ಸಬಕ್ತಗೀನ್ (977-97) (Subuktgin)

- ಅಲಪ್ತಗೀನ್‌ನು ಬಿಟ್ಟು ಹೋದ ರಾಜ್ಯಕ್ಕೆ ಅವನ ಅಳಿಯನಾದ ಸಬಕ್ತಗೀನನು ಅಧಿಕಾರಕ್ಕೆ ಬಂದನು. ಇವನು ಅಲಿಪ್ತಗೀನ್‌ನಿಂದ **"ಅಮೀರ್ ಉಲ್ ಉಮ್ರ"** ಎಂಬ ಬಿರುದು ಗಳಿಸಿದ್ದನು.
- ಸಬಕ್ತಗೀನನ ಕಾಲದಲ್ಲಿ ಭಾರತದ ಗಡಿನಾಡ ರಾಜನಾದ ಶಾಹಿ ಸಂತತಿಯ ರಾಜ **"ಜೈಪಾಲನ"** ರಾಜ್ಯವು ಸರ್ ಹಿಂದ್‌ನ ಲಮ್‌ಷಾನ್, ಕಾಶ್ಮೀರದ ಮುಲ್ತಾನವರೆಗೆ ಹಬ್ಬಿತ್ತು. ಷಾಹಿ ಸಂತತಿಯವರು ಸಿಂದ್ ಲಾಹೋರ್ ಮತ್ತು ಬತಿಂದಗಳನ್ನು ರಾಜಧಾನಿಗಳಾಗಿ ಕ್ರಮವಾಗಿ ಹೊಂದಿದ್ದರು.
- ಸಬಕ್ತಗೀನ್ ಮತ್ತು ಜೈಪಾಲನ ನಡುವೆ ಯುದ್ಧ ನಡೆದು ಸೋತ ಜೈಪಾಲನು ಸಾಮಂತನಾದನು. ಹೀಗೆ ಪ್ರಬಲ ಘಜ್ನಿ ರಾಜ್ಯವನ್ನು **"ಸಬಕ್ತಗೀನ್‌ನು"** ಸ್ಥಾಪಿಸಿದನು.

12.3 ಮಹಮ್ಮದ್ ಘಜ್ನಿ ಅಥವಾ ಮಹಮ್ಮದ್ ಜಬೂಲಿ (ಕ್ರಿ.ಶ.997-1030) (Mahmud Ghazni)

- ಮಹಮ್ಮದ್ ಘಜ್ನಿಯು ಸಬಕ್ತಗೀನನ ಮಗನಾಗಿ **ಕ್ರಿ.ಶ.971**ರಲ್ಲಿ ಜನಿಸಿದನು. ಇವನ ತಾಯಿಯು ಜಬೂಲಿಸ್ಥಾನ ದವಳಾಗಿದ್ದರಿಂದ ಅವನಿಗೆ **ಜಬೂಲಿ** ಎಂಬ ಹೆಸರಿತ್ತು. ಇವನು ಸಮನಿದ್ ಮನೆತನಕ್ಕೆ ಸೇರಿದವನು.
- ಘಜ್ನಿಯ ಕಾಲದ ಖಲೀಫನಾಗಿದ್ದವನು ಅಲ್ ಖದೀರ್ ಬಿಲ್ಲಾ. ಇವನು ಘಜ್ನಿಗೆ **"ಯಾಮಿನ್ ಉದ್ ದೌಲ"** ಮತ್ತು **"ಅಮಿಲ್ ಉಲ್ ಮಿಲ್ಲತ್"** ಎಂಬ ಬಿರುದುಗಳನ್ನು ನೀಡಿದ್ದನು. ಮಹಮ್ಮದ್ ಘಜ್ನಿಯು ಪ್ರತಿ ವರ್ಷ ಭಾರತದ ಮೇಲೆ ದಂಡಯಾತ್ರೆ ಮಾಡಬೇಕೆಂದು ಪ್ರಮಾಣ ಮಾಡಿಸಿದ್ದನು.
- ಸುಲ್ತಾನ ಎಂಬ ಬಿರುದು ಪಡೆದ ಮುಸ್ಲಿಂರಲ್ಲಿ ಮಹಮ್ಮದ್ ಘಜ್ನಿ ಮೊದಲಿಗನು.

ಮಹಮ್ಮದ್ ಘಜ್ನಿಯ ಭಾರತದ ಶ್ ಃಅನ 17 ದಂಡಯಾತ್ರೆಗಳು (1000-1027) (ಹೆನ್ರಿ ಇಲಿಯೆಟ್ ಪ್ರಕಾರ)

- ಮೊದಲ ದಾಳಿಯು **ಕ್ರಿ.ಶ.1000** ದಲ್ಲಿ ಭಾರತದ ಗಡಿ ಪ್ರದೇಶಗಳ ಮೇಲೆ ಕೈಗೊಂಡಿದುದಾಗಿತ್ತು.
- ಸೋಮನಾಥಪುರದ ಮೇಲಿನ ದಾಳಿ ಮಹಮ್ಮದ್ ಘಜ್ನಿಯ ದಾಳಿಗಳಲ್ಲೆಲ್ಲ ಅತ್ಯಂತ ಪ್ರಮುಖವಾದುದು. **ಕ್ರಿ.ಶ.480-786** ರ ಅವಧಿಯಲ್ಲಿ ಆಳಿದ **ವಲ್ಲಭ ಅರಸರು** ಈ ದೇವಾಲಯಕ್ಕೆ ಅಸ್ಥಿಭಾರ ಹಾಕಿದ್ದರು.
- ಮಹಮ್ಮದ್ ಘಜ್ನಿಯ ಕೊನೆಯ ದಂಡಯಾತ್ರೆಯು ಕ್ರಿ.ಶ.1027 ರಲ್ಲಿ **ಪಂಜಾಬಿನ ಜಾಟರ** ವಿರುದ್ಧ ಕೈಗೊಂಡನು.
- ಮುಸ್ಲಿಂ ಬರಹಗಾರರು ಮಹಮ್ಮದ್ ಘಜ್ನಿಯನ್ನು **ವಿಗ್ರಹ ಭಂಜಕ** ಎಂದು ಕರೆದಿದ್ದಾರೆ.
- ಪ್ರಪಂಚದ ಹುಟ್ಟು ದಂಡನಾಯಕರು ಎಂದು ಹೆಸರು ಗಳಿಸಿರುವವರಲ್ಲಿ ಮಹಮ್ಮದ್ ಘಜ್ನಿ ಮುಖ್ಯ ಸ್ಥಾನ ಪಡೆದಿದ್ದಾನೆ. ಪ್ರಪಂಚದ ಮಹಾದಂಡನಾಯಕನೂ ಮತ್ತು ಏಷ್ಯಾ ಸಾಮ್ರಾಜ್ಯ ಸ್ಥಾಪಕನಾಗಿಯೂ ಹೆಸರು ಗಳಿಸಿದ್ದಾನೆ.
- ಮಹಮ್ಮದ್ ಘಜ್ನಿಯ ಆಸ್ಥಾನದಲ್ಲಿದ್ದ **ಅಲ್ಬೆರೋನಿ**(ಇವನು ಟರ್ಕಿ ಭಾಷೆ, ಗಣಿತ ತತ್ವ, ಖಗೋಳಶಾಸ್ತ್ರ ಮತ್ತು ಇತಿಹಾಸದಲ್ಲಿ ಪಂಡಿನಾಗಿದ್ದನು) ಪರ್ಷಿಯನ್ ಭಾಷೆಯ **ಹೋಮರ್** ಎಂಬ ವಿದ್ವಾಂಸರಿದ್ದರು.
- ಉಕ್ತಿ, ಫರಬಿ, ಬೈಸಾಕಿ, ಇರಾನಿ ಕವಿ ಉಜಾರಿ, ತುಸಿ, ಅನ್ಸೂರಿ, ಅಸ್ಜಾವಿ, ಫರೂಕ ಮತ್ತು ಪಿರ್ದೌಸಿ ಮುಂತಾದವರು ಮಹಮ್ಮದ್ ಘಜ್ನಿಯ ಆಸ್ಥಾನದಲ್ಲಿದ್ದರು.
- ಫಿರ್ದೌಸಿಯು ಬರೆದ ಕೃತಿ **"ಷಹನಾಮ"**.
- ಮಹಮ್ಮದನು ತನ್ನ 59ನೇ ವರ್ಷದಲ್ಲಿ **ಕ್ರಿ.ಶ.1030**ರಲ್ಲಿ ಮರಣ ಹೊಂದಿದನು.

ಮಹಮ್ಮದ್ ಘಜ್ನಿಯ ದಾಳಿಯ ಪರಿಣಾಮಗಳು

1) ಅಲ್ಬೆರೋನಿಯ ಪ್ರಕಾರ : ಮಹಮ್ಮದ್ ಘಜ್ನಿಯು ದೇಶದ ಸಂಪತ್ತಿನ ಅಭಿವೃದ್ಧಿಯನ್ನು ನಾಶಗೊಳಿಸಿದ ಮತ್ತು ಅವನ ಪ್ರಚಂಡ ದರೋಡೆಗೆ ಸಿಲುಕಿದ ಹಿಂದೂಗಳು ಮಣ್ಣಿನ ಕಣಗಳಂತೆ ಸಿಡಿದು ಹೋದರು.
2) ಸರ್‌ವೋಲ್ಸ್ಲೆ ಹೇಗ್ ಪ್ರಕಾರ ಇವನು ಭಾರತದ ಹೃದಯ ಭಾಗಕ್ಕೆ ಇಸ್ಲಾಂ ಧ್ವಜವನ್ನು ಕೊಂಡೊಯ್ದ ಮೊದಲಿಗನು ಮತ್ತು ಇವನ ಮೇಲ್ಪಂಕ್ತಿಯನ್ನು ಅನೇಕರು ಅನುಸರಿಸಿದರು.
3) ಇವನು ಪಂಜಾಬಿನ ಮೂಲಕ ಭಾರತದ ಮೇಲೆ ದಾಳಿ ಮಾಡಿದ್ದರಿಂದ ಇತರ ಆಕ್ರಮಣಕಾರರಿಗೆ ಇದು ಹೆದ್ದಾರಿಯಾಯಿತು.
4) ಭಾರತವು ಸೈನಿಕವಾಗಿ ಅಪಾರ ನಷ್ಟ ಅನುಭವಿಸಿತು.
5) ಸಹಸ್ರಾರು ವರ್ಷಗಳಿಂದ ಶೇಖರಣೆಗೊಂಡಿದ್ದ ಸಂಪತ್ತು ಘಜ್ನಿಗೆ ಹರಿದು ಹೋಯಿತು.
6) ಪ್ರಾಚೀನ ಕಾಲದಿಂಲೂ ಉಳಿಸಿಕೊಂಡು ಬಂದಿದ್ದ ಕಲೆ ಮತ್ತು ವಾಸ್ತುಶಿಲ್ಪಗಳು ನಾಶವಾದವು.

12.4 ಮಹಮ್ಮದ್ ಘೋರ್/ ಷಹಬಾ-ಉದ್-ದಿನ್/ ಮಹಿಜ್-ಉದ್-ದಿನ್/ಮಹಮದ್ ಬಿನ್-ಸಾಮ್ (Mahmud Ghuri)

- ಭಾರತದಲ್ಲಿ ಮುಸ್ಲಿಂ ಸಾಮ್ರಾಜ್ಯದ ನಿಜವಾದ ಸ್ಥಾಪಕ ಮಹಮ್ಮದ್ ಘೋರ್ ಆಗಿದ್ದಾನೆ.
- ಘೋರ್ ಪ್ರಾಂತ್ಯವು **ಘಜ್ನಿ ಮತ್ತು ಹೆರಾತ್** ಪರ್ವತ ಕಣಿವೆಯಲ್ಲಿದೆ. ಕೆಲವು ಇತಿಹಾಸಕಾರರು ಘೋರ್ ಮನೆತನದವರು ಆಫ್ಘನ್ನರೆಂದಿದ್ದಾರೆ. ಆದರೆ ಘೋರ್ ಮನೆತನದವರು ಟರ್ಕರಾಗಿದ್ದ **ಶನ್ಸಬಾನಿ ಪಂಗಡಕ್ಕೆ** ಸೇರಿದವರು. ಇವರ ಮೂಲ ಪೂರ್ವ **ಪರ್ಷಿಯಾ.**
- ಕ್ರಿ.ಶ.1009ರಲ್ಲಿ ಮಹ್ಮದ್ ಘೋರ್‌ನಿಗೆ ರಾಜ ಮಹಮ್ಮದ್-ಬಿನ್-ಸೂರಿ ಮತ್ತು ಮಹ್ಮದ್ ಘಜ್ನಿಯ ವಿರುದ್ಧ ಸೋಲುಂಟಾಯಿತು ಹೀಗಾಗಿ ಘೋರ್ ಪ್ರಾಂತ್ಯ ಘಜ್ನಿಯ ರಾಜ್ಯವಾಯಿತು.
- ಮಹ್ಮದ್ ಘಜ್ನಿಯ ನಿಧನದ ನಂತರ **ಸೆಲ್ಜುಕ್** ಮನೆತನದವರು ಮಧ್ಯ ಏಷ್ಯಾದ ಮೇಲೆ ರಾಜಕೀಯ ನಿಯಂತ್ರಣ ಹೊಂದಿದರು. (ಖೊರಾಸಾನ್ ಮತ್ತು ಇರಾನ್) ನಂತರ ಘೋರ್ ಮನೆತನದವರು ಪ್ರಬಲರಾದರು.
- ಘೋರ್ ಪ್ರಾಂತ್ಯವು ಕೃಷಿಯ ಉತ್ಪಾದನೆಗೆ ಮತ್ತು ಉತ್ತಮ ಕುದುರೆಗಳ ಹಾಗೂ ಉಕ್ಕಿನ ಉತ್ಪಾದನೆಗೆ ಹೆಸರಾಗಿತ್ತು.
- ಕ್ರಿ.ಶ.1115ರಲ್ಲಿ ಘಜ್ನಿ ಪ್ರದೇಶವನ್ನು **ಅಲಾವುದ್ದೀನ್ ಹುಸೇನ್** ಸಂಪೂರ್ಣ ನಾಶ ಮಾಡಿದನು.

ಭಾರತದ ದಾಳಿಗೆ ಕಾರಣಗಳು

- ಘಜ್ನಿಯ ಮನೆತನದ ವಶದಲ್ಲಿದ್ದ ಭಾರತದ ಪಂಜಾಬ್‌ನ ಮೇಲೆ ನಿಯಂತ್ರಣ ಸಾಧಿಸುವುದು.
- ಇಸ್ಲಾಮಿಕ್ ಪ್ರಪಂಚದಲ್ಲಾದ ಬದಲಾವಣೆಗಳು
- ಮಹ್ಮದ್ ಘೋರಿಯ ಸೋದರ ಘಿಯಾಸುದ್ದೀನ್ ಪಶ್ಚಿಮದ ಕಡೆ ರಾಜ್ಯ ವಿಸ್ತರಣೆಗೆ ತೊಡಗಿದ್ದಾಗ ಅಣ್ಣನೊಡನೆ ಕಾದಾಡುವುದು ಬೇಡವೆಂದು ಪೂರ್ವದ ಭಾರತದ ಕಡೆಗೆ ತಿರುಗಿದನು.
- ಭಾರತದಲ್ಲಿನ ಸಂಪತ್ತು ವ್ಯಾಮೋಹ ಹಾಗೂ ಮುಸ್ಲಿಂ ರಾಜ್ಯ ಸ್ಥಾಪನೆಯ ಕಲ್ಪನೆ.

ಘೋರ್‌ನ ದಾಳಿಯ ಕಾಲದ ಭಾರತದ ರಾಜಕೀಯ ಪರಿಸ್ಥಿತಿ

1. **ಪಂಜಾಬ್:** ಘಜ್ನಿಯ ವಂಶದ ಕೊನೆಯ ಸುಲ್ತಾನ ಖುಸ್ರಾವ್ ಷಾನ್ ಅಧೀನದಲ್ಲಿತ್ತು.
2. **ಗುಜರಾತ್ ಮತ್ತು ಕಾಥೇವಾಡ:** ಪಶ್ಚಿಮ ಚಾಲುಕ್ಯರು ಆಳುತ್ತಿದ್ದರು. (ರಾಜಧಾನಿ ಅನ್ಹಿಲವಾಡ)
3. **ದೆಹಲಿ ಮತ್ತು ಅಜ್ಮೀರ್:** ಚೌಹಾಣ ಮನೆತನದವರು ಆಳುತ್ತಿದ್ದರು. ಪ್ರಬಲರಾಜ 3ನೇ ಪೃಥ್ವಿರಾಜ ಚೌಹಾಣ್.
4. **ಕನೂಜ್:** ಗಹಿಲವಾಡ ಮನೆತನದ ರಾಜ ಜಯಚಂದ್ರ ಆಳುತ್ತಿದ್ದನು.
5. **ಬುಂದೇಲ್‌ಖಂಡ:** ಚಂದೇಲರ ಅರಸ ಪೆರಮರ್ಧಿದೇವನು ಆಳುತ್ತಿದ್ದನು.
6. **ಬಂಗಾಳ ಮತ್ತು ಬಿಹಾರ:** ಈ ಪ್ರಾಂತ್ಯಗಳಲ್ಲಿ ಸೇನರ ಸಂತತಿಯ ವಯೋವೃದ್ಧ ಲಕ್ಷ್ಮಣಸೇನ ಆಳುತ್ತಿದ್ದನು.

ಘೋರಿಯ ದಂಡೆಯಾತ್ರೆಗಳು

- ಮಹ್ಮದ್ ಘೋರಿಯು ಪ್ರಥಮವಾಗಿ ಗೋಮಾಲ್ ಕಣಿವೆಯ ಮೂಲಕ ಭಾರತದ ಮೇಲೆ ದಾಳಿ ಮಾಡಿದನು
- ಮುಲ್ತಾನ್ ಮತ್ತು ಸಿಂದ್ ಮೇಲೆ **ಕ್ರಿ.ಶ.1175ರಲ್ಲಿ** ಮುತ್ತಿಗೆ ಹಾಕುವುದರ ಮೂಲಕ ಭಾರತದ ಮೇಲೆ ದಂಡಯಾತ್ರೆ ಆರಂಭಿಸಿದನು.
- **ಅನ್ಹಿಲವಾಡ** : ಅನ್ಹಿಲವಾಡದ ಎರಡನೇ ಭೀಮನು ತನ್ನೆಲ್ಲಾ ಸೈನ್ಯದೊಂದಿಗೆ ಮಹ್ಮದ್‌ನ ಮೇಲೆ ಭಿಕರ ಯುದ್ಧ ಮಾಡಿ ಸೋಲಿಸಿದನು. ಇದು ಘೋರಿಯ ಮೊದಲ ಸೋಲಾಗಿತ್ತು. ಈ ಸೋಲಿನ ನಂತರ ಘೋರನು ಭಾರತದ ದಾಳಿಯ ಮಾರ್ಗವನ್ನು ಬದಲಾಯಿಸಿ ಪಂಜಾಬ್ ಮೂಲಕ ಬರಲು ಆರಂಭಿಸಿದನು.
- **ಪಂಜಾಬ್:–** ಕ್ರಿ.ಶ.1179ರಲ್ಲಿ ಘೋರನು ಪಂಜಾಬ್ ಮೂಲಕ ದಾಳಿ ಆರಂಭಿಸಿ ಈ ಭಾಗದ ಪೇಷಾವರವನ್ನು ವಶಪಡಿಸಿಕೊಂಡನು. ಕ್ರಿ.ಶ.1181 ರಲ್ಲಿ ಖುಸ್ರಾವ್ ಮಲ್ಲಿಕ್‌ನನ್ನು ಸೋಲಿಸಿದನು. ನಂತರ ಸೈಲ್‌ಕೋಟನ್ನು ಆಕ್ರಮಿಸಿ ತನ್ನ ಸೇನಾಠಾಣೆಯನ್ನು ವ್ಯವಸ್ಥೆಗೊಳಿಸಿದನು. ನಂತರ ಕ್ರಿ.ಶ.1186ರಲ್ಲಿ ಖುಸ್ರಾವ್ ಮಲ್ಲಿಕ್‌ನನ್ನು ಸಂಧಾನಕ್ಕೆಂದು ಕರೆದು ಮೋಸದಿಂದ ಸೆರೆಹಿಡಿದು ಕೊಂದನು.
- **ಮೊದಲ ತರೈನ್ ಯುದ್ಧ (ಕ್ರಿ.ಶ.1191) ವು** 3ನೇ ಪೃಥ್ವಿರಾಜ ಚೌಹಾಣ್ ಮತ್ತು ಮಹ್ಮದ್ ಘೋರಿಯ ನಡುವೆ ನಡೆದು **'ಮಹಮ್ಮದ್ ಘೋರಿ'** ಸೋಲನ್ನನುಭವಿಸಿದನು. ಪೃಥ್ವಿರಾಜನ ಸೋದರ ಗೋವಿಂದರೈನ ಕತ್ತಿಯ ಹೊಡೆತಕ್ಕೆ ಸಿಕ್ಕ ಮಹಮ್ಮದ್‌ಘೋರಿ ತೀವ್ರವಾಗಿ ರಕ್ತಸ್ರಾವದಿಂದ ಕುದುರೆಯಿಂದ ಬೀಳುತ್ತಿದ್ದಾಗ ಅವನನ್ನು ಖಿಲ್ಜಿ ನೋಬೆಲ್ಲನು ರಕ್ಷಿಸಿದನು.
- **2ನೇ ತರೈನ್ ಯುದ್ಧ (ಕ್ರಿ.ಶ.1192)**ದಲ್ಲಿ 3ನೇ ಪೃಥ್ವಿರಾಜ ಚೌಹಾಣ್ ಸಿರ್ಸುತಿಯಲ್ಲಿ ಘೋರ್‌ನಿಗೆ ಸೆರೆ ಸಿಕ್ಕನು. ಅವನ ಸಹೋದರ ಗೋವಿಂದರೈ ಮತ್ತು ಖಂಡೆರಾಯ್ ಮರಣ ಹೊಂದಿದರು. ಪೃಥ್ವಿರಾಜನ ನಾಣ್ಯಗಳ ಮೇಲೆ **'ಶ್ರೀ ಮಹಮದ್ ಸ್ಯಾನ್'** ಎಂಬ ಬರಹಗಳು ಕಂಡುಬಂದಿವೆ. ನಂತರ ಘೋರನು ದೆಹಲಿ ಮತ್ತು ಅಜ್ಮೀರ್‌ನ ರಾಜ್ಯ ಪಾಲನನ್ನಾಗಿ **ಕುತುಬ್ದೀನ್** ಐಬಕನನ್ನು ನೇಮಿಸಿದನು.
- **ಕನೂಜಿನ ಮೇಲೆ ದಾಳಿ (ಕ್ರಿ.ಶ.1194) :–** ಮಹ್ಮದ್ ಘೋರ್ ಮತ್ತು ಜಯಚಂದ್ರನ ನಡುವೆ ಯುದ್ಧವು ಯುಮುನಾ ನದಿಯ ದಂಡೆಯ ಮೇಲೆ **'ಚಾಂದಾವಾರ್'** ಎಂಬಲ್ಲಿ ನಡೆದು ರಾಜ ಜಯಚಂದ್ರನು ಆನೆಯ ಮೇಲಿಂದ ಬಿದ್ದು ಸತ್ತನು.
- **ಬುಂದೇಲಖಂಡದ ಆಕ್ರಮಣ (1202–03):–** ಮಹಮ್ಮದ್ ಘೋರ್‌ನ ದಂಡನಾಯಕ ಐಬಕ್‌ನು ಕ್ರಿ.ಶ 1202–03 ರಲ್ಲಿ ಬುಂದೇಲಖಂಡ ಪೆರಮರ್ಧಿದೇವನ ಮೇಲೆ ಆಕ್ರಮಣ ಮಾಡಿದನು. ಆಗಿನ ಕಾಲದ ಮಧ್ಯ ಭಾರತದಲ್ಲಿ ಈತನೊಬ್ಬನೇ ಸ್ವತಂತ್ರ ರಾಜನಾಗಿದ್ದನು ಹಾಗೂ ಅವನ ಕಾಲಿಂಜರ್ ಕೋಟೆಯು ಬಹಳ ಬಲಶಾಲಿಯಾಗಿತ್ತು.
- **ಬಿಹಾರದ ಆಕ್ರಮಣ (ಕ್ರಿ.ಶ. 1202–03) :–** ಬಿಹಾರ ಮತ್ತು ಬಂಗಾಳವನ್ನು ಜಯಿಸಲು ಘೋರ್ ಮತ್ತು ಐಬಕ್‌ನು ಪ್ರಯತ್ನಿಸಲಿಲ್ಲ. ಹಂತ ಹಂತವಾಗಿ ಐಬಕ್‌ನು ಬಿಹಾರವನ್ನು ವಶಪಡಿಸಿಕೊಂಡನು. ಇವನ ನೋಬೆಲ್ ಆಗಿ **ಇಕ್ತಿಯಾರುದ್ದಿನ್ ಮಹ್ಮದ್ ಭಕ್ತಿಯಾರ್** ಖಿಲ್ಜಿ ಎಂಬುವನಿದ್ದನು.
- **ಬಂಗಾಳದ ಆಕ್ರಮಣ (ಕ್ರಿ.ಶ. 1204–05) :–** ಬಿಹಾರದ ಆಕ್ರಮಣದಿಂದ ಉತ್ತೇಜಿತನಾದ ಭಕ್ತಿಯಾರ್ ಖಿಲ್ಜಿಯು ಬಂಗಾಳದ ಮೇಲೆ ಹಠಾತ್ ದಾಳಿ ಮಾಡಿದನು. ಇದರಿಂದ ದಿಕ್ಕು ತೋಚದ ಪಾಲರಾಜ ಲಕ್ಷ್ಮಣಸೇನನು ಓಡಿ ಹೋದನು. ಭಕ್ತಿಯಾರ್ ಖಿಲ್ಜಿಯನ್ನು **ಕ್ರಿ.ಶ.1206ರಲ್ಲಿ ಆಲಿಮರ್ದಿಖಾನ್ ಎಂಬುವವನು ಕೊಲೆ ಮಾಡಿದನು.** ಹೀಗೆ ಘೋರ್ ಮತ್ತು ಐಬಕ್‌ನು ಸ್ವತಃ ನಿರೀಕ್ಷಿಸದೆ ಇದ್ದ ಬಂಗಾಳ ಮತ್ತು ಬಿಹಾರಗಳ ಬಹುತೇಕ ಪ್ರಾಂತ್ಯಗಳನ್ನು ಟರ್ಕಿ ಸಾಮ್ರಾಜ್ಯಕ್ಕೆ ಭಕ್ತಿಯಾರ್ ಖಿಲ್ಜಿಯು ಸೇರಿಸಿದನು.
- ಘೋರ್ ತನ್ನ ಕೊನೆಯ ದಿನಗಳಲ್ಲಿ ದಂಗೆಯೆದ್ದಿದ್ದ ಖೋಕಾಕರನ್ನು ಸೋಲಿಸಿ ತನ್ನ ಗುಲಾಮರಾಗಿರುವಂತೆ ಮಾಡಿಕೊಂಡನು.
- ಇತಿಹಾಸಕಾರರು ಮಹ್ಮದ್ ಘಜ್ನಿಯು ವಿಶಾಲ ಸಾಮ್ರಾಜ್ಯ ಸ್ಥಾಪಿಸಿ ಇಸ್ಲಾಂ ಪ್ರಚಾರ ಮಾಡಿದ ಮೊದಲ ಸುಲ್ತಾನ ಎಂಬ ಖ್ಯಾತಿ ಗಳಿಸಿದ್ದಾನೆ ಎಂದಿದ್ದಾರೆ.
- ಮಹಮ್ಮದ್ ಘೋರಿಯ ಭಾರತದ ಪ್ರಾಂತ್ಯಗಳ ವಿಜಯಕ್ಕೆ ಮತ್ತು ಕ್ರೋಢೀಕರಣಕ್ಕೆ ಕಾರಣರಾದವರು ಕುತುಬ್ದೀನ್ ಐಬಕ್, ತಾಜುದ್ದೀನ್ ಯಾಲ್ದಿಜ್ ಮತ್ತು ಮಲ್ಲಿಕ್ ಬಹೌದ್ದೀನ್ ತಘಿಲ್, ಎಂಬುವರಾಗಿದ್ದಾರೆ.
- ಭಾರತದಲ್ಲಿ ದಾಳಿ ಮಾಡಿದ ಮುಸ್ಲಿಂ ಆಕ್ರಮಣಕಾರರ ಯಶಸ್ಸಿಗೆ ಮುಖ್ಯ ಕಾರಣ ಭಾರತದ ಅರಸರ ಪ್ರಾಚೀನ ರೀತಿಯ ಆಯುಧಗಳು.

13. ಭಾರತದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿ (ಕ್ರಿ.ಶ.800–1200)
Political and Social Conditions of India

ಉತ್ತರ ಭಾರತ
13.1 ರಜಪೂತರು

- ಉತ್ತರ ಮತ್ತು ಪಶ್ಚಿಮ ಭಾರತದಲ್ಲಿ 7ನೇ ಶತಮಾನದಿಂದ 12ನೇ ಶತಮಾನದವರೆಗೆ ಆಳಿದ ಕಾಲವನ್ನು ರಜಪೂತ ಯುಗ ಎನ್ನುವರು.
- **ಮೂಲ:** ಕರ್ನಲ್‌ಟಾಡರ ಪ್ರಕಾರ ಭಾರತಕ್ಕೆ ಬಂದ ವಿದೇಶಿಯರಾದ ಶಕರು, ಕುಶಾನರು, ಹೂಣರು, **ಸಿಥಿಯನ್ನರ** ಮೂಲಸ್ಥರೇ ರಜಪೂತರು ಎಂದಿದ್ದಾರೆ.
- **ದೇಶೀಯ ಮೂಲ ಸಿದ್ಧಾಂತದ ಪ್ರಕಾರ:** ರಜಪೂತರು ಸೂರ್ಯವಂಶ ಮತ್ತು ಚಂದ್ರವಂಶಗಳಿಂದ ಬಂದ ಶುದ್ಧ ಆರ್ಯರು, ಕ್ಷತ್ರಿಯರು, ರಾಜಪುತ್ರರು ಎಂದು ತಿಳಿಸಿದೆ.
- **ಅಗ್ನಿಕುಲ ಸಿದ್ಧಾಂತದ ಪ್ರಕಾರ:** ಚಾಂದ್ ಬರ್ದಾಯಿ ಬರೆದಿರುವ 'ಪೃಥ್ವಿರಾಜರಾಸೋ' ಕೃತಿಯು ರಜಪೂತರು **ಅಗ್ನಿಕುಲಕ್ಕೆ** ಸೇರಿದವರು ಎಂದು ತಿಳಿಸಿದೆ.
- **ಮಿಶ್ರಮೂಲ ಸಿದ್ಧಾಂತದ ಪ್ರಕಾರ** ವಿ.ಎ. ಸ್ಮಿತ್‌ರವರು ಶಕರು, ಕುಶಾನರು, ಹೂಣರು ರಜಪೂತರ ಪೂರ್ವಿಕರು ಹಾಗೂ ಭಾರತೀಯ ಶ್ರೀಮಂತ ರಾಜ ಕುಟುಂಬಕ್ಕೆ ಸೇರಿದವರು ಎಂದಿದ್ದಾರೆ.

ಪ್ರಮುಖ ರಜಪೂತ ಸಂತತಿಗಳು

ಎ. ಗೂರ್ಜರ ಪ್ರತಿಹಾರರು

- ಗ್ವಾಲಿಯರ್ ಶಾಸನವು ಪ್ರತಿಹಾರರು ಸೂರ್ಯವಂಶದವರಾದ ಇವರ ಮೂಲ ನೆಲೆ **ಭೀಮಲ್/ಶ್ರೀಮೂಲ**ವಾಗಿತ್ತು ಎಂದಿದೆ.
- ಪ್ರತಿಹಾರರಲ್ಲಿ ಕನೂಜಿನ ಪ್ರತಿಹಾರರು, ಉಜ್ಜೈನಿಯ ಪ್ರತಿಹಾರರು ಎಂಬ ಎರಡು ಶಾಖೆಗಳಿವೆ.
- ಗೂರ್ಜರ ಪ್ರತಿಹಾರರ ವಂಶದ ಸ್ಥಾಪಕ **1ನೇ ನಾಗಭಟ್ಟ**
- ಗೂರ್ಜರ ಪ್ರತಿಹಾರರ ರಾಜಧಾನಿ **ಅವಂತಿಪುರ**
- **ವತ್ಸರಾಜ (ಕ್ರಿ.ಶ.778 ರಿಂದ 805):** ಇವನು ಬಂಗಾಳದ ಧರ್ಮಪಾಲನನ್ನು ಸೋಲಿಸಿದ, ಆದರೆ ರಾಷ್ಟ್ರಕೂಟರ ಧೃವನಿಂದ ಸೋತು ಹೋದನು.
- **2ನೇ ನಾಗಭಟ್ಟ (ಕ್ರಿ.ಶ.805–833):** ಇವನು ರಾಜಧಾನಿಯನ್ನು ಕನೂಜ್‌ಗೆ ವರ್ಗಾಯಿಸಿದನು. ರಾಷ್ಟ್ರಕೂಟರ 3ನೇ ಗೋವಿಂದ ಮತ್ತು ಧರ್ಮಪಾಲರು ಒಡಗೂಡಿ 2ನೇ ನಾಗಭಟ್ಟನನ್ನು ಸೋಲಿಸಿದರು.
- **ಮಿಹಿರಭೋಜ (ಕ್ರಿ.ಶ. 836–882):** ಇವನು ಪ್ರತಿಹಾರರ ಪ್ರಸಿದ್ಧ ಅರಸ. ಇವನು ಬಂಗಾಳದ ದೇವಪಾಲ ಹಾಗೂ ರಾಷ್ಟ್ರಕೂಟರ ಯಾತ್ರಿಕ **ಸುಲೈಮಾನ್** ಭೇಟಿ ನೀಡಿದ್ದನು.
- **ಮಹೇಂದ್ರಪಾಲ (ಕ್ರಿ.ಶ. 885–910):** ನಿರ್ಭಯರಾಜ, ಮಹಿಷಿಪಾಲ ಎಂಬ ಬಿರುದು ಹೊಂದಿದ್ದ ಇವನ ಆಸ್ಥಾನದಲ್ಲಿ ಖ್ಯಾತ ಸಂಸ್ಕೃತ ಪಂಡಿತ ರಾಜಶೇಖರನಿದ್ದನು. ರಾಜಶೇಖರನು ಕರ್ಪೂರ ಮಂಜರಿ, ಬಾಲ ರಾಮಾಯಣ, ಬಾಲ ಭಾರತ, ಭಾವನಕೋಶ, ಹರಿವಿಲಾಸ ಕೃತಿಗಳನ್ನು ರಚಿಸಿದನು.
- ರಾಥೋಡಿನ ರಜಪೂತರು 1990ರ ವೇಳೆಗೆ ಕನೂಜನ್ನು ಆಕ್ರಮಿಸಿಕೊಂಡು ಪ್ರತಿಹಾರರನ್ನು ಕೊನೆಗೊಳಿಸಿದರು.

ಬಿ. ರಾಥೋಡರು

- **ಚಂದ್ರದೇವ** ರಾಥೋಡ ರಾಜ್ಯ ಸ್ಥಾಪಕ
- **ಗೋವಿಂದ** ರಾಥೋಡರ ಪ್ರಸಿದ್ಧ ಅರಸ.
- **ಜಯಚಂದ್ರನು** ಮಹಮ್ಮದ್ ಘೋರಿಯಿಂದ ಸೋಲಲ್ಪಟ್ಟಿದ್ದರಿಂದ ರಾಥೋಡ ಮನೆತನ ಕೊನೆಗೊಂಡಿತು.

ಸಿ. ಕನೂಜಿನ ಗಹಡವಾಲರು

- **ಯಶೋವಿಗ್ರಹ** ಗಹಡವಾಲ ಈ ಸಂತತಿಯ ಸ್ಥಾಪಕ.

  ಚಂದ್ರದೇವ (1090–1109) ಗಹಡವಾಲರ ಮೊದಲ ಸ್ವತಂತ್ರ ದೊರೆ. ಇವನ ರಾಜಧಾನಿ ಕನೂಜ್ ಆಗಿತ್ತು.

  ಗೋವಿಂದ ಚಂದ್ರ (ಕ್ರಿ.ಶ.1114–1154) ಇವನು ಗಹಡವಾಲರ ಪ್ರಸಿದ್ಧ ಅರಸ.
- ಇವನಿಗೆ ನವರಾಜ್ಯಗಜ ಎಂಬ ಬಿರುದಿತ್ತು.
- ಇವನ ಆಸ್ಥಾನದ ಮಂತ್ರಿ ಲಕ್ಷ್ಮೀಧರನು ಕ್ರಿತ್ಯಕಲ್ಪತರು ಎಂಬ ನ್ಯಾಯಶಾಸ್ತ್ರ ಕೃತಿ ರಚಿಸಿದನು.

ಡಿ. ಮೇವಾಡದ ಗಹಿಲೋಟರು

- ರಜಪೂತರಲ್ಲೇ ವೀರ ಪರಂಪರೆಗೆ ಹೆಸರಾದವರೆಂದರೆ ಗಹಿಲೋಟರು.
- ಗಹಿಲೋಟರ ರಾಣಾಕುಂಭನು ಚಿತ್ತೂರಿನಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು.
- **ರಾಣಾಪ್ರತಾಪಸಿಂಗನು** ಗಹಿಲೋಟರ ಪ್ರಸಿದ್ಧ ಅರಸ. ಇವನು **ಕಣ್ವ** ಯುದ್ಧದಲ್ಲಿ ಬಾಬರನಿಂದ ಸೋಲಲ್ಪಟ್ಟನು.

ಇ. ಬುಂದೇಲಖಂಡದ ಚಂದೇಲರು

- ಚಂದೇಲರು ಪ್ರಾರಂಭದಲ್ಲಿ ಪಾರಮಾರರ ಸಾಮಂತರಾಗಿದ್ದರು.
- **ವಾಕ್ಪತಿ** ರಾಜನು ಚಂದೇಲ ರಾಜ್ಯದ ಸ್ಥಾಪಕ.
- ಚಂದೇಲ ರಾಜ್ಯಕ್ಕೆ **ಜೈಜಕಭುಕ್ತಿ** ಎಂಬ ಹೆಸರಿದೆ. ಇವರ ರಾಜಧಾನಿ ಮಹೋಭವಾಗಿತ್ತು.

- **ಯಶೋವರ್ಮನ್ (ಕ್ರಿ.ಶ. 925–950)**
- ಯಶೋವರ್ಮನ್ ಚಂದೇಲರ ಪ್ರಸಿದ್ಧ ಅರಸ.
- ಖಜರಾಹೋ ಶಾಸನ ಇವನ ಸಾಧನೆಗಳನ್ನು ಕುರಿತು ಹೇಳುತ್ತದೆ.

ಧಂಗ:

- ಚಂದೇಲರಿಗೆ ಪ್ರತಿಹಾರರಿಂದ ಸಂಪೂರ್ಣ ಸ್ವಾತಂತ್ರ್ಯ ಸ್ಥಾನಮಾನ ತಂದುಕೊಟ್ಟನು.
- ಇವನ ರಾಜಧಾನಿ **ಕಾಲಿಂಜರ್**. ಇವನು ಕುಜರಾಹೋವಿನಲ್ಲಿ ಸುಂದರ ದೇವಾಲಯ ಕಟ್ಟಿಸಿದನು.

ಗಂಡ:

- ಗಂಡನು ಹಿಂದೂ ರಾಜರೊಂದಿಗೆ ಒಪ್ಪಂದ ಮಾಡಿಕೊಂಡು ಮಹಮ್ಮದ್ ಘೋರಿಯ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿದನು.
- ಇವನ ಆಸ್ಥಾನಿಕ ಭವಭೂತಿಯು ಉತ್ತರ ರಾಮಚರಿತೆ ಕೃತಿ ರಚಿಸಿದನು.
- **ವಿದ್ಯಾಧರ:** ವಿದ್ಯಾಧರನು ಮುಸ್ಲಿಂ ದಾಳಿಕೋರರನ್ನು ಸಮರ್ಥವಾಗಿ ಸೋಲಿಸಿದನು.
- ಚಂದೇಲರ ಕೊನೆಯ ಅರಸ ಪರಮರ್ದಿ ಪೃಥ್ವಿರಾಜನಿಂದ ಸೋತು ತನ್ನ ರಾಜ್ಯ ಒಪ್ಪಿಸಿದನು.

ಎಫ್. ಚೇದಿಯ ಕಲಚೂರಿಗಳು

- **ಹೈಹೇಯ** ವಂಶಕ್ಕೆ ಸೇರಿದ ಚೇದಿಯ ಕಲಚೂರಿಗಳ ರಾಜ್ಯ ಸ್ಥಾಪಕ **ಕೋಕಲ್ಲ**. ಇವನ ರಾಜಧಾನಿ **ತ್ರಿಪುರಿ**

ಗಂಗೇಯದೇವ (ಕ್ರಿ.ಶ. 1019–1041)

- ಈ ಸಂತತಿಯ ಪ್ರಸಿದ್ಧ ಅರಸ. ಇವನು ಕಲ್ಯಾಣಿ ಚಾಲುಕ್ಯರನ್ನು ಸೋಲಿಸಿದನು.
- **ಲಕ್ಷ್ಮೀಕರಣ:** ಇವನಿಗೆ ಮೂರು ಕಳಿಂಗಗಳ ಪ್ರಭು ಎಂಬ ಬಿರುದಿತ್ತು. ಇವನು ಕಾಶಿಯಲ್ಲಿ ಮೇರು ದೇವಾಲಯ ಕಟ್ಟಿಸಿದನು.

ಜಿ. ಪಾರಮಾರರು

- ಚಾಂದ್ ಬರ್ದಾಯಿಯು ಪಾರಮಾರರು ಅಗ್ನಿಕುಲಕ್ಕೆ ಸೇರಿದ ಕ್ಷತ್ರಿಯರು ಎಂದಿದ್ದಾನೆ.
- ಪ್ರಾರಂಭದಲ್ಲಿ ಇವರು ರಾಷ್ಟ್ರಕೂಟರ ಸಾಮಂತರಾಗಿದ್ದರು.
- **ಉಪೇಂದ್ರ** ಪಾರಮಾರ ಸಂತತಿಯ ಸ್ಥಾಪಕ.
- ಪಾರಮಾರರ ಮೂಲ ನೆಲೆ ಮೌಂಟ್‌ಅಬು. ಇವರ ರಾಜಧಾನಿ ಧಾರಾನಗರ.
- **2ನೇ ವಾಕ್ಪತಿ ಮಂಜ:**
- ಇವನ ಸಾಧನೆಗಳನ್ನು ಕುರಿತು ಉದಯಪುರ ಶಾಸನವು ವಿವರಿಸುತ್ತದೆ.
- ಇವನು ಕಲ್ಯಾಣಿ ಚಾಲುಕ್ಯರ ಮೇಲೆ ಆರು ಬಾರಿ ದಾಳಿ ಮಾಡಿದನು.

ಎಂದಿದೆ.

- ಇವನು ಧಾರಾ ಬಳಿ **ಮಂಜುಸಾಗರ** ಎಂಬ ಕೆರೆ ಕಟ್ಟಿಸಿದನು.
- ಇವನ ಆಸ್ಥಾನದಲ್ಲಿದ್ದ **ಪದ್ಮಗುಪ್ತನು** ನವಸಾಹಸಾಂಕ ಮತ್ತು ಧನಂಜಯನು ದಶರೂಪಕ ಕೃತಿಗಳನ್ನು ರಚಿಸಿದರು.

ಭೋಜ (ಕ್ರಿ.ಶ. 1000–1056)

- ಪಾರಮಾರರ ಪ್ರಸಿದ್ಧ ಅರಸ ಭೋಜ.
- ಸ್ವತಃ ಕವಿಯಾದ ಭೋಜನಿಗೆ **ಕವಿರಾಜ** ಎಂಬ ಬಿರುದಿತ್ತು.
- ಇವನು ಧಾರಾ ನಗರವನ್ನು ವಿಶ್ವವಿದ್ಯಾನಿಲಯವಾಗಿ ಮಾರ್ಪಡಿಸಿದನು.
- ಇವನು ಭೂಪಾಲ್ ಬಳಿಯ **ಭೋಜಪುರಿ** ಎಂಬ ನಗರ ನಿರ್ಮಿಸಿ ಅಲ್ಲಿ ಸಂಸ್ಕೃತ ಕಾಲೇಜು ಸ್ಥಾಪಿಸಿದನು. ಜೊತೆಗೆ ಭೋಜಪುರಿ ಎಂಬ ಸರೋವರ ನಿರ್ಮಿಸಿದನು.
- ಭೋಜನು ಆರ್ಯುವೇದ ಸರ್ವಸ್ವ ಸಮರಾಂಗಣ ಮತ್ತು ಶಬ್ದಾನುಶಾಸನ ಎಂಬ ಕೃತಿಗಳನ್ನು ರಚಿಸಿದನು.
- **ಶುಭವರ್ಮನ್:** ಇವನು ಯಾದವರಾಜರಿಂದ ಸೋತು, ರಾಜ್ಯ ಬಿಟ್ಟು ಕೊಟ್ಟನು.

13.2 ಬಂಗಾಳದ ಪಾಲರು

ಗೋಪಾಲ (ಕ್ರಿ.ಶ. 750–770)

- ಶಶಾಂಕನ ಮರಣದ ನಂತರ ಬಘಾನರ್ ವಾಪವತ (ವಜ್ಯಾಲ) ಎಂಬ ಮಿಲಿಟರಿ ಅಧಿಕಾರಿಯ ಮಗನಾದ ಗೋಪಾಲನು ಬಂಗಾಳದ ರಾಜನಾದನು.
- ಇವನು **ಓದಂತ ಪುರಿಯಲ್ಲಿ** ಒಂದು ಬೌದ್ಧ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದನು.

ಧರ್ಮಪಾಲ:

- ಇವನು ಉತ್ತರದ ಸ್ವಾಮಿಯಾಗಿ ಪಶ್ಚಿಮ ಮತ್ತು ದಕ್ಷಿಣ ಭಾರತದಲ್ಲಿ ರಾಜ್ಯ ವಿಸ್ತರಿಸುವ ಆಕಾಂಕ್ಷೆ ಹೊಂದಿದ್ದನು.
- ರಾಷ್ಟ್ರಕೂಟರ 3ನೇ ಗೋವಿಂದನು ಉತ್ತರ ದಂಡೆಯಾತ್ರೆಯಲ್ಲಿ ಧರ್ಮಪಾಲ ವತ್ಸ್ಯರಾಜ ಮತ್ತು ಅವನ ಮಗ 2ನೇ ನಾಗಭಟ್ಟನನ್ನು ಸೋಲಿಸಿದನು.
- ಧರ್ಮಪಾಲನು **ವಿಕ್ರಮಶೀಲ ವಿಶ್ವವಿದ್ಯಾನಿಲಯ** ಹಾಗೂ **ಸೋಮಪುರಿ ವಿಹಾರವನ್ನು** ಕಟ್ಟಿಸಿದನು.
- ಧರ್ಮಪಾಲನ ಆಸ್ಥಾನದಲ್ಲಿ ಪ್ರಸಿದ್ಧ ಬೌದ್ಧ ಪಂಡಿತ ಹರಿಭದ್ರನಿದ್ದನು.
- **ದೇವಪಾಲ:**
- ಇವನು ಪಾಲರ ಪ್ರಸಿದ್ಧ ದೊರೆ. ಸುಮಾತ್ರ ದೊರೆಯ (ಬಾಲಪುತ್ರದೇವ) ಕೋರಿಕೆಯ ಮೇರೆಗೆ ದೇವಪಾಲನು ನಳಂದ ವಿಹಾರ ನಿರ್ಮಾಣಕ್ಕೆ ದಾನದತ್ತಿಗಳನ್ನು ನೀಡಿದನು.

ಪಾಲರ ಪ್ರಮುಖ ಕೊಡುಗೆಗಳು

- ಪಾಲರು ವಿಶ್ವ ಪ್ರಸಿದ್ಧ **ಓದಂತಪುರಿ** ಹಾಗೂ **ವಿಕ್ರಮಶೀಲ** ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದರು. ಜೊತೆಗೆ **ನಳಂದ** ವಿಶ್ವವಿದ್ಯಾನಿಲಯವನ್ನು ಪೋಷಿಸಿದರು.
- ದೇವಪಾಲನು ನಳಂಡದ ವಿಹಾರ, ಗಯಾದ ಮಹಾಬೋಧಿ ವಿಹಾರವನ್ನು ಕಟ್ಟಿಸಿದನು.
- ಧರ್ಮಪಾಲನು ಸೋಮಪುರಿ ವಿಹಾರವನ್ನು ಕಟ್ಟಿಸಿದನು.
- ಪಾಲರು ಬೌದ್ಧಮತ ಪ್ರಚಾರ ಮಾಡಿದರು. ಇವರ ಕಾಲದಲ್ಲಿ ಬೌದ್ಧಧರ್ಮವು ವಜ್ರಯಾನ ಮತ್ತು ತಂತ್ರಯಾನ ಪಂಥಗಳಾಗಿ ಬೆಳವಣಿಗೆಯಾಯಿತು.
- **ಹಾತಿಸ** ಎಂಬ ಬೌದ್ಧಭಿಕ್ಷು ಟಿಬೆಟ್‌ನಲ್ಲಿ ಹಾಗೂ ಸುಮಾತ್ರದಲ್ಲಿ ಬಾಲಪುತ್ರ ದೊರೆಯು ಬೌದ್ಧ ಪ್ರಚಾರ ಮಾಡಿದರು.

ಮೇವಾಡದ ಗಹಿಲೋಟರು

- ಇವರು ಹತ್ತರಿಂದ ಹದಿಮೂರನೇ ಶತಮಾನದವರೆಗೆ ಆಳಿದರು.
- ಇವರ ರಾಜಧಾನಿ ಚಿತ್ತೂರು
- **ಬಾಪರಾವಲ್** ಗಹಿಲೋಟ ಸಂತತಿಯ ಸ್ಥಾಪಕ.
- ಶ್ರೀಗಹದತ್ತ ಗಹಿಲೋಟರ ಪ್ರಸಿದ್ಧ ಅರಸ.
- ಗಹಿಲೋಟ ಸಂತತಿಯು ರಾಣಸಂಗ್ರಾಮಸಿಂಗ್, ರಾಣಪ್ರತಾಪಸಿಂಗ್, ರಾಣರಾಜಸಿಂಗ್, ಮೊಗಲರ ವಿರುದ್ಧ ಹೋರಾಡಿ ಮಡಿದರು.

ಚೌಹಾಣರು (ಕ್ರಿ.ಶ. 1000-1092)

- ಸೂರ್ಯವಂಶಕ್ಕೆ ಸೇರಿದ ಚೌಹಾಣ ಸಂತತಿಯ ಸ್ಥಾಪಕ **ವಾಸುದೇವ.**
- ಅಜ್ಮೀರ್ ಮತ್ತು ದೆಹಲಿಗಳು ಇವರ ಆಡಳಿತ ಕೇಂದ್ರಗಳು.

3ನೇ ಪೃಥ್ವಿರಾಜ ಚೌಹಾಣ್ (ಕ್ರಿ.ಶ. 1178-1192)

- ಇವನು ಚೌಹಾಣರ ಅತ್ಯಂತ ಪ್ರಸಿದ್ಧ ಅರಸ. ಇವನ ಆಸ್ಥಾನದ ಚಾಂದ್‌ಬರ್ದಾಯಿ **'ಪೃಥ್ವಿರಾಜರಾಸೋ'** ಎಂಬ ಕೃತಿ ರಚಿಸಿದನು.
- ಇವನು 1191ರಲ್ಲಿ ನಡೆದ **1ನೇ ತರೈನ್ ಯುದ್ಧದಲ್ಲಿ** ಮಹಮ್ಮದ್ ಘೋರಿಯನ್ನು ಸೋಲಿಸಿದನು. ಆದರೆ **2ನೇ ತರೈನ್** ಯುದ್ಧ (1192)ದಲ್ಲಿ ಮಹಮ್ಮದ್ ಘೋರಿಯಿಂದ ಪೃಥ್ವಿರಾಜನು ಕೊಲೆಗೀಡಾದನು.

ಗುಜರಾತಿನ ಸೋಲಂಕಿಗಳು

- **ಮೂಲರಾಜನು** ಸೋಲಂಕಿ ಸಂತತಿ ಅಥವಾ ಅನ್ಹಿಲವಾಡ ಚಾಲುಕ್ಯರ ಸ್ಥಾಪಕ.
- ಸೋಲಂಕಿಗಳ ರಾಜಧಾನಿ ಅನ್ಹಿಲವಾಡವಾಗಿತ್ತು.
- ಸೋಲಂಕಿಗಳ ಭೀಮದೇವನ ಕಾಲದಲ್ಲಿ ಮಹಮ್ಮದ್ ಘಜ್ನಿಯು ಸೋಮನಾಥ ದೇವಾಲಯವನ್ನು ಲೂಟಿ ಮಾಡಿದನು.

ಬಿಲ್ಹಣನಿದ್ದನು.

- ಸೋಲಂಕಿಗಳ ಜಯಸಿಂಹನು ಕಲ್ಯಾಣಿ ಚಾಲುಕ್ಯರ 6ನೇ ವಿಕ್ರಮಾದಿತ್ಯನನ್ನು ಸೋಲಿಸಿದನು. ಇವನು ಕ್ರಿ.ಶ. 1113ರಲ್ಲಿ **ಸಿಂಹಶಕೆ** ಆರಂಭಿಸಿದನು. ಇವನ ಆಸ್ಥಾನದಲ್ಲಿ ಜೈನಕವಿ **ಹೇಮಸೇನನಿದ್ದನು.**
- ಸೋಲಂಕಿಗಳ ಕುಮಾರಪಾಲನು ಶಿಕ್ಷಣ ಮತ್ತು ಸಾಹಿತ್ಯಗಳ ಪಕ್ಷಪಾತಿಯಾಗಿದ್ದನು. ಇವನ ಆಸ್ಥಾನ ಕವಿ ಹೇಮಸೇನನು ಕುಮಾರಪಾಲನ ಚರಿತೆ ಎಂಬ ಕೃತಿ ಬರೆದನು.
- ಕ್ರಿ.ಶ. 1297ರಲ್ಲಿ ಅನ್ಹಿಲವಾಡದ ಮೇಲೆ ದಾಳಿಮಾಡಿದ ಅಲ್ಲಾವುದ್ದೀನ್ ಖಿಲ್ಜಿ ಸೋಲಂಕಿಗಳನ್ನು ಮೂಲೆ ಗುಂಪು ಮಾಡಿದನು.

ರಜಪೂತರ ಕೊಡುಗೆಗಳು

- ರಜಪೂತರ ಆಡಳಿತ ಪದ್ಧತಿಯು **ಊಳಿಗಮಾನ್ಯ ಲಕ್ಷಣ** ಹೊಂದಿತ್ತು.
- ಗುಪ್ತರ ಪತನದ ನಂತರ ಇದು ಭಾರತದಲ್ಲಿ ಗಣರಾಜ್ಯ ಆಡಳಿತ ಪದ್ಧತಿಯ ಅವನತಿಯನ್ನು ಸೂಚಿಸುತ್ತದೆ.
- ರಜಪೂತ ಆಡಳಿತದಲ್ಲಿ ರಾಜನಿಗೆ ಸಲಹೆ ನೀಡಲು ಮಂತ್ರಿ ಪರಿಷತ್ತು ಇತ್ತು. ಪ್ರಧಾನ ಮಂತ್ರಿ, ಮಂತ್ರಿಗಳಲ್ಲಿ ಶ್ರೇಷ್ಠನಾಗಿದ್ದನು.
- ಇವರು ರಾಜ್ಯಗಳನ್ನು ಪ್ರಾಂತ್ಯ ಅಥವಾ ಭುಕ್ತಿಗಳು, ಜಿಲ್ಲೆಗಳು, ವಿಷಯಗಳು ಮತ್ತು ಗ್ರಾಮಗಳಾಗಿ ವಿಂಗಡಿಸಿದ್ದರು. ಪ್ರಾಂತ್ಯಗಳಲ್ಲಿ **ರಾಜ್ಯಪಾಲ,** ಜಿಲ್ಲೆಗಳಲ್ಲಿ **ವಿಷಯಪತಿ** ಹಾಗೂ ಗ್ರಾಮದಲ್ಲಿ **ಗ್ರಾಮಿಣಿಪತಿ** ಎಂಬ ಮುಖ್ಯಸ್ಥರಿದ್ದರು.
- ರಜಪೂತರ ಕಾಲದಲ್ಲಿ **ದ್ರಮ್ಮ** ಗ್ರೀಕ್ ನಾಣ್ಯಕ್ಕೆ ಸಮನಾದ ಚಿನ್ನದ ನಾಣ್ಯಗಳು, ಬೆಳ್ಳಿಯ ದ್ರಮ್ಮ ಮತ್ತು ಟಂಕ್ ನಾಣ್ಯಗಳು ಚಲಾವಣೆಯಲ್ಲಿದ್ದವು.
- ರಜಪೂತರ ಕಾಲದಲ್ಲಿ ಬಾಲ್ಯ ವಿವಾಹ ಮತ್ತು ಜಾಹಾರ ಎಂಬ ಹೊಸ ಸಾಮಾಜಿಕ ಪಿಡುಗುಗಳು ರೂಢಿಗೆ ಬಂದವು. ಜೊತೆಗೆ ಸತಿಸಹಗಮನ ಪದ್ಧತಿ ರೂಢಿಯಲ್ಲಿತ್ತು.
- ರಜಪೂತರ ಕಾಲದಲ್ಲಿ ವಾತ್ಸಾಯನ ಕಾಮಸೂತ್ರ, ಪತಂಜಲಿಯ ಮಹಾಬಾಷ್ಯ, ಸಾಂಖ್ಯ, ವೈಶೇಷಿಕ, ತತ್ವಶಾಸ್ತ್ರ ಕೃತಿಗಳನ್ನು ಪುನರ್‌ರಚಿಸಲಾಯಿತು.
- ರಜಪೂತರ ಕಾಲದಲ್ಲಿ ಗುಜರಾತ್ ವಾಸ್ತುಶೈಲಿಯು ವಿಕಾಸವಾಗಿ ವಡೋದರದ **ಸೂರ್ಯದೇವಾಲಯವನ್ನು** ನಿರ್ಮಿಸಲಾಯಿತು.
- ರಜಪೂತರು ಖಜರಾಹೋನ ಮಹಾದೇವ ದೇವಾಲಯ, ಮೌಂಟ್ ಅಬುವಿನ ಆದಿನಾಥ ದೇವಾಲಯ, ಕೋನಾರ್ಕ್‌ನ ಸೂರ್ಯ ದೇವಾಲಯ, ಪುರಿಯ ಜಗನ್ನಾಥ ದೇವಾಲಯ, ಮಥುರಾದ ಸೂರ್ಯ ದೇವಾಲಯ, ಭುವನೇಶ್ವರದ ಲಿಂಗರಾಜ ದೇವಾಲಯ, ಸೌರಾಷ್ಟ್ರ ಸೋಮನಾಥ ದೇವಾಲಯ, ಮಾದೇರಾದ ಸೂರ್ಯ ದೇವಾಲಯ ಹಾಗೂ ಚಿತ್ತೂರಿನ

ಕಾಳಿಕಮಾತಾ ದೇವಾಲಯಗಳು ನಿರ್ಮಾಣವಾದವು.

- ಪುರಿಯ ಕೊನಾರ್ಕ್ ದೇವಾಲಯವನ್ನು ಪೂರ್ವದ ಗಂಗರಸ ಒಂದನೇ ನರಸಿಂಹನು ನಿರ್ಮಿಸಿದನು. ಈ ದೇವಾಲಯವನ್ನು **ಬ್ಲಾಕ್ ಪಗೋಡ** ಎನ್ನುವರು.
- ಮೌಂಟ್ ಅಬುವಿನಲ್ಲಿ ಸೋಲಂಕಿ ರಾಜರು ನಿರ್ಮಿಸಿದ **ಆದಿನಾಥ** ಮತ್ತು **ನೇಮಿನಾಥ** ಎಂಬ ಜೈನ ದೇವಾಲಯಗಳನ್ನು **ದಿಲ್ವಾರ ದೇವಾಲಯ/ವಿಮಾಷಾಯಿ/** ತೇಜೋಪಾಲ ದೇವಾಲಯ ಎಂದು ಸಹ ಕರೆಯುವರು.
- ಒರಿಸ್ಸಾ ಭುವನೇಶ್ವರದ **ಲಿಂಗರಾಜ** ದೇವಾಲಯವನ್ನು ಪಾಲರ ಮಹೀಮಪಾಲನು ನಿರ್ಮಿಸಿದನು.
- ಪುರಿಯ **ಜಗನ್ನಾಥ ದೇವಾಲಯ**ವನ್ನು ಪೂರ್ವದ ಗಂಗರಸ **1ನೇ ನರಸಿಂಹದೇವನು** ನಿರ್ಮಿಸಿದನು.
- ರಜಪೂತರು ಮೇವಾರದಲ್ಲಿ ದೇವಗರ್ ಶೈಲಿಯ ಚಿತ್ರಕಲೆ, ಕಿಶನ್‌ಗಜ್‌ನಲ್ಲಿ ದೊಂಗರ ಶೈಲಿಯ ಚಿತ್ರಕಲೆ, ಮಾರ್‍ವಾರದಲ್ಲಿ ಆಳ್ವಾರ ಶೈಲಿಯ ಚಿತ್ರಕಲೆ, ಗುಲೇರ್ ಚಿತ್ರಕಲೆ, ಕಾಂಗ್ರಾ ಚಿತ್ರಕಲೆ ಮತ್ತು ಜೈಪುರ ಚಿತ್ರಕಲೆಯನ್ನು ನಿರ್ಮಿಸಿದರು.

13.3 ಬಂಗಾಳದ ಸೇನರು

- ಸೇನರು ದಕ್ಷಿಣ ಭಾರತ ಮೂಲದ ಬ್ರಾಹ್ಮಣ ಜಾತಿಯವರು.
- ಸಮರಸೇನ್ ಸೇನರ ಸಂತತಿಯ ಸ್ಥಾಪಕ.
- ವಿಜಯಸೇನ್, ವೆಲ್ಲಾಳಸೇನ್ ಮತ್ತು ಲಕ್ಷ್ಮಣಸೇನರು ಗಣ್ಯ ದೊರೆಗಳಾಗಿ ಆಳ್ವಿಕೆ ನಡೆಸಿದರು.

13.4 ರಾಷ್ಟ್ರಕೂಟರು (ಕ್ರಿ.ಶ.753–973) Rastrakutas

- ರಾಷ್ಟ್ರಕೂಟರು ಕನ್ನಡಿಗರಾಗಿದ್ದು ಚಾಲುಕ್ಯರ ಸಾಮಂತರಾಗಿದ್ದರು. ಇವರು ಯದು ವಂಶಕ್ಕೆ ಸೇರಿದವರು. ಇವರ ರಾಜ್ಯವು ಉತ್ತರದ ನರ್ಮದಾದಿಂದ ದಕ್ಷಿಣದ ಕಾವೇರಿವರೆಗೆ, ಪೂರ್ವದ ಆಂಧ್ರದಿಂದ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದವರೆಗೆ ವಿಸ್ತರಿಸಿತ್ತು.
- ರಾಷ್ಟ್ರಕೂಟ **ಲಟ್ಟಲೂರು** ಮನೆತನದವರು ಪುರವರಾಳೇಶ್ವರ ಎಂಬ ಬಿರುದು ಧರಿಸಿದ್ದರು. ಜಬ್ಬಲ್ ಪುರದಲ್ಲಿ ದೊರೆತಿರುವ **'ಜ್ಯೂರಾ ಪ್ರಶಸ್ತಿಯು'** ಕನ್ನಡ ಲಿಪಿಯಲ್ಲಿರುವುದರಿಂದ ರಾಷ್ಟ್ರಕೂಟರು ಕನ್ನಡಿಗರಾಗಿದ್ದು, **ಗರುಡ ಮತ್ತು ಪಾಳಿಧ್ವಜ** ಇವರ ಲಾಂಛನವಾಗಿತ್ತು. **ಮಾನ್ಯಖೇಟ** ಇವರ ರಾಜಧಾನಿ.

ದಂತಿದುರ್ಗ (753–756)

- ದಂತಿದುರ್ಗ ರಾಷ್ಟ್ರಕೂಟ ರಾಜ್ಯ ಸ್ಥಾಪಕ, ಇವನು ಚಾಲುಕ್ಯರ 2ನೇ ವಿಕ್ರಮಾದಿತ್ಯನ ಸಾಮಂತನಾಗಿದ್ದನು.
- ಇವನು ಚಾಲುಕ್ಯರ 2ನೇ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟ ರಾಜ್ಯ ಸ್ಥಾಪಿಸಿದನು.

1ನೇ ಕೃಷ್ಣ (756– 775)

- ಇವನು 2ನೇ ಕೀರ್ತಿವರ್ಮ, ಗಂಗರ ಶ್ರೀಪುರುಷ, ಮತ್ತು ವಿಷ್ಣುವರ್ಧನನ ಮಗಳಾದ ಶ್ರೀ ಭಟ್ಟಾರಿಕೆಯನ್ನು ವಿವಾಹವಾದನು.
- 1ನೇ ಕೃಷ್ಣನು ಜಗತ್ಪ್ರಸಿದ್ದವಾದ ಎಲ್ಲೋರದ ಕೈಲಾಸನಾಥ ದೇವಾಲಯ ಕಟ್ಟಿಸಿದನು.
- ಅಕಾಲವರ್ಷ, ಶುಭತುಂಗ ಮುಂತಾದವು ಈತನ ಬಿರುದುಗಳು.
- ಇವನ ನಂತರ 2ನೇ ಗೋವಿಂದನು 775 ರಿಂದ 780 ರವರೆಗೆ ಆಳ್ವಿಕೆ ನಡೆಸಿದನು.

ಧ್ರುವ (780–793)

- ಧ್ರುವನು ಗಂಗರನ್ನು ಸಂಪೂರ್ಣ ಸೋಲಿಸಿ ಗಂಗವಾಡಿಯ ರಾಜ್ಯಪಾಲನಾಗಿ ತನ್ನ ಮಗ ಸ್ತಂಭನನ್ನು ನೇಮಿಸಿದನು. ಝಾನ್ಸಿ ಯುದ್ಧದಲ್ಲಿ ಕನೂಜಿನ ಇಂದ್ರಾಯುಧ, ಪ್ರತಿಹಾರರ ವತ್ಸರಾಜ ಮತ್ತು ಬಂಗಾಳದ ಧರ್ಮಪಾಲನನ್ನು ಸೋಲಿಸಿ ಉತ್ತರ ಭಾರತಕ್ಕೆ ತನ್ನ ರಾಜ್ಯ ವಿಸ್ತರಿಸಿದನು.
- ಧ್ರುವನು ಸಾಯುವ ತನಕ ಇಡೀ ಭಾರತದಲ್ಲಿ ರಾಷ್ಟ್ರಕೂಟರನ್ನು ಎದುರಿಸುವವರು ಯಾರೂ ಇರಲಿಲ್ಲ.

3ನೇ ಗೋವಿಂದ (793–814)

- ಗೋವಿಂದನು ಸೆರೆಯಲ್ಲಿದ್ದ ಗಂಗರ 2ನೇ ಶಿವಮಾರನನ್ನು ಬಿಡುಗಡೆ ಮಾಡಿ ಪುನಃ ಗಂಗವಾಡಿಯ ರಾಜ್ಯಪಾಲನಾಗಿಸಿದನು.
- ಇವನು ಚಕ್ರಾಯುಧ ಮತ್ತು ಧರ್ಮಪಾಲನನ್ನು ಸೋಲಿಸಿದನು. ಸಂಜನಾ ಶಾಸನ ತಿಳಿಸುವಂತೆ "3ನೇ ಗೋವಿಂದನ ಗಜಸೈನ್ಯವು ಗಂಗಾನದಿಯ ಪವಿತ್ರ ನೀರನ್ನು ಕುಡಿದ ಮೇಲೆ ಹಿಮಾಯಲದವರೆಗೆ ದಂಡೆತ್ತಿ ಹೋಗಿದ್ದನು ಎಂದಿದೆ.
- ಇವನ ಆಸ್ಥಾನದಲ್ಲಿ ವಾಮನ (ಲಂಗಾನುಶಾಸನ) ಪುಷ್ಪದಂತ, ವಿದ್ಯಾನಂದಿನ್, 1ನೇ ಜಿನಸೇನ, ಲೋಕಸೇನ ಮುಂತಾದ ಕವಿಗಳಿದ್ದರು.
- ಶ್ರೀವಲ್ಲಭ, ತ್ರಿಭುವನದಳ, ಕೀರ್ತಿನಾರಾಯಣ ಮುಂತಾದವು ಈತನ ಬಿರುದುಗಳು.

ಅಮೋಘವರ್ಷ ನೃಪತುಂಗ (ಕ್ರಿ.ಶ.814–878)

- ಅಮೋಘವರ್ಷ ರಾಷ್ಟ್ರಕೂಟರ ಪ್ರಸಿದ್ಧ ದೊರೆ. (ಇವನ ಮೊದಲ ಹೆಸರು ಶರ್ವ) ನೀತಿಮಾರ್ಗ ಎರೆಗಂಗನನ್ನು ರಾಜಮಡು ಎಂಬಲ್ಲಿ ಸೋಲಿಸಿದನು. ತನ್ನ ರಾಜ್ಯದ ಬರಗಾಲ ನಿವಾರಣೆಗಾಗಿ ಕೊಲ್ಲಾಪುರದ ಮಹಾಲಕ್ಷ್ಮೀಗೆ ತನ್ನ ಎಡಗೈ ಹೆಬ್ಬೆರಳು ಕತ್ತರಿಸಿಕೊಟ್ಟನು.
- ನೃಪತುಂಗನು ತನ್ನ ಮಗಳಾದ ಚಂದ್ರಲೊಬ್ಬೆಯನ್ನು ಗಂಗರ 1ನೇ ಭೂತುಗನಿಗೆ ಹಾಗೂ ಮತ್ತೊಬ್ಬ ಮಗಳಾದ ಶಂಭಾಳನ್ನು ಪಲ್ಲವರ ನಂದಿವರ್ಮನಿಗೆ ಕೊಟ್ಟು ವೈವಾಹಿಕ ಸಂಬಂಧ ಬೆಳೆಸಿದನು.
- ನೃಪತುಂಗನು **'ಮಾನ್ಯಖೇಟಾ'** ಎಂಬ ಹೊಸ ರಾಜಧಾನಿ ನಿರ್ಮಿಸಿದನು. ಪ್ರಥಮ ರಾಜಧಾನಿ **ಎಲಿಚಪುರ**ವಾಗಿತ್ತು. (ಬಂಕೇಶ ಇವನ ಸೇನಾನಿ)

ಆಸ್ಥಾನ ಸಂದರ್ಶಿಸಿದ್ದನು. ಇವನು ಅಮೋಘವರ್ಷನನ್ನು ಬಾಗ್ದಾದಿನ ಖಲೀಫ, ಚೀನಾ ಕಾನ್‌ಸ್ಟಾಂಟಿನೋಪಲ್ ಸಾಮ್ರಾಟರೊಂದಿಗೆ ಹೋಲಿಸಿದ್ದಾನೆ. ಇವನ ಆಸ್ಥಾನವನ್ನು ಅನೇಕ ಕವಿಗಳು, ವಿದ್ವಾಂಸರು ಅಲಂಕರಿಸಿದ್ದರು.

- ನೃಪತುಂಗನ ನಂತರ 2ನೇ ಕೃಷ್ಣ (880–914), 3ನೇ ಇಂದ್ರ (914–928) ಮತ್ತು ನಾಲ್ಕನೇ ಗೋವಿಂದರು (931–936) ಆಳ್ವಿಕೆ ನಡೆಸಿದರು.

3ನೇ ಕೃಷ್ಣ (939–966)

- 3ನೇ ಕೃಷ್ಣನು ಗಂಗ ಸಿಂಹಾಸನವನ್ನು ಕಿತ್ತು ಬೂತುಗನಿಗೆ ಕೊಟ್ಟನು. **ತೆಕ್ಕೊಳಂ ಯುದ್ಧ (ಕ್ರಿ.ಶ. 949)** ದಲ್ಲಿ 2ನೇ ಬೂತುಗ 3ನೇ ಕೃಷ್ಣನೊಡಗೂಡಿ ಚೋಳರ 1ನೇ ಪರಾಂತಕನನ್ನು ಸೋಲಿಸಿದನು. ಇದರಿಂದ **'ಕಂಚಿಯಂ ತಂಜೈಯಂಕೊಂಡ'** ಎಂಬ ಬಿರುದು ಪಡೆದನು.
- ಉತ್ತರದ ದಂಡಯಾತ್ರೆಯಲ್ಲಿ ಇವನಿಂದ ಗುರ್ಜರ ಪ್ರತಿಹಾರರು, ಪಾರಮಾರರು ಸೋತಿದ್ದರು. **'ಅಕಾಲವರ್ಷ'** ಇವನ ಪ್ರಸಿದ್ಧ ಬಿರುದಾಗಿತ್ತು. **ಉಭಯ ಕವಿ ಚಕ್ರವರ್ತಿ ಪೊನ್ನನು** ಇವನ ಆಸ್ಥಾನದಲ್ಲಿದ್ದನು.
- ರಾಷ್ಟ್ರಕೂಟರ ಕೊನೆಯ ದೊರೆ 2ನೇ ಕರ್ಕನನ್ನು ಕಲ್ಯಾಣ ಚಾಲುಕ್ಯರ **2ನೇ ತೈಲಪನು** ಸೋಲಿಸಿ ಕಲ್ಯಾಣಿ ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದನು.

ರಾಷ್ಟ್ರಕೂಟರ ಕೊಡುಗೆಗಳು

ಆಡಳಿತ

- ರಾಷ್ಟ್ರಕೂಟರು ಚಾಲುಕ್ಯರ ಆಡಳಿತ ಪದ್ಧತಿಯುನ್ನು ಮುಂದುವರಿಸಿದರು. ರಾಜನಿಗೆ ನೆರವಾಗಲು ಮಂತ್ರಾಲೋಚನಾ ಸಭೆಯೊಂದಿತ್ತು. ಅದರ ಪ್ರಮುಖ ಅಧಿಕಾರಿಗಳೆಂದರೆ:–
- ಪ್ರಧಾನ ಮಂತ್ರಿ – ಮಂತ್ರಿಮಂಡಲದ ಮುಖ್ಯಸ್ಥ
- ಮಹಾಸಂಧಿ ವಿಗ್ರಹ – ವಿದೇಶಾಂಗ ಮಂತ್ರಿ
- ಅಮಾತ್ಯ – ಕಂದಾಯ ಮಂತ್ರಿ
- ಕೋಶಾಧ್ಯಕ್ಷ – ಹಣಕಾಸು ಮಂತ್ರಿ
- ಕರಣಿಕ – ಲೆಕ್ಕಾಧಿಕಾರಿ.
- ಸಾಮ್ರಾಜ್ಯ, ರಾಷ್ಟ್ರ, ವಿಷಯ, ಭುಕ್ತಿ ಮತ್ತು ಗ್ರಾಮಗಳಾಗಿ ವಿಂಗಡಿಸಿದ್ದರು. ಇವುಗಳನ್ನು ಕ್ರಮವಾಗಿ ರಾಜ, ರಾಷ್ಟ್ರಪತಿ, ವಿಷಯಪತಿ, ಪ್ರಾದೇಶಿಕ ಮತ್ತು ಗಾವುಂಡರು ನೋಡಿಕೊಳ್ಳುತ್ತಿದ್ದರು.

ಸಾಮಾಜಿಕ ವ್ಯವಸ್ಥೆ.

- ರಾಷ್ಟ್ರಕೂಟರ ಸಮಾಜದ ಬಗ್ಗೆ ಸುಲೈಮಾನ್, ಅಲ್‌ಮಸೂದಿ, ಇಬನ್‌ಬತೂತರ ಬರವಣಿಗೆಗಳು ತಿಳಿಸುತ್ತವೆ. ಪಿತೃಪ್ರಧಾನ ಕುಟುಂಬವಿದ್ದು ಸ್ತ್ರೀಯರಿಗೆ ಸ್ಥಾನಮಾನವಿತ್ತು. ಜಾತಿಪದ್ಧತಿ,
- ಮುಖ್ಯ ಬದಲಾವಣೆ ಎಂದರೆ ಸ್ತ್ರೀಯರು ತಮ್ಮ ಪತಿಯರ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕು ಹೊಂದಿದ್ದರು.

ಭೂ ಕಂದಾಯ

- ಭೂ ಕಂದಾಯ ರಾಜ್ಯದ ಮುಖ್ಯ ಆದಾಯ ಉದ್ರಂಗ, ಉಪಾಕರ, ಪ್ರತ್ಯಯ ಮತ್ತು ವಿಷ್ಟಿ ಎಂಬ ತೆರಿಗೆಗಳಿದ್ದವು. ವೃತ್ತಿ ಸಂಘಗಳನ್ನು **'ಶ್ರೇಣಿ'** ಎನ್ನಲಾಗುತ್ತಿತ್ತು. 'ಐಯ್ಯಾವಳೆ 500ಸಂಘ' ಇದು ಉದ್ದಿಮೆ ಮತ್ತು ವಾಣಿಜ್ಯ ಅಧಿಕಾರ ಹೊಂದಿತ್ತು.

ಆರ್ಥಿಕ ಜೀವನ

- ಕ್ರಿ.ಶ.1ನೇ ಶತಮಾನದಲ್ಲಿ The Periplus of Erythrean sea ಗ್ರಂಥದಲ್ಲಿ ರಾಷ್ಟ್ರಕೂಟರ ಆಮದು ಮತ್ತು ರಫ್ತುಗಳ ಬಗ್ಗೆ ಉಲ್ಲೇಖವಿದೆ.
- ಮಾರ್ಕೊಪೋಲೋ ತಿಳಿಸಿರುವಂತೆ " ಅಂದು ಕುದುರೆಯ ವ್ಯಾಪಾರ ಅತ್ಯಂತ ಬಿರುಸಿನಿಂದ ನಡೆಯುತ್ತಿದ್ದು ದಖನ್ನಿನ ಬಂದರಿಗೆ ಹೋಗಿ ಮುಟ್ಟುವ ಪ್ರತಿಯೊಂದು ಹಡಗಿನ ಸರಕುಗಳು ಕುದುರೆಗಳೇ ಆಗಿದ್ದವು.

ನಾಣ್ಯಗಳು

- ಗದ್ಯಾಣ, ಕವಿಂಜು, ಕಾಸು, ಅಕ್ಕಂ, ಮುಂಜಾಡಿ ಎಂಬ ಚಿನ್ನದ ನಾಣ್ಯಗಳು.
- ದ್ರಾಮ್ ಎಂಬ ಬೆಳ್ಳಿಯ ನಾಣ್ಯ ಚಲಾವಣೆಯಲ್ಲಿದ್ದವು.

ಸಾಹಿತ್ಯ.

ಸಂಸ್ಕೃತ ಸಾಹಿತ್ಯ

	ಕವಿ	ಕೃತಿ
1)	ತ್ರಿ ವಿಕ್ರಮ	– ನಳಚಂಪು, ಮದಲಸ ಚಂಪು.
2)	ಸೋಮದೇವ ಸೂರಿ	– ಯಸಶ್‌ತಿಲಕ.
3)	ಮಹಾವೀರಾಚಾರ್ಯ	– ಗಣಿತಸಾರ ಸಂಗ್ರಹ.
4)	ಜೀನಸೇನ	– ಹರಿವಂಶಧವಳ, ಜಯಧವಳ
5)	ಅಮೋಘ ವರ್ಷ	– ಪ್ರಶ್ನೋತ್ತರ ಮಾಲಾ.
6)	ಶಕಟಾಯನ	– ಅಮೋಘವೃತ್ತ.

ಕನ್ನಡ ಸಾಹಿತ್ಯ.

1) ಶ್ರೀ ವಿಜಯ– ಕವಿರಾಜಮಾರ್ಗ (ಅಮೋಘವರ್ಷನ ಆಸ್ಥಾನ)
2) ಪೊನ್ನ – ಶಾಂತಿನಾಥ ಪುರಾಣ ಮತ್ತು ಭುವನೈಕ್ಯ ರಾಮಾಭ್ಯುದಯ (3ನೇ ಕೃಷ್ಣನ ಆಸ್ಥಾನ)
3) ಪಂಪ–ಆದಿಪುರಾಣ, ವಿಕ್ರಮಾರ್ಜುನ ವಿಜಯ (ಅರಿಕೇಸರಿ ಆಸ್ಥಾನ)
4) ಶಿವಕೋಟ್ಯಾಚಾರ್ಯ – ವಡ್ಡಾರಾಧನೆ.

ಕಲೆ ಮತ್ತು ವಾಸ್ತುಶಿಲ್ಪ

ಎಲ್ಲೋರ

- ಎಲ್ಲೋರದ ಕೈಲಾಸನಾಥ ದೇವಾಲಯವನ್ನು 1ನೇ ಕೃಷ್ಣ

ಕಟ್ಟಿಸಿದನು. ಇದು ಭಾರತದ ಗುಹಾ ವಾಸ್ತುಶಿಲ್ಪದಲ್ಲಿ ಪ್ರಸಿದ್ಧವಾದುದು. **16ನೇ ಗುಹೆಯಲ್ಲಿ** ಕೈಲಾಸನಾಥ ದೇವಾಲಯವಿದೆ. **ವಿಷ್ಣುಶರ್ಮ** ಇದರ ನಿರ್ಮಾಪಕ. ಇಡೀ ದೇವಾಲಯವನ್ನು ಎರಡು ಆನೆಗಳು ಹೊತ್ತು ನಿಂತಿವೆ. **ರಾವಣನು ಕೈಲಾಸಪರ್ವತ ಎತ್ತುತ್ತಿರುವ ದೃಶ್ಯ**, ಶಿವಪಾರ್ವತಿಯರ ತನ್ಮಯರಾಗಿ ಪಗಡೆಯಾಡುತ್ತಿರುವ ದೃಶ್ಯಗಳಿವೆ. ರಾಮೇಶ್ವರ ಗುಹೆಯಲ್ಲಿ ಕಾಳಿ, ಸಪ್ತಮಾತೃಕೆ, ನಟರಾಜ, ಗಿರಿಜಾ ಕಲ್ಯಾಣ ಶಿಲ್ಪಗಳಿವೆ. ಇಂದ್ರ ಸಭಾವು ಜೈನ ಗುಹೆಯಾಗಿದೆ. ದಶಾವತಾರ ಗುಹೆಯು ವೈಧಿಕ ಧರ್ಮವಾಗಿದ್ದು 15ನೇ ಗುಹೆ ಮೇಲೆ ದಂತಿವರ್ಮನ ಶಾಸನವಿದೆ. ಜೈನಧರ್ಮಕ್ಕೆ ಸೇರಿದ ಐದು ಶಿಲೋತ್ಪನಿತ ದೇವಾಲಯಗಳು (ಚೋಟಾ ಕೈಲಾಸ, ಜಗನ್ನಾಥ ಸಭೆ, ಇಂದ್ರಸಭೆ) ಎಲ್ಲೋರದಲ್ಲಿವೆ.

ಎಲಿಫೆಂಟಾ

- ಪೋರ್ಚುಗೀಸರು ದೊಡ್ಡ ಆನೆಯಾಕಾರದ ಬಂಡೆಯನ್ನು ಕಂಡು ಅದನ್ನು ಎಲಿಫೆಂಟಾ ಎಂದು ಕರೆದರು. ಇಲ್ಲಿ ರಾಷ್ಟ್ರಕೂಟರ ಕಾಲದ 7 ಗುಹೆಗಳಿವೆ. ತ್ರಿಮೂರ್ತಿಯಿರುವ ಮಧ್ಯದ ಗುಹೆ ಅಪೂರ್ವವಾಗಿದೆ. ಇದರ ಬದಿಯಲ್ಲಿ ಗಿರಿಜಾ ಕಲ್ಯಾಣ, ನಟರಾಜ, ಶಿವ, ಗಂಗಾಧರ, ಅರ್ಧನಾರೀಶ್ವರ, ಶಿವ ಯೋಗೀಶ್ವರ ಮುಂತಾದ ಶಿವನ ಅವತಾರದ ವಿಗ್ರಹಗಳಿವೆ.

ದಕ್ಷಿಣ ಭಾರತ

13.5 ಚೋಳರು. (Cholas)

- ಮಹಾಭಾರತದ ಸಭಾ ಪರ್ವದಲ್ಲಿ ಚೋಳರ ಉಲ್ಲೇಖವಿದೆ.
- ಚೋಳರು 9ನೇ ಶತಮಾನದಿಂದ 12 ನೇ ಶತಮಾನದವರಗೆ ದಕ್ಷಿಣ ಭಾರತದಲ್ಲಿ ಅಳ್ವಿಕೆ ಮಾಡಿದರು.
- ಚೋಳರ ಅರಂಭದ ರಾಜಧಾನಿ **ಉರೈಯೂರು (ತಿರುಚಿನಾಪಳ್ಳಿ)**
- ಚೋಳರ ಇತಿಹಾಸ ತಿಳಿಯಲು ಅಶೋಕ ಶಾಸನಗಳು, ಬೌದ್ಧಗ್ರಂಥ ಮಹಾವಂಶ, ಮೆಗಾಸ್ತನೀಸ್ ಬರವಣಿಗೆಗಳು, ಅನಾಮಿಕನ ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ಸೀ, ಸಂಘಂ ಸಾಹಿತ್ಯ, ಉತ್ತರ ಮೆರೂರು ಶಾಸನ, ಪೆರಿಯ ಪುರಾಣ, ಮುಂತಾದವು ಸಹಾಯಕವಾಗಿವೆ.
- ಚೋಳರ ರಾಜ ಲಾಂಛನ **ಹುಲಿ**.

ರಾಜಕೀಯ ಇತಿಹಾಸ.

- ಚೋಳರ ಇಳೈಯಾನ್ ಚೋಳನು ಸಂಘಂ ಯುಗದ ಆರಂಭ ರಾಜ. ಉರೈಯೂರು ಅವನ ರಾಜಧಾನಿ.
- ಚೋಳ ಸಂತತಿಯ ಮೊದಲ ದೊರೆ **ಕರಿಕಾಳ ಚೋಳ**. ಇವನು ಕಾವೇರಿ ನದಿಗೆ ಕಲ್ಲಣೈ ಅಣೆಕಟ್ಟೆಯನ್ನು ಕಟ್ಟಿಸಿದನು. ಇದು ದಕ್ಷಿಣ ಭಾರತದ ಮೊದಲ ಅಣೆಕಟ್ಟೆ.
- **ಕರಿಕಾಳ ಚೋಳನು** ರಾಜಧಾನಿಯನ್ನು ಉರೈಯೂರಿನಿಂದ ಕಾವೇರಿ ಪಟ್ಟಣಕ್ಕೆ ಬದಲಾಯಿಸಿದನು.
- **ವಿಜಯಾಲನು** ಚೋಳ ಸಾಮ್ರಾಜ್ಯದ ಪುನರ್ ಸಂಸ್ಥಾಪಕ. ಇವನು ವಿಜಯಾಲ ಚತುರ್ವೇದಿ ಮಂಗಲಂ ಎಂಬ ಬ್ರಾಹ್ಮಣ ಅಗ್ರಹಾರ ನಿರ್ಮಿಸಿದನು.

ಒಂದನೇ ಪರಾಂತಕ.

- ಇವನು ಚೋಳ ಸಾಮ್ರಾಜ್ಯದ ನಿಜವಾದ ಸ್ಥಾಪಕ. **ಕ್ರಿ.ಶ. 949**ರಲ್ಲಿ ನಡೆದ ತಕ್ಕೋಲಂ ಕದನದಲ್ಲಿ (ರಾಷ್ಟ್ರಕೂಟರ 3ನೇ ಕೃಷ್ಣ ನಿಂದ) ಪರಾಂತಕನು ಸೋತನು.
- ಇವನಿಗೆ ಇಲ್ಲಮ್ಮಕೊಂಡ & ತಾಂಜೈಯಂಕೊಂಡ ಎಂಬ ಬಿರುದುಗಳಿದ್ದವು.
- ಇವನು ಹೊರಡಿಸಿದ ಉತ್ತರ ಮೆರೂರು ಶಾಸನವು ಚೋಳರ ಸ್ಥಳೀಯ ಸರ್ಕಾರದ ಮೇಲೆ ಬೆಳಕು ಚೆಲ್ಲುತ್ತದೆ.

ಒಂದನೇ ರಾಜರಾಜ ಚೋಳ. (ಕ್ರಿ.ಶ.985–1014)

- ಇವನು ಚೋಳರ ಅತ್ಯಂತ ಪ್ರಸಿದ್ಧ ಅರಸ.
- ಇವನು ಸಿಲೋನ್‌ನ ರಾಜಧಾನಿ ಅನುರಾಧಪುರವನ್ನು ವಶಪಡಿಸಿಕೊಂಡು ಅದನ್ನು ನಾಶಪಡಿಸಿ ಪೊಲೆನ್ನಾರುವ ಪಟ್ಟಣಂವನ್ನು ನಿರ್ಮಿಸಿ **ಚೋಳಮಂಡಲ** ಎಂದು ಹೆಸರಿಟ್ಟನು.ಅಲ್ಲಿಯೇ ಶಿವ ದೇವಾಲಯನ್ನು ನಿರ್ಮಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.
- ರಾಜರಾಜನು **ಮಾಲ್ಡೀವ್ಸ್‌ನ ಅಮೀನ್** ದ್ವೀಪಗಳನ್ನು ವಶಪಡಿಸಿಕೊಂಡನು.
- ಇವನು ವೆಂಗಿ ಸಿಂಹಾಸನವನ್ನು ಶಕ್ತಿವರ್ಮನಿಗೆ ದೊರಕಿಸಿ ಕೊಟ್ಟನು.
- ರಾಜರಾಜನಿಗೆ ಸಿಂಹಳಾಂತಕ, ಮುಮ್ಮಡಿ ಚೋಳ, ಚೋಳ ಮಾರ್ತಾಂಡ, ಕೇರಾಳಂತಕ, ರಾಜಕೇಸರಿ, ಪಾಂಡ್ಯಕುಲಸಿನಿ ಮುಂತಾದ ಬಿರುದುಗಳಿದ್ದವು.
- ಇವನು ದಕ್ಷಿಣ ಭಾರತದಲ್ಲಿ ಮೊದಲ ಭಾರಿಗೆ **ಭೂಮಾಪನವನ್ನು** ಆರಂಭಿಸಿ (ಕ್ರಿ.ಶ.1001) ಫಲವತ್ತತೆಗೆ ತಕ್ಕಂತೆ ಭೂಮಿಯನ್ನು ವಿಂಗಡಿಸಿದನು.
- ಶೈಲೇಂದ್ರ ದೊರೆಗೆ **ನಾಗಪಟ್ಟಣಂ**ನಲ್ಲಿ ಬೌದ್ಧ ವಿಹಾರ ನಿರ್ಮಿಸಲು ಸಹಾಯ ಮಾಡಿದನು.
- ಇವನು ಗ್ರಾಮಗಳಲ್ಲಿ ಲೆಕ್ಕ ದಾಖಲೆಯನ್ನು ಇಡುವುದನ್ನು ಕಡ್ಡಾಯ ಮಾಡಿದನು.
- ರಾಜರಾಜನು ಆಡಳಿತಕ್ಕೆ ಯುವರಾಜರನ್ನು ಪರಿಚಯಿಸಿದನು.
- ರಾಜರಾಜನು **ತಂಜಾವೂರಿನ** ಬೃಹದೀಶ್ವರ ದೇವಾಲಯವನ್ನು ಕಟ್ಟಿಸಿದನು.

ಒಂದನೇ ರಾಜೇಂದ್ರ ಚೋಳ (ಕ್ರಿ.ಶ.1014–1044)

- ರಾಜೇಂದ್ರ ಚೋಳನ ಸಾಧನೆಗಳನ್ನು ಕರಂದೈ ಮತ್ತು ತಿರುವಾಲಂಗಾಡು ಶಾಸನಗಳು ತಿಳಿಸುತ್ತವೆ.

ಮುದಿಕೊಂಡಚೋಳಂ ಬಿರುದು ಪಡೆದನು.

- ಇವನು ಸಿಲೋನ್‌ನ 5ನೇ ಮಹೇಂದ್ರನನ್ನು ಸೋಲಿಸಿ ಅವರ ವಶದಲ್ಲಿದ್ದ ಪಾಂಡ್ಯ ರಾಜರ ಕಿರೀಟ ಮತ್ತು ರಾಜಮುದ್ರೆಗಳನ್ನು ವಶಪಡಿಸಿಕೊಂಡನು.
- ಉತ್ತರ ಭಾರತದ ಯಶಸ್ವಿ ದಿಗ್ವಿಜಯಗಳಿಂದಾಗಿ **ಗಂಗೈಕೊಂಡ** ಎಂಬ ಬಿರುದು ಪಡೆದನಲ್ಲದೆ **ಗಂಗೈಕೊಂಡ ಚೋಳಪುರಂ** ಎಂಬ ಹೊಸ ರಾಜಧಾನಿಯನ್ನು ನಿರ್ಮಿಸಿದನು.
- ಇವನು ತಂಜಾವೂರಿನಿಂದ ರಾಜಧಾನಿಯನ್ನು **ಗಂಗೈಕೊಂಡ ಚೋಳಪುರಂಗೆ** ವರ್ಗಾಯಿಸಿದನು.
- ಗಂಗೈಕೊಂಡ ಚೋಳಗಂಗಂ ಎಂಬ ಕಲ್ಲಿನ ಕೆರೆಯನ್ನು ಕಟ್ಟಿಸಿದನು.
- ಇವನು ಮಲಯ ಪರ್ಯಾಯ ದ್ವೀಪದ ಶ್ರೀ ವಿಜಯನನ್ನು ಸೋಲಿಸಿದನು.
- ಇವನು ಸಿಲೋನ್, ಮಾಲ್ಡೀವ್ಸ್ ದ್ವೀಪಗಳನ್ನು ಗೆದ್ದನು.
- ಇವನು ಚೀನಾ ರಾಜನ ಆಸ್ಥಾನಕ್ಕೆ ತನ್ನ ಇಬ್ಬರು ರಾಯಭಾರಿಗಳನ್ನು ಕಳುಹಿಸಿದನು.
- ರಾಜೇಂದ್ರನಿಗೆ ಕದರಂಕೊಂಡ, ಪಂಡಿತ ಚೋಳ, ಮುದಿಕೊಂಡ ಚೋಳ, ಗಂಗೈಕೊಂಡ ಚೋಳ ಎಂಬ ಬಿರುದುಗಳಿದ್ದವು.
- ಇವನು ದಕ್ಷಿಣ ಅರ್ಕಾಟಿನ **ಎನ್ನಾಯಿರಂನಲ್ಲಿ** ವೈಧಿಕ ಕಾಲೇಜ್‌ನ್ನು ಸ್ಥಾಪಿಸಿದನು.

ಚೋಳರ ಆಡಳಿತ.

- ಚೋಳರು ವಂಶಪಾರಂಪರ್ಯ ರಾಜಪ್ರಭುತ್ವವನ್ನು ಮುಂದುವರಿಸಿದರು.
- ಚೋಳರು ಸಾಮಾನ್ಯವಾಗಿ ರಾಜಕೇಸರಿ & ಪರಾಕೇಶ್ವರ ಬಿರುದುಗಳನ್ನು ಹೊಂದಿರುತ್ತಿದ್ದರು.
- ಆಡಳಿತದಲ್ಲಿ ಕಾರ್ಯದರ್ಶಿಗಳೇ ಮಂತ್ರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. **ಪೆರುಂಧರಂ** ಮತ್ತು **ಸಿರುಂಧರಂ** ಎಂಬ ಉನ್ನತ ವರ್ಗ ಮತ್ತು ಕೆಳವರ್ಗದ ಅಧಿಕಾರಿಗಳಿದ್ದರು.
- ರಾಜನ ಬೆಂಗಾವಲಿಗೆ **ವೇಳೈಕಾರರ್** ಎಂಬ ಅಂಗರಕ್ಷಕ ಪಡೆ ಇತ್ತು.
- ಚೋಳರು ಸಾಮ್ರಾಜ್ಯವನ್ನು ಪ್ರಾಂತ್ಯ/ ಮಂಡಲ, ಕೊಟ್ಟಂ/ ವಿಭಾಗ, ನಾಡು/ಒಳನಾಡು/ಜಿಲ್ಲೆ, ಕೂರಂ,ಪುರೂರು,ಸಿರೂರು (ಹೋಬಳಿ) ಮತ್ತು ಗ್ರಾಮಗಳಾಗಿ ವಿಂಗಡಿಸಿದ್ದರು.
- ದೊಡ್ಡ ಗ್ರಾಮಗಳ ಆಡಳಿತ ಘಟಕವನ್ನು ತಣಿಯೂರು ಕುರ್‍ರಂ ಎನ್ನುತ್ತಿದ್ದರು.
- **ಕೊಟ್ಟಂ** ಹಲವು ಸ್ವಯಂ ಆಡಳಿತ ಗ್ರಾಮಗಳನ್ನು ಹೊಂದಿತ್ತು.
- ಚೋಳರ ಆಡಳಿತದಲ್ಲಿ ಸ್ವಾಯುತ್ತ ಪ್ರತಿನಿಧಿಯ 4 ಜನಪ್ರಿಯ ಸಭೆಗಳೆಂದರೆ – ನತ್ತರ್ (ಜಿಲ್ಲಾಡಳಿತ) ನಗರತ್ತರ್ (ವ್ಯಾಪಾರಿಗಳ

- ಚೋಳರ ಬಳಿ 70 ರೆಜಿಮೆಂಟ್ ಪಡೆಗಳಿದ್ದವು.
- ಸೈನ್ಯದ ಮೇಲ್ವಿಚಾರಣೆ ದಂಡನಾಯಕನಿಗೆ ಸೇರಿತ್ತು.
- ಸೇನೆ ದಂಡು ಕೇಂದ್ರಗಳನ್ನು ಕಹಗಂ/ಪಡೈವೀಡು ಎನ್ನುತ್ತಿದ್ದರು.
- ರಾಜನ ರಕ್ಷಣೆಗೆ ವೇಳೈಕಾರರೆಂಬ ಅಂಗರಕ್ಷಕರು ಇದ್ದರು.
- ಚೋಳರು ಕುದುರೆಗಳನ್ನು **ಅರೇಬಿಯಾದಿಂದ** ತರಿಸಿಕೊಳ್ಳುತ್ತಿದ್ದರು.
- ಪ್ರಾಚೀನ ಭಾರತದಲ್ಲಿ ಮೊದಲ ಬಾರಿಗೆ ಶಕ್ತಿಯುತ ನೌಕಾಪಡೆಯನ್ನು ಚೋಳರು ಕಟ್ಟಿದ್ದರು.
- ರಾಜನು ಲೌಕಿಕ ಪ್ರಕರಣಗಳನ್ನು ವಿಚಾರಣೆ ಮಾಡುತ್ತಿದ್ದನು ಧಾರ್ಮಿಕ ಪ್ರಕರಣಗಳನ್ನು ಪುರೋಹಿತ ವಿಚಾರಣೆ ಮಾಡುತ್ತಿದ್ದನು.
- ಪ್ರಾಂತ್ಯದಲ್ಲಿ ರಾಜಪ್ರತಿನಿಧಿಗಳು, ಗ್ರಾಮಗಳಲ್ಲಿ ಮಹಾಜನರು ನ್ಯಾಯ ವಿತರಿಸುತ್ತಿದ್ದರು.
- ಗ್ರಾಮಗಳಲ್ಲಿ ನ್ಯಾಯಧಾನಕ್ಕಾಗಿ **ನ್ಯಾಯತ್ತರ್**, ಎಂಬ ಪ್ರತ್ಯೇಕ ನ್ಯಾಯ ಸಮಿತಿ ಇತ್ತು.
- ಚೋಳರು ಭೂಮಾಪನಕ್ಕಾಗಿ 16 ಮತ್ತು 18 ಗೇಣುಗಳ ದಂಡವನ್ನು ಬಳಸುತ್ತಿದ್ದರು.
- ಸ್ಥಳೀಯ ಸರ್ಕಾರಗಳು ಕಂದಾಯ ಸಂಗ್ರಹಿಸುತ್ತಿದ್ದವು.
- ಚೋಳರಿಗೆ ಅರೇಬಿಯಾ, ಪರ್ಶಿಯಾ, ಚೀನಾ, ಸಿಂಹಳ, ಮಲಯಾ, ಹಾಗೂ ಸುಮಾತ್ರಗಳೊಂದಿಗೆ ವ್ಯಾಪಾರ ಸಂಪರ್ಕವಿತ್ತು.
- ಕಾವೇರಿಪಟ್ಟಣಂ, ಮಹಾಬಲಿಪುರಂ, ನಾಗಪಟ್ಟಣಂ, ಕ್ವಿಲಾನ್, ಕೊರ್‌ಕೈ ಮುಂತಾದವುಗಳು ಚೋಳರ ಪ್ರಮುಖ ಬಂದರುಗಳು.

ಸ್ಥಳೀಯ ಸರ್ಕಾರ.

- ಚೋಳರ ಸ್ಥಳೀಯ ಸರ್ಕಾರ ಅಥವಾ ಗ್ರಾಮಾಡಳಿತ ಬಗ್ಗೆ **1ನೇ ಪರಾಂತಕನ ಉತ್ತರ ಮೇರೂರು ಶಾಸನ** ತಿಳಿಸುತ್ತದೆ.
- ಭಾರತದ ಆಡಳಿತ ವ್ಯವಸ್ಥೆಯಲ್ಲಿ ಚೋಳರ ಸ್ಥಳೀಯ ಸರ್ಕಾರಕ್ಕೆ ಮಹತ್ವದ ಸ್ಥಾನವಿದೆ.
- ಚೋಳರ ಸ್ಥಳೀಯ ಸರ್ಕಾರದಲ್ಲಿ ಸ್ವಾಯುತ್ತತೆ ಪಡೆದ ಮೂರು ಗ್ರಾಮ ಆಡಳಿತಗಳಿದ್ದವು.

1. ಊರ್ ಗ್ರಾಮದ ಸಮಸ್ತ ಜನರೆಲ್ಲ ಸದಸ್ಯರಾಗಿದ್ದ ಸಭೆ.
2. ಸಭಾ ಅಥವ ಮಹಾಸ
3. ನಗರಂ ವರ್ತಕರ ವ್ಯಾಪಾರಸ್ಥ ಘಟಕ.

- ಪ್ರತಿ ಗ್ರಾಮವನ್ನು ವಾರ್ಡ್‌ಗಳಾಗಿ ವಿಂಗಡಿಸಿ ಅವುಗಳಿಗೆ ಕುಡುಂಬಂ ಎಂದು ಕರೆಯುತ್ತಿದ್ದರು.
- ಗ್ರಾಮಾಡಳಿತದ ಸದಸ್ಯರನ್ನು ಚುನಾಯಿಸದೆ ಚೀಟಿ ಎತ್ತುವ ಮೂಲಕ ಆರಿಸುತ್ತಿದ್ದರು.
- ಗ್ರಾಮ ಸದಸ್ಯರ ಅವಧಿ 1ವರ್ಷ, ಅವರಿಗೆ ವೇತನ ಇರಲಿಲ್ಲ.

6 ಸದಸ್ಯರಿದ್ದರು.

1. ಸಂವತ್ಸರ ವಾರಿಯಂ- ವಾರ್ಷಿಕ ಸಮಿತಿ
2. ಏರಿ ವಾರಿಯಂ- ನೀರಾವರಿ ಸಮಿತಿ
3. ತೊಟ್ಟವಾರಿಯಂ – ತೋಟದ ಸಮಿತಿ
4. ಪೊನ್ ವಾರಿಯಂ – ಕಂದಾಯ/ ಬಂಗಾರ ಸಮಿತಿ
5. ನ್ಯಾಯ ವಾರಿಯಂ- ನ್ಯಾಯಿಕ ಸಮಿತಿ
6. ದೇವಸ್ಥಾನ್ ವಾರಿಯಂ –ದೇವಸ್ಥಾನದ ಸಮಿತಿ.

- ಸಮಿತಿಗಳನ್ನು ವಾರಿಯಂ ಎಂದು ಅದರ ಸದಸ್ಯರನ್ನು ವಾರಿಯಾ ಪೆರುಮಕ್ಕಳ್ ಎಂದು ಕರೆಯುತ್ತಿದ್ದರು.

ಚೋಳರ ಗ್ರಾಮಾಡಳಿತದಲ್ಲಿ 3 ರೀತಿಯ ಸಭೆಗಳಿದ್ದವು.

1. **ಸಭೆ-** ಎಲ್ಲಾ ಸ್ಥಳೀಯ ಸದಸ್ಯರನ್ನು ಒಳಗೊಂಡಿತ್ತು.
2. **ಊರ್-** ಬ್ರಾಹ್ಮಣರಿಗೆ ದತ್ತಿ ಕೊಡಲಾದ ಗ್ರಾಮಗಳು.
3. **ಊರ್ ಸಭೆಗಳು-** ಹಲವು ಗ್ರಾಮಗಳನ್ನು ಒಳಗೊಂಡಿತ್ತು.

- ಕೇಂದ್ರ ಸರ್ಕಾರ ಗ್ರಾಮಾಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರಲ್ಲ.
- ಗ್ರಾಮ ಸಭೆಗಳು ಸ್ವಾಯುತ್ತ ಅಧಿಕಾರ ಹೊಂದಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದವು.

ಚೋಳರ ಸಾಂಸ್ಕೃತಿಕ ಕೊಡುಗೆಗಳು.

- ಶೈವ ಪಂಥವು **63 ನಾಯನ್ಮಾರ್** ಎಂಬ ಶೈವ ಸಂತರಿಂದ ಹಾಗೂ ವೈಷ್ಣವ ಪಂಥವು **12 ಆಳ್ವಾರರಿಂದ** ಬೆಳೆದು ಬಂದವು.
- ಚೋಳರು ಸಾಮ್ರಾಜ್ಯವನ್ನು 5 ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿದರು.

  1.ಪಲ್ಯೈ–ಒಣ ಪ್ರದೇಶ. 2.ಕುರಂಜಿ – ಬೆಟ್ಟ ಪ್ರದೇಶ 3.ಮಂಡಲಂ – ಗುಡ್ಡ ಪ್ರದೇಶ. 4. ಮುಲ್ಯೈ– ಅರಣ್ಯ ಪ್ರದೇಶ 5. ನೇಡಲ್ – ಕರಾವಳಿ ಪ್ರದೇಶ.
- ಚೋಳರ ಕಾಲವು ತಮಿಳು ಸಾಹಿತ್ಯ ಸುವರ್ಣ ಯುಗವೆನಿಸಿತ್ತು,
- ಕಂಬನ್, ಒಟ್ಟುಕುಟ್ಟನ್ ಮತ್ತು ಪುಗಳೆಂದಿಯರನ್ನು ತಮಿಳು ಸಾಹಿತ್ಯದ ತ್ರಿರತ್ನಗಳೆಂದು ಕರೆಯುವರು.
- ಕವಿಚಕ್ರವರ್ತಿ ಕಂಬನು ತಮಿಳಿನಲ್ಲಿ ರಾಮಾಯಣ ರಚಿಸಿದನು.

ಕವಿಗಳು	**ಕೃತಿಗಳು**
ಸೆಕ್ಕಿಲಾರ್	ಪೆರಿಯಾ ಪುರಾಣ
ತಿರುಮಲ್ಲರ್	ತಿರುಮಂದಿರಂ
ಕಂಬನ್	ಕಂಬರಾಮಾಯಣ
ತಿರುಕ್ಕದೇವರ್ (ಜೈನ್)	ಜೀವಕ ಚಿಂತಾಮಣಿ
ನಂಬಿಅಂಡರ್(ತಮಿಳು ವ್ಯಾಸ)	ಶೈವ ಸಿದ್ಧಾಂತ
ಪುಗಳೆಂದಿ	ನಳವೆಂಬ ಕಾವ್ಯ
ವಟ್ಟುಕಟ್ಟನ್	ಉತ್ತರಕಂಡ ಕವಿತೆಗಳು
ಶಂಕರಾಚಾರ್ಯ	ಬ್ರಹ್ಮಸೂತ್ರಭಾಷ್ಯಂ
ರಾಮಾನುಜಚಾರ್ಯ	ವೇದ ಭಾಷ್ಯಗಳು
ಕಲ್ಲಂದರ್	ಕಲ್ಲದಂ
ಮಕಂದರ್	ಶೈವ ಸಿದ್ಧಾಂತ

ಕಲೆ ಮತ್ತು ವಾಸ್ತುಶಿಲ್ಪ.

- ಚೋಳರು **ದ್ರಾವಿಡ ವಾಸ್ತು** ಶಿಲ್ಪದ ಪೋಷಕರಾಗಿದ್ದರು. ಇವರ ವಾಸ್ತುಶಿಲ್ಪಗಳಲ್ಲಿ ಗೋಪುರಗಳ ರಚನೆ ಮತ್ತು ವಿಮಾನವನ್ನು ಕಾಣಬಹುದು.
- 1ನೇ ರಾಜರಾಜನು ಕ್ರಿ.ಶ.1010ರಲ್ಲಿ ತಂಜಾವೂರಿನ ಬೃಹದೀಶ್ವರ ದೇವಾಲಯವನ್ನು ಕಟ್ಟಿಸಿದನು.
- 1ನೇ ರಾಜೇಂದ್ರ ಚೋಳನು ಉತ್ತರ ಭಾರತದ ದಿಗ್ವಿಜಯದ ನೆನಪಿಗಾಗಿ ಗಂಗೈಕೊಂಡ ಚೋಳಪುರಂನಲ್ಲಿ (1025–30) ಬೃಹದೀಶ್ವರ ದೇವಾಲಯ ಕಟ್ಟಿಸಿದನು.
- 2ನೇ ಪರಾಂತನು ಶ್ರೀರಂಗನಾಥ ದೇವಾಲಯವನ್ನು ಶ್ರೀನಿವಾಸ ನೆಲ್ಲೂರಿನಲ್ಲಿ ಕಟ್ಟಿಸಿದನು.
- ಚೋಳರ ಶಿಲ್ಪಕಲೆಗೆ ನಾಗೇಶ್ವರ ದೇವಾಲಯದಲ್ಲಿ ದೊರೆತಿರುವ ನಟರಾಜನ ಕಂಚಿನ ವಿಗ್ರಹ ಅತ್ಯುತ್ತಮ ಉದಾಹರಣೆಯಾಗಿದೆ.

13.6 ಕಲ್ಯಾಣದ ಚಾಲುಕ್ಯರು (ಕ್ರಿ.ಶ.973-1189)

- ಕಲ್ಯಾಣದ ಚಾಲುಕ್ಯರು ಬಹುಕಾಲ ರಾಷ್ಟ್ರಕೂಟರ ಸಾಮಂತರಾಗಿದ್ದರು. ಕ್ರಿ.ಶ.973ರಲ್ಲಿ 2ನೇ ತೈಲಪನು ರಾಷ್ಟ್ರಕೂಟರ ಕೊನೆಯ ಅರಸ 2ನೇ ಕರ್ಕನನ್ನು ಸೋಲಿಸಿ ಕಲ್ಯಾಣ ಚಾಲುಕ್ಯ ರಾಜ್ಯ ಸ್ಥಾಪಿಸಿದನು.
- ಕಲ್ಯಾಣ ಚಾಲುಕ್ಯ ರಾಜ್ಯವು ಕರ್ನಾಟಕ, ಮಹಾರಾಷ್ಟ್ರ ಆಂಧ್ರಗಳನ್ನು ಒಳಗೊಂಡಿತ್ತು. ಮೊದಲ ರಾಜಧಾನಿ, **ಮಾನ್ಯಖೇಟಾ,** 1ನೇ ಸೋಮೇಶ್ವರ ಕಾಲದಲ್ಲಿ **ಕಲ್ಯಾಣ (ಬೀದರ್)** ರಾಜಧಾನಿಯಾಯಿತು. **'ವರಾಹ'** ರಾಜ ಲಾಂಛನವಾಗಿತ್ತು.

ರಾಜಕೀಯ ಇತಿಹಾಸ

2ನೇ ತೈಲಪ (973–997)

- 2ನೇ ತೈಲಪನು ರಾಷ್ಟ್ರಕೂಟರ 3ನೇ ಕೃಷ್ಣನ ಸಾಮಂತನಾಗಿ ಬಿಜಾಪುರದಲ್ಲಿ ಆಳ್ವಿಕೆ ಮಾಡುತ್ತಿದ್ದನು. ನಂತರ 2ನೇ ಕರ್ಕನನ್ನು ಸೋಲಿಸಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದನು. ಮಾನ್ಯಖೇಟ ಇವನ ರಾಜಧಾನಿ.
- ಈತನ ಬಿರುದುಗಳು:– ಪರಮೇಶ್ವರ, ಅಹರಮಲ್ಲ, ಭಟ್ಟಾರಕ ಮುಂತಾದವು.

ಸತ್ಯಾಶ್ರಯ ಇರಿವಬೇಡಂಗ (997–1008)

- ಇವನು ರಾಷ್ಟ್ರಕೂಟ ರಾಣಿ ಜಾಕಬ್ಬೆಯ ಮಗ. ಚೋಳರ ರಾಜ ರಾಜನು ಗಂಗವಾಡಿ ಮತ್ತು ನೊಳಂಬವಾಡಿ

ತಂಜಾವೂರಿಗೆ ಓಡಿಸಿದನು. ಶೀಲಹಾರ ಮತ್ತು ಗುರ್ಜರನ್ನು ಸೋಲಿಸಿದನು.

- ಇವನ ಆಸ್ಥಾನದಲ್ಲಿ **ರನ್ನನಿದ್ದು** ಸತ್ಯಾಶ್ರಯನನ್ನು ಮಹಾಭಾರತದ ಭೀಮನಿಗೆ ಹೋಲಿಸಿದ್ದಾನೆ.
- ಈತನ ಬಿರುದುಗಳು:- ಅಕಳಂಕ ಚರಿತ, ಸಾಹಸಭೀಮ, ಅಹವಮಲ್ಲ ಮುಂತಾದವು
- ಇವನ ನಂತರ 2ನೇ ಜಯಸಿಂಹನು 1016-1042ರ ವರೆಗೆ ಆಳಿದನು. ಜಗದೇಕಮಲ್ಲನೆಂದು ಪ್ರಸಿದ್ಧನಾಗಿದ್ದನು.

1ನೇ ಸೋಮೇಶ್ವರ (1042 - 1068)

- ಇವನು ಮಾನ್ಯಖೇಟಾದಿಂದ **ಕಲ್ಯಾಣ ನಗರ** ಕಟ್ಟಿ ರಾಜಧಾನಿಯನ್ನು ವರ್ಗಾಯಿಸಿದನು 1054ರಲ್ಲಿ ಚಾಲುಕ್ಯ ಮತ್ತು ಚೋಳರ ನಡುವಿನ **ಕೊಪ್ಪಂ** ಯುದ್ಧದಲ್ಲಿ ಚೋಳರ ರಾಜಾಧಿರಾಜ ಅಸುನೀಗಿದನು.
- ಚೋಳರ 3ನೇ ರಾಜೇಂದ್ರನು ಯುದ್ಧ ಮುಂದುವರಿಸಿ, ವಿಜಯಿಯಾಗಿ ಕೋಲ್ಲಾಪುರದಲ್ಲಿ ವಿಜಯಸ್ತಂಭ ನೆಡಿಸಿದ್ದನು. ಇದರ ಬಗ್ಗೆ ಬಿಲ್ಹಣ ಕವಿ ತಿಳಿಸಿದ್ದಾನೆ.
- ನಂತರ 2ನೇ ಸೋಮೇಶ್ವರ 1068-1076ರ ವರೆಗೆ ಆಳ್ವಿಕೆ ಮಾಡಿದನು. ಭುವನೈಕ್ಯಮಲ್ಲ ಎಂಬ ಬಿರುದು ಧರಿಸಿದ್ದನು.

6ನೇ ವಿಕ್ರಮಾದಿತ್ಯ (ಕ್ರಿ.ಶ.1076 - 1126)

- 1ನೇ ಸೋಮೇಶ್ವರನ ಮಗನಾದ ಇವನು ಕಲ್ಯಾಣಿ ಚಾಲುಕ್ಯರ ಪ್ರಸಿದ್ಧ ಅರಸ. ಇವನು ಸಿಂಹಾಸನವೇರಿದ ಜ್ಞಾಪಕಾರ್ಥವಾಗಿ **ಕ್ರಿ.ಶ.1076ರಲ್ಲಿ 'ವಿಕ್ರಮಶಕೆ'** ಆರಂಭಿಸಿದನು.
- ವಿಕ್ರಮಾದಿತ್ಯನು ಪಾರಮಾರರು, ಬನವಾಸಿ ರಾಜ್ಯಪಾಲ ಜಯಸಿಂಹ, ಗುರ್ಜರನ್ನು ಹಾಗೂ ಹೊಯ್ಸಳರ 1ನೇ ಬಲ್ಲಾಳನನ್ನು ಸೋಲಿಸಿದನು.
- ಇವನ ಕಾಲದಲ್ಲಿ ಚೋಳರ 1ನೇ ಕುಲೊತ್ತುಂಗ ಚೋಳ. ಮತ್ತೊಂದೆಡೆ ವಿಕ್ರಮಾದಿತ್ಯ ಸಮಾನ ಶೂರರಾಗಿದ್ದರು. ಆದರೆ ಇವರನ್ನು ಹತ್ತಿಕ್ಕದ್ದನು. ಶೀಲಹಾರದ ಭೋಜನು 1089ರಲ್ಲಿ ದಂಗೆ ಎದ್ದಾಗ ಅವನನ್ನು ಸೋಲಿಸಿದನು.
- ಕ್ರಿ.ಶ.1118ರಲ್ಲಿ ಚಾಲುಕ್ಯ ಮತ್ತು ಹೊಯ್ಸಳರ ನಡುವಿನ ಕಣ್ಣೆಗಾಲ (ಹಾಸನ) ಯುದ್ಧದಲ್ಲಿ ಚಾಲುಕ್ಯರು ಸೋತರು ಆದರೆ ಕ್ರೋದಗೊಂಡ 6ನೇ ವಿಕ್ರಮಾದಿತ್ಯನು ಹೊಯ್ಸಳರ ವಿಷ್ಣುವರ್ಧನನ್ನು ಸೋಲಿಸಿದನು.
- ವಿಕ್ರಮಾದಿತ್ಯನು ಶ್ರೀಲಂಕೆಯ **ವಿಜಯಬಾಹು** ಆಸ್ಥಾನಕ್ಕೆ ತನ್ನ ರಾಯಭಾರಿಗಳನ್ನು ಕಳುಹಿಸಿದ್ದನು.
- ಚಾಲುಕ್ಯನ ಮುಖ್ಯರಾಣಿ **ಚಂದ್ರಲೇಖೆ**. ವಿಕ್ರಮಾದಿತ್ಯನ ಸೇನಾಧಿಪತಿ **ದಂಡಾದೀಶನು** ಇಟಗಿಯಲ್ಲಿ ಮಹಾದೇವ ದೇವಾಲಯ ಕಟ್ಟಿಸಿದನು.
- ವಿಕ್ರಮಾದಿತ್ಯನ ಆಸ್ಥಾನದಲ್ಲಿ **ಬಿಲ್ಹಣನಿದ್ದು** ವಿಕ್ರಮಾಂಕ ದೇವ ಚರಿತ ಮತ್ತು ವಿಜ್ಞಾನೇಶ್ವರನು ಮಿತಾಕ್ಷರ ಸಂಹಿತೆ ಗ್ರಂಥ ರಚಿಸಿದ್ದಾರೆ. ವಿಜ್ಞಾನೇಶ್ವರನು "ಪ್ರಪಂಚದಲ್ಲಿ ಕಲ್ಯಾಣದಂಥ ಪಟ್ಟಣ ಹಿಂದೆಂದೂ ಇರಲಿಲ್ಲ, ಇಂದಿಗೂ ಇಲ್ಲ, ಮುಂದೆಯೂ ಇರುವುದಿಲ್ಲ, ವಿಕ್ರಮಾಂಕನಂತಹ ಭೂಪಾಲನನ್ನು ನೋಡಿದವರೂ ಇಲ್ಲ, ಕೇಳಿದವರೂ ಇಲ್ಲ," ಎಂದಿದ್ದಾನೆ.
- 6ನೇ ವಿಕ್ರಮಾದಿತ್ಯ **'ವಿಕ್ರಮಪುರಿ'** ಎಂಬ ಹೊಸ ಪಟ್ಟಣ ನಿರ್ಮಿಸಿದನು.

3ನೇ ಸೋಮೇಶ್ವರ (1127 - 1138)

- ಇವನು ಕಲ್ಯಾಣ ಚಾಲುಕ್ಯರ ಅತ್ಯಂತ ಶಾಂತಪ್ರಿಯ ಆಡಳಿತಗಾರನಾಗಿದ್ದನು. ಇವನು 1130ರಲ್ಲಿ **ಅಭಿಲಷಿತಾರ್ಥ ಚಿಂತಾಮಣಿ/ಮಾನೊಸೊಲ್ಲಾಸ** ಗ್ರಂಥ ಬರೆದಿದ್ದಾನೆ.
- **ಈತನ ಬಿರುದುಗಳು** : ಸರ್ವಜ್ಞ ಚಕ್ರವರ್ತಿ, ಭೂಲೋಕಮಲ್ಲ ಮುಂತಾದವು.
- ಇವನ ನಂತರ 2ನೇ ಜಗದೇಕಮಲ್ಲ (ಪೆರ್ಮ) (ಪ್ರತಾಪ ಚಕ್ರವರ್ತಿ ಎಂದು ಪ್ರಸಿದ್ಧನಾಗಿದ್ದನು)ಆಳ್ವಿಕೆ ನಡೆಸಿದನು.
- ಕಲ್ಯಾಣ ಚಾಲುಕ್ಯರ ಕೊನೆಯ ದೊರೆಯಾದ 4ನೇ ಸೋಮೇಶ್ವರ ಅಧಿಕಾರಕ್ಕೆ ಬಂದನು ಆದರೆ ಚಾಲುಕ್ಯ ರಾಜ್ಯ ಕಲಚೂರಿಗಳ ವಶವಾಯಿತು. ದಕ್ಷಿಣದಲ್ಲಿ ಹೊಯ್ಸಳರು, ಸೇವುಣರು, ಕಾಕತೀಯರ ನಡುವಿನ ಘರ್ಷಣೆಯಿಂದ ಕಲ್ಯಾಣ ಸೇವುಣರ ವಶವಾಗಿ. ದಕ್ಷಿಣದಲ್ಲಿ ಹೊಯ್ಸಳರು ಪ್ರಾಬಲ್ಯಕ್ಕೆ ಬಂದು ಚಾಲುಕ್ಯರ ಹೆಸರಿಲ್ಲವಾಯಿತು.

ಚಾಲುಕ್ಯರ ಆಡಳಿತ ಪದ್ಧತಿ

- ಕಲ್ಯಾಣ ಚಾಲುಕ್ಯರು ಬಾದಾಮಿ ಚಾಲುಕ್ಯರ ಆಡಳಿತ ವ್ಯವಸ್ಥೆಯನ್ನು ಮುಂದುವರಿಸಿದರು. ರಾಜನಿಗೆ ಆಡಳಿತದಲ್ಲಿ ಸಹಾಯ ಮಾಡಲು **ಮಂತ್ರಾಲೋಚನಾ ಸಭೆ** ಇತ್ತು. ಇದರಲ್ಲಿ ಮಂತ್ರಿಗಳು & ದಂಡನಾಯಕರಿದ್ದರು. ಪ್ರಮುಖ ಅಧಿಕಾರಿ ವರ್ಗವೆಂದರೆ:-
- ಠಾನೆವೆರ್ಗಡೆ - ಅರಮನೆ ಪಾರುಪತ್ಯಗಾರ
- ಬಾಣಸವೆರ್ಗಡೆ - ಉಗ್ರಾಣ ಪಾರುಪತ್ಯಗಾರ
- ಸಂಧಿವಿಗ್ರಹ - ಕಂದಾಯ ಸಂಗ್ರಹಣೆ
- ಅಂತರಪುರಾಧ್ಯಕ್ಷ - ಅಂತಃಪುರ ಮೇಲ್ವಿಚಾರಕ
- ಚಾಲುಕ್ಯರು ರಾಜ್ಯವನ್ನು ರಾಷ್ಟ್ರ, ವಿಷಯ, ನಾಡು ಹಾಗೂ ಠಾಣೆಗಳಾಗಿ ವಿಂಗಡಿಸಿದ್ದರು. ರಾಷ್ಟ್ರಪತಿ, ವಿಷಯಪತಿ, ನಾಳ್ಗಾವುಂಡ ಠಾಣಾಧಿಕಾರಿ ಕ್ರಮವಾಗಿ ಅವುಗಳ ಮುಖ್ಯಸ್ಥರಾಗಿದ್ದರು.
- ಚಾಲುಕ್ಯರ ಆಡಳಿತ ವಿಕೇಂದ್ರೀಕರಣದಿಂದ ಕೂಡಿತ್ತು. ಕೆಲವೇ ಪ್ರಾಂತ್ಯಗಳಲ್ಲಿ ಅನುವಂಶಿಕವಾಗಿ ಆಳುತ್ತಿದ್ದ ಸಾಮಂತರು ಅಧಿಕಾರದಲ್ಲಿ ಮುಂದುವರೆಯುತ್ತಿದ್ದರು.

ಚಾಲುಕ್ಯರ ಸಾಮಂತ ರಾಜವಂಶಗಳು

1. ಕದಂಬ – ಹಾನಗಲ್, ಗೋವ, ನೂಳಂಬವಾಡಿ, ಕರಡಿಗಲ್ಲು,
2. ಶಿಲಾಹಾರ–ಉತ್ತರ ಮತ್ತು ದಕ್ಷಿಣ ಕೊಂಕಣ, ಕೊಲ್ಲಾಪುರ, ಬಿಜಾಪುರ
3. ಸಿಂಧೂವಂಶ – ಬೆಳವತ್ತಿ
4. ರಟ್ಟರು – ಸವದತ್ತಿ
5. ಹೈಹೆಯ ಮನೆತನ

- ಪ್ರತಿ ಗ್ರಾಮದಲ್ಲಿ ಮಹಾಜನ ಸಂಸ್ಥೆಯಿತ್ತು. ಗಾವುಂಡ ಅಧಿಕಾರಿ ಇದರ ಮುಖ್ಯಸ್ಥ. ಇವನ ಸಹಾಯಕನಾಗಿ ಕರಣಿಕನಿರುತ್ತಿದ್ದನು.

ಸಾಮಾಜಿಕ ಮತ್ತು ಧಾರ್ಮಿಕ ಜೀವನ

- ಆತ್ಮತ್ಯಾಗ ಮತ್ತು ಸ್ವಾಮಿಭಕ್ತಿ ಇವರ ಸಾಮಾಜಿಕ ಜೀವನದ ಲಕ್ಷಣವಾಗಿತ್ತು. ರಾಜಮನೆತನದ ಸ್ತ್ರೀಯರು ಆಡಳಿತದಲ್ಲಿ ಪಾಲ್ಗೊಳ್ಳುತ್ತಿದ್ದರು.
- ಕಲ್ಯಾಣ ಚಾಲುಕ್ಯರು ಶೈವ ಮತಾವಲಂಬಿಗಳು. ಪಾಶುಪತ, ಕಾಳಮುಖ, ಶಾಕ್ಯ ಎಂಬ ಪಂಥಗಳಿದ್ದವು. 1ನೇ ಸೋಮೇಶ್ವರನ ರಾಣಿ ಮೈಲಾದೇವಿ ಪಾಶುಪತ ಪಂಥದವಳು. ಕೊಲ್ಲಾಪುರದ ಲಕ್ಷ್ಮೀ ಶಕ್ತಿ ಪೂಜೆಯ ಕೇಂದ್ರವಾಗಿತ್ತು.
- ಚಾಲುಕ್ಯರ ಕಾಲದಲ್ಲಿ ತಪೋವನಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಕಾರ್ತಿಕೇಯ ತಪೋವನ(ಬಳ್ಳಾರಿ), ಸುವರ್ಣಾಕ್ಷಿ ತಪೋವನ (ಬೆಳಗಾಂ) ಮುಖ್ಯವಾದವು. ಘಟಿಕಾ ಕೂಡ ವಿದ್ಯಾಕೇಂದ್ರವಾಗಿತ್ತು.

ಸಾಹಿತ್ಯ

ಕನ್ನಡ ಸಾಹಿತ್ಯ

1. **ರನ್ನನು:**– ಅಜಿತನಾಥ ಪುರಾಣ, ಸಾಹಸಭೀಮ ವಿಜಯ ಅಥವಾ ಗದಾಯುದ್ಧ ಕೃತಿಗಳು (ಸತ್ಯಾಶ್ರಯ ಇರಿವಬೇಡಂಗನ ಆಸ್ಥಾನದಲ್ಲಿದ್ದನು) ಕವಿಚಕ್ರವರ್ತಿ ಬಿರುದಿತ್ತು.
2. **1ನೇ ನಾಗವರ್ಮ** – ಛಂದೋಂಬುದಿ, ಕರ್ನಾಟಕ ಕಾದಂಬರಿ
3. **2ನೇ ಚಾವುಂಡರಾಯ** – ಲೋಕೋಪಚಾರ (ವಿಶ್ವಕೋಶ)
4. **ಶ್ರೀಧರಾಚಾರ್ಯ** – ಜಾತಕ ತಿಲಕ (ಪ್ರಥಮ ಜ್ಯೋತಿಷ್ಯ ಗ್ರಂಥ)
5. **2ನೇ ನಾಗವರ್ಮ** – ಕಾವ್ಯಾವಲೋಕನ, ಭಾಷಾಭೂಷಣ, ಅಭಿದಾನ ವಸ್ತುಕೋಶ
6. **ನಯಸೇನ** – ಧರ್ಮಾಮೃತ
7. **ಶಾಂತಿನಾಥ** – ಸುಕುಮಾರ ಚರಿತ

ಸಂಸ್ಕೃತ ಸಾಹಿತ್ಯ

1. **ಬಿಲ್ಹಣ** – ವಿಕ್ರಮಾಂಕ ದೇವ ಚರಿತ ಬರೆದನು. (6ನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದನು)
2. **ವಿಜ್ಞಾನೇಶ್ವರ** – ಮಿತಾಕ್ಷರ ಸಂಹಿತೆ (6ನೇ ವಿಕ್ರಮಾದಿತ್ಯನ ಆಸ್ಥಾನ) ಹಿಂದೂಗಳ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದೆ.
3. **3ನೇ ಸೋಮೇಶ್ವರ** – ಮಾನಸೋಲ್ಲಾಸ ಕವಿ.
4. ವಾದಿರಾಜ – ಪಾರ್ಶ್ವನಾಥ ಚರಿತೆ, (2ನೇ ಜಯಸಿಂಹನ ಆಸ್ಥಾನ) ಲಕುಳಿಶ ಇವನ ಮತ್ತೊಂದು ಹೆಸರು.
5. **2ನೇ ಜಗದೇಕಮಲ್ಲ** – ಸಂಗೀತ ಚೂಡಾಮಣಿ ಕೃತಿ.

ಕಲೆ ಮತ್ತು ವಾಸ್ತುಶಿಲ್ಪ

- ಚಾಲುಕ್ಯರ ದೇವಾಲಯಗಳ ಬಾಗಿಲುಗಳು ಮುಂಭಾಗದ ಬದಲು ಪಕ್ಕದಲ್ಲಿರುವುದು ವೈಶಿಷ್ಟ್ಯವಾಗಿದೆ. ದೇವಾಲಯಗಳು ಚಾಲುಕ್ಯ ವಿಮಾನಶೈಲಿ ಹೋಲುತ್ತವೆ. ಚಾಲುಕ್ಯ ವಿಮಾನ ಪಿರಮಿಡ್ಡಿನ ಮಾದರಿಯಲ್ಲಿದೆ. ಅದರ ಮೇಲ್ಭಾಗದಲ್ಲಿ ಗುಮ್ಮಟವಿದೆ.
- ದೇವಾಲಯಗಳ ಗೋಡೆಯ ಮೇಲಿನ ರಥಗಳು **ನಾಗರ ಶೈಲಿ**ಯಲ್ಲಿದ್ದರೆ, ಗೋಡೆಯ ಕಂಬಗಳು **ದ್ರಾವಿಡ ಶೈಲಿ**ಯಲ್ಲಿವೆ. 12ನೇ ಶತಮಾನದಲ್ಲಿ ಚಾಲುಕ್ಯ ಶೈಲಿ ಪರಿಷ್ಕೃತವಾಯಿತು.
- ಮಹಾದೇವನು ಇಟಗಿಯಲ್ಲಿ ನಿರ್ಮಿಸಿದ ಮಹಾದೇವ ದೇವಾಲಯ ಕನ್ನಡ ನಾಡಿನಲ್ಲೇ ಅತ್ಯಂತ ಸುಂದರ ಚಾಲುಕ್ಯ ಶೈಲಿಯ ದೇವಾಲಯ ಇದನ್ನು **'ದೇವಾಲಯಗಳ ಚಕ್ರವರ್ತಿ'** ಎಂದು ಕರೆಯಲಾಗಿದೆ.

ಲಲಿತಕಲೆ

- ವಿಕ್ರಮಾದಿತ್ಯನ ರಾಣಿ ಚಾಂದಲದೇವಿಯು. ನೃತ್ಯ ಮತ್ತು ಸಂಗೀತಗಾರ್ತಿ. ಇವಳಿಗೆ ನೃತ್ಯ ವಿದ್ಯಾಧರಿ, ಅಭಿನವ ಸರಸ್ವತಿ ಬಿರುದಿದ್ದವು.
- ಭಾರತೀಯ ಸಂಗೀತ ಪದ್ಧತಿಗೆ ಎಲ್ಲೆಯನ್ನು ನಿರ್ಮಿಸಿ **ಕರ್ನಾಟಕ ಸಂಗೀತ** ಪದ್ಧತಿ ಜಾರಿಗೆ ತಂದರು.
- 3ನೇ ಸೋಮೇಶ್ವರ, ಮಾನಸೋಲ್ಲಾಸ ಕೃತಿಯಲ್ಲಿ ದಕ್ಷಿಣ ಸಂಗೀತವನ್ನು ಕರ್ನಾಟಕ ಸಂಗೀತ ಎಂದು ಮೊದಲ ಬಾರಿಗೆ ಉಲ್ಲೇಖಿಸಲಾಗಿದೆ.

13.7. ದೇವಗಿರಿಯ ಯಾದವರು (ಸೇವುಣರು) Yadavas of Devagiri (Seunas)

- ಯಾದವರು, ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದರು. 12ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಸೇವುಣರಿಂದಲೇ ಅಂದು ದಕ್ಷಿಣ ಭಾರತ ಮುಸಲ್ಮಾನರ ದಾಳಿಯಿಂದ ಸ್ವಲ್ಪಮಟ್ಟಿಗೆ ರಕ್ಷಿತವಾಯಿತು.
- ಸೇವುಣರ ಮಂತ್ರಿ **ಹೇಮಾದ್ರಿ**(13ನೇ ಶತಮಾನ) ರಚಿಸಿದ **ಚತುರ್ವರ್ಗ ಚಿಂತಾಮಣಿ** ಗ್ರಂಥದ ವ್ರತಖಂಡ ಭಾಗದಲ್ಲಿ ಸೇವುಣರ ಆಳ್ವಿಕೆಯ ಸಾಧನೆಗಳ ಬಗ್ಗೆ, ಯಾದವರು **ದ್ವಾರಕಾಮತಿಯ(ಇಂದಿನ ಗುಜರಾತ್)** ಪೌರಾಣಿಕ, ಯಯಾತಿಯ ಮಗ ಯದುವಿನ ವಂಶಜರೆಂದು ಹೇಳಲಾಗಿದೆ.

ರಾಜಕೀಯ ಇತಿಹಾಸ (Political History)

1. **ದೃಢ ಪ್ರಹಾರ (Dridhaprahara)**

- ದ್ವಾರಕೆಯ ದೊರೆಯ ಸುಬಾಹುವಿನ ಮಗ ದೃಢಪ್ರಹಾರ ಈ ಮನೆತನದ ಸ್ಥಾಪಕ.

- ಈತನು ದ್ವಾರಮತಿಯನ್ನು ತ್ಯಜಿಸಿ **ಚಂದ್ರಾದಿತ್ಯಪುರವನ್ನು** ರಾಜಧಾನಿಯಾಗಿ ಮಾಡಿಕೊಂಡನು.

2. **ಸೇವುಣ ಚಂದ್ರ (Seunachandra ಕ್ರಿ.ಶ.850-870)**

- ದೃಢಪ್ರಹಾರದ ಮಗ ಸೇವುಣ ಚಂದ್ರನು ಈ ಮನೆತನಕ್ಕೆ ಸಾಮಂತ ಸ್ಥಾನ ದೊರಕಿಸಿದನು. ಈತನು ಸಿಂಧಿನೇರಿ ನಗರವನ್ನು ನಿರ್ಮಿಸಿದನು. ನಂತರ ಇವನ ಹೆಸರನ್ನು ಪಡೆದು ಸೇವುಣಪುರವೆಂದಾಯಿತು. ಅಂದಿನಿಂದ ಸೇವುಣರಾಜ್ಯ / ಸೇವುಣ ದೇಶ ಎಂದಾಯಿತು.
- ಮಹಾರಾಷ್ಟ್ರದಲ್ಲಿರುವ ದೇವಗಿರಿ ಇವರ ರಾಜಧಾನಿಯಾಗಿದ್ದರಿಂದ ದೇವಗಿರಿಯ ಸೇವುಣರು ಎಂದು ಕರೆಯಲಾಗಿದೆ.

3. **ವಡ್ಡಿಗ (Vaddiga 950-975)**

- ವಡ್ಡಿಗನು ರಾಷ್ಟ್ರಕೂಟರ 3ನೇ ಕೃಷ್ಣನ ಸಾಮಂತನಾಗಿದ್ದು ರಾಷ್ಟ್ರಕೂಟರ ರಾಜಪುತ್ರಿಯನ್ನು ವಿವಾಹವಾದನು. ಇವನು ಪ್ರತಿಹಾರರೊಡನೆ ಕಾದಾಡಿದ್ದನು.

4. **2ನೇ ಬಿಲ್ಲಮ(Bhillama II. 975-1005)**

- ಈತನ ಆಳ್ವಿಕೆಯಲ್ಲಿ ಸೇವುಣರು ಕಲ್ಯಾಣಿ ಚಾಲುಕ್ಯರ ಸಾಮಂತರಾದರು ನಂತರ ಪಾರಮಾರ ಅರಸ ಮಂಜನ ವಿರುದ್ಧ ತೈಲಪನಿಗೆ ಬಿಲ್ಲಮನು ಸಹಾಯ ಮಾಡಿ ಪಾರಮಾರರನ್ನು ಸೋಲಿಸಿದರು. ಇದರಿಂದ ತೈಲಪ ಬಿಲ್ಲಮನಿಗೆ ಮಹಾಸಾಮಂತ ಬಿರುದು ನೀಡಿದನು.
- 2ನೇ ಬಿಲ್ಲಮನು ಸಂಗಮನೇರಿಯಲ್ಲಿ ವಿಜಯಾಭರಣೇಶ್ವರ ದೇವಾಲಯ ಕಟ್ಟಿಸಿದನು.

5. **2ನೇ ಸೇವುಣ ಚಂದ್ರ (Seunachandra II)**

- ಇವನು ತನ್ನ ವಂಶದ ಸ್ಥಾನಮಾನಗಳನ್ನು ಹೆಚ್ಚಿಸಿ ಮಹಾಮಂಡಲೇಶ್ವರ ಸ್ಥಾನಕ್ಕೇರಿಸಿದನು.
- ಇವನ ಕಾಲದಲ್ಲಿ ಚಾಲುಕ್ಯರ ಸಾಮ್ರಾಜ್ಯದ ಒಡೆತನಕ್ಕಾಗಿ 2ನೇ ಸೋಮೇಶ್ವರ ಸೋದರ 6ನೇ ವಿಕ್ರಮಾದಿತ್ಯನ ನಡುವೆ ಕಲಹವುಂಟಾಗಿ ಸೇವುಣಚಂದ್ರನು 6ನೇ ವಿಕ್ರಮಾದಿತ್ಯನ ಪರವಹಿಸಿ ಸೋಮೇಶ್ವರನನ್ನು 1076ರಲ್ಲಿ ಸೋಲಿಸಿದರು.

6. **5ನೇ ಬಿಲ್ಲಮ** (Billama)

- ಇವನು ಸಾಮಂತರಾಗಿದ್ದ ಸೇವುಣ ರಾಜ್ಯವನ್ನು ಸ್ವತಂತ್ರ ರಾಜ್ಯವನ್ನಾಗಿ ಮಾಡಿದನು.
- 5ನೇ ಬಿಲ್ಲಮನು ಪ್ರಥಮದಲ್ಲಿ ಕಲಚೂರಿಯ ಬಿಜ್ಜಳ, ನಂದಕುಲದ ಮುಂಜ, ಕಾಕತೀಯರ ಪ್ರತಾಪರುದ್ರ ಮತ್ತು ಚಾಲುಕ್ಯರ 4ನೇ ಸೋಮೇಶ್ವರ ಮುಂತಾದವರನ್ನು ಎದುರಿಸಿದನು.
- ಈತನ ವಿರೋಧಿಗಳಲ್ಲಿ ಪ್ರಬಲನಾದವನು ಹೊಯ್ಸಳರ 2ನೇ ಬಲ್ಲಾಳ. ಇವರೀರ್ವರ ನಡುವೆ 1189-90ರಲ್ಲಿ ಸೊರಟೂರಿನಲ್ಲಿ ಯುದ್ಧ ನಡೆದು ಬಿಲ್ಲಮನು ಸೋತನು. ಬಲ್ಲಾಳನು ಇವನನ್ನು
- ಈತನು **ದೇವಗಿರಿಯನ್ನು** ನಿರ್ಮಾಣ ಮಾಡಿ ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದನೆಂದು ಹೆಮಾದ್ರಿಯ ಚತುರ್ವರ್ಗ ಚಿಂತಾಮಣಿಯಿಂದ ತಿಳಿಯುತ್ತದೆ.

7. **ಜೈತುಗಿ (1192-1199)** (Jythugi)

- ಜೈತುಗಿಯು ಕಾಕತಿಯರ ಪ್ರತಾಪರುದ್ರನನ್ನು ಸೋಲಿಸಿ ಕಾಕತೀಯ ರಾಜ್ಯವನ್ನು ವಶಪಡಿಸಿಕೊಂಡು ಪ್ರತಾಪರುದ್ರನ ಮಗ ಗಣಪತಿಯನ್ನು ಅಧಿಕಾರಕ್ಕೆ ತಂದನು.
- ಈತನ ಆಸ್ಥಾನದಲ್ಲಿ ಭಾಸ್ಕಾರಾಚಾರ್ಯನ ಮಗ **ಲಕ್ಷ್ಮೀಧರನಿದ್ದನು** ಈತ ಜ್ಯೋತಿಷ್ಯ, ತರ್ಕ, ವೇದ ಬಲ್ಲವನಾಗಿದ್ದನು.

8. **2ನೇ ಸಿಂಘಣ (1199-1247)** (Singhana II)

- ಸೇವುಣ ರಾಜ್ಯದ ಅತ್ಯಂತ ಪ್ರಖ್ಯಾತ ದೊರೆಯಾದ ಇವನನ್ನು ಶಾಸನಗಳು ಪೃಥ್ವಿಯ ಗಂಡ, ಮಹಾರಾಜರಿಗೆ ಅಧಿರಾಜ ಮತ್ತು ಅಪ್ರತಿಮವೀರ ಎಂದು ವರ್ಣಿಸಿದೆ.
- ಸಿಂಘಣನು 1122ರಲ್ಲಿ ಹೊಯ್ಸಳರ 2ನೇ ಬಲ್ಲಾಳನನ್ನು ಸೋಲಿಸಿ ಬಳ್ಳಿಗಾಮೆ ಮತ್ತು ಪುಲಿಗೆರೆ ಮಂತಾದವನ್ನು ವಶಪಡಿಸಿಕೊಂಡು ಹಿಂದೆ ಕಳೆದುಕೊಂಡಿದ್ದ ಪ್ರದೇಶಗಳನ್ನು ಮರಳಿ ಪಡೆದನು.
- ಪೂರ್ವದಲ್ಲಿ ಅನಂತಪುರ, ಪಶ್ಚಿಮದಲ್ಲಿ ಗೋವೆ ಮತ್ತು ಕೊಂಕಣ, ಉತ್ತರದಲ್ಲಿ ನರ್ಮದಾ ನದಿ ದಕ್ಷಿಣದಲ್ಲಿ ತುಂಗಭದ್ರ ನದಿಯವರೆಗೆ ರಾಜ್ಯ ವಿಸ್ತರಿಸಿದ್ದನು.

9. **2ನೇ ಕೃಷ್ಣ (1247 – 1261) ಕನ್ನರ** (Krishna II)

- ಕೃಷ್ಣನು ಮಾಳ್ವದ ಜೈತುಗಿದೇವನನ್ನು, ಸಿಂದವಂಶದ ಬೀರದೇವನನ್ನು ಸೋಲಿಸಿದನು.
- ಕೃಷ್ಣನ ಸಲಹೆಗಾರ ಮತ್ತು ಸೇನಾಧಿಪತಿ ಬಿಲ್ಹಣ ಪಂಡಿತ ಸೂಕ್ತಿಮುಕ್ತಾವಳಿ ಗ್ರಂಥವನ್ನು ಬರೆದನು.

10. **ಮಹಾದೇವ (1261 – 1271)** (Mahadeva)

- ಮಹಾದೇವನು ಶೀಲಾಹಾರ ಶಾಖೆಯ ಸೋಮೇಶ್ವರನನ್ನು ಸೋಲಿಸಿ **'ಕೊಂಕಣ ಚಕ್ರವರ್ತಿ'** ಎಂಬ ಬಿರುದನ್ನು ಪಡೆದನು.
- ಈತನ ಪ್ರಸಿದ್ಧ ಸೇನಾಧಿಪತಿ ಹೇಮಾದ್ರಿ. ಈತನು ಚತುರ್ವರ್ಗ ಚಿಂತಾಮಣಿ ಮತ್ತು ಕೈವಲ್ಯ ದೀಪಿಕ ಗ್ರಂಥಗಳನ್ನು ಬರೆದನು.
- ಹೇಮಾದ್ರಿಯ ಹೆಸರನ್ನು ವಾಸ್ತುಶಿಲ್ಪದ ಒಂದು ಶೈಲಿಗೆ ಕೊಡಲಾಗಿದ್ದು ಅದು **'ಹೇಮದ ಪಂಥಿ'** ಎಂದೇ ಪ್ರಸಿದ್ಧವಾಗಿದೆ.

11. **ರಾಮ ಚಂದ್ರ (1271-1312)** (Ramachandra)

- ದೆಹಲಿಯ ಸುಲ್ತಾನ ಅಲ್ಲಾವುದ್ದೀನ ಸೇನಾನಿ **ಮಲ್ಲಿಕಾಫರ್** ಎಲಿಚಪುರ ಪ್ರವೇಶಿಸಿ ನಂತರ ದೇವಗಿರಿಗೆ ಮುತ್ತಿಗೆ ಹಾಕಿದನು. ರಾಮಚಂದ್ರನು ಸಂಪತ್ತನ್ನು ನೀಡಿ ಇವನೊಂದಿಗೆ ಒಪ್ಪಂದ ಮಾಡಿಕೊಂಡನು.
- ಮತ್ತೆ ಕ್ರಿ.ಶ.1307ರಲ್ಲಿ ದೆಹಲಿಯ ಸುಲ್ತಾನರು ದಾಳಿ ಮಾಡಿ ನಂತರ 1310ರಲ್ಲಿ 3ನೇ ಬಾರಿಗೆ ದಾಳಿ ಮಾಡಿ ಶಂಕರದೇವ

- ಸೋತ ಸೇವುಣ ರಾಜ್ಯಕ್ಕೆ ಅಲ್ಲಾವುದ್ದೀನನು ಆಡಳಿತಾಧಿಕಾರಿಯಾಗಿ **ಐನ್–ಉಲ್–ಮುಲ್ಕ್**‌ನನ್ನು ನೇಮಿಸಿದನು.
- 1316ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಮರಣ ಹೊಂದಿದ ಮೇಲೆ ರಾಮಚಂದ್ರನ ಅಳಿಯ ಹರಪಾಲದೇವ ದೇವಗಿರಿಯನ್ನು ವಶಕ್ಕೆ ತೆಗೆದುಕೊಂಡು ಸ್ವತಂತ್ರನೆಂದು ಘೋಷಿಸಿಕೊಂಡನು.
- ಅಲ್ಲಾವುದ್ದೀನನ ಮಗನಾದ ಮುಬಾರಕ್‌ನು ಹರಪಾಲನನ್ನು ಕೊಂದು ದೇವಗಿರಿಯನ್ನು ಮತ್ತೆ ವಶಪಡಿಸಿಕೊಂಡನು.
- ಹೀಗೆ 1318ರಲ್ಲಿ ಸೇವುಣರ ಆಳ್ವಿಕೆ ಕೊನೆಗೊಂಡಿತು. ಇದರ ಅಡಳಿತಾಧಿಕಾರಿಯಾಗಿ **ಮಾಲಿಕ್ ಯಾಕ್ ಲಿಖಿ** ಎಂಬುವವನನ್ನು ನೇಮಿಸಲಾಯಿತು.

ಸೇವುಣರ ಆಡಳಿತ ಪದ್ಧತಿ (Administration)

- ಸೇವುಣರು ರಾಷ್ಟ್ರಕೂಟರ ಮತ್ತು ಚಾಲುಕ್ಯರ ಆಡಳಿತ ಪದ್ಧತಿಯನ್ನು ಅನುಸರಿಸಿದರು.
- ಕೇಂದ್ರದಲ್ಲಿ ಮಹಾ ಪ್ರಧಾನಿ, ಮಾಹಾಮಾತ್ಯ, ಸಂಧಿವಿಗ್ರಹಿ, ಪ್ರಕರಣಾಧಿಪ ಮುಂತಾದ ಸಚಿವ ವರ್ಗಗಳಿದ್ದವು. ಕೆಲವೊಮ್ಮೆ ಪ್ರಧಾನಿಯನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಲಾಗುತ್ತಿತ್ತು.
- ಕೇಂದ್ರಾಡಳಿತ ಮತ್ತು ಪ್ರಾಂತ್ಯಾಡಳಿತದಲ್ಲಿ ಜಿಲ್ಲೆಯ ಅಧಿಕಾರಿ ಗ್ರಾಮದ ಗೌಡ ಮತ್ತು ನಾಡಗೌಡ ಎಂಬ ಅಧಿಕಾರಿಗಳಿದ್ದರು.
- ಭೂ ಕಂದಾಯವನ್ನು **'ಸಿದ್ದಾಯ'**ವೆಂದು ಕರೆಯುತ್ತಿದ್ದರು.
- ಸೇವುಣರು ಕಾಳು ತೂಕದ **'ಪದ್ಮಟಂಕ'** ವರ್ಗದ ಚಿನ್ನದ ನಾಣ್ಯಗಳನ್ನು ತಯಾರಿಸುತ್ತಿದ್ದರು.
- ಐಹೊಳೆಯ ವ್ಯಾಪಾರದ **'ವೀರಭಲಿಜ ಸಂಘ'** ಅತ್ಯಂತ ಪ್ರಮುಖವಾಗಿತ್ತು.
- ಸೇವುಣರು ಪರ್ಷಿಯಾ, ನೇಪಾಳ, ಮಲಯ, ಸಿಂಹಳ, ಹಾಗೂ ದಖ್ಖನ್ನಿನ ವ್ಯಾಪಾರಿಗಳು ಅರೇಬಿಯಾ ಮತ್ತು ಚೀನಾಗಳೊಡನೆ ವ್ಯಾಪಾರ ಮಾಡುತ್ತಿದ್ದರು.
- ಈ ಕಾಲದಲ್ಲಿ **ಮಹಾನುಭವ** ಮತ್ತು **ವಿಠೋಬ** ಎಂಬ ನೂತನ ವೈಷ್ಣವ ಪಂಥಗಳು ಜನ್ಮತಾಳಿದವು. ಮಹಾನುಭವ ಪಂಥದ ಸ್ಥಾಪಕ, ಚಕ್ರದರ ಮತ್ತು ವಿಠೋಬ ಪಂಥದ ಸ್ಥಾಪಕ ನಾಮದೇವ.
- ವೈಷ್ಣವ ಪಂಥಗಳ ಮತಗಳು ಪಂಜಾಬಿನಲ್ಲಿ ಸ್ಥಾಪಿತವಾದವು. ವಿಠೋಭ ಭಕ್ತಿ ಪಂಥದ ಮತ್ತೊಂದು ಕೇಂದ್ರ ಪಂಡರಾಪುರವಾಗಿತ್ತು.

ಸಾಹಿತ್ಯ (Litarature)

1. ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿ, ಕಾಲ ನಿರ್ಣಯ, ತಿಥಿ ನಿರ್ಣಯ, ಪರ್ಜನ್ಯ ಪ್ರಯೋಗ ತ್ರಿಸ್ಥಲವಾಧಿ, ಆಯುರ್ವೇದ ರಸಾಯನ, ದಾನಾವಾರಾಲಿ, ಹರಲೀಲ ಕೃತಿಗಳು. ಮೋಡಿ ಎಂಬ ಬರವಣಿಗೆ ಪದ್ಧತಿಯನ್ನು ಹೇಮಾದ್ರಿ ಪ್ರಾರಂಭಿಸಿದನು (ಸಿಂಹಳದಲ್ಲಿ ಇದು ಕಂಡುಬರುತ್ತದೆ)
2. ಅಮಲಾನಂದ (ಕೃಷ್ಣನ ಆಸ್ಥಾನ) – ವೇದಾಂತ ಕಲ್ಪತರು (ಸಂಸ್ಕೃತ)
3. ಕೃಷ್ಣನ ಸೇನಾನಿ ಬಿಲ್ಹಣ ಪಂಡಿತ – ಸೂಕ್ತಿ ಮುಕ್ತಾವಳಿ (ಸಂಸ್ಕೃತ)
4. ಅನಂತದೇವನು ಖ್ಯಾತ ಜ್ಯೋತಿಷ್ಯ ಶಾಸ್ತ್ರಜ್ಞ (ಸಿಂಘಣ ಆಸ್ಥಾನ) ಬ್ರಹ್ಮಗುಪ್ತನ ಬ್ರಹ್ಮಸ್ಪುಟ ಸಿದ್ಧಾಂತಕ್ಕೆ ಮತ್ತು ವರಾಹಮಿಹಿರನ ಬೃಹತ್ ಜಾತಕಕ್ಕೂ ವ್ಯಾಖ್ಯಾನ ಬರೆದಿದ್ದಾನೆ.
5. ಶಾಙ್ಞ ದೇವನ (ಸಿಂಘಣನ ಆಸ್ಥಾನ) – ಸಂಗೀತ ರತ್ನಾಕರ ಕೃತಿ.
6. ಕಮಲಭವನ – ಶಾಂತೀಶ್ವರ ಪುರಾಣ
7. ಚಾಂಡರಸನ – ಅಭಿನವ ದಶಕುಮಾರ ಚರಿತ ಮತ್ತು ಪಾರ್ಶ್ವನಾಥ ಪುರಾಣ ಕೃತಿಗಳು.

ಮರಾಠಿ ಸಾಹಿತ್ಯ

- ಮರಾಠಿ ಭಾಷೆಯ ಪ್ರಥಮ ಕವಿ ಮುಕುಂದರಾಯ
- ಮರಾಠಿ ಭಾಷೆಯ ಪ್ರಥಮ ಕೃತಿ ವಿವೇಕ ಸಿಂಧು (ಕರ್ತೃ ಮುಕುಂದರಾಯ)
- ಮರಾಠಿ ಸಾಹಿತ್ಯಕ್ಕೆ ಮಹಾನುಭವ ಪಂಥದವರಿಂದ ಪ್ರೋತ್ಸಾಹ ದೊರೆಯಿತು.
- ಮಹೀಂದ್ರಭಟ್ಟನ – ಲೀಲಾ ಚರಿತ ಮತ್ತು ಪದ್ಮಖಂಡ.
- ಭಾಸ್ಕರವರ್ಮನ – ಶಿಶುಪಾಲವಧೆ, ಉದ್ಭವಗೀತ ಮತ್ತು ದತ್ತಾತ್ರೇಯ ಚರಿತ್ರೆ ಕೃತಿಗಳು.

13.8 ವಾರಂಗಲ್‌ನ ಕಾಕತೀಯರು (kakatiyas of Warangal)

- ಕಾಕತೀಯರು 12ನೇ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದರು. ಇವರು **'ಕಾಕತಮ್ಮ'** ಎಂಬ ದೇವತೆಯ ಆರಾಧಕರು. ಕಾಕತೀಯ ಎಂಬ ಊರಿಗೆ ಸೇರಿದವರಾದುದರಿಂದ **ಕಾಕತೀಯ** ಎಂಬ ಹೆಸರು ಬಂದಿತು. ಕಾಕತೀಯರ ಮೊದಲ ರಾಜಧಾನಿ **ಹನುಮಕೊಂಡ** ನಂತರದ ರಾಜಧಾನಿ ವಾರಂಗಲ್ ಆಗಿತ್ತು.
- ಹನುಮಕೊಂಡ ಮತ್ತು ಕಾಜೀಪೇಟೆಯ ಶಾಸನಗಳ ಪ್ರಕಾರ ಕಾಕತೀಯರ ಮೊದಲ ರಾಜ **ಬೇತ** ಕಲ್ಯಾಣಿ ಚಾಲುಕ್ಯರ ಸೋಮೇಶ್ವರನ ಸಾಮಂತನಾಗಿದ್ದು ಅವನಿಗೆ ಚೋಳರ ವಿರುದ್ಧ ಯುದ್ಧದಲ್ಲಿ ಸಹಾಯ ಮಾಡಿದ್ದನು.

2ನೇ ಪ್ರೋಲ(1117-1150)

- ಈತನ ಕಾಲದಲ್ಲಿ ಕಾಕತೀಯ ಮನೆತನವು ಸ್ವತಂತ್ರ ರಾಜ್ಯವಾಯಿತು.
- ಇವನು ಗೋದಾವರಿ ಮತ್ತು ಕೃಷ್ಣಾ ನದಿಯವರೆಗೆ ಕಾಕತೀಯರ ಅಧಿಪತ್ಯ ಸ್ಥಾಪಿಸಿದರು.
- 2ನೇ ಪ್ರೋಲನು ಚಾಲ್ಯಕ್ಯರ 3ನೇ ತೈಲಪನನ್ನು ಸೋಲಿಸಿದನೆಂದು ಶಾಸನಗಳು ತಿಳಿಸಿವೆ.

ರುದ್ರದೇವ (1150-1195)

- 1195ರಲ್ಲಿ ಕಾಕತೀಯರಿಗೂ ಮತ್ತು ಸೇವೂಣರಿಗೂ ಯುದ್ಧ ನಡೆದು ಸೇವುಣರ ಜೈತುಗಿಯು ರುದ್ರದೇವನನ್ನು ಕೊಲೆ ಮಾಡಿದನು. (ಹನುಮಕೊಂಡ ಶಾಸನ ಈತನ ಬಗ್ಗೆ ತಿಳಿಸುತ್ತದೆ)
- ರುದ್ರದೇವನು ಕಾಕತೀಯರ ರಾಜಧಾನಿ **ವಾರಂಗಲ್‌ನ್ನು** ನಿರ್ಮಿಸಿದನು.
- ರುದ್ರದೇವನು ಹನುಮಕೊಂಡದಲ್ಲಿ '1000 ಕಂಬಗಳ ರುದ್ರೇಶ್ವರ ದೇವಾಲಯ' ಕಟ್ಟಿಸಿದನು.
- ಈತನಿಗಿದ್ದ ಬಿರುದು 'ವಿನಯ ಭೂಷಣ' ಹಾಗೂ ಈತನು ರಚಿಸಿದ ಗ್ರಂಥ ನೀತಿಸಾರ.

ಗಣಪತಿ (1198-1261)

- ಚೋಳರನ್ನು ಗಣಪತಿಯು ಸೋಲಿಸಿ ಕಂಚಿಯವರೆಗೂ ಕಾಕತೀಯ ರಾಜ್ಯವನ್ನು ವಿಸ್ತರಿಸಿದನು.
- ಗಣಪತಿಯನ್ನು ಪಾಂಡ್ಯರ ಜಟಾವರ್ಮನು ಸೋಲಿಸಿ ಕಂಚಿ ಮತ್ತು ನೆಲ್ಲೂರಗಳನ್ನು ಗೆದ್ದನು.

ರುದ್ರಾಂಬ (1261-1295) (ಗಣಪತಿಯ ಮಗಳು)

- ಹಿಂದೆ ಕಾಕತೀಯರಿಂದ ಕೈಬಿಟ್ಟು ಹೋಗಿದ್ದ ಗೋದಾವರಿ ಮತ್ತು ವೆಂಗಿ ಪ್ರದೇಶಗಳನ್ನು ಮತ್ತೆ ಗೆದ್ದಳು.
- 1293ರಲ್ಲಿ ಕಾಕತೀಯರ ರೇವುಪಟ್ಟಣಕ್ಕೆ ಭೇಟಿ ನೀಡಿದ್ದ **ವೆನಿಸ್‌ನ ಮಾರ್ಕೋಪೋಲೋ** ರುದ್ರಾಂಬಳ ಆಡಳಿತ ದಕ್ಷತೆಯನ್ನು ಹೊಗಳಿದ್ದಾನೆ.

ಪ್ರತಾಪರುದ್ರ (1295-1329)

- ಇವನ ಕಾಲದಲ್ಲಿ ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ **ಮಲ್ಲಿಕಾಫರನು** ವಾರಂಗಲ್ ಮೇಲೆ ದಾಳಿ ಮಾಡಿ ಸುಮಾರು 25 ದಿನಗಳ ಕಾಲ ಹೋರಾಡಿ ಪ್ರತಾಪರುದ್ರನನ್ನು ಸೆರೆಹಿಡಿದನು. ಪ್ರತಾಪರುದ್ರನು ಅಪಾರ ಸಂಪತ್ತು ಕೊಟ್ಟು ಕಾಫೂರನೊಂದಿಗೆ ಒಪ್ಪಂದ ಮಾಡಕೊಂಡನು.
- ಘಿಯಾಸುದ್ದೀನ್ ತುಘಲಕ್ ಕಾಲದಲ್ಲಿ ಆತನ ಮಗ **ಉಲುಗ್‌ಖಾನ್ 1329**ರಲ್ಲಿ ವಾರಂಗಲ್ ಮೇಲೆ ದಾಳಿ ಮಾಡಿ ಪ್ರತಾಪರುದ್ರನನ್ನು ಸೆರೆಹಿಡಿದನು. ದೆಹಲಿಗೆ ಕೊಂಡೊಯ್ಯುವ ಮಾರ್ಗದಲ್ಲಿ ಪ್ರತಾಪರುದ್ರನು ಮರಣ ಹೊಂದಲಾಗಿ ಕಾಕತೀಯ ರಾಜ್ಯ ಅಂತ್ಯವಾಯಿತು. ವಾರಂಗಲ್ ಮುಸ್ಲಿಂ ರಾಜ್ಯದ ಒಂದು ಭಾಗವಾಯಿತು.

ಕಾಕತೀಯರ ಕೊಡುಗೆಗಳು

- ಗ್ರಾಮದ ಆಡಳಿತವನ್ನು 12 ಜನ ಆಯುಗಾರರು ನೋಡಿಕೊಳ್ಳುತ್ತಿದ್ದರು.
- ಪ್ರತಾಪರುದ್ರನು ಸೈನ್ಯವನ್ನು ಬಲಪಡಿಸಲು **'ನಾಯಂಕರ ಪದ್ಧತಿ'**ಯನ್ನು ಮೊದಲು ಜಾರಿಗೆ ತಂದನು. ಇದು ವಿಜಯನಗರ ಕಾಲದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು.
- ಇವರ ಕಾಲದಲ್ಲಿ ಶೈವ ಮತದ ಜೊತೆಗೆ ಆಂಧ್ರದಲ್ಲಿ ವೀರಶೈವ ಮತ ಪ್ರಾಮುಖ್ಯತೆ ಗಳಿಸಿತು.
- 1214ರಲ್ಲಿ ರುದ್ರದೇವನ ಆಸ್ಥಾನದ ಅಜಿತೇಂದ್ರನು **ಹನುಮಗೊಂಡ** ಪ್ರಶಸ್ತಿಯನ್ನು ರಚಿಸಿದನು.
- ಶಾಕಲ್ಯಮಭಟ್ಟ-ಜಿತೇಂದ್ರ, ಕಲ್ಯಾಣಾಬ್ಯುದಯ ರಚನೆಕಾರ ಅಪ್ಪಮಾರ್ಯ, ಕಾಕತೀಯ ಚರಿತ್ರಕಾರ ನರಸಿಂಹ ಈ ಕಾಲದ ಸಂಸ್ಕೃತ ಕವಿಗಳು.
- ಇವರ ಕಾಲದಲ್ಲಿ **ಪಂಚತಂತ್ರ** ಮತ್ತು **ಕಮುಂದಕನ** ನೀತಿಶಾಸ್ತ್ರಗಳು ತೆಲುಗಿಗೆ ಭಾಷಾಂತರವಾದವು.
- ಪಾಲ್ಕುರಿಕೆ ಸೋಮನಾಥ ಬಸವ ಪುರಾಣಮು ಮತ್ತು ಪಂಡಿತಾರಾದ್ಯ ಚರಿತಮು ಕೃತಿಗಳನ್ನು ಬರೆದನು.
- ವಾಸ್ತುಶಿಲ್ಪ ಕೇಂದ್ರಗಳು – ಹನುಮಕೊಂಡ, ವಾರಂಗಲ್ ಮತ್ತು ಪಾಲಂಪೇಟೆ.
- ಕಾಕತೀಯರು ಗರ್ಭಗುಡಿಯಲ್ಲಿ ಶಿವ ಮತ್ತು ವಿಷ್ಣು ದೇವರು ಸೂರ್ಯ ದೇವರನ್ನು ಪ್ರತಿಷ್ಠಾಪಿಸಿದ್ದು ಗೋಡೆಗಳ ಮೇಲೆ ರಾಮಾಯಣ ಮತ್ತು ಮಹಾಭಾರತದ ಚಿತ್ರಗಳನ್ನು ಬಿಡಿಸಿದ್ದಾರೆ.
- ಪ್ರಮುಖ ದೇವಾಲಯಗಳು – ರುದ್ರೇಶ್ವರ ದೇವಾಲಯ ಮತ್ತು ರಾಮಪ್ಪ ದೇವಾಲಯಗಳು.

13.9. ಹೊಯ್ಸಳರು (Hoyasalas) (ಕ್ರಿ.ಶ.1000-1343)

- ಹೊಯ್ಸಳ ವಂಶದ ಸ್ಥಾಪಕ. **'ಸಳ'** ಈತ ಜೈನಭಕ್ತನಾಗಿದ್ದನು.
- ಸಳನು **ಸೊಸೆಯೂರು/ಅಂಗಡಿ** ಗ್ರಾಮದ ತನ್ನ ಮನೆತನದ ದೇವತೆ **ವಾಸಂತಿಕಾ**ದೇವಿ ದೇವಾಲಯಕ್ಕೆ ಪೂಜೆ ಸಲ್ಲಿಸುತ್ತಿದ್ದನು. ಸುದತ್ತ ವರ್ಧಮಾನ ಇವನ ಗುರುಗಳು.
- ಹೊಯ್ಸಳರ ರಾಜ ಲಾಂಛನ **ಹುಲಿಯನ್ನು ಕೊಲ್ಲುತ್ತಿರುವ ಚಿತ್ರವಾಗಿದೆ.**
- ಸಳನ ಬಗ್ಗೆ ಮುಖ್ಯವಾಗಿ ಬೇಲೂರು ಶಾಸನದಲ್ಲಿ ಪ್ರಥಮ ಬಾರಿಗೆ ಕಂಡುಬರುತ್ತದೆ.
- ಹೊಯ್ಸಳರ ಪ್ರಮುಖ ರಾಜಧಾನಿ **ದ್ವಾರಸಮುದ್ರ** ಇವರು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದರು.

ನೃಪಕಾಮ (Nripakama)

- ಹೊಯ್ಸಳರ ರಾಜ್ಯಕ್ಕೆ ಅಡಿಪಾಯ ಹಾಕಿದ ನೃಪಕಾಮ ಮಲೆನಾಡಿನ ಮಾಲೆಪರನ್ನು ಸೋಲಿಸಿ **ಮಾಲೆಪರೊಳ್‌ಗಂಡ** ಎಂಬ ಬಿರುದು ಧರಿಸಿದನು.
- **ಕ್ರಿ.ಶ.1006**ರಲ್ಲಿ ಚೋಳ ಪ್ರಾಂತ್ಯಾಧಿಕಾರಿ ಅಪ್ರಮೇಯನೊಡನೆ ಯುದ್ಧ ಮಾಡಿದನು.
- **ಕ್ರಿ.ಶ. 1024**ರಲ್ಲಿ ಹೊಯ್ಸಳರು ಚಾಲುಕ್ಯರ ಅಧೀನಕ್ಕೊಳಗಾದರು. ಮುಂದೆ ಕದಂಬರು ಚಾಲುಕ್ಯರ ವಿರುದ್ಧ ಹೋರಾಟ ನಡೆಸಿದಾಗ ನೃಪಕಾಮ ಕದಂಬರಿಗೆ ಸಹಾಯ ಮಾಡಿದನು.

- ನೃಪಕಾಮನಿಗಿದ್ದ ಬಿರುದು ರಾಜಮಲ್ಲ, ಪೆರುಮಾಡಿ.

ವಿನಯಾಧಿತ್ಯ (Vinayaditya) (1040 – 1100)

- ಚೋಳರು ಮತ್ತು ಚಾಲುಕ್ಯರು ಕಾದಾಡುತ್ತಿದ್ದನ್ನು ಕಂಡ ವಿನಯಾದಿತ್ಯನು ಚಿಕ್ಕಮಗಳೂರು, ಕಡೂರು, ಹಾಸನ, ಮೈಸೂರು ಶಿವಮೊಗ್ಗ ಹಾಗೂ ತುಮಕೂರುಗಳನ್ನು ಗೆದ್ದನು. ಇದು **ಗಂಗವಾಡಿ 96,000** ಎಂದು ಪ್ರಸಿದ್ಧಿಯಾಯಿತು.
- ಇವನು ಗಂಗರ ಬಿರುದಾದ **ರಕ್ಕಸಗಂಗ** ಎಂಬ ಬಿರುದು ಧರಿಸಿದ್ದನು.
- ವಿನಯಾದಿತ್ಯನು ಚಾಲುಕ್ಯರ ಸಾಮಂತಿಕೆಯನ್ನು ಒಪ್ಪಿಕೊಂಡಿದ್ದನು. ಸೋಮೇಶ್ವರನ ಮೇಲೆ ಪಾರಮಾರ ಜಯಸಿಂಹನನ್ನು ಸೋಲಿಸುವಲ್ಲಿ ಚಾಲುಕ್ಯರಿಗೆ ವಿನಯಾದಿತ್ಯ ಸಹಾಯ ಮಾಡಿದನು.
- ವಿನಯಾದಿತ್ಯನ ದಂಡ ನಾಯಕರಾಗಿ ಮರಿಯಾನೆ ಮತ್ತು ಬಾಹುಬಲಿಯರು ಹಾಗೂ ಮಹಾಸಂಧಿ ವಿಗ್ರಹಿ ಪೋಚಿಮಯ್ಯ ಎಂಬುವವರಿದ್ದರು.
- ವಿನಯಾದಿತ್ಯನು ತನ್ನ ರಾಜಧಾನಿಯನ್ನು **ಸೊಸೆಯೂರಿನಿಂದ** ಹಳೇಬೀಡಿಗೆ ವರ್ಗಾಯಿಸಿ ಅದಕ್ಕೆ **'ದ್ವಾರಸಮುದ್ರ'** ಎಂದು ನಾಮಕರಣ ಮಾಡಿದನು.
- **ವಿನಯಾದಿತ್ಯನ ಬಿರುದುಗಳು** – ತ್ರಿಭುವನಮಲ್ಲ, ಹೊಯ್ಸಳದೇವ, ಗಂಗನಾಡಿ 96,000 ರಾಜ.

ಎರೆಯಂಗ (Ereyanga)

- ಇವನು ಚಾಲುಕ್ಯರ ಮೇಲೆ ಪಾರಮಾರ ಜಯಸಿಂಹ ದಂಡೆತ್ತಿ ಬಂದಾಗ 1ನೇ ಸೋಮೇಶ್ವರನಿಗೆ ಸಹಾಯ ಮಾಡಿದನು.
- ಎರೆಯಂಗನು ಚಾಲುಕ್ಯರ 6ನೇ ವಿಕ್ರಮಾದಿತ್ಯನಿಗೆ ಬಲಭುಜದಂತಿದ್ದನು.
- ಎರೆಯಂಗನಿಗೆ 'ಪಂಚಮಹಾಶಬ್ದ ಮಹಾಮಂಡಲೇಶ್ವರ ವೀರ ಎರೆಯಂಗ ಹೊಯ್ಸಳದೇವ' ಎಂಬ ಬಿರುದಿತ್ತು.

ಒಂದನೇ ಬಲ್ಲಾಳ (ಕ್ರಿ.ಶ.1101–1107) (Ballala I)

- ಬಲ್ಲಾಳನು ತನ್ನ ರಾಜಧಾನಿಯನ್ನು ಬೇಲೂರಿಗೆ ವರ್ಗಾಯಿಸಿ ದ್ವಾರಸಮುದ್ರವನ್ನು ಉಪರಾಜಧಾನಿಯಾಗಿ ಮಾಡಿಕೊಂಡನು.
- ಚಾಲುಕ್ಯರ ಸಾಮಂತ ಪಾರಮಾರ ಅರಸ ಜಗದ್ದೇವನನ್ನು ಬಲ್ಲಾಳ (ತನ್ನ ಸೋದರ ವಿಷ್ಣುವರ್ಧನನೊಂದಿಗೆ) ಸೋಲಿಸಿದನು.
- ಜೈನಯತಿ ಬಲ್ಲಾಳನ ರೋಗವನ್ನು ಗುಣಪಡಿಸಿದ್ದರಿಂದ ಅವರಿಗೆ 'ಬಲ್ಲಾಳ ಜೀವರಕ್ಷಕ' ಬಿರುದು ನೀಡಿದ್ದನು.

1. ವಿಷ್ಣುವರ್ಧನ (ಕ್ರಿ.ಶ 1108-1152) (Vishnuvardhana)

- ಹೊಯ್ಸಳರ ಅತ್ಯಂತ ಪ್ರಸಿದ್ಧ ದೊರೆ ವಿಷ್ಣುವರ್ಧನ (ಇವನ ಮೂಲ ಹೆಸರು ಬಿಟ್ಟಿದೇವ) ಪ್ರಾಂತ್ಯಾಧಿಕಾರಿಯಾಗಿದ್ದನು.
- ಕ್ರಿ.ಶ. 1114ರ ತಲಕಾಡು ಕದನವು ಚೋಳರ ಅಧಿಯಮ ಮತ್ತು ವಿಷ್ಣುವರ್ಧನನ ನಡುವೆ ನಡೆದು ಅಧಿಯಮ ಸೋತು ಕೊಲ್ಲಲ್ಪಟ್ಟನು (ಗಂಗಾವಾಡಿಯ ಅಧಿನಿಯಮ). ಈ ವಿಜಯದ ನೆನಪಿಗಾಗಿ ವಿಷ್ಣುವರ್ಧನನು ತಲಕಾಡಿನ **ಕೀರ್ತಿನಾರಾಯಣ ದೇವಾಲಯ,** ಬೇಲೂರಿನ **ಚೆನ್ನಕೇಶವ ದೇವಾಲಯ**ವನ್ನು ಕಟ್ಟಿಸಿದನು.
- ತಲಕಾಡು ಯುದ್ಧದ ಗೆಲುವಿಗಾಗಿ ವೀರಗಂಗ, ತಲಕಾಡುಗೊಂಡ ಬಿರುದುಗಳನ್ನು ಪಡೆದು ಮತ್ತು ತನ್ನ ನಾಣ್ಯಗಳ ಮೇಲೆ **'ಶ್ರೀ ತಲಕಾಡು ಗೊಂಡ'** ಎಂಬುದಾಗಿ ಅಚ್ಚು ಹಾಕಿಸಿದನು.
- ತನ್ನ ದಂಡನಾಯಕ ಗಂಗರಾಜನಿಗೆ ಮಹಾ ಪ್ರಚಂಡ ದಂಡನಾಥ ಬಿರುದು ನೀಡಿದ್ದನು..
- ವಿಷ್ಣುವರ್ಧನನು ಚೋಳರಿಂದ ಮೈಸೂರಿನ ಪೂರ್ವಭಾಗ, ಕೊಂಗು, ನಂಗಲಿ, ನೊಳಂಬವಾಡಿ ಮತ್ತು ಕೊಯಮತ್ತೂರುಗಳನ್ನು ವಶಪಡಿಸಿಕೊಂಡನು. ಕಂಚಿ ಗೆದ್ದು **ಕಂಚಿಗೊಂಡ** ಬಿರುದು ಪಡೆದುಕೊಂಡನು.
- ಕೊಂಗಾಳ್ವ ರಾಜನ ಪುತ್ರಿ ಚಂದಲಾದೇವಿಯನ್ನು ವಿಷ್ಣುವರ್ಧನ ವಿವಾಹವಾದನು.
- ವಿಷ್ಣವರ್ಧನನ ಕಾಲದಲ್ಲಿ ಅಳುಪರು ಆಳ್ವಖೇಡ (ದಕ್ಷಿಣ ಕನ್ನಡ)ದಲ್ಲಿ ಆಳುತ್ತಿದ್ದರು.
- 1135 ರ ಸಿಂದಿಗೆರೆಯ ಶಾಸನವು ವಿಷ್ಣುವರ್ಧನನು ಚಾಲುಕ್ಯರ ವಿಕ್ರಮಾಧಿತ್ಯನಿಂದ ಸೋತು **'ಚಾಲುಕ್ಯ ಸಾಮಂತ ಶಿರೋಮಣಿ'** ಆಗಿದ್ದನೆಂದು ವರ್ಣಿಸಿದೆ.
- ಚಾಲುಕ್ಯರ ಗಂಗವಾಡಿ, ನೊಳಂಬವಾಡಿ, ಬನವಾಸಿ ಮತ್ತು ಹಲಸಿ ವಿಜಯಗಳ ನೆನಪಿಗಾಗಿ ವಿಷ್ಣುವರ್ಧನನು ಐದು ವಿಜಯ ನಾರಾಯಣ ದೇವಾಲಯಗಳನ್ನು (ತಲಕಾಡು, ಬೇಲೂರು, ಮೇಲುಕೋಟೆ, ಗದಗ ಮತ್ತು ಬಂಕಾಪುರಗಳಲ್ಲಿ)ಕಟ್ಟಿಸಿದನು.
- **ವಿಷ್ಣುವರ್ಧನನ ಬಿರುದುಗಳು** – ತಲಕಾಡುಕೊಂಡ, ಮಲೆಪೆರೋಳ್ ಗಂಡ, ಗಂಡಗಿರಿನಾಥ, ಕದನ ಪ್ರಚಂಡ, ಸತ್ಯ ರತ್ನಾಕರ, ವಿವೇಕ ನಾರಾಯಣ ಮತ್ತು ಸಾಹಸಭೀಮ ಮೊದಲಾದವು.
- ವಿಷ್ಣುವರ್ಧನನ ಕಾಲದ ಸಮಕಾಲೀನ ಅರಸರೆಂದರೆ ಚಾಲುಕ್ಯರ 6ನೇ ವಿಕ್ರಮಾದಿತ್ಯ ಮತ್ತು 3ನೇ ಸೋಮೇಶ್ವರ.

ವಿಜಯ ನರಸಿಂಹ Vijaya Narasimha (1152–1173)

- ಇವನ ಆಳ್ವಿಕೆಯ ಕಾಲದಲ್ಲಿ ರಾಜ್ಯದ ಉತ್ತರ ಭಾಗವನ್ನು ಸೇವುಣರು, ಬನವಾಸಿಯನ್ನು ಕಲಚೂರಿ ಬೊಮ್ಮರಸ ಹಾಗೂ ತುಂಗಭದ್ರ ಪ್ರದೇಶವನ್ನು ಬಿಜ್ಜಳನು ವಶಪಡಿಸಿಕೊಂಡರು.

2ನೇ ವೀರಬಲ್ಲಾಳ Ballala II. (ಕ್ರಿ.ಶ.1170–1220)

- ಇವನ ಹೆಸರಿನಂದಲೇ ಹೊಯ್ಸಳ ರಾಜವಂಶಕ್ಕೆ 'ಬಲ್ಲಾಳ' ಎಂಬ

- ಚೋಳರ ಮಾರವರ್ಮ ಸುಂದರಪಾಂಡ್ಯನು ಕುಲೋತ್ತುಂಗನನ್ನು ಸಿಂಹಾಸನದಿಂದ ಹೊರದೂಡಿದಾಗ ಕುಲೋತ್ತುಂಗನಿಗೆ ಬಲ್ಲಾಳನು ಸಹಾಯ ಮಾಡಿದ್ದನು. ಇದರಿಂದ 2ನೇ ಬಲ್ಲಾಳನು **'ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯ'** ಎಂಬ ಬಿರುದು ಧರಿಸಿದನು.
- 1177ರಲ್ಲಿ ಉಚ್ಚಂಗಿಯ ಪಾಂಡ್ಯರಾಜ ಕಾಮದೇವನನ್ನು ಸೋಲಿಸಿ ಅವನಿಂದ ಕಪ್ಪ ಪಡೆದು ನಂತರ ಉಚ್ಚಂಗಿಯನ್ನು ಆತನಿಗೆ ಬಿಟ್ಟುಕೊಟ್ಟು **'ಪಾಂಡ್ಯರಾಜ ಪ್ರತಿಷ್ಠಾಪನಾಚಾರ್ಯ'** ಬಿರುದು ಪಡೆದನು. ಈ ವಿಜಯ ಶನಿವಾರ ದೊರೆತಿದ್ದರಿಂದ **'ಶನಿವಾರಸಿದ್ಧಿ'** ಎಂಬ ಬಿರುದು ಧರಿಸಿದನು.
- ಚಾಲುಕ್ಯರ 3ನೇ ಸೋಮೇಶ್ವರನನ್ನು ಸೋಲಿಸಿ ಬಹುತೇಕ ಭಾಗಗಳನ್ನು ವಶಪಡಿಸಿಕೊಂಡು **ದಕ್ಷಿಣ ಚಕ್ರವರ್ತಿ** ಎಂಬ ಬಿರುದು ಧರಿಸಿದನು
- 1190ರಲ್ಲಿ ಸೇವುಣರ ಬಿಲ್ಲಮನು ಬಿಲ್ಲಾಳನಿಂದ ಹತನಾದನು. ಬಿಲ್ಲಮನ ಸೈನಿಕ ದಂಡನಾಯಕ ಜೈತುಗಿಯನ್ನು ಕೊಂದು ಹಾಕಿದನು.
- ಈ ಮೇಲಿನ ವಿಜಯಗಳ ನೆನಪಿಗಾಗಿ ಬಲ್ಲಾಳನು ಕ್ರಿ.ಶ.1191 ರಲ್ಲಿ **'ಬಲ್ಲಾಳಯುಗ'** ಎಂಬ ಕಾಲ ಗಣನೆಯನ್ನು ಆಚರಣೆಗೆ ತಂದನು.
- **ಈತನ ಬಿರುದುಗಳು** – ಗಿರಿದುರ್ಗಮಲ್ಲ. ಪಾಂಡ್ಯರಾಜ ನಿರ್ಮೂಲನ ಮತ್ತು **ಗಂಡ ಬೇರುಂಡ** (ಕನ್ನಡ ನಾಡಿನ ಚಕ್ರವರ್ತಿಗಳಲ್ಲಿ ಗಂಡಬೇರುಂಡ ಎಂಬ ಬಿರುದು ಪಡೆದ ಮೊದಲಿಗ) ಮುಂತಾದವು.

2ನೇ ನರಸಿಂಹ (Narasimha II. 1220-1235)

- 2ನೇ ನರಸಿಂಹನು ಸೇವುಣರ ಮಹಾದೇವನನ್ನು ಸೋಲಿಸಿದನು. ಮುಮ್ಮಡಿ ರಾಜ ರಾಜ ಚೋಳ ಮತ್ತು ಪಾಂಡ್ಯರ ಮಾರವರ್ಮ ಸುಂದರಪಾಂಡ್ಯನ ನಡುವೆ ಯುದ್ಧ ನಡೆದು ರಾಜರಾಜನು ಸೋತನು. ನಂತರ ನರಸಿಂಹನು ತನ್ನ ದಂಡನಾಯಕರಾದ ಅಮಿತಯ್ಯಾ ಮತ್ತು ಸಮುದ್ರ ಗೋಪಯ್ಯ ನೇತೃತ್ವದಲ್ಲಿ ರಾಜರಾಜನಿಗೆ ಮತ್ತೆ ಸಿಂಹಾಸನ ದೊರಕಿಸಿಕೊಟ್ಟನು.
- 2ನೇ ನರಸಿಂಹ ಸುಂದರಪಾಂಡ್ಯನನ್ನು **ಮಹೇಂದ್ರಮಂಗಲಂ** ಕದನದಲ್ಲಿ ಸೋಲಿಸಿ ಕಣ್ಣನೂರು ಮತ್ತು ಕೊಪ್ಪಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.
- ಇವನು ಕಣ್ಣನೂರಿನಲ್ಲಿ ಹೊಸ ರಾಜಧಾನಿ ಸ್ಥಾಪಿಸಿ ಅಲ್ಲಿಂದಲೇ ಆಡಳಿತ ನಡೆಸಿದನು. ಈತನ ಬಿರುದುಗಳು **ಸರ್ವಜ್ಞ**, ಸಾಹಿತ್ಯ ರತ್ನಾಕರ.
- 2ನೇ ನರಸಿಂಹನ ಉತ್ತರಾಧಿಕಾರಿಗಳೆಂದರೆ; ಸೋಮೇಶ್ವರ, ವೀರನರಸಿಂಹ ಮತ್ತು ರಾಮನಾಥ.

3ನೇ ವೀರಬಲ್ಲಾಳ (Ballala III. 1291-1343)

- ಹೊಯ್ಸಳ ಸಂತತಿಯ ಕೊನೆಯ ದೊರೆಯಾಗಿ **3ನೇ ವೀರಬಲ್ಲಾಳ** ಆಳಿಕೆ ನಡೆಸಿದನು.
- 1303ರಲ್ಲಿ ತನ್ನ ಸೈನ್ಯಾಧಿಕಾರಿ **ಸೋಮೇಯ** ನೇತೃತ್ವದಲ್ಲಿ ಸೇವುಣರ ರಾಜ ರಾಮಚಂದ್ರನನ್ನು 3ನೇ ಬಲ್ಲಾಳನು ಸೋಲಿಸಿದನು.
- ಕ್ರಿ.ಶ. 1310ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ **ಮಲ್ಲಿಕಾಫರ್** ದ್ವಾರಸಮುದ್ರಕ್ಕೆ ಮುತ್ತಿಗೆ ಹಾಕಿದಾಗ ತಮಿಳುನಾಡಿನಿಂದ ಹಿಂದಿರುಗಿದ 3ನೇ ಬಲ್ಲಾಳ ಅಪಾರ ಸಂಪತ್ತು ಕೊಟ್ಟು ಮಲ್ಲಿಕಾಫರ್‌ನೊಂದಿಗೆ ಒಪ್ಪಂದ ಮಾಡಿಕೊಂಡನು.
- ಮಲ್ಲಿಕಾಫರ್‌ನು ಬಲ್ಲಾಳನ ಮಗ ಕುಮಾರ ಬಲ್ಲಾಳನನ್ನು ದೆಹಲಿಗೆ ಕರೆದೊಯ್ದನು. ಅಲ್ಲಾವುದ್ದೀನ್ ಖಿಲ್ಜಿ ಇವನನ್ನು ಪ್ರೀತಿಯಿಂದ ಸತ್ಕರಿಸಿ ವಾಪಸ್ ಕಳುಹಿಸಿದನು.
- ತುಘಲಕ್ ಸಂತತಿಯ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ಸಂತತಿಯ ಹೊರತಾಗಿ ದಕ್ಷಿಣ ಭಾರತದ ಎಲ್ಲಾ ರಾಜಮನೆತನಗಳು ನಿರ್ನಾಮವಾಗಿದ್ದವು.
- 1326ರಲ್ಲಿ ಮಹಮದ್ ಬಿನ್ ತುಘಲಕ್‌ನ ದಕ್ಷಿಣ ಪ್ರಾಂತ್ಯಗಳ ಮಾಂಡಲೀಕ ಬಹಾವುದ್ದೀನನು ದಂಗೆ ಎದ್ದು ದೆಹಲಿ ಸೈನ್ಯದಿಂದ ತಪ್ಪಿಸಿಕೊಂಡು ಬಲ್ಲಾಳನ ಹತ್ತಿರ ಆಶ್ರಯ ಪಡೆದನು ಆದರೆ ಬಹಾವುದ್ದೀನ್‌ನ್ನು ಬಲ್ಲಾಳನು ತುಘಲಕ್‌ನಿಗೆ ಒಪ್ಪಿಸಿದನು.
- ಬಲ್ಲಾಳನು ತನ್ನ ಪುತ್ರನಿಗೆ ಪಟ್ಟಾಭಿಷೇಕ ಮಹೋತ್ಸವ ನಡೆಸಲು ತುಂಗಭದ್ರ ನದಿ ಹತ್ತಿರ ಹೊಸ ನಗರ ಸ್ಥಾಪಿಸಿದನು. ಆ ನಗರವೇ **ವಿಜಯನಗರ** ಎಂಬ ಹೆಸರು ಪಡೆಯಿತು.
- ಮಧುರೆಯ ಸುಲ್ತಾನ **ಘಿಯಾಸುದ್ದೀನ್**‌ನಿಂದ 1343ರಲ್ಲಿ 3ನೇ ವೀರಬಲ್ಲಾಳನು ಹತನಾಗಿ ಹೊಯ್ಸಳ ಸಂತತಿ ಕೊನೆಗೊಂಡಿತು.

ಹೊಯ್ಸಳರ ಕಾಲದ ಆಡಳಿತ (Administration)

- ಪ್ರಾರಂಭದಲ್ಲಿ ಹೊಯ್ಸಳ ರಾಜ್ಯವು ಹಿಂದಿನ ಮೈಸೂರು ಪ್ರಾಂತ್ಯಕ್ಕೆ ಸೀಮಿತವಾಗಿತ್ತು. ನಂತರ 2ನೇ ವೀರಬಲ್ಲಾಳನ ಕಾಲದಲ್ಲಿ ವಿಸ್ತಾರವಾಗಿತ್ತು.
- ಹೊಯ್ಸಳರ ಉಪರಾಜಧಾನಿಗಳೆಂದರೆ ಬೇಲೂರು, ಆರಸೀಕೆರೆ, ತೊಣ್ಣೂರು, ಬಂಕಾಪುರ, ಲಕ್ಕುಂಡಿ, ಹೊಸಪಟ್ಟಣ ಮತ್ತು ಕಣ್ಣಾನೂರು.
- ಹೊಯ್ಸಳರ ರಾಜತ್ವವು ವಂಶಪಾರಂಪರ್ಯವಾಗಿತ್ತು.
- ಹೊಯ್ಸಳರ ಕಾಲದ ಮಂತ್ರಿ ಪರಿಷತ್ತಿಗೆ **'ಪಂಚ ಪ್ರಧಾನ ಸಮಿತಿ'**ಯೆಂಬ ಹೆಸರಿತ್ತು ಅವರೆಂದರೆ:–
- ಸಂಧಿವಿಗ್ರಹ
- ಶ್ರೀಕರ್ಣಾಧಿಕಾರಿ
- ಹಿರಿಯ ಭಂಡಾರಿ
- ಸೇನಾಪತಿ
- ಮಹಾಪಸಯತ.
- ಮಂತ್ರಿ ಪದವಿಯು ಅನುವಂಶಿಕವಾಗಿತ್ತು.

ಪ್ರಾಂತ್ಯಾಡಳಿತ:

- ಸಾಮ್ರಾಜ್ಯವನ್ನು ಪ್ರಾಂತ್ಯಗಳಾಗಿ ಹಾಗೂ ನಾಡುಗಳಾಗಿ ವಿಂಗಡಿಸಿದ್ದರು.
- **ಪ್ರಾಂತ್ಯಗಳು** – ತಲಕಾಡು, ಕೊಂಗುನಾಡು, ನಂಗಲಿ, ನೊಳೆಂಬವಾಡಿ, ಹಾನಗೆರೆ ಮತ್ತು ಬನವಾಸಿ.
- **ನಾಡುಗಳು** – ಕಬ್ಬಾಹುನಾಡು, ಕೊಡಿಗೆನಾಡು, ತಳಿಗೆನಾಡು ಮತ್ತು ಬೆಳವೊಳಲನಾಡು.
- ನಾಡುಗಳ ಮುಖ್ಯಧಿಕಾರಿಗಳನ್ನು ಹೆಗ್ಗಡೆ, ನಾಡಹೆಗ್ಗಡೆ, ರಾಜ್ಯಾಧ್ಯಕ್ಷ ಮತ್ತು ಕರಣ ಮುಂತಾಗಿ ಕರೆಯುತ್ತಿದ್ದರು.
- ಪಟ್ಟಣಗಳ/ಪುರಸಭೆಗಳ ಆಡಳಿತವನ್ನು **ಪಟ್ಟಣಶೆಟ್ಟಿ** ನೋಡಿಕೊಳ್ಳುತ್ತಿದ್ದನು.
- ಆಡಳಿತದ ವೈಶಿಷ್ಟ್ಯತೆಯೆಂದರೆ: ಪಟ್ಟದ ರಾಣಿ ಮತ್ತು ಇತರ ರಾಣಿಯರು ಪ್ರಾಂತ್ಯಾಡಳಿತವನ್ನು ನೋಡಿಕೊಳ್ಳುತ್ತಿದ್ದರು. ಉದಾ: **ಚಾಮಲ್ಲದೇವಿ** (ಅಹಂದಿ ಪ್ರಾಂತ್ಯ) **ನೊಳೆಂಬದೇವಿ** (ಕುಂಬಳ ಪ್ರಾಂತ್ಯ)

ಗ್ರಾಮಾಡಳಿತ

- ಪ್ರತಿಯೊಂದು ನಾಡು ಅನೇಕ ಗ್ರಾಮಗಳಿಂದ ಕೂಡಿತ್ತು. ಗ್ರಾಮದ ಮುಖ್ಯಸ್ಥ ಗಾವುಂಡ/ಗೌಡನಾಗಿದ್ದನು. ಗೌಡಿಕೆ ವಂಶಪಾಂಪರ್ಯವಾಗಿತ್ತು. ಗೌಡನ ಸಹಾಯಕ್ಕೆ ಕರಣಕನಿದ್ದನು. ಗ್ರಾಮಸಭೆಗಳು ಗ್ರಾಮಾಡಳಿತವನ್ನು ನೋಡಿಕೊಳ್ಳುತ್ತಿದ್ದವು.
- ಹೊಯ್ಸಳರ ಸೈನ್ಯವು ಅಶ್ವದಳ, ಪದಾತಿದಳ, ಗಜದಳ ಹಾಗೂ ರಥದಳಗಳಿಂದ ಕೂಡಿತ್ತು. ಅಶ್ವ ಸೈನ್ಯವು ಪ್ರಮುಖವಾಗಿತ್ತು.

ಸಾಮಾಜಿಕ ಜೀವನ (Social Life)

- ಬೌದ್ಧ ಧರ್ಮವು ಕ್ಷೀಣಿಸುತ್ತಿದ್ದು **ಬ್ರಾಹ್ಮಣ ವರ್ಗವು** ಗಣ್ಯಸ್ಥಾನ ಪಡೆಯಿತು.
- ಸಾಮಾನ್ಯವಾಗಿ ಏಕಪತ್ನಿತ್ವ ಪದ್ಧತಿ ಇದ್ದಂತೆ ಕಂಡುಬರುವುದಿಲ್ಲ ತಮ್ಮ ದೊರೆಗಳ ಮತ್ತು ಸೇನಾಧಿಪತಿಗಳ ಬಗ್ಗೆ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸುವುದು ಈ ಸಮಾಜದ ವಿಶೇಷ ಲಕ್ಷಣವಾಗಿತ್ತು. ಈ ರೀತಿಯ ಸ್ವಾಮಿನಿಷ್ಠೆಗೆ **'ಗರುಡ'** ಎನ್ನುತ್ತಿದ್ದರು.
- ಹೊಯ್ಸಳರ ರಾಣಿಯರು ಭರತನಾಟ್ಯದಲ್ಲಿ ಪರಿಣಿತರಾಗಿದ್ದರು. ಸತಿಸಹಗಮನ ಪದ್ಧತಿ ರೂಢಿಯಲ್ಲಿತ್ತು.
- ಹಸುಗೂಸುಗಳಿಗೆ ಹಾಲು ನೀಡುವುದು. ಹಸಿದವನಿಗೆ ಅನ್ನ ನೀಡುವುದು ಅರ್ಜಿದೆಡವೆಯ ನೀತಮಂ ದೇವಾಲಯಕ್ಕಾಗಿ ಕೆರೆಗಾಗಿ ವ್ಯೆಯಂಗಯ್ವದೇ ತಮ್ಮ ಕರ್ತವ್ಯವೆಂದು ನಂಬಿದ್ದರು.

ಆರ್ಥಿಕ ಜೀವನ. (Economic Life)

- ವೀರಬಲ್ಲಾಳನ ಕಾಲದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕೆರೆ ಕಾಲುವೆಗಳು ನಿರ್ಮಾಣವಾದವು. ಮಲೆನಾಡಿನಲ್ಲಿ ಏಲಕ್ಕಿ, ಮೆಣಸು, ಅಡಿಕೆ, ತೆಂಗು, ಕಬ್ಬು, ಭತ್ತ, ಮಾವು, ಬಾಳೆ ಮತ್ತು
- ವಾಣಿಜ್ಯ ವ್ಯವಹಾರದಲ್ಲಿ ತೊಡಗಿದ್ದ ಜನರು ವಾಣಿಜ್ಯ ಸಂಘ ಸ್ಥಾಪಿಸಿಕೊಂಡಿದ್ದರು. ಉದಾ. ಐಯ್ಯಾವಳೆ ಐನೂರ್ವರ್ ಎಂಬ ಸಂಘವು ರಾಜ್ಯದಲ್ಲಿ ವ್ಯಾಪಕವಾಗಿತ್ತು.
- **ಮುಖ್ಯ ಕೈಗಾರಿಕೆಗಳು :** ಲೋಹ ಕೈಗಾರಿಕೆ (ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ) ನೇಯ್ಗೆ ಮರಗೆಲಸ.
- ಪರ್ಷಿಯಾ, ಬರ್ಮಾ ಮತ್ತು ಮಲಯ ಪರ್ಯಾಯ ದ್ವೀಪದೊಂದಿಗೆ ವಿದೇಶಿ ವ್ಯಾಪಾರ ಮಾಡುತ್ತಿದ್ದರು. ಕಮ್ಮಟ ಚೆಟ್ಟ ಶೆಟ್ಟಿ ಎಂಬುವವನು ಕುದುರೆ, ಆನೆ ಮತ್ತು ಮುತ್ತುಗಳನ್ನು ವಿದೇಶಗಳಿಂದ ತರಿಸುತ್ತಿದ್ದನು.
- **ಮುಖ್ಯ ವ್ಯಾಪಾರ ಕೇಂದ್ರಗಳು:-** ಬೇಲೂರು, ದ್ವಾರಸಮುದ್ರ, ಅಸಂದಿ, ಶ್ರವಣಬೆಳಗೊಳ, ಬಳ್ಳಿಗಾವೆ.
- **ಮುಖ್ಯ ರಫ್ತು ವಸ್ತುಗಳು:** ಹತ್ತಿಬಟ್ಟೆ, ತೆಳುಬಟ್ಟೆ, ಅಡಿಕೆ, ತೆಂಗು ಹಾಗೂ ದಂತದ ವಸ್ತುಗಳು.
- ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳಾದ ಹೊನ್ನು, ಹಣ, ಗದ್ಯಾಣ ಮುಂತಾದವು ಚಲಾವಣೆಯಲ್ಲಿದ್ದವು. ಹೆಚ್ಚಿನ ವ್ಯಾಪಾರವು ವಸ್ತು ವಿನಿಮಯ ಮೂಲಕವೇ ನಡೆಯುತ್ತಿತ್ತು.

ಧಾರ್ಮಿಕ ಜೀವನ (Religious Life)

- ಜೈನ ಧರ್ಮವು ಅತ್ಯಂತ ಪ್ರಬಲವಾಗಿತ್ತು, ಉದಾಹರಣೆಗೆ: ಸಳನ ಜೈನಗುರು ಸುದತ್ತರು ಮತ್ತು 1ನೇ ಬಲ್ಲಾಳನ ದಂಡನಾಯಕ ಮರಿಯಾನೆ ಜೈನರಾಗಿದ್ದರು.
- ವೈಧಿಕ ಮತ್ತು ಜೈನಧರ್ಮಾವಲಂಬಿಗಳಲ್ಲಿ ವಿವಾಹ ಸಂಬಂಧವೇರ್ಪಟ್ಟಿತ್ತು.
- ವಿಷ್ಣುವರ್ಧನನ ರಾಣಿ ಶಾಂತಲಾದೇವಿ ಜೈನ ಧರ್ಮದಲ್ಲಿ ಅಚಲ ಶ್ರದ್ಧೆಯಿದ್ದುದರಿಂದ ಜೈನ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದನು. ವಿಷ್ಣುವರ್ಧನನ ಜೈನಗುರು **ಶ್ರೀಪಾಲತ್ರೈವಿದ್ಯನ** ಭಕ್ತರಾಗಿದ್ದರು.
- ಶಾಂತಲಾದೇವಿ ಶ್ರವಣಬೆಳಗೊಳದಲ್ಲಿ ಸವತಿ ಗಂಧಾವರಣ ಬಸದಿ ಕಟ್ಟಿಸಿದಳು. ಶಾಂತಲಾದೇವಿ ಜೈನಧರ್ಮದ ಅಮೂಲ್ಯ ರತ್ನ ಮತ್ತು ಜೈನಧರ್ಮದ ಆಳುವೇರಿ ಯಂತಿದ್ದಳು.
- ತಮಿಳುನಾಡಿನ ಕಣ್ಣಾನೂರಿನಿಂದ ಬಂದ(ಕುಲೋತ್ತುಂಗನ ಹಿಂಸೆ ತಾಳಲಾರದೆ) **ರಾಮಾನುಜಾಚಾರ್ಯರ** ಪ್ರಭಾವದಿಂದ ವಿಷ್ಣುವರ್ಧನನು **ವೈಷ್ಣವ ಮತಕ್ಕೆ** ಮತಾಂತರಗೊಂಡನು.
- ಬೇಲೂರಿನ ಶಾಸನದ ಪ್ರಕಾರ ವಿಷ್ಣುವರ್ಧನನು ಮೇಲುಕೋಟೆಯಲ್ಲಿ ದೇವಾಲಯವನ್ನು ಸ್ಥಾಪಿಸಿದನು. ಇದು ವೈಷ್ಣವ ಧರ್ಮದ ಪ್ರಸಿದ್ಧ ಕೇಂದ್ರವಾಗಿದೆ.

ಸಾಹಿತ್ಯ Litrature

ವಿಷ್ಣುವರ್ಧನನ ಆಸ್ಥಾನದಲ್ಲಿದ್ದ ಕವಿಗಳು:

ನಾಗಚಂದ್ರನು ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ

ವ್ಯವಹಾರಗಣಿತ ಮತ್ತು ಲೀಲಾವತಿ ಗ್ರಂಥ ರಚಿಸಿದರು.

ಎರಡನೇ ವೀರಬಲ್ಲಾಳನ ಆಸ್ಥಾನದಲ್ಲಿದ್ದವರು:

- ಜನ್ನನು ಯಶೋಧರ ಚರಿತೆ, ಅನಂತನಾಥ ಪುರಾಣ, (ಕವಿಚಕ್ರವರ್ತಿ ಬಿರುದು), ನೇಮಿಚಂದ್ರನು ಅರ್ಧನೇಮಿಗ್ರಂಥ, 2ನೇ ವೀರಬಲ್ಲಾಳನ ಕಾಲದ ಪ್ರಸಿದ್ಧ ಶಿಲಾಸಾಸನಗಳು ಜನ್ನ ಕವಿಯಿಂದಲೇ ರಚಿತವಾಗಿವೆ. ರುದ್ರಭಟ್ಟನು ಜಗನ್ನಾಥ ವಿಜಯ ಮತ್ತು ರಸಗಲಿಕೆ ಕೃತಿ ರಚಿಸಿದರು.
- ಜನ್ನನ ತಂದೆ ಸುಮನೋಬಾಣ 1ನೇ ನರಸಿಂಹನ ಆಸ್ಥಾನದಲ್ಲಿದ್ದನು. ಜನದ್ದಗಲ ಸೋಮನಾಥನ ಕಲ್ಯಾಣಕಾರಕ ಕೃತಿ. 2ನೇ ನರಸಿಂಹನ ಮಂತ್ರ ದಂಡನಾಥನ ಹರಚರಿತ್ರೆ ಕೃತಿಗಳು ರಚನೆಯಾದವು.
- **ಸೋಮೇಶ್ವರನ ಆಸ್ಥಾನದಲ್ಲಿದ್ದ ಕವಿಗಳು:** ಮಲ್ಲಿಕಾರ್ಜುನನು ಸೂಕ್ತಿ ಸುದಾರ್ಣವ (ಹೊಯ್ಸಳ ರಾಜರ ವಂಶವೃಕ್ಷದ ಹಾಗೂ ಸೋಮೇಶ್ವರನು ಶೌರ್ಯ ಪ್ರತಾಪಗಳ ಬಗ್ಗೆ ಚಿತ್ರಿಸಿದ್ದಾನೆ) ಕೇಶಿರಾಜನ ಶಬ್ದಮಣಿದರ್ಪಣಂ (ವ್ಯಾಕರಣ ಗ್ರಂಥ) ರಚಿಸಿದರು.
- ರಾಮಾನುಜಾಚಾರ್ಯರು ಬ್ರಹ್ಮಸೂತ್ರಗಳಿಗೆ ಹಾಗೂ ಭಗವದ್ಗೀತೆಗೆ ಭಾಷ್ಯ ಬರೆದರು. ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ವೇದಾಂತಸಾರ, ವೇದಾಂತಸಂಗ್ರಹ ಮತ್ತು ವೇದಾಂತ ದೀಪಿಕೆ, ಮುಂತಾದ ಗ್ರಂಥಗಳನ್ನು ರಚಿಸಿದರು.

ಇತರ ಕವಿಗಳು

- ದತ್ತವರದನು ತತ್ವಸಾರ, ನಾರಾಯಣ ಭಟ್ಟಾರಕ ಪ್ರಜ್ಞಾಪರಿತ್ರಾಣ ಮತ್ತು ಪಶೌಶರನು ತತ್ವರತ್ನಾಕರ, ವಿಷ್ಣುಚಿತ್ತನು ಪ್ರಮೇಯ ಸಂಗತಿ ಮಾಲಾ, ತ್ರಿವಿಕ್ರಮ ಪಂಡಿತನು ಉಷಾಪಹರಣ ಕೃತಿಗಳನ್ನು ರಚಿಸಿದರು.
- ಮಧ್ವಾಚಾರ್ಯರು **ದ್ವೈತ ಸಿದ್ಧಾಂತವನ್ನು** ರಚಿಸಿದರು. ಇವರು 3ನೇ ನರಸಿಂಹ ಮತ್ತು 3ನೇ ಬಲ್ಲಾಳನ ಸಮಕಾಲೀನರು.

ಕಲೆ ಮತ್ತು ವಾಸ್ತು ಶಿಲ್ಪ (Art and Architecture)

ಬೇಲೂರಿನ ಚನ್ನಕೇಶವ ದೇವಾಲಯ

- ಈ ದೇವಾಲಯವನ್ನು **ವಿಷ್ಣುವರ್ಧನನು ಕ್ರಿ.ಶ.1117**ರಲ್ಲಿ ತಲಕಾಡಿನಲ್ಲಿ ಚೋಳರನ್ನು ಸೋಲಿಸಿದ್ದರ ನೆನಪಿಗಾಗಿ ತನ್ನ ಇಷ್ಟ ದೇವನಾದ ಶ್ರೀಮನ್ಮಹಾವಿಷ್ಣುವಿಗೂ ಈ ಆಲಯವನ್ನು ನಿರ್ಮಿಸಿ ತನ್ನ ವಿಜಯವನ್ನು ಚನ್ನಕೇಶವನಿಗರ್ಪಿಸಿ ಅನೇಕ ದಾನ ಧರ್ಮಗಳನ್ನು ಮಾಡಿದನು.
- 1ನೇ ನರಸಿಂಹ ಮತ್ತು 2ನೇ ವೀರಬಲ್ಲಾಳ ಇದರ ಈಶಾನ್ಯ ದಿಕ್ಕಿನಲ್ಲಿ ವಾಸುದೇವತೀರ್ಥ ಎಂಬ ಕಲ್ಯಾಣಿ ಮತ್ತು ಮಂಟಪವನ್ನು ಕಟ್ಟಿಸಿದರು.
- ಈ ದೇವಾಲಯದ ಮಹಾದ್ವಾರದ ಮೇಲೆ **ದ್ರಾವಿಡ ಶೈಲಿಯಲ್ಲಿ** ಕಟ್ಟಲಾದ ಎತ್ತರದ ಗೋಪುರವಿದೆ ಇದು ವಿಜಯನಗರ ಕಾಲದಲ್ಲಿದ್ದುದು ಗೊಡೆಗಳ ತಳ ಭಾಗದಲ್ಲಿ ಆನೆಗಳ ಸಾಲು ಮಧ್ಯದಲ್ಲಿ ಸಿಂಹಗಳ ಸಾಲು ಪುನಃ ಕೊನೆಗೆ ಆನೆಗಳ ಸಾಲುಗಳ ದೃಶ್ಯಗಳಿವೆ.
- ಎಂ.ಹೆಚ್.ಕೃಷ್ಣರವರು ಈ ದೇವಾಲಯವನ್ನು **'ಲಲಿತ ಕಲಾ ವಸ್ತು ಸಂಗ್ರಹಾಲಯ'** ಎಂದಿದ್ದಾರೆ.
- ಈ ದೇವಾಲಯವು **ಜಕಣಾಚಾರಿ** ಮತ್ತು **ಡಂಕಣಾಚಾರಿಯ** ಪರಿಶ್ರಮದ ಫಲವಾಗಿ ನಿರ್ಮಿತವಾಗಿದೆ..
- ಹೊರಗೋಡೆಯಲ್ಲಿ 38 ಶಿಲಾ ಬಾಲಕಿಯರ ಪ್ರತಿಮೆಗಳಿದ್ದು ಇವುಗಳು ದಾಸೋಜ ಕೆತ್ತಿದಂತಹವುಗಳು. ತನ್ನ ಉಡುಗೆಯನ್ನು ಸೆಳೆಯುವ ಕೋಡಿಯೊಂದಿಗೆ ನಿಂತ ಬಾಲೆ, ತನ್ನ ಕೇಶಪಾಶದಿಂದ ನಿಂತು ಹಾಡುವ ಕೋಮಲೆ, ಲೋಲಾಕುವಿನೊಂದಿಗಿರುವ ಕಾಳಿ, ನವರಂಗದ ಮತ್ತು ಕಂಬಗಳ ಮದನ ಕೈ ದೀರ್ಘ ಕೇಶ ಪಾಶದಲ್ಲಿ ನೀರು ಹಿಂಡುವ ಸುಂದರಿಯೋರ್ವಳ ಪ್ರತಿಮೆ ಕೂಡ ದಾಸೋಜನ ಕೆತ್ತನೆಗಳಾಗಿವೆ.
- ಚವಣನು ನಾಲ್ಕು ಮದನ ಕೈ ವಿಗ್ರಹಗಳನ್ನು ಚಪಲಳಾದ ಬೇಟೆಗಾರ್ತಿ ಮತ್ತು ನೃತ್ಯಲೀನ ಸುಂದರಿ ಚಿತ್ರಗಳನ್ನು ಕೆತ್ತಿದ್ದಾನೆ.
- ಚನ್ನಕೇಶವ ದೇವಾಲಯವನ್ನು ಹೊಂದಿಕೊಂಡಂತಿರುವ ಕಪ್ಪೆಚೆನ್ನಿಗರಾಯ ದೇವಾಲಯವನ್ನು ವಿಷ್ಣುವರ್ಧನನ ರಾಣಿ ಶಾಂತಲಾದೇವಿ ಕಟ್ಟಿಸಿದಳು.

2. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ

- ಈ ದೇವಾಲಯವನ್ನು ಕ್ರಿ.ಶ.1121ರಲ್ಲಿ ವಿಷ್ಣುವರ್ಧನನ ಅಧಿಕಾರಿಗಳಲ್ಲೊಬ್ಬನಾದ **ಕೇತಮಲ್ಲನ** ಆಜ್ಞೆಯಂತೆ ಪ್ರಾರಂಭಿಸಲಾಯಿತು. ಇದರ ನಿರ್ಮಾತೃ **ಕೇದಾರೋಜ.** (2ನೇ ನರಸಿಂಹನ ಕಾಲ)
- ಚನ್ನಕೇಶವ ದೇವಾಲಯ ಏಕಕೂಟವಾದರೆ, ಹೊಯ್ಸಳೇಶ್ವರ ದೇವಾಲಯ ದ್ವಿಕೂಟವಾಗಿದೆ.
- ಹೊಯ್ಸಳೇಶ್ವರ ದೇವಾಲಯದ ಸ್ಥಳದಲ್ಲೇ 1219ರಲ್ಲಿ ವೀರಬಲ್ಲಾಳನ ರಾಣಿ ಕೇತಳದೇವಿಯು ಕೇದಾರೇಶ್ವರ ದೇವಾಲಯವನ್ನು ನಿರ್ಮಿಸಿದ್ದಾಳೆ. ಇದರಲ್ಲಿರುವ **ನಾಟ್ಯಸರಸ್ವತಿ ವಿಗ್ರಹ** ಅತ್ಯಂತ ಮನೋಹರವಾಗಿದ್ದು ಇದನ್ನು **ಹರಿಪ** ಶಿಲ್ಪಿ ಕೆತ್ತಿದನು. ಅಲ್ಲದೆ ಯಕ್ಷಗಾನ ಪ್ರಸಂಗ ಇಲ್ಲಿ ಕಂಡುಬರುತ್ತದೆ.

3. ಸೋಮನಾಥಪುರದ ಕೇಶವ ದೇವಾಲಯ

- ಕ್ರಿ.ಶ.1270ರಲ್ಲಿ ಕೇಶವ ದೇವಾಲಯವನ್ನು 3ನೇ ನರಸಿಂಹನ ದಂಡನಾಯಕ **ಸೋಮ** ಎಂಬುವನು ಕಟ್ಟಿಸಿದನು. ಇದು ತ್ರಿಕೂಟಾಚಲವಾಗಿದೆ. ಈ ದೇವಾಲಯವು **ನಕ್ಷತ್ರಾಕಾರದ ಗೋಪುರ**ಗಳಿಂದ ಕೂಡಿದೆ. ಇದರಲ್ಲಿ ಸುಮಾರು 64 ಕೋಣೆಗಳಿವೆ.
- ಗರ್ಭಗೃಹದ ಬಲ ಕೋಣೆಯಲ್ಲಿ ವೇಣುಗೋಪಾಲ ವಿಗ್ರಹ ಹಾಗೂ ಎಡ ಕೋಣೆಯಲ್ಲಿ ಜನಾರ್ದನ ವಿಗ್ರಹಗಳಿವೆ. ಬೇಲೂರು ಮತ್ತು ಹಳೇಬೀಡಿನಲ್ಲಿದ್ದಂತೆ ಆನೆ ಮತ್ತು ಅಶ್ವಗಳ ಸಾಲು ಇಲ್ಲೂ ಕಂಡುಬರುತ್ತವೆ.
- ಉತ್ತರದ ಗರ್ಭಗುಡಿಯ ಸುತ್ತಲೂ ಇರುವ ಪಟ್ಟಿಯಲ್ಲಿ ಮಹಾಭಾರತದ ಕಥೆಯನ್ನು ಮತ್ತು ದಕ್ಷಿಣ ಭಾಗದಲ್ಲಿ

ರಾಮಾಯಣದ ಕಥೆಯನ್ನು ಕೆತ್ತಲಾಗಿದೆ.

- ಇವೆಲ್ಲವನ್ನು ಕಂಡ ಎಸ್. ನೀಲಕಂಠ ಶಾಸ್ತ್ರಿ ಮೊದಲಾದವರು ಇದು **ಹೊಯ್ಸಳ ಶೈಲಿ** ಎಂದು ಕರೆದಿದ್ದಾರೆ.

4. **ಅಮೃತಪುರದ ಅಮೃತೇಶ್ವರ ದೇವಾಲಯ:** 1196ರಲ್ಲಿ 2ನೇ ಬಲ್ಲಾಳನ ಕಾಲದಲ್ಲಿ **ಅಮೃತೇಶ ಡಣ್ಣಾಯಕ** ಕಟ್ಟಿಸಿದನು(ಇದರ ಶಿಲ್ಪಿ ಮಲ್ಲಿತಮ್ಮ)

5. **ನುಗ್ಗೆಹಳ್ಳಿ ಲಕ್ಷ್ಮೀನರಸಿಂಹ ದೇವಾಲಯ:** ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ **ಸೋಮಣ್ಣ ಡಣ್ಣಾಯಕ** 1249ರಲ್ಲಿ ಕಟ್ಟಿಸಿದನು.

- **ಇನ್ನಿತರ ದೇವಾಲಯಗಳು:–** ಅಮ್ಮಳೆಯ ಕೇಶವ ದೇವಾಲಯ, ಅರಸೀಕೆರೆಯ ವೀರಬಲ್ಲಾಳೇಶ್ವರ, ಕಣ್ಣನೂರಿನ ಹೊಯ್ಸಳೇಶ್ವರ ಮತ್ತು ಜಂಬುಕೇಶ್ವರ, ಶ್ರವಣಬೆಳಗೊಳದ ಬಸದಿಗಳು, ತಲಕಾಡಿನ ಕೀರ್ತಿನಾರಾಯಣ ಹಾಗೂ ಮೇಲುಕೋಟೆಯ ಚೆಲುವನಾರಾಯಣ ದೇವಾಲಯಗಳನ್ನು ಹೊಯ್ಸಳರು ಕಟ್ಟಿಸಿದ್ದಾರೆ.

ಹೊಯ್ಸಳರ ಕಲೆಯ ಲಕ್ಷಣಗಳು

1. ಹೊಯ್ಸಳ ದೇವಾಲಯಗಳು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಹಾಗೂ ಪಂಚಕೂಟಗಳಿಂದ ಕೂಡಿವೆ.
2. ಇವರ ದೇವಾಲಯಗಳು ನಕ್ಷತ್ರಾಕಾರದ ಜಗುಲಿಯ ಮೇಲೆ (4 ಅಡಿ ಎತ್ತರ) ನಿರ್ಮಿತವಾಗಿವೆ.
3. ಗೋಡೆಗಳ ಸುತ್ತಲೂ ಪ್ರಾರಂಭದಲ್ಲಿ ಆನೆಗಳ ಸಾಲು ನಂತರ ಲತೆ, ಹೂವು, ರೂಪ ಮತ್ತು ಕುದುರೆಗಳನ್ನು ಕೆತ್ತಿದ್ದಾರೆ.
4. ಶಿಲಾ ಪಟ್ಟಿಕೆಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಘಟನಾವಳಿಗಳು ಕಂಡುಬರುತ್ತವೆ.
5. ಹೊಯ್ಸಳರ ದೇವಾಲಯಗಳು ಮುಖಮಂಟಪ, ಸಭಾಮಂಟಪ ಮತ್ತು ಗರ್ಭಗೃಹಗಳಿಂದ ಕೂಡಿವೆ.

ಹೊಯ್ಸಳರ ಕಾಲದ ಲಲಿತ ಕಲೆ

- ಇವರ ಲಲಿತ ಕಲೆಯನ್ನು ಬೇಲೂರು ಹಳೇಬೀಡು ಮತ್ತು ಸೋಮನಾಥಪುರ ದೇವಾಲಯಗಳಲ್ಲಿ ಕಾಣಬಹುದು.
- ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ಪೂರ್ವದ ದ್ವಾರದ ಬಲಕ್ಕೆ 11ನೇ ಶಿಲ್ಪಕೃತಿಯಲ್ಲಿ ಒಬ್ಬ ಹುಡುಗನು ಕೊಳಲು ಬಾರಿಸುತ್ತಿರುವ ದೃಶ್ಯವಿದೆ. 12ನೇ ಶಿಲ್ಪಕೃತಿಯಲ್ಲಿ ಒಬ್ಬಳು ಗಾಡಿಯ ಹಾಡುಗಾರ್ತಿ ಅದೇ ತನ್ನ ಹಾಡು ಮೂದಲಿಸಿದ ಹಾಗಿದೆ. 14ನೇ ಶಿಲ್ಪಕೃತಿಯಲ್ಲಿ ಒಬ್ಬ ಹೆಂಗಸು ತನ್ನ ಎಡಗೈಯಲ್ಲಿ ರುದ್ರವೀಣೆಯ ರಾಗವಿಲಾಸ ದೃಶ್ಯವಿದೆ. 18ನೇ ಶಿಲ್ಪಕೃತಿಯಲ್ಲಿ ಒಬ್ಬ ಕುಣಿಯುತ್ತ ಚರ್ಮವಾದ್ಯ ನುಡಿಸುತ್ತಿರಲು ಇಬ್ಬರು ಮೃದಂಗ ನುಡಿಸಿ ಅವನಿಗೆ ಜೋಡುಗೇಡುವಂತಿದೆ. 20ನೇ ಶಿಲ್ಪಕೃತಿಯಲ್ಲಿ ಒಬ್ಬನು ಎರಡೂ ಕೈಗಳಲ್ಲಿ ತಾಳ ಹಿಡಿದು ಹಾಡುವ ಹಾಗೆ ತೋರುತ್ತದೆ. 32ನೇ ಪಟ್ಟಿಕೆಯಲ್ಲಿ ಕೊಳಲು ಕುಣಿತ, ಒಬ್ಬ ಲಾವಣ್ಯವತಿ ಲತಾಂಗಿ ಕೃಷ್ಣನಿಗೆ ಪ್ರಿಯವಾದ ವೇಣು ಭಂಗಿಯಲ್ಲಿ ಮಣಿದು ಕುಣಿಯುತ್ತಿದ್ದಾಳೆ. 33ನೇ ಪಟ್ಟಿಕೆಯಲ್ಲಿ ಒಬ್ಬಾಕೆ ಎಡಗೈಯ ಡಮರುಗ ಬಲಗೈಯಲ್ಲಿ ಬೆಟ್ಟತಾಳ ಹಿಡಿದು ಕುಣಿಯುವ ದೃಶ್ಯವಿದೆ.

14. ದೆಹಲಿಯ ಸುಲ್ತಾನರು (Delhi Sultanate)

ಆಧಾರಗಳು

1) **ತಹ್ಕಿಕ–ಐ–ಹಿಂದ್ :–** ಈ ಕೃತಿಯನ್ನು ಅಲ್ಬೆರೂನಿಯು ಅರೇಬಿಕ್ ಭಾಷೆಯಲ್ಲಿ ಬರೆದಿದ್ದಾನೆ. ಇದು ಮೊದಲು ಅರೇಬಿಕ್ ನಿಂದ ಇಂಗ್ಲೀಷ್‌ಗೆ 'ಸಾಚೌ' ಎಂಬುವವರಿಂದ ಭಾಷಾಂತರಗೊಂಡಿತ್ತು. ಅಲ್ಬೆರೂನಿಯು ಕ್ರಿ.ಶ.973ರಲ್ಲಿ ಖಿವ ಎಂಬಲ್ಲಿ ಜನಿಸಿದನು.

- ಅಲ್ಬರೂನಿಯು ಮಹಮ್ಮದ್ ಘಜ್ನಿಯ ಜೊತೆ ಭಾರತದ ದಂಡಯಾತ್ರೆಗೆ ಬಂದಿದ್ದನು.
- **ಪ್ರಮುಖಾಂಶ:–** ಭಾರತೀಯ ಜೀವನದ ಗುಣಲಕ್ಷಣಗಳಾದ ತಾತ್ವಿಕ, ಧಾರ್ಮಿಕ ಸಾಮಾಜಿಕ ಅಭಿರುಚಿಗಳು ಮತ್ತು ಕಂದಾಚಾರಗಳು ಜಾತಿವ್ಯವಸ್ಥೆ ಮುಂತಾದವುಗಳ ಬಗ್ಗೆ ವಿಷದವಾಗಿ ಚಿತ್ರಿಸಿದ್ದಾನೆ. ಇವನು ಭಾರತೀಯ ರಾಜರಲ್ಲಿ ಏಕತೆಯಿಲ್ಲ ಮತ್ತು ವಿದೇಶಿ ದಾಳಿಕಾರರು ದಾಳಿ ಮಾಡಿದಾಗಲೂ ಅವರು ಒಗ್ಗೂಡಿ ವೈರಿಗಳನ್ನು ಎದುರಿಸುವುದಿಲ್ಲವೆಂದಿದ್ದಾನೆ.
- ಅಲ್ಬೆರೂನಿಯು ಘಜ್ನಿಯ ಮಗ ಮಾಸೂದ್‌ನ ಆಸ್ಥಾನದಲ್ಲೂ ಆಶ್ರಯ ಪಡೆದು ಕ್ರಿ.ಶ 1048ರಲ್ಲಿ ಮರಣ ಹೊಂದಿದನು.

2) **ತಾಜ್ –ಉಲ್–ಮಸೀರ್:–** ಇದನ್ನು ಹಸನ್ ನಿಜಾಮಿಯು ತುರ್ಕಿ ಭಾಷೆಯಲ್ಲಿ ಬರೆದನು. ಇವನು ಕೊರಸಾನ್‌ನ ನಿಷಾಮಪುರ ಎಂಬಲ್ಲಿ ಜನಿಸಿದನು. ಇವನು ಮಂಗೋಲರ ದಾಳಿಗೆ ಹೆದರಿ ಭಾರತಕ್ಕೆ ಬಂದು ದೆಹಲಿ ಸುಲ್ತಾನರ ಬಳಿ ಆಶ್ರಯ ಪಡೆದನು. ಈ ಕೃತಿಯನ್ನು ಇಲಿಯಟ್ ಮತ್ತು ಡಾಸನ್‌ರು ಇಂಗ್ಲೀಷ್‌ಗೆ ಭಾಷಾಂತರಿಸಿದರು.

- **ಪ್ರಮುಖಾಂಶ ;–** ಮಹಮ್ಮದ್ ಘೋರಿ , ಕುತುಬ್ದೀನ್ ಐಬಕ್‌ನ ಆಳ್ವಿಕೆಯ ಬಗ್ಗೆ ದೀರ್ಘ ವಿವರಣೆ (ಇವನ ನಾಣ್ಯಗಳು– ದಿರ್ಹಾಮ ಮತ್ತು ದಿನಾರ್) ಇದ್ದು ಇಲ್ತಮಷ್‌ನ ಬಗ್ಗೆ ತಿಳಿಸಿದ್ದಾನೆ.

3) **ತಬ್ಕತ್ –ಐ ನಾಸಿರಿ :–** ಮಿನ್ಹಾಜುದ್ದೀನ್ ಸಿರಾಜನು ಪರ್ಷಿಯನ್ ಭಾಷೆಯಲ್ಲಿ ಬರೆದಿದ್ದಾನೆ. ಇವನು ಕ್ರಿ.ಶ.1193ರಲ್ಲಿ ಜನಿಸಿದನು. ತಬಕತ್–ಐ–ನಾಸಿರಿ ಕೃತಿಯು ಭಾರತದ ಮೊದಲ ಟರ್ಕಿ ಸುಲ್ತಾನರ ಆಳ್ವಿಕೆ, ಇಸ್ಲಾಂನ ಉಗಮ, ವಿವಿಧ ಖಲೀಫರು, ಇರಾನಿನ ರಾಜರು, ಘಜ್ನಿ ಮತ್ತು ಘೋರ್ ರಾಜ್ಯಗಳ ಇತಿಹಾಸ ಮುಸ್ಲಿಂ ರಾಜ್ಯಗಳ ಮೇಲೆ ಮಂಗೋಲರ ದಾಳಿ ಮುಂತಾದ ಅಂಶಗಳನ್ನು ಒಳಗೊಂಡಿದೆ.

4) **ಅಮೀರ್ ಖುಸ್ರೋನ ಕೃತಿಗಳು:–** ಅಮೀರ್ ಖುಸ್ರೋನು ಉತ್ತರ ಪ್ರದೇಶದ ಪಾಟಿಯಾಲ ಎಂಬಲ್ಲಿ 1253ರಲ್ಲಿ ಜನಿಸಿದನು. ಇವನು ಬಲ್ಬನ್, ಕೈಕುಬಾದ್, ಜಲಾಲುದ್ದೀನ್ ಖಿಲ್ಜಿ, ಅಲ್ಲಾವುದ್ದೀನ್ ಖಿಲ್ಜಿ, ಕುತುಬ್ದೀನ್, ಮುಬಾರಕ್ ಷಾ ಖಿಲ್ಜಿ ಮತ್ತು ಘಿಯಾಸುದ್ದೀನ್ ತುಘಲಕ್ ರಿಂದ ಪೋಷಿತನಾಗಿದ್ದನು. ಪ್ರಸಿದ್ಧ ಸೂಫಿ ಸಂತರಾದ ನಿಜಾಮುದ್ದೀನ್ ಔಲಿಯ ಸಂಪರ್ಕ ಹೊಂದಿದ್ದನು. ಖುಸ್ರೋನ ಕೃತಿಗಳೆಂದರೆ–

ಎ) **ಖಿರಾನ್ –ಉಸ್– ಸದೈನ್ :–** ಇದು ಸುಲ್ತಾನ ಕೈಕುಬಾದ್ ಮತ್ತು ಅವನ ತಂದೆ ಬುಘ್ರಾಖಾನ್‌ರ ನಡುವಿನ ಭೇಟಿಯ ವಿವರಣೆ ಹಾಗೂ ಭಾರತದ ಸಿರಿಸಂಪತ್ತು ಮತ್ತು ದೆಹಲಿ ನಗರದ ವೈಭವದ ಚಿತ್ರಣ ಒಳಗೊಂಡಿದೆ.

ಬಿ) **ಮಿಫ್ತಾ ಉಲ್ ಪುತು:–** ಇದು ಮಲ್ಲಿಕ್ ಚಚುವಿನ ದಂಗೆಯನ್ನು ಮತ್ತು ಜಲಾಲುದ್ದೀನ್ ಖಿಲ್ಜಿಯ ದಂಡಯಾತ್ರೆಗಳ ಬಗ್ಗೆ ವಿವರಣೆ ನೀಡುತ್ತದೆ.

ಸಿ) **ನ್ಹು ಸಿಪ್ಹಿರ್ :** ಇದು ಸುಲ್ತಾನ್ ಮುಬಾರಕ್ ಷಾ ಖಿಲ್ಜಿಯ ದಂಡಯಾತ್ರೆಗಳ ಕುರಿತದ್ದಾಗಿದೆ.

ಡಿ) **ಆಶಿಖಾ :–** ಇದು ಗುಜರಾತಿನ ರಾಜ ಕರ್ಣದೇವನ ಮಗಳು ದೇವಲದೇವಿ ಮತ್ತು ಅಲ್ಲಾವುದ್ದೀನನ ಮಗ ಖಿಜರ್‌ಖಾನ್‌ರ ನಡುವಿನ ಪ್ರೇಮ ಪ್ರಸಂಗಗಳನ್ನು ಚಿತ್ರಿಸುತ್ತದೆ. ಅಲ್ಲದೆ ಅಲ್ಲಾವುದ್ದೀನ್ ಖಿಲ್ಜಿಯ ಗುಜರಾತ್ ಆಕ್ರಮಣ ಹಾಗೂ ಮಂಗೋಲರು ಖುಸ್ರೋವನ್ನು ಬಂಧಿಸಿದ್ದು ಹಾಗೂ ಅವನು ತಪ್ಪಿಸಿಕೊಂಡಿದ್ದರ ವಿವರಣೆಯಿದೆ.

ಇ) **ತುಘಲಕ್ ನಾಮಾ:–** ಇದು ಕುಸ್ರುಖಾನ್ ಮತ್ತು ಘಿಯಾಸುದ್ದೀನ್ ತುಘಲಕ್‌ರ ನಡುವಿನ ಯುದ್ಧದ ರಾಜತಾಂತ್ರಿಕ ಬಿಕ್ಕಟ್ಟು ಅಂತಿಮವಾಗಿ ಘಿಯಾಸುದ್ದೀನ್ ದೆಹಲಿಯ ವಶದ ಬಗ್ಗೆ ವಿವರಣೆಯಿದೆ.

5) **ಜಿಯಾವುದ್ದೀನ್ ಬರನಿಯ ಬರವಣಿಗೆಗಳು :–** ಬರನಿಯು 1285ರಲ್ಲಿ ಜನಿಸಿದನು. ಇವನು ಘಿಯಾಸುದ್ದೀನ್ ಮತ್ತು ಮಹಮದ್ ಬಿನ್ ತುಘಲಕ್‌ನ ಆಸ್ಥಾನದಲ್ಲಿದ್ದನು. ಈತನು ರಚಿಸಿದ ಕೃತಿಗಳೆಂದರೆ

1) ಸಲತ್ –ಐ–ಕಬೀರ್
2) ಇನಾಯತ್ ನಾಮ –ಐ–ಇಲಾಹಿ
3) ಮಾಸಿರ್ –ಐ–ಸಾದಾತ್.
4) ಹಸರತ್ ನಾಮಾ
5) ತಾರೀಖ್ –ಐ ಭರ್ರಾಭವಯೂನ್
6) ಫತ್ವಾ – ಐ – ಜಹಾಂದರಿ
7) ತಾರಿಖ್ – ಐ – ಫಿರೋಜ್ ಶಾಹಿ

- **ತಾರಿಖ್ –ಐ –ಫಿರೋಜ್ ಷಾಹಿ:** ಇದು ಸುಲ್ತಾನ ಬಲ್ಬನ್, ಖಿಲ್ಜಿ ಸಂತತಿ ಮತ್ತು ತುಘಲಕ್ ಸಂತತಿಗಳ ಬಗ್ಗೆ ಉಪಯುಕ್ತ ಅವನು ಅಲ್ಲಾವುದ್ದೀನ್ ಮಾರುಕಟ್ಟೆ ವ್ಯವಸ್ಥೆ ವಿವರಿಸುವಾಗ "ಹಿಂದೂಗಳು ಮತ್ತು ಕಾಫಿರರು ಕಾಳಸಂತೆ ಮಾರಾಟ ಮಾಡುತ್ತಾರೆ ಎಂದಿದ್ದಾನೆ ಹಾಗೂ ಮಹ್ಮದ್ ಬಿನ್–ತುಘಲಕ್‌ನ ತಾಮ್ರ ನಾಣ್ಯ ಚಲಾವಣೆಯ ಯೋಜನೆಯ ವಿಫಲತೆಗೆ ಕಾರಣ ಪ್ರತಿಯೊಬ್ಬ ಹಿಂದೂವಿನ ಮನೆಯು ಟಂಕಸಾಲೆಯಾಯಿತು" ಎಂದಿದ್ದಾನೆ.

6) **ಷಂಸ್ – ಐ –ಸಿರಾಜ್ ಅಫೀಫ್ ಮತ್ತು ತಾರೀಖ್ – ಐ– ಫಿರೋಜ್ ಷಾಹಿ:–** ಷಂಸ್ –ಐ – ಸಿರಾಜ್ ಅಫೀಫ್ ಈ ಕೃತಿಗಳನ್ನು ರಚಿಸಿದ್ದಾನೆ. ಇವನು ಫಿರೋಜ್ ಷಾನನ ಸಿಂಹಾವರೋಹಣ, ಮಂಗೋಲರ ದಾಳಿ ಅವನ ಯುದ್ಧಗಳ ಬಗ್ಗೆ ಹಾಗೂ ಸಾರ್ವಜನಿಕ ಕಲ್ಯಾಣ ಕಾರ್ಯಗಳ ಬಗ್ಗೆ ಬರೆದಿದ್ದಾನೆ.

7) **ಫುತುಹತ್ – ಐ – ಫಿರೋಜ್ ಷಾಹಿ :–** ಇದನ್ನು ಸ್ವತಃ ಫಿರೋಜ್‌ಷಾನೇ ರಚಿಸಿದ್ದಾನೆ. ಈ ಶೀರ್ಷಿಕೆಯ ಸಾಹಿತ್ಯಕ ಅರ್ಥ "ಫಿರೋಜ್‌ನ ದಿಗ್ವಿಜಯಗಳು" ಎಂದಿದೆ.

8) **ಪುತುಹ್ –ಉಸ್ – ಸಲಾತಿನ್ :–**ಇದನ್ನು ಅಬ್ದುಲ್ಲಾ ಮಲ್ಲಿಕ್ ಅಸಾಮಿ ಬರೆದಿದ್ದಾನೆ. ಇವನು ಮಹ್ಮದ್ ಬಿನ್ ತುಘಲಕ್‌ನ ಸಮಕಾಲೀನ. ತುಘಲಕ್‌ನು ರಾಜಧಾನಿಯನ್ನು ದೌಲತಾಬಾದ್‌ಗೆ ಕೊಂಡೊಯ್ಯುವ ಮಾರ್ಗದಲ್ಲಿ ಇವನು ಅಸುನೀಗಿದನು. ಬಹುಮನಿ ಸಾಮ್ರಾಜ್ಯದ ಮೊದಲ ಸುಲ್ತಾನನಾದ ಮಹ್ಮದ್ ಹಸನ್ ಗಂಗುವಿನ ಆಸ್ಥಾನದಲ್ಲಿ ಇದ್ದನು. ಇದು ಯಾಮಿನಿ ಸಂತತಿಯಿಂದ ತುಘಲಕ್ ಸಂತತಿ ವರೆಗಿನ ಆಳ್ವಿಕೆ ಬಗ್ಗೆ ತಿಳಿಸುತ್ತದೆ.

9) **ರೆಹ್ಲಾ ಪ್ರಸಂಗಗಳು:–** ಇದರ ಕರ್ತೃ ಇಬನ್ ಬತೂತ ಇವನು ಆಫ್ರಿಕಾದ ಮೋರಾಕ್ಕೊ ಮೂಲದವನು. ಮಹ್ಮದ್ ಬಿನ್ ತುಘಲಕ್‌ನು ಇವನನ್ನು ದೆಹಲಿಯ ಖಾಜಿಯನ್ನಾಗಿ ನೇಮಿಸಿದ್ದನು. ನಂತರ ತಾಯ್ನಾಡಿಗೆ ಹೋಗಿ ಮೆಕ್ಕಾದ ಸುಲ್ತಾನನ ಬಳಿ ಆಶ್ರಯ ಪಡೆದನು.

10) **ದುಲ್ಬುಜತ್ –ಐ–ತಿಮುರಿ :** ಇದು ತೈಮೂರ್‌ನ ಆತ್ಮಕಥನ. ಇದರಲ್ಲಿ ತೈಮೂರ್‌ನ ದಾಳಿಯು ತುಘಲಕ್ ಸಂತತಿಯ ಅವನತಿಗೆ ಕಾರಣವಾಯಿತು ಎಂದಿದ್ದಾನೆ.

11) **ತಾರಿಖ್ – ಐ – ಮುಬಾರಕ್ ಷಾಹಿ :–** ಸರ್ ಹಿಂದ್‌ನ ಯಾಹ್ಯಾಬಿನ್ ಅಹ್ಮದ್ ರಚಿಸಿದ್ದಾನೆ. ಇವನು ಸಯ್ಯದ್ ಸಂತತಿಯ ಮುಬಾರಕ್ ಷಾನ ಸಮಕಾಲೀನ. ಸಯ್ಯದ್ ಸಂತತಿ ಬಗ್ಗೆ ತಿಳಿಸುವ ಏಕೈಕ ಕೃತಿಯಾಗಿದೆ.

12) **ವಕೀಯತ್–ಐ–ಮುಸ್ತಖಿ ಮತ್ತು ತಾರಿಖ್ ಐ ಮುಸ್ತಖಿ :–** ಈ ಕೃತಿಗಳ ರಚನಾಕಾರ ಷೇಕ್ ರಿಜುಕುಲ್ಲಾ ಇಂದು ಈ ಎರಡು ಕೃತಿಗಳು ಬ್ರಿಟಿಷ್ ಮ್ಯೂಸಿಯಂನಲ್ಲಿವೆ. ಇದು ಭಾರತದಲ್ಲಿನ ಆಫ್ಘನ್ನರ ಪೂರ್ಣ ಆಡಳಿತವನ್ನು ವಿವರಿಸುತ್ತದೆ.

ದೆಹಲಿ ಸುಲ್ತಾನರ ರಾಜಕೀಯ ಇತಿಹಾಸ

I ಗುಲಾಮಿ ಸಂತತಿ (ಕ್ರಿ.ಶ. 1206 – 1290)
(The Slave Dynesty)

- ಭಾರತದಲ್ಲಿ ಮುಸ್ಲಿಂ ಸಾಮ್ರಾಜ್ಯದ ನಿರ್ಮಾಪಕ ಮಹಮ್ಮದ್ ಘೋರಿ. ಇವನ ಯಶಸ್ವಿ ದಂಡನಾಯಕ ಕುತುಬ್ದೀನ್ ಐಬಕ್‌ನಾಗಿದ್ದು ಭಾರತದಲ್ಲಿ ಘೋರಿಯ ಮುಸ್ಲಿಂ ಸಾಮ್ರಾಜ್ಯ ಸ್ಥಾಪನೆಯ ಗುರಿಯನ್ನು ಕಾರ್ಯತಃ ಇವನು ಸಾಧಿಸಿದನು. ಹಾಗಾಗಿ ಗುಲಾಮಿ ಸಂತತಿಯ ಸ್ಥಾಪಕ ಕುತುಬ್ದೀನ್ ಐಬಕ್‌ನಾಗಿದ್ದಾನೆ.
- ಈ ಸಂತತಿಯ ಮೂವರು ಸುಲ್ತಾನರಾದ ಕುತುಬ್ದೀನ್ ಐಬಕ್, ಇಲ್ತುಮಷ್ ಮತ್ತು ಬಲ್ಬನ್ ಒಂದೇ ಮನೆತನಕ್ಕೆ ಸೇರಿದವರಾಗಿರಲಿಲ್ಲ. ಹಾಗೂ ಅವರು ಹುಟ್ಟಿನಿಂದ ಗುಲಾಮರಾಗಿರದೆ ಬಲವಂತವಾಗಿ ಸೆರೆಹಿಡಿಯಲ್ಪಟ್ಟ ಗುಲಾಮರಾಗಿದ್ದರು,
- ಮಾಮಲುಕ್ ಎಂದರೆ **"ಸ್ವತಂತ್ರ ತಂದೆ ತಾಯಿಗಳಿಗೆ ಜನಿಸಿದ ಗುಲಾಮ"** ಎಂಬುದಾಗಿದೆ.

ಕುತುಬ್ –ಉದ್–ದೀನ್ ಐಬಕ್ (ಕ್ರಿ.ಶ. 1206 –10)
(Qutub ud din Aibak)

- ಮಹ್ಮದ್ ಘೋರಿಯ ಮರಣದ ನಂತರ ಅವನ ಸೋದರಳಿಯನಾದ **'ಘಿಯಾಸುದ್ದೀನ್‌ನು'** ಘೋರಿಯ ರಾಜ್ಯದ ಉತ್ತರಾಧಿಕಾರಿಯಾದನು.
- ಕುತುಬ್ದೀನ್ ಐಬಕ್‌ನು ದೆಹಲಿ ಸುಲ್ತಾನರ ಮೊದಲ ಸಂತತಿ **ಗುಲಾಮಿ ಸಂತತಿ**ಯನ್ನು ಸ್ಥಾಪಿಸಿದನು. ಇವನ ರಾಜಧಾನಿ **"ಲಾಹೋರ್"** ಆಗಿತ್ತು.
- ಕುತುಬ್ದೀನ್ ಎಂದರೆ **"Lord of the Moon"** ಎಂದರ್ಥ. ಗುಲಾಮಿ ಸಂತತಿಯನ್ನು ಇಲ್ಬರಿಯ ವಂಶ / ಟರ್ಕ್ ವಂಶ ಎಂದು ಕರೆಯಲಾಗಿದೆ.
- ಮಹ್ಮದ್ ಘೋರಿಯ ಗುಲಾಮನಾಗಿದ್ದ ಐಬಕ್‌ನು ಘೋರಿಯ ಮರಣದ ನಂತರ ಭಾರತದ ಪ್ರಾಂತ್ಯಗಳ ರಾಜ ಪ್ರತಿನಿಧಿಯಾದನು. ಮಹ್ಮದ್ ಘೋರಿಯ ಪ್ರಮುಖ ದಂಡನಾಯಕರೆಂದರೆ:–

1) **ಕುತುಬ್ದಿನ್ ಐಬಕ್** – ಭಾರತದ ಪ್ರಾಂತ್ಯಗಳ ರಾಜಪ್ರತಿನಿಧಿ.
2) **ತಾಜುದ್ದೀನ್ ಯಾಲ್ದಿಜ್** – ಕೀರ್ಮಾನಿನ ಪ್ರಾಂತ್ಯಾಧಿಕಾರಿ (ಆಫ್ಘನಿಸ್ತಾನ – ಸಿಂದ್ ವರೆಗೆ ಹಾಗೂ ಘಸ್ನಿಯ ಪ್ರಾಂತ್ಯಾಧಿಕಾರಿಯಾಗಿದ್ದ)
3) **ನಾಸಿರುದ್ದೀನ್ ಕ್ವಬಾಚಾ** – ಮುಲ್ತಾನ್ ಮತ್ತು ಉಚ್ ಪ್ರಾಂತ್ಯ.
4) **ಇಕ್ತಿಯಾರುದ್ದೀನ್ ಬಿನ್ ಬಕ್ತಿಯಾರ್** ಖಿಲ್ಜಿ ಬಂಗಾಳ ಮತ್ತು ಬಿಹಾರದ ಪ್ರಾಂತ್ಯಾಧಿಕಾರಿ.

- ತುರ್ಕಿಸ್ತಾನದಲ್ಲಿ ಜನಿಸಿದ ಐಬಕನನ್ನು ವರ್ತಕನೊಬ್ಬನು ಖಾಜಿಯಾದ **'ಫಖರುದ್ದೀನ್ ಅಬ್ದುಲ್'** ಅಜೀಜ್ ಕುಫಿ ಎಂಬಾತನಿಗೆ ಮಾರಿದನು. ನಂತರ ಘಜ್ನಿಗೆ ಕೊಂಡೊಯ್ದು ಐಬಕ್‌ನನ್ನು ಘೋರಿ ಮಹಮ್ಮದ್‌ನಿಗೆ ಮಾರಲಾಯಿತು.
- ಪ್ರಾರಂಭದಲ್ಲಿ ಐಬಕ್‌ನು **'ಅಮೀರ್ – ಇ– ಅಖರ್'** (ಅಶ್ವಶಾಲೆಯ ಅಧಿಪತಿ) ಎಂಬ ಹುದ್ದೆಯಲ್ಲಿದ್ದನು 1192 ರಲ್ಲಿ ನಡೆದ ಎರಡನೇ ತರೈನ್ ಯುದ್ಧದಲ್ಲಿ ಕುತುಬ್ದೀನ್ ಐಬಕ್‌ನು ತೋರಿದ ಸಾಹಸವನ್ನು ಮೆಚ್ಚಿದ ಮಹಮ್ಮದ್ ಘೋರಿಯು ಭಾರತದ ಆಕ್ರಮಣದ ಕಾರ್ಯವನ್ನು ಇವನಿಗೆ ವಹಿಸಿದನು.
- 1194 ರಲ್ಲಿ ಯಮುನಾ ನದಿಯ ದಂಡೆಯ ಹತ್ತಿರ ಚಾಂದಾವಾರ್ ಬಳಿ ಕನೌಜಿನ ರಾಜ ಜಯಚಂದ್ರನನ್ನು ಮತ್ತು 1197ರಲ್ಲಿ ತನಗೆ ಕಿರುಕುಳ ಕೊಟ್ಟ ಗುಜರಾತಿನ ಅನ್ಹಿಲವಾಡದ 2ನೇ ಭೀಮದೇವನನ್ನು ಹಾಗೂ 1202ರಲ್ಲಿ ಬುಂದೇಲ ಖಂಡದ ಕಾಲಿಂಜರ್ ಕೋಟೆಗೆ ಮುತ್ತಿಗೆ ಹಾಕಿ ಚಂದೇಲರ ರಾಜ **"ಪೆರಮರ್ಧಿದೇವ"** ನನ್ನು ಸೋಲಿಸಿ ಅಪಾರ ಐಶ್ವರ್ಯವನ್ನು ಲೂಟಿ ಮಾಡಿದನು. ಈ ಮಧ್ಯೆ ಇಕ್ತಿಯಾರ್ ಉದ್ದೀನ್ ಮಹ್ಮದ್‌ನು ಬಿಹಾರ ಮತ್ತು ಬಂಗಾಳಗಳನ್ನು ಘೋರಿ ಸಾಮ್ರಾಜ್ಯಕ್ಕೆ ಸೇರಿಸಿದ್ದನು.
- ಕುತುಬ್ದೀನ್ ಐಬಕ್‌ನು 1206 ರಲ್ಲಿ ದೆಹಲಿಯ ಸುಲ್ತಾನನಾದಾಗ **'ಮಲಿಕ್ ಮತ್ತು ಸಿಪಾಹ್ ಸಾಲರ್'** ಎಂಬ ಬಿರುದುಗಳಷ್ಟೇ ಇದ್ದವು. ನಂತರ ಘಿಯಾಸುದ್ದೀನ್‌ನು ಐಬಕ್‌ನಿಗೆ ಸುಲ್ತಾನ ಬಿರುದು ಮತ್ತು ಬಿಡುಗಡೆ ಪತ್ರ ಹಾಗೂ ಗದ್ದುಗೆಯ ಪರವಾನಗಿಯ ಪತ್ರವನ್ನು ನೀಡಿದನು.
- ಆರಂಭದಲ್ಲಿ ಕುತುಬ್ದೀನ್ ಐಬಕ್‌ನಿಗೆ ವಿರೋಧಿಯಾಗಿ ದಂಗೆ ಎದ್ದ ತಾಜುದ್ದೀನ್‌ನನ್ನು ಸೋಲಿಸಿ ಅವನ ಮಗಳನ್ನು ವಿವಾಹವಾದನು. ನಂತರ ನಾಸಿರುದ್ದೀನ್‌ನನ್ನು ಸೋಲಿಸಿ ಅವನಿಗೆ ತನ್ನ ಸೋದರಿಯನ್ನು ಮತ್ತು ಇಲ್ತಮಷ್‌ನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು.
- ಐಬಕ್‌ನನ್ನು ಉದಾರತೆಯ ದೃಷ್ಟಿಯಿಂದ **'ಲಾಕ್ ಭಕ್ಷ/ಲಕ್ಷಗಳ ದಾನಿ'** ಎಂದು ಕರೆಯುತ್ತಿದ್ದರು. ಇವನ ಆಸ್ಥಾನದಲ್ಲಿ **ಹಸನ್ ನಿಜಾಮಿ** (ಕೃತಿ: ತಾಜ್ ಉದ್ ನಾಸಿರಿ) ಮತ್ತು **ಪಕ್ರೆ ಮುದಿರ್** (ಕೃತಿ: ತಾರಿಖ್ ಐ ಮುಬಾರಕ್) ಎಂಬ ವಿದ್ವಾಂಸರಿದ್ದರು.
- ಐಬಕ್‌ನ ಕಲಾ ಕೊಡುಗೆ: 1) **ಕುವ್ವೆಯತ್ ಉಲ್ ಇಸ್ಲಾಂ** (ದೆಹಲಿ): ಇದು ಭಾರತದಲ್ಲಿ ನಿರ್ಮಾಣವಾದ ಮೊಟ್ಟಮೊದಲ ಮಸೀದಿಯಾಗಿದೆ. 2) **ಅರಾಯಿ ದಿನಕಾ ಝೋಪ್ರ** (ಅಜ್ಮೀರ) 3) ಕುತುಬ್ ಮಿನಾರ್‌ಗೆ ದೆಹಲಿಯಲ್ಲಿ ಬುನಾದಿ ಹಾಕಿದನು. ಆದರೆ ಇಲ್ತುಮಷ್‌ನು ಕುತುಬ್‌ಮಿನಾರ್ ಕಟ್ಟಡವನ್ನು ಪೂರ್ಣಗೊಳಿಸಿದನು.
- ಕ್ರಿ.ಶ.1210 ರಲ್ಲಿ ಐಬಕ್‌ನು ಚೌಗನ್ ಅಥವಾ ಪೋಲೋ ಆಟವಾಡುತ್ತಿದ್ದಾಗ ಕುದುರೆಯ ಮೇಲಿಂದ ಬಿದ್ದು ಮರಣ ಹೊಂದಿದನು. ಇವನ ಸಮಾಧಿ ಲಾಹೋರ್‌ನಲ್ಲಿದೆ.

- ಐಬಕ್‌ನ ಮರಣದ ನಂತರ ಆರಾಮ್‌ಷಾ ಒಂದು ವರ್ಷ ಅಧಿಕಾರ ನಡೆಸಿದನು.

ಇಲ್ತಮಷ್ (Iltutmish) **(ಕ್ರಿ.ಶ.1211 – 1236)**

ರಾಜಧಾನಿ ಲಾಹೋರ್ ನಿಂದ ದೆಹಲಿಗೆ ವರ್ಗಾವಣೆ ಮಾಡಿದನು.

- ಷಮ್ಸ್ ಉದ್ ದೀನ್ ಇಲ್ತಮಷನು ಮಧ್ಯ ಏಷ್ಯಾದ **'ಇಲ್ಬರಿ ಪಂಗಡ'ಕ್ಕೆ** ಸೇರಿದ ಟರ್ಕ್ ದಂಪತಿಗಳಿಗೆ ಜನಿಸಿದನು. ಇವನ ತಂದೆ ಇಲಂಖಾನ್.
- ಇಲ್ತಮಷ್‌ನನ್ನು ಅವನ ಸೋದರರು **ಜಲಾಲೂದ್ದೀನ್‌ಗೆ** ಮಾರಿದರು. ಇವನನ್ನು ಘಜ್ನಿಗೆ ಕೊಂಡೊಯ್ದು ನಂತರ ಮತ್ತೆ ವಾಪಸ್ ದೆಹಲಿಗೆ ಕರೆದೊಯ್ದು ಕುತುಬ್‌ದ್ದೀನ್ ಐಬಕ್‌ನಿಗೆ ಮಾರಿದನು. ಐಬಕ್‌ನಿಗಿಂತ ಮೊದಲೇ ಗುಲಾಮಗಿರಿಯಿಂದ ಬಿಡುಗಡೆಗೊಂಡು ಅಮೀರ್ ಉಲ್ ಉಮ್ರಾ ಪದವಿಗೇರಿದ್ದ ಇವನು ಐಬಕ್‌ನ ಅಳಿಯನಾಗಿ **"ಬಿದ್ವಾನ"** ಪ್ರಾಂತ್ಯಾಧಿಕಾರಿಯಾಗಿದ್ದನು.
- 1211ರಲ್ಲಿ ದೆಹಲಿ ಸುಲ್ತಾನನಾದ ಮೇಲೆ ದಂಗೆಯೆದ್ದ ಯಾಲ್ದಿಜ್ ಮತ್ತು ಕ್ವಬಾಚರನ್ನು ಕೊಂದು ಉತ್ತರ ಭಾರತದಲ್ಲಿ ಟರ್ಕ್ ಶಕ್ತಿಯನ್ನು ಸಂಘಟಿಸಿದನು.
- 1206ರಲ್ಲಿ ಐಬಕ್‌ನಿಂದ ಬಂಗಾಳದ ಪ್ರಾಂತ್ಯಾಧಿಕಾರಿಯಾಗಿ ಖಿಲ್ಜಿ ಸಂತತಿಯ ಆಲಿಮರ್ದಿಖಾನ್ ನೇಮಕವಾದನು.
- 1229ರಲ್ಲಿ ಬಾಗ್ದಾದನ್ನು ಆಳುತ್ತಿದ್ದ ಖಲೀಫ ಅಲ್ ಮಸ್ತನ್ಸೀರ್ ಬಿಲ್ಲಾನು ಇಲ್ತಮಷ್ ನಿಗೆ **"ಸುಲ್ತಾನ ಇ ಅಜಮ್** (ಮಹಾಸುಲ್ತಾನ) ಎಂಬ ಬಿರುದನ್ನು ನೀಡಿದನು. ಖಲೀಫನ ಈ ಅಧಿಕಾರ ಲಾಂಛನದಿಂದ 'ದೆಹಲಿಯ ಸುಲ್ತಾನರ ಮೇಲೆ ಖಲೀಫರ ಅಧಿಕಾರ ಕಲ್ಪನೆ ಬಲಗೊಂಡಿತು. ಇದರಿಂದಾಗಿ ಇಲ್ತಮಷನು ತನ್ನ ನಾಣ್ಯಗಳ ಮೇಲೆ ತಾನು **"ಖಲೀಫನ ಪ್ರತಿನಿಧಿ"** ಎಂದು ಹೇಳಿಕೊಂಡಿದ್ದಾನೆ.
- ಇಲ್ತಮಷ್‌ನು ದೆಹಲಿಯ ಟರ್ಕಿ ಸುಲ್ತಾನರ ನಿಜವಾದ ಮೊದಲ ಸುಲ್ತಾನ ಎಂಬುದಾಗಿ ಖಲೀಫನು ಒಪ್ಪಿಕೊಂಡಿದ್ದನು. ಇವನು ದೆಹಲಿ ಸುಲ್ತಾನರಿಗೆ ನಿರ್ದೇಶನ ಒಂದು ಆಡಳಿತ ವ್ಯವಸ್ಥೆ ಮತ್ತು ಆಳುವ ಮಾರ್ಗ ರೂಪಿಸಿಕೊಟ್ಟನು.
- ಬಂಗಾಳದಲ್ಲಿ ಘಿಯಾಸುದ್ದೀನ್ ಸ್ವತಂತ್ರನಾಗಿ ಬಿಹಾರವನ್ನು ಆಕ್ರಮಿಸಿ ಕಪ್ಪ ವಸೂಲಿ ಮಾಡುತ್ತಿದ್ದನು. ಈ ಸಮಯದಲ್ಲಿ ಬಂಗಾಳದತ್ತ ದಾವಿಸಿದ ಇಲ್ತಮಷ್‌ನು ಘಿಯಾಸುದ್ದೀನನ್ನು ಸೋಲಿಸಿ ಬಿಹಾರಕ್ಕೆ **'ಮಲ್ಲಿಖ್ ಜಾನಿ'** ಎಂಬುವವನನ್ನು ರಾಜ್ಯಪಾಲನನ್ನಾಗಿ ನೇಮಿಸಿದನು.
- ಕ್ರಿ.ಶ.1221ರಲ್ಲಿ ಪ್ರಥಮ ಬಾರಿಗೆ ಸಿಂದ್ ಪ್ರಾಂತ್ಯದಲ್ಲಿ **ಚಂಗೇಸ್‌ಖಾನ್‌ನ** ನೇತೃತ್ವದಲ್ಲಿ **ಮಂಗೋಲರು** ಇಲ್ತಮಷ್ ಕಾಲದಲ್ಲಿ ಕಾಣಿಸಿಕೊಂಡರು. ಚಂಗೇಸ್‌ಖಾನ್‌ನು ಮಧ್ಯ ಮತ್ತು

ಖ್ವಾರಜಂ ರಾಜ್ಯದ ಕೊನೆಯ ಷಹನಾದ **"ಜಲಾಲುದ್ದೀನ್ ಮಾಂಬರಗನೀ"** ಎಂಬಾತನನ್ನು ಎದುರಿಸಿದಾಗ ಅವನು ಪಂಜಾಬ್ ಪ್ರದೇಶಕ್ಕೆ ಬಂದು ಇಲ್ತಮಷ್‌ನ ಆಶ್ರಯ ಬೇಡಿದನು. ಆದರೆ ಅವನು ಕೊಡಲಿಲ್ಲ.

- ಮಾಂಬರಗನೀ ಖೋಕಾಕರ ನಾಯಕ ರಾಯ್ ಖೋಕಾರ್ ಸಂಕಿನ್‌ರ ಮಗಳನ್ನು ವಿವಾಹವಾಗಿ ಸಿಂದ್‌ನ ಕ್ವಬಾಚನನ್ನು ಸೋಲಿಸಿ ಗುಜರಾತ್‌ನ್ನು ಸೂರೆ ಮಾಡಿ ಪರ್ಷಿಯಾಕ್ಕೆ ಹೋದನು.
- ಇಲ್ತಮಷ್‌ನು **"ಚಹಲ್ಗಾನಿ 40 ಜನ ನೋಬಲ್ಲರ ಕೂಟ"** ವನ್ನು ಸ್ಥಾಪಿಸಿದನು. ಇದನ್ನು "ಟರ್ಕಾನ್ ಇ ಚಹಲ್ಗಾನಿ" ಎಂದು ಸಹ ಕರೆಯಲಾಗಿದೆ.
- ಇಲ್ತಮಷ್‌ನು ತನ್ನ ಆಸ್ಥಾನದಲ್ಲಿ "ಪರ್ಷಿಯನ್ ಸಂಪ್ರದಾಯಗಳನ್ನು" ಆಚರಣೆಗೆ ತಂದನು.
- ಇಲ್ತಮಷ್‌ನ ಆಸ್ಥಾನದಲ್ಲಿದ್ದ ವಿದ್ವಾಂಸರೆಂದರೆ ಮಿನ್ಹಾಜ್ ಉಸ್ ಸಿರಾಜ್, ತಾಜುದ್ದೀನ್ ನಿಜಾಮ್ ಮುಲ್ಕ್, ಮಹ್ಮದ್ ಜುನೈದಿ, ಹಸನ್ ಘೋರಿ ಮತ್ತು ಫಕ್ರುದ್ದೀನ್ ಮುಲ್ಕ್ ಇಸಾಮಿ ಮುಂತಾದವರು.
- ದೆಹಲಿಯಲ್ಲಿ ಕ್ರಿ.ಶ. 1231–32ರಲ್ಲಿ ಕಟ್ಟಿ ಮುಗಿಸಿದ **"ಕುತುಬ್ ಮಿನಾರ್"** ಗೋಪುರವನ್ನು ಪೂರ್ಣಗೊಳಿಸಿ ಅದನ್ನು ಸೂಫಿಸಂತ **"ಕುತುಬ್ದೀನ್ ಭಕ್ತಿಯಾರ್ ಖಾಕಿ"**ಗೆ ಅರ್ಪಿಸಿದನು. ಇಲ್ತಮಷ್‌ನು ಗೋಪುರದ ಮೇಲೆ ತನ್ನ ಪೋಷಕನಾದ 'ಸುಲ್ತಾನ್ ಕುತುಬ್ದೀನ್' ಮತ್ತು ಸುಲ್ತಾನ್ ಮಹಿಬುದ್ದೀನ್ ಇವರ ಹೆಸರುಗಳನ್ನು ಕೃತಜ್ಞತೆಯಿಂದ ಕೆತ್ತಿಸಿದ್ದಾನೆ.
- ಇಲ್ತಮಷ್‌ನು "ಭಗವಂತನು ಭೂಮಿಯ ರಕ್ಷಕ, ಭಗವದ್ಭಕ್ತರ ಸೇವಕ" ಎಂಬುದಾಗಿ ಮಿನ್ಹಾಜ್ – ಉಸ್ – ಸಿರಾಜ್‌ನು ವರ್ಣಿಸಿದ್ದಾನೆ.
- ಇಲ್ತಮಷ್‌ನು ಕಂದಾಯ ವ್ಯವಸ್ಥೆಯಲ್ಲಿ **ಇಕ್ತಾ ವ್ಯವಸ್ಥೆ** ಜಾರಿಗೆ ತಂದನು . ಇದನ್ನು ಜಾರಿಗೆ ತರಲು ಎರಡು ಉದ್ದೇಶಗಳಿದ್ದವು 1) ಹೊಸದಾಗಿ ಜಯಿಸಿದ ಪ್ರದೇಶಗಳನ್ನು ಸಂಘಟಿಸಿ ಹತೋಟಿಯಲ್ಲಿಡುವುದು. 2) ಹಿಂದಿನಿಂದಲೂ ಆಡಳಿತ ವ್ಯವಸ್ಥೆಯಲ್ಲಿದ್ದ ಉಳಿಗಮಾನ್ಯ ವ್ಯವಸ್ಥೆಯನ್ನು ನಾಶಗೊಳಿಸುವುದು.
- ಇಕ್ತಾ ವ್ಯವಸ್ಥೆಯನ್ನು ಸಣ್ಣ ಜಹಗೀರುಗಳು/ಸೈನಿಕ ಭೂ ಮಾನ್ಯಗಳು ಎಂತಲೂ ಕರೆಯುವರು.
- **'ಅರಾಬಿಕ್'** ನಾಣ್ಯ ವ್ಯವಸ್ಥೆಯನ್ನು ಜಾರಿಗೆ ತಂದ ಪ್ರಥಮ ಟರ್ಕಿಸ್ಕ್ ದೊರೆ ಇಲ್ತಮಷ್. ಇವನು **'ಬೆಳ್ಳಿಯ ಟಂಕಾ'** ಮತ್ತು **'ತಾಮ್ರದ ಜಿತಾಲ್'** ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇವುಗಳನ್ನು ಕುರಿತು ಥಾಮಸ್ ರವರು ; "ದೆಹಲಿಯ ಪಠಾಣ ಅರಸರ ನಾಣ್ಯಗಳಿಗೆ ನಿಜವಾದ ತಳಹದಿ" ಎಂದಿದ್ದಾರೆ.

ರಜೀಯಾ ಸುಲ್ತಾನ (Raziya Sultan **ಕ್ರಿ.ಶ. 1236 –40)**

- ಮಧ್ಯಕಾಲೀನ ಭಾರತದ ಇತಿಹಾಸದ ಪ್ರಥಮ ಹಾಗೂ ಕೊನೆಯ

- ಇಲ್ತುಮಷ್‌ನು ಗ್ವಾಲಿಯಾರ್ ದಾಳಿಗೆ ಹೋಗಿದ್ದಾಗ ರಾಜಧಾನಿಯ ಆಡಳಿತವನ್ನು ತನ್ನ ಮಗಳಾದ ರಜೀಯಾ ಸುಲ್ತಾನಳಿಗೆ ವಹಿಸಿದ್ದನು. ನಂತರ ಹಿಂದಿರುಗಿದಾಗ ಇವಳ ಆಡಳಿತವನ್ನು ನೋಡಿ ಸಂತೃಪ್ತಗೊಂಡ ಇಲ್ತಮಷ್ ಮುಂದೆ ತನ್ನ ನಾಣ್ಯಗಳಲ್ಲಿ ಸುಲ್ತಾನ ಮತ್ತು ರಜೀಯಾಳ ಹೆಸರನ್ನು ಜೊತೆಯಲ್ಲಿ ಅಚ್ಚು ಹಾಕಿಸಿದನು.
- ರಜೀಯಾಳ ಅಧೀನದಲ್ಲಿ ಕೆಲಸ ಮಾಡದೆ ಆಸ್ಥಾನದ ನೊಬೆಲ್ಲರು ಇಲ್ತಮಷ್‌ನ ಹಿರಿಯ ಮಗನಾದ **"ರಕ್ನುದ್ದೀನ್ ಫಿರೋಜ್ ಷಾ"**ನನ್ನು ಅಧಿಕಾರಕ್ಕೆ ತಂದರು.
- ಇವನ ಕಾಲದಲ್ಲಿ ಫಿರೋಜ್‌ನ ಸೋದರನಾದ ಘಿಯಾಸುದ್ದೀನ್‌ನು ಔದ್‌ನ ರಾಜ್ಯಪಾಲನಾಗಿದ್ದು ಬಂಗಾಳದಿಂದ ದೆಹಲಿಯವರೆಗೆ ಲೂಟಿ ಮಾಡಿದನು. ಫಿರೋಜನ ಕಾಲದ ವಜೀರ್-ಮಹ್ಮದ್ ಜುನ್ಯೆದಿ.
- ಫಿರೋಜ್‌ನ ವಿರುದ್ಧ ದಂಗೆ ಎದ್ದವರು:

1) ಬದಾಯುನ್ ಇಕ್ತಾದಾರ (ಗವರ್ನರ್) ಮಲ್ಲಿಕ್ ಇಜುದ್ದೀನ್ ಸಲಾದಿ.
2) ಮುಲ್ತಾನಿನ ಇಕ್ತಾದಾರ (ಗವರ್ನರ್) ಕಬೀರ್ ಖಾನ್ ಅಯಾಜ್
3) ಹನ್ಸಿಯಾ ಇಕ್ತಾದಾರ (ಗವರ್ನರ್) ಮಲ್ಲಿಕ್ ಸೈಫುದ್ದೀನ್ ಕುಚಿ
4) ಲಾಹೋರಿನ ಇಕ್ತಾದಾರ (ಗವರ್ನರ್) ಮಲ್ಲಿಕ್ ಅಲ್ಲಾವುದ್ದೀನ್ ಜಾನಿ

- ಎಲ್ಲರೂ ಒಟ್ಟುಗೂಡಿ ದಂಗೆ ಎದ್ದರು. ನಂತರ ಫಿರೋಜ್‌ನ 7 ತಿಂಗಳ ಆಳ್ವಿಕೆ ಕೊನೆಗೊಂಡು ರಜೀಯಾ ಸುಲ್ತಾನಳಾದಳು. ಮೇಲಿನ ಇಕ್ತಾದಾರ್‌ಗಳು ಇವಳ ಆಡಳಿತ ವಿರೋಧಿಯಾಗಿದ್ದರು. ಮಹಮ್ಮದ್ ಜುನ್ಯೆದಿಯನ್ನು ಕೊಲೆ ಮಾಡಿಸಿದಳು.

ರಜೀಯಾ ಸುಲ್ತಾನ ಕಾಲದ ಆಡಳಿತಾಧಿಕಾರಿಗಳು

1) ಮಹಜಬುದ್ದೀನ್- ವಜೀರನಾಗಿದ್ದನು.
2) ಕಬೀರ್ ಖಾನ್ ಅಯಾಜ್-ಲಾಹೋರಿನ ಇಕ್ತಾದಾರ.
3) ಹಸನ್ ಘೋರಿ-ಸೈನ್ಯದ ಮುಖ್ಯಸ್ಥ.
4) ಇಕ್ತಿಯಾರುದ್ದೀನ್ ಐತಿಗನ್-ಅಮಿರ್ ಐ ಹಾಟಿಜ್.
5) ಇಕಿಯಾರುದ್ದೀನ್ ಅಲ್ತೂನಿಯಾನ್-ಬತಿಂದ ಗೌರ್ನರ್. (ಇವನು 40 ಗುಂಪಿನವರಾಗಿದ್ದರು)
6) ಅಬಿಸಿನಿಯಾದ ಜಲಾಲುದ್ದೀನ್ ಯಾಕುತ್ ಅಮಿರ್-ಐ-ಅಕುರ್ (ಅಶ್ವ ಶಾಲೆಯ ಅಧಿಪತಿ)
7) ಮಹಾಷಾಬುದ್ದೀನ್ ದೆಹಲಿಯ ವಜೀರ.

- ನೂರುದ್ದೀನ್ ತುರ್ಕನ ನಾಯಕತ್ವದಲ್ಲಿ ಕಿರಾಮಿತಾ ಮತ್ತು ಮುಲ್ಹಾದ ಪಂಥದವರು ರಜೀಯಾ ವಿರುದ್ಧ ದಂಗೆಯೆದ್ದರು. ಜಲಾಲುದ್ದೀನ್ ಯಾಕುತನನ್ನು ನೊಬೆಲ್ಲರು ಕೊಂದು ರಜೀಯಾಳನ್ನು ಸೆರೆಹಿಡಿದು ಅಲ್ತೂನಿಯಾನ್‌ಗೆ ಒಪ್ಪಿಸಿ, [illegible] ತಂದರು. ಅಲ್ತೂನಿಯಾನ್ ರಜೀಯಾಳನ್ನು ವಿವಾಹವಾಗಿದ್ದನು.

ನಾಸಿರುದ್ದೀನ್ ಮಹಮ್ಮದ್ (ಕ್ರಿ.ಶ. 1246 – 65) (Nasir ud din Mahmud)

- ರಜೀಯಾಳ ನಂತರ ಕ್ರಿಶ 1240ರವರೆಗೆ ಬಹ್ರಾಮ್‌ಷಾ, ಆನಂತರ 1242-46ರವರೆಗೆ ಅಲ್ಲಾವುದ್ದೀನ್ ಮಾಸೂದ್‌ಷಾನು ಆಳ್ವಿಕೆ ಮಾಡಿದರು.
- 1241ರಲ್ಲಿ ಮಂಗೋಲರು ಪಂಜಾಬಿನ ಮಧ್ಯಭಾಗ ಪ್ರವೇಶಿಸಿ ಲಾಹೋರ್ ಮೇಲೆ ಹತೋಟಿ ಸಾಧಿಸಿದ್ದರು.
- ನಾಸಿರುದ್ದೀನ್ ಅಧಿಕಾರಕ್ಕೆ ಬಂದ ಮೇಲೆ ಸುಲ್ತಾನ ಮತ್ತು ಟರ್ಕ್ ಗುಲಾಮರ ನಡುವೆ ಅಧಿಕಾರ ಕಲಹ ಅಂತ್ಯ ಗೊಂಡಿತು.
- ನಾಸಿರುದ್ದೀನ್ ಆಸ್ಥಾನದಲ್ಲಿದ್ದ ವಿದ್ವಾಂಸ ಮಿನಾಜ್ ಉಸ್ ಸಿರಾಜ್(ಕೃತಿ: ತಬಕತ್ ನಾಸಿರಿ)
- ನಾಸಿರುದ್ದೀನ್ ಮಹ್ಮದ್‌ನನ್ನು ಬಲ್ಬನ್‌ನು ವಿಷ ಉಣಿಸಿ ಕೊಂದನು.

ಘಿಯಾಸ್ ಉದ್ ದೀನ್ ಬಲ್ಬನ್ (ಕ್ರಿ.ಶ.1266-86) (Ghiyas- ud -din -Balban)

- ಬಲ್ಬನ್‌ನು ನಾಸೀರುದ್ದೀನ್‌ನ ನಾಯಿಬ್‌ನಾಗಿ 20 ವರ್ಷಗಳ ಕಾಲ ಹಾಗೂ ಸುಲ್ತಾನನಾಗಿ 20 ವರ್ಷಗಳ ಕಾಲ ಆಡಳಿತ ನಡೆಸಿದನು. **'ಬಲ್ಬನಿ'** ಎಂಬ ಹೊಸ ಸಂತತಿಗೆ ಅಸ್ಥಿಬಾರ ಹಾಕಿದನು. ಬಲ್ಬನ್‌ನು ಮಸೂದ್ ಷಾನ ಮಗಳು ಮತ್ತು ನಾಸೀರುದ್ದೀನ್‌ನ ಮಗಳನ್ನು ವಿವಾಹವಾಗಿದ್ದನು.
- ಬಲ್ಬನ್ನನ ಮೂಲ ಹೆಸರು ಬಹಾವುದ್ದೀನ. ಇವನು ಟರ್ಕ್‌ಸ್ಥಾನದ ಇಲ್ಬರಿ ಪಂಗಡಕ್ಕೆ ಸೇರಿದ್ದನು. ಚಿಕ್ಕವನಿದ್ದಾಗ ಮಂಗೋಲರು ಬಲ್ಬನ್‌ನನ್ನು ಸೆರೆ ಹಿಡಿದು ಘಜ್ನಿಗೆ ಕೊಂಡೊಯ್ದು "ಖ್ವಾಜಾ ಜಮಾಲುದ್ದೀನನಿಗೆ ಮಾರಿದರು. ನಂತರ ಜಮಾಲ್‌ನು 1232 ರಲ್ಲಿ ದೆಹಲಿಗೆ ಬಲ್ಬನನ್ನು ಕರೆತಂದು ಇಲ್ತಮಷ್‌ನಿಗೆ ಮಾರಿದನು.
- ಇಲ್ತಮಷ್‌ನ ತುರ್ಕಿ ಗುಲಾಮರ ತಂಡವಾದ **"ನಲವತ್ತು ಮಂದಿ ಗುಲಾಮರು"** (ತುರ್ಕನ್ -ಐ-ಚಹಲ್ಗಾನಿ) ಎಂಬ ಪ್ರಸಿದ್ಧ ಪಂಗಡಕ್ಕೆ ಬಲ್ಬನ್ ಸೇರಿಕೊಂಡನು (ಇವನ ಮಗ ಬುಗ್ರಾಖಾನ್)
- ಇಲ್ತಮಷ್‌ನು ಬಲ್ಬನ್‌ನನ್ನು ಖಾಸ್‌ದಾರ್/ರಾಜನ ಖಾಸಗಿ ಸೇವಕನಾಗಿ, ರಜೀಯಾಳು ಇವನನ್ನು ಅಮೀರ್-ಐ-ಷಿಕಾರ್ ಆಗಿ ನೇಮಿಸಿದ್ದರು. (ನಾಸಿರುದ್ದೀನನ್ನು ಅಧಿಕಾರಕ್ಕೆ ತರುವಲ್ಲಿ ಬಲ್ಬನ್ ಪ್ರಮುಖ ಪಾತ್ರ ವಹಿಸಿದ್ದನು) ಹಾಗೂ ಮಸೂದ್‌ಷಾನು 'ಹನ್ಸಿ ಪ್ರಾಂತ್ಯದ ಜಹಗೀರನ್ನು ನೀಡಿದ್ದನು. ವಜೀರ ಅಬುಬಕರ್‌ನು ಬಲ್ಬನನನ್ನು ಅಮೀರ್ ಐ ಹಾಟಿಜ್ ಹುದ್ದೆಗೆ ನೇಮಿಸಿದ್ದನು. ನಾಸೀರುದ್ದೀನನಿಂದ **ಉಲುಗ್‌ಖಾನ್** ಎಂಬ ಬಿರುದನ್ನು ಪಡೆದಿದ್ದನು.
- ಇವನ ಏಳಿಗೆಯನ್ನು ಸಹಿಸದ ಟರ್ಕಿ ನೋಬಲ್ಲರು ರೈಹಾನ್ ನೇತೃತ್ವದಲ್ಲಿ ಬಲ್ಬನ್ ವಿರುದ್ಧ ಕೂಟ ರಚಿಸಿದರು. ರೈಹಾನ್ ಸತಃ ವಕೀಲ್ ದಾರ್ (ಪ್ರಧಾನ ಮಂತ್ರಿ) ಪದವಿಗೇರಿದನು.

ಮುಸ್ಲಿಂನಾಗಿದ್ದನು. ರೈಹಾನ್ ಪತನದೊಂದಿಗೆ ನಾಸೀರುದ್ದೀನನ ಅಂತ್ಯದವರೆಗೂ ಬಲ್ಬನ್‌ನು ರಾಜ್ಯದ ಏಕಮೇವ ಅಧಿಕಾರಿಯಾದನು.

- ಬಲ್ಬನ್ನನು ತನ್ನ ಅನರ್ಹತೆಯನ್ನು ಯಾರು ಪ್ರಶ್ನಿಸದಂತೆ ಮಾಡಲು 'ಸುಲ್ತಾನನು ಭಗವಂತನ ಪ್ರತಿನಿಧಿಯೆಂದು ಜಗತ್ತಿನ ಒಳಿತಿಗಾಗಿ ಭೂಮಿಗಿಳಿದಿರುವ ದೇವದೂತನೆಂಬ ಸಿದ್ಧಾಂತವನ್ನು ಮಂಡಿಸಿದನು.
- ಬಲ್ಬನ್ನನು ದೆಹಲಿ ಸುಲ್ತಾನರಲ್ಲೇ ಮೊದಲಿಗೆ ರಾಜತ್ವ ಸಿದ್ಧಾಂತ ಮಂಡಿಸಿದನು. ಇದರ ಎರಡು ಅಂಶಗಳೆಂದರೆ:– ರಾಜತ್ವವು ದೈವಸಂಕಲ್ಪವಾದುದು ಹಾಗೂ ಸುಲ್ತಾನನು ನಿರಂಕುಶಾಧಿಕಾರಿಯಾಗಲು ದೈವಿಕ ಸಿದ್ಧಾಂತ ಅವಶ್ಯಕ.
- ದೇವರು ತನ್ನ ಪ್ರತಿನಿಧಿಯಾಗಿ ನನ್ನಂತಹ ರಾಜರನ್ನು ಭೂಮಿಗೆ ಕಳುಹಿಸಿಕೊಟ್ಟಿದ್ದಾನೆ. **ರಾಜನು ದೇವರ ನೆರಳು (ಜಿಲ್ ಜಿಲಾಹಿ)** ಭೂಮಿಯನ್ನು ಮತ್ತು ಜನರನ್ನು ಉಜ್ವಲಗೊಳಿಸಲು ದೇವರು ಭೂಮಿಯ ಮೇಲೆ ನನ್ನನ್ನು ಸೃಷ್ಟಿಸಿದ್ದಾನೆ ಎಂದು ಬಲ್ಬನ್ನನು ನೋಬೆಲ್ಲರಿಗೆ ತಿಳಿಸಿದ್ದನು.
- ಬಲ್ಬನ್ನನು ದೈವಿಕ ಸಿದ್ಧಾಂತದ ರಾಜತ್ವದ ಕಲ್ಪನೆಯನ್ನು ಆಚರಣೆಗೆ ತರಲು ಪ್ರಯತ್ನಿಸಿದನು. ಮದ್ಯಸೇವನೆಯನ್ನು ಮತ್ತು ಭೋಗಲಾಲಾಸೆಗಳಿಂದ ಕೂಡಿದ ಕೂಟಗಳನ್ನು ತ್ಯಜಿಸಿದನು. ಜನರನ್ನಾಗಲೀ ಅಥವಾ ನೋಬಲ್ಲರನ್ನಾಗಲೀ ಭೇಟಿ ಮಾಡುವುದನ್ನು ನಿಲ್ಲಿಸಿದನು.
- ಪರ್ಷಿಯಾದ ಆಸ್ಥಾನ ಮರ್ಯಾದೆಗಳನ್ನು ಹಾಗೂ ನಿಯಮಾಚರಣೆಗಳನ್ನು ತನ್ನ ಆಸ್ಥಾನದಲ್ಲಿ ಜಾರಿಗೆ ತಂದನು. ಇವನು **'ಜಮಿನ್‌ಬಾಸ್' ಮತ್ತು ಪೈಬೋಸ್** (ಸುಲ್ತಾನನ ಆಸ್ಥಾನಕ್ಕೆ ಬರುವವರು ಸುಲ್ತಾನನಿಗೆ ಪ್ರಣಾಮ ಸಲ್ಲಿಸುವುದು ಮತ್ತು ಸುಲ್ತಾನನ ಪಾದಗಳಿಗೆ ಮುತ್ತಿಡುವುದು) ಗಳನ್ನು ಆಚರಿಸಲು ಸೂಚಿಸಿದನು.
- ಬಲ್ಬನ್‌ನು **'ನವರೌಜ್ ಆಚರಣೆಯನ್ನು'** ಜಾರಿಗೆ ತಂದನು.
- ಬಲ್ಬನ್ನನ ಸಮಕಾಲೀನ ವಿದ್ವಾಂಸ **"ಭಾರತದ ಗಿಳಿ ಅಮೀರ್ ಖುಸ್ರೋ"**.
- ಇಲ್ತುಮಿಷ್‌ನ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ತುರ್ಕಿ ಗುಲಾಮಿ ನೋಬೆಲ್ಲರ "ನಲ್ವತ್ತರ ಗುಂಪು" "ತುರ್ಕ್–ಐ– ಚಹಲ್ಗಾನಿ" ಗುಂಪನ್ನು ನಾಶಪಡಿಸಿದನು.
- ಬದ್ವಾನ್ ಪ್ರಾಂತ್ಯದ ಗೌರ್ನರ್ ಆಗಿ ಮಲ್ಲಿಕ್ ಬಾಕಬಾಕ್ ಹಾಗೂ ಔದ್‌ನ ಗೌರ್ನರ್ ಆಗಿ ಹೈಬತ್‌ಖಾನ್‌ರಿದ್ದರು.
- ಇಮಾದುಲ್ ಮುಲ್ಕ್ ಎಂಬುವನನ್ನು ದಿವಾನ್–ಐ–ಆರಿಜ್ (ಸೈನ್ಯದ ಮುಖ್ಯಾಧಿಕಾರಿ) ನನ್ನಾಗಿ ನೇಮಿಸಿದ್ದನು. ಸೈನಿಕ ಕಾರ್ಯಚರಣೆ ಸಂದರ್ಭದಲ್ಲಿ ಅಸಕ್ತರು ಮತ್ತು ಬಡವರಿಗೆ ಹಿಂಸಿಸಬಾರದೆಂದು ತಿಳಿಸಿದ್ದನು.
- ಸೈನಿಕ ಸೇವೆಗೆ ಅನರ್ಹರಾದ ವೃದ್ಧರು, ವಿಧವೆಯರು ಮತ್ತು ಅನಾಥರಿಗೆ ಭೂಮಿಗೆ ಬದಲಾಗಿ ಹಣದ ರೂಪದಲ್ಲಿ ಜೀವನಾಧಾರ ಭತ್ಯೆ ನೀಡದಂತೆ ವ್ಯವಸ್ಥೆಗೊಳಿಸಿದ್ದನು.
- **ಗೂಢಾಚಾರ ವ್ಯವಸ್ಥೆಯು** ಅರೆ ಸೈನಿಕ ಮತ್ತು ಅರೆ ನಾಗರೀಕ ಆಡಳಿತಾಂಶಗಳಿಂದ ಕೂಡಿತ್ತು. ಬಲ್ಬನ್‌ನ ಯಶಸ್ವಿಯುತ ಆಳ್ವಿಕೆಗೆ ಅವನ ಗೂಢಾಚಾರ ವ್ಯವಸ್ಥೆಯೇ ಪ್ರಮುಖ ಕಾರಣ. ಗೂಢಾಚಾರರನ್ನು **'ಬರೀದರು'** ಎನ್ನಲಾಗುತ್ತಿತ್ತು.
- ದೋಅಬ್, ಬದೌನ್, ಅಮ್ರೋಹ, ಕಾಥೆಹಾರ್ ಮುಂತಾದ ಕಡೆ ದಂಗೆ ಎದ್ದ ಹಿಂದೂಗಳನ್ನು ಸೋಲಿಸಿದನು. 1267ರಲ್ಲಿ ತಾನೇ ಸ್ವತಃ ಹೋಗಿ ಕಂಪಿಲ್, ಪಾಟಿಯಾಲ ಮತ್ತು ಭೋಜಪುರಗಳ ದಂಗೆಗಳನ್ನು ಅಡಗಿಸಿದನು.
- ಬಲ್ಬನನ್ನು ತುಘ್ರಿಲ್ ಖಾನನನ್ನು ಸೋಲಿಸಿ ಬಂಗಾಳವನ್ನು ವಶಪಡಿಸಿಕೊಂಡನು.
- ವಾಯುವ್ಯ ಗಡಿಯ ಮೇಲೆ ಮಂಗೋಲರು ಕಣ್ಣಿಟ್ಟಿದ್ದರು. ಅಲ್ಲಿ ಷೇರ್‌ಖಾನನು ಆಳುತ್ತಿದ್ದನು. ಇವನು ಮಂಗೋಲರ ಖೋಕಾರನ್ನು ತಡೆಗಟ್ಟಿದ್ದನು. ಇವನ ಶಕ್ತಿ ಕಂಡು ಸಹಿಸದ ಬಲ್ಬನ್ನನು ಷೇರ್‌ಖಾನನನ್ನು ಕೊಲ್ಲಿಸಿದನು.
- ಮುಲ್ತಾನ್ ಸಿಂದ್ ಮತ್ತು ಲಾಹೋರ್ ಪ್ರಾಂತ್ಯಗಳಿಗೆ ತನ್ನ ಮಗ ಮಹ್ಮದ್ ಖಾನನನ್ನು ನೇಮಿಸಿದನು. ಬಂಗಾಳದ ಪ್ರಾಂತ್ಯಾಧಿಕಾರಿಯಾಗಿ ಮತ್ತೊಬ್ಬ ಮಗ **'ಬುಘ್ರನನ್ನು** ನೇಮಿಸಲಾಯಿತು.
- ಬಲ್ಬನ್ನನು ಕ್ರಿ.ಶ.1287ರಲ್ಲಿ ಮರಣ ಹೊಂದಿದನು. ನಂತರ ಕೈಖುಸ್ರು (ಮಹಮ್ಮದ್‌ಖಾನ್)ನನ್ನು ಇವನ ಉತ್ತರಾಧಿಕಾರಿಯಾಗಿ ನೇಮಿಸಲಾಯಿತು.
- 1285ರಲ್ಲಿ ಮಂಗೋಲರು **ತೈಮೂರನ** ನೇತೃತ್ವದಲ್ಲಿ ಪಂಜಾಬಿನ ಮೇಲೆ ದಾಳಿ ಮಾಡಿದರು.
- ಮಹ್ಮದ್ ಖಾನನ ಮರಣಾ ನಂತರ ಅವನಿಗೆ "ಷಹೀದ್/ ಹುತಾತ್ಮ" ಎಂಬ ಬಿರುದು ನೀಡಲಾಯಿತು.
- ಕೈಖುಬಾದ್ ನನ್ನು ಕೊಲೆ ಮಾಡುವುದರೊಂದಿಗೆ ಜಲಾಲುದ್ದೀನ್‌ಖಿಲ್ಜಿ ದೆಹಲಿ ಸುಲ್ತಾನನಾದನು.

ಖಿಲ್ಜಿ ಸಂತತಿ (ಕ್ರಿ.ಶ.1290–1320)
(The Khalji Dynasty)

- ಖಿಲ್ಜಿ ಎಂಬುದು ಅವರ ವಂಶದ ಹೆಸರಾಗಿತ್ತು. ಖಿಲ್ಜಿಗಳು **'ಘರಮಾಸಿರ್'** ಎಂಬ ಪ್ರದೇಶದಲ್ಲಿ ನೆಲೆಸಿದ್ದರೆಂದು ತಿಳಿದು ಬರುತ್ತದೆ. ಕೆಲವು ವಿದ್ವಾಂಸರ ಪ್ರಕಾರ ಇವರು ಆಫ್ಘನ್ನರಾಗಿದ್ದಾರೆ.
- ಬರನಿ ಹಾಗೂ ವುಲ್ಸ್ ಹೇಗ್‌ರವರ ಪ್ರಕಾರ "ಆಫ್ಘಾನಿಸ್ತಾನದಲ್ಲಿ ಖಿಲ್ಜಿಗಳು ಇದ್ದ ಹಳ್ಳಿಯ ಹೆಸರು 'ಖಿಲ್ಜಿ' ಈ ಕಾರಣದಿಂದಾಗಿ ಈ ಮನೆತನಕ್ಕೆ 'ಖಿಲ್ಜಿ' ಎಂಬ ಹೆಸರು ಬಂದಿತು ಎಂದಿದ್ದಾರೆ.
- ಭಾರತೀಯರಿಗೆ ಮೊದಲ ಬಾರಿಗೆ ಖಿಲ್ಜಿ ದೊರೆಗಳು ಅಧಿಕಾರದಲ್ಲಿ ಅವಕಾಶ ಮಾಡಿಕೊಟ್ಟರು.

ಜಲಾಲುದ್ದೀನ್ ಫಿರೋಜ್ ಖಿಲ್ಜಿ (ಕ್ರಿ.ಶ.1290-96)
(Jalal-ud-Din Firaz Khalji)

- ಖಿಲ್ಜಿ ಸಂತತಿಯವರು ತಂದ **"ಜನಾಂಗೀಯ ನಿರಂಕುಶ ಆಳ್ವಿಕೆ"** ಯಿಂದಾಗಿ ರಾಜಕೀಯವಾಗಿ, ಆಡಳಿತಾತ್ಮಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಂದು ರೀತಿಯ ಅಲೆಯನ್ನು ಹಬ್ಬಿಸಿತು.
- ತಾರೀಕ್-ಐ-ಫಕ್ರುದ್ದೀನ್ (ಮುಬಾರಕ್ ಶಾಹಿಯ ಕರ್ತೃ), ರಾವರ್ಟಿ ಮತ್ತು ಬಾರ್ತಹೋಲ್ಡ್ ರವರು ಖಿಲ್ಜಿ' ಸಂತತಿಯವರು ಆಫ್ಘನ್ನರು/ಪಠಾಣ ವರ್ಗಕ್ಕೆ ಸೇರಿದವರಾಗಿರದೆ ತುರ್ಕಿ ಬುಡಕಟ್ಟಿಗೆ ಸೇರಿದವರೆಂದಿದ್ದಾರೆ.
- ಜಿಯಾವುದ್ದೀನ್ ಬರನಿಯು "ಜಲಾಲುದ್ದೀನನು ತುರ್ಕಿ ಬುಡಕಟ್ಟಿಗೆ ಭಿನ್ನವಾದ ಸಂತತಿಯಿಂದ ಬಂದವನು" ಎಂದಿದ್ದಾರೆ.
- ಖಿಲ್ಜಿ ಸಂತತಿಯವರು ಮೂಲತಃ **ತುರ್ಕಿ ಬುಡಕಟ್ಟಿಗೆ** ಸೇರಿದವರಾಗಿದ್ದು ದೀರ್ಘಕಾಲ ಆಫ್ಘಾನಿಸ್ತಾನದ 'ಹೆಲ್ಮಂಡ್ ಕಣಿವೆಯಲ್ಲಿ' ನೆಲೆಸಿದ್ದು ಈ ಕಣಿವೆಯನ್ನು ಖಿಲ್ಜಿ ಪ್ರದೇಶವೆಂದು ಕರೆಯುತ್ತಿದ್ದರು.
- ಖಿಲ್ಜಿಗಳು ದೀರ್ಘಕಾಲ ಆಫ್ಘಾನಿಸ್ತಾನದಲ್ಲಿದ್ದುದರಿಂದ ಆಫ್ಘನ್ನರ ಗುಣಲಕ್ಷಣಗಳನ್ನು ಹೊಂದಿದ್ದರು. ಆದ್ದರಿಂದ ಭಾರತದಲ್ಲಿ ಖಿಲ್ಜಿಗಳನ್ನು ಆಫ್ಘನ್ನರೆಂದು ಪರಿಗಣಿಸಲಾಯಿತು.
- ಕೈಕುಬಾದ್‌ನ ಕಾಲದಲ್ಲಿ ಅಲ್ಲಾವುದ್ದೀನ್ ಸರ್-ಐ-ಜಂದರ್ (ಅರಮನೆಯ ಅಂಗರಕ್ಷಕ ಪಡೆಯ ಮುಖ್ಯಸ್ಥ) ಹುದ್ದೆಗೇರಿದನು. ಕೈಕುಬಾದ್‌ನು ಜಲಾಲುದ್ದೀನನಿಗೆ **"ಶೈಸ್ಥಾಖಾನ್"** ಎಂಬ ಬಿರುದು ನೀಡಿ ಅರಿಜ್-ಐ-ಮಾಮೂಲಿಕ್ (ಸೈನಿಕ ಮಂತ್ರಿ) ನಾಗಿ ನೇಮಿಸಿದನು.
- ಜಲಾಲೂದ್ದೀನ್ ಖಿಲ್ಜಿಯು **ಕೈಕುಬಾದ್** ಮತ್ತು **ಕಯೂಮರ್** ನನ್ನು ಕೊಲೆ ಮಾಡಿಸಿ 1290 ಜೂನ್ 13 ರಂದು ಕಿಲೋಬ್ರಿಯಲ್ಲಿ ಪಟ್ಟಾಭಿಷಕ್ತನಾದನು. **ಕಿಲೋಬ್ರಿಯು** ಇವನ ಆರಂಭಿಕ ರಾಜಧಾನಿಯಾಗಿತ್ತು.
- 'ರಜಪೂತರ ದೊರೆ ಮತ್ತು ಸಿರಾಜುದ್ದೀನ್ ಸಬಿ ಎಂಬುವವರು ಜಲಾಲುದ್ದೀನನ್ನು ವಿರೋಧಿಸುತ್ತಿದ್ದರು.
- ಖಿಲ್ಜಿ ಮನೆತನದ ಉದಾರವಾದಿ ದೊರೆ ಜಲಾಲುದ್ದೀನ್ ಖಿಲ್ಜಿ. ಇವನು ದುರ್ಬಲನಾಗಿದ್ದು ಹಿಂಸೆಯನ್ನು ವಿರೋಧಿಸುತ್ತಿದ್ದನು.
- ಬಲ್ಬನ್ನನ ದಾಯಾದಿ ಮತ್ತು ಆ ಸಂತತಿಯ ಏಕೈಕ ವಾರಸುದಾರನಾದ **ಮಲ್ಲಿಕ್ ಚಜುವನ್ನು** ಕಾರಾ ಮತ್ತು ಮಾಣಿಕ್‌ಪುರ ಪ್ರಾಂತ್ಯಗಳ ಗೌರ್ನರ್‌ನಾಗಿ ಮುಂದುವರೆಸಿದನು. ಇವನ ಬಿರುದು ಮುಘೀಸುದ್ದೀನ್ ಆಗಿತ್ತು. ವಜೀರನಾಗಿ ಖ್ವಾಜಾ ಖತೀರ್‌ನನ್ನು ನೇಮಿಸಲಾಯಿತು.
- ಜಲಾಲುದ್ದೀನನ ಮಕ್ಕಳು ಖಾನ್-ಐ-ಖಾಸ್, ಅರ್ಕಾಲಿಖಾನ್ ಮತ್ತು ಖಾದರ್ ಖಾನ್ ಯಗ್ರೋಸ್ ಖಾನ್‌ನನ್ನು ಅರಿಜ್ ಐ ಮಾಮಲಿಕ್‌ನಾಗಿ, ಅಹ್ಮದ್ ಚಾಪ್‌ನನ್ನು ಅಮೀರ್ ಐ ಹಾಟಿಜ್‌ನಾಗಿ ನೇಮಿಸಿದನು. ಚಜುವಿನಿಂದ ತೆರವಾದ ಕಾರಾ ಮತ್ತು ಮಾಣಿಕ್‌ಪುರದ ಗೌರ್ನರ್ ನನ್ನಾಗಿ ಅಲ್ಲಾವುದ್ದೀನ್ ಖಿಲ್ಜಿಯನ್ನು ನೇಮಿಸಲಾಯಿತು.
- ಜಲಾಲುದ್ದೀನನು ರಣತಂಬೂರಿನ ಚೌಹಾಣ ದೊರೆ ಹಮೀರದೇವನನ್ನು ಸೋಲಿಸಿದನು. ಕ್ರಿ.ಶ.1292ರಲ್ಲಿ **ಮಂಗೋಲರು ಅಬ್ದುಲ್ಲಾನ ನೇತೃತ್ವದಲ್ಲಿ** ಪಂಜಾಬಿನ ಮೇಲೆ ದಾಳಿ ಮಾಡಿದರು. ತಕ್ಷಣ ಇವರನ್ನು ಜಲಾಲುದ್ದೀನನು ಸಿಂಧೂ ನದಿ ದಂಡೆಯ ಮೇಲೆ ಸೋಲಿಸಿದನು.
- ಚಂಗೇಸ್‌ಖಾನ್‌ನ ವಂಶದವನೊಬ್ಬನಾದ **"ಉಲ್ ಘೂ"** ಮತ್ತು ಆತನ 4000 ಅನುಯಾಯಿಗಳು ಇಸ್ಲಾಂ ಧರ್ಮ ಸ್ವೀಕರಿಸಿ ದೆಹಲಿಯ ಬಳಿ ನೆಲೆಸಿದರು. ಇವರನ್ನೇ **"ಹೊಸ ಮುಸ್ಲಿಮರು"** ಎಂದು ಕರೆಯಲಾಯಿತು.
- ಆಕ್ರಮಣ ನೀತಿ ಮತ್ತು ಯಶಸ್ವಿ ವಿದೇಶಾಂಗ ನೀತಿಯನ್ನು ಅನುಸರಿಸುವಲ್ಲಿ ವಿಫಲನಾದ ಸುಲ್ತಾನ ಜಲಾಲುದ್ದೀನ್ ಖಿಲ್ಜಿಯಾಗಿದ್ದಾನೆ.

ಅಲ್ಲಾವುದ್ದೀನ್ ಖಿಲ್ಜಿ (ಕ್ರಿ.ಶ.1296-1316)
(Ala-ud-din-Khalji)

- ಅಲ್ಲಾವುದ್ದೀನ್ ಖಿಲ್ಜಿಯ ಮೊದಲ ಹೆಸರು **ಅಲಿಗುರ್ಷಸ್ಟ್.** ಇವನು ಅಬುಲ್ ಮುಜಾಫರ ಸುಲ್ತಾನ್ ಅಲ್ಲಾವುದ್ದೀನಿಯ-ವಾದೀನ್ ಮಹ್ಮದ್‌ಷಾ ಖಿಲ್ಜಿ ಎಂಬ ಬಿರುದು ಧರಿಸಿದ್ದನು. ಇವನು ಜಲಾಲುದ್ದೀನನ ಸೋದರ ಷಿಹಾಬುದ್ದೀನ್ ಮಸೂದ್‌ನ ಮಗ.
- ಜಲಾಲುದ್ದೀನನು ಸಿಂಹಾಸನವೇರಲು ಸಹಾಯ ಮಾಡಿದ್ದ ಅಲ್ಲಾವುದ್ದೀನ್ ಖಿಲ್ಜಿಗೆ **'ಅಮಿರ್-ಐ-ತುಜುರ್';** ಮತ್ತು ಅಲ್ಮಾಸ್‌ಬೇಗ್‌ಗೆ **'ಅಜೂರ್ ಬೇಗ್'** ಎಂಬ ಬಿರುದುಗಳನ್ನು ನೀಡಿದನು. ಅಲ್ಲಾವುದ್ದೀನ್ ಖಿಲ್ಜಿಯು ಮಲ್ಲಿಕ್ ಚಜುವಿನ ದಂಗೆಯನ್ನಡಗಿಸಿದನು. ಇದರ ಫಲವಾಗಿ **ಕಾರಾ** ಮತ್ತು **ಮಾಣಿಕ್‌ಪುರಗಳ ಗೌರ್ನರಾಗಿ** ನೇಮಕವಾದನು ಹಾಗೂ ಜಲಾಲುದ್ದೀನನ ಅಳಿಯನೂ ಆದನು.
- ಅಲ್ಲಾವುದ್ದೀನ್ ಖಿಲ್ಜಿ ಮಾಳ್ವದ ಬಿಸ್ಲಾನಗರ ವಶಪಡಿಸಿಕೊಂಡಿದ್ದಕ್ಕಾಗಿ ಔದ್ (ಅಯೋಧ್ಯೆ) ಪ್ರಾಂತ್ಯದ ಅಧಿಕಾರ ದೊರೆಯಿತು. ಅಲ್ಲಾವುದ್ದೀನ್ ಖಿಲ್ಜಿಯು ಯಾದವರ ರಾಮಚಂದ್ರ ಆಳುತಿದ್ದ ದೇವಗಿರಿಗೆ ಮುತ್ತಿಗೆ ಹಾಕಿದನು. ಇದು ಇವನ ಮೊದಲ ದಂಡಯಾತ್ರೆಯಾಗಿತ್ತು. ಸೋತ ರಾಮಚಂದ್ರದೇವ **"ಎಲಿಚಪುರ"** ಪ್ರಾಂತ್ಯದ ಕಂದಾಯವನ್ನು ಪ್ರತಿವರ್ಷ ಸಲ್ಲಿಸುವಂತಾಯಿತು. ಇಲ್ಲಿ ದೊರೆತ ಸಂಪತ್ತು ಮುಂದೆ ಅಲ್ಲಾವುದ್ದೀನ್ ಖಿಲ್ಜಿ ದೆಹಲಿ ಸಿಂಹಾಸನವೇರಲು ಸಹಾಯಕವಾಯಿತು.

- ಎಸ್.ರಾಯ್ ಚೌಧರಿ ತಿಳಿಸುವಂತೆ "ದೆಹಲಿಯನ್ನು ನಿಜವಾಗಿ ಗೆದ್ದದ್ದು ದೇವಗಿರಿಯಲ್ಲಿ, ದಖನ್‌ನ ಚಿನ್ನವೇ ಆಗಿದ್ದ ಅದು ಮುಂದೆ ಅಲ್ಲಾವುದ್ದೀನನು ದೆಹಲಿಯ ಗದ್ದುಗೆಗೇರಲು ದಾರಿಮಾಡಿಕೊಟ್ಟಿತು" ಎಂದಿದ್ದಾರೆ.
- ಜಲಾಲುದ್ದೀನ್ ಖಿಲ್ಜಿಯನ್ನು 1296 ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಕೊಲೆ ಮಾಡಿದನು. "ತನ್ನ ಪೋಷಕರ ಕೊಲೆಯ ಸಂಬಂಧದಲ್ಲಿ ಇವನು ತಪ್ಪಿಸಿಕೊಳ್ಳಲಾಗಲಿಲ್ಲ. ಅವನ ಮಾರ್ಗದಲ್ಲಿ ವಿಧಿಯು ದೇಶದ್ರೋಹಿಯೊಬ್ಬನಾದ ಮಲ್ಲಿಕಾಪೂರ್‌ನನ್ನು ನಿಲ್ಲಿಸಿತು. ಅವನಿಂದ ಅಲ್ಲಾವುದ್ದೀನನು ಮತ್ತು ಅವನ ಕುಟುಂಬವು ನಾಶವಾಯಿತು".
- ಕ್ರಿ.ಶ.1296ರಲ್ಲಿ ಸಿಂಹಾಸನವೇರಿದ ಅಲ್ಲಾವುದ್ದೀನ್ ಖಿಲ್ಜಿಯು ಖ್ವಾಜಾ ಖತೀರನನ್ನು ವಜೀರ್ ಮತ್ತು ಖಾಜಿಯಾಗಿಯೂ, ಸದ್ರುದ್ದೀನ್ ಅರಿಫ್‌ನನ್ನು ಮುಖ್ಯ ಖಾಜಿಯಾಗಿಯೂ ಮತ್ತು ಉಮದರ್ ಉಲ್ ಮುಲ್ಕ್ ನನ್ನು ದಿವಾನ್ ಇನ್ಷಾ ಹುದ್ದೆಗೆ ನೇಮಿಸಿಕೊಂಡನು.
- ಮುಲ್ತಾನಿನಲ್ಲಿದ್ದ **ಅರ್ಖಾಲಿಖಾನ್** ಮತ್ತು ಅವರ ಬಂಧು ವರ್ಗವನ್ನು ನಾಶಗೊಳಿಸಲು ತನ್ನ ಸೋದರ ಉಲುಘ್‌ಖಾನ್ ಮತ್ತು ಮಂತ್ರಿ ಜಫರ್‌ಖಾನನ ನೇತೃತ್ವದಲ್ಲಿ ಪ್ರಬಲ ಸೈನ್ಯ ಕಳುಹಿಸಿದನು. ನಂತರ ಸೆರೆಯಾದ ಅರ್ಖಾಲಿಖಾನ್ ರಕ್ನುದ್ದೀನ್ ಇಬ್ರಾಹಿಂ, ಅಹ್ಮದ್‌ಭಾಪ್, ಮಂಗೋಲರ ಉಲುಘ್‌ಖಾನ್ ಮತ್ತು ಮಲ್ಲಿಕ್ ಅಲ್‌ಗೂರನನ್ನು ದೆಹಲಿಗೆ ತಲುಪುವ ಮೊದಲೇ ಕಣ್ಣು ಕೀಳಿಸಲಾಯಿತು.
- ಅಲ್ಲಾವುದ್ದೀನನು ಅಲೆಗ್ಸಾಂಡರ್‌ನಂತೆ (ಸಿಕಂದರ್–ಇ–ಸಾನಿ) ವಿಶ್ವವನ್ನು ಗೆಲ್ಲಬೇಕೆಂಬ ಆಕಾಂಕ್ಷೆ ಹೊಂದಿದ್ದನು. ಈ ವಿಷಯದಲ್ಲಿ ತನಗೆ ಸಲಹೆ ನೀಡಬೇಕೆಂದು ದೆಹಲಿಯ ಕೊತ್ವಾಲ ಖ್ವಾಜಿ ಉಲ್ ಮುಲ್ಕ್‌ನನ್ನು ಕೋರಿದನು. ಅವನು ಸದ್ಯಕ್ಕೆ ಹಿಂದೂಸ್ತಾನದ ವಶವಾಗಬೇಕಿದೆ ಎಂದನು. ಆದರೂ ಅಲ್ಲಾವುದ್ದೀನ್ ಖಿಲ್ಜಿಯು **'ಸಿಕಂದರ್–ಐ–ಸಾನಿ'** ಎಂಬ ಬಿರುದು ಹೊಂದಿದ್ದಲ್ಲದೆ ತನ್ನ ನಾಣ್ಯಗಳ ಮೇಲೆ ತಾನು **"2ನೇ ಅಲೆಗ್ಸಾಂಡರ್"** ಎಂದು ವರ್ಣಿಸಿಕೊಂಡಿದ್ದಾನೆ.

ಉತ್ತರ ಭಾರತದ ದಿಗ್ವಿಜಯಗಳು.

ವರ್ಷ	ಆಕ್ರಮಿತ ರಾಜ್ಯ/ಪ್ರದೇಶ	ಯಾರಿಂದ	ಫಲಿತಾಂಶ/ಮಹತ್ವ
1298–99	ಗುಜರಾತ್ ಮತ್ತು ಜೈಸಲ್ಮೇರ್	ರಾಜಕರ್ಣದೇವ	ಸೋತ ಕರ್ಣದೇವನು ತನ್ನ ಮಗಳಾದ ದೃವಲಾದೇವಿ ಯೊಡನೆ ದೇವಗಿರಿಯ ರಾಮಚಂದ್ರದೇವನ ಬಳಿ ಆಶ್ರಯ ಪಡೆದರು.
1300	ರಣತಂಬೂರ್	ರಾಣಾ ಹಮ್ಮಿರದೇವ	1300ರಲ್ಲಿ ಸೋದರ ಉಲುಘ್‌ಖಾನ್ ಮತ್ತು ನಸ್ರತ್‌ಖಾನ್ ನೇತೃತ್ವದಲ್ಲಿ ರಣತಂಬೂರ್ ಮೇಲೆ ದಾಳಿ ...
1303	**ಚಿತ್ತೂರ್**	ಮೇವಾಡದ ರಾಣಾರತನ್ ಸಿಂಗ್	ಚಿತ್ತೂರಿನ ಆಡಳಿತವನ್ನು ತನ್ನ ಮಗ ಖಿಜರ್‌ಖಾನನಿಗೆ ವಹಿಸಿಕೊಟ್ಟು ಚಿತ್ತೂರಿಗೆ 'ಖಿಜ್ರಬಾದ್' ಎಂದು ಹೆಸರಿಟ್ಟನು.
1305	ಮಾಳ್ವ	ಮಹಲಕ್ ದೇವ	ಮಹಲಕ್ ದೇವನನ್ನು ಕೊಂದ ಐನ್‌ಉಲ್‌ಮುಲ್ಕನು ಮಾಳ್ವದ ಪ್ರಾಂತ್ಯಾಧಿ ಕಾರಿಯಾದನು.
1308	ಸಿವಾನ	ರಜಪೂತ ದೊರೆ ಶಿತಲ್ ದೇವ	ಸಿವಾನವನ್ನು ಕಮಲುದ್ದೀನ್ ಗರ್ಗ್‌ನಿಗೆ ವಹಿಸಕೊಟ್ಟನು.

- ಕ್ಯಾಂಬೆಯಲ್ಲಿ ನಸ್ರತ್ ಖಾನನು **'ಕಾಪೂರ್ ಹಜರ್ದಿನಾರಿ'** ಎಂಬ ಸುಂದರ ಹಿಂದೂ ಗುಲಾಮನೊಬ್ಬನನ್ನು ಕೊಂಡುಕೊಂಡು ಇಸ್ಲಾಂಗೆ ಮತಾಂತರಗೊಳಿಸಿದರು. ಇವನೇ **'ಮಲ್ಲಿಕ್ ಕಾಪೂರ್'**.
- **ಜಲಾರ್ (ಜವಳಿಪುರ)** :– ರಾಜ **ಕನೇರದೇವನು** ಜಲಾರ್‌ನ್ನು ಆಳುತ್ತಿದ್ದನು. ಇದು ಕೂಡ ಅಲ್ಲಾವುದ್ದೀನ್ ಖಿಲ್ಜಿಯ ವಶವಾಯಿತು.

ದಕ್ಷಿಣ ಭಾರತದ ದಿಗ್ವಿಜಯಗಳು

- ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಆಳುತ್ತಿದ್ದ ರಾಜಮನೆತನಗಳು.
- ದೇವಗಿರಿಯ – ಯಾದವರು – ರಾಮಚಂದ್ರದೇವ
- ವಾರಂಗಲ್ – ಕಾಕತೀಯರು – ಪ್ರತಾಪರುದ್ರದೇವ
- ದ್ವಾರಸಮುದ್ರ – ಹೊಯ್ಸಳರು – 3ನೇ ಬಲ್ಲಾಳ
- ಮಧುರೈ – ಪಾಂಡ್ಯರು – ಮಾರವರ್ಮ ಕುಲಶೇಖರ
- ನಲ್ಲೂರು ಜಿಲ್ಲೆ ತೆಲಗು ಚೋಳ ಅರಸ 3ನೇ ಮನ್ಮಸಿದ್ದ.
- ಒರಿಸ್ಸಾ ರಾಜ್ಯದ ಕಳಿಂಗ ಅರಸ **ಭಾನುದೇವ**
- ಕೇರಳದ ಕೊಲ್ಲಂ ಪಟ್ಟಣದ ಅರಸ **ರವಿವರ್ಮ.**
- ಮಂಗಳೂರು ಆಳುತ್ತಿದ್ದ ಅಳುಪ ಅರಸ ಬಂಕಿದೇವಪೇಂದ್ರ ಮುಂತಾದವರು. ದಕ್ಷಿಣ ರಾಜ್ಯಗಳ ನಡುವಣ ಅಂತಃಕಲಹಗಳು ಉತ್ತರದಿಂದ ದಾಳಿಕಾರರನ್ನು ಆಹ್ವಾನಿಸಿದವು.

ವರ್ಷ	ಆಕ್ರಮಿತ ರಾಜ್ಯ/ಪ್ರದೇಶ	ಯಾರಿಂದ	ಫಲಿತಾಂಶ/ಮಹತ್ವ
1303	ವಾರಂಗಲ್	ಕಾಕತೀಯ ಅರಸ ಪ್ರತಾಪರುದ್ರ	ಸೋತ ಪ್ರತಾಪರುದ್ರನು ಕಾಪೂರನಿಗೆ 100 ಆನೆಗಳು, 7000 ಕುದುರೆಗಳನ್ನು ಮತ್ತು ಅಪಾರ ಸಂಪತ್ತನ್ನು ಕೊಟ್ಟು 1301ರಲ್ಲಿ ಸಾಮಂತನಾಗಿರುವುದಾಗಿ ಒಪ್ಪಂದ ಮಾಡಿಕೊಂಡನು.
1306	ದೇವಗಿರಿ	ಯಾದವರ ರಾಮಚಂದ್ರದೇವ	ಕಾಪೂರನು ರಾಮಚಂದ್ರನ ಮಗನಾದ ಶಂಕರದೇವನನ್ನು ಸೋಲಿಸಿ ದೇವಲದೇವಿಯನ್ನು ದೆಹಲಿಗೆ ಕರೆತರಲಾಯಿತು. ...

			ಮಗನಾದ ಖಿಜರ್‌ಖಾನನಿಗೆ ದೇವಲದೇವಿಯನ್ನು ಕೊಟ್ಟು ವಿವಾಹ ಮಾಡಲಾಯಿತು. (ಅಮೀರ್‌ಖುಸ್ರುವಿನ ಕೃತಿ ದೇವಲದೇವಿ ಕಿಸರ್‌ಖಾನಿ)
1310–11	ದ್ವಾರ ಸಮುದ್ರ	3ನೇ ವೀರಬಲ್ಲಾಳ	ಸೋತ 3ನೇ ವೀರಬಲ್ಲಾಳನು ಅಪಾರ ಸಂಪತ್ತು ನೀಡಿ ದೆಹಲಿಯ ಸುಲ್ತಾನರ ಸಾಮಂತನಾದನು. ವೀರಬಲ್ಲಾಳನು ಕಾಪೂರನಿಗೆ ಪಾಂಡ್ಯ ರಾಜ್ಯದ ಆಕ್ರಮಣಕ್ಕೆ ಸಹಾಯ ಮಾಡಿದನು.
1311	ಮಧುರೈ	ಸುಂದರಪಾಂಡ್ಯ, ವೀರಪಾಂಡ್ಯ	ಕಾಪೂರನು ಬರ್ಮತ್ ಪುರಿ (ಈಗಿನ ಚಿದಂಬರಂ) ಯ ಮೇಲೆ ದಾಳಿ ಮಾಡಿ ಪವಿತ್ರವಾದ ಲಿಂಗ ಮಹಾದೇವ ದೇವಾಲಯವನ್ನು ನಾಶ ಮಾಡಿದನು, ಕಾಪೂರನು ಸುಮಾರು 612 ಆನೆಗಳು, 20,000 ಕುದುರೆಗಳ 96,000 ಮಣ ಚಿನ್ನ ಮತ್ತು ವಜ್ರದೊಂದಿಗೆ ದೆಹಲಿಗೆ ಹಿಂದಿರುಗಿದನು. ಕಾಪೂರನು ರಾಮೇಶ್ವರಂವರೆಗೂ ದಂಡಯಾತ್ರೆ ಮುಂದುವರೆಸಿ ಅಲ್ಲಿ ಒಂದು ಮಸೀದಿ ಕಟ್ಟಿಸಿದನು.
1313–13	ದೇವಗಿರಿ	ಶಂಕರದೇವ	1313ರಲ್ಲಿ ಕಾಪೂರನು ಮತ್ತೆ ದಾಳಿ ಮಾಡಿ ಶಂಕರದೇವನನ್ನು ಕೊಂದು ದೇವಗಿರಿಯನ್ನು ದೆಹಲಿ ಸಾಮ್ರಾಜ್ಯಕ್ಕೆ ಸೇರಿಸಿದನು.

- ರಾಮಚಂದ್ರನ ಧೈರ್ಯವನ್ನು ಮೆಚ್ಚಿದ ಅಲ್ಲಾವುದ್ದೀನನು ಇವನಿಗೆ **"ರಾಯ್–ಐ–ರಯಾನ್"** ಎಂಬ ಬಿರುದು ನೀಡಿ ನವ್ಸಾರಿ ಪ್ರಾಂತ್ಯವನ್ನು ಬಳುವಳಿಯಾಗಿ ಕೊಟ್ಟನು.
- ಕಾಫಿಕಾನ್‌ನು ತಿಳಿಸುವಂತೆ " ಪ್ರತಾಪರುದ್ರನು ಕಾಪೂರನಿಗೆ ವಿಶ್ವವಿಖ್ಯಾತ **ಕೊಹಿನೂರು ವಜ್ರವನ್ನು** ಇದೇ ಸಂದರ್ಭದಲ್ಲಿ ನೀಡಿದನು.

"ಕೊಹಿನೂರ್ ವಜ್ರ"ದ ಮಹತ್ವ

- ಐತಿಹಾಸಿಕ ಸಾಕ್ಷ್ಯಾಧಾರಗಳ ಮೂಲಕ ಕೊಹಿನೂರ್ ವಜ್ರವು ಆಂಧ್ರಪ್ರದೇಶದ ಗುಂಟೂರು ವಲಯದ ಕಾಕತೀಯ ರಾಜ್ಯದಲ್ಲಿ ಮೊದಲಿಗೆ ದೊರೆಯಿತು.
- ಖಿಲ್ಜಿ ಮನೆತನ ಅಂತ್ಯಗೊಂಡ ಮೇಲೆ ಈ ವಜ್ರವು ಘಿಯಾಸುದ್ದೀನ್ ತುಘಲಕ್‌ನ (ಸೇನಾನಿ ಉಮಾಲ್‌ಖಾನ್‌ನಿಂದ) ಕೈ ಸೇರಿತು.
- ಕೊನೆಗೆ ದೆಹಲಿಯ ಮೊಗಲ್ ದೊರೆ ಬಾಬರನಿಗೆ ಈ ವಜ್ರವನ್ನು **1526ರಲ್ಲಿ** ಹಸ್ತಾಂತರಿಸಲಾಯಿತು. ಈ ವಜ್ರದ ಖಚಿತ ನಮೂದಿಸಿದಂತೆ ಇದರ ಮೌಲ್ಯವು ಇಡೀ ಜಗತ್ತಿಗೆ ಎರಡು ದಿವಕ್ಕೆ ಬೇಕಾಗುವಷ್ಟು ಆಹಾರವನ್ನು ಪೂರೈಸುವಷ್ಟಾಗಿದೆ ಎಂದಿದ್ದಾನೆ.
- ಕೊಹಿನೂರ್ ವಜ್ರದ ಮೂಲಗಣಿ **ಗೋಲ್ಕಂಡ**. ಇದರ ತೂಕ **105.6 ಕ್ಯಾರೆಟ್ಸ್ (21.6ಗ್ರಾಂ)** ಪ್ರಸ್ತುತ ಇದು ರೈಚ್‌ಡರ್ ಕ್ರಿಸ್ಟಲ್ ವಸ್ತುಸಂಗ್ರಹಾಲಯ ಇಂಗ್ಲೇಂಡ್‌ನ **ಲಂಡನ್‌ನಲ್ಲಿದೆ.**
- ದೆಹಲಿ ಸುಲ್ತಾನರ ಕಾಲದಲ್ಲಿ ಸ್ವತಂತ್ರವಾಗಿದ್ದ ದಕ್ಷಿಣದ ಏಕೈಕ ರಾಜ್ಯ **ಪಾಂಡ್ಯರ** ರಾಜ್ಯವಾಗಿತ್ತು.
- ಅಲ್ಲಾವುದ್ದೀನನ ದಕ್ಷಿಣದ ವಿಜಯಗಳು ಯಶಸ್ವಿಯಾಗಿರಲಿಲ್ಲ. ಏಕೆಂದರೆ; ತನ್ನ ಅಂತ್ಯದವರೆಗೂ ಶಂಕರದೇವನು ದೆಹಲಿಯ ಸಾರ್ವಭೌಮತ್ವ ಒಪ್ಪಲಿಲ್ಲ. ಹಾಗೆಯೇ ವೀರಪಾಂಡ್ಯನು ಕೊನೆಯವರೆಗೂ ಶರಣಾಗಲಿಲ್ಲ. ದಕ್ಷಿಣದ ರಾಜ್ಯಗಳು ವಿಲೀನವಾಗದೆ ಸ್ವತಂತ್ರವಾಗುವ ಹವಣಿಕೆಯಲ್ಲಿದ್ದವು.
- ಅಲ್ಲಾವುದ್ದೀನನ ದಕ್ಷಿಣ ದಂಡಯಾತ್ರೆಗಳ ಯಶಸ್ವಿ ದಂಡನಾಯಕ **ಮಲ್ಲಿಕಾಫರ್**

ಅಲ್ಲಾವುದ್ದೀನನ ವಾಯುವ್ಯ ಗಡಿ ನೀತಿ ಮತ್ತು ಮಂಗೋಲರ ದಾಳಿಗಳು

- **1ನೇ ದಾಳಿ:–** ಅಲ್ಲಾವುದ್ದೀನನ ಆಳ್ವಿಕೆಯ ಮೊದಲ ವರ್ಷದಲ್ಲಿ ಜಫರ್ ಖಾನ್ ಮತ್ತು ಉಲುಘ್ ಖಾನ್‌ರ ನೇತೃತ್ವದಲ್ಲಿ ಮಂಗೋಲರ ದಾಳಿ ತಡೆಗಟ್ಟಲಾಯಿತು. ಎರಡನೇ ವರ್ಷದಲ್ಲಿ ಮಂಗೋಲರು ದಾವಾಖಾನ್ ಸೋದರ ಸೌಲ್ದನ ನೇತೃತ್ವದ ದಾಳಿಯನ್ನು ಜಫರ್ ಖಾನ್ ಹಿಮ್ಮೆಟ್ಟಿಸಿದನು.
- **2ನೇ ದಾಳಿ:–** ಮತ್ತೆ 1299ರಲ್ಲಿ ಕುತುಬ್ ಖ್ವಾಜ ನೇತೃತ್ವದಲ್ಲಿ ಮಂಗೋಲರು ದೆಹಲಿಯ ಮೇಲೆ ದಾಳಿ ಮಾಡಲು ಯೋಜಿಸಿದ್ದರು. ಆದರೆ ಜಫರ್ ಖಾನನು ಇವರನ್ನು ಸೋಲಿಸಿದನು. ಜಫರ್ ಖಾನನ ಶಕ್ತಿ ಸಾಮರ್ಥ್ಯ ಕಂಡು ಅಲ್ಲಾವುದ್ದೀನು ಅಸೂಯೆಗೊಂಡಿದ್ದನು.
- **3ನೇ ದಾಳಿ:–** 1305ರಲ್ಲಿ ಅಲಿಬೇಗ್ ಮತ್ತು ಖ್ವಾಜತೋಷ್ ನೇತೃತ್ವದಲ್ಲಿ ಮಂಗೋಲರ ದಾಳಿ ಮಾಡಿ ದೆಹಲಿ ಸೈನ್ಯದಿಂದ ಸೋತರು.
- **4ನೇ ದಾಳಿ:–** ಮತ್ತೆ 1307–08ರಲ್ಲಿ ಕುಬಕ್ ಮತ್ತು ಇಕ್ಬಾಲ್ ಮಂಡ್‌ರ ನೇತೃತ್ವದಲ್ಲಿ ಮಂಗೋಲರು ದಾಳಿ ಮಾಡಿದರು. ಇವರನ್ನು ಘಾಜಿಮಲ್ಲಿಕ್ ಮತ್ತು ಮಲ್ಲಿಕಾಪೂರನು ಸೋಲಿಸಿದರು. ಇದೇ ಮಂಗೋಲರ ಕೊನೆಯ ದಾಳಿಯಾಗಿತ್ತು.
- 1305ರಿಂದ **ಘಾಜಿಮಲ್ಲಿಕ್** (ಮುಂದಿನ ಘಿಯಾಸುದ್ದೀನ್ ತುಘಲಕ್) ವಾಯುವ್ಯ ಭಾರತದ ಗಡಿ ರಕ್ಷಣೆಯ ಅಧಿಕಾರಿಯಾಗಿ ಕಾಲು ಶತಮಾನಗಳ ಕಾಲ ಮಂಗೋಲರ ದಾಳಿ ತಡೆಗಟ್ಟಿದನು.

ನವಮುಸ್ಲಿಂರ (ಮಂಗೋಲರ) ಕಗ್ಗೊಲೆ.

- ಜಲಾಲುದ್ದೀನನ ಕಾಲದಲಿ ಇಸಾಂ ಧರ್ಮಕೆ ಮತಾಂತರ

ಗೊಂಡಿದ್ದು ದೆಹಲಿಯ ಉಪನಗರಗಳಲ್ಲಿ ವಾಸವಿದ್ದ ನವಮುಸ್ಲಿಂರನ್ನು ಅಲ್ಲಾವುದ್ದೀನನು ಕಗ್ಗೊಲೆ ಮಾಡಿದನು.

ಅಲ್ಲಾವುದ್ದೀನನ ಆಂತರಿಕ ನೀತಿ ಮತ್ತು ಸುಧಾರಣೆಗಳು

- ಸರ್ಕಾರದ ರಾಜಕೀಯ ಹಿತದೃಷ್ಟಿಯಿಂದ **"ಇಸ್ಲಾಮಿಕ್ ಧರ್ಮದ ತತ್ವಗಳು"** ಆಡಳಿತದಲ್ಲಿ ಪಾತ್ರವಹಿಸಬಾರದೆಂದು ಅಭಿಪ್ರಾಯ ಪಟ್ಟ ದೆಹಲಿಯ ಮೊದಲ ಸುಲ್ತಾನ –ಅಲ್ಲಾವುದ್ದೀನ್ ಖಿಲ್ಜಿಯಾಗಿದ್ದಾನೆ.
- ಅಲ್ಲಾವುದ್ದೀನನು ರಾಜ್ಯದ ವಿಷಯಗಳಲ್ಲಿ ಸಾಂಪ್ರದಾಯಿಕ ಧರ್ಮದ ಪ್ರಾಮುಖ್ಯತೆಯನ್ನು ವಿರೋಧಿಸಿದನು. ಉಲೇಮರ ಧರ್ಮದರ್ಶನವಿರದೆ ತಾನು ಕಾರ್ಯನಿರ್ವಹಿಸುವುದಾಗಿ ಘೋಷಿಸಿದನು.

ಅಲ್ಲಾವುದ್ದೀನನು ದಂಗೆಗಳಿಗೆ ನಾಲ್ಕು ಮುಖ್ಯ ಕಾರಣಗಳನ್ನು ಗುರುತಿಸಿದನು.

1) ಅಸಮರ್ಥ ಗೂಢಾಚಾರ ವ್ಯವಸ್ಥೆ.
2) ನೊಬೆಲ್ಲರ ನಡುವಣ ನಡೆಯುವ ಮದ್ಯಪಾನ ಕೂಟಗಳು.
3) ನೊಬೆಲ್ಲರ ನಡುವೆ ನಡೆಯುವ ಸಾಮಾಜಿಕ ಕೂಟಗಳು ಮತ್ತು ವೈವಾಹಿಕ ಸಂಬಂಧಗಳು.
4) ಅಧಿಕಾರ ಮತ್ತು ಹಣದ ದರ್ಪದಿಂದ ಸಂಭವಿಸುವ ಘರ್ಷಣೆಗಳು

- ಪ್ರಥಮ ಕ್ರಮವಾಗಿ **ಮಿಲ್ಕ್** (ಗ್ರಾಮ ಒಡೆತನದ ಹಕ್ಕುಗಳು) **ಇನಾಂ** (ಬಹುಮಾನವಾಗಿ ನೀಡಿದ ಭೂಮಿಗಳು) ಹಾಗೂ **ಖಾಸಗಿ ಸ್ವತ್ತಿನ** ಪದ್ಧತಿ ರದ್ದು ಮಾಡಿದನು.
- ದಕ್ಷತೆಯುಳ್ಳ ಗೂಢಾಚಾರ ದಳದ ಸ್ಥಾಪನೆ ಮಾಡಿದನು. ಮದ್ಯ ಮಾದಕ ಪದಾರ್ಥಗಳ ಮಾರಾಟ ಮತ್ತು ಜೂಜಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದನು. ಸುಲ್ತಾನನ ಅನುಮತಿಯಿಲ್ಲದೆ ಶ್ರೀಮಂತ ಸಭಿಕರು ಸಾಮಾಜಿಕ ಕೂಟಗಳನ್ನು ಏರ್ಪಡಿಸುವಂತಿಲ್ಲ ಎಂದು ಆಜ್ಞೆ ಮಾಡಿದನು.

ಹಿಂದೂಗಳ ಬಗೆಗಿನ ನೀತಿ

- ಬರಣಿ ಹೇಳುವಂತೆ ಹಿಂದೂಗಳು ಒಟ್ಟು ಉತ್ಪಾದನೆಯ **1/2** ದಷ್ಟು ದನಕರುಗಳ ಮೇಲೆ ಹೆಚ್ಚಿನ ಹುಲ್ಲುಗಾವಲು ತೆರಿಗೆ. ಹಿಂದೂಗಳು ಆಯುಧ ಹೊಂದಿರದಂತೆ, ಕುದುರೆ ಸವಾರಿ ಮಾಡದಂತೆ, ಉತ್ತಮ ಉಡುಪು ಧರಿಸದಂತೆ ಮತ್ತು ಆಡಂಬರ ಜೀವನ ನಡೆಸದಂತೆ ಮಾಡುವುದು ಸುಲ್ತಾನನ ಇಚ್ಚೆಯಾಗಿತ್ತು.
- ಹಿಂದೂ **ಕುತ್**ಗಳು ಮತ್ತು **ಮುಖದ್ದಮ್**ಗಳನ್ನು ವಜಾ ಮಾಡಲಾಯಿತು. ಅಲ್ಲಾವುದ್ದೀನನು ಖಾಜಿ ಮಘಿಸುದ್ದೀನನ ಹಿಂದೂ ವಿರೋಧಿ ನೀತಿಯನ್ನು ಒಪ್ಪಿಕೊಂಡಿದ್ದನು.

ಕಂದಾಯ ಮತ್ತು ತೆರಿಗೆ ಸುಧಾರಣೆ

- ಅಲ್ಲಾವುದ್ದೀನನು **ಭೂಮಾಪನ / ಸರ್ವೇ ಪದ್ಧತಿ** ಮಾಡಿಸಿದ ಮೊದಲ ಮುಸ್ಲಿಂ ದೊರೆಯಾಗಿದ್ದಾನೆ.
- ಹಿಂದಿನ ಸುಲ್ತಾನರು ರಾಜ್ಯದ ವತಿಯಿಂದ ನೀಡಿದ್ದ ಗ್ರಾಮಗಳ ಒಡೆತನ ಹಕ್ಕುಗಳು (ಮಿಲ್ಕ್) ಕಾಣಿಕೆಯಾಗಿ ನೀಡಿದ **ಭೂಮಿಗಳು** (ಇನಾವ್) ಹಾಗೂ **ಧಾರ್ಮಿಕ ದತ್ತಿಗಳನ್ನು** (ವಕ್ಫ್) ಮುಟ್ಟುಗೋಲು ಹಾಕಿಕೊಂಡು ನಿವೃತ್ತಿ ವೇತನವನ್ನು ನಿಲ್ಲಿಸಿದನು. ಉತ್ಪನ್ನದ 1/2 ಭಾಗ ಭೂಕಂದಾಯ ವಿಧಿಸಿದನು.
- ಕಂದಾಯ ಅಧಿಕಾರಿಗಳಾಗಿದ್ದ ಹಿಂದೂ ಕುತ್ಸ್, ಚೌದರಿಗಳು ಮತ್ತು ಮುಖದ್ದಮ್ ಗಳನ್ನು ವಜಾ ಮಾಡಿದನು.ಅಲ್ಲದೆ ಅವರು ಖರಾಜ್, ಜೆಸಿಯಾ, ಘರಿ ಮತ್ತು ಚರ್ಯ ತೆರೆಗೆಗಳಿಂದ ವಂಚಿತರಾಗಿದ್ದರು. ಇವರಿಗೆ ತೆರಿಗೆ ವಿಧಿಸುವಂತೆ ಮಾಡಿದನು. **ಕುತ್ಸರು, ಮೊಕದ್ದಮ್ ಮತ್ತು ಚೌಧರಿಗಳು** ಎಂಬ ಗ್ರಾಮೀಣ ಅನುವಂಶಿಕ ಕಂದಾಯದ ಅಧಿಕಾರಿಗಳನ್ನು ನಿಯಂತ್ರಿಸಿದನು.
- ಕುತ್ಸ್ ಎಂದರೆ ಜಮೀನ್ದಾರರು ಮತ್ತು ಬಲಹಾರ ಎಂದರೆ ಸಾಮಾನ್ಯ ರೈತ ಎಂದರ್ಥ.
- ಇವನ ಎರಡು ಹೊಸ ತೆರಿಗೆಗಳೆಂದರೆ – **ಹುಲ್ಲುಗಾವಲು (ಚರಾಯಿ)** ಮತ್ತು **ಮನೆತೆರಿಗೆ (ಗರಿ)**. ಕಾರಿ/ಕಾರ್ಹಿ ಎಂಬ ಮತ್ತೊಂದು ತೆರಿಗೆಯಿತ್ತು.
- ಅಲ್ಲಾವುದ್ದೀನ್‌ನು ಕಂದಾಯ ಆಡಳಿತ ನೋಡಿಕೊಳ್ಳಲು ಹೊಸ ಇಲಾಖೆಯಾದ **ದಿವಾನ್–ಇ–ಮುಸ್ತಕರ್ಜ್** ಸ್ಥಾಪಿಸಿದನು.
- **ಮಹಸ್ಸೀಲ್ಸ್** – ಕಂದಾಯ ಆಡಳಿತ ನೋಡಿಕೊಳ್ಳುವವನು.
- **ಮುಸ್ತಕರ್ಜ್** – ಹಳೆಬಾಕಿ ವಸೂಲಿ ಮಾಡುವವ.
- **ಅಮೀಲ್ಸ್** – ಕಂದಾಯ ವಸೂಲಿಗಾರರು
- **ಮತಸರಿಪ್ಸ್** – ಲೆಕ್ಕಾಧಿಕಾರಿಗಳು.
- **ಷರಫ್ ಖೈನಿ** – ಹೊಸ ಕಂದಾಯ ಮಂತ್ರಿ ನೇಮಕ ಮಾಡಿದನು.
- ಹಿಂದೂ ರೈತರು ಶೇ 50% ರಷ್ಟು ಮತ್ತು ಮುಸ್ಲಿಂ ರೈತರು ಶೇ25% ರಷ್ಟು ಕಂದಾಯ ನೀಡಬೇಕಾಗಿತ್ತು.

ಸೈನಿಕ ಆಡಳಿತ.

- ಇವನ ಹಿಂದಿನ ಅರಸರು ಸೈನ್ಯಕ್ಕಾಗಿ ಪ್ರಾಂತೀಯ ಗೌರ್ನರ್ ಗಳನ್ನು ಆಶ್ರಯಿಸಿದ್ದರು. ಆದರೆ ಇವನು ಅದನ್ನು ತ್ಯಜಿಸಿ ಸುಲ್ತಾನನ ಸೈನ್ಯವೊಂದನ್ನು ಸ್ಥಾಪಿಸಿದನು. **"ಅರಿಜ್–ಐ–ಮಾಮುಲಕ್"** (ಸೈನಿಕ ಮಂತ್ರಿ) ನು ನೇರವಾಗಿ ಸೈನಿಕರ ನೇಮಕ ಮಾಡುತ್ತಿದ್ದನು. ಸೈನಿಕರಿಗೆ ಶಸ್ತ್ರಾಸ್ತ್ರಗಳು ಕುದುರೆಗಳು ಮತ್ತು ವೇತನಗಳನ್ನು ಕೇಂದ್ರ ಸರ್ಕಾರದಿಂದ ಕೊಡಲಾಗುತ್ತಿತ್ತು.
- ಸೈನ್ಯದಲ್ಲಿ ಅಶ್ವದಳ, ಕಾಲ್ದಳ ಮತ್ತು ಗಜದಳವಿದ್ದರೂ **"ಗಜದಳವು"** ಪ್ರಮುಖವಾಗಿತ್ತು.
- ಅಲ್ಲಾವುದ್ದೀನನ ಸೈನ್ಯವು **'ಟರ್ಕಿ ಮಾದರಿ'**ಯಲ್ಲಿ ವ್ಯವಸ್ಥೆಗೊಂಡಿದ್ದು ತುಕಡಿಗಳನ್ನು ದಶಮಾನ ಪದ್ಧತಿಯ ಮೇಲೆ ವಿಭಜಿಸಲಾಗುತ್ತಿತ್ತು.
- ಭ್ರಷ್ಟಾಚಾರವನ್ನು ತಡೆಗಟ್ಟಲು (ಹಾಜರುಪಟ್ಟಿಯಲ್ಲಿ) ಪ್ರತಿಯೊಬ್ಬ ಸೈನಿಕರ ಚಹರೆಗಳ ಬಗ್ಗೆ ವಿವರಣೆ ಬರೆದಿಡುವ ಹುಲಿಯ

ಪದ್ಧತಿ ಮತ್ತು ಕುದುರೆಗಳಿಗೆ ಮುದ್ರೆ ಹಾಕುವ **ದ್ರಗ್** ಕ್ರಮಗಳನ್ನು ಕೈಗೊಂಡ ಭಾರತದ ಪ್ರಥಮ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ.

- ಬಾಗ್ದಾದ್‌ನ ಖಲೀಫನಿಂದ ಯಾವುದೇ ಅನುಮತಿ ಪತ್ರ ಪಡೆಯದೆ ಆಳ್ವಿಕೆ ನಡೆಸಿದ ಮೊದಲ ದೆಹಲಿ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ.
- **ಪರ್ಶಿಯಾ** ಮತ್ತು **ಅರೇಬಿಯಾ** ದೇಶಗಳಿಂದ ಉತ್ತಮ ತಳಿಯ ಕುದುರೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು.
- **ಅಲ್ಲಾವುದ್ದೀನ ಪ್ರಮುಖ ಸೇನಾಪತಿಗಳು** – ಉಲುಘ್‌ಖಾನ್, ಜಾಫರ್ ಖಾನ್, ನಸ್ರತ್ ಖಾನ್, ಆಲ್ಫ್‌ಖಾನ್ ಮತ್ತು ಮಲ್ಲಿಕಾಫೂರ್ ಪ್ರಮುಖರಾಗಿದ್ದಾರೆ.

6. ನ್ಯಾಯಾಡಳಿತ ವ್ಯವಸ್ಥೆ.

ರಾಜ್ಯಪಾಲನು ಪ್ರಾಂತ್ಯಗಳಲ್ಲಿ ಮುಖ್ಯ ನ್ಯಾಯಾಧಿಪತಿಯಾಗಿದ್ದರೂ ಸರ್ವೋಚ್ಚ ನ್ಯಾಯಮೂರ್ತಿ ಸುಲ್ತಾನನಾಗಿದ್ದನು. ಶಿಕ್ಷೆಗಳು ಬಹಳ ಕಠಿಣವಾಗಿದ್ದವು. ತೂಕ ಅಳತೆಗಳಲ್ಲಿ ವಂಚನೆ ಮಾಡಿದ ವರ್ತಕನ ತೊಡೆಯಿಂದ ಅವನು ಮೋಸ ಮಾಡಿದ ತೂಕದಷ್ಟು ಮಾಂಸವನ್ನು ಕತ್ತರಿಸಲಾಗುತ್ತಿತ್ತು.

ಮಾರುಕಟ್ಟೆ ವ್ಯವಸ್ಥೆ ಅಥವಾ ಆರ್ಥಿಕ ಸುಧಾರಣೆ.

- ಅಲ್ಲಾವುದ್ದೀನನು ಜಾರಿಗೆ ತಂದ ಆರ್ಥಿಕ ಸುಧಾರಣೆಗಳಲ್ಲಿ **"ಬೆಲೆ ಮತ್ತು ಮಾರುಕಟ್ಟೆ ವ್ಯವಸ್ಥೆ ನಿಯಂತ್ರಣ"** ಅತ್ಯಂತ ಪ್ರಮುಖವಾದುದು.
- ಅಲ್ಲಾವುದ್ದೀನನು ದಕ್ಷಿಣ ದಂಡಯಾತ್ರೆಗಳಿಂದ ತಂದಿದ್ದ ಅಪಾರ ಸಂಪತ್ತಿನಿಂದಾಗಿ ರಾಜ್ಯದ ಹಣದ ಮೌಲ್ಯವನ್ನು ಕುಗ್ಗಿಸಿ ವಸ್ತುಗಳ ಬೆಲೆಯು ಏರಲು ಕಾರಣವಾಗಿದ್ದಿತು. ಒಬ್ಬ ಸೈನಿಕನಿಗೆ ವಾರ್ಷಿಕ 234 ಟಂಕ ಮತ್ತು ಎರಡು ಅಶ್ವ ಹೊಂದಿದವರಿಗೆ 78 ಟಂಕ ಹೆಚ್ಚಿನ ವೇತನ ನೀಡುತ್ತಿದ್ದರು.
- ಸೈನಿಕರ ವೇತನ ಹೆಚ್ಚಳ ಮಾಡದೆ ಸಾಧಾರಣ ಸಂಬಳದಲ್ಲಿ ಜೀವಿಸಲು ಸಹಾಯವಾಗುವಂತೆ ಅವಶ್ಯಕ ವಸ್ತುಗಳಿಗೆ ಸಂಬಂಧಿಸಿದಂತೆ ಬೇಡಿಕೆ ಮತ್ತು ಪೂರೈಕೆ ನಿಯಮಗಳು ಸಾಧ್ಯವಾದಷ್ಟು ಸರಳವಾಗಿದ್ದವು.
- ಧಾನ್ಯಗಳ ಬೆಲೆಯನ್ನು **"ದಿವಾನ್-ಐ-ರಿಯಾಸತ್"** ಮತ್ತು **ಷಹನ್-ಐ-ಮಂಡಿ** ಎಂಬ ಇಬ್ಬರು ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಇವರಿಗೆ ಸಹಾಯಕರಾಗಿ **ನ್ಯಾಯಾಧೀಶ (ಸರಾಯ್ ಅಲ್) ಗೂಢಾಚಾರರು (ಮುನ್ಸಿ)** ಹಾಗೂ **ಪರಿವೀಕ್ಷಣಾಧಿಕಾರಿ** (ಬರೀದ್) ಮುಂತಾದ ಅಧಿಕಾರಿಗಳಿದ್ದರು.
- ಅಲ್ಲಾವುದ್ದೀನ್ **ಪಡಿತರ ವ್ಯವಸ್ಥೆಯನ್ನು** ಜಾರಿಗೆ ತಂದನು.
- ಅಲ್ಲಾವುದ್ದೀನನು ಜಲೋಧರ ರೋಗದಿಂದ ಹಾಸಿಗೆ ಹಿಡಿದು ಎಲ್ಲರನ್ನು ಅನುಮಾನದಿಂದ ನೋಡುತ್ತಿದ್ದ. ಅವನ ರಾಣಿ–**ಮಲ್ಲಿಕ್-ಐ-ಜಹಾನ್** ಮತ್ತು ಅವನ ಮಗ **ಖಿಜರ್ ಖಾನ್** ಭೋಗ ಜೀವನ ನಡೆಸುತ್ತಿದ್ದರು. ಸುಲ್ತಾನನು ಕೊನೆಗೆ **1316 ಜನವರಿ 2** ರಂದು ಮರಣ ಹೊಂದಿದನು.

- ಅಲ್ಲಾವುದ್ದೀನನು ವರ್ತುಲಾಕಾರದ ಅಲಾಯ್ **ಕೋಟೆ/ಕೋಷರ್ ಐ ಸಿರಿಯನ್ನು** ಕಟ್ಟಿಸಿದನು. 1311ರಲ್ಲಿ ಕುತುಬ್ ಮಿನಾರ್ ಬಳಿ ಅದಕ್ಕಿಂತ ದೊಡ್ಡದಾದ ಮಿನಾರ್ ಕಟ್ಟಲು ಹೋಗಿ ವಿಫಲನಾದನು. (ಸಹ ಹಜಾರತ್ ಸತೂನ್ ಎಂದರೆ– ಸಹಸ್ರ ಸ್ತಂಭಗಳ ಅರಮನೆ).
- ಮಲ್ಲಿಕಾಫೂರ್ ಅಲ್ಲಾವುದ್ದೀನ್ ಖಿಲ್ಜಿಯ ಮರಣಾ ನಂತರ ದೆಹಲಿಯಲ್ಲಿ **35 ದಿನಗಳ ಆಳ್ವಿಕೆ** ನಡೆಸಿದನು. ಇವನ ನಂತರ ಕುತುಬುದ್ದೀನ್ ಮುಬಾರಕ್ 1316–1320ರವರೆಗೆ ಆಳ್ವಿಕೆ ಮಾಡಿದನು. ಇವನು ಅಲ್ಲಾವುದ್ದೀನನ ಉಗ್ರ ಶಾಸನಗಳನ್ನು ರದ್ದು ಮಾಡಿದನು.
- ಮುಬಾರಕ್ ಷಾನು ನಂತರ ಗುಜರಾತಿನ ಖುಸ್ರಾವ್ ಖಾನ್‌ನಿಗೆ ರಾಜ್ಯ ಒಪ್ಪಿಸಿದನು. 1320ರಲ್ಲಿ ಖುಸ್ರಾಮ್‌ಖಾನ್‌ನನ್ನು ಹತ್ಯೆ ಮಾಡಿ ಪಂಜಾಬಿನ ರಾಜ್ಯಪಾಲನಾಗಿದ್ದ ಘಾಜಿಮಲ್ಲಿಕ್‌ನು ಮುಂದೆ ಘಿಯಾಸುದ್ದೀನ್ ತುಘಲಕ್ ಎಂಬ ಹೆಸರಿನೊಂದಿಗೆ ಸಿಂಹಾಸನವೇರಿದನು.
- ಖಿಲ್ಜಿ ವಂಶದ ಕೊನೆಯ ದೊರೆ ಖುಸ್ರಾವ್ ಖಾನ್.

ತುಘಲಕ್ ಸಂತತಿ (ಕ್ರಿ.ಶ.1320–1414)
(The Tughaluq Dynansty)

ಘಿಯಾಸುದ್ದೀನ್ ತುಘಲಕ್ (ಕ್ರಿ.ಶ.1320–1325)

- ತುಘಲಕ್ ಸಂತತಿಯ ಸ್ಥಾಪಕ ಘಿಯಾಸುದ್ದೀನ್ ತುಘಲಕ್. ಇವನ ಮೊದಲ ಹೆಸರು **ಘಾಜಿಮಲ್ಲಿಕ್**. ಇಬನ್ ಬತೂತ ಇವನನ್ನು ಟರ್ಕಿಯ **ಕರೌನ ಬುಡಕಟ್ಟಿಗೆ** ಸೇರಿದವನು & ಫೆರಿಸ್ತಾನು ತುಘಲಕ್‌ನ ತಂದೆ ಟರ್ಕಿ ಗುಲಾಮರಲ್ಲಿ ಒಬ್ಬನು ಎಂದಿದ್ದಾರೆ.
- ಅಲ್ಲಾವುದ್ದೀನನ ಕಾಲದಲ್ಲಿ ಘಿಯಾಸುದ್ದೀನನು **ದಿಪಾಲ್‌ಪುರ** ಪ್ರಾಂತ್ಯ ಮತ್ತು **ಪಂಜಾಬಿನ (1305ರಲ್ಲಿ) ಗೌರ್ನರಾಗಿದ್ದನು**. ಇವನು ವಾಯುವ್ಯ ಭಾರತದ ಗಡಿಯಿಂದ ಬರುತ್ತಿದ್ದ ಮಂಗೋಲರ ದಾಳಿಯನ್ನು ಯಶಸ್ವಿಯಾಗಿ ತಡೆಗಟ್ಟಿದನು.
- ಅಲ್ಲಾವುದ್ದೀನನ ಕಾಲದ ಕಂದಾಯ ಪದ್ಧತಿಯನ್ನು ಕೈಬಿಟ್ಟು ಭೂ ಕಂದಾಯವು ಒಟ್ಟು ಉತ್ಪಾದನೆಯ 1/11 ಅಥವಾ 1/10 ಭಾಗಕ್ಕಿಂತ ಹೆಚ್ಚಿರಬಾರದೆಂದು ಆಜ್ಞೆ ಮಾಡಿದನು. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದ ಹಿಂದೂ ಕಂದಾಯ ಅಧಿಕಾರಿಗಳನ್ನು ಪುನಃ ನೇಮಿಸಿದನು. ಹಿಂದೂಗಳಿಗೆ ತೆರಿಗೆಗಳಲ್ಲಿ ವಿನಾಯ್ತಿ ನೀಡಿದನು.
- ಇವನು ವ್ಯವಸಾಯಕ್ಕೆ ಆದ್ಯತೆ ನೀಡಿ ಮೊದಲ ಬಾರಿಗೆ ನೀರಾವರಿ ಕಾಲುವೆಗಳನ್ನು ತೋಡಿಸಿದನು.

ಸೈನಿಕ ಸಾಧನೆಗಳು:

- ಘಿಯಾಸುದ್ದೀನ್‌ನು ದೆಹಲಿಯಲ್ಲಿ **'ತುಘಲಕಾಬಾದ್ ಕೋಟೆ'** ಕಟ್ಟಿಸಿದನು.
- ಬರನಿಯ ಪ್ರಕಾರ ಘಿಯಾಸುದ್ದೀನ್ ಉತ್ತಮ ಸೈನಿಕ ದಂಡನಾಯಕನಾಗಿದ್ದು ತನ್ನ ಸೈನಿಕರನ್ನು ಮಕ್ಕಳಂತೆ

ಮತ್ತು ಕುದುರೆಗಳಿಗೆ ಮುದ್ರೆ ಹಾಕುವ **ದ್ರಘ್** ಪದ್ಧತಿಗಳನ್ನು ತೀವ್ರವಾಗಿ ಆಚರಣೆಗೆ ತಂದನು.

- ವಾರಂಗಲ್ಲಿನ ಕಾಕತೀಯ ಅರಸ ಪ್ರತಾಪರುದ್ರನು ದೆಹಲಿಯ ಸಾಮಂತ ತನದಿಂದ ಮುಕ್ತನಾಗಿ ದೆಹಲಿಗೆ ಕೊಡಬೇಕಾದ ಕಪ್ಪವನ್ನು ನಿಲ್ಲಿಸಿದ್ದನು. ಇದರಿಂದ ಕೋಪಗೊಂಡ ಘಿಯಾಸುದ್ದೀನನು ತನ್ನ ಮಗನಾದ ಜೌನಾಖಾನನನ್ನು ವಾರಂಗಲ್‌ಗೆ ಮುತ್ತಿಗೆ ಹಾಕಲು ಕಳುಹಿಸಿದಾಗ ಮೊದಲಿಗೆ ಎರಡು ಬಾರಿ ಸೋತನು. ನಂತರ ವಾರಂಗಲ್‌ನನ್ನು ಗೆದ್ದುಕೊಂಡು ಅದಕ್ಕೆ **"ಸುಲ್ತಾನಪುರ"** ಎಂಬ ಹೆಸರಿಟ್ಟನು.
- ಸುಲ್ತಾನ ಬಲ್ಬನ್ನನ ಕಾಲದಿಂದ ಸ್ವತಂತ್ರವಾಗಿದ್ದ ಬಂಗಾಳವನ್ನು ವಶಪಡಿಸಿಕೊಳ್ಳಲು ಮುಂದಾದನು. ಕ್ರಿ.ಶ.1322ರಲ್ಲಿ ಷಮ್ಸುದ್ದೀನ್ ಫಿರೋಜ್ ಷಾ ನಿಧನನಾದನು. ಅವನ ಮಕ್ಕಳಾದ ಘಿಯಾಸುದ್ದೀನ್, ಷಿಹಾಬುದ್ದೀನ್ ಮತ್ತು ನಾಸೀರುದ್ದೀನ್ ನಡುವೆ ಸಿಂಹಾಸನಕ್ಕಾಗಿ ಕಲಹವೇರ್ಪಟ್ಟಿತು.
- ನಾಸೀರುದ್ದೀನನು ಘಿಯಾಸುದ್ದೀನ್ ತುಘಲಕ್‌ನ ಸಹಾಯ ಕೇಳಿದನು. 1324ರಲ್ಲಿ ಬಂಗಾಳದ ಮೇಲೆ ದಾಳಿ ಮಾಡಿ ಘಿಯಾಸುದ್ದೀನ್‌ನು ಷಿಹಾಬುದ್ದೀನ್‌ನನ್ನು ಸೋಲಿಸಿ ಸೆರೆಹಿಡಿದನು. ನಂತರ ಬಂಗಾಳಕ್ಕೆ ನಾಸಿರುದ್ದೀನನ್ನು ದೆಹಲಿಯ ಸಾಮಂತನನ್ನಾಗಿ ಮಾಡಿದನು. ಇದರಿಂದ ಪೂರ್ವ ಮತ್ತು ದಕ್ಷಿಣ ಬಂಗಾಳವು ದೆಹಲಿ ಸಾಮ್ರಾಜ್ಯಕ್ಕೆ ಸೇರಿತು. ದೆಹಲಿಗೆ ಹಿಂತಿರುಗುವಾಗ ತಿರ್ಹತ್(ಮಿಥಿಲ)ನ ರಾಜ ಹರಿಸಿಂಗ್ ದೇವನನ್ನು ಸೋಲಿಸಿ ಅದನ್ನು ದೆಹಲಿ ರಾಜ್ಯಕ್ಕೆ ಸೇರಿಸಿಕೊಂಡನು.
- ಘಿಯಾಸುದ್ದೀನ್ ತುಘಲಕ್‌ನು **"ಮಂಟಪ ಕುಸಿದುಬಿದ್ದು"** ಮರಣ ಹೊಂದಿದನು.

ಮಹಮ್ಮದ್-ಬಿನ್-ತುಘಲಕ್ ಅಥವಾ ಜೌನಾಖಾನ್ (ಕ್ರಿ.ಶ.1325-51)
(Muhammad-Bin-Tughluk or Junakhan)

- ಘಿಯಾಸುದ್ದೀನ್ ತುಘಲಕ್‌ನ ಮಗ ಜೌನಾಖಾನ್ (ಮಹಮ್ಮದ್ ಬಿನ್ ತೊಘಲಕ್‌ನ ಮೂಲ ಹೆಸರು)
- ವಿದೇಶಿ ಪ್ರವಾಸಿಗ **ಇಬನ್ ಬತೂತ** ಮತ್ತು **ಜಿಯಾವುದ್ದೀನ್** ಬರನಿ ಎಂಬ ಇತಿಹಾಸಕಾರರು ಇವನ ಸಮಕಾಲೀನರಾಗಿದ್ದರು.
- ಮಹಮ್ಮದ್ದನು ಪರ್ಷಿಯನ್ ಮತ್ತು ಅರೇಬಿಕ್ ವಿದ್ವಾಂಸನಾಗಿದ್ದನು. ಖಗೋಳಶಾಸ್ತ್ರ, ತತ್ವಶಾಸ್ತ್ರ, ಗಣಿತಶಾಸ್ತ್ರ, ವೈದ್ಯಕೀಯ ಮತ್ತು ತರ್ಕಶಾಸ್ತ್ರ ಮುಂತಾದವುಗಳಲ್ಲಿ ಪ್ರವೀಣನಾಗಿದ್ದನು. ತನ್ನ ವಿವಿಧ ಯೋಜನೆಗಳ ಮೂಲಕ ಭಾರತವನ್ನು ಏಕಾಧಿಚಕ್ರಪತ್ಯಕ್ಕೆ ಅಳವಡಿಸಿ ಧಾರ್ಮಿಕ ಉದಾರತೆಯಿಂದ ಸರ್ವಧರ್ಮ ಸಮಾನತೆಯನ್ನು ಸಾಧಿಸಬೇಕೆಂಬ ಹಂಬಲವುಳ್ಳವನಾಗಿದ್ದನು.
- ಘಿಯಾಸುದ್ದೀನನ ಮರಣದ ನಂತರ 40 ದಿನಗಳ ಕಾಲ ಮಹಮದನು ತುಘಲಕ್‌ಬಾದ್‌ನಲ್ಲೇ ಇದ್ದು 1315ರಲ್ಲಿ ಕೆಂಪುಕೋಟೆಯ **'ದೌಲತ್ ಖಾನಾ'** ಅರಮನೆಯಲ್ಲಿ ಸಿಂಹಾಸನವೇರಿದನು.

ಮಹಮ್ಮದ್-ಬಿನ್-ತುಘಲಕ್‌ನ 5 ಯೋಜನೆಗಳು.

1. **ದೋಅಬ್ ಪ್ರಾಂತ್ಯದ ಆರ್ಥಿಕ ಪ್ರಯೋಗ (ತೆರಿಗೆ ಹೆಚ್ಚಳ)**

- ದೋ ಅಬ್ ಪ್ರಾಂತ್ಯದಲ್ಲಿ ತೆರಿಗೆಯನ್ನು 10 ರಿಂದ 20 ಪಟ್ಟು ಹೆಚ್ಚಿಸಿ ಜೊತೆಗೆ **'ಗರೀ'** (ಮನೆಗಂದಾಯ) ಮತ್ತು **'ಚರಾಹಿ'** **(ಗೋಮಾಳ ತೆರಿಗೆ)** ಸೇರಿಸಲಾಗಿತ್ತೆಂದು ಬರ್ನಿ ಹೇಳಿದ್ದಾನೆ. ಭೂಕಂದಾಯಕ್ಕಿಂತ ಈ ತೆರಿಗೆಗಳೇ ಹೆಚ್ಚಾಗಿದ್ದವು.
- ತೆರಿಗೆ ಹೆಚ್ಚಳದ ಉದ್ದೇಶ ಶ್ರೀಮಂತ ರೈತರ ಪ್ರಭಾವವನ್ನು ಕುಗ್ಗಿಸುವುದು ಮತ್ತು ಸೈನಿಕ ವ್ಯವಸ್ಥೆ ಅಧಿಕಗೊಳಿಸಲು ಮತ್ತು ಆಡಳಿತ ದಕ್ಷತೆ ವ್ಯವಸ್ಥೆಗೊಳಿಸುವುದು.
- ಕ್ಷಾಮದ ಪರಿಸ್ಥಿತಿಯ ಅರಿವು ತಡವಾಗಿ ಬಂದ ನಂತರ ಸುಲ್ತಾನನು ರೈತರಿಗೆ ಮತ್ತು ಕೃಷಿಗೆ ಸೌಲಭ್ಯ ಒದಗಿಸಲು **"ದಿವಾನ್-ಐ-ಕೋಹಿ"** ಎಂಬ ಹೊಸ ಇಲಾಖೆ ತೆರೆದನು.ಇದರ ಮೂಲಕ ಕ್ಷಾಮ ಪರಿಸ್ಥಿತಿ ಎದುರಿಸಲು ಅನೇಕ ಬಾವಿಗಳನ್ನು ತೋಡಿಸಿದನು. ಕೃಷಿಕರಿಗೆ ಸಾಲ ನೀಡಿದನು.
- ದಿವಾನ್-ಐ-ಕೋಹಿಯ ಉದ್ದೇಶ- "ಸಾಗುವಳಿ ಭೂಮಿಯನ್ನು ಅಧಿಕ ಗೊಳಿಸವುದಾಗಿತ್ತು". ಅಮೀರ್ ಐ ಕೋಹಿ ಎಂಬ ಮಂತ್ರಿಯನ್ನು ಕೃಷಿ ಬೆಳವಣಿಗೆ ನೋಡಿಕೊಳ್ಳಲು ನೇಮಿಸಲಾಯಿತು.

2. ರಾಜಧಾನಿಯ ಬದಲಾವಣೆ (1326-27)

- ಸುಲ್ತಾನನು ದೇವಗಿರಿಗೆ **ದೌಲತಾಬಾದ್** ಎಂದು ಪುನರ್ ನಾಮಕರಣ ಮಾಡಿ **1326**ರಲ್ಲಿ ತನ್ನ ರಾಜಧಾನಿಯನ್ನು ಬದಲಾಯಿಸುವ ಅನರ್ಹದ ಕ್ರಮ ಕೈಗೊಂಡನು. ಈ ಕ್ರಮವು ಯೋಗ್ಯವು ಆಗಿದ್ದ ದೇವಗಿರಿಯು ಸಾಮ್ರಾಜ್ಯದ ಮಧ್ಯಭಾಗದಲ್ಲಿದ್ದು ಆಡಳಿತ ನಿರ್ವಹಣೆಯ ಅದರಲ್ಲೂ ದಕ್ಷಿಣ ಭಾಗದ ಆಡಳಿತ ನಿರ್ವಹಣೆಗೆ ಅನುಕೂಲಕರ ಎಂದು ಭಾವಿಸಿ ರಾಜಧಾನಿಯ ಬದಲಾವಣೆ ನಿರ್ಧಾರ ಕೈಗೊಂಡಿರಬಹುದು ಮತ್ತು ಮಂಗೋಲರ ದಾಳಿಯಿಂದ ಇದು ಸುರಕ್ಷಿತವಾಗಿತ್ತು.
- ಲೇನ್ ಪೋಲ್ ರವರು "ದೌಲತಾಬಾದ್ ತಪ್ಪು ಮಾರ್ಗ ಹಿಡಿದ ಶಕ್ತಿಗೆ ಉತ್ತಮ ಸ್ಮಾರಕವಾಗಿದೆ" ಎಂದು ಹೇಳಿದ್ದಾರೆ.
- ಈ ಯೋಜನೆ ವಿಫಲಗೊಂಡು ರಾಜಧಾನಿಯನ್ನು ಮತ್ತೆ ದೆಹಲಿಗೆ ವರ್ಗಾಹಿಸಿದನು. ದೆಹಲಿ ಮತ್ತೆ ತನ್ನ ವೈಭವ ಕಾಣಲು 14 ವರ್ಷ ಬೇಕಾಯಿತು.

ನಾಣ್ಯ ಪದ್ಧತಿಯಲ್ಲಿ ಪ್ರಯೋಗ (1329-30)

- ಇವನು 200 ಗ್ರೈನ್ ಗಳ ತೂಕದ ಹೊಸ ಚಿನ್ನದ ನಾಣ್ಯವಾದ **'ದಿನಾರ'** ಚಲಾವಣೆಗೆ ತಂದನು.
- ಇತರ ನಾಣ್ಯಗಳು:- ಅದಲಿ (ಬೆಳ್ಳಿನಾಣ್ಯ 140 ಗ್ರೈನ್ ತೂಕ) ಮತು ದಾಮ್ ಪಮುಖವಾದವು.

- ಎಡ್ವರ್ಡ್ ಥಾಮಸ್ ರವರು ಮಹಮ್ಮದ್ ಬಿನ್-ತುಘಲಕ್‌ನನ್ನು **"ಹಣಗಾರರ ರಾಜ"** ಎಂದು ಕರೆದಿದ್ದಾರೆ.
- ಸುಲ್ತಾನನು ನಡೆಸಿದ ಪ್ರಯೋಗಗಳಲ್ಲೆಲ್ಲಾ ಅತ್ಯಂತ ಸಾಹಸದ್ದೆಂದರೆ 1329-30 ರ ನಡುವೆ **ತಾಮ್ರದ ನಾಣ್ಯಗಳನ್ನು** ಚಲಾವಣೆಗೆ ತಂದನು. (ಚೀನಾ ಮತ್ತು ಪರ್ಷಿಯಾಗಳಲ್ಲಿ ಮೊದಲೇ ಇತ್ತು) 13ನೇ ಶತಮಾನದ ಕೊನೆಗೆ ಚೀನಾದ ಕುಬ್ಲಾಯ್ ಖಾನನು **"ಕಾಗದದ ಹಣ"** ಚಲಾವಣೆಗೆ ತಂದಿದ್ದನು.
- ತಾಮ್ರದ ನಾಣ್ಯಗಳು ಬೆಳ್ಳಿ ಮತ್ತು ಬಂಗಾರದ ನಾಣ್ಯಗಳ ಮೌಲ್ಯಗಳಿಗೆ ಸಮವೆಂದು ಆಜ್ಞೆ ಮಾಡಿದನು.
- ಬರ್ನಿಯು "ಎಲ್ಲಾ ಹಿಂದೂಗಳ ಮನೆಗಳು ಟಂಕಸಾಲೆಗಳಾದವು ಮತ್ತು ವಿವಿಧ ಪ್ರಾಂತ್ಯಗಳಲ್ಲಿದ್ದ ಹಿಂದೂಗಳು ಕೋಟಿ ಕೋಟಿ ನಾಣ್ಯಗಳನ್ನು ತಯಾರಿಸಿದರು" ಎಂದಿದ್ದಾನೆ.

3. ಮಂಗೋಲರನ್ನು ಹಣದ ಮೂಲಕ ಸಮಾಧಾನ ಪಡಿಸುವ ನೀತಿ

- ಮಂಗೋಲರು ವಾಯುವ್ಯ ಗಡಿ ದಾಟಿ ಪ್ರವಾಹದಂತೆ ನುಗ್ಗಿದರು. ಮಂಗೋಲರ ಆಯುಧಗಳೆಂದರೆ ಬೆಂಕಿ ಮತ್ತು ಕತ್ತಿ, ಇವರಿಗೆ ಅಪಾರ ಸಂಪತ್ತು ಕೊಟ್ಟು ವಾಪಸ್ ಕಳುಹಿಸಿದನು.
- ರಾಜಧಾನಿ ವರ್ಗಾವಣೆ ತಿಳಿದ ಟ್ರಾನ್ಸೋಕ್ಸಿಯಾದ ಚಗಟಾಯ್ ನಾಯಕ **'ತರ್ಮಾಷಿರೀನ್'**ಖಾನ್ ನೇತೃತ್ವದಲ್ಲಿ 1328ರಲ್ಲಿ ವಾಯುವ್ಯದ ಮೂಲಕ ಭಾರತಕ್ಕೆ ದಂಡೆತ್ತಿ ಬಂದನು.
- ಸುಲ್ತಾನನ ಈ **"ತೃಪ್ತಿಪಡಿಸುವ ನೀತಿಯು"** ಮುಂದೆ ಮಂಗೋಲರ ಹೆಚ್ಚಿನ ದಾಳಿಗಳಿಗೆ ಕಾರಣವಾಯಿತು.

4. ಪ್ರಪಂಚವನ್ನೇ ಗೆಲ್ಲುವ ಯೋಜನೆ.

- ಅಲ್ಲಾವುದ್ದೀನ್ ಖಿಲ್ಜಿಯಂತೆ ಮಹಮ್ಮದ್ ಬಿನ್ ತುಘಲಕನು ಪ್ರಪಂಚವನ್ನೇ ಗೆಲ್ಲುವ ಆಕಾಂಕ್ಷೆ ಹೊಂದಿದ್ದನು. ಇವನ ಆಸ್ಥಾನದ ಕೆಲವು **"ಖುರಸಾನಿ ಕುಲೀನರು"** ಈ ಯೋಜನೆಗೆ ಪ್ರೇರೇಪಿಸಿದರು.
- ಖುರಾಸಾನ್ ಮತ್ತು ಇರಾಕ್ ವಶಪಡಿಸಿಕೊಳ್ಳಲು ಸುಮಾರು 3,70,000 ಸೈನಿಕರನ್ನು ಸಂಘಟಿಸಿ ಮುಂಗಡ ವೇತನ ನೀಡಿದನು. ಆದರೆ ಭೌಗೋಳಿಕ ಕಾರಣಗಳಿಂದಾಗಿ ಇದು ವಿಫಲಗೊಂಡಿತು.

ಸೈನಿಕ ಸಾಧನೆಗಳು

- ಯಾವುದೇ ದೆಹಲಿಯ ಸುಲ್ತಾನನು ಹೊಂದಿರದಷ್ಟು ವ್ಯಾಪ್ತಿಯ ವಿಶಾಲ ಸಾಮ್ರಾಜ್ಯವನ್ನು ಮಹಮ್ಮದ್-ಬಿನ್-ತುಘಲಕ್‌ನು ಹೊಂದಿದ್ದನು. ಇವನ ಸಾಮ್ರಾಜ್ಯಕ್ಕೆ ಒಳಪಟ್ಟ ರಾಜ್ಯಗಳೆಂದರೆ ಉತ್ತರದ ಕಾಶ್ಮೀರ, ದಕ್ಷಿಣದ ದ್ವಾರಸಮುದ್ರ, ಪೂರ್ವದ ಬಂಗಾಳ, ಪಶ್ಚಿಮದ ಸಿಂದ್.

ನಗರಕೋಟ್‌ನ ಆಕ್ರಮಣ -1337-38.

- ಪಂಜಾಬಿನ ನಗರಕೋಟ್‌ನ ಹಿಂದೂ ದೊರೆಯನ್ನು ಸೋಲಿಸಿದ ಸುಲ್ತಾನ ತನ್ನ ರಾಜ್ಯಕ್ಕೆ ಸೇರಿಸಿ ಕೊಂಡನು.

ಕರಜಿಲ್ ಆಕ್ರಮಣ -1337-38.

- ಮಹಮ್ಮದ್-ಬಿನ್-ತುಘಲಕ್ ಕುರಸಾನ್ ಯುದ್ಧದಲ್ಲಿ ವಿಫಲವಾದ ಬಳಿಕ ಚೀನಾದ ಕುರಜಲ್ ಪ್ರದೇಶ ಗೆದ್ದು ಚೀನಾ ಮತ್ತು ಭಾರತದ ಬಾಂಧವ್ಯ ಬೆಳೆಸುವುದು ಇವನ ಗುರಿಯಾಗಿತ್ತು.
- ಈ ಯುದ್ಧಕ್ಕೆ ಕಾರಣ ಕರಜಲ್ ಪ್ರಾಂತ್ಯದ ರಾಜನಿಗೆ ದೆಹಲಿಯ ಸಾರ್ವಭೌಮತ್ವ ಒಪ್ಪಿಕೊಳ್ಳುವಂತೆ ಹೇಳಿದನು. ಆದರೆ ಅವನು ತಿರಸ್ಕರಿಸಿದನು. ಇದರಿಂದ ಅವನನ್ನು ಸೋಲಿಸಲು ತನ್ನ ದಂಡನಾಯಕ ಖುಸ್ರುಮಲ್ಲಿಕ್‌ನನ್ನು 10,000 ಸೈನಿಕರೊಂದಿಗೆ ಕಳುಹಿಸಿ ಅರಸನನ್ನು ಸೋಲಿಸಿ ಸುಲ್ತಾನನಿಗೆ ವಾರ್ಷಿಕ ಕಪ್ಪವನ್ನು ಕೊಡಲೊಪ್ಪಿದನು.

ದಕ್ಷಿಣ ಭಾರತದ ಪ್ರದೇಶಗಳ ಆಕ್ರಮಣ.

- ಸಾಗರ್‌ನ ಜಹಗೀರುದಾರ ಬಹಾವುದ್ದೀನ್ ಗುರುಷ್ಪಾನು ದಂಗೆ ಎದ್ದುದು ದಾಳಿಗೆ ಕಾರಣವಾಯಿತು. ದೆಹಲಿಯ ಸೈನ್ಯ ಗುರುಷ್ಪಾನನ್ನು ಸೋಲಿಸಿತು. ಸೋತ ಇವನು ಕಂಪಿಲಿಯ ರಾಜನ ಬಳಿ ಆಶ್ರಯ ಪಡೆದನು. ಕಂಪಲಿಯ ರಾಜರು ದೇವಗಿರಿಯ ಸಾಮಂತರಾಗಿದ್ದರು. ಇವು ಕೂಡ ಮಹಮ್ಮದ್ ಬಿನ್ ತುಘಲಕ್‌ನ ವಶವಾದವು.
- ನಂತರ ಗುರುಷ್ಪಾನು ಹೊಯ್ಸಳರ 3ನೇ ವೀರಬಲ್ಲಾಳನ ಹತ್ತಿರ ಆಶ್ರಯ ಪಡೆದನು. 3ನೇ ಬಲ್ಲಾಳನು ದೆಹಲಿ ಸೈನ್ಯದ ವಿರುದ್ಧ ಸೋತನು. ಸೋತ ಹೊಯ್ಸಳರು ದೆಹಲಿಯ ಸಾಮಂತರಾದರು.
- ತುಘಲಕ್‌ನು ನಂತರ ಕೊಂಧನದ ನಾಗನಾಯಕನನ್ನು ಸೋಲಿಸಿದನು.

ರಾಜಸ್ಥಾನದ ವಿಫಲತೆ.

- ಇಲ್ಲಿ ಮಾಲ್ದೇವನ ಮಗ ಜಯ್ಸನು ಮೇವಾರದಿಂದ ಹಿಂದೆ ಸರಿಯುವಂತೆ ಮಾಡಿದನು. ಹಾಗೂ **ರಾಣಾ ಹಮ್ಮೀರದೇವನು** ಮೇವಾರವನ್ನು ವಶಪಡಿಸಿಕೊಂಡನು. ಹಮ್ಮೀರದೇವನು ಸುಲ್ತಾನನ್ನು ಸೋಲಿಸಿದನು.

ಕಾಳನೂರು ಮತ್ತು ಪೇಶಾವರ ದಂಡಯಾತ್ರೆ.

- ಮಂಗೋಲರ ದಾಳಿಯನ್ನು ಸಂಪೂರ್ಣವಾಗಿ ತಡೆಯಲು ಮಹಮ್ಮದ್ದನು ಕಾಳನೂರು ಮತ್ತು ಪೇಷಾವರದ ಮೇಲೆ ದಾಳಿ ಮಾಡಿದನು.

ದಂಗೆಗಳು ಮತ್ತು ಅವುಗಳ ದಮನ

- ಮೊದಲ ದಂಗೆಯು 1326ರಲ್ಲಿ ದಖನ್ನಿನ ಸಾಗರ ಪ್ರದೇಶದ ಬಹಾವುದ್ದೀನ್ ಗುರುಷ್ಪಾನು ದಂಗೆ ಎದ್ದನು. ಮಹಮ್ಮದ್ ಬಿನ್-ತುಘಲಕ್‌ನು ಇವನನ್ನು ಕಡಿದು ಚರ್ಮ ಸುಲಿಸಿದನು.
- ಉಚ್-ಸಿಂದ್ ಮತ್ತು ಮುಲ್ತಾನ್ ಪ್ರಾಂತ್ಯದ ಗೌರ್ನರ್ ಕಿಚ್ಲುಖಾನ್ ದಂಗೆ ಎದ್ದನು. ತುಘಲಕನು ಕಿಚ್ಲುಖಾನ್‌ನನ್ನು ಹಿಡಿದು ಅವನ ತಲೆಯನ್ನು ಕತ್ತರಿಸಿ ಮುಲ್ತಾನ್‌ನ ದ್ವಾರದಲ್ಲಿ ನೇತು ಹಾಕಲಾಯಿತು.
- ಬಂಗಾಳದಲಿ ಗೌರ್ನರ್ ಪಕುದೀನ್ ಮುಬಾರಕ್ ಷಾನು

- 1338ರಲ್ಲಿ ದೆಹಲಿ ಸುಲ್ತಾನರ ನಿಷ್ಠೆ ತೊರೆದು ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಟಂಕಿಸಿದನು. ನಂತರ ಇದು ಸ್ವತಂತ್ರವಾಯಿತು.
- ಮಲಬಾರ್‌ನ ಜಲಾಲುದ್ದೀನ್ ಹಸನ್ ಷಾನು 1335ರಲ್ಲಿ ತಾನೇ ಸುಲ್ತಾನೆಂದು ಘೋಷಿಸಿಕೊಂಡು ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿದ. ಇದನ್ನು ತಡೆಯಲಾಗದೆ ಇದರಿಂದ ಮಲಬಾರ್ ಸ್ವತಂತ್ರಗೊಂಡು ಮಧುರೈಯಲ್ಲಿ ಸ್ವತಂತ್ರ ಮುಸ್ಲಿಂ ರಾಜ್ಯ ಹುಟ್ಟಿಕೊಂಡಿತು.
- ಇವುಗಳಿಂದ ಉತ್ತೇಜಿತರಾದ ಹಿಂದೂಗಳ ದೊರೆಗಳು ತೆಲಂಗಾಣದಲ್ಲಿ ಹಿಂದೂ ರಾಷ್ಟ್ರಿಯ ಚಳುವಳಿ **ಪೋಲಿನಾಯಕನ ನೇತೃತ್ವದಲ್ಲಿ** ಸಂಘಟಿಸಲ್ಪಟ್ಟಿತು. ತೆಲಂಗಾಣದಲ್ಲಿ ಆದಂತೆ ಕೃಷ್ಣಾ ನದಿ ಮತ್ತು ದಕ್ಷಿಣ ಮತ್ತು ಪಶ್ಚಿಮ ಕರಾವಳಿ ಪ್ರದೇಶದಲ್ಲಿ **ಚಾಲುಕ್ಯ ಸೋಮದೇವನ** ನೇತೃತ್ವದಲ್ಲಿ ಮುಸ್ಲಿಂ ಸೈನ್ಯಗಳನ್ನು ಸೋಲಿಸಿದರು.
- ಕಂಪಿಲಿಯಲ್ಲಿದ್ದ ಹರಿಹರ ಮತ್ತು ಬುಕ್ಕರ ಮೂಲಕ ಹಿಂದೂಗಳ ಹೋರಾಟ ಮುಂದುವರೆದು ಸ್ವತಂತ್ರ **ವಿಜಯನಗರ ಸಾಮ್ರಾಜ್ಯ** ಅಸ್ತಿತ್ವಕ್ಕೆ ಬಂದಿತು. (ಕ್ರಿ.ಶ.1336).
- ಕ್ರಿ.ಶ.1337ರಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ಭಾಗಗಳನ್ನೊಳಗೊಂಡ **"ಬಹುಮನಿ ರಾಜ್ಯವೆಂಬ"** ಸ್ವತಂತ್ರ ರಾಜ್ಯವೂ ಹುಟ್ಟಿಕೊಂಡಿತು.
- ಸಿಂಧ್‌ನ ದಂಗೆಯನ್ನು ಅಡಗಿಸಲು ನಿರತನಾಗಿದ್ದಾಗ ತಟ್ಟಾದ ಬಳಿ ಜ್ವರ ಪೀಡಿತನಾದ ಮಹಮ್ಮದ್-ಬಿನ್-ತುಘಲಕ್‌ನು **1351 ಮಾರ್ಚ್ 20ರಂದು ಪ್ಲೇಗು ಕಾಯಿಲೆಯಿಂದ** ಮರಣ ಹೊಂದಿದನು.
- ಸುಲ್ತಾನನ ಮರಣ ಕುರಿತು ಬದೌನಿಯು "ಸುಲ್ತಾನನು ತನ್ನ ಪ್ರಜೆಗಳಿಂದ ಪಾರಾದನು ಮತ್ತು ಪ್ರಜೆಗಳು ಸುಲ್ತಾನನ ದಬ್ಬಾಳಿಕೆಯಿಂದ ಮುಕ್ತರಾದರು" ಎಂದಿದ್ದಾನೆ.
- ಸುಲ್ತಾನನು ಧಾರ್ಮಿಕ ವ್ಯಕ್ತಿಯಾಗಿದ್ದ ಆದರೆ ಧರ್ಮಾಂಧನಾಗಿರಲಿಲ್ಲ. ಉದಾ;-ಜೈನಮುನಿ ಪ್ರಭುಸೂರಿಯನ್ನು ಆಸ್ಥಾನಕ್ಕೆ ಆಹ್ವಾನಿಸಿ ಹೆಚ್ಚಿನ ಗೌರವ ಸಲ್ಲಿಸುತ್ತಿದ್ದನು.
- ಮಹ್ಮದ್ ಬಿನ್ ತುಘಲಕನನ್ನು ಇತಿಹಾಸಕಾರರು **"ವೈಪರೀತ್ಯಗಳ ಸಂಮಿಶ್ರಣ"** ಎಂದಿದ್ದಾರೆ.
- ಮಹಮ್ಮದ್-ಬಿನ್-ತುಘಲಕ್‌ನು ಕೈಗೊಂಡ 5 ಯೋಜನೆಗಳ ಕುರಿತು ಇತಿಹಾಸಕಾರರು "ಸುಲ್ತಾನನು ವ್ಯಕ್ತಪಡಿಸಿದ ವಿಚಾರಗಳು ಅವನ ಶತಮಾನದ ಜನರ ಕಲ್ಪನೆಗೂ ನಿಲುಕದಂತಹ ವಿಚಾರಗಳಾಗಿದ್ದವು" ಆದ್ದರಿಂದ ಅವನೊಬ್ಬ **'ಹುಚ್ಚುದೊರೆ'** ಎಂದಿದ್ದಾರೆ.
- ಮಹಮದ್‌ನು **ತಾಮ್ರದ ಟೋಕನ್ ನಾಣ್ಯಗಳನ್ನು** ಚಲಾವಣೆಗೆ ತಂದನು.
- ತನ್ನ ಅರಮನೆಯ ಪಾಕಶಾಲೆಯಿಂದ ಸುಮಾರು 40 ಸಾವಿರ
- ಮಹಮ್ಮದ್-ಬಿನ್-ತುಘಲಕನು ಅಲಂಕಾರದ **ಅಕ್ಷರ ಬರಹ (ಕಾಲಿಗ್ರಫಿ)** ದಲ್ಲಿ ಪ್ರವೀಣನಾಗಿದ್ದನು.

ಫಿರೋಜ್-ಷಾ-ತುಘಲಕ್ (ಕ್ರಿ.ಶ.1351-88)
(Firoz-Shah-Tughluk)

- ಫಿರೋಜನು **'ರಜಬ್'** (ಘಿಯಾಸುದ್ದೀನನ ಮಗ) ಮತ್ತು ನೈಲ (ರಜಪೂತರ ರಣಮಲ್‌ನ ಮಗಳು) ಎಂಬ ದಂಪತಿಗಳಿಗೆ 1309ರಲ್ಲಿ ಜನಿಸಿದನು. ಇವನು ನೋಬೆಲ್ಲರು ಮತ್ತು ಉಲೇಮರ ಒತ್ತಾಯಕ್ಕೆ ಮಣಿದು ಫಿರೋಜನು ಮಾರ್ಚ್ 23, 1351 ರಂದು ಥಟ್ಟಾದಲ್ಲಿ ಸಿಂಹಾನವೇರಿದನು.
- **ಖ್ವಾಜಾ-ಇ-ರೆಹಾನ್** ಎಂಬುವವನನ್ನು ಈ ಮೊದಲೇ ದೆಹಲಿಯ ಸಿಂಹಾಸನವೇರಿಸಲಾಗಿತ್ತು. ನಂತರ ಇವನು ಫಿರೋಜನಿಗೆ ವಿಧೇಯನಾಗಿ, ಸಮನ್ನಾದ ಪ್ರಾಂತ್ಯಧಿಕಾರಿಯಾಗಿ ನೇಮಕಗೊಂಡನು.
- ಫಿರೋಜನು ಮೊದಲು ಮಹಮ್ಮದ್-ಬಿನ್-ತುಘಲಕನಿಗೆ ವಿಧೇಯನಾಗಿದ್ದು ಆತ್ಮೀಯನಾಗಿದ್ದನು.
- ಫಿರೋಜನು ದಿಗ್ವಿಜಯಗಳಿಗಿಂತ ಹೆಚ್ಚಾಗಿ ತನ್ನ ಆಂತರಿಕ ನೀತಿಗೆ ಹೆಚ್ಚಿನ ಆದ್ಯತೆ ನೀಡಿದ್ದನು.
- ಫಿರೋಜನ **ವಜೀರ-ಮಲ್ಲಿಕ್-ಐ-ಮಕ್ಬುಲ್** ಮತಾಂತರಗೊಂಡ ತೆಲಂಗಾಣದ ಬ್ರಾಹ್ಮಣ.

ಹಣಕಾಸು ಮತ್ತು ಕಂದಾಯ ವ್ಯವಸ್ಥೆ.

- ರಾಜ್ಯಕ್ಕೆ ರೈತರು ಕೊಡಬೇಕಾಗಿದ್ದ ಸಾಲವನ್ನು ವಜಾ ಮಾಡಿದನು ಹಾಗೂ ಹಿಂದೆ ಇದ್ದ ಸುಮಾರು **23** ವಿಧದ **ತೆರಿಗೆಗಳನ್ನು** ರದ್ದುಪಡಿಸಿ ಖುರಾನಿನ ಪ್ರಕಾರ ತೆರಿಗೆಗಳನ್ನು ವಿಧಿಸಿದನು.
- ರಾಜ್ಯದ ಕಂದಾಯ ನಿಗದಿ ಮಾಡಲು **ಖ್ವಾಜಾ ಹಸ್ಸುದ್ದೀನ್ ಜುನೈದಿ** ಎಂಬ ಅಧಿಕಾರಿಯಿದ್ದನು. ಫಿರೋಜನು ವಿಧಿಸಿದ ಕಂದಾಯದ 4 ತೆರಿಗೆಗಳೆಂದರೆ:-

1) **ಖಾರಜ್/ಭೂಕಂದಾಯ** (ಭೂಮಿಯ ಉತ್ಪನ್ನದ 1/10 ಭಾಗ)
2) **ಖಮ್ಸ್** (ಗಳಿಕೆ ಹಾಗೂ ಗಣಿಗಳಿಂದ ಬಂದ ಉತ್ಪನ್ನದ 1/5 ಭಾಗ)
3) **ಜಕಾತ್** (ಧಾರ್ಮಿಕ ಉದ್ದೇಶಗಳಿಗಾಗಿ ಮುಸ್ಲಿಂರಿಂದ ಶೇ $2^1/_2$ ಭಾಗ ಆಸ್ತಿ ಪಾಸ್ತಿಗಳ ಮೇಲಿನ ತೆರಿಗೆ)
4) **ಜೆಸಿಯಾ** (ಹಿಂದೂಗಳ ಮೇಲಿನ ವಿಶೇಷ ತೆರಿಗೆ) ಈ ಹಿಂದೆ ತೆರಿಗೆ ಮುಕ್ತರಾಗಿದ್ದ ಬ್ರಾಹ್ಮಣರ ಮೇಲೂ ತೆರಿಗೆ ವಿಧಿಸಿದನು.

- ಸೈನಿಕರು ಲೂಟಿ ಮಾಡಿದ್ದರಲ್ಲಿ 1/5 ಭಾಗ ರಾಜ್ಯಾದಾಯಕ್ಕೆ ಕೊಡಬೇಕಾಗಿತ್ತು.
- ನೀರಾವರಿ ಪ್ರದೇಶಗಳ ಒಟ್ಟು ಉತ್ಪಾದನೆಯಲ್ಲಿ ಶೇ10ರಷ್ಟು ನೀರಾವರಿ ತೆರಿಗೆ (ಷರ್ಬ) ಕೊಡಬೇಕೆಂದು ನಿರ್ಧರಿಸಿದನು.
- ಪಿಂಚಣಿ ಅಥವಾ ನಿವೃತ್ತಿ ವೇತನ ಪದ್ಧತಿಯನ್ನು ಆರಂಭಿಸಿದನು.

ನೀರಾವರಿ ಮತ್ತು ಕೃಷಿ ಅಭಿವೃದ್ಧಿ:-

- ನೀರಾವರಿ ಕಾಲುವೆಗಳ ನಿರ್ಮಾಣದ ಮೂಲಕ ಕೃಷಿ ಅಭಿವೃದ್ಧಿಪಡಿಸಿದನು.
- ಪಂಸ್-ಐ-ಸಿರಾಜ್ ಪ್ರಕಾರ ಸೆಟ್ಲೆಜ್‌ನಿಂದ ಒಂದು, ಯಮುನಾ ನದಿಯಿಂದ ಒಂದು ಕಾಲುವೆಗಳನ್ನು ತೋಡಿಸಲಾಯಿತೆಂದು ತಿಳಿಸಿದ್ದಾನೆ.
- ಸರ್-ಹಿಂದ್-ಯಹ್ಯಾನ ಪ್ರಕಾರ – 1) ಸಟ್ಲೆಜ್ – ಘಘರ್ ವರೆಗೆ (36ಮೈಲಿ) 2) ಮಾಂಡವಿ ಮತ್ತು ಸಿರ್ಮುರ್ ಬೆಟ್ಟಗಳಿಂದ ಹನ್ಸಿವರೆಗೆ 3) ಘಗ್ಗರ್ – ಸಿರ್ಸೋತಿಯ ಹರನಿ-ಬೇರ ಗ್ರಾಮದವರೆಗೆ 4) ಯಮುನಾ- ಫಿರೋಜ್‌ಬಾದ್ ವರೆಗೆ ಕಾಲುವೆಗಳು ವಿಸ್ತರಿಸಿದ್ದವು ಎಂದಿದ್ದಾನೆ.
- ಪಾಳು ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡಿ ಅವುಗಳಿಂದ ಬಂದ ಆದಾಯವನ್ನು ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಗಳಿಗೆ ವಿನಿಯೋಗಿಸಿದನು.

ಸಾರ್ವಜನಿಕ ಕಾಮಗಾರಿ ಕಾರ್ಯಗಳು.

- ಫಿರೋಜನು ಸುಮಾರು 845 ಲೋಕೋಪಯೋಗಿ ಕಾರ್ಯಗಳು 300 ಕ್ಕೂ ಹೆಚ್ಚು ಪಟ್ಟಣಗಳನ್ನು ನಿರ್ಮಿಸಿದ್ದನು. ಅವುಗಳೆಂದರೆ ಫಿರೋಜ್‌ಪುರ, ಹಿಸ್ಸಾರ, ಜೌನ್‌ಪುರ, ಫಿರೊಜಾ, ಪತೇಹಾರ ಮತ್ತು ಫಿರೋಜಾಬಾದ್ ನಗರಗಳು.
- ಕೆಂಪುಕೋಟೆಯ ಹತ್ತಿರವಿದ್ದ ಫಿರೋಜಾಬಾದ್ ಸುಲ್ತಾನನ ಅಚ್ಚುಮೆಚ್ಚಿನ ಪಟ್ಟಣವಾಗಿದ್ದು ಅಲ್ಲಿಯೇ ವಾಸಿಸುತ್ತಿದ್ದನು. ಈಗ ಇದನ್ನು **ಫಿರೋಜ್-ಷಾ-ಕೋಟ್ಲಾ** ಎನ್ನುತ್ತಾರೆ.
- ಹಳೆಯ ಕಟ್ಟಡಗಳ ಜೀರ್ಣೋದ್ದಾರ ಮತ್ತು ಹೊಸ ಕಟ್ಟಡಗಳ ನಿರ್ಮಾಣ ಇವನ ಆಸಕ್ತಿಯಾಗಿತ್ತು. ಹೆಚ್ಚು ಸಂಖ್ಯೆಯ ಕಟ್ಟಡಗಳನ್ನು ನಿರ್ಮಿಸಿದ್ದರಿಂದ ಫಿರೋಜ್‌ನನ್ನು **'ಮಹಾನ್ ಶಿಲ್ಪಿಕಾರ'** ಎಂದು ಕರೆಯುತ್ತಾರೆ.
- ನವ ನಗರಗಳ ನಿರ್ಮಾಣದ ಬಗ್ಗೆ ಫಿರೋಜನು "ದೇವರ ನಮ್ರ ಸೇವಕನಾದ ನನಗೆ ಅವನು ಪಾಲಿಸಿರುವ ಅನೇಕ ಬಳುವಳಿಗಳಲ್ಲಿ ಸಾರ್ವಜನಿಕ ಕಟ್ಟಡಗಳ ರಚನೆಗಳಲ್ಲಿನ ಆಸಕ್ತಿಯೇ ಒಂದಾಗಿದೆ" ಎಂದಿದ್ದಾನೆ.
- ಬಂಗಾಳದ ತನ್ನ ದಂಡೆಯಾತ್ರೆಯಲ್ಲಿ **ಇಕ್ದಾಳಕ್ಕೆ ಅಜಾದ್ ಪುರ** ಎಂದು ಮತ್ತು **ಪಾಂಡುವಾಕ್ಕೆ ಫಿರೋಜ್‌ಬಾದ್** ಎಂದು ನಾಮಕರಣ ಮಾಡಿದನು.
- ಫಿರೋಜನ ಈ ನಿರ್ಮಾಣದ ಕಾರ್ಯಗಳಿಗೆ ಮುಖ್ಯ ಶಿಲ್ಪಿಶಾಸ್ತ್ರಜ್ಞ ಮಲ್ಲಿಕ್-ಷಾಜಿ-ಸಹನ ಮತ್ತು ಅಬ್ದುಲ್ ಹಕ್ ಸಹಾಯಕರಾಗಿದ್ದರು.
- ತೋಟಗಾರಿಕೆಯಲ್ಲಿ ಆಸಕ್ತಿಯಿದ್ದ ದೆಹಲಿ ಸಮೀಪ 1200 ಉದ್ಯಾನವನಗಳನ್ನು ನಿರ್ಮಿಸಿದ್ದಾನೆ.
- ಫಿರೋಜನು ತನ್ನ ಹೊಸ ರಾಜಧಾನಿ ಫಿರೋಜಾಬಾದ್‌ನ್ನು ಸಿಂಗರಿಸಲು ಅಶೋಕನ 2 ಶಾಸನಗಳಾದ ಒಂದನ್ನು ಅಂಬಾಲದ ತೋಪ್ರದಿಂದಲೂ, ಮತ್ತೊಂದು ಮೀರತ್‌ನಿಂದ ಸಾಗಿಸಿದರು.
- ಉದ್ಯೋಗವಕಾಶ ಕಲ್ಪಿಸಲು **ಉದ್ಯೋಗ ವಿನಿಮಯ ಕೇಂದ್ರ** ಸ್ಥಾಪಿಸಿದ್ದನು. ನುರಿತ ವೈದ್ಯರಿಂದ ಔಷಧ ಮತ್ತು ಆಹಾರಗಳನ್ನು ನೀಡುವ **"ದಾರ್-ಉಲ್-ಷಫಾ"** ಎಂಬ ಧರ್ಮದ ಆಸ್ಪತ್ರೆಗಳನ್ನು ಸ್ಥಾಪಿಸಿದನು.

ನ್ಯಾಯಾಂಗ ವ್ಯವಸ್ಥೆ

- ನ್ಯಾಯಾಂಗೀಯ ವಿಷಯಗಳು ಇಸ್ಲಾಂ ಕಾನೂನಿನನ್ವಯ ನಡೆಯುತ್ತಿದ್ದವು. ರಾಜಧಾನಿಯಲ್ಲಿ ಮುಖ್ಯ ಖಾಜಿಯು ಮತ್ತು ಪ್ರಾಂತೀಯ ಪಟ್ಟಣಗಳಲ್ಲಿ ಇನ್ನಿತರೆ ಖಾಜಿಗಳು ನ್ಯಾಯ ವಿತರಿಸುತ್ತಿದ್ದರು.
- ಮಹಮ್ಮದನ ಕಠಿಣ ಶಿಕ್ಷೆಗಳಿಂದ ಮುಕ್ತರಾದ ಜನತೆ ಫಿರೋಜನನ್ನು **'ದೇವರೆಂದೇ'** ಭಾವಿಸಿದ್ದರು.
- ವಿಧವೆಯರು ಅನಾಥರಿಗೆ ಮತ್ತು ಮಧ್ಯಮ ವರ್ಗದ ಬಡ ಮುಸ್ಲಿಂ ಯುವತಿಯರಿಗೆ ರಾಜ್ಯದ ವತಿಯಿಂದ ಆರ್ಥಿಕ ಸಹಾಯ ನೀಡಲು **'ದಿವಾನ್-ಇ-ಖೈರಾತ್'** ಕೇಂದ್ರ ಸ್ಥಾಪಿಸಿದನು.

ನಾಣ್ಯ ವ್ಯವಸ್ಥೆ:-

- ಮಹಮ್ಮದನ ಕಾಲದಲ್ಲಿಯೇ ಇದ್ದ ನಾಣ್ಯಗಳನ್ನು ಮುಂದುವರಿಸಲಾಯಿತು. ಬಡ ಜನರ ಅನುಕೂಲಕ್ಕಾಗಿ ಚಿನ್ನದ ನಾಣ್ಯಗಳಾದ **ಆದಾ (1/2 ಜಿತಾಲ್)** ಹಾಗೂ **ಬಿಖ್** (1/4 ಜಿತಾಲ್) ಎಂಬ ನಾಣ್ಯಗಳನ್ನು ಬೆಳ್ಳಿ ಮತ್ತು ತಾಮ್ರ ಮಿಶ್ರಿತ ಲೋಹದಲ್ಲಿ ಚಲಾವಣೆಗೆ ತಂದನು.

ಶಿಕ್ಷಣ ಸಾಹಿತ್ಯ:-

- ಶೈಕ್ಷಣಿಕ ಬೆಳವಣಿಗೆಗಾಗಿ ಮಸೀದಿಗಳನ್ನು ನಿರ್ಮಿಸಿ ಶಿಕ್ಷಣ ಕೇಂದ್ರಗಳಾಗಿ ನಿರ್ವಹಿಸುವಂತೆ ಮಾಡಿದನು. ಇವನ ಆಸ್ಥಾನದಲ್ಲಿ ಅನೇಕ ವಿದ್ವಾಂಸರಿದ್ದರು. ಜಿಯಾವುದ್ದೀನ್ ಬರ್ನಿಯು **'ಫತ್ವಾ-ಐ-ಜಹಾಂದರಿ' 'ತಾರೀಖ್-ಐ-ಫಿರೋಜ್ ಶಾಹಿ** ಕೃತಿಗಳನ್ನು ರಚಿಸಿದ್ದಾನೆ.
- ಸ್ವತಃ ಸುಲ್ತಾನನೇ **'ಪುತುಹತ್-ಐ-ಫಿರೋಜ್ ಶಾಹಿ'**ಎಂಬ ಆತ್ಮಕಥನ ಬರೆದಿದ್ದಾನೆ.
- ಜ್ವಾಲಾಮುಖಿ ದೇವಾಲಯದಲ್ಲಿದ್ದ 1300 ಸಂಸ್ಕೃತ ಗ್ರಂಥಗಳ ಹಸ್ತ ಪ್ರತಿಗಳನ್ನು ದೆಹಲಿಗೆ ತಂದು ಅವುಗಳಲ್ಲಿ ವೈದ್ಯ ಗ್ರಂಥಗಳನ್ನು, ಪರ್ಷಿಯನ್‌ಗೆ ಭಾಷಾಂತರಿಸಲಾಯಿತು, ಇದೇ **ದಲೈ-ಇ-ಫಿರೋಜ್ ಶಾಹಿ.**
- ಸುಲ್ತಾನನು ವಿದ್ವಾಂಸರಿಗೆ ಮತ್ತು ಖುರಾನ್ ಓದುವವರಿಗಾಗಿ 36 ಲಕ್ಷ ಖರ್ಚು ಮಾಡಿದ್ದನು.

ಗುಲಾಮರು ಮತ್ತು ಕಾರ್ಖಾನೆಗಳು

- ಫಿರೋಜನು ಹೆಚ್ಚೆಚ್ಚು ಗುಲಾಮರನ್ನು ಹೊಂದುವ

ಇವರಿಗೆ ಕರಕುಶಲ ಕೈಗಾರಿಕೆಯಲ್ಲಿ ತರಬೇತಿ ಕೊಡಿಸಿ ಅರಮನೆ ಮತ್ತು ಕಾರ್ಖಾನೆಗಳಲ್ಲಿ ನೇಮಿಸುತ್ತಿದ್ದನು.

- ಫಿರೋಜನು ಗುಲಾಮರಲ್ಲೇ 40,000 ಜನರನ್ನು ಆಯ್ದು ಸೈನಿಕರನ್ನಾಗಿ ನೇಮಿಸಿದ್ದನು. ಆಡಳಿತದಲ್ಲಿ ನೌಕರಿಗಳಲ್ಲಿ ಹಾಗೂ ಆಸ್ಥಾನದಲ್ಲಿ ಗುಲಾಮರಿಗೆ ಹೆಚ್ಚೆಚ್ಚು ಅವಕಾಶ ಕೊಟ್ಟನು.
- ಗುಲಾಮರ ಆಡಳಿತ ನೋಡಿಕೊಳ್ಳಲು **'ದಿವಾನ್-ಐ-ಬಂದಗಾನ್'** ಎಂಬ ಇಲಾಖೆ ಸ್ಥಾಪಿಸಿದ್ದನು.

ಸೈನಿಕ ವ್ಯವಸ್ಥೆ

- ಸೈನ್ಯದಲ್ಲಿ **'ನಿಯತ ಮತ್ತು ಅನಿಯತ'** ಎಂಬ ಎರಡು ಬಗೆಯ ಸೈನಿಕರಿದ್ದರು. ನಿಯತ ಸೈನಿಕರಿಗೆ ಜೀವನಾವಶ್ಯಕವಾಗಿ ಭೂಮಿ ಕೊಡಲಾಗುತ್ತಿತ್ತು ಮತ್ತು ಅನಿಯತ ಸೈನಿಕರಿಗೆ ವೇತನ ನೀಡಲಾಗುತ್ತಿತ್ತು.
- ಸುಲ್ತಾನನು ಸಾವಿರಾರು ಇಖ್ತಾಗಳನ್ನು ನಾಗರೀಕ ಮತ್ತು ಸೈನಿಕ ಅಧಿಕಾರಿಗಳಿಗೆ ನೀಡಿದನು. ಮತ್ತು ಇಖ್ತಾ ಪ್ರದೇಶಗಳನ್ನು ಅನುವಂಶಿಕವೆಂದು ಕಾನೂನು ಮಾಡಿದನು.
- ಫಿರೋಜನು ಉನ್ನತ ಹುದ್ದೆಗಳನ್ನು ಅನುವಂಶಿಕತ್ವ ಎಂಬ ನಿಯಮ ಜಾರಿಗೆ ತಂದಿದ್ದನು.
- ಕೇಂದ್ರಿಯ ಸೈನ್ಯದಲ್ಲಿ 80-90 ಸಾವಿರ ಅಶ್ವದಳವಿತ್ತು.

ಧಾರ್ಮಿಕ ವ್ಯವಸ್ಥೆ:-

- ಆಡಳಿತದಲ್ಲಿ ಇಸ್ಲಾಂ ಕಾನೂನುಗಳು ಮತ್ತು ಉಲೇಮರ ಪ್ರಭಾವಕ್ಕೆ ಪ್ರಾಧಾನ್ಯತೆ ನೀಡಿದ ಮೊದಲ ದೆಹಲಿ ಸುಲ್ತಾನ **'ಫಿರೋಜ್-ಷಾ-ತುಘಲಕ್'**ನಾಗಿದ್ದಾನೆ.
- ಇವನು ತನ್ನ ಆತ್ಮಕಥನದಲ್ಲಿ ತಾನು ಮುಸ್ಲಿಂರಿಗೆ ಮಾತ್ರ ಸುಲ್ತಾನನೆಂದು ಮತ್ತು ಹಿಂದೂಗಳನ್ನು **ಕಾಫೀರರು** ಅಥವಾ ಜಿಮ್ಮಿಗಳೆಂದು ಕರೆದಿದ್ದಾನೆ. ಹಿಂದೂ ಧರ್ಮ ತ್ಯಜಿಸಿ ಮುಸ್ಲಿಂನಾದವನಿಗೆ ಜೆಸಿಯಾದಿಂದ ವಿನಾಯ್ತಿ ನೀಡುತ್ತೇನೆ ಎಂದನು.
- ಮಹ್ಮದ್ ಘಜ್ನಿಯಂತೆ ಇವನೂ ಸಹ **'ವಿಗ್ರಹ ಭಂಜಕನೆಂಬ'** ಬಿರುದು ಧರಿಸಿದ್ದನು. ಫಿರೋಜನು **'ಕಾಂಗ್ರಾದ ಜ್ವಾಲಾಮುಖಿ ದೇವಾಲಯ'** ನಾಶಮಾಡಿದನು. ಪುರಿಯ ಆಕ್ರಮಣಕ್ಕೆ ಕಾರಣ ಹಿಂದೂ ದೇವಾಲಯಗಳನ್ನು ನಾಶಪಡಿಸುವುದಾಗಿತ್ತು.
- ಹಿಂದೆ ಜೆಸಿಯಾದಿಂದ ವಿನಾಯ್ತಿ ಹೊಂದಿದ್ದ ಬ್ರಾಹ್ಮಣರ ಮೇಲೆ ಜೆಸಿಯಾವನ್ನು ವಿಧಿಸಿದ ಮೊದಲ ಮುಸ್ಲಿಂ ದೊರೆಯಾಗಿದ್ದಾನೆ.
- ಮೊಟ್ಟ ಮೊದಲ ಬಾರಿಗೆ ಮುಸಲ್ಮಾನ ಭಾರತದ ಇತಿಹಾಸದಲ್ಲಿ ತಾನು **'ಖಲೀಫನ ನಿಯೋಗಿ'** ಎಂದು ಸಾರಿದನಲ್ಲದೆ ಎರಡು ಭಾರಿ ಖಲೀಫನಿಂದ ರಾಜ್ಯಾಧಿಕಾರ ಲಾಂಛನವನ್ನು ಪಡೆದಿದ್ದನು.

ಫಿರೋಜನ ಸೈನಿಕ ಸಾಧನೆಗಳು.

1) **ಬಂಗಾಳ** :- ಷಂಸುದ್ದೀನ್ ಇಲಿಯಾಸ್‌ನು ಬಂಗಾಳದಲ್ಲಿ ತಿರ್ಹತ್‌ನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಇದರಿಂದ ಫಿರೋಜನು 70,000 ಅಶ್ವ ಸೈನಿಕರೊಂದಿಗೆ 1353ರಲ್ಲಿ ಬಂಗಾಳದ ಮೇಲೆ ದಾಳಿ ಮಾಡಿದನು. ಇಲಿಯಾಸ್ ಕೋಟೆಯನ್ನು ವಶಪಡಿಸಲಾಗದೆ 1353ರಲ್ಲಿ ಹಿಂದಿರುಗಿದನು, ಮತ್ತೆ 1359ರಲ್ಲಿ ದಾಳಿ ಮಾಡಿದ ಆದರೂ ವಶವಾಗಲಿಲ್ಲ. ಕೊನೆಗೆ ಫಿರೋಜನು 'ಬಂಗಾಳವನ್ನು' ಸ್ವತಂತ್ರ ಎಂದು ಮಾನ್ಯ ಮಾಡಿ ಹಿಂತಿರುಗಿದನು.

2) **ಜಾಜ್ ನಗರ (ಒರಿಸ್ಸಾ)** :- ಈ ದಾಳಿಯ ಉದ್ದೇಶ ಪುರಿಯ ಹಿಂದೂ ದೇವಾಲಯ ನಾಶಪಡಿಸುವುದಾಗಿತ್ತು. ಜಾಜ್ ನಗರದ ರಾಜ 3ನೇ ಭಾನುದೇವನು ದೆಹಲಿ ಸೈನ್ಯ ಧಾವಿಸುತ್ತಿದ್ದಂತೆ ಫಲಾಯನಗೈದನು. ನಂತರ ಒಪ್ಪಂದವಾಗಿ ಭಾನುದೇವನು ಪ್ರತಿ ವರ್ಷ ಕಪ್ಪ ನೀಡುವುದಾಗಿ ಒಪ್ಪಿಕೊಂಡನು.

- **ನಗರಕೋಟ್‌ನ ವಶ** :- ಫಿರೋಜ್‌ನ 6 ತಿಂಗಳ ಮುತ್ತಿಗೆಯ ನಂತರ ನಗರಕೋಟ್‌ನ ರಾಜ ಶರಣಾದನು ಮತ್ತು ಸುಲ್ತಾನನ ಸಾರ್ವಭೌಮತ್ವವನ್ನು ಒಪ್ಪಿಕೊಂಡನು. ಇಲ್ಲಿನ ಜ್ವಾಲಾಮುಖಿ ದೇವಾಲಯವನ್ನು ನಾಶಗೊಳಿಸಲಾಯಿತು.
- **ಸಿಂದ್‌ನ ಆಕ್ರಮಣ**:- 1363ರಲ್ಲಿ ಫಿರೋಜನು ಸಿಂದ್ ಮೇಲೆ ದಾಳಿ ಮಾಡಿ ಜಾವಮ್ ಬಾಬನಿಯನು ಸುಲ್ತಾನನ ಸಾರ್ವಭೌಮತೆಯನ್ನು ಒಪ್ಪಿಕೊಂಡು ಕಪ್ಪ ಕೊಡಲು ಮುಂದಾದನು.
- ಫಿರೋಜನ ಇಬ್ಬರು ಮಕ್ಕಳಾದ ಫತೇಖಾನ್ ಮತ್ತು ಜಫರ್ ಖಾನ್ ಮರಣ ಹೊಂದಿದ್ದರು. ಇವನು ತನ್ನ ಮೂರನೇ ಮಗ ಮಹ್ಮದ್ ಖಾನ್‌ನನ್ನು ತನ್ನ ಉತ್ತರಾಧಿಕಾರಿಯೆಂದು ನೇಮಕ ಮಾಡಿದನು.
- ಫಿರೋಜನು 1388ರಲ್ಲಿ ಪತೆಖಾನ್‌ನ ಮಗ **ತುಘಲಕ್ ಖಾನನಿಗೆ** ಅಧಿಕಾರ ವಹಿಸಿ ಮರಣ ಹೊಂದಿದನು.
- **1411 ರಲ್ಲಿ ಮಹ್ಮದ್ ಷಾನ** ನಿಧನದೊಂದಿಗೆ ತುಘಲಕ್ ಸಂತತಿ ಕೊನೆಗೊಂಡು ನಂತರ **'ಖಿಜರ್‌ಖಾನ್'** ಎಂಬುವನು **'ಸಯ್ಯದ್'** ಸಂತತಿಯನ್ನು ಸ್ಥಾಪಿಸಿದನು.

ತೈಮೂರನ ದಾಳಿ (Invasion of Timur 1398-99)

- ತೈಮೂರು 1336ರಲ್ಲಿ ಟ್ರಾನ್ಸೋಕ್ಸಿಯಾನದ **ಸಮರ್‌ಖಂಡ್‌ಕೇಶ್** ಪಟ್ಟಣದಲ್ಲಿ ಜನಿಸಿದನು. ಇವನು ಟರ್ಕರ **'ಬಿರ್ಲಾಸ್'** ಪಂಗಡಕ್ಕೆ ಸೇರಿದವನಾಗಿದ್ದನು. ಇವನ ತಂದೆ ತುಘಾಯ್ ಬರ್‍ಲಾಸ್‌ನ ಗೂರ್ಘ ಶಾಖೆಯ ಮತ್ತು ಕೇಶ್ ಎಂಬ ಸಂಸ್ಥಾನದ ಒಡೆಯನಾಗಿದ್ದನು ಪ್ರಮುಖವಾಗಿ ಯು-ಚಿ-ಪಂಗಡಕ್ಕೆ ಸೇರಿದ್ದನು.
- ತೈಮೂರನು ದಕ್ಷಿಣ ರಷ್ಯಾ ಮತ್ತು ಭಾರತದ ದೆಹಲಿಯವರೆಗೆ ಲೂಟಿ ಮಾಡಿದನು.
- **ತೈಮೂರನು ಭಾರತದ ದಾಳಿಗೆ ಕಾರಣ:** ಭಾರತದ ಅಗಾದ ಸಂಪತ್ತಿನ ಮೋಹ ಮತ್ತು ಮುಸ್ಲಿಂಮೇತರರನ್ನು

- 1398ರ ಮೊದಲ ಭಾಗದಲ್ಲಿ ತೈಮೂರನ ಮೊಮ್ಮಗ ಫಿರ್ ಮಹ್ಮದ್ ನೇತೃತ್ವದಲ್ಲಿ ಉಜ್ ಮತ್ತು ಮುಲ್ತಾನಿನ ವಶ. ಸ್ವತಃ ತೈಮೂರನು ಸಿಂಧೂ, ಝೀಲಂ ಮತ್ತು ರಾವಿ ನದಿ ದಾಟಿ ಪಂಜಾಬ್ ಪ್ರವೇಶಿಸಿದನು. ತೈಮೂರನ ದಾಳಿಯ ಕಾಲದಲ್ಲಿ ದೆಹಲಿ ಆಳುತ್ತಿದ್ದ ಸುಲ್ತಾನ ಮಹಮ್ಮದ್. ದೆಹಲಿಯಲ್ಲಿ ಸಾಮೂಹಿಕ ನಾಗರೀಕ ಹತ್ಯೆಗೆ ತೈಮೂರ್ ಷಾ ಆಜ್ಞೆ ಮಾಡಿದನು.
- ತೈಮೂರನು ದೆಹಲಿಯಲ್ಲಿ ಸುಮಾರು 15 ದಿನಗಳ ಕಾಲ ತಂಗಿದ್ದನು. ಅಪಾರ ಸಂಪತ್ತನ್ನು ಲೂಟಿ ಮಾಡಿ 1399ರಲ್ಲಿ ದೆಹಲಿಯಿಂದ ಹಿಂದಿರುಗುವಾಗ ಮುಲ್ತಾನ್, ಲಾಹೋರ್ ಮತ್ತು ದಿಪಾಲ್‌ಪುರ ಗೌರ್ನರಾಗಿ **'ಖಿಜರ್ ಖಾನ್'** ನನ್ನು ನೇಮಿಸಿದನು. ರಾಜಕೀಯವಾಗಿ ಸಾವಿನಂಚಿನಲ್ಲಿದ್ದ ತುಘಲಕ್ ಸಂತತಿಗೆ ತೈಮೂರನ ದಾಳಿ ಮಂಗಳ ಹಾಡಿತು.

ಸಯ್ಯದ್ ಮತ್ತು ಲೋದಿ ಸಂತತಿ
(The Sayyid & The Lodi Dynasty)

ಸಯ್ಯದ್ ಸಂತತಿ (ಕ್ರಿ.ಶ.1414–1451)

1. **ಖಿಜರ್ ಖಾನ್ Khizr Khan** (ಕ್ರಿ.ಶ.1414–21)

- ಸ್ಯಯದ್ ಸಂತತಿಯ ಸ್ಥಾಪಕ ಖಿಜರ್‌ಖಾನ್. ಇವನನ್ನು ಇತಿಹಾಸಕಾರರು ಮಹ್ಮದ್ ಪೈಗಂಬರನ ವಂಶದವನೆಂದು ಕರೆದಿದ್ದಾರೆ ಮತ್ತು ಸತಃ ತಾನೇ ಪ್ರವಾದಿ ಮಹ್ಮದ್‌ನ ವಂಶಸ್ಥನೆಂದು ಹೇಳಿಕೊಂಡಿದ್ದಾನೆ.
- ಫಿರೋಜ್–ಷಾ–ತುಘಲಕ್‌ನ ಕಾಲದಲ್ಲಿ ಖಿಜರ್ ಖಾನ್ **ಮುಲ್ತಾನಿನ ಗೌರ್ನರ್** ಆಗಿದ್ದನು.
- ತೈಮೂರನ ಭಾರತದ ದಾಳಿ ಸಮಯದಲ್ಲಿ ಖಿಜರ್‌ಖಾನನು ತೈಮೂರ್‌ನ ಪರ ಹೋರಾಡಿದ್ದನು. ಆದ್ದರಿಂದ ಇವನನ್ನು ಮುಲ್ತಾನ್, ಲಾಹೋರ್ ಮತ್ತು ದಿಪಾಲ್‌ಪುರ ಗೌರ್ನರಾಗಿ ತೈಮೂರ್ ನೇಮಿಸಿದನು. ಖಿಜರ್ ಖಾನ್ ಕೊನೆಗೆ ದೆಹಲಿ ಸಿಂಹಾಸನ ವಶಪಡಿಸಿಕೊಳ್ಳಲು ಮುಂದಾಗಿ 1414ರಲ್ಲಿ ದೌಲತಾ ಖಾನ್ ಲೋದಿಯ ಸಹಾಯದಿಂದ ವಶಪಡಿಸಿಕೊಂಡನು.
- ಇವನು ರಾಜ್ಯವನ್ನು **ಇಖ್ತಾ(ಪ್ರಾಂತ್ಯ)** ಮತ್ತು **ಪಿಕ್ (ಜಿಲ್ಲೆಗಳು)** ಎಂಬುದಾಗಿ ವಿಂಗಡಿಸಿದ್ದನು.
- ಖಿಜರ್ ಖಾನನ ನಿಷ್ಠಾವಂತ ಮಂತ್ರಿ ವೀರಯೋಧ ತಾಜ್ ಉಲ್ ಮುಲ್ಕ್.

ಮುಬಾರಕ್ ಷಾ. (ಕ್ರಿ.ಶ.1421–34) (Mubarak Shah)

- ಖಿಜರ್‌ಖಾನ್‌ನ ಉತ್ತರಾಧಿಕಾರಿಯಾಗಿ ಅವನ ಮಗ ಮುಬಾರಕ್ ಷಾ ಅಧಿಕಾರಕ್ಕೆ ಬಂದನು. ಇವನಿಗೆ **'ಷಾ'** ಎಂಬ ಬಿರುದಿತ್ತು.
- ಇವನು ಭಟಿಂಡ ದೋಅಬ್ ಗಳಲ್ಲಿ ನಸ್ರತ್ ಖಾನ್ ನೇತೃತ್ವದಲ್ಲಿ ದಂಗೆ ಎದ್ದವರನ್ನು ದಮನ ಮಾಡಿದನು. ನಸ್ರತ್‌ಖಾನನ ಆಕಾಂಕ್ಷೆ ದೆಹಲಿ ಸಾಮ್ರಾಜ್ಯದ ಭಗ್ನಾವಶೇಷಗಳ ಮೇಲೆ ತಾವು ಪ್ರಾಬಲ್ಯ ಸ್ಥಾಪಿಸಬೇಕೆಂಬುದಾಗಿತ್ತು.
- ಮುಬಾರಕ್‌ನ ಆಸ್ಥಾನದಲ್ಲಿ **ಯಾಹಿಯಾ–ಬಿನ್–ಅಹ್ಮದ್‌ನು** ತನ್ನ **ತಾರಿಖ್–ಎ–ಮುಬಾರಕ್ ಷಾಹಿ** ಕೃತಿ ರಚಿಸಿದನು. ಈತನು ತನ್ನ ಆಸ್ಥಾನದಲ್ಲಿ ಹಿಂದೂಗಳಿಗೆ ಪ್ರಥಮ ಬಾರಿಗೆ ಉನ್ನತ ಅಧಿಕಾರಗಳನ್ನು ನೀಡಿದನು.

ಮಹಮದ್‌ಷಾ (Muhammad Shah 1334–45)

- ಖಿಜರ್‌ಖಾನ್‌ನ ಮೊಮ್ಮಗ ಮಹಮ್ಮದ್ ಷಾ ಅಧಿಕಾರಕ್ಕೆ ಬಂದನು. ಇವನ ಕಾಲದಲ್ಲಿ ವಜೀರರಾಗಿ ಸರ್ವರ್ ಉಲ್ ಮುಲ್ಕ್ ಮತ್ತು ಕಮಲ್ ಉಲ್ ಮುಲ್ಕರು ಕಾರ್ಯ ನಿರ್ವಹಿಸಿದರು.
- ಮಾಳ್ವದ ಮಹಮದ್ದನು ದೆಹಲಿಯ ಮೇಲೆ ಆಕ್ರಮಣ ಮಾಡಿದಾಗ ಮಹಮದ್ ಷಾನು ಮುಲ್ತಾನನ ಬಹ್ಲಾಲ್ ಲೋದಿಯ ಸಹಾಯದೊಂದಿಗೆ ವೈರಿಯನ್ನು ಸೋಲಿಸಿದನು.
- ಮಹಮ್ಮದದ್‌ಷಾನು ಬಹಲೂಲ್ ಲೂದಿಯನ್ನು ಗೌರವಿಸಿ ಖಾನ್–ಐ ಖಾನ್ ಎಂಬ ಬಿರುದು ನೀಡಿ ಲೂದಿಗೆ ಪಂಜಾಬಿನ ಬಹುಭಾಗ ಬಿಟ್ಟುಕೊಟ್ಟನು.

ಅಲ್ಲಾವುದ್ದಿನ್ ಆಲಂ ಷಾ (Allauddin Alam Shah)

- ಆಲಂಷಾನು ಸಯ್ಯದ್ ಸಂತತಿಯ ಕೊನೆಯ ದೊರೆ. ಇವನೊಬ್ಬ ಅಸಮರ್ಥ ದೊರೆ.
- ಆಲಂಷಾನು ತನ್ನ ವಜೀರ ಹಮೀದ್‌ಖಾನ್‌ನೊಂದಿಗೆ ಜಗಳವಾಡಿ ಬದಾಯೂನ್‌ಗೆ ತೆರಳಿದನು.
- ನಂತರ ಹಮೀದ್ ಖಾನ್ ಬಹಲೂಲ್ ಲೋದಿಗೆ ದೆಹಲಿ ಆಕ್ರಮಿಸಲು ಆಹ್ವಾನಿಸಿದನು.

ಲೋದಿ ಸಂತತಿ (ಕ್ರಿ.ಶ.1451–1526)
(The Lodi Dynansty)

ಬಹಲೂಲ್ ಲೋದಿ (Bahlol Lodi-1451–1485)

- ದೆಹಲಿಯನ್ನಾಳಿದ ಕಡೆಯ ಸಂತತಿ ಲೋದಿ ಸಂತತಿ. ಈ ಸಂತತಿಯನ್ನು ಬಹಲೂಲ್ ಲೋದಿಯು ಸ್ಥಾಪಿಸಿದನು. ಇವನು ಆಫ್ಘನ್‌ನ **ಲೋದಿ ಬುಡಕಟ್ಟಿನವನು.**
- ಸರ್‌ಹಿಂದ್‌ನ ಗೌರ್ನರ್ ಇಸ್ಲಾಂಖಾನ್‌ನ ನಂತರ ಲೋದಿಯು ಇದರ ಗೌರ್ನರ್‌ನಾದನು. ಇವನು ಮಹಮ್ಮದ್ ಷಾನಿಂದ **ಖಾನ್–ಐ–ಖಾನ್** ಬಿರುದು ಮತ್ತು ಪಂಜಾಬನ್ನು ಪಡೆದಿದ್ದನು.
- ಬಹಲೂಲ್ ಲೋದಿಯ ಅತಿ ಮಹತ್ವದ ಸಾಧನೆಯೆಂದರೆ ಅತ್ಯಂತ ಬಲವಾದ ವಿಶಾಲವಾದ ಜೌನ್‌ಪುರದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡು ಅಲ್ಲಿಗೆ ಬಾರ್ಬಕ್ ಷಾನನ್ನು ಗೌರ್ನರಾಗಿ ನೇಮಿಸಿದನು. ಜೌನ್‌ಪುರ ರಾಜ್ಯವು ದೆಹಲಿ ರಾಜ್ಯಕ್ಕಿಂತ ಶಕ್ತಿಯುತವಾದುದು ಮತ್ತು ಸಂಪದ್ಭರಿತವಾಗಿತ್ತು.

ಸಿಕಂದರ್ ಲೋದಿ (Sikandar Lodi) (1489-1517)

- ಬಹಲೂಲ್ ಲೂದಿಯ ಮೂರನೇ ಮಗನಾದ ಈತನ ಹೆಸರು ನಿಜಾಮಖಾನ್ (ಸಿಕಂದರ್ ಲೂದಿ). ಇವನು ಜೌನಪುರದ ಮೇಲೆ ದಾಳಿ ಮಾಡಿ ಬಾರ್ಬಕ್ ಷಾನನ್ನು ಸೋಲಿಸಿದನು.
- ಉತ್ವ-ಬಿಯಾನ, ಕೋಯಿಲ್, ಗ್ವಾಲಿಯರ್ ಮತ್ತು ದೋಲ್ಪುರಗಳ ಮುಖಂಡರನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಒಂದು ಹೊಸ ಪಟ್ಟಣವನ್ನು 1504ರಲ್ಲಿ ನಿರ್ಮಿಸಿ **ಆಗ್ರಾ ನಗರ** ನಿರ್ಮಾಣಕಾರನೆನಿಸಿಕೊಂಡನು.
- ಸಿಕಂದರನು ಥಾನೇಶ್ವರದ ಸರೋವರದಲ್ಲಿ ಹಿಂದೂಗಳು ಸ್ನಾನ ಮಾಡಬಾರದೆಂದು ನಿಷೇಧಿಸಿದನು. ಹಿಂದೂ ದೇವಾಲಯಗಳನ್ನು ನಾಶಗೊಳಿಸಿ ವಿಗ್ರಹಗಳನ್ನು ಮುರಿದು ಅದರ ಚೂರುಗಳನ್ನು ಮಾಂಸದ ವ್ಯಾಪಾರಿಯ ತೂಕದ ಬಟ್ಟುಗಳಾಗಿ ಉಪಯೋಗಿಸಲು ನೀಡಿದ್ದನು.
- ಸಿಕಂದರನು ಮುಸ್ಲಿಂ ಸ್ತ್ರೀಯರು ಸಂತರ ಗೋರಿಗಳಿಗೆ ಭೇಟಿಕೊಡುವುದನ್ನು ನಿಷೇಧಿಸಿದನು.
- ಇವನು ಮೊಹರಂ ಹಬ್ಬದಲ್ಲಿ ಕೈಗೊಳ್ಳುತ್ತಿದ್ದ **'ತಜೀಯಸ್ ಮೆರವಣಿಗೆಯನ್ನು'** ನಿರ್ಬಂಧಿಸಿದನು.
- ಸಿಕಂದರನು ಧರ್ಮಾಂಧ ಸುಲ್ತಾನನೆಂಬ ಆಪಾದನೆ ಹೊಂದಿದ್ದನು.
- ಸಿಕಂದರ್ ಲೋದಿಯು **ಗಸ್-ಇ-ಸಿಕಂದರಿ'** ಎಂಬ ಭೂಮಾಪನ ದಂಡ ಪರಿಚಯಿಸಿದನು.

ಇಬ್ರಾಹಿಂ ಲೋದಿ (Ibrahim Lodi) (ಕ್ರಿ.ಶ.1517-1526)

- ಸಿಕಂದರ್ ಲೋದಿಯ ಹಿರಿಯ ಮಗ ಇಬ್ರಾಹಿಂ ಲೋದಿ. ಲೋದಿಗೂ ಮತ್ತು ಸಂಗ್ರಾಮಸಿಂಗನಿಗೆ 1517-18ರಲ್ಲಿ ಯುದ್ಧ ನಡೆದು ರಜಪೂತ ಸೈನ್ಯದಿಂದ ಲೋದಿಯು ಸೋತನು.
- ದೆಹಲಿ ಮತ್ತು ಮೇವಾರದ ನಡುವೆ ಅನೇಕ ಬಾರಿ ಹೋರಾಟಗಳು ನಡೆದರೂ ಮೇವಾರ ವಶವಾಗಲಿಲ್ಲ.
- ಲೋದಿಯ ಸಮಕಾಲೀನ ಚಂದೇರಿಯ ಅರಸ ಹುಸೇನ್-ಖಾನ್-ಫರ್ಮುಲಿ.
- ಭಾರತದ ಮೇಲೆ ಬಾಬರ್‌ನನ್ನು ಆಕ್ರಮಣ ಮಾಡಲು ಆಹ್ವಾನಿಸಿದವರು ದೌಲತ್ ಖಾನ್ ಮತ್ತು ಬಾಬರನ ಚಿಕ್ಕಪ್ಪ ಗುಜರಾತಿನ ಸುಲ್ತಾನ ಆಲಂಖಾನ್‌ರು.
- ಬಾಬರನು ಭಾರತದ ಮೇಲೆ ಮೊದಲ ದಾಳಿ 1524ರಲ್ಲಿ ಮಾಡಿದನು. ನಂತರ 1525ರಲ್ಲಿ ಬಾಬರನ ಮೊದಲ ಆಕ್ರಮಣ ಪ್ರದೇಶ ಪಂಜಾಬ್ ಆಗಿತ್ತು.
- **1526**ರಲ್ಲಿ ಬಾಬರ್ ಮತ್ತು ಇಬ್ರಾಹಿಂ ಲೋದಿಯ ನಡುವೆ **1ನೇ ಪಾಣಿಪತ್ ಯುದ್ಧ** ನಡೆದು ಲೋದಿಯು ಕೊಲ್ಲಲ್ಪಟ್ಟು ದೆಹಲಿ ಸುಲ್ತಾನರ ಆಳ್ವಿಕೆ ಅಂತ್ಯಗೊಂಡಿತು. ಇಬ್ರಾಹಿಂ ಲೋದಿ [illegible]

ದೆಹಲಿ ಸುಲ್ತಾನರ ಅವನತಿಗೆ ಕಾರಣಗಳು

1) ದೆಹಲಿ ಸುಲ್ತಾನರ ಸರ್ಕಾರ 'ನಿರಂಕುಶ ಸೈನಿಕ ಪ್ರಭುತ್ವ ಮತ್ತು ಮತಾಂಧ ನೀತಿ.
2) ದೆಹಲಿ ಸುಲ್ತಾನರುಗಳು ನೈತಿಕ ಅಧಃಪತನ ಹಾಗೂ ವಿಶಾಲವಾದ ಸಾಮ್ರಾಜ್ಯ.
3) ಕುಲೀನ ವರ್ಗದ (ನೋಬೆಲ್ ವರ್ಗ) ಒಳಸಂಚು ಮತ್ತು ಪಿತೂರಿಗಳು.
4) ಹಿಂದೂಗಳ ವಿರೋಧಿ ನೀತಿ ಮತ್ತು ಜಹಗೀರು ಪದ್ಧತಿಯ ದೋಷಗಳು.
5) ಮಂಗೋಲರ, ತೈಮೂರನ ಹಾಗೂ ಬಾಬರನ ಆಕ್ರಮಣಗಳು.
6) ಮಹಮದ್ ಬಿನ್ ತುಘಲಕ್ ಮತ್ತು ಫಿರೋಜ್ ಷಾ ತುಘಲಕ್‌ನ ನೀತಿಗಳು.

ದೆಹಲಿ ಸುಲ್ತಾರನ ಕಾಲದ ಆಡಳಿತ (Administration)

ಕೇಂದ್ರ ಸರ್ಕಾರ (ಸುಲ್ತಾನನ ಕರ್ತವ್ಯಗಳು)

- ಸುಲ್ತಾನನ ರಾಜ್ಯವು ಧರ್ಮತಂತ್ರವಾಗಿದ್ದು ಸುಲ್ತಾನನನ್ನು ಲೌಕಿಕ ಪ್ರಭುತ್ವ ಮತ್ತು ಧರ್ಮಗುರು ಇವೆರಡು ಸಮ್ಮಿಲನಗೊಂಡು ಕೇಂದ್ರೀಯ ವ್ಯಕ್ತಿಯೆಂದು ಪರಿಗಣಿಸಲಾಗಿತ್ತು.
- ಸುಲ್ತಾನನು ಪೂರ್ಣ **'ಷರಿಯತ್'** (ಇಸ್ಲಾಂ ಧಾರ್ಮಿಕ ಗ್ರಂಥ ಕುರಾನಿನ ಕಾನೂನುಗಳ ಸಂಹಿತೆ) ತತ್ವಾನುಸಾರ ಆಡಳಿತ ನಡೆಸುತ್ತಿದ್ದನು. ಧಾರ್ಮಿಕ ವಿಷಯಗಳಲ್ಲಿ ಇವನ ಅಧಿಕಾರ ಸೀಮಿತವಾಗಿತ್ತು.
- ಅಲ್ಲಾವುದ್ದೀನ್ ಖಿಲ್ಜಿಯನ್ನು ಬಿಟ್ಟರೆ ಉಳಿದೆಲ್ಲ ಸುಲ್ತಾನರು ಧರ್ಮ ಮತ್ತು ರಾಜಕೀಯಗಳನ್ನು ಒಂದುಗೂಡಿಸಿ ಧರ್ಮಕ್ಕೆ ತಲೆಬಾಗಿ ಅಧಿಕಾರ ನಡೆಸಿದರು.
- ನಿರಂಕುಶ ಪ್ರಭುಗಳಾಗಿದ್ದ ದೆಹಲಿ ಸುಲ್ತಾನರು ಬಾಗ್ದಾದ್ ಮತ್ತು ಈಜಿಪ್ಟಿನ ಖಲೀಫರಿಗೆ ತಮ್ಮ ವಿಧಿವಿಹಿತವಾದ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ತಮ್ಮ ಅಧಿಕಾರಕ್ಕಾಗಿ ಖಲೀಫರಿಗಾಗಲೀ ಅಥವ ಜನತೆಯ ನಿರ್ಧಾರಕ್ಕಾಗಲೀ ಋಣಿಯಾಗಿರಲಿಲ್ಲ.
- ರಾಜ್ಯದ ಉತ್ತರದಾಯಿತ್ವವು ವಂಶಪಾರಂಪರ್ಯವಾಗಿರಲಿಲ್ಲ.
- ಸುಲ್ತಾನನೇ ಎಲ್ಲಾ ಆಡಳಿತ ವ್ಯವಸ್ಥೆಯ ಪ್ರಧಾನ ಕರ್ತೃವಾಗಿದ್ದನು. ಸುಲ್ತಾನನ ಅಧಿಕಾರದ ಮುಖ್ಯ ಮೂಲ ಸೇನಾ ಶಕ್ತಿಯಾಗಿತ್ತು. ಸೈನಿಕ ಪಡೆಗಳ ಪ್ರಧಾನ ದಂಡನಾಯಕ ಸುಲ್ತಾನನೇ ಆಗಿರುತ್ತಿದ್ದನು.
- ಸುಲ್ತಾನನು **'ಮಜ್ಲಿಸ್-ಎ-ಖಲ್ವತ್'** ಎಂದು ಕರೆಯುತ್ತಿದ್ದ ಮಿತ್ರರ ಮತ್ತು ವಿಶ್ವಸಾರ್ಹ ಅಧಿಕಾರಿಗಳಿಂದ ಕೂಡಿದ ಮಂಡಳಿಗಳೊಂದಿಗೆ ರಾಜ್ಯದ ಮುಖ್ಯ ವ್ಯವಹಾರಗಳ ಬಗ್ಗೆ ಸಮಾಲೋಚಿಸುತ್ತಿದ್ದನು.

ಪ್ರಕರಣಗಳ ಬಗ್ಗೆ ವಿಚಾರಣೆ ಮಾಡುತ್ತಿದ್ದನು. ಈ ವೇಳೆಯಲ್ಲಿ ಸಹಾಯಕ್ಕಾಗಿ **'ಭಾರ್-ಏ-ಆವಸ್'** ಎಂಬ ಶ್ರೇಷ್ಟ ನ್ಯಾಯಾಧೀಶನಿದ್ದನು.

ಮಂತ್ರಿಮಂಡಲ ಮತ್ತು ಅದರ ಕರ್ತವ್ಯ

1) **ನಾಯಿಬ್-ಐ-ಮಾಮ್ಲಿಕತ:**- ಇದು ರಜಿಯಾಳ ನಿಧನದ ನಂತರ ಮಹ್ಮದ್‌ಷಾನ ಆಳ್ವಿಕೆಯಲ್ಲಿ ಅಸ್ಥಿತ್ವಕ್ಕೆ ಬಂದಿತು. ನೊಬೆಲ್ಲರಲ್ಲೇ ಒಬ್ಬನನ್ನು ಈ ಹುದ್ದೆಗೆ ಆಯ್ಕೆ ಮಾಡುತ್ತಿದ್ದರು. ಈ ಹುದ್ದೆ ಅಸಮರ್ಥ ಸುಲ್ತಾನರ ಕಾಲದಲ್ಲಿ ಮಾತ್ರ ಇರುತ್ತಿತ್ತು. ಇದು ಸುಲ್ತಾನನ ನಂತರದ ಮತ್ತು ವಜೀರನಿಗಿಂತ ಮೇಲಿನ ಅಧಿಕಾರ ಸ್ಥಾನವಾಗಿತ್ತು.

2) **ವಜೀರ್ (ಪ್ರಧಾನಮಂತ್ರಿ)** :- ಮಂತ್ರಿಗಳಲ್ಲೆಲ್ಲಾ ಪ್ರಧಾನನಾದವನು ವಜೀರ್. ಇವನು ಆಡಳಿತದ ಎಲ್ಲಾ ಕೇಂದ್ರಗಳ ಮೇಲ್ವಿಚಾರಣೆಯನ್ನು ಹೊಂದಿದ್ದನು. ಹಣಕಾಸು, ಕಂದಾಯ, ಮಿಲಿಟರಿ ನಿಯಂತ್ರಣ ಮತ್ತು ನೇಮಕ ಹಾಗೂ ಬಡವರಿಗೆ ಆಹಾರ ವಿತರಿಸುವ ಕಾರ್ಯ ಮಾಡುತ್ತಿದ್ದನು. ಮಹಮ್ಮದ್ ತುಘಲಕ್ ಕಾಲವು **"ಮುಸಲ್ಮಾನ ಭಾರತದಲ್ಲಿ ವಜೀರರ ಉಚ್ಛ್ರಾಯದ ಕಾಲ"** ಮತ್ತು ತರುವಾಯದ ತುಘಲಕ್‌ರ ನಂತರ ಸಯ್ಯದ್‌ರ ಕಾಲದಲ್ಲಿ ಇದು ಕ್ಷೀಣಿಸುತ್ತಾ ಆಫ್ಘನ್ನರ ಕಾಲದಲ್ಲಿ ಅಗೋಚರವಾಯಿತು.

3) **ದಿವಾನ್-ಇ-ಅರಿಜ್ (ಸೇನಾ ವಿಭಾಗ)** ಇವನು ಸೈನ್ಯದ ಎಲ್ಲಾ ವ್ಯವಹಾರಗಳ ಕಾರ್ಯಭಾರ ಮಾಡುತ್ತಿದ್ದನು.

4) **ದಿವಾನ್-ಇ-ರಸಾಲತ್ (ಮನವಿಗಳ ವಿಭಾಗ):**- ಈತ ವಿದೇಶಾಂಗ ವ್ಯವಹಾರಗಳ ಅಧಿಕಾರಿ.

5) **ದಿವಾನ್-ಇ-ಇನ್ಷಾ (ವ್ಯವಹಾರಗಳ ವಿಭಾಗ):**- ಈತನು ರಾಜಾಜ್ಞೆಗಳನ್ನು ಕ್ರೋಢೀಕರಣ ಹಾಗೂ ಇತರ ರಾಜ್ಯಗಳ ಮತ್ತು ಸಾಮಂತ ರಾಜರುಗಳ ನಡುವಣ ಪತ್ರ ವ್ಯವಹಾರ ಮಾಡುತ್ತಿದ್ದನು.

6) **ಸಾದರ್-ಉಸ್-ಸಾಧರ್:- ದಿವಾನ್-ಇ-ಖೈರಾತ್‌ನು** ಫಿರೋಜ್ ಷಾ ತುಘಲಕ್ ಕಾಲದಲ್ಲಿ ಧಾರ್ಮಿಕ ಮತ್ತು ದಾನಧರ್ಮಗಳ ವಿಭಾಗದ ಮುಖ್ಯಸ್ಥನಾಗಿದ್ದನು.

7) **ದಿವಾನ್-ಇ-ಖ್ವಾಜಿ:**- ಈತನು ಮುಖ್ಯ ನ್ಯಾಯವಾದಿಯಾಗಿ ಮಹಾ ದಂಡಾಧಿಕಾರಿಯಾಗಿದ್ದನು. ಸಾಮಾನ್ಯವಾಗಿ ಸಾದರ್-ಉಸ್-ಸಾದರ್ ಮತ್ತು ದಿವಾನ್-ಇ-ಖಾಜಿ ಹುದ್ದೆಗಳನ್ನು ಒಬ್ಬನಿಗೆ ಕೊಡುತಿದ್ದರು.

8) **ದಿವಾನ್-ಎ-ಅಮೀರ್-ಕೋಹಿ:**- ಇದು ವ್ಯವಸಾಯ ಇಲಾಖೆ. (ಮಹ್ಮದ್-ಬಿನ್-ತುಘಲಕ್ ಕಾಲದಲ್ಲಿ ಸ್ಥಾಪನೆ)

9) **ದಿವಾನ್ ಎ ಖ್ವಾಜಾ ಎ ಮಾಮೂಲಿಕ್:**- ಇವನು ನ್ಯಾಯ, ಸುದ್ದಿ ಮತ್ತು ಅಂಚೆ ವಿಭಾಗ ಮುಖ್ಯಸ್ಥ.

10) **ದಿವಾನ್-ಇ-ಮಸ್ತಾಕರ್ಜ್:**- ಹಳೆಯ ಬಾಕಿ ಮತ್ತು ಕಂದಾಯ ಅಧಿಕಾರಿ. (ಅಲ್ಲಾವುದ್ದೀನ್ ಖಿಲ್ಜಿ ಕಾಲದಲ್ಲಿ ಸ್ಥಾಪನೆ)

11) **ದಿವಾನ್-ಇ-ಇಷ್ತಿಕಾರ್** :- ಪಿಂಚಣಿ ಇಲಾಖೆ, ವಿಶ್ರಾಂತಿ ವೇತನ ವಿಭಾಗ, ಟಂಕಶಾಲೆ, ಧರ್ಮಛತ್ರ ಮತ್ತು ಕಾರ್ಖಾನೆಗಳ ಮೇಲೆ ನಿಯಂತ್ರಣ ಹೊಂದಿದ್ದನು.

12) **ದಿವಾನ್-ಏ-ಬಂದಗಾನ್:**- ಗುಲಾಮರ ವಿಭಾಗದ ಆಡಳಿತ. (ಫಿರೋಜ್-ಷಾ-ತುಘಲಕ್ ಕಾಲದಲ್ಲಿ ಸ್ಥಾಪನೆ)

13) **ಮುಸ್ತಾಫಿ-ಏ-ಮಾಮುಲಿಕ್:**- ರಾಜ್ಯದ ಆದಾಯ ವಿಭಾಗದ ಅಧಿಕಾರಿ.

14) **ಖಾಜಿವ್ (ಕೋಶಾಧಿಕಾರಿ)** :- ಸರ್ಕಾರ ಸಾಲ ನೀಡಿರುವ ದಾಖಲೆಗಳ ಉಸ್ತುವಾರಿ.

15) **ಅಮೀರ್-ಏ-ಬೇಹ್:**- ರಾಜ್ಯದ ಆದಾಯ ವಿಭಾಗದ ಅಧಿಕಾರಿ.

16) **ಭಕ್ಷ್-ಏ-ಫೌಜ್** ;- ಸೇನಾಪಡೆಗಳ ವೇತನಾಧಿಕಾರಿ.(ಹಡಗು ಉಸ್ತುವಾರಿ).

ಆಡಳಿತದಲ್ಲಿ ಉಲೇಮಾರ ಪ್ರಭಾವ

- ದೆಹಲಿ ಸುಲ್ತಾನರ ರಾಜ್ಯ ಇಸ್ಲಾಂ ಪ್ರಧಾನವಾಗಿದ್ದರಿಂದ ಮುಸ್ಲಿಂ ಧರ್ಮಪಂಡಿತರು(ಉಲೇಮರ) ತುಂಬಾ ಪ್ರಭಾವಶಾಲಿಗಳಾಗಿದ್ದರು. ಧಾರ್ಮಿಕ ವಿವಾದಗಳ ಬಗ್ಗೆ ತಮ್ಮ ತೀರ್ಪು ನೀಡುತ್ತಿದ್ದರು. ಅಲ್ಲದೆ ಆಡಳಿತ ವಿಷಯದಲ್ಲಿ ಉಲೇಮರ ಸಲಹೆ ಕೇಳುತ್ತಿದ್ದರು.
- ಅಲ್ಲಾವುದ್ದೀನ್ ಖಿಲ್ಜಿ ಆಡಳಿತದಲ್ಲಿ ಪ್ರಥಮವಾಗಿ ಉಲೇಮರ ಪ್ರಭಾವ ತಡೆಗಟ್ಟಿದ್ದನು. ನಂತರ ಮಹಮದ್ ಬಿನ್ ತುಘಲಕ್ ಕಾಲದಲ್ಲೂ ಇರಲಿಲ್ಲ. ಆದರೆ ಫಿರೋಜ್-ಷಾ-ತುಘಲಕ್‌ನ ಕಾಲದಲ್ಲಿ ಉಲೇಮರ ಪ್ರಭಾವವು ಪ್ರಬಲವಾಗಿತ್ತು.

ಸೈನ್ಯಾಡಳಿತ.

- ದೆಹಲಿಯ ಸುಲ್ತಾನರ ಕಾಲದಲ್ಲಿದ್ದ 4 ವರ್ಗದ ಸೈನಿಕರೆಂದರೆ ಕೇಂದ್ರಿಯ ಸುಲ್ತಾನನ ಶಾಶ್ವತ ಸೈನಿಕರು, ಪ್ರಾಂತೀಯ ಗೌರ್ನರ್‌ಗಳ ಶಾಶ್ವತ ಸೈನಿಕರು, ಯುದ್ಧದ ವೇಳೆಯಲ್ಲಿ ನೇಮಕಗೊಂಡವರು ಹಾಗೂ ಜಿಹಾದ್ ಯುದ್ಧಗಳಲ್ಲಿ ಭಾಗವಹಿಸುವ ಮುಸ್ಲಿಂ ಸೈನಿಕರು,
- 'ಅಶ್ವ ದಳವು' ಪ್ರಮುಖವಾಗಿತ್ತು. ಪದಾತಿಪಡೆ ಹಾಗೂ ಗಜಸೇನೆಯು ಇದ್ದವು.
- **ಯುದ್ಧೋಪಕರಣಗಳು:**- ಆಕಾಶ ಬಾಣಗಳು, ನ್ಯಾಪ್ತಾ ಗುಂಡುಗಳು, ಸಿಡಿಮದ್ದಿನ ಯಂತ್ರ (ಇವು ಇಲ್ತಮಶ್ ಕಾಲದಲ್ಲಿದ್ದವು) ಹಾಗೂ ನ್ಯಾಪ್ತಾದಿಂದ ತುಂಬಿದ ಸೀಸೆಗಳು ಮತ್ತು ಚೇಳುಗಳು, ವಿಷಯುಕ್ತ ಸರಿಸೃಪಗಳು, ಮಂಗೋನೆಲ್‌ಗಳು ಮತ್ತು ಮಂಗೋನ್‌ಗಳು ಎಂಬ ಯಂತ್ರಗಳಿದ್ದವು.
- ದೆಹಲಿ ಸುಲ್ತಾನರ ಸೈನ್ಯವನ್ನು **'ಹರ್ಷ-ಐ-ಕಲ್ಪ'** ಎನ್ನುತ್ತಿದ್ದರು. ಅಲ್ಲಾವುದ್ದೀನನ ಕಾಲದಲ್ಲಿ 4,75,00 ಅಶ್ವಗಳು ಮತ್ತು ಇನ್ನೂ ಹೆಚ್ಚಿನ ಕಾಲಾಳು ಪಡೆಯಿತ್ತು.
- ಫಿರೋಜನು ಸೇನವನ್ನು ಊಳಿಗ ಸಂಸ್ಥೆಯಾಗಿ ಮಾಡಿದನು

ಲೋದಿಯ ಸೈನ್ಯವು ಬುಡಕಟ್ಟಿನ ಆಧಾರದ ಮೇಲೆ ಸಂಘಟಿತವಾಗಿತ್ತು. ಸಂಬಳ ಕೊಡದೆ ಸೈನಿಕರಿಗೆ ಲೂಟಿಯಲ್ಲಿ ಪಾಲು ಇತ್ತು.

- ಅಲ್ಲಾವುದ್ದೀನ್ ಖಿಲ್ಜಿ ಕಾಲದಲ್ಲಿ ಸೈನಿಕನಿಗೆ (1ಅಶ್ವದ) ವಾರ್ಷಿಕ 234 ಟಂಕ್ ಗಳು, ಮಹಮದ್ ಬಿನ್ ತುಘಲಕ್ ಕಾಲದಲ್ಲಿ 500 ಟಂಕಾ ಮತ್ತು ಖಾನನಿಗೆ 2,00,000 ಟಂಕ್‌ಗಳನ್ನು ಕೊಡಲಾಗುತ್ತಿತ್ತು.

ನ್ಯಾಯಾಡಳಿತ

- **ದಿವಾನ್-ಏ-ಖಾಜಿ** ಪ್ರಮುಖ ನ್ಯಾಯಾಧೀಶನಾಗಿದ್ದನು. ಸುಲ್ತಾನನು ಕುರಾನಿನ ಆಧಾರದ ಮೇಲೆ ನ್ಯಾಯ ನೀಡುತ್ತಿದ್ದನು. ವಾರಕ್ಕೆರಡು ಭಾರಿ ಸುಲ್ತಾನನ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತಿತ್ತು.
- ಧಾರ್ಮಿಕ ಆಚರಣೆಗಳ ವಿಚಾರಣೆಗಳಲ್ಲಿ ಸಾದರ್-ಉಸ್-ಸಾದರ್ ಮತ್ತು ಮುಫ್ತಿಗಳು ಇರುತ್ತಿದ್ದರು. ಮುಫ್ತಿಗಳು ಕುರಾನಿನ ಕಾನೂನನ್ನು ನಿರೂಪಿಸುತ್ತಿದ್ದರು.
- ನ್ಯಾಯಾಡಳಿತದ ಮುಖ್ಯಸ್ಥ-ಸುಲ್ತಾನ, ಪ್ರಮುಖ ನಗರಗಳಲ್ಲಿ ಅಮೀದ್-ಇ-ವಾದ್ ಅಧಿಕಾರಿ ಇದ್ದನು. ಹಳ್ಳಿಗಳಲ್ಲಿ ಪಂಚಾಯ್ತಿಯ ಮೂಲಕ ನ್ಯಾಯ ತೀರ್ಮಾನವಾಗುತ್ತಿತ್ತು.
- ನ್ಯಾಯಾಡಳಿತದಲ್ಲಿ ನ್ಯಾಯಾಲಯಗಳ ಅಧಿಕಾರ ಮತ್ತು ಅವುಗಳ ವ್ಯಾಪ್ತಿಯನ್ನು ನಿರ್ದಿಷ್ಟವಾಗಿ ನಿರ್ಧರಿಸಿರಲಿಲ್ಲ. ನ್ಯಾಯಾಂಗದ ಕ್ರಮಗಳು ಎಲ್ಲಾ ಭಾಗದಲ್ಲೂ ಏಕರೂಪವಾಗಿರಲಿಲ್ಲ.
- ಹಿಂದೂಗಳಿಗೆ ಹೊಸ **'ಗೈರತ್ ಶ್ರೀ'** ಎಂಬ ಕಾನೂನಿತ್ತು.
- ಶಾಂತಿ ಮತ್ತು ಶಿಸ್ತು ಪಾಲನೆಯ ಕಾರ್ಯದ ಮೇಲ್ವಿಚಾರಣೆ ಕೊತ್ವಾಲನದಾಗಿತ್ತು.

ಕಂದಾಯ ಆಡಳಿತ

1) **ಖರಾಜ್/ಭೂಕಂದಾಯ** :- ಹಿಂದೂ ಮುಖಂಡರು ಮತ್ತು ಜಮೀನ್ದಾರರ ಮೇಲೆ ವಿಧಿಸಲಾಗಿತ್ತು.
   ಖುಲಾಯತ್ ಎಂದರೆ ಕಂದಾಯ ಅಧಿಕಾರಿಗಳು.
2) **ಖಾಲ್ಸಾ**:- ಇದೊಂದು ಸರ್ಕಾರಿ ಜಮೀನು ಅಥವ ಖಲಿಸಾ-ಸುಲ್ತಾನನಿಗೆ ಸೇರಿದ ಭೂಮಿ.
3) **ಇಕ್ತಾ**:- ಇದು ಅಧಿಕಾರಿಗಳಿಗೆ/ಅನುಯಾಯಿಗಳಿಗೆ ನೀಡಿರುವ ಜಮೀನು.(ಇಲ್ತುಮಶ್ ಆಳ್ವಿಕೆ ಕಾಲದಲ್ಲಿ ಜಾರಿಯಲ್ಲಿತ್ತು).
4) **ಜೆಸಿಯಾ**:- ಹಿಂದೂಗಳ ಮೇಲಿನ ವಿಶೇಷ ತೆರಿಗೆ
5) **ಧಾರ್ಮಿಕ ತೆರಿಗೆಗಳು**:- ಮನೆಗಂದಾಯ ಹುಲ್ಲುಗಾವಲು ತೆರಿಗೆ ಮತ್ತು ನೀರಿನ ತೆರಿಗೆ ವ್ಯಾಪಾರ ತೆರಿಗೆ.
6) **ಜಕಾತ್**:- ಮುಸ್ಲಿಂರು ತಮ್ಮ ಧರ್ಮ ಕಲ್ಯಾಣಕ್ಕೆ ನೀಡುತ್ತಿದ್ದ ತೆರಿಗೆ.
7) **ಗರೀ**:- ಮನೆ ತೆರಿಗೆ.
8) **ಚರಾಹಿ**:- ಗೋಮಾಳ ತೆರಿಗೆ.

- ಮುಖ್ತಿ ಎಂದರೆ ಕಂದಾಯ ವಸೂಲಿ ಮಾಡುವ ಅಧಿಕಾರಿಯೂ ಹೌದು ಮತ್ತು ಸಿಪಾಯಿಗಳಿಗೆ ಸಂಬಳ ಪಾವತಿ ಮಾಡುವ ಸೇನಾಪತಿಯೂ ಆಗಿದ್ದನು.
- ಸುಲ್ತಾನನು ಇಕ್ತಾಗಳನ್ನು ನೀಡಿದ ಪ್ರದೇಶವನ್ನು **'ಖಲೀಸ'(ಕಾಲ್ಸಾ)** ಎಂದು ಕರೆಯುತ್ತಿದ್ದುದಲ್ಲದೆ ಇಲ್ಲಿ ಸುಲ್ತಾನನಿಂದ ನೇಮಕವಾದ **'ಅಮೀಲರು"** ಕಂದಾಯ ವಸೂಲಿ ಮಾಡುತ್ತಿದ್ದರು.
- ಅಲ್ಲಾವುದ್ದೀನ್ ಖಿಲ್ಜಿ- **'ಷರಪ್ ಖೈನಿ'** ಎಂಬ ಹೊಸ ಕಂದಾಯ ಮಂತ್ರಿ ಮತ್ತು ಹಳೆ ಬಾಕಿಯ ಕಂದಾಯವನ್ನು ಬಲವಂತವಾಗಿ ವಸೂಲಿ ಮಾಡಲು **'ಮಸ್ತಕರ್ಜ್'** ನನ್ನು ನೇಮಿಸಿದನು.
- ಮಹಮದ್ ಬಿನ್ ತುಘಲಕ್‌ನು ಕೃಷಿ ಉತ್ಪಾದನೆ ಹೆಚ್ಚಿಸಲು 'ದಿವಾನ್-ಐ-ಅಮೀರ್ ಕೋಹಿ ಇಲಾಖೆ ಸ್ಥಾಪಿಸಿದನು.
- ಫಿರೋಜ್ ಷಾ ತುಘಲಕ್‌ನು **'ಖ್ವಾಜ-ಹಸನುದ್ದೀನನ'** ಮೇಲ್ವಿಚಾರಣೆಯಲ್ಲಿ ರಾಜ್ಯದ ಕಂದಾಯವನ್ನು ಪರಿಶೀಲಿಸುವ ಕಾರ್ಯ ಕೈಗೊಂಡನು.
- **ಖಿರಾಜ್** (ಭೂಮಿಯ ಉತ್ಪನ್ನದ 1/10 ಭಾಗ ತೆರಿಗೆ) **ಜಕಾತ್**(ಧಾರ್ಮಿಕ ಉದ್ದೇಶಗಳಿಗೆ ಮುಸ್ಲಿಂರ 2 1/2 ಭಾಗ ತೆರಿಗೆ), **ಜೆಸಿಯಾ** (ಹಿಂದೂಗಳ ಮೇಲಿನ ತೆರಿಗೆ) **ಷರ್ಬ** (ನೀರಾವರಿ ಮೇಲೆ 10% ತೆರಿಗೆ) ಹಾಗೂ ರಣರಂಗದಲ್ಲಿ ಪ್ರಾಪ್ತವಾದ ಸಂಪತ್ತಿನಲ್ಲಿ 1/10 ಭಾಗ ತೆರಿಗೆಗಳು ಫಿರೋಜ್‌ನ ಕಾಲದಲ್ಲಿದ್ದವು.
- ಲೋದಿ ಸಂತತಿಯ ಕಾಲದಲ್ಲಿ ಹಣದ ರೂಪದ ಬದಲು ಧಾನ್ಯದ ರೂಪದಲ್ಲಿ ಕಂದಾಯ ವಸೂಲಿ ಮಾಡುತ್ತಿದ್ದರು.

ಪ್ರಾಂತ್ಯಾಡಳಿತ

- ಸುಲ್ತಾನನ ಪ್ರಭಾವ ತನ್ನ ಕೋಟೆಗಳು ಹಾಗೂ ಗಡಿ ಕಾವಲುಗಳಿಂದ ಸ್ವಲ್ಪ ದೂರಕ್ಕೆ ಸೀಮಿತವಾಗಿತ್ತು. ದೂರದ ಪ್ರದೇಶಗಳು ಸುಲ್ತಾನನ ಪ್ರತಿನಿಧಿಗಳ (ನಾಯಬ್ ಸುಲ್ತಾನರು) ಆಡಳಿತಕ್ಕೊಳಗಾಗಿದ್ದವು.
- ಪ್ರಾಂತ್ಯಗಳನ್ನು ಸಣ್ಣ ಭಾಗಗಳಾಗಿ ವಿಭಾಗಿಸಲಾಗಿದ್ದು ಇವು ಮುಕ್ತಿಗಳು/ಅಮೀಲರ ನಿಯಂತ್ರಣಕ್ಕೊಳಪಟ್ಟಿದ್ದವು. ಷೇಕ್‌ದಾರ ಆಡಳಿತದಲ್ಲಿ ಇನ್ನೂ ಸಣ್ಣ ಘಟಕಗಳಿದ್ದವು. ಸಾಮ್ರಾಜ್ಯವನ್ನು ಅನೇಕ ಇಕ್ತಾಗಳಾಗಿ ವಿಂಗಡಿಸಿದ್ದರು. ಇವು ಸೈನಿಕ ಜಾಗೀರುಗಳಾಗಿದ್ದವು ಇದರ ಮುಖ್ಯಸ್ಥನನ್ನು ವಲಿ/ಮುಕ್ತಿ/ನೈಬ್ ಎನ್ನುವರು.
- ಏರುಮುಖ ಶ್ರೇಣಿ ಅಧಿಕಾರಿಗಳು -1)ಸಿಪ್ ಸರ 2) ಅಮೀರ್ 3)ಖಾನ್ 4) ಮಲ್ಲಾಕ್.

ಆರ್ಥಿಕ ಪರಿಸ್ಥಿತಿ

- ದೆಹಲಿಯ ಸುಲ್ತಾನರ ಆರ್ಥಿಕ ಪರಿಸ್ಥಿತಿಯನ್ನು ತಿಳಿಯಲು ವೃತ್ತಾಂತಗಳು, ಅಮೀರ್ ಖುಸ್ರುವಿನ ಕೃತಿಗಳು, ಜನಪದ ಸಾಹಿತ್ಯ ಮತ್ತು ಕಟ್ಟುಕತೆಗಳು, ವಿದೇಶಿ ಪ್ರವಾಸಿಗರ ವರದಿಗಳು

ಪ್ರಮುಖವಾಗಿವೆ.

- ಮಹಮ್ಮದ್ ಘಜ್ನಿಯು ಸಂಪತ್ತು ಲೂಟಿ ಮಾಡಿದ್ದನ್ನು ಫೆರಿಸ್ತಾನ ವರದಿಗಳಿಂದ ತಿಳಿಯಬಹುದು.
- **ಬಂಗಾಳ** ಮತ್ತು **ಗುಜರಾತ್**ಗಳು ವಸ್ತ್ರ ಸಾಮಾಗ್ರಿಗಳ ತಯಾರಿಕೆ ಮತ್ತು ರಫ್ತಿಗೆ ವಿಶೇಷವಾಗಿ ಖ್ಯಾತಿ ಗಳಿಸಿದ್ದವು. ಬಂಗಾಳದ ಸರುಕುಗಳ ಉತ್ಕೃಷ್ಟತೆಯನ್ನು ಅಮೀರ್ ಖುಸ್ರು ಮತ್ತು 16ನೇ ಶತಮಾನದಲ್ಲಿ (1503–08) ಭಾರತಕ್ಕೆ ಬಂದಿದ್ದ **ಭರ್ತಲೋಮಿಯ ಡಯಾಸ್** ಹಾಗೂ 1518ರಲ್ಲಿ ಬಂದಿದ್ದ **ಬಾರ್ಬೋಸ** ಮುಂತಾದ ವಿದೇಶಿಗರು ಪ್ರಶಂಸಿಸಿದ್ದಾರೆ.
- ಮಧ್ಯ ಏಷ್ಯಾ, ಆಫ್ಘಾನಿಸ್ತಾನ್, ಟಿಬೆಟ್, ಪರ್ಶಿಯ ಮತ್ತು ಭೂತಾನ್‌ಗಳೊಂದಿಗೆ ವ್ಯಾಪಾರ ಸಂಪರ್ಕವಿತ್ತು.
- **ಆಮದುಗಳು:–** ಭೋಗ ವಸ್ತುಗಳು, ಕುದುರೆಗಳು ಮತ್ತು ಹೇಸರುಗತ್ತೆಗಳು ಮುಂತಾದವು.
- **ರಫ್ತುಗಳು:–** ವಸ್ತ್ರ ತಯಾರಿಕೆ, ಸತು, ಅಫೀಮು, ನೀಲಿ ಇತ್ಯಾದಿ.
- ಭಾರತದ ರಫ್ತು ವ್ಯಾಪಾರಗಳಿಗೆ **ಬಂಗಾಳ ಮತ್ತು ಗುಜರಾತ್** ಬಂದರುಗಳು ಪ್ರಮುಖವಾದವು.
- ಹತ್ತಿ, ಶುಂಠಿ, ಸಕ್ಕರೆ, ಧಾನ್ಯಗಳು ಮತ್ತು ಎಲ್ಲಾ ರೀತಿಯ ಮಾಂಸಗಳಿಗೆ ಪ್ರಪಂಚದಲ್ಲೆಲ್ಲಾ ಬಂಗಾಳವೇ ಅತ್ಯಂತ ಸಮೃದ್ಧವಾದುದು ಎಂದು ಬಾರ್ತಲೋಮಿಯ ಡಯಾಸ್ ತಿಳಿಸಿದ್ದಾನೆ.
- ಮುಸಾಲಿಕ್–ಉಲ್–ಅಬ್ಬಾರ್ಸ್ ಕೃತಿಯ ಕರ್ತೃ "ಎಲ್ಲಾ ದೇಶದ ವರ್ತಕರು ಭಾರತಕ್ಕೆ ಅಪರಂಜಿ ಚಿನ್ನವನ್ನು ತಂದು ಅದಕ್ಕೆ ಬದಲಾಗಿ ಮೂಲಿಕೆಗಳು, ಅಂಟುಗಳನ್ನು ತೆಗೆದುಕೊಳ್ಳುತ್ತಿದ್ದರು".

ಬೆಲೆಗಳು:–

- ಅಲ್ಲಾವುದ್ದೀನ್ ಖಿಲ್ಜಿ ಮತ್ತು ಫಿರೋಜ್ ಷಾ ತುಘಲಕ್ ಕಾಲದಲ್ಲಿ ಬೆಲೆಗಳು ಉತ್ತಮವಾಗಿದ್ದು. ಮಹಮ್ಮದ್ ಬಿನ್ ತುಘಲಕ್‌ನ ಕಾಲದಲ್ಲಿ ಕ್ಷಾಮದಿಂದಾಗಿ ಬೆಲೆಗಳು ಹೆಚ್ಚಾಗಿದ್ದವು.
- ಅಮೀರ್ ಖುಸ್ರು ರಾಜಮುಕುಟದಲ್ಲಿನ ಪ್ರತಿಯೊಂದು ರತ್ನವು ಬಡ ರೈತನ ಕಣ್ಣಿನಿಂದ ಹರಿದು ಘನೀಭೂತಗೊಂಡಿರುವ ಕಣ್ಣೀರ ಹನಿ ಎಂದಿದ್ದಾನೆ.

ಸಾಮಾಜಿಕ ಜೀವನ

- ದೆಹಲಿ ಸುಲ್ತಾನರ ಕಾಲದ ಸಮಾಜದ ಬಗ್ಗೆ ಇಬನ್ ಬತೂತನ ವರ್ಣನೆಗಳು ಪ್ರಮುಖವಾಗಿವೆ.
- ಹಿಂದೂ ಮತ್ತು ಮುಸ್ಲಿಂರಲ್ಲಿ ಹೊಂದಾಣಿಕೆಯಿರದೆ ಅಂತರ್ ಭೋಜನ ಮತ್ತು ಅಂತರ್ ವಿವಾಹಗಳಿರಲಿಲ್ಲ.
- ಸಮಾಜದಲ್ಲಿ ಮುಸ್ಲಿಂ ಸರದಾರರು ಮತ್ತು ಉಲೇಮರು ಅತ್ಯಂತ ಪ್ರಭಾವಶಾಲಿಗಳಾಗಿದ್ದರು ಹಿಂದೂಗಳನ್ನು ಬಲವಂತವಾಗಿ ಇಸ್ಲಾಂಗೆ ಮತಾಂತರಗೊಳಿಸಲಾಗುತ್ತಿತ್ತು.

ಫಿರೋಜ್‌ಷಾನು ಜಹಗೀರು ಪದ್ಧತಿಯನ್ನು ಪುನಃ ಜಾರಿಗೆ ತಂದನು.

- ಗುಲಾಮ ಪದ್ಧತಿ ಸಾಮಾನ್ಯವಾಗಿದ್ದು ಸುಲ್ತಾನನ ಗುಲಾಮರ (ಬಾದಗಾನ್–ಏ–ಖಾಸ್) ಸಂಖ್ಯೆ ಹೆಚ್ಚಾಗಿತ್ತು. ಉದಾ: ಅಲ್ಲಾವುದ್ದೀನನ ಕಾಲದಲ್ಲಿ 50,000 ಗುಲಾಮರು ಮತ್ತು ಫಿರೋಜ್‌ಷಾನ ಕಾಲದಲ್ಲಿ 1,80,000 ಗುಲಾಮರಿದ್ದರು.
- ಗುಲಾಮರನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳುವ ಪದ್ಧತಿ ರೂಢಿಯಲ್ಲಿತ್ತು.(ಅಸ್ಸಾಂ, ಚೀನಾ, ತುರ್ಕಿಸ್ತಾನ್, ಪರ್ಷಿಯಾ ಮುಂತಾದ ದೇಶಗಳಿಂದ)
- ಸ್ತ್ರೀಯರಿಗೆ ಕುಟುಂಬದಲ್ಲಿ ಗೌರವಯುತವಾದ ಸ್ಥಾನವಿತ್ತು. ಗುಜರಾತಿನ ಕೆಲವು ಸಮುದ್ರ ತೀರದ ನಗರಗಳನ್ನು ಬಿಟ್ಟು ಉಳಿದೆಲ್ಲಾ ಕಡೆ ಹಿಂದೂ ಮತ್ತು ಮುಸ್ಲಿಂರಿಬ್ಬರಿಗೂ ಪರ್ದಾ ಪದ್ಧತಿಯನ್ನು ವ್ಯಾಪಕವಾಗಿ ಆಚರಣೆಗೆ ತರಲಾಗಿತ್ತು. ಕೆಲವು ವರ್ಗಗಳಲ್ಲಿ ಸತಿ ಸಹಗಮನ ಪದ್ಧತಿ ರೂಢಿಯಲ್ಲಿತ್ತು.

ಶಿಕ್ಷಣ ಪದ್ಧತಿ:

- ಶಿಕ್ಷಣಕ್ಕಾಗಿ ಪ್ರಥಮ ಮದರಸವನ್ನು ಮಹಮದ್ ಘೋರಿಯು ಅಜ್ಮೀರದಲ್ಲಿ ಪ್ರಾರಂಭಿಸಿದನು.
- ಇಲ್ತಮಷ್‌ನು ಮದರಸವನ್ನು ದೆಹಲಿಯಲ್ಲಿ ನಿರ್ಮಿಸಿ ಮಹ್ಮದ್ ಘೋರಿಯ ಹೆಸರಿಟ್ಟನು. ಕಲಿಕೆಗೆ ಮಹತ್ವ ನೀಡಿದ ಮತ್ತೊಬ್ಬ ಸುಲ್ತಾನ ಬಲ್ಬನ್.
- ವಿದ್ಯಾ ಪ್ರೇಮಿಯಾಗಿದ್ದ ಸುಲ್ತಾನ ಫಿರೋಜ್–ಷಾ–ತುಘಲಕ್.
- ಶಿಕ್ಷಣ ಮಾಧ್ಯಮ ಪರ್ಶಿಯನ್ ಆಗಿದ್ದರೂ ಅರೇಬಿಕ್ ಭಾಷೆ ಕಡ್ಡಾಯವಾಗಿತ್ತು.
- **ಮುಸಲ್ಮಾನ ಶಿಕ್ಷಣ ಕೇಂದ್ರಗಳು:** ದೆಹಲಿ, ಜಲಾಂದರ್ ಮತ್ತು ಫಿರೋಜ್‌ಬಾದ್, ಮುಖ್ಯವಾದವು.
- **ಹಿಂದೂ ಶಿಕ್ಷಣ ಸಂಸ್ಥೆಗಳು:** ಪ್ರಾಥಮಿಕ ಶಾಲೆಗಳು, ಕಾಲೇಜುಗಳು ಮತ್ತು ಖಾಸಗಿ ಶಾಲೆಗಳು.

ಸಾಂಸ್ಕೃತಿಕ ಕೊಡುಗೆಗಳು (Cultural Contributions)

ಸಾಹಿತ್ಯಕ ಕೊಡುಗೆ

1. **ಪ್ರಾಂತೀಯ ಸಾಹಿತ್ಯ:**

- ದೆಹಲಿಯ ಸುಲ್ತಾನರ ಕಾಲದಲ್ಲಿ ಪ್ರಾಂತೀಯ ಸಾಹಿತ್ಯವು ವಿಪುಲವಾಗಿ ಬೆಳೆಯಿತು. ಉದಾ: ಕಬೀರರ ದೋಹಗಳು ಮತ್ತು ಸಾಖಿಗಳು, ರಮಾನಂದ, ಮೀರಾಬಾಯಿ, ಚೈತನ್ಯ, ನಾಮದೇವ, ವಿದ್ಯಾಪತಿ ಮುಂತಾದವರು ಕೃತಿಗಳು.

2. **ಪರ್ಷಿಯನ್ ಸಾಹಿತ್ಯ:**

- ಈ ಕಾಲದಲ್ಲಿ ಸಂಸ್ಕೃತ ಭಾಷೆಯು ಪ್ರಾಮುಖ್ಯತೆ ಕಳೆದುಕೊಂಡು **ಪರ್ಷಿಯನ್ ಭಾಷೆ** ಪ್ರಮುಖವಾಯಿತು.

- ದಾಕಿಕಿ (ಸಮಾನಿದ್‌ನ ಆಸ್ಥಾನ)ಯ ಷಾ ನಾಮವನ್ನು ಫಯಾಸಿಯು ಪೂರ್ಣಗೊಳಿಸಿದವನು
- ಇಲ್ತಮಷ್‌ನ ಆಸ್ಥಾನದಲ್ಲಿ ಕ್ವಾಜಾ, ಅಬು-ನಜರ್, ಅಬುಬಕರ ಮಹಮದ್ ರಹಾನಿ, ತಾಜ್-ಉದ್-ದಾಬಿರ್, ಮುಂತಾದ ಕವಿಗಳಿದ್ದರು.
- ನಾಸೀರುದ್ದೀನ್ ಷಾನ ಆಸ್ಥಾನದಲ್ಲಿ ಇತಿಹಾಸಕಾರ ಮಿನ್ಹಾಜ್-ಉದ್ದೀನ್-ಸಿರಾಜ್‌ನಿದ್ದನು.
- ಬಲ್ಬನ್ನನ ಆಸ್ಥಾನದಲ್ಲಿ ಅಮೀರ್ ಖುಸ್ರುವಿದ್ದನು (ಕೃತಿಗಳು-ಪಂಚಗಂಜ್, ಹಸ್ತಬಿಹಸ್ತ್, ಮತ್ಸ-ಉಲ್-ಅನ್ವರ್, ಶಿರಿನ್-ವಾ-ಖುಸ್ರುವ್, ಲೈಲಾ-ವಾ-ಮಜ್ನ್, ಐನ್-ಇ-ಸಿಕಂದರಿ)
- ಮಹಮದ್ ಬಿನ್ ತುಘಲಕ್ ಆಸ್ಥಾನದಲ್ಲಿ ಜಿಯಾವುದ್ದೀನ್ ಬರನಿ ಇದ್ದನು. (ಕೃತಿಗಳು ಸನಾಯು-ಮಹಮದಿ, ಇನಾಯತ್‌ನಾಮ ಇಲಾಹಿ, ಸಲಿತ್-ಇ-ಕಬೀರ್, ಹರ್ಸತ್ ನಾಮ, ತಾರೀಖ್-ಇ-ಫಿರೋಜ್ ಶಾಹಿ, ಫತ್ವೆ-ಇ-ಜಹಂದರಿ).
- ಫಿರೋಜ ಷಾ ತುಘಲಕ್‌ನ ಕೃತಿ ಪುತುಹತ್-ಎ-ಫಿರೋಜ್‌ಷಾಹಿ. ಈತನ ಆಸ್ಥಾನಿಕರೆಂದರೆ ಷಂಸ್-ಇ-ಸಿರಾಜ್ ಅಫೀಪ್(ಕೃತಿ:ತಾರೀಕ್-ಇ-ಫಿರೋಜ್ ಶಾಹಿ) ಯಹ್ಯಾ-ಬಿನ್-ಅಹಮದ್(ಕೃತಿ:ತಾರೀಕ್-ಎ-ಮುಬಾರಕ್)
- ಇತರ ವಿದ್ವಾಂಸರು – ಖ್ವಾಜಾ ಅಬ್ದುಲ್ ಮುಕ್ಟರ್ ಷಾನಿಹಿ, ಮೌಲಾನಿ ಖ್ವಾಜಗಿ ಮತ್ತು ಅಹ್ಮದ್ ತಾನೇಶ್ವರಿ.

3. **ಅರಾಬಿಕ್ ಸಾಹಿತ್ಯ**

- ಖಲೀಫ್ ಮಾಮುನ್ ಕಾಲದಲ್ಲಿ ಬಹು ಸಂಖ್ಯೆಯ ಸಂಸ್ಕೃತ ವಿದ್ವಾಂಸರನ್ನು ಭಾರತದಿಂದ ಬಾಗ್ದಾದ್‌ಗೆ ಕರೆಯಿಸಿಕೊಂಡು ಸಂಸ್ಕೃತ ಕೃತಿಗಳನ್ನು ಅರೇಬಿಕ್‌ಗೆ ಭಾಷಾಂತರಿಸಲಾಯಿತು.
- ಪ್ರಸಿದ್ಧ ಲೇಖಕ ಅಬು ಅತುಲ ಅಬ್ದೂರ್ ರೆಹಮಾನ್ ಕುರಾನ್ ಮತ್ತು ಹಾದಿಕ್ ಮೇಲೆ ಬಾಷ್ಯ ಬರೆದನು.
- ಅಲ್ಬೆರೊನಿಯ **ಕಿತಾಬ್-ಅಲ್-ಹಿಂದ್**. ರಾಜಮುದ್ದೀನ್ ಹಸನ್‌ನ **ಮುಷಾರಿಕ್ ಉಲ್ ಅನ್ವರ್**.
- ಆ ಕಾಲದ ಏಕೈಕ ಅರೇಬಿಕ್ ಐತಿಹಾಸಿಕ ಕೃತಿ ಅಬ್ದುಲ್-ಅಲ್-ಮಕ್ಕಿಯ **ಜಫರುಲ್‌ವಾಲಿದ್**.
- ಅಲ್ಲಾದಿಯಾನನು ದಿತಾಯತಲ್ ಫಿಕ್ ಕೃತಿ ರಚಿಸಿದನು.
- ದಕ್ಷಿಣದಲ್ಲಿ ಬಹುಮನಿ ಸುಲ್ತಾನರು ಸಹ ಅರೇಬಿಕ್ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು.

4. **ಸಂಸ್ಕೃತ ಸಾಹಿತ್ಯ**

- ಮಧ್ಯಕಾಲೀನದಲ್ಲಿ ವಿಜಯನಗರ, ವಾರಂಗಲ್, ಗುಜರಾತ್, ರಾಜಸ್ಥಾನ, ಬಂಗಾಳ ಮತ್ತು ದಕ್ಷಿಣ ಪಲ್ಲವರು ಸಂಸ್ಕೃತ ಸಾಹಿತ್ಯ ಪೋಷಕರಾಗಿದ್ದರು.
- ಮಧ್ಯಕಾಲೀನ ಮೊದಲ ಸಂಸ್ಕೃತ ಐತಿಹಾಸಿಕ ಕೃತಿ **ಕಲ್ಹಣನ ರಾಜತರಂಗಿಣಿ**. ಇದು ಕಾಶ್ಮೀರದ ಇತಿಹಾಸವನ್ನು ತಿಳಿಸುತ್ತದೆ.
- ಪಾರ್ಥಸಾರಥಿ ಮಿತ್ರನ – ಕರ್ಮಮೀಮಾಂಸೆ
- ಜಯಸಿಂಹ ಸೂರಿ – ಹಮ್ಮೀರ ಮದವರ್ಧನ
- ರಾಜರವಿವರ್ಮ(ಕೇರಳ) – ಪ್ರದ್ಯುಮ್ನಾಬ್ಯುದಯ
- ವಿದ್ಯಾನಾಥನ – ಪ್ರತಾಪರುದ್ರ ಕಲ್ಯಾಣ
- ವಾಮನಭಟ್ಟ ಬಾಣನ – ಪಾರ್ವತೀ ಪರಿಣಯ
- ವಿಜ್ಞಾನೇಶ್ವರನ – ಮಿತಾಕ್ಷರ
- ಜಿಮೂತ ವಾಹನ – ದಯಾಭಾಗ ಕೃತಿ ರಚನೆಯಾದವು.
- ಸುಪ್ರಸಿದ್ಧ ಖಗೋಳ ವಿಜ್ಞಾನಿ ಭಾಸ್ಕರಾಚಾರ್ಯನು ಈ ಯುಗದಲ್ಲಿ ಜೀವಿಸಿದ್ದನು.
- ಗಂಗಾಧರ – ಗಂಗದಾಸ ಪ್ರತಾಪವಿಲಾಸ
- ಬಂಗಾಳದ ಹುಸೇನ್‌ಷಾ ಮಂತ್ರರೂಪ ಗೋಸ್ವಾಮಿ ವಿದಗ್ದ ಮಾದವ ಮತ್ತು ಲಲಿತ ಮಾದವ ಕೃತಿಗಳು.

ವ್ಯಾಕರಣ ಮತ್ತು ಸ್ಮೃತಿ ಗ್ರಂಥಗಳು

- ಪದ್ಮನಾಭದತ್ತ, ವಿದ್ಯಾಪತಿ, ಮಿಥಿಲದ ವಾಚಸ್ಪತಿ ಹಾಗೂ ಬಂಗಾಳದ ರಘುನಾಥರು ಆಗಿನ ಪ್ರಮುಖ ಕವಿಗಳು
- ವಿದ್ಯಾರಣ್ಯರ ರಾಜಕಾಲ ನಿರ್ಣಯ(ವಿಜಯನಗರದ ಇತಿಹಾಸದ ಬಗ್ಗೆ) ಕೃತಿ.
- ರಾಜನಾಥನ – ಸಾಳ್ವಾಭ್ಯುದಯಂ(ಸಾಳ್ವನರಸಿಂಹದ ಬಗ್ಗೆ)
- ಕಲ್ಲುಕ(ಬಂಗಾಳ)- ಮನುಧರ್ಮಶಾಸ್ತ್ರದ ಮೇಲೆ ಭಾಷ್ಯ ಬರೆದರು.
- ಜಯಗೋವಿಂದನ – ಗೀತಗೋವಿಂದ
- ಮಧ್ವರು ಬ್ರಹ್ಮಸೂತ್ರ ಭಾಷೆ, ನ್ಯಾಯವಿತರಣೆ ಮತ್ತು ಅನುವ್ಯಾಖ್ಯಾನ,
- ಭಗವದ್ಗೀತೆ, ಗೀತಾಭ್ಯಾಷ್ಯ, ಗೀತಾತ್ಪರ್ಯ ಕೃತಿಗಳನ್ನು ರಚಿಸಿದರು.

ದೆಹಲಿ ಸುಲ್ತಾನರ ಕಾಲದ ಕಲೆ ಮತ್ತು ವಾಸ್ತುಶಿಲ್ಪ

- ಭಾರತೀಯ ಮತ್ತು ಇಸ್ಲಾಮಿಕ್ ಶೈಲಿಗಳ ಸಂಯೋಜನೆಯನ್ನು ಇವರ ವಾಸ್ತುಶಿಲ್ಪಗಳು ಒಳಗೊಂಡಿವೆ. ಇಂಡೋ ಮುಸ್ಲಿಂ ಶೈಲಿಯು ಜೌನಾಪುರ, ವಿಜಾಪುರ, ಗುಜರಾತ್, ಮುಂತಾದ ಪ್ರತಿ ಪ್ರಾಂತ್ಯದಲ್ಲಿಯೂ ವಿಶೇಷವಾಗಿತ್ತು. ದೆಹಲಿಯಲ್ಲಿ ಇಸ್ಲಾಮಿಕ್ ಪ್ರಭಾವ ಹೆಚ್ಚಾಗಿತ್ತು.
- ಬಂಗಾಳದ ಜನರು ಇಟ್ಟಿಗೆಗಳಿಂದ ನಿರ್ಮಿಸುವ ವಿಧಾನ(ಹಿಂದೂ ಶೈಲಿ), ಪಶ್ಚಿಮ ಭಾರತದಲ್ಲಿ ಗುಜರಾತಿ ಶೈಲಿ ಹಾಗೂ ಹಿಮಾಲಯದಲ್ಲಿ ಮರದ ವಾಸ್ತುಶಿಲ್ಪಗಳು ಆಚರಣೆಯಲ್ಲಿದ್ದವು.
- ಇಂಡೋ ಸಾರ್ಸೆನಿಕ್ ಶೈಲಿಗೆ ಉದಾಹರಣೆ, ಕುವ್ವತ್-ಉಲ್ ಇಸ್ಲಾಂ ಮಸೀದಿ. ಇದನ್ನು ಹಿಂದೂ ದೇವಾಲಯಗಳ ಸ್ತಂಭಗಳನ್ನು ಬಳಸಿ ನಿರ್ಮಿಸಲಾಗಿದೆ. ಅದೇ ರೀತಿ ದಾರ್‌ನ-ಲಾಟ-ಕಿ-ಮಸೀದಿ.
- ಹಿಂದೂ ದೇವಾಲಯಗಳ ಮತ್ತು ಮುಸಲ್ಮಾನ ಮಸೀದಿಗಳ ಒಂದು ವಿಶಿಷ್ಟ ಲಕ್ಷಣವೆಂದರೆ ಸ್ತಂಭಗಳು/ಉಪಕೋಣೆಗಳಿಂದ ಕೂಡಿದ ತೆರೆದ ಅಂಗಳ ಮತ್ತು ಈ ಯೋಜನಾನುಸಾರವಾಗಿ ರಚಿತವಾದ ದೇವಾಲಯಗಳನ್ನು ಮಸೀದಿಗಳಾಗಿ ಪರಿವರ್ತಿಸಲಾಯಿತು.

- ದೆಹಲಿ ಶೈಲಿಗೆ ಉತ್ತಮ ಉದಾ:– ಕುತುಬ್‌ಮಿನಾರ್ ಆಗಿದೆ. ಅಲ್ಲಾವುದ್ದೀನ್ ಖಿಲ್ಜಿಯ ಕಾಲದ ಎರಡು ಮುಖ್ಯ ಸ್ಮಾರಕಗಳೆಂದರೆ **ಜಮಾಯತ್‌ಖಾನ** (ನಿಜಾಮುದ್ದೀನ್ ಔಲಿಯಾ ದರ್ಗದಲ್ಲಿದೆ) ಹಾಗೂ **ಅಲಾಯಿ ದರ್ವಾಜಾ** (ಕುತುಬ್ ಮಿನಾರ್‌ನಲ್ಲಿದೆ)ಇವು ಇಸ್ಲಾಂ ಶೈಲಿಗಳಿಂದ ಕೂಡಿವೆ.
- ಅತಾಲದೇವಿ ಮಸೀದಿ ಜಾನಪುರದಲ್ಲಿದೆ.
- ಬಂಗಾಳದ ಹಿಂದೂ ಮತ್ತು ಮುಸ್ಲಿಂ ಶೈಲಿ ಬೆಳವಣಿಗೆಯಾಯಿತು. ಅಲ್ಲದೆ ಸ್ತಂಭಗಳ ಮೇಲೆ ಮೊನಚಾದ ಕಮಾನುಗಳು ಮತ್ತು ಪಾರಂಪರಿಕ ಹಿಂದೂ ದೇವಾಲಯಗಳಿಂದ ತೆಗೆದುಕೊಂಡು ವಕ್ರರೇಖೆಗಳಿಂದ ಕೂಡಿದ ಕಾರ್ನಿಸುಗಳನ್ನು ಮತ್ತು ಅಲಂಕಾರಿಕವಾಗಿ ಕೆತ್ತಲ್ಪಟ್ಟ ಕಮಾನುಗಳನ್ನು ಕಾಣಬಹುದು.
- ಹುಸೇನ್‌ಷಾ ಆಳ್ವಿಕೆ ಕಾಲದಲ್ಲಿ ವಾಲಿಮಹ್ಮದ್ ಕಟ್ಟಿಸಿದ ಛೋಟಾಸೋನಾ ಮಸೀದಿ (ಗೌರ್) ಹಾಗೂ ನಸ್ರತ್‌ಷಾನಿಂದ ಪೂರ್ಣಗೊಂಡ ಬಡಸೋನಾ ಮಸೀದಿಗಳು.
- ಹುಷಾಂಗ್ ಯೋಜಿಸಿ ಪ್ರಾರಂಭಿಸಿದ ಮಹಮ್ಮದ್ ಖಿಲ್ಜಿ ಪೂರ್ಣಗೊಳಿಸಿದ ಜಾಮೀ ಮಸೀದಿ, ಇಂದೋಳ್ ಮಹಲ್, ಜಹಾಬ್ ಮಹಲ್, ಹುಷಾಂಗ್ ಗೋರಿ ಹಾಗೂ ಬಾಜ್ ಬಹದ್ದೂರ್ ಮತ್ತು ರೂಪಮತಿಯರ ಅರಮನೆಗಳು.

ಸ್ಮಾರಕಗಳು	ಸ್ಥಳ	ನಿರ್ಮಿಸಿದವರು
ಕುತುಬ್‌ಮಿನಾರ್	ದೆಹಲಿ	ಕುತುಬ್‌ಉದ್ದೀನ್‌ಐಬಕ್
ಕುವತ್‌ಉಲ್‌ಇಸ್ಲಾಂ	ದೆಹಲಿ	ಕುತುಬ್‌ಉದ್ದೀನ್‌ಐಬಕ್
ಅದ್ಯೆದಿನಕಾ ಚೋಪ್ರ ಮಸೀದಿ	ಅಜ್ಮೀರ್	ಕುತುಬ್‌ಉದ್ದೀನ್‌ಐಬಕ್
ಸುಲ್ತಾನ್‌ಘರಿ	ದೆಹಲಿ	ಇಲ್ತಮಷ್
ಹಜಾರ್ ಮಹಲ್	ದೆಹಲಿ	ಅಲ್ಲಾವುದ್ದೀನ್ ಖಿಲ್ಜಿ
ಅಲೈದರ್ವಾಜ್	ದೆಹಲಿ	ಅಲ್ಲಾವುದ್ದೀನ್ ಖಿಲ್ಜಿ
ಜಮಯತ್‌ಖಾನ್ ಮಸೀದಿ	ದೆಹಲಿ	ಅಲ್ಲಾವುದ್ದೀನ್ ಖಿಲ್ಜಿ
ಹಾಜೀಖಾಸ್	ದೆಹಲಿ	ಅಲ್ಲಾವುದ್ದೀನ್ ಖಿಲ್ಜಿ
ತುಘಲಕಬಾದ್	ದೆಹಲಿ	ಘಿಯಾಸುದ್ದೀನ್ ತುಘಲಕ್
ಜಾನ್‌ಪನ್ಹ	ದೆಹಲಿ	ಮಹಮದ್ ಬಿನ್ ತುಘಲಕ್
ಫಿರೋಜಾಬಾದ್	ದೆಹಲಿ	ಫಿರೋಜ್ ಷಾ ತುಘಲಕ್

ಲಲಿತ ಕಲೆಗಳು

- ಪರ್ಷಿಯಾ ಮತ್ತು ಭಾರತ ಸಂಗೀತ ಸೇರಿ **ಹಿಂದೂಸ್ತಾನಿ** ಸಂಗೀತವಾಗಿದೆ.
- ಅಮೀರ್ ಖುಸ್ರು ಪ್ರಸಿದ್ಧ ಸಂಗೀತಶಾಸ್ತ್ರದ ಲೇಖಕ, ಈತನು ಪರ್ಷಿಯನ್ ತಂಬೂರಿ ಮತ್ತು ಭಾರತೀಯ ವೀಣೆಗಳನ್ನು ಸಮನ್ವಯಗೊಳಿಸಿ **ಸಿತಾರ** ಅಭಿವೃದ್ಧಿಪಡಿಸಿದ್ದಾನೆ.
- ಭಾರತೀಯ ಮೃದಂಗವನ್ನು ಸುಧಾರಿಸಿ **ತಬಲಾ**ವನ್ನು ರೂಢಿಸಲಾಯಿತು.
- ಜೌನಾಪುರ ಮತ್ತು ಗ್ವಾಲಿಯಾರ್‌ನಲ್ಲಿ **ಹಿಂದೂಸ್ತಾನಿ ಸಂಗೀತ** ಅಭಿವೃದ್ಧಿ ಹೊಂದಿತು.
- ಮಾನಸಿಂಗನು ರಚಿಸಿದ ಸಂಗೀತ ಗ್ರಂಥ **ಮಾನಕುತೂಹಲ** ಇವನ ಆಸ್ಥಾನದಲ್ಲಿದ್ದ ಸಂಗೀತಗಾರ **'ಬೈಜೂ'**.

ವಿಜ್ಞಾನ

- 12ನೇ ಶತಮಾನದ **ಭಾಸ್ಕರಾಚಾರ್ಯನು** ಪ್ರಮುಖ ಖಗೋಳ ಹಾಗೂ ಗಣಿತಶಾಸ್ತ್ರಜ್ಞ.
- ಸುಲ್ತಾನರ ಕಾಲದಲ್ಲಿ ಮುಸ್ಲಿಂ ವೈದ್ಯಕೀಯ ಪದ್ಧತಿಯಾದ **ಯುನಾನಿ** ಜನಪ್ರಿಯವಾಯಿತು. ಯುನಾನಿ ವೈದ್ಯಕೀಯ ಪದ್ಧಿತಿಯ ಅಂಶಗಳನ್ನು ಹಿಂದೂ ಆಯುರ್ವೇದ ಪದ್ಧತಿಯಲ್ಲಿ ಅಳವಡಿಸಲಾಯಿತು.
- ದಖನ್ನಿನ ರಾಣಿ ಎಂದು ಜನಪ್ರಿಯವಾದ ನಗರ **ಗೋಲ್ಕಂಡ**ವಾಗಿದೆ.
- ಯುರೋಪಿನ ಪ್ರವಾಸಿಗಳ ಅರಸ ಎಂದು **ಮಾರ್ಕೋ ಪೋಲನನ್ನು** ಕರೆಯುತ್ತಾರೆ.
- ದೆಹಲಿಯ 8 ಮಂದಿ ಸುಲ್ತಾನರ ಆಳ್ವಿಕೆ ಕಂಡಿದ್ದ ವ್ಯಕ್ತಿ **ಅಮೀರ್‌ಖುಸ್ರೋ.**
- ಹಿಂದಿ ಮತ್ತು ಪರ್ಷಿಯನ್ ಮಿಶ್ರಣ ಉರ್ದು ಅಥವಾ ಖಾರಿಬೋಲಿ ಎಂಬುದಾಗಿದೆ.
- ಹಿಂದಿಯನ್ನು ಬಳಸಿದ ಮೊದಲ ಮುಸ್ಲಿಂ ಕವಿ **ಅಮೀರ್ ಖುಸ್ರೋ.**
- ದೆಹಲಿ ಸುಲ್ತಾನರು ತೊಲೆ ಮತ್ತು ಚಪ್ಪಟೆಯ ತಂತ್ರವನ್ನು ಹಿಂದೂ ವಾಸ್ತು ಶಿಲ್ಪದಲ್ಲಿ ಬಳಸುತ್ತಿದ್ದರು. ಗಾರೆಯನ್ನು ಸಹ ಅಭಿವೃದ್ಧಿ ಪಡಿಸಿದರು. ಇವರು ವಿಗ್ರಹರಾಧನೆ ಮಾಡುತ್ತಿರಲಿಲ್ಲ. ಆದ್ದರಿಂದ ಪ್ರಾಣಿಗಳ ಮತ್ತು ಯಾವುದೇ ಮನುಷ್ಯನ ವಿಗ್ರಹ ಕಟ್ಟಡದ ಮೇಲೆ ಕೆತ್ತುತ್ತಿರಲಿಲ್ಲ.
- ಭಾರತದಲ್ಲಿ ಹಿಂದೂ ವಾಸ್ತುಶಿಲ್ಪದ ಪ್ರಭಾವದಿಂದ ಗಂಟೆಯಾಕಾರದ **ಕಮಲ ಮತ್ತು ಸ್ವಸ್ತಿಕ್** ಕೆಲವು ಸಸ್ಯಗಳ ಚಿತ್ರಗಳನ್ನು ಮಾತ್ರ ಕೆತ್ತುತ್ತಿದ್ದರು.
- ಮುಸ್ಲಿಂರು ಹೊಸ ರೀತಿಯಲ್ಲಿ ಅಂದರೆ ಕಮಾನು ಮತ್ತು ಗುಮ್ಮಟ ಎಂಬ ಹೊಸ ಶೈಲಿಯಲ್ಲಿ ಕಟ್ಟಡಗಳನ್ನು ಕಟ್ಟುತ್ತಿದ್ದರು.

ಪದಗಳು	ಅರ್ಥ
ಖಲೀಸ	ಸುಲ್ತಾನನಿಗೆ ಸೇರಿದ ಭೂಮಿ
ಮುಕ್ತಾ	ಇಕ್ತಾ ಇಡುವಳಿದಾರ
ದಲಾಲ್ ಇ ಹಜರತ್	ಮಾರಾಟ ತೆರಿಗೆ
ಜುಂಗ್ ಇ ಗಲ್ಲಾ	ಆಹಾರ ಧಾನ್ಯಗಳ ಮೇಲಿನ ತೆರಿಗೆ
ಅಬ್ವಾಲ	ಚೆಸ್ ತೆರಿಗೆ
ಸೌಂದರ್	ಭೂ ದಾನ
ಮುಕಧಮ್	ಗ್ರಾಮ ಮುಖಂಡ
ಮುಕ್ತೈ	ಮಿಶ್ರ ಪದ್ಧತಿ
ನಸ್.	ಕರಾರು ಆದಾರತಿ

15. ಪ್ರಾದೇಶಿಕ ರಾಜ್ಯಗಳು (Provincial Dynasties)

15.1. ವಿಜಯನಗರ ಸಾಮ್ರಾಜ್ಯ (Vijayanagara Empire)

- ದೆಹಲಿಯಲ್ಲಿ ಆಳುತ್ತಿದ್ದ ಮಹಮದ್-ಬಿನ್-ತುಘಲಕ್‌ನ ಕಾಲದಲ್ಲಿ ದಕ್ಷಿಣದಲ್ಲಿ ಜನ್ಮತಾಳಿದ ರಾಜ್ಯವೇ ವಿಜಯನಗರ ಸಾಮ್ರಾಜ್ಯ.
- ವಿಜಯನಗರ ಸಾಮ್ರಾಜ್ಯವನ್ನು **ಹರಿಹರ ಮತ್ತು ಬುಕ್ಕ** ಎಂಬ ಸಹೋದರರು ವಿದ್ಯಾರಣ್ಯರ ಸಹಾಯದಿಂದ **1336**ರಲ್ಲಿ ಸ್ಥಾಪಿಸಿದರು.
- ಭಾರತದ ಇತಿಹಾಸದಲ್ಲೇ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಟ್ಟ ಕಡೆಯ ಹಿಂದೂ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯವಾಗಿದೆ.
- **ಆಂಧ್ರದ ಮೂಲದ ಪ್ರಕಾರ** ಹಕ್ಕ ಮತ್ತು ಬುಕ್ಕರು ವಾರಂಗಲ್ಲಿನ ಕಾಕತೀಯರ ಪ್ರತಾಪರುದ್ರನ ಆಶ್ರಯದಲ್ಲಿ ಖಜಾನೆ ಅಧಿಕಾರಿಗಳಾಗಿದ್ದರು. ವಿದ್ಯಾರಣ್ಯರು 1336ರಲ್ಲಿ ವಿಜಯನಗರ ಪಟ್ಟಣ ಸ್ಥಾಪಿಸಿ ಅದಕ್ಕೆ ಹಕ್ಕ ಬುಕ್ಕರನ್ನು ಸಿಂಹಾಸನರೂಢರಾಗಿ ಮಾಡಿದರು.
- **ಕನ್ನಡದ ಮೂಲದ ಪ್ರಕಾರ:** ಹಕ್ಕಬುಕ್ಕರು ವೀರಬಲ್ಲಾಳನ ಅಧೀನದಲ್ಲಿ ಅಲ್ಲದೆ ಅವನ್ ಜೊತೆಂಯಲ್ಲಿ ಕಾರ್ಯನಿರ್ವಹಿಸುತ್ತಿದ್ದುದು ಕಂಡುಬರುತ್ತದೆ. ತೆಲುಗು ಕವಿಗಳಾದ ವಲ್ಲಭಾಚಾರ್ಯ, ಶ್ರೀನಾಥ ಮುಂತಾದವರು ಸಂಗಮ ವಂಶದ ರಾಜಕುಮಾರರನ್ನು ಕರ್ನಾಟಕದ ಕೀರ್ತಿನಾಥರು ಎಂದು ಉಲ್ಲೇಖಿಸಿದ್ದಾರೆ.
- **ಮುಸ್ಲಿಂ ಲೇಖಕ ಫೆರಿಸ್ತಾನು** ವಿಜಯನಗರದ ಅರಸರನ್ನು ಕರ್ನಾಟಕದ ರಾಯರು ಎಂದು ಸೂಚಿಸಿದ್ದಾನೆ ಇದನ್ನು ಪಿ.ಬಿ.ದೇಸಾಯಿ ಪತ್ತೆ ಹಚ್ಚಿದ್ದಾರೆ.

ಆಧಾರಗಳು: ಶಾಸನಗಳು

1. **ಬಾಗೇಪಲ್ಲಿಯ ತಾಮ್ರ ಶಾಸನ :** ಇದು ಒಂದನೇ ಹರಿಹರನದು. ಇದು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಗುರುತಿಸುವಲ್ಲಿ ಅತ್ಯಂತ ಉಪಯುಕ್ತವಾಗಿದೆ.
2. **ಬಿತ್ರಗುಂಟ ಶಾಸನ(ನೆಲ್ಲೂರು) (1356):** ಐದು ಜನ ಸಂಗಮ ಸಹೋದರರ ವಂಶಾವಳಿಯ ಬಗ್ಗೆ ತಿಳಿಸುತ್ತದೆ.
3. **ನೆಲ್ಲೂರು ತಾಮ್ರ ಶಾಸನ (1339):** ಹರಿಹರನ ರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದುಗಳ ಬಗ್ಗೆ ತಿಳಿಸುತ್ತದೆ.
4. **ಶ್ರವಣ ಬೆಳಗೊಳ ಶಾಸನ (1368)** ಬುಕ್ಕರಾಯನ ಧಾರ್ಮಿಕ ನೀತಿಯನ್ನು ತಿಳಿಸುತ್ತದೆ.
5. **ಚನ್ನರಾಯ ಪಟ್ಟಣದ ಶಾಸನ:** ಹರಿಹರನ ಈ ಶಾಸನವು ಬುಕ್ಕರಾಯನ ದಿಗ್ವಿಜಯದ ನಂತರ ವಿಜಯ ಎಂಬ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನೆಂಬುದನ್ನು ತಿಳಿಸುತ್ತದೆ.
6. **ಶ್ರೀರಂಗಂ ಶಾಸನ (1434):** 2ನೇ ದೇವರಾಯನ ಈ ಶಾಸನವು ವಿವರಣೆ ನೀಡುತ್ತದೆ.
7. **ದೇವುಲಪಲ್ಲಿ ಶಾಸನ (ಚಿತ್ತೂರ) (1504):** 2ನೇ ನರಸಿಂಹನ ಕಾಲದ ಈ ಶಾಸನವು ಸಾಳ್ವ ಸಂತತಿಯ ಅರಸರ ಬಗ್ಗೆ ತಿಳಿಸುತ್ತದೆ.
8. **1507ರ ವೀರ ನರಸಿಂಹನ ಕಂದಿಯನ್ ತಂದಲ್ ಶಾಸನ** (ಉತ್ತರ ಅರ್ಕಾಟ್) ತುಳುವ ಸಂತತಿಯ ಅರಸರ ವಂಶಾವಳಿ ಮತ್ತು ನರಸನಾಯಕನ ಸೈನಿಕ ಕಾರ್ಯಾಚರಣೆಯ ಬಗ್ಗೆ ತಿಳಿಸುತ್ತದೆ.
9. **1510ರ ಹಂಪಿಯ ಶಾಸನ:** ಕೃಷ್ಣದೇವರಾಯನ ಈ ಶಾಸನವು ಅವನ ಸಿಂಹಾಸನವರೋಹಣ ಮತ್ತು ಒರಿಸ್ಸಾದ ಗಜಪತಿರುದ್ರನೊಡನೆ ಸಂಬಂಧದ ಬಗ್ಗೆ ತಿಳಿಸುತ್ತದೆ.

- **ನಾಣ್ಯಗಳು ;**-ಗದ್ಯಾಣ, ವರಾಹ/ಪಗೋಡ, ಹೊನ್ನು ಮತ್ತು ಪಣ ಮುಖ್ಯ ಚಿನ್ನದ ನಾಣ್ಯಗಳಾಗಿದ್ದು ಇವುಗಳ ಮುಖ ಭಾಗದಲ್ಲಿ ಆನೆ, ಸಿಂಹ ಮತ್ತು ವರಾಹ ಮುಂತಾದ ಪ್ರಾಣಿಗಳ ಮತ್ತು ಉಮಾ ಮಹೇಶ್ವರ ಲಕ್ಷ್ಮೀನಾರಾಯಣ, ಬಾಲಕೃಷ್ಣ ಮತ್ತು ಹನುಮ ಮುಂತಾದ ದೇವರುಗಳ ಚಿತ್ರಗಳಿವೆ.

1. ಸಂಗಮ ಸಂತತಿ(1336-1485)

ಒಂದನೇ ಹರಿಹರ(1336-56) Harihara I

- 1ನೇ ಹರಿಹರನು ವಿಜಯನಗರ ಸಾಮ್ರಾಜ್ಯದ ಮೂಲ ಪುರುಷನಾಗಿದ್ದಾನೆ. ಹರಿಹರನು ತನ್ನ ಸಹೋದರರಾದ ಕಂಪಣನನ್ನು ಉದಯಗಿರಿ ಪ್ರಾಂತ್ಯಕ್ಕೆ, ಬುಕ್ಕನನ್ನು ದ್ವಾರಸಮುದ್ರದ ಸುತ್ತಮುತ್ತಲಿನ ಪ್ರದೇಶಗಳ ಜವಾಬ್ದಾರಿ, ಮಾದಪ್ಪನನ್ನು ಕೊಂಕಣದ ಜವಾಬ್ದಾರಿ ಹಾಗೂ ಮುದ್ದಪ್ಪನನ್ನು ಮುಳಬಾಗಿಲು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ್ದನು.
- **ಕಡಲೂರು ಶಾಸನದ** ಪ್ರಕಾರ 1ನೇ ಹರಿಹರನು **ಕುಂಜರಗೊಂಡ/ ಆನೆಗೊಂದಿ** ಎಂಬ ರಾಜಧಾನಿಯಿಂದ ಆಳುತ್ತಿದ್ದನೆಂದು ತಿಳಿಸುತ್ತದೆ.

ಆಡಳಿತ

- 4 ಅಥವಾ 5 ಕೊಪ್ಪಲುಗಳನ್ನು ಸೇರಿಸಿ **ಗ್ರಾಮ** ಎನ್ನಲಾಗುತ್ತಿತ್ತು. 20/30 ಗ್ರಾಮಗಳು ಸೇರಿ **ಸ್ಥಳವಾಗಿತ್ತು.** ಈ ಘಟಕಗಳ ಆಡಳಿತವನ್ನು ಅನುಕ್ರಮವಾಗಿ ಬ್ರಾಹ್ಮಣರಾದ **ಕರ್ಣಂ** ಮತ್ತು **ಸ್ಥಳ ಕರ್ಣಂ**ಗಳು ನಡೆಸುತ್ತಿದ್ದರು. ನಾಡಗೌಡರು ಮತ್ತು ನಾಡ ತಳವಾರರು ನಾಡುಗಳ ಶಾಂತಿ ಪಾಲನೆ ಮಾಡುತ್ತಿದ್ದರು.
- **1ನೇ ಹರಿಹರನ ಬಿರುದುಗಳು** – ಮಹಾರಾಜಾಧಿರಾಜ, ರಾಜಪರಮೇಶ್ವರ, ಮಹಾಮಂಡಲೀಶ್ವರ.

ಒಂದನೇ ಬುಕ್ಕ(1356-77) (Bukka)

- 1ನೇ ಹರಿಹರನ ಕಾಲದಲ್ಲಿ 1ನೇ ಬುಕ್ಕನು ಒಳಾಡಳಿತದ ಕಾರ್ಯ ನಿರ್ವಹಿಸುತ್ತಿದ್ದನು. ಮಧುರೈನ ಸುಲ್ತಾನನನ್ನು ಸೋಲಿಸಿ, ಮಧುರೈ ಅನು. ವಶಪಡಿಸಿಕೊಂಡ ಕಂಪಣನು ಅಲಿನ ಆಡಳಿತವನು,

ಉತ್ತಮಗೊಳಿಸಿ ಅಜ್ಞಾತ ವಾಸದಲ್ಲಿದ್ದ ಶ್ರೀರಂಗನಾಥನ ಮೂರ್ತಿಯನ್ನು ಮರಳಿ ತಂದು ಶ್ರೀರಂಗಂನಲ್ಲಿ ಪುನಃ ಪ್ರತಿಷ್ಠಾಪಿಸಿದನು. ಕಂಪಣನ ಈ ಯಶಸ್ಸನ್ನು ಆತನ ಪತ್ನಿ ಗಂಗಾದೇವಿಯು ತನ್ನ ಕೃತಿ ಮಧುರ ವಿಜಯಂನಲ್ಲಿ ವಿವರಿಸಿದ್ದಾಳೆ.

- ಬುಕ್ಕನು ಚೀನಾ ಹಾಗೂ ಶ್ರೀಲಂಕಾ ದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಿದನು.
- ವಿದೇಶೀಯರ ವಾಣಿಜ್ಯ ವ್ಯಾಪಾರದಲ್ಲಿನ ವೈಮನಸ್ಸನ್ನು ಹೋಗಲಾಡಿಸಿ ಅವರಲ್ಲಿ ಗೌರವ ಭಾವನೆ ಮೂಡುವಂತೆ ಮಾಡಿದ್ದರಿಂದ **ವೈಧಿಕ ಮಾರ್ಗ ಪ್ರವರ್ಧಕ** ಎಂಬ ಬಿರುದು ಲಭಿಸಿತು.
- ಶ್ರೀರಂಗಪಟ್ಟಣ ಮತ್ತು ಮಧುರೈನಲ್ಲಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ್ದ ಬುಕ್ಕನಿಗೆ **ಹಿಂದೂರಾಯ ಸುರತ್ರಾಣ** ಎಂಬ ಬಿರುದಿತ್ತು.
- **ಸಾಯಾಣಾಚಾರ್ಯ ಮತ್ತು ಮಾಧವಚಾರ್ಯ** ಎಂಬ ಸಂಸ್ಕೃತ ವಿದ್ವಾಂಸರು ಬುಕ್ಕನ ಆಸ್ಥಾನದಲ್ಲಿದ್ದರು. ಇವರುಗಳ ನಿರ್ದೇಶನದಲ್ಲಿ ವೇದಗಳಿಗೆ ಬಾಷ್ಯಗಳನ್ನು ಬರೆಸುವ ಕಾರ್ಯದಿಂದಾಗಿ **ವೇದಮಾರ್ಗ ಪ್ರತಿಷ್ಠಾಪಕ** ಎಂಬ ಬಿರುದಿತ್ತು.
- ಬುಕ್ಕನ ಆಸ್ಥಾನದಲ್ಲಿದ್ದ ತೆಲುಗು ಕವಿ **ನಾಚನ ಸೋಮ**

2ನೇ ಹರಿಹರ (1377–1404) Harihara II

- ಬುಕ್ಕನ ಉತ್ತರಾಧಿಕಾರಿಯಾಗಿ ಅವನ ಮಗ 2ನೇ ಹರಿಹರನು ಅಧಿಕಾರಕ್ಕೆ ಬಂದನು. ಹರಿಹರನು ಬಹುಮನಿ ಸುಲ್ತಾನರ ಮುಜಾಹಿದ್‌ಷಾನನ್ನು ಸೋಲಿಸಿದನು ಹಾಗೂ ರೆಡ್ಡಿಗಳ ಆಳ್ವಿಕೆಗಳಿಗೆ ಒಳಪಟ್ಟಿದ್ದ ಆದ್ದಂಕಿ ಮತ್ತು ಶ್ರೀಶೈಲಂನ್ನು ವಶಪಡಿಸಿಕೊಂಡನು.
- ವೇದಗಳ ಮೇಲಿನ ಬಾಷ್ಯಗಳ ರಚನೆಯ ಯೋಜನೆ ಈತನ ಕಾಲದಲ್ಲಿ ಅಂದರೆ 1380ರಲ್ಲಿ ಪೂರ್ಣಗೊಂಡಿತು. ಈ ಸಾಧನೆಯಿಂದಾಗಿ ವೇದಮಾರ್ಗ ಸ್ಥಾಪನಾಚಾರ್ಯ ಬಿರುದು ಬಂದಿತು.
- 2ನೇ ಹರಿಹರನ ಕನ್ನಡ ಪ್ರೇಮದ ದ್ಯೋತಕವಾಗಿ ಕರ್ನಾಟಕ ವಿದ್ಯಾವಿಲಾಸ ಬಿರುದಿತ್ತು.
- 2ನೇ ಹರಿಹರನ ಪ್ರಮುಖ ಮಂತ್ರಿಯಾಗಿ ಮುದ್ದಪ್ಪ ಎಂಬುವವನಿದ್ದನು.
- 2ನೇ ಹರಿಹರನು 1404ರಲ್ಲಿ ನಿಧನನಾದನು (ರಾಜಾಧಿರಾಜ ಎಂಬ ಬಿರುದು ಇತ್ತು).

1ನೇ ದೇವರಾಯ (1406–1422) Devaraya I

- ಇವನು ಬಹುಮನಿಯ ಫಿರೋಜ್‌ಷಾನ ವಿರುದ್ಧ ಹೋರಾಡಿದ್ದನು, ಹಾಗೂ 1ನೇ ದೇವರಾಯನು ಹಾನಗಲ್ ಕೋಟೆ ಮತ್ತು ರಾಜಮಹೇಂದ್ರಿಯ ಭಾಗವನ್ನು ಆಕ್ರಮಿಸಿದ್ದನು.

ಉದ್ದನೆಯ ಕಾಲುವೆ ತೋಡಿಸಿ ರಾಜಧಾನಿಗೆ ನಿರಂತರ ನೀರಿನ ಸೌಲಭ್ಯವನ್ನು ಒದಗಿಸಿದನು.

- 1ನೇ ದೇವರಾಯನ ಆಸ್ಥಾನಕ್ಕೆ ಇಟಲಿಯ ನಿಕಲೋಕಾಂಟಿ ಸಂದರ್ಶನ ನೀಡಿದ್ದನು.

2ನೇ ದೇವರಾಯ (1422–1446) Devaraya II

- ಸಂಗಮ ಸಂತತಿಯ ರಾಜರಲ್ಲೇ ಅತ್ಯಂತ ಪ್ರಸಿದ್ಧ ದೊರೆ 2ನೇ ದೇವರಾಯ ಇವನಿಗಿದ್ದ ಮತ್ತೊಂದು ಹೆಸರು **ಪ್ರೌಢ ದೇವರಾಯ** (ಗೋವೆ ಮತ್ತು ರಾಜಮಹೇಂದ್ರ, ರಾಮೇಶ್ವರಗಳ ಆಕ್ರಮಣಕ್ಕಾಗಿ).
- ಇವನು ಬಹುಮನಿಯ ಸುಲ್ತಾನ ಅಹಮದ್‌ಷಾನನ್ನು ಸೋಲಿಸಿದನು ಹಾಗೂ ಗಜಪತಿ ಕಂಪಿಲೇಶ್ವರರಾಯನ ಅತಿಕ್ರಮಣವನ್ನು ಹಿಮ್ಮೆಟಿಸಿ ರೆಡ್ಡಿಗಳಿಗೆ ರಾಜಕೀಯ ಭದ್ರತೆ ಒದಗಿಸಿದನು.
- 2ನೇ ದೇವರಾಯನು ಕೇರಳದ ಮೇಲೆ ಗೆಲುವು ಸಾಧಿಸಿದನು. ಕಲ್ಲಿಕೋಟೆಯ **ಜಾಮುರಿನ್** ದೊರೆಯನ್ನು ಬಿಟ್ಟು ಕ್ವಿಲಾನಿ ರಾಜ ಮತ್ತಿತರರು ಇವನ ಸಾರ್ವಭೌಮತ್ವ ಒಪ್ಪಿಕೊಂಡಿದ್ದರು.
- ಪ್ರೌಢದೇವರಾಯನ ಸೇನಾಧಿಪತಿ **ಲಕ್ಕಣ್ಣದಂಡೇಶನ** ಸೈನಿಕ ಕಾರ್ಯಾಚರಣೆಯಿಂದ ಶ್ರೀಲಂಕಾ ದ್ವೀಪದ ವಿಜಯಕ್ಕಾಗಿ ಲಕ್ಕಣ್ಣನಿಗೆ **ದಕ್ಷಿಣ ಸಮುದ್ರಾಧಿಪತಿ** ಬಿರುದು ನೀಡಿದನು.
- **ಪ್ರೌಢದೇವರಾಯನ ಬಿರುದುಗಳು:** ವೀರಪ್ರತಾಪ ದೇವರಾಯ, ಮಹಾರಾಯ ಮತ್ತು ಗಜಬೇಂಟೆಕಾರ(ಆತನಿಗಿದ್ದ ಆನೆಗಳ ಬೇಟೆಯಾಡುವ ಆಸಕ್ತಿಯ ದ್ಯೋತಕವಾಗಿ)
- ಪ್ರೌಢದೇವರಾಯನು ಸ್ವತಃ ಮಹಾನಾಟಕ ಸುಧಾನಿಧಿ ಹಾಗೂ ಬಾದಣರಾಯರ ಬ್ರಹ್ಮಸ್ತೋತ್ರಗಳಿಗೆ ಭಾಷ್ಯವನ್ನು ಬರೆದನು.
- ಪ್ರೌಢದೇವರಾಯನ ಕಾಲದ ಕವಿಗಳಾದ ಕುಮಾರವ್ಯಾಸ, ಚಾಮರಸ, ತೆಲುಗುಕವಿ ಶ್ರೀನಾಥನನ್ನು ಆಸ್ಥಾನಕ್ಕೆ ಆಹ್ವಾನಿಸಿ ಕನಕಾಭಿಷೇಕ ಮಾಡಿ ಗೌರವಿಸಿದ್ದನು.
- 2ನೇ ದೇವರಾಯನು ಹಂಪಿಯಲ್ಲಿ **ಹಜಾರ ರಾಮಸ್ವಾಮಿ** ದೇವಾಲಯ ಕಟ್ಟಿಸಿದನು.
- 2ನೇ ದೇವರಾಯನ ಆಸ್ಥಾನವನ್ನು **ಪರ್ಶಿಯಾದ ಅಬ್ದುಲ್ ರಜಾಕ್** ಸಂದರ್ಶಿಸಿದ್ದನು.
- ರಜಾಕ್ ಹೇಳುವಂತೆ, ಸಿಲೋನಿನ ಕೊನೆಯಿಂದ ಗುಲ್ಬರ್ಗಾದವರೆಗೆ ಹಾಗೂ ಒರಿಸ್ಸಾದಿಂದ ಮಲಬಾರ್‌ವರೆಗೆ ಈತನ ಸಾಮ್ರಾಜ್ಯ ಹಬ್ಬಿತ್ತು ಎಂದಿದ್ದಾನೆ.
- 2ನೇ ದೇವರಾಯನ ನಂತರ ಕ್ರಿ.ಶ.1464ರಲ್ಲಿ 3ನೇ ವಿರೂಪಾಕ್ಷನು ಸಿಂಹಾಸನವೇರಿದನು.

2. ಸಾಳುವ ಸಂತತಿ (1485–1503)

- ಸಂಗಮ ದೊರೆಗಳಿಗೆ ನಿಷ್ಠಾವಂತನಾಗಿ ಸೇವೆಯನ್ನು ಸಲ್ಲಿಸುತ್ತಿದ್ದ ನರಸಿಂಹನು 2ನೇ ದೇವರಾಯನ ನಂತರ **ಕುಸಿಯುತ್ತಿದ್ದ**

1485ರಲ್ಲಿ ಸಾಳುವ ಸಂತತಿ ಸ್ಥಾಪಿಸಿದನು.

ಸಾಳುವ ನರಸಿಂಹ (ಕ್ರಿ.ಶ.1485-91)

- ಈತನು ಸಾಳುವ ಸಂತತಿಯ ಸ್ಥಾಪಕ **ತುಳವ ನರಸನಾಯಕನು** ಇವನಿಗೆ ಹೆಚ್ಚು ಸಹಾಯಕನಾಗಿದ್ದನು.
- ನರಸಿಂಹನ ನಂತರ ಅವನ ಮಗನಾದ 2ನೇ ನರಸಿಂಹನು ಅಧಿಕಾರಕ್ಕೆ ಬಂದನು. 2ನೇ ನರಸಿಂಹನ ನಂತರ ಸಾಳುವ ವಂಶದ 20 ವರ್ಷಗಳ ಆಳ್ವಿಕೆ ಕೊನೆಗೊಂಡಿತು.

3. ತುಳುವ ಸಂತತಿ(1503-70)

- ತುಳುವ ಸಂತತಿಯ ಸ್ಥಾಪಕ **ತುಳುವ ನರಸನಾಯಕ**. ಇವನ ಮಗನಾದ ವೀರನರಸಿಂಹನು ಹೊಸ ತುಳುವ ವಂಶದ ಮೊದಲನೇ ದೊರೆಯಾದನು.
- **ವೀರನರಸಿಂಹನು** 1503ರಿಂದ 1509ರವರೆಗೆ ಆಳ್ವಿಕೆ ನಡೆಸಿದನು. ಇವನು ಪೋರ್ಚುಗೀಸ್‌ರೊಡನೆ ಸ್ನೇಹದಿಂದಿದ್ದು ಉತ್ತಮ ಕುದುರೆಗಳನ್ನು ಪಡೆದನಲ್ಲದೆ, ತನ್ನ ಸೈನಿಕರಿಗೆ ಅವರಿಂದ ತರಬೇತಿ ಕೊಡಿಸಿದ್ದನು.
- ವೀರನರಸಿಂಹನು ತನ್ನ ಮಂತ್ರಿ ತಿಮ್ಮರಸನಿಗೆ ಕೃಷ್ಣದೇವರಾಯನ ಕಣ್ಣುಗಳನ್ನು ಕಿತ್ತು ತರುವಂತೆ ಹೇಳಿದ್ದನು, ಆದರೆ ಅವನು ಹಾಗೆ ಮಾಡಲಿಲ್ಲ. ಇವನ ಸಹಾಯದಿಂದಲೇ ಕೃಷ್ಣದೇವರಾಯ ಪಟ್ಟಕ್ಕೆ ಬಂದನು.

ಕೃಷ್ಣದೇವರಾಯ (1509-1529)

- ಕ್ರಿ.ಶ.1509 ಆಗಸ್ಟ್ 8ರಂದು ಶ್ರೀಕೃಷ್ಣ ಜನ್ಮಾಷ್ಟಮಿಯ ದಿನದಂದು ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವೇರಿದನು.
- ಉಮ್ಮತ್ತೂರಿನ ಪಾಳೆಗಾರರು ಮೈಸೂರು ಪ್ರಾಂತ್ಯದ ಹಲವು ಪ್ರದೇಶಗಳನ್ನು ಆಕ್ರಮಿಸಿ ಕೊಂಡಿದ್ದರು. ಪೂರ್ವದಲ್ಲಿ ಒರಿಸ್ಸಾದ ಗಜಪತಿಯು ವಿಜಯ ನಗರದ ಕೆಲವು ಜಿಲ್ಲೆಗಳನ್ನು ವಶಪಡಿಸಿಕೊಂಡು ಸ್ವತಂತ್ರನಾಗಿದ್ದನು ಕೃಷ್ಣದೇವರಾಯನು ಇವರನ್ನು ಸೋಲಿಸಿದನು.

ದಿಗ್ವಿಜಯಗಳು

- ರಾಯನು ಅಧಿಕಾರಕ್ಕೆ ಬಂದಾಗ ಬಹುಮನಿ ಸುಲ್ತಾನ ಮಹ್ಮದ್ ಷಾನು ಬಿಜಾಪುರದ ಯೂಸಫ್ ಆದಿಲ್‌ಖಾನ್ ಮತ್ತು ಇತರ ಮುಸ್ಲಿಂ ಸಾಮಂತರೊಡಗೂಡಿ ವಿಜಯನಗರದ ಮೇಲೆ ಯುದ್ಧ ಸಾರಿದರು. ರಾಯನು ಬಹುಮನಿ ಸೈನ್ಯವನ್ನು **ದೋಣಿ** ಎಂಬಲ್ಲಿ ತಡೆದನು ಈ ಕಾಳಗದಲ್ಲಿ ಯೂಸಫ್ ಆದಿಲ್‌ಖಾನನು ಮರಣವನ್ನಪ್ಪಿದನು.
- 1512ರಲ್ಲಿ ರಾಯಚೂರಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು.
- ಬೀದರ್‌ನ ಮಂತ್ರಿ **ಬರೀದನು** 2ನೇ ಸುಲ್ತಾನ ಮಹಮದ್‌ನನ್ನು ಸೆರೆಯಲ್ಲಿಟ್ಟಿದ್ದನು. ರಾಯನು ಗುಲ್ಬರ್ಗಾ ಮತ್ತು ಬೀದರ್‌ನ್ನು ಮಾಡಿ ಅವನನ್ನು ಮತ್ತೇ ಬಹುಮನಿ ಸುಲ್ತಾನನ್ನಾಗಿ ಮರುನೇಮಕ ಮಾಡುವ ಮೂಲಕ ರಾಯನು **'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ'** ಎಂಬ ಬಿರುದು ಪಡೆದನು.
- ಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿ ಶ್ರೀರಂಗಪಟ್ಟಣ, ಶಿವನಸಮುದ್ರ ಮತ್ತು ಉಮ್ಮತ್ತೂರು ಪ್ರದೇಶಗಳನ್ನು ವಶಪಡಿಸಿಕೊಂಡು ಒಂದುಗೂಡಿಸಿ **ಶ್ರೀರಂಗಪಟ್ಟಣವನ್ನು** ಅದರ ರಾಜಧಾನಿಯಾಗಿ (1513) ಮಾಡಿದನು.
- 1513ರಲ್ಲಿ ರಾಯನು ಒರಿಸ್ಸಾದ ಗಜಪತಿಯ ಮೇಲೆ ದಾಳಿ ಮಾಡಿ ಉದಯಗಿರಿ, ಕೊಂಡವೀಡು ಮತ್ತು ರಾಜಮಹೇಂದ್ರಗಳನ್ನು ಗೆದ್ದದಕ್ಕಾಗಿ ರಾಯನು ತಿರುಪತಿಯ ವೆಂಕಟೇಶ್ವರನಿಗೆ ಕಾಣಿಕೆಗಳನ್ನು ನೀಡಿದನು.
- ಗಜಪತಿಯ ವಿರುದ್ಧದ ವಿಯಜಕ್ಕಾಗಿ ಕೃಷ್ಣದೇವರಾಯನು ರಾಜಧಾನಿಯಲ್ಲಿ ಹೊಸ ದೇವಾಲಯವನ್ನು ಕಟ್ಟಿಸಿ, ಪುರಿಯಿಂದ ತಂದಿದ್ದ ಬಾಲಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿದನು.
- 2ನೇ ಹಂತದಲ್ಲಿ ರಾಯನು ಪೆನುಗೊಂಡ, ನಾಗಾರ್ಜುನಕೊಂಡ ಮತ್ತು ಬೆಲ್ಲಮಕೊಂಡದ ರೆಡ್ಡಿಯರನ್ನು ಸೋಲಿಸಿ ಅವುಗಳ ಆಡಳಿತವನ್ನು ಸಾಳ್ವ ತಿಮ್ಮನಿಗೆ ವಹಿಸಿಕೊಟ್ಟನು.
- 3ನೇ ಹಂತದಲ್ಲಿ ವಿಜಯವಾಡದ ಕೋಟೆಗೆ ಮುತ್ತಿಗೆ ಹಾಕಿದನು.
- 4ನೇ ಹಂತದಲ್ಲಿ ರಾಯನು ತೆಲಂಗಾಣವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು.
- ಸೋತ ಗಜಪತಿಯು 1518ರಲ್ಲಿ ರಾಯನೊಡನೆ ಒಪ್ಪಂದ ಮಾಡಿಕೊಂಡು ತನ್ನ ಮಗಳಾದ **ಜಗನ್ಮೋಹಿನಿಯನ್ನು** ರಾಯನಿಗೆ ಕೊಟ್ಟು ವಿವಾಹ ಮಾಡಿದನು. ನಂತರ ಈ ಸ್ನೇಹದ ಕುರುಹಾಗಿ ಕೃಷ್ಣಾನದಿಯ ಮೇಲ್ಭಾಗದ ಪ್ರದೇಶವನ್ನು ಹಿಂದಕ್ಕೆ ಪಡೆದನು.
- ರಾಯನು ಈ ದಿಗ್ವಿಜಯ ಮುಗಿಸಿ ಹಿಂದಿರುಗುವಾಗ **ಪೆಟ್ನೋರಿನಲ್ಲಿ** ಒಂದು ವಿಜಯಸ್ತಂಭವನ್ನು ಸ್ಥಾಪಿಸಿದನು.
- ರಾಯನ ಸಾಮ್ರಾಜ್ಯವು ಪಶ್ಚಿಮದಲ್ಲಿ ಸಾಲ್ಸೆಟ್, ಪೂರ್ವದಲ್ಲಿ ವಿಶಾಖಪಟ್ಟಣ ಉತ್ತರದಲ್ಲಿ ಕೃಷ್ಣ ಮತ್ತು ಗೋದಾವರಿ ನದಿ, ದಕ್ಷಿಣದಲ್ಲಿ ಕನ್ಯಾಕುಮಾರಿ ಹಾಗೂ ಈಶಾನ್ಯದಲ್ಲಿ ಒರಿಸ್ಸಾದವರೆಗೆ ವಿಸ್ತರಿಸಿತ್ತು.
- ರಾಯನು ಪೋರ್ಚುಗೀಸರೊಡನೆ ಉತ್ತಮ ಸಂಬಂಧವಿಟ್ಟು ಕೊಂಡು **ಗೋವಾ ಬಂದರನ್ನು** ಅವರಿಗೆ ನೀಡಿದನು ಮತ್ತು ಅವರಿಂದ ಉತ್ತಮ ಕುದುರೆಗಳನ್ನು ತರಿಸಿಕೊಳ್ಳುತ್ತಿದ್ದನು.
- ಪೋರ್ಚುಗೀಸರ ಗೌರ್ನರ್ **ಅಲ್ಬುಕರ್ಕ್‌ನ** ನಿಯೋಗವನ್ನು ಸ್ವಾಗತಿಸಿ ಅವರನ್ನು ಗೌರವಿಸಿ ವ್ಯಾಪಾರ ಮತ್ತು ಸಾಂಸ್ಕೃತಿಕವಾಗಿ ಉತ್ತಮ ಬಾಂಧವ್ಯವನ್ನು ಏರ್ಪಡಿಸಿಕೊಂಡನು. ಇವರಿಗೆ ಭಟ್ಕಳದಲ್ಲಿ ಕೋಟೆ ಕಟ್ಟಿಕೊಳ್ಳಲು ಸ್ಥಳ ನೀಡಿದನು.
- ರಾಯನು ತೆಲುಗು ಸಾಹಿತ್ಯ ಮತ್ತು ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿದ್ದು **'ಆಮುಕ್ತ ಮೌಲ್ಯ'** ಮತ್ತು **ಜಾಂಬವತಿ ಕಲ್ಯಾಣ** ಎಂಬ

- ರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜರೆಂಬ ಎಂಟು ಜನ ಕವಿಗಳಿದ್ದುದ್ದರಿಂದ **'ಅಭಿನವಭೋಜ'** ಎಂಬ ಕೀರ್ತಿಗೆ ಪಾತ್ರನಾಗಿದ್ದನು.
- ಪ್ರಸಿದ್ಧ ತೆಲುಗು ಕವಿ **ಅಲ್ಲಸಾನಿ ಪೆದ್ದಣ್ಣ** ರಾಯನ ಆಸ್ಥಾನದಲ್ಲಿದ್ದು ಇವನಿಗೆ ರಾಯನು **'ಆಂಧ್ರ ಕವಿತ ಪಿತಾಮಹಾ'** ಎಂಬ ಬಿರುದು ನೀಡಿದ್ದನು.
- ಕನ್ನಡದಲ್ಲಿ ಕುಮಾರವ್ಯಾಸನು ಬರೆಯದೆ ಬಿಟ್ಟ ಮಹಾಭಾರತದ ಕೊನೆಯ ಎಂಟು ಪರ್ವಗಳನ್ನು **ತಿಮ್ಮಣ್ಣ ಕವಿ** ರಚಿಸಿ ಪೂರ್ಣಗೊಳಿಸಿದನು. ಈ ಕೃತಿ **ಕರ್ಣಾಟಕ ಕೃಷ್ಣರಾಯ ಭಾರತ ಕಥಾಮಂಜರಿ** ಎಂದು ಪ್ರಸಿದ್ಧವಾಗಿದೆ.
- ಕನ್ನಡದಲ್ಲಿ ಭಕ್ತಿಗೀತೆ ಮತ್ತು ಕೀರ್ತನೆಗಳನ್ನು ರಚಿಸಿದ್ದ **ವ್ಯಾಸರಾಯರು** ಶ್ರೀಕೃಷ್ಣದೇವರಾಯನ ಧರ್ಮಗುರುಗಳಾಗಿದ್ದರು. ಧರ್ಮಗಿರಿಯಿಂದ ತಂದಿದ್ದ ಶ್ರೀಕೃಷ್ಣ ವಿಗ್ರಹವನ್ನು ವಿಜಯನಗರದಲ್ಲಿ ಪ್ರತಿಸ್ಥಾಪನೆ ಮಾಡಿದವರು ವ್ಯಾಸರಾಯರೇ ಆಗಿದ್ದರು.
- ರಾಯನಿಗೆ **ಕನ್ನಡ ರಾಜ್ಯ ರಮಾರಮಣ** ಎಂಬ ಬಿರುದಿತ್ತು.
- ರಾಯನು ತನ್ನ ಪಟ್ಟಾಭಿಷೇಕದ ನೆನಪಿಗಾಗಿ ವಿರೂಪಾಕ್ಷ ದೇವಾಲಯದಲ್ಲಿ ಒಂದು ಸಭಾ ಭವನವನ್ನು ಮತ್ತು ಗೋಪುರವನ್ನು ನಿರ್ಮಿಸಿದನು. ರಾಜಧಾನಿಯಲ್ಲಿ ಕೃಷ್ಣಸ್ವಾಮಿ ಮತ್ತು ವಿಜಯ ವಿಠ್ಠಲಸ್ವಾಮಿ ದೇವಸ್ಥಾನಗಳನ್ನು ಕಟ್ಟಲು ಪ್ರಾರಂಭಿಸಿದನು.
- ರಾಯನು ತನ್ನ ತಾಯಿ ನಾಗಲಾದೇವಿಯ ಜ್ಞಾಪಕಾರ್ಥವಾಗಿ ರಾಜಧಾನಿಯ ಹತ್ತಿರ **ನಾಗಲಾಪುರ (ಈಗಿನ ಹೊಸಪೇಟೆ)**ವನ್ನು ನಿರ್ಮಿಸಿದನು.
- ರಾಯನು ತನ್ನ ಹಿರಿಯ ಮಗನಾದ ತಿರುಮಲರಾಯನನ್ನು ಯುವರಾಜ ಪದವಿಗೇರಿಸಿದನು. ಹೆಣ್ಣು ಮಕ್ಕಳಾದ ತಿರುಮಲಾಂಬೆ ಮತ್ತು ವೆಂಗಲಾಂಬೆಯರನ್ನು ಅರವೀಡು ಮನೆತನದ ರಾಮರಾಯ ಮತ್ತು ಆತನ ತಮ್ಮ ತಿರುಮಲರಾಯರು ವಿವಾಹವಾಗಿದ್ದರು.
- ಶ್ರೀಕೃಷ್ಣದೇವರಾಯನು **1530**ರಲ್ಲಿ ಮರಣ ಹೊಂದಿದನು.

ಅಚ್ಯುತರಾಯ (ಕ್ರಿ.ಶ. 1529–1542)

- ಕೃಷ್ಣದೇವರಾಯನ ಉತರಾಧಿಕಾರಿಯಾಗಿ ಅಚ್ಯುತರಾಯನು ನೇಮಕವಾದನು.
- ಇವನ ಅಧಿಕಾರವನ್ನು ವಿರೋಧಿಸಿದ ಕೃಷ್ಣದೇವರಾಯನ ಮಂತ್ರಿ ಶ್ರೀರಂಗನ ಮಗನಾದ ರಾಮರಾಯನನ್ನು ಅಚ್ಯುತರಾಯನು ಸೋಲಿಸಿ ತಿರುಪತಿಯಲ್ಲಿ ಕಿರೀಟಧಾರಣೆ ಮಾಡಿಸಿಕೊಂಡನು (ಕ್ರಿ.ಶ. 1530).
- ಇವನು ಪಾಂಡ್ಯರಾಜನ ಮಗಳಾದ **ವರದಾಂಬಿಕೆಯನ್ನು** ವಿವಾಹವಾಗಿದ್ದನು.
- ಅಚ್ಯುತರಾಯನ ಆಸ್ಥಾನಕ್ಕೆ **ಪೋರ್ಚುಗೀಸ್** ಪ್ರವಾಸಿ **ನ್ಯೂನಿಚ್‌ನು** ಕ್ರಿ.ಶ. 1536ರಲ್ಲಿ ಭೇಟಿ ಕೊಟ್ಟಿದನು.
- ಇವನ ಆಸ್ಥಾನದ **ಕವಿ ರಾಜನಾಥ ಡಿಂಡಿಮನು ಅಚ್ಯುತರಾಮಾಭ್ಯುದಯಂ** ಎಂಬ ಸಂಸ್ಕೃತ ಕಾವ್ಯವನ್ನು ಬರೆದನು.
- ಅಚ್ಯುತರಾಯನ ಮರಣದ ನಂತರ ಒಂದನೇ ವೆಂಕಟ ಸದಾಶಿವರಾಯರು ಆಳ್ವಿಕೆ ಮಾಡಿದರು.

ರಾಮರಾಯ (ಕ್ರಿ.ಶ. 1543–1565)

- ಕರ್ನೂಲಿನ **ಅರವೀಡು ವಂಶದವನಾದ** ರಾಮರಾಯನ ಆಳ್ವಿಕೆ ಎರಡು ಹಂತಗಳಲ್ಲಾಯಿತು. ಒಂದು ಸದಾಶಿವನ ರಾಜ ಪ್ರತಿನಿಧಿಯಾಗಿ (1543–1550) ಮತ್ತು 1551 ರಿಂದ 1565ರವರೆಗೆ ನೇರ ಆಳ್ವಿಕೆ ನಡೆಸಿದನು.
- ಇವನು ತನ್ನ ಸಹೋದರರಾದ ತಿರುಮಲ ಮತ್ತು ವೆಂಕಟರನ್ನು ಸೇನೆಯ ದಂಡನಾಯಕರಾಗಿ ನೇಮಿಸಿಕೊಂಡಿದ್ದನು.
- ಮಲಬಾರಿನಲ್ಲಿ ಕ್ಯಾಥೋಲಿಕ್‌ರ ಮತಾಂತರ ನೀತಿಯನ್ನು ತಡೆಗಟ್ಟಿದನು.
- ಪೋರ್ಚುಗೀಸರ ಪ್ರಾಬಲ್ಯ ತಡೆಗಟ್ಟಿ ಸೆಂಟ್‌ಥೋಮ್‌ನ್ನು ಆಕ್ರಮಿಸಿದನು.
- ಇವನು ತನ್ನ ಸೈನ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ ಮುಸ್ಲಿಂರನ್ನು ನೇಮಿಸಿಕೊಂಡಿದ್ದು ಮುಳುವಾಗಿ ಪರಿಣಮಿಸಿತು.

ತಾಳಿಕೋಟೆ ಯುದ್ಧ (ಕ್ರಿ.ಶ. 1565 ಜನವರಿ 23)

ಯುದ್ಧಕ್ಕೆ ಕಾರಣಗಳು

- ಬಹುಮನಿಗಳ ಶಾಹಿ ರಾಜ್ಯಗಳ ಆಂತರಿಕ ವ್ಯವಹಾರದಲ್ಲಿ ರಾಮರಾಯನು ತಲೆ ಹಾಕಿದನು.
- 1558ರ ಅಹಮದ್ ನಗರದ ಮೇಲೆ ದಾಳಿ ಮಾಡಿ ಸಾವಿರಾರು ಮುಸ್ಲಿಂರನ್ನು ವಿಜಯನಗರದ ಸೈನ್ಯವು ಕಗ್ಗೊಲೆ ಮಾಡಿತು.
- ಬಹುಮನಿಯರ ಚತುಷ್ಕೂಟ ರಚನೆ. ಇದರಲ್ಲಿ ಗೋಲ್ಕಂಡಾದ ಇಬ್ರಾಹಿಂ ಕುತುಬ್ ಷಾ, ಅಹಮದ್ ನಗರದ ಹುಸೇನ್ ನಿಜಾಮ್ ಷಾ, ಬೀದರ್‌ನ ಆಲಿ ಬರೀದ್ ಷಾ ಮತ್ತು ಬಿಜಾಪುರದ ಆಲಿ ಆದಿಲ್ ಷಾರು ಸೇರಿದ್ದರು.
- ಮತೀಯ ಕಾರಣಗಳು
- ಆರ್ಥಿಕ ಕಾರಣಗಳು
- ತತ್‌ಕ್ಷಣದ ಕಾರಣವೇನೆಂದರೆ, ರಾಮರಾಯನು ಇಸ್ಲಾಂ ರಾಯಭಾರಿಗಳನ್ನು ಅಪಮಾನಕ್ಕೀಡು ಮಾಡಿದ್ದು.

ಯುದ್ಧದ ಗತಿ

- ತಾಳಿಕೋಟೆ (ಬಿಜಾಪುರ ಜಿಲ್ಲೆ) ಕದನವು **ಜನವರಿ 23, 1565ರಂದು** ಆರಂಭವಾಗಿ ಸುಮಾರು 27 ದಿನಗಳ ಕಾಲ ನಡೆಯಿತು.
- ವಿಜಯನಗರ ಸೈನ್ಯವು ಒಂದು ರಾಮರಾಯನ ಹಾಗೂ ಮತ್ತೊಂದು ತಿರುಮಲ ಮತ್ತು ವೆಂಕಟರ ನೇತೃತ್ವದಲ್ಲಿ ಬಂದಿತ್ತು.
- **ಗಿಲಾನಿ** ಎಂಬ ಮುಸ್ಲಿಂ ಸಹೋದರರು ರಾಮರಾಯನಿಗೆ ದ್ರೋಹವೆಸಗಿ ಸುಲ್ತಾನರ ಪಕ್ಷ ಸೇರಿದರು.
- ಅಹ್ಮದ್ ನಗರ ಸುಲ್ತಾನರು ಹೊಸ ಫಿರಂಗಿ ಹೊಂದಿದ್ದರು.

- ಯುದ್ಧದಲ್ಲಿ ನಿಜಾಮ್‌ಷಾನು ರಾಮರಾಯನ ತಲೆಯನ್ನು ಕತ್ತರಿಸಿ ಈಟಿಗೆ ಸಿಕ್ಕಿಸಿ ಮೇಲಕ್ಕೆ ತೋರಿಸುತ್ತಾ ಶತ್ರುವಿನ ಮೇಲೆ ಹಗೆತನ ತೀರಿತು. ದೇವರು ಇಷ್ಟ ಬಂದಂತೆ ನನ್ನನ್ನು ನಡೆಸಲಿ ಎಂದನು.
- ತಿರುಮಲನು ಮುಂದಿನ ಅಪಾಯವನ್ನು ಅರಿತು ರಾಜಧಾನಿಗೆ ಬಂದು ಸಂಪತ್ತನ್ನು ತುಂಬಿಕೊಂಡು ಸದಾಶಿವರಾಯನೊಂದಿಗೆ ಪೆನುಗೊಂಡಕ್ಕೆ ಪಲಾಯನಗೈದನು.
- ಯುದ್ಧದ ಎರಡು ವರ್ಷಗಳ ನಂತರ ಹಂಪಿಗೆ ಬಂದಿದ್ದ **ಇಟಲಿ ಪ್ರವಾಸಿಗ ಪೆಡ್ರಿಕ್‌ಸೀಸರ್** ಹಂಪಿಯು ಜನರಿಲ್ಲದೇ ಅದು ಹುಲಿ ಸಿಂಹ ಮುಂತಾದ ಕಾಡುಮೃಗಗಳ ಹಾಳು ಕೊಂಪೆಯಂತಿತ್ತು ಎಂದಿದ್ದಾನೆ.

ಯುದ್ಧದ ಸೋಲಿಗೆ ಕಾರಣಗಳು

1. ಗಿಲಾನಿ ಸಹೋದರರು ದ್ರೋಹವೆಸಗಿದುದು.
2. ಜೈನರ ಮತ್ತು ವೈಷ್ಣವರ ನಡುವೆ ತಾತ್ವಿಕ ಭಿನ್ನತೆ ಎದುರಾದುದು.
3. ರಾಮರಾಯನ ದೋಷಯುಕ್ತ ವಿದೇಶಾಂಗ ನೀತಿ
4. ದಾಸರ ಕೀರ್ತನೆಗಳು ಸೈನಿಕರಲ್ಲಿ ಅಹಿಂಸಾ ಭಾವನೆ ಮೂಡಿಸಿದುದು.

- ವಿಜಯನಗರ ಪತನದ ನಂತರ ಅವರ ಸಾಮಂತರಾದ ಕೆಳದಿ, ಚಿತ್ರದುರ್ಗ, ಯಲಹಂಕದ ಗೌಡರು, ಮೈಸೂರಿನ ಒಡೆಯರು, ಹೈದರಾಲಿ ಮತ್ತು ಟಿಪ್ಪು, ಮಧುರೈ, ತಂಜಾವೂರಿನ ನಾಯಕರು ಸ್ವತಂತ್ರರಾದರು.

4. ಅರವೀಡು ಸಂತತಿ

- ತಾಳಿಕೋಟೆ ಯುದ್ಧದ ನಂತರ ರಾಮರಾಯನ ಸಹೋದರ ತಿರುಮಲನು **ಪೆನುಗೊಂಡ**ವನ್ನು ರಾಜಧಾನಿಯಾಗಿ ಮಾಡಿಕೊಂಡು ಆಡಳಿತ ನಡೆಸಿದನು.
- ತಿರುಮಲನ ಪೂರ್ವಿಕರು **ಕರ್ನೂಲಿನ ಅರವೀಡು ವಂಶಕ್ಕೆ** ಸೇರಿದ್ದರು.
- **ತಿರುಮಲನು** ಸೆರೆಯಲ್ಲಿದ್ದ ಸದಾಶಿವನನ್ನು ಕೊಂದು ಅರವೀಡು ಸಂತತಿಯನ್ನು ಸ್ಥಾಪಿಸಿದನು.
- ತಿರುಮಲನ ರಾಜ್ಯವು ಮೂರು ಮಂಡಲಗಳಿಂದ ಕೂಡಿತ್ತು.

1. ಶ್ರೀರಂಗಪಟ್ಟಣ – ಎರಡನೇ ಮಗ ರಾಮರಾಯ
2. ಆಂಧ್ರ – ಶ್ರೀರಂಗ
3. ಚಂದ್ರಗಿರಿ (ತಮಿಳುನಾಡು)–ವೆಂಕಟಪತಿಗೆ ವಹಿಸಿಕೊಟ್ಟಿದ್ದನು.

ಮೂರನೇ ಶ್ರೀರಂಗರಾಯ

- ಇವನು ವಿಜಯನಗರದ ಕೊನೆಯ ಅರಸ.
- ಇವನು ಗೋಲ್ಕಂಡ ಸುಲ್ತಾನ ಮತ್ತು ಬಿಜಾಪುರ ಸುಲ್ತಾನರಿಂದ ಸೋತು ದೇಶಭ್ರಷ್ಟನಾಗಿ ಅಲೆಯುತ್ತಿದ್ದಾಗ **ಕೆಳದಿಯ ಶಿವಪ್ಪನಾಯಕ** ಇವನಿಗೆ ಆಶ್ರಯ ನೀಡಿದನು.
- ಕ್ರಿ.ಶ. 1681ರಲ್ಲಿ ಶ್ರೀರಂಗನ ಮರಣದೊಂದಿಗೆ ವಿಜಯನರ ಸಾಮ್ರಾಜ್ಯ ಕಣ್ಮರೆಯಾಯಿತು.

ವಿಜಯನಗರ ಕಾಲದ ಆಡಳಿತ

- ಕೃಷ್ಣದೇವರಾಯನು ತನ್ನ ರಾಜನೀತಿ ಗ್ರಂಥ **ಆಮುಕ್ತಮೌಲ್ಯ** ಗ್ರಂಥದಲ್ಲಿ ಕಿರೀಟ ಹೊತ್ತ ರಾಜನು ಸದಾ ಧರ್ಮದ ಮೇಲೆ ಕಣ್ಣಿಟ್ಟು ಅದರ ಚೌಕಟ್ಟಿನೊಳಗೆ ರಾಜ್ಯಭಾರ ಮಾಡಬೇಕು ಎಂದಿದ್ದಾನೆ.
- ರಾಜ್ಯಾಡಳಿತದಲ್ಲಿ ಬೃಹತ್ **ಊಳಿಗಮಾನ್ಯ ಪದ್ಧತಿ** ವ್ಯವಸ್ಥೆ ಇತ್ತು.
- ಮಂತ್ರಿ ಮಂಡಲವು ರಾಜ, ರಾಜ್ಯ, ಕೋಟೆ, ಕೋಶ, ಸೈನ್ಯ, ಮಂತ್ರಿ, ಮಿತ್ರ ಎಂಬ 7 ಸಪ್ತಾಂಗಗಳಿಂದ ಕೂಡಿತ್ತು.
- ಪ್ರಧಾನಮಂತ್ರಿ ಮಂಡಲದ ನಾಯಕ ಹಾಗೂ ಕೇಂದ್ರಾಡಳಿತದ ಬಿಂದು ಇವನ ಸಹಾಯಕ್ಕೆ **ರಾಯಸ**ನೆಂಬುವವನಿದ್ದನು.
- ಬಹುತೇಕ ಮಂತ್ರಿಗಳು ರಾಜನ ಹತ್ತಿರದ ಆಪ್ತ ಬಂಧುಗಳಾಗಿದ್ದರು.
- **ಮಂತ್ರಾಲೋಚನೆ** ಎಂಬ ಭವನವಿದ್ದು ಇದನ್ನು ಅಬ್ದುಲ್ ರಜಾಕನು **ದಿವಾನೆ ಖಾನೆ/ರಾಯಸ ಕಛೇರಿ/ಸಚಿವಾಲಯ** ಎಂದು ಕರೆದಿದ್ದಾನೆ.
- ಸಚಿವಾಲಯದ ಕಾರ್ಯದರ್ಶಿಯಾಗಿ **ರಾಯಸಂ** ಮತ್ತು ಮುಖ್ಯ ಕಾರ್ಯದರ್ಶಿಯಾಗಿ **ರಾಯಸಸ್ವಾಮಿ** ಇದ್ದನು.

ಸೈನ್ಯಾಡಳಿತ

- ವಿಜಯನಗರ ಸೈನ್ಯದಲ್ಲಿ ಮಹಾಪ್ರಚಂಡ, ದಂಡನಾಯಕ, ಮಹಾಸೈನ್ಯಾಧಿಕಾರಿ, ದಳ ಪ್ರಮುಖ ಮತ್ತು ದಳವಾಯಿ ಎಂಬ ಅಧಿಕಾರಿಗಳಿದ್ದರು.
- ಸೈನ್ಯದಲ್ಲಿ ಕಾಲ್ದಳದ ಸಂಖ್ಯೆ ಹೆಚ್ಚಿತ್ತು. ಅಶ್ವಪಡೆಗೂ ಪ್ರಾಮುಖ್ಯತೆ ಇದ್ದು ಅದೇ ಸೈನ್ಯದ ಮುಖ್ಯ ಅಂಗವಾಗಿತ್ತು.
- **ಅರೇಬಿಯಾ ಮತ್ತು ಪರ್ಷಿಯಾ** ದೇಶಗಳಿಂದ ದಕ್ಷ ಕುದುರೆಗಳನ್ನು ತರಿಸಿಕೊಳ್ಳುತ್ತಿದ್ದರು.
- ಸೈನ್ಯವು ಊಳಿಗಮಾನ್ಯ ಲಕ್ಷಣ ಹೊಂದಿದ್ದು ಯುದ್ಧ ಕಾಲದಲ್ಲಿ ಸಾಮಂತರು ಸೈನ್ಯವನ್ನು ಪೂರೈಸುತ್ತಿದ್ದರು.

ನಾಯಂಕರ ಪದ್ಧತಿ

- ವಿಜಯನಗರದ ರಾಜರು ತಮ್ಮಿಂದ ಸೋತ ರಾಜರನ್ನು ನಾಶಪಡಿಸದೆ ತಮ್ಮ ಸಾಮಂತರನ್ನಾಗಿ ಮಾಡಿಕೊಂಡು ಅವರ ರಾಜ್ಯಗಳನ್ನು ಮರಳಿ ಅವರಿಗೆ ಕೊಡುತ್ತಿದ್ದರು. ಇವರನ್ನು **ನಾಯಂಕರರು** ಎನ್ನುತ್ತಿದ್ದರು.
- ಪ್ರಾರಂಭದಲ್ಲಿ ನಾಯಕ ಹುದ್ದೆ ರಾಜನಿಂದ ನೇಮಕವಾಗುತ್ತಿದ್ದರೆ ಬರು ಬರುತ್ತಾ ಅನುವಂಶಿಕವಾಯಿತು. ಇದೇ **ನಾಯಂಕರ ಪದ್ಧತಿ**. ಇವರು ವಿಜಯನಗರದ ಕೊನೆಯ ಅರಸರ ಕಾಲದಲ್ಲಿ ಪ್ರಬಲಗೊಂಡು ಸ್ವಾತಂತ್ರ್ಯ ಘೋಷಿಸಿಕೊಂಡರು.

ನ್ಯಾಯಾಡಳಿತ

- ರಾಜನೇ ಸರ್ವಶ್ರೇಷ್ಠ ನ್ಯಾಯಾಧೀಶನಾಗಿದ್ದನು.
- ಪ್ರಾಂತ್ಯಗಳಲ್ಲಿ ಪ್ರಾಂತ್ಯಾಧಿಕಾರಿ ಮತ್ತು ದಂಡನಾಯಕರು, ನಾಡುಗಳಲ್ಲಿ ನಾಡಗೌಡ, ಗ್ರಾಮಗಳಲ್ಲಿ ಗ್ರಾಮಸಭೆಗಳು ನ್ಯಾಯಧಾನ ಮಾಡುತ್ತಿದ್ದವು.

ರಾಜ್ಯಾದಾಯ

- **ಶಿಸ್ತು** ಎಂಬ ಭೂಕಂದಾಯ ರಾಜ್ಯದ ಮುಖ್ಯ ಆದಾಯದ

ಮೂಲವಾಗಿತ್ತು. (1/6 ಭಾಗ ತೆರಿಗೆ ಇತ್ತು)

- ಭೂಮಾಪನಗಳಾಗಿ **ಬೇರುಂಡಕೋಲು, ಗಂಗಕೋಲು** ಮತ್ತು **ರಾಯರೇಖ**ಗಳನ್ನು ಬಳಸುತ್ತಿದ್ದರು.
- ವಿಜಯನಗರದ ರಾಜರು ವಿಶೇಷವಾಗಿ ಗದ್ದೆ ಮತ್ತು ತೋಟ ಬೇಸಾಯವನ್ನು ಪ್ರೋತ್ಸಾಹಿಸಿದ್ದರು.
- ಗೌಡ ಮತ್ತು ಶಾನುಭೋಗರು ಗ್ರಾಮಗಳ ಅನುವಂಶಿಕ ಕಂದಾಯ ಅಧಿಕಾರಿಗಳಾಗಿದ್ದರು.
- **ಅಥವಣೆ** ಎಂಬ ಭೂಕಂದಾಯ ಸಂಗ್ರಹಣೆ ವಿಭಾಗವಿತ್ತು. ನಗದಾಗಿ ಪಡೆದ ಕಂದಾಯವನ್ನು ಸುವರ್ಣಾದಾಯ, ಕುಳಪಾಳು ಎನ್ನುತ್ತಿದ್ದರು.
- ಇವರು ನೀರರಾಂಭ, ತೋಟಾರಂಭ, ಬೇಸಾಯಗಳನ್ನು ಪ್ರೋತ್ಸಾಹಿಸಿದ್ದರು.
- ನೀರಾವರಿ ಭೂಮಿಗಳ ಮೇಲೆ ಉತ್ಪನ್ನದ $^1/_2$ ಭಾಗ ಕಂದಾಯ ವಿಧಿಸಲಾಗುತ್ತಿತ್ತು.
- ಬುಕ್ಕರಾಯನು ತುಂಗಭದ್ರ ನದಿಗೆ **ಬುಕ್ಕರಾಯಸಾಗರ** ಎಂಬ ಅಣೆಕಟ್ಟೆ ಕಟ್ಟಿಸಿದನು.
- ಎರಡನೇ ದೇವರಾಯ ಕ್ರಿ.ಶ. 1410ರಲ್ಲಿ **ಹರಿದ್ರಾ** ನದಿಗೆ ಅಣೆಕಟ್ಟು ಕಟಿಸಿದನು.
- ಕೃಷ್ಣದೇವರಾಯನು 1521ರಲ್ಲಿ ತುಂಗಾಭದ್ರ ನದಿಗೆ **ಕೋರ್‍ಗಲ್** ಎಂಬ ದೊಡ್ಡ ಅಣೆಕಟ್ಟೆ ನಿರ್ಮಿಸಿ **ಬಸವಣ್ಣ** ನಾಲೆಯನ್ನು ತೋಡಿಸಿದನು.
- ಕೃಷ್ಣದೇವರಾಯನು ವ್ಯಾಸರಾಯನ ನೆನಪಿಗಾಗಿ ಕೋಲಾರ ಬಳಿ **ವ್ಯಾಸರಾಯ ಸಮುದ್ರ**ವನ್ನು ನಿರ್ಮಿಸಿದನು.
- ವಾಣಿಜ್ಯ ಉತ್ಪನ್ನಗಳ ಮೇಲೆ ಶೇ. 50ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು.
- **ಮೆಹೆವಸ್/ಹೊದಿಕೆ** ಎಂಬ ಮನೆ ಕಂದಾಯವಿತ್ತು.
- **ಗಾಣುಗರಿ** ಎಂಬ ತೆರಿಗೆಯನ್ನು ಗಾಣಿಗರು ಕೊಡುತ್ತಿದ್ದರು.
- ಆಮದು ಮಾಡಿಕೊಂಡ ವಸ್ತುಗಳ ಮೇಲೆ ವಿಧಿಸುತ್ತಿದ್ದ ಸುಂಕಗಳನ್ನು **ಸ್ಥಳ ಶುಲ್ಕ** ಎನ್ನುತ್ತಿದ್ದರು.
- ಆಮದು ಮತ್ತು ರಫ್ತುಗಳ ತೆರಿಗೆ ಶೇ. 6 ರಿಂದ 10ರಷ್ಟಿತ್ತು.
- ಮೂಲವೀಸೆ ತೆರಿಗೆಯಾಗಿ ವರ್ತಕರು 1/16 ಭಾಗ ಕೊಡುತ್ತಿದ್ದರು. ಮಗ್ಗದಿ ತೆರಿಗೆ ಕೈಮಗ್ಗಗಳ ಮೇಲೆ ವಿಧಿಸಲಾಗುತ್ತಿತ್ತು.
- ಕೊಯಮತ್ತೂರಿನಲ್ಲಿ ರೇಷ್ಮೆ ಕೈಗಾರಿಕೆಗಳು, ಕ್ಯಾಲಿಕಟ್ ಮತ್ತು ಪುಲಿಕಾಟ್‌ಗಳು ಮುದ್ರಿತ ಕ್ಯಾಲಿಕೋ ಬಟ್ಟೆಗೆ ಹೆಸರಾಗಿದ್ದು ಓರ್ಮುಜ್‌ಗೆ ರಫ್ತಾಗುತ್ತಿತ್ತು.
- ಆಂಧ್ರದ ಗೊಲ್ಲಂಡ ವಜ್ರದ ಗಣಿಗಾರಿಕೆಗೆ ಹಾಗೂ ವಜ್ರಕರೂರು ವಜ್ರ ತಯಾರಿಕೆಗೆ ಹೆಸರಾಗಿತ್ತು.
- ಕ್ಯಾಲಿಕಟ್ ಇಂದ್ರ ನೀಲಗಳಿಗೆ, ಮಳವಳ್ಳಿ ಕಂಬಳಿಗಳಿಗೆ, ಕಾಡುಗುಡಿ ಸುಣ್ಣಕ್ಕೆ, ಶ್ರೀರಂಗಪಟ್ಟಣ ಶಸ್ತ್ರಾಸ್ತ್ರಗಳು ಹಾಗೂ ಗಾಜಿನ ಸಾಮಾನುಗಳಿಗೆ ಹೆಸರುವಾಸಿಯಾಗಿದ್ದವು.

ಪ್ರಾಂತ್ಯಾಡಳಿತ

ವಿಭಾಗಿಸಲಾಗಿತ್ತು.

- ಪ್ರಾಂತ್ಯಾಡಳಿತದಲ್ಲಿ ರಾಜ ಪ್ರತಿನಿಧಿಗಳು ಪ್ರಮುಖರಾಗಿದ್ದರು.
- ವಿಜಯನಗರ ಕಾಲದ ಎರಡು ರೀತಿಯ ಪ್ರಾಂತ್ಯಗಳೆಂದರೆ

1) ರಾಜನೇ ನೇರವಾಗಿ ತನ್ನ ರಾಜ ಪ್ರತಿನಿಧಿಯ ಮೂಲಕ ಆಳುತ್ತಿದ್ದ ಪ್ರಾಂತ್ಯಗಳು.
2) ಸಾಮಂತರಿಗೆ ವಹಿಸಿ ಆಳುತ್ತಿದ್ದ ಪ್ರಾಂತ್ಯಗಳು.

- ಪ್ರತಿ ಪ್ರಾಂತ್ಯವನ್ನು ವಿಷಯ, ನಾಡು, ಒಳನಾಡು, ಕಂಪನ (ಸ್ಥಳ) ಮತ್ತು ಗ್ರಾಮಗಳಾಗಿ ವಿಂಗಡಿಸಲಾಗಿತ್ತು.
- ಗ್ರಾಮಗಳಲ್ಲಿ ಸ್ಥಳೀಯ ಸ್ವಾಯತ್ತ ಸರ್ಕಾರವಿತ್ತು.
- ಹಲವು ಗ್ರಾಮಗಳು ಸೇರಿದ ವಿಭಾಗವನ್ನು **ಸ್ಥಳ/ಸಮತು** ಎನ್ನುತ್ತಿದ್ದರು.
- ಗ್ರಾಮದ ಅಧಿಕಾರಿ ಗೌಡ, ನಾಡುಗಳ ಅಧಿಕಾರಿ ನಾಡಗೌಡ ಎಂಬುವರಿದ್ದರು.
- ನಗರಗಳಲ್ಲಿ ಶ್ರೇಣಿಗಳು ಪೌರ ಕರ್ತವ್ಯವನ್ನು ಮಾಡುತ್ತಿದ್ದರು.
- ನಗರಾಡಳಿತಕ್ಕೆ **ಶೆಟ್ಟಿ ಅಥವಾ ಪಟ್ಟಣ ಸ್ವಾಮಿ**ಗಳು ಇರುತ್ತಿದ್ದರು.
- ನಾಯಕ ಪದ್ಧತಿಯನ್ನು ಮಧ್ಯಯುಗದ ಯುರೋಪಿನಲ್ಲಿದ್ದ ಊಳಿಗಮಾನ್ಯ ಪದ್ಧತಿಗೆ ಹೋಲಿಸಲಾಗಿದೆ. ಅಲ್ಲಿ ಜಹಗೀರುಗಳು ಮತ್ತು ಉಂಬಳಿಗಳು **ಫ್ಯೂಡಲ್** ವ್ಯವಸ್ಥೆಯ ಕೇಂದ್ರಗಳಾಗಿದ್ದವು. ಆದರೆ ವಿಜಯನಗರದಲ್ಲಿ ಫ್ಯೂಡಲ್ ವ್ಯವಸ್ಥೆ, ಅಮರನಾಯಕ ವ್ಯವಸ್ಥೆ ಮತ್ತು ಕೆಲವು ಧಾರ್ಮಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿತ್ತು.

ಸಾಮಾಜಿಕ ಜೀವನ

- ವಿಜಯನಗರ ಕಾಲದ ಬ್ರಾಹ್ಮಣರನ್ನು **ಪಂಚ ದ್ರಾವಿಡರು** ಎಂದು ಕರೆಯಲಾಗಿದೆ. ಅವರಲ್ಲಿದ್ದ ಮೂರು ಪಂಥಗಳೆಂದರೆ

1. **ಸ್ಮಾರ್ಥ ಬ್ರಾಹ್ಮಣರು** – ಇವರು ಶಂಕರಾಚಾರ್ಯರ ಅದ್ವೈತದ ಅನುಯಾಯಿಗಳಾಗಿ ಮೈಸೂರು ಭಾಗದಲ್ಲಿ ನೆಲೆಸಿದ್ದರು.
2. **ಮಾಧ್ವ ಬ್ರಾಹ್ಮಣರು** – ಇವರು ಮಧ್ವಾಚಾರ್ಯರ ದ್ವೈತ ದರ್ಶನದ ಅನುಯಾಯಿಗಳಾಗಿದ್ದರು. ಕರಾವಳಿಯಲ್ಲಿ ನೆಲೆಸಿದ್ದರು.
3. **ವೈಷ್ಣವರು** – ಇವರು ರಾಮಾನುಜಾಚಾರ್ಯರ ವಿಶಿಷ್ಟಾದ್ವೈತದ ಅನುಯಾಯಿಗಳಾಗಿದ್ದರು. ಕಂಚಿ ಮತ್ತು ಶ್ರೀರಂಗಂ ಅವರ ಕೇಂದ್ರಗಳು.

- ವಿಜಯನಗರ ಸಮಾಜದಲ್ಲಿ ಕ್ಷತ್ರಿಯರ ಪ್ರಾಬಲ್ಯವಿಲ್ಲದಿರುವುದು ಒಂದು ವೈಶಿಷ್ಟ್ಯವಾಗಿದೆ.
- ವೈಶ್ಯ ವರ್ಗದವರು ವ್ಯಾಪಾರದಲ್ಲಿ ತೊಡಗಿ ಶ್ರೀಮಂತ (ಶೆಟ್ಟಿ)ರಾಗಿದ್ದರು. ಅವರಿಗೆ ಕಂದಾಯ ಮತ್ತು ನ್ಯಾಯಾಧಿಕಾರಗಳು ಸೇರಿದ್ದವು. ಕೈಕೊಳ್ಳರು ಎಂಬ ನೇಯ್ಗೆಗಾರರಿದ್ದರು.
- ವರ್ತಕ ಸಮುದಾಯವು ಹೆಚ್ಚಾಗಿ ಜೈನರನ್ನು ಒಳಗೊಂಡಿತ್ತು.
- ಶೂದ್ರರು, ಬಹುಜನ ಗೇಣಿದಾರರು, ನಾಯಕರು ಮತ್ತು ಅನಕ್ಷರಸ್ಥರಾಗಿದ್ದರು.
- ಪುರುಷ ಪ್ರಧಾನ ವ್ಯವಸ್ಥೆ ಇದ್ದು ವರದಕ್ಷಿಣೆ ಪದ್ಧತಿ, ಕನ್ಯಾಶುಲ್ಕ, ರೂಢಿಯಲ್ಲಿದ್ದವು.

ವಿವಾಹಕ್ಕೆ ಅವಕಾಶವಿರಲಿಲ್ಲ.

- ಬಾಲ್ಯ ವಿವಾಹ ಪದ್ಧತಿ, ದೇವದಾಸಿ ಪದ್ಧತಿ ಹಾಗೂ ಸತಿ ಸಹಗಮನ ಪದ್ಧತಿಗಳಿದ್ದವು.

ಧಾರ್ಮಿಕ ವ್ಯವಸ್ಥೆ

- ವಿಜಯನಗರ ಅರಸರು ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು. ಇವರ ಆಸ್ಥಾನದಲ್ಲಿ **ಇರುಗಪ್ಪ, ವಿದ್ಯಾನಂದ, ಮಧುರ** ಎಂಬ ಜೈನ ಪಂಡಿತರಿದ್ದರು.
- **ಮೂಡಬಿದಿರೆ, ಕಾರ್ಕಳ, ವೇಣೂರು ಮತ್ತು** ಹಂಪಿಗಳು ಜೈನ ಕೇಂದ್ರಗಳಾಗಿದ್ದವು.
- ವಿಜಯನಗರ ಅರಸರು ವೀರಶೈವ ಧರ್ಮಕ್ಕೆ ಪ್ರೋತ್ಸಾಹ ನೀಡಿ ಅವರ ಆಸ್ಥಾನದಲ್ಲಿ **ಲಕ್ಕಣ್ಣ, ಬೊಮ್ಮರಸ, ಭೀಮಕವಿ, ತೋಂಟದ ಸಿದ್ಧಲಿಂಗಯತಿ,** ಬಸವಾಂಕ ಮುಂತಾದ ಸಾಹಿತಿಗಳಿದ್ದರು.
- ಸಾಳುವ ಮತ್ತು ತುಳುವ ಸಂತತಿಯ ಅರಸರು ವೈಷ್ಣವ ಧರ್ಮದವರಾಗಿದ್ದರು.
- ಸಾಯಣರಿಂದ ಶೃಂಗೇರಿ ಮಠವು ಜನಪ್ರಿಯವಾಯಿತು.

ವ್ಯಾಪಾರ

- ವಿಜಯನಗರ ಕಾಲದಲ್ಲಿ ಕೃಷಿ ಉತ್ಪನ್ನಗಳಾದ ಮೆಣಸು, ಲವಂಗ, ಶ್ರೀಗಂಧ, ಮುದ್ರಿತ ಬಟ್ಟೆ, ನೀಲಿ, ರಂಗು, ಶುಂಠಿ, ಕೇಸರಿ ಮುಂತಾದವು ರಫ್ತು ವಸ್ತುಗಳಾಗಿದ್ದವು.
- ಭಟ್ಕಳದಿಂದ ಕಬ್ಬಿಣ, ಹೊನ್ನಾವರ ಮತ್ತು ಕಾರವಾರಗಳಿಂದ ಮೆಣಸು, ಪುಲಿಕಾಟ್‌ನಿಂದ ಬಟ್ಟೆ, ಮಂಗಳೂರಿನಿಂದ ತೇಗ ಮತ್ತು ಕಾಗದ ಮುಂತಾದವುಗಳು ರಫ್ತಾಗುತ್ತಿದ್ದವು.
- ವಿಜಯನಗರ ಕಾಲದಲ್ಲಿ ಪರ್ಷಿಯಾ ಕುದುರೆಗಳು, ಯೂರೋಪ್‌ನ ಯುದ್ಧ ಸಾಮಗ್ರಿಗಳು, ಚೀನಾದ ರೇಷ್ಮೆ, ಮದ್ಯ, ಕರ್ಪೂರ ಮತ್ತು ಕಾಗದ ಸಿಲೋನ್ ಮತ್ತು ಬರ್ಮಾಗಳಿಂದ ಆನೆಗಳು ಓರ್ಮುಜ್‌ನಿಂದ ತಾಮ್ರ, ಸೀಸ, ತವರ, ಕೆಂಪು ರತ್ನಗಳು, ಬಣ್ಣ, ಗಾಜು ಮತ್ತು ಪಾದರಸವನ್ನು ಆಮದು ಮಾಡಿಕೊಳ್ಳುತ್ತಿದ್ದರು.
- **ಪೂರ್ವ ಕರಾವಳಿಯ ಬಂದರುಗಳು:–** ಕಾರೈಕಲ್, ನಾಗಪಟ್ಟಣಂ, ಪುಲಿಕಾಟ್, ತೂತುಕುಡಿ ಮತ್ತು ಕಾವೇರಿಪಟ್ಟಣಂ.
- **ಪಶ್ಚಿಮ ಕರಾವಳಿಯ ಬಂದರುಗಳು:–** ಕಾರವಾರ, ಭಟ್ಕಳ, ಹೊನ್ನಾವರ, ಅಂಕೋಲ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿನ್ ಮತ್ತು ಗೋವಾ.

ನಾಣ್ಯಗಳು

- **ಚಿನ್ನದ ನಾಣ್ಯಗಳು –** ವರದಾ, ಗದ್ಯಾಣ, ಪಗೋಡ ಇತ್ಯಾದಿ.
- **ಬೆಳ್ಳಿ ನಾಣ್ಯಗಳು –** ತಾರಾ ನಾಣ್ಯ
- **ತಾಮ್ರದ ನಾಣ್ಯಗಳು –** ಪಣ, ಜಿತಾಲ್, ದುಡ್ಡು, ಕಾಸು ಇತ್ಯಾದಿ.

ಶ್ರೇಣಿಗಳು

- ವಿಜಯನಗರ ಕಾಲದಲ್ಲಿ **ಪಾಂಚಾಲ** ಎಂಬ ಪ್ರಬಲವಾದ

ರತ್ನಗಳ ತಯಾರಿಕೆಯಲ್ಲಿ ತೊಡಗಿದ್ದರು.

- **ಐಹೊಳೆ-500** ಮತ್ತು ಬಳ್ಳಿಗಾವೆ ಸಂಘಗಳೆಂಬ ವರ್ತಕ ಶ್ರೇಣಿಗಳಿದ್ದವು.
- ಪ್ರತಿ ಶ್ರೇಣಿಯ ಮುಖ್ಯಸ್ಥರಾಗಿ **ಅಧ್ಯಕ್ಷ/ಪಟ್ಟಣ ಸ್ವಾಮಿ / ಶೆಟ್ಟಿ/ ಜೇಷ್ಠಕ** ಎಂಬುವರಿದ್ದರು.
- ಬಣಜಿಗರ ಶ್ರೇಣಿಯನ್ನು ಜರ್ಮನಿಯ **ಹನ್ಸಿಯಾಟಿಕ್ ಲೀಗ್**‌ಗೆ ಹೋಲಿಸಲಾಗಿದೆ.

ಕಲೆ ಮತ್ತು ವಾಸ್ತುಶಿಲ್ಪ

- ವಿಜಯನರದ ಕಲೆಯು ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ಸ್ವರೂಪವಾಗಿತ್ತು.
- ಪಲ್ಲವ, ಚೋಳ, ಚಾಲುಕ್ಯ ಮತ್ತು ಹೊಯ್ಸಳ ವಾಸ್ತುಶೈಲಿಗಳನ್ನೊಳಗೊಂಡ **'ವಿಜಯನಗರ ಶೈಲಿ'** ಆರಂಭವಾಯಿತು.
- ವೈವಿಧ್ಯಮಯ ಹಾಗೂ ಸಂಕೀರ್ಣವಾದ ಕಂಬಗಳ ರಚನೆ ವಿಜಯನಗರ ಶೈಲಿಯ ವೈಶಿಷ್ಟ್ಯವಾಗಿದೆ.
- ದ್ರಾವಿಡ ಶೈಲಿಯ ರಾಯ ಗೋಪುರಗಳು, ದೇವಾಲಯದ ಮಂಟಪಗಳನ್ನು ನಿರ್ಮಿಸುತ್ತಿದ್ದರು.
- ಹಂಪೆಯ ಕಮಲ ಮಹಲ್ ಗಣಪತಿಗಳು ಹಿಂದೂ ಮತ್ತು ಮುಸ್ಲಿಂ ಶೈಲಿಗಳ ಸಮಾಗಮಕ್ಕೆ ಉತ್ತಮ ಉದಾಹರಣೆಯಾಗಿದೆ.
- ದೇವಾಲಯಗಳ ನಿರ್ಮಾಣದಲ್ಲಿ **ಬೆಣಚು ಕಲ್ಲುಗಳನ್ನು** ಬಳಸಿದ್ದಾರೆ.
- ಕೃಷ್ಣದೇವರಾಯನು ಪೂರ್ವ ಭಾರತದ ದಿಗ್ವಿಜಯದ ನೆನಪಿಗಾಗಿ **ಹಜಾರರಾಮಸ್ವಾಮಿ ದೇವಾಲಯ (1513ರಲ್ಲಿ)**, ಉದಯಗಿರಿಯ ದಿಗ್ವಿಜಯದ ನೆನಪಿಗಾಗಿ ಕೃಷ್ಣಸ್ವಾಮಿ ದೇವಾಲಯ (1514ರಲ್ಲಿ)ಗಳನ್ನು ಕಟ್ಟಿಸಿದನು.
- ಕೃಷ್ಣದೇವರಾಯನು **1516**ರಲ್ಲಿ **ವಿಜಯ ವಿಠ್ಠಲ ಸ್ವಾಮಿ ದೇವಾಲಯವನ್ನು** ಕಟ್ಟಿಸಿದನು. ಇದರಲ್ಲಿ 56 ಸಂಗೀತ ಕಂಬಗಳಿದ್ದು ಅವುಗಳನ್ನು ಮೀಟಿದಾಗ ಸಪ್ತ ಸ್ವರಗಳು ಬರುತ್ತವೆ.
- ಕೃಷ್ಣದೇವರಾಯನು ಹಂಪಿಯ ಬೃಹತ್ ಏಕಶಿಲಾ **ಉಗ್ರ ನರಸಿಂಹ** ವಿಗ್ರಹವನ್ನು ಕೆತ್ತಿಸಿದನು.
- ಕೃಷ್ಣದೇವರಾಯನು 1513ರಲ್ಲಿ ಒರಿಸ್ಸಾದ ದಿಗ್ವಿಜಯದ ನೆನಪಿಗಾಗಿ ಮೂರು ಅಂತಸ್ತುಗಳ ಕಲ್ಲಿನ ವೇದಿಕೆ ಅಥವಾ ಸಿಂಹಾಸನ ವೇದಿಕೆಯಾದ **ಮಹಾನವಮಿ ದಿಬ್ಬವನ್ನು ದಸರಾ/ಮಹಾನವಮಿ** ಉತ್ಸವಕ್ಕಾಗಿ ಕಟ್ಟಿಸಿದನು.
- **ಕಮಲಮಹಲ್** ಎಂಬುದು ರಾಜ ರಾಣಿಯರ ಬೇಸಿಗೆ ಅರಮನೆಯಾಗಿತ್ತು.
- ಕೃಷ್ಣದೇವರಾಯನ ಖಜಾಂಚಿ ವಿರುಪಣ್ಣನು ಲೇಪಾಕ್ಷಿಯ ವೀರಭದ್ರಸ್ವಾಮಿ ದೇವಾಲಯ ಕಟ್ಟಿಸಿದನು.
- ಶೃಂಗೇರಿಯ ವಿದ್ಯಾಶಂಕರ ದೇವಾಲಯ ದ್ರಾವಿಡ ಮತ್ತು ಹೊಯ್ಸಳ ಶೈಲಿಗಳೆರಡರ ಸಂಗಮವನ್ನು ಹೊಂದಿದೆ.

ಸಾವಿರ ಕಂಬಗಳ ಜೈನ ಬಸದಿ, ಶ್ರೀರಂಗಂನಲ್ಲಿ ಸಾವಿರ ಕಂಬಗಳ ರಂಗನಾಥ ದೇವಾಲಯಗಳು ಇವರ ಕಾಲದಲ್ಲಿ ನಿರ್ಮಾಣಗೊಂಡವು.

- ಶೈವರ ಅಜಂತಾ ಎಂದು ಪ್ರಸಿದ್ಧಿಯಾದ ಲೇಪಾಕ್ಷಿಯು ಚಿತ್ರಕಲೆಯ ಮುಖ್ಯ ಕೇಂದ್ರವಾಗಿತ್ತು. ಇಲ್ಲಿ ಅರ್ಜುನನ ತಪಸ್ಸು, ರಾಮನ ಪಟ್ಟಾಭಿಷೇಕ, ಗಿರಿಜಾ ಕಲ್ಯಾಣ, ದ್ರೌಪದಿ ಕಲ್ಯಾಣ, ತ್ರಿಪುರ ಸಂಹಾರ, ಶಿವ ಪಾರ್ವತಿಯರ ಪಗಡೆಯಾಟ, ರಾಮಾಯಣ ಮತ್ತು ಮಹಾಭಾರತದ ದೃಶ್ಯಗಳಿವೆ.
- ದಕ್ಷಿಣ ಭಾರತದ ಸಂಗೀತವು ವಿಜಯನಗರದ ಕಾಲದಲ್ಲಿ ಬೆಳವಣಿಗೆಯಾಯಿತು.
- ಪುರಂದರ ದಾಸರನ್ನು **ಕರ್ನಾಟಕದ ಸಂಗೀತ ಪಿತಾಮಹ** ಎಂದು ಕರೆಯುವರು.
- **ಕರ್ನಾಟಕ ಸಂಗೀತದ** ಮೊಟ್ಟ ಮೊದಲ ಕೃತಿ ವಿಜಯನಗರ ಕಾಲದಲ್ಲಿ ರಚನೆಯಾಯಿತು.
- ವಿದ್ಯಾರಣ್ಯರ **ಸಂಗೀತಸಾರ,** ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿ, ಕಲ್ಲಿನಾಥನ **ಸಂಗೀತ ಕಲಾನಿಧಿ** ಮುಖ್ಯ ಸಂಗೀತ ಕೃತಿಗಳು.

ಸಾಹಿತ್ಯ

ಸಂಸ್ಕೃತ ಸಾಹಿತ್ಯ

ಕವಿಗಳು	**ಕೃತಿಗಳು**	**ಸಾಹಿತ್ಯ ಪ್ರಕಾರ**	**ಕಾಲ**
ಸಾಯಣಚಾರ್ಯ	ವೇದಾರ್ಥ ಪ್ರಕಾಶ ಆಯುರ್ವೇದ ಸುಧಾನಿಧಿ, ಯಜ್ಞತಂತ್ರ ಸುಧಾನಿಧಿ	ವೇದಬಾಷ್ಯ, ವೈದ್ಯಶಾಸ್ತ್ರ	2ನೇ ಹರಿಹರ
ಗಂಗಾಬಿಕೆ	ಮಧುರ ವಿಜಯಂ	ಇತಿಹಾಸ ಕಾವ್ಯ	ಪ್ರೌಢದೇವರಾಯ
ಪ್ರೌಢದೇವರಾಯ	ಬ್ರಹ್ಮಸೂತ್ರ ವೃತ್ತಿ, ಮಹಾನಾಟಕ ಸುಧಾನಿಧಿ, ಶ್ರೀರತ್ನ, ದೀಪಿಕ ಕಾಮಶಾಸ್ತ್ರ	ನಾಟಕ	
1ನೇ ಡಿಂಡಿಮ	ಸಾಳ್ವಭ್ಯುದಯಂ	ಐತಿಹಾಸಿಕ ಕಾವ್ಯ	ಸಾಳ್ವ ನರಸಿಂಹ
3ನೇ ಡಿಂಡಿಮ	ಅಚ್ಯುತರಾಮಾಭ್ಯುದಯಂ	ಐತಿಹಾಸಿಕ ಕಾವ್ಯ	ಸಾಳ್ವ ನರಸಿಂಹ
ತಿರುಮಲಾಂಭ	ವರದಾಂಬಿಕೆ ಪರಿಣಯ	ವಿವಾಹ ಪ್ರಸಂಗ	ಅಚ್ಯುತರಾಯ
ದೂರ್ಝಟಿ	ಕೃಷ್ಣದೇವರಾಯ ವಿಜಯ	ಐತಿಹಾಸಿಕ ಕಾವ್ಯ	ಕೃಷ್ಣದೇವರಾಯ
ದಿವಾಕರ	ಪಾರಿಜಾತ ಅಪಹರಣ, ರಸಮಂಜರಿ	ಐತಿಹಾಸಿಕ ಕಾವ್ಯ	ಕೃಷ್ಣದೇವರಾಯ
ಕೃಷ್ಣದೇವರಾಯ	ಜಾಂಬವತಿ ಕಲ್ಯಾಣ, ಉಷಾಪರಿಣಯ, ರಸಮಂಜರಿ, ಜ್ಞಾನ ಚಿಂತಾಮಣಿ,	ನಾಟಕಗಳು	–
ವ್ಯಾಸರಾಯ	ತರ್ಕತಾಂಡವ, ನ್ಯಾಯಾಮೃತ	–	ಕೃಷ್ಣದೇವರಾಯ
ವಾದಿರಾಜ	ರುಕ್ಮಿಣಿ ವಿಜಯ, ನ್ಯಾಯರತ್ನಾವಳಿ	–	–
ವಿದ್ಯಾರಣ್ಯ	ಸಂಗೀತಸಾರ	ಸಂಗೀತಶಾಸ್ತ್ರ	
ಲಕ್ಷ್ಮೀಧರ	ಭರತಶಾಸ್ತ್ರ	ಸಂಗೀತಶಾಸ್ತ್ರ	
ಭಾಸ್ಕರ	ಬೆಹರಗಣಿತ	ಗಣಿತಶಾಸ್ತ್ರ	
ವಿದ್ಯಾರಣ್ಯ	ಕಾಲಮಾಧವ	ಜೋತಿಷ್ಯಶಾಸ್ತ್ರ	

ಕನ್ನಡ ಸಾಹಿತ್ಯ

ಕುಮಾರವ್ಯಾಸ

- ಇವನಿಗೆ 'ರೂಪಕ ಚಕ್ರವರ್ತಿ' ಎಂಬ ಬಿರುದಿದೆ. ಕರ್ನಾಟಕ ಭಾರತ ಕಥಾಮಂಜರಿ/ ಗದುಗಿನ ಭಾರತ/ ವ್ಯಾಸ ಭಾರತ ರಚಿಸಿದನು. ಇದರ ಕೊನೆಯ 8 ಪರ್ವಗಳನ್ನು ತಿಮ್ಮಣ್ಣಕವಿ ಕರ್ನಾಟಕ ಕೃಷ್ಣರಾಯ ಕಥಾಮಂಜರಿ ಎಂಬ ಹೆಸರಿನಿಂದ ಬರೆದನು.

ಕಥೆ.

- ರತ್ನಾಕರವರ್ಣಿ – ಭರತೇಶವೈಭವ, ತ್ರಿಲೋಚನ ಶತಕ, ಅಪರಾಜಿತ ತನಕ
- **ಚಾಮರಸ** – ಪ್ರಭುಲಿಂಗಲೀಲೆ
- **ಭೀಮಕವಿ** – ಬಸವಣ್ಣ ಪುರಾಣ ಮತ್ತು ಭೃಂಗಿದಂಡಕ
- **ಲಕ್ಕಣ್ಣ ದಂಡೇಶ** – ಶಿವತತ್ವ ಚೂಡಾಮಣಿ
- **ವ್ಯಾಸರಾಯ** – ಕೀರ್ತನೆಗಳು

- **ಹರಿಹರ** – ರಗಳೆಗಳು
- **ನಂಜುಂಡಕವಿ** – ಕುಮಾರರಾಮನ ಕಥೆ
- **ಪುರಂದರದಾಸ** – ಕೀರ್ತನೆಗಳು
- **ಚಂದ್ರಕವಿ** – ಶಂಕರ ವಿಜಯ
- **ಹರಿದಾಸ** – ಇರಸುಮಯ ವಿಳಕ್ಕಂ
- **ಕನಕದಾಸ** – ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಸಾರ, ರಾಮಧಾನ್ಯಚರಿತೆ ಕೃತಿಗಳನ್ನು ರಚಿಸಿದ್ದಾರೆ.

ತೆಲುಗು ಸಾಹಿತ್ಯ

- **ತಿಮ್ಮಣ್ಣ (ತೆಲುಗು ಆದಿಕವಿ)** – ವ್ಯಾಸಭಾರತವನ್ನು ತೆಲುಗಿಗೆ ಅನುವಾದಿಸಿದನು.
- **ಪಾಲ್ಕುರಿಕೆ ಸೋಮನಾಥ** – ಬಸವ ಪುರಾಣಮು, ಪಂಡಿತಾರಾಧ್ಯ ಚರಿತಮು (ಕನ್ನಡ ಮತ್ತು ತೆಲುಗಿನಲ್ಲಿ ಪಂಡಿತನಾಗಿದ್ದನು)
- **ಕೃಷ್ಣದೇವರಾಯ** – ಆಮುಕ್ತಮೌಲ್ಯ
- **ಶ್ರೀನಾಥ** – ಹರಿವಿಲಾಸಮು, ಶೃಂಗಾರನೃಶದಂ, ಕಾಶ್ಮೀರ ಖಂಡಮು, ಕ್ರೀಡಾಭರಣ
- ಕೃಷ್ಣದೇವರಾಯನ ಆಸ್ಥಾನದಲ್ಲಿ 8 ಜನ ಕವಿಗಳಿದ್ದರು.

1. **ಅಲ್ಲಸಾನಿ ಪೆದ್ದಣ್ಣ** (ಆಂಧ್ರ ಕವಿತ ಪಿತಾಮಹ) – ಮನುಚರಿತಮು
2. **ನಂದಿ ತಿಮ್ಮಣ್ಣ** – ಪಾರಿಜಾತಾಪಹರಣ
3. **ದೂರ್ಜುಟಿ** – ಕೃಷ್ಣರಾಜವಿಜಯ, ಶ್ರೀ ಕಾಳಹಸ್ತಿ ಮಹಾತ್ಮೆ
4. **ಮಲ್ಲಣ್ಣ** – ರಾಜಶೇಖರ ಚರಿತಮು
5. **ರಾಜರಾಜ ಭೂಷಣ** – ವಸುಚರಿತ್ರೆ
6. **ಪಿಂಗಳಿ ಸೂರಣ್ಣ** – ಕಾಳಾಪೂರ್ಣೋದಯಮು
7. **ರಾಮಭದ್ರ** – ರಾಧಾ ಮಾಧವ
8. **ತೆನಾಲಿರಾಮಕೃಷ್ಣ** – ಪಾಂಡುರಂಗ ಮಹಾತ್ಮೆ (ಹಾಸ್ಯ ಚಕ್ರವರ್ತಿ)

15.2 ಬಹುಮನಿ ಸಾಮ್ರಾಜ್ಯ (ಕ್ರಿ.ಶ. 1347-1527) (Bahmani Kingdom)

- ಕರ್ನಾಟಕದಲ್ಲಿ ಸ್ಥಾಪನೆಯಾದ ಮೊಟ್ಟ ಮೊದಲ ಮುಸ್ಲಿಂ ಸಾಮ್ರಾಜ್ಯ ಬಹುಮನಿ ಸಾಮ್ರಾಜ್ಯವಾಗಿದೆ.
- ದೇವಗಿರಿಯ ಅಮೀರನಾಗಿದ್ದ **ಅಲ್ಲಾವುದ್ದೀನ್ ಹಸನ್‌ಗಂಗು ಕ್ರಿ.ಶ. 1347ರಲ್ಲಿ ಗುಲ್ಬರ್ಗಾಕ್ಕೆ** ಬಂದು ಬಹುಮನಿ ಸಾಮ್ರಾಜ್ಯ ಸ್ಥಾಪಿಸಿದನು.

ಆಧಾರಗಳು

- **ಫೆರಿಸ್ತಾನ** ಥಾರಿಕ್-ಇ-ಫೆರಿಸ್ತಾ, **ತಬತಬನ** ಬರಹಾನ್-ಇ-ಮಾಸೀರ್
- **ನಿಜಾಮುದ್ದೀನ್‌ನ** ತಬಕತ್-ಇ-ಅಕ್ಬರಿ, **ಷಿರಾಜ್‌ನ** ತಾಜ್-ಕಿರಾತ್-ಉಲ್-ಮುಲ್ಕ್
- ಮಹಮದ್ ಗವಾನನ ಮಾನ್ಜಿರುಲ್ -ಇನ್ಸಾ ಮತ್ತು ರಿಯಾಜ್-ಉಲ್ ಇನ್ಸಾ.
- ರಷ್ಯಾ ಪ್ರವಾಸಿಗ **ನಿಕೇಟರ್‌ನ** ಬರಹಗಳು, ದಿಲ್ಲಿ ಚರಿತ್ರಕಾರರಾದ ಇಬನ್ ಬತೂತ ಹಾಗೂ ಜಿಯಾವುದ್ದೀನ ಬರ್ನಿರವರ ಬರವಣಿಗೆಗಳು ನೆರವಾಗುತ್ತವೆ.

ಮೂಲ (Origin)

ಎಂಬ ವಂಶದವನು ಎಂದಿದ್ದಾನೆ.

- ತಬತಬ ಮತ್ತು ನಿಜಾಮುದ್ದೀನ್ ಚರಿತ್ರೆಕಾರನ ಪ್ರಕಾರ ಹಸನ್‌ಗಂಗು ದೆಹಲಿಯ ನಿವಾಸಿಯಾಗಿದ್ದು ಅಲ್ಲಿನ ಸುಲ್ತಾನ ಮಹಮದ್-ಬಿನ್ ತೊಘಲಕ್‌ನ ಆಸ್ಥಾನದ ಜ್ಯೋತಿಷ್ಯಕಾರನಾದ 'ಗಂಗು' ಎಂಬುವವನ ಸೇವೆಯಲ್ಲಿದ್ದನು.

ರಾಜಕೀಯ ಇತಿಹಾಸ

ಅಲ್ಲಾವುದ್ದೀನ್ – ಹಸನ್‌ಗಂಗು – ಮಹಮದ್ ಷಾ (ಕ್ರಿ.ಶ. 1347-1358)

- ಇವನು ಬಹುಮನ್ ಸಾಮ್ರಾಜ್ಯದ ಸ್ಥಾಪಕ. ಇವನ ರಾಜ್ಯವು ಪಶ್ಚಿಮದ ಗೋವಾದಿಂದ, ಪೂರ್ವದ ಬೋಂಗೀರ್‌ವರೆಗೆ, ದಕ್ಷಿಣದ ಕೃಷ್ಣಾ ನದಿಯಿಂದ ಉತ್ತರದ ಗಂಗಾ ನದಿಯವರೆಗೆ ಹಬ್ಬಿತ್ತು.
- ಇವನು ರಾಜ್ಯವನ್ನು 4 ತರಫ್ (ದೌಲತಾಬಾದ್, ಬಿರರ್, ಗುಲ್ಬರ್ಗಾ ಮತ್ತು ಬೀದರ್)ಗಳಾಗಿ ವಿಂಗಡಿಸಿ ತರಫ್‌ದಾರನ್ನು ನೇಮಿಸಿದ್ದನು.
- ಬಾಗ್ದಾದ್ ಖಲೀಫನಿಂದ ಮಾನ್ಯತೆ ಪಡೆದು ಸ್ವತಂತ್ರ ಸುಲ್ತಾನನಂತೆ **'ಎರಡನೇ ಅಲೆಗ್ಸಾಂಡರ್'** ಎಂದು ನಾಣ್ಯಗಳ ಮೇಲೆ ಅಚ್ಚು ಹಾಕಿಸಿದ್ದನು.
- ಇವನ ಆಸ್ಥಾನದಲ್ಲಿ **ಇಸಾಮಿ** ಎಂಬ ಚರಿತ್ರೆಕಾರನಿದ್ದನು.
- ಆರಂಭದ ರಾಜಧಾನಿ **ದೌಲತಾಬಾದ್**. ನಂತರ **ಗುಲ್ಬರ್ಗಾ**ಗೆ ವರ್ಗಾಯಿಸಿದನು.
- 1ನೇ ಮಹಮದ್‌ಷಾ (1358-75) ಆಳ್ವಿಕೆ ಕಾಲದಲ್ಲಿ ಜೈನುದ್ದೀನ್ ದೌಲತಾಬಾದಿ ಮತ್ತು ನಿಜಾಮುದ್ದೀನ್ ಬರ್ನಿ ಎಂಬ ಇತಿಹಾಸಕಾರರಿದ್ದನು.
- 2ನೇ ಮಹಮದ್ ಷಾ (1378-97). ಇವನು ವಿದ್ಯಾಪಕ್ಷಪಾತಿ ಯಾಗಿದ್ದು, ಅರಿಸ್ಟಾಟಲ್ ಎಂಬ ನಾಮಧೇಯಕ್ಕೆ ಪಾತ್ರನಾಗಿದ್ದನು. ಇವನು ಪರ್ಷಿಯಾದ ಪ್ರಸಿದ್ಧ ಕವಿ ಹಫೀಸ್‌ನನ್ನು ಆಹ್ವಾನಿಸಿದ್ದನು.

ಫಿರೋಜ್‌ಷಾ (1397-1422)

- ಫಿರೋಜ್ ಷಾನು ಬಹುಮನಿ ಸುಲ್ತಾನರ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದಾನೆ.
- ಇವನ ಕಾಲದಲ್ಲಿ **ತೆಲಂಗಾಣವು** ಬಹುಮನಿ ರಾಜ್ಯದ ವಶವಾಯಿತು.
- ಇವನ ಆಸ್ಥಾನದಲ್ಲಿ ಪೈಜುಲ್ಲಾ ಹಂಜು ಮತ್ತು ಹಸನ್ ಗಿಲಾನಿ ಕವಿಗಳಿದ್ದರು.
- ಪ್ರಖ್ಯಾತ ಖಗೋಳವಿಜ್ಞಾನಿ **ಹಸನ್‌ಗಿಲಾನಿ** ನೇತೃತ್ವದಲ್ಲಿ ದೌಲತಾಬಾದ್‌ನಲ್ಲಿ **ಖಗೋಳ ವೀಕ್ಷಣಾಲಯ**ವನ್ನು ತೆರೆಯಲಾಯಿತು.
- ಭೀಮಾ ನದಿ ದಂಡೆಯ ಮೇಲೆ ತನ್ನ ಹೆಸರಿನಲ್ಲಿ **ಫಿರೋಜಾಬಾದ್** ಎಂಬ ನಗರ ನಿರ್ಮಿಸಿದನು.
- ಉರ್ದುವಿನಲ್ಲಿ ಪದ್ಯಗಳನ್ನು ಬರೆದನು. ವೇದ ಮತ್ತು ಉಪನಿಷತ್ ಮೇಲೆ ಟಿಪ್ಪಣಿಯನ್ನು ಬರೆದನು.
- ಗುಲ್ಬರ್ಗಾದಲ್ಲಿ **ಜುಮ್ಮಾ ಮಸೀದಿ**ಯನ್ನು ಕಟ್ಟಿಸಿದನು.
- ಪಶ್ಚಿಮ ಕರಾವಳಿಯಲ್ಲಿ **ದಾಬೋಲ್** ಮತ್ತು **ಚೌಲ್**

ಬಂದರುಗಳನ್ನು ವಿದೇಶಿ ವ್ಯಾಪಾರಕ್ಕಾಗಿ ಅಭಿವೃದ್ಧಿ ಪಡಿಸಿದನು.

- ಫಿರೋಜ್‌ನು ಸೂಫಿಸಂತ ಬಂದೇನವಾಜ್‌ರ ಭಕ್ತನಾಗಿದ್ದನು.

ಒಂದನೇ ಅಹಮದ್‌ಷಾ (1422–1435)

- ಅಹಮದ್‌ಷಾನು ರಾಜಧಾನಿಯನ್ನು ಗುಲ್ಬರ್ಗಾದಿಂದ ಬೀದರ್‌ಗೆ (1425ರಲ್ಲಿ) ವರ್ಗಾಯಿಸಿದನು.
- ಇವನ ಆಸ್ಥಾನದ ಕವಿ **ಹಜರಿಯು** (ಬಿರುದು ಜಫಾರಖಾನ್) **'ಬಹಮನ್ ನಾಮಾ'** ಎಂಬ ಕೃತಿ ಬರೆದನು.
- 2ನೇ ಅಲ್ಲಾವುದ್ದೀನ್ (1436–56) ಕಾಲದಲ್ಲಿ ಬೀದರ್‌ನಲ್ಲಿ **'ವೈದ್ಯಾಲಯ'** ಸ್ಥಾಪನೆಯಾಯಿತು.
- ಇವನ ಕಾಲದಲ್ಲೇ **ಪರ್ದೇಶಿ** ಮತ್ತು **ದರ್ಬನ್** ಮುಸ್ಲಿಂರ ನಡುವೆ ಕಲಹ ಹೆಚ್ಚಾಗಿತ್ತು.
- ಹುಮಾಯೂನ್ (1458–61) ಇವನು ತನ್ನ ನಾಯಿಬ್ ಆಗಿ ಮಹ್ಮದ್ ಗವಾನ್‌ನನ್ನು ನೇಮಿಸಿಕೊಂಡಿದ್ದನು. ಸದಾ ಪಾನಮತ್ತನಾಗಿರುತ್ತಿದ್ದ ಇವನು ತನ್ನ ಸೇವಕನಿಂದ ಕಲೆಯಾದನು.

ಮಹಮದ್ ಗವಾನ್ (ಕ್ರಿ.ಶ. 1411–1481)

- ಇವನು 1411ರಲ್ಲಿ ಪರ್ಷಿಯಾದ ಗವಾನದಲ್ಲಿ ಜನಿಸಿದನು. ಕ್ರಿ.ಶ. 1447ರಲ್ಲಿ ಬೀದರ್‌ಗೆ ವರ್ತಕನಾಗಿ ಬಂದು ಎರಡನೇ ಅಲ್ಲಾವುದ್ದೀನನ ಸೇವೆಗೆ ಸೇರಿಕೊಂಡನು.
- ಹುಮಾಯಾನ್ ಕಾಲದಲ್ಲಿ ಪ್ರಧಾನಮಂತ್ರಿಯಾಗಿ **ಖ್ವಾಜಾ–ಇ–ಜಹಾನ್** ಎಂಬ ಬಿರುದು ಪಡೆದನು.
- ನಿಜಾಮ್‌ಷಾ ಅಹಮದ್‌ನ ಕಾಲದಲ್ಲಿ ಆಡಳಿತ ನಿರ್ವಹಣೆಗೆ ನೇಮಕವಾದ **ನರ್ಗೀಸ್‌ಬೇಗಂ ಅಧ್ಯಕ್ಷತೆಯ** ಸಲಹಾ ಮಂಡಳಿಯ ಸದಸ್ಯನಾಗಿದ್ದನು.
- ಇವನು ವಿಜಯನಗರ ಸಾಮ್ರಾಜ್ಯದಲ್ಲಿದ್ದ ಗೋವಾವನ್ನು ಗೆದ್ದುಕೊಂಡನು ಹಾಗೂ ಒರಿಸ್ಸಾದ ಪುರುಷೋತ್ತಮ ಗಜಪತಿಯನ್ನು ಸೋಲಿಸಿ ಗಾಜಿ ಎಂಬ ಬಿರುದು ಪಡೆದನು.
- ಇವನ ಕಾಲದಲ್ಲಿ ಬೀದರ್‌ಗೆ (1470ರಲ್ಲಿ) **ರಷ್ಯಾದ ಪ್ರವಾಸಿಗ ನಿಕೆಟಿನ್** ಭೇಟಿ ನೀಡಿದ್ದನು.

ಗವಾನನು ಜಾರಿಗೆ ತಂದ ಸುಧಾರಣೆಗಳು

- ಸಾಮ್ರಾಜ್ಯವನ್ನು ಎಂಟು **ತರಫ್‌ಗಳಾಗಿ** ವಿಂಗಡಿಸಿ ಅವುಗಳ ಮುಖ್ಯಸ್ಥರಿಗೆ ಜಹಗೀರುಗಳನ್ನು ಕೊಡುವ ಬದಲು ವೇತನ ನೀಡುವ ಪದ್ಧತಿ ಜಾರಿಗೊಳಿಸಿದನು.
- ಕಂದಾಯವನ್ನು ಹಣದ ರೂಪದಲ್ಲಿ ಕೊಡುವ ಪದ್ಧತಿಯನ್ನು ಜಾರಿಗೊಳಿಸಿದನು. ಅವನ ಕಂದಾಯ ಪದ್ಧತಿ ಅಕ್ಬರ್ ಮತ್ತು ತೋದರ್‌ಮಲ್ಲರಿಗೆ ಮಾದರಿಯಾಯಿತು.
- ಗವಾನನ ಕಾಲದಲ್ಲಿ **ಅಪಾಕಿ ಪರದೇಶಿ** ಮುಸ್ಲೀಮರಿಗೂ ಮತ್ತು ದಖ್ಖನ್ **ಸುನ್ನಿ** ಮುಸ್ಲೀಮರ ನಡುವೆ ಕಲಹವೇರ್ಪಟ್ಟಿತ್ತು.
- ಗವಾನನು ತಾಜಕ್–ಉಲ್–ಇನ್ಷಾ, ದಿವಾನ್–ಇ–ಆಷರ್, ರಿಯಾಜ್–ಉಲ್–ಇನ್ಷಾ, ಮಾನ್ಜಿರಲ್ ಇನ್ಷಾ ಎಂಬ ಕೃತಿಗಳನ್ನು ರಚಿಸಿದನು.
- ಗವಾನನು 1472ರಲ್ಲಿ ಬೀದರ್‌ನಲ್ಲಿ **'ಮದರಸಾ'** ಎಂಬ ಕಾಲೇಜನ್ನು ಕಟ್ಟಿಸಿದನು. ಇದನ್ನು ವಿದೇಶಿ ಪ್ರವಾಸಿಗ **ರಿಚರ್ಡ್ ಟೆಂಪಲ್** ದಖ್ಖನ್ನಿನಲ್ಲೇ ಅದ್ವಿತೀಯ ಕಟ್ಟಡ ಎಂದಿದ್ದಾನೆ.
- **ಹಸನ್ ನಿಜಾಮ್–ಉಲ್–ಮುಲ್ಕ್** ಎಂಬ ಸರದಾರನ ಸಂಚಿನಿಂದಾಗಿ ಗವಾನನು ಕ್ರಿ.ಶ. 1481ರಲ್ಲಿ ಮರಣದಂಡನೆಗೆ ಗುರಿಯಾದನು.
- ಗವಾನನ ಕೊನೆಯ ಮಾತೆಂದರೆ "ಬಲಿದಾನದ ಭಾಗ್ಯಕ್ಕಾಗಿ ಭಗವಂತನಿಗೆ ಮಣಿದೆ" ಎಂಬುದಾಗಿತ್ತು.

ಬಹುಮನಿ ಸಾಮ್ರಾಜ್ಯದ ಅಂತ್ಯ

- ಮೂರನೇ ಮಹಮ್ಮದ್‌ನ ನಂತರ ಬಹುಮನಿ ಸಾಮ್ರಾಜ್ಯವು ಅವನತಿಯತ್ತ ಸಾಗಿತ್ತು. ಕೊನೆಯದಾಗಿ ಅಹಮದ್ ಷಾ ವಲೀವುಲ್ಲಾ ಮತ್ತು ಖಲೀವುಲ್ಲಾರು ಆಳಿದರು. ನಂತರ ಬಹುಮನಿ ಸಾಮ್ರಾಜ್ಯವು ಐದು ಶಾಹಿ ರಾಜ್ಯಗಳಾಗಿ ಒಡೆದು ಹೋಯಿತು. ಅವುಗಳೆಂದರೆ ಬಿಜಾಪುರದ ಆದಿಲ್‌ಷಾಹಿ, ಬೀದರ್‌ನ ಬರೀದ್‌ಷಾಹಿ, ಗೋಲ್ಕಂಡಾದ ಕುತುಬ್‌ಷಾಹಿ, ಅಹಮದ್ ನಗರದ ನಿಜಾಮ್‌ಷಾಹಿ ಮತ್ತು ಬೀರಾರ್‌ನ ಇಮಾದ್‌ಷಾಹಿ ರಾಜ್ಯಗಳು.

ಆಡಳಿತ ಪದ್ಧತಿ

- ಸುಲ್ತಾನನನ್ನು ಭೂಮಿಯ ಮೇಲಿನ ದೇವರ ಪ್ರತಿನಿಧಿ ಎಂದು ಭಾವಿಸಲಾಗಿತ್ತು. ಷರಿಯತ್ ಕಾನೂನುಗಳು ಜಾರಿಯಲ್ಲಿದ್ದವು. ಸುಲ್ತಾನನಿಗೆ ಆಡಳಿತದಲ್ಲಿ ಸಲಹೆ ನೀಡಲು ಮಂತ್ರಿಮಂಡಲವಿತ್ತು.
- **ವಕೀಲ್ ಉಸ್ ಸುಲ್ತಾನತ್** – ಪ್ರಧಾನಮಂತ್ರಿ
- **ಅಮೀರ್ – ಇ – ಜುಮ್ಲಾ** – ಅರ್ಥ ಸಚಿವ
- **ವಜೀರ್ – ಇ – ಆಶ್ರಫ್** – ವಿದೇಶಾಂಗ ಮಂತ್ರಿ
- **ಸದರ್ ಇ–ಜಹಾನ್** – ನ್ಯಾಯಾಡಳಿತ ಮಂತ್ರಿ, ದಾನದತ್ತಿ ವ್ಯವಹಾರ
- **ಅಮೀರ್–ಉಲ್–ಉಮ್ರಾ** – ಮಹಾದಂಡನಾಯಕ
- **ವಜೀರ್–ಇ–ಕುಲ್** – ಉಪಪ್ರಧಾನಿ
- **ಖಾಜಿ** – ನ್ಯಾಯಾಧೀಶ
- **ಪೇಶ್ವಾ** – ಸಾಮಾನ್ಯ ವ್ಯವಹಾರಗಳ ಮುಖ್ಯಸ್ಥ
- **ದಬೀರ್** – ಮುಖ್ಯ ಕಾರ್ಯದರ್ಶಿ
- **ನಜೀರ್** – ಮುಖ್ಯ ಲೆಕ್ಕಿಗ
- **ಕೊತ್ವಾಲ** – ನಗರ ರಕ್ಷಕ, ಪೊಲೀಸ್ ಆಯುಕ್ತ
- ಮೊದಲ ಬಾರಿಗೆ ಬಹಮನಿಯರ ಕಾಲದಲ್ಲಿ ದಖ್ಖನ್ನಿಗೆ ಬಂದೂಕು ಮತ್ತು ಸಿಡಿಮದ್ದು ಬಳಕೆಯ ಪರಿಚಯವಾಯಿತು.
- ತರಫ್‌ದಾರರು ಸುಲ್ತಾನರಿಗೆ ಸೈನ್ಯವನ್ನು ಪೂರೈಸುತ್ತಿದ್ದರು.

ಪ್ರಾಂತ್ಯಾಡಳಿತ

- ಸಾಮ್ರಾಜ್ಯವನ್ನು ಪ್ರಾಂತ್ಯ/ತರಫ್, ಸರ್ಕಾರ್/ ಜಿಲ್ಲೆ, ಪರಗಣ/ ತಾಲ್ಲೂಕುಗಳಾಗಿ ವಿಭಾಗಿಸಲಾಗಿತ್ತು.
- ಪ್ರಾಂತ್ಯದಲ್ಲಿ ತರಫ್‌ದಾರ ಅಧಿಕಾರಿಯಿದ್ದು ಇವರು ಮಂತ್ರಿಗಳು ಆಗಿರುತ್ತಿದ್ದರು. ಉತ್ತಮ ಸೇವೆ ಸಲ್ಲಿಸಿದ ಇವರಿಗೆ ಕುತುಬ್–

ಉಲ್-ಮುಲ್ಕ್, ಖ್ವಾಜಾ, ಖ್ವಾಜಾ-ಇ-ಜಹಾನ್ ಎಂಬ ಬಿರುದು ನೀಡಲಾಗುತ್ತಿತ್ತು.

- ಪರಗಣಗಳಲ್ಲಿ ಹಲವು ಗ್ರಾಮಗಳು ಸೇರಿದ್ದವು. ಇವುಗಳಲ್ಲಿ ಸ್ವಯಂ ಆಡಳಿತವಿತ್ತು. ಗ್ರಾಮವು ಆಡಳಿತದ ಕೊನೆಯ ಘಟಕವಾಗಿತ್ತು. ಸರ್ಕಾರಕ್ಕೆ ಅನೀಫ, ಪರಗಣಕ್ಕೆ ದೇಸಾಯಿ ಮತ್ತು ಗ್ರಾಮಕ್ಕೆ ಗೌಡ ಎಂಬ ಅಧಿಕಾರಿಗಳಿದ್ದರು.

ಭೂ ಕಂದಾಯ ಪದ್ಧತಿ

- ಭೂಕಂದಾಯವು ಒಟ್ಟು ಉತ್ಪನ್ನದ 1/6 ಭಾಗದಷ್ಟಿತ್ತು.
- ಭೂಮಿಯನ್ನು ಖುಷ್ಕಿ ಭೂಮಿ, ನೀರಾವರಿ ಭೂಮಿ, ಬಂಜರು ಭೂಮಿ ಮತ್ತು ಗೋಮಾಳ ಭೂಮಿ ಎಂದು ವಿಂಗಡಿಸಲಾಗಿತ್ತು.
- ಸರ್ಕಾರ್‌ಗಳಲ್ಲಿ ಸುಭೇದಾರರು ಕಂದಾಯ ಸಂಗ್ರಹಿಸುತ್ತಿದ್ದರು. ಇವರ ಕೆಳಗೆ **ದೇಶ್‌ಮುಖ್** ಮತ್ತು **ದೇಸಾಯಿ**ಗಳಿದ್ದರು.
- ಗವಾನನು ಭೂ ಮಾಪನಕ್ಕೆ **'ತನಾಬ್'** ಎಂಬ ಕಬ್ಬಿಣದ ಸರಪಳಿ ಬಳಸಿದನು.

ವ್ಯಾಪಾರ

- ಬಹಮನ್ ಕಾಲದಲ್ಲಿ ಕರ್ನಾಟಕದಲ್ಲಿ ಹತ್ತಿ, ರೇಷ್ಮೆ ಮತ್ತು ಮುಸ್ಲಿಂ ಬಟ್ಟೆ ಉದ್ದಿಮೆ ಬೃಹದಾಕಾರವಾಗಿ ಬೆಳೆದಿತ್ತು.
- ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿ ಚಿನ್ನದ ಗಣಿಗಳಿದ್ದವು.
- ಬಿಜಾಪುರ ಸುಲ್ತಾನರ ಅತಿ ಮುಖ್ಯ ರಫ್ತು ಸರಕು **ಮೆಣಸು**.
- **ರಫ್ತು ಸರಕುಗಳು** – ಸಾಂಬಾರ ಪದಾರ್ಥಗಳು, ಬಟ್ಟೆಗಳು, ಪಾದರಕ್ಷೆ, ನೀಲಿ ಮತ್ತು ವಜ್ರಗಳು ಇತ್ಯಾದಿ.
- **ಆಮದು ಸರಕುಗಳು** – ಕುದುರೆಗಳು, ಶಸ್ತ್ರಾಸ್ತ್ರಗಳು, ಚಿನ್ನ, ಬೆಳ್ಳಿ, ಮುತ್ತುಗಳು, ಕೆಂಪು ರತ್ನಗಳು, ದಾಲ್ಚಿನ್ನಿ ಮುಂತಾದವು.
- **ಅಂಕೋಲಾವು** ಕರ್ನಾಟಕದ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲಿಗೆ ಪೋರ್ಚುಗೀಸರು ಬರುತ್ತಿದ್ದರು.

ಸಾಮಾಜಿಕ ಮತ್ತು ಧಾರ್ಮಿಕ ಜೀವನ

- ಬಹುಸಂಖ್ಯಾತ ಹಿಂದೂಗಳಿದ್ದು ಇವರು ಹೆಚ್ಚು ಹಳ್ಳಿಗಳಲ್ಲಿ ವಾಸವಾಗಿದ್ದರು. ಆದರೆ ಮುಸ್ಲಿಮರು ಹೆಚ್ಚಾಗಿ ಪಟ್ಟಣದಲ್ಲಿ ವಾಸಿಸುತ್ತಿದ್ದರು.
- ಬಹುಮನಿ ರಾಜ್ಯವನ್ನು ಒಂದು ಮತೀಯ ರಾಜ್ಯ (ಮತಾಂತರದಿಂದಾಗಿ) ಎನ್ನಲಾಗಿದೆ.
- ಮುಸ್ಲೀಮರಲ್ಲಿ ಪರದೇಶಿ(ಷಿಯಾ) ಮತ್ತು ದಖ್ಖನಿಗಳು (ಸುನ್ನಿ) ಎಂಬ ಎರಡು ಪಂಗಡಗಳಿದ್ದವು.
- ಮುಸ್ಲೀಮರಲ್ಲಿ ಸೂಫಿ ಪಂಥದ ಪ್ರಭಾವ ಹೆಚ್ಚಾಗಿತ್ತು.

ಶಿಕ್ಷಣ ಮತ್ತು ಸಾಹಿತ್ಯ

- ಮುಕ್ತಾಬ್‌ಗಳು ಮತ್ತು ಮದರಸಾಗಳು ಮುಸ್ಲೀಮರ ಶಿಕ್ಷಣ ಕೇಂದ್ರಗಳಾಗಿದ್ದವು.
- ಬಹಮನ್‌ರ ಕಾಲದಲ್ಲಿ **ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಭಾಷೆಗಳ** ಅಭಿವೃದ್ಧಿಯಾದವು.
- ಹಸನ್‌ಗಂಗು ಆಸ್ಥಾನದಲ್ಲಿ ಗಣಿತಶಾಸ್ತ್ರಜ್ಞ ಸದ್ರುಲ್ ಷರೀಫ್, ಖಗೋಳತಜ್ಞ ಮೀರ್ ಮಹಮದ್ ಭಕ್ಷಿ, ಹಕಿಮ್ ಆಲಿ ಮತ್ತು ಹಕಿಮ್ ನಾಸಿರುದ್ದೀನ್ ಎಂಬ ಅರಬ್ ವೈದ್ಯ ಶಾಸ್ತ್ರಜ್ಞರಿದ್ದರು.
- ಖ್ವಾಜಾ ಬಂದೇನವಾಜ್ ಬಹ್ರುದ್ದೀನ್, ಮಹಮ್ಮದ್ ಶೇಖ್, ಅಲ್ಲಾವುದ್ದೀನ್ ಮತ್ತು ಖಾಜಿ ಷಿಹಾಬುದ್ದಿನ್ ಎಂಬ ಉರ್ದು ಕವಿಗಳಿದ್ದರು.
- ಖ್ಯಾತ ಸೂಫಿ ಸಂತ ಖ್ವಾಜಾಬಂದೇ ನವಾಜರು 'ಷಿಕರ್‌ನಾಮ' ರಚಿಸಿದರು. ಇವನು ದಖ್ಖನಿ ಉರ್ದು ಭಾಷೆಯಲ್ಲಿ ಸಾಹಿತ್ಯ ರಚಿಸಿದ ಮೊದಲಿಗ.
- ಷಾಮಿರ್ಜಿಯು **ಇಸಾಮಿ-ಫತು-ಉಸ್ ಸಲಾತಿನ್** ಎಂಬ ಐತಿಹಾಸಿಕ ಗ್ರಂಥ ರಚಿಸಿದನು.
- ಮುಲ್ಲಾ ನಸ್ರತಿಯು **'ಅಲಿನಾಮ'** ಕೃತಿ ಬರೆದನು.
- ತಬತಬ **'ಬುರ್ಹಾನ್-ಇ-ಮಾಸಿರ್'** ಕೃತಿ ರಚಿಸಿದನು.
- ದಖ್ಖನ್ ಭಾಷೆಯು ಉರ್ದು ಭಾಷೆ ಬೆಳವಣಿಗೆಗೆ ನೆರವಾಯಿತು.

ಕಲೆ ಮತ್ತು ವಾಸ್ತುಶಿಲ್ಪ

- ದೆಹಲಿ ಸುಲ್ತಾನರ ಕಾಲದ ಕಲಾ ಶೈಲಿ (ತುಘಲಕ್ ಶೈಲಿ) ದಕ್ಷಿಣ ಭಾರತಕ್ಕೆ ಆಗಮಿಸಿತು. ಈ ತುಘಲಕ್ ಶೈಲಿಯನ್ನು **ದಖ್ಖನಿ ಶೈಲಿ** ಎನ್ನುವರು. ಇದನ್ನು ಬಹುಮನಿ ಸುಲ್ತಾನರು ಪೋಷಿಸಿ, ಅದು ಬಿಜಾಪುರದ ಆದಿಲ್‌ಷಾಹಿಗಳಿಂದ ಉತ್ತುಂಗ ಶಿಖರಕ್ಕೇರಿತು.
- ಬಹಮನ್‌ರ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳೆಂದರೆ ಗೋಳಾಕಾರದ ಗುಮ್ಮಟಗಳು, ಕಮಾನುಗಳು, ಮಿನಾರ್‌ಗಳು, ಗಚ್ಚು ಗಾರೆಯ ಬಳಕೆ ಮತ್ತು ಗೋಡೆಯ ಮೇಲೆ ಅಲಂಕಾರಾಕ್ಷರಗಳ (ಕ್ಯಾಲಿಗ್ರಫಿ) ಕೆತ್ತನೆಗಳು ಕಂಡುಬರುತ್ತವೆ.
- ಕರ್ನಾಟಕದ ಶಾಹಿ ಶೈಲಿಯ ಮುಖ್ಯ ಕಲಾ ಕೇಂದ್ರಗಳೆಂದರೆ **ಗುಲ್ಬರ್ಗಾ, ಬೀದರ್ & ಬಿಜಾಪುರ**

ಗುಲ್ಬರ್ಗಾದ ಸ್ಮಾರಕಗಳು

- ಒಂದನೇ ಅಲ್ಲಾವುದ್ದೀನನು ಗುಲ್ಬರ್ಗಾದ ಕೋಟೆಯನ್ನು ನಿರ್ಮಿಸಿದನು.
- ಒಂದನೇ ಮಹಮದ್ ಷಾನು ದಕ್ಷಿಣ ಭಾರತದ ಅತಿ ದೊಡ್ಡ ಮಸೀದಿ **ಜಾಮೀ ಮಸೀದಿ**. (ರಫೀಖ್ ಶಿಲ್ಪಿಯು ನೆರವಿನಿಂದ)ಯನ್ನು 1367ರಲ್ಲಿ ಕಟ್ಟಿಸಿದನು. ಇದು ಸ್ಪೇನ್‌ನ ಕಾರ್ಡೋವಾದಲ್ಲಿರುವ ಮಸೀದಿಯನ್ನು ಹೋಲುತ್ತದೆ.
- ಷಾಬಜಾರ್ ಮಸೀದಿಯನ್ನು ಮಹಮದ್ ಷಾನು ಕಟ್ಟಿಸಿದನು.
- ಫಿರೋಜ್ ಷಾ ಘೋರಿಯನ್ನು ಫಿರೋಜ್ ಷಾನು ಕಟ್ಟಿಸಿದನು.
- ಬಂದೇ ನವಾಜ್ ದರ್ಗಾ – ಇದು 1422ರಲ್ಲಿ ನಿರ್ಮಾಣವಾಯಿತು.

ಬೀದರ್‌ನ ಕಟ್ಟಡಗಳು

1. **ಸೋಲಾ ಕಂಬ ಮಸೀದಿ** – ಅರ್ಧಗೋಳಾಕಾರ ಗುಮ್ಮಟವಿರುವ ಇದು ರೋಮಿನ ಕಟ್ಟಡಗಳನ್ನು ಹೋಲುತ್ತದೆ.
2. **ದಿವಾನ್-ಇ-ಖಾನ** – ಇದು ಸುಲ್ತಾನರ ಆಡಳಿತ

ಕಛೇರಿಯಾಗಿತ್ತು.

3. **ಮದರಸಾ ಕಾಲೇಜು** – ಮಹ್ಮದ್ ಗವಾನನು 1472ರಲ್ಲಿ ಕಟ್ಟಿಸಿದನು. ಇದು ಪರ್ಶಿಯನ್ ಶೈಲಿಯಲ್ಲಿದೆ.
4. **ರಂಗೀನ ಮಹಲ್** – ನೃತ್ಯ ಭವನವಾದ ಇದನ್ನು 1520ರಲ್ಲಿ ಬರೀದ್‌ಷಾಹಿಗಳು ನಿರ್ಮಿಸಿದರು.
5. **ತಖ್ತ್ ಮಹಲ್** – ಇದನ್ನು ಷಿಹಾಬುದ್ದೀನನು ಅರಮನೆಯಾಗಿ ನಿರ್ಮಿಸಿಕೊಂಡಿದ್ದನು.
6. **ಆಷ್ಟರಿನ ಸಮಾಧಿಗಳು:** ಬೀದರ್‌ನ ಪಶ್ಚಿಮಕ್ಕಿರುವ 12 ಸಮಾಧಿಗಳಾಗಿವೆ.

- ಬಹುಮನಿ ಸುಲ್ತಾನರ ಕಾಲದಲ್ಲಿ **ಬಿದರಿ ಲೋಹ ಕಲೆ** ಅಭಿವೃದ್ಧಿಯಾಯಿತು.

ಬಿಜಾಪುರದ ಆದಿಲ್‌ಷಾಹಿಗಳು (ಕ್ರಿ.ಶ. 1490–1686)

ಯೂಸಫ್ ಆದಿಲ್‌ಖಾನ್ (ಕ್ರಿ.ಶ. 1490–1510)

- ಟರ್ಕಿ ಸಾಮ್ರಾಜ್ಯದ ಸುಲ್ತಾನ 2ನೇ **ಮುರಾದನ** ಮಗನಾದ ಯುಸಫ್ ಆದಿಲ್‌ಖಾನ್ ಬಿಜಾಪುರದ ಆದಿಲ್‌ಷಾಹಿ ವಂಶದ ಸ್ಥಾಪಕನಾಗಿದ್ದಾನೆ.
- ಬಹುಮನಿ ಸುಲ್ತಾನ 3ನೇ ಮಹಮದ್‌ನ ಸೇವೆಯಲ್ಲಿದ್ದ ಇವನು ರಾಜಕೀಯ ಅರಾಜಕತೆಯ ಲಾಭ ಪಡೆದು 1490ರಲ್ಲಿ ಬಿಜಾಪುರದಲ್ಲಿ ಸ್ವಾತಂತ್ರ್ಯ ಘೋಷಿಸಿಕೊಂಡನು.
- ಇವನು ಪೋರ್ಚುಗೀಸ್ ವೈಸ್‌ರಾಯ್ **ಆಲ್ಬುಕರ್ಕ್‌ನಿಂದ** ಗೋವಾವನ್ನು ಗೆದ್ದುಕೊಂಡನು.
- ಕ್ರಿ.ಶ. 1510ರ ಕೃಷ್ಣದೇವರಾಯನೊಂದಿಗಿನ ಯುದ್ಧದಲ್ಲಿ ಆ‌ಿ‌ಲ್‌ಖಾನ್ ಸತ್ತನು.

ಇಸ್ಮಾಯಿ‌ಲ್ ಆದಿಲ್‌ಷಾ (1510–1534)

- ಆದಿಲ್‌ಖಾನನ ಮರಣದ ನಂತರ ಅವನ ಮಗನಾದ ಇಸ್ಮಾಯಿಲ್‌ನು ಕಮಲ್‌ಖಾನನ ರಾಜಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದನು. ಇವನು ಪರ್ಶಿಯಾ ಸುಲ್ತಾನನಿಂದ ಸುಲ್ತಾನ ಬಿರುದು ಪಡೆದಿದ್ದನು. ದಖನಿ ಮುಸ್ಲಿಂರನ್ನು ಸದೆಬಡಿದನು.
- **1ನೇ ಇಬ್ರಾಹಿಂ ಆದಿಲ್‌ಷಾ (1435–1457):** ಇಸ್ಮಾಯಿಲ್‌ನ 3ನೇ ಮಗನಾದ ಇವನು ಪರ್ಶಿಯನ್ ಬದಲು ಮರಾಠಿಯನ್ನು ಅಧಿಕೃತ ಭಾಷೆಯಾಗಿ ಜಾರಿಗೊಳಿಸಿದನು.
- **1ನೇ ಅಲಿ ಆದಿಲ್‌ಷಾ (1557–1580):** 1ನೇ ಇಬ್ರಾಹಿಂ ಮಗನಾದ ಇವನು ವಿಜಯನಗರದ ರಾಮರಾಯನೊಡನೆ ಒಪ್ಪಂದ ಮಾಡಿಕೊಂಡು ಅಹ್ಮದ್‌ನಗರವನ್ನು ಧ್ವಂಸಗೈದನು.

2ನೇ ಇಬ್ರಾಹಿಂ ಆದಿಲ್ ಷಾ (1580–1627)

- ಇವನು ಅಧಿಕಾರಕ್ಕೆ ಬಂದಾಗ ಆಡಳಿತವು **ಚಾಂದ್‌ಬೇಬಿ** ನೇತೃತ್ವದಲ್ಲಿ ನಡೆಯುತ್ತಿತ್ತು.
- ಇಬ್ರಾಹಿಂನು ಗೋಲ್ಕೊಂಡ ರಾಜಪುತ್ರಿ **ಚಾಂದ್ ಸುಲ್ತಾನಳನ್ನು** ವಿವಾಹವಾದನು.
- ಮೊಘಲರ ಸಹಾಯದಿಂದ ಈತ **ಅಹ್ಮದ್‌ನಗರವನ್ನು** ಧ್ವಂಸ ಮಾಡಿದನು.
- ಇವನು ತನ್ನ ಅರಮನೆಯ ಬಳಿ **ನರಸಿಂಹ ದೇವಾಲಯವನ್ನು** ಕಟಿಸಿದನು.
- ದಕ್ಷಿಣ ಭಾರತದ ತಾಜ್‌ಮಹಲ್ ಎಂದು ಪ್ರಸಿದ್ಧವಾದ **ಇಬ್ರಾಹಿಂ ರೋಜಾವನ್ನು** ಬಿಜಾಪುರದಲ್ಲಿ ಕಟಿಸಿದನು. ಇವನ ಕಾಲದ ಚಿತ್ರಕಲೆಯು ಆನಂದ್ ಮಹಲ್‌ನಲ್ಲಿದೆ.
- 2ನೇ ಇಬ್ರಾಹಿಂನು ಸಂಗೀತ ಪ್ರಿಯನಾಗಿದ್ದು, ಇವನ ಆಸ್ಥಾನದಲ್ಲಿ **ನವರಸ್** ಎಂಬ ಸಂಗೀತಗಾರನಿದ್ದನು. ಇವನ ನೆನಪಿಗಾಗಿ ಬಿಜಾಪುರದಲ್ಲಿ **ನವರಸಪುರವನ್ನು** ಕಟ್ಟಿಸಿದನು.
- ಇವನ ಆಸ್ಥಾನದಲ್ಲಿ **ಷಿರಾಜಿ ಮತ್ತು ಫೆರಿಸ್ತಾ** ಎಂಬ ಇತಿಹಾಸಕಾರರಿದ್ದರು.
- ಇಬ್ರಾಹಿಂನು ಉರ್ದುವಿನಲ್ಲಿ **'ಕಿತಾಬ್–ಇ–ನವರಸ್'** ಎಂಬ ಕೃತಿ ಬರೆದನು.
- 2ನೇ ಇಬ್ರಾಹಿಂನನ್ನು ಜನರು **'ಜಗದ್ಗುರು'** ಎಂಧು ಕರೆಯುತ್ತಿದ್ದರು.
- **ತೋದರ ಮಲ್ಲನ ಕಂದಾಯ ನೀತಿಯನ್ನು** ತನ್ನ ರಾಜ್ಯದಲ್ಲಿ ಜಾರಿಗೊಳಿಸಿದ್ದನು.

ಮಹಮದ್ ಆದಿಲ್ ಷಾ (ಕ್ರಿ.ಶ. 1626–1656)

- 2ನೇ ಇಬ್ರಾಹಿಂನ ಮಗನಾದ ಮಹ್ಮದ್‌ನು ಮೊಗಲರೊಡನೆ 1636ರಲ್ಲಿ ಶಾಂತಿ ಒಪ್ಪಂದ ಮಾಡಿಕೊಂಡನು.
- ಇವನು ತನ್ನ ಸೇನಾನಿಗಳಾದ **ರಣದುಲ್ಲಾಖಾನ್** ಮತ್ತು **ಷಹಜಿಯರನ್ನು** ಕರ್ನಾಟಕದ ದಂಡಯಾತ್ರೆಗೆ ಕಳುಹಿಸಿದ್ದನು.
- ಮಹಮದ್ ಆದಿಲ್‌ಷಾನು ಬಿಜಾಪುರದ ಜಗತ್ಪ್ರಸಿದ್ಧ **'ಗೋಳಗುಮ್ಮಟ'**ವನ್ನು ನಿರ್ಮಿಸಿದನು.
- ಇವನ ನಂತರ 2ನೇ ಆದಿಲ್‌ಷಾ ಮತ್ತು ಅವನ ಮಗ ಸಿಕಂದರ್ ಆದಿಲ್‌ಷಾ ಆಳಿದರು.
- ಸಿಕಂದರ್ ಆದಿಲ್‌ಷಾನ ಕಾಲದಲ್ಲಿ ಔರಂಗಜೇಬನು ಬಿಜಾಪುರವನ್ನು ಆಕ್ರಮಿಸಿ 1686ರಲ್ಲಿ ಅದನ್ನು ಮೊಗಲ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.

ಆಡಳಿತ ವ್ಯವಸ್ಥೆ

- ಸುಲ್ತಾನನಿಗೆ ಸಹಾಯ ಮಾಡಲು ಮಂತ್ರಿಮಂಡಲವಿತ್ತು. ಪ್ರಮುಖ ಮಂತ್ರಿಗಳೆಂದರೆ
- **ವಕೀಲ್** – ಪ್ರಧಾನಮಂತ್ರಿ
- **ಅಮೀರ್–ಇ–ಜುಮ್ಲಾ** – ಅರ್ಥಮಂತ್ರಿ
- **ಸದರ್–ಇ–ಜಹಾನ್** – ನ್ಯಾಯಾಧೀಶ
- **ಸಾಹಿಬ್–ಅರಿಜ್** – ದಂಡನಾಯಕ
- **ನಜೀರ್** – ಆಡಳಿತ ಸಲಹೆಗಾರ
- ಸುಲ್ತಾನನೇ ಶ್ರೇಷ್ಠ ನ್ಯಾಯಾಧೀಶ. ಸದರ್–ಇ–ಜಹಾನ್ ಮುಖ್ಯ ನ್ಯಾಯಾಧೀಶನಾಗಿದ್ದನು. ಪಟ್ಟಣ–ಖಾಜಿ, ಪ್ರಾಂತ್ಯ– ಜಹಗೀರುದಾರರು, ಸರ್ಕಾರ್–ಸುಬೇದಾರರು. ಪರಗಣ – ದೇಶ್‌ಮುಖ್ ಮತ್ತು ಗ್ರಾಮಗಳಲ್ಲಿ ಪಟೇಲರು ನ್ಯಾಯ

- ಆದಿಲ್‌ಷಾಹಿಗಳ ಸೈನ್ಯದಲ್ಲಿ **ಅಶ್ವಪಡೆ** ಪ್ರಧಾನ ಅಂಗವಾಗಿತ್ತು.
- ಕಾಲ್ದಳದ 10 ಸೈನಿಕರಿಗೆ ಒಬ್ಬ ನಾಯಕ, 5 ನಾಯಕರ ಮೇಲೆ ಒಬ್ಬ ಜುಮ್ಲಾದಾರ, ಎರಡು-ಮೂರು ಜುಮ್ಲಾದಾರರಿಗೆ ಒಬ್ಬ **ಹಜಾರಿ** ಎಂಬ ಮೇಲ್ವಿಚಾರಕನಿದ್ದನು. ಕಾಲ್ದಳದಲ್ಲಿ **'ಸರ್ನೋಬತ್'** ಮುಖ್ಯಸ್ಥನಾಗಿದ್ದನು.

ಪ್ರಾಂತ್ಯಾಡಳಿತ

- ರಾಜ್ಯವನ್ನು **ಪ್ರಾಂತ್ಯ ತರಫ್, ಸರ್ಕಾರ್, ಪರಗಣ** ಮತ್ತು **ಗ್ರಾಮ**ಗಳಾಗಿ ವಿಂಗಡಿಸುತ್ತಿದ್ದರು.
- ಪ್ರಾಂತ್ಯಗಳಲ್ಲಿ ಜಹಗೀರುದಾರ, ಸರ್ಕಾರ್‌ದಲ್ಲಿ **ಸುಬೇದಾರ್** ಎಂಬ ಆಡಳಿತಾಧಿಕಾರಿಗಳಿದ್ದರು.
- ಪರಗಣಗಳ ಆಡಳಿತದಲ್ಲಿ **ಕೊತ್ವಾಲ, ದೇಶ್‌ಮುಖ್** (ಕಂದಾಯ ವಸೂಲಿಗಾರ), ಮತ್ತು **ದೇಸಾಯಿ** (ಲೆಕ್ಕಿಗ) ಎಂಬ ಅಧಿಕಾರಿಗಳಿದ್ದರು.
- ಗ್ರಾಮಾಧಿಕಾರಿಗಳಾಗಿ **ಪಟೇಲ್ ಮತ್ತು ಕುಲಕರ್ಣಿ**ಗಳಿದ್ದರು.
- ಸುಲ್ತಾನರು **ಷಿಯಾ ಪಂಥಕ್ಕೆ** ಸೇರಿದ್ದರು.

ಆರ್ಥಿಕ ಜೀವನ

- ಕೃಷಿಯು ಜನರ ಮುಖ್ಯ ಕಸುಬು. ಕಂದಾಯ ಉತ್ಪನ್ನದ $^1/_8$ ಭಾಗದಷ್ಟಿತ್ತು.
- ಭೂಮಿಯನ್ನು ರಾಜರ ಭೂಮಿ, ಜಹಗೀರು ಭೂಮಿ, ಹಿಂದೂ ಮುಖಂಡರ ಭೂಮಿ ಮತ್ತು ದಾನ ಭೂಮಿ ಎಂಬುದಾಗಿ ವಿಂಗಡಿಸಿದ್ದರು.
- ಭತ್ತ, ಗೋಧಿ, ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು.

ಸಾಹಿತ್ಯ

- 1ನೇ ಆಲಿ ಆದಿಲ್‌ಷಾನು ಪುಸ್ತಕ ಪ್ರೇಮಿ ಮತ್ತು ವಿದ್ವತ್ ಜನ ಪೋಷಕನಾಗಿದ್ದನು. ಇವನ ಆಸ್ಥಾನದಲ್ಲಿ ಷಿರಾಜ್ ಮತ್ತು ಫೆರಿಸ್ತಾರೆಂಬ ಇತಿಹಾಸಕಾರರಿದ್ದರು.
- **ರಫಿ-ಉದ್ದಿನ್-ಷಿರಾಜ್** → 'ತಜಕೀರತ್-ಉಲ್-ಮುಲ್ಕ್'
- **ಫರಿಸ್ತಾ** → ತಾರಿಬ್ - ಇ - 'ಫರಿಸ್ತಾ'
- **ಮುಲ್ಲಾ ನಸ್ರತಿ** → 'ಗುಲ್ಷನ್-ಇ-ಇಶ್ಕಿ, ಆಲಿನಾಮ, ತಾರಿಖ್-ಇ-ಸಿಕಂದರಿ'
- **ಹಸನ್ ಶಾಕಿ** → 'ಫುತುಹರ್ ನಾಮ' (ತಾಳಿಕೋಟೆ ಕದನದ ವಿವರಣೆ)
- **ಅಬ್ದುಲ್ ದೆಹ್ಲವಿ** → 'ಇಬ್ರಾಹಿಂ ನಾಮ' (2ನೇ ಇಬ್ರಾಹಿಂಷಾನ ಆಸ್ಥಾನ)
- **2ನೇ ಇಬ್ರಾಹಿಂ** → **'ಕಿತಾಬ್-ಇ-ನವರಸ್'** – ಇದು ಸರಸ್ವತಿ ಮತ್ತು ಗಣಪತಿಯ ಸ್ತುತಿಯಿಂದ ಆರಂಭವಾಗುತ್ತದೆ.
- ಕನ್ನಡದಲ್ಲಿ **ರಾಘವೇಂದ್ರನು ನ್ಯಾಯ ಮುಕ್ತಾವಳಿ,** ವಾಲ್ಮೀಕಿಯು **ತೊರೆವ ರಾಮಾಯಣ**ವನ್ನು ರಚಿಸಿದನು.
- ಜುಬೇರಿಯು **ಬಸಲಿ ಉಸ್ ಸಲಾತಿನ್** ಕೃತಿ ರಚಿಸಿದನು.

ಕಲೆ ಮತ್ತು ವಾಸ್ತುಶಿಲ್ಪ

- ದೆಹಲಿ, ಆಗ್ರ, ನಗರಗಳನ್ನು ಬಿಟ್ಟರೆ **ಭಾರತೀಯ ಮುಸಲ್ಮಾನರ ವಾಸ್ತುಶಿಲ್ಪಗಳ ತವರೂರು ಬಿಜಾಪುರ. 'ಇದನ್ನು ದಕ್ಷಿಣ ಭಾರತದ ರಾಣಿ'** ಎನ್ನುವರು.
- ಆದಿಲ್‌ಷಾಹಿಗಳ ವಾಸ್ತು ಶೈಲಿಯಲ್ಲಿ ಕಮಲ ದಳದ ಮೇಲಿನ ಅರ್ಧ ಗೋಳಾಕಾರದ ಗುಮ್ಮಟಗಳು, ಮೀನಾರ್‌ಗಳು, ಚತುಷ್ಕಂದ ಮಾದರಿಯ ಕಮಾನುಗಳು ಮತ್ತು ದಪ್ಪ ಗೋಡೆಗಳಂತಹ ಶೈಲಿಗಳನ್ನು ಕಾಣಬಹುದು.
- **ಬಿಜಾಪುರ:** ಗಗನ್ ಮಹಲ್, ಮಹತರ್ ಮಹಲ್, ಅಸಾರ್ ಮಹಲ್, ಬುರುಜುಗಳು, ಸಂಗೀತ ಮಹಲ್, ರಂಗೀನ್ ಮಹಲ್, ಆನಂದ ಮಹಲ್, ಬೇನಿ ಮಹಲ್, ಜಲ ಮಂದಿರಗಳು, ಮೋತಿ ಮಹಲ್ ಮುಖ್ಯ ಅರಮನೆಗಳಾಗಿವೆ.
- ದಕ್ಷಿಣ ಭಾರತದ ಅತಿದೊಡ್ಡ ಮಸೀದಿಯಾದ **ಜುಮ್ಮಾ ಮಸೀದಿ**ಯನ್ನು 1ನೇ ಆಲಿ ಆದಿಲ್‌ಷಾನು ಬಿಜಾಪುರದಲ್ಲಿ ನಿರ್ಮಿಸಿದನು.
- 2ನೇ ಇಬ್ರಹಿಂ ಆದಿಲ್‌ಷಾನು **ಇಬ್ರಾಹಿಂ ರೋಜಾ**ವನ್ನು ಕಟ್ಟಿಸಿದನು. **ಮಾಲ್ಲಿಕ್ ಸಂದಲ್** ಇದರ ಶಿಲ್ಪಿ. **ಇದು ದಕ್ಷಿಣ ಭಾರತದ ತಾಜ್‌ಮಹಲ್.**
- ಮಹಮದ್ ಆದಿಲ್‌ಷಾನು ಬಿಜಾಪುರದ ಜಗತ್ಪ್ರಸಿದ್ಧ ಗೋಳಗೊಮ್ಮಟವನ್ನು ಕಟ್ಟಿಸಿದನು. ಇದು ಅವನ ಮತ್ತು ಅವನ ರಾಣಿ, ಮಕ್ಕಳ ಸಮಾಧಿಯಾಗಿದೆ. ಈ ಗುಮ್ಮಟವು ಏಷ್ಯಾದಲ್ಲೇ ದೊಡ್ಡದು. ಇದರಲ್ಲಿ **'ಪಿಸುಮಾತಿನ ಗ್ಯಾಲರಿ'** ಇದೆ. ಇದು ಇಂಡೋ ಸಾರ್ಸೆನಿಕ್ ಶೈಲಿಯಲ್ಲಿದೆ.
- ಅಹ್ಮದ್‌ನಗರದ ಮಾಲಿಕ್-ಏ-ಮೈದಾನ್ ಫಿರಂಗಿ ಮುಖ್ಯವಾದುದು. **ಪಂಚ ಲೋಹ**ದಿಂದ ತಯಾರಿಸಿದ ಇದನ್ನು ತಾಳಿಕೋಟೆ ಕದನದಲ್ಲಿ ಬಳಸಲಾಗಿತ್ತು.
- ಬಿಜಾಪುರ ಅತಿ ದೊಡ್ಡ ಫಿರಂಗಿ **ಲಂಡಾ ಕಸಬ್** ಎಂಬುದಾಗಿತ್ತು.
- ಆದಿಲ್ ಶಾಹಿಗಳ ಪೋಷಣೆಯಲ್ಲಿ ರಚಿತವಾದ **ನಂಜುಂ ಆಲ್‌ಹುಲ್ಮ್** ಎಂಬ ಗ್ರಂಥ ನೂರಾರು ಚಿತ್ರಗಳನ್ನು ಒಳಗೊಂಡಿದೆ.
- ಸಾತ್‌ಮಂಜಿಲ್, ಆನಂದ ಮಹಲ್ ಮತ್ತು ಇಬ್ರಾಹಿಂ ರೋಜಾಗಳಲ್ಲಿ ಹೆಚ್ಚಿನ ವರ್ಣಚಿತ್ರಗಳಿವೆ.
- ಅಸಾರ್‌ಮಹಲ್‌ನಲ್ಲಿ ಪುಷ್ಪಜಾಮಿತಿ ವಿನ್ಯಾಸಗಳ ಚಿತ್ರಗಳಿವೆ.
- ಆದಿಲ್‌ಶಾಹಿಗಳ ಕಾಲದಲ್ಲಿ ಮಹಮದ್ ಆಲಿ ಪಾರ್ಖಿಬೇಗ್, ಅಬ್ದುಲ್ ಖಾದರ್, ಮುಸ್ಲಿಂಖಾನ್ ಎಂಬ ಚಿತ್ರಕಾರರಿದ್ದರು.
- ರಾಬರ್ಟ್ ಸ್ಕೆಲ್‌ಟನ್‌ನ ಪೇಂಟಿಂಗ್ಸ್ ಆಫ್ ಬಿಜಾಪುರ ಕೃತಿಯು ಶಾಹಿ ಚಿತ್ರಕಲೆಯ ಬಗ್ಗೆ ತಿಳಿಸುತ್ತದೆ.

16. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿ
(Socio - Religious Reform Movements)

16.1 ಸಾಮಾಜಿಕ, ಧಾರ್ಮಿಕ ಸುಧಾರಕರು

ಶಂಕರಾಚಾರ್ಯರು

- ಶಂಕರಾಚಾರ್ಯರು ಕ್ರಿ.ಶ. 788ರಲ್ಲಿ ಕೇರಳದ ಕಾಲಟಿಯಲ್ಲಿ ಜನಿಸಿದರು. ಶಿವಗುರು ಮತ್ತು ಆರ್ಯಾಂಬರು ಇವರ ತಂದೆ-ತಾಯಿಗಳು.
- ನರ್ಮದಾ ತೀರದ ಗೋವಿಂದ ಭಗವತ್ಪಾದರ ಬಳಿ ಬ್ರಹ್ಮಸೂತ್ರ ಉಪನಿಷತ್ತು ಮತ್ತು ವೇದಾಧ್ಯಯನ ನಡೆಸಿ ಅವರಿಂದ **ಅದ್ವೈತ ವೇದಾಂತ** ಸಿದ್ಧಾಂತವನ್ನು ಕಲಿತರು.
- ಶಂಕರರು **ಕಾಶಿಯ ವಿಷ್ಣುಶರ್ಮ**ನನ್ನು ತನ್ನ ಮೊದಲ ಶಿಷ್ಯನಾಗಿ ಮಾಡಿಕೊಂಡರು. ಅನಂತರ ಶೃಂಗೇರಿಯ ಮಂಡನಮಿತ್ರ ಮತ್ತು ಅವರ ಪತ್ನಿ ಭಾರತೀದೇವಿಯವರು ಶಿಷ್ಯರಾದರು.
- ಶಂಕರರು **ಧರ್ಮವಿಜಯ** ಕೈಗೊಂಡು ಭಾರತವನ್ನು ಮೂರು ಬಾರಿ ಸುತ್ತಾಡಿದರು.
- ಶಂಕರರು ಹಿಂದೂ ಧರ್ಮದ ಪುನರುತ್ಥಾನ ಹಾಗೂ ವೇದಾಂತ ಪ್ರಚಾರಕ್ಕಾಗಿ ದೇಶದ ನಾಲ್ಕು ಮೂಲೆಗಳಲ್ಲಿ ಪಂಚ ಮಠಗಳನ್ನು ಸ್ಥಾಪಿಸಿದರು. ಅವುಗಳೆಂದರೆ.

1. **ಉತ್ತರದ ಬದರಿಯ ಜ್ಯೋತಿರ್‌ಮಠ** – ಗುರು ತೋಟಾಚಾರ್ಯ (ಉತ್ತರ ಪ್ರದೇಶ) ಇದರ ಮುಖ್ಯಸ್ಥರು.
2. **ಪೂರ್ವದ ಪುರಿಯ ಗೋವರ್ಧನ ಮಠ** – ಗುರು ಪದ್ಮಪಾದ (ಒರಿಸ್ಸಾ) ಇದರ ಮುಖ್ಯಸ್ಥರು.
3. **ಪಶ್ಚಿಮದ ದ್ವಾರಕಾದ ಕಾಳಿಕಾಮಠ** – ಗುರು ಹಸ್ತಮಲಕ (ಗುಜರಾತ್) ಇದರ ಮುಖ್ಯಸ್ಥರು.
4. **ದಕ್ಷಿಣ ಶೃಂಗೇರಿಯ ಶಾರದಾ ಪೀಠ** – ಸುರೇಶ್ವರಚಾರ್ಯ (ಕರ್ನಾಟಕ) ಇದರ ಮುಖ್ಯಸ್ಥರು.
5. **ಕಂಚಿಯ ಕಾಮಕೋಟಿ ಪೀಠ** (ತಮಿಳುನಾಡು)

- ಶಂಕರರು ಕಾಶ್ಮೀರ, ಗೋಕರ್ಣ, ಕೂಡಲಿ, ಕೊಪ್ಪಳ, ಸಂಕೇಶ್ವರ, ಶಿವಗಂಗೆ, ಶ್ರೀಶೈಲ ಮತ್ತು ಅವನಿಗಳಲ್ಲಿ ಕೂಡ ಮಠಗಳನ್ನು ಸ್ಥಾಪಿಸಿದರು.
- ಶಂಕರರು ತಮ್ಮ ಮಾಯಾವಾದವನ್ನು ಬೌದ್ಧಧರ್ಮದಿಂದ ಗ್ರಹಿಸಿದಕ್ಕಾಗಿ ಶಂಕರರನ್ನು **'ಪ್ರಚನ್ನ ಬುದ್ಧ'** ಎನ್ನುವರು.
- ಇವರು ಆರು ದೇವರುಗಳಾದ ಶಿವ, ವಿಷ್ಣು, ಶಕ್ತಿ, ಕುಮಾರ, ಗಣೇಶ ಮತ್ತು ಸೂರ್ಯ ದೇವರುಗಳ ಪೂಜೆಗೆ ಕರೆ ನೀಡಿ **ಷಣ್ಮಥ ಸ್ಥಾಪನಾಚಾರ್ಯ** ಎಂಬ ಬಿರುದು ಪಡೆದರು.
- ಶಂಕರರನ್ನು **ಹಿಂದೂ ಧರ್ಮದ ಪುನಃಶ್ಚೇತನದ ಅದ್ವೈರ್ಯ** ಮತ್ತು **ಧಾರ್ಮಿಕ ದಿಗಂತದ ಧೃವತಾರೆ** ಎನ್ನಲಾಗಿದೆ.
- **ಶಂಕರರ ಕೃತಿಗಳು** – ಸೌಂದರ್ಯಲಹರಿ, ಆನಂದಲಹರಿ, ಶಿವಾನಂದ ಲಹರಿ, ವಿವೇಕ ಚೂಡಾಮಣಿ, ವೇದಾಂತಸಾರ, [illegible]

ಶಂಕರರ ಬೋಧನೆಗಳು ಅಥವಾ ಅದ್ವೈತ ಸಿದ್ಧಾಂತ

- ಅದ್ವೈತ ಸಿದ್ಧಾಂತದ ಪ್ರತಿಪಾದಕರಾದ ಅವರ ಸಿದ್ಧಾಂತವು ಉಪನಿಷತ್ತು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರದ ಮೇಲೆ ಹುಟ್ಟಿತು. ಈ ಮೂರಕ್ಕೆ 'ಪ್ರಸ್ಥನಾತ್ರಯ' ಎನ್ನುವರು.
- ತಮ್ಮ ಸಿದ್ಧಾಂತದಲ್ಲಿ **ಬ್ರಹ್ಮ (ಆತ್ಮ)** ಮತ್ತು **ಚಿತ್** ಎರಡು ಒಂದೇ ಎಂದರ್ಥ. ಜೀವ ಬ್ರಹ್ಮನಿಂದ ಬೇರೆ ಅಲ್ಲ ಎಂಬ ಏಕೇಶ್ವರವಾದ ಪ್ರತಿಪಾದಿಸಿದರು.
- ಶಂಕರರು **ಅಹಂಬ್ರಹ್ಮಾಸ್ಮಿ, ಮಾಯಾವಾದ** ಮತ್ತು **ಜ್ಞಾನ ಮಾರ್ಗ**ವನ್ನು ಪ್ರತಿಪಾದಿಸಿದರು.
- ಶಂಕರರು ದೇವರನ್ನು **ಈಶ್ವರ** ಎಂದು ಕರೆದರು.
- ಅದ್ವೈತ ಸಿದ್ಧಾಂತದ ನಾಲ್ಕು ಮುಖ್ಯಾಂಶಗಳೆಂದರೆ ಬ್ರಹ್ಮನೊಬ್ಬನು ಸತ್ಯ, ಜಗತ್ತು ಸುಳ್ಳು/ಮಾಯೆ, ಜೀವದ ಆತ್ಮವು ಬ್ರಹ್ಮನ ಅಧೀನ ಮತ್ತು ಜೀವಾತ್ಮಕ್ಕೆ ಬ್ರಹ್ಮನು ಬಿಟ್ಟರೆ ಪ್ರತ್ಯೇಕ ಅಸ್ತಿತ್ವವಿಲ್ಲ.
- ಶಂಕರರು ತತ್ವಶಾಸ್ತ್ರದ ಅಧ್ಯಯನಕ್ಕೆ ಪ್ರಾಶಸ್ತ್ಯ ನೀಡಿದ್ದರಿಂದ **ವೈದಿಕ ತತ್ವ ಚಿಂತನ ಪಿತಾಮಹ** ಎನ್ನುವರು.

ರಾಮಾನುಜಾಚಾರ್ಯರು (ಕ್ರಿ.ಶ. 1017-1137)

- ರಾಮಾನುಜರು ತಮಿಳುನಾಡಿನ **ಪೆರಂಬದೂರಿ**ನಲ್ಲಿ ಕ್ರಿ.ಶ. 1017ರಲ್ಲಿ ಜನಿಸಿದರು. **ಕೇಶವ ಸೋಮಯಾಜಿ** ಮತ್ತು **ಕಾಂತಿಮತಿ** ಇವರ ತಂದೆ-ತಾಯಿಗಳು.
- ರಾಮಾನುಜರ ಮೂಲ ಹೆಸರು **ಲಕ್ಷ್ಮಣ**, ಅಲ್ಲದೆ ಶ್ರೀ ವೈಷ್ಣವ ಮತದ ಶ್ರೇಷ್ಠ ಪ್ರವರ್ಧಕ ಮತ್ತು ಶ್ರೀ ವೈಷ್ಣವ ರಸಋಷಿ ಎಂಬ ಉಪನಾಮಗಳಿವೆ.
- ಕಂಚಿಯ ಅದ್ವೈತ ಗುರು **ಯಾದವ ಪ್ರಕಾಶರು** ಮತ್ತು ಕಾಂಚಿಪೂರ್ಣರ ಬಳಿ ಅಧ್ಯಯನ ನಡೆಸಿದರು. ಕಾಂಚಿಪೂರ್ಣರು ಇವರಿಗೆ ದೀಕ್ಷೆ ನೀಡಿದರು.
- ರಾಮಾನುಜರು 16ನೇ ವಯಸ್ಸಿನಲ್ಲಿ **ರಕ್ಷಾಂಬರ**ನ್ನು ವಿವಾಹವಾದರು.
- ರಾಮಾನುಜರು ಕಾಶ್ಮೀರ, ಮಥುರಾ, ಬದರಿ, ದ್ವಾರಕ, ಗೋವರ್ಧನ, ಪುರಿ, ಕಾಶಿ, ತಿರುಮಲೆ, ಕಂಚಿ ಮತ್ತು ಮಧುರೈಗಳಲ್ಲಿ ವೈಷ್ಣವ ಮಠಗಳನ್ನು ಸ್ಥಾಪಿಸಿ ಶ್ರೀವೈಷ್ಣವ ಮತ ಪ್ರಚಾರ ಮಾಡಿದರು.
- ರಾಮಾನುಜರ ಶ್ರೀ ವೈಷ್ಣವ ಮತದ ಪ್ರಚಾರವನ್ನು ಸಹಿಸದ ಚೋಳರಾಜ 1ನೇ ಕುಲೋತ್ತುಂಗನು ಕಿರುಕುಳ ನೀಡಿದನು. ಇದರಿಂದ ಬೇಸತ್ತು ಕರ್ನಾಟಕದ **ಹೊಯ್ಸಳ ದೊರೆ ವಿಷ್ಣುವರ್ಧನನ** ಆಸ್ಥಾನದಲ್ಲಿ ಆಶ್ರಯ ಪಡೆದರು.
- ಮೇಲುಕೋಟೆಯಲ್ಲಿದ್ದ ರಾಮಾನುಜರು ವೈಷ್ಣವ ಧರ್ಮವನ್ನು ಪ್ರಚಾರ ಮಾಡಿ ಕರ್ನಾಟಕದಲ್ಲಿ ಭಕ್ತಿಪಂಥ ಚಳುವಳಿಗೆ ಚಾಲನೆ [illegible]

- ರಾಮಾನುಜರ ಪ್ರಭಾವದಿಂದ ವೈಷ್ಣವ ಧರ್ಮ ಸ್ವೀಕರಿಸಿದ ವಿಷ್ಣುವರ್ಧನನು ಮೇಲುಕೋಟೆಯಲ್ಲಿ **ಚೆಲುವನಾರಾಯಣ ದೇವಾಲಯ,** ಯತಿರಾಜ ಮಠ ಹಾಗೂ ತಿರುನಾರಾಯಣ ಪೆರುಮಾಳ್ ಗುಡಿಗಳನ್ನು ಕಟ್ಟಿಸಿಕೊಟ್ಟನು. ಇದರ ಕುರುಹಾಗಿ ಬೇಲೂರಿನ ಚನ್ನಕೇಶವ ದೇವಾಲಯ ನಿರ್ಮಿಸಿದನು.
- ಕರ್ನಾಟಕದ **ಬೇಲೂರು, ಸಾಲಿಗ್ರಾಮ, ನುಗ್ಗೆಹಳ್ಳಿ, ತೊಂಡೂರು, ಮಳ್ಳೂರು, ಗೊರೂರು** ಮುಖ್ಯ ವೈಷ್ಣವ ಕೇಂದ್ರಗಳು.
- ಕುಲೋತ್ತುಂಗನ ಮರಣದ ನಂತರ ರಾಮಾನುಜರು ಶ್ರೀರಂಗಂಗೆ ಹಿಂತಿರುಗಿ ಅಲ್ಲಿ ಮಠಾಧ್ಯಕ್ಷರಾದರು.
- **ರಾಮಾನುಜರ ಕೃತಿಗಳು:** ವೇದಸಾರ, ವೇದಾಂತ ದೀಪ, ವೇದಾಂತ ಸೂತ್ರ, ವೇದಾಂತ ಸಂಗ್ರಹ, ಶ್ರೀ ಭಾಷ್ಯ, ಗೀತಭಾಷ್ಯ, ಶ್ರೀವೈಕುಂಠಗದ್ಯ, ಮುಂತಾದವು.

ರಾಮಾನುಜರ ಬೋಧನೆಗಳು ಅಥವಾ ವಿಶಿಷ್ಟಾದ್ವೈತ ಸಿದ್ಧಾಂತ

- ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. **ವಿಷ್ಣುವೇ ಸರ್ವೋತ್ತಮ** ಎಂಬುದು ಈ ಸಿದ್ಧಾಂತದ ಸಾರವಾಗಿವೆ.
- ವಿಶಿಷ್ಟಾದ್ವೈತ ಸಿದ್ಧಾಂತದ ಮುಖ್ಯಾಂಶಗಳೆಂದರೆ **ಈಶ್ವರ/ಬ್ರಹ್ಮನೇ ಪರಮಾತ್ಮ, ಚಿತ್/ಜೀವಾತ್ಮ ಮತ್ತು ಅಚಿತ್/ಅಚೇತನೆ ಜಗತ್ತು.**
- ರಾಮಾನುಜರು ಶಂಕರರ **ಮಾಯಾವಾದವನ್ನು** ಖಂಡಿಸಿ ಜಗತ್ತು ಸತ್ಯ ಎಂದರು.
- ರಾಮಾನುಜರು ತಿಳಿಸಿದ ಈಶ್ವರನ ಐದು ರೂಪಗಳೆಂದರೆ ಪರ ನಾರಾಯಣ, ವಾಸುದೇವ, ಚತುರ್ವ್ಯೂಹನು, ಅಂತರ್ಯಾಮಿ ಮತ್ತು ಆಚಾರ್ಯರೂಪ.
- ರಾಮಾನುಜರು **ಸಂಸ್ಕೃತ ಭಾಷೆಗೆ** ಮಹತ್ವ ನೀಡಿದರು. ಇವರು ಪಂಚಮ/ಹರಿಜನರನ್ನು **ತಿರುಕುಲತ್ತರ್** ಎಂದು ಕರೆದು ಅವರಿಗೆ ದೀಕ್ಷೆ ನೀಡಿದರು.
- ವಿಜಯನಗರ ಕಾಲದಲ್ಲಿ ವಿಶಿಷ್ಟಾದ್ವೈತಿಗಳಲ್ಲಿ **ತೆಂಗಳೈ** (ದಕ್ಷಿಣದವರು) ಮತ್ತು **ವಡಗಳೈ** (ಉತ್ತರದವರು) ಎಂಬ ಎರಡು ಶಾಖೆಗಳು ಹುಟ್ಟಿದವು.

ಮಧ್ವಾಚಾರ್ಯ (ಕ್ರಿ.ಶ. 1238-1317)

- ಮಧ್ವರರು ಉಡುಪಿಯ **ಪಾಜಕ** ಗ್ರಾಮದಲ್ಲಿ 1238ರಲ್ಲಿ ಮಧ್ಯಗೇಹ ನಾರಾಯಣಭಟ್ಟ ಮತ್ತು ವೇದಾವತಿ ದಂಪತಿಗಳ ಮಗನಾಗಿ ಜನಿಸಿದರು.
- ಮಧ್ವರರ ಮೂಲ ಹೆಸರು **ವಾಸುದೇವ**
- ಉಡುಪಿಯ ಅದ್ವೈತಗುರು ಅಚ್ಯುತಪ್ರೇಕ್ಷರು ಇವರ ಗುರುಗಳು.
- ಮಧ್ವರರು ತಮ್ಮ ದ್ವೈತ ಪ್ರಚಾರಕ್ಕಾಗಿ **ಬದರಿಯಿಂದ ರಾಮೇಶ್ವರಂವರೆಗೆ** ಎರಡು ಬಾರಿ ಸುತ್ತಿದ್ದರು.
- ಮಧ್ವರರ ಶಿಷ್ಯರೆಂದರೆ ನರಸಿಂಹತೀರ್ಥ, ವಿಷ್ಣುತೀರ್ಥ, ಪದ್ಮನಾಭ ತೀರ್ಥ, ಮಾಧ್ವತೀರ್ಥ ಮತ್ತು ತ್ರಿವಿಕ್ರಮ ಪಂಡಿತರು ಪ್ರಮುಖರು.
- ಮಧ್ವರರು ಉತ್ತರದ ದ್ವಾರಕೆಯಿಂದ ತಂದಿದ್ದ **ಶ್ರೀಕೃಷ್ಣ ಮತ್ತು** ... ಪ್ರತಿಸ್ಥಾಪಿಸಿದರು.
- ಮಧ್ವರರು ಉಡುಪಿಯಲ್ಲಿ ತಮ್ಮ ಎಂಟು ಜನ ಶಿಷ್ಯರನ್ನು ಪರ್ಯಾಯ ವ್ಯವಸ್ಥೆಯಿಂದ ಕ್ರಮಬದ್ಧ ಪೂಜೆಗೆಂದು ನೇಮಿಸಿದರು.
- ಮಧ್ವರರು ಉಡುಪಿಯಲ್ಲಿ **ವೈಷ್ಣವ ಮಠ** ಸ್ಥಾಪಿಸಿ ಅದರ ಪೀಠಾಧಿಕಾರಿಯಾದರು.
- ಮಧ್ವರರು ಶ್ರೀಕೃಷ್ಣನ ಎಂಟು ಪತ್ನಿಯರ ಜ್ಞಾಪಕಾರ್ಥವಾಗಿ ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದರು.
- ಮಧ್ವರರ ಅನುಯಾಯಿಗಳನ್ನು ಸದ್ವೈಷ್ಣವರೆಂದು ಕರೆಯಲಾಗಿದೆ.
- ಮಧ್ವರರು ಬದರಿಯಲ್ಲಿ ವಿಷ್ಣುವಿನಲ್ಲಿ ಐಕ್ಯರಾದರೆಂದು ಹೇಳಲಾಗಿದೆ.
- **ಮಧ್ವರರ ಕೃತಿಗಳು** – ಬ್ರಹ್ಮಸೂತ್ರಭಾಷ್ಯ, ಗೀತಭಾಷ್ಯ, ಗೀತತಾತ್ಪರ್ಯ ನಿರ್ಣಯ, ಭಾಗವತ ತಾತ್ಪರ್ಯ ನಿರ್ಣಯ, ಬ್ರಹ್ಮಸೂತ್ರ ಮುಂತಾದವು.

ಮಧ್ವರರ ಬೋಧನೆಗಳು ಅಥವಾ ದ್ವೈತ ಸಿದ್ಧಾಂತ

- ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಮಧ್ವರರು ಹಲವು ತತ್ವಗಳನ್ನು ಬೋಧಿಸಿದ್ದಾರೆ.
- ದ್ವೈತ ಸಿದ್ಧಾಂತದಲ್ಲಿ ವಿಷ್ಣುವೇ ಸರ್ವತ್ತೋಮ. ದ್ವೈತವು ಈಶ್ವರ ಜೀವಾತ್ಮ ಮತ್ತು ಜಡ ಪ್ರಪಂಚ ಎಂಬ ತ್ರಿರತ್ನಗಳಿಂದ ಕೂಡಿದೆ.
- ಜಗತ್ತು ಮಿಥ್ಯವಲ್ಲ, ಸತ್ಯವೇ, ಜಡ ಪ್ರಪಂಚವು ಬ್ರಹ್ಮನ ಸೃಷ್ಟಿಯೆಂದರು.
- ದ್ವೈತ ಮತದಲ್ಲಿ ಪಂಚ ಭೇದಗಳು ಮತ್ತು ನವರತ್ನಗಳಿವೆ.
- ಮಧ್ವರರು ಜೀವಾತ್ಮದ ಮುಕ್ತಿಗೆ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದರು.
- ಮಧ್ವರರ ದ್ವೈತ ಮತವು ವಿಜಯನಗರ ಕಾಲದಲ್ಲಿ **ದಾಸಕೂಟದ** ಬೆಳವಣಿಗೆಗೆ ಕಾರಣವಾಯಿತು.
- ಪುರಂದರದಾಸರು ಮತ್ತು ಕನಕದಾಸರು ತಮ್ಮ ಕೀರ್ತನೆಗಳಿಂದ ದ್ವೈತ ತತ್ವಗಳನ್ನು ಪ್ರಚಾರ ಮಾಡಿದರು.
- ಮಧ್ವ ಪರಂಪರೆಯ ವೈಷ್ಣವ ಮಠಗಳೆಂದರೆ ಉಡುಪಿ, ಕುಂದಾಪುರ, ಗೋಕರ್ಣ, ಸೋಸಲೆ, ಕಾಗಿನೆಲೆ, ಕೂಡಲಿ, ಮುಳುಬಾಗಿಲು ಮತ್ತು ಮಂತ್ರಾಲಯ.

16.2 ಸೂಫಿ ಪಂಥ (Sufism)

- ಮುಸ್ಲಿಂರ ಸಂಪರ್ಕದಿಂದಾಗಿ ಹಿಂದೂ ಸಮಾಜದಲ್ಲಿ ಭಕ್ತಿ ಚಳುವಳಿ ಮತ್ತು ಹಿಂದೂಗಳ ಪ್ರಭಾವದಿಂದಾಗಿ ಇಸ್ಲಾಂನಲ್ಲಿ ಶುದ್ಧೀಕರಣ ಚಳುವಳಿಗಳು ಹುಟ್ಟಿಕೊಂಡವು.
- ಸೂಫಿ ಎಂಬ ಪದವು **ಸಾಪ್** ಎಂಬ ಪದದ ಉತ್ಪನ್ನವಾಗಿದ್ದು. ಇದರರ್ಥ ಶುದ್ಧ ಅಥವಾ ಶುಚಿ ಎಂದಾಗುತ್ತದೆ. ಇದರ ಮೂಲ ಉದ್ದೇಶ ಸತ್ಯಾನ್ವೇಷಣೆ.
- ಸೂಫಿ ಪಂಥವು ಇಸ್ಲಾಂ ಧರ್ಮದ ಆಧ್ಯಾತ್ಮಿಕತೆಯ ಮತ್ತೊಂದು ಹೆಸರಾಗಿದೆ. ಸೂಫಿ ಪಂಥಕ್ಕೆ ಕುರಾನ್ ಮುಲಾಧಾರ, ಸೂಫಿ ಪಂಥವು ಜೊರಾಷ್ಟ್ರೀಯ, ಕ್ರೈಸ್ತಮತ, ಬೌದ್ಧ ಹಾಗೂ ಹಿಂದೂ

ಧರ್ಮಗಳ ಹಲವಾರು ಉತ್ತಮಾಂಶಗಳನ್ನು ಒಳಗೊಂಡಿದೆ.

- ಸೂಫಿ ಚಳುವಳಿ ಮೊದಲು ಪ್ರಾರಂಭವಾದುದು **ಪರ್ಶಿಯಾದಲ್ಲಿ.** ಈ ಪಂಥದ ಚಿಂತನೆಗಳು ಹೆಚ್ಚು ಕಡಿಮೆ ವೇದಾಂತ ತತ್ವಜ್ಞಾನವನ್ನು ಹೋಲುತ್ತವೆ.
- **12ನೇ ಶತಮಾನದ** ವೇಳೆಗೆ ಸೂಫಿ ಸಂತರುಗಳು ಭಾರತಕ್ಕೆ ಬರಲಾರಂಭಿಸಿದರು. ಅವರಲ್ಲಿ ಮೊದಲಿಗರೆಂದರೆ ಹಜರತ್ **ಕ್ವಾಜಾ ಮೊಹಿನುದ್ದೀನ್ ಚಿಸ್ತಿ.**
- ಸೂಫಿ ಪಂಥದ ಎರಡು ಪಂಗಡಗಳೆಂದರೆ 1. ಚಿಸ್ತಿ ಪಂಗಡ, 2. ಸುರ್ಹಾವರ್ದಿ ಪಂಗಡ
- **ಸೂಫಿ ಪಂಥದ ಪ್ರಮುಖ ಪ್ರಚಾರಕರು** – ಹಜರತ್ ಕ್ವಾಜಾ ನಿಜಾಮುದ್ದೀನ್ ಔಲಿಯ, ನಾಸೀರುದ್ದೀನ್ ಚೇರಾಗ್ ಮತ್ತು ಪತೇಪುರ್ ಸಿಕ್ರಿಯ ಸಲೀಂ ಚಿಸ್ತಿ ಮುಂತಾದವರು.
- ಸೂಫಿಗಳು ಈಶ್ವರ ಮತ್ತು ಅಲ್ಲಾ ಇಬ್ಬರೂ ಒಬ್ಬನೇ ಈ ವಿಚಾರದಲ್ಲಿ ಕಲಹ ಬೇಡ ಎಲ್ಲಾ ಮಾನವರನ್ನು ಸಮಾನತೆಯಿಂದ ಕಾಣುವುದು ಎಲ್ಲಾ ವರ್ಗದ ಜನರು ಸಮಾನರು ಎಂದು ಕರೆಕೊಟ್ಟರು. (ಸೂಫಿಗಳು ರೂಢವಾದಿ ಇಸ್ಲಾಂ ಆಚರಣೆಗಳನ್ನು ಅನುಸರಿಸಲಿಲ್ಲ)
- ಮೊಗಲರ ಅಕ್ಬರನ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಸೂಫಿ ಸಂತರಿಂದಾಗಿ ಮುಂದೆ **ದೀನ್–ಇ–ಇಲಾಹಿ** ಪಂಥ ಸ್ಥಾಪಿಸಲು ಕಾರಣವಾಯಿತು. ಅಕ್ಬರನ ಮೇಲೆ ಅಬುಲ್ ಫಜಲ್ ಮತ್ತು ಅಬುಲ್ ಫೈಜಿ ಪ್ರಭಾವ ಬಿರಿದರು.
- ಸೂಫಿ ಪಂಥ ಶಹಜಹಾನನ ಕಾಲದವರೆಗೆ ಅಸ್ತಿತ್ವದಲ್ಲಿದ್ದು ಔರಂಗಜೇಬ್ ಕಾಲದಲ್ಲಿ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತು.

ಸೂಫಿ ತತ್ವಗಳು

1. ಸೂಫಿಗಳು ಹಿಂದೂ ವೇದಾಂತದಿಂದ ಪ್ರಭಾವಿತರಾಗಿದ್ದರು.
2. ಸೂಫಿಗಳು ಸರಳತೆ ಮತ್ತು ಏಕದೇವತಾರಧನೆಯನ್ನು ಭೋಧಿಸಿದರು.
3. ದೇವರು ಒಬ್ಬನೆ ಆತನೇ ಸರ್ವಶಕ್ತವೆಂದರು.
4. ದೇವರ ಪ್ರೀತಿಗೆ ಪಾತ್ರನಾಗಬೇಕಾದರೆ ಇತರೆ ಮಾನವರನ್ನು ಪ್ರೀತಿಸಬೇಕು.
5. ಉತ್ತಮ ಕಾಯಕ ತತ್ವಕ್ಕೆ ಆದ್ಯತೆ.
6. ಎಲ್ಲಾ ಧರ್ಮಗಳು ಮೂಲಭೂತವಾಗಿ ಒಳ್ಳೆಯವಾಗಿವೆ.
7. ಜಾತಿ ಪದ್ಧತಿಯ ವಿರೋಧ.
8. ಮುಕ್ತಿಯ ಬಗೆಗೆ ಹೆಚ್ಚಿನ ಆದ್ಯತೆ.
9. ಆಧ್ಯಾತ್ಮಿಕತೆಯ ಸ್ಥಾಪನೆ.
10. 16ನೇ ಶತಮಾನದಲ್ಲಿ ದಖನ್ನಿನ ಸೂಫಿ ಚಳುವಳಿ ಕೇಂದ್ರ **ಗುಲ್ಬರ್ಗಾ.**

ಪರಿಣಾಮಗಳು

1. ಹಿಂದೂ ಮತ್ತು ಮುಸ್ಲಿಂರಲ್ಲಿ ಐಕ್ಯತೆಯನ್ನು ಬೆಳೆಸಿತು.
2. ಸೂಫಿ ಪಂಥ ಭಕ್ತಿ ಪಂಥದ ಜನಪ್ರಿಯತೆಗೆ ಕಾರಣವಾಯಿತು.
3. ಮಧ್ಯಕಾಲೀನ ಮುಸ್ಲಿಂ ದೊರೆಗಳ ಆಡಳಿತದ ಮೇಲೆ ಪ್ರಭಾವ ಬೀರಿತು.

ಪಂಥ	ಸ್ಥಾಪಕರು
ಚಿಸ್ತಿ	ಖ್ವಾಜ ಮುಯಿನುದ್ದಿನ್ ಚಿಸ್ತಿ,
ಸುರ್ಹವರ್ದಿ	ಶೇಕ್ ಷಿಹಾವುದ್ದಿನ್ ಜಕಾರಿಯಾ
ಕ್ವಾದಿರಿಯಾ	ಶನಾಯ ಮತುಲ್ಲಾಖ್ವಾದರಿ
ನಕ್ಷ ಬಂಧಿಯಾ	ಖ್ವಾಜಬಾಕಿಬಿಲ್ಲ
ಫಿರ್ದೂಸ್	ಶೇಕ್ ಬದ್ರುದ್ದೀನ್ ಸಮರ್ ಖಂಡಿ
ಶತ್ತಾರಿ	ಶೇಕ್ ಅಬ್ದುಲ್ಲಾ ಶತ್ತಾರಿ

ಸೂಪಿ ಸಂತರು	ಬಿರುದು
ಶೇಕ್ ನಿಜಾಮುದ್ದೀನ್ ಔಲಿಯ	ಮಹಮದ್ ಐ ಇಲಾಯಿ(ದೇವರಿಗೆ ಪ್ರೀಯನಾದವನು)
ಶೇಕ್ ನಾಸಿರುದ್ದೀನ್ ಮಹಮದ್	ಚಿರಾಗ್ ಐ ದೆಹ್ಲಿ (ದೆಹಲಿಯ ದೀಪ)
ಸಯ್ಯದ್ ಮಹಮದ್ ಜೇಸು ದರಜ್	ಬಂದೇನವಾಜ್ (ದೇವರ ಸಂತ)
ಬಾಬಾ ಫರಿದ್	ಗಂಜ್ ಇ ಶಕರ್

16.3 ಭಕ್ತಿ ಪಂಥ (Bhakti Movement)

- ಭಕ್ತಿ ಎಂದರೆ ದೇವರಿಗೆ ಸಮರ್ಪಿಸಿಕೊಳ್ಳುವುದು ಅಥವಾ ಭಗವಂತನಲ್ಲಿ ಅಚಲವಾದ ನಂಬಿಕೆ ಮತ್ತು ಪರಿಶುದ್ಧ ಪ್ರೇಮದಿಂದ ಧ್ಯಾನಾಸಕ್ತರಾಗುವುದು ಎಂದರ್ಥ
- ಭಕ್ತಿ ಎಂಬ ಪದವು **ಭಜ್** ಎಂಬ ಪದದ ಉತ್ಪನ್ನವಾಗಿದೆ.
- ಇಸ್ಲಾಂ ಧರ್ಮದ ಏಕೇಶ್ವರವಾದ ಮತ್ತು ವಿಶ್ವಭ್ರಾತೃತ್ವವನ್ನು ಭಕ್ತಿ ಪಂಥ ಹೊಂದಿತ್ತು.

ತತ್ವಗಳು

1. ದೇವರು ಒಬ್ಬನೆ.
2. ಭಕ್ತಿಯ ಮೂಲಕ ಮುಕ್ತಿಯನ್ನು ಎಲ್ಲರೂ ಪಡೆಯಬಹುದು.
3. ಭಕ್ತಿಯ ಮೂಲಕ ಮುಕ್ತಿಯನ್ನು ಪಡೆಯಲು ಗುರುವಿನ ಮಾರ್ಗದರ್ಶನ ಬೇಕು.
4. ರಾಮ ಮತ್ತು ಕೃಷ್ಣ ಇವರಿಬ್ಬರು ದೇವರ ಅವತಾರಗಳು.
5. ವಿಶ್ವಭ್ರಾತೃತ್ವ
6. ಸಾಮಾಜಿಕ ದುಷ್ಟ ಪದ್ಧತಿಗಳ ಖಂಡನೆ.
7. ಅನವಶ್ಯಕ ಯಜ್ಞಯಾಗಾದಿ ಮತ್ತು ಗೊಡ್ಡು ಸಂಪ್ರದಾಯಗಳನ್ನು ವಿರೋಧಿಸುವುದು.

ರಮಾನಂದ (Ramananda 1360 - 1470)

- 15ನೇ ಶತಮಾನದ ಮೊದಲ ಭಾಗದಲ್ಲಿನ ಮೊದಲ ಶ್ರೇಷ್ಠ ಭಕ್ತಿ ಸಂತ ರಮಾನಂದ. ಇವರು ಅಲಹಾಬಾದಿನ **ಕನ್ಯಕುಬ್ಜ** ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು.
- ಇವರು ಹಿಂದಿ ಭಾಷೆಯಲ್ಲಿ ಭಕ್ತಿ ಪಂಥದ ತತ್ವಗಳನ್ನು ಪ್ರಚಾರ

ಮಾಡಿದ ಮೊದಲಿಗರು.

- ಇವರ ಶಿಷ್ಯರು (12 ಜನ): ಅನಂತಾನಂದ, ಕಬೀರ್, ಪೀಪಾ, ಭಾವಾನಂದ, ಸುಖಾ ಸಮ್ಸರಾ, ಪದ್ಮಾವತಿ, ನರಹರಿ, ರಾಯದಾಸ, ಧಾನ, ನೈನ ಮತ್ತು ಸುರ್ಸರನ ಪತ್ನಿ ಮುಂತಾದವರು.
- ದೇವರ ಮುಂದೆ ಶೂದ್ರನೂ ಸಮಾನ ಎಂದರು.
- ಭಕ್ತಿ ಚಳುವಳಿ ಮೊದಲು ಆರಂಭವಾದುದು ದಕ್ಷಿಣದಲ್ಲಿ. ಇದನ್ನು ಉತ್ತರ ಭಾರತಕ್ಕೆ ಕೊಂಡೊಯ್ದ ಸಂತ ಕಬೀರನಾಗಿದ್ದಾನೆ.
- ರಮಾನಂದರ ಒಂದು ಹಾಡು ಗುರುಗ್ರಂಥ ಸಾಹೇಬಕ್ಕೆ ಸೇರಿದೆ.
- ಇಲ್ಲಿ ಯಾರು ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ, ಎಲ್ಲಾ ಮಾನವರು ಸಹೋದರರು ಎಂದಿದ್ದಾರೆ.
- ದಕ್ಷಿಣ ಮತ್ತು ಉತ್ತರಗಳ ನಡುವಿನ ಸೇತುವೆ ಎಂದು ವರ್ಣಿಸಲ್ಪಟ್ಟ ಸಂತ ರಮಾನಂದರಾಗಿದ್ದಾರೆ.

ಕಬೀರ (Kabir 1440-1510)

- ಸಿಕಂದರ್ ಲೋಧಿಯ ಸಮಕಾಲಿನ ಕಬೀರ್. ರಮಾನಂದರ ನೆಚ್ಚಿನ ಶಿಷ್ಯ ಹಾಗೂ ರಮಾನಂದರ ತತ್ವಗಳಿಗೆ ನಿರ್ದಿಷ್ಟ ಸ್ವರೂಪ ಕೊಟ್ಟವನು ಕಬೀರ್ ನಾಗಿದ್ದಾನೆ.
- ಕಬೀರರು ಮುಸ್ಲಿಂ ಸಂತ **ಪೀರ್‌ಕಾಕಿಯ** ತತ್ವಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದರು. ಇವನ ತತ್ವಗಳನ್ನು **ದೋಹಾಗಳಲ್ಲಿ** (ಎರಡು ಸಾಲಿನ ಪದ್ಯ) ಕಾಣಬಹುದು.
- ಕಬೀರನು ಹಿಂದೂ ಮತ್ತು ಮುಸ್ಲಿಂರಿಬ್ಬರು **'ಒಂದೇ ಮಣ್ಣಿನಿಂದ ಮಾಡಿದ ಮಡಿಕೆಗಳು'** ಎಂದು ಹೇಳಿದ್ದಾರೆ.
- ಕಬೀರರು ಏಕೇಶ್ವರವಾದವನ್ನು ಪ್ರತಿಪಾದಿಸಿದರು. ಇವರು ರಾಮನ ಭಕ್ತರಾಗಿದ್ದರು. ಮುಸ್ಲಿಂರ ನಮಾಜ್ ಅಲ್ಲಾ ಮತ್ತು ಹಿಂದೂಗಳ ಹರಿ ಇಬ್ಬರೂ ಒಬ್ಬನೇ ಆದರೆ ಬೇರೆ ಬೇರೆ ಹೆಸರಿನಿಂದ ಕಾಣಲು ಪ್ರಯತ್ನವಷ್ಟೇ ಎಂದರು.
- ಹಿಂದೂ ಮತ್ತು ಮುಸ್ಲಿಂರ ರಾಮ-ಅಲ್ಲಾ ಇವು ಒಂದೇ ದೇವರ ಹಲವು ಹೆಸರುಗಳು ಎಂದರು.
- ಕಬೀರರು ಉತ್ತರಪ್ರದೇಶದ **ಮಾಘರ್** ಎಂಬಲ್ಲಿ ಮರಣ ಹೊಂದಿದರು.
- ಕಬೀರರ ದೋಹಗಳು ಮತ್ತು ಸಖಿಗಳು **ಬಿಜಕ್** ಎಂಬ ಗ್ರಂಥದಲ್ಲಿವೆ.

ಕಬೀರರ ತತ್ವಗಳು

1. ಸಂಸ್ಕೃತವು ಬಾವಿಯಲ್ಲಿರುವ ನೀರು, ಜನಸಾಮಾನ್ಯರ ಭಾಷೆ ಹರಿಯುತ್ತಿರುವ ನೀರು ಎಂದರು.
2. ಕಲ್ಲನ್ನು ಪೂಜಿಸುವ ಮೂಲಕ ಮೋಕ್ಷ ಪಡೆಯುವುದಾದರೆ ನಾನು ಪರ್ವತವನ್ನು ಪೂಜಿಸುತ್ತೇನೆ.
3. ಸ್ನಾನ ಮಾಡುವ ಮೂಲಕ ಮೋಕ್ಷ ಪಡೆಯುವುದಾದರೆ ಕಪ್ಪೆಗಳು [illegible]
4. ಪೂರ್ಣ ಬೆತ್ತಲೆಯಾಗಿರುವ ಮೂಲಕ ಹರಿಯನ್ನು ಕಾಣುವುದಾದರೆ ಬಹಳ ದಿನ ದರಿದ್ರನು ಮೊದಲು ದೇವರನ್ನು ಕಾಣುವನು.
5. ಮನುಷ್ಯನು ನೂರಾರು ಗ್ರಂಥಗಳನ್ನು ಓದಿದರೂ ಪಂಡಿತನಾಗಲಾರ. ಯಾವ ಪಂಡಿತನು ಎರಡೂವರೆ ಅಕ್ಷರಗಳಾದ ಪ್ರೇಮ್ ಎಂಬುದನ್ನು ಅರ್ಥಮಾಡಿಕೊಳ್ಳುವುದಿಲ್ಲವೋ ಅವನು ಪಂಡಿತನಾಗಲಾರ.
6. ಚಿನ್ನವು ಒಂದೇ ಆದರೆ ಆಭರಣಗಳನ್ನು ಮಾಡಿದಾಗ ಆರು ವಿವಿಧ ಆಕಾರಗಳನ್ನು ಪಡೆಯುತ್ತವೆ. ಹಾಗೆಯೇ ಧರ್ಮ ಮತ್ತು ದೇವರುಗಳ ಹೆಸರುಗಳು ಅಸಂಖ್ಯವಾದರೂ ದೇವರು ಒಬ್ಬನೇ ಎಂದು ತಿಳಿಸಿದ್ದಾರೆ.

ದಾದುದಯಾಳ್ (Dadudayal 1544-1603)

- ಕಬೀರರ ಶ್ರೇಷ್ಠ ಅನುಯಾಯಿಗಳಲ್ಲಿ ದಾದುದಯಾಳ್ ಒಬ್ಬರು. ಇವರ ಅನುಯಾಯಿಗಳನ್ನು **ದಾದಿ ಪಂಥಿಗಳೆಂದು** ಕರೆಯುತ್ತಾರೆ.
- ಇವರು ಬ್ರಹ್ಮ ಸಂಪ್ರದಾಯ ಪಂಥವನ್ನು ಸ್ಥಾಪಿಸಿದರು.
- ಇವರ ತತ್ವಗಳನ್ನು ಇವರ ಅನುಯಾಯಿಗಳು **ಬನಿ** ಎಂಬ ಪುಸ್ತಕದಲ್ಲಿ ಸಂಗ್ರಹಿಸಿದರು.
- **ಮೆಲುಕ್ ದಾಸ:-** ಈತನು ಕೂಡ ಕಬೀರರ ಅನುಯಾಯಿ. ಸಂಸಾರಿಯಾಗಿದ್ದುಕೊಂಡೇ ತತ್ವ ಪ್ರಚಾರ ಮಾಡಿದ, ಪ್ರಮುಖ ಸಂತನಾಗಿದ್ದಾನೆ.

ವಲ್ಲಭಾಚಾರ್ಯ (Vallabacharya)

- ವಲ್ಲಭರು ಬ್ರಾಹ್ಮಣ ಕುಟುಂಬದಲ್ಲಿ ವಾರಣಾಸಿಯಲ್ಲಿ 1479ರಲ್ಲಿ ಜನಿಸಿದರು. ವೈಷ್ಣವ ಸಂತರಲ್ಲೇ ವಲ್ಲಭಾಚಾರ್ಯ ಪ್ರಮುಖರಾಗಿದ್ದಾರೆ.
- ಕೃಷ್ಣದೇವರಾಯನ ಆಸ್ಥಾನದಲ್ಲಿದ್ದುಕೊಂಡು ಅನೇಕ ಶೈವ ಪಂಡಿತರನ್ನು ವಾದದಲ್ಲಿ ಸೋಲಿಸಿ ವೈಷ್ಣವ ತತ್ವವನ್ನು ಪ್ರತಿಪಾದಿಸಿದರು.
- ವಿಜಯನಗರ ಆಸ್ಥಾನದಲ್ಲಿ ಇವರಿಗೆ **ಆಚಾರ್ಯ** ಎಂಬ ಪ್ರಶಸ್ತಿ ನೀಡಲಾಗಿತ್ತು.
- ಇವರು ಶಂಕರಾಚಾರ್ಯರ ಅದ್ವೈತ ಸಿದ್ಧಾಂತವನ್ನು ಕೇವಲ ಅಥವಾ ಸಾಧಾರಣ ಸಿದ್ಧಾಂತ ಎಂದು ಕರೆದು ತಮ್ಮ ಶುದ್ಧ ಅದ್ವೈತವನ್ನು ಪ್ರತಿಪಾದಿಸಿದರು. ಕೃಷ್ಣನೇ ಪರಮಾತ್ಮನ ಸ್ವರೂಪ ಆತನನ್ನು ಪ್ರೀತಿಸುವ ಮೂಲಕ ಮೋಕ್ಷ ಪಡೆಯುವುದು ಈ ಸಿದ್ಧಾಂತದ ತಿರುಳಾಗಿತ್ತು.

ಚೈತನ್ಯ (Chaitanya) **(1486-1533)**

- ಚೈತನ್ಯರ ಮೂಲ ಹೆಸರು ವಿಶ್ವಂಬರ. ಇವರು ಪಶ್ಚಿಮ ಬಂಗಾಳದ ನಾಡಿಯಾ ಎಂಬಲ್ಲಿ ಜನಿಸಿದರು. ಚೈತನ್ಯರು ಕೃಷ್ಣನ ಪರಮಭಕ್ತ ಹಾಗೂ ಇವರ ಪಂಥ ಬಂಗಾಳದ ವೈಷ್ಣವ ಧರ್ಮವಾಗಿತ್ತು.
- ಚೈತನ್ಯರ ಪ್ರಸಿದ್ಧ ಜೀವನ ಚರಿತ್ರೆ **'ಚೈತನ್ಯ ಚರಿತಾಮೃತ'** ಇದರ ಕರ್ತೃ ಕೃಷ್ಣದಾಸ ಕವಿರಾಜ.

- ಬಂಗಾಳದ ಜನರು ಚೈತನ್ಯರನ್ನೇ ಶ್ರೀಕೃಷ್ಣನ ಅವತಾರವೆಂದು ಪೂಜಿಸಿ **ಚೈತನ್ಯ ಮಹಾಪ್ರಭು** ಎಂದು ಕರೆಯುತ್ತಾರೆ.
- ಇವರು ರಚಿಸಿದ ಸಿದ್ದಾಂತ **ಅಚಿಂತ್ಯ ಬೇಧಬೇಧ**. ಇವರ ಭಕ್ತಿಯ ವಿಧ **ರಾಗಮಾರ್ಗ**ವಾಗಿದೆ.

ಮೀರಾಬಾಯಿ (1498-1546) (Mirabai)

- ಮೀರಾಬಾಯಿ 16ನೇ ಶತಮಾನದ ಶ್ರೇಷ್ಠ ಸಂತಳು. ಈಕೆ ರಾಥೋಡದ ರಾಜ ರತ್ನಸಿಂಗ್ ರಾಮೋದನ ಒಬ್ಬಳೇ ಮಗಳು. ಇವಳು ಮೇವಾರದ ರಾಣಾಸಂಗನ ಜೊತೆ ವಿವಾಹವಾಗಿದ್ದಳು.
- ಶ್ರೀಕೃಷ್ಣನ ಪರಮ ಭಕ್ತೆಯಾಗಿದ್ದು **ಭೋಜ್‌ಪುರಿ** ಭಾಷೆಯಲ್ಲಿ ಭಜನೆಗಳನ್ನು ಹಾಡಿದಳು.
- ಒಮ್ಮೆ ಅಕ್ಬರ ಮತ್ತು ತಾನ್‌ಸೇನ್‌ರು ಸಹ ಮೀರಾಬಾಯಿಯ ಭಜನೆಯನ್ನು ಕೇಳಿ ಪ್ರಭಾವಿತರಾದರು.

ಸೂರ್‌ದಾಸ (Surdas)

- ಸೂರ್‌ದಾಸನು ಶ್ರೀಕೃಷ್ಣನ ಪರಮಭಕ್ತ, ತನ್ನ ಕೃತಿಗಳ ಮತ್ತು ಕವಿತೆಗಳ ಮೂಲಕ ಭಾರತೀಯರ ಮೇಲೆ ಗಾಢವಾದ ಪ್ರಭಾವವನ್ನು ಬಿರಿದನು.
- ಇವನ ಶ್ರೇಷ್ಠ ಕೃತಿಗಳೆಂದರೆ, ಸಾಹಿತ್ಯ ರತ್ನ, ಸೂರ್‌ಸಾಗರ್. ಸೂರ್‌ಸಾಗರನಲ್ಲಿ ಶ್ರೀಕೃಷ್ಣನ ಬಾಲ್ಯಲೀಲೆಗಳನ್ನು ಸಂಪೂರ್ಣವಾಗಿ ವಿವರಿಸಿದ್ದಾರೆ.

ತುಳಸೀದಾಸರು (1532 - 1623) (Tulsidas)

- ತುಳಸೀದಾಸರನ್ನು ಶ್ರೇಷ್ಠಕವಿ ಮತ್ತು ಭಕ್ತ ಎಂದು ಆಧುನಿಕ ವಿದ್ವಾಂಸರು ಹೇಳಿದ್ದಾರೆ. ಇವರು ರಾಮನ ಭಕ್ತರಾಗಿದ್ದರು. ತುಳಸೀದಾಸರು ರಾಮಚರಿತ ಮಾನಸ, ಗೀತಾವಳಿ, ಕಥಾವಳಿ, ವಿನಯಪತ್ರಿಕೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಶಂಕರದೇವ (1449 - 1568) (Shankaradeva)

- ಮಧ್ಯಕಾಲೀನ ಅಸ್ಸಾಂನ ಶ್ರೇಷ್ಠ ಧರ್ಮಸುಧಾರಕ ಶಂಕರದೇವ. ಇವನ ಏಕಶರಣ ಧರ್ಮಾತ್ಮ ಸಂಪೂರ್ಣವಾಗಿ ಕೃಷ್ಣ ಮತ್ತು ವಿಷ್ಣುವನ್ನು ಭಕ್ತಿಯಿಂದ ಪೂಜಿಸುವುದು ಇವರ ಮೂಲ ತತ್ವವಾಗಿತ್ತು.
- ಈ ಏಕಶರಣ ಧರ್ಮವು ಏಕೇಶ್ವರವಾದ ಎಂದು ಬಹಳ ಪ್ರಸಿದ್ಧಿ ಪಡೆದಿದೆ. ಇವನ ಬೋಧನೆಗಳ ಸಾರಾಂಶವನ್ನು **ಮಹಾಪುರುಷ್ಯ ಧರ್ಮ** ಎಂದು ಕರೆಯುತ್ತಾರೆ. ಈತನ ಕೃತಿ ಏಕಶರಣ ಧರ್ಮ ಅಥವಾ ಮಹಾಪುರುಷೀಯಧರ್ಮ.

ನರಸೀ ಮೆಹತಾ (Narasi Mehta)

- ನರಸೀಮೆಹತಾ ಗುಜರಾತಿನ ಶ್ರೇಷ್ಠ ಸಂತ. ಗುಜರಾತಿ ಭಾಷೆಯಲ್ಲಿ ರಾಧೆ ಮತ್ತು ಕೃಷ್ಣನ ಪ್ರೇಮವನ್ನು ಕವಿತೆಗಳಲ್ಲಿ ಬರೆದರು.
- ಇವರು ಗಾಂಧೀಜಿಯವರ ಅತ್ಯಂತ ಪ್ರಿಯವಾದ **ವೈಷ್ಣವ ಜನತೇ** ಎಂಬ ಭಜನೆಯನ್ನು ರಚಿಸಿದ್ದಾನೆ.

ಜಗಜೀವನ್ (Jagajivan)

- ಇವನು ಸತ್‌ನಾಮಿ ಪಂಥದ ಸ್ಥಾಪಕ. ಇವನು ಪ್ರೀತಿಯ ಮೂಲಕ ಹಿಂದೂ ಮುಸ್ಲಿಂರನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದನು.

1. ದರಿಯಾ ಸಾಹೇಬ್ (Dariyasahib)

- ದರಿಯಾ ಸಾಹೇಬ್ ಉಜ್ಜೈನಿ ಮನೆತನಕ್ಕೆ ಸೇರಿದ್ದು ಕಬೀರನ ಬೋಧನೆಗಳಿಂದ ಪ್ರಭಾವಿತನಾಗಿದ್ದನು.
- ಮುಸ್ಲಿಂರಂತೆ ನಿಂತು ಮಾಡುವ ಪ್ರಾರ್ಥನೆಯನ್ನು ಕೊನೀಸ್ ಎಂದು, ಕುಳಿತು ಮಾಡುವ ಪ್ರಾರ್ಥನೆಗೆ ಸಿಜ್ದಾ ಎಂದು ಕರೆಯುತ್ತಿದ್ದರು.

ಮಹಾರಾಷ್ಟ್ರದ ಭಕ್ತಿ ಸಂತರು (ಮಹಾರಾಷ್ಟ್ರ ಧರ್ಮ) (Proponents of Maharashtra Dharma)

- ಭಕ್ತಿ ಚಳುವಳಿಯು **ಪಂಡರಾಪುರ ಚಳುವಳಿ, ಮಹಾರಾಷ್ಟ್ರದ ಧರ್ಮ** ಎಂದು ಪ್ರಸಿದ್ಧಿ ಪಡೆದಿದೆ.
- ಮಹಾರಾಷ್ಟ್ರದಲ್ಲಿ ಈ ಚಳುವಳಿಯಿಂದಾಗಿ ಮರಾಠಿ ಸಾಹಿತ್ಯದ ಬೆಳವಣಿಗೆ, ಸ್ತ್ರೀಯರ ಉದ್ಧಾರ, ಸಂಸಾರದ ಪಾವಿತ್ರತೆ ಹಾಗೂ ಮಾನವೀಯ ಬೆಳವಣಿಗೆಗೆ ಕಾರಣವಾಯಿತು.
- ಮಹಾರಾಷ್ಟ್ರದಲ್ಲಿ ಆಧ್ಯಾತ್ಮಿಕ ವಿಚಾರಣೆಯನ್ನು ಆರಂಭಿಸಿದ ಸಂತ, **ಜ್ಞಾನದೇವ**
- ಮಹಾರಾಷ್ಟ್ರ ಧರ್ಮದ 2 ಪಂಗಡಗಳು, 1. ವರ್ಕಾರಿ ಪಂಥ, 2. ದರ್ಕಾರಿ ಪಂಥ

1. **ಜ್ಞಾನದೇವ** (Jnanadeva) (13ನೇ ಶತಮಾನ) – ವರ್ಕಾರಿ ಪಂಥ: ಮಹಾರಾಷ್ಟ್ರದಲ್ಲಿ ಉದಯಿಸಿದ ಭಕ್ತಿ ಪಂಥದ ಆರಂಭದ ಸಂತ ಜ್ಞಾನದೇವ. ಇವರು ಜ್ಞಾನೇಶ್ವರ ಎಂಬ ಭಾಷ್ಯ ಮತ್ತು ಅಮೃತಾನುಭವ ಮತ್ತು ಜಂಗದೇವ ಪ್ರಶಸ್ತಿ ಎಂಬ ಕೃತಿಗಳನ್ನು ಬರೆದಿದ್ದಾರೆ.
2. **ನಾಮದೇವ** (Namadeva) (ವರ್ಕಾರಿ ಪಂಥ): ನಾಮದೇವ ದರ್ಜಿ ಕುಟುಂಬದಲ್ಲಿ ಜನಿಸಿದನು. ಕೊಲೆ, ದರೋಡೆ, ಸುಲಿಗೆಗಳಲ್ಲಿ ತೊಡಗಿದ್ದ ಇವನು ಏಕದೇವತಾರಾಧನೆಯನ್ನು ಪ್ರತಿಪಾದಿಸಿದನು.
3. **ಏಕನಾಥ** (Ekanatha) ಏಕನಾಥರು ಪೈಥಾನ್‌ನಲ್ಲಿ ಜನಿಸಿದರು. ಇವರ ಅನುಭವ ಮತ್ತು ಚಿಂತನೆಗಳನ್ನು ಅಭಂಗಗಳಲ್ಲಿ ಕಾಣಬಹುದು.
4. **ತುಕರಾಮ್** (Tukaram) **(ವರ್ಕಾರಿ ಪಂಥ)** ತುಕರಾಮನು ಜ್ಞಾನದೇವ, ನಾಮದೇವ ಮತ್ತು ಏಕನಾಥರ ಕೃತಿಗಳನ್ನು ಅಭ್ಯಸಿಸಿ ಕೆಲವು ಅಭಂಗಗಳನ್ನು ರಚಿಸಿದನು ಇವು ಮಹಾರಾಷ್ಟ್ರದಲ್ಲಿ ಜನಪ್ರಿಯವಾಗಿವೆ. ಈತನು ಶಿವಾಜಿಯ ಸಮಕಾಲೀನ ಸಂತ. ತುಕಾರಾಮ್ ಕಬೀರ ನಿಲುವುಗಳನ್ನೇ ಹೊಂದಿದ್ದರು. (ಹಿಂದೂ ಮತ್ತು ಮುಸ್ಲಿಂ ನಂಬಿಕೆಯ ಒಂದುಗೂಡಿಸುವಿಕೆ).
5. **ರಾಮದಾಸ** (Ramdas) (1608-81) (ದರ್ಕಾರಿ ಪಂಥ ಸ್ಥಾಪಕ)

- ರಾಮದಾಸರು 1608ರಲ್ಲಿ ಜನಿಸಿದರು. ಕೃಷ್ಣಾ ನದಿಯ ದಂಡೆಯಲ್ಲಿರುವ ಜಂಪಾಲದಲ್ಲಿ ರಾಮದೇವರ ದೇವಾಲಯ ನಿರ್ಮಿಸಿ ಅಲ್ಲಿಯೇ ನೆಲೆಸಿದರು.

- ರಾಮದಾಸ ಶಿವಾಜಿಯ ಆಧ್ಯಾತ್ಮಿಕ ಗುರುವಾಗಿದ್ದರು. ಈಗಿನ ಅನುಭವಗಳನ್ನು ದಾಸಬೋದೆಯಲ್ಲಿ ಕಾಣಬಹುದು.

6. **ಬಾಹಿನಾಬಾಯಿ** Bahinabai

- ತುಕರಾಮನ ಪ್ರಮುಖ ಶಿಷ್ಯೆಯಾಗಿದ್ದು ಈಕೆ ರಾಮ, ಕೃಷ್ಣ ಮತ್ತು ಹರಿ ಎಂಬ ನಾಮಮಂತ್ರವನ್ನು ಗುರುವಿನಿಂದ ಪಡೆದಿದ್ದಳು.

ಭಕ್ತಿ ಚಳುವಳಿಯ ಪರಿಣಾಮಗಳು

1. ಹಿಂದೂ ಮತ್ತು ಮುಸ್ಲಿಂರ ನಡುವೆ ಸಾಮರಸ್ಯ ಉಂಟು ಮಾಡಿತು.
2. ಮತಾಂತರದ ಕಾರ್ಯ ನಿಧಾನಗೊಂಡಿತು.
3. ಬ್ರಾಹ್ಮಣರ ಪ್ರತಿಷ್ಠೆಗೆ ಪೆಟ್ಟು ಬಿದ್ದಿತು.
4. ಪ್ರಾದೇಶಿಕ ಭಾಷೆಗಳಲ್ಲಿ ಸಾಹಿತ್ಯದ ಬೆಳವಣಿಗೆಯಾಯಿತು.
5. ರಾಷ್ಟ್ರೀಯ ರಾಜ್ಯ ನಿರ್ಮಾಣ ಸಾಧ್ಯವಾಯಿತು.

16.4 ಸಿಖ್ ಚಳುವಳಿ (Sikh Movement)

ಗುರುನಾನಕ್ (1469-1538) (Gurunanak)

- ಇವನು ಮಧ್ಯಕಾಲೀನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕ. ಸಿಖ್ ಪಂಥದ ಸ್ಥಾಪಕ **ಗುರುನಾನಕ್**. ಇವರು 1469ರಲ್ಲಿ ತಾಳವಂಡಿಯಲ್ಲಿ ಜನಿಸಿದರು. ಇಂದು ಇದನ್ನು **ನಾನರಾನ ಸಾಹೇಬ್** ಎಂದು ಕರೆಯುತ್ತಾರೆ.
- ಗುರುನಾನಕ್‌ರು ಸಿಕಂದರ್ ಲೂದಿಯ ಸಮಕಾಲೀನರಾಗಿದ್ದರು.
- ಗುರುನಾನಕ್‌ರು ಸಿಲೋನ್, ಮೆಕ್ಕಾ, ಮದೀನ ಮುಂತಾದ ಕಡೆ ಸಂಚರಿಸಿ ಹಿಂದೂ ಮುಸ್ಲಿಂರ ಸಂಕುಚಿತ ಮನೋಭಾವನೆಯನ್ನು ವಿರೋಧಿಸಿದರು. ಇವರು ಹೋದಲ್ಲೆಲ್ಲಾ ಅಪಾರ ಅನುಯಾಯಿಗಳನ್ನು ಹೊಂದಿದ್ದರು. ಇವರೇ ಮುಂದೆ ಸಿಖ್ಖರೆಂದು ಪ್ರಸಿದ್ಧಿಗೆ ಬಂದರು.
- ಗುರುನಾನಕರು 1538ರಲ್ಲಿ ಮರಣ ಹೊಂದಿದ ನಂತರ **ಗುರು ಅಂಗದ** ಇವರ ಉತ್ತರಾಧಿಕಾರಿಯಾದನು.
- ತಮ್ಮ ಭೋಧನೆಗಳಲ್ಲಿ ಉಪನಿಷತ್ತುಗಳ ಏಕದೇವತಾವಾದವನ್ನು ಪುನರುದ್ಧಾರಗೊಳಿಸಿದರು. ಜಾತಿ ಪದ್ಧತಿಯನ್ನು ವಿರೋಧಿಸಿ, ವಿಗ್ರಹಾರಾಧನೆಯನ್ನು ಕಟುವಾಗಿ ಟೀಕಿಸಿ ದೇವರು ನಿರಾಕಾರ ಅವನಿಗೆ ಯಾವುದೇ ಆಕಾರವಿಲ್ಲ ಎಂದರು.
- ಗುರುನಾನಕ್‌ರ ನಂತರ ಬಂದ 09 ಮಂದಿ ಸಿಖ್ ಗುರುಗಳಿಂದ ಸಿಖ್ ಧರ್ಮ ಅಭಿವೃದ್ಧಿಗೊಂಡಿತು.

ಗುರು ಅಂಗದ (1538-52) (Guru Angada)

- ಸಿಖ್‌ರ ಎರಡನೇ ಗುರು ಹಾಗೂ ಗುರುನಾನಕರ ಉತ್ತರಾಧಿಕಾರಿ ಗುರು ಅಂಗದ. ಇವನು ಸಿಖ್ ಧರ್ಮ ಜನಪ್ರಿಯಗೊಳಿಸದಿದ್ದರೆ ಅದು ಹಿಂದೂ ಧರ್ಮದಲ್ಲಿ ವಿಲೀನವಾಗಿ ಹೋಗುತ್ತಿತ್ತು.
- ಅಂಗದನು ಪವಿತ್ರ ಲಿಪಿಯಾದ **'ಗುರುಮುಖಿ'**ಯನ್ನು ಸಂಸ್ಕೃತಕ್ಕೆ ಬದಲಾಗಿ ಬಳಕೆಗೆ ತಂದನು. ಗುರುನಾನಕರ ಬೋಧನೆ ಮತ್ತು ಜೀವನಚರಿತ್ರೆಗೆ ನಿರ್ದಿಷ್ಟ ಸ್ವರೂಪವನ್ನು ಕೊಟ್ಟನು.

ಗುರು ಅಮರದಾಸ (1552-74) (Guru Amaradas)

- ಇವನು ಸಿಖ್ಖರ ಮೂರನೇ ಗುರು ಮತ್ತು ಗುರು ಅಂಗದನ ನಿಷ್ಠಾವಂತ ಶಿಷ್ಯನಾಗಿದ್ದವನು ಗುರು ಅಮರದಾಸ. ಇವನು ಅಕ್ಬರನ ಸಮಕಾಲೀನನಾಗಿದ್ದನು.
- ಸತಿ ಪದ್ಧದತಿಯನ್ನು ಅಕ್ಬರ್‌ನಿಗಿಂತ ಮೊದಲು ವಿರೋಧಿಸಿದವನು ಗುರು ಅಮರದಾಸ.

ಕಾರ್ಯಗಳು

1. ಗೋವಿಂದ ಪಾಲದಲ್ಲಿ ಪ್ರಸಿದ್ಧ ಬಾಹೋಲಿಯನ್ನು ನಿರ್ಮಿಸಿದನು. ಇದು ಮುಂದೆ ಸಿಖ್‌ರಿಗೆ ಪವಿತ್ರ ಸ್ಥಳವಾಯಿತು
2. ಲಂಗರ್ ಪದ್ಧತಿಯಲ್ಲಿ ಸುಧಾರಣೆ ಮಾಡಿ, ಬಡವರಿಗೆ, ಸಿಖ್ ಅಲ್ಲದವರಿಗೂ ಭೋಜನ ವ್ಯವಸ್ಥೆಯನ್ನು ಆರಂಭಿಸಿದನು.
3. ಸಿಖ್ ಅನುಯಾಯಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗಿದ್ದರಿಂದ ಆಧ್ಯಾತ್ಮಿಕ ರಾಜ್ಯವನ್ನು 22 ಭಾಗಗಳಾಗಿ (ಮಂಜೀಸ್)ವಿಂಗಡಿಸಿ, ಅವುಗಳನ್ನು ತನ್ನ ಅನುಯಾಯಿಗಳ ವಶಕ್ಕೆ ಕೊಟ್ಟನು.
4. ಹಿಂದೂಗಳ ದೀಪಾವಳಿ, ವಿಜಯದಶಮಿ ಮತ್ತು ಬೈಸಾಕಿ ಹಬ್ಬಗಳನ್ನು ಹೊಸ ವಿಧಾನದಲ್ಲಿ ಆಚರಿಸಲಾರಂಭಿಸಿದರು.

1. ಗುರು-ರಾಮದಾಸ (1575-81) (Guru-Ramadas)

- ಗುರು ರಾಮದಾಸ ಸಿಖ್ಖರ 4ನೇ ಗುರು, ಹಾಗೂ ಅಕ್ಬರನ ಸಮಕಾಲೀನ ಇವನು ಅಮರದಾಸನ ಮಗಳಾದ ಬೇಬಿ ಲಾನಿಯನ್ನು ಮದುವೆಯಾಗಿದ್ದರಿಂದೀಚೆಗೆ ಗುರುಪಂಥ ವಂಶಪಾರಂಪರ್ಯವಾಯಿತು.
- ರಾಮದಾಸನು ರಾಮದಾಸಪುರವೆಂಬ ನಗರ ಸ್ಥಾಪಿಸಿ ಅಲ್ಲಿ **ಹರ್‌ಮಂದಿರ್ ಸಾಹೇಬನ (ಅಮೃತಸರದ ಸ್ವರ್ಣದೇವಾಲಯ)** ನಿರ್ಮಾಣ ಕಾರ್ಯವನ್ನು ಆರಂಭಿಸಿದನು. ಇದೇ ಮುಂದೆ ಅಮೃತಸರ ನಗರವೆಂದು ಪ್ರಖ್ಯಾತಿಯಾಯಿತು.
- ಸಿಖ್ ಪಂಥದ ಅಭಿವೃದ್ಧಿಗೆ ಹಣದ ಅವಶ್ಯಕತೆ ಇದ್ದುದರಿಂದ **ಮಾಸುದ್ ಪದ್ಧತಿ** ಆರಂಭಿಸಿದನು.
- ಅಕ್ಬರನೊಂದಿಗೆ ಮೈತ್ರಿ ಬೆಳೆಸಿ ಅವನಿಂದ 500 ಬಿಗಾಗಳಷ್ಟು ಭೂಮಿಯನ್ನು ದಾನವಾಗಿ ಪಡೆದಿದ್ದನು.

ಗುರು ಅರ್ಜುನದೇವ (1581-1606) (Guru Arjunadev)

- ಅರ್ಜುನದೇವನು ಅಕ್ಬರ್ ಮತ್ತು ಜಹಾಂಗೀರನ ಸಮಕಾಲೀನ. ಇವನು ಕ್ರಿ.ಶ. 1604ರಲ್ಲಿ ಗ್ರಂಥ ಸಾಹೇಬದ ಕೇಂದ್ರ ಭಾಗವೆನಿಸಿದ ಆದಿಗ್ರಂಥವನ್ನು ಕ್ರೋಢೀಕರಿಸಿದನು. ಇದು ಮುಂದೆ ಸಿಖ್‌ರ ಪವಿತ್ರ ಗ್ರಂಥವಾಯಿತು.
- ಸ್ವರ್ಣಮಂದಿರ ದೇವಾಲಯದ ಕೆಲಸವನ್ನು ಪೂರ್ಣಗೊಳಿಸಿದ ಗುರು ಅರ್ಜುನದೇವನು ಮಾಸುದ್ ಪದ್ಧತಿಯನ್ನು ಪುನರ್ ಸಂಘಟಿಸಿ ಸಿಖ್ ಅನುಯಾಯಿಗಳು ಅವರ ವರಮಾನದ $^{1}/_{10}$ ಭಾಗವನ್ನು ಗುರುವಿಗೆ ಕೊಡಬೇಕೆಂದು ನಿಯಮ ಮಾಡಿದನು.
- ಸಿಖ್‌ರು ಆದಾಯ ಹೆಚ್ಚಿಸಿಕೊಳ್ಳಲು ವ್ಯಾಪಾರ ಕೈಗೊಳ್ಳುವಂತೆ

ಪ್ರೋತ್ಸಾಹಿಸಿದನು.

- **ಜಹಾಂಗೀರನು** ಗುರು ಅರ್ಜುನದೇವನನ್ನು ಕೊಲ್ಲಿಸಿದನು. ಅರ್ಜುನದೇವನ ಸಾವು **ಖಾಲ್ಸಾ ಸ್ಥಾಪನೆಗೆ** ಬುನಾದಿಯಾಯಿತು. ಇವನ ಕಾಲದಲ್ಲಿ ಸಿಖ್ ಪಂಥ ಸಾಕಷ್ಟು ಪ್ರಾಮುಖ್ಯತೆಯನ್ನು ಪಡೆಯಿತು.

6) ಗುರು ಹರಗೋವಿಂದ (1605-45) (Guru Haragovinda)

- ಗುರು ಹರಗೋವಿಂದನು ಸಿಖ್ ಧರ್ಮದಲ್ಲಿ ಅನೇಕ ಬದಲಾವಣೆಗಳನ್ನು ತಂದನು.

1. ಪೇಟಕ್ಕೆ ಬದಲಾಗಿ ಕಿರೀಟವನ್ನು ಧರಿಸಲಾರಂಭಿಸಿದನು.
2. ಹರಗೋವಿಂದ ಯೋಧನಂತೆ, ವೇಷಧರಿಸಿಕೊಂಡು ಶಸ್ತ್ರಾಸ್ತ್ರಗಳನ್ನು ಜೊತೆಯಲ್ಲಿಟ್ಟು ಕೊಳ್ಳಲಾರಂಭಿಸಿದನು.
3. ಹರಗೋವಿಂದ ಒಂದು ಕಡೆ ಸಿಖ್‌ರಿಗೆ ಆಧ್ಯಾತ್ಮಿಕ ಗುರು ಮತ್ತೊಂದು ಕಡೆ ಮಿಲಿಟರಿ ನಾಯಕನಾಗಿದ್ದನು.
4. ಹಿಂದೂ ಮತ್ತು ಸಿಖ್‌ರ ರಕ್ಷಣೆಗಾಗಿ ದುರ್ಗದ ನಿರ್ಮಾಣ ಕಾರ್ಯ ಆರಂಭಸಿದ. ಇಲ್ಲಿ ಮಿಲಿಟರಿ ಶಿಕ್ಷಣ ಕೊಟ್ಟನು.
5. ತನ್ನ ಅನುಯಾಯಿಗಳಿಂದ ಹಣದ ಬದಲಿಗೆ ಕುದುರೆ ಮತ್ತು ಶಸ್ತ್ರಗಳನ್ನು ಸಂಗ್ರಹಿಸಿ ಸೈನ್ಯ ಸಂಘಟಿಸಿದನು.
6. ಗುರು ಗೋವಿಂದ ಅಕಾಲ್‌ತಕ್ತನ್ನು ನಿರ್ಮಿಸಿದನು.
7. ಶಾಂತಿ ಪ್ರಿಯರಾಗಿದ್ದ ಸಿಖ್‌ರನ್ನು ಯುದ್ಧೋತ್ಸಾಹಿಗಳಾಗಿ ಮಾಡಿದನು. ಮೊಗಲರು ಇದನ್ನು ಸಹಿಸದೆ ಸಿಖ್‌ರ ಮೇಲೆ ಯುದ್ಧ ಮಾಡಿದರು. ಇದು ಇನ್ನು ಮುಂದೆ ನಿರಂತರವಾಯಿತು.

7.ಗುರುತೇಗ್ ಬಹದ್ದೂರ್ (1564-75)
Gurutegh Bahadur

- ತೇಗ್‌ಬಹದ್ದೂರ್ ಸಿಖ್‌ರ 9ನೇ ಗುರು ಹಾಗೂ ಔರಂಗಜೇಬನ ಸಮಕಾಲೀನ. ಔರಂಗಜೇಬನ ಧಾರ್ಮಿಕ ನೀತಿಯನ್ನು ತೇಗ್‌ಬಹದ್ದೂರ್ ವಿರೋಧಿಸಿದ ಔರಂಗಜೇಬನು ಇವನಿಗೆ ಇಸ್ಲಾಂ ಸ್ವೀಕರಿಸಲು ಬಲವಂತ ಪಡಿಸಿದ. ಒಪ್ಪದಿದ್ದಾಗ ಕೊಲೆ ಮಾಡಿಸಿದನು.
- ಕ್ರಿ.ಶ. 1675ರಲ್ಲಿ ಗುರುತೇಗ್ ಬಹದ್ದೂರ್‌ನನ್ನು ಕೊಲೆ ಮಾಡಿದ ಸ್ಥಳದಲ್ಲಿ ಈಗ ಶಿಶ್‌ಗಜ್ ಎಂಬ ಗುರು ದ್ವಾರವಿದೆ.

8. ಗುರು-ಗೋವಿಂದ ಸಿಂಗ್ (1675-1708)
Guru Govinda Singh

- ಸಿಖ್‌ರ 10ನೇಯ ಹಾಗೂ ಕೊನೆಯ ಗುರು. ಗುರು ಗೋವಿಂದ ಸಿಂಗ್ ಗುರುನಾನಕ್ ನಂತರದ ಗುರುಗಳಲ್ಲೆಲ್ಲಾ ಗೋವಿಂದ ಸಿಂಗ್ ಅತ್ಯಂತ ಶ್ರೇಷ್ಠ ಗುರುವಾಗಿದ್ದು 1666ರಲ್ಲಿ ಪಾಟ್ನಾದಲ್ಲಿ ಜನಿಸಿದರು.
- ಮೊಗಲರ ವಿರುದ್ಧ ಹೋರಾಡಲು ಯುದ್ಧ ಪ್ರಿಯ **ಖಾಲ್ಸಾವನ್ನು** ಸ್ಥಾಪಿಸಿ ಶಾಂತಿ ಪ್ರಿಯರಾದ ಸಿಖ್‌ರು ಹೋರಾಟಕ್ಕಿಳಿಯುವಂತೆ ಮಾಡಿದನು.
- ಇವನು ಮೊಗಲರೊಂದಿಗೆ 1ನೇ **ಆನಂದಪುರ** ಯುದ್ಧ ಮತ್ತು **2ನೇ ಆನಂದಪುರದ** ಯುದ್ಧಗಳನ್ನು ಮಾಡಿದನು.

ಖಾಲ್ಸಾದ ಸ್ಥಾಪನೆ(1669)

- ಸಿಖ್‌ರಿಗೆ ರಾಜಕೀಯ ಐಕ್ಯತೆ ಮತ್ತು ಮೊಗಲರ ದಾಳಿಯನ್ನು ತಪ್ಪಿಸಲು **ತೇಗ್‌ಬಹದ್ದೂರ್‌ನು** ಖಾಲ್ಸಾವನ್ನು ಸ್ಥಾಪಿಸಿದನು. ಖಾಲ್ಸಾವನ್ನು 1699ರ ಬೈಸಾಕಿ ಹಬ್ಬದ ದಿನ ಭಾರಿ ಬಹಿರಂಗ ಸಭೆಯನ್ನು ಆನಂದಪುರದಲ್ಲಿ ಸಂಘಟಿಸಿ ಸ್ಥಾಪಿಸಿದನು ಈ ಸಭೆಯಲ್ಲಿ ಧರ್ಮದ ರಕ್ಷಣೆಗೆ ತ್ಯಾಗ ಮಾಡುವ 5 ಜನರನ್ನು ಆಯ್ಕೆ ಮಾಡಿದನು.
- ತನ್ನ ಅನುಯಾಯಿಗಳಿಗೆ ಹೆಸರಿನ ಜೊತೆಗೆ **ಸಿಂಗ್** ಅಥವಾ **ಸಿಂಹ** ಎಂದು ಸೇರಿಸಿಕೊಳ್ಳಲು ಕರೆ ನೀಡಿದ ಗುರುಗೋವಿಂದ ಸಿಂಗ್ ತನ್ನ ಶಿಷ್ಯರಿಗೆ ದೀಕ್ಷೆ ಪಡೆಯುವ ಸಂದರ್ಭದಲ್ಲಿ 5 ವಸ್ತುಗಳನ್ನು ಪಡೆಯಬೇಕಾಗಿತ್ತು. 1. ಕಾಚಾ, 2. ಕರಾ (ಕಬ್ಬಿಣದ ಕಡಗ), 3.ಕುಪಾಣಿ(ಖಡ್ಗ), 4. ಕೇಶ(ಉದ್ದವಾದ ಕೂದಲು ಬಿಡುವುದು), ಕಂಘ್ (ಬಾಚಣಿಗೆ)
- ಖಾಲ್ಸಾ ಗುರು ಗೋವಿಂದನ ಕನಸಿನ ಶಿಶುವಾಗಿತ್ತು. ಖಾಲ್ಸಾದಲ್ಲಿ ಎಲ್ಲರೂ ಸಮಾನರಾಗಿದ್ದರು. ಸ್ತ್ರೀಯರಿಗೂ ಸಮಾನವಾದ ಹಕ್ಕಿತ್ತು. ಖಾಲ್ಸಾಪಂಥ ಗುರುವಿನ ಸ್ಥಾನ ಪಡೆಯಿತು.

ಭಕ್ತಿ ಸಂತರು ಮತ್ತು ಅವರ ಕೃತಿಗಳು

1. ತುಳಸಿದಾಸ್ – ರಾಮಚರಿತಮಾನಸ.
2. ನಂದದಾಸ್ – ರಸಪಂಚಾಧ್ಯಾಯ.
3. ರಸ್‌ಖಾನ್ – ಪ್ರೇಮವಾಟಿಕಾ.
4. ಸೂರ್‌ದಾಸ್ – ಸೂರ್‌ಸಾಗರ್.

17. ಮೊಗಲರು (The Mughal Empire)

ಮೊಗಲರ ಕಾಲದ ಪ್ರಮುಖ ಸಾಹಿತ್ಯಕ ಆಧಾರಗಳು

ಪರ್ಷಿಯನ್ ಸಾಹಿತ್ಯ.

ತುಜಕ್-ಐ-ಬಾಬರಿ (ಕರ್ತೃ: ಬಾಬರ್, ಚಗಟೈ ತುರ್ಕಿಭಾಷೆ)

ಇದು ಬಾಬರನ ಆತ್ಮಕಥನವಾಗಿದ್ದು ಸ್ವತಃ ಬಾಬರನೇ ರಚಿಸಿದ್ದಾನೆ. ಇದು ಅವನ ಕಾಲದ ಆಡಳಿತದ ವಿವಿಧ ಮಜಲುಗಳ ಬಗ್ಗೆ ತಿಳಿಸುತ್ತದೆ.

ತಾರಿಕ್-ಐ-ರಷಿದಿ (ಕರ್ತೃ ಮಿರ್ಜಾ ಮಹಮ್ಮದ್ ಹೈದರ್ ದುರ್ಗಾ)

ಬಾಬರ್ ಮತ್ತು ಹುಮಾಯೂನ್ ಕಾಲದ ಘಟನೆಗಳನ್ನು ಒಳಗೊಂಡಿದೆ. ಈ ಕೃತಿಯು 1541ರಲ್ಲಿ ಪೂರ್ಣಗೊಂಡಿತು.

ಹಬೀಬ್-ಉಸ್-ಸಿಯಾರ್ (ಕರ್ತೃ: ಖಾವಂದ್ ಅಮೀರ್). ಬಾಬರನ ಕಾಲದ ಅನೇಕ ಘಟನೆಗಳ ವಿವರವಿದೆ. (ವಿಶೇಷವಾಗಿ ಬಾಬರನ ಆಫ್ಘನ್ ದಂಡಯಾತ್ರೆ). ಹುಮಾಯೂನ್‌ನ ಮೊದಲ 3 ವರ್ಷಗಳ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.

ಖಮೂನ್-ಐ-ಹುಮಾಯೂನಿ(ಕರ್ತೃ: ಖಾವಂದ್ ಅಮೀರ್)

- ಹೂಮಾಯೂನನ ಸಿಂಹಾಸನವರೋಹಣದ ತೊಡಕುಗಳು ಹಾಗೂ ಅವನು ಜಾರಿಗೊಳಿಸಿದ ಕಾನೂನುಗಳ ಬಗ್ಗೆ ತಿಳಿಸುತ್ತದೆ.

ಹುಮಾಯೂನ್ ನಾಮ (ಕರ್ತೃ ಗುಲ್ಬದನ್ ಬೇಗಂ)

- ಬಾಬರನ ಮಗಳಾದ ಗುಲ್ಬದನ್ ಬೇಗಂಳು ಅಕ್ಬರನ ಸಹಾಯದಿಂದ ಹುಮಾಯೂನ್‌ನಾಮ ರಚಿಸಿದಳು.
- ಇದು ಬಾಬರನ ವ್ಯಕ್ತಿತ್ವ ಮತ್ತು ಹುಮಾಯೂನ್‌ನ 1555 ರವರೆಗಿನ ಜೀವನ ಚರಿತ್ರೆಯನ್ನು ತಿಳಿಸುತ್ತದೆ.
- ಈ ಕೃತಿಯ ಕೈ ಬರಹದ ಸಂಗ್ರಹವು ಲಂಡನ್ ಮ್ಯೂಸಿಯಂನಲ್ಲಿದೆ.

ತಜ್ ಕಿರತ್-ಉಲ್-ವಕಿಯತ್ (ಕರ್ತೃ ಜೌಹರ್ ಅಪ್ತಾಚ್ಚಿ)

- ಹೂಮಾಯೂನ್ ಕಾಲದ ಘಟನೆಗಳು, ಅಕ್ಬರನ ಜೀವನ ಮತ್ತು ಬಾಲ್ಯದ ವಿವರಗಳನ್ನೊಳಗೊಂಡಿದೆ.
- ಈ ಕೃತಿಯ ಕೈಬರಹದ ಒಂದು ಸಂಗ್ರಹವು ಪಾಟ್ನಾದ ಖುದಾಭಕ್ಷ್ ಲೈಬ್ರರಿಯಲ್ಲಿ ಮತ್ತೊಂದು ಸಂಗ್ರಹವು ಉದಯಪುರ ಸರಸ್ವತಿ ಭವನ್ ಲೈಬ್ರರಿಯಲ್ಲಿದೆ.

ತವಾರಿಖ್-ಐ-ದೌಲತ್-ಇ-ಷೇರ್ (ಕರ್ತೃ: ಷಾಹಿ ಹಸನ್)

- ಈ ಕೃತಿಯ 2ನೇ ಮತ್ತು 6ನೇ ಅಧ್ಯಾಯವು ಷೇರ್‌ಷಾನ ಆಡಳಿತದ ಬಗ್ಗೆ ತಿಳಿಸುತ್ತದೆ. ಷೇರಷಾ ಓಡಿಹೋಗಿ ಬಹರ್‌ಖಾನ್ ಲೋಹಿಯ ಸೇವೆಯಲ್ಲಿದ್ದರ ಬಗ್ಗೆ ತಿಳಿಸುತ್ತದೆ.

ತಾರಿಖ್-ಇ-ಷೇರ್‌ಷಾಹಿ ಅಥವ ತೌಫ್ಘ-ಇ-ಅಕ್ಬರ್ ಶಾಹಿ (ಕರ್ತೃ: ಅಬಾಸ್ ಖಾನ್)

- ಷೇರ್‌ಖಾನ್ ಜೀವನ, ಹುಮಾಯೂನ್ ನಡುವಿನ ಕಾದಾಟ, ಸೈನಿಕ ವ್ಯವಸ್ಥೆ, ಕಂದಾಯ ವ್ಯವಸ್ಥೆ ಮತ್ತು ಅವನು ನಿರ್ಮಿಸಿದ ನಾಲ್ಕು ಹೆದ್ದಾರಿಗಳ ಬಗ್ಗೆ ತಿಳಿಸುತ್ತದೆ.

ವಕಿಯತ್-ಇ-ಮುಸ್ತಕಿ (ಕರ್ತೃ: ಷೇಕ್-ನಿಜಾಕುಲ್ಲಾ-ಮುಸ್ತಕಿ)

- ಷೇರ್‌ಷಾನ ಉತ್ತರಾಧಿಕಾರತ್ವಕ್ಕಾಗಿ ನಡೆದ ಹೋರಾಟ, ಅವನ ಕಾಲದಲ್ಲಿನ ಘಟನೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುತ್ತದೆ.
- ಫರೀದ/ಷೇರ್‌ಷಾನು ಹುಲಿಯನ್ನು ಕೊಂದು **'ಷೇರ್‌ಖಾನ್'** ಬಿರುದು ಪಡೆದ ಬಗ್ಗೆ ತಿಳಿಸುತ್ತದೆ.

ತರೀಖ್-ಇ-ಷಾಹಿ (ಕರ್ತೃ: ಅಹ್ಮದ್ ಯಾದ್ಗರ್)

- ಇದು ಜಹಾಂಗೀರನ ಆಳ್ವಿಕೆಯಲ್ಲಿ ಪೂರ್ಣಗೊಂಡಿತು. ಇದು ಷೇರ್‌ಷಾನು ಸಿಡಿಮದ್ದಿನ ಸ್ಫೋಟದಿಂದಾಗಿ ಮರಣ ಹೊಂದಿದ್ದರ ಬಗ್ಗೆ ತಿಳಿಸುತ್ತದೆ.
- ಷೇರ್‌ಷಾನ ನಾಣ್ಯ ವ್ಯವಸ್ಥೆ ಹಾಗೂ ಆ ಕಾಲದ ನೊಬೆಲ್ಲರ ಪಟ್ಟಿ ಬಗ್ಗೆ ತಿಳಿಸುತ್ತದೆ.

ಅಬುಲ್ ಫಜಲ್‌ನ ಬರವಣಿಗೆಗಳು

- ಇವನು ಸೂಫಿಸಂತ ಷೇರ್ ಮುಬಾರಕ್‌ನ ಮಗ. ಅಕ್ಬರನ ಕಾಲದ ಪ್ರಮುಖ ವಿದ್ವಾಂಸ ಮತ್ತು ಇವನ ಹಿರಿಯ ಸೋದರ ಅಬುಲ್ ಫೈಜಿ.

ಎ) **ಅಕ್ಬರ್ ನಾಮಾ** :- ಇದನ್ನು 3 ಭಾಗಗಳಾಗಿ ವಿಂಗಡಿಸಿದ್ದಾನೆ.

- 1ನೇಭಾಗ – ಅಮೀರ್ ತೈಮೂರ್, ಹುಮಾಯೂನ್ ಆಳ್ವಿಕೆಯ ಇತಿಹಾಸ.
- 2ನೇ ಮತ್ತು 3ನೇ ಭಾಗ:- 1602ರವರೆಗೆ ಅಕ್ಬರನ ಆಳ್ವಿಕೆಯ ಇತಿಹಾಸ.
- ಈ ಕೃತಿಯಲ್ಲಿ ಫಜಲನು ಷೇರ್‌ಷಾನನ್ನು ಪಿತೂರಿಗಾರ ಮತ್ತು ಹುಮಾಯೂನ್ ದುರಾದೃಷ್ಟವಂತ ಎಂದು ಕರೆದಿದ್ದಾನೆ. ಇದನ್ನು ಏಳು ವರ್ಷಗಳಲ್ಲಿ ಪೂರ್ತಿಗೊಳಿಸಿದನು.

ಬಿ) **ಐನ್-ಇ-ಅಕ್ಬರಿ:** ಇದು ಸಹ 3 ವಿಭಾಗಗಳನ್ನು ಹೊಂದಿದೆ. ಅಕ್ಬರನ ಆಸ್ಥಾನದ ವಿವರ, ಅವನು ಜಾರಿಗೆ ತಂದ ಸುಧಾರಣೆಗಳ ಮತ್ತು ಅವನ ಆಡಳಿತದ ಹಾಗೂ ದೀನ್-ಇ-ಇಲಾಹಿಯ ಗುರಿ ಮತ್ತು ತತ್ವಗಳ ಬಗ್ಗೆ ಕುರಿತದ್ದಾಗಿದೆ.

ಸಿ) **ರುಕುತ್-ಇ-ಅಬುಲ್ ಫಜಲ್**

ಇದು ಫಜಲ್‌ನು ತನ್ನ ತಂದೆ, ತಾಯಿಗೆ, ಸೋದರರಿಗೆ, ಅಕ್ಬರ್ ಮತ್ತು ಅವನ ಹೆಂಡತಿಗೆ ಮತ್ತು ಅವನ ಮಕ್ಕಳಿಗೆ ಬರೆದ ಪತ್ರಗಳ ಸಂಗ್ರಹವೇ ಆಗಿದೆ.

ತಬಾಕತ್-ಇ-ಅಕ್ಬರಿ (ಕರ್ತೃ: ಖ್ವಾಜಾನಿಜಾಮುದ್ದೀನ್ ಅಹಮದ್)

ಇದರಲ್ಲಿ ಅಕ್ಬರನ 39 ವರ್ಷದ ಆಳ್ವಿಕೆಯ ಘಟನೆಗಳ ಬಗ್ಗೆ ತಿಳಿಸಿದ್ದಾನೆ.

ಮುತಕಾಬ್-ಉತ್-ತಾರೀಖ್/ತಾರಿಖ್-ಇ-ಬದೌನಿ (ಕರ್ತೃ ಅಬ್ದುಲ್ ಖಾದಿರ್ ಬದೌನಿ)

- ಇವನು ಅರೇಬಿಕ್, ಪರ್ಷಿಯನ್, ಸಂಸ್ಕೃತ ಭಾಷೆಗಳನ್ನು ಬಲ್ಲವನಾಗಿದ್ದನು.
- ಸಂಸ್ಕೃತದ ಮಹಾಭಾರತ, ರಾಮಾಯಣ ಮತ್ತು ರಾಜತರಂಗಿಣಿಗಳನ್ನು ಪರ್ಷಿಯನ್‌ಗೆ ಭಾಷಾಂತರಿಸಿದನು. ಈ ಕೃತಿಯಲ್ಲಿ 2 ವಿಭಾಗಗಳಿವೆ.
- ಮೊದಲ ಭಾಗ :- ಸಬಕ್ತಗೀನ್ ನಿಂದ ಹುಮಯೂನ್ ವರೆಗಿನ ಇತಿಹಾಸ.
- 2ನೇ ಭಾಗ :- ಕ್ರಿ.ಶ.1534 ರವರೆಗಿನ ಅಕ್ಬರನ ಆಳ್ವಿಕೆ.

ತುಜುಕ್-ಇ-ಜಹಾಂಗಿರಿ (ಕರ್ತೃ ಜಹಾಂಗೀರ್)

- ಇದು ಜಹಾಂಗಿರನ ಆತ್ಮಕಥನ, ಜಹಾಂಗೀರನ ಮೊದಲ 17 ವರ್ಷದ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.
- ಜಹಾಂಗೀರ್ ಅನಾರೋಗ್ಯದ ಕಾರಣ ತನ್ನ ಭಕ್ಷಿ ಮುತಮೀದ್ ಖಾನ್‌ನಿಂದ ಈ ಕೃತಿ ಬರೆಸಿದನು.

ಪಾದಷಹ ನಾಮ (3ಜನ ಕರ್ತೃಗಳು)

ಷಹಜಹಾನ್ ತನ್ನ ಆಳ್ವಿಕೆಯ 8 ವರ್ಷಗಳ ಇತಿಹಾಸ ಬರೆಯಲು ಮಹ್ಮದ್ ಅಮಿನ್ ಖಿಜ್ವನಿಗೆ ತಿಳಿಸಿದನು. ಇದೇ ಹೆಸರಿನ ಕೃತಿಯನ್ನು ಷಹಜಹಾನ್ ಅಬ್ದುಲ್-ಅಮಿರ್ ಲಾಹಿರಿಯಿಂದ ಬರೆಸಿದನು. ಇನ್ನು ಮುಂದುವರೆದ ಭಾಗವನ್ನು ಮಹಮ್ಮದ್ ವಾರಿಸ್ ನಿಂದ ಬರೆಸಿದನು.

ಮುಂತಾಕಾಜ್-ಉಲ್-ಲುಬಾಬ್ (ಕರ್ತೃ: ಹಷಿಂಕಾಫಿಕಾನ್)

ಬಾಬರನ ದಾಳಿಯಿಂದ ನಂತರದ ಮಹ್ಮದ್‌ಷಾನ ಮೊದಲ 15 ವರ್ಷಗಳ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ ಮತ್ತು ಔರಂಗಜೇಬನ ಆಳ್ವಿಕೆಯ ಘಟನೆಗಳನ್ನು ಕುರಿತದ್ದಾಗಿದೆ.

ನುಷ್ಕ-ಇ-ದಿಲ್ ಕುಷ್ - (ಕರ್ತೃ: ಭಿಮಸೇನ್)

ಔರಂಗಜೇಬನ ದಖ್ಖನ್ನಿನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.

ವಿದೇಶಿಯರ ಕೃತಿಗಳು.

- ಯುರೋಪಿಯನ್ ಪ್ರವಾಸಿಗರಾದ ಡಬ್ಲ್ಯು, ಹಾಕಿನ್ಸ್, ಥಾಮಸ್‌ರೋ ಮತ್ತು ಪೀಟರ್ ಮಂಡಿಯರ ಬರವಣಿಗೆಗಳು.
- ಫ್ರೆಂಚ್ ಪ್ರವಾಸಿಗರಾದ ಬರ್ನಿಯರ್ ಭಾರತಕ್ಕೆ ಭೇಟಿ ನೀಡಿದಾಗ ಷಹಜಹಾನ್ ಮಕ್ಕಳ ನಡುವೆ ಉತ್ತರಾಧಿಕಾರತ್ವಕ್ಕಾಗಿ ನಡೆದ ಹೋರಾಟದ ಹಾಗೂ ಷಹಜಹಾನ್ ಅವನ ಹೆಣ್ಣು ಮಕ್ಕಳ ಬಗ್ಗೆ ತನ್ನ ಕೃತಿ "Travels in the Mogal Empire" ನಲ್ಲಿ ವಿವರಿಸಿದ್ದಾನೆ.
- ಇಟಲಿ ಪ್ರವಾಸಿ **ಮನುಸ್ಸಿಯು** ತನ್ನ Storia-Do-Mogore ಕೃತಿಯಲ್ಲಿ ತೈಮೂರ್‌ನ ಸಂತತಿಯಿಂದಿಡಿದು ಔರಂಗಜೇಬ್‌ನ ಆಳ್ವಿಕೆಯ ವರೆಗೆ ವಿವರಿಸಿದ್ದಾನೆ.

ಮೊಗಲ್ ಸಾಮ್ರಾಜ್ಯದ ಸ್ಥಾಪನೆ

ಬಾಬರ್ ಕ್ರಿ.ಶ. (Babar 1526-30)

- ಬಾಬರನ ಮೂಲ ಹೆಸರು ಜಹೀರುದ್ದೀನ್ ಮಹ್ಮದ್. **'ಬಾಬರ್'** ಎಂಬುದು ಅವನ ಬಿರುದಾಗಿದ್ದು ಇದು **'ಹುಲಿ'** ಎಂಬರ್ಥವನ್ನು ಹೊಂದಿದೆ. ಇವನು ಮೊಗಲ್ ಸಾಮ್ರಾಜ್ಯದ ಸ್ಥಾಪಕನಾಗಿದ್ದಾನೆ.
- ಬಾಬರನು 1483 ಫೆಬ್ರವರಿ 14ರಂದು ಜನಿಸಿದನು. ಇವನ ತಂದೆ ಉಮರ್ ಶೇಕ್‌ಮಿರ್ಜಾ. ಲೇನ್ ಪೋಲ್ ರವರು " ಅವನ ದಮನಿಗಳಲ್ಲಿ ಏಷ್ಯಾದ ಇಬ್ಬರು ಮಹಾನ್ ವ್ಯಕ್ತಿಗಳ ರಕ್ತ ಹರಿಯುತ್ತಿದ್ದಿತು" (ಅಂದರೆ ತಂದೆ ತೈಮೂರ್ ಸಂತತಿ. ತಾಯಿ ಮಂಗೋಲರ ಚಂಗೇಸಖಾನ್‌ನ ಎರಡನೆ ಮಗ ಚಗಟಾಯ್ ವಂಶದವರು) ಎಂದಿದ್ದಾರೆ. (ಬಾಬರ್-ಚಗಟಾಯಿ ತುರ್ಕಿ ಜನಾಂಗದವನು).
- ಬಾಬರ್ ಸ್ಥಾಪಿಸಿದ ಸಂತತಿಗೆ **'ತುರ್ಕಿ ಸಂತತಿ'** ಎಂದು ಕರೆಯುವರು. ಕ್ರಿ.ಶ.1494ರಲ್ಲಿ ತನ್ನ ತಂದೆ ನಿಧನರಾದ ಮೇಲೆ ಬಾಬರ್ ಚೈನೀಸ್ ತುರ್ಕಿಸ್ಥಾನದ ಫ್‌ರ್ಗಾನದ ಪ್ರಾಂತ್ಯಾಧಿಕಾರಿಯಾದನು.
- ಮಧ್ಯ ಏಷ್ಯಾದಲ್ಲಿ ತನ್ನ ಪ್ರಾಬಲ್ಯ ಕಳೆದುಕೊಂಡ ಬಾಬರ್ ತನ್ನ ಚಿಕ್ಕಪ್ಪ ಅಫ್ಘನ್ನನ ಕಾಬೂಲ್‌ನಲ್ಲಿದ್ದ ಉಲುಗ್‌ಬೇಗ್‌ನ ಸಾವಿನ ನಂತರ 1504ರಲ್ಲಿ ಯಾವುದೇ ವಿರೋಧವಿಲ್ಲದೆ ಅದನ್ನು ವಶಪಡಿಸಿಕೊಂಡನು.
- ಕಾಬೂಲ್ ಮತ್ತು ಘಜ್ನಿಯನ್ನು ವಶಪಡಿಸಿಕೊಂಡ ಬಾಬರ್ ಪೂರ್ಣ ಅಫ್ಘಾನಿಸ್ತಾನದ ಅಧಿಪತಿಯಾದನು.
- 1507 ರಲ್ಲಿ ಬಾಬರನು ಬಾದಶಹಾ (ಚಕ್ರವರ್ತಿ) ಎಂಬ ಬಿರುದನ್ನು ಧರಿಸಿ **'ತೈಮೂರ್ ಸಂತತಿಯ'** ಮುಖ್ಯಸ್ಥನಾದನು.
- ಬಾಬರನನ್ನು ಭಾರತದ ಮೇಲೆ ದಾಳಿ ಮಾಡಲು ಪಂಜಾಬಿನ ದೌಲತಾ ಖಾನ್ ಮತ್ತು ಇಬ್ರಾಹಿಂ ಲೂದಿಯ ಚಿಕ್ಕಪ್ಪ ದೆಹಲಿ ಸಿಂಹಾಸನದ ಪ್ರತಿಸ್ಪರ್ಧಿ ಆಲಂಖಾನ್ ಮತ್ತು ಮೇವಾರದ ರಾಣಾಸಂಗನು ಆಹ್ವಾನಿಸಿದ್ದರು.
- ಬಾಬರನು ಭಾರತದ ಮೇಲೆ ಐದು ಬಾರಿ ಆಕ್ರಮಣ ಮಾಡಿದನು. ಇವನ ಅಂತಿಮ ದಾಳಿ 1525 ರ ಕಾಬೂಲ್ ದಾಳಿಯಾಗಿತ್ತು.

ಮೊದಲನೇ ಪಾಣಿಪತ್ ಯುದ್ಧ (ಏಪ್ರಿಲ್ 21, 1526)

- ಈ ಯುದ್ಧವು ಬಾಬರ್ ಮತ್ತು ಇಬ್ರಾಹಿಂ ಲೋದಿಯ ನಡುವೆ ನಡೆದು ಲೋದಿಯು ಸೋತು ಬಾಬರನ ವಿಜಯದೊಂದಿಗೆ ಅಂತ್ಯಗೊಂಡಿತು.
- ಬಾಬರನು ಗೆಲ್ಲಲು ಕಾರಣ ಅವನ ಅಶ್ವದಳವು ಉಜ್ಬೇಗಿ ಯುದ್ಧ ತಂತ್ರವಾದ **"ತುಲಘಾಮ"** ಈ ವಿಧಾನದಲ್ಲಿ ವೈರಿ ಸೈನ್ಯವನ್ನು ಹಿಂದಿನಿಂದ ಅನಿರೀಕ್ಷಿತವಾಗಿ ದಾಳಿ ಮಾಡುವುದು.
- ಬಾಬರನು ರಚಿಸಿದ ಆತ್ಮಕಥನ **'ತುಜುಕ್-ಇ-ಬಾಬರಿ'**ಯಾಗಿದೆ.
- ಬಿಹಾರದಲ್ಲಿ ಬಹರ್‌ಖಾನ್‌ನು ಸ್ವತಂತ್ರನೆಂದು ಘೋಷಿಸಿ

ಕೊಂಡನು. ಮತ್ತು ಪಾಣಿಪತ್ ಯುದ್ಧದಲ್ಲಿ ಸೋತ ಆಫ್ಘನ್ನರಿಗೆ **'ಬಿಹಾರ'** ಆಶ್ರಯ ತಾಣವಾಯಿತು. ಇನ್ನೊಂದು ಕಡೆ ಮೇವಾರದ ರಾಣಾಸಂಗನ ನೇತೃತ್ವದಲ್ಲಿ ರಜಪೂತರು ಬಾಬರನ ವಿರುದ್ಧ ಒಗ್ಗೂಡಿದ್ದರು.

- ಬಾಬರನ ಉದಾರತೆಯಿಂದ ಅವನ ಸೇವೆಯಲ್ಲಿ ಸೇರಿಕೊಂಡ ಆಫ್ಘನ್ ಮುಖ್ಯಸ್ಥರೆಂದರೆ ದೌಲತಾ ಖಾನ್ ಲೂದಿ ಮಗ ದಿಲ್ ವಾರ್ ಖಾನ್ (ಇವನಿಗೆ ಖಾನ್-ಐ-ಖಾನ್ ಬಿರುದು ನೀಡಲಾಯಿತು). ಷೇಕ್ ಬಯಾಜಿಯಾ ಮತ್ತು ಮಹ್ಮದ್ ಖಾನ್ ಲೊಹಾನಿ ಮುಂತಾದವರು.
- ಬಾಬರನು ತನ್ನ ಮಗ ಹೂಮಯೂನನಿಗೆ **'ಕೊಹಿನೂರ್ ವಜ್ರವನ್ನು'** ನೀಡಿದನು.

ಕಣ್ವಾ ಕದನ (ಮಾರ್ಚ್ 16, 1527)

- ಕಣ್ವ ಕದನಕ್ಕೆ ಪ್ರಮುಖ ಕಾರಣ ಬಾಬರನು ಭಾರತದಲ್ಲೇ ದೆಹಲಿಯ ಚಕ್ರವರ್ತಿಯಾಗಿ ಉಳಿಯಲು ನಿರ್ಧರಿಸುದುದು.
- ಕೊನೆಗೆ ಕಣ್ವಾದಲ್ಲಿ ಬಾಬರನ ಮತ್ತು ರಾಣಸಂಗನ ಸೈನ್ಯಗಳು ನಡುವೆ ಯುದ್ಧವುಂಟಾಗಿ ಬಾಬರನು ಬಲಭಾಗದ ಸೈನ್ಯಕ್ಕೆ ಹುಮಾಯೂನ್, ಎಡಭಾಗದ ಸೈನ್ಯಕ್ಕೆ ಖಲೀಫನನ್ನು ಮತ್ತು ಮಧ್ಯಭಾಗದ ಸೈನ್ಯದ ಮುಂಚೂಣಿಗೆ ಉಸ್ತಾದ್ ಆಲಿಯನ್ನು ನೇಮಿಸಿ ಸೈನ್ಯದ ನೇತೃತ್ವವನ್ನು ಮಧ್ಯದಲ್ಲಿ ತಾನೇ ವಹಿಸಿಕೊಂಡು ತುಲಘಾಮ ಯುದ್ಧ ವಿಧಾನದ ಮೂಲಕ ಬಾಬರನು ವೈರಿಗಳನ್ನು ಸೋಲಿಸಿದನು.
- **ಕಣ್ವಾ ಕದನವೇ** ಬಾಬರನಿಗೆ ಭಾರತದ ಸಾರ್ವಭೌಮತ್ವವನ್ನು ನಿರ್ಧರಿಸಿದ ಕದನವಾಯಿತು. ತನ್ನ ಅಧಿಕಾರದ ಕೇಂದ್ರವನ್ನು ಕಾಬೂಲಿನಿಂದ ದೆಹಲಿಗೆ ವರ್ಗಾಯಿಸಿದನು.

ಚಂದೇರಿಯ ಆಕ್ರಮಣ (1528)

- ಚಂದೇರಿಯ ರಜಪೂತ ಅರಸ ಮೇದಿನಿರಾಯನ ವಿರುದ್ಧ ಜಿಹಾದ್ ಘೋಷಿಸಿ 1528ರಲ್ಲಿ ಮೇದಿನಿರಾಯನನ್ನು ಕೊಂದು ಚಂದೇರಿಯನ್ನು ವಶಪಡಿಸಿಕೊಂಡನು. ಈ ಯುದ್ಧದಲ್ಲಿ ಬಾಬರನು ಸಾವಿರಾರು ರಜಪೂತರನ್ನು ಕಗ್ಗೊಲೆ ಮಾಡಿದನು. ನಂತರ ಚಂದೇರಿಯನ್ನು ಮಾಳ್ವದ ನಾಸೀರುದ್ದೀನನ ಮೊಮ್ಮಗ ಮಹ್ಮದ್ ಷಾನಿಗೆ' ವಹಿಸಿದನು. ಇದೇ ವರ್ಷದಲ್ಲಿ ಗ್ವಾಲಿಯಾರ್‌ನ ವಿಕ್ರಮಜಿತ್ ನನ್ನು ಸೋಲಿಸಿ **'ಕೊಹಿನೂರ್ ವಜ್ರ'** ಪಡೆದನು.

ಘಗ್ರಾ ಕದನ – ಮಾರ್ಚ್ 6, 1529

- ಆಫ್ಘನ್ನರ ಒಕ್ಕೂಟ ಸೈನ್ಯ ಮತ್ತು ಬಂಗಾಳದ ನಸ್ರತ್‌ಷಾನ ಸೈನ್ಯವನ್ನು ಬಾಬರನು ಘಗ್ರಾ ನದಿಯ ದಂಡೆಯ ಮೇಲೆ 1529 ಮೇ 6 ರಂದು ಸಂಪೂರ್ಣವಾಗಿ ಸೋಲಿಸಿದನು. ನಂತರ ನಸ್ರತ್‌ಷಾ ಮತ್ತು ಬಾಬರನ ನಡುವೆ ಆಫ್ಘನ್ ದಂಗೆಕೋರರಿಗೆ ಬಂಗಾಳದಲ್ಲಿ ರಕ್ಷಣೆ ನೀಡಬಾರದೆಂಬ ಷರತ್ತುಗಳ ಮೇಲೆ ಒಪ್ಪಂದವೇರ್ಪಟ್ಟಿತು. ಘಗ್ರಾ ಕದನವೇ ಬಾಬರನ

- ಬಾಬರನ ಸಾಮ್ರಾಜ್ಯವು ಪೂರ್ವದಲ್ಲಿ ಬಿಹಾರ್, ಪಶ್ಚಿಮದಲ್ಲಿ ಸಿಂದ್, ಉತ್ತರದಲ್ಲಿ ಹಿಮಾಲಯ ಮತ್ತು ದಕ್ಷಿಣದಲ್ಲಿ ಗ್ವಾಲಿಯರ್ ಮತ್ತು ಚಂದೇರಿವರೆಗೆ ವಿಸ್ತರಿಸಿತ್ತು.
- ಬಾಬರನು ಮರಣ ಹೊಂದಿದ ಸ್ಥಳ ಆಗ್ರಾ (1530 ಡಿಸೆಂಬರ್ 26). ಬಾಬರನನ್ನು **ಕಾಬೂಲಿನ** ಉದ್ಯಾನವನದಲ್ಲಿ ಸಮಾಧಿ ಮಾಡಲಾಯಿತು.
- ಬಾಬರನ ವ್ಯಕಿತ್ವವನ್ನು ತಾರೀಕ್-ಇ-ರಧ್ದಿಯ ಕರ್ತೃ ಮಿರ್ಜಾಹೈದರ್ ಮತ್ತು ಹೂಮಾಯೂನ್ ನಾಮದ ಕರ್ತೃ ಬಾಬರನ ಮಗಳು **ಗುಲ್ಬದಂ ಬೇಗಂಳು** ಪ್ರಶಂಸಿದ್ದಾರೆ.
- ಬಾಬರನು ಸಾವಿರಾರು ರಜಪೂತರನ್ನು ಕೊಂದು **"ಘಾಜಿ"** ಎಂಬ ಬಿರುದು ಹೊಂದಿದ್ದನು. ಹಿಂದೂಗಳ ಪವಿತ್ರ ಸ್ಥಳ ಅಯೋಧ್ಯೆಯ **ರಾಮಜನ್ಮ** ಸ್ಥಳದಲ್ಲಿ ಬಾಬರ್‌ನು ಮಸೀದಿ ಕಟ್ಟಿಸಿದನು.
- ಬಾಬರನು ತುರ್ಕಿ, ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯನ್ನು ಬಲ್ಲವನಾಗಿದ್ದು, ಸ್ವತಃ ಇವನು ಬರೆದ ಆತ್ಮಕಥನ **ತುಜುಕ್-ಇ-ಬಾಬರಿ ತುರ್ಕಿ** ಭಾಷೆಯಲ್ಲಿ ಪದ್ಯಗಳನ್ನು ಸಂಗ್ರಹಿಸಿದ್ದು ಆ ಸಂಗ್ರಹವನ್ನು ದಿವಾನ್ ಎಂದು ಕರೆಯಲಾಗಿದೆ. ಖ್ವಾಜಾ ಉಬೇದುಲ್ಲಾನ ರಿಸಾಲ್-ಇ-ವಾಲ್ದಿಯಾ ಕೃತಿಯನ್ನು ತುರ್ಕಿ ಭಾಷೆಗೆ ಬಾಬರ್‌ನು ಭಾಷಾಂತರಿಸಿದನು. ಇವನ ಮತ್ತೊಂದು ಕೃತಿ **ಖಾತ್-ಇ-ಬಾಬರಿ.**

ಬಾಬರ್ ಆಕ್ರಮಣದ ಪರಿಣಾಮಗಳು

1) **ಕುಶಾನರ** ನಂತರ ಪ್ರಥಮವಾಗಿ ಕಾಬೂಲ್ ಮತ್ತು ಕಾಂದಹಾರ್‌ಗಳನ್ನು ಉತ್ತರ ಭಾರತದ ಸಾಮ್ರಾಜ್ಯದ ಭಾಗಗಳನ್ನಾಗಿ ಸೇರಿಸಲಾಯಿತು.
2) ಈ ಮೇಲಿನ ಭಾಗಗಳ ಮೇಲೆ ಹತೋಟಿ ಸಾಧಿಸಿದ ಮೊಗಲರು ವಾಯವ್ಯ ಭಾರತದ ವಿದೇಶಿಯರ ಆಕ್ರಮಣಗಳನ್ನು ಸುಮಾರು 200 ವರ್ಷಗಳ ಕಾಲ ತಡೆದರು.
3) ಈ ಎರಡು ನಗರಗಳು ಚೀನಾ ಮತ್ತು ಮೆಡಿಟರೇನಿಯನ್ ಬಂದರುಗಳ ವಸ್ತುಗಳನ್ನು ಕಾರವಾನ್ ಮೂಲಕ ಸಾಗಿಸಲು ಹೆಬ್ಬಾಗಿಲಿನಂತಿದ್ದವು.
4) ಇವನ ವಿಜಯಗಳಿಂದ ಭಾರತದಲ್ಲಿ ಮದ್ದು ಮತ್ತು ಫಿರಂಗಿಗಳ ಉಪಯೋಗ ಹೆಚ್ಚಿತು.
5) ಬಾಬರನ ಸೈನಿಕ ಕೌಶಲ ಮತ್ತು ಶುದ್ಧ ಜೀವನ ಹಿಂದೆ ಫಿರೋಜ್‌ಷಾನ ಕಾಲದಲ್ಲಿ ಸುಲ್ತಾನನಿಗಿದ್ದ ಘನತೆ ಮತ್ತು ಗೌರವಗಳು ಮತ್ತೆ ದೊರೆಯುವಂತಾಯಿತು.
6) ಬಾಬರನು ಏಷ್ಯಾದ ಪ್ರಮುಖ ಸೈನಿಕರಾಗಿದ್ದ ಚಂಗೇಸ್‌ಖಾನ್ ಮತ್ತು ತೈಮೂರನ ವಂಶದವನಾದ್ದರಿಂದ ಯಾವ ನೋಬಲ್ಲನು ಸರಿಸಮಾನ ಸ್ಥಾನವನ್ನು ಬಯಸುತ್ತಿರಲಿಲ್ಲ.
7) ಬಾಬರನು ಭಾರತಕ್ಕೆ ಗುಲಾಬಿಯನ್ನು ಪರಿಚಯಿಸಿದನು.

ಬಾಬರ್‌ನಾಮ

- ಬಾಬರನು ಸ್ವತಃ **ಬಾಬರ್‌ನಾಮ**ವನ್ನು ಚಗಟೈ ತುರ್ಕಿ ಭಾಷೆಯಲ್ಲಿ ಬರೆದಿದ್ದಾನೆ. ಈ ಕೃತಿಯು ಸುಮಾರು 4 ಬಾರಿ ಅನುವಾದಗೊಂಡಿದೆ.
- ಬಾಬರ್ ಅನೇಕ ಬಾರಿ ಹಿಂದಿಸ್ ಎಂಬ ಪದ ಬಳಸಿದ್ದಾನೆ. ಇದನ್ನು ಉಪಯೋಗಿಸುವಾಗ ಭಾರತದಲ್ಲಿನ ಹಿಂದೂ ಮತ್ತು ಮುಸ್ಲಿಂ ಜನರನ್ನು ಪ್ರತ್ಯೇಕಿಸದೆ ಎಲ್ಲರನ್ನು ಹಿಂದಿಸ್ ಎಂದಿದ್ದಾನೆ. ಅಂಕಿ ಸಂಖ್ಯೆಗಳ ಬಗ್ಗೆ ತಿಳಿಸುತ್ತಾ 1,00,000ವನ್ನು ಲಕ್ಷವೆಂದು 100 ಲಕ್ಷಗಳನ್ನು ಕೋಟಿ ಎಂದು, 100 ಕೋಟಿಯನ್ನು ಒಂದು ಅರ್ಬ್ ಎಂದು, 100 ಅರ್ಬ್‌ನ್ನು ಒಂದು ಖರಬ್ ಎಂದು, 100 ಖರಬ್‌ಗಳನ್ನು ಒಂದು ನೀಲ್ ಎಂದು, 100 ನೀಲ್‌ಗಳನ್ನು ಒಂದು ಪದಂ ಎಂದು, 100 ಪದಂಗಳನ್ನು ಒಂದು ಸ್ಯಾಂಗ್ ಎಂದು ಕರೆದಿದ್ದಾನೆ.

ಹುಮಾಯೂನ್ (ಕ್ರಿ.ಶ.1530-56) (Humayun)

- ಬಾಬರನ ಹಿರಿಯ ಮಗನಾದ ನಾಸೀರುದ್ದೀನ್ ಮಹ್ಮದ್ ಹುಮಾಯೂನ್ 1508 ಮಾರ್ಚ್ 6ರಂದು ಕಾಬೂಲ್‌ನಲ್ಲಿ ಜನಿಸಿದನು. ಇವನ ತಾಯಿ ಮಹೀಂಬೇಗಂಗೆ ಇವನೊಬ್ಬನೇ ಮಗ. ಬಾಬರನ ಇನ್ನಿತರ ಪತ್ನಿಯರ ಮಕ್ಕಳೆಂದರೆ ಕಮ್ರಾನ್, ಅಸ್ಕರಿ ಮತ್ತು ಹಿಂಡಾಲ್.
- ಹುಮಾಯೂನ್ ತುರ್ಕಿ, ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳನ್ನು ಕಲಿತಿದ್ದು ಗಣಿತ, ವೇದಾಂತ, ಖಗೋಳ ಮತ್ತು ಜ್ಯೋತಿಷ್ಯಶಾಸ್ತ್ರಗಳಲ್ಲಿ ಆಸಕ್ತಿ ಹೊಂದಿದ್ದನು.
- ಹುಮಾಯೂನ್‌ಗೆ ತಂದೆಯ ಕಾಲದಲ್ಲಿ ಪಾಣಿಪತ್ ಹಾಗೂ ಕಣ್ವ ಯುದ್ಧಗಳಲ್ಲಿ ಭಾಗವಹಿಸಿದ ಮತ್ತು ಹಿಸ್ಸಾರ್, ಫಿರೋಜಾ, ಬದಕ್‌ಷಾನ್ ಮತ್ತು ಸಾಂಬಾಲ್ ಪ್ರದೇಶಗಳಲ್ಲಿ ಆಡಳಿತ ನಡೆಸಿದ ಅನುಭವವಿತ್ತು.
- ತನ್ನ ಸೋದರರಾದ ಕಮ್ರಾನ್‌ನನ್ನು ಕಾಂದಾಹಾರ್ ಮತ್ತು ಕಾಬೂಲ್‌ಗೆ, ಅಸ್ಕರಿಗೆ ಸಂಬಾಲವನ್ನು ಮತ್ತು ಹಿಂಡಾಲನಿಗೆ ಮೇವಾತ್‌ನ್ನು ನೀಡಿದ್ದನು. ಕಮ್ರಾನ್‌ಗೆ, ಹಿಸ್ಸಾರ್, ಫಿರೋಜ್ ಮತ್ತು ಪಂಜಾಬ್‌ಗಳನ್ನು ಸಹ ನೀಡಿದ್ದನು.
- ಹುಮಾಯೂನ್‌ನ ಸೈನ್ಯದಲ್ಲಿ ಚಗಟಾಯಿಗಳು, ಉಜ್ಬೇಗರು, ಮೊಗಲರು, ಪರ್ಷಿಯನ್ನರು, ಆಫ್ಘನ್ನರು ಮತ್ತು ಹಿಂದೂಸ್ತಾನಿಗಳಿಂದ ಕೂಡಿದ ಮಿಶ್ರ ಸೈನ್ಯವಾಗಿತ್ತು.

ಅಫ್ಘನ್ನರೊಂದಿಗೆ ಹುಮಾಯೂನ ಮೊದಲ ಯುದ್ಧಗಳು

1. **ಕಾಲಿಂಜರ್ ಮೇಲೆ ದಾಳಿ (1531) :-** ಕಾಲಿಂಜರ್‌ನ್ನು ಪ್ರತಾಪರುದ್ರದೇವನು ಆಳುತ್ತಿದ್ದರು. ಇವನು ಬಹದ್ದೂರ್ ಷಾನೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾನೆಂಬ ಶಂಕೆಯ ಮೇಲೆ ಹುಮಾಯೂನ್ ದಾಳಿ ಮಾಡಿದನು. ಆದರೆ ಪೂರ್ವದಲ್ಲಿ ಷೇರ್‌ಖಾನ್ ಚುನಾರ್‌ಕೋಟೆ ವಶಪಡಿಸಿಕೊಂಡಿದ್ದಾನೆ ಮತ್ತು [illegible] ಸುದ್ದಿ ತಿಳಿದ ಹುಮಾಯೂನ್ ಪ್ರತಾಪರುದ್ರನೊಡನೆ ಒಪ್ಪಂದ ಮಾಡಿಕೊಂಡನು. ಈ ಸೈನಿಕ ದಾಳಿಯು ವಿಫಲತೆಯಲ್ಲಿ ಕೊನೆಗೊಂಡಿತು.
2. **ದೌರಾ ಕದನ (1532) :-** ಬಿಹಾರದ ಅಫ್ಘನ್ನರು ಮಹ್ಮದ ಲೋದಿಯ ನೇತೃತ್ವದ ಬಣ ಮತ್ತು ಹುಮಾಯೂನ್ ನಡುವೆ ದೌರ ಎಂಬಲ್ಲಿ ಯುದ್ಧ ನಡೆದು ಅಫ್ಘನ್ನರು ಸಂಪೂರ್ಣವಾಗಿ ಸೋಲನ್ನನುಭವಿಸಿದರು.
3. **ಮೊದಲ ಚುನಾರ್ ಮುತ್ತಿಗೆ (1532):-**

- ಇದು ಷೇರ್‌ಖಾನ್‌ನ ಹತೋಟಿಯಲ್ಲಿದ್ದು ಹುಮಾಯೂನ್ ಈ ಕೋಟೆಯ ಮೇಲೆ ಅನೇಕ ತಿಂಗಳುಗಳು ಮುತ್ತಿಗೆ ಹಾಕಿದರೂ ವಶವಾಗದೆ ಹಿಂದಿರುಗಿದನು.
- ನಂತರ ಹುಮಾಯೂನ್ ಆಗ್ರಾದಲ್ಲಿದ್ದುಕೊಂಡು ದಿನ್‌ಪನ್ಹಾ ಎಂಬ ಹೊಸ ನಗರ ನಿರ್ಮಿಸಲು ಮತ್ತು ಭೋಗ ಜೀವನದಲ್ಲಿ ತೊಡಗಿದನು. ಈ ಅವಧಿಯಲ್ಲಿ ಷೇರ್‌ಖಾನ್ ಮತ್ತು ಬಹದ್ದೂರ್ ತಮ್ಮ ಶಕ್ತಿಯನ್ನು ವೃದ್ಧಿಸಿಕೊಂಡು ಪ್ರಬಲರಾದರು.

4. **ಬಹದ್ದೂರ್ ಷಾ ನೊಂದಿಗಿನ ಯುದ್ಧಗಳು (1935-36)**

- ಗುಜರಾತಿನ ಬಹದ್ದೂರಷಾನು ಪ್ರಬಲನಾಗಿ ಪೂರ್ವದ ಷೇರ್‌ಖಾನ್ ಮತ್ತು ಬಂಗಾಳದ ನಸ್ರತ್‌ಷಾನೊಂದಿಗೆ ಸಂಪರ್ಕವಿದ್ದು, ಹುಮಾಯೂನನ ಎಲ್ಲಾ ವೈರಿಗಳಿಗೂ ಇವನು ಆಶ್ರಯ ನೀಡಿದ್ದನು.
- ಬಹದೂರ್ ಷಾನು ಫಿರಂಗಿ ಪಡೆಯನ್ನು ತುರ್ಕಿ ಫಿರಂಗಿ ಪರಿಣಿತ ರುಮಿನ್‌ಖಾನ್‌ನಿಂದ ಬಲಗೊಳಿಸಿದ್ದನು. ಬಹದ್ದೂರ್ ಷಾನಿಂದ ಅವಮಾನಕ್ಕೊಳಗಾದ ಮೇವಾಡದ ರಾಣಿ ಕರ್ಣಾವತಿಯು ಬಹದ್ದೂರ್‌ಷಾನ ವಿರುದ್ಧ ಹುಮಾಯೂನ್‌ನ ನೆರವು ಕೇಳಿದಳು. ಆದರೆ ಹುಮಾಯೂನ್ ಅದಕ್ಕೆ ಒಪ್ಪಲಿಲ್ಲ. ಇದನ್ನು ನಿರ್ಲಕ್ಷಿಸಿ ಮಹಾಪರಾಧ ಮಾಡಿದ ಏಕೆಂದರೆ ರಜಪೂತರ ಅನುಕಂಪ ಮತ್ತು ಬೆಂಬಲವನ್ನು ತನ್ನ ಮಗ ಅಕ್ಬರ್‌ನಿಗಿಂತ ಮೊದಲ ಪಡೆಯಬಹುದಾಗಿದ್ದ ಸುವರ್ಣಾವಕಾಶವನ್ನು ಕಳೆದುಕೊಂಡನು.

ಹುಮಾಯೂನ್ ಮತ್ತು ಷೇರ್‌ಖಾನ್‌ನ ನಡುವಿನ ಹೋರಾಟ (ಕ್ರಿ.ಶ.1537-40)

ಚೌಸಾ ಕದನ (ಕ್ರಿ.ಶ.ಜೂನ್ 26 1539)

ಚೌಸಾದಲ್ಲಿ ಷೇರ್‌ಖಾನ್ ಮತ್ತು ಹುಮಾಯೂನ್ ನಡುವೆ ಭೀಕರ ಯುದ್ಧ ನಡೆದು ಹುಮಾಯೂನ್ ಸೋತು ಗಂಗಾನದಿಯಲ್ಲಿ ಮುಳುಗಿದನು. ಅದೃಷ್ಟವಶಾತ್ ಜಲವಾಹಕನಾದ ನಿಜಾಂನ ಸಹಾಯದಿಂದ ನದಿ ದಾಟಿದನು. ಶೇರ್‌ಖಾನ್ ತಾನೇ ದೆಹಲಿ ಸುಲ್ತಾನ ಎಂದು ಘೋಷಿಸಿ ಕೊಂಡು ಷೇರ್‌ಷಾ ಎಂಬ ಬಿರುದು ಧರಿಸಿಕೊಂಡನು.

ಕನೂಜ್ ಅಥವಾ ಬಿಲ್ಗ್ರಾಮ್ ಕದನ (ಕ್ರಿ.ಶ. ಮೇ 17 1540)

ಇದು ಹುಮಾಯೂನ್ ನಿರ್ಣಾಯಕ ಯುದ್ಧವಾಗಿತ್ತು. ಈ ಯುದ್ಧವು ಕನೂಜ್‌ನಲ್ಲಿ ನಡೆದು ಮೊಗಲ್ ಸೈನ್ಯ ತಮ್ಮ ಪಾಳೆಯನ್ನು ವರ್ಗಾಯಿಸುತ್ತಿದ್ದಾಗ ಷೇರ್‌ಷಾನ ಅನಿರೀಕ್ಷಿತ ದಾಳಿಯಿಂದ ಮೊಘಲ್ ಸೈನ್ಯಕ್ಕೆ ಸೋಲುಂಟಾಯಿತು.

- ಷೇರ್‌ಷಾನು ಆಗ್ರಾ ಮತ್ತು ದೆಹಲಿಗಳನ್ನು ವಶಪಡಿಸಿಕೊಂಡು ದೆಹಲಿಯಲ್ಲಿ ಮತ್ತೆ ಅಫ್ಘನ್ನರ ಸಾರ್ವಭೌಮತ್ವವನ್ನು ಸ್ಥಾಪಿಸಿದನು.

ದೇಶಭ್ರಷ್ಟನಾಗಿ ಹುಮಾಯೂನ್ (ಕ್ರಿ.ಶ.1540-55)

- ನಿರಾಶ್ರಿತನಾದ ಹುಮಾಯೂನ್ ಕಾಶ್ಮೀರ/ಬದಕ್‌ಷಾಗೆ ಹೋಗುವಾಗ ಕಮ್ರಾನ್ ತಡೆದನು. ಮತ್ತು ಸಿಂದ್‌ನಲ್ಲಿ ಷಾ ಹುಸೇನ್ ವಿರೋಧಿಸಿದನು. ಕ್ರಿ.ಶ.1541ರಲ್ಲಿ ಇವನು ಷೇಕ್ ಅಲಿ ಅಂಬರ್ ಜೈನಿಯ ಮಗಳಾದ ಹಮೀದಾಬಾನು ಬೇಗಂಳನ್ನು ವಿವಾಹವಾದನು (ಅಂಬರ್‌ಜೈನಿ ಹಿಂಡಾಲನ ಶಿಕ್ಷಕನಾಗಿದ್ದವನು)
- ಹುಮಾಯೂನ್ ಮಾರ್ವರಾದಿಂದ ಹಿಂದಿರುಗುವಾಗ ಅಮರ ಕೋಟೆಯ ರಜಪೂತ ದೊರೆ **ವೀರಸಾಲನು** ಹುಮಾಯೂನ್‌ಗೆ ಆಶ್ರಯ ನೀಡಿದನು. ಇಲ್ಲಿ ಅಕ್ಬರ್ ಜನಿಸಿದನು.
- ನಂತರ ಹುಮಾಯೂನ್ ಕಾಂದಹಾರ್ ಮೂಲಕ ಪರ್ಷಿಯಾವನ್ನು ತಲುಪಿದನು. ಅಕ್ಬರನನ್ನು ಕಾಂದಾಹಾರ್‌ನ ಗೌರ್ನರ್ ಅಸ್ಕರಿಯ ಪೋಷಣೆಯಲ್ಲಿ ಬಿಟ್ಟನು. ಪರ್ಷಿಯಾದ ಷಾ ತಮಸ್ಪನ ಔದಾರ್ಯಕ್ಕೊಳಗಾದ ಹುಮಾಯೂನ್ ಸೈನಿಕ ಸಹಾಯವನ್ನು ಪಡೆದುಕೊಂಡನು. ಹೀಗೆ ಅಫ್ಘಾನಿಸ್ತಾನದಲ್ಲಿದ್ದುಕೊಂಡೆ ತನ್ನ ಕಳೆದು ಹೋದ ಭಾರತದ ಸಾಮ್ರಾಜ್ಯವನ್ನು ಪಡೆಯಲು ಹುಮಾಯೂನ್ ಸಿದ್ದನಾದನು.

ಭಾರತ ಸಾಮ್ರಾಜ್ಯದ ಪುನರ್ ಸಂಪಾದನೆ(ಕ್ರಿ.ಶ.1555)

- ಷೇರ್‌ಷಾನು ಕ್ರಿ.ಶ.1545ರಲ್ಲಿ ಮರಣ ಹೊಂದಲಾಗಿ ಇವನ ಉತ್ತರಾಧಿಕಾರಿಯಾಗಿ ಇಸ್ಲಾಂಷಾನು ಅಧಿಕಾರಕ್ಕೆ ಬಂದನು. ಇಸ್ಲಾಂಷಾನು ಕ್ರಿ.ಶ.1553ರಲ್ಲಿ ಮರಣ ಹೊಂದಿದ್ದರಿಂದ ಉತ್ತರಾಧಿಕಾರಕ್ಕೆ ಹೋರಾಟ ನಡೆದು ಇವನ ಮಗ 'ಫಿರೋಜ್'ನನ್ನು ಅಧಿಕಾರಕ್ಕೆ ತಂದರು ಆದರೆ ಇವನ ಸೋದರ ಮಾವನಾದ ಮುಬಾಜ್‌ನು ಫಿರೋಜನನ್ನು ಕೊಂದು ಮಹ್ಮದ್ ಆದಿಲ್ ಷಾ ಬಿರುದಿನೊಂದಿಗೆ ಸಿಂಹಾಸನವೇರಿದನು.
- ಆದಿಲ್‌ಷಾನು ರಾಜ್ಯಾಡಳಿತವನ್ನು ತನ್ನ ಮಂತ್ರಿ **'ಹೇಮು'**ವಿನ ಕೈಗೊಪ್ಪಿಸಿದನು. ಆದಿಲ್‌ಷಾನನ್ನು ಇಬ್ರಾಯಿಂ ಷಾ ಮತ್ತು ಸಿಕಂದ್ ಷಾ ಎಂಬ ಮನೆತನಗಳು ವಿರೋಧಿಸಿದವು. ಇದೆಲ್ಲದರ ಉಪಯೋಗ ಪಡೆದುಕೊಂಡ ಹುಮಾಯೂನ್ ಕ್ರಿ.ಶ.1555ರಲ್ಲಿ **ಮಚ್ಛೀವಾರ** ಕದನದಲ್ಲಿ ಆಫ್ಘನ್ನರನ್ನು ಮತ್ತು ಸಿಂಕದಷಾನನ್ನು ಸೋಲಿಸಿ ದೆಹಲಿ ರಾಜ್ಯವನ್ನು ಮತ್ತೆ ಪಡೆದನು.
- ಹುಮಾಯೂನನು ದಿನ್‌ಪನ್ನಾದಲ್ಲಿನ ಗ್ರಂಥಾಲಯದ ಮಹಡಿಯ ಮೆಟ್ಟಿಲುಗಳನ್ನು ಇಳಿಯುವಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮರಣ ಹೊಂದಿದನು.

ನಡೆದನು ಮತ್ತು ಜೀವನದ ಹೊರಕ್ಕೂ ಬೀಳುತ್ತಾ ನಡೆದನು" ಎಂದಿದ್ದಾರೆ.

- ಹುಮಾಯೂನ್ ಮುಖ್ಯ ಸಲಹೆಗಾರ **ಬೈರಂಖಾನ್**ನಾಗಿದ್ದನು.

ಷೇರ್ ಷಾ ಮತ್ತು ಸೂರ್ ಸಂತತಿ ಅಥವಾ ಫರೀದ ಅಥವಾ ಷೇರ್‌ಖಾನ್ (ಕ್ರಿ.ಶ.1540-55)

(Sur Dyanasty-Sher Shah Sur)

- ಹಿಂದೂ ಮುಸ್ಲಿಂರ ಪುನರುಜ್ಜೀವನ ನಾಯಕ 'ಷೇರ್‌ಖಾನ್'. ಇವನ ಮೂಲ ಹೆಸರು **'ಫರೀದ್'** ಇವನು ಪೇಷಾವರ ಬಳಿ ವಾಸಿಸುತ್ತಿದ್ದ ಆಫ್ಘನ್ನರ 'ಸೂರ್ ಪಂಗಡಕ್ಕೆ' ಸೇರಿದವನು.
- ಫರೀದನು 1472ರಲ್ಲಿ 'ನರ್ಸೌಲ್ ಬಳಿ' ಜನಿಸಿದನು. (ತಂದೆ ಹಸನ್, ತಾತ ಇಬ್ರಾಹಿಂ) ಫರೀದನು 1494ರಲ್ಲಿ ತಂದೆಯೊಡನೆ ಜಗಳವಾಡಿ ಅಂದಿನ ಶೈಕ್ಷಣಿಕ ಕೇಂದ್ರವಾದ ಜೌನ್‌ಪುರಕ್ಕೆ ಬಂದನು. ಇಲ್ಲಿ ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯನ್ನು ಕಲಿತನು. ಅಂದಿನ ಹೆಸರಾಂತ ಕೃತಿಗಳಾದ ಗುಲಿಸ್ತಾನ್, ಬೊಸ್ತಾನ್ ಮತ್ತು ಸಿಕಂದರ್ ನಾಮಗಳನ್ನು ಅಭ್ಯಸಿಸಿದನು.
- ತನ್ನ ತಂದೆ ಹಸನ್‌ನು ಫರೀದನಿಗೆ ಸಸಾರಂ ಮತ್ತು ಬಿವಾಸ್‌ಪುರ ಎಂಬ ಎರಡು ಪರಗಣಗಳ ಆಡಳಿತಗಾರನನ್ನಾಗಿ ನೇಮಿಸಿದನು ಇಲ್ಲಿ ಫರೀದನು 1497-1518 ರವರೆಗೆ ಆಡಳಿತ ನಡೆಸಿದನು.
- ಫರೀದನು ಆಗ್ರಾದ ನೋಬೆಲ್‌ನಾದ ದೌಲತಾ ಖಾನ್ ಲೋದಿಯ ಸೇವೆಯಲ್ಲಿ ಹಾಗೂ ದಕ್ಷಿಣ ಬಿಹಾರದ ಒಡೆಯನಾದ ಬಹರ್ ಖಾನ್ ಲೋಹಾನಿಯ (1522ರಲ್ಲಿ) ಸೇವೆಯಲ್ಲಿ ಹಾಗೂ 1527ರ ಏಪ್ರಿಲ್ 1528ರ ಜೂನ್ ವರೆಗೆ ಬಾಬರ್ ಸೇವೆಯಲ್ಲಿ ಸೇರಿಕೊಂಡನು.
- ಚುನಾರ್‌ನ ಅಧಿಪತಿ ತಾಜ್ ಖಾನನು ತನ್ನ ಪತ್ನಿ ಲಾಡ್ ಮಲ್ಲಿಕಳ ಬಗ್ಗೆ ಮೋಹಕಪರವಶನಾದ್ದರಿಂದ ಕೊಲೆಗೀಡಾದನು. ಈ ವಿಧವೆ ಲಾಡ್ ಮಲ್ಲಿಕ್‌ಳನ್ನು 1530ರಲ್ಲಿ ಷೇರ್ ಖಾನ್ ವಿವಾಹವಾಗಿ ಚುನಾರ್ ಕೋಟೆಯನ್ನು ಪಡೆದನು. ನಾಸಿರ್ ಖಾನ್ ಲೋಹಾನಿಯ ವಿಧವೆ ಹೆಂಡತಿ ಗೌಹರ್-ಗೊಸ್ಸಾಯಿನ್ ಳನ್ನು ವಿವಾಹವಾಗಿ ಘಾಜಿಪುರ ಪಡೆದನು.

ಸಾಮ್ರಾಜ್ಯ ಗಳಿಕೆಗಾಗಿ ಹೋರಾಟ (ಕ್ರಿ.ಶ.1530-40)

1) **ಸೂರಜ್‌ಗರ್ ಕದನ -ಕ್ರಿ.ಶ. 1534 :-** ಕ್ರಿ.ಶ.1534ರಲ್ಲಿ ಸೂರಜ್‌ಗರ್ ಎಂಬಲ್ಲಿ ನಡೆದ ಯುದ್ಧದಲ್ಲಿ ಷೇರ್‌ಷಾನು ಬಂಗಾಳದ ಮಹ್ಮದ್‌ಷಾ ಮತ್ತು ಲೊಹಾನಿ ನೊಬೆಲ್ಲರ ಒಕ್ಕೂಟದ ಸೇನೆಯನ್ನು ಸೋಲಿಸಿದನು. ಈ ವಿಜಯವು ಅವನ ಜೀವನದ ಪ್ರಮುಖ ತಿರುವಾಗಿ ಪರಿಣಮಿಸಿತು.
2) **ಚೌಸಾ ಕದನ 1539 ಜೂನ್ 26. :-** ಬಿಹಾರ ಮತ್ತು ಉತ್ತರಪ್ರದೇಶ ಗಡಿಯಲ್ಲಿನ 'ಚೌಸಾ' ಎಂಬಲ್ಲಿ ಷೇರ್‌ಷಾನು 1539ರಲ್ಲಿ ಹುಮಾಯೂನ್‌ನನ್ನು ಸೋಲಿಸಿದನು. ಇದರಿಂದ ಷೇರ್‌ಷಾನು ತಾನೇ ಸುಲ್ತಾನನೆಂದು ಘೋಷಿಸಿಕೊಂಡು **'ಸುಲ್ತಾನ್-ಇ-ಅದಿಲ್'**

3) **ಕನೂಜ್ / ಬೆಲ್ಗ್ರಾಮ್ ಕದನ (ಮೇ 17, 1540)** :–ಷೇರ ಷಾನು 1540ರ ಕನೂಜ್ ಕದನದಲ್ಲಿ ಹುಮಾಯೂನ್‌ನನ್ನು ಸೋಲಿಸಿದನು. ಇದರಿಂದ ಷೇರ್‌ಷಾನು ಆಗ್ರಾ, ದೆಹಲಿ ಮತ್ತು ಲಾಹೋರ್‌ಗಳನ್ನು ವಶಪಡಿಸಿಕೊಂಡು ಮೊಗಲರನ್ನು ಭಾರತದಿಂದ ಹೊರದೂಡಿ 2ನೇ ಬಾರಿ ಆಫ್ಘನ್ ಸಾಮ್ರಾಜ್ಯವನ್ನು ಭಾರತದಲ್ಲಿ ಸ್ಥಾಪಿಸಿದನು.

ಸೈನಿಕ ಸಾಧನೆಗಳು

1) **ಘಕ್ಕಾರರ ಮೇಲೆ ದಂಡಯಾತ್ರೆ** :– ಇದರ ಉದ್ದೇಶ ಘಕ್ಕಾರರ ಹತೋಟಿ ಹೊಂದಿದ್ದ ಬೋಲಾನ್ ಮತ್ತು ಖೈಬರ್ ಕಣಿವೆಗಳ ಮೂಲಕ ಮೊಗಲರು ಮತ್ತೆ ಭಾರತದೊಳಗೆ ನುಸುಳಿ ಪುನರಾಕ್ರಮಣ ಮಾಡುವುದನ್ನು ತಡೆಗಟ್ಟುವುದಾಗಿತ್ತು.

2) **ಬಂಗಾಳದಲ್ಲಿ ದಂಗೆಯ ದಮನ –1541**. :– ಬಂಗಾಳದಲ್ಲಿ ಸ್ವತಂತ್ರ ಘೋಷಿಸಿಕೊಂಡ ಖಿಜರ್ ಖಾನ್‌ನನ್ನು ಷೇರ್‌ಷಾನು ಸೆರೆಹಿಡಿದನು. ಬಂಗಾಳವು ದೆಹಲಿಯಿಂದ ದೂರವಿದ್ದುದರಿಂದ ಮತ್ತೆ ದಂಗೆಗಳಾಗದಂತೆ ಬಂಗಾಳವನ್ನು ಹಲವು ಸರ್ಕಾರ (ಜಿಲ್ಲೆ) ಗಳಾಗಿ ವಿಭಾಗಿಸಿ ಪ್ರತಿಯೊಂದರಲ್ಲಿ ಒಬ್ಬೊಬ್ಬ ಸೈನಿಕ ಅಧಿಕಾರಿ (ಷಿಕ್ದಾರ್) ಯ ನೇತೃತ್ವದಲ್ಲಿ ಚಿಕ್ಕ ಸೈನ್ಯವಿರುವಂತೆ ಮಾಡಿದನು. ಈ ನೂತನ ಕ್ರಮದಿಂದಾಗಿ ಬಂಗಾಳದಲ್ಲಿ ಸೈನಿಕ ಗೌರ್ನರ್ ಹುದ್ದೆಯೇ ಇಲ್ಲದಂತೆ ಮಾಡಿದನು.

3) **ಮಾಳ್ವದ ದಂಡಯಾತ್ರೆ– 1541**. :– ಷೇರ್‌ಷಾನು ಅಸ್ಕಾರಿ ಮತ್ತು ಹಿಂಡಾಲರನ್ನು ಸೋಲಿಸಿದನು. ಷೇರ್‌ಷಾನು ಮಾಳ್ವಕ್ಕೆ ಸುಜಾತ್‌ಖಾನ್‌ನನ್ನು ಗೌರ್ನರಾಗಿ ನೇಮಿಸಿದನು.

4) **ರಾಯಸಿನ್ ಕೋಟೆಯ ವಶ –1543**. ;– ಮಧ್ಯ ಭಾರತದ ರಾಯಸಿನ್ ಮತ್ತು ಚಂದೇರಿಗಳು ಪೂರಣ್ ಮಲ್‌ನ ಹತೋಟಿಯಲ್ಲಿದ್ದವು. ಇವನು ಮುಸ್ಲಿಂರಿಗೆ ಹಿಂಸೆ ಕೊಡುತ್ತಿದ್ದನು. ಇದನ್ನು ಷೇರ್‌ಷಾನು ಆಕ್ರಮಿಸಿಕೊಂಡನು.

5) **ಮುಲ್ತಾನ್ – 1543**. :– ಪಂಜಾಬ್‌ನ ಹೊಸ ಗೌರ್ನರ್ ಹೈಬತ್‌ಖಾನ್‌ನು 1543ರಲ್ಲಿ ಸ್ವತಂತ್ರವಾಗುವ ಹವಣಿಕೆಯಲ್ಲಿದ್ದನು. ಷೇರ್‌ಷಾನು ಇವನನ್ನು ಸೋಲಿಸಿದನು.

6) **ಮಾರ್ವಾರದ ಆಕ್ರಮಣ** :– ಮಾರ್ವಾರದ ರಜಪೂತ ದೊರೆ ಮಾಳ್ವದೇವನು 1542ರಲ್ಲಿ ಅಧಿಕಾರಕ್ಕೆ ಬಂದನು. ಇವನ ರಾಜಧಾನಿ ಜೋಧ್‌ಪುರವಾಗಿತ್ತು. ಇದನ್ನು ಷೇರ್‌ಷಾ ಆಕ್ರಮಿಸಿದನು.

7) **ಮೇವಾರದ ಆಕ್ರಮಣ 1542** :– 1542ರಲ್ಲಿ ಮೇವಾರದ ರಾಣಾ ಉದಯಸಿಂಗನನ್ನು ಸೋಲಿಸಿದನು. ಹೀಗೆ ಮಾರ್ವಾರ ಮತ್ತು ರಾಯಸಿನ್‌ಗಳನ್ನು ಬಿಟ್ಟು ಬೇರಾವ ರಜಪೂತ ರಾಜ್ಯಗಳು ಷೇರ್ ಷಾನ ಅಧೀನಕ್ಕೊಳಪಡಲಿಲ್ಲ.

8) **ಕಾಲಿಂಜರ್ ಮೇಲೆ ದಾಳಿ ಮತ್ತು ಷೇರ್‌ಷಾನ ಮರಣ**. :– ಷೇರ್‌ಷಾನು ಸುಮಾರು 7 ತಿಂಗಳು ಹೋರಾಟ ಮಾಡಿದರೂ ಕಾಲಿಂಜರ್ ಕೋಟೆ ವಶವಾಗದೇ ಇದ್ದಾಗ ಗೋಡೆ ಒಡೆಯುವ ಪ್ರಯತ್ನ ಮಾಡಿದಾಗ ಸಿಡಿದ ಮದ್ದು ಶಸ್ತ್ರಾಸ್ತ್ರದ ಸಂಗ್ರಹಕ್ಕೆ ತಗುಲಿ ಸ್ಫೋಟಗೊಂಡಿದ್ದರಿಂದ ಷೇರ್ ಷಾನು ಮರಣ ಹೊಂದಿದನು.

ಷೇರ್‌ಷಾನ ಆಡಳಿತ ವ್ಯವಸ್ಥೆ.

- ಷೇರ್‌ಷಾನು ನಿರಂಕುಶ ಪ್ರಭುವಾಗಿದ್ದರೂ ಆತನ ಸರ್ಕಾರ ಹೆಚ್ಚು ಕೇಂದ್ರಿಕೃತ ರೀತಿಯಾಗಿತ್ತು. ಆಡಳಿತದಲ್ಲಿ ಉಲೇಮಾಗಳ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿರಲಿಲ್ಲ.
- ಷೇರ್‌ಷಾನ ಮಂತ್ರಿ ಮಂಡಲವು 4 ಸದಸ್ಯರಿಂದ ಕೂಡಿತ್ತು ಅವರೆಂದರೆ.

1. **ದಿವಾನ್–ಇ–ವಜೀರಾತ್** :– ಮಂತ್ರಿಗಳ ಮೇಲ್ವಿಚಾರಣೆಯ ಜವಾಬ್ದಾರಿ ಈತನಿಗೆ ಸೇರಿತ್ತು. ಸಾಮ್ರಾಜ್ಯದ ಕಂದಾಯ ಮತ್ತು ಹಣಕಾಸಿನ ಆಡಳಿತವನ್ನು ನಿರ್ವಹಿಸುತ್ತಿದ್ದರು.
2. **ದಿವಾನ್–ಇ–ಅರಿಜ್**:– ಅರಿಜ್–ಇ–ಮಾಮೂಲಕ್ ಇದರ ಮುಖ್ಯಸ್ಥನಾಗಿದ್ದು ಸೇನೆಯ ಉಸ್ತುವಾರಿ, ಸೇನೆಯ ಭರ್ತಿ, ಸಂಘಟನೆ, ಶಿಸ್ತು, ವೇತನ ಮತ್ತು ಇತರೆ ಆಡಳಿತ ನೋಡಿಕೊಳ್ಳುತ್ತಿದ್ದನು.
3. **ದಿವಾನ್–ಇ–ರಿಸಾಲತ್ ಅಥವಾ ದಿವಾನ್–ಇ–ಮುಹ್ತಾಸಿಬ** :– ವಿದೇಶಾಂಗ ಮಂತ್ರಿ. ರಾಜತಂತ್ರಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳ ವ್ಯವಹಾರ ಜೊತೆಗೆ ಧಾನ ಧರ್ಮ ಮತ್ತು ದತ್ತಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದನು.
4. **ದಿವಾನ್–ಇ–ಇನ್ಶಾ**– ರಾಜಾಜ್ಞೆಗಳನ್ನು ರಚಿಸಿ, ಪ್ರಚುರಪಡಿಸುವ ಕಾರ್ಯವನ್ನು ಮತ್ತು ಅವುಗಳನ್ನು ಇತರ ಅಧಿಕಾರಿಗೆ ಕಳುಹಿಸುವುದು ಹಾಗೂ ಅವರೊಂದಿಗೆ ಪತ್ರ ವ್ಯವಹಾರ ಮಾಡುವುದು.

ಇತರೆ ಅಧಿಕಾರಿಗಳು

1) **ಪ್ರಧಾನ ಖಾಜಿ**:– ದಿವಾನ್–ಇ–ಖಾಜಿ ಇಲಾಖೆಯ ಮುಖ್ಯಸ್ಥನಾಗಿದ್ದು ಆಡಳಿತವನ್ನು ನೋಡಿಕೊಳ್ಳುವುದು ಆತನ ಕರ್ತವ್ಯವಾಗಿತ್ತು. (ಮುಖ್ಯ ಕಾರ್ಯ ಅಪೀಲುಗಳ ತಿರ್ಮಾನ).

2) **ಬರೀದ್–ಇ–ಮಾಮುಲಿಕ್**:– ನಾನಾ ಇಲಾಖೆಯ ಮುಖ್ಯಸ್ಥನಾಗಿದ್ದು ವರದಿಗಾರರನ್ನು, ಗೂಢಾಚಾರರನ್ನು ನೇಮಿಸುವುದು ಹಾಗೂ ಮಹತ್ವದ ಘಟನೆಗಳ ಬಗ್ಗೆ ವರದಿ ಸಂಗ್ರಹಿಸುವುದು.

3) **ಪಾರುಪತ್ತೆಯಗಾರ**:– ಅರಮನೆಗೆ ಸೇರಿದ ವಿವಿಧ ಕಾರ್ಖಾನೆಗಳನ್ನು ನೋಡಿಕೊಳ್ಳುವುದು.

ಪ್ರಾಂತ್ಯಾಡಳಿತ

- ಷೇರ್‌ಷಾನು ಇಡೀ ಸಾಮ್ರಾಜ್ಯವನ್ನು "47 ಸರ್ಕಾರಗಳಾಗಿ (ಪ್ರಾಂತ್ಯಗಳಾಗಿ)" ವಿಭಾಗಿಸಿದ್ದನು. ಪಾಳೆಯಗಾರರಿಗೆ ಕೊಟ್ಟಿದ್ದ ಇವುಗಳನ್ನು **ಇಕ್ತಾ/ಸುಭಾ**ಗಳೆಂದು ಕರೆಯಲಾಗುತ್ತಿತ್ತು. ಇವು ಕೇಂದ್ರ ಸರ್ಕಾರದ ಅಧೀನದಲ್ಲಿದ್ದು ಪ್ರತಿಯೊಂದನ್ನು

'ಪರಗಣಗಳಾಗಿ ವಿಂಗಡಿಸಲಾಗಿತ್ತು.

1) **ಸರ್ಕಾರ್‌ಗಳು:–** ಷೇರ್‌ಷಾನು ಬಂಗಾಳದಲ್ಲಿ ಸರ್ಕಾರ್ ಎಂಬ ಹೊಸ ಮಾದರಿಯ ಪ್ರಾಂತ್ಯಾಡಳಿತವನ್ನು ಜಾರಿಗೆ ತಂದನು. ಇದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಿದನು. ಜೊತೆಗೆ ಷೇಕ್‌ದಾರ ಮತ್ತು ಮುನ್ಸೀಫರೆಂಬ ಸರ್ಕಾರದ ಪ್ರಧಾನ ಅಧಿಕಾರಿಗಳಿದ್ದರು.

- **ಮುನ್ಸೀಫ** – ಮುಖ್ಯ ನ್ಯಾಯವಾದಿ (ಸಿವಿಲ್ ಮೊಕದ್ದಮೆಗಳ ವಿಚಾರಣೆ)
- **ಅಮೀನರು** – ಅಧಿಕಾರಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು.
- **ಷೇಕ್‌ದಾರ–** ಶಾಂತಿ ಪಾಲನೆ ಮತ್ತು ದಂಗೆಕೋರರನ್ನು ಅಡಗಿಸುವುದು.

2) **ಪರಗಣಗಳು**

- ಸರ್ಕಾರ್ ಗಳನ್ನು ಅನೇಕ ಪರಗಣಗಳಾಗಿ ವಿಂಗಡಿಸಲಾಗಿತ್ತು.
- ಷೇಕ್‌ದಾರ, ಅಮೀನ, ಖಜಾಂಚಿ, ಮುನ್ಸೀಫ್, ಹಿಂದಿ ಮತ್ತು ಪರ್ಷಿಯನ್ ಬರಹಗಾರರು ಪರಗಣದ ಮುಖ್ಯಾಧಿಕಾರಿಗಳಾಗಿದ್ದರು. ಜೊತೆಗೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದ ಪಟ್ವಾರಿ, ಚೌಧರಿ, ಮುಕದಮ್ ಅಧಿಕಾರಿಗಳಿದ್ದರು.
- **ಅಮೀನರು:–** ಕಂದಾಯ ನಿಗದಿ ಮಾಡಿ ವಸೂಲಿ ಮಾಡುತಿದ್ದನು. (ಷೇಕ್‌ದಾರನ ಸಹಾಯ ಮಿತ್ರ)
- **ಕಾನುಂಗೋ:–** ಪರಗಣದ ಕಂದಾಯ ವ್ಯವಹಾರಗಳ ಮೇಲ್ವಿಚಾರಕ.
- **ಮುನ್ಸೀಫ:–** ನ್ಯಾಯಾಧೀಶನಾಗಿದ್ದು ದಿವಾನಿ ಪ್ರಕರಣಗಳನ್ನು ತೀರ್ಮಾನಿಸುತ್ತಿದ್ದನು.

ಗ್ರಾಮಾಡಳಿತ

- ಪರಗಣವು ಅನೇಕ ಗ್ರಾಮಗಳನ್ನೊಳಗೊಂಡ ಘಟಕವಾಗಿತ್ತು. ಪ್ರತಿಯೊಂದು ಗ್ರಾಮದ ಆಡಳಿತವನ್ನು ನೋಡಿಕೊಳ್ಳಲು ಕೇಂದ್ರ ಸರ್ಕಾರವು ಪಟ್ವಾರಿ ಮತ್ತು ಚೌಕಿದಾರ ಎಂಬ ಗ್ರಾಮಾಧಿಕಾರಿಗಳ ಮೂಲಕ ಗ್ರಾಮೀಣ ಸಂಪರ್ಕ ಹೊಂದಿದ್ದರು. ಮುಕದಮ್ ಗ್ರಾಮದ ಮುಖ್ಯಸ್ಥನಾಗಿದ್ದನು.

ಸೈನ್ಯಾಡಳಿತ

- ಸೈನ್ಯದಲ್ಲಿ ವಂಶಪಾರಂಪರ್ಯ ಪದ್ಧತಿಯ ನಾಯಕತ್ವವನ್ನು ತೆಗೆದುಹಾಕಿದನು. ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿದ್ದ ಕುದುರೆಗಳಿಗೆ **ಮುದ್ರೆ (ದ್ರಾಗ್) ಹಾಕುವ ಪದ್ಧತಿಯನ್ನು** ತನ್ನ ಸೈನ್ಯದಲ್ಲೂ ಜಾರಿಗೆ ತಂದಿದ್ದನು.
- ರಾಜ್ಯದ ಆಯಕಟ್ಟಿನ ವಿವಿಧ ಸ್ಥಳಗಳಿಗೆ ಕಾವಲು ದಂಡುಗಳನ್ನಿಟ್ಟಿದ್ದನು. ಇವುಗಳನ್ನು **"ಫೌಜು"**ಗಳೆಂದು ಕರೆಯಲಾಗುತ್ತಿತ್ತು. ಫೌಜುಗಳ ಮುಖ್ಯಸ್ಥ–ಫೌಜುದಾರ (ದಳಪತಿ)ನಾಗಿದ್ದನು.
- ಷೇರ್‌ಷಾನ ಸೈನ್ಯದಲ್ಲಿ 1,50,000 ಕಾಲ್ದಳ. 25,000 ಅಶ್ವದಳ ಮತ್ತು 500 ಗಜಗಳು ಮತ್ತು ಫಿರಂಗಿ ದಳದವರಿದ್ದರು. ಅಶ್ವದಳ ಮತ್ತು ಕಾಲ್ದಳ ಷೇರ್‌ಷಾನ ಎರಡು ಕಣ್ಣುಗಳಂತಿದ್ದವು. ಕಾಲ್ದಳವು ಮದ್ದು ಗುಂಡುಗಳಿಂದ ಕೂಡಿತ್ತು. ತುಪಾಕಿಯ ಉಪಯೋಗವನ್ನು ಅರಿತಿದ್ದರು.

ಹಣಕಾಸು ಮತ್ತು ಷೇರ್ ಷಾನ ಕಂದಾಯ ನೀತಿ

- ಕೇಂದ್ರಿಯ ಮತ್ತು ಪ್ರಾಂತೀಯ ಆದಾಯಗಳ ಜೊತೆಗೆ ಹಿಂದೂಗಳ ಮೇಲೆ ಹಾಕುತ್ತಿದ್ದ **ಜೆಸಿಂಯಾ** ತಲೆಗಂದಾಯದಿಂದಲೂ ಆದಾಯ ಬರುತ್ತಿತ್ತು.
- ಷೇರ್‌ಷಾನ ಕಂದಾಯ ಪದ್ದತಿ ಅಕ್ಬರನ ಕಂದಾಯ ಪದ್ಧತಿಗೆ ಒಂದು ನಕಾಶೆ ಒದಗಿಸಿಕೊಟ್ಟಿತು. ಷೇಕ್‌ದಾರನು ತನ್ನ ಅಧೀನದಲ್ಲಿದ್ದ ಪರಗಣದ ಷಿಕ್‌ದಾರ ಕಂದಾಯ ವಸೂಲಿ ಮತ್ತು ಇತರ ಕೆಲಸಗಳ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದನು. ಪ್ರತಿ ಪರಗಣದ ಮುಖ್ಯಸ್ಥನನ್ನು ಷಿಕ್‌ದಾರ ಎಂದು ಕರೆಯಲಾಗುತ್ತಿತ್ತು. ಈತನ ಜೋತೆ ಅಮೀಲ ಇರುತ್ತಿದ್ದನು.
- ಭೂಮಿಯನ್ನು ಅಳತೆ ಮಾಡಿಸಿ ಕಂದಾಯ ನಿಗಧಿ ಮಾಡುವುದು ಅಮೀಲನ ಕೆಲಸವಾಗಿತ್ತು. ಹಳ್ಳಿಯ ಕಂದಾಯವನ್ನು ಪಟ್ವಾರಿ ಮತ್ತು ಮುಕದ್ದಮ್‌ರ ಸಹಾಯದಿಂದ ವಸೂಲಿ ಮಾಡುತ್ತಿದ್ದರು.

ಭೂ ಉತ್ಪತ್ತಿಯ ಮೇಲೆ ತಂದ ಸುಧಾರಣೆಗಳು

1) ವ್ಯವಸಾಯ ಉತ್ಪಾದನೆಯಲ್ಲಿ ಹೆಚ್ಚಳ.
2) ಭೂಮಿಯನ್ನು ಉಳುವವನ ಜೀವನ ಸ್ಥಿತಿಯಲ್ಲಿ ಸುಧಾರಣೆ.
3) ಭೂ ಕಂದಾಯದ ಮೂಲಕ ರಾಜ್ಯದ ಕಂದಾಯದ ಹೆಚ್ಚಳ.

- ಭೂಮಾಪನ ಮಾಡುವ ಅಧಿಕಾರಿಗಳಾದ ಅಮೀಲರು ಕಾನುಂಗೋಗಳು, ಪಟ್ವಾರಿ ಮತ್ತು ಮುಕದಮ್‌ರು ಷೇರ್‌ಷಾನು ಭೂಮಿಯ ಅಳತೆಗೋಸ್ಕರ **'ಸಿಕಂದರ್ ಗಜವನ್ನು'** ಉಪಯೋಗಿಸಿಕೊಂಡನು. ಇದು ದೆಹಲಿಯ ಸುಲ್ತಾನನಾದ ಸಿಕಂದರ್ ಲೂದಿಯ ಕಾಲದಲ್ಲಿ ಭೂಮಿಯನ್ನು ಅಳತೆ ಮಾಡಲು ಉಪಯೋಗಿಸುತ್ತಿದ್ದ ಅಳತೆಯ ಏಕಾಂಶವಾಗಿತ್ತು. ಈ ಸಿಕಂದರ್ ಗಜವು ಬಹುಶಃ ಆಧುನಿಕ ಮೀಟರಿನ 3/4 ಭಾಗಕ್ಕೆ ಸಮನಾಗಿತ್ತು.
- ಷೇರ್‌ಷಾನು ಭೂವಿಧಾನವನ್ನು ಶಾಶ್ವತವಾಗಿ ಕಾರ್ಯರೂಪಕ್ಕೆ ತರುವಂತೆ ಮಾಡಲು ಭೂಮಾಲೀಕರಿಗೆ **'ಪಟ್ಟಾ'** ಮತ್ತು **ಖಬೂಲಿಯತ್** ಎಂಬ ಎರಡು ದಾಖಲೆ ಪತ್ರಗಳನ್ನು ಬಿಡುಗಡೆ ಮಾಡಿದನು.
- ರೈತರಿಗೆ ಸಂಕಷ್ಟಗಳ ಸಮಯದಲ್ಲಿ ಸಾಲ ನೀಡಲು **'ತಕ್ಕಾವಿ ಸಾಲ'** ಯೋಜನೆ ಜಾರಿಗೆ ತಂದನು.
- **ಕಂದಾಯದ ದೋಷಗಳು** :–1) ಉತ್ತಮ ಭೂಮಿಗೆ ಸರಾಸರಿ ಉತ್ಪನ್ನದ 1/3 ರಷ್ಟು ಕಂದಾಯ ವಿಧಿಸಿದುದು ಕಡಿಮೆಯಾಗಿತ್ತು.
- 2)ಷೇರ್ ಷಾನ ಕಾಲದಿಂದ ಕಂದಾಯ ಇಲಾಖೆಯಲ್ಲಿ ಸೇವೆ

ಸಲ್ಲಿಸುಸುವುದು ಒಂದು ಆಕರ್ಷಕ ವೃತ್ತಿಯಾಯಿತು.

- **ನ್ಯಾಯಾಡಳಿತ:**
- ಷೇರ್ ಷಾನು ಪ್ರಸಿದ್ದಿಯಾಗಿದ್ದುದು ಅವನ ಕಾನೂನು ಸುವ್ಯವಸ್ಥೆಯ ಸುಧಾರಣೆಗಳು.
- ಕೇಂದ್ರ ಮಟ್ಟದಲ್ಲಿ ರಾಜನೇ ಸರ್ವೋಚ್ಛ ನ್ಯಾಯಾಧಿಕಾರಿಯಾಗಿದ್ದನು. ಸರ್ಕಾರಗಳ ಮಟ್ಟದಲ್ಲಿನ ನ್ಯಾಯಾಧಿಕಾರಿ– ಮುನ್ಸೀಫ್–ಎ–ಮುನ್ಸಿಫಾನ್ (ಸಿವಿಲ್ ಪ್ರಕರಣ). ಪರಗಣಗಳ ಮಟ್ಟದಲ್ಲಿನ ನ್ಯಾಯಾಧಿಕಾರಿ– ಅಮೀನರು (ಮುಖ್ಯವಾಗಿ ಸಿವಿಲ್ ಪ್ರಕರಣ) ಖಾಜಿ ಮತ್ತು ಮೀರ್–ಏ–ಅದಲ್ – ಅಪರಾಧ ಪ್ರಕರಣಗಳನ್ನು ವಿಚಾರಣೆ ಮಾಡುತ್ತಿದ್ದರು.
- ರಾಜಧಾನಿಯಲ್ಲಿ ಮುಖ್ಯ 'ಖಾಜಿ; ಸಾಮ್ರಾಜ್ಯದಲ್ಲಿ 'ಸದರ್' ಇರುತ್ತಿದ್ದನು. ಮಹಮದೀಯರಿಗೆ ಖಾಜಿ ಮುಖ್ಯ ನ್ಯಾಯಾಧೀಶನಾಗಿದ್ದನು.
- ಹಿಂದೂಗಳಿಗೆ ಪ್ರತ್ಯೇಕವಾದ ನ್ಯಾಯ ವ್ಯವಸ್ಥೆಯಿತ್ತು. ಇವರು ತಮ್ಮ ವಿವಾದಗಳನ್ನು ಗ್ರಾಮ ಪಂಚಾಯ್ತಿಗಳಲ್ಲಿ ಪರಿಹರಿಸಿಕೊಳ್ಳುತ್ತಿದ್ದರು.
- ಸರ್ಕಾರ್‌ಗಳಲ್ಲಿ ಶಾಂತಿ ಮತ್ತು ಕಾನೂನು ರಕ್ಷಕ ಷೇಕ್‌ದಾರನಾಗಿದ್ದನು.

ಸಾರಿಗೆ ಸಂಪರ್ಕ

- ಷೇರ್‌ಷಾನ ಕಾಲದಲ್ಲಿ ನಿರ್ಮಾಣಗೊಂಡ ಪ್ರಮುಖ 4 ಹೆದ್ದಾರಿಗಳು.

1) ಪೂರ್ವ ಬಂಗಾಳದ ಸೋನಾರ್‌ಗಾವ್‌ನಿಂದ –ಸಿಂಧೂ ವರೆಗೆನ 1500 ಕೋಸ್ ಉದ್ದದ 'ಗ್ರಾಂಡ್ ಟಕ್' ಹೆದ್ದಾರಿ. ಇದನ್ನು 'ಸರ್–ಇ–ಅಜಮ್' ಎನ್ನುತ್ತಿದ್ದರು.
2) ಆಗ್ರಾ ದಿಂದ ಬರ್ಹಾನ್‌ಪುರ.
3) ಆಗ್ರಾ ದಿಂದ ಜೋಧಪುರ ಹಾಗೂ ಚಿತ್ತೂರು.
4) ಲಾಹೋರ್ ನಿಂದ ಮುಲ್ತಾನ್.

- ಹೆದ್ದಾರಿಗಳಲ್ಲಿ **'ಸರಾಯ್'** ಗಳೆಂಬ ತಂಗುದಾಣಗಳನ್ನು ನಿರ್ಮಿಸಿದ್ದರು. ಇವುಗಳ ಮೇಲ್ವಿಚಾರಕನನ್ನು **ದರೋಗ್–ಇ–ಚೌಕಿದಾರ** (ವಿವಿಧ ಭಾಗಗಳ ವರ್ತಮಾನಗಳನ್ನು ಸಂಗ್ರಹಿಸುವುದು) ಎನ್ನುತ್ತಿದ್ದರು.

ನಾಣ್ಯ ಸುಧಾರಣೆ

- ಷೇರ್‌ಷಾನು ಜಾರಿಗೆ ತಂದ ನಾಣ್ಯ ಪದ್ಧತಿ ಕ್ರಿ.ಶ. 1835ರವರೆಗೂ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಲ್ಲೂ ಮುಂದುವರೆದಿತ್ತು. ಷೇರ್‌ಷಾನು **ದಾಮ್** ಎಂಬ ಹೊಸ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಜಾರಿಗೆ ತಂದನು. ಚಿನ್ನದ ನಾಣ್ಯಗಳು 168.5 ಗ್ರೈನ್, 167 ಗ್ರೈನ್ ಹಾಗೂ 166.4 ಗ್ರೈನ್ ತೂಕದವಾಗಿದ್ದವು. ಬೆಳ್ಳಿಯ ರೂಪಾಯಿಯು 180 ಗ್ರೈನ್ ತೂಕವಿದ್ದು ಅದರಲ್ಲಿ 175 ಗ್ರೈನ್ ಶುದ್ಧ ಬೆಳ್ಳಿಯಾಗಿತ್ತು.
- ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳ ವಿನಿಮಯ ಬೆಲೆಯನ್ನು 64=1 ಎಂದು ನಿಗಧಿಪಡಿಸಿದ್ದನು. ಬೆಳ್ಳಿ ಮತ್ತು ತಾಮ್ರದ ದಾಮ್‌ಗಳು ತಮ್ಮ ಮೌಲ್ಯದ 1/2, 1/4, 1/8, 1/16 ಭಾಗದ ನಾಣ್ಯಗಳಿದ್ದವು.
- ನಾಣ್ಯಗಳ ಹೆಸರುಗಳನ್ನು **"ದೇವನಾಗರಿ ಲಿಪಿಯಲ್ಲಿ"** ಕೆತ್ತಿಸಿದನು. ಷೇರ್‌ಷಾನ '180 ಗ್ರೈನ್ ತೂಕದ ಬೆಳ್ಳಿ ನಾಣ್ಯ ಇಡೀ ಮೊಗಲರ ಆಡಳಿತ ಕಾಲದವರೆಗೆ ಜಾರಿಯಲ್ಲಿತ್ತು.
- **ಟಂಕಸಾಲೆಯ ಸ್ಥಳಗಳು:**– ಆಗ್ರಾ, ಗ್ವಾಲಿಯರ್, ಉಜ್ಜೈನಿ, ಶೇರಗಡ, ಅಬುಸ್ಕರ್ (ಸಸಾರಂ) ಮತ್ತು ಭಕ್ಕರ (ಸಿಂದ್) ಮುಂತಾದವು.

ಕಲೆ ಮತ್ತು ವಾಸ್ತು ಶಿಲ್ಪ

- ಜೀಲಂ ನದಿ ದಂಡೆಯ ಮೇಲಿನ **'ರೋಹ್ತಾಸ್ ಗರ್'** ಮತ್ತು ದೆಹಲಿಯ ಪುರಾನ್ ಖಿಲ್ಲಾ" ಎಂಬ ಕಟ್ಟಡಗಳು. ಇವನ ಕಾಲದಲ್ಲಿ ನಿರ್ಮಾಣವಾದವು.
- ಸಸಾರಂನ ಬಳಿ ಸರೋವರದ ಮಧ್ಯದಲ್ಲಿ ಎತ್ತರವಾದ ಪೀಠದ ಮೇಲೆ ನಿರ್ಮಿಸಿರುವ ಅವನ ಸಮಾಧಿಯು ಭಾರತದ ಅತ್ಯುತ್ತಮ ಕಟ್ಟಡಗಳಲ್ಲೊಂದಾಗಿದೆ.
- ಷೇರ್‌ಷಾನ ಮರಣದ ನಂತರ ಅವನ ಉತ್ತರಾಧಿಕಾರಿಯಾದವನು–'ಆದಿಲ್ ಖಾನ್'.
- ಸೂರ್ ಸಂತತಿಯ ಆಳ್ವಿಕೆ ಕ್ರಿ.ಶ. 1555ರಲ್ಲಿ ಕೊನೆಗೊಂಡಿತು.

ಅಕ್ಬರ್ ಮಹಾಶಯ (ಕ್ರಿ.ಶ.1556-1605) (Akbar The Great

- ಅಕ್ಬರನು ಹುಮಾಯೂನ್ ಮತ್ತು ಹಮೀದಬಾನು ಬೇಗಂರ ಪುತ್ರನಾಗಿ ಅಕ್ಟೋಬರ್ 15,1542ರಲ್ಲಿ ಅಮರ ಕೋಟೆಯ ರಾಜ ವೀರಸಾಲನ ಮನೆಯಲ್ಲಿ ಜನಿಸಿದನು.
- ಹುಮಾಯೂನನ ಮರಣದ ನಂತರ ಅಕ್ಬರನನ್ನು ಬೈರಂಖಾನನು ರಾಜನೆಂದು ಘೋಷಿಸಿದನು.
- 1556 ಫೆಬ್ರವರಿ 14ರಂದು ಗುರುದಾಸಪುರದ ಬಳಿಯ ಕಲನೂರು ಬಳಿ ಹುಮಾಯೂನನ ಉತ್ತರಾಧಿಕಾರಿಯೆಂದು ಅಕ್ಬರನನ್ನು ನೇಮಿಸಲಾಯಿತು.

ಬೈರಂಖಾನನ ರಾಜಪ್ರತಿನಿಧಿತ್ವದ ಆಳ್ವಿಕೆ (Bairamkhan's Regency ಕ್ರಿ.ಶ. 1556-60)

- ಅಕ್ಬರನು ಚಕ್ರವರ್ತಿಯಾಗಿ ಅಧಿಕಾರ ಸ್ವೀಕರಿಸಿದಾಗ ಬೈರಮ್ ಖಾನನಿಗೆ **"ಖಾನ್–ಇ–ಖಾನ್"** ಎಂಬ ಬಿರುದನ್ನು ನೀಡಿ ಸಾಮ್ರಾಜ್ಯದ ವಜೀರನಾಗಿ ನೇಮಿಸಿದನು.
- ಬೈರಂಖಾನನು ಮೂಲತಃ **ಪರ್ಶಿಯಾ** ದೇಶದವನು. ಹುಮಾಯೂನನ ಬಂಗಾಳದ ದಂಡಯಾತ್ರೆಯಲ್ಲಿ ಬೈರಂಖಾನ್ ಪ್ರಮುಖ ಪಾತ್ರ ವಹಿಸಿದ್ದನು.
- ಹುಮಾಯೂನ್ ಬೈರಂಖಾನ್‌ನನ್ನು "ನಮ್ಮ ಕುಟುಂಬದಲ್ಲಿ ಇಂತಹ ಮತ್ತೊಂದು ಬೆಳುಕು ಇಲ್ಲ" ಎಂಬುದಾಗಿ ಪ್ರಶಂಸಿದನು.

ಬೈರಂಖಾನ್‌ನನ್ನು ಪ್ರೀತಿಯಿಂದ **'ಖಾನಿಬಾಬಾ'** ಎನ್ನಲಾಗುತ್ತಿತ್ತು.

- ಷೇರ್‌ಷಾನ ಮರಣದ ನಂತರ ಸಿಂಧ್ ಮತ್ತು ಮುಲ್ತಾನ್‌ಗಳು ದೆಹಲಿಯ ಸಾಮ್ರಾಜ್ಯದ ನಿಯಂತ್ರಣದಿಂದ ಮುಕ್ತವಾಗಿದ್ದವು. ಒರಿಸ್ಸಾ, ಮಾಳ್ವ, ಗುಜರಾತ್ ಮತ್ತು ಗೊಂಡ್ವಾನಗಳು ಸ್ವತಂತ್ರವಾಗಿದ್ದವು.

ಹೇಮುವಿನೊಂದಿಗೆ ಯುದ್ಧ/ ಎರಡನೇ ಪಾಣಿಪತ್ ಕದನ(ನವೆಂಬರ್ 5, 1556)

- ಆದಿಲ್‌ಷಾಸೂರ್‌ನ ಸಮರ್ಥ ಸೇನಾನಿ ಹಾಗೂ ಮಂತ್ರಿ ಹೇಮುವು ಮೊಗಲರನ್ನು ವಿರೋಧಿಸಿದನು. ಮೊಗಲರ ಆಗ್ರಾವನ್ನು ಇಸ್ಕಂದರ್‌ಖಾನ್‌ನಿಂದ, ಹಾಗೂ ದೆಹಲಿಯ ಗೌರ್ನರ್ ತರ್ದಿಬೇಗ್‌ನನ್ನು ಸೋಲಿಸಿ ಅವುಗಳನ್ನು ವಶಪಡಿಸಿಕೊಂಡನು.
- ಹೀಗೆ ಹೇಮುವು **"ರಾಜಾವಿಕ್ರಮಾದಿತ್ಯ"** ಎಂಬ ಬಿರುದು ಧರಿಸಿ ದೆಹಲಿಯನ್ನಾಳಿದ ಕೊನೆಯ ಹಿಂದೂ ದೊರೆಯಾಗಿದ್ದಾನೆ. (ಇವನು **'ಬನಿಯಾ'** ಪಂಗಡಕ್ಕೆ ಸೇರಿದವನು).
- ಅಂತಿಮವಾಗಿ ಅಕ್ಬರ್ ಮತ್ತು ಹೇಮುವಿನೊಡನೆ ಕ್ರಿ.ಶ.1556 ನವೆಂಬರ್ 5ರಂದು ಪಾಣಿಪತ್‌ನಲ್ಲಿ ಯುದ್ಧ ನಡೆದು 'ಹೇಮು' ಸೋತನು. ಹೇಮುವನ್ನು ಕೊನೆಗೆ ಬೈರಮ್‌ಖಾನನು ಕೊಂದನೆಂದು ಫಜಲ್, ಬದೌನಿ ಮತ್ತು ಜಹಾಂಗೀರ್‌ರು ತಿಳಿಸುತ್ತಾರೆ.
- ಬಂಗಾಳದ ಗೌರ್ನರ್‌ನನ್ನು ಖಿಜರ್‌ಖಾನನು **ಮಾಂಘೀರ್** ಯುದ್ಧದಲ್ಲಿ (ಮಹ್ಮದ್ ಆದಿಲ್‌ಷಾನನ್ನು) ಕೊಂದನು. ಇದರೊಂದಿಗೆ ಅಕ್ಬರನೊಡನೆ ಸೂರ್ ಸಂತತಿಯ ಸ್ಪರ್ಧಿಗಳೇ ಇಲ್ಲವಾದರು. ಬೈರಂಖಾನನು 2ನೇ ಪಾಣಿಪತ್ ಯುದ್ಧದ ವಿಜಯದ ರೂವಾರಿಯಾಗಿದ್ದನು. ಇವನು ಅಜ್ಮೀರ್ ಗ್ವಾಲಿಯಾರ್ ಮತ್ತು ಜೌನ್‌ಪುರಗಳನ್ನು ಗೆದ್ದು ಮೊಗಲ್ ರಾಜ್ಯಕ್ಕೆ ಸೇರಿಸಿದ್ದನು.
- ಬೈರಂಖಾನ್ ಹುಮಾಯೂನ್ ಸೋದರಿಯ ಮಗಳಾದ ಸಲೀಂ ಬೇಗಂಳನ್ನು ವಿವಾಹವಾಗಿದ್ದನು. ಇವನು ತನ್ನ ಅನುಯಾಯಿಗಳಿಗೆ **'ಪಂಚಹಜಾರಿ'** ಎಂಬ ಬಿರುದು ನೀಡಿದ್ದನು. ಬೈರಮನು ಮೆಕ್ಕಾಗೆ ಹೊರಟು ಗುಜರಾತ್ ತಲುಪಿದಾಗ ಅವನನ್ನು 1561ರಲ್ಲಿ ಲೋಹಾನಿ ಆಫ್ಘನ್ನನಾದ ಮುಬಾರಕ್ ಖಾನ್ ಎಂಬುವನು ಕೊಂದನು.

ಸ್ತ್ರೀಪ್ರಭುತ್ವದ ಆಳ್ವಿಕೆಯ ಕಾಲ (1560-64)

- ಬೈರಮ್ ಖಾನನ ಅವನತಿಯಲ್ಲಿ ಅಂತಃಪುರದ ಗುಂಪಿನ ಅಥವಾ ಅತ್ಗಾಖಾಯಿಲ್‌ನ ಪ್ರಭಾವ ಪ್ರಮುಖವಾಗಿತ್ತು. ಅಕ್ಬರನು ಕೆಲವು ಸದಸ್ಯರಿಗೆ ಆಡಳಿತದಲ್ಲಿ ಸ್ವಾತಂತ್ರ್ಯ ನೀಡಿದ್ದನು. ಇದನ್ನು ಇತಿಹಾಸಕಾರರು ಸ್ತ್ರೀ ಪ್ರಭುತ್ವದ ಆಳ್ವಿಕೆ ಎಂದು ಕರೆದಿದ್ದಾರೆ.

ಅಕ್ಬರನ ಸೈನಿಕ ಸಾಧನೆಗಳು

ವರ್ಷ	ರಾಜ್ಯ/ಸಂಸ್ಥಾನ	ಯಾರಿಂದ
1560–62	ಮಾಳ್ವ	ಬಾಜ್ ಬಹದ್ದೂರ್
1561	ಚುನಾರ್	ಆಫ್ಘನ್
1562	ಮೆರ್ತ	ಜೈಮಲ್
1564	ಗೋಂಡ್ವಾನ/ಕತಂಗ	ರಾಣಿ ದುರ್ಗಾವತಿ
1568	ಚಿತ್ತೂರ್	ರಾಣಾ ಉದಯ್‌ಸಿಂಗ್
1569	ರಣತಂಬೂರ್	ಸುರ್ಜನ್‌ರಾಯ್
1569	ಕಾಲಿಂಜರ್	ರಾಮಚಂದ್ರ
1570	ಮಾರ್ವಾರ್	ಚಂದ್ರಸೇನ, ಕಲ್ಯಾಣ್‌ಮಲ್, ರಾಜ್‌ಸಿಂಗ್, ಹರಿರಾಯ್
1572–73	ಗುಜರಾತ್	ಬಹದ್ದೂರ್‌ಸಿಂಗ್
1574–76	ಬಂಗಾಳ-ಬಿಹಾರ	ದಾವುದ್ ಖಾನ್ ಕರನಿ
1576	ಹಳದಿಘಾಟ್	ರಾಣಾಪ್ರತಾಪ್
1581	ಕಾಬೂಲ್	ಮಿರ್ಜಾ ಹಕೀಮ್
1585–86	ಕಾಶ್ಮೀರ್	ಯೂಸಫ್‌ಖಾನ್ & ಯಾಕುಬ್‌ಖಾನ್
1591	ಖಾಂದೇಶ್	ಆಲಿಖಾನ್
1595	ಬಲೂಚಿಸ್ಥಾನ್	ಯೂಸಫ್ ಜೈ
1595	ಕಾಂದಹಾರ್	ಮುಜಾಫರ್ ಹುಸೇನ್
1597–1600	ಅಹ್ಮದ್‌ನಗರ್	ಚಾಂದ್‌ಬೇಬಿ
1601	ಆಸಿರ್‌ಘರ್	ಮಿರಾನ್ ಬಹದ್ದೂರ್ ಖಾನ್

ಹಲ್ದಿಘಾಟ್ ಕದನ (ಜೂನ್ 1576)

- ರಾಣಾ ಪ್ರತಾಪನು ಹಲ್ದಿಘಾಟ್ ಎಂಬಲ್ಲಿ 1576 ಜೂನ್ 18ರಂದು ಮೊಘಲರ ವಿರುದ್ಧ ಯುದ್ಧ ಕೈಗೊಂಡನು. ಕೊನೆಗೆ ಸೋತು ರಾಣಾನ ನೊಬೆಲ್ಲನಾದ ಬಡಜಾಲನು ರಾಣಾನ ಕಿರೀಟ ಕಿತ್ತುಕೊಂಡು ತಾನೇ ರಾಣಾ ಎಂದು ಹೋರಾಡುತ್ತಿದ್ದಾಗ ರಾಣಾ ಪ್ರತಾಪನು ತನ್ನ ಪ್ರೀತಿಯ ಕುದುರೆ 'ಚೇತಕ್‌ನ' ಮೇಲೆ ಕುಳಿತು ರಣರಂಗದಿಂದ ತಪ್ಪಿಸಿಕೊಂಡನು. ಹೀಗೆ ರಾಣಾಪ್ರತಾಪನು 1597ರಲ್ಲಿ ಮರಣ ಹೊಂದುವವರೆಗೂ ಮೊಗಲರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲಿಲ್ಲ ಈ ವೇಳೆಯಲ್ಲಿ ಮೇವಾರದ ಬಹು ಭಾಗವನ್ನು ಪುನಃ ವಾಪಸ್ ಪಡೆದಿದ್ದನು.

ಅಕ್ಬರನ ಕಾಲದಲ್ಲಿ ನಡೆದ ದಂಗೆಗಳು.

- **ಉಜ್ಬೇಗಿಗಳ ದಂಗೆ :–** ಅಕ್ಬರನ ಹಳೆಯ ನೊಬೆಲ್ಲರಲ್ಲಿ ಪ್ರಮುಖರು ಮತ್ತು ಪ್ರಬಲರಾದವರೆಂದರೆ ಉಜ್ಬೇಗಿಗಳು. ಇವರಲ್ಲಿ ಪ್ರಮುಖರೆಂದರೆ ಖಾನ್-ಇ-ಜಮಾನ್ (ಜೌನ್‌ಪುರ ಗೌರ್ನರ್) ಸೋದರ ಬಹದ್ದೂರ್ ಖಾನ್ ಚಿಕ್ಕಪ್ಪ-ಇಬ್ರಾಹಿಂಖಾನ್, ಖಾನ್-ಇ-ಆಲಂ(ಔದನ ಗೌರ್ನರ್) ಮತ್ತು ಅಬ್ದುಲ್ಲಾ ಖಾನ್ (ಮಾಳ್ವದ ಗೌರ್ನರ್).
- ಇವರು 1564ರಲ್ಲಿ ಅಬ್ದುಲ್ ಖಾನ್ ಮೊದಲು ದಂಗೆ ಎದ್ದನು. ಅಕ್ಬರನು ಇವರ ದಂಗೆಗಳನ್ನು 1567 ರಲ್ಲಿ ದಮನಗೊಳಿಸಿದನು.

2. **ಮಿರ್ಜಾಗಳ ದಂಗೆ :–** ಮಿರ್ಜಾಗಳು ರಾಜ ಸಂತತಿಗೆ ಸೇರಿದ್ದು ಅಕ್ಬರನ ರಕ್ತ ಸಂಬಂಧಿಗಳಾಗಿದ್ದರು. ಅವರಲ್ಲಿ ಪ್ರಮುಖರೆಂದರೆ– ಇಬ್ರಾಹಿಂ ಮಿರ್ಜಾ, ಮಹ್ಮದ್ ಹುಸೇನ್ ಮಿರ್ಜಾ ಮತ್ತು ಮಾಸೂದ್ ಹುಸೇದ್ ಮಿರ್ಜಾ. ಚಕ್ರವರ್ತಿಯಿಂದ ಸದಾ ಉತ್ತಮ ಬಹುಮಾನ ಮತ್ತು ಬಳುವಳಿಗಳನ್ನು ಪಡೆಯುತ್ತಿದ್ದರು. ಅಂತಿಮವಾಗಿ ಅಕ್ಬರನು 1578ರಲ್ಲಿ ಗುಜಾರಾತಿನ ದಂಗೆ ದಮನ ಮಾಡುವಾಗ ಇವರನ್ನು ಮಣಿಸಿದನು.

3. **ಬಂಗಾಳ ಮತ್ತು ಬಿಹಾರಗಳಲ್ಲಿ ದಂಗೆ. :–** 1584ರಲ್ಲಿ ಅಕ್ಬರನು ರಾಜ ತೋದರಮಲ್ಲ, ಮಿರ್ಜಾ ಅಜೀಜ್ ಕೋಕಾ ಮತ್ತು ಷಹಾಬ್‌ಖಾನನ್ನು ಕಳುಹಿಸಿ ಈ ದಂಗೆಯನ್ನಡಗಿಸಿದನು.

4. **ಬಲೂಚಿಗಳು ಮತ್ತು ಆಫ್ಘನ್ನರ ದಂಗೆ :–** 1585ರಲ್ಲಿ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಹೋದಾಗ ಇವರು ದಂಗೆ ಎದ್ದು ಬೀರಬಲ್ಲನನ್ನು ಯುದ್ಧದಲ್ಲಿ ಕೊಂದು, ಜೌನಖಾನನು ಹಿಮ್ಮೆಟ್ಟುವಂತೆ ಮಾಡಿದರು. ರಾಜ ತೋದರಮಲ್ಲನು ಇವರನ್ನು ಅನೇಕ ಬಾರಿ ಸೋಲಿಸಿದನು ಮತ್ತು ಅಂತಿಮವಾಗಿ ರಾಜಾ ಮಾನ್‌ಸಿಂಗ್‌ನು ಖೈಬರ್ ಕಣಿವೆಯನ್ನು ವಶಪಡಿಸಿಕೊಂಡಿದ್ದರಿಂದ ದಂಗೆ ಅಡಗಿತು.

5. **ರಾಜಕುಮಾರ ಸಲೀಂನ (ಜಹಾಂಗೀರ್) ದಂಗೆ :–** ಸಲೀಮನು ಅಜ್ಮೀರದ ಗೌರ್ನರಾಗಿದ್ದು 1599ರಲ್ಲಿ ಸಿಂಹಾಸನವನ್ನು ವಶಪಡಿಸಿಕೊಳ್ಳಲು ಅಲಹಾಬಾದ್ ನಲ್ಲಿ ಸ್ವತಂತ್ರ ದೊರೆಯಂತೆ ವರ್ತಿಸಿ ಮತ್ತು ಧ್ಯೇಯ ಸಾಧನೆಗೆ ಪೋರ್ಚಗೀಸರೊಡನೆ ಒಳಸಂಚು ರೂಪಿಸಿದನು. ಅಕ್ಬರನು ಸಲೀಮನಿಗೆ ಬುದ್ಧಿ ಹೇಳಲು ದಖನ್ನಿನ ಗೌರ್ನರ್ ಅಬುಲ್ ಫಜಲ್‌ನಿಗೆ ತಿಳಿಸಿದನು. ಆದರೆ ಸಲೀಮನು ಮೀರ್ ಸಿಂಗ್‌ದೇವ್ ಬುಂದೇಲನಿಂದ ಫಜಲ್‌ನನ್ನು ಕೊಲೆ ಮಾಡಿಸಿದನು. (ಸಲೀವರ್, ಮುರಾದ್ ಡೇನಿಯರ್ ಅಕ್ಬರನ ಮಕ್ಕಳು)

ಅಕ್ಬರನ ಕೊನೆಯ ದಿನಗಳು

- 1595 ರಲ್ಲಿ ಅಕ್ಬರನ ನೆಚ್ಚಿನ ಗೆಳೆಯ ಮತ್ತು ಕವಿ ಅಬುಲ್ ಫೈಜಿ ಮರಣ ಹೊಂದಿದನು. ಅಕ್ಬರನ ಮತ್ತೊಬ್ಬ ಗೆಳೆಯ ಅಬುಲ್‌ಫಜಲ್‌ನನ್ನು ಸಲೀಮನು ಕೊಲ್ಲಿಸಿ ತನ್ನ ತಂದೆಗೆ ದುಃಖವನ್ನು ತೀವ್ರಗೋಳಿಸಿದನು. ಕೊನೆಗೆ ಅಕ್ಬರನು 1605 ಅಕ್ಟೋಬರ್ 25 ರಂದು ತೀವ್ರ **'ಆಮಶಂಕೆಯಿಂದ'** ನರಳಿ ನಿಧನನಾದನು.

ಅಕ್ಬರನ ರಜಪೂತ ನೀತಿ (Akbar's Rajput Policy)

- ಅಕ್ಬರನ ಶಿಕ್ಷಕ –ಅಬ್ದುಲ್ ಲತೀಫ್ ಉದಾರವಾದಿಯಾಗಿದ್ದು ಅಕ್ಬರನಲ್ಲಿ ವಿಶ್ವಶಾಂತಿಯ ತತ್ವವನ್ನು ಬಿತ್ತಿದನು. ಸೂಫಿಗಳಾದ ಷೇಕ್ ಮುಬಾರಕ್ ಮತ್ತು ಈತನ ಮಕ್ಕಳಾದ ಅಬುಲ್ ಫೈಜಿ ಮತ್ತು ಅಬುಲ್‌ಫಜಲ್ ಅಕ್ಬರನ ಆತ್ಮೀಯರಾಗಿದ್ದು ಉದಾರ ಧಾರ್ಮಿಕ ನೀತಿ ರೂಪಿಸುವಲ್ಲಿ ಇವರ ಪಾಲಿದೆ.
- ರಜಪೂತರ ಅಂಬರ್‌ನ ದೊರೆ ಬಿಹಾರಿಮಲನ ಮಗಳನು ಅಕ್ಬರನು ವಿವಾಹವಾದನು. ಅವಳು ಅಕ್ಬರನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಭಾವನೆಗಳನ್ನು ಬದಲಾಯಿಸಿದಳು ಮತ್ತು ಮುಂದಿನ ವಾರಸುದಾರ ಸಲಿಂ(ಜಹಾಂಗೀರ್)ಗೆ 1569ರಲ್ಲಿ ಜನ್ಮ ನೀಡಿದಳು.
- ಅಕ್ಬರನು ರಜಪೂತ ರಾಜ್ಯಗಳ ಮತ್ತು ಪ್ರಜೆಗಳ ಜೊತೆ 3 ವಿಧದ ಸಂಬಂಧ ಹೊಂದಿದ್ದನು.

1) **ಮೊದಲನೇ ಗುಂಪಿನ ರಜಪೂತರು** - ಅಂಬರ್, ಬಿಕ್‌ನೇರ್ ಮತ್ತು ಜೈಸಲ್ಮೇರ್ ಇವರು ಸ್ವಂತ ಇಚ್ಛೆಯಿಂದ ತಮ್ಮ ವಿಧೇಯತೆ ತೋರಿಸಿದ್ದರು.

2) **2ನೇ ಗುಂಪಿನ ರಜಪೂತರು** - ರಣತಂಬೂರ್ ಮತ್ತು ಮೆರ್ತ, ಇವರು ಗೌರವಯುತವಾಗಿ ಹೋರಾಡಿ ಅಕ್ಬರನೊಡನೆ ಒಪ್ಪಂದಕ್ಕೆ ಬಂದರು.

3) **3ನೇ ಗುಂಪಿನ ರಜಪೂತರು** - ಮೇವಾಡದ ರಾಣಾ ಉದಯಸಿಂಗ್ ಮತ್ತು ಅವರ ಅನುಯಾಯಿಗಳು ಇವರು ತಮ್ಮ ಪ್ರಾಂತೀಯ ಸ್ವಾತಂತ್ರ್ಯ ಗೌರವಕ್ಕೆ ಹೋರಾಡಿದ ವೀರಗುಂಪು.

ಅಕ್ಬರನ ರಜಪೂತ ನೀತಿಯ 2 ಪರಿಣಾಮಗಳು.

1) ಅಕ್ಬರನು ರಜಪೂತ ಸ್ವಾತಂತ್ರ್ಯವನ್ನು ಕ್ಷಾತ್ರಗುಣವನ್ನು ತನ್ನ ಕತ್ತಿಯಿಂದ ತುಂಡರಿಸಿದನು.

2) ರಜಪೂತರಿಗಾಗಿದ್ದ ಆತ್ಮಗೌರವ ಮತ್ತು ಘನತೆಯ ಗಾಯಗಳು ಅಕ್ಬರನ ಉದಾರಯುತ ಮತ್ತು ಸ್ನೇಹಪೂರ್ವಕ ನಡವಳಿಕೆಯಿಂದ ಮಾಯವಾದವು.

- ಅಕ್ಬರನು ರಜಪೂತರಾದ ಭಗವಾನ್‌ದಾಸ್‌ನನ್ನು 5000 ಮನ್ ಸಬ್‌ದಾರನನ್ನಾಗಿಯೂ ಮತ್ತು ಮಾನ್‌ಸಿಂಗ್‌ನನ್ನು 7000 ಮನ್ ಸಬ್‌ದಾರನನ್ನಾಗಿ ನೇಮಿಸಿದ್ದನು.

ಅಕ್ಬರನ ಧಾರ್ಮಿಕ ನೀತಿ (Akbar's Religion policy)

- ಅಕ್ಬರನು ಫತೇಪುರ್ ಸಿಕ್ರಿಯಲ್ಲಿ **'ಇಬದತ್–ಖಾನ** ಅಥವಾ ಆರಾಧನಾ ಮಂದಿರ'ವನ್ನು ಕಟ್ಟಿಸಿ ಅಲ್ಲಿ **'ತತ್ವಶಾಸ್ತ್ರ'** ಹಾಗೂ ದೇವತಾಶಾಸ್ತ್ರದ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಿದ್ದನು. ಸತ್ಯವನ್ನು ಅರಸಲು ವಿವಿಧ ಧರ್ಮ ಪಂಥಗಳ ವಿಶೇಷವಾಗಿ ಪುರೋತ್ತಮ. ದೇವಿಹಿಂದೂ ತತ್ವಶಾಸ್ತ್ರಜ್ಞರು, ಜೈನ ಗುರುಗಳಾದ ಹರಿವಿಜಯ ಸೂರಿ, ವಿಜಯಸೇನ್ ಸೂರಿ ಬಾನುಚಂದ್ರ ಮತ್ತು ಪಾರ್ಸಿ ಪ್ರಚಾರಕರನ್ನು ಹಾಗೂ ಕ್ರೈಸ್ತಧರ್ಮ ಪ್ರಚಾರಕರನ್ನು ಇಬಾದತ್‌ಖಾನಕ್ಕೆ ಆಹ್ವಾನಿಸಿದನು.
- ಉಪನ್ಯಾಸ ಮತ್ತು ಚರ್ಚೆಗಳ ಸಾರಸಂಗ್ರಹವಾಗಿ **'ದೀನ್–ಏ–ಇಲಾಹಿ'** ರೂಪ ತಳೆಯಿತು.
- 1579ರಲ್ಲಿ ಧಾರ್ಮಿಕ ವಿಷಯಗಳಲ್ಲಿ ಶ್ರೇಷ್ಠ ನ್ಯಾಯ ವಿಮರ್ಶಕನಾಗುವ **'ಅನುಲ್ಲಂಘನೀಯ ಶಾಸನ'** ಎಂಬುದನ್ನು ಅಬುಲ್‌ಫಜಲ್‌ನ ತಂದೆ ಷೇಕ್ ಮುಬಾರಕ್ ಸಲಹೆಯಂತೆ ರಚಿಸಿದನು. ಇದಕ್ಕೆ ಸಹಿ ಹಾಕಿದ ಧಾರ್ಮಿಕ ಮುಖಂಡರೆಂದರೆ

ಮುಕ್ದಮ್ ಉಲ್‌ಮುಲ್ಕ್ ಮತ್ತು ಅಬ್ದುಲ್‌ನಾಭಿ. ಈ ಶಾಸನದ ಉದ್ದೇಶ "ಮುಸ್ಲಿಂ ಪ್ರಜೆಗಳೆಲ್ಲ ತನಗೆ ನಿಷ್ಠೆಯಿಂದ ಇರಬೇಕೆಂಬುದಾಗಿತ್ತೇ ಹೊರತು ತಾನು ಧರ್ಮಗುರುವಾಗಬೇಕೆಂಬುದಾಗಿರಲಿಲ್ಲ".

ದೀನ್-ಇ-ಇಲಾಹಿ Din - E- Ilahi (ತೌಹಿದ್-ಇ-ಇಲಾಹಿ)

- ಅಕ್ಬರನು 1582ರಲ್ಲಿ ದೀನ್-ಎ-ಇಲಾಹಿ ಎಂಬ ಪಂಥವನ್ನು ಸ್ಥಾಪಿಸಿದನು. ಇದರ ಉದ್ದೇಶ ಇಡೀ ದೇಶಕ್ಕೆ ಎಲ್ಲಾ ಧರ್ಮಗಳ ಉತ್ತಮಾಂಶಗಳ ಸಾರ ಸಂಗ್ರಹವನ್ನೊಳಗೊಂಡ ಏಕೈಕ ಧರ್ಮವಿರಬೇಕೆಂಬುದಾಗಿತ್ತು. ಹಿಂದೂಗಳ ಪೈಕಿ ರಾಜಾ ಬೀರಬಲ್ಲನು ದಿನ್-ಎ-ಇಲಾಹಿಯ ಸದಸ್ಯನಾಗಿದ್ದನು.
- ಅಕ್ಬರನು 1563ರಲ್ಲಿ ಮಥುರಾ, ಪ್ರಯಾಗ ಮತ್ತು ಬನಾರಸ್‌ಗಳ ಮೇಲಿನ ಯಾತ್ರಾ ತೆರಿಗೆ ಮತ್ತು ಹಿಂದೂಗಳ ಮೇಲಿನ ಜೆಸಿಯಾ ತಲೆಗಂದಾಯ (1564ರಲ್ಲಿ) ನಿಷೇಧಿಸಿದನು.

ಅಕ್ಬರನು ಒಬ್ಬ ರಾಷ್ಟ್ರೀಯ ದೊರೆ

- ರಾಷ್ಟ್ರೀಯ ದೊರೆ ಎಂದರೆ ಅವನು ತನ್ನ ಸಮಸ್ತ ಪ್ರಜೆಗಳನ್ನು ಅವರ ಕುಟುಂಬ ಧರ್ಮ, ಜಾತಿ/ಇನ್ನಾವುದೇ ವರ್ಗ ಬೇಧವಿಲ್ಲದೆ ಸಮಾನ ಮನಸ್ಕತೆಯಿಂದ ನಡೆಸಿಕೊಳ್ಳುವ ವಿಶೇಷ ಗುಣವನ್ನು ಹೊಂದಿದವನಾಗಿರಬೇಕು.
- ಅಕ್ಬರನ ಆಳ್ವಿಕೆಯ ಕಾಲದಲ್ಲಿ **'ರಾಷ್ಟ್ರೀಯ ರಾಜಪ್ರಭುತ್ವ'** ಅಸ್ತಿತ್ವಕ್ಕೆ ಬಂದಿತು.
- ಅಕ್ಬರನು 'ಪರ್ಷಿಯ ಭಾಷೆ'ಯನ್ನು ಅಧೀಕೃತ ಆಸ್ಥಾನದ ಭಾಷೆಯೆಂದು ಪರಿಗಣಿಸುವ ಮೂಲಕ ಸಾಮ್ರಾಜ್ಯಕ್ಕೆ ಸಾಂಸ್ಕೃತಿಕ ಏಕತೆಯನ್ನು ತಂದುಕೊಡಲು ಪ್ರಯತ್ನಿಸಿದನು.
- ಅಕ್ಬರನ ಕಾಲದಲ್ಲಿ **ಅಥರ್ವಣವೇದ, ರಾಮಾಯಣ, ಮಹಾಭಾರತ** ಮತ್ತು **ಲೀಲಾವತಿ** ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಲಾಯಿತು.
- ವಾಸ್ತುಶಿಲ್ಪದಲ್ಲಿ ಪರ್ಷಿಯನ್ ಮತ್ತು ಹಿಂದೂ ಶೈಲಿ ಮಿಶ್ರಗೊಳಿಸಿ "ಭಾರತದ ರಾಷ್ಟ್ರೀಯ ಶೈಲಿಯ ಸಂಸ್ಥಾಪಕ" ಎಂದು ಹೆಸರು ಗಳಿಸಿದ್ದಾನೆ. ಉದಾ:- ಆಗ್ರಾ ಕೋಟೆಯ ಜಹಂಗೀರ್ ಮಹಲ್ ಮತ್ತು ಪತೇಪುರ್ ಸಿಕ್ರಿಯ ಜೋಧಬಾಯಿ ಅರಮನೆ.
- ಅಕ್ಬರನು **'ಜರೋಕದರ್ಶನ'** ತುಲಧಾನ ಮುಂತಾದ ಹಿಂದೂ ಆಚರಣೆಗಳನ್ನು ಜಾರಿಗೆ ತಂದನು.
- ಜ.ನೆಹರೂರವರು ಅಕ್ಬರನನ್ನು **"ಭಾರತದ ರಾಷ್ಟ್ರೀಯತೆಯ ಜನಕ"** ಎಂದಿದ್ದಾರೆ.
- ಅಕ್ಬರನು 1584ರಲ್ಲಿ **'ಇಲಾಹಿ ಶಕೆ'** ಆರಂಭಿಸಿದನು.
- ಅಕ್ಬರನು ಆರಂಭಿಸಿದ ಕಂದಾಯ ಪದ್ಧತಿ-ಬಂದೋಬಸ್ತ್ ಅಥವ ಜಪ್ತಿ ಅಥವಾ ಗಹಸಾಲ. (ಗಲ್ಲಭಕ್ಷ)

ಅಕ್ಬರನ ಆಳ್ವಿಕೆಗೆ ಸಂಬಂಧಿಸಿದ ಪ್ರಮುಖ ಘಟನೆಗಳು

ವರ್ಷ	ಮಹತ್ವ
1562	ಅಜ್ಮೀರಕ್ಕೆ ಅಕ್ಬರನ ಮೊದಲ ಭೇಟಿ
1562	ಗುಲಾಮಗಿರಿ ಪದ್ಧತಿಯ ನಿಷೇಧ
1563	ಯಾತ್ರಾ ತೆರಿಗೆ ನಿಷೇಧ
1564	ಜೆಸಿಯ ತಲೆಗಂದಾಯ ನಿಷೇಧ
1571	ಫತೇಪುರ್ ಸಿಕ್ರಿಯ ಸ್ಥಾಪನೆ (ಆಗ್ರಾದಿಂದ ಫತ್ತೇಪುರ ಸಿಕ್ರಿಗೆ ರಾಜಧಾನಿ ವರ್ಗಾವಣೆ
1574	ಮನ್ಸಬ್ದಾರಿ ಪದ್ಧತಿಯ ಪರಿಚಯ
1575	ಇಬದತ್ ಖಾನ ರಚನೆ
1580	ದಹ್ಸಾಲ ಬಂದೋಬಸ್ತ್ ಪರಿಚಯ
1582	ದೀನ್-ಇ-ಇಲಾಹಿ
1584	ಇಲಾಹಿ ಸಂವತ್ಸರ ಕ್ಯಾಲೆಂಡರ್
1587	ಇಲಾಹಿ ಗಜ್ ಯಾರ್ಡ್

ಜಹಂಗೀರ್ (1605-1627) ಸಲೀಂ/ಶೈಕುಬಾಬ (Jahangir)

- ಅಕ್ಬರ್ ಮತ್ತು ಮರ್ಯಾಮ್-ಉಜ್-ಜಮಾನಿಯ ದಂಪತಿಗಳಿಗೆ 1569ರಲ್ಲಿ ಜಹಂಗೀರನು ಜನಿಸಿದನು. ಈತನ ಮೂಲ ಹೆಸರು ಸಲೀಂ. ಜಹಂಗೀರನನ್ನು ಅಕ್ಬರನು ಪ್ರೀತಿಯಿಂದ **'ಶೈಕುಬಾಬ'** ಎಂದು ಕರೆಯುತ್ತಿದ್ದನು. ಸಲೀಂ ಗುರು ಅಬ್ದುಲ್ ರಹಿಂಖಾನ್-ಇ-ಖಾನ್‌ರಿಂದ ಹಿಂದಿ, ಟರ್ಕಿ, ಪರ್ಷಿಯನ್ ಕಲಿತನು.
- ಜೈಪುರದ ಭಗವಾನ್‌ದಾಸ್‌ನ ಮಗಳು ರಾಜಾಮಾನ್‌ಸಿಂಗನ ಸೋದರಿ ಮನ್‌ಬಾಯಿಯೊಡನೆ 1585 ರಲ್ಲಿ ಜಹಾಂಗೀರ್ ವಿವಾಹವಾದನು. ಇವಳಿಗೆ **'ಷಾಬೇಗಂ'** ಎಂಬ ಬಿರುದು ನೀಡಿದ್ದನು. ಜಹಾಂಗೀರ್ ಮತ್ತು ಮನ್‌ಬಾಯಿಗೆ ಖುಸ್ರಾವ್ ಎಂಬ ಮಗನಿದ್ದನು.
- ಜಹಂಗೀರನ 2ನೇ ಪತ್ನಿ ಮಾರ್ವಾರದ ರಾಜಾ ಉದಯಸಿಂಗನ ಮಗಳು-**ಜಗತ್ ಗೋಸಾಯ್ (ಜೋಧಬಾಯಿ)**. ಜಹಾಂಗೀರ ಮತ್ತು ಜೋಧಬಾಯಿಗೆ ಕುರ್‍ರಂ/ಷಹಜಹಾನ್ ಎಂಬ ಮಗನಿದ್ದನು.
- ಜಹಾಂಗೀರ್ ಮತ್ತು ಜಮಾಲಳಿಗೆ 'ಪರ್ದಿಜ್ ಬೇಗಂ' ಎಂಬ ಮಗನಿದ್ದನು. 4ನೇ ಮಗ ಷರ್‍ಯಾರ್‌ನು ಜಹಂಗೀರನ ಉಪಪತ್ನಿಯೊಬ್ಬಳಲ್ಲಿ ಜನಿಸಿದನು. ಜಹಾಂಗೀರನ ಪ್ರೀತಿಯ ಪತ್ನಿ (6ನೇ) **'ನೂರ್ ಜಹಾನ್'**.
- ಅಕ್ಬರನು ಜಹಂಗೀರನನ್ನು ಬಂಗಾಳ ಮತ್ತು ಒರಿಸ್ಸಾ ಗೌರ್ನರನನ್ನಾಗಿ ನೇಮಿಸಿದ್ದನು. ಇದನ್ನು ತಿರಸ್ಕರಿಸಿದ ಜಹಾಂಗೀರ್ ಅಲಹಾಬಾದ್‌ಗೆ ತೆರಳಿ ಸ್ವತಂತ್ರನಾಗಲು ಇಚ್ಚಿಸಿದನು.
- ಜಹಂಗೀರನು 1605 ನವೆಂಬರ್‌ನಲ್ಲಿ ನೂರುದ್ದೀನ್ ಮಹ್ಮದ್ ಜಹಂಗೀರ್ ಬಾದಶಹ ಎಂಬ ಬಿರುದಿನೊಂದಿಗೆ ಆಗ್ರಾದಲ್ಲಿ

ಪಟ್ಟಕ್ಕೆ ಬಂದನು. "ಎಲ್ಲರ ಪ್ರೀತಿ ಗಳಿಸಲು ಪ್ರಯತ್ನಿಸಿದನು".

- ಆಗ್ರಾದ ಕೋಟೆಯಲ್ಲಿನ ಷಾಬುರ್ಜಿಯಿಂದ ಯುಮುನಾ ನದಿಯ ದಂಡೆಯ ಮೇಲಿರುವ ಒಂದು ಶಿಲಾಸ್ತಂಭದವರೆಗೆ ಪ್ರಸಿದ್ಧವಾದ **'ಚಿನ್ನದ ನ್ಯಾಯ ಸರಪಳಿಯನ್ನು'** ಹಾಕಿ ನೊಂದ ಯಾರಾದರೂ ಸಹ ನ್ಯಾಯುವನ್ನು ಬೇಡಲು ಅದನ್ನು ಎಳೆಂಯಲು ಷಾಬುರ್ಜಿಯಲ್ಲಿನ ಬೃಹತ್ ಗಂಟೆಯನ್ನು ಬಾರಿಸಿ ನ್ಯಾಯದಾನ ಪಡೆಯುವಂತೆ ಸೌಕರ್ಯ ಒದಗಿಸಿದನು.

ಖುಸ್ರಾವ್‌ನ ದಂಗೆ (1606)

- ಖುಸ್ರಾವನು ಜಹಂಗೀರನ ಮಗ. ಇವನನ್ನು ಅಕ್ಬರ್ ಮರಣದ ನಂತರ ರಾಜಾಮಾನ್‌ಸಿಂಗ್ ಮತ್ತು ಮಿರ್ಜಾ ಅಜೀಜ್ ಕೋಕಾ ಖುಸ್ರಾವನನ್ನು ಅಧಿಕಾರಕ್ಕೆ ತರಲು ಪ್ರಯತ್ನಿಸಿದರು ಆದರೆ ಜಹಂಗೀರನು ಖುಸ್ರಾವನನ್ನು ಗೃಹ ಬಂಧನದಲ್ಲಿಟ್ಟನು. ಇವನು ಆಗ್ರಾ ಕೋಟೆಯಿಂದ ತಪ್ಪಿಸಿಕೊಂಡು ಲಾಹೋರ್ ಕಡೆ ನಡೆದನು. ಇವನಿಗೆ ಸಿಖ್ ಗುರು ಅರ್ಜನ್ ದೇವನು ಕೃಪೆ ನೀಡಿದನು.
- ಕುರ್ರಂನ ಇಚ್ಚೆಯಂತೆ ಜಹಂಗೀರನು ಖುಸ್ರಾವನನ್ನು ಕುರ್ರಂಗೆ ಒಪ್ಪಿಸಿದನು. ಇವನು ಖುಸ್ರಾವನನ್ನು ದಖನ್ನಿಗೆ ಕೊಂಡೋಯ್ದು 1622ರಲ್ಲಿ ಕೊಲೆ ಮಾಡಿಸಿದನು.
- ಖುಸ್ರಾವನ ದಂಗೆಗೆ ಆರ್ಥಿಕ ಮತ್ತು ನೈತಿಕ ಬಲದ ಬೆಂಬಲ ನೀಡಿದ ಆಪಾದನೆಯ ಮೇರೆಗೆ ಸಿಖ್‌ರ 5ನೇ ಗುರು ಅರ್ಜುನದೇವನನ್ನು(1606) ಜಹಂಗೀರ್‌ನು ಕೊಲೆ ಮಾಡಿಸಿದನು.

ಜಹಂಗೀರನ ಸೈನಿಕ ಸಾಧನೆಗಳು

- **ಬಂಗಾಳ**– ಇಸ್ಲಾಂಖಾನ್ ನೇತೃತ್ವದ ಮೊಗಲರ ಸೈನ್ಯವು 1612ರ ಮಾರ್ಚ್‌ನಲ್ಲಿ ಆಫ್ಘನ್ನರನ್ನು ಬಂಗಾಳದಲ್ಲಿ ಸೋಲಿಸುವ ಮೂಲಕ ಮೊಗಲರ ದೀರ್ಘಕಾಲ ವಿರೋಧಿಗಳಾಗಿದ್ದ ಆಫ್ಘನ್ನರ ರಾಜಕೀಯ ಅಧಿಕಾರ ಕೊನೆಗೊಂಡಿತು.

ಮೇವಾರದೊಂದಿಗೆ ಯುದ್ಧ ಮತ್ತು ಶಾಂತಿ ಒಪ್ಪಂದ

- ಅಕ್ಬರನು ಎಷ್ಟೇ ಪ್ರಯತ್ನ ಪಟ್ಟರೂ ಮೇವಾರದ ರಾಣಾಪ್ರತಾಪಸಿಂಗ್‌ನನ್ನು ಅಧೀನಕ್ಕೆ ತರಲಾಗಲಿಲ್ಲ. ಕೊನೆಗೆ ಜಹಂಗೀರನು ಕುರ್ರಂ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿ ನಗರ ಮತ್ತು ಭೂಮಿಗಳನ್ನು ಸುಡಲಾಯಿತು ಈ ವೇಳೆಗೆ ಕ್ಷಾಮ ಸಂಭವಿಸಿದ್ದರಿಂದ ರಾಣಾ ಒಪ್ಪಂದಕ್ಕೆ ಮುಂದಾದನು.
- ಮೇವಾರ ಮತ್ತು ಮೊಗಲರ ನಡುವಿನ ಹೋರಾಟವು ಮಧ್ಯಕಾಲೀನ ಇತಿಹಾಸದಲ್ಲಿ ಗೌರವಯುತ ಸ್ಥಾನ ಪಡೆದಿದೆ.
- ರಾಣಾ ಪ್ರತಾಪನ ಪ್ರತಿನಿಧಿ ಕರಣ್‌ನಿಗೆ 5000 ಸವಾರರ ಮತ್ತು 5000 ಜಾಟರ ಮನ್ಸಬ್ ಹುದ್ದೆ ಮತ್ತು ಮೊಗಲ್ ಆಸ್ಥಾನದಲ್ಲಿ ತನ್ನ ಬಲ ಭಾಗದಲ್ಲಿ ವಿಶೇಷ ಸ್ಥಾನದಲ್ಲಿ ಕುಳಿತುಕೊಳ್ಳುವ ಗೌರವಯುತ ವ್ಯವಸ್ಥೆ ಮಾಡಿದನು. ಬೇರೆ ಯಾವ ರಜಪೂತರಿಗೂ ಈ ಮಾನ್ಯತೆ ದೊರೆತಿರಲಿಲ್ಲ.

ಜಹಂಗೀರನ ದಖ್ಖನ್ನಿನ ನೀತಿ:–

- ಅಕ್ಬರನ ಕಾಲದಲ್ಲಿ ಖಾಂದೇಶ ಮತ್ತು ಅಹ್ಮದ್ ನಗರಗಳ ಕೆಲವು ಭಾಗಗಳನ್ನು ಮಾತ್ರ ಗೆಲ್ಲಲಾಗಿತ್ತು ಆದರೆ ಗೋಲ್ಕಂಡ ಮತ್ತು ಬಿಜಾಪುರಗಳನ್ನು ಮುಟ್ಟಲೂ ಆಗಿರಲಿಲ್ಲ.

ಅಹ್ಮದ್ ನಗರದ ಮೇಲೆ ಆಕ್ರಮಣ

- ಅಹ್ಮದ್‌ನಗರದ ಸಮರ್ಥ ವಜೀರ **'ಮಲ್ಲಿಕ್ ಅಂಬರ್'** ಇವನು ಮೂಲತಃ ಅಬಿಸೀನಿಯಾದವನು. ಅಂಬರನು ಕೆಲಕಾಲ ಮೊಗಲ್ ಸೇವೆಯಲ್ಲಿದ್ದ ತೋದರಮಲ್ಲನಿಂದ ಅರಿತಿದ್ದ ಕಂದಾಯ ಸುಧಾರಣೆಗಳನ್ನು ನಾಗರೀಕ ಮತ್ತು ಸೈನಿಕ ಸುಧಾರಣೆಗಳನ್ನು ಅಹ್ಮದ್‌ನಗರದಲ್ಲಿ ಜಾರಿಗೆ ತಂದನು.
- ಒಟ್ಟು ಉತ್ಪಾದನೆಯಲ್ಲಿ ರಾಜ್ಯದ ಪಾಲು 2/3 ರಿಂದ 1/3 ಭಾಗದಷ್ಟು ಎಂದು ಕಂದಾಯ ವಿಧಿಸಿದ್ದನು.
- ಅಂಬರನು ಅಬಿಸೀನಿಯಾದ ಅರಬ್–ಸಿದ್ದಿ(ಸಯ್ಯಾದರು)ಗಳನ್ನು ನೌಕಾ ಸೇನೆಯಲ್ಲಿ ಸೇರಿಸಿಕೊಂಡು ಬಲಾಢ್ಯ ನೌಕಾ ಸೇನೆಯನ್ನು ಅವರಿಂದ ನಿರ್ಮಿಸಿದನು.
- ಜಹಂಗೀರನು 1608, 1610, 1611 ಮತ್ತು 1615ರಲ್ಲಿ ಕಳುಹಿಸಿದ ಸೈನ್ಯಗಳು ಅಹ್ಮದ ನಗರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೊನೆಗೆ ಖುರ್ರಂ ನೇತೃತ್ವದಲ್ಲಿ ಬೃಹತ್ ಸೈನ್ಯವನ್ನು ಕಳುಹಿಸಿದನು. ಬಿಜಾಪುರ ಸುಲ್ತಾನನ ಮಧ್ಯಸ್ಥಿಕೆಯಲ್ಲಿ ಮೊಗಲರಿಗೂ ಮತ್ತು ಅಹ್ಮದ್ ನಗರದ ನಡುವೆ 1617ರಲ್ಲಿ ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ ಬಾಲಘಾಟ್ ಪ್ರಾಂತ್ಯ ಮತ್ತು ಅಹ್ಮದ ನಗರಗಳನ್ನೊಳಗೊಂಡಂತೆ ಅನೇಕ ಕೋಟೆಗಳನ್ನು ಮೊಗಲರಿಗೆ ಒಪ್ಪಿಸಲಾಯಿತು.
- ಬಿಜಾಪುರವು ರಾಜಕುಮಾರ ಕುರ್ರಂನಿಗೆ ಬಹು ಬೆಲೆಯ ಕಾಣಿಕೆಗಳನ್ನು ಒಪ್ಪಿಸಿತು. ಖುರ್ರಂನ ಈ ವಿಜಯಕ್ಕಾಗಿ ಜಹಂಗೀರ್ **ಷಹಜಹಾನ್** (ಪ್ರಪಂಚದ ದೊರೆ) ಎಂಬ ಬಿರುದನ್ನು ಮತ್ತು 20000 ಸವಾರರು ಮತ್ತು 30000 ಜಾಟರ ಪ್ರಮುಖನ ಹುದ್ದೆಯನ್ನು ಮತ್ತು ಗುಜರಾತ್ ಪ್ರಾಂತ್ಯದ ಗೌರ್ನರ್ ಹುದ್ದೆಯನ್ನು ನೀಡಿದನು.
- ಈ ಒಪ್ಪಂದದೊಂದಿಗೆ ಜಹಾಂಗೀರನ ದಖ್ಖನ್ನಿನ ದಂಡಯಾತ್ರೆ ಕೊನೆಗೊಂಡಿತು (1621), ದಕ್ಷಿಣದ ಯಾವ ರಾಜ್ಯವು ಕೂಡ ಮೊಗಲರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲಿಲ್ಲ.
- **ಕಾಂಗ್ರಾ ಆಕ್ರಮಣ (1620)**:– ಕಾಂಗ್ರಾ ಕೋಟೆಯು ರಾವಿ ಮತ್ತು ಸಟ್ಲೆಜ್ ನದಿಗಳ ನಡುವೆ ಅರಣ್ಯ ಪ್ರದೇಶದಲ್ಲಿತ್ತು. 1620ರಲ್ಲಿ ರಾಯ್‌ರಯನ್ ವಿಕ್ರಮಜಿತ್ ಎಂಬುವವನು ರಾಜಕುಮಾರ ಖುರ್ರಂ ನೇತೃತ್ವದಲ್ಲಿ ಕಾಂಗ್ರಾ ಕೋಟೆಯನ್ನು 4 ತಿಂಗಳ ಹೋರಾಟದ ನಂತರ ವಶಪಡಿಸಿಕೊಳ್ಳಲಾಯಿತು.

ಇನ್ನಿತರ ಜಯಗಳು

- 1611ರಲ್ಲಿ ರಾಜ ತೋದರಮಲ್ಲನ ಮಗ ಕಲ್ಯಾಣಮಲ್ಲನು

... ರ್(ಒರಿಸ್ಸಾ)ವನ್ನು ... ಕ್ಷೇತ್ರರುದ್ರದಾಸನು ತನ್ನ ... ಗೆ ಕೊಟ್ಟು ವಿವಾಹ ... ರ್ಜುನ್‌ನಿಂದ

ರಾಜ ಪುರುಷೋತ್ತಮ ... ರಾಣಾನು ... ರಿಂದ ಇಲ್ಲಿನ ... ವನ್ನು ವಶಪ...

... ಮೊಗಲರಿಗೆ ... ಸ್‌ನು ಜಹಂಗೀರನನ್ನು ... ಪರ್ಷಿಯನ್ನು ವಶಪಡಿಸಿಕೊಂಡನು.

1622ರಲ್ಲಿ ... ಬಲವಾದ ಕೋಟೆ ಜಹಂಗೀರನ ...

... ವಾ... – ಖುಸ್ರಾವ್, ಫರ್ವೇಜ್, ಕುರ್ರಂ, ...

ನೂರ್ ಜಹಾನ್

- ...ಘಿಯಾಸ್ ಬೇಗ್‌ನ ಮಗಳು ಮೆಹರುನ್ನೀಸಾ/ ...ಖಾನ್. ಘಿಯಾಸ್ ಬೇಗ್‌ನು ಮಲ್ಲಿಕ್ ಮಾಸೂದ್ ...ವರ್ತಕನ ಮೂಲಕ ಭಾರತಕ್ಕೆ ಬಂದು ಮೊಗಲ್ ...ರದ ಸೇವೆಯಲ್ಲಿ ಸೇರಿಕೊಂಡನು.
- ...594ರಲ್ಲಿ ಮೆಹರುನ್ನೀಸಾಳನ್ನು ಜಹಂಗೀರನು ವಿವಾಹವಾದನು. ಜಹಂಗೀರನು ತನ್ನ ಹೊಸ ಪತ್ನಿ ಮೆಹರುನ್ನಿಸಾಳಿಗೆ 'ನೂರ್ ಮಹಲ್' (ಅರಮನೆಯ ಜ್ಯೋತಿ) ಎಂಬ ಬಿರುದು ನೀಡಿ ತದನಂತರ ನೂರ್ ಜಹಾನ್ (ವಿಶ್ವಜ್ಯೋತಿ) ಎಂಬುದಾಗಿ ಬದಲಾಯಿತು.
- ಅಂದಿನ ಸಮಕಾಲೀನ ಡಚ್ ಪ್ರವಾಸಿಗ ಡಿಲಾಯಿಟ್‌ನು ತನ್ನ ಪ್ರಖ್ಯಾತ ಕೃತಿಯಾದ Discription of India and Fragment of Indian History ಯಲ್ಲಿ "ಅವಳಿಗೆ ಷೇರ್ ಅಫ್ಘನ್ನರೊಂದಿಗೆ ವಿವಾಹ ನಿಶ್ಚಯಾರ್ಥವಾಗಿದ್ದರಿಂದ ಅಕ್ಬರನು ಅವಳನ್ನು ಸಲೀಮನೊಡನೆ ವಿವಾಹ ಮಾಡಲು ಒಪ್ಪಲಿಲ್ಲ. ಆದರೆ ಸಲೀಮನು ಅವಳ ಮೇಲಿನ ಪ್ರೀತಿಯನ್ನು ಎಂದೂ ತೋರೆಯಲಿಲ್ಲ" ಎಂದು (ಮೆಹರುನ್ನೀಸ ಕುರಿತು) ಉಲ್ಲೇಖಿಸಿದ್ದಾನೆ.

ರಾಜಕೀಯದ ಮೇಲೆ ನೂರ್ ಜಹಾನ್‌ಳ ಪ್ರಭಾವ

- 1613ರಲ್ಲಿ ನೂರ್‌ಜಹಾನ್‌ಳು ಮುಖ್ಯರಾಣಿ ಅಥವಾ ಬಾದಶಹಾಬೇಗಂಳಾಗಿ ಪರಿವರ್ತಿತವಾದಳು.
- ಇವಳು ತನ್ನ ಪ್ರಭಾವಶಾಲಿ ವ್ಯಕ್ತಿತ್ವವನ್ನು ಔದಾರ್ಯ ಹಾಗೂ ಕರುಣೆಯ ಕಾರ್ಯಗಳಿಗೆ ಉಪಯೋಗಿಸಿಕೊಂಡು "ನೊಂದ ಜೀವಿಗಳ ಆಶ್ರಯದಾತೆ" ಎಂಬ ಹೆಸರು ಗಳಿಸಿದಳು.
- ಇವಳ ರಾಜಕೀಯ ಜೀವನದ 2 ಘಟ್ಟಗಳು:-

1) 1611–22,
2) 1622–27.

- ನೂರ್‌ಜಹಾನ್‌ಳು **"ನೂರ್‌ಜಹಾನ್ ಜುಂತಾ"** ಎಂಬ ಚಿಕ್ಕ ಕೂಟವನ್ನು ಸ್ಥಾಪಿಸಿಕೊಂಡಿದ್ದಳು. ತನ್ನ ಸೋದರ ಅಸಫ್ ಖಾನನ ಮಗಳಾದ ಅರ್ಜುಮನ್ ಭಾನು ಅಥವಾ ಮುಮ್ತಾಜ್ ಮಹಲ್‌ಳೊಂದಿಗೆ ರಾಜಕುಮಾರ ಕುರ್ರಂನಿಗೆ ವಿವಾಹ ಮಾಡಿಸಿದಳು.
- 1621ರಲ್ಲಿ ತನ್ನ ಮೊದಲ ಗಂಡ ಷೇರ್ ಅಫ್ಘನ್ನನ ಮಗಳಾದ ಲಾಡ್ಲಿ ಬೇಗಂನೊಂದಿಗೆ ಜಹಾಂಗೀರನ ಕಿರಿಯ ಪುತ್ರ ಷರ್ಯಾರ್‌ನಿಗೆ ವಿವಾಹ ಮಾಡಿಸಿದಳು. ಇವನನ್ನು 8000 ಜಾಟ್ ಮತ್ತು 4000 ಸವಾರರ ಮುಖ್ಯಸ್ಥನ ಹುದ್ದೆಗೇರಿಸಿದಳು.

ಷಹಜಹಾನನ ದಂಗೆ (1623–26)

- ಷಹಜಹಾನನು ತನ್ನ ತಂದೆಯ ವಿರುದ್ಧ ದಂಗೆ ಎದ್ದು ಕೊನೆಗೆ ಕ್ಷಮದಾನ ಬೇಡಿದನು ಮತ್ತು ರೋಹ್ತಾಸ್ ಘರ್ ಮತ್ತು ಆಸಿರ್ಘರ್ ಕೋಟೆಗಳನ್ನು ಸಾಮ್ರಾಜ್ಯದ ಸೈನ್ಯಕ್ಕೆ ವಹಿಸಿ ತನ್ನಿಬ್ಬರು ಮಕ್ಕಳಾದ ದ್ವಾರುಶುಕೊ ಮತ್ತು ಔರಂಗಜೇಬನನ್ನು ಜಹಾಂಗೀರನ ಆಸ್ಥಾನಕ್ಕೆ ಕಳುಹಿಸಿದನು. ಜಹಾಂಗೀರನು ಷಹಜಹಾನನ್ನು ಕ್ಷಮಿಸಿ ಬಾಲಘಾಟ್ ಗೌರ್ನರನನ್ನಾಗಿ ನೇಮಿಸಿದನು.
- **ಮಹಬತ್ ಖಾನನ ದಂಗೆ (1626)**:- ಮಹಬತ್ ಖಾನನು ಜನ್ಮತಃ ಆಫ್ಘನ್ನಿನವನು. ನೂರ್ ಜಹಾನ್‌ಳು ಇವನ ದಂಗೆಯನ್ನು ಧಮನ ಮಾಡಿದಳು.
- **ಜಹಾಂಗೀರನ ಮರಣ**:- ಜಹಾಂಗೀರನು 1627ರಲ್ಲಿ ಮರಣ ಹೊಂದಿದನು. ಅವನ ಪಾರ್ಥಿವ ಶರೀರವನ್ನು ರಾವಿ ನದಿಯ ಮೇಲೆ ಷಾದರ್‌ನಲ್ಲಿ ಹೂಳಲಾಯಿತು. ನಂತರ ನೂರ್‌ಜಹಾನಳು ಸುಂದರ ಸಮಾಧಿ ಕಟ್ಟಿಸಿದಳು.

ಜಹಂಗೀರನ ವ್ಯಕ್ತಿತ್ವ:-

- ಜಹಂಗೀರನಲ್ಲಿದ್ದ ಒಂದು ವಿಶೇಷ ಗುಣವೆಂದರೆ" ಪ್ರಕೃತಿ ಸೌಂದರ್ಯದ ಆಸ್ವಾದನೆ ಮತ್ತು ಪುಷ್ಪ ಪ್ರೀಯತೆ" ಎಂಬುದಾಗಿದೆ.
- ಜಹಂಗೀರನು **'ತುಜಕ್–ಇ–ಜಹಂಗೀರಿ'** ಎಂಬ ಕೃತಿ ರಚಿಸಿದ್ದಾನೆ.
- ಇಂಗ್ಲೆಂಡಿನ ದೊರೆ ಜೇಮ್ಸ್‌ನು ಜಹಂಗೀರನ ಆಸ್ಥಾನಕ್ಕೆ ಸರ್ ಥಾಮಸ್ ರೋನನ್ನು ರಾಯಭಾರಿಯಾಗಿ ಕಳುಹಿಸಿದ್ದನು. ಇದು ಮುಂದೆ ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರಕ್ಕೆ ಅಸ್ತಿಭಾರ ಹಾಕಿ, ಜಹಂಗೀರನು ಸೂರತ್‌ನಲ್ಲಿ ಬ್ರಿಟಿಷ್ ವ್ಯಾಪಾರ ಕೋಠಿಗೆ ಮನ್ನಣೆ ನೀಡಿದನು. ಥಾಮಸ್ ರೋನ ಗ್ರಂಥ– **'ಜರ್ನಲ್'**.
- ಈಸ್ಟ್ ಇಂಡಿಯಾ ಕಂಪನಿಯ ರಾಯಭಾರಿ **'ಸರ್ ಕ್ಯಾಪ್ಟನ್ ಹಾಕಿನ್ಸ್'** ಕೂಡ ಭೇಟಿ ನೀಡಿದ್ದನು.

ಷಹಜಹಾನನ ...

- 1649–5... ಮತ್ತು 165... ಫಿರಂಗಿ ಪ...

ಮಧ್ಯ ಏಷ್ಯಾದ ನೀ...

- ಮಧ್ಯ ಏಷ್ಯಾದ ಬಲ್ಕ್ ಮತ್ತು ಬದಕ್‌ಶಾಗಳನ್ನು ಗೆಲ್ಲುವ ಯೋಜನೆಯಿಂದ ಷಹಜಹಾನನು ಆರಂಭದಲ್ಲಿ ಇವುಗಳನ್ನು ವಶಪಡಿಸಿಕೊಂಡರೂ ಇದರ ಯಶಸ್ಸು ಸಾಧ್ಯವಾಗಲಿಲ್ಲ.

ಉತ್ತರಾಧಿಕಾರತ್ವಕ್ಕಾಗಿ ಹೋರಾಟ (1657–59)

- ಉತ್ತರಾಧಿಕಾರತ್ವದ ಸಮಸ್ಯೆಯನ್ನು ನೀಗಿಸಲು ಷಹಜಹಾನನು ತನ್ನ ಹಿರಿಯ ಮಗ **ದಾರಾಶುಕೋನನ್ನು** ಉತ್ತರಾಧಿಕಾರಿಯೆಂದು ಘೋಷಿಸಿದನು. ಷಹಜಹಾನನ ಮಕ್ಕಳಲ್ಲಿ ಸಿಂಹಾಸನವನ್ನು ವಶಪಡಿಸಿಕೊಳ್ಳಲು ನಡೆದ ಈ ಹೋರಾಟವನ್ನು ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಉತ್ತರಾಧಿಕಾರತ್ವಕ್ಕಾಗಿ ನಡೆದ ಹೋರಾಟ

...ಳಾದ ದಾರಾಶುಕೋ ಮತ್ತು ...ಂಗಜೇಬನು ಆಗ್ರಾದತ್ತ ಹೊರಟರು.

- **ಸಮೂರ್‌ಘರ್** ಕದನದಲ್ಲಿ ದಾರಶುಕೋನು ಸೋತನು. ಅಪಾರವಾದ ಸೈನಿಕರನ್ನು ಕಳೆದುಕೊಂಡ ದಾರಾಶುಕೋನು ಹೀನಾಯ ಸ್ಥಿತಿಯಲ್ಲಿದ್ದನು. ಇದರಿಂದಾಗಿ ಹಿಂದೂಸ್ತಾನದ ಸಿಂಹಾಸನವನ್ನು ಔರಂಗಜೇಬನು ವಶಪಡಿಸಿಕೊಂಡಿದುದು ಬಹುಮಟ್ಟಿಗೆ **ಸಮೂರ್‌ಘರ್** ವಿಜಯದ ಪರಿಣಾಮದಿಂದ ಎಂದು ಹೇಳಬಹುದು.
- 1658ರಲ್ಲಿ ಆಗ್ರಾ ಕೋಟೆಯನ್ನು ವಶಪಡಿಸಿಕೊಂಡ ಯಮುನಾ ನದಿಯ ನೀರು ಸರಬರಾಜು ನಿಲ್ಲಿಸಿದಾಗ ಸಾಮ್ರಾಟನು ಉಪ್ಪು ನೀರು ಕುಡಿದು ಬಾಯಾರಿಕೆ ಅರಗಿಸಿಕೊಳ್ಳಬೇಕಾಯಿತು.
- ಔರಂಗಜೇಬನು ಮುರಾದನನ್ನು ಮೊದಲು ಸಮೂರ್‌ಘರ್ ಕೋಟೆ ನಂತರ ಗ್ವಾಲಿಯಾರ್ ಕೋಟೆಯಲ್ಲಿ ಬಂಧಿಸಿದ್ದನು.

ಮೊಗಲ್ ರಾಜರ ಸಮಾಧಿ ಇರುವ ಸ್ಥಳಗಳು

- ಬಾಬರನ ಗೋರಿ – ಕಾಬೂಲ್,
- ಜಹಾಂಗೀರ್ ಗೋರಿ –ಸಹದರ(ಲಾಹೋರ್)
- ಹುಮಾಯೂನ್ ಗೋರಿ – ದೆಹಲಿ,
- ಷಹಜಹಾನ್ ಗೋರಿ-ತಾಜ್‌ಮಹಲ್
- ಷೇರ್ ಷಾ – ಸಸಾರಂ,
- ಔರಂಗಜೇಬ್ ಗೋರಿ –ಔರಂಗಾಬಾದ್
- ಅಕ್ಬರನ ಗೋರಿ – ಸಿಕಂದರ್
- ಬಹದ್ದೂರ್ ಷಾ ಜಫರ್ – ರಂಗೂನ್

ಷಹಜಹಾನ್ (ಕ್ರಿ.ಶ.1627-1658) (Shahj...

- ಷಹಜಹಾನನು 1628 ...

1661ರಲ್ಲಿ ದಿವಾನ್ ಆಲಿನಾಕಿಯನ್ನು ಕೊಲೆ ಮಾಡಿದನೆಂಬ ಆಪಾದನೆಯ ಮೇಲೆ ಮುರಾದನನ್ನು ಮರಣ ದಂಡನೆಗೆ ಗುರಿಪಡಿಸಲಾಯಿತು.

- 1659ರಲ್ಲಿ ದಾರಾಶುಕೋ ಮತ್ತು ಸಿಫಿರ್ ಶುಕೋನನ್ನು ದೆಹಲಿಗೆ ತಂದು ಸಾಯಿಸಲಾಯಿತು.
- ಷಹಜಹಾನನು 1666ರಲ್ಲಿ ಮರಣ ಹೊಂದಿದನು.

ಮಮ್ತಾಜ್ ಮಹಲ್

- ಮಮ್ತಾಜ್ ಮಹಲ್‌ಳು ಷಹಜಹಾನನ ಪ್ರೀತಿಪಾತ್ರ ರಾಣಿ. ಇವಳ ಮೊದಲ ಹೆಸರು **ಅರ್ಜುಮಾನ್ ಬೇಗಂ**. ಇವಳು ನೂರ್‌ಜಹಾನಳ ಅಣ್ಣನ ಮಗಳು.
- ಮಮ್ತಾಜ್ ಮಹಲ್ ಎಂದರೆ ಅರಮನೆಯ ಅಲಂಕಾರ ಎಂದು. ಷಹಜಹಾನನು ಸಾಮ್ರಾಟನಾದ ನಂತರ ತನ್ನ ಪ್ರೀತಿಯ ಪತ್ನಿಗೆ **ಮಲ್ಲಿಕಾ ಇ ಜುಮಾನಿ** ಎಂದು ಬಿರುದು ನೀಡಿದ್ದನು.
- ಮಮ್ತಾಜಳ ಮಕ್ಕಳೆಂದರೆ ಜಹನಾರ, ದಾರಶುಕೋ, ಷಾಷೂಜ, ರೋಷನಾರ, ಔರಂಗಜೇಬ, ಮುರಾದ್‌ಬಕ್ಷ ಮತ್ತು ಗೌಹುನಾರ.
- ಮಮ್ತಾಜಳು ಕ್ರಿ.ಶ.1631ರಲ್ಲಿ ಮರಣ ಹೊಂದಿದಳು. ಇವಳ ಶವವನ್ನು ಮೊದಲು ಬಹರಾನ್‌ಪುರದಲ್ಲಿ ಹೂಳಲಾಯಿತು ನಂತರ ಆಗ್ರಾದ ಉದ್ಯಾನವನದಲ್ಲಿ ಸಮಾಧಿ ಮಾಡಿ ಜಗತ್‌ಪ್ರಸಿದ್ಧ **ತಾಜ್‌ಮಹಲ್** ಕಟ್ಟಲಾಯಿತು.

ಷಹಜಹಾನ್‌ನ ವ್ಯಕ್ತಿತ್ವ

- ಇವನು ಹಿಂದೂಗಳ ಮೇಲೆ ಪುನಃ ಯಾತ್ರಾ ತೆರಿಗೆಯನ್ನು ಜಾರಿಗೆ ತಂದನು. ಜರೋಕದರ್ಶನ ಹಾಗೂ ತುಲಾಧನ ಸಂಪ್ರದಾಯಗಳನ್ನು ಮುಂದುವರೆಸಿದನು.
- ಇವನ ಕಾಲದಲ್ಲಿ ಓರ್ಛಾದ ದೇವಾಲಯಗಳು ಮತ್ತು ಬನಾರಸ್‌ನ ದೇವಾಲಯಗಳು ನಾಶಗೊಂಡವು.
- ಇತಿಹಾಸಕಾರರು ಷಹಜಹಾನನ ಕಾಲವನ್ನು **'ಮಧ್ಯಯುಗೀನ ಭಾರತದ ಸುವರ್ಣಯುಗ'** ಎಂದಿದ್ದಾರೆ.
- ಇವನು ತಾಜ್ ಮಹಲ್, ಆಗ್ರಾದ ಹವಳದ ಮಸೀದಿ, ದೀವಾನ್-ಇ-ಖಾಸ್, ಜಾಮಿಮಸೀದಿ ಮತ್ತು ಪ್ರಸಿದ್ಧ ಮಯೂರ ಸಿಂಹಾಸನವನ್ನು ರಚಿಸಿದ್ದನು.
- ವಾಸ್ತವವಾಗಿ ಮೊಗಲ್ ಸಾಮ್ರಾಜ್ಯದ ಆರ್ಥಿಕ ದಿವಾಳಿತನವು ಷಹಜಹಾನನ ಕಾಲದಲ್ಲಿ ಆರಂಭವಾಯಿತು.
- ಇವನು ಪ್ರಖ್ಯಾತ **ಕೊಹಿನೂರ್ ವಜ್ರ**ವನ್ನು ಹೊಂದಿದ್ದನು.
- **ಷಹಜಹಾನನ ಆಸ್ಥಾನದಲ್ಲಿದ್ದ ವಿದ್ವಾಂಸರು:-** ಜಗನ್ನಾಥ ಪಂಡಿತ (ಗಂಗಾಧರ ಮತ್ತು ಗಂಗಾಲಹರಿ ಕೃತಿಗಳು) ಚಿಂತಾಮಣಿ ಆಚಾರ್ಯ ಸರಸ್ವತಿ, ಸುಂದರದಾಸರು ಇದ್ದರು.
- ಷಹಜಹಾನನ ಕಾಲವು ಹಿಂದಿ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆಯ ಪುನರುಜ್ಜೀವನ ಕಾಲವೆಂದು ಕರೆಯಲ್ಪಟ್ಟಿದೆ.
- ಅಬ್ದುಲ್ ಹಮೀದ್ ಲಾಹೋರಿಯು ಪಾದಶಹಾ ನಾಮ (ಪರ್ಷಿಯನ್) ಮತ್ತು ಅಮೀನ್ ಖಜ್ವಾನಿಯು ಷಹಜಹಾನ್‌ನಾಮವನ್ನು ಬರೆದರು.
- ಷಹಜಹಾನನ ಮಗನಾದ ದಾರಾಶುಕೊನು ಅರೇಬಿಕ್, ಪರ್ಷಿಯನ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿದ್ವಾಂಸನಾಗಿದ್ದನು.
- ಮುನ್ನಿ ಬನಾರ್ಸಿದಾಸರು **'ಪ್ರಬೋದ್ ಚಂದ್ರೋದಯ'** ವನ್ನು (ಸಂಸ್ಕೃತ ಕೃತಿ) ಮತ್ತು ರಾಮಾಯಣವನ್ನು ಇಬನ್ ಹರಕಿರಣ್‌ರು ಪರ್ಷಿಯಾಕ್ಕೆ ಭಾಷಾಂತರಿಸಿದರು.
- ದೆಹಲಿಯಲ್ಲಿ ಕೆಂಪುಕೋಟೆ, ಜಾಮೀಮಸೀದಿ ಹಾಗೂ ಆಗ್ರಾದಲ್ಲಿ ತಾಜ್ ಮಹಲ್, ದಿವಾನ್-ಎ-ಆಮ್, ದಿವಾನ್-ಎ-ಖಾಸ್ ಕಟ್ಟಿಸಿದನು.
- ಷಹಜಹಾನನು ನಿರ್ಮಿಸಿದ ಎರಡು ಕಾಲುವೆಗಳಾದ ರಾವಿ ಕಾಲುವೆ ಲಾಹೋರ್ ವರೆಗೆ ಮತ್ತು ನೆಹರ್-ಎ-ಷಾಹ್ ಫಿರೋಜ್ ಷಾ ತುಘಲಕ್‌ನು ನಿರ್ಮಿಸಿದ್ದ ಕಾಲುವೆಯನ್ನು ವೃದ್ಧಿಸಿದುದಾಗಿದೆ.
- ಷಹಜಹಾನನ ಕಾಲದಲ್ಲಿ ಫ್ರೆಂಚ್ ಪ್ರವಾಸಿಗರಾದ **ಬರ್ನಿಯರ್ ಮತ್ತು ಟ್ರಾವೆರ್ನಿಯರ್** ಹಾಗೂ ಇಟಲಿಯ ಪ್ರವಾಸಿಗರಾದ **ಮನುಕ್ಕಿ ಮತ್ತು ಪೀಟರ್ ಮಂಡಿ ಮೊಘಲ್** ಸಾಮ್ರಾಜ್ಯ ಸಂದರ್ಶಿಸಿದ್ದರು.

ಔರಂಗಜೇಬ್ / ಆಲಂಗೀರ್ / ಜಿಂದಾಪೀರ್ (1659-1707)

- ಔರಂಗಜೇಬನು 1618 ನವೆಂಬರ್ 3ರಂದು ಉಜ್ಜೈನಿಯ ಬಳಿಯ ದೋಹದ್‌ನಲ್ಲಿ ಜನಿಸಿದನು. ಇವನು ಷಹಜಹಾನನ್ನು ಬಂಧಿಸಿ 1658 ಜೂನ್‌ನಲ್ಲಿ ತಾನೇ ಚಕ್ರವರ್ತಿಯಾದನು. ಇವನು ಅರೇಬಿಕ್, ಪರ್ಷಿಯನ್, ಟರ್ಕಿ ಮತ್ತು ಹಿಂದಿ ಭಾಷೆಗಳನ್ನು ಕಲಿತಿದ್ದನು.
- ಔರಂಗಜೇಬನ ಪ್ರಥಮ ದಿಗ್ವಿಜಯವು ಬುಂದೇಲಖಂಡದ ಜುಜಾಕ್‌ಸಿಂಗನ ವಿರುದ್ಧ ನಡೆದು ಯಶಸ್ವಿಯಾಗಿದ್ದನು. ಎರಡು ಬಾರಿ ದಖ್ಖನ್ ಗೌರ್ನರ್‌ರಾಗಿ ಹಾಗೂ ಒಂದು ಬಾರಿ ಗುಜರಾತ್ ಗೌರ್ನರ್‌ನಾಗಿದ್ದನು. ಹಾಗೆಯೇ ಮಧ್ಯ ಏಷ್ಯಾ ಮತ್ತು ಕಾಂದಹಾರ್‌ಗಳಿಗೆ ಮೊಗಲ್ ಸೇನೆಯ ದಂಡನಾಯಕತ್ವ ವಹಿಸಿದ್ದನು.
- ಇವನು "ಅಬ್ದುಲ್ ಮುಜಾಫರ್ ಮಹಿ ಉದ್ ದೀನ್ ಮಹ್ಮದ್ ಔರಂಗಜೇಬ್ ಬಹದ್ದೂರ್ ಆಲಂಗೀರ್ ಬಾದಶಹಾ ಘಾಜಿ" ಎಂಬ ಬಿರುದಿನೊಂದಿಗೆ ಚಕ್ರವರ್ತಿಯಾದನು.
- ಆಲಂಗೀರ್ ಎಂದರೆ "ಪ್ರಪಂಚವನ್ನು ಜಯಿಸಿದವನೆಂದರ್ಥ
- ಔರಂಗಜೇಬನ ಆಳ್ವಿಕೆಯ ಎರಡು ಭಾಗಗಳೆಂದರೆ

1) ಮೊದಲ ಭಾಗ 1658-1681 – ಉತ್ತರ ಭಾಗದ ರಾಜಕೀಯ.
2) ದ್ವಿತೀಯ ಭಾಗ 1681 ರಿಂದ – ದಖನ್ನಿನ ರಾಜಕೀಯ.

ಔರಂಗಜೇಬನ ಈಶಾನ್ಯ ಗಡಿ ನೀತಿ.

- ಅಸ್ಸಾಮಿನಲ್ಲಿ ಅಹೋಮರು ಆಳುತ್ತಿದ್ದರು. ಔರಂಗಜೇಬನು 1661ರಲ್ಲಿ ಮಿರ್‌ಜುಮ್ಲಾನನ್ನು ಬಂಗಾಳದ ಗೌರ್ನರನನ್ನಾಗಿ ನೇಮಿಸಿದ ಅಸ್ಸಾಂಗೆ ಮುತ್ತಿಗೆ ಹಾಕಲು ತಿಳಿಸಿದನು. ಅಹೋಮರ

ರಾಜ ಜಯಧ್ವಜನು ವಾರ್ಷಿಕ ಕಪ್ಪ ಮತ್ತು ಯುದ್ಧ ಪರಿಹಾರ ನೀಡಲು ಒಪ್ಪಿಕೊಂಡನು. ಮೀರ್‌ಜುಮ್ಲಾನು ಢಾಕಾಗೆ ಹಿಂದಿರುಗುವಾಗ 1663ರಲ್ಲಿ ಮರಣ ಹೊಂದಿದನು.

- ಜುಮ್ಲಾನ ನಂತರ ಬಂಗಾಳದ ಗೌರ್ನರ್ ಆಗಿ ಷಹಿಸ್ತಾಖಾನನನ್ನು ನೇಮಿಸಿಲಾಯಿತು. ಇವನು ಅರಾಕಾನ್ ದೊರೆಯನ್ನು ನೌಕಾಯುದ್ಧದಲ್ಲಿ ಸೋಲಿಸಿ ಚಿತ್ತಗಾಂಗನ್ನು ವಶಪಡಿಸಿಕೊಂಡನು. ಷಯಿಸ್ತಾಖಾನನು 30 ವರ್ಷಗಳ ಕಾಲ ಬಂಗಾಳದ ಗೌರ್ನರಾಗಿದ್ದು ಬಂಗಾಳದಲ್ಲಿ ಪೋರ್ಚುಗೀಸ್ ಕಡಲ್ಗಳ್ಳರನ್ನು ದಂಡಿಸಿ ಅವರ ಬಲಿಷ್ಟ ಬಂಗಾಳಕೊಲ್ಲಿಯ ಸೊಂದಿಪ್ ದ್ವೀಪವನ್ನು ವಶಪಡಿಸಿಕೊಂಡನು.
- **ಔರಂಗಜೇಬನ ವಾಯುವ್ಯ ಗಡಿ ನೀತಿ :–** ಔರಂಗಜೇಬನು ರಾಜ್ಯ ವಿಸ್ತರಣೆಯನ್ನು ಈಶಾನ್ಯದಿಂದ ವಾಯವ್ಯಕ್ಕೆ 1670ರಲ್ಲಿ ವರ್ಗಾಯಿಸಿದನು. 1667ರಲ್ಲಿ ಔರಂಗಜೇಬನ ವಿರುದ್ಧ ಯೂಸಫ್ಜಾಯಿಗಳು ಭಾಘುವಿನ ನೇತೃತ್ವದಲ್ಲಿ ದಂಗೆಯೆದ್ದರು. ಹಾಗೂ 1672ರಲ್ಲಿ ಮೊಗಲರ ವಿರುದ್ಧ ಅಫ್ರಿದಿಗಳು ಅಕ್ಮಲ್‌ಖಾನ್ ನೇತೃತ್ವದಲ್ಲಿ ದಂಗೆ ಎದ್ದರು ಈ ದಂಗೆಗಳನ್ನು ಔರಂಗಜೇಬನು ಅಡಗಿಸಿದನು.

ಔರಂಗಜೇಬನ ಧಾರ್ಮಿಕ ನೀತಿ (ಹಿಂದೂ ವಿರೋಧಿ ನೀತಿ)

- ತನ್ನ ಜನ್ಮದಿನ ಮತ್ತು ಸಿಂಹಾಸನವರೋಹಣ ದಿನಾಚರಣೆಯ ಸಂಪ್ರದಾಯ ಆಚರಣೆಗಳನ್ನು ಸುಲಭಗೊಳಿಸಿದನು. ಜರೋಕ ದರ್ಶನವನ್ನು ನಿಲ್ಲಿಸಿದನು ಹಾಗೂ ಅದೇ ವರ್ಷ ಆಸ್ಥಾನದಲ್ಲಿ ಸಂಗೀತವನ್ನು ನಿಷೇಧಿಸಿದನು.
- ರಾಜನ ಆಸ್ಥಾನದಲ್ಲಿದ್ದ ಖಗೋಳ ಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯ ಶಾಸ್ತ್ರಜ್ಞರನ್ನು ತೆಗೆದುಹಾಕಿ ಮೊಗಲ್ ಸಾಮ್ರಾಟರು ಪರ್ಷಿಯಾದಿಂದ ಕಲಿತಿದ್ದ ನೌರೋಜನ್ನು ನಿಷೇಧಿಸಿದನು. ನೃತ್ಯಗಾರ್ತಿಯರು ಮತ್ತು ವೇಶ್ಯೆಯರು ವಿವಾಹವಾಗುವಂತೆ ಇಲ್ಲವೇ ರಾಜ್ಯ ಬಿಟ್ಟು ಹೋಗುವಂತೆ ಆಜ್ಞಾಪಿಸಿದನು. ಅಶ್ಲೀಲ ಹಾಡುಗಳನ್ನು ಧಾರ್ಮಿಕ ಉತ್ಸವಗಳನ್ನು ಸೌದೆಯ ಹೊರೆ ಉರಿಸುವುದನ್ನು ಮತ್ತು ಮೆರವಣಿಗೆಗಳನ್ನು ನಿಲ್ಲಿಸಿದನು.
- ಔರಂಗಜೇಬನ ಆಳ್ವಿಕೆಯಲ್ಲಿನ ಅಧಿಕೃತ ಕೈಪಿಡಿಯಲ್ಲಿ ಅವನು ಸತಿಪದ್ಧತಿಯನ್ನು ನಿಷೇಧಿಸಿದನೆಂದು ಉಲ್ಲೇಖಿಸಲಾಗಿದೆ.
- ಹಿಂದೂಗಳ ಪಾಠಶಾಲೆಗಳನ್ನು ಮತ್ತು ದೇವಾಲಯಗಳನ್ನು ನಾಶಪಡಿಸುವಂತೆ ಆಜ್ಞೆ ಮಾಡಿದನು. ಜೈಪುರದ ಮಾನಸಿಂಗ್‌ನಿಂದ 1590ರಲ್ಲಿ ನಿರ್ಮಿಸಲ್ಪಟ್ಟ ಗೋವಿಂದ ದೇವಾಲಯುವು ಔರಂಗಜೇಬನಿಂದ ಮಸೀದಿಯಾಗಿ ಪರಿವರ್ತನೆಯಾಯಿತು.
- ಕಾಶಿ ಪಟ್ಟಣದ ಪ್ರಸಿದ್ಧ ವಿಶ್ವೇಶ್ವರ ದೇವಾಲಯವನ್ನು ಒಡೆಯಿಸಿ ಆ ಸ್ಥಳದಲ್ಲಿ ಬಹಳ ಎತ್ತರವಾದ ಮಿನಾರ್‌ಗಳುಳ್ಳ ಮಸೀದಿಗಳನ್ನು ಕಟ್ಟಿಸಿದನು.
- ಹಿಂದೂಗಳ ಮೇಲೆ ಪುನಃ ಜೆಸಿಯಾ ಮತ್ತು ಯಾತ್ರಾ ತೆರಿಗೆಗಳನ್ನು

ವಿಧಿಸಿದನು.

- ಔರಂಗಜೇಬನ ಹೊಸ ನೀತಿಯಿಂದ ಅತೃಪ್ತಿಗೊಂಡ ಸಿಖ್ಖರು ಗುರು ತೇಜ್‌ಬಹದ್ದೂರನ ನಾಯಕತ್ವದಲ್ಲಿ ದಂಗೆ ಎದ್ದು ಇವರನ್ನು ಕೊಲೆ ಮಾಡಿಸಿದನು.
- **ಔರಂಗಜೇಬನ ರಜಪೂತ ನೀತಿ :–** ಔರಂಗಜೇಬನ ಕಾಲದಲ್ಲಿ ಪ್ರಬಲರಾಗಿದ್ದ ಮೂವರು ರಜಪೂತರೆಂದರೆ ಮೇವಾರದ ರಾಜ್‌ಸಿಂಗ್, ಮಾರ್ವಾರದ ಜಸ್ವಂತ್ ಸಿಂಗ್ ಮತ್ತು ಅಂಬರ್ ಜೈಪುರದ ರಾಜಾಜೈಸಿಂಗ್‌ರು. ರಾಜಾ ಜೈಸಿಂಗ್ ಮತ್ತು ಜಸ್ವಂತ್‌ಸಿಂಗ್‌ರು ಷಹಜಹಾನನ ಕಾಲದಲ್ಲಿ ಮೊಗಲ್ ಸೇವೆಯಲ್ಲಿದ್ದರು. ಪೂರ್ಣ ಭಾರತವನ್ನು ಇಸ್ಲಾಂ ರಾಜ್ಯವನ್ನಾಗಿ ಪರಿವರ್ತಿಸುವ ಔರಂಗಜೇಬನ ಯೋಜನೆಗೆ ಈ ರಜಪೂತ ರಾಜ್ಯಗಳು ಅಡೆತಡೆಗಳಾಗಿದ್ದವು.
- **ಮಾರ್ವಾರದ ಆಕ್ರಮಣ :–** ಪಶ್ಚಿಮ ಭಾರತದ ಸಂಪದ್ಭರಿತ ನಗರ ಹಾಗೂ ಬಂದರುಗಳೊಡನೆ, ಸಂಬಂಧ ಕಲ್ಪಿಸುವ ವಾಣಿಜ್ಯ ಮಾರ್ಗಗಳನ್ನು ತನ್ನ ವ್ಯಾಪ್ತಿಯಲ್ಲಿದ್ದ ಮಾರ್ವಾರವು ಸೈನಿಕ ದೃಷ್ಟಿಯಿಂದ ಆಯಕಟ್ಟಿನ ಸ್ಥಳವಾಗಿತ್ತು. ಇಲ್ಲಿನ ರಾಜಾ ಜೈಸಿಂಗ್, ಜಸ್ವಂತ್‌ಸಿಂಗ್ ಮತ್ತು ಪೃಥ್ವಿಸಿಂಗರು ಮರಣ ಹೊಂದಿದ್ದರು. ಆಗ ಔರಂಗಜೇಬನು ಇದನ್ನು ವಶಪಡಿಸಿಕೊಂಡನು.

ಮೊಗಲರ ವಿರುದ್ಧದ ಹೋರಾಟದಲ್ಲಿ ಮೇವಾರದ ಸೇರ್ಪಡೆ

- ಔರಂಗಜೇಬನ ಆಕ್ರಮಣ ನೀತಿಯನ್ನು ಮೇವಾಡದ ಸಿಸೋದಿಗಳು ವಿರೋಧಿಸಿ ಮಾರ್ವಾರದ ರಾಥೋಡರನ್ನು ಸೇರಿಕೊಂಡರು. (ಮೇವಾರದ ರಾಣಾರಾಜ್‌ಸಿಂಗ್) 1681ರಲ್ಲಿ ಮೊಗಲರು ಮತ್ತು ಮೇವಾರದ ನಡುವಿನ ಒಪ್ಪಂದವಾಯಿತು. ಔರಂಗಜೇಬನು ಉದಯಪುರದಲ್ಲಿ 173 ದೇವಾಲಯಗಳು ಮತ್ತು ಚಿತ್ತೂರಿನ 73 ದೇವಾಲಯಗಳನ್ನು ನಾಶ ಮಾಡಿದನು.

ರಾಜಕುಮಾರ ಅಕ್ಬರನ ದಂಗೆ

- ರಜಪೂತರ ಎರಡೂ ಪಂಗಡಗಳಾದ ಸಿಸೋಮಿಯರು ಮತ್ತು ರಾಥೋಡರು ಅಕ್ಬರನಿಗೆ ಸೈನಿಕ ಬೆಂಬಲ ನೀಡುವ ಭರವಸೆಯಿತ್ತರು. ದುರ್ಗದಾಸನು ಅಕ್ಬರನನ್ನು ಶಿವಾಜಿಯ ಮಗ ಸಾಂಬಾಜಿಯಲ್ಲಿ ಆಶ್ರಯಕ್ಕೆ ಕಳುಹಿಸಿದನು
- ಹೀಗೆ 1678ರಲ್ಲಿ ಆರಂಭವಾದ ಮೊಗಲರು ಮತ್ತು ಮಾರ್ವಾರದ ರಜಪೂತರ ಸಂಘರ್ಷವು 1709ರಲ್ಲಿ ಔರಂಗಜೇಬನ ಉತ್ತರಾಧಿಕಾರಿ 1ನೇ ಬಹದ್ದೂರ ಷಾನು ಮತ್ತು ಅಜಿತ್‌ಸಿಂಗ್‌ನು ಮಾರ್ವಾರದ ಉತ್ತರಾಧಿಕಾರಿ ಎಂದು ಒಪ್ಪಿಕೊಳ್ಳುವವರೆಗೆ ಮುಂದುವರೆಯಿತು.

ಔರಂಗಜೇಬನ ದಖ್ಖನ್ ನೀತಿ (1681–1707)

- ಮೊದಲನೇಯದಾಗಿ ಔರಂಗಜೇಬನು ಬಿಜಾಪುರ ಮತ್ತು ಗೋಲ್ಕಂಡಗಳನ್ನು ವಶಪಡಿಸಿಕೊಳ್ಳಲು ಯೋಜಿಸಿದ್ದನು. ಸಾಂಬಾಜಿಯ ನೇತೃತ್ವದಲ್ಲಿ ಮತ್ತೆ ಮರಾಠರು ಏಳಿಗೆ

ಮತ್ತು ದಖ್ಖನ್ನಿನ ಸಂಪತ್ತು ಅವನನ್ನು ಆಕರ್ಷಿಸಿತು. ಹಾಗೆಯೇ ದಖ್ಖನ್ ಉತ್ತರದಲ್ಲಿ ಸೋತ ಅರಸರಿಗೆ ಆಶ್ರಯವಾಗಿತ್ತು. ಇವು ದಖ್ಖನ್ ನೀತಿಗೆ ಕಾರಣವಾದವು.

- ಔರಂಗಜೇಬನ ವಿರುದ್ಧ ದಂಗೆ ಎದ್ದ ತನ್ನ ಮಗ 2ನೇ ಅಕ್ಬರನು ದಖನ್‌ಗೆ ಬಂದು ಸಾಂಬಾಜಿಯ ಸ್ನೇಹವನ್ನು ಬೆಳೆಸಿದ್ದನು. ಔರಂಗಜೇಬನು 2ನೇ ಅಕ್ಬರನನ್ನು ಭಾರತದ ಪೀಡಕ ಮತ್ತು ಘೋರ ತಂದೆಯ ಘೋರ ಮಗ ಎಂದು ಕರೆಯುತ್ತಿದ್ದನು.
- ಔರಂಗಜೇಬನು ಪ್ರಮುಖ 4 ಮರಾಠರ ಅರಸರಾದ ಶಿವಾಜಿ (1640–80) ಸಾಂಬಾಜಿ (1680–89), ರಾಜರಾಮ್ (1689–700) ಮತ್ತು ವಿಧವೆ ತಾಯಿ ತಾರಾಭಾಯಿ (1700–17) ರೊಡನೆ ಹೋರಾಡಬೇಕಿತ್ತು. ಒಟ್ಟಾರೆ ಮರಾಠರನ್ನು ಹತ್ತಿಕ್ಕುವ ಕಾರ್ಯ ಅವನಿಂದಾಗಲಿಲ್ಲ.
- **ಬಿಜಾಪುರದ ಆಕ್ರಮಣ (1686)** ;– ಔರಂಗಜೇಬನು 1686ರಲ್ಲಿ ಸ್ವತಃ ಸೇನೆಯು ಜೊತೆಗೆ ಇದ್ದು ಬಿಜಾಪುರವನ್ನು ವಶಪಡಿಸಿಕೊಂಡನು. ಆದಿಲ್‌ಶಾಹಿಯ ಕೊನೆಯ ಸುಲ್ತಾನ ಸಿಕಂದರ್ ಅದಿಲ್ ಷಾ ಮೊಗಲರಿಗೆ ಶರಣಾಗುವ ಮೂಲಕ ಯೂಸಫ್ ಆದಿಲ್‌ಷಾನಿಂದ ಸ್ಥಾಪನೆಗೊಂಡ ಸಂತತಿ ಕೊನೆಗೊಂಡಿತು.

ಗೋಲ್ಕಂಡದ ಆಕ್ರಮಣ(1687)

- ಔರಂಗಜೇಬನು ಗೋಲ್ಕಂಡದಲ್ಲಿ ಸುಲ್ತಾನ ಅಬ್ದುಲ್‌ಹಸನ್‌ನ ಸೇನೆಯಲ್ಲಿದ್ದ ಅಬ್ದುಲ್ಲಾಘನಿ ಎಂಬುವವನಿಗೆ ಹಣದ ಆಸೆ ತೋರಿಸಿ ಅವನಿಂದ ಕೋಟೆಯ ಮಹಾದ್ವಾರವನ್ನು ತೆಗೆಯಿಸಿ ಗೋಲ್ಕಂಡವನ್ನು 1687 ಸೆಪ್ಟಂಬರ್‌ನಲ್ಲಿ ಮೊಗಲ್ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು.
- ದಕ್ಷಿಣದ ತಂಜಾವೂರು ತಿರುಚನಾಪಳ್ಳಿಯ ಹಿಂದೂ ರಾಜರಿಂದ ಕಪ್ಪಕಾಣಿಕೆಯನ್ನು ವಸೂಲಿ ಮಾಡಿದನು.
- ಔರಂಗಜೇಬನ ರಾಜ್ಯವು ಕಾಬೂಲಿನಿಂದ ಚಿತ್ತಗಾಂಗ್ ಹಾಗೂ ಕಾಶ್ಮೀರದಿಂದ ಕಾವೇರಿಯವರೆಗೆ ಬಹುಮಟ್ಟಿನ ಇಡೀ ಭಾರತದ ಪರಮಾಧಿಕಾರವನ್ನು ಪಡೆದಿದ್ದನು. ಔರಂಗಜೇಬನು ಎಲ್ಲವನ್ನು ಗಳಿಸಿದ್ದಾನೆಂದು ಕಾಣುತ್ತಿತ್ತು. ಆದರೆ ವಾಸ್ತವವಾಗಿ ಎಲ್ಲವನ್ನು ಕಳೆದುಕೊಂಡಿದ್ದನು.
- ನನ್ನನ್ನು ನಾಶ ಮಾಡಿದ್ದು ಸ್ಪೇನ್‌ನ ಹುಣ್ಣು ಎಂದು ನೆಪೋಲಿಯನ್ ಹೇಳಿದಂತೆ ದಖ್ಖನ್ನಿನ ಹುಣ್ಣು ಔರಂಗಜೇಬನನ್ನು ಸರ್ವನಾಶಗೈದಿತು.
- ಔರಂಗಜೇಬನು 1707ರ ಮಾರ್ಚ್ 3ರಂದು ಅಹ್ಮದ್‌ನಗರದಲ್ಲಿ ನಿಧನನಾದನು. ಅವನ ಮೃತ ದೇಹವನ್ನು ದೌಲತಾಬಾದ್‌ಗೆ ಕೊಂಡೊಯ್ದು ಸಂತ ಬರ್ಹಾನ್ ಉದ್ ದೀನ್ ಗೋರಿಯ ಆವರಣದಲ್ಲಿ ಹೂಳಲಾಯಿತು.
- ಔರಂಗಜೇಬನ ಸಮಕಾಲೀನರು ಇವನನ್ನು ರಾಜಮನೆತನದಲ್ಲಿ

ಜಿಂದಾಪೀರ್ / ಜೀವಿಸುವ ಸಂತ ಎಂದು ಗೌರವಿಸುತ್ತಿದ್ದರು.

ಕೊನೆಯ ಮೊಗಲ್ ಅರಸರು.

- 1707ರಲ್ಲಿ ಔರಂಗಜೇಬನ ಮರಣದೊಂದಿಗೆ ಮೊಗಲ್ ಸಿಂಹಾಸನಕ್ಕಾಗಿ ಅವನ ಮಕ್ಕಳಾದ ಮುಅಜಮ್(ಕಾಬೂಲಿನ ಪ್ರಾಂತ್ಯಾಧಿಕಾರಿ) ಮಹ್ಮದ್ ಅಜಂ(ಗುಜರಾತಿನ ಪ್ರಾಂತ್ಯಾಧಿಕಾರಿ) ಹಾಗೂ ಕಾಮ್‌ಭಕ್ಷ್ (ಬಿಜಾಪುರದ ಪ್ರಾಂತ್ಯಾಧಿಕಾರಿ) ನಡುವೆ ಹೋರಾಟ ಆರಂಭವಾಯಿತು.
- ಮುಅಜಂ ಮತ್ತು ಮಹ್ಮದ್ ಅಜಂ ನಡುವೆ ಆಗ್ರಾದ ಹತ್ತಿರ ಜೌಜೌ ಎಂಬಲ್ಲಿ 1707ರಲ್ಲಿ ಯುದ್ಧ ನಡೆದು ಮಹ್ಮದ್ ಅಜಂನು ಕೊಲೆಯಾದನು ಹಾಗೂ ಕಾಮ್ ಭಕ್ಷ್ ಗಾಯಗೊಂಡು ನಿಧನನಾದನು ಹೀಗೆ ಮುಅಜಂನು ಹೋರಾಟದಲ್ಲಿ ಗೆದ್ದು ಬಹದ್ದೂರ್‌ಷಾ ಎಂಬ ಹೆಸರಿನಿಂದ ಸಿಂಹಾಸನವೇರಿದನು.

ಬಹದ್ದೂರ್ ಷಾ (1707–12) (Bahadur Shah)

- ಇವನು ಅಧಿಕಾರಕ್ಕೆ ಬಂದಾಗ ಮರಾಠರಲ್ಲಿ ಒಡಕುಂಟಾಗಿ ಸಿಂಹಾಸನಕ್ಕಾಗಿ ಹೋರಾಟ ನಡೆಯುತ್ತಿತ್ತು. ರಜಪೂತರೊಂದಿಗೆ ಬಹದ್ದೂರ್‌ನು ಉತ್ತಮ ಸಂಬಂಧ ಹೊಂದಿದ್ದನು. ಮೊಗಲರ ಬಂಧಿಯಾಗಿದ್ದ ಸಾಹುವನ್ನು ಬಹದ್ದೂರ್‌ಷಾನು ಬಿಡುಗಡೆ ಮಾಡಿ ಅವರವರಲ್ಲೇ ಹೋರಾಟಕ್ಕಿಳಿಯುವಂತೆ ಮಾಡಿದನು.
- ಬಹದ್ದೂರ್‌ಷಾ ನಂತರ ಅಶಕ್ತನಾದ ಜಹಂದರನು ಅಧಿಕಾರಕ್ಕೆ ಬಂದರೂ ಅವನು ಒಂದು ವರ್ಷದಲ್ಲೇ ಕೊಲೆಯಾದನು. ನಂತರ ಪರುಕ್ಸಿಯಾರನು ಸಯ್ಯದ್ ಸಹೋದರರೆಂದು ಇತಿಹಾಸದಲ್ಲಿ ಖ್ಯಾತರಾದ ಬರ್ಹಾ ಪ್ರಾಂತ್ಯದ ಅಬ್ದುಲ್ಲಾಖಾನ್ ಮತ್ತು ಹುಸೇನ್ ಅಲಿ ಎಂಬುವವರ ಬೆಂಬಲದಿಂದ 1714ರಲ್ಲಿ ಅಧಿಕಾರಕ್ಕೆ ಬಂದನು.

ಫರೂಕ್ ಸಿಯಾರ್(1717–19) (Farukh Siyar)

- ಇವನ ಆಳ್ವಿಕೆಯಲ್ಲಿ ಬಿರ್ಹಾ ಪ್ರಾಂತ್ಯದ ಸಯ್ಯದ್ ಸಹೋದರರು ಆಡಳಿತದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಅಬ್ದುಲ್ಲಾಖಾನ್–ವಜೀರನಾಗಿ ಮತ್ತು ಹುಸೇನ್ ಅಲಿ ಮಿರ್‌ಭಕ್ಷಿಯಾಗಿ ಕಾರ್ಯ ನಿರ್ವಹಿಸಿದರು.
- 1719ರಲ್ಲಿ ಇವರು ಪರುಕ್ಸಿಯಾರನನ್ನು ಕೊಲೆ ಮಾಡಿ ಜಹಾನ್‌ಷಾನ ಮಗನಾದ ಮಹಮದ್ ಷಾನನ್ನು ಅಧಿಕಾರಕ್ಕೆ ತಂದರು.

ಮಹಮದ್ ಷಾ(1719–48) (Muhammad shah)

- ಮಹ್ಮದ್ ಷಾನು ಸಂಚು ರೂಪಿಸಿ ಸಯ್ಯದ್ ಸಹೋದರರನ್ನು ಕೊಲೆ ಮಾಡಿಸಿದನು. ಈತನ ಕಾಲದಲ್ಲಿ ಅಸಫ್‌ಜಾ(ನಿಜಾಮ್–ಉಲ್–ಮುಲ್ಕ್) ದಖ್ಖನ್ನಿನ ಗೌರ್ನರನಾಗಿದ್ದನು. 1724–48ರವರೆಗೆ ದಖ್ಖನ್ನಿನಲ್ಲಿ ತನ್ನದೇ ಆದ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಮೂಲಕ ಮೊಗಲ್ ಸಾಮ್ರಾಜ್ಯದ ಅವನತಿಗೆ ಕಾರಣನಾದನು.
- ಅಯೋಧ್ಯೆಯನ್ನಾಳುತ್ತಿದ್ದ ಸಾದತ್ ಅಲಿಖಾನ್ ಮತ್ತು ಬಂಗಾಳದ

ರೊಹಿಲ್ಲಾ ಅಫ್ಘನ್ನರೂ ಸ್ವತಂತ್ರರಾದರು. ಮೊಗಲ್ ಸಾಮ್ರಾಜ್ಯದ ಅಸಹಾಯಕ ಸ್ಥಿತಿಯಿಂದ ಉತ್ತೇಜಿತರಾದ ಪರ್ಶಿಯಾದ ನಾದಿರ್‌ಶಾ ಮತ್ತು ಅಫ್ಘನ್ನಿನವನಾದ ಅಹ್ಮದ್‌ಷಾ ಅಬ್ದಾಲಿಯವರು ಭಾರತದ ಮೇಲೆ ದಂಡೆತ್ತಿ ಬಂದರು.

ನಾದಿರ್‌ಷಾ ದಾಳಿ(1739) (Invasion of Nadir shah)

- ನಾದಿರ್‌ಷಾನು 1736ರಲ್ಲಿ ಪರ್ಷಿಯಾದ (ಇರಾನ್) ಸಿಂಹಾಸನವನ್ನು ಅಫ್ಘನ್ನರಿಂದ ವಶಪಡಿಸಿಕೊಂಡನು (ಷಾಹುಸೇನ್‌ನಿಂದ 1722ರಲ್ಲಿ ಆಫ್ಘನ್ ವಶವಾಗಿತ್ತು). 1727ರಲ್ಲಿ ಷಾ ಹುಸೇನ್ ಮಗ ಷಾತಹಮಸ್ಪನನ್ನು ಅಧಿಕಾರಕ್ಕೆ ತಂದು ಅವನ ಸೇವೆಯಲ್ಲಿ ಸೇರಿಕೊಂಡನು. ಷಾತಹಮಸ್ಪನ ಮರಣದ ನಂತರ 1736ರಲ್ಲಿ ನಾದಿರ್‌ಷಾನೇ ಪರ್ಷಿಯಾದ ಚಕ್ರವರ್ತಿಯಾದನು.
- 1739ರಲ್ಲಿ ಘಜ್ನಿ, ಕಾಬೂಲ್ ಮತ್ತು ಲಾಹೋರ್‌ಗಳನ್ನು ಬಹು ಸುಲಭವಾಗಿ ವಶಪಡಿಸಿಕೊಂಡ ನಾದಿರ್‌ಷಾನು ಪೇಷಾವರ್ ಮೂಲಕ ಪಂಜಾಬನ್ನು ಪ್ರವೇಶಿಸಿದನು.
- ನಾದಿರ್‌ಷಾನ ಸೈನ್ಯ ಮತ್ತು ಮಹಮದ್‌ಷಾನ ಸೈನ್ಯದ ನಡುವೆ ಕರ್ನಾಲ್ ಬಳಿ ಯುದ್ಧವಾಗಿ ಮಹಮದ್‌ಷಾನು ಸೋತು ಒಪ್ಪಂದಕ್ಕೆ ಮುಂದಾದಾಗ ಮಹಮದ್‌ಷಾ ಮತ್ತು ನಿಜಾಮ್ ಉಲ್ ಮುಲ್ಕ್‌ರನ್ನು ಬಂಧಿಸಲಾಯಿತು.
- ನಾದಿರ್‌ಷಾನು ದೆಹಲಿಯಲ್ಲಿ 'ನಾಗರಿಕ ಸಾಮೂಹಿಕ ಹತ್ಯೆಗೆ' ಆಜ್ಞೆ ಮಾಡಿದನು. ನಾದಿರ್‌ಷಾನು ದೆಹಲಿಯಲ್ಲಿ ಉಳಿದಿದ್ದ 02 ತಿಂಗಳಲ್ಲಿ ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಮತ್ತು ತಾನೇ ದೆಹಲಿಯ ಚಕ್ರವರ್ತಿ ಎಂದು ಸಾರ್ವಜನಿಕ ಪ್ರಾರ್ಥನೆಗಳನ್ನು ನಡೆಸಿದನು. ನಾದಿರ್‌ಷಾನು ಪರ್ಷಿಯಾಕ್ಕೆ (ಇರಾನ್) ಹಿಂದಿರುಗುವಾಗ **'ಕೊಹಿನೂರ್ ವಜ್ರವು'** ಸೇರಿದಂತೆ ಚಕ್ರವರ್ತಿಯ ಕಿರೀಟದ ಎಲ್ಲಾ **ವಜ್ರಗಳು, ಮಯೂರ ಸಿಂಹಾಸನ, ಭಾರತೀಯ ಸಂಗೀತದ ಸಚಿತ್ರ ಪರ್ಷಿಯನ್ ಹಸ್ತ ಪ್ರತಿಯನ್ನು ಮುಂತಾದವನ್ನು** ಕೊಂಡೊಯ್ದನು.
- ನಾದಿರ್‌ಷಾನು ಹಿಂದಿರುಗುವಾಗ ಮುಹ್ಮದ್‌ಷಾನನ್ನು ಹಿಂದೂಸ್ತಾನದ ಚಕ್ರವರ್ತಿಯೆಂದು ಮನ್ನಿಸಿ ಆಫ್ಘಾನಿಸ್ತಾನ, ಕಾಶ್ಮೀರ, ಪಶ್ಚಿಮ ಪಂಜಾಬ್ ಮತ್ತು ಸಿಂಧ್‌ಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು. ಪಂಜಾಬಿನ ಗೌರ್ನರ್‌ನು ನಾದಿರ್‌ಷಾನಿಗೆ ವಾರ್ಷಿಕ 20ಲಕ್ಷ ಪೊಗದಿ ನೀಡಲು ಒಪ್ಪಿಕೊಂಡನು.

ಅಹ್ಮದ್‌ಷಾ ಅಬ್ದಾಲಿಯ ದಂಡಯಾತ್ರೆಗಳು

- ಅಬ್ದಾಲಿಯು ಭಾರತದ ಮೇಲೆ 1748ರಿಂದ ದಾಳಿಗಳನ್ನು ಆರಂಭಿಸಿದನು. ಇವನ ದಾಳಿಯ ಉದ್ದೇಶ ಸಂಪತ್ತು ಲೂಟಿಯ ಜೊತೆಗೆ ಭಾರತದ ಒಂದು ಭಾಗದಲ್ಲಿಯಾದರೂ ತನ್ನ ಅಧಿಕಾರ ಸ್ಥಾಪಿಸುವ ಬಯಕೆ ಹೊಂದಿದ್ದನು.
- ಅಬ್ದಾಲಿಯು ಭಾರತದ ಮೇಲೆ ಐದು ಬಾರಿ (1748-1759ರವರೆಗೆ) ದಾಳಿ ಮಾಡಿದನು. 1756ರ ನಾಲ್ಕನೇ ದಾಳಿ ಮಾಡಿ ದೆಹಲಿಯತ್ತ ನುಗ್ಗಿದನು. ಅಬ್ದಾಲಿಯು ತನ್ನ ಮಗ **'ತೈಮೂರ್ ಷಾ'** ನನ್ನು ಲಾಹೋರ್‌ನ ರಾಜಪ್ರತಿನಿಧಿಯಾಗಿ ನೇಮಿಸಿದನು. ತೈಮೂರನ ದುರಾಡಳಿತದಿಂದಾಗಿ ಸಿಖ್ ಜನಾಂಗ ದಂಗೆಯೆದ್ದರು.
- 1758ರಲ್ಲಿ ರಘುನಾಥರಾಯನ ನೇತೃತ್ವದ ಮರಾಠ ಸೈನ್ಯವು ಲಾಹೋರನ್ನು ವಶಪಡಿಸಿಕೊಂಡು ಆಫ್ಘನ್ನರನ್ನು ಹೊರದೂಡಿದರು. ಇದರಿಂದಾಗಿ ಮರಾಠರಿಗೂ ಮತ್ತು ಅಹ್ಮದ್‌ಷಾ ಅಬ್ದಾಲಿಗೂ ಯುದ್ಧವು ಅನಿವಾರ್ಯವಾಗಿ 1759ರಲ್ಲಿ ಐದನೇ ಬಾರಿ ಭಾರತದ ಮೇಲೆ ದಂಡೆಯಾತ್ರೆ ಮಾಡಿದನು.
- ಕೊನೆಗೆ **1761ರಲ್ಲಿ 3ನೇ ಪಾಣಿಪತ್ ಯುದ್ಧವು** ಅಬ್ದಾಲಿ ಮತ್ತು ಮರಾಠರಿಗೂ ನಡೆದು ಮರಾಠರನ್ನು ಸೋಲಿಸಿದ ಅಬ್ದಾಲಿಯು 2ನೇ ಷಾ ಆಲಂನನ್ನು ಭಾರತದ ಸಾಮ್ರಾಟನೆಂದು ಅಂಗೀಕರಿಸುವಂತೆ ಆದೇಶಿಸಿದನು.

ಅಮುಮದ್‌ಷಾ ಅಬ್ದಾಲಿಯ ದಾಳಿಯ ಪರಿಣಾಮಗಳು

1) ಮೊಗಲ್ ಸಾಮ್ರಾಜ್ಯದ ವಿಚ್ಚಿದ್ರತೆಯನ್ನು ತೀವ್ರಗೊಳಿಸಿತು.
2) ತೀವ್ರವಾಗಿ ಹರಡುತ್ತಿದ್ದ ಮರಾಠ ಸಾಮ್ರಾಜ್ಯ ಶಕ್ತಿಗೆ ತೀವ್ರ ಪೆಟ್ಟು ಬಿದ್ದಿತು.
3) ಸಿಖ್ಖರು ಪಂಜಾಬಿನಲ್ಲಿ ಪ್ರಾಬಲ್ಯಕ್ಕೆ ಬರಲು ಪರೋಕ್ಷ ಕಾರಣವಾಯಿತು.

ಕೊನೆಯ ಮೊಗಲ್ ಅರಸರು.

1) ಮಹಮದ್ ಷಾ –(1719–48)
2) ಅಹ್ಮದ್ ಷಾ – (1748–54)
3) 2ನೇ ಆಲಂಗೀರ್ – (1754–59)
4) 2ನೇ ಷಾ ಆಲಂ – (1759–1806)
5) ಅಕ್ಬರ್ III - (1806-27)

- 3ನೇ ಅಕ್ಬರ್‌ನ ಮಗನಾದ **2ನೇ ಬಹದ್ದೂರ್ ಷಾ ಮೊಗಲ್** ಸಾಮ್ರಾಜ್ಯವನ್ನು ಆಳಿದ ಕಡೆಯ ದೊರೆ. ಇವನು 1857ರಲ್ಲಿ ನಡೆದ ದಂಗೆಯಲ್ಲಿ ಬ್ರಿಟಿಷರ ವಿರುದ್ಧ ಭಾಗವಹಿಸಿದ್ದಕ್ಕಾಗಿ ಅವನನ್ನು ಸೆರೆಹಿಡಿದು 'ರಂಗೂನ್‌ಗೆ' ಖೈದಿಯಾಗಿ ಗಡಿಪಾರು ಮಾಡಲಾಯಿತು. ಅವನು ಅಲ್ಲಿಯೇ 1862ರಲ್ಲಿ ಮರಣ ಹೊಂದಿದನು. ಇದರೊಂದಿಗೆ ಬಾಬರ್‌ನಿಂದ ಸ್ಥಾಪಿತವಾದ ಮೊಗಲ್ ಸಾಮ್ರಾಜ್ಯವು ನಶಿಸಿ ಹೋಯಿತು.

ಮೊಗಲ್ ಸಾಮ್ರಾಜ್ಯದ ಪತನಕ್ಕೆ ಕಾರಣಗಳು.

1) ಮೊಗಲ್ ಅರಸರ ಅಸಮರ್ಥತೆ ಮತ್ತು ನೈತಿಕ ಅಧಃಪತನ ಹಾಗೂ ಔರಂಗಜೇಬನ ಅಸಹಿಷ್ಣುತಾ ನೀತಿ.
2) ನೊಬೆಲ್ ವರ್ಗದ ಅಸಮರ್ತತೆ ಮತ್ತು ಗುಂಪುಗಾರಿಕೆ

3) ಸೈನಿಕ ಶಕ್ತಿಯ ಲೋಪದೋಷಗಳು ಮತ್ತು ಆರ್ಥಿಕ ದಿವಾಳಿತನ.

4) ಉತ್ತರಾಧಿಕಾರತ್ವದ ನಿಯಮವಿಲ್ಲದಿರುವಿಕೆ ಮತ್ತು ಭೌದ್ಧಿಕ ದಿವಾಳಿತನ

5) ಉತ್ತರದ ಮೇಲೆ ಮರಾಠ ದಾಳಿ ಹಾಗೂ ನಾದಿರ್ ಷಾಹಿ ಅಹ್ಮದ್ ಷಾ ಅಬ್ದಾಲಿಯ ದಾಳಿಗಳು.

- ಔರಂರಜೇಬನ ಉತ್ತರಾಧಿಕಾಯಾದ 1ನೇ ಬಹದ್ದೂರ್ ಷಾನನ್ನು ಷಾ-ಎ-ಬೇಕಾಬರ್ (ಲಕ್ಷವಿಲ್ಲದ ದೊರೆ) ಎಂದು ಕರೆಯಲ್ಪಟ್ಟನು.
- ಜಹಾಂದರ್‌ಷಾನು ಲಾಲ್‌ಕುನ್ವರ್‌ಳ ಪ್ರೇಮದಲ್ಲೇ ಕಾಲ ಕಳೆದನು.
- ಫರೂಕ್‌ಸಿಯಾರ್ ಸಯ್ಯದ್ ಸೋದರರ ಕೈಗೊಂಬೆಯಾದನು.
- ಮಹಮದ್ ಷಾನನ್ನು **'ರಂಗೀಲಾ'** ಎಂಬ ಉಪನಾಮದಿಂದ ಕರೆಯಲಾಗುತ್ತಿತ್ತು.
- ಬಹದ್ದೂರ್ ಷಾನನ್ನು **'ಜಫರ್'** ಎಂದು ಕರೆಯಲಾಗುತ್ತಿತ್ತು

ಮೊಗಲರ ಆಡಳಿತ ಪದ್ಧತಿ

ಕೇಂದ್ರಾಡಳಿತ

- ದೆಹಲಿ ಸುಲ್ತಾನರ ತತ್ವಗಳು ಮತ್ತು ಧ್ಯೇಯಗಳಿಗಿಂತ ಭಿನ್ನವಾದ ಮೊಗಲ್ ಆಡಳಿತವನ್ನು ಸ್ಥಾಪಿಸಿದವನು ಅಕ್ಬರ್ ಮಹಾಶಯ. ಇವನು ಕೆಲವು ಕ್ಷೇತ್ರಗಳಲ್ಲಿ 'ಸೂರ್ ಸಂತತಿಯ ಮಾದರಿಯ' ಆಡಳಿತವನ್ನು ಅಳವಡಿಸಿಕೊಂಡಿದ್ದನು.
- ಅಕ್ಬರನ ಕಾಲದಿಂದ ಚಕ್ರವರ್ತಿಯು ಭೂಮಿಯಲ್ಲಿನ ದೇವರ ಪ್ರತಿನಿಧಿಯೆಂದು ಪರಿಗಣಿಸಲ್ಪಟ್ಟನು ಅಬುಲ್ ಫಜಲ್‌ನು ರಾಜತ್ವ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ರಾಜತ್ವ ದೇವರ ಕೊಡುಗೆಯಾಗಿದೆ. ಆದ್ದರಿಂದ ಚಕ್ರವರ್ತಿಯು ಎಲ್ಲಾ ಪ್ರಜೆಗಳಿಗಿಂತ ಉನ್ನತವಾದವನು ಎಂದಿದ್ದಾನೆ. ಅಕ್ಬರನು "ಜರೋಕ ದರ್ಶನ ಮತ್ತು ತುಲಾಧನ ಆಚರಣೆಗಳನ್ನು" ಜಾರಿಗೆ ತಂದನು.
- ಮೊಗಲ್ ಸರ್ಕಾರದ ಆಡಳಿತ ವ್ಯವಸ್ಥೆಯು' **ಕೇಂದ್ರಿಯ ನಿರಂಕುಶ ಪ್ರಭುತ್ವವಾಗಿತ್ತು**'.
- ರಜಪೂತ ನೊಬೆಲ್ಲರು ಉನ್ನತ ಮನ್ಸಬ್‌ದಾರರಾಗಿ ರಾಜ್ಯಗಳಲ್ಲಿ ಸ್ವತಂತ್ರರಾಗಿ ಆಡಳಿತ ನಡೆಸುತ್ತಾ ತಮ್ಮ ಹುದ್ದೆಗೆ ವಂಶಪಾರಂಪರ್ಯ ಆಯ್ಕೆಯನ್ನು ಹೊಂದಿದ್ದರು.

ಮಂತ್ರಿಗಳು

- ಅಕ್ಬರನ ಕಾಲದಲ್ಲಿ ಕೇವಲ 4 ಜನ ಮಂತ್ರಿಗಳಿದ್ದರು (ವಕೀಲ್, ದಿವಾನ್/ವಜೀರ್, ಮೀರ್ ಭಕ್ಷಿ, ಸದರ್-ಉಸ್-ಸದರ್) ನಂತರದಲ್ಲಿ ಖಾನ್-ಐ-ಜಮಾನ್, ಮುಖ್ಯ ಖಾಜಿ ಮತ್ತು ಮಹಸೀಬ್ ಹುದ್ದೆಗಳು ಮಂತ್ರಿಗಳ ಸ್ಥಾನಕ್ಕೆ ಏರಿಸಲ್ಪಟ್ಟವು.
- ವಕೀಲ್ ಮತ್ತು ದಿವಾನ್/ವಜೀರ್ ಪದವಿಗಳನ್ನು ಒಗ್ಗೂಡಿಸಿ ವಕೀಲ್-ಏ-ಮುತ್ಲಖ್(ವಜೀರ್) ಎಂಬ ಏಕ ವ್ಯಕ್ತಿಯ ಅದೀನಕ್ಕೊಳಪಡಿಸಲಾಯಿತು.

1) **ಪ್ರಧಾನ ಮಂತ್ರಿ (ವಕೀಲ್-ಏ-ಮುತ್ಲಖ್ /ವಜೀರ್/ ದಿವಾನ್)**

- ಇವನು ರಾಜ್ಯವನ್ನು ರಕ್ಷಿಸುವ ಎಲ್ಲಾ ಮಂತ್ರಿಗಳ ಮುಖ್ಯಸ್ಥನಾಗಿ ಮತ್ತು ಮಂತ್ರಿಗಳ ನೇಮಕಾತಿ ಹಾಗೂ ವಜಾ ಮಾಡುವ ಅಧಿಕಾರವನ್ನು ಹೊಂದಿದ್ದನು. ಸಾಮ್ರಾಜ್ಯದಲ್ಲಿ ವಜೀರನು ಆಡಳಿತಾತ್ಮಕ ಕಾರ್ಯಗಳಲ್ಲಿ ಚಕ್ರವರ್ತಿಯ ನಂತರದ ಸ್ಥಾನದಲ್ಲಿದ್ದನು.
- ವಕೀಲ್ (ಪ್ರಧಾನಿ) ಹುದ್ದೆ-ಬಾಬರ್, ಹುಮಾಯೂನ್ ಕಾಲದಲ್ಲಿ ಪ್ರಬಲವಾಗಿತ್ತು. ಅಕ್ಬರನ ಕಾಲದಲ್ಲಿ ಇದನ್ನು ದುರ್ಬಲಗೊಳಿಸಲಾಯಿತು. ಷಹಜಹಾನನ ಕಾಲದಲ್ಲಿ ಇದು ಕಣ್ಮರೆಯಾಯಿತು. ನಂತರ ವಜೀರ್ ಪ್ರಧಾನಿಯಾದನು.

2) **ಮೀರ್ ಭಕ್ಷಿ** :-ಇವನು ಸೈನಿಕ ಇಲಾಖೆಯ ಮಂತ್ರಿ / ಸೇನಾ ದಂಡನಾಯಕ ಮತ್ತು ಸೈನಿಕರ ನೇಮಕ ಮಾಡುತ್ತಿದ್ದನು. ಸೈನಿಕ ಚಹರೆ, ಮುದ್ರೆ ಹಾಕುವ ಮತ್ತು ಆನೆಗಳ ಬಗ್ಗೆ ಲೆಕ್ಕವಿಡುತ್ತಿದ್ದನು. ಅರಮನೆಯ ರಕ್ಷಣೆಗೆ ಮನ್ಸಬ್‌ದಾರರ ನೇಮಕ ಮತ್ತು ತೆಗೆದುಹಾಕುವ ಕಾರ್ಯ ಇವನದಾಗಿತ್ತು.

3) **ಸದರ್-ಉಸ್-ಸುದರ್** :- ಇವನು ಚಕ್ರವರ್ತಿಗೆ ಧಾರ್ಮಿಕ ವಿಷಯಗಳಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದನು. ಧಾರ್ಮಿಕ ದತ್ತಿ ಮತ್ತು ದಾನಧರ್ಮ ಇಲಾಖೆಯ ಮುಖ್ಯಸ್ಥನಾಗಿದ್ದನು.

4) **ಮುಖ್ಯ ಖಾಜಿ** :- ಇವನು ನ್ಯಾಯಾಂಗದ ಮುಖ್ಯಸ್ಥ. ಮುಫ್ತಿಗಳು ಇಸ್ಲಾಂ ಕಾನೂನುಗಳ ಅರ್ಥ ವಿವರಣೆ ನೀಡಿದರೆ ಮುಖ್ಯ ಖಾಜಿಯು ತೀರ್ಪನ್ನು ಘೋಷಿಸುತ್ತಿದ್ದನು. ಇವನು ಪ್ರಾಂತೀಯ ಖಾಜಿಗಳನ್ನು ಮತ್ತು ಜಿಲ್ಲಾ ಖಾಜಿಗಳನ್ನು ನೇಮಿಸುತ್ತಿದ್ದನು.

5) **ಮುಹ್ತಸೀಬ್** ;- ಸಾರ್ವಜನಿಕ ನೀತಿಯು ದೋಷ ವಿಮರ್ಷನಾಧಿಕಾರಿ(ಪ್ರಜೆಗಳ ಮೌಲ್ಯಯುತ ಜೀವನ ನಡೆಸುವಂತೆ ನೋಡಿಕೊಳ್ಳಬೇಕಿತ್ತು). ಔರಂಗಜೇಬನ ಕಾಲದಲ್ಲಿ ಮುಹ್ತಸೀಬ್‌ನಿಗೆ ಹಿಂದೂ ದೇವಾಲಯಗಳು ಮತ್ತು ಶೈಕ್ಷಣಿಕ ಕೇಂದ್ರಗಳನ್ನು ನಾಶಗೊಳಿಸುವ ಕಾರ್ಯವನ್ನು ವಹಿಸಲಾಗಿತ್ತು.

6) **ಖಾನ್-ಏ-ಸಮಾನ್**:- ಸಾಮ್ರಾಜ್ಯದ ಅಂಗರಕ್ಷಕ ಸಿಬ್ಬಂದಿಯ ನೇತೃತ್ವ ವಹಿಸಿಕೊಂಡನು.

7) **ದಿವಾನ್**- ನಾಯಕತ್ವದಲ್ಲಿ ವರಮಾನ ಇಲಾಖೆ ಮತ್ತು ಆಯವ್ಯಯದ ಮೇಲ್ವಿಚಾರಣೆ.

8) **ಮೀರ್ ಅಲೇಷ್/ದರೋಗ -ಏ-ತೋಫ್ ಖಾನಾ** ಫಿರಂಗಿ ದಳದ ಮುಖಂಡ.

9) **ಡಾಕ್ ಚೌಕಿಯ ದರೋಗ**- ಪತ್ರ ವ್ಯವಹಾರ ವಿಭಾಗದ ಮುಖ್ಯಸ್ಥ.

10) **ಟಂಕಸಾಲೆ ದರೋಗ ಮೀರ್ ಮಾಲ್** – ಮಂತ್ರಿ ಮಂಡಲದ ಮುದ್ರೆಯ ಅಧಿಕಾರಿ.

11) **ಮುಸ್ತಾಫಿ**- ಮಹಾಲೆಕ್ಕ ಪರೀಕ್ಷಕ.

12) **ನಜೀರ್ -ಏ-ಖಬುಯಾತ್** – ಸಾಮ್ರಾಟನ ಕಾರ್ಯಕಾರಣ ಮೇಲ್ವಿಚಾರಕ.

13) **ಮುಶ್ರಿಸ್** – ಕಂದಾಯ ಕಾರ್ಯದರ್ಶಿ.

14) ಮೀರ್ ಬದ್ರಿ – ನೌಕಬಲಾಧಿಪತಿ.

15) ಮಿರ್ ಬರ್ರ – ಅರಣ್ಯಗಳ ಮೇಲ್ವಿಚಾರಕ.

16) **ವಖಾ–ಏ–ನವೀಸ್**– ಸುದ್ಧಿ ವರದಿಗಾರರು.

17) **ಮೀರ್ ಅರ್ಜ್** – ಸಾಮ್ರಾಟನಿಗೆ ಒಪ್ಪಿಸಿದ ಮನವಿಗಳ ಮೇಲ್ವಿಚಾರಣೆಯ ಅಧಿಕಾರಿ.

18) **ಮೀರ್ ಮುಜಲ್ ಮತ್ತು ಮೀರ್ ತೋಜಕ್** – ಆಚರಣೆಗಳ ಅಧಿಕಾರಿ.

ಪ್ರಾಂತೀಯ ಸರ್ಕಾರ:-

1) **ಸುಬೇದಾರ್ (ರಾಜ್ಯಪಾಲ)** :- ಇವನು ಪ್ರಾಂತ್ಯಗಳಲ್ಲಿ ರಾಜನಂತಿದ್ದು ಪ್ರಾಂತೀಯ ಆಡಳಿತದ ಮುಖ್ಯಸ್ಥನಾಗಿದ್ದನು. ಇವನು ರಾಜ್ಯದಲ್ಲಿ ಉನ್ನತ ಮನ್ಸಬ್‌ದಾರನಾಗಿದ್ದನು. ಇವನ ಆರ್ಥಿಕ ಅಧಿಕಾರದಲ್ಲಿ ದಿವಾನನಿಂದ ಅಡೆತಡೆಯನ್ನೊಂದಿದ್ದು ಉಳಿದೆಲ್ಲ ಅಧಿಕಾರಗಳಲ್ಲೂ ಪ್ರಾಂತ್ಯದ ಶ್ರೇಷ್ಠ ಅಧಿಕಾರಿಯಾಗಿದ್ದನು. ಕ್ರಿಮಿನಲ್ ನ್ಯಾಯಾಲಯದ ಮುಖ್ಯಸ್ಥನಾಗಿದ್ದನು.

2) **ದಿವಾನ್** – ಇವನು ಪ್ರಾಂತ್ಯದ ಹಣಕಾಸು ಅಧಿಕಾರಿ ಮತ್ತು ಕೇಂದ್ರದ ವಜೀರನ ಅಧೀನನಾಗಿದ್ದನು. ಸುಬೇದಾರನಿಗೆ ಕಂದಾಯ ವಸೂಲಿ ಮಾಡಲು ಸಹಕರಿಸುತ್ತಿದ್ದನು. ಸಿವಿಲ್ ನ್ಯಾಯಾಲಯದ ಮುಖ್ಯಸ್ಥನಾಗಿದ್ದನು.

3) **ಭಕ್ಷಿ** – ಇವನು ಪ್ರಾಂತ್ಯದ ಸೈನ್ಯದ ಮೇಲ್ವಿಚಾರಕ.

4) **ವಖಾಯ್‌ನವಿಸ್** – ಇವನು ಪ್ರಾಂತ್ಯದ ಗೂಢಾಚಾರ ಇಲಾಖೆಯ ಮುಖ್ಯಸ್ಥ.

5) **ಕೊತ್ವಾಲ** – ನಗರದ ಶಾಂತಿ, ಸುವ್ಯವಸ್ಥೆ, ನೈರ್ಮಲ್ಯ, ಸಾರ್ವಜನಿಕ ಕಾರ್ಯಗಳು ಮತ್ತು ಪ್ರವಾಸಿಗರ ಉಸ್ತುವಾರಿ ಮುಂತಾದ ಕಾರ್ಯಗಳು.

6) **ಸದರ್ ಮತ್ತು ಖಾಜಿ** – ಪ್ರಾಂತ್ಯಗಳಲ್ಲಿ ಈ ಎರಡು ಹುದ್ದೆಗಳನ್ನು ಒಬ್ಬನೇ ಅಧಿಕಾರಿಗೆ ವಹಿಸಲಾಗುತ್ತಿತ್ತು.

ಸರ್ಕಾರ್ (ಜಿಲ್ಲೆ)

- ಪ್ರತಿಯೊಂದು ಪ್ರಾಂತ್ಯ/ಸುಭಾವನ್ನು ಅನೇಕ ಸರ್ಕಾರ/ಜಿಲ್ಲೆಗಳಾಗಿ ವಿಂಗಡಿಸಿದ್ದರು.

1) **ಫೌಜುದಾರ**– ಜಿಲ್ಲೆಯ ಸೈನಿಕ ಅಧಿಕಾರಿ, ಶಾಂತಿ ಸುವ್ಯವಸ್ಥೆ ಮತ್ತು ಕಾನೂನುಗಳ ಜಾರಿ ಮಾಡುವುದು.

2) **ಅಮಲ್ ಗುಜಾರ್** – ಜಿಲ್ಲೆಯ ಹಣಕಾಸು ಅಧಿಕಾರಿ. ಇವನು ಪ್ರಾಂತ್ಯದ ದಿವಾನನ ಅಧೀನನಾಗಿದ್ದ, ಬೊಕ್ಕಸದ ರಕ್ಷಕನಾಗಿ ಜಿಲ್ಲೆಯಲ್ಲಿ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದನು.

3) **ಬಿಟಿಕ್ಚಿ** – ಇವನು ಅಮಾಲ್ ಗುಜಾರನ ಅಧೀನನಾಗಿದ್ದು ರೈತರ ಭೂಮಿಯ ಬಗೆಗೆ ಸಂಬಂಧಿಸಿದ ಲೆಕ್ಕಪತ್ರ ಮುಂತಾದವನ್ನು ಕಾನುಂಗೊನ ಸಹಾಯದಿಂದ ಮಾಡುತ್ತಿದ್ದನು.

4) **ಖಜಾಂದರ್** – ಅಮಲ್ ಗುಜಾರನ ಕೈಕೆಳಗಿನ ಅಧಿಕಾರಿ ಹಾಗೂ

ಪರಗಣ

- ಪ್ರತಿಯೊಂದು ಸರ್ಕಾರ (ಜಿಲ್ಲೆ)ಗಳು ಕೆಲವು ಪರಗಣಗಳನ್ನು ಹೊಂದಿದ್ದವು.

1) **ಷಿಕ್‌ದಾರ** – ಪರಗಣದ ಸೈನಿಕ ಅಧಿಕಾರಿ ಮತ್ತು ಆಡಳಿತಾಧಿಕಾರಿ. ಶಾಂತಿ ಸುವ್ಯವಸ್ಥೆ ಕಾಪಾಡುವುದು ಇವನ ಕಾರ್ಯವಾಗಿತ್ತು.

2) **ಅಮಿಲ್** – ಹಣಕಾಸು ಅಧಿಕಾರಿ, ಕಂದಾಯ ವಸೂಲಿ ಮತ್ತು ಕೃಷಿಕರೊಡನೆ ಸಂಬಂಧ ಹೊಂದಿದ್ದನು.

3) **ಪೋತದಾರ್** – ಪರಗಣದ ಬೊಕ್ಕಸ ಅಧಿಕಾರಿ.

4) **ಕನುಂಗೋ** – ಗ್ರಾಮಗಳ ಪತ್ವಾರಿಗಳ ಮುಖ್ಯಸ್ಥ (ಕೃಷಿ ಬಗ್ಗೆ ಮತ್ತು ಕಂದಾಯ ವಸೂಲಿಯ ಬಗ್ಗೆ ವರದಿ ತಯಾರಿಸುತ್ತಿದ್ದನು).

5) **ಖಾರಕೂನರು** – ಆಡಳಿತಾತ್ಮಕ ವರದಿಗಳನ್ನು ತಯಾರಿಸಲು ಸಹಕರಿಸುವ ಗುಮಾಸ್ತರು.

- ಪ್ರತಿಯೊಂದು ಗ್ರಾಮಕ್ಕೂ 'ಚೌಕಿದಾರನೆಂಬ' ಅಧಿಕಾರಿಯಿದ್ದನು.

ಸೈನ್ಯಾಡಳಿತ

- ಮೊಗಲ್ ರಾಜ್ಯದಲ್ಲಿ ಖಾಯಂ ಸೈನ್ಯದ ನಿರ್ವಹಣೆಯಿರಲಿಲ್ಲ.
- ಮನ್ಸಬ್‌ದಾರರ ಜೊತೆಗೆ ರಾಜ್ಯದಿಂದ ವೇತನ ನೀಡಲಾಗುತ್ತಿದ್ದ ಮನ್ಸಬ್‌ದಾರರ ನಾಯಕತ್ವದಲ್ಲಿದ್ದ 'ದಾಖಲೀಗಳು ಅಥವಾ ಪೂರಕ ಸೈನಿಕರು' ಇರುತ್ತಿದ್ದರು.
- ಮೊಗಲರ ಸೈನ್ಯದಲ್ಲಿ **'ಅಶ್ವಪಡೆ'** ಅತ್ಯಂತ ಪ್ರಮುಖವಾಗಿತ್ತು. ಬಾಬರ್ ಹುಮಾಯೂನ್ ಮತ್ತು ಅಕ್ಬರ್ ದೇಶದಲ್ಲೇ ತಯಾರಾದ ಬಂದೂಕುಗಳನ್ನು ಉಪಯೋಗಿಸುತ್ತಿದ್ದರು.
- ಆದರೆ ಆಲಂಗೀರ್ ಕಾಲದಲ್ಲಿ ಹಿಂದೆಂದಿಗಿಂತ **'ಫಿರಂಗಿದಳ'** ಹೆಚ್ಚಿತ್ತು ಮತ್ತು ಪರಿಪೂರ್ಣವಾಗಿತ್ತು.
- ಶಸ್ತ್ರ ಸಜ್ಜಿತವಾದ ದೋಣಿಗಳ ಪಡೆಯನ್ನು **'ಢಾಕಾದಲ್ಲಿ'** ಇಡಲಾಗಿತ್ತು.

ಕಾನೂನು ಮತ್ತು ನ್ಯಾಯ ಪರಿಪಾಲನೆ

- ಜಹಂಗೀರನ 12 ಆದೇಶಗಳು. ಔರಂಗಜೇಬನ ಮೇಲ್ವಿಚಾರಣೆಯಲ್ಲಿ ಸಿದ್ಧಗೊಂಡಂತಹ ಮುಸಲ್ಮಾನ ನ್ಯಾಯಶಾಸ್ತ್ರದ ಸಂಹಿತೆ **"ಫತ್ವಾ–ಏ–ಆಲಮ್‌ಗಿರಿ"** ಮುಖ್ಯವಾದುದು. ಕೆಲವೊಮ್ಮೆ ಅವರು ಧರ್ಮನ್ಯಾಯ ತತ್ವವನ್ನು ಅನುಸರಿಸುತ್ತಿದ್ದರು.
- ಮೊಗಲ್ ಸಾಮ್ರಾಟರ ಪೈಕಿ ಕೊನೆ ಪಕ್ಷ ಅಕ್ಬರ್ ಮತ್ತು ಜಹಂಗೀರ್ ನೇರವಾಗಿ ದೂರು ಸಲ್ಲಿಸುವ ಅವಕಾಶವನ್ನು ತಮ್ಮ ಪ್ರಜೆಗಳಿಗೆ ಒದಗಿಸಿದ್ದರು.
- ಖಾಜಿ–ಉಲ್–ಕಜಾತ್ ಅಥವಾ ಪ್ರಮುಖ ಖಾಜಿ ಸಾಮ್ರಾಜ್ಯದ ಪ್ರಧಾನ ನ್ಯಾಯಾಧಿಕಾರಿಯಾಗಿದ್ದನು. ಮುಫ್ತಿಗಳು ಮುಸಲ್ಮಾನ ನ್ಯಾಯಗಳನ್ನು ವಿವರಿಸುತ್ತಿದ್ದರು ಮತ್ತು ಮೀರ್ ಅದ್ಲಗಳು ತೀರ್ಪುಗಳನ್ನು ಸಿದ್ಧಪಡಿಸಿ ಪ್ರಕಟಿಸುತ್ತಿದ್ದರು.

ಕಂದಾಯ ಪದ್ಧತಿ.

- ಷೇರ್‌ಷಾನ ಕಂದಾಯ ಪದ್ಧತಿಯನ್ನು ಅನುಸರಿಸಿದ ಇವರು ಭೂಮಿಯನ್ನು ಖಾಲ್ಸಾ/ರಾಜನ ಜಮೀನುಗಳು, ಜಹಗೀರು ಪ್ರದೇಶ ಮತ್ತು ಸಯುರ್ಷಾಲ್ ಜಮೀನುಗಳು ಎಂದು ವಿಂಗಡಿಸಿದ್ದರು. ಕಂದಾಯ ಮೇಲ್ವಿಚಾರಣೆಯ ಮಂತ್ರಿಯಾಗಿ 'ರಾಜತೋದರಮಲ್ಲ' ನಿದ್ದನು.
- ಅಕ್ಬರ್ ಇಡೀ ಸಾಮ್ರಾಜ್ಯವನ್ನು ಹಲವು ಘಟಕಗಳಾಗಿ ವಿಂಗಡಿಸಿ ಪ್ರತಿಯೊಂದು ಘಟಕವನ್ನು **'ಕ್ರೋರಿ'** ಎಂಬ ಅಧಿಕಾರಿಗೆ ವಹಿಸಿದ್ದು ಇವನು ಕಂದಾಯ ವಸೂಲಿ ಮತ್ತು ಕೃಷಿಗೆ ಪ್ರೋತ್ಸಾಹ ನೀಡುವುದು ಆತನ ಕೆಲಸವಾಗಿತ್ತು. **'ಗಜವನ್ನು'** ಭೂಮಿಯ ಅಳತೆ ಮಾಡುವ ಮಾನದಂಡವಾಗಿ ಉಪಯೋಗಿಸುತ್ತಿದ್ದರು. ಒಟ್ಟು ಉತ್ಪತ್ತಿಯ 1/3 ಭಾಗದಷ್ಟು ರೈತರು ಕಂದಾಯ ಕೊಡಬೇಕಿತ್ತು.
- ಮೊಗಲರ ಕಾಲದಲ್ಲಿ 'ರೈತವಾರಿ ಕಂದಾಯ ವಿಧಾನ' ಆಚರಣೆಯಲ್ಲಿತ್ತು.

ಮನ್ಸಬ್ ದಾರಿ ಪದ್ಧತಿ (The Mansab System)

- ಮನ್ಸಬ್ ದಾರಿ ಪದ್ಧತಿಯೆಂಬುದು ಮಧ್ಯ ಏಷ್ಯಾದಲ್ಲಿ ಹುಟ್ಟಿ ಭಾರತಕ್ಕೆ ಬಂದ ಪದ್ದತಿ ಅಂದರೆ ಮಂಗೋಲರ ಆಕ್ರಮಣದಿಂದಾಗಿ ಈ ಪದ್ಧತಿ ಇಲ್ಲಿ ಬೆಳೆಯಲು ಕಾರಣವಾಯಿತು. ಅಕ್ಬರ್ ತನ್ನ ಸೈನ್ಯದಲ್ಲಿ ಈ ಪದ್ಧತಿಯನ್ನು ಅಳವಡಿಸಿಕೊಂಡಿದ್ದರಿಂದ ಇದನ್ನು ಶ್ರೀಮಂತ ಪ್ರಭುತ್ವ ಅಥವಾ ಸೈನಿಕ ದರ್ಜೆ/ಹುದ್ದೆ ಎಂದು ಕರೆಯಬಹುದು.

ಮನ್ಸಬ್ ದಾರರಾದ ಶ್ರೀಮಂತ ವರ್ಗದವರಲ್ಲಿ 4 ವರ್ಗಗಳಿದ್ದವು

- 1ನೇದರ್ಜೆ - ರಾಜಕುಮಾರರು (700ರೂ ವೇತನ), 2ನೇ ದರ್ಜೆ-ನೊಬಲ್ಲರು (ವೇತನ 580ರೂ), 3ನೇ ದರ್ಜೆ - ಸವಾರರು- (ವೇತನ 500ರೂ), 4ನೇ ದರ್ಜೆ - ಮನ್ಸಬ್ ದಾರರು.
- 500-2500ವರೆಗಿನ ಮನ್ಸಬ್‌ದಾರ ಅಧಿಕಾರಿ ಅಮೀನ.
- 2500ಕ್ಕೂ ಹೆಚ್ಚು ಮನ್ಸಬ್‌ದಾರ ಅಧಿಕಾರಿ ಖಾನ್-ಎ-ಜಹಾನ
- ಸೈನ್ಯದ ಅತಿ ಹೆಚ್ಚು ಸಂಖ್ಯೆಯ ಮನ್ಸಬ್‌ನನ್ನು ಖಾನ್-ಎ-ಖಾನಂ ಎಂದು ಕರೆಯಲಾಗುತ್ತದೆ.

ಜಹಗೀರುಗಳು:

ಮನ್ಸಬ್‌ದಾರರಾಗಿ ಇರಾನಿಗಳು, ತುರ್ಕರು. ಆಫ್ಘನ್ನರು, ರಜಪೂತರು ಮತ್ತು ಮರಾಠರು ಇದ್ದರು ಜಹಗಿರುಗಳನ್ನು ಪ್ರಮುಖ ಅಧೀನ ಸಾಮ್ರಾಜ್ಯಗಳಲ್ಲಿ ಹೆಚ್ಚಾಗಿ ನೀಡಲಾಗುತ್ತಿತ್ತು. (ಉದಾ: ರಜಪೂತಾನ್, ಸೌರಾಷ್ಟ್ರ, ಮಧ್ಯ ಏಷ್ಯಾ ಮತ್ತು ಹಿಮಾಲಯದ ತಪ್ಪಲು ಪ್ರದೇಶಗಳು). ಮರಾಠರಿಂದಾಗಿ ಉತ್ತರದಂತೆ ದಕ್ಷಿಣದಲ್ಲೂ ವತನ್‌ಜಹಗೀರುಗಳು ಅಸ್ತಿತ್ವಕ್ಕೆ ಬಂದವು

ಮೊಗಲರ ಕಾಲದ ಆರ್ಥಿಕ ವ್ಯವಸ್ಥೆ

- ಮೊಗಲರ ಕಾಲದ ರೈತರ ವ್ಯವಸಾಯ ಮಾದರಿಯು ಯುರೋಪಿಯನ್ ವ್ಯವಸಾಯ ಮಾದರಿಯದು. 1559-60ರಲ್ಲಿ ನಿರ್ಮಿಸಿದ ಉದಯಸಾಗರವೆಂಬ ಸರೋವರ ಮತ್ತು ಷಹಜಹಾನನ ಕಾಲದ ಸೈರ್‌ಯೆ ಪೈಜ್ ಕಾಲುವೆ (ಜಮುನಾನದಿ)ಗಳು ಕೃಷಿಗೆ ಸಹಾಯಕವಾದವು.
- ಷಹಜಹಾನನು ನಹಿರಿ ಬಿಹಿಷಿತ್(ಸ್ವರ್ಗದ ಕಾಲುವೆ)ಕಾಲುವೆಯನ್ನು ನಿರ್ಮಿಸಿದನು.
- ಕಬ್ಬನ್ನು ಹೆಚ್ಚಾಗಿ ಬಂಗಾಳ ಮತ್ತು ಬಿಹಾರದ ಭಾಗದಲ್ಲಿ ಯಮುನಾ ನದಿ ಕಣಿವೆ ಮತ್ತು ಮಧ್ಯ ಭಾರತದಲ್ಲಿ ಬೃಹತ್ ಪ್ರಮಾಣದ ನೀಲಿ ಉತ್ಪಾದನೆ ಮಾಡುತ್ತಿದ್ದರು.
- ದೆಹಲಿಯ ಸುಭಾದಲ್ಲಿ 17 ರಬಿ ಬೆಳೆಗಳು, 26 ಖಾರಿಫ್ ಬೆಳೆಗಳನ್ನು ಹೆಸರಿಸಲಾಗಿದೆ.
- ಬಂಗಾಳ ರಾಜ್ಯ ವಿಶ್ವದ ಮಹಾನ್ ರೇಷ್ಮೆ ಉತ್ಪಾದಕ ರಾಜ್ಯಗಳಲ್ಲಿ ಒಂದಾಗಿತ್ತು.
- 16ನೇ ಶತಮಾನದ ಹತ್ತಿ ಮತ್ತು ಹತ್ತಿ ಬಟ್ಟೆ ಕೇಂದ್ರಗಳು:- ಉಜ್ಜೈನಿ, ಸಿರೋಜ್, ತಾಂಡ, ಗುಜರಾತ್, ಉತ್ತರ ಪ್ರದೇಶ ಮತ್ತು ದಖ್ಖನ್. ಚಹಾದ ವ್ಯವಸಾಯ ಮಾತ್ರ ಯಾರಿಗೂ ಗೊತ್ತಿರಲಿಲ್ಲ.
- 1556-57ರಲ್ಲಿ ಆಗ್ರಾ ಮತ್ತು ಬಿಯಾನಗಳಲ್ಲಿ 1594-98ರಲ್ಲಿ ಇಡೀ ದೇಶದಲ್ಲಿ 1630-32ರಲ್ಲಿ ಗುಜರಾತ್ ಮತ್ತು ದಖ್ಖನ್ನಿನಲ್ಲಿ ಕ್ಷಾಮಗಳು ತಲೆದೂರಿದ್ದವು.
- ಅಕ್ಬರನ ಕಾಲದಲ್ಲಿ(ಫಿರೋಜ್ ತುಘಲಕ್ ಕಾಲದ ಕಾಲುವೆ)ಯಮುನ ಕಾಲುವೆಯನ್ನು ದುರಸ್ಥಿ ಮಾಡಿಸಲಾಯಿತು.
- ಬಿಜಾಪುರದಿಂದ ತಂದ ತಂಬಾಕನ್ನು ಅಕ್ಬರನ ಆಳ್ವಿಕೆ ಕಾಲದಲ್ಲಿ ದೆಹಲಿ ರಾಜ್ಯಕ್ಕೆ ಪರಿಚಯಿಸಲಾಯಿತು. ಆದರೆ ಧೂಮಪಾನವನ್ನು ಜಹಂಗೀರನು ನಿಷೇಧಿಸಿದನು.

ನಗರೀಕರಣ

- ಮೊಗಲರ ಕಾಲದ ನಗರೀಕರಣ ತಿಳಿಯಲಿರುವ ಆಧಾರ ಹಿತಭೋದ ಗ್ರಂಥವಾಗಿದೆ. ಕ್ರಿ.ಶ.1585ರಲ್ಲಿ ಫಿಚ್ ಅಭಿಪ್ರಾಯದಂತೆ ಆಗ್ರಾ ಮತ್ತು ಫತೇಪುರಗಳು ಎರಡು ಮಹಾನಗರಗಳು.
- ಟೆರ್ರಿ ಲಾಹೋರ್ ಮುಖ್ಯ ನಗರ ಹಾಗೂ ದೊಡ್ಡದು.ಇದು ಇಡೀ ಭಾರತದಲ್ಲೇ ವ್ಯಾಪಾರಕ್ಕೆ ಮುಖ್ಯ ನಗರವಾಗಿತ್ತು. ಒಟ್ಟಿನಲ್ಲಿ ಆಗ್ರಾ ನಗರವು ಭಾರತದಲ್ಲಿ ಅತ್ಯಂತ ದೊಡ್ಡ ನಗರವಾಗಿತ್ತು.

ಕೈಗಾರಿಕೆಗಳು

1. ಹತ್ತಿ ಬಟ್ಟೆ ಕೈಗಾರಿಕೆ:

- ಮಧ್ಯಯುಗೀನ ಕಾಲದಲ್ಲಿ ಭಾರತದ ಅತಿ ಮುಖ್ಯ ಕೈಗಾರಿಕೆ ಯೆಂದರೆ ಹತ್ತಿಬಟ್ಟೆ ಕೈಗಾರಿಕೆ. ಒರಿಸ್ಸಾದಿಂದ ಪೂರ್ವ ಬಂಗಾಳದವರೆಗಿನ ಇಡೀ ದೇಶವೇ ಒಂದು ಬೃಹತ್ ಹತ್ತಿ ಕಾರ್ಖಾನೆಯಂತೆ ಕಾಣುತ್ತಿತ್ತು.
- ವಿಶೇಷವಾಗಿ ಮಸಿನ್ ಬಟ್ಟೆಗಳಿಗೆ ಹೆಸರಾದ ನಗರ 'ಡಾಕಾ'

2. ರೇಷ್ಮೆ ಬಟ್ಟೆ ಕೈಗಾರಿಕೆ

- ಕಚ್ಚಾ ರೇಷ್ಮೆಯನ್ನು ಇರಾನ್, ಚೀನಾ, ಅಫ್ಘಾನಿಸ್ತಾನಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು.
- ಬಂಗಾಳವು ರೇಷ್ಮೆ ಉತ್ಪಾದನೆ ಮತ್ತು ತಯಾರಿಕಾ ಕೇಂದ್ರವಾಗಿತ್ತು.
- ಗುಜರಾತ್ ಪಟೋಲಾ ಮಾದರಿಯ ರೇಷ್ಮೆಗೆ ಪ್ರಸಿದ್ಧಿಯಾಗಿತ್ತು.

3. ಲೋಹ ಕೈಗಾರಿಕೆ

- ಪ್ರಮುಖ ಲೋಹಗಳಾದ ಚಿನ್ನ, ಬೆಳ್ಳಿ, ಕಂಚು, ಕಬ್ಬಿಣ, ಸತು ಇತ್ಯಾದಿ ಬಳಕೆಯಲ್ಲಿದ್ದವು.
- ಖಡ್ಗಗಳನ್ನು ತಯಾರಿಸುವ ಕಲೆಯಲ್ಲಿ ಭಾರತೀಯ ಕೆಲಸಗಾರರು ವಿಶ್ವ ಮನ್ನಣೆ ಪಡೆದಿದ್ದರು.
- ಯುದ್ಧ ಸಾಮಗ್ರಿಗಳನ್ನು ಆಗ್ರಾ, ಗ್ವಾಲಿಯರ್, ರಜಪೂತಾನ, ಬಂಗಾಳ, ಗುಜರಾತ್ ಮುಂತಾದ ಕಡೆ ತಯಾರಿಸುತ್ತಿದ್ದರು.

4. ಇಂಡಿಗೂ ಉದ್ಯಮ

- ನೀಲಿಯನ್ನು ಆಗ್ರಾ ಬಳಿಯಿರುವ ಬಿಯಾನದಲ್ಲಿ ತಯಾರಿಸುತ್ತಿದ್ದರು (ಚಂಡಿನಾಕಾರ).
- ಇಂಡಿಗೋವನ್ನು ಮೆಡಿಟರೇನಿಯನ್ ಪ್ರದೇಶ, ಯುರೋಪ್ ದೇಶಗಳಿಗೆ ಡಚ್ಚರು ಮತ್ತು ಇಂಗ್ಲೀಷರು ಕೊಂಡೊಯ್ಯುತ್ತಿದ್ದರು.

5. ಸಕ್ಕರೆ ಕೈಗಾರಿಕೆ:

- ಜಹಂಗೀರನ ಕಾಲದಲ್ಲಿ ಯುರೋಪ್ ಸಕ್ಕರೆಗೆ ಭಾರತವನ್ನು ಅವಲಂಬಿಸಿತ್ತು. ಕಬ್ಬನ್ನು ಲಾಹೋರ್, ಮುಲ್ತಾನ ಮತ್ತು ಅಹ್ಮದಾಬಾದ್‌ನಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದರು.
- ಬಂಗಾಳದಲ್ಲಿ ಹೆಚ್ಚು ಸಕ್ಕರೆಯನ್ನು ಉತ್ಪಾದಿಸಿ ಅರೇಬಿಯಾ, ಪರ್ಷಿಯಾಗಳಿಗೆ ರಫ್ತು ಮಾಡುತ್ತಿದ್ದರು.

6. ಕಾಗದದ ಕೈಗಾರಿಕೆ

- ಅಮೀರ್‌ಖುಸ್ರೋನು ದೆಹಲಿಯಲ್ಲಿ ಶಮಿ ಎಂಬ ಕಾಗದ ಉಪಯೋಗಿಸುತ್ತಿದ್ದರು ಎಂದಿದ್ದಾನೆ.
- ಕಾಗದವನ್ನು ಸೈಲ್‌ಕೋಟ್, ಕಾಶ್ಮೀರ ಮತ್ತು ಗಯಾಗಳಲ್ಲಿ ತಯಾರಿಸುತ್ತಿದ್ದರು.
- ಗುಜರಾತಿನಿಂದ ಹದಗೊಂಡ ಚರ್ಮವನ್ನು ಅರೇಬಿಯಾಕ್ಕೆ ರಫ್ತು ಮಾಡುತ್ತಿದ್ದರು.

ವ್ಯಾಪಾರ ಮತ್ತು ವಾಣಿಜ್ಯೋದ್ಯಮ

- ಅಪಾರ ವಸ್ತುಗಳನ್ನು ಸಾಗಿಸಲು ಬಂಜಾರ ಎಂಬ ವರ್ತಕ ಸಂಘವಿತ್ತು.
- ಕೋರಮಂಡಲವು ಕರಾವಳಿ ಬಟ್ಟೆ ಉತ್ಪಾದನೆಗೆ ಹೆಸರಾಗಿದ್ದು, ಗುಜರಾತ್ ಮೂಲಕ ವ್ಯಾಪಾರ ನಡೆಯುತ್ತಿತ್ತು.
- ಲಾಹೋರ್ ಒಂದು ಕರಕುಶಲ ಕೇಂದ್ರವಾಗಿತ್ತು.ಜೊತೆಗೆ ಭೋಗ ವಸ್ತುಗಳನ್ನು ವಿತರಿಸುವ ಕೇಂದ್ರವಾಗಿ ಕಾಶ್ಮೀರದ ಶಾಲುಗಳು ಮತ್ತು ರತ್ನಗಂಬಳಿಗಳನ್ನು ವಿವಿಧ ಪ್ರಾಂತ್ಯಗಳಿಗೆ ಸರಬರಾಜು ಮಾಡುತ್ತಿತ್ತು.

ಪ್ರಮುಖ ವರ್ತಕ ಸಮುದಾಯಗಳು

- ಗುಜರಾತ್ –ಬನಿಯಾಗಳು, ಬೋಹರಾಗಳು ಮತ್ತು ಪಾರ್ಸಿಗಳು
- ರಾಜಸ್ಥಾನ – ಜೈನ ಮಾರವಾಡಿಗಳು
- ಪಂಜಾಬ್ ಮತ್ತಿತರ ಉತ್ತರ ಭಾಗದ – ಕ್ಷತ್ರಿಗಳು, ಪೂರ್ವ ಕರಾವಳಿಯ ಚೆಟ್ಟಿಗಳು ಮತ್ತು ಕೋಮಟಿಗಳು.
- ಗುಜರಾತ್, ಬಂಗಾಳ, ದಖನ್‌ಗಳಲ್ಲಿ ವಿದೇಶಿ ಮುಸ್ಲಿಂ ವರ್ತಕರು ಹೆಚ್ಚಾಗಿದ್ದರು.
- ಬಂಗಾಳವು ಬಿಹಾರದಿಂದ ಅಫೀಮು, ಮಚಲೀಪಟ್ಟಣದಿಂದ ಹೊಗೆ ಸೊಪ್ಪನ್ನು ಆಮದು ಮಾಡಿಕೊಳ್ಳುತ್ತಿತ್ತು. ಹೆಚ್ಚು ಹೊಗೆಸೊಪ್ಪು ಬೆಳೆಯುತ್ತಿದ್ದ ಪ್ರದೇಶ ಬರ್ಹಾನ್‌ಪುರವಾಗಿತ್ತು.

ವಿದೇಶಿ ವ್ಯಾಪಾರ

- ಮೊಗಲರು ಚೀನಾ, ಪರ್ಶಿಯಾ, ಈಜಿಪ್ಟ್ ಮತ್ತು ಅರೇಬಿಯಾಗಳೊಡನೆ ವಿದೇಶಿ ವ್ಯಾಪಾರ ಮಾಡುತ್ತಿದ್ದರು ಸೂರತ್‌ನಲ್ಲಿ ಆಮದು–ರಫ್ತಿನ ಸುಂಕ ಎಲ್ಲಾ ವಸ್ತುಗಳಿಗೆ $3^1/_2$% ಆಗಿತ್ತು ಮತ್ತು ಚಿನ್ನ/ಬೆಳ್ಳಿಯ ಹಣದ ಮೇಲೆ ಸುಂಕ ಶೇ.2%ರಷ್ಟಿತ್ತು.
- **ಸರ್‌ಥಾಮಸ್‌ರೋ** ಜಹಂಗೀರನಿಂದ ಇಂಗ್ಲೀಷ್ ವ್ಯಾಪಾರಕ್ಕೆ ಅನುಕೂಲಗಳನ್ನು ಪಡೆದನು. ಇಂಗ್ಲೀಷ್ ಮತ್ತು ಡಚ್ ಕಂಪನಿಗಳು ಸರ್ಖೆಚ್‌ನಲ್ಲಿನ ನೀಲಿಗೋಸ್ಕರ ಹೆಚ್ಚು ಬಂಡವಾಳ ಹೂಡಿದ್ದವು.
- ಪೂರ್ವ ತೀರದಲ್ಲಿರುವ ಸತ್ಗಾಂವ್ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು ಅಲ್ಲಿಂದ ಮೊದಲು ಅರ್ಮೇನಿಯನ್ನರು, ಅರಬ್ಬರು, ಪರ್ಷಿಯನ್ನರು, ಚೀನಾ ವ್ಯಾಪಾರಿಗಳು ಮತ್ತು ಪೋರ್ಚುಗೀಸರು ಹತೋಟಿ ಹೊಂದಿದ್ದು, ಹಡಗುಗಳು ಬಂದು ಹೋಗುತ್ತಿದ್ದವು. ಇಲ್ಲಿನ ಪ್ರಮುಖ ಸರಕುಗಳೆಂದರೆ ಹತ್ತಿ, ರೇಷ್ಮೆ, ಬಟ್ಟೆ, ಅಕ್ಕಿ, ಸಕ್ಕರೆ, ಎಣ್ಣೆ, ಶುಂಠಿ ಕಿತ್ತಳೆ ಮುಂತಾದವು.
- ಷಹಜಹಾನನ ಕ್ರಿ.ಶ.1637ರ ಫರ್ಮಾನು ಇಂಗ್ಲೀಷರಿಗೆ ವ್ಯಾಪಾರದಲ್ಲಿ ಸಂಪೂರ್ಣ ತೆರಿಗೆ ವಿನಾಯ್ತಿ ದೊರೆತು ಹೆಚ್ಚು ವಿದೇಶಿ ವ್ಯಾಪಾರ ಕೈಗೊಂಡರು.
- ಕ್ರಿ.ಶ.1662ರಲ್ಲಿ ಔರಂಗಜೇಬನು ಫರ್ಮಾನನ್ನು ಹೊರಡಿಸಿ ಡಚ್ ವರ್ತಕರಿಗೆ ತೆರಿಗೆ ವಿನಾಯ್ತಿ ನೀಡಿದನು.

ಸಾರಿಗೆ ಸಂಪರ್ಕ

- ಅಜ್ಮೀರ್, ಕ್ಯಾಂಬೆ ಮತ್ತು ಅಹ್ಮದಾಬಾದ್ ನಗರಗಳು ದೆಹಲಿಯನ್ನು ಪರಸ್ಪರ ಸಂಪರ್ಕಿಸುತ್ತಿದ್ದವು.
- ವಾಯುವ್ಯ ದಿಕ್ಕಿನಲ್ಲಿ ಆಗ್ರಾದಿಂದ ದೆಹಲಿ ಹಾಗೂ ಲಾಹೋರ್‌ನಿಂದ ಕಾಬೂಲ್ ಮೂಲಕ ಮಧ್ಯ ಏಷ್ಯಾದ ಹೆದ್ದಾರಿಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಿದ್ದರು.

ದೌಲತಾಬಾದ್‌ನಿಂದ ತೆಲಂಗಾಣ ಮತ್ತು ಮಲಬಾರ್ ತೀರ ಪ್ರದೇಶಗಳಿಗೆ ಉತ್ತಮವಾದ ರಸ್ತೆಯಿತ್ತು.

- ಷೇರ್‌ಷಾನು ನಿರ್ಮಿಸಿದ 4 ಗ್ರಾಂಡ್‌ಟ್ರಕ್ ರಸ್ತೆಗಳು ಅತ್ಯಂತ ಪ್ರಮುಖವಾಗಿದ್ದವು.

ಹಣಕಾಸು ಉದ್ದಿಮೆ

- ಹಳ್ಳಿಗಳಲ್ಲಿ ಮತ್ತು ಚಿಕ್ಕ ನಗರಗಳಲ್ಲಿ ಹಣದ ಲೇವಾದೇವಿ ಮಾಡುವವರನ್ನು ಸರಾಫ್‌ರು ಅಥವಾ ಶ್ರಾಫ್‌ರು ಎನ್ನುತ್ತಿದ್ದರು. ಮೊಗಲರ ಕಾಲದ ಪ್ರಸಿದ್ಧ ಬ್ಯಾಂಕರುಗಳೆಂದರೆ, ಸೂರತ್-ವಿರ್ಜಿವೋರಾ ಮತ್ತು ಕೋರಮಂಡಲದ ಮಲ್ಯೆ ಚೆಟ್ಟಿ ಮುಂತಾದವರು. ಬ್ಯಾಂಕಿಂಗ್ ಸಂಸ್ಥೆಗಳನ್ನು ಕೋಠಿಗಳೆಂದು ಕರೆಯುತ್ತಿದ್ದರು.
- ಔರಂಗಜೇಬನು ತನ್ನ ಕಾಲದ ಪ್ರಸಿದ್ಧ ಬ್ಯಾಂಕರ್ ಆಗಿದ್ದ ಮಾಣಿಕ್‌ಚಂದ್‌ನಿಗೆ ಔರಂಗಜೇಬನು **'ಸೇಠ್'** ಎಂಬ ಬಿರುದು ನೀಡಿದ್ದನು. ಇವರದು ಬ್ಯಾಂಕಿಂಗ್ ಉದ್ಯಮವಾಗಿತ್ತು.
- ಮುರ್ಷಿದಾಬಾದ್‌ನ ಪ್ರಸಿದ್ಧ ಬ್ಯಾಂಕರ್ ಫತೇಚಂದ್‌ನು ಸುಲ್ತಾನ ಫರುಕ್ಸಿಯಾರನಿಗೆ ಭಾರಿ ಮೊತ್ತದ ಸಾಲವನ್ನು ನೀಡಿದ್ದರಿಂದ ಸುಲ್ತಾನನು **'ಜಗತ್‌ಸೇಠ್'** ಎಂಬ ಬಿರುದು ನೀಡಿದ್ದನು.
- ಅಧಿಕ ಬಡ್ಡಿ ದರದಲ್ಲಿ ಸಾಲ ಕೊಡುತ್ತಿದ್ದ ಸ್ಥಳೀಯ ಸಾಹು ಅಥವಾ ಮಹಾಜನ್‌ರಿಂದಾಗಿ ಕೆಳಮಟ್ಟದ ವಾಣಿಜ್ಯಕ್ಕೆ ಬೆಂಬಲ ದೊರೆಯಿತು.

ಹುಂಡಿ ಮತ್ತು ವಿಮೆ

- ಹುಂಡಿಯ ವಿನಿಮಯ ದರವನ್ನು ಸರಕುಗಳ ಬೆಲೆ ಮತ್ತು ದೂರವನ್ನು ಆಧರಿಸಿ ವಸೂಲಿ ಮಾಡಲಾಗುತ್ತಿತ್ತು.

ಮೊಗಲರ ಕಾಲದ 4 ಬಗೆಯ ಹುಂಡಿಗಳು

1. **ದರ್ಶಿನಿ ಹುಂಡಿಗಳು:** ಆಧುನಿಕ ಕಾಲದ ಡಿಮ್ಯಾಂಡ್ ಡ್ರಾಫ್ಟ್‌ಗಳಂತಿದ್ದವು
2. **ಮಿಟಿ ಹುಂಡಿಗಳು :** ಒಂದು ನಿರ್ದಿಷ್ಟ ಅವಧಿಗೊಳಪಟ್ಟಿತ್ತು.
3. **ಶಹಜೋಗ್ ಹುಂಡಿಗಳು:** ಗೌರವಾನ್ವಿತ ವ್ಯಕ್ತಿಗಳಿಗೆ ಮಾತ್ರ ನೀಡಲಾಗುತ್ತಿತ್ತು. ಹುಂಡಿಯನ್ನು ತೋರಿಸಿದವನಿಗೆ ಹಣವು ಸಂದಾಯವಾಗುತ್ತಿತ್ತು.
4. **ಜೋಖಾಮಿ ಹುಂಡಿಗಳು:** ತೀರಾ ವಿರಳವಾಗಿ ಉಪಯೋಗಿಸುತ್ತಿದ್ದರು.

- ಜಹಾಂಗೀರನ ಕಾಲದಲ್ಲಿ ಬ್ಯಾಂಕಿಂಗ್ ಚಟುವಟಿಕೆಗಳು ವಿಸ್ತರಿಸಲ್ಪಟ್ಟವು. ವ್ಯಾಪಾರದಲ್ಲಿನ ವಸ್ತುಗಳ ಸಾಗಾಣಿಕೆಗೆ ಜೀವ ವಿಮಾ ಪದ್ಧತಿ ಜಾರಿಗೆ ತರಲಾಯಿತು.

ನಾಣ್ಯ ಪದ್ಧತಿ

- ಬಾಬರ್, ಹುಮಾಯೂನ್ ಮತ್ತು ಅಕ್ಬರ್ ಬೆಳ್ಳಿಯ **ಷಾರುಖೀ ಅಥವಾ ದಿರ್‌ಹಾಮ್** ನಾಣ್ಯಗಳನ್ನು ಹೊರಡಿಸಿದ್ದರು. ಬಾಬರ್ ಕಾಲದ ಟಂಕಸಾಲೆಗಳೆಂದರೆ ಆಗ್ರಾ, ಜಾನ್‌ಪುರ, ಕಾಬೂಲ್, ಲಾಹೋರ್, ಬದಕ್‌ಷಾ ಮತ್ತು ಸಮರ್‌ಕಂಡ.
- ಹುಮಾಯೂನನು ಬಂಗಾಳದ ಟಂಕಸಾಲೆಯ ಹೆಸರಿನ ಬೆಳ್ಳಿಯ ನಾಣ್ಯ ಹಾಗೂ ಷಾರುಖೀ ಶೈಲಿಯ ಚಿನ್ನದ ನಾಣ್ಯಗಳನ್ನು ಹೊರಡಿಸಿದ್ದನು.
- ಅಕ್ಬರನ ಕಾಲದ ಚಿನ್ನದ ನಾಣ್ಯಗಳು – ಮಹರ್(ತೂಕ 11 ಮಾಷ್‌ಗಳು/168–170 ಗ್ರೇನ್‌ಗಳು)
- ಬೆಳ್ಳಿಯ ರೂಪಾಯ (11 1/2 ಮಾಷ್‌ಗಳು / 178 ಗ್ರೇನ್‌ಗಳು)
- ತಾಮ್ರದ ದಾಮ್‌ಗಳು (ಒಂದು ತೊಲ ಮತ್ತು 8 ಮಾಷ್‌ಗಳು /323ಗ್ರೇನ್)
- ಇವುಗಳು ತೂಕ ಮತ್ತು ರಚನೆಯಲ್ಲಿ ಷೇರ್‌ಷಾನ್‌ನ ನಾಣ್ಯಗಳನ್ನು ಹೋಲುತ್ತವೆ.
- ಅಕ್ಬರ್‌ನು ಕ್ರಿ.ಶ.1585ರಲ್ಲಿ **'ಕಲೀಮ'** ರೀತಿಯ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಹೊರಡಿಸಿನು. 45ನೇ ವರ್ಷದ ಆಳ್ವಿಕೆಯ ನಂತರ ಕ್ರಿ.ಶ.1600ರಲ್ಲಿ ಚಿತ್ರಗಳಿಂದ ಕೂಡಿದ ಬೆಳ್ಳಿ ಮತ್ತು ಚಿನ್ನದ ನಾಣ್ಯಗಳನ್ನು ಹೊರಡಿಸಿದನು. ಈ ನಾಣ್ಯಗಳ ಮೇಲೆ ರಾಮ ಮತ್ತು ಸೀತೆಯರ ಚಿತ್ರಗಳಿವೆ.
- ಅಕ್ಬರನು ತನ್ನ 44 ನೇ ವರ್ಷದ ಆಳ್ವಿಕೆಯಲ್ಲಿ (1599ರಲ್ಲಿ) ದಾಮ್, ನಿಸ್ವಿ ಮತ್ತು ಪೌಲ ಎಂಬ ನಾಣ್ಯಗಳನ್ನು ಹೊರಡಿಸಿದನು. (ಅಕ್ಬರನ ನಾಣ್ಯಗಳನ್ನು **ಇಲಾಹಿ ನಾಣ್ಯಗಳು** ಎನ್ನುತ್ತಾರೆ) .
- ಜಹಂಗೀರನು ಅಕ್ಬರನ ಚಿತ್ರ ಮತ್ತು ಹಿಜ್ರಾ ವರ್ಷವನ್ನುಳ್ಳ ಚಿನ್ನದ ಮಹರ್ ನಾಣ್ಯ ಹೊರಡಿಸಿದ್ದನು.
- **ತಾಮ್ರದ ನಾಣ್ಯದ ಟಂಕಸಾಲೆಗಳು** – ಆಗ್ರಾ, ಅಜ್ಮೀರ್, ಬಿರ್ಹಾನ್‌ಪುರ ಮತ್ತು ಅಹ್ಮದಾಬಾದ್.
- **ಬೆಳ್ಳಿಯ ನಾಣ್ಯದ ಟಂಕಸಾಲೆಗಳು** – ಸೂರತ್, ಕಾಂದಹಾರ್, ಕಾಬೂಲ್,
- **ಚಿನ್ನದ ನಾಣ್ಯದ ಟಂಕಸಾಲೆಗಳು** – ಅಹ್ಮದ್‌ನಗರ. ಕಾಶ್ಮೀರ್, ಲಾಹೋರ್, ಪಾಟ್ನಾ ಮತ್ತು ಥಟ್ಟಾ
- ಷಹಜಹಾನ್ ಅನೇಕ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಹೊರಡಿಸಿದನು.
- ಔರಂಗಜೇಬನು ಕ್ರಿ.ಶ.1659ರಲ್ಲಿ ಕಲೀಮಾ ನಾಣ್ಯಗಳನ್ನು ರದ್ದುಗೊಳಿಸಿದನು.
- ಚಿನ್ನದ ನಾಣ್ಯಗಳು – ಹೊಸ ಪಗೋಡ, ಹಳೆಯ ಪಗೋಡ, ಫಾನಂ.
- ತಾಮ್ರದ ನಾಣ್ಯಗಳು ದಾಮ್/ಪೈ(ತಾಮ್ರ), ಪೈ (ಅರ್ಧದಾಮ್ ತಾಮ್ರ)
- ಬೆಳ್ಳಿಯ ನಾಣ್ಯಗಳು – ಮೆಹ್‌ಮುದಿ, ಎಂಟರ ರೈಯಾಲ್

ಮೊಗಲರ ಕಾಲದ ಸಾಮಾಜಿಕ ಜೀವನ

- ಶ್ರೀಮಂತರು ಉಪಭೋಗಗಳಿಗಾಗಿ ಮದ್ಯ ಮಾಂಸ ಹಾಗೂ

ಆಫ್ಘಾನಿಸ್ತಾನದಿಂದ ಹಣ್ಣುಗಳನ್ನು ತರಿಸುತ್ತಿದ್ದರು. ಇವರು ಸುಖಭೋಗ ಸಾಮಗ್ರಿಯಾದ ಮಂಜುಗೆಡ್ಡೆಯನ್ನು ವರ್ಷದಾದ್ಯಂತ ಉಪಯೋಗಿಸುತ್ತಿದ್ದರು. ಮದ್ಯಪಾನವನ್ನು ಮಧ್ಯ ಏಷ್ಯಾದಿಂದ ತರಿಸಿಕೊಳ್ಳುತ್ತಿದ್ದರು.

- ಜಹಾಂಗೀರನು ಮರಾಠರನ್ನು ನೊಬೆಲ್‌ರೆಂದು ಪರಿಗಣಿಸಿ ದಖನ್ ಆಡಳಿತಗಾರರೆಂದಿದ್ದಾನೆ. ಪ್ರತಿಯೊಂದು ವೃತ್ತಿ ಸಂಘವು ಒಂದು ಸ್ಥಳೀಯ ಸಂಘಟನೆಯಾಗಿತ್ತು.
- ಜಮೀನ್ದಾರಿ ವರ್ಗವು ಸಮಾಜದ ಉಚ್ಛವರ್ಗವಾಗಿತ್ತು.
- ಮಧ್ಯಕಾಲೀನ ಗ್ರಾಮೀಣ ಸಮಾಜದ ಭೂ ಒಡೆತನದ 3 ವರ್ಗಗಳು

1. **ಖುದ್ ಕಸ್ಟ್** – ಮಾಲಿಕ–ಇ–ಜಮಾನ್/ಭೂಮಾಲೀಕರೆಂದು ಕರೆಯುತ್ತಿದ್ದರು.
2. **ಪಾಡಿ ಕಸ್ಟ್** – ಎಂದರೆ ಹೊರಗಿನಿಂದ ಬಂದವರು ವಲಸೆ ಬೇಸಾಯ ಮಾಡುತ್ತಿದ್ದರು.
3. **ಮುಜಾರಿಯನ್** – ಬೆಳೆಗಳ ಹಿಸ್ಸೆದಾರರು ಎಂದು ಕರೆಯುತ್ತಿದ್ದರು.

ಕುಶಲಕಲೆ

- ಕಾಶ್ಮೀರ ಮತ್ತು ಗುಜರಾತ್ ಮರದ ಕೆತ್ತನೆ ಕೆಲಸಗಳಿಗೆ ಪ್ರಸಿದ್ಧಿಯಾಗಿತ್ತು ಹಾಗೂ ಕಾಶ್ಮೀರ ಮತ್ತು ಲಾಹೋರ್‌ಗಳಲ್ಲಿ ಶಾಲುಗಳನ್ನು ಮತ್ತು ರತ್ನ ಗಂಬಳಿಗಳನ್ನು ತಯಾರಿಸುತ್ತಿದ್ದರು.

ಸಾಮಾಜಿಕ ಆಚರಣೆಗಳು

- ಸತಿ ಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ ಮತ್ತು ಕನ್ಯಾ ಶುಲ್ಕ ಪದ್ಧತಿ ಇವು ಸಾಮಾಜಿಕ ಆಚರಣೆಗಳಾಗಿದ್ದವು.
- ವಿಧವಾ ವಿವಾಹ ಪದ್ಧತಿಯು ಮಹಾರಾಷ್ಟ್ರದ ಬ್ರಾಹ್ಮಣೇತರರು, ಪಂಜಾಬ್ ಹಾಗೂ ಯಮುನಾ ಕಣಿವೆಗಳಲ್ಲಿನ ಜಾಟರಲ್ಲಿ ಇದು ಆಚರಣೆಯಲ್ಲಿತ್ತು. ಅಲ್ಲದೆ ಜಾಟರಲ್ಲಿ ಬಹುಪತ್ನಿತ್ವ ಪದ್ಧತಿ ಕಂಡುಬರುತ್ತಿತ್ತು.
- 17ನೇ ಶತಮಾನದಲ್ಲಿ ಪದ್ಮಾವತ್ ಕಾವ್ಯವನ್ನು ಬಂಗಾಳಿಗೆ ಭಾಷಾಂತರಿಸಿದ ಅಲಾವಲ್ ಎಂಬ ಮಹಮದೀಯ ಕವಿ ವೈಷ್ಣವ ವಿಷಯಗಳ ಮೇಲೆ ಕಾವ್ಯ ರಚಿಸಿದನು.
- **ಮುಖ್ಯ ಕ್ರೀಡೆಗಳು:** ಚದುರಂಗ, ಚೌಪರ್ ಮತ್ತು ಮಲ್ಲಯುದ್ಧ (ಒಳಾಂಗಣ ಕ್ರೀಡೆಗಳು)
- **ಚಕ್ರವರ್ತಿ ಮತ್ತು ನೊಬೆಲ್ಲರ ಕ್ರೀಡೆಗಳು** – ಚೌಗನ್‌ಪೋಲೋ, ಬೇಟೆಗಾರಿಕೆ, ಮಲ್ಲಯುದ್ಧ ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಹೋರಾಟಗಳಾಗಿದ್ದವು.

ಸ್ತ್ರೀಯರ ಸ್ಥಾನಮಾನ

- ಮಧ್ಯಕಾಲೀನ ಭಾರತದ ಹಿಂದೂಗಳಲ್ಲಿ ವಿಧವಾ ವಿವಾಹವು ಆಚರಣೆಯಲ್ಲಿರಲಿಲ್ಲ ಆದರೆ ಮುಸ್ಲಿಂ ಸಮಾಜದ ಎಲ್ಲಾ ವರ್ಗಗಳಲ್ಲೂ ವಿಧವಾ ವಿವಾಹವು ಆಚರಣೆಯಲ್ಲಿತ್ತು.
- ಆರ್ಥಿಕ ಸ್ಥಿತಿಯಲ್ಲಿ ಮುಸ್ಲಿಂ ಸ್ತ್ರೀಯರು ಹಿಂದೂ ಸ್ತ್ರೀಯರಿಗಿಂತ ಉತ್ತಮ ಸ್ಥಾನ ಹೊಂದಿದ್ದರು ಮುಸ್ಲಿಂ ಸ್ತ್ರೀಗೆ ಪೂರ್ವಾರ್ಜಿತ ಆಸ್ತಿಯಲ್ಲಿ ಪಾಲಿತ್ತು.
- **ಮುಸ್ಲಿಂ ಸ್ತ್ರೀ ಸಾಹಿತಿಗಳು:** ಜೆಬುಲುನ್ನೀಸಾ (ಔರಂಗಜೇಬನ ಮಗಳು), ಮೀರಾಬಾಯಿ ಸಲೀಮಾ ಸುಲ್ತಾನ್ ಮತ್ತು ನೂರ್ ಜಹಾನ್ ಮುಂತಾದವರು.
- **ಹಿಂದೂ ಸ್ತ್ರೀ ಸಾಹಿತಿಗಳು:** ರಾಮಭದ್ರಾಂಭ, ತಿರುಮಲಾಂಭ, ಅಕಬಾಯ್ ಮತ್ತು ಕೆನಬಾಯ್ ಮುಂತಾದವರು.

ಮೊಗಲರ ಕಾಲದ ಶಿಕ್ಷಣ

- ಹುಮಾಯೂನನು ದೆಹಲಿಯಲ್ಲಿ ಕಾಲೇಜು ನಿರ್ಮಿಸಿ ಷೇಕ್ ಹುಸೇನ್‌ನನ್ನೂ ಪ್ರಾಂಶುಪಾಲನಾಗಿ ನೇಮಿಸಿದ್ದನು. ಆತನಿಗಿದ್ದ ಶಿಕ್ಷಣ ಪ್ರೇಮದ ಕುರುಹಾಗಿ ಆತನ ಸಮಾಧಿಗೆ ಹೊಂದಿಕೊಂಡಂತೆ ಮದರಸವನ್ನು ಸ್ಥಾಪಿಸಲಾಗಿದೆ.
- ಷೇರ್‌ಷಾನು ನರಸಾಲ್‌ನಲ್ಲಿ ಒಂದು ಮದರಸ ಕಟ್ಟಿಸಿದನು. ಈತ ಸಾಮಾನ್ಯ ಮುಸ್ಲಿಂನಿಗೂ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಟ್ಟ ಮೊದಲ ಮುಸ್ಲಿಂ ದೊರೆ.
- ಅಕ್ಬರನ ಕಾಲದಲ್ಲಿ ಶಿಕ್ಷಣದ ಉದಾರೀಕರಣದಿಂದಾಗಿ ಮುಸ್ಲಿಂರ ಮದರಸ ಮತ್ತು ಮುಖ್ತಬಗಳಿಗೆ ಹಿಂದೂಗಳನ್ನು ಸೇರಿಸಿಕೊಳ್ಳಲಾಯಿತು.
- **ಪ್ರಮುಖ ಹಿಂದೂ ವಿದ್ವಾಂಸರು** – ಮಾಧವಭಟ್ಟ, ಗೌರೀನಾಥ, ಗೋಪಿನಾಥ, ಕಿಶನ ಪಂಡಿತ, ಭಟ್ಟಚಾರ್ಯಜಿ, ಭಾಗಿರಥಿ, ಕಾಶೀನಾಥ ಮತ್ತು ಭೀಮಬಾಧ ಎಂಬುವವರಿದ್ದರು.
- ಅಕ್ಬರ್‌ನು ಮದರಸ ಮತ್ತು ಮಕ್ತಬ್‌ಗಳನ್ನು ಆಗ್ರ, ಫತೇಪುರ ಸಿಕ್ರಿಗಳಲ್ಲಿ ಪ್ರಾರಂಭಿಸಿದನು.
- ಜಹಂಗೀರನು ಹೊರಡಿಸಿದ ಆಜ್ಞೆಯಂತೆ ಸಾಮ್ರಾಜ್ಯವು ಯಾವುದೇ ಶ್ರೀಮಂತ ಮತ್ತು ವಿದೇಶಿಯರು ವಾರಸುದಾರರಿಲ್ಲದೆ ಮೃತನಾದಾಗ ಆತನ ಆಸ್ತಿಯನ್ನು ಶಿಕ್ಷಣ ಸಂಸ್ಥೆಗಳ ಜೀರ್ಣೋದ್ಧಾರಕ್ಕಾಗಿ ಬಳಸಬೇಕೆಂದನು.
- ಹಿಂದೂ ಮತ್ತು ಬೌದ್ಧ ವಿ.ವಿ.ಗಳಾದ ತಕ್ಷಶಿಲ, ನಳಂದ ಮತ್ತು ವಿಕ್ರಮಶೀಲ ವಿ.ವಿಗಳು
- ಲಕ್ನೋದ ಪರಂಗಿಮಹಲ್ ಮದರಸದಲ್ಲಿ ಕಾನೂನು ಅಧ್ಯಯನ. ಸೈಲ್‌ಕೋಟ್ ಮದರಸದಲ್ಲಿ ವ್ಯಾಕರಣದ ಅಧ್ಯಯನ.
- ದೆಹಲಿಯ ಪಾನಾಲಿವುಲ್ಲಾ ಮದರಸವು ಸಾಂಪ್ರದಾಯಿಕ ಜೀವನ ಮೌಲ್ಯಕ್ಕೆ ಹೆಸರಾಗಿದ್ದತ್ತು.
- **ಮುಸ್ಲಿಂ ಶಿಕ್ಷಣ ಕೇಂದ್ರಗಳು :** ದೆಹಲಿ, ಆಗ್ರ, ಫತೇಪುರ ಸಿಕ್ರಿ, ಲಕ್ನೋ, ಅಂಬಾಲ, ಕಾಶ್ಮೀರ ಸೈಲ್‌ಕೋಟ್, ಗ್ವಾಲಿಯಾರ್, ಅಹ್ಮದಾಬಾದ್ ಮತ್ತು ಲಾಹೋರ್ ಮುಂತಾದವು
- **ಹಿಂದೂ ಶಿಕ್ಷಣ ಕೇಂದ್ರಗಳು :** ಬನಾರಸ್, ನಾಡಿಯ (ವಾರಣಾಸಿ), ಮಿಥಿಲ, ಮಥುರಾ, ಶ್ರೀನಗರ, ಪ್ರಯಾಗ ಮತ್ತು ಅಯೋಧ್ಯೆ

ಮುಂತಾದವು.

- ಬನಾರಸ್: ಧಾರ್ಮಿಕ ಸಂಸ್ಕೃತ ಮತ್ತು ಸಾಹಿತ್ಯಗಳ ಅಧ್ಯಯನಕ್ಕೆ ಹೆಸರುವಾಸಿಯಾಗಿತ್ತು. ಬರ್ನಿಯರ್ ಬನಾರಸ್‌ನ್ನು ಗ್ರೀಸ್‌ನ ಅಥೆನ್ಸ್‌ಗೆ ಹೋಲಿಸಿದ್ದಾನೆ.

ಸಾಹಿತ್ಯ

ಕವಿಗಳು	ಕೃತಿಗಳು
ಅಬುಲ್‌ಫಜಲ್	ಪಂಚತಂತ್ರ (ಪರ್ಶಿಯನ್‌ಗೆ ಅನುವಾದ)
ಇಬನ್ ಹರ್‌ಕಿಶನ್	ಪ್ರಬೋಧ ಚಂದ್ರೋದಯ
ಬದೌನಿ	ರಾಮಾಯಣ, ಮಹಾಭಾರತ
ಅಬುಲ್ ಫೈಜಿ (ರಜ್‌ನಾಮ)	ಲೀಲಾವತಿ, ನಳದಮಯಂತಿ
ಅಬುಲ್ ಫೈಜಿ	ತಾರೀಖ್-ಇ-ರಸೀದಿ
ಹಾಜಿ ಇಬ್ರಾಹಿಂ-ಸರ್‌ಹಿಂದಿ	ಅಥರ್ವಣವೇದ
ಅಬ್ದುಲ್ ರಹೀಂಖಾನ್-ಇ-ಖಾನ್	ಬಾಬರ್‌ನಾಮ
ರಾಜ ತೋದರ ಮಲ್	ಭಾಗವತ ಪುರಾಣ
ಮೌಲಾನಾ ಕೈರಿ	ಹರಿವಂಶ
ಮುಲ್ಲಾಷ್ ಮಹಮದ್	ಕಲ್ಹಣನ ರಾಜ ತರಂಗಿಣಿ
ದಾರಾಷೂಕೋ	ಭಗವದ್ಗೀತೆ, ಉಪನಿಷತ್‌ಗಳು,
	ಯೋಗ ವಶಿಷ್ಟ

ಸಂಸ್ಕೃತ ಸಾಹಿತ್ಯ

ಕವಿಗಳು	ಕೃತಿಗಳು
ರಾಮಚಂದ್ರ	ಸಿದ್ಧಾಂತ ಸಾರ್ವಭೌಮ
ವಲ್ಲಭದೇವಿ	ಶುಭ ಸೀತಾವಳಿ
ಜಗನ್ನಾಥ ಪಂಡಿತ (ಕವಿರಾಜ)	ರಸ ಗಂಗಾಧರ, ಗಂಗಾಲಹರಿ
ಮುನೀಶ್ವರ	ರಾಮವಿನೋದ
ಬಿರಾರಿ ಕೃಷ್ಣದಾಸ	ಪಾರ್ಸಿ ಪ್ರಕಾಶ (ನಿಘಂಟು)
ವೈಜಯಂತಿ	ಆನಂದತಿಲಕ
ರಘುನಾಥ	ಮಹೂರ್ತಮಾಲ
ಭಗವತಿಸ್ವಾಮಿನ್	ಕಾವ್ಯವಿರಿತ್ತ ಪ್ರಬೋಧ
ಚೈತನ್ಯ	ಕೃಷ್ಣ ಕೀರ್ತನೆಗಳು
ಸಿದ್ಧಚಂದ್ರ ಉಪಾಧ್ಯಾಯ	ಭಾಮಚಂದ್ರ ಚರಿತ
ಪದ್ಮ ಶಂಕರ್	ಅಕ್ಬರ್‌ಷಾಹಿ ಶೃಂಗಾರದರ್ಪಣ
ಅಬುಲ್ ಫಜಲ್	ಪಾರ್ಸಿ ಪ್ರಕಾಶ (ನಿಘಂಟು)

ಮೊಗಲರ ಕಾಲದ ಪ್ರಮುಖ ಕೃತಿಗಳು

ಕವಿಗಳು	ಕೃತಿಗಳು
ಫಿರ್ದೋಷಿ	ಷಾನಾಮ
ಇನಾಯಿತ್‌ಖಾನ್	ಷಹಜಹಾನ್‌ನಾಮ
ಬಾಬರ್	ಬಾಬರ್‌ನಾಮ
ಅಬುಲ್‌ಫಜಲ್	ಐನಿ ಅಕ್ಬರಿ, ಅಕ್ಬರ್‌ನಾಮ
ಮೊಲ್ಲಾ ದಾವೂದ್	ತಾರೀಖ್-ಇ-ಆಲ್ಫಿ
ಮಹಮದ್ ಸಲೇಹ್	ಅಮಲ್-ಇ-ಸಾಲಿಹ್
ನಿಜಾಮುದ್ದೀನ್	ತಬರಕ್-ಇ-ಅಕ್ಬರಿ
ಮಹ್ಮದ್ ಜೈಸಿ	ಪದ್ಮಾವತ್
ಸೂರ್‌ದಾಸ್	ಸೂರ್‌ಸಾಗರ್
ಜಹಂಗೀರ್	ತುಜಕ್-ಇ-ಜಹಂಗೀರ್
ಔರಂಗಜೇಬ್	ಫತ್ವಾ-ಇ-ಆಲಮ್‌ಗೀರ್
ಮಹ್ಮದ್‌ಖಾಜಿಂ	ಆಲಮ್‌ಗೀರ್‌ನಾಮ
ಜಗನ್ನಾಥ	ರಸಗಂಗಾಧರ, ಗಂಗಾಲಹರಿ
ಕೃಷ್ಣದಾಸ್	ಪಾರ್ಸಿ ಪ್ರಕಾಶ
ಗುಲ್‌ಬದನ್ ಬೇಗಂ	ಹುಮಾಯುನ್‌ನಾಮ
ಖಾಫಿಖಾನ್	ಮುಂತಾಕಬ್-ಉಲ್-ಲುಬಾಬ್
ಕೇಶವದಾಸ	ಅಲಂಕಾರ ಮಂಜರಿ
ಅಬುಲ್‌ಫೈಜಿ	ಲೀಲಾವತಿ
ಅಬ್ಬಾಸ್ ಸರ್ವಾನಿ	ತೌಫಿ-ಇ-ಅಕ್ಬರ್‌ಷಾಹ
ಬದೌನಿ	ಮುಂತಾಕಬ್-ಉತ್-ತವಾರಿಕ್
ಕಬೀರ್	ದೋಹಗಳು
ಚೈತನ್ಯ	ಚೈತನ್ಯ ಚರಿತಾಮೃತಂ
ತುಳಸಿದಾಸ	ರಾಮಚರಿತ ಮಾನಸ
ಫೈಜಿ-ಸರ್-ಹಿಂದಿ	ಅಕ್ಬರ್‌ನಾಮ
ಅಬ್ದುಲ್ ಹಮೀದ್ ಲಾಹೋರಿ	ಬಾದಷಾನಾಮ

ನವರತ್ನ ಕವಿಗಳು.

- ಅಕ್ಬರ ಆಸ್ಥಾನದಲ್ಲಿ ನವರತ್ನಗಳೆಂಬ ಸುಪ್ರಸಿದ್ಧ 9 ವಿದ್ವಾಂಸರು ಇದ್ದರು.

1. ಮುಲ್ಲಾದೋ ಫೆಜಾ – ಪ್ರಸಿದ್ಧ ಕವಿ, ಬರಹಗಾರ
2. ಅಬ್ದುಲ್ ರಹೀಂಖಾನ್ – ಬೈರಂಖಾನನ ಮಗ
3. ರಾಜತೋದರಮಲ್ – ಕಂದಾಯ ಮಂತ್ರಿ
4. ಅಬ್ದುಲ್ ಫಜಲ್– ದಂಡನಾಯಕ, ಚರಿತ್ರಗಾರ, ಅಕ್ಬರನ ಮಿತ್ರ.
5. ತಾನ್‌ಸೇನ್ – ಮೂಲ ಹೆಸರು ರಾಮ್ ತಾನ್ ಪಾಂಡೆ, ಪ್ರಸಿದ್ಧ ಸಂಗೀತಗಾರ.
6. ಬೀರ್‌ಬಲ್ –ಅಕ್ಬರ್‌ನ ಮಿತ್ರ, ವಿದ್ವಾಂಸ,
7. ಮಾನಸಿಂಗ್ – ಅಕ್ಬರನ ನಂಬಿಕಸ್ಥ ದಂಡನಾಯಕ
8. ಅಬುಲ್ ಫೈಜಿ– ಲೀಲಾವತಿ ಕೃತಿಯನ್ನು ಪರ್ಶಿಯನ್‌ಗೆ ಅನುವಾದಿಸಿದನು.

9. ಹಮೀರ್ ಅಹಮದ್ - ಅಕ್ಬರ್‌ನ ಮಿತ್ರ

ಮೊಗಲರ ಕಲೆ ಮತ್ತು ವಾಸ್ತುಶಿಲ್ಪ
(Art of Architecture)

- ಬಾಬರನು ಹೆಚ್ಚಾಗಿ ಬೃಹತ್ ಭವನಗಳನ್ನು ನಿರ್ಮಾಣ ಮಾಡಿದ್ದಾನೆ.

1. ಪಾಣಿಪತ್‌ನ ಕಾಬೂಲಿಬಾಗ್‌ನಲ್ಲಿರುವ ಸ್ಮರಣಾರ್ಥ ಮಸೀದಿ.
2. ರೋಹಿಲಖಂಡದ ಸಂಬಾಲ್‌ನ ಜಾಮೀ ಮಸೀದಿ.
3. ಆಗ್ರಾದ ಹಳೆಯ ಲೋದಿಕೋಟೆಯೊಳಗಿನ ಮಸೀದಿ.

- ಹುಮಾಯೂನನು ದೀನ್‌ಫನ್ಹಾ (ಪ್ರಪಂಚ ರಕ್ಷಣಾ ಸ್ಥಾನ) ಎಂಬ ಹೊಸ ನಗರವನ್ನು ದೆಹಲಿಯ ಬಳಿ ನಿರ್ಮಿಸಿದನು. ಇವನ ಕಾಲದ 2 ಕಟ್ಟಡಗಳೆಂದರೆ, ಆಗ್ರಾದಲ್ಲಿನ ಮಸೀದಿ ಹಾಗೂ ಪಂಜಾಬ್‌ನ ಫತೇಬಾದ್‌ನ ಮಸೀದಿಗಳು.
- ಷೇರ್‌ಷಾನ ಕಟ್ಟಡಗಳಲ್ಲಿ ದೆಹಲಿಯ ಬಳಿಯ ಪುರಾನಖಿಲ್ಲಾ ಮತ್ತು ಸಸಾರಂ ಸರೋವರ ಮಧ್ಯದಲ್ಲಿ ನಿರ್ಮಿತವಾದ ಷೇರ್‌ಷಾನ ಸಮಾಧಿ ಭವನ ಮುಖ್ಯವಾದವು.
- ಅಕ್ಬರನ ಕಾಲದ ಕಟ್ಟಡಗಳಲ್ಲಿ ಹಿಂದೂ ಮತ್ತು ಪರ್ಷಿಯನ್ ಶೈಲಿಯ ಸಮ್ಮಿಲನವಿದೆ. ಇದರಲ್ಲಿ ದೆಹಲಿಯಲ್ಲಿರುವ ಹುಮಾಯೂನ್ ಸಮಾಧಿಯು ಪ್ರಮುಖವಾದುದು. ಅಕ್ಬರನು ಕಟ್ಟಿಸಿದ ಎರಡು ಪ್ರಸಿದ್ಧ ಅರಮನೆಗಳೆಂದರೆ ಅಕ್ಬರಿಮಹಲ್ ಮತ್ತು ಜಹಂಗೀರ ಮಹಲ್.
- ಅಕ್ಬರನ ಕನಸಿನ ಕೂಸಾದ ಹೊಸ ರಾಜಧಾನಿ **ಫತೇಪುರ್ ಸಿಕ್ರಿ** (ವಿಜಯದನಗರ) ಇದನ್ನು ಗುಜರಾತಿನ ಆಕ್ರಮಣದ ಕುರುಹಾಗಿ ಕ್ರಿ.ಶ.1572ರಲ್ಲಿ ನಿರ್ಮಿಸಿದನು. ಫತೇಪುರ ಸಿಕ್ರಿಯಲ್ಲಿ ಚಕ್ರವರ್ತಿಯ ಕಾರ್ಯಾಲಯ, ದಿವಾನ್-ಇ-ಖಾಸ್/ಖಾಸಗಿ ಸಭಿಕರ ಅಂಗಣ, ದಿವಾನ್-ಇ-ಆಮ್/ಸಾಮ್ರಾಟನ ಕಛೇರಿ, ಪಂಚಮಹಲ್, ಮಹಿಯಂ ಮಹಲ್, ಜೋಧಬಾಯಿ ಮಹಲ್, ಬೀರ್‌ಬಲ್ ಮಹಲ್ ಹಾಗೂ ಇಬದತ್ ಖಾನಾ ಹೊರಗೆ ಸುಂದರ ಜಾಮೀ ಮಸೀದಿಯಿದೆ.
- ಫತೇಪುರ ಸಿಕ್ರಿಯಲ್ಲಿ ಅಕ್ಬರನು ಗುಜರಾತಿನ ಆಕ್ರಮಣದ ಸ್ಮರಣಾರ್ಥವಾಗಿ ಬುಲಂದ ದರ್ವಾಜ (ಬೃಹತ್ ವಿಜಯದ್ವಾರ) ಕಟ್ಟಿಸಿದನು.
- ಜಹಾಂಗೀರನು ಲಾಹೋರಿನಲ್ಲಿ ಬಾದ್‌ಷಾಹಿ ಮಸೀದಿ, ಕಾಶ್ಮೀರದ ಸುಪ್ರಸಿದ್ಧ ಶಾಲಿಮಾರ್ ತೋಟ ಹಾಗೂ ಅಬ್ದುಲ್ ರಹೀಮ್ ಖಾನ್-ಇ-ಖಾನ್ ಸಮಾಧಿಯನ್ನು ದೆಹಲಿಯಲ್ಲಿ ನಿರ್ಮಿಸಿದನು.
- ಷಹಜಹಾನನ ಕಾಲವನ್ನು ಮೊಗಲ್ ವಾಸ್ತುಶಿಲ್ಪದ ಸುವರ್ಣಯುಗ ಎನ್ನಲಾಗಿದೆ.
- ಷಹಜಹಾನನು ಆಗ್ರಾದಲ್ಲಿ ತಾಜ್‌ಮಹಲ್, ಮೋತಿ ಮಸೀದಿ, ಹವಳದ ಮಸೀದಿ, ದಿವಾನ್-ಇ-ಆಮ್,ದಿವಾನ್‌ಖಾಸ್, ಮುಸಮಾನ್‌ಬೂರ್ಜ್, ಜಾಮೀ-ಮಸೀದಿ, ಷೀಷ್ ಮಹಲ್, ರಂಗಮಹಲ್ ನಿರ್ಮಿಸಿದನು.
- ದೆಹಲಿಯಲ್ಲಿ **'ಕೆಂಪು ಕೋಟೆ'** ಕಟ್ಟಿಸಿದನು ಹಾಗೂ ದಿವಾನ್-ಇ-ಖಾಸ್‌ನು ತನ್ನ ಬೆಳ್ಳಿಯ ಒಳಮಾಳಿಗೆ ಮತ್ತು ಅಮೃತಶಿಲೆ, ಚಿನ್ನ ಹಾಗೂ ಅನರ್ಘ್ಯ ಶಿಲೆಗಳಿಂದ ಕಟ್ಟಿಸಿದ್ದಾನೆ. ಇದರಲ್ಲಿ ಒಂದು ಶಾಸನವಿದೆ. 'ಭೂಮಿಯ ಮೇಲದುವೆ ನಾವಿಕರಿರುವುದಾದರೆ ಇದೇ ಅದು ಇದಲ್ಲದೆ ಬೇರಿಲ್ಲ' ಎಂಬುದು ಸಮರ್ಥಿಸುತ್ತದೆ. ಷಹಜಹಾನನು ಲಾಹೋರಿನಲ್ಲಿ 'ಜಹಾಂಗೀರನ ಸಮಾಧಿಯನ್ನು' ಕಟ್ಟಿಸಿದ್ದಾನೆ.
- ಷಹಜಹಾನನು ತಾಜ್‌ಮಹಲ್‌ನ್ನು ತನ್ನ ಮಡದಿಯಾದ ಅಂಜುಮಾದ್-ಬಾನು-ಬೇಗಂಳ ಸ್ಮರಣೆಗಾಗಿ ಕಟ್ಟಿಸಿದನು. ಇದರ ನಕ್ಷೆಗಾರ, ಉಸ್ತಾದ್ ಅಹ್ಮದ್ ಲಾಹೋರಿ. ಈತನಿಗೆ ಷಹಜಹಾನ್ ನಾದಿರ್-ಉಲ್-ಅಸರ ಎಂಬ ಬಿರುದು ನೀಡಿದ್ದನು. ಇದರ ಮುಖ್ಯ ಶಿಲ್ಪಿಗಳೆಂದರೆ:- ಮುಕರಕ್ಕ ಮೆತ್ ಖಾನ್ ಮತ್ತು ಮೀರ್ ಅಬ್ದುಲ್ ಕರೀಂ.
- ಷಹಜಹಾನನ ಖ್ಯಾತ ಕಲಾಕೃತಿ **'ಮಯೂರ ಸಿಂಹಾಸನ'**. ಇದು "ಸಿಂಹಾಸನ ಸುವರ್ಣ ಪಾದಗಳ ಮೇಲೆ ನಿಂತು ತೂಗುವ ಮಂಚದಂತಿತ್ತು. ಈ ಲೇಪಿತವಿತಾನಕ್ಕೆ 12 ಮರಕತ ಸ್ತಂಭಗಳ ಆಧಾರವಿತ್ತು. ಪ್ರತಿಯೊಂದು ರತ್ನಗಳಿಂದ ಮೇಲ್ಪದರವು ಎರಡು ನವಿಲುಗಳನ್ನು ಹೊಂದಿತ್ತು. ಪ್ರತಿ ಜೊತೆ ಪಕ್ಷಿಗಳ ನಡುವೆ ವಜ್ರಗಳು, ಪಚ್ಚೆಗಳು, ಮಾಣಿಕ್ಯ ಮತ್ತು ಹವಳಗಳಿಂದ ಕೂಡಿದ ಒಂದು ವೃಕ್ಷವಿತ್ತು".

ವರ್ಣಚಿತ್ರಕಲೆ :

- **ಹಿಂದೂ ಚಿತ್ರಕಾರರು-** ದಶ್ವಂತ್, ಕೇಶ್‌ವಾಲ್, ಮುಕುಂದ್, ಜಗನ್ನಾಥ ಮತ್ತು ಮಹೇಶ್,
- **ಮುಸ್ಲಿಂ ಚಿತ್ರಕಾರರು-** ಅಬ್ದುಲ್ ಸಮದ್ ಮತ್ತು ಫರೂಖ್ ಬೇಗ್,
- ವರ್ಣಚಿತ್ರಕಲೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟವರಲ್ಲಿ ಜಹಾಂಗೀರ್ ಅತ್ಯಂತ ಪ್ರಮುಖನು.
- ಹುಮಾಯೂನ್ ಮತ್ತು ಅಕ್ಬರ್ ಕಾಲದ ವರ್ಣಚಿತ್ರಕಾರರೆಂದರೆ- ಅಬ್ದುಲ್ ಸಮದ್ ಮತ್ತು ಮೀರ್‌ಸಯ್ಯದ್ ಅಲಿ.
- ಅಕ್ಬರನ ಕಾಲದಲ್ಲಿ ಇಂಡೋ ಪರ್ಷಿಯನ್ ಕಲೆಯ ವರ್ಣಚಿತ್ರಗಳು ಸಮ್ಮಿಲನವಾದವು. ಇವನು ಹೀರತ್‌ನ ಹುಸೇನ್ ಎಂಬುವವನಿಗೆ ಆಶ್ರಯ ನೀಡಿದ್ದನು.
- ಜಹಾಂಗೀರನ ಕಾಲದ ವರ್ಣಚಿತ್ರಗಳಲ್ಲಿ ಸಸ್ಯಗಳು, ಪ್ರಾಣಿಗಳು ಎರಡು ಪಕ್ಷಿಗಳನ್ನು ಚಿತ್ರಿಸುವ ಪ್ರವೃತ್ತಿ ಆರಂಭವಾಯಿತು.
- ಬಸವಾನ್, ರಾಜಮ್‌ನಾಮ (ಮಹಾಭಾರತ)ವನ್ನು ಚಿತ್ರಿಸಿದನು.
- ನಿಜಾಮಿಯ ಕಂಸ ಸಾದಿಯ ಗುಲಿಸ್ತಾನ್, ಹಫೀಜ್‌ನ ದಿವಾನ್, ಜಾಮಿಯ ಜಾರಿಸ್ತಾನ್ ಪುಸ್ತಕಗಳನ್ನು ಚಿತ್ರಿಸಿದರು.

18. ಭಾರತಕ್ಕೆ ಯೂರೋಪಿಯನ್ನರ ಆಗಮನ THE ADVENT OF EUROPEANS IN INDIA

- ಪ್ರಾಚೀನ ಕಾಲದಲ್ಲಿ ಭಾರತ ಮತ್ತು ಯೂರೋಪಿಯನ್ನರ ನಡುವೆ ನಿಕಟವಾದ ವ್ಯಾಪಾರ ಸಂಪರ್ಕವಿತ್ತು. ಭಾರತದ ಕರಕುಶಲ ವಸ್ತುಗಳು, ಸಾಂಬಾರು ಪದಾರ್ಥಗಳಿಗೆ ಯೂರೋಪಿನ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆಯಿತ್ತು.
- ಭಾರತದಿಂದ ಯೂರೋಪಿಗೆ ನೆಲ ಮಾರ್ಗದ ಮೂಲಕ ವಸ್ತುಗಳ ಸಾಗಾಣಿಕೆಯಾಗುತ್ತಿತ್ತು. ಈ ಭೂ ಮಾರ್ಗ ಕಾನ್‌ಸ್ಟಾಂಟಿನೋಪಲ್ (ಈಗಿನ ಇಸ್ತಾಂಬುಲ್) ಮೂಲಕ ಹಾದು ಹೋಗುತ್ತಿತ್ತು.
- ಕ್ರಿ.ಶ. 1453ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡು ಭಾರತ ಮತ್ತು ಯೂರೋಪ್ ನಡುವಿನ ವ್ಯಾಪಾರಕ್ಕೆ ಅನೇಕ ಅಡೆತಡೆಗಳನ್ನು ಒಡ್ಡಿದರು. ಆದ್ದರಿಂದ ಯೂರೋಪಿಯನ್ನರು ಭಾರತಕ್ಕೆ ಜಲಮಾರ್ಗ ಕಂಡುಹಿಡಿಯುವ ಪ್ರಯತ್ನ ಮಾಡಿದರು.
- ಪೋರ್ಚುಗೀಸರ ದೊರೆ **ಹೆನ್ರಿ ನಾವಿಗೇಟರ್** ಜಲಮಾರ್ಗ ಕಂಡುಹಿಡಿಯಲು ಪ್ರೋತ್ಸಾಹ ನೀಡಿದನು. ಕ್ರಿ.ಶ. 1487ರಲ್ಲಿ ಭರ್ತಲೋಮಿಯ ಡಯಾಸ್‌ನು ಕೇಪ್ ಆಫ್ ಗುಡ್ ಹೋಪ್ ಭೂಶಿರ ತಲುಪಿದನು. ಇದೇ ಮಾರ್ಗ ಅನುಸರಿಸಿದ ಪೋರ್ಚುಗಲ್ ನಾವಿಕ **ವಾಸ್ಕೋಡಿಗಾಮನು ಕ್ರಿ.ಶ. 1498 ಮೇ 20**ರಂದು ಭಾರತಕ್ಕೆ ಜಲಮಾರ್ಗ ಕಂಡುಹಿಡಿದು ಕಲ್ಲಿಕೋಟೆಯ **ಕುಪಡ್** ಬಳಿ ತಲುಪಿದನು.
- ಇದರಿಂದ ಯೂರೋಪಿಯನ್ನರು ಭಾರತಕ್ಕೆ ನೇರ ವಾಣಿಜ್ಯ ಸಂಪರ್ಕ ಸಾಧಿಸಿ, ಭಾರತದ ಕರಾವಳಿಯಲ್ಲಿ ತಮ್ಮ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿದರು.
- ಆರಂಭದಲ್ಲಿ ಯೂರೋಪಿಯನ್ನರು ವ್ಯಾಪಾರ ಮತ್ತು ವಾಣಿಜ್ಯಕ್ಕೆ ತಮ್ಮ ಗಮನ ಹರಿಸಿದ್ದರು. ಆದರೆ ಅಂದಿನ ಭಾರತದ ರಾಜಕೀಯ ಅರಾಜಕತೆ ಗಮನಿಸಿ ಈ ಕಂಪನಿಗಳು ಭಾರತದಲ್ಲಿ ಸಾಮ್ರಾಜ್ಯ ನಿರ್ಮಿಸಲು ಮುಂದಾದವು. ಇದರಿಂದ ಅಂತಿಮವಾಗಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತವನ್ನು ಆಕ್ರಮಿಸಿತು.

18.1 ಪೋರ್ಚುಗೀಸರು (Portuguese)

- ಪೋರ್ಚುಗಲ್ ದೇಶವು ಸಮುದ್ರಯಾನವನ್ನು ಆರಂಭಿಸಿದ ಮೊದಲ ದೇಶ. ಈ ದೇಶದ ನಾವಿಕ ವಾಸ್ಕೋಡಿಗಾಮನು ಸುಮಾರು ಹತ್ತೂವರೆ ತಿಂಗಳ ಯಾನದ ನಂತರ 1498ರ ಮೇನಲ್ಲಿ ಕೇರಳದ ಕ್ಯಾಲಿಕಟ್ ತಲುಪಿದನು. ಇವನಿಗೆ ಕಲ್ಲಿಕೋಟೆಯ ಸ್ಥಳೀಯ ದೊರೆ **ಮಾನವರ್ಮನ್‌ನು** (ಬಿರುದು-ಜಾಮುರಿನ್) ಸ್ವಾಗತ ಕೋರಿದನು. 1502ರಲ್ಲಿ 2ನೇ ಬಾರಿಗೆ ಭಾರತಕ್ಕೆ ಬಂದ ವಾಸ್ಕೋಡಿಗಾಮನು ಕೊಚ್ಚಿನ್, ಕಲ್ಲಿಕೋಟೆ ಹಾಗೂ ಕಣ್ಣಾನೂರುಗಳಲ್ಲಿ ವ್ಯಾಪಾರ ಕೇಂದ್ರ ಸ್ಥಾಪಿಸಿದನು.

ಭಾರತದ ಪೋರ್ಚುಗೀಸರ ವಸಾಹತುಗಳಿಗೆ ಮೊದಲ ವೈಸರಾಯ್ ಆಗಿ ನೇಮಕವಾದನು. ಇವನು ಅರಬ್ಬರನ್ನು ಅರಬ್ಬೀ ಸಮುದ್ರದಿಂದ ದೂರವಿಡಲು ಶಕ್ತಿಯುತವಾದ ನೌಕಾಬಲ ಕಟ್ಟಿದನು. ಇದರ ಸಹಾಯದಿಂದ ಕ್ರಿ.ಶ. 1509ರಲ್ಲಿ **ದಿಯು ಹತ್ತಿರದ** ಜಾಮೂರಿನ್‌ನ ನೌಕಾಶಕ್ತಿಯನ್ನು ಸೋಲಿಸಿದನು. ಇದರಿಂದ ಮುಂದಿನ ಸುಮಾರು ಒಂದು ಶತಮಾನದವರೆಗೆ ಹಿಂದೂ ಮಹಾಸಾಗರವು ಪೋರ್ಚುಗೀಸರ ವಶದಲ್ಲಿತ್ತು. ಇವನು **'ಬ್ಲೂ ವಾಟರ್ ಪಾಲಿಸಿ'**ಯನ್ನು ಜಾರಿಗೆ ತಂದಿದ್ದನು.

- ಪೋರ್ಚುಗೀಸರ 2ನೇ ಗೌರ್ನರ್ ಆಗಿ **ಅಲ್ಫಾನ್ಸೋ-ಡಿ-ಆಲ್ಬುಕರ್ಕ್** ನೇಮಕವಾದನು. ಇವನು ಪೂರ್ವದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನಾಗಿದ್ದು, ಬಿಜಾಪುರದ ಆದಿಲ್‌ಷಾಹಿ ಸುಲ್ತಾನರಿಂದ ಗೋವಾವನ್ನು 1510ರಲ್ಲಿ ವಶಪಡಿಸಿಕೊಂಡು 2ನೇ ರಾಜಧಾನಿಯನ್ನಾಗಿ ಮಾಡಿದನು. ಆದ್ದರಿಂದಲೇ ಆಲ್ಬುಕರ್ಕ್‌ನನ್ನು ಭಾರತದ ಪೋರ್ಚುಗೀಸ್ ಅಧಿಕಾರದ ನಿಜವಾದ ಸ್ಥಾಪಕ ಎನ್ನುತ್ತಾರೆ.
- ಪೋರ್ಚುಗೀಸರ 3ನೇ ಗೌರ್ನರ್ ಆಗಿ **ನಿನೋ-ಡ-ಕುನ್ಹ** ನೇಮಕವಾದನು. ಇವನು ಭಾರತದ ಪೋರ್ಚುಗೀಸರ ರಾಜಧಾನಿಯನ್ನು **ಕೊಚ್ಚಿನ್**ನಿಂದ **ಗೋವಾಗೆ** ವರ್ಗಾಯಿಸಿದನು. ಇವನು ಗುಜರಾತ್‌ನ ಸುಲ್ತಾನ್ ಬಹದ್ದೂರ್ ಷಾನಿಂದ ದಿಯು & ಬೆಸ್ಸಿನ್‌ಗಳನ್ನು ವಶಪಡಿಸಿಕೊಂಡನು. 1661ರಲ್ಲಿ ಪೋರ್ಚುಗೀಸ್ ದೊರೆ ತನ್ನ ತಂಗಿಯಾದ ಕ್ಯಾಥರೀನ್-ಡಿ- ಬ್ರ್ಯಾಂಗ್ಯಾಂಜಳನ್ನು ಇಂಗ್ಲೇಂಡಿನ ದೊರೆ 2ನೇ ಚಾರ್ಲ್ಸ್‌ಗೆ ಕೊಟ್ಟು ವಿವಾಹ ಮಾಡಿದಾಗ ವರದಕ್ಷಿಣೆಯಾಗಿ **ಬಾಂಬೆಯನ್ನು** ಅವನಿಗೆ ನೀಡಿದನು.
- ಮರಾಠರು 1739ರಲ್ಲಿ ಪೋರ್ಚುಗೀಸರ ನಿಯಂತ್ರಣದಲ್ಲಿದ್ದ **ಸಾಲ್ಸೆಟ್** ಮತ್ತು **ಬೆಸ್ಸಿನ್**ಗಳನ್ನು ಆಕ್ರಮಿಸಿಕೊಂಡರು. ನಂತರ ಇವರು ಡಚ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯ ಪ್ರಬಲ ಸ್ಪರ್ಧೆಯನ್ನು ಎದುರಿಸಬೇಕಾಯಿತು.
- ಡಿಯು ಡಮನ್ ಮತ್ತು ಗೋವಾವನ್ನು ಬಿಟ್ಟು ಉಳಿದ ಎಲ್ಲಾ ಪ್ರದೇಶಗಳನ್ನು **Dutch east India Company** ಆಕ್ರಮಿಸಿಕೊಳ್ಳುತ್ತದೆ. ಹಾಗೂ 1961ರವರೆಗೆ ಈ ಪ್ರದೇಶಗಳ ಮೇಲೆ ತಮ್ಮ ನಿಯಂತ್ರಣ ಹೊಂದಿದ್ದರು.

ಪೋರ್ಚುಗೀಸರ ವಸಾಹತುಗಳು

1. ಡಿಯು	2. ಡಮನ್
3. ಸಾಲ್ಸೆಟ್	4. ದಾದ್ರ & ನಗರ ಹವೇಲಿ
5. ಬೆಸ್ಸಿನ್	6. ಗೋವಾ
7. ಕಲ್ಲಿಕೋಟೆ	8. ಕೊಚ್ಚಿನ್
9. ಕಿಲಾನ್	10. ಸಾಂಥೋಮ್

11. ಹೂಗ್ಲಿ

ಪೋರ್ಚುಗೀಸರ ಅವನತಿಗೆ ಕಾರಣಗಳು

1. ಧಾರ್ಮಿಕ ಅಸಹಿಷ್ಣತೆ.
2. ಕಡಲ್ಗಳ್ಳತನ.
3. ಬ್ರೆಜಿಲ್‌ನತ್ತ ಗಮನ ಹರಿಸಿ ಭಾರತವನ್ನು ನಿರ್ಲಕ್ಷ್ಯ ಮಾಡಿದರು.
4. ಸ್ಪೇನ್‌ನಿಂದ ಪೋರ್ಚುಗಲ್ ಆಕ್ರಮಣ.
5. ಆಲ್ಬುಕರ್ಕ್ ನಂತರ ಬಂದ ಅಧಿಕಾರಿಗಳ ಅಸಮರ್ಥತೆ ಮತ್ತು ಭ್ರಷ್ಟಾಚಾರ.
6. 1632ರಲ್ಲಿ ಮೊಘಲರು ಹೂಗ್ಲಿಯಿಂದ ಪೋರ್ಚುಗೀಸರನ್ನು ಹೊರ ಹಾಕಿದರು.
7. ದೂರದ ಸಾಮ್ರಾಜ್ಯದ ಆಳ್ವಿಕೆಗೆ ಬೇಕಾಗಿದ್ದ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳ ಕೊರತೆ ಎದುರಾಯಿತು.
8. 1739ರಲ್ಲಿ ಪೋರ್ಚುಗೀಸರ ಬೆಸ್ಸಿನ್ ಮತ್ತು ಸಾಲ್ಸೆಟ್‌ನ್ನು ಮರಾಠರು ಆಕ್ರಮಿಸಿದರು.

ಪೋರ್ಚುಗೀಸರ ಪರಿಣಾಮಗಳು

1. ಭಾರತ ಮತ್ತು ಐರೋಪ್ಯರ ಸಂಪರ್ಕ ಹೆಚ್ಚಾಯಿತು.
2. ಭಾರತದ ಕರಕುಶಲ ವಸ್ತುಗಳು, ಸಾಂಬಾರ ಪದಾರ್ಥಗಳಿಗೆ ಅಪಾರ ಬೇಡಿಕೆ ಬಂದಿತು.
3. ತಂಬಾಕು, ನೆಲಗಡಲೆ, ಮೆಕ್ಕೆಜೋಳ, ಗೋಡಂಬಿ, ಈರುಳ್ಳಿ ಮತ್ತು ಮೆಣಸಿನ ಕಾಯಿಗಳು ಭಾರತಕ್ಕೆ ಪರಿಚಯವಾದವು.
4. ಪಾಶ್ಚಾತ್ಯ ವಾಸ್ತುಶೈಲಿಯ ಪರಿಚಯವಾಯಿತು.
5. ಭಾರತಕ್ಕೆ ಮೊದಲ ಮುದ್ರಣ ಯಂತ್ರ ಗೋವಾಗೆ ಇವರಿಂದ ಬಂದಿತು.

18.2 ಡಚ್ಚರು (Dutch)

- ಪೂರ್ವದಲ್ಲಿ ಪೋರ್ಚುಗೀಸರ ಹಿಡಿತಕ್ಕೆ ಮೊದಲ ಪೆಟ್ಟು ನೀಡಿದವರು ಡಚ್ಚರು. ಇವರು **1602ರಲ್ಲಿ ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಆಫ್ ನೆದರ್‌ಲ್ಯಾಂಡ್**‌ನ್ನು ಸ್ಥಾಪಿಸಿ ಪೂರ್ವದೊಂದಿಗೆ ವ್ಯಾಪಾರ ಆರಂಭಿಸಿದರು.
- ಈ ಕಂಪನಿಯು 1605ರಲ್ಲಿ ಭಾರತದಲ್ಲಿ ತನ್ನ ಮೊದಲ ವ್ಯಾಪಾರ ಕೇಂದ್ರವನ್ನು **ಮಚಲೀಪಟ್ಟಣ**ದಲ್ಲಿ ಆರಂಭಿಸಿತು. ನಂತರ 1606ರಲ್ಲಿ ಪುಲಿಕಾಟ್, 1616ರಲ್ಲಿ ಸೂರತ್, ಕೊಚ್ಚಿ ಹಾಗೂ ಬಸ್ರೂರ್‌ಗಳಲ್ಲಿ ಮಳಿಗೆಗಳನ್ನು ಸ್ಥಾಪಿಸಿದರು. ಆರಂಭದಲ್ಲಿ **ಪುಲಿಕಾಟ್** ಡಚ್ಚರ ರಾಜಧಾನಿ ನಂತರ **ನಾಗಪಟ್ಟಣಂ** ರಾಜಧಾನಿಯಾಯಿತು.

ಡಚ್ಚರ ಪ್ರಮುಖ ವ್ಯಾಪಾರ ಕೇಂದ್ರಗಳು

1. ಮಚಲೀಪಟ್ಟಣ
2. ಪುಲಿಕಾಟ್
3. ಸೂರತ್
4. ಕೊಚ್ಚಿ
5. ಬಸ್ರೂರ್
6. ಸ್ಯಾಂತೋಮ್
7. ಸೆರಂಪುರ
8. ಚಿನ್ಸೂರ

- ಡಚ್ಚರು **1759ರ ಬೇದಾರ ಯುದ್ಧದಲ್ಲಿ** ಇಂಗ್ಲೀಷರಿಂದ ಸಂಪೂರ್ಣವಾಗಿ ಸೋತು ತಮ್ಮ ವ್ಯಾಪಾರಿ ಕೇಂದ್ರಗಳನ್ನು ಇಂಗ್ಲೀಷರಿಗೆ ಬಿಟ್ಟರು.

18.3 ಫ್ರೆಂಚರು (French)

- ಕ್ರಿ.ಶ. 1664ರಲ್ಲಿ ಫ್ರಾನ್ಸಿನ ರಾಜ 14ನೇ ಲೂಯಿಯ ಮಂತ್ರಿ **ಕೋಲ್ಬರ್ಟ್‌ನು French East Indian Company**ಯನ್ನು ಸ್ಥಾಪಿಸಿದನು. ಇದು ಸರ್ಕಾರಿ ಕಂಪನಿಯಾಗಿತ್ತು.
- ಫ್ರೆಂಚರು ಮೊದಲ ವ್ಯಾಪಾರ ಕೇಂದ್ರವನ್ನು ಕ್ರಿ.ಶ. 1668ರಲ್ಲಿ **ಸೂರತ್**‌ನಲ್ಲಿ (**ಫ್ರಾಂಕಾಯ್ಸ್ ಫೆಗಾನ್**‌ನಿಂದ) ಸ್ಥಾಪಿಸಿದರು. ನಂತರ ಕ್ರಿ.ಶ. 1669ರಲ್ಲಿ ಮಚಲೀಪಟ್ಟಣದಲ್ಲಿ ಮತ್ತೊಂದು ಮಳಿಗೆ ಸ್ಥಾಪಿಸಿದರು.
- ಫ್ರೆಂಚರು ನಂತರದಲ್ಲಿ ಕೋವಿಲಕೊಂಡದ ಸುಲ್ತಾನನಿಂದ **ಪಾಂಡಿಚೆರಿ** ಪಡೆದುಕೊಂಡರು. ಭಾರತದಲ್ಲಿ ಇದು ಫ್ರೆಂಚ್ ಕಂಪನಿಯ ಪ್ರಬಲ ಕೇಂದ್ರವಾಗಿ ಬೆಳೆಯಿತು. **ಫ್ರಾನ್ಸಿಸ್ ಮಾರ್ಟಿನ್** ಪಾಂಡಿಚೆರಿಯ ಮೊದಲ ಗೌರ್ನರ್ ಆದನು. ಇದು ಇಡೀ ಅವರ ವಸಾಹತುಗಳಿಗೆ ರಾಜಧಾನಿಯಾಗಿತ್ತು. ಪಾಂಡಿಚೆರಿಯಲ್ಲಿ **ಪೋರ್ಟ್ ಲೂಯಿಸ್** ಕೋಟೆಯನ್ನು ನಿರ್ಮಿಸಿದರು.
- ಆರಂಭದಲ್ಲಿ ಫ್ರೆಂಚ್ ಮತ್ತು ಡಚ್ಚರಿಗೆ ಯುದ್ಧಗಳಾಗಿ ಕ್ರಿ.ಶ. 1694ರಲ್ಲಿ **ಪಾಂಡಿಚೆರಿ**ಯನ್ನು ಡಚ್ಚರು ಗೆದ್ದುಕೊಂಡರು.
- ಕ್ರಿ.ಶ. 1742ರಲ್ಲಿ ಭಾರತದ ಫ್ರೆಂಚರ ಗೌರ್ನರ್ ಆಗಿ **ಡೂಪ್ಲೆ** ಬಂದನು. ಇವನು ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯ ನಿಜವಾದ ಸ್ಥಾಪಕನಾದನು.
- ಡೂಪ್ಲೆಯ ಮಹತ್ವಾಕಾಂಕ್ಷೆ ಯೋಜನೆಗಳಿಂದಾಗಿ ಫ್ರೆಂಚರು ಇಂಗ್ಲೀಷ್‌ರೊಂದಿಗೆ ಸೆಣಸುವಂತಾಯಿತು. ಅಂತಿಮವಾಗಿ ಇದು 03 ಕರ್ನಾಟಿಕ್ ಯುದ್ಧಗಳಿಗೆ ಕಾರಣವಾಯಿತು. ಕೊನೆಯಲ್ಲಿ ಈ ಯುದ್ಧಗಳಲ್ಲಿ ಫ್ರೆಂಚರು ಪರಾಭವ ಹೊಂದಿ ತಮ್ಮ ರಾಜಕೀಯ ಮಹತ್ವಾಕಾಂಕ್ಷೆ ಬಿಟ್ಟುಕೊಟ್ಟರು.
- ಸುಸಜ್ಜಿತ ಯೂರೋಪಿಯನ್ ತರಬೇತಿ ಪಡೆದ ಸಣ್ಣ ಸೈನ್ಯದಿಂದ ಭಾರತದ ದೊಡ್ಡ ಸೈನ್ಯವನ್ನು ಸೋಲಿಸುವುದು ಸುಲಭ ಎಂದು ಡೂಪ್ಲೆ ತೋರಿಸಿಕೊಟ್ಟನು.

ಫ್ರೆಂಚರ ಪ್ರಮುಖ ವ್ಯಾಪಾರ ಕೇಂದ್ರಗಳು

1. ಪಾಂಡಿಚೇರಿ
2. ಮಾಹೆ
3. ಕಾರೈಕಲ್
4. ಯುನಾನ್
5. ಚಂದ್ರನಾಗೂರ್

18.4 ಇಂಗ್ಲೀಷರು

- ಕ್ರಿ.ಶ. 1599ರಲ್ಲಿ ಖಾಸಗಿ **ಕೂಡು ಬಂಡವಾಳ ಸಂಸ್ಥೆಯಾಗಿ** ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ಆರಂಭವಾಯಿತು. ಕ್ರಿ.ಶ. 1600ರಲ್ಲಿ ಇಂಗ್ಲೆಂಡಿನ ರಾಣಿ 1ನೇ ಎಲಿಜೆಬತ್‌ಳಿಂದ ಈ ಕಂಪನಿ ಪೂರ್ವ ದೇಶದ ಜೊತೆ ವ್ಯಾಪಾರ ಮಾಡಲು ಅನುಮತಿ ಪಡೆಯಿತು. ಪ್ರತಿ 20 ವರ್ಷಕ್ಕೆ ಅನುಮತಿ ನವೀಕರಿಸಬೇಕಾಗಿತ್ತು ಇದನ್ನು **ಚಾರ್ಟರ್** ಎನ್ನುತ್ತಾರೆ.
- ಕ್ರಿ.ಶ. 1609ರಲ್ಲಿ ಕಂಪನಿಯು **ಕ್ಯಾಪ್ಟನ್ ಹಾಕಿನ್ಸ್‌**ನನ್ನು ಮೊಘಲ್ ದೊರೆ ಜಹಂಗೀರನ ಆಸ್ಥಾನಕ್ಕೆ ಹೋಗಿ ವ್ಯಾಪಾರಿ ಕೋಠಿಗಳನ್ನು ಸ್ಥಾಪಿಸಲು ಅನುಮತಿಗಾಗಿ ಕಳುಹಿಸಿತು. ಆದರೆ ಇವನು ಜಹಂಗೀರನಿಂದ ಅನುಮತಿ ಪಡೆಯಲು ವಿಫಲನಾದನು.
- ಹಾಕಿನ್ಸ್ ನಂತರ ಇಂಗ್ಲೆಂಡಿನ ದೊರೆ 1ನೇ ಚಾರ್ಲ್ಸ್‌ನು ಜಹಂಗೀರನ ಆಸ್ಥಾನಕ್ಕೆ **ಸರ್ ಥಾಮಸ್ ರೋ**ನನ್ನು ಇಂಗ್ಲೀಷ್ ರಾಯಭಾರಿಯಾಗಿ ಕ್ರಿ.ಶ. 1613ರಲ್ಲಿ ಕಳುಹಿಸಿದನು. ಇವನು ಜಹಂಗೀರನಿಂದ ಭಾರತದಲ್ಲಿ ವ್ಯಾಪಾರ ಕೋಠಿ ಸ್ಥಾಪಿಸಲು ಅನುಮತಿ ಪಡೆಯುವಲ್ಲಿ ಸಫಲನಾದನು.
- ಅದರಂತೆ ಕ್ರಿ.ಶ. **1613**ರಲ್ಲಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯು **ಸೂರತ್‌**ನಲ್ಲಿ ತನ್ನ ಮೊದಲ ವ್ಯಾಪಾರ ಕೇಂದ್ರ ಸ್ಥಾಪಿಸಿತು.
- ಕ್ರಿ.ಶ. 1668ರಲ್ಲಿ ಇಂಗ್ಲೆಂಡಿನ ದೊರೆ 2ನೇ ಚಾರ್ಲ್ಸ್‌ನಿಂದ ಕಂಪನಿ ವಾರ್ಷಿಕ 10 ಪೌಂಡುಗಳ ಬಾಡಿಗೆ ನೀಡಿ ಬಾಂಬೆಯ ನಿಯಂತ್ರಣ ಪಡೆದಿತ್ತು. ಮುಂದೆ ಬಾಂಬೆಯು ಕಂಪೆನಿಯ ಪಶ್ಚಿಮ ಕರಾವಳಿಯ ಕೇಂದ್ರವಾಗಿ ಬೆಳೆಯಿತು.
- ಕ್ರಿ.ಶ. 1639ರಲ್ಲಿ ಕಂಪನಿಯ ಅಧಿಕಾರಿ **ಫ್ರಾನ್ಸಿಸ್ ಡೇ,** ಚಂದ್ರಗಿರಿಯ ರಾಜನಿಂದ **ಮದ್ರಾಸ್‌**ನ್ನು ಗುತ್ತಿಗೆ ಪಡೆದು ಅಲ್ಲಿ ಕಂಪನಿಯು **ಪೋರ್ಟ್ ಸೆಂಟ್ ಜಾರ್ಜ್ ಕೋಟೆ** ನಿರ್ಮಿಸಿತು. ಕಂಪನಿಯ ಕೋರಮಂಡಲದ ತೀರವಾಗಿ ಮದ್ರಾಸ್ ಬೆಳೆಯಿತು.
- ನಂತರ ಕ್ರಿ.ಶ. 1690ರಲ್ಲಿ ಕಂಪನಿಯ ಅಧಿಕಾರಿ **ಜಾಬ್ ಚಾರ್ನೋಕ್** ಬಂಗಾಳದಲ್ಲಿ ಸತ್ನೌತಿ, ಗೋವಿಂದಪುರ ಮತ್ತು ಕ್ಯಾಲಿಕಟ್ ಎಂಬ 03 ಹಳ್ಳಿಗಳನ್ನು ಕೊಂಡುಕೊಂಡು ಅಲ್ಲಿ **ಕಲ್ಕತ್ತಾ ನಗರ** ನಿರ್ಮಿಸಿದನು.
- ಕಲ್ಕತ್ತಾದಲ್ಲಿ ಕಂಪನಿಯು **ಪೋರ್ಟ್ ವಿಲಿಯಂ ಕೋಟೆ**ಯನ್ನು ನಿರ್ಮಿಸಿತು. ಕ್ರಿ.ಶ. 1700ರಲ್ಲಿ **ಚಾರ್ಲ್ಸ್ ಐರ್ಸ್** ಇದರ ಮೊದಲ ಅಧ್ಯಕ್ಷನಾದನು.
- 1717ರಲ್ಲಿ ಕಲ್ಕತ್ತಾದ ಗೌರ್ನರ್ **ಜಾನ್ ಸುರ್‌ಮಾನ್** & ಕಂಪನಿಯ ಅಧಿಕಾರಿ ವಿಲಿಯಂ ಹ್ಯಾಮಿಲ್ಟನ್ ಮೊಘಲ್ ಬಾದ್‌ಷಾ ಫರೂಕ್ ಸಿಯಾರ್‌ನ ರೋಗವನ್ನು ಗುಣಪಡಿಸಿ ಆತನಿಂದ ಫರ್ಮಾನ್ (ಆದೇಶ) ಒಂದನ್ನು ಪಡೆದನು. ಈ ಫರ್ಮಾನ್ ಪ್ರಕಾರ ಕಂಪನಿ ತನ್ನ ಆಮದು ಮತ್ತು ರಫ್ತಿನ ಮೇಲೆ ಬಂಗಾಳ, ಬಿಹಾರ ಮತ್ತು ಒರಿಸ್ಸಾದಲ್ಲಿ ತೆರಿಗೆ ರಿಯಾಯ್ತಿ ಪಡೆದನು. 1717ರ ಫರೂಕ್ ಸಿಯಾರ್‌ನ ಫರ್ಮಾನನ್ನು ಭಾರತದಲ್ಲಿ EICಯ **ಮ್ಯಾಗ್ನಾಕಾರ್ಟ್** ಎನ್ನುತ್ತಾರೆ.
- ನಂತರ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಫ್ರೆಂಚ್ ಕಂಪನಿಯ ಪ್ರಬಲ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಆದರೆ ಇಂಗ್ಲೀಷ್ ಕಂಪನಿ 03 ಕರ್ನಾಟಕ ಯುದ್ಧಗಳಲ್ಲಿ ಫ್ರೆಂಚರನ್ನು ಸೋಲಿಸಿತು.

ಇಂಗ್ಲೀಷರ ಪ್ರಮುಖ ವ್ಯಾಪಾರ ಕೇಂದ್ರಗಳು

1. ಸೂರತ್	2. ಮುಂಬೈ
3. ಕಣ್ಣಾನೂರ್	4. ಮದ್ರಾಸ್
5. ಪುಲಿಕಾಟ್	6. ಆರ್ಮೆಕಾವ್
7. ವಿಶಾಖಪಟ್ಟಣ	8. ಪಿಪ್ಲಿಸ್
9. ಬಾಲಸೂರ್	10. ಕಲ್ಕತ್ತಾ
11. ಹೂಗ್ಲಿ	12. ಮಚಲೀಪಟ್ಟಣ

ಕಾರ್ನಾಟಿಕ್ ಯುದ್ಧಗಳು (CARNATIK WARS)

- ನಾದಿರ್‌ಷಾನ ದಾಳಿಯ ನಂತರ ಮೊಘಲ್ ಸಾಮ್ರಾಜ್ಯದ ದುರ್ಬಲತೆಯನ್ನು ಬಳಕೆ ಮಾಡಿಕೊಂಡ ಫ್ರೆಂಚ್ ಮತ್ತು ಇಂಗ್ಲೀಷರು ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸಲು ಯತ್ನಿಸಿದರು. ಇದರಿಂದ ಇಬ್ಬರ ನಡುವೆ ಯುದ್ಧಗಳಾದವು.

ಮೊದಲ ಕಾರ್ನಾಟಿಕ್ ಯುದ್ಧ (ಕ್ರಿ.ಶ. 1746-48)

- ದಕ್ಷಿಣ ಭಾರತದ ತಮಿಳುನಾಡಿನ ಕರಾವಳಿಯನ್ನು **'ಕಾರ್ನಾಟಿಕ್ ಪ್ರದೇಶ'** ಎಂದು ಕರೆಯುತ್ತಾರೆ. ಮೊದಲ ಕಾರ್ನಾಟಿಕ್ ಯುದ್ಧಕ್ಕೆ ಕಾರಣ ಕ್ರಿ.ಶ. 1740ರಲ್ಲಿ ಆರಂಭವಾದ ಆಸ್ಟ್ರಿಯಾದ ಉತ್ತರಾಧಿಕಾರತ್ವದ ಕದನ ಇದರಿಂದಾಗಿ ಭಾರತದಲ್ಲಿ ಎರಡು ಕಂಪನಿಗಳ ನಡುವೆ ಯುದ್ಧ ಆರಂಭವಾಯಿತು.
- ನೌಕಾಬಲದಲ್ಲಿ ಪ್ರಬಲರಾದ ಇಂಗ್ಲೀಷರು ಭಾರತದ ಆಗ್ನೇಯ ತೀರದಾಚೆ ಫ್ರೆಂಚರ ಹಡಗುಗಳನ್ನು (ಬರ್ನೆಟ್ ಎಂಬುವವನು) ಸೆರೆಹಿಡಿದರು. ಆಗ ಫ್ರೆಂಚ್ ಗೌರ್ನರ್ ಡೂಪ್ಲೆಯು ಕ್ರಿ.ಶ. 1746ರಲ್ಲಿ ಮದ್ರಾಸನ್ನು ವಶಪಡಿಸಿಕೊಂಡನು. ಆಗ ಇಂಗ್ಲೀಷರು ಮದ್ರಾಸ್ ಬಿಡಿಸಿಕೊಡುವಂತೆ ನವಾಬನನ್ನು ಕೋರಿದರು. ನವಾಬನ (ಅನ್ವರುದ್ದೀನ್) ಮನವಿ ತಿರಸ್ಕರಿಸಿದ ಡೂಪ್ಲೆಯು ಮದ್ರಾಸ್ ಮುತ್ತಿದ ನವಾಬನನ್ನು ಸೋಲಿಸಿದನು.
- ನೌಕಾ ಸೈನ್ಯದ ಮೂಲಕ ಇಂಗ್ಲೀಷರು **ಪಾಂಡಿಚೆರಿ**ಯನ್ನು ಸೆರೆಹಿಡಿಯಲು ಪ್ರಯತ್ನಿಸುವ ಹೊತ್ತಿಗೆ ಯೂರೋಪಿನಲ್ಲಿ ಕ್ರಿ.ಶ. 1748ರಲ್ಲಿ ಯುದ್ಧ ನಿಂತುಹೋಗಿ **'ಏಕ್ಸ್ ಲಾ ಚಾಪೆಲ್'** ಒಪ್ಪಂದವಾಯಿತು. ಇದರಿಂದ ಉಭಯ ಪಕ್ಷಗಳು ವಶಪಡಿಸಿದ್ದ ಪ್ರದೇಶಗಳನ್ನು ಹಿಂದಿರುಗಿಸಿದರು.

ಎರಡನೇ ಕಾರ್ನಾಟಿಕ್ ಯುದ್ಧ (1749-54)

- ರಾಜಕೀಯ ಪ್ರಭಾವ ಹೆಚ್ಚಿಸಲು ಫ್ರೆಂಚರು ಮತ್ತು ಇಂಗ್ಲೀಷರ ನಡುವೆ ಪೈಪೋಟಿ ಮುಂದುವರಿಯಿತು. ತಂಜಾವೂರಿನ ರಾಜನಾದ ಪ್ರತಾಪಸಿಂಗನ ವಿರುದ್ಧ ಪಿತೂರಿ ನಡೆಸಲು **ಶಹಾಜೀ** ಇಂಗ್ಲೀಷರ ಸಹಾಯ ಕೋರಿದನು. ಇದಕ್ಕೆ ಅವರು **ದೇವಿಕೊಟ್ಟೈ** ಎಂಬ ಊರು ಬಿಟ್ಟು ಕೊಡಬೇಕೆಂದರು. ಇಂಗ್ಲೀಷರು ತಾಂಜವೂರಿನ ಮೇಲೆ ದಾಳಿ ಮಾಡಿದಾಗ **ಪ್ರತಾಪಸಿಂಗನು** ಅವರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು ದೇವಿಕೊಟ್ಟೈ ಮತ್ತು ಅದರ ಸುತ್ತಲ ಜಾಗಗಳನ್ನು ಬಿಟ್ಟು ಕೊಟ್ಟನು.
- ಇದಕ್ಕಿಂತ ಮುಖ್ಯವಾಗಿ ಹೈದರಾಬಾದ್ ನಿಜಾಮ ಮತ್ತು ಕಾರ್ನಾಟಿಕ್ ನವಾಬ ಹುದ್ದೆಗಾಗಿ ನಡೆದ ಅಂತರ್ ಯುದ್ಧದೊಡನೆ ಸಂಬಂಧ ಹೊಂದಿತ್ತು.
- ಫ್ರೆಂಚ್ ಗೌರ್ನರ್ ಡೂಪ್ಲೆಯು ಹೈದರಾಬಾದ್ ನಿಜಾಮನ ಹುದ್ದೆಗಾಗಿ ಮುಜಾಫರ್ ಜಂಗನನ್ನು, ಕರ್ನಾಟಕದ ನವಾಬ ಹುದ್ದೆಗಾಗಿ ಚಂದಾಸಾಹೇಬನನ್ನು ಬೆಂಬಲಿಸಿದನು.
- ಇಂಗ್ಲೀಷರು ಇವರ ಪ್ರತಿಸ್ಪರ್ಧಿಗಳಾದ ನಾಸಿರ್‌ಜಂಗ್ ಅನ್ವರುದ್ದೀನ್ ಮತ್ತು ಮಹ್ಮದ್ ಆಲಿಯನ್ನು ಬೆಂಬಲಿಸಿದರು. ಆರಂಭದಲ್ಲಿ ಫ್ರೆಂಚರ ಅಭ್ಯರ್ಥಿಗಳು ಎರಡು ಕಡೆಗಳಲ್ಲಿ ಅಧಿಕಾರ ಪಡೆದರು.
- ನಂತರ ಕ್ರಿ.ಶ. 1751ರಲ್ಲಿ ಆರ್ಕಾಟನ್ನು **ರಾಬರ್ಟ್‌ಕ್ಲೈವ್** ವಶಪಡಿಸಿಕೊಂಡಿದ್ದರಿಂದ ಯುದ್ಧದ ಗತಿ ಬದಲಾಗಿ ಕೊನೆಗೆ ಫ್ರೆಂಚರು ಸೋತು ಇಂಗ್ಲೀಷ್ ಬೆಂಬಲಿತ ಅಭ್ಯರ್ಥಿಗಳು ಪದವಿಗೇರಿದರು.
- ಈ ಯುದ್ಧದಲ್ಲಿ ಬ್ರಿಟಿಷರು ಚಂದಾಸಾಹೇಬ್‌ನನ್ನು ಕೊಲೆ ಮಾಡಿದರು. ಈ ಮಧ್ಯೆ ಕ್ರಿ.ಶ. 1754ರಲ್ಲಿ ಫ್ರೆಂಚ್ ಸರ್ಕಾರ ಡೂಪ್ಲೆಯನ್ನು ವಾಪಾಸ್ ಕರೆಸಿಕೊಂಡಿತು. ನಂತರ ಕ್ರಿ.ಶ. 1754ರಲ್ಲಿ **ಪಾಂಡಿಚೇರಿ ಒಪ್ಪಂದದ** ಮೂಲಕ ಯುದ್ಧ ಕೊನೆಗೊಂಡಿತು.

3ನೇ ಕಾರ್ನಾಟಿಕ್ ಯುದ್ಧ (1756-61)

- ಕಾರಣ:- ಕ್ರಿ.ಶ. 1756ರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ನಡೆದಂತಹ ಸಪ್ತವಾರ್ಷಿಕ ಯುದ್ಧದ (1756-63) ಫಲವಾಗಿ 3ನೇ ಕಾರ್ನಾಟಿಕ್ ಯುದ್ಧವು ಆರಂಭವಾಯಿತು. ಇಂಗ್ಲೀಷರು ಪಾಂಡಿಚೇರಿಯನ್ನು ಆಕ್ರಮಿಸಿ ಭಾರತದಲ್ಲಿ ಫ್ರೆಂಚ್ ಪ್ರಾಬಲ್ಯಕ್ಕೆ ಪೆಟ್ಟು ನೀಡಿದರು.
- ಫ್ರೆಂಚ್ ಸರ್ಕಾರ ಇಂಗ್ಲೀಷರ ಪ್ರಾಬಲ್ಯ ಮುರಿಯಲು ಭಾರತಕ್ಕೆ **ಕೌಂಟ್-ಡಿ-ಲ್ಯಾಲಿಯನ್ನು** ಗೌರ್ನರ್ ಆಗಿ ನೇಮಿಸಿತು. ಇವನು ಮದ್ರಾಸ್‌ಗೆ ಮುತ್ತಿಗೆ ಹಾಕಲು ನಿಶ್ಚಯಿಸಿದನು. ಹೈದರಾಬಾದ್‌ನಿಂದ **ಕ್ಯಾಪ್ಟನ್** ಬುಸ್ಸಿಯನ್ನು ಹಿಂದಕ್ಕೆ ಕರೆಸಿಕೊಂಡನು. ಇದು ಅವನ ತಪ್ಪು ನಿರ್ಧಾರವಾಯಿತು.
- ಆದರೆ ಅಂತಿಮವಾಗಿ **1760ರಲ್ಲಿ ವಾಂಡಿವಾಷ್ ಯುದ್ಧವಾಗಿ** ಫ್ರೆಂಚರ ಯುದ್ಧ ನಡೆದು ಫ್ರೆಂಚರು ಸೋತರು.
- ಈ ವೇಳೆಗೆ ಯೂರೋಪಿನಲ್ಲಿ ಸಪ್ತವಾರ್ಷಿಕ ಯುದ್ಧಗಳು ಕೊನೆಗೊಂಡು **ಪ್ಯಾರಿಸ್ ಒಪ್ಪಂದವಾಯಿತು**. ಅದರ ನಿಬಂಧನೆಗಳ ಮೇರೆಗೆ ಇಂಗ್ಲೀಷರು **ಪಾಂಡಿಚೆರಿ** ಮತ್ತು **ಚಂದ್ರನಾಗೂರ್** ಪ್ರದೇಶಗಳನ್ನು ಫ್ರೆಂಚರಿಗೆ ಹಿಂದಿರುಗಿಸಿದರು.

ಫ್ರೆಂಚರ ಅವನತಿಗೆ ಕಾರಣಗಳು

1. ವ್ಯಾಪಾರ ನಿರ್ಲಕ್ಷಿಸಿ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದುದು.
2. ಫ್ರೆಂಚ್ ಕಂಪನಿ ಬಹುತೇಕ ಸರ್ಕಾರಿ ಕಂಪನಿಯಾಗಿತ್ತು.
3. ನೌಕಾಪಡೆ, ನಾಯಕತ್ವ ಮತ್ತು ಉಪಕರಣಗಳ ಕೊರತೆ.

18.5 ಡೇನ್ಸರು (Denishs)

- ಡೇನ್ಸರು ತಮ್ಮ ಮೊದಲ ವ್ಯಾಪಾರ ಕೇಂದ್ರ ತಮಿಳುನಾಡಿನ **ಟ್ರ್ಯಾಂಕುಬಾರ್** ಎಂಬಲ್ಲಿ ಕ್ರಿ.ಶ. 1616ರಲ್ಲಿ ಸ್ಥಾಪಿಸಿದರು. ಬಂಗಾಳದ **ಸೇರಾಂಪುರ** ಇವರ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು.
- ಇವರು ಭಾರತದಲ್ಲಿದ್ದ ತಮ್ಮ ಎಲ್ಲಾ ವ್ಯಾಪಾರ ಕೇಂದ್ರಗಳನ್ನು ಇಂಗ್ಲೀಷರಿಗೆ ಮಾರಿದರು. ಇವರು ರಾಜಕೀಯ ಮತ್ತು ವ್ಯಾಪಾರಕ್ಕಿಂತ ಮತಾಂತರದಲ್ಲಿ ಆಸಕ್ತಿ ಹೊಂದಿದ್ದರು.
- ಸ್ವಿಡೀಸ್ ಇವರು ಭಾರತಕ್ಕೆ ಆಗಾಗ ಬರುತ್ತಿದ್ದರು. ಚೀನಾದೊಂದಿಗೆ ಮಹತ್ವದ ವ್ಯಾಪಾರವನ್ನು ಹೊಂದಿದ್ದರು.

19. ಮರಾಠರು (Maratas)

- ವಿಜಯನಗರ ಸಾಮ್ರಾಜ್ಯದ ಪತನಾ ನಂತರ ಮುಸ್ಲಿಂರ ವಿರುದ್ಧ ತಲೆ ಎತ್ತಿದವರು ಮರಾಠರು. ಇವರು ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ (ಯಾದವರ ರಾಮಚಂದ್ರ ದೇವನ ಪತನಾ ನಂತರ) ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು. ನಂತರ 17ನೇ ಶತಮಾನದಲ್ಲಿ ಅವರು ಶಿವಾಜಿಯ ನಾಯಕತ್ವದಲ್ಲಿ ರಾಷ್ಟ್ರೀಯ ರಾಜ್ಯವಾಗಿ ಸಂಘಟಿತರಾದರು.
- ಮರಾಠರಲ್ಲಿ ಜಾಗೃತಿ ಮೂಡಿಸಿದ ಸಾಧು ಸಂತರೆಂದರೆ ಏಕನಾಥ, ತುಕರಾಮ, ರಾಮದಾಸ, ನಾಮದೇವ ಮತ್ತು ವಾಮನ ಪಂಡಿತ ಮೊದಲಾದ ಮರಾಠಿ ಸುಧಾರಕರು.
- ಶಿವಾಜಿಯ ಗುರು ರಾಮದಾಸ ಇವರ ಕೃತಿ ದಾಸಬೋದವಾಗಿದೆ.
- ಧಾರ್ಮಿಕ ಸುಧಾರಕರ ದೇವರ ನಾಮಗಳು ಮರಾಠಿ ಭಾಷೆಯಲ್ಲಿ ರಚನೆಯಾಗಿದ್ದರಿಂದ ಮರಾಠಿ ಸಾಹಿತ್ಯ ಅಭಿವೃದ್ಧಿಗೊಂಡಿತು.
- ಶಿವಾಜಿಯ ತಂದೆ ಷಹಾಜ್ ಬೋನ್‌ಸ್ಲೆಯು ಬಿಜಾಪುರ ಮತ್ತು ಅಹ್ಮದ್‌ನಗರದ ಆಡಳಿತದಲ್ಲಿ ಜಹಗೀರುದಾರ ಹಾಗೂ ಸೈನ್ಯದ ದಂಡನಾಯಕನಾಗಿದ್ದನು.

ಮರಾಠ ಇತಿಹಾಸದ 2 ಭಾಗಗಳು

1. 17ನೇ ಶತಮಾನದ ಉತ್ತರಾರ್ಧದಿಂದ ಔರಂಗಜೇಬನ ಮರಣದವರೆಗೆ, (ಶಿವಾಜಿ, ಸಾಂಬಾಜಿ, ರಾಜರಾಮ್ ಮತ್ತು ತಾರಾಬಾಯಿ)
2. ಪೇಶ್ವೆಗಳ ಆಳ್ವಿಕೆಯ ಕಾಲ.

ಷಹಾಜಿ ಬೋನ್‌ಸ್ಲೆ (Shahjibhonsle):– ಬೋನ್‌ಸ್ಲೆಯು ಬಿಜಾಪುರದ ಆದಿಲ್‌ಷಾನ ಸೇನೆಯಲ್ಲಿ ಸೇವೆ ಸಲ್ಲಿಸಿದ ಫಲವಾಗಿ ಪುಣೆ ತರುವಾಯ ಬೆಂಗಳೂರನ್ನು ಜಹಗೀರಾಗಿ ಪಡೆದನು.

ಶಿವಾಜಿ (ಕ್ರಿ.ಶ.1627–80) (Shivaji)

- ಶಿವಾಜಿಯು ಶಿವನೇರುದುರ್ಗದಲ್ಲಿ 1627ರಲ್ಲಿ ಷಹಾಜಿ ಬೋನ್‌ಸ್ಲೆ ಮತ್ತು ಜೀಜಾಬಾಯಿಯ ಪುತ್ರನಾಗಿ ಜನಿಸಿದನು. ಇವನ ನೆಚ್ಚಿನ ಗುರು ದಾದಾಜಿ ಕೊಂಡದೇವ.
- ಶಿವಾಜಿಯ ಮೇಲೆ ಪ್ರಭಾವ ಬೀರಿದ ಪ್ರಮುಖ ಸಂತರೆಂದರೆ ರಾಮದಾಸ ಮತ್ತು ತುಕಾರಾಮರು. ಶಿವಾಜಿಯು ರಾಮದಾಸರನ್ನು ತನ್ನ ಮಾರ್ಗದರ್ಶಕರೆಂದು ಭಾವಿಸಿದ್ದನು.
- ಮಾವಾಳಿಗಳೆಂಬ ಗುಡ್ಡಗಾಡಿನ ಜನರು ಗೆರಿಲ್ಲಾ ಯುದ್ಧ ತಂತ್ರದಲ್ಲಿ ಪ್ರವೀಣರಾಗಿಯೇ ಶಿವಾಜಿಯ ಹಲವಾರು ಯೋಜನೆಗಳಿಗೆ ಸಹಾಯ ಮಾಡಿದರು ಮತ್ತು ಮಾವಳಿಗಳು ಅವನ ಸೈನಿಕರಾದರು ಮತ್ತು ಅವನ ನೆಚ್ಚಿನ ಸಂಗಡಿಗರಾಗಿದ್ದರು.
- 1653ರಲ್ಲಿ ಮಹಾರಾಷ್ಟ್ರದ ಸಂಪದ್ಭರಿತವಾದ ಕಲ್ಯಾಣ ಬಂದರನ್ನು ಆಕ್ರಮಿಸಿದನು.
- ಶಿವಾಜಿಯು 1646ರಲ್ಲಿ ಬಿಜಾಪುರ ಸುಲ್ತಾನನ ಅನಾರೋಗ್ಯವನ್ನು ಹಾಗೂ ಪ್ರತಾಪಗಡ ಕೋಟೆಗಳನ್ನು ವಶಪಡಿಸಿಕೊಂಡನು.
- ಶಿವಾಜಿಯು ರಾಯಗಢಕ್ಕೆ ಕೋಟೆ ಕಟ್ಟಿದ್ದನು. 1649–1655ರವರೆಗೆ ರಾಜ್ಯ ವಿಸ್ತರಣೆಯ ಕಾರ್ಯವನ್ನು ಕೈಗೊಳ್ಳದೆ ಸುಸಂಘಟಿತ ಆಡಳಿತ ಕ್ರಮ ಜಾರಿಗೊಳಿಸಲು ಪ್ರಯತ್ನಿಸುತ್ತಿದ್ದನು.
- 1656ರಲ್ಲಿ ಜಾವಳಿ ಎಂಬ ಸಣ್ಣ ಮರಾಠಿ ರಾಜ್ಯವನ್ನು ಮರಾಠಿ ಚಂದ್ರರಾವ್ ಮೋರೆಯನ್ನು ಕೊಲ್ಲಿಸುವ ಮೂಲಕ ವಶಪಡಿಸಿಕೊಂಡನು.
- ಬಿಜಾಪುರದ ಸೇನೆಯು ಮೊಗಲ್ ಸೇನಾನಿ ಅಫ್ಜಲ್‌ಖಾನ್‌ನ ನಾಯಕತ್ವದಲ್ಲಿ ಶಿವಾಜಿಯ ರಾಜ್ಯದ ಮೇಲೆ ದಾಳಿ ಮಾಡಿ ಶಿವಾಜಿಗೆ ಸೇರಿದ್ದ ಪ್ರದೇಶಗಳನ್ನು ಲೂಟಿ ಮಾಡಿದರು. ಈ ವೇಳೆಯಲ್ಲಿ ಶಿವಾಜಿಯು ಪ್ರಬಲವಾದ ಪ್ರತಾಪಗಢದ ಕೋಟೆಯಲ್ಲಿ ರಕ್ಷಣೆ ಪಡೆದನು.
- 1660ರಲ್ಲಿ ಶಿವಾಜಿ ಪಶ್ಚಿಮ ಕರಾವಳಿಯ ಸಿದ್ದಿಗಳನ್ನು ಸೋಲಿಸಿ **ಪನ್ನಹರ** ಅಕ್ರಮಿಸಿದನು.
- ಮರಾಠ ಬ್ರಾಹ್ಮಣ ಕೃಷ್ಣಾಜಿ ಭಾಸ್ಕರನ ಮೂಲಕ ಶಿವಾಜಿ ಸಂಧಾನ ನಡೆಸಲು ಮುಂದಾದನು. ಶಿವಾಜಿಯು ವ್ಯಾಘ್ರನಖಿ (ಹುಲಿಯ ಉಗುರು) ಎಂಬ ಆಯುಧದಿಂದ ಮತ್ತು ಕುತಂತ್ರದಿಂದ ಅಫ್ಜಲ್‌ಖಾನ್‌ನನ್ನು ಕೊಂದನು.
- ಔರಂಗಜೇಬನು ನಂತರ ಶಿವಾಜಿಯನ್ನು ಹತ್ತಿಕ್ಕಲು ಸೋದರ ಮಾವನಾದ ಷಯಿಸ್ತಾಖಾನ್‌ನನ್ನು ದಖ್ಖನ್ನಿನ ರಾಜ್ಯಪಾಲನಾಗಿ ನೇಮಿಸಿದನು. 1663ರಲ್ಲಿ ದಖ್ಖನ್ ಮೇಲೆ ದಾಳಿ ಮಾಡಿದ ಷಹಿಸ್ತಾಖಾನನು ಪುಣೆಯಲ್ಲಿ ಬೀಡುಬಿಡುವ ವೇಳೆ ರಾತ್ರಿ ವೇಳೆಯಲ್ಲಿ ಶಿವಾಜಿಯು ಹಠಾತ್ತನೆ ದಾಳಿ ಮಾಡಿ ಷಹಿಸ್ತಾಖಾನನ ಬೆರಳುಗಳನ್ನು ತುಂಡರಿಸಿದನು.
- ಶಿವಾಜಿಯು ನಂತರ 1664ರಲ್ಲಿ ಮೊಗಲರ ಸೂರ್ ಮತ್ತು ಅಹ್ಮದ್ ನಗರಗಳನ್ನು ಕೊಳ್ಳೆ ಹೊಡೆದನು. ಔರಂಗಜೇಬನು 1665ರಲ್ಲಿ ಶಿವಾಜಿಯನ್ನು ಮಣಿಸಲು ದಿಲೀಪ್‌ಖಾನ್ ಮತ್ತು ಅಂಬರದ ದೊರೆ ರಾಜ ಜೈಸಿಂಗನನ್ನು ಕಳುಹಿಸಿದನು. ಜೈಸಿಂಗನು ಬಿಜಾಪುರ ಸುಲ್ತಾನನೊಡನೆ ಒಪ್ಪಂದ ಮಾಡಿಕೊಂಡು ಪುರಂದರ ಕೋಟೆಯನ್ನು ವಶಪಡಿಸಿಕೊಂಡನು.
- ಶಿವಾಜಿ ತನ್ನ ರಾಜ್ಯ ರಕ್ಷಣೆಗಾಗಿ 1665ರಲ್ಲಿ ಜೈಸಿಂಗನೊಡನೆ ಪುರಂದರ ಒಪ್ಪಂದ ಮಾಡಿಕೊಂಡನು ಜೈಸಿಂಗನು ಶಿವಾಜಿಯನ್ನು ಆಗ್ರಾಕ್ಕೆ ಬರಲು ಮನವೊಲಿಸಿದನು. 1666ರಲ್ಲಿ ಶಿವಾಜಿಯು ತನ್ನ ಮಗ ಸಾಂಬಾಜಿಯೊಡನೆ ಆಗ್ರಾಕ್ಕೆ ಹೋದನು. ಇಲ್ಲಿ ಬಂಧನಕ್ಕೊಳಗಾದ ಶಿವಾಜಿಯು 1668ರ ನವೆಂಬರ್‌ನಲ್ಲಿ ರಾಯಘಡ ತಲುಪಿದನು.
- ದಖ್ಖನ್ನಿನ ಮೊಗಲ್ ರಾಜ್ಯಪಾಲ ಮುಅಜಮ್‌ನು ಶಿವಾಜಿ ಯೊಡನೆ ಶಾಂತಿಯುತ ಮತ್ತು ಸೌಹಾರ್ದಯುತ ನೀತಿಯನ್ನು

ಆಳವಡಿಸಿಕೊಂಡನು.

- ಔರಂಗಜೇಬನು ಶಿವಾಜಿಗೆ **ರಾಜ** ಎಂಬ ಬಿರುದು ನೀಡಿದನು. ಅವನ ಮಗ ಸಾಂಬಾಜಿಯನ್ನು 5000 ಸೈನಿಕ ಮನ್ಸಬ್‌ದಾರನನ್ನಾಗಿ ಮಾಡಿ ಬೀರಾರನ್ನು ಜಹಗೀರಾಗಿ ನೀಡಿದನು.
- ಶಿವಾಜಿಯು ಕ್ರಿ.ಶ.1674ರಲ್ಲಿ ರಾಯಗಡದಲ್ಲಿ ಸಕಲ ರಾಜ್ಯ ವೈಭವಗಳೊಂದಿಗೆ ಪಟ್ಟಾಭಿಷೇಕ ಮಾಡಿಕೊಂಡು **ಛತ್ರಪತಿ** (ರಾಜ ರಾಜ) ಎಂಬ ಬಿರುದನ್ನು ಧರಿಸಿದನು.
- 1677ರಲ್ಲಿ ಗೋಲ್ಕಂಡ ಸುಲ್ತಾನನೊಂದಿಗೆ ಸ್ನೇಹ ಮಾಡಿಕೊಂಡು ಬಿಜಾಪುರಕ್ಕೆ ಸೇರಿದ್ದ ಜಿಂಜಿ, ವೆಲ್ಲೂರು, ತಂಜಾವೂರು ಮತ್ತು ಕರ್ನಾಟಕದ ಕೆಲವು ಪ್ರದೇಶಗಳನ್ನು ಗೆದ್ದನು.
- ಶಿವಾಜಿಯು ಕ್ರಿ.ಶ.1680ರಲ್ಲಿ ಮರಣ ಹೊಂದಿದನು.
- ಶಿವಾಜಿಯ ಸಮಕಾಲೀನ ಮೈಸೂರಿನ ಅರಸ ಚಿಕ್ಕದೇವರಾಜ ಒಡೆಯರ್.

ಶಿವಾಜಿಯ ಆಡಳಿತ ಕ್ರಮ (Shivajis Administration)

- ಶಿವಾಜಿಯ ರಾಜ್ಯವು ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡುಗಳ ಪ್ರಾಂತ್ಯಗಳಿಂದ ಕೂಡಿತ್ತು. ಈತನ ಸಾಮ್ರಾಜ್ಯದ 2 ಭಾಗಗಳೆಂದರೆ ಸ್ವರಾಜ್ಯ ಅಥವಾ ಮುಲ್ಕ – ಇ – ಕದಮ್ (ನೇರ ಆಡಳಿತ) ಮತ್ತು ಚೌತ್ ನೀಡುವ ಆಶ್ರಿತ ರಾಜ್ಯಗಳು.
- ಶಿವಾಜಿಯು ಉರ್ದು ಮತ್ತು ಪರ್ಷಿಯನ್ ಭಾಷೆಯ ಬದಲಿಗೆ ಮರಾಠಿ ಭಾಷೆಯನ್ನು ಆಡಳಿತ ಭಾಷೆಯಾಗಿ ಜಾರಿಗೆ ತಂದನು. ಇದಕ್ಕಾಗಿ **'ರಾಜ ವ್ಯವಹಾರ ಕೋಶ'** ಎಂಬ ನಿಘಂಟನ್ನು ಸಿದ್ಧಪಡಿಸಿದ್ದನು.

ಕೇಂದ್ರ ಸರ್ಕಾರ (Central Administration)

- **ಅಷ್ಟಪ್ರಧಾನರೆಂಬ** 8 ಜನ ಮಂತ್ರಿಗಳು ಆಡಳಿತದಲ್ಲಿ ಸಹಾಯ ನೀಡುತ್ತಿದ್ದರು.

1. **ಪೇಶ್ವೆ (ಪಂತ್‌ಪ್ರಧಾನ್/ಮುಖ್ಯಪ್ರಧಾನ್/ಪ್ರಧಾನಮಂತ್ರಿ):** ಇವನು ಎಲ್ಲಾ ಆಡಳಿತಗಳ ಮೇಲ್ವಿಚಾರಕ ರಾಜ್ಯ ಹಿತಾಸಕ್ತಿ ಮತ್ತು ಸಾರ್ವತ್ರಿಕ ಅಬ್ಯುದಯವನ್ನು ನೋಡಿಕೊಳ್ಳುತ್ತಿದ್ದನು.
2. **ಅಮಾತ್ಯ (ಮಜುಂದಾರ):** ವಿತ್ತ ಮಂತ್ರಿ ಮತ್ತು ಸಾರ್ವಜನಿಕ ಲೆಕ್ಕಪತ್ರಗಳನ್ನು ಪರಿಶೀಲಿಸುತ್ತಿದ್ದನು.
3. **ಮಂತ್ರಿ (ವಖಿಯಾನಿಸ್):** ರಾಜನ ದೈನಂದಿನ ಕಾರ್ಯಗಳ ಮತ್ತು ಅವನ ಆಸ್ಥಾನದ ಕಾರ್ಯಕಲಾಪಗಳ ದಾಖಲೆಯಿಡುತ್ತಿದ್ದನು.
4. **ಸುಮಂತ(ದಾಬಿರ್):** ವಿದೇಶಾಂಗ ವ್ಯವಹಾರದ ಕಾರ್ಯದರ್ಶಿಯಾಗಿದ್ದು ರಾಜನಿಗೆ ಯುದ್ಧ ಮತ್ತು ಶಾಂತಿ ಸನ್ನಾಹಗಳ ಬಗ್ಗೆ ಸಲಹೆ ನೀಡುತ್ತಿದ್ದನು.
5. **ಸಚಿವ/ಗೃಹ ಕಾರ್ಯದರ್ಶಿ:** ರಾಜನ ಪತ್ರ ವ್ಯವಹಾರ ನೋಡಿಕೊಳ್ಳುತ್ತಿದ್ದನು. ಅವನು ಪರಗಣಗಳ ಲೆಕ್ಕಪತ್ರಗಳ ತನಿಖೆ
6. **ಪಂಡಿತರಾವ್:** ದಂಡಾಕನು ಮತ್ತು ರಾಜಪುರೋಹಿತನಾಗಿದ್ದು ರಾಜನಿಗೆ ಧಾರ್ಮಿಕ ವಿಷಯಗಳ ಬಗ್ಗೆ ಸಲಹೆ ನೀಡುತ್ತಿದ್ದನು.
7. **ಸೇನಾಪತಿ:** ಪ್ರಧಾನ ದಂಡನಾಯಕ ಮತ್ತು ಸೈನ್ಯಾಧಿಕಾರಿಯಾಗಿದ್ದು ಸೈನ್ಯದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು.
8. **ನ್ಯಾಯಾಧೀಶ:** ಪ್ರಮುಖ ನ್ಯಾಯಮೂರ್ತಿ ಮತ್ತು ಪೌರ ಸೈನಿಕ ಆಡಳಿತದ ಮುಖ್ಯ ಭಾಗವಾಗಿದ್ದನು.

ಪ್ರಾಂತೀಯ ಸರ್ಕಾರ

- ಶಿವಾಜಿಯು ಸಾಮ್ರಾಜ್ಯವನ್ನು ಸ್ವರಾಜ್ಯ ಎಂದು ಕರೆಯುತ್ತಿದ್ದನು
- ಸಾಮ್ರಾಜ್ಯ→ ಪ್ರಾಂತ್ಯ (ನಿರ್ದೇಶಾಯಿ) → ಜಿಲ್ಲೆಗಳಾಗಿ →ಪರ್ಗಣ/ತರ್ಫ್‌ಗಳಾಗಿ→ ಗ್ರಾಮಗಳಾಗಿ ವಿಂಗಡಿಸಿದ್ದನು.
- ಸಾಮ್ರಾಜ್ಯದ ಮುಖ್ಯಸ್ಥ ರಾಜ, ಪ್ರಾಂತ್ಯಗಳಲ್ಲಿ ಪ್ರಾಂತ್ಯಾಧಿಕಾರಿ, ಜಿಲ್ಲೆಗಳಲ್ಲಿ ಮುಖ್ಯ ದೇಶಾಧಿಕಾರಿ, ಪರ್ಗಣಗಳಲ್ಲಿ ಅವಲ್ದಾರ ಮತ್ತು ಗ್ರಾಮಗಳಲ್ಲಿ ಪಟೇಲನು ಪ್ರಮುಖರಾಗಿದ್ದರು.

ಕಂದಾಯ ಪದ್ಧತಿ

- **ಕಠಿ** ಭೂ ಮಾಪನ ದಂಡ ಉಪಯೋಗಿಸಲಾಗುತ್ತಿತ್ತು.
- ಶಿವಾಜಿಯು ಅಹ್ಮದ್ ನಗರದ ಮಲ್ಲಿಕ್ ಅಂಬರನ ಕಂದಾಯ ಪದ್ಧತಿ ಅನುಸರಿಸಿದ್ದನು. ಕಂದಾಯ ವಸೂಲಿಗೆ ಪ್ರಾಂತ್ಯಗಳಲ್ಲಿ ಸುಬೇದಾರ, ಕಾರಕೂನ/ದೇಶಾಧಿಕಾರಿಗಳಿದ್ದರು.
- ಕಂದಾಯವು ಒಟ್ಟು ಉತ್ಪನ್ನದ **ಶೇ30%** ರಿಂದ 40% ಕ್ಕೆ ಶಿವಾಜಿಯು ಏರಿಸಿದನು.
- **ಚೌತ್ ಮತ್ತು ಸರ್ದೇಶ್ ಮುಖ್** : ಚೌತ್ – ಶತ್ರುಗಳಿಂದ ಮತ್ತು ತಾವು ಗೆದ್ದ ಪ್ರದೇಶಗಳಿಂದ ಸಂಗ್ರಹಿಸುತ್ತಿದ್ದ ಕಪ್ಪವಾಗಿದೆ. **ಸರ್ದೇಶ್‌ಮುಖ್:** ಸ್ವಂತ ರಾಜ್ಯದಲ್ಲಿ ಈ ದರ ನಿಗಧಿ ಮಾಡಿದ್ದರು.
- ಗುಡ್ಡಗಾಡು ಪ್ರದೇಶಗಳಿಂದ ಹೆಚ್ಚಿನ ಭೂ ಕಂದಾಯ ಸಂಗ್ರಹವಾಗುತ್ತಿರಲಿಲ್ಲ. ಇದಕ್ಕಾಗಿ ತನ್ನ ಅಧೀನ ಪ್ರಾಂತ್ಯಗಳು, ಬಿಜಾಪುರ ಮತ್ತು ಮೊಗಲ್ ಪ್ರಾಂತ್ಯಗಳ ಮೂಲಕ ಚೌತ್ ಮತ್ತು ಸರ್ದೇಶ್ ಮುಖ್ ಎಂಬ ಮಿಲಿಟರಿ ತೆರಿಗೆಗಳನ್ನು ವಿಧಿಸಿದ್ದನು. ಈ ತೆರಿಗೆಗಳು ಕ್ರಮವಾಗಿ 1/4 ಮತ್ತು 1/10 ಭಾಗಗಳಾಗಿದ್ದವು.
- ಚೌತ್ ವಿಧಿಸುವ ಪದ್ಧತಿ ಹೊಸದಾಗಿರದೆ ಪಶ್ಚಿಮ ಭಾರತದಲ್ಲಿ ಜಾರಿಯಲ್ಲಿದ್ದ ರಾಮನಗರದ ರಾಜನು ಜಮೀನಿನ ಮೇಲೆ ಪೋರ್ಚುಗೀಸ್ ಪ್ರಜೆಗಳಿಂದ ತೆರಿಗೆ ವಸೂಲಿ ಮಾಡುತ್ತಿದ್ದನು.

ಸೈನ್ಯಾಡಳಿತ

- ಶಿವಾಜಿಯು **ನೌಕಾಪಡೆಗೆ ಬೇಕಾದ ನಾವಿಕರನ್ನು ಬೊಂಬಾಯಿಯ ಕರಾವಳಿಯ ಕೆಳ ವರ್ಗದ ಹಿಂದೂಗಳಿಂದ** ಆಯ್ಕೆ ಮಾಡಿಕೊಳ್ಳುತ್ತಿದ್ದನು. ಇದು ಬ್ರಿಟಿಷ್, ಫ್ರೆಂಚ್ ಮತ್ತು ಡಚ್ಚರಿಗೆ ಸಾಕಷ್ಟು ತೊಂದರೆಯನ್ನುಂಟು ಮಾಡಿತು ಮತ್ತು ಇದು

- ಅಶ್ವದಳಕ್ಕೆ ಪ್ರಾಧಾನ್ಯತೆ ನೀಡಲಾಗಿತ್ತು ಇದರ 2 ಭಾಗಗಳೆಂದರೆ **ಭಾಗೀರ್** : ಸರ್ಕಾರದಿಂದ ಪೋಷಿಸಲ್ಪಡುವ ಅಶ್ವದಳ. ಹಾಗೂ **ಸಿಲ್ಹಾದಾರ್** : ತಾವೇ ಸ್ವತಃ ಕುದುರೆಗಳನ್ನು ಹೊಂದಿ ಅದರ ಪೋಷಣೆಗೆ ಬೇಕಾದ ನೆರವನ್ನು ಸರ್ಕಾರದಿಂದ ಪಡೆಯುತ್ತಿದ್ದ ಅಶ್ವಪಡೆ.
- 25 ರಾವುತರ ತಂಡದ ನಾಯಕ – ಹವಾಲ್ದಾರ
- 05 ಹವಾಲ್ದಾರರ ಮೇಲೆ ಒಬ್ಬ – ಜುಮ್ಲಾದಾರ
- 10 ಜುಮ್ಲಾದಾರರ ಮೇಲೆ ಒಬ್ಬ – ಹಜಾರಿ
- ಹಜಾರಿಗಳ ಮೇಲ್ವಿಚಾರಕ ಪಾಂಜಹಜಾರಿ ಮತ್ತು ಸುರ್ತೋಬತ್ ಅಥವಾ ಮಹಾದಂಡನಾಯಕ.
- ಗೆರಿಲ್ಲಾಯುದ್ಧ – ಬೆಟ್ಟಗುಡ್ಡಗಳಲ್ಲಿ ಅವಿತುಕೊಂಡು ಯುದ್ಧ ಮಾಡುವುದಾಗಿದೆ.

ಸಾಂಬಾಜಿ(1680–1689) (Sambhaji)

- ಶಿವಾಜಿಯ ಹಿರಿಯ ಮಗ ಸಾಂಬಾಜಿ ಸಂಗಮೇಶ್ವರದಲ್ಲಿ 1689ರಲ್ಲಿ ಮೊಗಲರ ಬಲಿಷ್ಠ ಅಧಿಕಾರಿ ಮುಖತಬ್‌ಖಾನ್‌ನು ಸಾಂಬಾಜಿಯನ್ನು ಸೆರೆಹಿಡಿದನು. ನಂತರ 1689ರಲ್ಲಿ ಕೊಲೆ ಮಾಡಲಾಯಿತು.
- 1689ರಲ್ಲಿ ಮೊಗಲರು ಶಿವಾಜಿಯ ರಾಜಧಾನಿಯಾದ ರಾಯಗಢವನ್ನು ವಶಪಡಿಸಿಕೊಂಡರು ಸಾಹು ಸೇರಿದಂತೆ ಅವನ ಕುಟುಂಬವನ್ನು ಮೊಗಲರು ಸೆರೆ ಹಿಡಿದರು.
- 1689ರಿಂದ 17000ರವರೆಗೆ ರಾಜರಾಮನು ಆಳ್ವಿಕೆ ನಡೆಸಿದನು. ರಾಜರಾಮನ ಮಗ 3ನೇ ಶಿವಾಜಿ ರಾಜಪ್ರತಿನಿಧಿಯಾಗಿ ಪೂರ್ಣ ಅಧಿಕಾರವನ್ನು ತಾರಾ ಬಾಯಿ ವಹಿಸಿಕೊಂಡು ಆಳ್ವಿಕೆ ನಡೆಸಿದಳು.
- ಸಾಂಬಾಜಿಯ ಪ್ರಧಾನಿ ಕವಿಕಲಷ (ಉತ್ತರಭಾರತದ ಬ್ರಾಹ್ಮಣ)

ಪೇಶ್ವೆಗಳು ರಾಜಧಾನಿ: ಪೂನಾ (ಸಾಹುವಿನ ರಾಜಧಾನಿ:ಸತಾರ) (The Peshwas)

- ಔರಂಗಜೇಬನ ಮಗ ಅಜಮ್‌ಷಾ ಜುಲ್ಫಿಕರ್ ಖಾನ್‌ನ ಸಹಾಯದಂತೆ ಸೆರೆಯಲ್ಲಿದ್ದ ಸಾಂಬಾಜಿಯ ಮಗ ಸಾಹುವನ್ನು 1707ರಲ್ಲಿ ಬಿಡುಗಡೆ ಮಾಡಿದನು.
- ಸಾಹುವು ಸತಾರದಲ್ಲಿ ಆಡಳಿತ ನಡೆಸಿದರೆ, ಇವನಿಗೆ ವಿರುದ್ಧವಾಗಿ ತಾರಾಬಾಯಿ ಕೊಲ್ಲಾಪುರದಲ್ಲಿ (3ನೇ ಶಿವಾಜಿ) ಸ್ವತಂತ್ರ ಮರಾಠ ರಾಜ್ಯ ಸ್ಥಾಪಿಸಿದಳು. ಇವೆರಡು 1712ರಲ್ಲಿ 3ನೇ ಶಿವಾಜಿ ಮರಣ ಹೊಂದುವವರೆಗೆ ಇದ್ದವು.
- ಸಾಹುವು ಬಾಲಾಜಿ ವಿಶ್ವನಾಥನನ್ನು ತನ್ನ ಪೇಶ್ವೆಯಾಗಿ (ಮುಖ್ಯಮಂತ್ರಿ) ನೇಮಿಸಿದನು.

ಬಾಲಾಜಿ ವಿಶ್ವನಾಥ (ಕ್ರಿ.ಶ.1714–20) (Balaji Vishwanath)

ಕುಟುಂಬಕ್ಕೆ ಸೇರಿದವನು. ಇವನು ಸಾಹುವಿನ ಸೇನಾಧಿಪತಿ ದನಾಜಿ ಜಾಧವನ ಬಳಿ ಸೇವೆ ಸಲ್ಲಿಸುತ್ತಿದ್ದನು.

- ದಾನಾಜಿಯ ಮಗ ಚಂದ್ರಸೇನ ಜಾಧವನೊಡನೆ ಬಾಲಾಜಿ ವಿಶ್ವನಾಥನು ಸಂಬಂಧವನ್ನು ಮುಂದುವರೆಸಿ ಅವನಿಂದ 1712ರಲ್ಲಿ ಸೇನಾಕರ್ತೆ ವ್ಯವಸ್ಥಾಪಕ / ಕಾರ್ಯಭಾರದ ನಿಯೋಗಿ ಎಂಬ ಬಿರುದು ಪಡೆದುಕೊಂಡನು.
- ವಿಶ್ವನಾಥನು ಆಡಳಿತದಲ್ಲಿ **'ಅಷ್ಟ ಪ್ರಧಾನ ಪದ್ಧತಿಯನ್ನು'** ಪುನಃ ಜಾರಿಗೆ ತಂದನು.
- 1714ರಲ್ಲಿ ದಖ್ಖನ್ನಿನ ಮೊಗಲ್ ರಾಜ್ಯಪಾಲ ಹುಸೇನ್ ಅಲಿಯೊಂದಿಗೆ ಒಪ್ಪಂದ ಮಾಡಿಕೊಂಡನು. ಇದರಂತೆ ಶಿವಾಜಿಯ ಸಾಮ್ರಾಜ್ಯದ ಮೇಲೆ ಸಾಹುವಿನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲಾಯಿತು.
- 1719ರಲ್ಲಿ ಹುಸೇನ್ ಆಲಿಯೊಂದಿಗೆ ವಿಶ್ವನಾಥನು ದೆಹಲಿಗೆ ಹೋಗಿ ಸಯ್ಯದ್ ವಿರೋಧಿ ಪಕ್ಷದವರ ಪ್ರಾಬಲ್ಯವನ್ನು ಹತ್ತಿಕ್ಕಲು ಫರುಕ್ಸಿಯಾರನನ್ನು ಕೊಂದರು.
- 1719ರಲ್ಲಿ ಮರಾಠರು ದೆಹಲಿಯತ್ತ ಮುನ್ನುಗ್ಗಿದುದು ಮರಾಠರ ಇತಿಹಾಸದಲ್ಲೇ ಒಂದು ಅಭೂತಪೂರ್ವ ಘಟನೆಯಾಗಿದೆ.
- ವಿಶ್ವನಾಥನು ಶಿವಾಜಿಯು ಕನಸು ಕಂಡಿದ್ದ ಸ್ವರಾಜ್ಯವನ್ನು ಯಾವುದೇ ರೀತಿಯಲ್ಲಿ ಮೊಗಲರ ಜೊತೆ ಯುದ್ಧ ಮಾಡದೆ ಗಳಿಸಿಕೊಟ್ಟನು.
- ಬಾಲಾಜಿ ವಿಶ್ವನಾಥನು 1720ರಲ್ಲಿ ಮರಣ ಹೊಂದಿದನು.

1ನೇ ಬಾಜಿರಾಯ (1720–40) (Bajirao I)

- ಬಾಲಾಜಿ ವಿಶ್ವನಾಥನ ಮಗನಾಗಿ ಕ್ರಿ.ಶ.1698ರಲ್ಲಿ ಜನಿಸಿದನು. ಇವನು 1728ರಲ್ಲಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದನು. ಇದೇ ವರ್ಷದಲ್ಲಿ ಇವನು ಹೈದರಾಬಾದಿನ ನಿಜಾಮನನ್ನು ಸೋಲಿಸಿದನು. ಮೊಗಲರ ದಕ್ಷಿಣದ 6 ಸುಭಾಗಳ ರಾಜಧಾನಿ ಹೈದರಾಬಾದ್. ಇದರ ರಾಜ್ಯಪಾಲನಾಗಿ ಅಸಪ್‌ಜಾ ಅಥವಾ ಮಾಅಜಂ ಎಂಬುವನಿದ್ದನು.
- ಬಾಜಿರಾಯನು ಸಾಹುವಿಗೆ ನೀಡಿದ ಸಲಹೆಯೆಂದರೆ 'ಬಾಡುತ್ತಿರುವ ವೃಕ್ಷದ ಕಾಂಡವನ್ನು ಹೊಡೆಯೋಣ, ಕೊಂಬೆಗಳು ತಾವಾಗಿಯೇ ಉರುಳಿ ಬೀಳುತ್ತವೆ.'

ಬಾಜಿರಾಯನ ಎರಡು ಮುಖ್ಯ ಸಾಧನೆಗಳು

I. ಉತ್ತರ ಭಾರತದಲ್ಲಿ ಮರಾಠರ ಪ್ರಾಬಲ್ಯ ವಿಸ್ತರಿಸಿದುದು.

- ಬಾಜಿರಾಯ ತನ್ನ ಸೋದರ ಚಿನ್ನಮ್ಮಾಜಿ ಅಪ್ಪುವನ್ನು 1730ರಲ್ಲಿ ಪೋರ್ಚುಗೀಸ್‌ರೊಂದಿಗೆ ಹೋರಾಡಲು ಕಳುಹಿಸಿ ಅವರಿಂದ ಸಾಲ್ಸೆಟ್ ಮತ್ತು ಬೆಸ್ಸಿನ್‌ಗಳನ್ನು ವಶಪಡಿಸಿಕೊಂಡನು.
- 1731ರಲ್ಲಿ ಮೊಗಲ್ ಪ್ರಾಂತ್ಯಗಳ ಮೇಲೆ ದಾಳಿ ಮಾಡಿ **ಚೌತ್** ಮತ್ತು **ಸರ್ದೇಶ್ ಮುಖ್**‌ಗಳನ್ನು ವಸೂಲಿ ಮಾಡುವ ಹಕ್ಕನ್ನು ಪಡೆದನು.

- 1ನೇ ಬಾಜಿರಾಯನ ಈ ಯಶಸ್ಸನ್ನು ಸಹಿಸದ **ನಿಜಾಮ್-ಉಲ್-ಮುಲ್ಕ್** ಮತ್ತು ಶಿವಾಜಿ ಕುಟುಂಬದ ಕೊಲ್ಲಾಪುರದ ಶಾಖೆಯ ರಾಜ **ಶಂಭೂಜಿ** ಮತ್ತು **ತ್ರಯಾಂಬಕರಾವ್ ದಬಾಡೆಯವರು** ಒಂದುಗೂಡಿದರು.
- 1731ರ ಬಿಲ್ವಾಪುರ್ ಯುದ್ಧದಲ್ಲಿ ಬಾಜಿರಾಯನಿಂದ ತ್ರಯಂಬಕರಾವ್ ಕೊಲ್ಲಲ್ಪಟ್ಟನು. ಬಾಜಿರಾಯನ ಈ ವಿಜಯ ಪೇಶ್ವೆಗಳ ಇತಿಹಾಸದಲ್ಲಿ ಸ್ಥಿತ್ಯಂತರ ಆರಂಭವಾಗುವ ಒಂದು ಘಟನೆಯಾಯಿತು. ನಂತರ ಉಲ್‌ಮುಲ್ಕನು ಒಪ್ಪಂದ ಮಾಡಿಕೊಂಡನು.
- ಬಾಜೀರಾಯ್‌ನನ್ನು **'ಮರಾಠ ಸಾಮ್ರಾಜ್ಯದ ದ್ವಿತೀಯ ಸಂಸ್ಥಾಪಕ'** ಎಂದು ಕರೆಯಲಾಗಿದೆ. 1737ರಲ್ಲಿ ಹೈದರಾಬಾದಿನ ನಿಜಾಮನನ್ನು ಸೋಲಿಸಿ **'ಭೂಪಾಲ ಒಪ್ಪಂದ'** ಮಾಡಿಕೊಂಡನು.

II. ಮರಾಠ ಒಕ್ಕೂಟದಲ್ಲಿ ಹಿಂದೂ- ಪಾದ್-ಬಾದ್‌ಷಾಹಿ ಸ್ಥಾಪನೆಗೆ ಯತ್ನ

- ಬಾಜಿರಾಯನು ಉದಾತ್ತವಾದ ಹಿಂದೂ ಪಾದ್ ಬಾದ್ ಷಾಹಿ ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಕಲ್ಪನೆಯನ್ನು ಹೊಂದಿದ್ದನು.

ಮರಾಠ ಒಕ್ಕೂಟ

- ಶಿವಾಜಿ ಕಾಲದಿಂದ ಸೈನಿಕರಿಗೆ ಹಣದ ರೂಪದಲ್ಲಿ ಸಂಬಳ ನೀಡಲಾಗಿತ್ತು. ಅದಕ್ಕೆ ರಾಜರಾಮನು ಸೈನಿಕರನ್ನು ತೃಪ್ತಿಪಡಿಸಲು ತನಗೆ ನಿಷ್ಠರಿದ್ದ ಸರದಾರರಿಗೆ ಜಹಗೀರುಗಳನ್ನು ನೀಡತೊಡಗಿದನು. ಇದರ ಪುನರುಜ್ಜೀವನದಿಂದಾಗಿ ಕೆಲವು ಅರೆ ಸ್ವತಂತ್ರ ಮರಾಠ ಪ್ರಭುತ್ವಗಳು ಅದರಲ್ಲಿಯೇ ಬೆಳೆಯ ತೊಡಗಿದವು. ಅವುಗಳೆಂದರೆ

1. ಮೊದಲ ಮನೆತನ ಬೀರಾರ್‌ನ ರಘುಜೀ ಬೋನ್ಸ್ಲೆ (ನಾಗಪುರ) ಇವನು ರಾಜರಾಮನ ಆಳ್ವಿಕೆಯುಲ್ಲಿ ಖ್ಯಾತಿಗೆ ಬಂದದ್ದರಿಂದ ಇವನ ಕುಟುಂಬ ಪೇಶ್ವೆಗಳ ಸಂತತಿಗಿಂತ ಹಳೆಯದಾಗಿತ್ತು. ಗುಜರಾತ್ ಮತ್ತು ಬಗ್ಲಾನಗಳ ಒಡೆತನ ಹೊಂದಿದ್ದ ದಬಾಡೆಗಳು.
2. ಬರೋಡದ ಗಾಯಕವಾಡ್‌ಗಳು (ದಬಾಡೆಗಳ ಕೈಕೆಳಗಿನ ಅಧಿಕಾರಿಗಳು)
3. ಗ್ವಾಲಿಯಾರ್‌ನ ಸಿಂಧ್ಯ ಮನೆತನದ ಸ್ಥಾಪಕ ರಾಣೋಜಿ ಸಿಂಧ್ಯಾ (1ನೇ ಬಾಜೀರಾಯ್‌ನ ಸೇವೆಯಲ್ಲಿದ್ದನು) ಮಾಳ್ವವು ಇವನ ಪಾಲಿಗೆ ಸೇರಿತ್ತು.
4. 4ನೇ ಮನೆತನ ಇಂದೋರ್ ಸಂತತಿಯ ಮಲ್ಹಾರರಾವ್ ಹೋಳ್ಕರ್ ಒಂದನೇ ಬಾಜಿರಾಯನ ಕಾಲದಲ್ಲಿ ಸೇವೆಯಲ್ಲಿದ್ದ ಮಾಳ್ವದ ಒಂದು ಭಾಗ ಪಡೆದಿದ್ದನು.
5. 5ನೇ ಮನೆತನ ಮಾಳ್ವದ ಸಣ್ಣ ಕ್ಷೇತ್ರದ ಪವಾರ್‌ಗಳು. ಇವರ ಕಾರ್ಯಸ್ಥಾನ **ಥಾರ್**.

ಪೂನಾದ ಪೇಶ್ವೆಗಳು

- ಖಾಂದೇಶ್ ಮತ್ತು ಬಾಲಘಾಟ್‌ಗಳು ಪೇಶ್ವೆಗಳಿಗೆ ಸೇರಿದ್ದವು.
- ಅಧಿಕಾರ ಮತ್ತು ಆದಾಯಗಳು ಮರಾಠ ರಾಜ್ಯದ 4 ಆಧಾರ ಸ್ತಂಭಗಳಾಗಿದ್ದವು.

1. ಛತ್ರಪತಿ.
2. ಸ್ವರಾಜ್ ಪ್ರದೇಶದ ಪ್ರಧಾನಮಂತ್ರಿಗಳು.
3. ಹೊಸ ಆಕ್ರಮಿತ ಪ್ರದೇಶಗಳ ಸರದಾರರು.
4. ಸ್ಥಳೀಯ ಸಂಸ್ಥೆಗಳು.

ಬಾಲಾಜಿ ಬಾಜಿರಾಯ (1740–61) Balaji Bajiraya

- ಸಾಹುವು ಅಧಿಕಾರವನ್ನು ಬಾಲಾಜಿ ಬಾಜಿರಾಯನಿಗೆ ವಹಿಸಿ 1749ರಲ್ಲಿ ನಿಧನನಾದನು. ಸಾಹುವು ತನ್ನ ಮರಣ ಶಾಸನದಲ್ಲಿ ಕೆಲವೊಂದು ಮಿತಿಯೊಳಗೆ, ರಾಜ್ಯದಲ್ಲಿ ಪೇಶ್ವೆಯ ಅಧಿಕಾರವನ್ನು ಪರಮಾಧಿಕಾರವೆಂದು ಮಾನ್ಯ ಮಾಡಿದನು.
- ಪೇಶ್ವೆ ಬಾಲಾಜಿ 1750ರಲ್ಲಿ ರಾಜರಾಮನೊಡನೆ **ಸಂಗೋಲ ಒಪ್ಪಂದ** ಮಾಡಿಕೊಂಡನು. ತಾರಾಬಾಯಿ, ಉಮಾಬಾಯಿ ದಬಾಡೆ ಮತ್ತು ಗಾಯಕವಾಡನ ಬೆಂಬಲದಿಂದ ರಾಜರಾಮನನ್ನು ಸೆರೆಯಲ್ಲಿಟ್ಟು ಪೇಶ್ವೆಯೊಡನೆ ಒಪ್ಪಂದ ಮಾಡಿಕೊಂಡನು. ಇವನು ಇಲ್ಲಿಯೇ ಕಾಲವಾದನು (1777)
- ರಘುನಾಥರಾಯ್‌ನು ದೆಹಲಿಯನ್ನಷ್ಟೇ ಅಲ್ಲದೆ ಅಬ್ದಾಲಿಯ ಮಗ ತೈಮೂರ್‌ಷಾನಿಂದ 1758ರಲ್ಲಿ ಪಂಜಾಬ್‌ನ್ನು ವಶಪಡಿಸಿಕೊಂಡನಲ್ಲದೆ ಲಾಹೋರ್ ಮತ್ತು ಸರ್‌ಹಿಂದ್‌ಗಳನ್ನು ಪಡೆದು ತನ್ನ ಅಧೀನ ಬೇಗ್‌ಖಾನ್‌ನ್ನು ಪಂಜಾಬಿನ ರಾಜ್ಯಪಾಲನಾಗಿ ನೇಮಿಸಿದನು.

3ನೇ ಪಾಣಿಪತ್ ಕದನ 1761

- ಮರಾಠರಿಂದ ಸೋತಿದ್ದ ರೋಹಿಲರು, ಔದನ್ ನವಾಬರು ಅಬ್ದಾಲಿಯ ಪರವಹಿಸಿದರು. ಈ ಯುದ್ದದಲ್ಲಿ ಅಬ್ದಾಲಿಯ ವಿರುದ್ಧ ಬಾಲಾಜಿ ಬಾಜಿರಾಯನ ಮರಾಠ ಸೈನ್ಯವು ಸೋತಿತು.
- 1761 ಜೂನ್‌ನಲ್ಲಿ ಬಾಲಾಜಿ ಬಾಜಿರಾಯ ನಿಧನನಾದನು.
- ಪ್ಲಾಸಿಯು ಭಾರತದಲ್ಲಿ ಬ್ರಿಟಿಷರ ಪ್ರಾಬಲ್ಯಕ್ಕೆ ಅಂಕುರಾರ್ಪಣೆ ಮಾಡಿದ್ದರೆ, ಪಾಣಿಪತ್ ಅವು ಬೆಳೆದು ಬೇರೂರಲು ಬೇಕಾದ ಅವಕಾಶ ನೀಡಿತು. ಅಲ್ಲದೇ ಪಾಣಿಪತ್‌ನ ದುರದೃಷ್ಟಕರ ಪರಿಸ್ಥಿತಿಯ ಲಾಭ ಪಡೆದು ಹೈದರ್ ತನ್ನ ಪ್ರದೇಶದಲ್ಲಿ ಸ್ವತಂತ್ರನಾಗಲು ಮರಾಠರು ಅಪ್ರಮುಖರಾದರು. ಹಾಗೆಯೇ 3ನೇ ಪಾಣಿಪತ್ ಯುದ್ಧವು ಭಾರತದ ವಿಧಿಯನ್ನು ತೀರ್ಮಾನಿಸಿತು.

ಮಧ್ಯಯುಗದಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿಗರು

ವಿದೇಶಿ ಪ್ರವಾಸಿಗರು	ದೇಶ	ಕಾಲ	ರಾಜನ ಆಸ್ಥಾನ
1. ಮಾರ್ಕೋಪೋಲೊ	ಇಟಲಿ (ವೆನಿಸ್)	1288	
2. ಇಬನ್ ಬಟೂಟ	ಮೊರಕ್ಕೊ	1332–42	ಮಹಮ್ಮದ್ ಬಿನ್ ತುಘಲಕ್
3. ನಿಕೋಲೋಕಾಂಟಿ	ಇಟಲಿ	1422	1ನೇ ದೇವರಾಯ
4. ಷಾಂಗ್ ಡೀ	ಚೀನಾ	1422–32	ಜಲಾಲೂದ್ದೀನ್

5. ಅಬ್ದುಲ್ ರಜಾಕ್	ಪರ್ಷಿಯಾ	1443	2ನೇ ದೇವರಾಯ
6. ಬಾರ್ಬೋಸ	ಪೋರ್ಚುಗಲ್	1516–18	ಕೃಷ್ಣದೇವರಾಯ
7. ಡೊಮಿಂಗೊ ಫಯಾಸ್	ಪೋರ್ಚುಗಲ್	1520–22	ಕೃಷ್ಣದೇವರಾಯ
8. ನ್ಯೂನಿಜ್	ಪೋರ್ಚುಗಲ್	1535–37	ಅಚ್ಯುತರಾಯ
9. ಆ್ಯಂಟೋನಿ ಮಾನ್ಸರೇಟ್	ಪೋರ್ಚುಗಲ್	1578–82	ಅಕ್ಬರ್
10. ರಾಲ್ಫ್‌ಫಿಚ್	ಇಂಗ್ಲೆಂಡ್	1581–91	ಅಕ್ಬರ್
11. ಪೆಡ್ರಿಕ್ ಸೀಸರ್	ಪೋರ್ಚುಗಲ್	1567	ತಿರುಮಲ (ವಿಜಯನಗರ)
12. ಕ್ಯಾಪ್ಟನ್ ಹಾಕಿನ್ಸ್	ಇಂಗ್ಲೆಂಡ್	1608–11	ಜಹಂಗೀರ್
13. ಜಾನ್ ಜೋರ್ಡಾನ್	ಇಂಗ್ಲೆಂಡ್	–	ಜಹಂಗೀರ್
14. ವಿಲಿಯಂ ಫಿಕ್ಚ್	ಇಂಗ್ಲೆಂಡ್	1608–12	ಜಹಂಗೀರ್
15. ನಿಕೋಲಸ್ ಡಾಫ್ಟನ್	ಇಂಗ್ಲೆಂಡ್	1608–15	ಜಹಂಗೀರ್
16. ಥಾಮಸ್ ರೋ	ಇಂಗ್ಲೆಂಡ್	1605–18	ಜಹಂಗೀರ್
17. ಪಾಲ್ ಕ್ಯಾನಿಂಗ್	ಇಂಗ್ಲೆಂಡ್	1615–25	ಜಹಂಗೀರ್
18. ಎಡ್ವರ್ಡ್ ಟೆರ್ರಿ	ಇಂಗ್ಲೆಂಡ್	1616–18	ಜಹಂಗೀರ್
19. ಫ್ರಾನ್ಸಿಸ್ಕೋ ಪೆಲ್ಸಾರ್ಟ್	ಹಾಲೆಂಡ್	1620–27	ಜಹಂಗೀರ್
20. ಡೆಲ್ಲಾವೆಲ್ಲಿ	ಇಟಲಿ	1622–60	ಜಹಂಗೀರ್
21. ಕಾನ್‌ಲೋಯತ್	ಹಾಲೆಂಡ್	1626–33	ಷಹಜಹಾನ್
22. ಜಾನ್ ಪ್ರೈಯರ್	ಇಂಗ್ಲೆಂಡ್	1627–81	ಷಹಜಹಾನ್
23. ಪೀಟರ್ ಮುಂಡಿ	ಇಟಲಿ	1630–44	ಷಹಜಹಾನ್
24. ಟ್ರೈವರ್ನಿಯರ್	ಫ್ರಾನ್ಸ್	1641–87	ಷಹಜಹಾನ್, ಔರಂಗಜೇಬ್
25. ಮನ್ನಿ	ಇಟಲಿ	1756–87	ಔರಂಗಜೇಬ್
26. ಬರ್ನಿಯರ್	ಫ್ರಾನ್ಸ್	1658–68	ಔರಂಗಜೇಬ್
27. ಜೀನ್ ತೆವ್ನಾಟ	ಫ್ರಾನ್ಸ್	1666–68	ಔರಂಗಜೇಬ್
28. ನಿಕಟಿನ್	ರಷ್ಯಾ	1570–72	ಬೀದರ್

III. ಆಧುನಿಕ ಭಾರತದ ಇತಿಹಾಸ (Modern India)

ಆಧುನಿಕ ಭಾರತ ಇತಿಹಾಸದ ಕಾಲಾನುಕ್ರಮಣಿಕೆ

ವರ್ಷ	ಮಹತ್ವದ ಘಟನೆಗಳು
1707	ಬಹುದ್ದೂರ್‌ಷಾನ ಆಳ್ವಿಕೆ
1717	ಫರೂಕ್ ಸಿಯಾರ್ ಬ್ರಿಟಿಷರಿಗೆ ವ್ಯಾಪಾರದ ಫರ್ಮಾನು ಹಕ್ಕು ನೀಡಿದನು.
1746–48	ಮೊದಲ ಕರ್ನಾಟಿಕ್ ಯುದ್ಧ
1749–54	ಎರಡನೇ ಕರ್ನಾಟಿಕ್ ಯುದ್ಧ
1758–63	ಮೂರನೇ ಕರ್ನಾಟಿಕ್ ಯುದ್ಧ
1759	ಬೇದಾರ ಯುದ್ಧ
1760	ವಾಂಡಿವಾಷ್ ಕದನ
1761	3ನೇ ಪಾಣಿಪತ್ ಕದನ
1764	ಬಕ್ಸಾರ್ ಕದನ
1793	ಬಂಗಾಳದಲ್ಲಿ ಖಾಯಂ ಜಮೀನ್ದಾರಿ ಪದ್ಧತಿ ಜಾರಿ
1835	ಕಲ್ಕತ್ತಾದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ
1857	ಮೊದಲ ಸ್ವಾತಂತ್ರ್ಯ ಸಂಗ್ರಾಮ
1877	ದೆಹಲಿ ದರ್ಬಾರ್
1878	ವರ್ನಾಕ್ಯುಲರ್ ಪ್ರೆಸ್ ಆ್ಯಕ್ಟ್
1881	ಮೈಸೂರು ಪ್ರತಿದಾನ
1885:	ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆ
1893:	ಬಾಲ ಗಂಗಾಧರ ತಿಲಕರಿಂದ ಬಾಂಬೆಯಲ್ಲಿ ಗಣಪತಿ ಉತ್ಸವ ಆರಂಭ
1895:	ಬಾಲ ಗಂಗಾಧರ ತಿಲಕರಿಂದ ಶಿವಾಜಿ ಉತ್ಸವ ಆರಂಭ
1905 ಜುಲೈ	ಲಾರ್ಡ್ ಕರ್ಜನ್‌ನಿಂದ ಬಂಗಾಳ ವಿಭಜನೆ ಘೋಷಣೆ.
1905 ಅಕ್ಟೋಬರ್ 16:	ಬಂಗಾಳದ ವಿಭಜನೆಯಾಯಿತು.
1906:	1) ಗೋಖಲೆಯಿಂದ ಸ್ವರಾಜ್ ಘೋಷಣೆ. 2) ಇಂಡಿಯನ್ ಮುಸ್ಲಿಂ ಲೀಗ್‌ನ ಸ್ಥಾಪನೆ 3) ದಾದಾಬಾಯಿ ನವರೋಜಿ ಅಧ್ಯಕ್ಷತೆಯ ಕಾಂಗ್ರೆಸ್ ಅಧಿವೇಶನ (ಕಲ್ಕತ್ತಾ)
1907:	ಸೂರತ್ ಅಧಿವೇಶನ: ಕಾಂಗ್ರೆಸ್ ವಿಭಜನೆ. ರಾಸ್ ಬಿಹಾರಿ ಬೋಸ್ ಇದರ ಅಧ್ಯಕ್ಷರು.
1908:	ಬಾಲಗಂಗಾಧರ ತಿಲಕರ ಬಂಧನ (ಬರ್ಮೋದ ಮಾಂಡಲೆಯಲ್ಲಿ) 6 ವರ್ಷ ಸೆರೆವಾಸ.
1909:	ಇಂಡಿಯನ್ ಕೌನ್ಸಿಲ್ ಆಕ್ಟ್ ಅಥವಾ ಮಿಂಟೋ ಮಾರ್ಲೆ ಸುಧಾರಣೆಗಳು.
1911:	1) ದೆಹಲಿಯ ದರ್ಬಾರ್‌ನಲ್ಲಿ ಬ್ರಿಟನ್ ರಾಜ

5ನೇ ಜಾರ್ಜ್‌ಗೆ ಪಟ್ಟಾಭಿಷೇಕ.

2) ಲಾರ್ಡ್ ಹಾರ್ಡಿಂಜ್‌ನಿಂದ ಬಂಗಾಳ ವಿಭಜನೆ ರದ್ದು.

3) ರಾಜಧಾನಿಯನ್ನು ಕಲ್ಕತ್ತಾದಿಂದ ದೆಹಲಿಗೆ ವರ್ಗಾವಣೆ ಮಾಡಲಾಯಿತು.

1912: 1) ರಾಸ್ ಬಿಹಾರಿ ಬೋಸರು ಗೌರ್ನರ್ ಜನರಲ್ ಲಾರ್ಡ್ ಹಾರ್ಡಿಂಜ್ ಮೇಲೆ ಬಾಂಬ್ ಎಸೆತ ಆದರೆ ಹಾರ್ಡಿಂಜ್ ಪಾರು. ರಾಸ್ ಬಿಹಾರಿ ಬೋಸ್ ಸಿಂಗಾಪುರಕ್ಕೆ ಓಡಿ ಹೋದನು.

2) ರಾಜಧಾನಿಯಲ್ಲಿ ಪಾರ್ಲಿಮೆಂಟ್ ಮತ್ತು ರಾಜಭವನ ಕಟ್ಟಡ ಕಟ್ಟಿದರು.

3) ಬಿಹಾರ ಮತ್ತು ಒರಿಸ್ಸಾ ರಾಜ್ಯಗಳನ್ನು ಪ್ರತ್ಯೇಕ ರಾಜ್ಯಗಳಾಗಿ ಮಾಡಲಾಯಿತು.

1915 ಜನವರಿ 9: ದ. ಆಫ್ರಿಕಾದಿಂದ ಗಾಂಧೀಜಿ ಭಾರತಕ್ಕೆ ಆಗಮನ. ಅಹ್ಮದಾಬಾದ್‌ನಲ್ಲಿ ಸರಬಮತಿ ಆಶ್ರಮ ಸ್ಥಾಪನೆ.

1916: 1) ತಿಲಕರಿಂದ ಹೋಂ ರೂಲ್ ಲೀಗ್ ಸ್ಥಾಪನೆ. ಅನಿಬೆಸೆಂಟ್ ಸಹ ಹೋಂ ರೂಲ್ ಲೀಗ್ ಸ್ಥಾಪಿಸಿದರು.

2) ಮದನ್ ಮೋಹನ್ ಮಾಳವೀಯರಿಂದ ಬನಾರಸ್ ಹಿಂದೂ ವಿ.ವಿ. ಸ್ಥಾಪನೆ.

3) ಲಕ್ನೋ ಅಧಿವೇಶನ – ಮುಸ್ಲಿಂ ಲೀಗ್ ನೊಂದಿಗೆ ಲಕ್ನೋ ಒಪ್ಪಂದ.

4) ಡಿ.ಕೆ. ಕರ್ವೆ ಪೂನಾದಲ್ಲಿ ಮಹಿಳಾ ವಿ.ವಿ. ಸ್ಥಾಪನೆ.

1917 ಏಪ್ರಿಲ್: ಗಾಂಧೀಜಿ ಬಿಹಾರದ ಚಂಪಾರಣ್ಯ ಸತ್ಯಾಗ್ರಹ ಆರಂಭಿಸಿದರು. ಇದು ಗಾಂಧೀಜಿ ಅವರ ಮೊದಲ ಸತ್ಯಾಗ್ರಹವಾಗಿತ್ತು.

1918: 1) ಗಾಂಧೀಜಿಯಿಂದ ಗುಜರಾತಿನ ಖೇಡಾ ಸತ್ಯಾಗ್ರಹ ಆರಂಭ.

2) ಗಾಂಧೀಜಿಯಿಂದ ಅಹ್ಮದಾಬಾದ್ ಜವಳಿ ಗಿರಣಿ ಸತ್ಯಾಗ್ರಹ.

1919: ಗಾಂಧೀಜಿಯವರು ರೌಲತ್ ಕಾಯ್ದೆ ವಿರೋಧಿಸಲು ಸತ್ಯಾಗ್ರಹ ಸಭಾ ಸ್ಥಾಪಿಸಿದರು.

ಏಪ್ರಿಲ್ 6: 1) ಗಾಂಧೀಜಿಯವರಿಂದ ರೌಲತ್ ಸತ್ಯಾಗ್ರಹ ಆರಂಭ. ಇದು ಗಾಂಧೀಜಿ ಅವರ ಅಖಿಲ ಭಾರತ ಮಟ್ಟದ ಮೊದಲ ಸತ್ಯಾಗ್ರಹ.

2) ರೌಲತ್ ಕಾಯ್ದೆಯನ್ನು ಐಎನ್‌ಸಿಯು ಕರಾಳ ಕಪ್ಪು ಕಾಯ್ದೆ ಎಂದು ಟೀಕಿಸಿತು.

ಏಪ್ರಿಲ್ 13: ಜಲಿಯನ್ ವಾಲಾಬಾಗ್ ದುರಂತ.

ಅಕ್ಟೋಬರ್: ಹಂಟರ್ ಆಯೋಗದ ರಚನೆ.

ನವೆಂಬರ್: ಅಖಿಲ ಭಾರತ ಖಿಲಾಫತ್ ಸಮಿತಿ ರಚನೆ.

ಡಿಸೆಂಬರ್: ಮಾಂಟೆಗೊ ಚೆಲ್ಮ್ಸ್ ಫರ್ಡ್ ಸುಧಾರಣೆ.

ನ್ಯಾಷನಲ್ ಲಿಬರಲ್ ಫೆಡರೇಷನ್ ಸ್ಥಾಪನೆ.

ಅಖಿಲ ಭಾರತ ಖಿಲಾಫತ್ ಸಮಿತಿ – ದೆಹಲಿ ಸಮಾವೇಶಕ್ಕೆ ಗಾಂಧೀಜಿ ಅಧ್ಯಕ್ಷರಾಗಿ ಆಯ್ಕೆ.

1920 ಆಗಸ್ಟ್ 1: ಖಿಲಾಫತ್ ಸಮಿತಿಯಿಂದ ಅಸಹಕಾರ ಚಳುವಳಿ ಆರಂಭ.

ಡಿಸೆಂಬರ್: ನಾಗ್ಪುರ ಅಧಿವೇಶನ ಅಸಹಕಾರ ಚಳುವಳಿ ಆರಂಭಿಸಲು ನಿರ್ಧಾರ.

1920 – ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೇಸ್ ಸ್ಥಾಪನೆ.

1921 ಮಲಬಾರ್ ತೀರದಲ್ಲಿ ಮಾಪ್ಲೆ ದಂಗೆ ನಡೆಯಿತು.

1922: 1) ಚೌರಾಚೌರಿ ಘಟನೆ

2) ಅಸಹಕಾರ ಚಳುವಳಿ ಹಿಂಪಡೆಯಲಾಯಿತು.

3) ಮೋತಿಲಾಲ್ ನೆಹರೂರವರಿಂದ ಸ್ವರಾಜ್ಯ ಪಕ್ಷ ಸ್ಥಾಪನೆ

1923: ಕಾಕಿನಾಡ ಕಾಂಗ್ರೆಸ್ ಅಧಿವೇಶನ ಅತಿ ಕಿರಿಯ ವಯಸ್ಸಿನ ಅಧ್ಯಕ್ಷರಾಗಿ ಮಹ್ಮದ್ ಆಲಿ ಆಯ್ಕೆ.

1924: ಬೆಳಗಾಂ ಕಾಂಗ್ರೇಸ್ ಅಧಿವೇಶನ

1925: ಚಂದ್ರಶೇಖರ್ ಅಜಾದ್‌ರಿಂದ ಹಿಂದೂಸ್ತಾನ್ ರಿಪಬ್ಲಿಕ್ ಅಸೋಸಿಯೇಷನ್ ಎಂಬ ಉಗ್ರಗಾಮಿ ಸಂಘಟನೆ ಆರಂಭ.

1926: ಬೆಳಗಾವಿಯಲ್ಲಿ ರಾಮಸ್ವಾಮಿ ಅಧ್ಯಕ್ಷತೆಯ ಪ್ರಥಮ ಅಖಿಲ ಭಾರತ ಬ್ರಾಹ್ಮಣೇತರ ಸಮಾವೇಶ ನಡೆಯಿತು.

1927: ಸೈಮನ್ ಆಯೋಗದ ರಚನೆ.

1928 ಫೆಬ್ರವರಿ: 1) ಸೈಮನ್ ಆಯೋಗ ಭಾರತಕ್ಕೆ ಬಂದಿತ್ತು.

2) ಮೋತಿಲಾಲ್ ನೆಹರೂ ವರದಿಯ ಮಂಡನೆ.

3) ಸೈಮನ್ ವರದಿ ವಿರೋಧಿ ಚಳುವಳಿಯಲ್ಲಿ ಲಾಲಾಲಜಪತ್‌ರಾಯ್ ಮರಣ.

4) ಜವಾಹರ್‌ಲಾಲ್ ನೆಹರೂ, ಸುಭಾಷ್‌ಚಂದ್ರ

		ಬೋಸ್‌ರಿಂದ Independence legue ಸ್ಥಾಪನೆ.
1929:		ಭಗತ್‌ಸಿಂಗ್ ಮತ್ತು ಬದುಕೇಶ್ವರ ದತ್ತರು ಕೇಂದ್ರ ಶಾಸನ ಸಭೆಯ ಮೇಲೆ ಬಾಂಬ್ ಎಸೆದರು.
ಡಿಸೆಂಬರ್ 31:		ಲಾಹೋರ್ ಅಧಿವೇಶನ: ಪೂರ್ಣ ಸ್ವರಾಜ್ ಘೋಷಣೆ.
1930 ಜನವರಿ 26:	1)	ಐಎನ್‌ಸಿಯು ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯನ್ನು ಲಾಹೋರಿನಲ್ಲಿ ಆಚರಿಸಿತು.
ಮಾರ್ಚ್ 12:	2)	ಗಾಂಧೀಜಿಯಿಂದ ದಂಡಿಯಾತ್ರೆ, ಕಾನೂನು ಭಂಗ ಚಳುವಳಿ ಆರಂಭ
	3)	ಸೈಮನ್ ವರದಿ ಪ್ರಕಟಣೆ
ನವೆಂಬರ್.	4)	ಮೊದಲ ದಂಡು ಮೇಜಿನ ಸಮ್ಮೇಳನ (ಕಾಂಗ್ರೇಸ್ ಬಿಟ್ಟು ಉಳಿದ ನಾಯಕರು ಪಾಲ್ಗೊಂಡಿದ್ದರು)
1931 ಮಾರ್ಚ್5.	1)	ಗಾಂಧಿ-ಇರ್ವಿನ್ ಒಪ್ಪಂದ. ಗಾಂಧೀಜಿ ಅಸಹಕಾರ ಚಳುವಳಿ ವಾಪಸ್ ಪಡೆದರು.
	2)	2ನೇ ದುಂಡುಮೇಜಿನ ಸಮ್ಮೇಳನ. ಕಾಂಗ್ರೆಸ್‌ನ ಏಕೈಕ ಪ್ರತಿನಿಧಿಯಾಗಿ ಗಾಂಧೀಜಿ ಪಾಲ್ಗೊಂಡಿದ್ದರು.
	3)	ಸುಖದೇವ್, ಭಗತ್‌ಸಿಂಗ್ ಮತ್ತು ರಾಜಗುರುಗೆ ಮರಣದಂಡನೆ.
1932:	1).	ಮತ್ತೆ ಕಾನೂನುಭಂಗ ಚಳುವಳಿ ಆರಂಭ.
	2)	ಬ್ರಿಟನ್ ಪ್ರಧಾನಿ ಮ್ಯಾಕ್ ಡೊನಾಲ್ಡ್‌ನಿಂದ ಮತೀಯ ತೀರ್ಪು ಪ್ರಕಟಣೆ.
	3)	ಗಾಂಧೀಜಿ ಮತೀಯ ತೀರ್ಪು ವಿರೋಧಿಸಿ ಯರವಾಡ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ.
	4)	3ನೇ ದುಂಡುಮೇಜಿನ ಸಮ್ಮೇಳನ (ಕಾಂಗ್ರೆಸ್ ಭಾಗವಹಿಸಲಿಲ್ಲ)
1934:	1)	ಕಾನೂನು ಭಂಗ ಚಳುವಳಿ ಹಿಂದಕ್ಕೆ ಪಡೆದರು.
	2)	ಗಾಂಧೀಜಿ ಹರಿಜನ ಕಾರ್ಯಕ್ರಮ ಆರಂಭಿಸಿದರು.
1935:		ಭಾರತ ಸರ್ಕಾರ ಕಾಯ್ದೆ ಜಾರಿ
1937:		ಪ್ರಾಂತೀಯ ವಿಧಾನಸಭೆಗಳಿಗೆ ಚುನಾವಣೆ. ಕಾಂಗ್ರೇಸ್ 9 ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿತು.
1939 ಸೆಪ್ಟೆಂಬರ್ 3		2ನೇ ಮಹಾಯುದ್ಧ ಆರಂಭ. ವೈಸರಾಯ್ ಲಾರ್ಡ್ ಲಿನ್‌ಲಿತಿಗೊ ಬ್ರಿಟನ್ನಿನ ಪರವಾಗಿ ಭಾರತ ಯುದ್ಧದಲ್ಲಿ ಧುಮುಕಿದೆ ಎಂದು ಹೇಳಿದ. ಇದರಿಂದ ಕಾಂಗ್ರೇಸ್‌ನ ಎಲ್ಲಾ ಮಂತ್ರಿಗಳು ರಾಜೀನಾಮೆ ನೀಡಿದರು.
ಡಿಸೆಂಬರ್ 22 –	1)	ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನ – ಪಾಕಿಸ್ತಾನ ಬೇಕೆಂಬ ನಿರ್ಣಯ ಅಂಗೀಕಾರ.
	2)	ಸ್ವತಂತ್ರ ಪಾಕಿಸ್ತಾನ ಬೇಕೆಂದು ಮೊದಲು ಹೇಳಿದವನು ಮಹ್ಮದ್ ಇಕ್ಬಾಲ್.
	3)	ಲಾಹೋರ್ ಅಧಿವೇಶನದಲ್ಲಿ ಜಿನ್ನಾ ದ್ವಿರಾಷ್ಟ್ರ ಸಿದ್ಧಾಂತ ಪ್ರತಿಪಾದನೆ – ಹಿಂದೂ ದೇಶ, ಮುಸ್ಲಿಂ ದೇಶ.
1940 ಆಗಸ್ಟ್ 8		ಗೌರ್ನರ್ ಜನರಲ್ ಲಾರ್ಡ್ ಲಿನ್‌ಲಿತಿಗೋನಿಂದ ಆಗಸ್ಟ್ ಪ್ರಸ್ತಾವನೆ ಮಂಡನೆ.
ಅಕ್ಟೋಬರ್ 17		ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಆರಂಭ. ಮೊದಲ ಸತ್ಯಾಗ್ರಹಿ ವಿನೋಭ ಭಾವೆ.
		2ನೇ ಸತ್ಯಾಗ್ರಹಿ–ಜ. ನೆಹರು.
		3ನೇ ಸತ್ಯಾಗ್ರಹಿ ಸರೋಜಿನಿ ನಾಯ್ಡು
1941:	1)	ಸುಭಾಷ್ ಚಂದ್ರ ಬೋಸ್ ಭಾರತದಿಂದ ತಪ್ಪಿಸಿಕೊಂಡರು.
	2)	ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಹಿಂಪಡೆದರು.
1942 ಮಾರ್ಚ್	1)	ಕ್ರಿಪ್ಸ್ ಆಯೋಗ ಆಗಮನ
	2)	ಕಾಂಗ್ರೇಸ್‌ನ ಅಧ್ಯಕ್ಷರಾಗಿದ್ದ ಮೌಲಾನ್ ಅಜಾದ್‌ರಿಂದ ಕ್ರಿಪ್ಸ್ ಆಯೋಗದ ತಿರಸ್ಕಾರ
ಆಗಸ್ಟ್ 8	3)	ಬಾಂಬೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭ
1943		ಮುಸ್ಲಿಂ ಲೀಗ್ ತನ್ನ ಕರಾಚಿ ಅಧಿವೇಶನದಲ್ಲಿ ಒಡೆದು ತೆರಳಿ ಎಂದು ಆಗ್ರಹ.
1945	1)	ಐಎನ್‌ಎ ಬಂಧಿಗಳ ವಿಚಾರಣೆ
	2)	ಐಎನ್‌ಎ ಬಂಧಿಗಳ ಪರವಾಗಿ ವಾದ ಮಂಡಿಸಿದ ವಕೀಲರು ಅರುಣ್ ಅಸಫ್ ಆಲಿ, ಬಲುಬಾಯಿ ದೇಸಾಯಿ, ಜವಹಾರ್ ಲಾಲ್ ನೆಹರು.
	3)	ಭಾರತದಲ್ಲಿ ಸಾರ್ವತ್ರಿಕ ಚುನಾವಣೆ.
	4)	ವೇವೆಲ್ ಯೋಜನೆ ಚರ್ಚಿಸಲು ಭಾರತದ

ವೈಸ್‌ರಾಯ್ ವೇವೆಲ್ ಶಿಮ್ಲಾ ಸಮ್ಮೇಳನ ಏರ್ಪಡಿಸಿದನು.

1946 ಫೆಬ್ರವರಿ 18 ರಾಯಲ್ ಇಂಡಿಯನ್ ನೇವಿಯ ಬಂಡಾಯ. ಮೊದಲು ಬಾಂಬೆಯ ತಲ್ವಾರ್ ಯುದ್ಧ ನೌಕೆಯಲ್ಲಿ ಆರಂಭ.

1946 ಮಾರ್ಚ್ 1) ಕ್ಯಾಬಿನೆಟ್ ಮಿಷನ್ ಭಾರತಕ್ಕೆ ಆಗಮನ

ಪೆಥಿಕ್ ಲಾರೆನ್ಸ್ – ಅಧ್ಯಕ್ಷರು.

ಹೆನ್ರಿ ಅಲೆಗ್ಸಾಂಡರ್ – ಸದಸ್ಯರು.

ಸ್ಟ್ಯಾಫರ್ ಕ್ರಿಪ್ಸ್ – ಸದಸ್ಯರು.

2) ಇಂಗ್ಲೆಂಡಿನಲ್ಲಿ ಲೇಬರ್ ಪಕ್ಷದ ಕ್ಲೆಮೆಂಟ್ ಅಟ್ಲಿ ಪ್ರಧಾನಿಯಾಗುತ್ತಾರೆ.

ಮೇ 16 5) ಕ್ಯಾಬಿನೆಟ್ ಆಯೋಗದ ಯೋಜನೆ ಪ್ರಕಟ.

ಆಗಸ್ಟ್ 14 6) ನೆಹರು ನೇತೃತ್ವದ ಮಧ್ಯಂತರ ಸರ್ಕಾರ ರಚನೆಗೆ ಆಹ್ವಾನ

ಆಗಸ್ಟ್ 16 7) ಮುಸ್ಲಿಂ ಲೀಗ್ ನೇರ ಕಾರ್ಯಾಚರಣೆಯ ದಿನಾಚರಣೆ.

ಅಕ್ಟೋಬರ್ 26 8) ಮುಸ್ಲಿಂ ಲೀಗ್ ಮಧ್ಯಂತರ ಸರ್ಕಾರ ಸೇರಿತ್ತು.

ಡಿಸೆಂಬರ್ 9 9) ಸಂವಿಧಾನ ರಚನಾ ಸಮಿತಿಯ ಮೊದಲ ಸಭೆ ನಡೆಯಿತು. ಹಂಗಾಮಿ ಅಧ್ಯಕ್ಷರಾಗಿ ಸಚ್ಚಿದಾನಂದ ಸಿನ್ಹಾ ಆಯ್ಕೆಯಾದರು.

1946 ಡಿಸೆಂಬರ್ 13 10) ಸಂವಿಧಾನ ರಚನಾ ಸಮಿತಿಯ ಚುನಾವಣೆ ನಡೆದು ರಾಜೇಂದ್ರ ಪ್ರಸಾದ್ ಅಧ್ಯಕ್ಷರಾದರು.

1947 ಫೆಬ್ರುವರಿ 20 1). ಬ್ರಿಟಿಷ್ ಪ್ರಧಾನಿ ಅಟ್ಲಿ 1948ರ ಜೂನ್ ಒಳಗೆ ಭಾರತಕ್ಕೆ ಸ್ವಾತಂತ್ರ್ಯ ನೀಡುವುದಾಗಿ ಘೋಷಣೆ.

2) ಮೌಂಟ್ ಬ್ಯಾಟನ್ ವೈಸ್‌ರಾಯ್ ಆಗಿ ನೇಮಕ.

3) ಭಾರತವನ್ನು ವಿಭಜಿಸುವ ಜೂನ್ 3ನೇ ಯೋಜನೆ ಅಥವಾ ಮೌಂಟ್ ಬ್ಯಾಟನ್ ಯೋಜನೆ ಸಿದ್ಧವಾಯಿತು.

4) ಭಾರತ ಮತ್ತು ಪಾಕಿಸ್ತಾನ ಗಡಿ ನಿಯಂತ್ರಿಸಲು ರ್‍ಯಾಡ್‌ಕ್ಲಿಫ್ ಎಂಬುವವನ ನೇಮಕ.

ಜುಲೈ 15 5) ಇಂಗ್ಲೆಂಡಿನ ಪಾರ್ಲಿಮೆಂಟ್ ಭಾರತದ ಸ್ವಾತಂತ್ರ್ಯ ಮಸೂದೆಗೆ ಒಪ್ಪಿಗೆ.

ಆಗಸ್ಟ್ 14 6) ಪಾಕಿಸ್ತಾನ ವಿಭಜನೆಯಾಯಿತು. ಹಾಗೂ ಇದರ ಮೊದಲ ಪ್ರಧಾನಿ ಲಿಯಾಕತ್ ಅಲಿಖಾನ್. ಮೊದಲ ಅಧ್ಯಕ್ಷ – ಮಹಮದ್ದಾಲಿ ಜಿನ್ನಾ.

ಆಗಸ್ಟ್ 15 7) ಭಾರತಕ್ಕೆ ಸ್ವಾತಂತ್ರ್ಯ

20. ಕೊನೆಯ ಮೊಘಲ್ ಅರಸರು (LATER MUGHALS)

- ಔರಂಗಜೇಬನ (ಕ್ರಿ.ಶ. 1707ರಲ್ಲಿ) ಮರಣಾ ನಂತರ ಅವನ 04 ಜನ ಮಕ್ಕಳಲ್ಲಿ ಅಧಿಕಾರಕ್ಕಾಗಿ ಹೋರಾಟ ಶುರುವಾಯಿತು. ಅವರೆಂದರೆ ಅಕ್ಬರ್, ಮುಸ್ಜಂ, ಅಸ್ಜಂ ಮತ್ತು ಕಾಂಭಕ್ಷ
- ಔರಂಗಜೇಬನ ಮರಣಾ ನಂತರ ರಾಜಕುಮಾರ ಮುಸ್ಜಂನು, ಅಸ್ಜಂ ಮತ್ತು ಕಾಂಭಕ್ಷನನ್ನು ಕೊಂದು ಒಂದನೇ ಬಹದ್ದೂರ್ ಷಾ ಎಂಬ ಬಿರುದಿನೊಂದಿಗೆ ಅಧಿಕಾರಕ್ಕೆ ಬಂದನು.

1. ಒಂದನೇ ಬಹದ್ದೂರ್ ಷಾ (ಕ್ರಿ.ಶ. 1707–12) (Bahadurshah I)

- ಇವನು ಅತ್ಯಂತ ದುರ್ಬಲ ಮತ್ತು ಶಾಂತಿ ದೊರೆಯಾಗಿದ್ದನು. ಗುರು ಗೋವಿಂದಸಿಂಗ್ ಮರಣಾ ನಂತರ ಭಂಡ ಬಹದ್ದೂರ್ ನಾಯಕತ್ವದಲ್ಲಿ ದಂಗೆ ಎದ್ದ ಸಿಕ್ಕರ್‌ನನ್ನು ಬಹುದ್ದೂರ್ ಷಾ ಸೋಲಿಸಿದನು.
- ಇವನು ಔರಂಗಜೇಬನು ಹೇರಿದ್ದ ಜೆಸಿಯಾ ತಲೆಗಂದಾಯವನ್ನು ತೆಗೆದು ಹಾಕಿದನು. ಇವನ ದುರ್ಬಲತೆಯಿಂದಾಗಿ ಅವನನ್ನು **ಷಾ–ಇ–ಬೇಕ್‌ಬಾರ್** ಎನ್ನುತ್ತಿದ್ದರು. ಇವನು ಮರಾಠರ ಸಾಹುವನ್ನು ಸೆರೆಯಿಂದ ಬಿಡುಗಡೆ ಮಾಡಿದನು.

2. ಜಹಂದರ್ ಷಾ (ಕ್ರಿ.ಶ. 1712–13) (Jahandar shah)

- ಇವನು ಬಹದ್ದೂರ್ ಷಾನ ಮಗ. ಇವನು ತನ್ನ ಕುಲೀನರಾದ ಜುಲ್ಫಿಕರ್‌ಖಾನ್ ಸಹಾಯದಿಂದ ತನ್ನ ಸೋದರರಾದ ಅಜಂ–ಹುಸ್–ಷಾನ್ ಮತ್ತು ಜಹಾನ್‌ಷಾರನ್ನು ಕೊಂದು ಅಧಿಕಾರಕ್ಕೆ ಬಂದನು.
- ಜಹಂದರ ಷಾನು ಜುಲ್ಫಿಕರ್‌ಖಾನ್‌ನ್ನು ವಜೀರ್/ಪ್ರಧಾನಿಯಾಗಿ ನೇಮಿಸಿದನು. ಜುಲ್ಫಿಕರ್‌ನು ರಾಜ್ಯದ ಎಲ್ಲಾ ಆಡಳಿತ ಮತ್ತು ಅಧಿಕಾರವನ್ನು ನಿಯಂತ್ರಿಸುತ್ತಿದ್ದನು.

3. ಫರೂಕ್ ಸಿಯಾರ್ (ಕ್ರಿ.ಶ. 1713–19) (Farukh siyar)

- ಅಬ್ದುಲ್‌ಖಾನ್ ಮತ್ತು ಹುಸೇನ್ ಆಲಿ ಎಂಬ ಸಯ್ಯದ್ ಸಹೋದರರ ಸಹಾಯದಿಂದ ಫರೂಕ್ ಸಿಯಾರ್ ಅಧಿಕಾರಕ್ಕೆ ಬಂದು ಇವರನ್ನು (ಜಹಂದರ್ ಷಾನನ್ನು ಕೊಂದು) ಮೀರ್ ಭಕ್ಷಿಯಾಗಿ (ಸೇನೆ ಮುಖ್ಯಸ್ಥ) ನೇಮಿಸಿಕೊಂಡನು. ನಂತರ ಸಯ್ಯದ್ ಸಹೋದರನನ್ನು ಬಗ್ಗು ಬಡಿಯಲು ಪ್ರಯತ್ನಿಸಿದಾಗ ಸಯ್ಯದ್ ಸಹೋದರರು ಮರಾಠ ಪೇಶ್ವೆ ಬಾಲಾಜಿ ವಿಶ್ವನಾಥನ ಸಹಾಯದಿಂದ

(03 ಜನರನ್ನು) ಅಧಿಕಾರಕ್ಕೆ ತಂದರು.

1. ರಫಿ–ಉದ್–ದರಾಜತ್
2. ರಫಿ–ಉದ್–ದಲಾತ್
3. ಮಹ್ಮದ್ ಷಾ

4. ಮಹ್ಮದ್ ಷಾ (ಕ್ರಿ.ಶ. 1719–1748) (Muhammad shah)

- ಇವನು ತನ್ನ ಕುಲೀನರಾದ ನಿಜಾಂ–ಉಲ್–ಮುಲ್ಕ್ ಅಥವಾ ಚಿನ್‌ಕಿಚ್ಲುಖಾನ್ ಅಥವಾ ಅಸಫ್‌ಜಾನ್ ಸಹಾಯದಿಂದ ಸಯ್ಯದ್ ಸಹೋದರರರನ್ನು ಕೊಂದನು. ಇವನ ಕಾಲದಲ್ಲಿ ಅನೇಕ ಸ್ವಾಯುತ್ತ ಪ್ರಾಂತ್ಯಗಳು ಸ್ಥಾಪನೆಯಾದವು.

1. **ಮುರ್ಷಿದ್ ಕುಲಿಖಾನ್:** ಬಂಗಾಳ ಪ್ರಾಂತ್ಯ (ಬಂಗಾಳ + ಬಿಹಾರ + ಒರಿಸ್ಸಾ ಸೇರಿ) ಸ್ಥಾಪಿಸಿದನು.
2. **ನಿಜಾಂ–ಉಲ್–ಮುಲ್ಕ್:** ದಖ್ಖನ್ನಿನಲ್ಲಿ ಹೈದರಾಬಾದ್ ಪ್ರಾಂತ್ಯವನ್ನು ಸ್ಥಾಪಿಸಿದನು.
3. **ಸಾದತ್‌ಖಾನ್:** ಔದ್‌ನ ಸ್ವಾಯುತ್ತ ರಾಜ್ಯವನ್ನು ಸ್ಥಾಪಿಸಿದನು.

- ಇಲ್ಲಿಂದ ಮುಂದೆ ಪ್ರಧಾನಿಯಾದ ವಜೀರನೇ ಸಾಮ್ರಾಜ್ಯದ ನಿಜವಾದ ಆಡಳಿತಗಾರರಾಗುತ್ತಾರೆ. **ಬಾದ್‌ಷಹಾ** ಕೇವಲ ನಾಮಮಾತ್ರ ರಾಜನಾಗಿದ್ದನು.
- ಕ್ರಿ.ಶ. 1739ರಲ್ಲಿ ಪರ್ಶಿಯಾದ ದೊರೆ ನಾದಿರ್ ಷಾ ಭಾರತದ ಮೇಲೆ ದಾಳಿ ಮಾಡಿದನು. ಮೊಘಲ್ ಸೇನೆ ಕ್ರಿ.ಶ. 1739ರ ಕರ್ನಾಲ್ ಯುದ್ಧದಲ್ಲಿ ಪರಾಭವಗೊಂಡಿತು.
- ನಂತರ ನಾದಿರ್ ಷಾ ದೆಹಲಿಯನ್ನು 20 ದಿನಗಳವರೆಗೆ ಕೊಳ್ಳೆ ಹೊಡೆದು **ಮಯೂರ ಸಿಂಹಾಸನ** ಮತ್ತು **ಕೊಹಿನೂರ್** ವಜ್ರವನ್ನು ತನ್ನೊಂದಿಗೆ ಪರ್ಶಿಯಾಕ್ಕೆ ಕೊಂಡೊಯ್ದನು. ಮಹ್ಮದ್‌ಷಾನಿಗೆ **'ರಂಗೀಲಾ'** ಎಂಬ ಬಿರುದಿತ್ತು.

5. ಅಹಮದ್ ಷಾ (ಕ್ರಿ.ಶ. 1748–1754) (Ahmadshah)

- ಇವನು ಮಹ್ಮದ್ ಷಾನ ಪುತ್ರ. ಅಫ್ಘಾನಿಸ್ಥಾನದ ಸುಲ್ತಾನ ಅಹ್ಮದ್ ಷಾ ಅಬ್ದಾಲಿ ಭಾರತದ ಮೇಲೆ ಮೊದಲಿಗೆ ದಾಳಿ ಮಾಡಿದನು. ಇವನು ಒಟ್ಟು 07 ಬಾರಿ ದಾಳಿ ಮಾಡಿದ್ದಾನೆ. ಇವನ ನಂತರ 2ನೇ ಆಲಂಗೀರ್ (ಕ್ರಿ.ಶ. 1754–59)ನ ಆಳ್ವಿಕೆ ಮಾಡಿದನು.

6. 2ನೇ ಷಾ ಆಲಂ (1761–1806) (Shah Alam II)

- ಇವನ ಮೊದಲ ಹೆಸರು ಆಲಿಗ್ರುಹಾರರ್ ತನ್ನ ಪ್ರಧಾನಿ ನಜೀದ್–ಉದ್ ದೌಲನಿಗೆ ಹೆದರಿ ದೆಹಲಿಯನ್ನು ತ್ಯಜಿಸಿ ಪಾಟ್ನಾದಲ್ಲಿ ನೆಲೆಸಿದನು. ಇವನ ಕಾಲದಲ್ಲಿ 3ನೇ ಪಾಣಿಪತ್ ಕದನ ಕ್ರಿ.ಶ. 1761ರಲ್ಲಿ ನಡೆಯಿತು.
- ಕ್ರಿ.ಶ. 1764ರ **ಬಕ್ಸಾರ್ ಯುದ್ಧ**ದಲ್ಲಿ ಷಾ ಆಲಂ ಬಂಗಾಳದ ನವಾಬ ಮೀರ್‌ಖಾಸಿಂ, ಔದ್ ನವಾಬ ಶುಜಾ – ಉದ್ – ದೌಲನ ಜೊತೆ ಸೇರಿ ಬ್ರಿಟಿಷರ ವಿರುದ್ಧ ಯುದ್ಧ ಸಾರಿದನು. ಭಾರತದವರು ಸೋತು, ಬ್ರಿಟಿಷರೊಂದಿಗೆ 1765ರಲ್ಲಿ **ಅಲಹಾಬಾದ್ ಒಪ್ಪಂದ** ಮಾಡಿಕೊಂಡರು.
- ಅಲಹಾಬಾದ್ ಒಪ್ಪಂದದ ಪ್ರಕಾರ – ಕಂಪನಿಗೆ ಬಂಗಾಳ ಮತ್ತು ಬಿಹಾರ ಒರಿಸ್ಸಾಗಳ ದಿವಾನಿ ಹಕ್ಕನ್ನು ನೀಡಲಾಯಿತು.
- 1803ರಲ್ಲಿ ಕಂಪನಿಯು ಷಾ ಆಲಂನ ಕಣ್ಣುಗಳನ್ನು ಕೀಳಿಸಿತ್ತು.
- ಇವನ ಉತ್ತರಾಧಿಕಾರಿಯಾಗಿ **2ನೇ ಅಕ್ಬರ್** ಅಧಿಕಾರಕ್ಕೆ ಬಂದನು.

8. ಬಹದ್ದೂರ್–ಷಾ ಜಫರ್ 2ನೇ ಬಹದ್ದೂರ್ ಷಾ Bahadur shah II

- ಇವನು ಮೊಘಲ್‌ರ ಕೊನೆಯ ದೊರೆ. ಇವನು ಬ್ರಿಟಿಷರ ವಿರುದ್ಧ 1857ರ ದಂಗೆಯಲ್ಲಿ ಭಾಗವಹಿಸಿದ ಇದರಿಂದ ಇವನ ಎಲ್ಲಾ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕೊಂದ ಬ್ರಿಟಿಷರು ಇವನನ್ನು ಬಂಧಿಸಿ ಬರ್ಮಾದ **ರಂಗೂನ್** ಜೈಲಿನಲ್ಲಿಟ್ಟರು. ಇವನು ಅಲ್ಲಿಯೇ ಮರಣ ಹೊಂದಿದನು.
- ಇವನ ಕಾಲದ ಪ್ರಸಿದ್ಧ ಕವಿ ಗಜಲ್ ಇವನ ಕಾವ್ಯನಾಮ ಜಾಫರ್.

20.1 ಸ್ವಾಯುತ್ತ ರಾಜ್ಯಗಳು ಮತ್ತು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯ ಭಾರತದ ಆಕ್ರಮಣ

1. ಬಂಗಾಳ (Bengal)

- ಮುರ್ಷಿದ್ ಕುಲಿಕಾನ್ ಸ್ವಾಯುತ್ತ ಬಂಗಾಳದ ಸ್ಥಾಪಕ. ಆಗಿನ ಬಂಗಾಳ ಪ್ರಾಂತ್ಯವು ಇಂದಿನ ಬಾಂಗ್ಲಾ, ಪಶ್ಚಿಮ ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳನ್ನು ಒಳಗೊಂಡಿತ್ತು.
- ಮುರ್ಷಿದ್ ಕುಲಿಖಾನ್‌ನ ಉತ್ತರಾಧಿಕಾರಿ ಇವನ ಅಳಿಯ ಶುಜಾವುದ್ದೀನ್ ಅಧಿಕಾರಕ್ಕೆ ಬಂದನು. ನಂತರ ಇವನ ಮಗ ಸರಫ್‌ಜೋನ್ಸ್‌ಖಾನ್ ಅಧಿಕಾರಕ್ಕೆ ಬಂದನು. ಇವನನ್ನು ಕೊಂದು ಆಲಿವರ್ಧಿಖಾನ್ ಬಂಗಾಳದ ನವಾಬನಾದನು.
- **ದಸ್ತಕ್‌ಗಳು:** ಇವು ರಫ್ತು ಮತ್ತು ಆಮದು ಮಾಡಲು ಪಡೆದ ರಿಯಾಯ್ತಿ ಪತ್ರಗಳು. ಬ್ರಿಟಿಷರು ದಸ್ತಕಗಳನ್ನು 03 ರೀತಿಯಲ್ಲಿ ದುರ್ಬಳಕೆ ಮಾಡುತ್ತಿದ್ದರು.
  1. ಆಂತರಿಕ ವ್ಯಾಪಾರದಲ್ಲಿ
  2. ಕಂಪನಿ ನೌಕರರ ಖಾಸಗಿ ವ್ಯಾಪಾರ
  3. ಭಾರತದ ವರ್ತಕರಿಗೆ ದಸ್ತಕಗಳನ್ನು ಮಾರುತ್ತಿದ್ದರು.
- ಆಲಿವರ್ಧಿಖಾನ್ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ತನ್ನ ಸವಲತ್ತುಗಳನ್ನು ದುರುಪಯೋಗ ಮಾಡುವುದು ಮತ್ತು ಕಂಪನಿ ತನ್ನ ವ್ಯಾಪಾರಿ ಕೇಂದ್ರಗಳ ಸುತ್ತ ಕೋಟೆ ಕಟ್ಟುವುದನ್ನು ನಿರ್ಬಂಧಿಸಿದನು.
- ಆಲಿವರ್ಧಿಖಾನನ ಉತ್ತರಾಧಿಕಾರಿ ಇವನ ಮೊಮ್ಮಗ ಸಿರಾಜ್ ಉದ್ದೌಲನು ಅಧಿಕಾರಕ್ಕೆ ಬಂದನು. ಇವನ ಮತ್ತು ಬ್ರಿಟಿಷರ ನಡುವೆ ಅನೇಕ ಕಾರಣಗಳಿಂದ ಹಗೆತನ ಪ್ರಾರಂಭವಾಯಿತು.
- ಸಿರಾಜನ ಪ್ರತಿಸ್ಪರ್ಧಿಗಳಾದ ಢಾಕಾದ **ಗಸ್ತಿಬೇಗಂ ಪೂಣಿಯಾದ**

ಶೌಕತ್‌ಜಂಗನಿಗೆ ಬೆಂಬಲ ನೀಡಿದ್ದಲ್ಲದೆ ಇವನ ವಿರೋಧಿ **ಜಗತ್ ಸೇಠನಿಗೆ** ಆಶ್ರಯ ಸಹ ನೀಡಿದರು. ಕಂಪನಿ ದಸ್ತಕಗಳನ್ನು ದುರುಪಯೋಗಪಡಿಸುವುದನ್ನು ಇವನು ಉಗ್ರವಾಗಿ ವಿರೋಧಿಸಿದನು.

- ಕ್ರಿ.ಶ. 1756ರಲ್ಲಿ ಕಂಪನಿ ಸಿರಾಜ್ ಉದ್-ದೌಲನ ಅನುಮತಿ ಪಡೆಯದೆ ತನ್ನ ಕಲ್ಕತ್ತಾದ ವ್ಯಾಪಾರಿ ಕೇಂದ್ರದ ಸುತ್ತಲೂ ಕೋಟೆ ನಿರ್ಮಿಸಲು ಆರಂಭಿಸಿತ್ತು. ಸಿರಾಜನು ಕೋಟೆ ನಾಶಪಡಿಸುವಂತೆ ಆದೇಶಿಸಿದನು. ಆದರೆ ಕಂಪನಿ ಇವನ ಮಾತಿಗೆ ಬೆಲೆ ಕೊಡಲಿಲ್ಲ. ಆಗ ಸಿರಾಜನು ಕಲ್ಕತ್ತಾದ ಮೇಲೆ ದಾಳಿ ಮಾಡಿ ಕಲ್ಕತ್ತಾ ಕೋಟೆ ಆಕ್ರಮಿಸಿಕೊಂಡನು. ಆಗ ಬ್ರಿಟಿಷರು ತಪ್ಪಿಸಿಕೊಂಡು ಮದ್ರಾಸ್‌ಗೆ ಓಡಿ ಹೋದರು.
- ಆದರೆ ಕೆಲವರು ಸೆರೆಸಿಕ್ಕ ಬ್ರಿಟಿಷರನ್ನು ಒಂದು ಸಣ್ಣ ಕೊಠಡಿಯಲ್ಲಿ ಕೂಡಿ ಹಾಕಿದನು. ಆ ಕೊಠಡಿ ಚಿಕ್ಕದಾಗಿದ್ದರಿಂದ ನೂರಕ್ಕೂ ಹೆಚ್ಚು ಬ್ರಿಟಿಷರು ಉಸಿರುಕಟ್ಟಿ ಪ್ರಾಣ ಬಿಟ್ಟರು. ಈ ಘಟನೆಯನ್ನು ಅಲ್‌ಬೆಲ್ ಎಂಬ ಇತಿಹಾಸಕಾರನು **'ಕಪ್ಪುಕೋಣೆ ದುರಂತ' (Black hole Tragdy)** ಎಂದಿದ್ದಾನೆ.
- ಕಲ್ಕತ್ತಾ ವಶಪಡಿಸಿಕೊಂಡ ನಂತರ ಸಿರಾಜನು ಕಲ್ಕತ್ತಾಗೆ **ಆಲಿನಗರ** ಎಂಬ ಹೆಸರಿಟ್ಟನು.
- ಮದ್ರಾಸ್ ಗೌರ್ನರ್ ಕಲ್ಕತ್ತಾವನ್ನು ಮರಳಿ ಆಕ್ರಮಿಸಲು **ರಾಬರ್ಟ್‌ಕ್ಲೈವ್** ಮತ್ತು **ವ್ಯಾಟ್ಸನ್** ನೇತೃತ್ವದಲ್ಲಿ ಒಂದು ಬೃಹತ್ ಸೇನೆ ಬಂಗಾಲಕ್ಕೆ ಕಳುಹಿಸಿದನು. ಆ ಸೇನೆ ಕಂಡು ಭಯಭೀತನಾದ ಸಿರಾಜ್ ಉದೌಲನು ಕ್ರಿ.ಶ. 1756ರಲ್ಲಿ ಕಂಪನಿಯೊಂದಿಗೆ **ಆಲಿನಗರ ಒಪ್ಪಂದವನ್ನು** ಮಾಡಿಕೊಂಡನು.
- ಆಲಿನಗರ ಒಪ್ಪಂದದ ಪ್ರಕಾರ – ಕಂಪನಿ ತಾನು ಕಳೆದುಕೊಂಡಿದ್ದ ಕಲ್ಕತ್ತಾ ಪ್ರದೇಶ ಮರಳಿ ಹಿಂದಕ್ಕೆ ಪಡೆಯಿತು. ಆದರೆ ರಾಬರ್ಟ್‌ಕ್ಲೈವ್ ಸಿರಾಜುದೌಲನನ್ನು ಅಧಿಕಾರದಿಂದ ಕೆಳಗಿಳಿಸಲು ತಮ್ಮ ಕೈಗೊಂಬೆಯಾದ ದೊರೆಯೊಬ್ಬನನ್ನು ಸಿಂಹಾಸನದ ಮೇಲೆ ಕೂರಿಸಲು ಪಿತೂರಿ ಆರಂಭಿಸಿದನು.
- ಸಿರಾಜುದೌಲನ ಮೀರ್‌ಭಕ್ಷಿಯಾದ **ಮೀರ್ ಜಾಫರ್‌**ನನ್ನು ಸಿಂಹಾಸನದ ಮೇಲೆ ಕೂರಿಸಲು ರಾಬರ್ಟ್‌ಕ್ಲೈವ್‌ನು ಮೀರ್‌ಜಾಫರ್ ಜಗತ್‌ಸೇಠ್, ರಾಯ್‌ದುರ್ಲಭ ಮತ್ತು ಹಮೀನ್‌ಚಂದ್ ಮುಂತಾದ ನವಾಬನ ಆಸ್ಥಾನಿಕರ ಮನವೊಲಿಸಿದನು. ಆಗ ಸಿರಾಜುದೌಲನ ಮೇಲೆ ರಾಬರ್ಟ್‌ಕ್ಲೈವ್ ದಾಳಿ ಮಾಡಿದನು. ಇದೇ ಕ್ರಿ.ಶ. 1757ರ ಪ್ಲಾಸಿ ಕದನವಾಗಿದೆ. (ಜೂನ್ 23, 1757).

ಪ್ಲಾಸಿ ಕದನ–1757

- ಸಿರಾಜುದೌಲನ ಸೇನೆಯ ದಂಡನಾಯಕತ್ವವನ್ನು ಮೀರ್‌ಜಾಫರ್ ವಹಿಸಿಕೊಂಡನು. ಆದ್ದರಿಂದ ಬಹು ಸುಲಭವಾಗಿ ಸಿರಾಜುದೌಲನನ್ನು ಸೋಲಿಸಿ ರಾಬರ್ಟ್ ಕ್ಲೈವ್ ಮೀರ್‌ಜಾಫರ್‌ನನ್ನು ಬಂಗಾಳದ ನವಾಬನನ್ನಾಗಿ ನೇಮಿಸಿದನು.
- ಮೀರ್‌ಜಾಫರ್ ಕಂಪನಿಯ ವ್ಯಾಪಾರಕ್ಕೆ ಬೇಕಾದ ಎಲ್ಲಾ ರೀತಿಯ ರಿಯಾಯ್ತಿ ಹಣವನ್ನು ನೀಡಿದನು. ಕಂಪನಿಗೆ 24 ಪರಗಣ ಜಿಲ್ಲೆಯನ್ನು ಒಪ್ಪಿಸಿದನು. ಜೊತೆಗೆ 2ನೇ ಷಾ ಆಲಂನಿಂದ ಉಮ್ರಾ ಬಿರುದು ಪಡೆದನು.
- ಆದರೆ ಮೀರ್‌ಜಾಫರ್ ಕಂಪನಿಯ ಅತಿ ಆಸೆಗಳನ್ನು ಪೂರೈಸುವಲ್ಲಿ ವಿಫಲನಾದನು. ಆದ್ದರಿಂದ ಕ್ರಿ.ಶ. 1760ರಲ್ಲಿ (ಬಂಗಾಳ ಕ್ರಾಂತಿಯಿಂದಾಗಿ) ಕಂಪನಿಯು ಮೀರ್ ಜಾಫರನನ್ನು ಕೆಳಗಿಳಿಸಿ ಅವನ ಅಳಿಯನಾದ **ಮೀರ್‌ಖಾಸಿಂ**ನನ್ನು ಸಿಂಹಾಸನದ ಮೇಲೆ ಕೂರಿಸಲಾಯಿತು.
- ಮೀರ್‌ಖಾಸಿಂ ಇದಕ್ಕೆ ಪ್ರತಿಯಾಗಿ **ಚಿತ್ತಗಾಂಗ್, ಬರ್ದ್ವಾನ್, ಮಿಡ್ನಾಪುರ್** ಜಿಲ್ಲೆಗಳನ್ನು ಕಂಪನಿಗೆ ಒಪ್ಪಿಸಿದನು. ಮೀರ್‌ಖಾಸಿಂ ತನ್ನ ರಾಜಧಾನಿಯನ್ನು **ಮುರ್ಷಿದಾಬಾದ್‌**ನಿಂದ **ಮಾಂಗೇರ್‌**ಗೆ ವರ್ಗಾಯಿಸಿದನು. ಒಬ್ಬ ಸಮರ್ಥ ದೊರೆಯಾದ ಇವನು ಬ್ರಿಟಿಷ್ ನಿಯಂತ್ರಣದಿಂದ ಮುಕ್ತವಾಗಿ ಆಡಳಿತ ನಡೆಸಲು ನಿಶ್ಚಯಿಸಿದನು.
- ಮೀರ್‌ಖಾಸಿಂನು ಕಂಪನಿಯು ದಸ್ತಕಗಳ ದುರುಪಯೋಗ ಪಡಿಸಿಕೊಳ್ಳುವುದನ್ನು ನಿಯಂತ್ರಿಸಲು ಪ್ರಯತ್ನಿಸಿದನು. ಆದರೆ ಕಂಪನಿ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಅವನು ಎಲ್ಲಾ ಆಂತರಿಕ ವ್ಯಾಪಾರದ ಮೇಲಿನ ತೆರಿಗೆಯನ್ನು ತೆಗೆದು ಹಾಕಿದನು. ಇದರಿಂದ ಕಂಪನಿಗೆ ಮಾತ್ರ ದೊರಕುತ್ತಿದ್ದಂತಹ ತೆರಿಗೆ ವಿನಾಯ್ತಿ ಭಾರತದ ಎಲ್ಲಾ ವ್ಯಾಪಾರಿಗಳಿಗೂ ದೊರಕುವಂತೆ ಆಯಿತು.
- ಇದರಿಂದ ರೊಚ್ಚಿಗೆದ್ದ ಕಂಪನಿ ಇವನನ್ನು ಕೆಳಗಿಳಿಸುವ ಪ್ರಯತ್ನ (1763ರಲ್ಲಿ) ಮಾಡಿತು. ಆಗ ಮೀರ್‌ಖಾಸಿಂನು ಔದ್‌ನ ನವಾಬ ಶುಜಾ–ಉದೌಲ, ಮೊಘಲರ ಬಾದ್‌ಷಾ 2ನೇ ಷಾ ಆಲಂ ಇವರ ನೆರವಿನಿಂದ ಬ್ರಿಟಿಷರನ್ನು ಎದುರಿಸಲು ಆರಂಭಿಸಿದನು. ಇದು ಬಕ್ಸಾರ್ ಯುದ್ಧಕ್ಕೆ ಕಾರಣವಾಯಿತು.

1764ರ ಬಕ್ಸಾರ್ ಕದನ (ಅಕ್ಟೋಬರ್ 22, 1764)

- ಈ ಕದನದಲ್ಲಿ ಹೆಕ್ಟರ್‌ಮನ್ರೋ ನೇತೃತ್ವದ ಕಂಪನಿ ಸೇನೆಯು ಭಾರತೀಯ ಪಕ್ಷವನ್ನು (ಮೀರ್‌ಖಾಸಿಂ, ಶುಜಾ ಉದ್ದೌಲ ಅಹ್ಮದ್ ಷಾ ದುರ್ರಾನಿ ಮತ್ತು 2ನೇ ಷಾ ಆಲಂ) ಸೋಲಿಸಿ ಮೀರ್ ಖಾಸಿಂನನ್ನು ಕೊಂದು ಹಾಕಿತು.
- ಅನಂತರ ಕಂಪನಿಯು ಬಂಗಾಳದ ನವಾಬನನ್ನಾಗಿ ಮತ್ತೆ ಮೀರ್‌ಜಾಫರನನ್ನು ಅಧಿಕಾರಕ್ಕೆ ತಂದಿತು.
- ಕ್ರಿ.ಶ. 1765ರಲ್ಲಿ ಪರಾಜಿತ ಮೊಘಲ್ ದೊರೆ 2ನೇ ಷಾ ಆಲಂ ಶುಜಾ ಉದ್ದೌಲನೊಂದಿಗೆ ರಾಬರ್ಟ್ ಕ್ಲೈವ್, **ಅಲಹಾಬಾದ್ ಒಪ್ಪಂದ** ಮಾಡಿಕೊಂಡನು.
- ಅಲಹಾಬಾದ್ ಒಪ್ಪಂದದ ಪ್ರಕಾರ ಕಂಪನಿಯು **ಬಂಗಾಳ, ಬಿಹಾರ** ಮತ್ತು **ಒರಿಸ್ಸಾ**ಗಳಲ್ಲಿ ತೆರಿಗೆ ಸಂಗ್ರಹಿಸುವ ದಿವಾನಿ ಹಕ್ಕನ್ನು ಪಡೆಯಿತು. ಇದು ಮುಂದೆ ಕಂಪನಿ ಕಂದಾಯ ಆಡಳಿತಕ್ಕ

(ದಿವಾನಿ ಹಕ್ಕು) ಹಾಗೂ ನಾಗರಿಕ ಆಡಳಿತ ಮತ್ತು ಶಾಂತಿ ಸುವ್ಯವಸ್ಥೆ (ನಾಜಿಂ)ಯ ಹಕ್ಕನ್ನು ನವಾಬನಿಗೆ ನೀಡಿದರು. ಇದನ್ನು **ದ್ವಿಸರ್ಕಾರ ಪದ್ಧತಿ** ಎನ್ನುತ್ತಾರೆ.

- ಈ ದ್ವಿಸರ್ಕಾರ ಪದ್ಧತಿಯನ್ನು ರಾಬರ್ಟ್ ಕ್ಲೈವ್ 1765ರಲ್ಲಿ ಸ್ಥಾಪಿಸಿದನು. ಇದು 1772ರವರೆಗೂ ಅಸ್ತಿತ್ವದಲ್ಲಿತ್ತು. ನಂತರ ವಾರನ್ ಹೇಸ್ಟಿಂಗ್ಸ್ ಈ ದ್ವಿ ಸರ್ಕಾರ ಪದ್ಧತಿಯನ್ನು ರದ್ದುಮಾಡಿ ಬಂಗಾಳದ ಕೊನೆಯ ನವಾಬ ನಜ್ಮುದೌಲನಿಗೆ ನಿವೃತ್ತಿ ವೇತನ ನೀಡಿ ಬಂಗಾಳ ಪ್ರಾಂತ್ಯದ ಆಡಳಿತವನ್ನು ಕಂಪನಿಯ ನೇರ ಆಳ್ವಿಕೆಗೆ ಒಳಪಡಿಸಿಕೊಂಡನು. ಬಂಗಾಳದ ಮೊದಲ ಗೌರ್ನರ್ ಆಗಿ **ವಾರನ್ ಹೇಸ್ಟಿಂಗ್ಸ್** ನೇಮಕ.
- ರಾಬರ್ಟ್ ಕ್ಲೈವ್‌ನನ್ನು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪಕನೆಂದು ಕರೆಯಲಾಗುತ್ತದೆ. ಅವನು 1757–60 ಹಾಗೂ 1765–67ರಲ್ಲಿ ಎರಡು ಬಾರಿ ಬಂಗಾಳದ ಗೌರ್ನರ್ ಆಗಿದ್ದನು.

2. ಹೈದರಾಬಾದ್ (Hydrabad)

- ನಿಜಾಂ–ಉಲ್–ಮುಲ್ಕ್ ಅಥವಾ ಅಸಫಜಾ ಅಥವಾ ಚಿನ್‌ಕಿಚ್ಲುಖಾನ್ ಎಂಬುವನು ಕ್ರಿ.ಶ. 1724ರಲ್ಲಿ ಸ್ವಾಯುತ್ತ **ಹೈದರಾಬಾದ್** ರಾಜ್ಯ ಸ್ಥಾಪಿಸಿದನು. ಈ ವಂಶದ ಹೆಸರು **ಅಸಫ್‌ಜಾಹಿ ವಂಶ** ಎಂಬುದಾಗಿದೆ.
- ನಂತರ ಕ್ರಿ.ಶ. 1798ರಲ್ಲಿ ನಿಜಾಂ ಆಲಿ ಲಾರ್ಡ್ ವೆಲ್ಲೆಸ್ಲಿಯೊಂದಿಗೆ **ಸಹಾಯಕ ಸೈನ್ಯ ಪದ್ಧತಿ**ಗೆ ಸಹಿ ಹಾಕಿ ಬ್ರಿಟಿಷ್ ಸಾರ್ವಭೌಮತ್ವವನ್ನು ಒಪ್ಪಿಕೊಂಡನು. ಇದು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ಮೊದಲ ಸಂಸ್ಥಾನವಾಗಿದೆ. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ 2ನೇ ರಾಜ್ಯ **ಮೈಸೂರು** (1800)

3. ಔದ್ (Oudh)

- ಸಾದತ್‌ಖಾನ್–ಬಹ್ರಾನ್–ಉಲ್–ಮುಲ್ಕ್ ಎಂಬುವವನು 1722ರಲ್ಲಿ ಸ್ವಾಯುತ್ತ **ಔದ್ ರಾಜ್ಯ** ಸ್ಥಾಪಿಸಿದನು. ಮೊದಲ ಔದ್‌ನ ರಾಜಧಾನಿ ಫೈಜಾಬಾದ್. ನಂತರದಲ್ಲಿ ಔದ್ ರಾಜಧಾನಿ ಲಕ್ನೋ ಆಯಿತು.
- ಕ್ರಿ.ಶ. 1739ರ ಪರ್ಶಿಯಾದ ನಾದಿರ್ ಷಾನ ಭಾರತದ ದಾಳಿಯ ಸಂದರ್ಭದಲ್ಲಿ (ಕರ್ನಾಲ್ ಯುದ್ಧದಲ್ಲಿ ಭಾಗವಹಿಸಿದ್ದ ನವಾಬ) ಇವನು ಆತ್ಮಹತ್ಯೆ ಮಾಡಿಕೊಂಡನು.
- ಇವನ ನಂತರ ಸಪ್ಧರ್ ಜಂಗ್‌ನು ಅಧಿಕಾರಕ್ಕೆ ಬಂದನು. ಇವನನ್ನು ದೆಹಲಿಯ ಮೊಘಲ್ ರಾಜ್ಯದ ವಜೀರನಾಗಿ ನೇಮಿಸಲಾಯಿತು.
- ಇವನು ಏಕ ಕಾಲದಲ್ಲಿ ಔದ್‌ನ ನವಾಬ ಮತ್ತು ಮೊಘಲರ ವಜೀರ ಆಗಿದ್ದನು. ಆದ್ದರಿಂದ ಔದ್ ನವಾಬನನ್ನು ನವಾಬ್ ವಜೀರ್ ಎನ್ನುತ್ತಿದ್ದರು.

ಶುಜೌ–ಉದ್–ದೌಲ

- ಶುಜೌ ಉದ್ ದೌಲ ಕ್ರಿ.ಶ. 1764ರಲ್ಲಿ ಕಂಪನಿಯ ವಿರುದ್ಧ ಬಕ್ಸಾರ್ ಯುದ್ಧದಲ್ಲಿ ಭಾಗವಹಿಸಿ ಸೋತಿದ್ದನು. ಇಲ್ಲಿಂದ ಮುಂದೆ ಔದ್‌ನ ಮೇಲೆ ಕಂಪನಿಯ ನಿಯಂತ್ರಣ ಅಧಿಕವಾಯಿತು.
- ಶುಜಾ ಉದ್ ದೌಲನ ನಂತರ ಅಸಫ್ ಉದ್ ದೌಲ ನವಾಬನಾದನು. ಇವನು ವಾರನ್ ಹೇಸ್ಟಿಂಗ್ಸ್‌ನೊಂದಿಗೆ ಕ್ರಿ.ಶ. 1773ರಲ್ಲಿ **ಪೈಜಾಬಾದ್ ಒಪ್ಪಂದ** ಮಾಡಿಕೊಂಡನು. ಈ ಒಪ್ಪಂದದಿಂದ ಔದ್‌ನ ಮೇಲೆ ಕಂಪನಿಯ ನಿಯಂತ್ರಣ ಮತ್ತಷ್ಟು ಬಿಗಿಯಾಯಿತು.
- ಅಸಫ್ ಉದ್ ದೌಲನ ನಂತರ **ಸಾದತ್ ಆಲಿ** ಅಧಿಕಾರಕ್ಕೆ ಬಂದನು. ಇವನು 1801ರಲ್ಲಿ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದನು. ನಂತರ ಬಂದ ವಾಜಿದ್ ಆಲಿ ಷಾ ಔದ್‌ನ ಕೊನೆಯ ನವಾಬ.
- ಕ್ರಿ.ಶ. 1856ರಲ್ಲಿ ಔದ್‌ನ್ನು ದುರಾಡಳಿತದ ನೆಪವೊಡ್ಡಿ ಗೌರ್ನರ್ ಜನರಲ್ ಲಾರ್ಡ್ ಡಾಲೌಸಿ ವಶಪಡಿಸಿಕೊಂಡನು. 1857ರ ದಂಗೆಗೆ ಈ ಅಂಶವೂ ಕಾರಣವಾಯಿತು.
- ಔದ್‌ನ್ನು ಬ್ರಿಟಿಷರು ಭಾರತದಲ್ಲಿ ಆಕ್ರಮಿಸಿದ ಕೊನೆಯ ಪ್ರದೇಶವಾಗಿದೆ.
- ನಂತರ ಆಂಗ್ಲೋ ಮೈಸೂರು ಯುದ್ಧಗಳು ಆಂಗ್ಲೋ ಮರಾಠ ಯುದ್ಧಗಳು ಆರಂಭವಾದವು.

4. ಪಂಜಾಬ್ (Punjab)

- ಆರಂಭದಲ್ಲಿ ಪಂಜಾಬ್ ಮೊಘಲ್ ಸಾಮ್ರಾಜ್ಯದ ಭಾಗವಾಗಿತ್ತು. ಆದರೆ ಅಫ್ಘನ್‌ನ ಅಹ್ಮದ್ ಷಾ ಅಬ್ದಾಲಿ ಮತ್ತು ಪರ್ಶಿಯಾದ ನಾದಿರ್ ಷಾನ ದಾಳಿಗಳಿಂದಾಗಿ ಪಂಜಾಬ್ ಮೇಲಿನ ಮೊಘಲರ ನಿಯಂತ್ರಣ ಸಡಿಲವಾಯಿತು.
- ಆಗ ಪಂಜಾಬಿನಲ್ಲಿ ಮಿಸ್ಲೆಸ್‌ಗಳೆಂಬ 13 ಸಣ್ಣ ರಾಜ್ಯಗಳು ಪ್ರವರ್ಧಮಾನಕ್ಕೆ ಬಂದವು. ಅವುಗಳಲ್ಲೊಂದು **ಶುಕ್ರಚೇಕೈ** ಮಿಸ್ಲೆ ಇದರ ದೊರೆಯಾದ ಮಹಾಸಿಂಗನ ಮಗನೇ ರಣಜಿತ್ ಸಿಂಗ್. ಇವನು ಮಿಸ್ಲೆಸ್‌ಗಳನ್ನು ಆಕ್ರಮಿಸಿ ಪಂಜಾಬ್‌ನ ಸಿಖ್ ರಾಜ್ಯ ಸ್ಥಾಪಿಸಿದನು. ಇವನ ರಾಜಧಾನಿ **ಲಾಹೋರ್** ಆಗಿತ್ತು.
- ರಣಜಿತ್ ಸಿಂಗ್‌ನು ಕ್ರಿ.ಶ. 1809ರಲ್ಲಿ ಗೌರ್ನರ್ ಜನರಲ್ ಲಾರ್ಡ್ ಮಿಂಟೊನೊಂದಿಗೆ **ಅಮೃತಸರ ಒಪ್ಪಂದ** ಮಾಡಿಕೊಂಡನು. ಈ ಒಪ್ಪಂದದಂತೆ ಇವನು ಸಟ್ಲೆಜ್ ನದಿಯ ಪೂರ್ವಕ್ಕಿರುವ ಪ್ರದೇಶಗಳ ಹಕ್ಕುಗಳನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು.
- ಕ್ರಿ.ಶ. 1809ರಲ್ಲಿ ಅಫ್ಘನ್‌ನ ದೊರೆ **ಷಾಶುಜಾ** (ಅಹ್ಮದಾ ಷಾ ಅಬ್ದಾಲಿ ಮೊಮ್ಮಗ) ತನ್ನ ರಾಜ್ಯ ಕಳೆದುಕೊಂಡು ಪಂಜಾಬ್‌ಗೆ ಬಂದು ಸಿಂಹಾಸನ ಗಳಿಸಲು ರಣಜಿತ್ ಸಿಂಗ್‌ನ ನೆರವು ಕೇಳಿದನು. ಈ ಸಂದರ್ಭದಲ್ಲಿ ಹೆಸರಾಂತ **ಕೊಹಿನೂರ್ ವಜ್ರ**ವನ್ನು

- ಕ್ರಿ.ಶ. 1839ರಲ್ಲಿ ರಣಜಿತ್ ಸಿಂಗ್ ಮರಣ ಹೊಂದಿದ ನಂತರ 06 ವರ್ಷಗಳಲ್ಲಿ ಕರಕ್ ಸಿಂಗ್, ನವೋನಿಹೆಲ್‌ಸಿಂಗ್, ಕರಣ್‌ಸಿಂಗ್ ಮತ್ತು ದುಲೀಪ್‌ಸಿಂಗರು ಒಬ್ಬರ ನಂತರ ಒಬ್ಬರು ಅಧಿಕಾರಕ್ಕೆ ಬಂದರು.
- ದುಲೀಪ್‌ಸಿಂಗ್ ಪಂಜಾಬ್‌ನ ಸಿಖ್ ರಾಜ್ಯದ ಕೊನೆಯ ರಾಜ ಇವನು ಅಪ್ರಾಪ್ತನಾದ್ದರಿಂದ ರಾಣಿ ಜರಿದಾ ಆಳುತ್ತಿದ್ದಳು.
- 1845–46ರಲ್ಲಿ ಸಿಖ್ ರಾಜ್ಯದ ಮೇಲೆ ಬ್ರಿಟಿಷ್ ಗೌರ್‍ನರ್ ಜನರಲ್ **ಲಾರ್ಡ್ ಹಾರ್ಡಿಂಜ್** ನೇತೃತ್ವದಲ್ಲಿ ದಾಳಿ ಮಾಡಿದ್ದರಿಂದ 1ನೇ ಆಂಗ್ಲೋ ಸಿಖ್ ಯುದ್ಧ (1845–46) ಆರಂಭವಾಯಿತು.

ಮೊದಲ ಆಂಗ್ಲೋ ಸಿಖ್ ಯುದ್ಧ (ಕ್ರಿ.ಶ.1845–46)

- ಬ್ರಿಟಿಷರು ಈ ಯುದ್ಧದಲ್ಲಿ ಗೆದ್ದರೂ ಪಂಜಾಬ್ ಆಕ್ರಮಿಸಲಿಲ್ಲ. ಬದಲಾಗಿ ಕ್ರಿ.ಶ. 1846ರಲ್ಲಿ **ಲಾಹೋರ್ ಒಪ್ಪಂದ** ಮತ್ತು **ಬೈರೊವಾಕ್ ಒಪ್ಪಂದ** ಎಂಬ 02 ಒಪ್ಪಂದಗಳು ಮಾಡಿಕೊಂಡು ಪಂಜಾಬಿನ ಮೇಲೆ ತಮ್ಮ ನಿಯಂತ್ರಣ ಹೇರಿದರು.

2ನೇ ಆಂಗ್ಲೋ ಸಿಖ್ ಯುದ್ಧ – 1849

- 1849ರಲ್ಲಿ ಗೌರ್ನರ್ ಜನರಲ್ ಲಾರ್ಡ್ ಡಾಲೌಸಿ ಪಂಜಾಬ್ ಮೇಲೆ ದಾಳಿ ಮಾಡಿ ಪಂಜಾಬನ್ನು ವಶಪಡಿಸಿಕೊಂಡನು. ಈ ಯುದ್ಧಕ್ಕೆ ತತ್‌ಕ್ಷಣದ ಕಾರಣ **ಮುಲ್‌ರಾಜ್** ಎಂಬುವವನು ಬ್ರಿಟಿಷರ ವಿರುದ್ಧ ಧಾರ್ಮಿಕ ಯುದ್ಧವನ್ನು ಸಾರಿದುದಾಗಿತ್ತು.

5. ಕಾರ್ನಾಟಿಕ್ (Carniatik)

- ಇದು ತಮಿಳುನಾಡಿನ ಕೋರಮಂಡಲ ತೀರವಾಗಿದೆ. ಇಲ್ಲಿ ಸಾದತ್ ಉಲಾಖಾನ್ ಸ್ವಾಯತ್ತ **ಕಾರ್ನಾಟಿಕ್** ರಾಜ್ಯ ಸ್ಥಾಪಿಸಿದನು. ಇದರ ರಾಜಧಾನಿ **ಆರ್ಕಾಟ್** ಆಗಿತ್ತು. ಇದು ಹೈದರಾಬಾದ್ ನಿಜಾಮರ ಒಂದು ಪ್ರಾಂತ್ಯವಾಗಿತ್ತು. ಅಂತಿಮವಾಗಿ 1801ರಲ್ಲಿ ಲಾರ್ಡ್ ವೆಲ್ಲೆಸ್ಲಿ ಈ ರಾಜ್ಯವನ್ನು ವಶಪಡಿಸಿಕೊಂಡನು.

6. ಸಿಂದ್ (Sindh)

- ಸಿಂದ್‌ನ್ನು 1843ರಲ್ಲಿ ಗೌರ್‍ನರ್ ಜನರಲ್ ಲಾರ್ಡ್ ಎಲಿನ್ ಬರೊ ಆಕ್ರಮಿಸಿದನು.
- ಶಾಂತಿಯುತ ಮಾರ್ಗಗಳ ಮೂಲಕ ಸಾಮ್ರಾಜ್ಯ ವಿಸ್ತರಣೆ

1. ಸಹಾಯಕ ಸೈನ್ಯ ಪದ್ಧತಿ (Subsidiary Allaince System)

- ಸಹಾಯಕ ಸೈನ್ಯ ಪದ್ಧತಿಯನ್ನು ಲಾರ್ಡ್ ವೆಲ್ಲೆಸ್ಲಿಯು ಆರಂಭಿಸಿದನು. ಈ ಪದ್ಧತಿಯನ್ನು ಒಪ್ಪಿದ ರಾಜ್ಯಗಳ ರಕ್ಷಣೆ ಬ್ರಿಟಿಷರಾಗಿದ್ದು ಈ ರಾಜ್ಯಗಳು ತಮ್ಮ ವಿದೇಶಾಂಗ ವ್ಯವಹಾರದ ಹಕ್ಕನ್ನು ಬ್ರಿಟಿಷರಿಗೆ ಒಪ್ಪಿಸುವುದರ ಜೊತೆಗೆ ಬ್ರಿಟಿಷರ ಸೈನ್ಯದ ನಿರ್ವಹಣೆಗಾಗಿ ತಮ್ಮ ಸಾಮ್ರಾಜ್ಯದ ಕೆಲವು ಪ್ರದೇಶಗಳನ್ನು ಬಿಟ್ಟುಕೊಡಬೇಕಾಯಿತು.

ಈ ಪದ್ಧತಿಯನ್ನು ಮೊದಲು ಒಪ್ಪಿಕೊಂಡವರು.

1. ಹೈದರಾಬಾದ್ – 1798 (ನಿಜಾಂ ಆಲಿ)
2. ಮೈಸೂರು – 1800 (3ನೇ ಕೃಷ್ಣರಾಜ ಒಡೆಯರ್)
3. ಔದ್ – 1801 (ನವಾಬ ಸಾದತ್ ಆಲಿ)
4. 2ನೇ ಬಾಜಿರಾಯ
5. ಸಿಂಧಿಯಾ
6. ಬೋನ್‌ಸ್ಲೇ

2. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ (Doctrine of Lapse)

- **ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಪದ್ಧತಿಯನ್ನು** ಆರಂಭಿಸಿದವರು – ಲಾರ್ಡ್ ಡಾಲೌಸಿ. ಇವನು ಈ ನೀತಿಯ ಪ್ರಕಾರ ಆಕ್ರಮಿಸಿದ ರಾಜ್ಯಗಳೆಂದರೆ

1. ಸತಾರ (1848)
2. ಜಯಪುರ (ಉತ್ತರ ಪ್ರದೇಶ) (1849)
3. ಸಂಬಲ್ಪುರ (ಒರಿಸ್ಸಾ) (1849)
4. ಭಾಗತ್ ಸಂಸ್ಥಾನ (1850)
5. ಉದಯಪುರ್ (1852)
6. ಝಾನ್ಸಿ (1853)
7. ನಾಗ್ಪುರ (1854) ಇನ್ನೂ ಮುಂತಾದವು.

21. ಬ್ರಿಟಿಷ್ ಆಡಳಿತ ವ್ಯವಸ್ಥೆ (British Administrative System)

21.1 ಭಾರತದಲ್ಲಿ ಬ್ರಿಟಿಷ್ ನೀತಿಗಳು

- ಭಾರತದಲ್ಲಿ ಬ್ರಿಟಿಷರ ಮುಖ್ಯ ಗುರಿ ವ್ಯಾಪಾರದಿಂದ ಆದಷ್ಟು ಹೆಚ್ಚಿನ ಲಾಭ ಗಳಿಸುವುದು ಮತ್ತು ಭಾರತವನ್ನು ತನ್ನ ತಾಯ್ನಾಡಿನ ಕೈಗಾರಿಕೆಗಳ ಉತ್ಪನ್ನಗಳಿಗೆ ಮಾರುಕಟ್ಟೆಯನ್ನಾಗಿಸುವುದು ಹಾಗೂ ಭಾರತದ ಕಚ್ಚಾ ವಸ್ತುಗಳನ್ನು ಇಂಗ್ಲೆಂಡಿನ ಕೈಗಾರಿಕೆಗೆ ರವಾನಿಸುವುದು. 1857 ರಿಂದ 1947ರ ವರೆಗಿನ ಎಲ್ಲಾ ಬ್ರಿಟಿಷ್ ನೀತಿಗಳು ಈ ದೃಷ್ಟಿಯಿಂದಲೇ ರೂಪುಗೊಂಡಿದ್ದವು.
- ಭಾರತದ ಮೇಲೆ ದಾಳಿ ಮಾಡಿದ ಈ ಮುಂಚಿನ ದಾಳಿಕೋರರು ಭಾರತದಲ್ಲಿಯೇ ನೆಲೆಸಿದ್ದರಿಂದ ಭಾರತದ ಸಂಪತ್ತು ದೇಶದ ಹೊರಗೆ ಹೋಗಲಿಲ್ಲ. ಆದರೆ ಬ್ರಿಟಿಷರು ಭಾರತದಲ್ಲಿ ನೆಲೆಸುವ ಗುರಿ ಹೊಂದದೆ ಭಾರತವನ್ನು ತನ್ನ ತಾಯ್ನಾಡಿನ ಆರ್ಥಿಕ ಹಿತಾಸಕ್ತಿಯ ರಕ್ಷಣೆಗಾಗಿ ಒಂದು ವಸಾಹತುವನ್ನಾಗಿ ಪರಿವರ್ತಿಸಲು ಯತ್ನಿಸಿದ್ದು ಭಾರತದ ಅರ್ಥ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮಗಳನ್ನು ಬೀರಿದವು.

ಬ್ರಿಟೀಷ್ ಆಳ್ವಿಕೆಯ ಆರ್ಥಿಕ ಪರಿಣಾಮಗಳು

ಎ. ಆರ್ಥಿಕ ಸ್ರವಿತತೆ ಅಥವಾ ಸಂಪತ್ತಿನ ಸೋರಿಕೆ

- ಪ್ಲಾಸಿ ಕದನದ ನಂತರ ಹಾಗೂ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯು ಕ್ರಿ.ಶ. 1765ರಲ್ಲಿ ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳ ದಿವಾನಿ ಹಕ್ಕನ್ನು ಪಡೆದ ನಂತರ ಸಂಗ್ರಹಿಸಿದ ಕಂದಾಯವನ್ನು ಭಾರತದ ವಸ್ತುಗಳನ್ನು ಕೊಳ್ಳಲು ಬಳಸುತ್ತಿದ್ದರು.
- ಹೀಗೆ ಕೊಂಡ ವಸ್ತುಗಳನ್ನು ಯೂರೋಪಿಗೆ ರಫ್ತು ಮಾಡುತ್ತಿದ್ದರು. ಇದರಿಂದ ಬಂದ ಲಾಭವನ್ನು ಇಂಗ್ಲೆಂಡಿಗೆ ರವಾನೆ ಮಾಡುತ್ತಿದ್ದರು. ಹೀಗೆ ಭಾರತಕ್ಕೆ ಇಂಗ್ಲೆಂಡಿನಿಂದ ಯಾವುದೇ ಪ್ರತಿಫಲ ಬರದೆ ಭಾರತದ ಸಂಪತ್ತು ದೇಶದ ಹೊರಗೆ ಹರಿದು ಹೋಗಲಾರಂಭಿಸಿತ್ತು. ಇದನ್ನು **ಸಂಪತ್ತಿನ ಸ್ರವಿತತೆ** ಎನ್ನುತ್ತಾರೆ.
- ಭಾರತದ ಸಂಪತ್ತು ಇನ್ನೂ ಅನೇಕ ವಿಧಗಳಲ್ಲಿ ಇಂಗ್ಲೆಂಡಿಗೆ ಹರಿದು ಹೋಗುತ್ತಿತ್ತು ಅವುಗಳೆಂದರೆ

1. ಇಂಗ್ಲೀಷ್ ನೌಕರರ ಸಂಬಳ ಮತ್ತು ನಿವೃತ್ತಿ ವೇತನ
2. ಭಾರತದ ಸರ್ಕಾರಕ್ಕೆ ಸಂಬಂಧಿಸಿದ ಇಂಗ್ಲೆಂಡಿನ India House ಕಛೇರಿ ನಡೆಸುತ್ತಿದ್ದ Home charges ಎಂಬ ಖರ್ಚುಗಳು.
3. ಬ್ರಿಟಿಷ್ ಸರ್ಕಾರ ಮಾಡಿದ್ದ ಸಾಲದ ಮೇಲಿನ ಬಡ್ಡಿ.
4. ರೈಲ್ವೆ ಮತ್ತು ಪ್ಲಾಂಟೇಷನ್‌ಗಳಲ್ಲಿ ಯೂರೋಪಿಯನ್ನರು ಹೂಡಿದ್ದ ಲಾಭದ ಹಣ.

- ದಾದಾಬಾಯಿ ನವರೋಜಿಯವರು ಮೊದಲ ಬಾರಿಗೆ ಈ ಆರ್ಥಿಕ ಸ್ರವಿತತೆಯ ಸಿದ್ಧಾಂತವನ್ನು ತಮ್ಮ ಕೃತಿಯಾದ Poverty and un British Rule In India ...

- ಆರ್.ಪಿ. ದತ್‌ರವರು ತಮ್ಮ ಕೃತಿಯಾದ India Today ಯಲ್ಲಿ ಕಾರ್ಲ್ ಮಾರ್ಕ್ಸ್‌ರ ಮೂರು ಹಂತದ ಬ್ರಿಟಿಷ್ ವಸಾಹತು ನೀತಿ ಮತ್ತು ಆರ್ಥಿಕ ಶೋಷಣೆಯ ಬಗ್ಗೆ ವಿವರಿಸಿದ್ದಾರೆ.

  1ನೇ ಹಂತ ಕ್ರಿ.ಶ. 1757–1813 – **ವ್ಯಾಪಾರ ಪ್ರವೃತ್ತಿ ಹಂತ**

  2ನೇ ಹಂತ ಕ್ರಿ.ಶ. 1813 – 1858 – **ಮುಕ್ತ ವ್ಯಾಪಾರ ನೀತಿ**

  3ನೇ ಹಂತ ಕ್ರಿ.ಶ. 1860ರ ನಂತರ – **ಬ್ರಿಟಿಷ್ ವಸಾಹತು ನೀತಿ,** ಆರ್ಥಿಕ ಬಂಡವಾಳ ಹೂಡುವಿಕೆ

- ಬ್ರಿಟಿಷರು ಭಾರತದ ಬಂಡವಾಳ ಮತ್ತು ಕೈಗಾರಿಕೆಯ ಮೇಲೆ ಹತೋಟಿ ಹೊಂದಲು ನಿರ್ವಾಹಕ ಮಂಡಳಿಯನ್ನು ಜಾರಿಗೊಸಿದರು.
- ಕಂಪನಿಯ ಮೂಲ ಆದಾಯ ಭಾರತೀಯ ವಸ್ತುಗಳಾಗಿದ್ದು ಬ್ರಿಟನ್ ಮತ್ತಿತರ ರಾಷ್ಟ್ರಗಳಲ್ಲಿ ಭಾರತೀಯ ವಸ್ತುಗಳಿಗೆ ಮಾರ್ಕೆಟ್ ಸ್ಥಾಪಿಸುವುದು ಹಾಗೆಯೇ ಭಾರತೀಯ ವಸ್ತುಗಳ ರಪ್ತು ಹೆಚ್ಚಿಸಿ ಉತ್ಪಾದನೆಗೆ ಪ್ರೋತ್ಸಾಹ ನೀಡಿದರು.
- ಕ್ರಿ.ಶ. 1720ರಿಂದ ಭಾರತದ ಹತ್ತಿ ಬಟ್ಟೆ ಉಪಯೋಗಿಸುವುದನ್ನು ಬ್ರಿಟನ್ ನಿಷೇಧಿಸಿತು. ಹಾಲೆಂಡ್ ಹೊರತುಪಡಿಸಿ ಇತರ ಎಲ್ಲಾ ಯೂರೋಪ್ ರಾಷ್ಟ್ರಗಳು ಭಾರತದ ಹತ್ತಿ ಬಟ್ಟೆಗಳ ಮೇಲೆ ಅಧಿಕ ಸುಂಕ ವಿಧಿಸಿದವು.
- ಕೊನೆಗೆ ಭಾರತದ ಸಿದ್ಧ ವಸ್ತುಗಳನ್ನು ರಫ್ತು ಮಾಡುವ ಬದಲು ಕಚ್ಚಾ ವಸ್ತುಗಳಾದ ಹತ್ತಿ, ರೇಷ್ಮೆ, ಮತ್ತಿತರ ವಸ್ತುಗಳನ್ನು ಬ್ರಿಟನ್‌ಗೆ ಕಳುಹಿಸುವಂತಾಯಿತು.
- 19ನೇ ಶತಮಾನದ ಕೊನೆಗೆ ಭಾರತದ ರಫ್ತು ವಸ್ತುಗಳು ಕಚ್ಚಾ ಹತ್ತಿ, ಸೆಣಬು, ರೇಷ್ಮೆ, ಎಣ್ಣೆಕಾಳು, ಚರ್ಮ, ಇಂಡಿಗೋ, ಟೀ ಮುಂತಾದವು.

ಬಿ. ಕೃಷಿ ವ್ಯವಸ್ಥೆಯಲ್ಲಿ ಬ್ರಿಟೀಷರು ತಂದ ಬದಲಾವಣೆಗಳು

- ಬ್ರಿಟಿಷರು ಭಾರತದ ಕೃಷಿ ಭೂಮಿಯಿಂದ ಸಾಧ್ಯವಾದಷ್ಟು ಹೆಚ್ಚು ಭೂ ಕಂದಾಯ ಸಂಗ್ರಹಿಸುವುದೇ ತಮ್ಮ ಗುರಿಯನ್ನಾಗಿಸಿಕೊಂಡಿದ್ದರು. ಇದಕ್ಕಾಗಿ ಹಲವು ಕಂದಾಯ ಪದ್ಧತಿ ಜಾರಿಗೊಳಿಸಿದರು.

ಎ. ಖಾಯಂ ಜಮೀನ್ದಾರಿ ಪದ್ಧತಿ (Permanent Settlement)

- ವಾರನ್ ಹೇಸ್ಟಿಂಗ್ಸ್‌ನು ಭೂ ಕಂದಾಯ ಸಂಗ್ರಹಾಧಿಕಾರವನ್ನು ಹರಾಜಿನ ಮೂಲಕ ಹೆಚ್ಚಿನ ಮೌಲ್ಯಕ್ಕೆ ಖಾಸಗಿ ವ್ಯಕ್ತಿಗಳಿಗೆ ವಹಿಸುವ ವ್ಯವಸ್ಥೆ ಆರಂಭಿಸಿದನು. (ಇದು ಸರಿಯಾಗಿ ಕಾರ್ಯ ನಿರ್ವಹಿಸದ ಕಾರಣ)
- ಲಾರ್ಡ್ ಕಾರ್ನ್ ವಾಲೀಸನು **ಖಾಯಂ ಜಮೀನ್ದಾರಿ ಪದ್ಧತಿಯನ್ನು**

ಕ್ರಿ.ಶ. **1793**ರಲ್ಲಿ **ಬಂಗಾಳದಲ್ಲಿ** ಪರಿಚಯಿಸಿದನು. ಶೇ. 19ರಷ್ಟು ಭಾಗ ಈ ಪದ್ಧತಿಗೊಳಪಟ್ಟಿತು.

- ಖಾಯಂ ಜಮೀನ್ದಾರಿ ಪದ್ಧತಿ **ಬಂಗಾಳ, ಬಿಹಾರ, ಒರಿಸ್ಸಾ** ನಂತರದಲ್ಲಿ **ವಾರಣಾಸಿ** ಮತ್ತು **ಉತ್ತರ ಕರ್ನಾಟಕದ** ಭಾಗಗಳಲ್ಲಿ ಜಾರಿಗೊಳಿಸಲಾಯಿತು.
- ಖಾಯಂ ಜಮೀನ್ದಾರಿ ಪದ್ಧತಿಯಲ್ಲಿ ಜಮೀನ್ದಾರನೇ ಭೂ ಮಾಲೀಕನಾಗಿರುತ್ತಿದ್ದನು. ಇವರ ಅಧೀನದಲ್ಲಿದ್ದ ಪ್ರದೇಶಗಳ ಕಂದಾಯವನ್ನು ಸಂಗ್ರಹಿಸಲಾಗುತ್ತಿತ್ತು. ಅವರು ಸಂಗ್ರಹಿಸಲಾಗಿದ್ದ ಕಂದಾಯದಲ್ಲಿ 10/11 ಭಾಗವನ್ನು ಸರ್ಕಾರದ ಪಾಲನ್ನಾಗಿ ಸಂಗ್ರಹಿಸಿ ಉಳಿದ 1 ಭಾಗವನ್ನು ಜಮೀನ್ದಾರರಿಗೆ ನೀಡಲಾಗುತ್ತಿತ್ತು.
- ಈ ಜಮೀನ್ದಾರರು ತಮ್ಮ ಅಧೀನದಲ್ಲಿದ್ದ ಗೇಣಿದಾರರನ್ನು ಅಧಿಕ ಲಾಭಕ್ಕಾಗಿ ಪೀಡಿಸುತ್ತಿದ್ದರಿಂದ ಸಾಮಾನ್ಯ ರೈತನು ಸಂಕಷ್ಟವನ್ನು ಅನುಭವಿಸಬೇಕಾಯಿತು.

ಬಿ. ರೈತವಾರಿ ಪದ್ಧತಿ (Ryot wari settlement)

- ಇದನ್ನು 1820ರಲ್ಲಿ **ಥಾಮಸ್ ಮನ್ರೋ** ಮತ್ತು **ಕ್ಯಾಪ್ಟನ್‌ರೀಡ್** ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೆ ತಂದರು. ಈ ಪದ್ಧತಿಯಲ್ಲಿ ರೈತನನ್ನು ಭೂಮಾಲೀಕ ಎಂದು ಮಾನ್ಯ ಮಾಡಿ ಅವನಿಂದ ನೇರವಾಗಿ ಸರ್ಕಾರವೇ ತೆರಿಗೆಯನ್ನು ಸಂಗ್ರಹಿಸುತ್ತಿತ್ತು.
- ಪ್ರತಿ 30 ವರ್ಷಕ್ಕೊಮ್ಮೆ ಕಂದಾಯ ಪುನರ್ ನಿಗಧಿ ಮಾಡಲಾಗುತ್ತಿತ್ತು. ರೈತವಾರಿ ಪದ್ಧತಿ ಮುಂಬೈ, ಮದ್ರಾಸ್ ಪೂರ್ವ ಬಂಗಾಳ, ಅಸ್ಸಾಂ ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಜಾರಿಗೆ ತರಲಾಯಿತು.
- ಇಲ್ಲಿ ಜಮೀನ್ದಾರಿ ಶೋಷಣೆ ಇಲ್ಲದಿದ್ದರೂ ನಿಗಧಿತ ಸಮಯದಲ್ಲಿ ಅಧಿಕ ದರದ ಕಂದಾಯವನ್ನು ರೈತರು ನೀಡಬೇಕಾಗಿದ್ದರಿಂದ ಗ್ರಾಮೀಣ ಸಾಲಿಗರ ಬಲೆಯಲ್ಲಿ ಅವರು ಬೀಳುವಂತಾಯಿತು.

ಸಿ. ಮಹಲ್ವಾರಿ ಪದ್ಧತಿ (Mahalwari system)

- ವಾಯುವ್ಯ ಪ್ರಾಂತ್ಯದಲ್ಲಿ **ಜೇಮ್ಸ್ ಥಾಮ್ಸನ್** ಜಾರಿಗೆ ತಂದನು. ಈ ಪದ್ಧತಿಯಲ್ಲಿ ಮಹಲ್ ಅಥವಾ ಹಳ್ಳಿಯನ್ನು ಒಂದು ಕಂದಾಯ ಘಟಕವೆಂದು ಪರಿಗಣಿಸಿ ಆ ಮಹಲ್‌ನ ಎಲ್ಲಾ ಭೂ ಮಾಲೀಕರು ಸಾಮೂಹಿಕವಾಗಿ ಕಂದಾಯ ನೀಡಿಕೆಗೆ ಜವಾಬ್ದಾರರಾಗುವಂತೆ ಮಾಡಲಾಯಿತು.
- ಈ ಪದ್ಧತಿಯನ್ನು ಆಗ್ರಾ, ಔದ್, ಪಂಜಾಬ್, ಸಂಯುಕ್ತ ಪ್ರಾಂತ್ಯ, ಗಂಗಾ ಕಣಿವೆಯಲ್ಲಿ ಜಾರಿಗೊಳಿಸಲಾಯಿತು.
- ಈ ಮೇಲಿನ ಕಂದಾಯ ಪದ್ಧತಿಗಳಿಂದ ರೈತರು ಗ್ರಾಮೀಣ ಸಾಲಿಗರ ಹಿಡಿತದಲ್ಲಿ ಸದಾ ಬಳಲುವಂತಾಯಿತು.

ಕೃಷಿಯ ವಾಣಿಜ್ಯೀಕರಣ
Commercialisation of Agriculture

- ಇಂಗ್ಲೆಂಡಿನ ಕೈಗಾರಿಕೆಗಳಿಗೆ ಅಗತ್ಯವಾದ ಕೃಷಿ ಕಚ್ಚಾ ಸರಕುಗಳನ್ನು ಪಡೆಯುವ ಸಲುವಾಗಿ ಬ್ರಿಟಿಷ್ ಆಡಳಿತ ವ್ಯವಸ್ಥೆ ಭಾರತದಲ್ಲಿ ವಾಣಿಜ್ಯ ಕೃಷಿಯನ್ನು ಅವಲಂಬಿಸಿತು. ಅಂದರೆ ಇಲ್ಲಿಯವರೆಗೆ ತನ್ನ ಮನೆಗಾಗಿ ಉತ್ಪಾದಿಸಿಕೊಳ್ಳುತ್ತಿದ್ದ ರೈತ, ಮಾರುಕಟ್ಟೆಗಾಗಿ ಬೆಳೆಯಬೇಕಾಯಿತು.
- ಅಲ್ಲದೆ ಕಂದಾಯ ಹಣದ ರೂಪದಲ್ಲಿ ಸಲ್ಲಿಸಬೇಕಾಗಿದ್ದರಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯದೆ ರೈತರಿಗೆ ಅನ್ಯ ಮಾರ್ಗಗಳಿರಲಿಲ್ಲ.
- ಕೃಷಿಯ ವಾಣಿಜ್ಯೀಕರಣದಿಂದ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿ ದೇಶದಲ್ಲಿ ಅನೇಕ ಕ್ಷಾಮಗಳು ತಲೆದೋರಿದವು.

ಉದಾ: 1866ರ ಒರಿಸ್ಸಾ ಭೀಕರ ಕ್ಷಾಮ – ಕುರಿತು

- **ಲಾರೆನ್ಸ್:** ಜನರು ಆಹಾರ ವಸತಿಯಿಲ್ಲದೆ ಕಷ್ಟಪಟ್ಟರು. ಅನಾವೃಷ್ಟಿಯು ಬಿಟ್ಟಿದ್ದನ್ನು ಪ್ರವಾಹಗಳು ಕೊಚ್ಚಿಕೊಂಡು ಹೋದವು ಎಂದಿದ್ದಾರೆ.
- **ಸರ್ ಕ್ಯಾಂಪ್‌ಬೆಲ್:** 19ನೇ ಶತಮಾನದ ಭೀಕರ ಕ್ಷಾಮದಲ್ಲಿ ಎಲ್ಲೆಲ್ಲಿಯೂ ಹೆಣಗಳು ಅಸ್ಥಿಪಂಜರಗಳನ್ನು ಕಂಡು ನನಗೆ ದಿಗ್ಭ್ರಮೆಯಾಯಿತು ಎಂದಿದ್ದಾರೆ.
- **ಲಾರ್ಡ್ ಲಿಟ್ಟನ್** ಕಾಲದಲ್ಲಿ ಮದ್ರಾಸ್, ಹೈದರಾದಾದ್, ಬಾಂಬೆ, ಮೈಸೂರು, ರಾಜ್ಯಗಳಲ್ಲಿ ಕ್ಷಾಮ ತಲೆದೋರಿತು. ಇಂತಹ ಸಮಯದಲ್ಲಿ 1877ರಲ್ಲಿ ಲಿಟ್ಟನ್ ದೆಹಲಿಯ ದರ್ಬಾರ್ ಏರ್ಪಡಿಸಿ **ವಿಕ್ಟೋರಿಯಾ ಮಹಾರಾಣಿ ಭಾರತದ ಚಕ್ರವರ್ತಿನಿ** ಎಂದು ಘೋಷಿಸಲಾಯಿತು.
- 1896ರ ಲಾರ್ಡ್ ಎಲೆನ್ ಬರೋ ಕಾಲದಲ್ಲಿ ಅನಾವೃಷ್ಟಿಯಿಂದಾಗಿ ಪಂಜಾಬ್, ರಾಜಸ್ಥಾನ, ಬಿಹಾರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ಅಯೋಧ್ಯೆಗಳಲ್ಲಿ ಕ್ಷಾಮದಿಂದಾಗಿ $7^1/_2$ ಲಕ್ಷ ಜನ ಸತ್ತರು.
- ಹಳ್ಳಿ ಮತ್ತು ನಗರಗಳಲ್ಲಿನ ಗುಡಿ ಕೈಗಾರಿಕೆಗಳು ನಾಶಗೊಂಡಿದ್ದರಿಂದ ಕುಶಲಕರ್ಮಿಗಳು ಕೃಷಿ ಭೂಮಿಯನ್ನು ಜೀವನೋಪಾಯಕ್ಕಾಗಿ ಅವಲಂಬಿಸಬೇಕಾಗಿದ್ದರಿಂದ ಭಾರತದ ಆರ್ಥಿಕ ವ್ಯವಸ್ಥೆ ಗ್ರಾಮೀಣೀಕರಣಗೊಂಡಿತ್ತು. ನಗರಗಳು ಇಳಿಮುಖವಾದವು. ಜಮೀನುಗಳಲ್ಲಿ ಜನದಟ್ಟಣೆ ಅಗತ್ಯಕ್ಕಿಂತ ಹೆಚ್ಚಾಯಿತು.
- ಅನೇಕ ಕೃಷಿಕರು ಸರ್ಕಾರದ ಕಂದಾಯದ ನೀತಿಗಳಿಂದ ಜಮೀನು ಕಳೆದುಕೊಂಡು ಭೂರಹಿತ ಕೃಷಿ ಕಾರ್ಮಿಕರಾಗಿ ಬಾಳಬೇಕಾಯಿತು.
- ಬ್ರಿಟಿಷ್ ಬಂಡವಾಳಗಾರರು ಭಾರತದಲ್ಲಿ ಲಭ್ಯವಿದ್ದ ಫಲವತ್ತಾದ ಜಮೀನು ಹಾಗೂ ಕಡಿಮೆ ಕೂಲಿಗೆ ಲಭ್ಯವಾಗುತ್ತಿದ್ದ ಕೃಷಿ ಕಾರ್ಮಿಕರನ್ನು ಬಳಸಿಕೊಳ್ಳಲು ಭಾರತದಲ್ಲಿ ಟೀ, ಕಾಫಿ, ನೀಲಿ ಪ್ಲಾಂಟೇಷನ್‌ಗಳನ್ನು ಆರಂಭಿಸಿದರು.

21.2 ಭಾರತೀಯ ಕೈಗಾರಿಕೆಗಳ ನಾಶ

- 18ನೇ ಶತಮಾನದ ಆರಂಭದಲ್ಲಿ ಇಂಗ್ಲೆಂಡಿನಲ್ಲಿ **ಕೈಗಾರಿಕಾ ಕ್ರಾಂತಿ** ಜರುಗುವ ಮುನ್ನ ಭಾರತದ ಗೃಹ ಕೈಗಾರಿಕಾ ಸರಕುಗಳಿಗೆ ಯೂರೋಪಿನಲ್ಲಿ ಬೇಡಿಕೆಯಿದ್ದುದರಿಂದ ಬ್ರಿಟಿಷರು ಅವುಗಳನ್ನು

ರಫ್ತು ಮಾಡುವ ಮೂಲಕ ಅಪಾರ ಲಾಭವನ್ನು ಗಳಿಸುತ್ತಿದ್ದರು.

- ಆದರೆ 18ನೇ ಶತಮಾನದ ಮಧ್ಯ ಭಾಗದ ನಂತರ ಇಂಗ್ಲೇಂಡ್‌ನಲ್ಲಿ ಕೈಗಾರಿಕಾ ಕ್ರಾಂತಿ ಜರುಗಿದ್ದರಿಂದ ಭಾರತವನ್ನು ಇಂಗ್ಲೇಂಡಿನ ಕೈಗಾರಿಕಾ ಸರಕುಗಳಿಗೆ ಮಾರುಕಟ್ಟೆಯನ್ನಾಗಿ ಮಾಡಲು ಹಾಗೂ ಇಂಗ್ಲೇಂಡಿನ ಕೈಗಾರಿಕೆಗಳಿಗೆ ಭಾರತದ ಕಚ್ಚಾ ಸರಕುಗಳನ್ನು ರವಾನಿಸಲು ಭಾರತದ ಕೈಗಾರಿಕೆಗಳನ್ನು ನಾಶ ಮಾಡಲು ಬ್ರಿಟಿಷರು ಪ್ರಯತ್ನಿಸಿದರು.
- ಭಾರತೀಯ ರಫ್ತುಗಳ ಮೇಲೆ ಹೆಚ್ಚಿನ ಪ್ರಮಾಣ ಸುಂಕ ವಿಧಿಸುವುದು, ಇಂಗ್ಲೆಂಡಿನಿಂದ ಆಮದಾಗುವ ವಸ್ತುಗಳಿಗೆ ಸುಂಕ ರಹಿತ ಪ್ರವೇಶ ಇವುಗಳಿಂದ ಭಾರತೀಯ ಕೈಗಾರಿಕಾ ಸರಕುಗಳು ತಮ್ಮ ಸ್ಪರ್ಧಾತ್ಮಕತೆಯನ್ನು ಕಳೆದುಕೊಂಡವು. ಇವೆಲ್ಲವುಗಳಿಂದ ಒಂದು ಕಾಲದಲ್ಲಿ ಮುಂದುವರಿದ ಕೈಗಾರಿಕಾ ದೇಶವಾಗಿದ್ದ ಭಾರತ ಕ್ರಮೇಣ ಹಿಂದುಳಿದ ಕೃಷಿಕ ದೇಶವಾಯಿತು.
- ಬಂಗಾಳವನ್ನು ಬಿಟ್ಟರೆ ಲಕ್ನೋ, ಅಹ್ಮದಾಬಾದ್, ನಾಗಪುರ ಮತ್ತು ಮಥುರಾಗಳು ಹತ್ತಿ ಕೈಗಾರಿಕೆಯ ಕೇಂದ್ರಗಳಾದವು. ಪಂಜಾಬ್ ಮತ್ತು ಕಾಶ್ಮೀರಗಳ ಉತ್ತಮ ಶಾಲುಗಳನ್ನು ನೇಯ್ಯುತ್ತಿದ್ದರು. ಹಿತ್ತಾಳೆ, ತಾಮ್ರ, ಕಂಚಿನ ಸಾಮಾನುಗಳನ್ನು ಬನಾರಸ್, ತಂಜಾವೂರು, ಪೂನಾ, ನಾಸಿಕ್, ಅಹ್ಮದಾಬಾದ್‌ನಲ್ಲಿ ತಯಾರಿಸಲಾಗುತ್ತಿತ್ತು.
- ವಿಲಿಯಂ ಬೆಂಟಿಕ್‌ನು ಹತ್ತಿ ನೇಯ್ಗೆಗಾರರ ಮೂಳೆಗಳು, ಭಾರತದ ಬಯಲು ಪ್ರದೇಶದಲ್ಲಿ ತೊಳೆಯಲಿಟ್ಟಿದ್ದವು ಎಂದಿದ್ದಾನೆ.
- ಕಾಲ ಮಾರ್ಕ್ಸ್‌ರವರು ಬ್ರಿಟಿಷ್ ಆಕ್ರಮಣಕಾರರು ಭಾರತದ ಕೈಮಗ್ಗಗಳನ್ನು ಮತ್ತು ನೂಲುವ ತಕಲಿಯನ್ನು ಮುರಿದರು. ಹತ್ತಿ ಮತ್ತು ವಸ್ತ್ರದ ಮಾತೃ ದೇಶವನ್ನು ಜಲ ಪ್ರವಾಹದಲ್ಲಿ ಮುಳುಗಿಸಿದರು ಎಂದಿದ್ದಾರೆ.
- ಜೆ.ಟಿ. ಸುಂದರ್‌ಲ್ಯಾಂಡ್‌ಗೆ 1905ರಲ್ಲಿ ಬರೆದ ಪತ್ರದಲ್ಲಿ ಬ್ರಿಟಿಷರ ತಡೆಯಿಲ್ಲದ ದೈನಂದಿನ ದಾಳಿಯಿಂದ ಭಾರತವು ದಿವಾಳಿ ಸ್ಥಿತಿ ತಲುಪುತ್ತಿದ್ದು, ಅದಕ್ಕೆ ಚೇತರಿಸಿಕೊಳ್ಳುವ ಅವಕಾಶವೇ ಇಲ್ಲವಾಗಿದೆ ಎಂದಿದೆ.

ಭಾರತದಲ್ಲಿ ಆಧುನಿಕ ಕೈಗಾರಿಕೆಗಳ ಆರಂಭ

- ಭಾರತದಲ್ಲಿ 19ನೇ ಶತಮಾನದ ಪೂರ್ವಾರ್ಧದ ನಂತರ ಕೆಲವು ಆಧುನಿಕ ಕೈಗಾರಿಕೆಗಳು ಆರಂಭವಾದವು.
- ಕ್ರಿ.ಶ. 1853ರಲ್ಲಿ ಕೌವಾಸ್ಜಿ ನಾನಾಬಾಯಿ ಎಂಬುವನು **ಬಾಂಬೆಯಲ್ಲಿ** ಭಾರತ ಮೊದಲ ಜವಳಿ ಗಿರಣಿ ಸ್ಥಾಪಿಸಿದನು.
- ಕ್ರಿ.ಶ. 1855ರಲ್ಲಿ ಬಂಗಾಳ **ರಿಶ್ರಾ** ಎಂಬಲ್ಲಿ ಮೊದಲ ಸೆಣಬು ಕಾರ್ಖಾನೆ ಆರಂಭವಾಯಿತು.
- ಕ್ರಿ.ಶ. 1907ರಲ್ಲಿ ಜಮ್‌ಶೆಡ್‌ಪುರದಲ್ಲಿ **TISCO**ವು ಜಮ್‌ಶೆಡ್‌ಜೀ ಟಾಟಾರವರಿಂದ ಸ್ಥಾಪಿತವಾಯಿತು.

21.3 ಬ್ರಿಟಿಷರ ಶಿಕ್ಷಣ ನೀತಿಗಳು

- **ಕ್ರಿ.ಶ. 1781:** ವಾರನ್ ಹೇಸ್ಟಿಂಗ್ಸ್‌ನಿಂದ 1781ರಲ್ಲಿ ಕಲ್ಕತ್ತಾದಲ್ಲಿ ಮದರಸಾ (ಮುಸ್ಲೀಂ ಶಿಕ್ಷಣ ಸಂಸ್ಥೆ) ಸ್ಥಾಪನೆಯಾಯಿತು. 1781ರಲ್ಲಿ ಬನಾರಸ್ ಸಂಸ್ಕೃತ ಕಾಲೇಜು ಸ್ಥಾಪಿಸಿದರು.
- **1800ರಲ್ಲಿ:** ಲಾರ್ಡ್ ವೆಲ್ಲೆಸ್ಲಿಯಿಂದ ಕಂಪನಿಯ ನೌಕರರಿಗೆ ತರಬೇತಿ ನೀಡಲು ಕಲ್ಕತ್ತಾದಲ್ಲಿ Port villiam college ಸ್ಥಾಪನೆಯಾಯಿತು. ಆದರೆ ಇದು 07 ವರ್ಷಗಳ ನಂತರ ಮುಚ್ಚಲ್ಪಟ್ಟಿತು.
- **1813ರಲ್ಲಿ ಚಾರ್ಟರ್ ಆಕ್ಟ್** ಪ್ರಕಾರ ಕಂಪನಿಯು ವಾರ್ಷಿಕ 1 ಲಕ್ಷ ರೂ ಭಾರತದಲ್ಲಿ ಶಿಕ್ಷಣಕ್ಕಾಗಿ ಮೀಸಲಿರಿಸಿತು.
- **1821ರಲ್ಲಿ:** ರಾಜಾರಾಂ ಮೋಹನ್‌ರಾಯರು ಮತ್ತು ಅನೇಕ ಪ್ರಗತಿಪರ ಬಂಗಾಳಿಗಳು Culcutta Hindu College ನ್ನು ಸ್ಥಾಪಿಸಿದರು.
- **1833: ಮೆಕಾಲೆ ಮಿನಿಟ್** – ಲಾರ್ಡ್ ಮೆಕಾಲೆಯು ಭಾರತದಲ್ಲಿ ಇಂಗ್ಲೀಷ್ ಮಾಧ್ಯಮದ **ಪಾಶ್ಚಾತ್ಯ ಶಿಕ್ಷಣ** ನೀಡಲು ಗೌರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಕ್‌ಗೆ ಸಲಹೆ ಮಾಡಿದನು. ಇದರಿಂದ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಆರಂಭವಾಯಿತು.
- **1835ರಲ್ಲಿ:** ಭಾರತದಲ್ಲಿ **ಪಾಶ್ಚಾತ್ಯ ಶಿಕ್ಷಣವನ್ನು** ಲಾರ್ಡ್ ಬೆಂಟಿಕ್ ಆರಂಭಿಸಿದನು ಹಾಗೂ **ಸೋಸುವಿಕೆ ಸಿದ್ಧಾಂತ** ಪರಿಚಯಿಸಿದನು.
- **ಕ್ರಿ.ಶ. 1854ರಲ್ಲಿ ಚಾರ್ಲ್ಸ್ ವುಡ್ಸ್** ವರದಿ – ಇದನ್ನು ಭಾರತದ **ಇಂಗ್ಲೀಷ್ ಶಿಕ್ಷಣದ ಮ್ಯಾಗ್ನಕಾರ್ಟ್** ಎನ್ನುವರು. ಇದರ ಪ್ರಕಾರ ದೇಶೀಯ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಉನ್ನತ ಶಿಕ್ಷಣ ನೀಡಲು ನಿರ್ಧರಿಸಲಾಯಿತು. ಕಲ್ಕತ್ತಾ ಬಾಂಬೆ ಮತ್ತು ಮದ್ರಾಸ್‌ನಲ್ಲಿ ವಿ.ವಿ.ಗಳ ಸ್ಥಾಪನೆಗೆ ಸಲಹೆ ನೀಡಲಾಯಿತು.

1882ರಲ್ಲಿ ಹಂಟರ್ ಆಯೋಗ:

1. ಪ್ರಾಥಮಿಕ ಶಿಕ್ಷಣದ ರಂಗದಲ್ಲಿ ಹೆಚ್ಚಿನ ಸರ್ಕಾರಿ ಆಸಕ್ತಿ ನೀಡಬೇಕು.
2. ಮಹಿಳಾ ಶಿಕ್ಷಣಕ್ಕೆ ಉತ್ತೇಜನ.
3. ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಕ್ಷೇತ್ರದ ಸಹಭಾಗಿತ್ವ

1902ರಲ್ಲಿ – ಸರ್ ಥಾಮಸ್ ರ‍್ಯಾಲೆಗ್ ಸಮಿತಿ

- ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ಲಾರ್ಡ್ ಕರ್ಜನ್ 1904ರಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಕಾಯ್ದೆಯನ್ನು ಜಾರಿಗೊಳಿಸಿದನು. ಈ ಕಾಯ್ದೆ ವಿಶ್ವವಿದ್ಯಾಲಯಗಳ ಬೌದ್ಧಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡುವ ಉದ್ದೇಶದಿಂದ ರಾಷ್ಟ್ರೀಯವಾದಿಗಳಿಂದ ಟೀಕೆಗೊಳಗಾಯಿತು.
- **1913ರಲ್ಲಿ:** ಬ್ರಿಟಿಷ್ ಸರ್ಕಾರ ಶಿಕ್ಷಣ ನೀತಿಯನ್ನು ಪ್ರಕಟಿಸಿತು. ಪ್ರತಿ ಪ್ರಾಂತ್ಯದಲ್ಲಿ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆ ಗುರಿ ಹೊಂದಿತ್ತು.

- **1916ರಲ್ಲಿ:** ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಯಿತು.
- **1917ರ: ಸ್ಯಾಡ್ಲರ್ ಕಮಿಟಿ:** ಈ ಸಮಿತಿಯು 12 ವರ್ಷದ ಶಾಲಾ ಶಿಕ್ಷಣ, 03 ವರ್ಷದ ಪದವಿ ಶಿಕ್ಷಣ ಹಾಗೂ ವಿ.ವಿ.ಗಳ ಸ್ವಾಯತ್ತತೆ ಮರು ಸ್ಥಾಪನೆಯ ಬಗ್ಗೆ ತಿಳಿಸಿತು.
- **1929: ಹಾರ್ಟೋಗ್ ಕಮಿಟಿ:** ಶಿಕ್ಷಣದ ಗುಣಮಟ್ಟದ ಬಗ್ಗೆ ತಿಳಿಸಿತು.
- **1937: ವಾರ್ಧಾ ಶಿಕ್ಷಣ ಯೋಜನೆ:** ಇದು ರಾಷ್ಟ್ರೀಯ ಶಿಕ್ಷಣ ಯೋಜನೆ. ಇದು ಗಾಂಧೀಜಿಯವರ ಚಟುವಟಿಕೆಯೊಂದಿಗೆ ಕಲಿಕೆಯ ಮೂಲಕ ಶಿಕ್ಷಣ ಪರಿಕಲ್ಪನೆ ಮೇಲೆ ಆಧಾರಿತವಾಗಿದೆ. ಜಾಕೀರ್ ಹುಸೇನ್ ಸಮಿತಿ ಈ ಯೋಜನೆ ರೂಪಿಸಿತು.
- **1944 – ಸಾರ್ಜೆಂಟ್ ಯೋಜನೆ:** ಕೇಂದ್ರ ಸಲಹಾ ಯೋಜನೆಯ ಸಾರ್ಜೆಂಟ್ ಯೋಜನೆ ರೂಪಿಸಲ್ಪಟ್ಟಿತು. ಇದು ಕಡ್ಡಾಯ ಶಿಕ್ಷಣವನ್ನು ಸಲಹೆ ಮಾಡಿತು.

21.4 ಬ್ರಿಟಿಷರ ಭಾರತದಲ್ಲಿನ ಆಯೋಗಗಳು ಮತ್ತು ಸಮಿತಿಗಳು

ಆಯೋಗಗಳು

1. **ಹಂಟರ್ ಆಯೋಗ 1882 – (ಅಧ್ಯಕ್ಷರು ವಿಲಿಯಂ ಹಂಟರ್)**
   ಶಿಕ್ಷಣದ ಅಭಿವೃದ್ಧಿ ಬಗ್ಗೆ ಅಧ್ಯಯನ (ಲಾರ್ಡ್ ರಿಪ್ಪನ್ ಕಾಲ 1880–84)
2. **ಯುನಿವರ್ಸಿಟಿ ಆಯೋಗ (1902) – (ಥಾಮಸ್ ರ್‍ಯಾಲಿಂಗ್)**
   ವಿಶ್ವವಿದ್ಯಾನಿಲಯಗಳ ಬಗ್ಗೆ ಅಧ್ಯಯನ (ಲಾರ್ಡ್ ಕರ್ಜನ್ 1899–1905) ನಡೆಸಿತ್ತು.
3. **ಕಲ್ಕತ್ತಾ ವಿ.ವಿ. ಆಯೋಗ (1917) – ಮೈಕೆಲ್ ಸ್ಯಾಡ್ಲರ್**
   ಕಲ್ಕತ್ತಾ ವಿಶ್ವವಿದ್ಯಾನಿಲಯದ ಬಗ್ಗೆ ಅಧ್ಯಯನ
4. **ಭಾರತೀಯ ಸಂವಿಧಾನಾತ್ಮಕ ಆಯೋಗ (1929)** (ಫಿಲಿಪ್ ಅರ್ಥಗ್)
   ಶಿಕ್ಷಣದ ಬಗ್ಗೆ ಅಧ್ಯಯನ ಮಾಡಿತ್ತು.
5. **ಲಿಂಡ್‌ಸೇ ಆಯೋಗ (1929)**
   ಭಾರತದ ಮಿಷನರಿ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ಅಧ್ಯಯನಿಸಿತ್ತು.
6. **ಸಫ್ರು ಆಯೋಗ – 1934**
   ನಿರುದ್ಯೋಗದ ಬಗ್ಗೆ ಅಧ್ಯಯನ ನಡೆಸಿತು.
7. **ಸಾರ್ಜೆಂಟ್ ಆಯೋಗ – 1944**
   ಬ್ರಿಟಿಷ್ ಮಾದರಿಯ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ತಿಳಿಸಿತು.
8. **ಬರ ಆಯೋಗ 1880 – (ರಿಚರ್ಡ್ ಸ್ಟ್ಯಾಚಿ)**
   ಬರಪೀಡಿತದ ಬಗ್ಗೆ ಪರಿಹಾರ ಸೂಚಿಸುವುದು.
9. **ಬರ ಆಯೋಗ – 1900 (ಆಂಥೋನಿ ಮ್ಯಾಕ್ ಡೊನಾಲ್ಡ್)**
   ಬರಪೀಡಿತರಿಗೆ ಪರಿಹಾರ ಸೂಚಿಸುವುದು
10. **ವಿಟ್ಲೆ ಆಯೋಗ – 1929 – (ಜೆ.ಎಚ್. ವಿಟ್ಲೆ)**
    ಕಾರ್ಮಿಕ ಪದ್ಧತಿ ಬಗ್ಗೆ ಅಧ್ಯಯನ ನಡೆಸಿತ್ತು.
    ಪೋಲೀಸ್ ಆಯೋಗ
12. **ನಾಗರಿಕ ಸೇವಾ ಆಯೋಗ – (ಲಾರ್ಡ್ ಇಸ್ಲಿಂಗ್ಟನ್)**
    ಶೇ. 25ರಷ್ಟು ಅತ್ಯುನ್ನತ ಹುದ್ದೆಗಳನ್ನು ಭಾರತೀಯರಿಗೆ ಮೀಸಲು ಬಗ್ಗೆ ಅಧ್ಯಯನ
13. **ಸೈಮನ್ ಆಯೋಗ 1927**
    1919ರ ಭಾರತ ಸರ್ಕಾರ ಕಾಯ್ದೆ ಬಗ್ಗೆ ಅಧ್ಯಯನ
14. **ರಾಷ್ಟ್ರೀಯ ಯೋಜನಾ ಸಮಿತಿ – 1938 (ಜ. ನೆಹರು)**
    ಆರ್ಥಿಕ ಯೋಜನೆಗಳನ್ನು ರೂಪಿಸುವುದು
15. **ವೆಲ್ಬಿ ಆಯೋಗ**
    ಸಂಪತ್ತಿನ ಸ್ರವಿತತೆ ಕುರಿತ ಆರೋಪದ ತನಿಖೆ
16. **ಬಟ್ಲರ್ ಆಯೋಗ**
    ದೇಶೀಯ ಸಂಸ್ಥಾನಗಳ ಕುರಿತ ಆಯೋಗ

ಕರೆನ್ಸಿ ಕುರಿತ ಆಯೋಗಗಳು

1. 1866 – ಮ್ಯಾನ್ಸಿಫೀಲ್ಡ್ ಆಯೋಗ
2. 1893 – ಹರ್ಷಲ್ ಆಯೋಗ
3. 1898 – ಫೌಲರ್ ಆಯೋಗ
4. 1919 – ಬ್ಯಾಲಿಗ್ಟನ್ ಸ್ಮಿತ್ ಆಯೋಗ
5. 1939 – ಹೆಲ್ಸನ್ ಯಂಗ್ ಆಯೋಗ

ಬ್ರಿಟಿಷ್ ಮತ್ತು ಭಾರತದ ರಾಜ್ಯಗಳ ನಡುವಿನ ಯುದ್ಧಗಳು

ಯುದ್ಧಗಳು	ವರ್ಷ	ಸ್ಥಳ	ಶಾಂತಿ ಒಪ್ಪಂದ	ವರ್ಷ
1. ಮೊದಲ ಕರ್ನಾಟಿಕ್ ಯುದ್ಧ	1746–48	ಸೆಂಟ್ ಡೇವಿಡ್ ಕೋಟೆ ಸ್ಯಾಂಥೋಮ್	ಏಕ್ಸ್–ಲಾ–ಚಾಪೆಲ್	1748
2. 2ನೇ ಕರ್ನಾಟಿಕ್ ಯುದ್ಧ	1748–54	–	ಪಾಂಡಿಚೇರಿ	1754
3. ಪ್ಲಾಸಿ ಕದನ	1757	–	ಆಲಿಘರ್	ಫೆ. 1757
4. 3ನೇ ಕರ್ನಾಟಿಕ್ ಯುದ್ಧ	1761	–	ಪ್ಯಾರಿಸ್ ಒಪ್ಪಂದ	1763
5. 3ನೇ ಪಾಣಿಪತ್ ಕದನ	1761	ಪಾಣಿಪತ್	–	–
6. ಬಕ್ಸಾರ್ ಕದನ	1764	–	–	–
7. 1ನೇ ಆಂಗ್ಲೋ ಮೈಸೂರು ಯುದ್ಧ	1767–79	ಆರ್ಕಾಟ್	ಮದ್ರಾಸ್	1769
8. 1ನೇ ಆಂಗ್ಲೋ ಮರಾಠ ಯುದ್ಧ	1775–82	–	ಸಾಲ್ಬಾಯಿ ಒಪ್ಪಂದ	1782
9. 2ನೇ ಆಂಗ್ಲೋ ಮೈಸೂರ್ ಯುದ್ಧ	1780–84	ಆರ್ಕಾಟ್, ಪೋರ್ಟೋನೋವ	ಮಂಗಳೂರು	1784
10. 3ನೇ ಆಂಗ್ಲೋ ಮೈಸೂರು ಯುದ್ಧ	1790–92	ಟ್ರ್ಯಾವಂಕೂರ್, ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ	1792
11. 4ನೇ ಆಂಗ್ಲೋ ಮೈಸೂರು ಯುದ್ಧ	1799	ಶ್ರೀರಂಗಪಟ್ಟಣ	–	–
12. 2ನೇ ಆಂಗ್ಲೋ				

13. ಆಂಗ್ಲೋ–ಗೂರ್ಖಾ	1814–16	–	ಸಗೌಲಿ	1816
14. 3ನೇ ಆಂಗ್ಲೋ ಮರಾಠ ಯುದ್ಧ	1817–19	–	–	–
15. 1ನೇ ಆಂಗ್ಲೋ ಬರ್ಮಾ ಯುದ್ಧ	1826	–	ಹ್ಯಾಂಡಬು	1826
16. 1ನೇ ಆಂಗ್ಲೋ ಸಿಖ್ ಯುದ್ಧ	1845–46	ಮುಧ್ಕಿ, ಫಿರೋಜ್‌ಷಾ	ಲಾಹೋರ್	1846

		ಬುದ್ಧಿವಾಲ್, ಅಲಿವಾಲ್ ಸಬ್ರೋನ್		
17. 2ನೇ ಆಂಗ್ಲೋ ಸಿಖ್ ಯುದ್ಧ	1848–49	ಗುಜರಾತ್–ಪಂಜಾಬ್	ಪಂಜಾಬ್	–
18. 2ನೇ ಆಂಗ್ಲೋ ಆಫ್ಘನ್ ಯುದ್ಧ	1878–80	–	–	–

22. 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ
1857 First war of Indian Independence

- 1857ರ ದಂಗೆಯನ್ನು ಬ್ರಿಟಿಷರು ಸಿಪಾಯಿ ದಂಗೆ ಎಂದು ಕರೆದರೆ ಭಾರತೀಯರು ಅದನ್ನು **ಪ್ರಥಮ ಸ್ವಾತಂತ್ರ್ಯ ಸಂಗ್ರಾಮ** ಎಂದು ಕರೆದರು.
- ಆಂಗ್ಲ ಬರಹಗಾರರಾದ ಜಾನ್ ಲಾರೆನ್ಸ್, ಜಾನ್ ಸೀಲೆ ಮತ್ತು ರಾಬರ್ಟ್ ಇವರುಗಳು ಮೂಲತಃ ಇದು ಸೈನಿಕ ದಂಗೆ ಎಂದಿದ್ದಾರೆ. (ಗ್ಯಾರೆಟ್ ಥಾಮ್ಸನ್)

ರಾಜಕೀಯ ಕಾರಣಗಳು: (Political causes)

- ಡಾಲೌಸಿಯು ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ಔದ್ ನವಾಬ ವಾಜಿದ್ ಆಲಿಷಾ ಅವನ ಸಲಹೆಗಾರ ಅಹ್ಮದುಲ್ಲ, ಕಾನ್ಪುರದ ನಾನಾಸಾಹೇಬ, ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ಜಗದೀಶಪುರದ ಕನ್ವರ್‌ಸಿಂಗ್, ದೆಹಲಿಯ ಬಹದ್ದೂರ್ ಷಾ ಹಾಗೂ ಇವನ ಸಂಬಂಧಿ ಫಿರೋಜ್‌ಷಾ ತಮ್ಮ ಸಾಮ್ರಾಜ್ಯವನ್ನು ಕಳೆದುಕೊಂಡರು.
- ಲಾರ್ಡ್ ವೆಲ್ಲೆಸ್ಲಿಯು ಜಾರಿಗೊಳಿಸಿದ **ಸಹಾಯಕ ಸೈನ್ಯ ಪದ್ಧತಿ** ಅಳವಡಿಸಿಕೊಂಡಿದ್ದ ಭಾರತೀಯ ಸಂಸ್ಥಾನಗಳು ಸೈನಿಕ ವೆಚ್ಚ ಭರಿಸಲಾಗದೆ ಅತೃಪ್ತಿ ಹೊಂದಿದ್ದವು.
- ಲಾರ್ಡ್ ಡಾಲೌಸಿಯು ಅನುಸರಿಸಿದ ಆಕ್ರಮಣ ನೀತಿ, ಬಿರುದು ಬಾವಲಿಗಳು ಹಾಗೂ ಮಾಸಾಶನ ರದ್ದತಿ ಭಾರತೀಯ ರಾಜರ ನೆಮ್ಮದಿಯನ್ನು ಹಾಳು ಮಾಡಿದ್ದವು.
- ಆಂಗ್ಲರು ಆಡಳಿತದ ಲೋಪದೋಷಗಳ ಕಾರಣದಿಂದ ಔದ್ ಬರ್ಮಾ, ಅಸ್ಸಾಂ, ಕೊಡಗು, ಸಿಂದ್ ಮತ್ತು ಪಂಜಾಬ್ ಭಾಗಗಳನ್ನು ವಶಪಡಿಸಿಕೊಂಡರು.
- ಹೈದ್ರಾಬಾದಿನ ನಿಜಾಮನು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಗೆ ಅನುಗುಣವಾಗಿ ಸೈನಿಕರಿಗೆ ವೇತನ ಕೊಡದಿದ್ದರಿಂದ ಡಾಲೌಸಿಯು 1853ರಲ್ಲಿ ಬಾಕಿ ಹಣಕ್ಕೆ ಬೇಕಾದ ಪ್ರಾಂತ್ಯ ಒಪ್ಪಿಸಬೇಕೆಂದನು.
- ಪೇಶ್ವೆ ಬಾಜೀರಾಯನ ಮರಣದ ನಂತರ ಅವನ ದತ್ತು ಪುತ್ರರಿಗೆ ಮಾಸಾಶನ ರದ್ದು ಮಾಡಿದರು.

ಆಡಳಿತಾತ್ಮಕ ಕಾರಣಗಳು (Administrative causes)

ಸಂಸ್ಥೆಗಳಿಗೆ ಸಾಧು ಸಂತರಿಗೆ ವಿದ್ವಾಂಸರಿಗೆ ನೀಡಿದ್ದ ಉದಾರ ಕೊಡುಗೆಗಳನ್ನು ವಾಪಸ್ ಪಡೆದರು. ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಕಂದಾಯ ವಿನಾಯ್ತಿ ತೆಗೆದು ಮತ್ತೆ ಕಂದಾಯ ವಿಧಿಸಲಾಯಿತು.

- ಜಮೀನ್ದಾರಿ ಸುಧಾರಣಾ ಕ್ರಮದನ್ವಯ ಅಪಾರ ಎಸ್ಟೇಟ್‌ಗಳ ಜಮೀನುಗಳನ್ನು ಬ್ರಿಟಿಷರು ದುರಾಕ್ರಮಣ ಕ್ರಮದಲ್ಲಿ ವಶಪಡಿಸಿಕೊಂಡರು.
- ಬ್ರಿಟಿಷರು ಜಾರಿಗೆ ತಂದ ಪ್ರಾಯೋಗಿಕ ಭೂಕಂದಾಯ ಪದ್ಧತಿಗಳು
- ವಿಲಿಯಂ ಬೆಂಟಿಂಕ್‌ನ **ಭೂಸುಧಾರಣಾ ಕಾನೂನಿನ** ಪ್ರಕಾರ ಹೆಚ್ಚು ಹಣವನ್ನು ಬ್ರಿಟಿಷ್ ಕಂಪನಿಗೆ ಸಲ್ಲಿಸುವ ಜಮೀನ್ದಾರನಿಗೆ ಜಮೀನ್ದಾರಿಕೆಯನ್ನು ಸಂಪೂರ್ಣ ಹಕ್ಕು ಬಾಧ್ಯತೆ ಮಾಡಿತು.
- ಡಾಲೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಭೂಮಾಲೀಕತ್ವಕ್ಕೆ ಅನ್ವಯಿಸಿದನು.
- ಬ್ರಿಟಿಷ್ ಆಡಳಿತದಲ್ಲಿದ್ದ ಹಿರಿಯ ಅಧಿಕಾರಿ ವರ್ಗ ಬ್ರಿಟಿಷರಾಗಿದ್ದುದು.
- ಬ್ರಿಟಿಷರು ಜಾರಿಗೆ ತಂದ **ಜೂರಿ ನ್ಯಾಯಾಂಗ** ಭಾರತೀಯರಿಗೆ ಅರ್ಥವಾಗಲಿಲ್ಲ.
- ಇಂಗ್ಲೀಷ್ ಭಾಷೆಯನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಿದರು.

ಆರ್ಥಿಕ ಕಾರಣಗಳು (Economic causes)

- ಅಪಾರ ಆಹಾರ ಪದಾರ್ಥಗಳನ್ನು ಇಂಗ್ಲೆಂಡಿಗೆ ರಫ್ತು ಮಾಡಿದರು.
- ಖಾಯಂ ಜಮೀನ್ದಾರಿ ಪದ್ಧತಿಯು ಜಾರಿಯಲ್ಲಿತ್ತು.
- ವಸಾಹತುಗಳಿರುವುದೇ ತಾಯ್ನಾಡಿನ ಹಿತಕ್ಕಾಗಿ ಎಂಬ ತತ್ವ ಪ್ರತಿಪಾದಕರಾದ ಬ್ರಿಟಿಷರು ಇಲ್ಲಿನ ಕಚ್ಚಾವಸ್ತುಗಳನ್ನು ಇಂಗ್ಲೆಂಡಿಗೆ ಪೂರೈಸಿ, ಸಿದ್ಧವಸ್ತುಗಳಿಗೆ ಭಾರತ ಮಾರುಕಟ್ಟೆಯಾಯಿತು. ಜವಾಹರಲಾಲ್ ನೆಹರೂ ಡಿಸ್ಕವರಿ ಆಫ್ ಇಂಡಿಯಾದಲ್ಲಿ ಭಾರತದಿಂದ ಇಂಗ್ಲೇಂಡಿಗೆ ವಿಫುಲ ಪ್ರಮಾಣದಲ್ಲಿ ಸಂಪತ್ತು ಕೊಚ್ಚಿ ಹೋಯಿತು ಎಂದಿದ್ದಾರೆ.
- **ತತ್‌ಕ್ಷಣದ ಕಾರಣ** (Immediate cause): ತೋಟಾಗಳಿಗೆ ಹಸುವಿನ ಮತ್ತು ಹಂದಿಯ ಕೊಬ್ಬು ಸವರಿದ ಕಾಗದವನ್ನು ಸುತ್ತಲಾಗಿತ್ತು. ಹಸುವು ಹಿಂದೂಗಳಿಗೆ ಪವಿತ್ರವಾದರೆ, ಹಂದಿಯು

ಮುಸ್ಲಿಂರಿಗೆ ನಿಷಿದ್ಧವಾಗಿತ್ತು. ಈ ತೋಟಾಗಳನ್ನು ಬಳಸಿದರೆ ತಮ್ಮ ಮತದ ಜನರಿಂದ ಬಹಿಷ್ಕಾರಕ್ಕೆ ಒಳಗಾಗಬಹುದೆಂಬ ಭಾವನೆಯಿಂದ ಸೈನಿಕರು ದಂಗೆ ಎದ್ದರು.

- ಬ್ರಿಟಿಷ್ ಬಂಡವಾಳವು ಭಾರತಕ್ಕೆ ನದಿಯಂತೆ ಹರಿದು ಬಂದು ಪ್ರವಾಹದಂತೆ ಬಡ್ಡಿ ಮತ್ತು ಲಾಭಗಳೆರಡನ್ನು ತನ್ನೊಂದಿಗೆ ಕೊಚ್ಚಿಕೊಂಡು ಹೋಯಿತು ಎಂದು ವಿದ್ವಾಂಸರು ತಿಳಿಸಿದ್ದಾರೆ.
- ಈಶ್ವರಿ ಪ್ರಸಾದ್‌ರವರು **ತನ್ನ ಮಕ್ಕಳೇ ಕ್ರಮೇಣ ಉಪವಾಸಕ್ಕೆ ತುತ್ತಾದರೂ ಭಾರತ ಇಂಗ್ಲೇಂಡಿಗೆ ಹಾಲು ಕೊಡುವ ಹಸುವಾಯಿತು** ಎಂದಿದ್ದಾರೆ.
- ಶ್ರೀಮಂತ ಪ್ರಾಂತ್ಯವಾಗಿದ್ದ ಬಂಗಾಳ ಆರ್ಥಿಕವಾಗಿ ಸೊರಗಿತ್ತು. ಇನ್ನೂ ಮುಂತಾದ ಆರ್ಥಿಕ ಕಾರಣಗಳಿದ್ದವು.

ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳು
(Social & Religious causes)

- **ಇಂಗ್ಲೀಷ್ ಶಿಕ್ಷಣ** ಜಾರಿಗೆ ತಂದು ಇಡೀ ಭಾರತವನ್ನೇ ಕ್ರೈಸ್ತರನ್ನಾಗಿ ಮಾಡಿ ಯೇಸುಕ್ರಿಸ್ತನ ಧ್ವಜ ಭಾರತದಾದ್ಯಂತ ಹಾರಿಸಬೇಕೆಂದು ಅನೇಕ ಕ್ರೈಸ್ತ ಮಿಷನರಿಗಳನ್ನು ಭಾರತದಾದ್ಯಂತ ಸ್ಥಾಪಿಸಿದರು. ಇವು ಕ್ರೈಸ್ತ ಮತದ ಪ್ರಚಾರ ಕೈಗೊಂಡು ವಿದ್ಯಾರ್ಥಿಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸುವುದರಿಂದ ಮಾತ್ರ ಅವರ ಆತ್ಮೋದ್ಧಾರ ಸಾಧ್ಯವೆಂದು ಪ್ರಚಾರ ಮಾಡುತ್ತಿದ್ದರು.
- ವರ್ಣಬೇಧ ನೀತಿ, ಸಾಮಾಜಿಕ ಪ್ರತ್ಯೇಕ ಭಾವನೆ ಹಾಗೂ ಅಹಂಕಾರಿ ನಡತೆಗಳು ಭಾರತೀಯರನ್ನು ಕೆರಳಿಸಿದವು.

1857ರ ದಂಗೆಯ ಹರಡುವಿಕೆ (Spread)

- **ಮಾರ್ಚ್ 29, 1857**ರಂದು ಬಂಗಾಳದ ಬ್ಯಾರಕ್‌ಪುರದ 34ನೇ ಪದಾತಿದಳದ ಬ್ರಾಹ್ಮಣ ಸೈನಿಕ **ಮಂಗಳಪಾಂಡೆ ದಂಗೆ** ಎದ್ದು ತನ್ನ ಮೇಲಾಧಿಕಾರಿಗಳನ್ನು ಕೊಂದನು. ಇವನು ಹೊಸದಾಗಿ ಪರಿಚಯಿಸಿದ **ಎನ್‌ಫೀಲ್ಡ್ ಬಂದೂಕುಗಳನ್ನು** ಬಳಸಲು ನಿರಾಕರಿಸಿದನು. **ಏಪ್ರಿಲ್ 8, 1857**ರಂದು ಇವನನ್ನು ಗಲ್ಲಿಗೇರಿಸಲಾಯಿತು.
- **ಏಪ್ರಿಲ್ 24, 1857ರಂದು** 87 ಮಂದಿ ಸೈನಿಕರು (ಗೋಧಿ ಹಿಟ್ಟನ್ನು ಬೆರೆಸಿದ ಗೋವಿನ ಎಲುಬಿನ ಪುಡಿ ಬೆರೆಸಿದ್ದಾರೆಂಬ ವದಂತಿ) ಸಿಪಾಯಿಗಳು ಮೀರತ್ ಪರೇಡ್ ಮೈದಾನದಲ್ಲಿ ಹೊಸ ತೋಟಾಗಳನ್ನು ಮುಟ್ಟಲು ನಿರಾಕರಿಸಿದರು.
- **ಮೇ 10, 1857**ರಂದು ಮೀರತ್ ಸೈನಿಕರು ದಂಗೆ ಎದ್ದರು. ಮೇ 11, 1857ರಂದು ಮೀರತ್‌ನ ಸೈನಿಕರು ದೆಹಲಿಯತ್ತ ಸಾಗಿ ಕೆಂಪುಕೋಟೆ ಆಕ್ರಮಿಸಿ **ಮೊಗಲರ ಬಾದ್‌ಷಹಾ 2ನೇ ಬಹದ್ದೂರ್ ಷಾ**ನನ್ನು ಭಾರತದ ದೊರೆ ಎಂದು ಘೋಷಿಸಿದರು.
- ನಂತರ ಕಾನ್ಪುರ ಬಂಡಾಯದ ನಾಯಕ ನಾನಾ ಸಾಹೇಬ್ ಕಾನ್ಪುರದ ಮೇಲೆ 3000 ಸೈನಿಕರೊಂದಿಗೆ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ತೆರವು ಮಾಡಲು ಬ್ರಿಟಿಷರು ಒಪ್ಪುವಂತೆ ಮಾಡಿದನು. ಅದರಂತೆ ಬ್ರಿಟಿಷ್ ಸೈನಿಕರನ್ನು ಗಂಗಾ ನದಿಯಾಚೆಗಿನ ದಡಕ್ಕೆ ಸುರಕ್ಷಿತವಾಗಿ ತಲುಪಲು ಒಪ್ಪಂದಂತೆ ಬ್ರಿಟಿಷ್ ಸೈನಿಕರು 40 ದೋಣಿಗಳನ್ನು ಏರಿದ ಮೇಲೆ ಗುಂಡು ಹಾರಿಸಿ ಕೊಲೆ ಮಾಡಲಾಯಿತು. ನಂತರದಲ್ಲಿ 1857 ಜೂನ್ 30ರಂದು ನಾನಾ ಸಾಹೇಬ್ ಪೇಶ್ವೆ ಎಂದು ಘೋಷಿಸಿಕೊಂಡನು.
- ಝಾನ್ಸಿಯಲ್ಲಿ **ರಾಣಿ ಲಕ್ಷ್ಮೀಬಾಯಿ** ದಂಗೆ ಎದ್ದಳು. ಗ್ವಾಲಿಯಾರ್ ಕೋಟೆಯಲ್ಲಿದ್ದ ಬ್ರಿಟಿಷರನ್ನು ಸಂಪೂರ್ಣ ಕೊಲೆ ಮಾಡಲಾಯಿತು. ಝಾನ್ಸಿ ಸೈನಿಕರಿಗೆ ಹಿಂಸೆ ಮತ್ತು ಕೊಲೆಗೆ ಪ್ರಚೋದನೆ ನೀಡಲಾಯಿತು.
- ನವೆಂಬರ್ 1857ರ ಕೊನೆಯಲ್ಲಿ ಕಾನ್ಪುರವನ್ನು **ತಾತ್ಯಾಟೋಪಿ** ವಶಪಡಿಸಿಕೊಂಡನು.

ದಂಗೆಯ ಪ್ರಮುಖ ನಾಯಕರು

1. **ದೆಹಲಿ:**– 2ನೇ ಬಹದ್ದೂರ್ ಷಾ, ಫಿರೋಜ್‌ಷಾ, ಭಗತ್‌ಖಾನ್.
2. **ಲಕ್ನೋ:**– ಬೇಗಂ ಹಜರತ್ ಮಹಲ್, ಬಿರ್ಜಿಸ್‌ಖಾದರ್, ಅಹ್ಮದುಲ್ಲಾ.
3. **ಝಾನ್ಸಿ:**– ರಾಣಿ ಲಕ್ಷ್ಮೀಬಾಯಿ.
4. **ಕಾನ್ಪುರ:**– ನಾನಾಸಾಹೇಬ, ಅಜೀಮುಲ್ಲಾಖಾನ್, ರಾವ್ ಸಯ್ಯಿದ್.
5. **ಕಾನ್ಪುರ ಮತ್ತು ಗ್ವಾಲಿಯಾರ್:**– ತಾತ್ಯಾಟೋಪಿ.
6. **ಔದ್:**– ಮೌಲ್ವಿ ಅಹ್ಮದುಲ್ಲಾ.
7. **ಜಗದೀಶಪುರ:**– ಕುನ್ವರ್‌ಸಿಂಗ್, ಅನ್ವರ್‌ಸಿಂಗ್.
8. **ಬರೈಲಿ:**– ಖಾನ್ ಬಹದ್ದೂರ್ ಖಾನ್.
9. **ಬ್ಯಾರಕ್‌ಪುರ್:**– ಮಂಗಳಪಾಂಡೆ.
10. **ಅಸ್ಸಾಂ:**– ಮಣಿರಾವ್ ದತ್ತ.
11. **ಅಲಹಾಬಾದ್:**– ಲಿಯಾಕತ್ ಆಲಿ.
12. **ಮಸ್ಸರ್:**– ಫಿರೋಜ್‌ಷಾ.
13. **ಸಂಬಲ್ಪುರ:**– ಸುರೇಂದ್ರಶಾಹಿ.
14. **ಮಥುರಾ:**– ದೇವಿಸಿಂಗ್.
15. **ಹರ್‍ಯಾಣ:**– ರಾವ್ ತುಲರಾಂ.

ದಂಗೆಯಲ್ಲಿ ಭಾಗವಹಿಸಿದ ನಾಯಕರಿಗೆ ಒದಗಿದ ಪರಿಸ್ಥಿತಿಗಳು

1. **2ನೇ ಬಹದ್ದೂರ್ ಷಾ** : ಇವನ ಎಲ್ಲಾ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕೊಲೆ ಮಾಡಲಾಯಿತು. ಬಹದ್ದೂರ್ ಷಾನನ್ನು ರಂಗೂನ್ ಜೈಲಿಗೆ ಕಳುಹಿಸಿದರು. ಅವರು 1859ರಲ್ಲಿ ಅಲ್ಲಿಯೇ ನಿಧನನಾದನು.
2. **ನಾನಾ ಸಾಹೇಬ ಮತ್ತು ಬೇಗಂ.ಹ.ಮಹಲ್:** ಯುದ್ಧದಲ್ಲಿ ಸೋತ ಇವರು ನೇಪಾಳಕ್ಕೆ ಓಡಿ ಹೋದರು
3. **ರಾಣಿ ಲಕ್ಷ್ಮೀಬಾಯಿ:** ಜೂನ್ 1858ರಲ್ಲಿ ಯುದ್ಧದಲ್ಲಿ ಸಾಯುತ್ತಾಳೆ.
4. **ಕುನ್ವರ್‌ಸಿಂಗ್:** 87ವರ್ಷ ಹಿರಿಯವನಾದ ಇವನು ಯುದ್ಧದಲ್ಲಿ ಸತ್ತನು.

ಬಂಧಿಸಲ್ಪಟ್ಟು ಡಿಸೆಂಬರ್ 1859ರಲ್ಲಿ ಗಲ್ಲಿಗೇರಿಸಲಾಯಿತು.

ದಂಗೆ ಅಡಗಿಸಿದ ಬ್ರಿಟಿಷ್ ಅಧಿಕಾರಿಗಳು

1. **ಜನರಲ್ ನಿಕೋಲ್ಸನ್:** ಸೆಪ್ಟೆಂಬರ್ 20, 1857ರಂದು ದೆಹಲಿಯ ಕೆಂಪುಕೋಟೆಯನ್ನು ಮತ್ತೆ ವಶಪಡಿಸಿಕೊಂಡನು.
2. **ಮೇಜರ್ ಹಟ್ಸನ್:** ಇವನು ಬಹದ್ದೂರ್ ಷಾನ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕೊಲೆ ಮಾಡಿದನು.
3. **ಕ್ಯಾಂಪ್‌ಬೆಲ್:** ಡಿಸೆಂಬರ್ 6, 1858ರಂದು ಕಾನ್ಪುರದ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡನು. ಔಟ್ರಾವ್ ಕೂಡ ಆಕ್ರಮಿಸಿಕೊಂಡನು.
4. **ಹೆನ್ರಿ ಲಾರೆನ್ಸ್:** ಲಕ್ನೋ ವಶಪಡಿಸಿಕೊಂಡನು.
5. **ವಿಲಿಯಂ ಟೇಲರ್:** ಜಗದೀಶಪುರವನ್ನು ವಶಕ್ಕೆ ಪಡೆದನು.
6. **ಹ್ಯೂಗ್‌ರೋಸ್:** ಇವನು ಝಾನ್ಸಿಯ ದಂಗೆ ಅಡಗಿಸಿದನು. ಯುದ್ಧದಲ್ಲಿ ಇದ್ದ ಒಬ್ಬಳೇ ಒಬ್ಬ ಗಂಡು ಲಕ್ಷ್ಮೀಬಾಯಿ ಎಂದು ಹೇಳಿದನು.
7. **ಜೇಮ್ಸ್ ನಿಯೋರ್:** ಬನಾರಸ್‌ನ್ನು ವಶಕ್ಕೆ ತೆಗೆದುಕೊಂಡನು.

ಇತಿಹಾಸಕಾರರ ಅಭಿಪ್ರಾಯ ಅಥವಾ ದಂಗೆಯ ಸ್ವರೂಪ

- ಬ್ರಿಟಿಷ್ ಇತಿಹಾಸಕಾರರು: ಕೊಬ್ಬು ಸವರಿದ ಕಾರಣಕ್ಕಾಗಿ ಸಿಪಾಯಿದಂಗೆ ಎಂದು ಕರೆದರು.
- ಡೀಸ್ರೇಲಿಯವರು: ಅಪನಂಬಿಕೆಯಿಂದ ಕೂಡಿದ್ದ ರಾಷ್ಟ್ರೀಯ ದಂಗೆ ಎಂದು ಕರೆದಿದ್ದಾರೆ.
- ವಿ.ಡಿ. ಸಾವರ್ಕರ್ ಮತ್ತು ಅಶೋಕ್ ಮೆಹ್ತಾ: ಇವರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಎಂದಿದ್ದಾರೆ.
- ಆರ್.ಸಿ. ಮಜುಂದಾರ್: ಇದು ಮೊದಲನೆಯದೂ ಅಲ್ಲ, ರಾಷ್ಟ್ರೀಯವೂ ಅಲ್ಲ, ಅಥವಾ ಸ್ವಾತಂತ್ರ್ಯ ಸಮರವೂ ಅಲ್ಲ ಎಂದಿದ್ದಾರೆ.
- ಲಾರೆನ್ಸ್ ಮತ್ತು ಶೀಲೆ: ಸ್ವಾರ್ಥ ಪೂರಿತ ಸೈನಿಕ ದಂಗೆ ಎಂದಿದ್ದಾರೆ.
- ಔಟ್ರಾಂ ಮತ್ತು ಟೇಲರ್: ಹಿಂದೂ ಮತ್ತು ಮುಸ್ಲಿಂರ ಪಿತೂರಿ ಎಂದಿದ್ದಾರೆ.
- ಎಸ್.ಬಿ. ಚೌದರಿ: ಇದೊಂದು ನಾಗರಿಕ ಬಂಡಾಯ ಎಂದಿದ್ದಾರೆ.
- ಮಾಲ್ಲೇಸನ್: ಸಿಪಾಯಿಗಳ ಬಂಡಾಯ ಎಂದರು.
- ಎಸ್.ಎನ್. ಸೇನ್: ಸಾಂಪ್ರದಾಯಿಕ ಅಂಶಗಳಿಂದ ಗಡಿಯಾರ ಹಿಂದಕ್ಕೆ ತಿರುಗಿಸುವ ಪ್ರಯತ್ನ ಎಂದಿದ್ದಾರೆ.

1857ರ ದಂಗೆಯ ವಿಫಲತೆಗೆ ಕಾರಣಗಳು. (Causes for the failure)

1. ಈ ದಂಗೆಯು ಕೇವಲ ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿತ್ತು.
2. ಭಾರತದ ವಿದ್ವಾಂಸವಂತ ವರ್ಗ (ಪೂನಾ–ಪೇಶೆಗಳು, ಇಂದೋರ್ ವರ್ಗಗಳಿಂದ ದಂಗೆಗೆ ಬೆಂಬಲ ದೊರೆಯಲಿಲ್ಲ.
3. ಬ್ರಿಟಿಷರು ಸುವ್ಯವಸ್ಥಿತ ಕಾರ್ಯ ಯೋಜನೆಗಳು.
4. ಭಾರತಿಯ ನಾಯಕರಲ್ಲಿ ಹೊಂದಾಣಿಕೆ, ಸಮನ್ವಯ ಮತ್ತು ನಾಯಕತ್ವವಿಲ್ಲ.
5. ಬ್ರಿಟಿಷರು ಅನುಸರಿಸಿದ ಆಧುನಿಕ ಯುದ್ಧ ತಂತ್ರದ ಮುಂದೆ ಭಾರತದ ಮಧ್ಯಯುಗೀನ ಮಾದರಿ ಹೋರಾಟ ವಿಫಲವಾಯಿತು.

ದಂಗೆಯ ಪರಿಣಾಮಗಳು

1. ಭಾರತದ ಆಡಳಿತವು **1858ರ ರಾಣಿ ವಿಕ್ಟೋರಿಯಾ ಘೋಷಣೆ**ಯೊಂದಿಗೆ ಈಸ್ಟ್ ಇಂಡಿಯಾ ಕಂಪನಿಯಿಂದ ವರ್ಗಾವಣೆಯಾಗಿ, ಅದರಂತೆ 15 ಜನ ಸದಸ್ಯರ ಸಲಹಾ ಸಮಿತಿ ಒಳಗೊಂಡ **ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ** ಹುದ್ದೆ ಸ್ಥಾಪನೆಯಾಯಿತು.
2. ರಾಣಿಯ ಘೋಷಣೆಯಲ್ಲಿ ದೇಶೀಯ ಸಂಸ್ಥಾನಗಳು ಅಸ್ತಿತ್ವಕ್ಕೆ ಧಕ್ಕೆ ತರುವುದಿಲ್ಲ ಎಂಬ ಭರವಸೆ ನೀಡಿ ಅವರ ಹಕ್ಕು ಬಾಧ್ಯತೆಗಳ ರಕ್ಷಣೆ ಮಾಡಲಾಯಿತು.
3. ಭಾರತೀಯ ಸೇನೆ ಪುನರ್‌ರಚಿಸಿ ಯುರೋಪಿಯನ್ ಸೈನಿಕರ ಸಂಖ್ಯೆ ಹೆಚ್ಚಿಸಲಾಯಿತು.
4. **1861ರ ಕೌನ್ಸಿಲ್ ಕಾಯ್ದೆ**ಯಂತೆ ವೈಸರಾಯ್ ಕೌನ್ಸಿಲ್‌ನ ಸ್ಥಾಪನೆ
5. ಭಾರತೀಯರಿಗೆ ಸರ್ಕಾರಿ ಹುದ್ದೆಗಳಲ್ಲಿ ಅವಕಾಶ ನೀಡಲು **1861ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಕಾಯ್ದೆ**ಯನ್ನು ಪಾಸು ಮಾಡಿ ಇದಕ್ಕಾಗಿ ಪ್ರತಿವರ್ಷ ಲಂಡನ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಉದ್ದೇಶಿಸಲಾಯಿತು.
6. 1858ರ ಕಾಯ್ದೆ **ವೈಸ್‌ರಾಯ್** ಹುದ್ದೆ ಸೇರಿಸಿತು. ಭಾರತದ ಮೊದಲ ವೈಸ್‌ರಾಯ್ ಆಗಿ **ಕ್ಯಾನಿಂಗ್** ನೇಮಕವಾದನು.

1857ರ ದಂಗೆಯ ಬಗ್ಗೆ ಬರೆದ ಪುಸ್ತಕಗಳು

1. ಎಸ್.ಎನ್. ಸೇನ್ – **1857** ಎಂಬ ಪುಸ್ತಕ
2. ಪಿ.ಸಿ. ಜೋಶಿ – **1857** ದಂಗೆ ಎಂಬ ಪುಸ್ತಕ
3. ಆರ್.ಸಿ. ಮಜುಂದಾರ್ – **ದ ಸಿಪಾಯಿ ಮ್ಯುಟಿನಿ ಅಂಡ್ ದ ರಿವೋಲ್ಟ್–1857**
4. ವಿ.ಡಿ. ಸಾವರ್ಕರ್ – **ದ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್–1857**

1858ರ ರಾಣಿ ವಿಕ್ಟೋರಿಯಾ ಘೋಷಣೆ (ಬ್ರಿಟನ್ ಪ್ರಧಾನಿ – ಪಾಮರ್ಸನ್)

1. ಕಂಪನಿಯ ಆಡಳಿತ ಕೊನೆಗಾಣಿಸಿ ಆಡಳಿತವನ್ನು ಚಕ್ರವರ್ತಿಗೆ ವರ್ಗಾವಣೆ ಮಾಡಲಾಯಿತು. ಮುಂದೆ ಭಾರತದ ಪ್ರತಿಯೊಂದು ಆಡಳಿತ ರಾಣಿ ಹೆಸರಿನಲ್ಲಿ ನಡೆಯಬೇಕಾಯಿತು. ಭಾರತದಲ್ಲಿ

ವ್ಯವಹಾರದ ಖರ್ಚಿನ ಬಾಬ್ತುಗಳು ಭಾರತದ ರಾಜ್ಯ ಕಾರ್ಯದರ್ಶಿಯ ನಿಯಂತ್ರಣದಲ್ಲಿಡಬೇಕು.

2. ಕೋರ್ಟ್ ಆಫ್ ಡೈರೆಕ್ಟರ್ ಹಾಗೂ ಬೋರ್ಡ್ ಆಫ್ ಕಂಟ್ರೋಲ್‌ನ ಅಧಿಕಾರ ಮಿನಿಸ್ಟರ್ ಆಫ್ ಸ್ಟೇಟ್‌ನಲ್ಲಿ ಕೇಂದ್ರೀಕೃತವಾಯಿತು.

3. ಬೋರ್ಡ್ ಆಫ್ ಕಂಟ್ರೋಲ್‌ನ ಅಧ್ಯಕ್ಷ ಸ್ಥಾನವನ್ನು ಸೆಕ್ರೆಟರಿ ಆಫ್ ಸ್ಟೇಟ್ ಅಲಂಕರಿಸಿದನು. ಇವನ ಸಹಾಯಕ್ಕೆ 15 ಜನ ಸದಸ್ಯರಿರುವ ಕೌನ್ಸಿಲ್ ರಚಿಸಲಾಯಿತು.

4. ಸೆಕ್ರೆಟರಿ ಆಫ್ ಸ್ಟೇಟ್ ಕೌನ್ಸಿಲ್ ಗಮನಕ್ಕೆ ಬಾರದೆ ಯುದ್ಧ ನಡೆಸುವುದು ಮತ್ತು ಶಾಂತಿ ಒಪ್ಪಂದ ಮಾಡಿಕೊಳ್ಳಲು ಗುಪ್ತ ಆಜ್ಞೆ ಹೊರಡಿಸಬಹುದಿತ್ತು.

5. ಕೌನ್ಸಿಲ್‌ಗೆ ಪ್ರಾಂತ್ಯಗಳ ಗೌರ್ನರ್ಸ್ ಲೆ. ಗೌರ್ನರ್ಸ್ ನೇಮಿಸುವ ಅಧಿಕಾರ ನೀಡಲಾಯಿತು.

6. ಸೆಕ್ರೆಟರಿಯ ಆದಾಯ ಮತ್ತು ಖರ್ಚುಗಳ ಪಟ್ಟಿಯನ್ನು ಇಂಗ್ಲೆಂಡ್ ಸಂಸತ್ತಿಗೆ ಕಳುಹಿಸಲಾಯಿತು.

7. ಸೆಕ್ರೆಟರಿ ಆಫ್ ಸ್ಟೇಟ್ ಕೌನ್ಸಿಲ್ ಸದಸ್ಯರಿಗೆ ಆಡಳಿತದ ಮೇಲೆ ನಿಯಂತ್ರಣ ಹೊಂದುವ ಅಧಿಕಾರ ಮತ್ತು ಕಾನೂನು ರಚಿಸುವ ಅಧಿಕಾರ ಕೊಡಲಾಗಿತ್ತು.

8. ರಾಜ್ಯದ ಕಾರ್ಯದರ್ಶಿ ಭಾರತದ ಗೌರ್ನರ್ ಜನರಲ್‌ಗೆ ಆಜ್ಞೆ ಮತ್ತು ಸಲಹೆ ನೀಡುವ ಅಧಿಕಾರ ಹೊಂದಿದ್ದನು. ಮಂಡಳಿ ಸದಸ್ಯರ ವೇತನ ಮತ್ತು ಭತ್ಯೆಗಳು ಭಾರತದ ಆದಾಯದಿಂದ ನೀಡಬೇಕಿತ್ತು.

9. ಮಹಾರಾಣಿಯು ಭಾರತದ ಗೌರ್ನರ್ ಜನರಲ್, ಅಡ್ವೋಕೇಟ್ ಜನರಲ್ ಮುಂತಾದ ಆಡಳಿತಾಧಿಕಾರಿಗಳನ್ನು ನೇಮಿಸುವ ಅಧಿಕಾರ ಹೊಂದಿದ್ದಳು.

10. ಭಾರತದ ಕಾಲ್ದಳ, ನೌಕಾದಳ, ಮಹಾರಾಣಿ ಅಧೀನಕ್ಕೊಳಪಟ್ಟವು.

11. ಇಂಗ್ಲೆಂಡಿನ ಕಂಪನಿಗಳು ಭಾರತದೊಡನೆ ಮಾಡಿಕೊಂಡಿದ್ದ ಎಲ್ಲಾ ಬಗೆಯ ಒಪ್ಪಂದ ಕರಾರುಗಳಿಗೆ ಮಹಾರಾಣಿಯು ಜವಾಬ್ದಾರಿಯಾದಳು.

23. ಬುಡಕಟ್ಟು ದಂಗೆಗಳು ಮತ್ತು ರೈತರ ಚಳುವಳಿಗಳು
Tribal Revolts & Peasant movements

ಬಂಗಾಳ ಮತ್ತು ಪೂರ್ವ ಭಾರತದ ದಂಗೆಗಳು

1. **ಸನ್ಯಾಸಿ ದಂಗೆ (ಬಂಗಾಳ ಕ್ರಿ.ಶ. 1760–68)** (The Sanyasi revolt) ಇದೊಂದು ರೈತ ಚಳುವಳಿಯಾಗಿದೆ. ಜನತೆಯ ಸಮಸ್ಯೆ ಮತ್ತು ಸಂಕಷ್ಟಗಳನ್ನು ಕೈಗೆತ್ತಿಕೊಂಡು ಕಂಪನಿಯ ವ್ಯಾಪಾರ ಕೇಂದ್ರಗಳ, ಖಜಾನೆಗಳ ಮೇಲೆ ದಾಳಿ ನಡೆಸಿದರು. ವಾರನ್ ಹೇಸ್ಟಿಂಗ್ಸ್‌ನು ಈ ದಂಗೆಯನ್ನಡಗಿಸಿದನು.

2. **ಚುಆರ್ & ಹೋ ದಂಗೆಗಳು ಕ್ರಿ.ಶ. 1768 (ಜಾರ್ಖಂಡ್)** (Chuar & Ho Risings)

   ಕಾರಣ:– ಮಿಡ್ನಾಪುರ ಜಿಲ್ಲೆಯ ಬುಡಕಟ್ಟಿನ ಜನರು ತೀವ್ರ ಬರಗಾಲ ಕಂದಾಯದ ಹೆಚ್ಚಳ ಮತ್ತು ಆರ್ಥಿಕ ಸಂಕಷ್ಟಗಳ ವಿರುದ್ಧ ಹೋರಾಡಿದರು.

- **ಛೋಟನಾಗಪುರ ಮತ್ತು ಸಿಂಗ್‌ಭೂಮ್‌ನ ಹೋ & ಮುಂಡ ಬುಡಕಟ್ಟಿನ** (Chotanagpur & singh Bhums Ho & munda revolt)ಜನರು ಕಂಪನಿಯ ಆಳ್ವಿಕೆ ವಿರುದ್ಧ ಹೋರಾಡಿದರು (1831–37ವರೆಗೆ)

3. **ಕೋಲರ ದಂಗೆ ಕ್ರಿ.ಶ. 1831** (Kol risings)– ಸಿಂಗ್‌ಭೂಮ್ ಜಿಲ್ಲೆಯ ಸೋನೆಪುರ ಪರಗಣದಲ್ಲಿ ಈ ದಂಗೆ ನಡೆಯಿತು. ಇದರ ನಾಯಕ ಬುದ್ಧಭಗತ್‌ಸಿಂಗ್ ಇವನು ಸಂಕಾ ಗ್ರಾಮದಲ್ಲಿ ಚನ್ನ ಜನಾಂಗದ ಸಭೆ ಸೇರಿಸಿ ಬ್ರಿಟಿಷರ ಬಲವಂತ ತೆರಿಗೆ ಮತ್ತು ದಬ್ಬಾಳಿಕೆ ವಿರುದ್ಧ ಹೋರಾಡುವಂತೆ ಮಾಡಿದನು.

4. **ಸಂತಾಲರ ದಂಗೆ ಕ್ರಿ.ಶ. 1855:** (Santhal risings) ರಾಜಮಹಲ್ ಗುಡ್ಡಗಾಡಿನ ಸಂತಾಲರು ದಂಗೆ ಎದ್ದರು. ಇದರ ನಾಯಕರು ಸಿದ್ದುಮಂಜಿ ಮತ್ತು ಕನ್ನುಮಂಜಿ. ದಂಗೆಗೆ ಕಾರಣವೆಂದರೆ ಖಾಯಂ ಜಮೀನ್ದಾರಿ ಪದ್ಧತಿ ಜಾರಿಯಾದಾಗ ಅವರು ತಮ್ಮ ಆಸ್ತಿಗಳನ್ನು ಕಳೆದುಕೊಂಡರು. ಅಧಿಕ ಬಡ್ಡಿ ವಂಚನೆ ಮತ್ತು ದೌರ್ಜನ್ಯಗಳ ವಿರುದ್ಧ ಹೋರಾಟ ಮಾಡಿದರು.

5. **ಮುಂಡರ ದಂಗೆ ಕ್ರಿ.ಶ. 1899** (Munda revolt) – ಛೋಟಾನಾಗಪುರ ಪ್ರದೇಶದ ಮುಂಡಾ ಜನಾಂಗದವರು ದಂಗೆ ಎದ್ದರು ಇದರ ನಾಯಕ ಬಿರ್ಸಾ ಮುಂಡಾ. ಇವರು ಅಧಿಕ ತೆರಿಗೆ, ಮತ ಪ್ರಚಾರ ಹಾಗೂ ಸ್ತ್ರೀ ದೌರ್ಜನ್ಯದ ವಿರುದ್ಧ ದಂಗೆ ಎದ್ದರು.

6. **ಅಹಮೋಸರ ದಂಗೆ** (The Ahmos revolt)

   ಬರ್ಮಾ ಯುದ್ಧದ ನಂತರ ಕಂಪನಿಯ ಸೈನ್ಯವನ್ನು ಅಸ್ಸಾಂನಿಂದ ಹಿಂತೆಗೆಯದೆ ಹೋದುದು ಅಹಮೋಸರು ದಂಗೆ ಏಳಲು ಕಾರಣವಾಯಿತು.

7. **ಖಾಸಿ ದಂಗೆ ಕ್ರಿ.ಶ. 1832–33** (Khasi rising)

   ಬ್ರಹ್ಮಪುತ್ರ ಕಣಿವೆಯ ಸಿಲ್ಹಟ್ ಜಿಲ್ಲೆಗಳ ನಡುವೆ ರಸ್ತೆ ಸಂಪರ್ಕ ಕಲ್ಪಿಸಲು ಬ್ರಿಟಿಷರು ಉದ್ದೇಶಿಸಿದ್ದರು. ಅಲ್ಲದೆ ದೊರೆ ತಿರಾಕ್‌ಸಿಂಗ್ ವಿರೋಧಿಸಿ ಗಾರೋ, ಖಂಪಿಗಳು, ಸಿಂಹಪೋಸ್ ಜನರನ್ನು ಒಟ್ಟುಗೂಡಿಸಿ ದಂಗೆ ಎದ್ದರು.

8. **ಪಾಗಲ್ ಪಂಥಿಗಳು (ಬಂಗಾಳದ ಉತ್ತರ ಭಾಗ)** (Pagal panthis) ಇದು ರೈತರ ಚಳುವಳಿಯಾಗಿದೆ. ಅರೆ ಧಾರ್ಮಿಕ ಪಂಥಿಗಳಾದ

ಇವುಗಳ ಸ್ಥಾಪಕ ಕರಂಷಾ ಇವನ ಮಗ ಟೀಪು ಧಾರ್ಮಿಕ ಮತ್ತು ರಾಜಕೀಯ ಉದ್ದೇಶಗಳಿಂದ ದಂಗೆಯೆದ್ದನು.

9. **ಪರಜೀಸ್‌ರು:** (Faraizis) (ಪೂರ್ವ ಬಂಗಾಳದ ಪರೀದ್‌ಪುರ) ಇದು ರೈತ ಚಳುವಳಿಯಾಗಿದೆ. ಇದರ ನಾಯಕತ್ವ ದಾದುಮಿಯಾನ್ ಮತ್ತು ಹಾಜಿ ಷರಿಯತ್ ಉಲ್ಲಾ ವಹಿಸಿಕೊಂಡಿದ್ದರು.

ಪಶ್ಚಿಮದ ಭಾರತದ ದಂಗೆಗಳು (Revolts in westren India)

1. **ಭಿಲ್ಲರ ದಂಗೆ ಕ್ರಿ.ಶ. 1817–18** (Bhil rising): ಖಾಂದೇಶ್ ಪ್ರದೇಶದ ಗುಡ್ಡಗಾಡು ಜನರು ದಂಗೆ ಎದ್ದರು. ಈ ದಂಗೆಯ ನಾಯಕರು 2ನೇ ಬಾಜಿರಾವ್ ಪೇಶ್ವೆ ಮತ್ತು ಆತನ ಮಂತ್ರಿ ತ್ರಿಯಂಬಕಜಿ.

- **ದಂಗೆಗೆ ಕಾರಣ:** ಕೃಷಿ ಸಮಸ್ಯೆಗಳು ಮತ್ತು ಹೊಸ ಸರ್ಕಾರದ ನಿಯಮಗಳ ವಿರುದ್ಧ ಹೋರಾಡುವುದು.

2. **ಕೋಲಿಗಳು ಕ್ರಿ.ಶ. 1829 ಮತ್ತು 1844–48** (Koli Rising) ಪಶ್ಚಿಮ ಘಟ್ಟದ ಜನರು ದಂಗೆ ಎದ್ದರು.

3. **ಕಚ್ಚಾನಾಗ ಹೋರಾಟ** (The cutch rebellion) (ಜಲಿಯನ್ ಗ್ರೋಗ್ ಜನಾಂಗ) ಮಣಿಪುರ, ಕಾಚಾರ್ ಮತ್ತು ನಾಗಾ ಜಿಲ್ಲೆಯಲ್ಲಿ ದಂಗೆ ಎದ್ದರು. ಇದರ ನಾಯಕಿ ರಾಣಿ ಗೈಡಿನ್ಲಿ. ಇವಳು ತನ್ನ ಬೆಂಬಲಿಗರ ವಾಸಕ್ಕಾಗಿ ಪುಲೋಮಿ ಎಂಬ ಗ್ರಾಮದಲ್ಲಿ ಬಿದಿರು ಕೋಟೆ ನಿರ್ಮಿಸಿದಳು. 1932ರಲ್ಲಿ ಸೆರೆಯಾದ ಇವಳು 1947ರಲ್ಲಿ ಸ್ವಾತಂತ್ರ್ಯ ನಂತರ ಬಿಡುಗಡೆಯಾದಳು.

4. **ವಾಘೇರಾ ದಂಗೆ** (Waghear rising) (1818–19) (ಓಕ್ಸಾಮಂಡ್ ಪ್ರದೇಶ)

   ವಾಘೇರರು ವಿದೇಶಿ ಆಳ್ವಿಕೆಯನ್ನು ವಿರೋಧಿಸಿ ದಂಗೆ ಎದ್ದರು.

5. **ರಾಮೋಸಿದಂಗೆ 1822** (Ramosi Risings) (ಪಶ್ಚಿಮ ಘಟ್ಟಗಳ ನಿವಾಸಿಗಳು)

   ಇದರ ನಾಯಕ ಚಿತ್ತೂರ್‌ಸಿಂಗ್. ಬ್ರಿಟಿಷ್ ಪ್ರಭುತ್ವ ಮತ್ತು ಆಡಳಿತದ ವಿರುದ್ಧ ದಂಗೆ ಎದ್ದರು.

6. **ಸೂರತ್ತಿನ ಉಪ್ಪಿನ ಹೋರಾಟ** (Surat salt agitation) – 1844ರಲ್ಲಿ ನಡೆಯಿತು.

7. **ಕೊಲ್ಲಾಪುರ ಮತ್ತು ಸಾವಂತವಾಡಿ ದಂಗೆ** (Kolhapur & Savantivadi revolt) – 1844 ಇದು ಸೋನೆಪಂತ್ ನಾಯಕತ್ವದಲ್ಲಿ ನಡೆಯಿತು.

ದಕ್ಷಿಣ ದಂಗೆಗಳು

1. **ವಿಜಯನಗರಂ ದಂಗೆ–ಕ್ರಿ.ಶ. 1765** (Vijayanagaram revolt): **ದಂಗೆಗೆ ಕಾರಣ:** ವಿಜಯನಗರ ರಾಜನಿಗೆ 3 ಲಕ್ಷ ರೂ ಕೊಡುವಂತೆ ಈಸ್ಟ್ ಇಂಡಿಯಾ ಕಂಪನಿಗೆ ಕೇಳಲಾಗಿತ್ತು.

2. **ವೀರಪಾಂಡ್ಯ ಕಟ್ಟ ಬೊಮ್ಮನ್ ದಂಗೆ–ಕ್ರಿ.ಶ. 1792 – 98** (Revolt of Kattabomman): ತಮಿಳುನಾಡಿನಲಿ ಈ ದಂಗೆ ನಡೆಯಿತು.

3. **ದಿವಾನ್ ವೇಲುತಂಪಿಯ ದಂಗೆ–ಕ್ರಿಶ. 1805–09:** (Revolt of Veluthambi)

   ದಂಗೆಗೆ ಕಾರಣ: ವೆಲ್ಲೆಸ್ಲಿಯು ತಿರುವಾಂಕೂರಿನ ರಾಜನ ಮೇಲೆ ಬಲವಂತವಾಗಿ ಸಹಾಯಕ ಸೈನ್ಯ ಪದ್ಧತಿ ಹೇರಿದನು.

4. **ಕಿತ್ತೂರಿನ ದಂಗೆ ಕ್ರಿಶ. 1824–29** (Kittur rising): ರಾಣಿ ಚೆನ್ನಮ್ಮಳು ಕಿತ್ತೂರು ದಂಗೆಯ ನಾಯಕಿಯಾಗಿದ್ದಳು.

5. **ವೆಲ್ಲೂರಿನ ಸೈನಿಕ ಕ್ರಿಶ–1806** (Vellore revolt)

   ಇಲ್ಲಿನ ಸಿಪಾಯಿಗಳು ತಮ್ಮ ಸಾಮಾಜಿಕ, ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ವಿರುದ್ಧ ದಬ್ಬಾಳಿಕೆ ಮಾಡುತ್ತಿದ್ದ ಬ್ರಿಟಿಷರ ಮೇಲೆ ದಂಗೆ ಎದ್ದರು.

6. **ವಹಾಭಿ ಚಳುವಳಿ–ಕ್ರಿಶ. 1830–60** (Wahabi movement)

   ಇದರ ನಾಯಕ ರಾಯ್‌ಬರೇಲಿಯ ಸಯ್ಯದ್ ಅಹ್ಮದ್. ಇದೊಂದು ಪುನರುಜ್ಜೀವನ ಚಳುವಳಿಯಾಗಿದೆ.

7. **ಗಡ್ಕಾರಿ ದಂಗೆ–ಕ್ರಿ.ಶ. 1844–45** (Gadkari revolt): ಕೊಲ್ಲಾಪುರದಲ್ಲಿ ಗಡ್ಕಾರಿಗಳು ದಂಗೆ ಎದ್ದರು.

8. **ಸಾವಂತವಾಡಿಯ ದಂಗೆ–ಕ್ರಿ.ಶ. 1839–45** (Satavandi revolt): ಮಹಾರಾಷ್ಟ್ರದಲ್ಲಿ ಈ ದಂಗೆ ನಡೆಯಿತು. ನಾಯಕತ್ವವನ್ನು ಸಾವಂತ ಮತ್ತು ಅಣ್ಣಾ ಸಾಹೀಬ್‌ನು ವಹಿಸಿಕೊಂಡಿದ್ದರು.

9. **ರೆಡ್ಡಿ ದಂಗೆ–ಕ್ರಿ.ಶ. 1846–47** (Reddy revolt): ಕರ್ನೂಲ್‌ನಲ್ಲಿ ಈ ದಂಗೆ ನಡೆಯಿತು. ನಾಯಕ ನರಸಿಂಹ ರೆಡ್ಡಿ

10. **ಪಾಳೆಗಾರರ ದಂಗೆ** (Palegar revolt): ಕರ್ನೂಲಿನಲ್ಲಿ ಈ ದಂಗೆ ನಡೆಯಿತು.

ರೈತರ ಚಳುವಳಿಗಳು

1. ಇಂಡಿಗೋ ಚಳುವಳಿ 1859–60 (ಬಂಗಾಳ)

- ವಿಷ್ಣು ಬಿಸ್ವಾಸ್ ಮತ್ತು ದಿಗಂಬರ ಬಿಸ್ವಾಸ್ ನೇತೃತ್ವದಲ್ಲಿ ಈ ಚಳುವಳಿ ಯಶಸ್ವಿಯಾಯಿತು.
- ಆಧುನಿಕ ಭಾರತದ ರೈತರ ಅತಿದೊಡ್ಡ ಮುಷ್ಕರ ಇದಾಗಿದೆ.
- ದೀನಬಂಧು ಮಿತ್ರ ಎಂಬುವರು **ನೀಲದರ್ಪಣ** ಎಂಬ ನಾಟಕ ಈ ಚಳುವಳಿಯಿಂದ ಬರೆದರು.

2. ಪಾಬ್ನ ಚಳುವಳಿ – 1870–80–ಬಂಗಾಳ

- ಈಶ್ವರಚಂದ್ರರಾಯ್ ಮತ್ತು ಶಂಬುಪಾಲ್, **ಕುಡಿಮಲ್ಲಾ** ನೇತೃತ್ವದಲ್ಲಿ ಇದು ಜರುಗಿತು. ಜಮೀನ್ದಾರರು ಗೇಣಿದಾರರನ್ನು ತೆಗೆಯುತ್ತಿದ್ದರಿಂದ ಗೇಣಿದಾರರು ದಂಗೆ ಎದ್ದರು.

3. ದಖನ್ನಿನ ದಂಗೆಗಳು – 1874

- ಈ ದಂಗೆ ಅಮೇರಿಕಾ ಅಂತರ್ ಯುದ್ಧಕ್ಕೂ ಕಾರಣವಾಯಿತು.
- ಈ ದಂಗೆಯನು ಗ್ರಾಮೀಣ ಸಾಲಿಗರ ವಿರುದ ಮಾಡಲಾಯಿತು.

4. ಮಾಪ್ಲೆ /ಮಾಪಿಳ್ಳೆ ದಂಗೆ–1836–54, 1896, 1921 (3 ಬಾರಿ)

- ಕೇರಳದ ಮಲಬಾರ್ ಪ್ರದೇಶದಲ್ಲಿ ಮುಸ್ಲಿಂ ಗೇಣಿದಾರರು ಹಿಂದೂ ಜಮೀನ್ದಾರಿಗಳ ವಿರುದ್ಧ ದಂಗೆ ಎದ್ದರು.

5. ಚಂಪಾರಣ್ಯ ಸತ್ಯಾಗ್ರಹ–1917 (ಬಿಹಾರ)

- ಇದರ ನಾಯಕತ್ವವನ್ನು ಗಾಂಧೀಜಿ ವಹಿಸಿದ್ದರು. ಇದು ಇವರ ಮೊದಲ ಸತ್ಯಾಗ್ರಹವಾಗಿದೆ.

6. ಖೇಡಾ ಸತ್ಯಾಗ್ರಹ–1918 (ಗುಜರಾತ್)

- ಇದರ ನಾಯಕತ್ವವನ್ನು ಗಾಂಧೀಜಿ ವಹಿಸಿದ್ದರು. (ಪ್ರವಾಹದಿಂದ ಬೆಳೆ ನಾಶವಾಗಿತ್ತು.)

7. ಬಾರ್ಡೋಲಿ / ಬರಸತ್ ಸತ್ಯಾಗ್ರಹ – 1928 (ಗುಜರಾತ್)

- ಇದರ ನಾಯಕತ್ವವನ್ನು ವಲ್ಲಬಾಯಿ ಪಟೇಲ್ ವಹಿಸಿಕೊಂಡಿದ್ದರು.

8. ತೇ ಬಾಗ ಚಳುವಳಿ – 1946–47

- ಇದು ಬಂಗಾಳದ ಗೇಣಿದಾರರು, ಜಮೀನ್ದಾರರ ವಿರುದ್ಧ ನಡೆದ ಚಳುವಳಿಯಾಗಿದೆ.

9. ತೆಲಂಗಾಣ ಚಳುವಳಿ 1946–48

- ಆಂಧ್ರ ಪ್ರದೇಶದ ಜಮೀನ್ದಾರರ ವಿರುದ್ಧ ರೈತರು ಗೆರಿಲ್ಲಾ ಯುದ್ಧ ತಂತ್ರದ ಮೂಲಕ ಆರಂಭಿಸಿದರು.

10. ಏಕಾ ಚಳುವಳಿ 1921

- ಉತ್ತರ ಪ್ರದೇಶದ ಔದ್‌ನಲ್ಲಿ ಮದರಾಪಾಸಿ ನಾಯಕತ್ವದಲ್ಲಿ ಏಕಾ ಚಳುವಳಿ 1921ರಲ್ಲಿ ಆರಂಭವಾಯಿತು.

11. ಆಲ್ ಇಂಡಿಯಾ ಕಿಸಾನ್ ಸಭಾ

- ಲಕ್ನೋದಲ್ಲಿ ಸ್ಥಾಪಿತವಾದ ಇದು ಎಲ್ಲಾ ರೈತರ ಸಂಘವಾಗಿದೆ. ಸ್ವಾಮಿ ಸಹಜಾನಂದ ಸರಸ್ವತಿ ಇದರ ಮೊದಲ ಅಧ್ಯಕ್ಷರಾಗಿದ್ದರು.

24. ಸಾಮಾಜಿಕ – ಧಾರ್ಮಿಕ ಸುಧಾರಣಾ ಚಳುವಳಿಗಳು (Socio and Religious Reforms)

1. ಬ್ರಹ್ಮಸಮಾಜ (Bramha Samaj)

- ರಾಜರಾಮ್ ಮೋಹನ್‌ರಾಯರು ಬ್ರಹ್ಮ ಸಮಾಜದ ಸ್ಥಾಪಕರು.
- ರಾಯರು ಪಶ್ಚಿಮ ಬಂಗಾಳದ ಬರ್ದ್ವಾನ್ ಜಿಲ್ಲೆಯ ರಾಧಾನಗರ ಎಂಬಲ್ಲಿ ಮೇ 22, 1772ರಲ್ಲಿ ಜನಿಸಿದರು. ಪಾಟ್ನಾ ಮತ್ತು ವಾರಣಾಸಿಯಲ್ಲಿ ತಮ್ಮ ವ್ಯಾಸಂಗ ಮುಗಿಸಿ ಈಸ್ಟ್ ಇಂಡಿಯಾ ಕಂಪನಿಯಲ್ಲಿ 1803–14ರವರೆಗೆ ಸೇವೆ ಸಲ್ಲಿಸಿದರು.
- ರಾಯರು ಇಂಗ್ಲೀಷ್, ಪರ್ಷಿಯನ್, ಉರ್ದು, ಹಿಂದಿ ಮತ್ತು ಹೀಬ್ರೂ ಭಾಷೆಗಳ ಪರಿಚಯವಿದ್ದು, ವೇದಗಳು, ಉಪನಿಷತ್ತುಗಳು, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳೆಲ್ಲವುಗಳ ಉದಾರ ನೀತಿಯ ಸಮ್ಮಿಶ್ರಣದ ಪ್ರತಿಪಾದಕರಾಗಿದ್ದರು.
- ರಾಯರು ಕ್ರಿ.ಶ. 1803ರಲ್ಲಿ ಪರ್ಶಿಯನ್ ಭಾಷೆಯಲ್ಲಿ **ತುಹಪತ್–ಉಲ್–ಮುವಾಹಿನ್** (ದೇವನಾಸ್ತಿಕರಿಗೆ ಒಂದು ಕಾಣಿಕೆ) ಎಂಬ ಪ್ರಬಂಧ ಬರೆದರು. ಅಲ್ಲದೆ **ವೇದಾಂತ ಸೂತ್ರವನ್ನು** ಇಂಗ್ಲೀಷ್‌ಗೆ ತರ್ಜುಮೆ ಮಾಡಿದರು.
- **1815ರಲ್ಲಿ ಕಲ್ಕತ್ತಾದಲ್ಲಿ ಆತ್ಮೀಯ ಸಭಾ ಸ್ಥಾಪನೆ.**

  ಉದ್ದೇಶ:

1. ಹಿಂದೂ ಧರ್ಮದ ನ್ಯೂನತೆಗಳ ವಿರುದ್ಧ ಹೋರಾಡುವುದು.
2. ಏಕ ದೇವರಲ್ಲಿ ನಂಬಿಕೆ ಇಡುವುದು.

- ರಾಯರು 1820ರಲ್ಲಿ ಯೇಸುವಿನ ನೀತಿ ಬೋಧನೆ ಪ್ರಕಟಿಸಿದರು.
- 1820ರಲ್ಲಿ ರಾಯರು 02 ಪುಸ್ತಕಗಳನ್ನು ಪ್ರಕಟಿಸಿದರು.

1. The precepts of Jesus
2. The guide to peace and Happiness

ರಾಯರು ಪ್ರಕಟಿಸಿದ ಪತ್ರಿಕೆಗಳು

1. ಸಂವಾದ್ ಕೌಮುದಿ (ಬಂಗಾಳಿ)
2. ಮೀರತ್ ಉಲ್ ಅಕ್ಬರ್ (ಪರ್ಷಿಯನ್)

- 1823ರಲ್ಲಿ ರಾಯರು ಪತ್ರಿಕಾ ಸ್ವಾತಂತ್ರಾಪಹರಣ ಕಾನೂನಿನ ವಿರುದ್ಧ ಪ್ರಬಲ ಚಳುವಳಿ ನಡೆಸಿದ ಪರಿಣಾಮ 1835ರಲ್ಲಿ ಕಾಯ್ದೆ ರದ್ದಾಯಿತು.
- 1828 –ಕಲ್ಕತ್ತಾದಲ್ಲಿ **ಬ್ರಹ್ಮ ಸಮಾಜ** ಸ್ಥಾಪನೆ
- **ಬ್ರಹ್ಮ ಸಮಾಜದ ಧ್ಯೇಯಗಳು:** ಏಕೀಶ್ವರವಾದ, ವಿಗ್ರಹಾರಾಧನೆಯ ನಿಷೇಧ, ಮಾನವ ಜನಾಂಗದ ಭ್ರಾತೃತ್ವ, ನಿರ್ಗುಣ, ದೈವದ ಪರಿಕಲ್ಪನೆ, ಉಪನಿಷತ್ತುಗಳ ಹಾಗೂ ಶುದ್ಧ ತತ್ವಗಳನ್ನು ತಿಳಿಸಿದರು. ಒಂದೇ ಧರ್ಮವನ್ನು ಪಂಥ ರಹಿತವಾಗಿ ಆಚರಿಸುವ ವ್ಯವಸ್ಥೆ ಬ್ರಹ್ಮ ಸಮಾಜದ ಬುನಾದಿಯಾಗಿತ್ತು.

ಬ್ರಹ್ಮ ಸಮಾಜದ ತತ್ವಗಳು

- ದೇವರು ಒಬ್ಬನೇ, ವಿಗ್ರಹಾರಾಧನೆ ವಿರೋಧ, ಮೂಢನಂಬಿಕೆ, ಕಂದಾಚಾರ ವಿರೋಧ, ಯಜ್ಞಯಾಗಾದಿಗಳ ವಿರೋಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಬಾಲ್ಯ ವಿವಾಹ ವಿರೋಧ, ಸತಿ ಪದ್ಧತಿ ನಿಷೇಧ, ಸ್ತ್ರೀ ಸ್ವಾತಂತ್ರ್ಯ ಮುಂತಾದವು.
- ಮೋನಿಯರ್ ವಿಲಿಯಮ್ಸ್‌ರವರು, ರಾಯ್‌ರನ್ನು ಜಗತ್ತಿನ ಮೊಟ್ಟ ಮೊದಲ **ಸರ್ವಧರ್ಮ ಸಮನ್ವಯಾಚಾರ್ಯ** ಎಂದಿದ್ದಾರೆ.
- ರಾಯರು **ಡೇವಿಡ್ ಹೇರ್** ಮತ್ತು **ಅಲೆಗ್ಸಾಂಡರ್ ಡಫ್** ಜತೆ ಸೇರಿ **ಕಲ್ಕತ್ತಾ ಹಿಂದೂ ಕಾಲೇಜು** ಸ್ಥಾಪಿಸಿದರು.
- ರಾಯರ ಹೋರಾಟ ಮತ್ತು ಒತ್ತಡಕ್ಕೆ ಮಣಿದ ವಿಲಿಯಂ ಬೆಂಟಿಕ್‌ನು

1829 ಡಿಸೆಂಬರ್ 4ರಂದು ಸತಿಸಹಗಮನ ಪದ್ಧತಿ ನಿಷೇಧಿಸಿದನು. ಹಾಗೂ ರಾಯ್ ಅವರ ಕೋರಿಕೆಯ ಮೇರೆಗೆ ಭಾರತದಲ್ಲಿ ಮೊದಲ ಬಾರಿಗೆ **ಇಂಗ್ಲೀಷ್ ಶಿಕ್ಷಣವನ್ನು** ಬೆಂಟಿಕ್ ಜಾರಿಗೊಳಿಸಿದನು.

- ಬ್ರಿಟಿಷ್ ಸರ್ಕಾರದೊಂದಿಗೆ ಮೊಗಲರಿಗೆ (2ನೇ ಅಕ್ಬರ್) ಧನ ಸಹಾಯದ ಬಗ್ಗೆ ಚರ್ಚಿಸಲು ಇಂಗ್ಲೇಂಡಿಗೆ ತೆರಳಿದ ರಾಯರು ಸೆಪ್ಟೆಂಬರ್ 27, 1833ರಲ್ಲಿ **ಬ್ರಿಸ್ಟರ್** ನಗರದಲ್ಲಿ ಮರಣ ಹೊಂದಿದರು.
- ರಾಯರನ್ನು **ಪುನರುಜ್ಜೀವನ ಪಿತಾಮಹ,** ಸಾಮಾಜಿಕ, ಧಾರ್ಮಿಕ ಚಳುವಳಿಯ ಆಧುನಿಕ ನೇತಾರ ಎಂದು ಕರೆಯಲಾಗಿದೆ.
- ರಾಯರ ಮರಣದ ನಂತರ ಕ್ರಿ.ಶ. **1839**ರಲ್ಲಿ ದೇವೇಂದ್ರನಾಥ್ ಠಾಕೂರರು (1817–1905) **ತತ್ವಬೋಧಿನಿ** ಸಭಾ ಎಂಬ ಸಾಂಸ್ಕೃತಿಕ ಸಂಘ ಸ್ಥಾಪಿಸುವುದರ ಮೂಲಕ ಬ್ರಹ್ಮ ಸಮಾಜವನ್ನು ಮುನ್ನಡೆಸಿದರು.
- ದೇವೇಂದ್ರ ಠಾಕೂರರು ವೇದಗಳು ದೈವೀ ಪ್ರೇರಣೆಯೆಂದು ಮತ್ತು ಹೊಸ ಧರ್ಮ ಸಂಸ್ಥೆಯು ಧಾರ್ಮಿಕ ನಂಬಿಕೆಗಳಿಗೆ ಮೂಲಾಧಾರವೆಂದು ತಮ್ಮದೇ ಆದ **ತತ್ವಬೋಧಿನಿ ಪತ್ರಿಕೆ** ಮೂಲಕ ಪ್ರಚಾರ ಮಾಡಿದರು.
- 1857ರಲ್ಲಿ ಮತ್ತೊಬ್ಬರಾದ **ಕೇಶವಚಂದ್ರ ಸೇನರು** ದೇವೇಂದ್ರನಾಥ ಠಾಕೂರ್ ಜೊತೆಯಾಗಿ ಬ್ರಹ್ಮ ಸಮಾಜ ಪ್ರಚಾರ ಮಾಡಲು **ಸಂಘತ್ ಸಭಾ ಸ್ನೇಹಿತರ ಕೂಟವನ್ನು** ಸ್ಥಾಪಿಸಿದರು.
- 1866ರಲ್ಲಿ ಬ್ರಹ್ಮ ಸಮಾಜವು 02 ವಿಭಾಗವಾಯಿತು.

1. **ಆದಿ ಬ್ರಹ್ಮ ಸಮಾಜ** –ದೇವೇಂದ್ರನಾಥ ಠಾಕೂರ್ ನೇತೃತ್ವ
2. **ಭಾರತೀಯ ಬ್ರಹ್ಮ ಸಮಾಜ** – ಕೇಶವಚಂದ್ರ ಸೇನ್ ನೇತೃತ್ವ

- ಕೇಶವಚಂದ್ರ ಸೇನರು ತಮ್ಮ ಭಾರತೀಯ ಬ್ರಹ್ಮ ಸಮಾಜವನ್ನು ಬೆಳೆಸಿ ಸ್ತ್ರೀಯರಿಗೂ ಸದಸ್ಯತ್ವ ನೀಡಿದರು. ಇದರ ಪ್ರಯತ್ನದ ಫಲವಾಗಿ ಸರ್ಕಾರವು ಕ್ರಿ.ಶ. 1872ರಲ್ಲಿ ಕಾಯ್ದೆಯೊಂದು ಜಾರಿ ಮಾಡಿ ಬಾಲ್ಯ ವಿವಾಹ, ಬಹುಪತ್ನಿತ್ವ ನಿಷೇಧ, ವಿಧವಾ ಮತ್ತು ಅಂತರ್ಜಾತಿ ವಿವಾಹಗಳಿಗೆ ಮನ್ನಣೆ ನೀಡಿತು.
- ಕೇಶವಚಂದ್ರ ಸೇನರಿಗೆ ಯೇಸುಕ್ರಿಸ್ತನು ಗುರುವೂ ಮತ್ತು ಸ್ಫೂರ್ತಿಯಾಗಿದ್ದನು. ಜೊತೆಗೆ ಚೈತನ್ಯನು ಸೇರಿಕೊಂಡನು. ಸೇನರನ್ನು ಪ್ರವಾದಿ ದೇವರ ಅವತಾರವೆಂದು ಅನುಯಾಯಿಗಳು ನಂಬಿದರು.
- ಕೊನೆಗೆ ಕ್ರಿ.ಶ. 1878ರಲ್ಲಿ ಕೇಶವಚಂದ್ರಸೇನರು ತಮ್ಮ 14 ವರ್ಷದ ಮಗಳನ್ನು ಕೂಚ್ ಬಿಹಾರದ ರಾಜನಿಗೆ ಕೊಟ್ಟು ವಿವಾಹ ಮಾಡಿದ್ದರಿಂದ ಬ್ರಹ್ಮ ಸಮಾಜ 2ನೇ ಬಾರಿಗೆ ವಿಭಜನೆಯಾಗಿ ಮೇ 15, 1878ರಂದು ವಿರೋಧಿ ಬಣದವರು **ಸಾಧಾರಣಾ ಬ್ರಹ್ಮ** ಸಮಾಜ ಸ್ಥಾಪಿಸಿದರು. ಇದರ ಪ್ರಯತ್ನದ ಫಲವಾಗಿ ಘೋಷ ಪದ್ಧತಿಯ ನಿಷೇಧ. ವಿಧವಾ ವಿವಾಹ ಪದ್ಧತಿ ಜಾರಿಯಾದವು.
- ಮಹಿಳಾ ಶಿಕ್ಷಣದ ಪರವಾಗಿ ಚಳುವಳಿ ನಡೆಸಿದರು. ನಾಗರೀಕ ವಿವಾದ ಕಾಯ್ದೆಯನ್ನು ಜಾರಿಗೆ ತರಲು ಬ್ರಿಟೀಷ್ ಸರ್ಕಾರಕ್ಕೆ ಒತ್ತಾಯಿಸಿದರು. ಹಾಗೂ ಬಹುಪತ್ನಿತ್ವ ಮತ್ತು ಬಾಲ್ಯ ವಿವಾಹ ಪದ್ಧತಿಗಳ ವಿರುದ್ಧ ಕಾನೂನು ಜಾರಿಯಾದವು.

ಬ್ರಹ್ಮ ಸಮಾಜದ ನ್ಯೂನತೆಗಳು

1. ತನ್ನ ಬೋಧನೆಗಳನ್ನು ವಿದ್ಯಾವಂತರಿಗೆ ಸೀಮಿತಗೊಳಿಸಿತು.
2. ಇದು ತನ್ನ ಅನುಯಾಯಿಗಳು ಹಿಂದೂ ಧರ್ಮದವರೆಂದು ಭಾವಿಸಿತು.
3. ಇದು ಪಾಶ್ಚಿಮಾತ್ಯ ವಿಚಾರಧಾರೆಯ ಮೇಲೆ ರೂಪುಗೊಂಡ ಚಳುವಳಿಯಾಗಿತ್ತು.

2. ಆರ್ಯ ಸಮಾಜ (The Arya Samaj)

- **ದಯಾನಂದ ಸರಸ್ವತಿ**ಯವರು ಆರ್ಯ ಸಮಾಜವನ್ನು ಏಪ್ರಿಲ್ 10, **1875**ರಲ್ಲಿ **ಬೊಂಬಾಯಿ**ಯಲ್ಲಿ ಸ್ಥಾಪಿಸಿದರು. ಜೂನ್ 24, 1877ರಂದು ಲಾಹೋರಿನಲ್ಲಿ ಅದರ ಮುಖ್ಯ ಕಛೇರಿಯನ್ನು ತೆರೆದರು.
- ದಯಾನಂದರು ಗುಜರಾತಿನ **ಮೌರ್ವಿ ಪ್ರಾಂತ್ಯದ ಟಂಕಾರ** ಎಂಬಲ್ಲಿ 1824ರಲ್ಲಿ ಜನಿಸಿದರು. **ಶಂಕರ ತಿವಾರಿ ಮತ್ತು ಅಮೃತಾ ಬಾಯಿ** ಇವರ ತಂದೆ ತಾಯಿಗಳು ದಯಾನಂದರ ಮೊದಲ ಹೆಸರು **ಮೂಲಶಂಕರ್** ಆಗಿತ್ತು.
- ದಯಾನಂದರು ಮಥುರಾದ **ಬ್ರಿಜಾನಂದ** ಅವರಿಂದ ಶಿಕ್ಷಣ ಪಡೆದರು.
- ಆರ್ಯ ಸಮಾಜದ ಮೂಲ ಉದ್ದೇಶ ಶುದ್ಧಿ ಚಳುವಳಿಯಾಗಿದೆ.

ಆರ್ಯ ಸಮಾಜದ ತತ್ವಗಳು.

1. ಬ್ರಹ್ಮ ದೇವರು ಸರ್ವವ್ಯಾಪಿ ಸಚ್ಚಿದಾನಂದ ಗುಣವುಳ್ಳವನು.
2. ಈಶ್ವರನು ಸತ್–ಚಿತ್ ಆನಂದ ಸ್ವರೂಪನಾಗಿದ್ದಾನೆ.
3. ವೇದಗಳು ನಿಜವಾದ ಜ್ಞಾನ ಶಾಸ್ತ್ರ.
4. ಪರಮಾತ್ಮ, ಜೀವ ಮತ್ತು ಪ್ರಕೃತಿ – ಈ ಮೂರು ಅನಾದಿ.
5. ಸಮಾಜದ ಮುಖ್ಯ ಕಾರ್ಯ ಜಗತ್ತಿಗೆ ಒಳ್ಳೆಯದನ್ನು ಮಾಡುವುದು.
6. ಧರ್ಮಕ್ಕನುಗುಣವಾಗಿ ಮಾಡುವ ಕೆಲಸವು ಪ್ರೇಮ, ನ್ಯಾಯಗಳಿಂದಿರಬೇಕು.
7. ವೇದಶಾಸ್ತ್ರಗಳ ಪ್ರಕಾರ ನಡೆಯುವ ಸಂಸ್ಕಾರವೇ ವಿವಾಹ.
8. ಪಾರಮಾರ್ಥ ಚಿಂತನೆಯ ಕಾರ್ಯಗಳಲ್ಲಿ ಸಮಾಜದ ನಿಯಮಗಳ ಪಾಲನೆ.
9. ತೀರ್ಥಯಾತ್ರೆ ಮಾಡುವುದು.

- **ವೇದಗಳಿಗೆ ಹಿಂತಿರುಗಿ:** ವೇದಗಳ ನಂತರದ ಬೆಳವಣಿಗೆಗಳನ್ನು ನಿರ್ಮೂಲನೆ ಮಾಡಿ, ವೇದಗಳ ಮಾದರಿಯ ಸಮಾಜ ಸ್ಥಾಪಿಸಲು ಈ ಕರೆ ಕೊಟ್ಟರು.

ಪುನಃ ಹಿಂದೂ ಧರ್ಮಕ್ಕೆ ಮತಾಂತರಗೊಳಿಸುವುದು.

- **ಸತ್ಯಾರ್ಥ ಪ್ರಕಾಶ:** ಆರ್ಯ ಸಮಾಜ ಪ್ರಚಾರ ಮಾಡಲು ಈ ಗ್ರಂಥ ಬರೆದರು. ಇದು ಆರ್ಯ ಸಮಾಜದ ಅನುಯಾಯಿಗಳಿಗೆ ಬೈಬಲ್ ಆಯಿತು. ದಯಾನಂದರು ರಾಜಾರಾಂ ಮೋಹನ್‌ರಾಯರಂತೆ ತಮ್ಮ ಬೋಧನೆಯನ್ನು ವಿದ್ಯಾವಂತರಿಗೆ ಮಾತ್ರ ಸೀಮಿತಗೊಳಿಸಲಿಲ್ಲ.

ದಯಾನಂದರು ಬರೆದ ಪುಸ್ತಕಗಳು

1. ಸತ್ಯಾರ್ಥ ಪ್ರಕಾಶ (ಹಿಂದಿ)
2. ವೇದಭಾಷ್ಯ ಭೂಮಿಕ (ಹಿಂದಿ ಮತ್ತು ಸಂಸ್ಕೃತ)
3. ವೇದ ಭಾಷ್ಯ (ಸಂಸ್ಕೃತ)

- ದಯಾನಂದರು **1882ರಲ್ಲಿ ಗೋಸಂರಕ್ಷಣಾ ಚಳುವಳಿ** ಆರಂಭಿಸಿ ಇದೇ ವರ್ಷ ಅವರು ನಿಧನರಾದರು.
- ದಯಾನಂದರ ಮರಣಾ ನಂತರ ಆರ್ಯ ಸಮಾಜದಲ್ಲಿ 02 ವಿಭಾಗಗಳು ಉಂಟಾದವು.

1. **ಗುರುಕುಲ ಪಂಥ** – (ಹರಿದ್ವಾರ) ಸ್ವಾಮಿ ಶ್ರದ್ಧಾನಂದ – 1902
2. **ಡಿಎವಿ ಪಂಥ** – (ಲಾಹೋರ್) ಲಾಲಾ ಹಂಸರಾಜ್.

- ಡಿಎವಿಯು ಮುಂದೆ ಉತ್ತರ ಭಾರತದ ಅತಿದೊಡ್ಡ ಶಿಕ್ಷಣ ಸಂಸ್ಥೆಯಾಯಿತು. (DAV - Dayananda Anglo Vydhik College)
- ಲಾಲಾ ಹಂಸರಾಜರು ಆಂಗ್ಲ ವಿದ್ಯಾಭ್ಯಾಸ ಮತ್ತು ಉದಾರವಾದಿ ಕಾರ್ಯಚಟುವಟಿಕೆಗಳಲ್ಲಿ ಒಲವು ತೋರಿದರು.

ದಯಾನಂದರ ಅನುಯಾಯಿಗಳು

1. ಲಾಲಾ ಲಜಪತ್‌ರಾಯ್.
2. ಲಾಲಾ ಹಂಸರಾಜ್.
3. ಪಂಡಿತ್ ಗುರುದತ್ತ.
4. ಸ್ವಾಮಿ ಶ್ರದ್ಧಾನಂದ.

- ದಯಾನಂದರ ರಾಜಕೀಯ ಘೋಷಣೆ **ಭಾರತೀಯರಿಗೆ ಭಾರತ** ಎಂಬುದಾಗಿತ್ತು.

3. ಪ್ರಾರ್ಥನಾ ಸಮಾಜ (Prarthana Samaj)

- ಬ್ರಹ್ಮ ಸಮಾಜದ ಪ್ರಭಾವದಿಂದಾಗಿ **ಡಾ. ಆತ್ಮರಾಮ ಪಾಂಡುರಂಗ** ಅವರು ಕ್ರಿ.ಶ. **1867ರಲ್ಲಿ ಬಾಂಬೆಯಲ್ಲಿ ಪ್ರಾರ್ಥನಾ ಸಮಾಜ** ಸ್ಥಾಪಿಸಿದರು.
- **ಮುಖ್ಯ ಉದ್ದೇಶ:** ಅಂತರ್ಜಾತಿ ವಿವಾಹ, ವಿಧವಾ ಪುನರ್ ವಿವಾಹ, ದಲಿತರು ಮತ್ತು ಮಹಿಳಾ ಸಬಲೀಕರಣ ಮಾಡುವುದು.
- **ಮುಖ್ಯ ಗುರಿಗಳು:** ಏಕ ದೇವತಾರಾಧನೆ ಮತ್ತು ಸಾಮಾಜಿಕ ಸುಧಾರಣೆಗಳು. ಬ್ರಹ್ಮ ಸಮಾಜದಂತೆ ಪ್ರಾರ್ಥನಾ ಸಮಾಜದ ಅನುಯಾಯಿಗಳು ತಮ್ಮನ್ನು ಹಿಂದೂ ಧರ್ಮದವರೆಂದು ಭಾವಿಸದೆ ಅದರೊಳಗಿನ ಪಂಥವಾಗಿ ಪರಿಗಣಿಸಿದ್ದರು.
- **ಇದರ ಸದಸ್ಯರು:** ಆರ್.ಜಿ. ಭಂಡಾರ್ಕರ್, ಎಂ.ಜಿ. ರಾನಡೆ, ಗೋಖಲೆ ಮುಂತಾದವರು.
- ಆತ್ಮರಾಮ ಪಾಂಡುರಂಗರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ **ಡೆಕ್ಕನ್ ಎಜುಕೇಷನ್ ಸೊಸೈಟಿ** ಸ್ಥಾಪಿಸಿದರಲ್ಲದೆ ಕಾರ್ಮಿಕರ ವರ್ಗಕ್ಕೂ ಅನುಕೂಲವಾಗಲು ರಾತ್ರಿ ಶಾಲೆಗಳನ್ನು ತೆರೆದರು.
- ಡೆಕ್ಕನ್ ಎಜುಕೇಷನ್ ಸೊಸೈಟಿಯಿಂದ Widow Remarriage Society & Depressed classes Mission ಮಹಾರಾಷ್ಟ್ರದಲ್ಲಿ (ಎಂ.ಜಿ. ರಾನಡೆಯಿಂದ) ಸ್ಥಾಪಿತವಾಯಿತು.
- ಪ್ರಾರ್ಥನಾ ಸಮಾಜವನ್ನು ಮುನ್ನಡೆಸಿದ ನ್ಯಾಯವಾದಿ ಎಂ.ಜಿ. ರಾನಡೆ, ಇವರ ಪ್ರಭಾವವನ್ನು ಐ.ಎನ್.ಸಿ.ಯ ಅಸ್ತಿಬಾರದಲ್ಲಿ ಕಾಣಬಹುದು. ಇದರಿಂದಾಗಿ ಐಎನ್‌ಸಿ ವಾರ್ಷಿಕ ಅಧಿವೇಶನದೊಂದಿಗೆ ಸಾಮಾಜಿಕ ಸಮ್ಮೇಳನ ನಡೆಸುವ ಪದ್ಧತಿ ರೂಢಿಗೆ ಬಂದಿತು.
- ರಾನಡೆಯವರು ಪ್ರಥಮ ಬಾರಿಗೆ **1884ರಲ್ಲಿ ಪುಣೆಯಲ್ಲಿ ಹೆಣ್ಣು ಮಕ್ಕಳ ಪ್ರೌಢಶಾಲೆ** ಸ್ಥಾಪಿಸಿದರು.
- ನ್ಯಾಯವಾದಿ, ಶಿಕ್ಷಣ ತಜ್ಞ, ಅರ್ಥಜ್ಞ, ಇತಿಹಾಸಕಾರರಾದ ಎಂ.ಜಿ. ರಾನಡೆಯನ್ನು **ಮಹಾರಾಷ್ಟ್ರದ ಸಾಕ್ರಟಿಸ್** ಎನ್ನುತ್ತಾರೆ.
- ಕ್ರಿ.ಶ. 1905ರಲ್ಲಿ ಈ ಸೊಸೈಟಿಯಿಂದ ಹೊರಬಂದ ಗೋಖಲೆ ಯವರು **ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ** ಸ್ಥಾಪಿಸಿದರು.
- ಬ್ರಹ್ಮ ಸಮಾಜ ಮತ್ತು ಪ್ರಾರ್ಥನಾ ಸಮಾಜಗಳು ಪಾಶ್ಚಿಮಾತ್ಯ ವಿಚಾರಧಾರೆಯ ಪ್ರಭಾವದ ಪರಿಣಾಮವಾಗಿ ರೂಪುಗೊಂಡ ಚಳುವಳಿಯಾಗಿದ್ದವು.
- ಡಿ.ಕೆ. ಕರ್ವೆಯವರು ಸಂಪ್ರದಾಯವಾದಿಗಳ ವಿರೋಧದ ನಡುವೆಯೂ ಪುಣೆಯಲ್ಲಿ ಮಹಿಳಾ ವಿ.ವಿ. ಸ್ಥಾಪಿಸಲು ಪ್ರಚಾರ ಮಾಡಿ ದೇಣಿಗೆ ಸಂಗ್ರಹಿಸಿ SNDT ವಿ.ವಿ.ಯನ್ನು 1916ರಲ್ಲಿ ಸ್ಥಾಪಿಸಿದರು.
- ನಾರಾಯಣ ಗಣೇಶ ಚಂದಾವರ್ಕರ್ ಮತ್ತು ವಿಠ್ಠಲ್ ರಾಮ್‌ಜಿ ಶಿಂಧೆಯವರು ದಲಿತರ ಉದ್ಧಾರಕ್ಕಾಗಿ **1906ರಲ್ಲಿ ದುರ್ಬಲ ವರ್ಗಗಳ ಮಿಷನ್** ಸ್ಥಾಪಿಸಿದರು.

4. ಥಿಯೋಸಾಫಿಕಲ್ ಸೊಸೈಟಿ ಅಥವಾ ಬ್ರಹ್ಮ ವಿದ್ಯಾ ಸಮಾಜ (The Theosophical society)

- ಥಿಯೋಸಾಫಿಕಲ್ ಸೊಸೈಟಿಯನ್ನು ಅಮೇರಿಕಾದ ಓಲ್ಕೋಟ್ ಮತ್ತು **ರಷ್ಯಾದ ಎಚ್‌ಪಿ ಬ್ಲಾವಟ್ಸ್ಕಿ**ರವರಿಂದ 1875ರಲ್ಲಿ ಅಮೇರಿಕಾದಲ್ಲಿ ಸ್ಥಾಪನೆಯಾಯಿತು.
- ಥಿಯಾಸಾಫಿಕಲ್ ಎಂಬುದು ಥಿಯಾಸಾಫಿ–ಬ್ರಹ್ಮಜ್ಞಾನ

ಎಂಬ 02 ಗ್ರೀಕ್ ಪದಗಳಿಂದ ಬಂದಿದೆ.

- ಬ್ರಹ್ಮ ವಿದ್ಯಾ ಸಮಾಜದವರು ವಿಶ್ವ ಭ್ರಾತೃತ್ವವನ್ನು ಬೆಳೆಸಬೇಕೆಂಬ ದೃಷ್ಟಿಯಿಂದ ಜನವರಿ **1879ರಲ್ಲಿ ಆಡ್ಯಾರ್**ನಲ್ಲಿ ಅದರ ಕೇಂದ್ರ ತೆರೆದರು.
- ಕ್ರಿ.ಶ. 1897ರಲ್ಲಿ ಭಾರತಕ್ಕೆ ಬಂದ ಆಂಗ್ಲ ಸ್ತ್ರೀ ಡಾ. **ಅನಿಬೆಸೆಂಟ್**ರವರು (ಅಕ್ಟೋಬರ್ 01, 1847ರಂದು ಜನಿಸಿದರು), 1907ರಲ್ಲಿ ಓಲ್ಕಾಟ್ ಸಾವಿನ ನಂತರ ಥಿಯೋಸಾಫಿಕಲ್ ಸೊಸೈಟಿಯ ಅಧ್ಯಕ್ಷರಾದರು.
- ಭಾರತದಲ್ಲಿ ಈ ಚಳುವಳಿಯ ಯಶಸ್ಸಿಗೆ ಕಾರಣರಾದ ಅನಿಬೆಸೆಂಟ್ ತಮ್ಮ ಆತ್ಮ ಕಥನದಲ್ಲಿ ಭಾರತದ ಮೊಟ್ಟ ಮೊದಲ ಕರ್ತವ್ಯವೆಂದರೆ ಸನಾತನ ಧರ್ಮಗಳ ಪುನರುದ್ದಾರ, ಏಳಿಗೆ ಮತ್ತು ಬಲಗೊಳಿಸುವುದು ಎಂದಿದ್ದಾರೆ.
- ಥಿಯೋಸಾಫಿಕಲ್ ಸೊಸೈಟಿಯು ಹಿಂದೂಗಳಲ್ಲಿ ಆಧ್ಯಾತ್ಮಿಕ ಮತ್ತು ರಾಷ್ಟ್ರೀಯ ಪರಂಪರೆಯ ಬಗ್ಗೆ ಆತ್ಮವಿಶ್ವಾಸ ಮೂಡಿಸಿತು. ಆತ್ಮಕ್ಕೆ ಬೇಧವಿಲ್ಲ ಸ್ತ್ರೀ ಪುರುಷರು ಸಮಾನರು ಎಂದರು.
- ಶಿಕ್ಷಣಕ್ಕೆ ಮಹತ್ವ ನೀಡಿದ ಅನಿಬೆಸೆಂಟರು **ಬನಾರಸ್‌ನಲ್ಲಿ 1898ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜ್** ಸ್ಥಾಪಿಸಿದರು. ನಂತರದಲ್ಲಿ ಮದನ್ ಮೋಹನ್ ಮಾಳವೀಯರ ಪ್ರಯತ್ನದ ಫಲವಾಗಿ **1916ರಲ್ಲಿ ಬನಾರಸ್, ಹಿಂದೂ ವಿ.ವಿ.ಯ** ಕೇಂದ್ರವಾಯಿತು.
- ಅನಿಬೆಸೆಂಟ್‌ರವರು **ಭಗವದ್ಗೀತೆಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿದರು.** ಅಲ್ಲದೆ ರಾಜಕೀಯಕ್ಕಾಗಿ **ನ್ಯೂ ಇಂಡಿಯಾ ಪತ್ರಿಕೆ** ಆರಂಭಿಸಿ ಅದರ ಮೂಲಕ ಸ್ವ ಆಡಳಿತ ಚಳುವಳಿಗೆ ಬೆಂಬಲ ಪಡೆದರು.
- ಅನಿಬೆಸೆಂಟರು **1906ರಲ್ಲಿ ಹೋಮ್ ರೂಲ್ ಲೀಗ್ ಚಳುವಳಿ** ಆರಂಭಿಸಿ ತೀವ್ರಗಾಮಿ ಮತ್ತು ಮಂದಗಾಮಿಗಳನ್ನು ಒಟ್ಟುಗೂಡಿಸಿದರು.
- ಅನಿಬೆಸೆಂಟ್‌ರು ಭಾರತವು ಏನನ್ನು ಬಯಸುತ್ತೆ? ಎಂಬ ಶೀರ್ಷಿಕೆಯಡಿ ಲೀಗಿನ ಕಾರ್ಯ ಆರಂಭಿಸಿದರು. ಲೀಗಿನ ಕಾರ್ಯಗಳೆಂದರೆ

1. ಇಂಗ್ಲೆಂಡಿನಲ್ಲಿ ಆಂಗ್ಲರು ಮುಕ್ತರಾಗಿರುವಂತೆ ಭಾರತದಲ್ಲೂ ಭಾರತೀಯರು ಮುಕ್ತವಾಗಿರಬೇಕು.
2. ಮುಕ್ತವಾಗಿ ತನ್ನವರಿಂದಲೇ ಆರಿಸಲ್ಪಟ್ಟು ಆಳಲ್ಪಡಬೇಕು.
3. ತನ್ನ ಗಡಿಯೊಳಗೆ ಸರ್ವತಂತ್ರ ಸ್ವತಂತ್ರ ದೇಶವಾಗಿರಬೇಕು.

- ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಸ್ತ್ರೀಸಮಾನತೆಗೆ ಅನಿಬೆಸೆಂಟರು ಹೋರಾಡಿದರು. ಇಂಗ್ಲೆಂಡಿನಲ್ಲಿ ಭಾರತೀಯರ ಹಿತ ಕಾಪಾಡುವ ಸಲುವಾಗಿ ಹೌಸ್ ಆಫ್ ಕಾಮೆನ್ಸ್‌ನಲ್ಲಿ ಭಾರತೀಯ ವ್ಯವಹಾರಗಳ ಕುರಿತು ಒಂದು ಸ್ಥಾಯಿ ಸಮಿತಿ ಇರಬೇಕೆಂದರು.
- 1917ರ [illegible]

ಮಹಿಳೆ ಅನಿಬೆಸೆಂಟ್. ಇವರ ಪ್ರೇರಣೆಯಿಂದಾಗಿ ಕಾಂಗ್ರೆಸ್ ತನ್ನದೇ ಆದ ಬಾವುಟವನ್ನು ಹೊಂದಲು **ಕೆಂಪು, ಬಿಳಿ, ಹಸಿರು** ನಿರ್ಣಯಿಸಿತು. 1930ರವರೆಗೆ ಈ ಬಾವುಟ ಮುಂದುವರಿದು 1931ರಲ್ಲಿ ಕೆಂಪು ಬಣ್ಣಕ್ಕೆ ಬದಲಾಗಿ ಕೇಸರಿ ಬಣ್ಣ ಸೇರಿಸಲಾಯಿತು.

- ಕ್ರಿ.ಶ. **1919ರಲ್ಲಿ ಅಡ್ಯಾರ್‌ನಲ್ಲಿ ಅನಿಬೆಸೆಂಟರು ರಾಷ್ಟ್ರೀಯ ವಿ.ವಿ. ಸ್ಥಾಪಿಸಿದರು.** ಇದರ ಮೊದಲ ಕುಲಪತಿಯಾಗಿ **ರವೀಂದ್ರನಾಥ ಠಾಕೂರ್** ಕಾರ್ಯನಿರ್ವಹಿಸಿದರು.
- ಅನಿಬೆಸೆಂಟರು ಸನಾತನ ದೃಷ್ಟಿಯ ಶಿಕ್ಷಣ, ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ ಅಗತ್ಯವೆಂದರು.
- ಅನಿಬೆಸೆಂಟರು ಸೆಪ್ಟೆಂಬರ್ 20, 1933ರಲ್ಲಿ ಅಡ್ಯಾರ್‌ನಲ್ಲಿ ನಿಧನರಾದರು.

5. ಧರ್ಮಸಭಾ (Dharmasabha)

- 1930ರಲ್ಲಿ ಬಂಗಾಳದಲ್ಲಿ **ರಾಧಾಕಾಂತ್ ದೇವ್**ರವರ ನೇತೃತ್ವದಲ್ಲಿ ಸುಧಾರಣಾವಾದಿಗಳು ಮತ್ತು ಕ್ರೈಸ್ತ ಮಿಷನರಿಗಳು ದಾಳಿಯಿಂದ ಹಿಂದೂ ಧರ್ಮವನ್ನು ರಕ್ಷಿಸಲು ಧರ್ಮಸಭಾ ಸ್ಥಾಪಿಸಿದರು.
- **ರಾಧಾಕಾಂತ್‌ದೇವ್** ಸತಿಪದ್ಧತಿ ನಿಷೇಧದ ಉಗ್ರ ವಿರೋಧಿಯಾಗಿದ್ದರು.

6. ರಾಮಕೃಷ್ಣ ಮಿಷನ್ (Ramakrishna mission)

- ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್‌ನ್ನು ಸ್ಥಾಪಿಸಿದರು. ಇವರು **ಜನವರಿ 12, 1863ರಂದು ಕಲ್ಕತ್ತಾದಲ್ಲಿ ಜನಿಸಿದರು. ವಿಶ್ವನಾಥದತ್ತ ಮತ್ತು ಭುವನೇಶ್ವರಿ** ದೇವಿ ಇವರ ತಂದೆ ತಾಯಿಗಳು.
- ವಿವೇಕಾನಂದರು ಕಲ್ಕತ್ತಾದ ದಕ್ಷಿಣೇಶ್ವರ ಬಳಿಯ ಕಾಳಿ ದೇವಾಲಯದ ಅರ್ಚಕರಾದ **ರಾಮಕೃಷ್ಣ ಪರಮಹಂಸರ** ನೆಚ್ಚಿನ ಶಿಷ್ಯರಾಗಿದ್ದರು.
- ವಿವೇಕಾನಂದರು ಪ್ರಥಮ ಮಠವನ್ನು **ಕ್ರಿ.ಶ. 1887ರಲ್ಲಿ ಬಾರಾನಗೆರ್**‌ನಲ್ಲಿ ಸ್ಥಾಪಿಸಿದರು. ನಂತರ ಕ್ರಿ.ಶ. **1899ರಲ್ಲಿ ಕಲ್ಕತ್ತಾದ** ಬಳಿ **ಬೇಲೂರಿನಲ್ಲಿ** ಮತ್ತೊಂದು ಮಠ ಸ್ಥಾಪಿಸಿದರು.
- ವಿವೇಕಾನಂದರು ಕ್ರಿ.ಶ. **1897ರಲ್ಲಿ ರಾಮಕೃಷ್ಣ ಮಿಷನ್**‌ನ್ನು **ಕಲ್ಕತ್ತಾದಲ್ಲಿ** ಸ್ಥಾಪಿಸಿದರು. ಇದು ಎಲ್ಲಾ ಧರ್ಮಗಳು ಸತ್ಯ. ಒಬ್ಬನು ಒಂದು ಧರ್ಮವನ್ನು ನಿಷ್ಠೆಯಿಂದ ಪಾಲಿಸುವುದು ಅಗತ್ಯ ಎಂಬ ಜಾತ್ಯಾತೀತ ಸಿದ್ಧಾಂತದ ಆಧಾರದ ಮೇಲೆ ರೂಪುಗೊಂಡಿತ್ತು.

ರಾಮಕೃಷ್ಣ ಮಠದ 02 ಪತ್ರಿಕೆಗಳು

1. ಪ್ರಬುದ್ಧ ಭಾರತ (ಇಂಗ್ಲೀಷ್)
2. ಉದ್ಬೋಧನ (ಬೆಂಗಾಳಿ)

- ವಿವೇಕಾನಂದರು ಕ್ರಿ.ಶ. **1893ರಲ್ಲಿ ಚಿಕಾಗೋದಲ್ಲಿ** ಜರುಗಿದ **ಸರ್ವಧರ್ಮ ಸಭೆ**ಯಲ್ಲಿ ಭಾಗವಹಿಸಿದ್ದರು. ಕ್ರಿ.ಶ. 1896ರಲ್ಲಿ **ನ್ಯೂಯಾರ್ಕ್‌ನಲ್ಲಿ ವೇದಾಂತ ಸಂಘ** ಆರಂಭಿಸಿದರು.

- ವಿವೇಕಾನಂದರನ್ನು **'ಭಾರತದ ದೇಶಭಕ್ತಿ ಸಂತ'** ಎಂದು ಕರೆಯಲಾಗಿದೆ.
- **ರಾಮಕೃಷ್ಣ ಮಠದ ಶಾಖೆಗಳು:** ಪಾಕ್, ಶ್ರೀಲಂಕಾ, ಬರ್ಮಾ, ಮಲಯ, ಮಾರಿಷಸ್, ಅಮೇರಿಕಾ ಮತ್ತು ಯೂರೋಪ್
- ರಾಮಕೃಷ್ಣ ಮಿಷನ್‌ನ 02 ಮುಖ್ಯ ಕೇಂದ್ರಗಳು – **ಬೇಲೂರು, ಮಾಯಾವತಿ.**
- ವಿವೇಕಾನಂದರು **ಕೊಲಂಬೋದಿಂದ ಅಲ್ಮೋರದವರೆಗೆ** ತಮ್ಮ ಉಪನ್ಯಾಸ ನೀಡಿದ್ದರು.
- ವಿವೇಕಾನಂದರು **'ಏಳಿ ಎದ್ದೇಳಿ ಗುರಿಮುಟ್ಟುವ ತನಕ ನಿಲ್ಲದಿರಿ'** ಎಂಬ ಸಂದೇಶವನ್ನು ಯುವಕರಿಗೆ ನೀಡಿದ್ದರಿಂದ ಅವರ ಜನ್ಮದಿನವನ್ನು **(ಜನವರಿ 12) ರಾಷ್ಟ್ರೀಯ ಯುವಕರ ದಿನವಾಗಿ** ಆಚರಿಸಲಾಗುತ್ತಿದೆ.
- ವಿವೇಕಾನಂದರು 39ನೇ ವಯಸ್ಸಿನಲ್ಲಿ 1902ರಲ್ಲಿ ನಿಧನರಾದರು.

1. ರಾಮಕೃಷ್ಣ ಪರಮಹಂಸ

- ಇವರು 1836ರಲ್ಲಿ ಪ.ಬಂಗಾಳದ ಹೂಗ್ಲಿ ಜಿಲ್ಲೆಯ ಕಾಮರ್‌ಪುರ್ ಎಂಬಲ್ಲಿ ಜನಿಸಿದರು. ಇವರ ಮೂಲ ಹೆಸರು **ಗಡೋದರ ಚಟ್ಟೋಪಾಧ್ಯಾಯ.**
- ಇವರು 1856ರಲ್ಲಿ ಕಾಳಿ ದೇವಾಲಯದಲ್ಲಿ ಅರ್ಚಕರಾಗಿದ್ದರು. 1860ರಲ್ಲಿ ಅಪ್ರಾಪ್ತ ವಯಸ್ಸಿನ **ಶಾರದಾ ಮಣಿಯನ್ನು** ವಿವಾಹವಾದರು.

ಗೋಪಾಲ ಹರಿದೇಶಮುಖ್

- ಇವರು ಮಹಾರಾಷ್ಟ್ರದ ಪ್ರಸಿದ್ಧ ಸಮಾಜ ಸುಧಾರಕರು. ಇವರಿಗೆ **ಗೋಪಾಲ ಹರಿ ದೇಶ್‌ಮುಖ** ಎಂಬ ಬಿರುದಿತ್ತು.

2. ಹೆನ್ರಿ-ವಿವಿಯನ್ ಡಿರೋಜಿಯಾ

- 18ನೇ ಶತಮಾನದ ಆರಂಭದಲ್ಲಿ **ಬಂಗಾಳದಲ್ಲಿ ಡಿರೋಜಿಯಾ** ನೇತೃತ್ವದಲ್ಲಿ ಬಂಗಾಳದ ವಿದ್ಯಾವಂತ ಯುವಕರು ಸಾಂಪ್ರದಾಯಿಕ ಹಿಂದೂ ಧರ್ಮದ ಎಲ್ಲಾ ಅಂಶಗಳನ್ನು ಉಗ್ರವಾಗಿ ವಿರೋಧಿಸಿದರು.
- ಡಿರೋಜಿಯಾನನ್ನು **'ಮೊದಲ ರಾಷ್ಟ್ರೀಯ ಕವಿ'** ಎಂದು ಕರೆಯಲಾಗಿದೆ. ಇವನ ಶಿಷ್ಯರನ್ನು ಡಿರೋಜಿಯನ್ನರು ಎಂದು ಕರೆಯಲಾಗಿದೆ. ಇವನು ತನ್ನ 23 ವಯಸ್ಸಿನಲ್ಲಿಯೇ ಕಾಲರಾ ರೋಗದಿಂದ ಸತ್ತನು.

3. ಲೋಕ ಹಿತವಾದಿ ಹರದೇಶ್‌ಮುಖ್

ಮಹಾರಾಷ್ಟ್ರದ ಇವರು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು.

4. ಪರಮಸಭಾ – 1849

ದಾದೋಬ ಪಾಂಡುರಂಗ ಪರಮ ಸಭಾವನ್ನು ಸ್ಥಾಪಿಸಿದರು.

5. ರಾಧಾಸ್ವಾಮಿ ಚಳುವಳಿ – 1861

ಆಗ್ರಾದ ತುಳಸಿರಾಂ ಅಥವಾ ಶಿವದಯಾಳ್‌ರು ರಾಧಾಸ್ವಾಮಿ ಚಳುವಳಿ ಆರಂಭಿಸಿದರು. ವಿಶ್ವಾಸದಿಂದ ಕೆಲಸ ಮಾಡುವ ಮತ್ತು ಧ್ಯಾನ ಧರ್ಮ, ಪ್ರಾರ್ಥನೆ ಮುಖ್ಯ ಕರ್ತವ್ಯಗಳು ಎಂದರು.

6. ವಿಧವಾ ವಿವಾಹ ಉತ್ತೇಜಕ ಮಂಡಳಿ – 1865

ವಿಷ್ಣುಶಾಸ್ತ್ರಿಪಂಡಿತ್‌ರು ಹಿಂದೂ ವಿವಾಹ ಉತ್ತೇಜಕ ಮಂಡಳಿ ಸ್ಥಾಪಿಸಿದರು.

7. Rajamandri Social Reform Association 1878

ವೀರೇಶಲಿಂಗ ಪಂತುಲು ರಾಜಮಂಡ್ರಿ ಸೋಶಿಯಲ್ ರಿಫಾರ್ಮ್ ಅಸೋಸಿಯೇಷನ್ ಸ್ಥಾಪಿಸಿದರು.

8. ಸೇವಾ ಸದನ – 1885

ಸೇವಾ ಸದನವನ್ನು ಬೆಹರಾಮ್‌ಜಿ ಸ್ಥಾಪಿಸಿದರು. ಸಮಾಜದ ಸುಧಾರಣೆ ಇದರ ಉದ್ದೇಶವಾಗಿತ್ತು.

9. ದೇವ ಸಮಾಜ – 1887

ಶಿವನರೇನ್ ಅಗ್ನಿಹೋತ್ರಿ ಲಾಹೋರಿನಲ್ಲಿ ದೇವ ಸಮಾಜವನ್ನು ಸ್ಥಾಪಿಸಿದರು. ಇದು ಲಂಚತನ, ಜೂಜಾಟ, ಮಾಂಸಾಹಾರ ಸೇವನೆ, ಹಿಂಸೆಯನ್ನು ವಿರೋಧಿಸಿತು.

10. ಭಾರತೀಯ ಧರ್ಮ ಮಹಾಮಂಡಲ – 1890

ಪಂಡಿತ್ ದೀನ್ ದಯಾಳ್ ಶರ್ಮ ವಾರಣಾಸಿಯಲ್ಲಿ ಭಾರತೀಯ ಧರ್ಮ ಮಹಾಮಂಡಲ ಸ್ಥಾಪಿಸಿದರು. ಆರ್ಯ ಸಮಾಜದ ವಿಚಾರಗಳನ್ನು ವಿರೋಧಿಸಲು ಇದು ಸ್ಥಾಪಿತವಾಯಿತು. 1895ರಲ್ಲಿ ಹರಿದ್ವಾರದಲ್ಲಿ ಸನಾತನ ಧರ್ಮ ಮಹಾಸಭಾವು ದಕ್ಷಿಣ ಭಾರತದಲ್ಲಿ ಧರ್ಮ ಮಹಾಪರಿಷತ್ ಮತ್ತು ಬಂಗಾಳದಲ್ಲಿ ಧರ್ಮ ಮಹಾ ಮಂಡಲಗಳು ಸಾಂಪ್ರದಾಯಿಕ ಹಿಂದೂ ಧರ್ಮ ರಕ್ಷಿಸಲು ಸ್ಥಾಪಿತವಾಗಿ 1902ರಲ್ಲಿ ಎಲ್ಲವೂ ಒಗ್ಗೂಡಿ ಭಾರತದ ಧರ್ಮ ಮಹಾಮಂಡಲ ಸ್ಥಾಪಿತವಾಯಿತು.

- ಈ ಚಳುವಳಿಯ ಸ್ಫೂರ್ತಿ ಮದನ್ ಮೋಹನ್ ಮಾಳವೀಯ ಆಗಿದ್ದರು.

11. ಇಂಡಿಯನ್ ಸೋಶಿಯಲ್ ಕಾನ್ಫರೆನ್ಸ್

ಇದನ್ನು ಎಂ.ಜಿ. ರಾನಡೆ ಮತ್ತು ರಘುನಾಥರಾಯ್ ಸ್ಥಾಪಿಸಿದರು. ಇದು ಐ.ಎನ್.ಸಿ.ಯ **ಸಮಾಜ ಸುಧಾರಣಾ ಘಟಕ** ಎಂದು ಹೆಸರಾಗಿತ್ತು. ತಿಲಕರು ಇದನ್ನು ಕಾಂಗ್ರೆಸ್ಸಿನಿಂದ ಹೊರ ಹಾಕಿದರು.

12. ಮದ್ರಾಸ್ ಹಿಂದೂ ಸಂಘ (1902) ಅನಿಬೆಸೆಂಟ್

1892ರಲ್ಲಿ ಮದ್ರಾಸಿನಲ್ಲಿ 02 ಹಿಂದೂ ಧರ್ಮ ಸಮಾಜ ಸುಧಾರಣಾ ಸಂಘಗಳು ಸ್ಥಾಪನೆಯಾದವು.

1. **ವೀರೇಶಲಿಂಗ ಪಂತುಲು ನಾಯಕತ್ವ** – ವಿಧವಾ ಸ್ತ್ರೀ ಸಮಸ್ಯೆಗಳ ಬಗ್ಗೆ.
2. **ಆರ್. ವೆಂಕಟರತ್ನಂ ನಾಯ್ಡು ನಾಯಕತ್ವ** – ಅನಿಷ್ಟ ದೇವದಾಸಿ

ಪದ್ಧತಿ ನಿಷೇಧ.

13. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ

- 1905ರಲ್ಲಿ ಗೋಖಲೆಯವರು ಇದನ್ನು ಸ್ಥಾಪಿಸಿದರು. ಸಮಾಜ ಸುಧಾರಣೆಗಾಗಿ & ದೇಶ ಸೇವೆಗಾಗಿ ಸ್ವಯಂ ಸೇವಕರನ್ನು ಸಿದ್ಧಪಡಿಸಲು ಸ್ಥಾಪಿಸಿದರು.

14. ಸೇವಾ ಸಮಿತಿ

- ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಕಾರ್ಯಕರ್ತ ಹೃದಯನಾಥ ಕುಂಜ್ರುವಿನಿಂದ ಸೇವಾ ಸಮಿತಿ ಸ್ಥಾಪಿತವಾಯಿತು.

15. ಬಾಂಬೆ ಸೋಶಿಯಲ್ ರಿಫಾರ್ಮ್ ಅಸೋಷಿಯೇಷನ್

- ಇದನ್ನು ಎಂ.ಜಿ. ರಾನಡೆ ಸ್ಥಾಪಿಸಿದರು.

16. ವೇದ ಸಮಾಜ

- ಬ್ರಹ್ಮ ಸಮಾಜದ ಮದ್ರಾಸ್ ಬ್ರಾಂಚ್‌ನ್ನು, ಶ್ರೀಮುಲು ನಾಯ್ಡು ಇದನ್ನು ಸ್ಥಾಪಿಸಿದರು.

17. ಪರಮಹಂಸ ಮಂಡಳಿ

- ಇದನ್ನು ಬಾಲಕೃಷ್ಣ ಚುಂಬೇಕರ್ ಸ್ಥಾಪಿಸಿದರು.

ಮುಸ್ಲಿಂ ಚಳುವಳಿಗಳು Muslim movements

1. ಅಲಿಘರ್ ಚಳುವಳಿ 1875

- 1875ರಲ್ಲಿ ಸರ್ ಸಯ್ಯದ್ ಅಹ್ಮದ್ ಖಾನ್ ಈ ಚಳುವಳಿ ಆರಂಭಿಸಿದರು. ಇವರು **1817ರಲ್ಲಿ ದೆಹಲಿಯಲ್ಲಿ ಜನಿಸಿದರು. 1864ರಲ್ಲಿ ಭಾಷಾಂತರ ಸೊಸೈಟಿ** ಆರಂಭಿಸಿದರು. ಇದನ್ನು Aligar Scientific Society ಎಂದು ನಾಮಕರಣ ಮಾಡಲಾಯಿತು.
- ಸಯ್ಯದ್‌ರು **1875ರಲ್ಲಿ ಆಲಿಗರ್ ಮಹಮಡನ್ ಓರಿಯಂಟಲ್ ಕಾಲೇಜ್** ಸ್ಥಾಪಿಸಿದರು. ಇದು ಮುಂದೆ 1920ರಲ್ಲಿ ಆಲಿಗರ್ ಮುಸ್ಲಿಂ ವಿ.ವಿ. ಆಯಿತು.
- ಸಯ್ಯದ್‌ರು **ತಹಜಿಬ್ ಅಲ್ ಅಖ್ಲಾಖ್ ಮ್ಯಾಗಜಿನ್** ಮೂಲಕ ಪ್ರಗತಿಪರ ಭಾವನೆಗಳನ್ನು ಪ್ರಚಾರ ಮಾಡಿದರು. ಸಮುದಾಯ ಸೇವೆಗಾಗಿ ಅಂಜುಮಾನ್ ಅಥವಾ ಸೊಸೈಟಿಗಳನ್ನು ಆರಂಭಿಸಿದರು. ಸಯ್ಯದ್‌ರು ಕುರಾನಿನ ಮೇಲಿನ ವ್ಯಾಖ್ಯಾನ ಕೃತಿ ರಚಿಸಿದರು.
- ಪ್ರಾರಂಭದಲ್ಲಿ ವಿಶಾಲ ಮನೋಭಾವ ಹೊಂದಿದ್ದ ಇವರು ಪಂಜಾಬಿನ ಹಿಂದೂಗಳ ಸಭೆಯಲ್ಲಿ ಮಾತನಾಡುತ್ತಾ ಹಿಂದೂಸ್ಥಾನದ ಪ್ರತಿಯೊಬ್ಬ ನಿವಾಸಿಯು ಹಿಂದೂ, ಆದರೆ ನೀವು ನನ್ನನ್ನು ಹಿಂದೂವೆಂದು ಪರಿಗಣಿಸದಿರುವುದರಿಂದ ನನಗೆ ದುಃಖವಾಗಿದೆ ಎಂದರು.
- ಇನ್ನೊಂದು ಸಂದರ್ಭದಲ್ಲಿ ನಾವಿಬ್ಬರೂ ಭಾರತದ ಗಾಳಿಯನ್ನು ಉಸಿರಾಡುತ್ತಿದ್ದೇವೆ ಪವಿತ್ರ ಗಂಗಾ, ಯಮುನಾ ನದಿಗಳ ನೀರನ್ನು ಕುಡಿಯುತ್ತಿದ್ದೇವೆ. ಇಬ್ಬರೂ ಭೂ ಉತ್ಪನ್ನಗಳನ್ನೇ ಸೇವಿಸುತ್ತಿದ್ದೇವೆ. ಕೊಂಡಿದ್ದೇವೆ ಎಂದು ನುಡಿದಿದ್ದರು.
- ನಂತರ ಮತೀಯವಾದಿಯಾಗಿ ಏರ್ಪಟ್ಟ ಇವರು 1888ರ ಮೀರತ್ ಭಾಷಣದಲ್ಲಿ ಹಿಂದೂ ಮತ್ತು ಮುಸ್ಲಿಂರ ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳು ಬೇರೆ ಬೇರೆಯಾಗಿವೆ ಎಂದರು. ಇದರಿಂದಾಗಿ ಆಲಿಗರ್ ಚಳುವಳಿ ಎರಡು ರಾಷ್ಟ್ರಗಳ ಸಿದ್ಧಾಂತಕ್ಕೆ ತಳಹದಿ ಹಾಕಿತು.
- ಐಎನ್‌ಸಿಯನ್ನು ವಿರೋಧಿಸಿದ ಇವರು 02 ಸಂಘಗಳನ್ನು ಸ್ಥಾಪಿಸಿದರು.

1. United Indian Petriatic Association
2. Upper India Mahamudan Anglo oriental defence Association

- ಎಲ್ಲಾ ವಿಧದಲ್ಲೂ ಬ್ರಿಟಿಷರಿಗೆ ಸಹಕಾರಿಯಾಗಿದ್ದ ಇವರನ್ನು ಗೌರ್ನರ್ ಜನರಲ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ನೇಮಕ ಮಾಡಲಾಯಿತು. ಸರ್ ಗೌರವದೊಂದಿಗೆ **'ನೈಟ್‌ಹುಡ್'** ಪದವಿ ನೀಡಲಾಯಿತು.
- ಸರ್ ಸಯ್ಯದ್‌ರನ್ನು ಭಾರತೀಯ **ಮುಸ್ಲಿಂರ ಓಲ್ಡ್ ಗ್ರ್ಯಾಂಡ್ ಫಾದರ್'** ಎಂದು ಕರೆಯುವರು.
- ಸಯ್ಯದ್‌ರು ಪರ್ದಾ ಪದ್ಧತಿ, ಬಹುಪತ್ನಿತ್ವ, ಸೂಫಿ ನಂತರ ವಿಚಾರಗಳು, ಗುಲಾಮಿ ಪದ್ಧತಿ, ವಿಚ್ಛೇದನಗಳ ವಿರೋಧಿಯಾಗಿದ್ದರು.

2. ವಹಾಬಿ ಚಳುವಳಿ

ವಹಾಬಿ ಚಳುವಳಿಯ ನಾಯಕ **ಸಯ್ಯದ್ ಅಹ್ಮದ್** ಇವನು ರಾಯ್‌ಬರೇಲಿಯವನು. ಇವನನ್ನು ಬಾಲಕೋಟ್ ಯುದ್ಧದಲ್ಲಿ ಸೋಲಿಸಲಾಯಿತು.

3. ಅಹಮದೀಯ ಅಥವಾ ಕಾದಿಯಾನಿ ಚಳುವಳಿ

ಮಿರ್ಜಾ ಗುಲಾಂ ಅಹ್ಮದ್‌ರವರು ಕಾದಿಯಾನಿ ಚಳುವಳಿ ಆರಂಭಿಸಿದರು.

4. ಅಹರಾರ್ ಚಳುವಳಿ

ಮಹಮದ್ ಆಲಿ, ಹಕೀಂ ಅಜ್ಮಲ್‌ಖಾನ್, ಜಾಫರ್‌ಖಾನ್ ಅಹರಾರ್ ಚಳುವಳಿಯ ನಾಯಕರು.

5. ಕೃಷಿಕ್ ಪ್ರಜಾ ಪಾರ್ಟಿ

ಕೃಷಿಕ್ ಪ್ರಜಾ ಪಾರ್ಟಿಯನ್ನು ಬಂಗಾಳದಲ್ಲಿ 1920ರಲ್ಲಿ ಫಜಲ್-ಉಲ್-ಹಕ್ ಸ್ಥಾಪಿಸಿದರು. 1937ರಲ್ಲಿ ಇದು ಅಧಿಕಾರಕ್ಕೆ ಬಂದಿತ್ತು.

6. ಕೆಂಪಂಗಿದಳ ಅಥವಾ ಕುದಯ್ ಖಿದ್ಮತ್‌ಗಾರ್

ಕೆಂಪಂಗಿ ದಳವನ್ನು ಖಾನ್ ಅಬ್ದುಲ್ ಗಫರ್‌ಖಾನ್ ಸ್ಥಾಪಿಸಿದನು. ಇವನು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಮುಖ

7. ಖಿಲಾಫತ್ ಚಳುವಳಿ

ಹಕೀಂ ಅಜ್ಮಲ್‌ಖಾನ್, ಹಜರತ್ ಮೊರಾದಿ ಖಿಲಾಫತ್ ಚಳುವಳಿಯ ನಾಯಕರು. ಆಲಿ ಬ್ರದರ್ಸ್ (ಶೌಕತ್ ಆಲಿ, ಮಹ್ಮದ್ ಆಲಿ)

8. ಪರಾಜಿ ಚಳುವಳಿ: ಹಾಜಿ ಷರಿಯತುಲ್ಲಾ ಪರಾಜಿ ಚಳುವಳಿಯ ನಾಯಕರು

9. **ಪಾಗಲ್‌ಪಂಥಿ ಚಳುವಳಿ:** ಕರಂ ಷಾ ಪಾಗಲ್ ಪಂಥಿ ಚಳುವಳಿಯ ನಾಯಕರು

10. **ಮುಸ್ಲಿಂ ಲೀಗ್:** 1906ರ ಢಾಕಾದಲ್ಲಿ ಆಗಾಖಾನ್ ಮತ್ತು ಸಲೀಂ ಉಲ್ಲಾ ಮಹಾಸಿನ್ ಉಲ್ ಮುಲ್ಕ್‌ರು ಮುಸ್ಲೀಂ ಲೀಗ್ ಸ್ಥಾಪಿಸಿದರು.

ಕೆಲವು ಜಾತಿ ಚಳುಳಿಗಳು (Caste Movements)

1. ಸತ್ಯಶೋಧಕ ಸಮಾಜ –1873 (Satyashodak samaj)

- 1827ರಲ್ಲಿ **ಜ್ಯೋತಿಬಾಪುಲೆ** ಪೂನಾದಲ್ಲಿ ಜನಿಸಿದರು. ಇವರು **1873ರಲ್ಲಿ ಸತ್ಯಶೋಧಕ ಸಮಾಜ** ಸ್ಥಾಪಿಸಿದರು.
- ಆಗಸ್ಟ್ 1848ರಲ್ಲಿ ಮೊಟ್ಟ ಮೊದಲಿಗೆ ಪೂನಾದಲ್ಲಿ (ಬುಧವಾರಪೇಟೆ) **ಹೆಣ್ಣು ಮಕ್ಕಳ ಶಾಲೆ** ಆರಂಭಿಸಿದರು. ಹಿಂದುಳಿದವರ ಏಳಿಗೆ ಮತ್ತು ಮಾನವ ಹಕ್ಕುಗಳಿಗಾಗಿ ಹೋರಾಡುವುದು ಇದರ ಗುರಿಯಾಗಿದೆ.
- ಪುಲೆಯವರು 1851ರಲ್ಲಿ ಅಸ್ಪೃಶ್ಯರ ಸಲುವಾಗಿಯೇ ಪೂನಾದಲ್ಲಿ ಶಾಲೆಗಳನ್ನು ತೆರೆದರು. ರೈತರು ಮತ್ತು ಕೂಲಿ ಕಾರ್ಮಿಕರಿಗೆ ನೆರವಾಗಲು **ಪೂನಾದಲ್ಲಿ ರಾತ್ರಿ ಶಾಲೆಗಳನ್ನು** 1848ರಲ್ಲಿ ತೆರೆದರು.
- ವಿಧವಾ ವಿವಾಹಕ್ಕೆ ಪ್ರೋತ್ಸಾಹ ನಿಡಿದ ಜ್ಯೋತಿಬಾರವರು ವಿಧವಾ ಕೇಶ ಮಂಡನ ರದ್ದು ಮಾಡಿದರು. ಜ್ಯೋತಿಬಾ ಅವರು ಪೂನಾದಲ್ಲಿ ಗುಪ್ತ ಪ್ರಸೂತಿ ಗೃಹಗಳ ಸ್ಥಾಪನೆ ಮಾಡಿದರು. ಕಾರ್ಮಿಕರ ಶೋಷಣೆ ಮತ್ತು ಜಮೀನ್ದಾರರ ವಿರುದ್ಧ ಚಳುವಳಿ ಆರಂಭಿಸಿದರು.
- ರಾಜರಾಮ್ ಮೋಹನ್‌ರಾಯರು ಕೀಳು ಜಾತಿಯವರಿಗೆ ಶಿಕ್ಷಣ ದೊರೆಯಕೂಡದೆಂದು ವಾದಿಸುತ್ತಿದ್ದ ನಿಲುವಿಗೆ ಜ್ಯೋತಿಬಾ ಅವರು ವಿರೋಧ ವ್ಯಕ್ತಪಡಿಸಿದುರು. ಸಮಾಜದ ಶೋಷಣೆಯ ನಿರ್ಮೂಲನೆಗಾಗಿ **ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು** ಜ್ಯೋತಿಬಾ ಪುಲೆಯವರು ಪ್ರತಿಪಾದಿಸಿದರು.
- ಜ್ಯೋತಿಬಾ ಅವರು 1888ರಲ್ಲಿ ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳ ಮಗ ಡ್ಯೂಕ್ ಆಫ್ ಕಾನಾಟ್ (ಪೂನಾದ ಸೇನಾಧಿಪತಿ) ಬೀಳ್ಕೊಡುಗೆ ಸಮಾರಂಭದಲ್ಲಿ ರೈತರ ಬಾಳನ್ನು ಹಸನು ಮಾಡಬೇಕೆಂದು ಕೋರಿದರು.
- ಜ್ಯೋತಿಬಾ ಅವರು ಶಿವಾಜಿಯ ಸಮಾಧಿಯನ್ನು ಪತ್ತೆ ಮಾಡಿ ಜೀರ್ಣೋದ್ಧಾರ ಮಾಡಿದರು.

ಪುಲೆ ಅವರ ಕೃತಿಗಳು

1. ತೃತೀಯ ರತ್ನ ನಾಟಕ.
2. ಬ್ರಾಹಣರಿಗೆ ಕುಯುಕಿ.
3. ಸಾರ್ವಜನಿಕ ಸತ್ಯಧರ್ಮ.
4. ಜಾತಿಭೇದ ವಿವೇಕಸಾರ.
5. ಗುಲಾಮಗಿರಿ
6. ದಾಸ್ಯ
7. ರೈತನ ಚಾಟಿ

- ಸತ್ಯಶೋಧಕ ಸದಸ್ಯರಲ್ಲೊಬ್ಬರಾದ **ಎನ್.ಎಂ. ಲೋಕಹಂದೆ** ಭಾರತದ ಪ್ರಥಮ ಕಾರ್ಮಿಕ ಸಂಘವಾದ Bombay Mill Hands Association ಸ್ಥಾಪಿಸಿದರು. ಈ ಸಮಾಜದ ಮತ್ತೊಬ್ಬರಾದ ತಾರಾಬಾಯಿ ಶಿಂಧೆಯವರು **ಸ್ತ್ರೀ ಪುರುಷ ತುಲನ** ಪುಸ್ತಕ ಬರೆದರು.

2. ಅರವಿಪ್ಪುರಂ ಚಳುವಳಿ (Aravipuram movement)

- 1888ರಲ್ಲಿ ಕೇರಳದಲ್ಲಿ **ನಾರಾಯಣ ಗುರು** ಈ ಚಳುವಳಿಯನ್ನು ಆರಂಭಿಸಿದರು. ಶಿವರಾತ್ರಿ ಹಬ್ಬದ ದಿನ ಅರವಿಪ್ಪುರಂ ಶಿವನ ದೇವಾಲಯುವನ್ನು ಸ್ಥಾಪಿಸಿ ಕೆಳವರ್ಗದ ವ್ಯಕ್ತಿಯನ್ನು ಪುರೋಹಿತನಕ್ಕಾಗಿ ಮಾಡುವುದರ ಮೂಲಕ ಚಳುವಳಿ ಆರಂಭವಾಯಿತು.

3. ದೇವಸ್ಥಾನ ಪ್ರವೇಶ ಚಳುವಳಿ (Temple entry movement)

- ಕೇರಳದಲ್ಲಿ ನಾರಾಯಣಗುರು ದೇವಸ್ಥಾನದ ಪ್ರವೇಶ ಚಳುವಳಿ ಆರಂಭಿಸಿದರು. ಎನ್. ಕುಮಾರನ್ ಮಹದೇವನ್ ಇದರ ಸದಸ್ಯರು.
- ಅಸ್ಪೃಶ್ಯ ನಿವಾರಣೆಯಲ್ಲಿ ಕಾರ್ಯಪ್ರವೃತ್ತರಾದ ನಾರಾಯಣರು 1903ರಲ್ಲಿ ಶ್ರೀನಾರಾಯಣ ಧರ್ಮ ಪರಿಪಾಲನಾ ಯೋಗಂ (SNDP) ಎಂಬ ಸಂಘಟನೆ ಸ್ಥಾಪಿಸಿದರು.
- 1912ರಲ್ಲಿ ಶಿಕ್ಷಣ ನೀಡಲು ಶಾರದಾ ಮಠವನ್ನು ಆರಂಭಿಸಿದರು. ಇವರು ಇಡೀ ಮನುಕುಲಕ್ಕೆ ಒಂದೇ ಧರ್ಮ ಒಂದೇ ಜಾತಿ, ಒಂದೇ ದೇವರು ಎಂಬ ಘೋಷಣೆ ಪ್ರತಿಪಾದಿಸಿದರು.

4. ಜಸ್ಟಿಸ್ ಪಾರ್ಟಿ ಮತ್ತು ಆತ್ಮಗೌರವ ಚಳುವಳಿ
(Justice party and respect movement)

- 1917ರಲ್ಲಿ **ಪಿ. ತ್ಯಾಗರಾಜನ್ ಚೆಟ್ಟಿ, ಟಿ.ಎಂ. ನಾಯರ್** ಹಾಗೂ **ಸಿ.ಎನ್. ಮೊದಲಿಯಾರ್,** ನೇತೃತ್ವದಲ್ಲಿ ಪ್ರಥಮ ಬ್ರಾಹ್ಮಣೇತರ ಸಂಘಟನೆಯಾದ South Indian Liberal Federation ಸ್ಥಾಪನೆ. ನಂತರದಲ್ಲಿ ಇದು **'ಜಸ್ಟಿಸ್ ಪಾರ್ಟಿ'** ಎಂದಾಯಿತು.
- ಜಸ್ಟಿಸ್ ಪಾರ್ಟಿ ಸ್ಥಾಪಿಸಲು ಕಾರಣ? ಬ್ರಾಹ್ಮಣರು 1912ರಲ್ಲಿ ಶೇ 55ರಷ್ಟು ಡೆಪ್ಯುಟಿ ಕಲೆಕ್ಟರ್ ಹುದ್ದೆಗಳು ಮತ್ತು 72.6ರಷ್ಟು ಜಿಲ್ಲಾ ಮುನ್ಸಿಫರ್ ಹುದ್ದೆ ಹೊಂದಿದ್ದರು. ಹಾಗಾಗಿ ಹಿಂದುಳಿದ ವರ್ಗದವರು ಬ್ರಾಹ್ಮಣರ ವಿರುದ್ಧ ಈ ಆಂದೋಲನ ಆರಂಭಿಸಿದರು.
- ದಕ್ಷಿಣ ಭಾರತದ **ವಿಮೋಚನಾ ರಂಗ** ಜಸ್ಟಿಸ್ ಪತ್ರಿಕೆ ಆರಂಭವಾಗಿ 1937ರಲ್ಲಿ ಜಸ್ಟಿಸ್ ಪಾರ್ಟಿಯ ಅಧ್ಯಕ್ಷರಾದ **ರಾಮಸ್ವಾಮಿ ನಾಯ್ಕರ್** ಚಳುವಳಿಯನ್ನು ತೀವ್ರಗೊಳಿಸಿದರು. ಇದರಿಂದಾಗಿಯೇ ಇವರು **ತಮಿಳುನಾಡಿನ ಪೆರಿಯಾರ್** ಎಂದು ಪ್ರಸಿದ್ಧಿ ಪಡೆದಿದ್ದಾರೆ.
- ರಾಮಸ್ವಾಮಿಯವರು **1925ರಲ್ಲಿ ಸ್ವಾಭಿಮಾನ ಚಳುವಳಿ** ಆರಂಭಿಸಿ ಬ್ರಾಹ್ಮಣೇತರರಲ್ಲಿ ಜಾಗೃತಿ ಮೂಡಿಸುವ ಕೆಲಸ ಆರಂಭಿಸಿದರು.

ನಂತರ **ಕುಡಿ ಅರಸು** ಪತ್ರಿಕೆ ಆರಂಭಿಸಿದರು.

- 1937ರ ನಂತರ ಪೆರಿಯಾರ್ ಜಸ್ಟಿಸ್ ಪಕ್ಷವನ್ನು ದೂರವಿರಿಸಿದರು. ಆದರೆ 1944ರಲ್ಲಿ ಸೇಲಂ ಅಧಿವೇಶನದಲ್ಲಿ ಜಸ್ಟಿಸ್ ಪಾರ್ಟಿಯನ್ನು **ದ್ರಾವಿಡ ಕಜಗಂ** ಎಂದು ನಾಮಕರಣ ಮಾಡಲಾಯಿತು.
- ಪೆರಿಯಾರ್ ರಚಿಸಿದ ಸಿದ್ಧಾಂತ **ದ್ರಾವಿಡನಾಡು ಸಿದ್ಧಾಂತ**ವಾಗಿದೆ.

5. ಡಿಪ್ರೆಸ್ಡ್ ಕ್ಲಾಸಸ್ ಮಿಷನ್ Depressed classes

- 1906ರಲ್ಲಿ ಬಾಂಬೆಯಲ್ಲಿ ಇದನ್ನು ವಿ.ಆರ್. ಶಿಂಧೆ ಪ್ರಾರಂಭಿಸಿದರು.

6. ಅಖಿಲ ಭಾರತ ನಿಮ್ನ ವರ್ಗದವರ ಒಕ್ಕೂಟ

- 1920ರಲ್ಲಿ ಇದು ಆರಂಭವಾಯಿತು.

7. ವೈಕೋ ಸತ್ಯಾಗ್ರಹ

- 1924–25ರಲ್ಲಿ ಕೇರಳದಲ್ಲಿ ವೈಕೋ ಸತ್ಯಾಗ್ರಹ ಆರಂಭವಾಯಿತು. ಕೆಳಜಾತಿಯವರ ದೇವಸ್ಥಾನ ಒಳಪ್ರವೇಶ ಉದ್ದೇಶದಿಂದ ಆರಂಭ. ಟಿ.ಕೆ. ಮಾದವನ್ ಕೇಳಪ್ಪನ್ ಮತ್ತು ಕೇಶವ ಮೆನನ್ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

8. ಪ್ರಜಾಮಿತ್ರ ಮಂಡಳಿ (Prajamitra mandali)

- 1947ರಲ್ಲಿ ಮೈಸೂರಿನಲ್ಲಿ ಪ್ರಜಾಮಿತ್ರ ಮಂಡಳಿಯನ್ನು ಸಿ.ಆರ್. ರೆಡ್ಡಿ ಸ್ಥಾಪಿಸಿದರು.

ಸಿಖ್ ಧರ್ಮದ ಸುಧಾರಣಾ ಚಳುವಳಿಗಳು (Sikh Religious reform movement)

1. ನಿರಂಕಾರಿ ಚಳುವಳಿ – ಬಾಬು ದಯಾಳ್ ದಾಸ್ ಆರಂಭಿಸಿದರು.
2. ಸಿಂಗ್ ಸಭಾ ಚಳುವಳಿ – 1873ರಲ್ಲಿ ಸ್ಥಾಪನೆ
3. ನಾಮ್‌ದಾರಿ ಅಥವಾ ಕುಕಾ ಚಳುವಳಿ ಇದನ್ನು ಭಗತ್ ಜವಹರಮಲ್, ಬಾಬಾ ಬಿಯಾಂಕ ಸಿಂಗ್ ಮತ್ತು ಬಾಬುರಾಂ ಸಿಂಗ್ ಆರಂಭಿಸಿದರು.
4. ಅಕಾಲಿ ಚಳುವಳಿ–1922ರಲ್ಲಿ ಸ್ಥಾಪನೆ (Akali movement)

- ಪಾರ್ಸಿಗಳ ಧಾರ್ಮಿಕ ಸುಧಾರಣೆ
- ದಾದಾಬಾಯಿ ನವರೋಜಿ, ಜೆ.ಬಿ. ವಾಚಾ, ಎಸ್.ಎಸ್. ಬೆಂಗಾಲಿ ಹಾಗೂ ನೌರೋಜ್ ಜಿ ಪರ್ದೋನ್ಜಿಯವರು ಪಾರ್ಸಿ ಧರ್ಮದ ಸುಧಾರಣೆಗಾಗಿ ರಹ್ನಾಯ್ ಮಜ್ದಿಯಾಸ್ ಸಭಾ ಎಂಬ ಸಂಘಟನೆ ಮತ್ತು ರುಸುಂ ಗೋಸ್ಸಾರ್ ಎಂಬ ಪತ್ರಿಕೆಯನ್ನು ಆರಂಭಿಸಿದರು.

ದೇವಾ ಸದನ (Dev sadan)

- ದೇವಾ ಸದನವನ್ನು ಬೆಹರಾಂ ಜಿ ಮತ್ತು ಮಲ್ಬಾರಿ ಆರಂಭಿಸಿದರು. ಬಾಲ್ಯ ವಿವಾಹದ ವಿರುದ್ಧ ಇವರು ಕೈಗೊಂಡ ಆಂದೋಲನದಿಂದಾಗಿ 1891ರ ವಿವಾಹ ಕಾಯ್ದೆ (ಕನಿಷ್ಠ ವಯಸ್ಸಿನ) ಜಾರಿಯಾಯಿತು. ಭಾರತದಲ್ಲಿ ಅತಿ ಹೆಚ್ಚು ಅಭಿವೃದ್ಧಿ ಹೊಂದಿದ ಜನ ಪಾರ್ಸಿಗಳಾಗಿದ್ದಾರೆ.

ಮಹಿಳೆಯರ ಸುಧಾರಣೆಗಳು

1. ಸತಿ ಪದ್ಧತಿ ನಿಷೇಧ

ಡಿಸೆಂಬರ್ 4, 1829ರಂದು ವಿಲಿಯಂ ಬೆಂಟಿಂಕ್ ಸತಿ ಪದ್ಧತಿಯನ್ನು ನಿಷೇಧಿಸಿದರು.

2. ವಿಧವಾ ವಿವಾಹ ಕಾಯ್ದೆ ಮತ್ತು ಮಹಿಳಾ ಶಿಕ್ಷಣ

ಈಶ್ವರಚಂದ್ರ ವಿದ್ಯಾಸಾಗರ್ 1856ರಲ್ಲಿ ವಿಧವಾ ಪುನರ್ ವಿವಾಹ ಕಾಯ್ದೆ ಪಾಸು ಮಾಡಿದರು. ಬಂಗಾಳದಲ್ಲಿ ಇವರು ಮಹಿಳೆಯರಿಗೆ ಮಹಿಳಾ ಶಾಲೆ ಆರಂಭಿಸಿದರು.

3. **ವಿಧವಾ ವಿವಾಹ ಸಂಘಟನೆ:**– ಎಂ.ಜಿ. ರಾನಡೆ ಮತ್ತು ವಿಷ್ಣುಶಾಸ್ತ್ರಿ ಪಂಡಿತ್ ವಿಧವಾ ವಿವಾಹ ಸಂಘಟನೆ ಆರಂಭಿಸಿದರು.

4. **ಆರ್ಯ ಮಹಿಳಾ ಸಮಾಜ ಮತ್ತು ಶಾರದಾ ಸದನ**

ಬಾಂಬೆಯಲ್ಲಿ ರಮಾಬಾಯಿ ಅವರು ಮಹಿಳೆಯರ ಏಳ್ಗೆಗಾಗಿ ಇದನ್ನು ಆರಂಭಿಸಿದರು.

5. **ಮೊದಲ ಭಾರತೀಯ ಮಹಿಳಾ ವಿಶ್ವವಿದ್ಯಾಲಯ**

1916ರಲ್ಲಿ ಡಿ.ಕೆ. ಕರ್ವೆಯವರು ಪೂನಾದಲ್ಲಿ ಇದನ್ನು ಸ್ಥಾಪಿಸಿದರು.

6. **ಶಾರದಾ ಕಾಯ್ದೆ – 1929**

ರಾಯ್ ಸಾಹೇಬ ಬಿರ್ಲಾಸ್‌ರವರು ಶಾರದಾ ಕಾಯ್ದೆ–1929 ಪಾಸು ಮಾಡಲು ಒತ್ತಾಯಿಸಿ ಅಂಗೀಕಾರವಾಗಲು ಕಾರಣರಾದರು. ಈ ಕಾಯ್ದೆಯಿಂದ ಮದುವೆಯ ವಯಸ್ಸು ಪುರುಷರಿಗೆ 18 ವರ್ಷ ಮತ್ತು ಮಹಿಳೆಯರಿಗೆ 14 ವರ್ಷಗಳು ಎಂದಾಯಿತು.

7. **ಭಾರತ ಸ್ತ್ರೀ ಮಹಾಮಂಡಲ:**– 1910ರಲ್ಲಿ ಅಲಹಾಬಾದ್‌ನಲ್ಲಿ ಇದನ್ನು ಸರಳಾದೇವಿ ಚೌದಾರಾಣಿ ಸ್ಥಾಪಿಸಿದರು.

8. ಬೆತುನೀ ಶಾಲೆ

ಬೆತುನೀ ಶಾಲೆಯನ್ನು 1849ರಲ್ಲಿ ಮಹಿಳೆಯರ ಶಿಕ್ಷಣಕ್ಕಾಗಿ ಕಲ್ಕತ್ತಾದಲ್ಲಿ ಜಾನ್ ಪಿಲೆಟ್ ಡ್ರಿಂಕ್ ವಾಟರ್ ಬೆತುನಿ ಸ್ಥಾಪಿಸಿದರು.

9. ಭಾರತೀಯ ಮಹಿಳೆಯರ ಸಂಘ

- ಇದು ದರೋತಿ ರಾಜದಾಸ್‌ರಿಂದ 1915ರಲ್ಲಿ (ಅನಿಬೆಸೆಂಟ್ ಅಧ್ಯಕ್ಷತೆಯಲ್ಲಿ) ಸ್ಥಾಪನೆ. ಇವರು ಸ್ತ್ರೀಧರ್ಮ ಎಂಬ ಪತ್ರಿಕೆ ಆರಂಭಿಸಿದರು.

10. ಅಖಿಲ ಭಾರತ ಮಹಿಳಾ ಸಮ್ಮೇಳನ

1924ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನ ನಡೆಯಿತು.

ಕೆಲವು ಸಮಾಜ ಸುಧಾರಣಾ ಕಾಯ್ದೆಗಳು

1. 1829 – ಸತಿ ಪದ್ಧತಿ ನಿಷೇಧ, ಇದನ್ನು '17th Act' ಎನ್ನುವರು.
2. 1831 – ವಿಲಿಯಂ ಬೆಂಟಿಂಕ್ ತಗ್ಗಿಯನ್ನು ನಿಷೇಧಿಸಿದನು.
3. 1843 – ಗುಲಾಮಗಿರಿ ನಿಷೇಧ ಎಡಿನ್‌ಬರೋ ಕಾಲದಲ್ಲಾಯಿತು.
4. 1856 – ಹಿಂದೂ ವಿಧವಾ ಪುನರ್ ವಿವಾಹ ಕಾಯ್ದೆ
5. 1891 – ಬೆಹರಾಂಜಿ ಇಂದ ವಿವಾಹದ ಕನಿಷ್ಠ ವಯೋಮಿತಿ

6. 1929 – ಶಾರದಾ ಕಾಯ್ದೆ
7. 1937 – ಮಹಿಳೆಯರಿಗೆ ಆಸ್ತಿ ಹಕ್ಕು

ಭಾರತದಲ್ಲಿ ಕಾರ್ಮಿಕ ಸಂಘಟನಾ ಕಾಯ್ದೆ / ಚಳುವಳಿಗಳು

1) **1918** – ಮದ್ರಾಸ್ ಲೇಬರ್ ಯೂನಿಯನ್ ಅನ್ನು ಬಿ.ಪಿ. ವಾಡಿಯಾ, ರಾಮಾನುಜಾನಾಯ್ಡು ಮತ್ತು ಜೆ. ಚಲಪತಿ ಮೊದಲಿಯಾರ್ ಸ್ಥಾಪಿಸಿದರು. ಇದು ಭಾರತದ ಮೊದಲ ಕಾರ್ಮಿಕ ಸಂಘಟನೆ.

2) **1920** – AITUC ಯನ್ನು ಎನ್.ಎಂ. ಜೋಷಿ ಸ್ಥಾಪಿಸಿದರು. ಲಜಪತ್‌ರಾಯ್ ಇದರ ಅಧ್ಯಕ್ಷರಾಗಿದ್ದರು. (AITUC - All India Trade Union Congress)

3) **1926** – ಟ್ರೇಡ್ ಯೂನಿಯನ್ ಕಾಯ್ದೆ ಜಾರಿಯಾಯಿತು.

4) **1929** – ಆಲ್ ಇಂಡಿಯಾ ಟ್ರೇಡ್ ಯೂನಿಯನ್‌ನಲ್ಲಿ ಬಿರುಕುಂಟಾಯಿತು.

25. ಭಾರತದ ಸ್ವಾತಂತ್ರ್ಯ ಚಳುವಳಿ
(Indian Freedom Movement)

1885ರ ಮುಂಚಿನ ರಾಷ್ಟ್ರೀಯ ಸಂಘಟನೆಗಳು

ವರ್ಷ	ಸಂಘಟನೆಗಳು	ಕೇಂದ್ರ	ಸ್ಥಾಪಕರು
1837	ಲ್ಯಾಂಡ್ ಹೋಲ್ಡರ್ ಅಸೋಸಿಯೇಷನ್	ಕಲ್ಕತ್ತಾ	ದ್ವಾರಕನಾಥ ಠಾಕೂರ್
1843	ಬ್ರಿಟಿಷ್ ಇಂಡಿಯಾ ಸೊಸೈಟಿ	ಲಂಡನ್	ಜಾರ್ಜ್ ಥಾಮ್ಸನ್
1851	ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	ಕಲ್ಕತ್ತಾ	ದೇವೇಂದ್ರನಾಥ ಠಾಕೂರ್
1852	ಬಾಂಬೆ ಅಸೋಸಿಯೇಷನ್	–	–
1852	ಮದ್ರಾಸ್ ಅಸೋಸಿಯೇಷನ್	–	–
1864	ಮದ್ರಾಸ್ ಮಹಾಜನ ಸಭಾ	–	–
1867	ಪೂನಾ ಸಾರ್ವಜನಿಕ ಸಭಾ	ಪೂನಾ	ಎಂ.ಜಿ. ರಾನಡೆ, ಜಿ.ವಿ. ಜೋಶಿ
1866	ಈಸ್ಟ್ ಇಂಡಿಯಾ ಅಸೋಸಿಯೇಷನ್	ಲಂಡನ್	ದಾದಾಬಾಯಿ ನವರೋಜಿ
1876	ಇಂಡಿಯನ್ ಅಸೋಸಿಯೇಷನ್	ಕಲ್ಕತ್ತಾ	ಎಸ್.ಎನ್. ಬ್ಯಾನರ್ಜಿ, ಆನಂದ, ಮೋಹನ್ ಬೋಸ್
1883	ಇಂಡಿಯನ್ ನ್ಯಾಷನಲ್ ಯೂನಿಯನ್	ಕಲ್ಕತ್ತಾ	ಎ.ಒ. ಹ್ಯೂಮ್
1883	ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಷನ್	ಬಾಂಬೆ	ಫಿರೋಜ್ ಷಾ ಮೆಹ್ತಾ ಕೆ.ಟಿ. ತಲ್ಲಾಂಗ್, ಬದ್ರುದ್ದೀನ್ ತ್ಯಾಬ್ಜಿ
1884	ಮದ್ರಾಸ್ ಮಹಾಜನ ಸಭಾ	ಮದ್ರಾಸ್	ವೀರರಾಘವಚಾರಿ, ಜಿ. ಸುಬ್ರಹ್ಮಣ್ಯ ಅಯ್ಯರ್, ಆನಂದ ಚಾರ್ಲು

- ಮೇಲಿನವುಗಳಲ್ಲಿ 1876ರಲ್ಲಿ ಪ್ರಾರಂಭವಾದ ಇಂಡಿಯನ್ ಅಸೋಸಿಯೇಷನ್ ಬಿಟ್ಟರೆ ಉಳಿದವುಗಳ ಕಾರ್ಯವ್ಯಾಪ್ತಿ ಸೀಮಿತವಾಗಿತ್ತು. ಇಂಡಿಯನ್ ಅಸೋಸಿಯೇಷನ್ ಮತ್ತು ಇಂಡಿಯನ್ ನ್ಯಾಷನಲ್ ಕಾನ್ಫರೆನ್ಸ್‌ಗೆ ಬ್ರಿಟೀಷರ ಬೆಂಬಲ ಮತ್ತು ವಿಶ್ವಾಸವಿರಲಿಲ್ಲ. ಆದ್ದರಿಂದ ರಾಷ್ಟ್ರಮಟ್ಟದ ಸಂಸ್ಥೆಯೊಂದು ಸ್ಥಾಪಿಸುವ ಉದ್ದೇಶದಿಂದ ಐ.ಎನ್.ಸಿ ಸ್ಥಾಪಿತವಾಯಿತು. ಇಂಡಿಯನ್ ನ್ಯಾಷನಲ್ ಕಾನ್ಫರೆನ್ಸ್ ಐಎನ್‌ಸಿಯಲ್ಲಿ ವಿಲೀನವಾಯಿತು. ಐಎನ್‌ಸಿಯು ಒಂದು ಪ್ರಾತಿನಿಧಿಕ ಸಂಸ್ಥೆಯಾಗಿದೆ.
- **1883 ಡಿಸೆಂಬರ್**‌ನಲ್ಲಿ ಕಲ್ಕತ್ತಾದಲ್ಲಿ ಸುರೇಂದ್ರನಾಥ ಬ್ಯಾನರ್ಜಿ ಅಖಿಲ ಭಾರತ ನ್ಯಾಷನಲ್ ಕಾನ್ಫರೆನ್ಸ್ ಸ್ಥಾಪಿಸಿದರು. ಇದು ಅಖಿಲ ಭಾರತದ ಮೊದಲ ರಾಜಕೀಯ ಸಂಸ್ಥೆಯಾಗಿತ್ತು.

25.1 ಭಾರತದ ರಾಷ್ಟ್ರೀಯ ಕಾಂಗ್ರೆಸ್
Indian National Congress

- ಭಾರತದ ರಾಜಕೀಯ ಸಂಸ್ಥೆಗಳ ಉಗಮ ಮತ್ತು ಬೆಳವಣಿಗೆಯ ಬೀಜವನ್ನು 1820ರಲ್ಲಿ ರಾಜರಾಮ್ ಮೋಹನ್‌ರಾಯ್ ಮತ್ತು 1830ರಲ್ಲಿ ವಿವಿಯನ್ ಡಿರೋಜಿಯೋ ಬಿತ್ತಿದರು. ಡಿರೋಜಿಯೋನಿಂದ ಸ್ವಾತಂತ್ರ್ಯ, ಸಮಾನತೆ, ಕ್ರಾಂತಿಗಳು ಪ್ರಚಾರವಾದವು.
- ಇಂಡಿಯನ್ ಅಸೋಷಿಯೇಷನ್ ನಾಯಕತ್ವ ವಹಿಸಿಕೊಂಡ ಸುರೇಂದ್ರನಾಥ ಬ್ಯಾನರ್ಜಿಯವರ, ಒತ್ತಡದಿಂದಾಗಿ 1876ರಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯ ವಯೋಮಿತಿ 21 ರಿಂದ 19ಕ್ಕೆ ಇಳಿಸಲಾಯಿತು. 1883ರ ಇಲ್ಬರ್ಟ್ ಬಿಲ್ ಜಾರಿಗೆ ಇವರು ಹೋರಾಡಿದರು.
- ಇಂಡಿಯನ್ ಅಸೋಷಿಯೇಷನ್ ಕಾರ್ಯಕಲಾಪಗಳಿಗಾಗಿ ಸುರೇಂದ್ರನಾಥ ಬ್ಯಾನರ್ಜಿಯವರು 20,000 ನಿಧಿ ಸಂಗ್ರಹಿಸಿದರು. ಇದು ರಾಜಕೀಯ ಹೋರಾಟಕ್ಕಾಗಿ ಸಂಗ್ರಹಿಸಿದ ಮೊದಲ ನಿಧಿಯಾಗಿದೆ.
- 1884ರ ಥಿಯೋಸಾಫಿಕಲ್ ಸಮ್ಮೇಳನದಲ್ಲಿ ಭಾಗವಹಿಸಿದ್ದ ದಾದಾಬಾಯಿ ನವರೋಜಿ, ಕೆ.ಟಿ. ತಲ್ಲಾಂಗ್, ಸುರೇಂದ್ರನಾಥ ಬ್ಯಾನರ್ಜಿ ಮತ್ತು ಸುಬ್ರಹ್ಮಣ್ಯ ಅಯ್ಯರ್, ಮುಂತಾದವರು

ಮಾತೃಭೂಮಿಯ ರಕ್ಷಣೆಗಾಗಿ ಒಂದು ಚಳುವಳಿ ಆರಂಭಿಸಿದ್ದು ಐ.ಎನ್.ಸಿಯ ಮೂಲ ಎನ್ನಬಹುದು.

- ಕಲ್ಕತ್ತಾದ ಮೂರು ಸಂಸ್ಥೆಗಳಾದ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್, ಇಂಡಿಯನ್ ಅಸೋಸಿಯೇಷನ್, ಸೆಂಟ್ರಲ್ ಮಹಮದ್ದನ್ ಅಸೋಷಿಯೇಷನ್‌ಗಳು ಸಮ್ಮೇಳನ ನಡೆಸಿ 1885ರಲ್ಲಿ ಸಮಾವೇಶ ನಡೆಸಿದವು. (ಡಿಸೆಂಬರ್ 28, 1885)
- **ಸ್ಕಾಟ್ಲೆಂಡಿನ ಎ.ಒ. ಹ್ಯೂಮ್** ಕಲ್ಕತ್ತಾ ವಿ.ವಿ.ಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಒಂದು ಬಹಿರಂಗ ಪತ್ರ ಬರೆದನು. ಸುರಕ್ಷಿತ ತರುಣರು ರಾಜಕೀಯ ಪುನರುತ್ಥಾನ, ಕ್ರಿಯಾಶೀಲ ರಾಷ್ಟ್ರೀಯ ಸಂಸ್ಥೆ ಸಂಘಟಿಸಲು ಕರೆ ನೀಡಿದನು.
- ಮುಂದೆ 1884ರಲ್ಲಿ ಇಂಡಿಯನ್ ನ್ಯಾಷನಲ್ ಯೂನಿಯನ್ ಸಂಸ್ಥೆ ಸಂಘಟಿಸಿದನು. ಇದೇ ಮುಂದೆ ಪುನರ್ ನಾಮಾಂಕಿತಗೊಂಡು ಐ.ಎನ್.ಸಿ ಆಯಿತು. ಆಗಿದ್ದ ವೈಸ್‌ರಾಯ್ **ಲಾರ್ಡ್ ಡಫರಿನ್** ಇದರ ಸ್ಥಾಪನೆಗೆ ಪ್ರೋತ್ಸಾಹಿದನು.

ಕಾಂಗ್ರೆಸ್ ಸಮ್ಮೇಳನಗಳು ಮತ್ತು ಅವುಗಳ ಅಧ್ಯಕ್ಷರು
(Congress sessions)

- 1ನೇ ಸಮ್ಮೇಳನ 1885 ಡಿಸೆಂಬರ್ 28 – ಬಾಂಬೆ – ಉಮೇಶ್‌ಚಂದ್ರ ಬ್ಯಾನರ್ಜಿ – 72 ಪ್ರತಿನಿಧಿಗಳು ಭಾಗವಹಿಸಿದರು.
- 2ನೇ ಸಮ್ಮೇಳನ 1886 – ಬಾಂಬೆ – ದಾದಾಬಾಯಿ ನವರೋಜಿ – 434 ಪ್ರತಿನಿಧಿಗಳು ಭಾಗವಹಿಸಿದ್ದರು.
- 3ನೇ ಸಮ್ಮೇಳನ 1887 – ಮದ್ರಾಸ್ – ಬಹ್ರುದ್ದೀನ್ ತಬ್ಜಿ – 607 ಪ್ರತಿನಿಧಿಗಳು ಭಾಗವಹಿಸಿದರು.
- 1888 – ಅಲಹಾಬಾದ್ – ಜಾರ್ಜ್ ಹೋಲ್
- 1889 – ಬಾಂಬೆ – ವಿಲಿಯಂ ವೇಡರ್‌ಬರ್ನ್
- 1890 – ಕಲ್ಕತ್ತಾ – ಫಿರೋಜ್ ಷಾ ಮೆಹ್ತಾ (ಮೊದಲ ಪಾರ್ಸಿ ಅಧ್ಯಕ್ಷರು)
- 1891 – ನಾಗ್ಪುರ – ಆನಂದಚಾರ್ಲು
- 1892 – ಅಲಹಾಬಾದ್ – ಡಬ್ಲ್ಯು.ಸಿ. ಬ್ಯಾನರ್ಜಿ (2ನೇ ಬಾರಿ)
- 1893 – ಲಾಹೋರ್ – ದಾದಾಬಾಯಿ ನವರೋಜಿ (2ನೇ ಬಾರಿ)
- 1894 – ಮದ್ರಾಸ್ – ಆರ್ಲ್ಸೆಡ್ ವೆಬ್
- 1895 – ಪುಣೆ – ಸುರೇಂದ್ರನಾಥ ಬ್ಯಾನರ್ಜಿ
- 1896 – ಕಲ್ಕತ್ತಾ – ರೆಹಮತ್ ಉಲ್ಲಾ ಸಯಾನಿ
- 1897 – ಅಮರೊತ್ತಿ – ಸಿ. ಶಂಕರ್ ನಾಯರ್
- 1898 – ಮದ್ರಾಸ್ – ಆನಂದ ಮೋಹನ್ ಬೋಸ್
- 1899 – ಲಕ್ನೋ – ರಮೇಶ್ ಚಂದ್ರ ದತ್ತ
- 1900 – ಲಾಹೋರ್ – ನಾರಾಯಣ ಗಣೇಶ್ ಚಂದಾವರ್ಕರ್ (ಕರ್ನಾಟಕದವರು)
- 1901 – ಕಲ್ಕತ್ತಾ – ಎನ್ ಷಾ ಹಿದುಲ್‌ಜಿ ವಾಚಾ
- 1902 – ಅಹ್ಮದಾಬಾದ್ – ಸುರೇಂದ್ರನಾಥ ಬ್ಯಾನರ್ಜಿ
- 1903 – ಮದ್ರಾಸ್ – ಲಾಲ್ ಹೋಹನ್ ಘೋಷ್ (ಕಡ್ಡಾಯ ಶಿಕ್ಷಣದ ಬಗ್ಗೆ ತಿಳಿಸಿದರು)
- 1904 – ಬಾಂಬೆ – ಹೆನ್ರಿಕಾಟನ್
- 1905 – ಬನಾರಸ್ – ಗೋಪಾಲಕೃಷ್ಣ ಗೋಖಲೆ
- 1906 – ಕಲ್ಕತ್ತಾ – ದಾದಾಬಾಯಿ ನವರೋಜಿ (ಮೊದಲಿಗೆ ಸ್ವರಾಜ್ ಪದ ಬಳಕೆ)
- 1907 – ಸೂರತ್ – ರಾಸ್ ಬಿಹಾರ್ ಬೋಸ್
- 1908 – ಮದ್ರಾಸ್ – ರಾಸ್ ಬಿಹಾರಿ ಬೋಸ್ (ಸತತ 2ನೇ ಬಾರಿ) ಕಾಂಗ್ರೆಸ್ ಸಂವಿಧಾನದ ರಚನೆ.
- 1909 – ಲಾಹೋರ್ – ಪಂಡಿತ್ ಮದನ್ ಮೋಹನ್ ಮಾಳವೀಯ (ಇವರು 1918, 1930, 1932 ಅಧ್ಯಕ್ಷರೂ ಆಗಿದ್ದರು.)
- 1910 – ಅಲಹಾಬಾದ್ – ವಿಲಿಯಂ ವೇಡರ್ ಬರ್ನ್ (ಸ್ಥಳೀಯ ಸರ್ಕಾರಗಳ ಸ್ಥಾಪನೆಗೆ ಬೆಂಬಲ)
- 1911 – ಕಲ್ಕತ್ತಾ – ಪಂ.ಬಿಷನ್ ನಾರಾಯಣ ಧಾರ್
- 1912 – ಪಾಟ್ನಾ – ರಾವ್ ಬಹದ್ದೂರ್
- 1913 – ಕರಾಚಿ – ಸಯ್ಯದ್ ಮಹ್ಮದ್ ಬಹದ್ದೂರ್
- 1914 – ಮದ್ರಾಸ್ – ಭೂಪೇಂದ್ರನಾಥ ಬೋಸ್
- 1915 – ಬಾಂಬೆ – ಸತ್ಯೇಂದ್ರ ಪ್ರಸನ್ನ ಸಿನ್ಹ
- 1916 – ಲಕ್ನೋ – ಎ.ಸಿ. ಮಜುಂದಾರ್ (ಕಾಂಗ್ರೆಸ್ ವಿಲೀನ)
- 1917 – ಕಲ್ಕತ್ತಾ – ಅನಿಬೆಸೆಂಟ್ – ಮೊದಲ ಮಹಿಳಾ (ವಿದೇಶ) ಅಧ್ಯಕ್ಷೆ
- 1918 – ದೆಹಲಿ – ಪಂಡಿತ್ ಮದನ್ ಮೋಹನ್ ಮಾಳವೀಯ
- 1918 – ಬಾಂಬೆ (ವಿಶೇಷ) – ಸಯ್ಯದ್ ಹಸನ್ ಇಮಾಂ
- 1919 – ಅಮೃತ ಸರ – ಮೋತಿಲಾಲ್ ನೆಹರೂ
- 1920 – ನಾಗ್ಪುರ – ಸಿ. ವಿಜಯ ರಾಘವಾಚಾರಿ
- 1920 – ಕಲ್ಕತ್ತಾ (ವಿಶೇಷ) – ಲಾಲಾ ಲಜಪತ್‌ರಾಯ್
- 1921 – ಅಹ್ಮದಾಬಾದ್ – ಹಕೀಂ ಅಜ್ಮಲ್ ಖಾನ್ – ಹಂಗಾಮಿ ಅಧ್ಯಕ್ಷರು (ಅಧ್ಯಕ್ಷರಾಗಿದ್ದ ಸಿ.ಆರ್.ದಾಸ್ ಸೆರೆಮನೆಯಲ್ಲಿದ್ದವರು)
- 1922 – ಗಯಾ – ಸಿ.ಆರ್. ದಾಸ್
- 1923 – ಕಾಕಿನಾಡ – ಮಹ್ಮದ್ ಆಲಿ, (ಅತಿ ಕಿರಿಯ ವಯಸ್ಸಿನ

ಅಧ್ಯಕ್ಷರು)

- 1924 – ಬೆಳಗಾಂ – ಗಾಂಧೀಜಿ
- 1925 – ಕಾನ್ಪುರ – ಸರೋಜಿನಿ ನಾಯ್ಡು – ಮೊದಲ ಭಾರತೀಯ ಮಹಿಳಾ ಅಧ್ಯಕ್ಷೆ
- 1926 – ಗೌಹಾಟಿ –ಶೇಷಾದ್ರಿ ಶ್ರೀನಿವಾಸ ಅಯ್ಯಂಗಾರ್
- 1927 – ಮದ್ರಾಸ್ – ಎಂ.ಎ ಅನ್ಸಾರಿ
- 1928 – ಕಲ್ಕತ್ತಾ – ಮೋತಿಲಾಲ್ ನೆಹರೂ, ಅಖಿಲ ಭಾರತ ಯುವ ಕಾಂಗ್ರೆಸ್ ಸ್ಥಾಪನೆ
- 1929, 1930 – ಲಾಹೋರ್ – ಜ. ನೆಹರೂ – ಪೂರ್ಣ ಸ್ವರಾಜ್ಯದ ನಿರ್ಣಯ ಕೈಗೊಳ್ಳಲಾಯಿತು.
- 1931 – ಕರಾಚಿ – ಸರ್ದಾರ್ ವಲ್ಲಭಬಾಯ್ ಪಟೇಲ್
- 1932 – ದೆಹಲಿ – ಪಂಡಿತ್ ಮದನ್ ಮೋಹನ್ ಮಾಳವೀಯ
- 1933 – ಕಲ್ಕತ್ತಾ – ನಲ್ಲಿಸೇನ್ ಗುಪ್ತಾ (3ನೇ ಮಹಿಳೆ ಆದರೆ ಯೂರೋಪಿನ 2ನೇ ಮಹಿಳೆ)
- 1934–35 – ಬಾಂಬೆ – ರಾಜೇಂದ್ರ ಪ್ರಸಾದ್ (ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷ ಸ್ಥಾಪನೆ.)
- 1936 – ಲಕ್ನೋ – ಜವಹರಲಾಲ್ ನೆಹರೂ
- 1937 – ಫೈಜ್‌ಪುರ – ಜವಾಹರಲಾಲ್ ನೆಹರು (ಗ್ರಾಮದಲ್ಲಿ ನಡೆದ ಅಧಿವೇಶನ)
- 1938 – ಹರಿಪುರ – ಸುಭಾಷ್‌ಚಂದ್ರ ಬೋಸ್
- 1939 – ತ್ರಿಪುರ – ಸುಭಾಷ್‌ಚಂದ್ರ ಬೋಸ್
- 1940 – ರಾಮ್‌ಗಾರ್ – ಮೌಲಾನ ಅಬ್ದುಲ್ ಕಲಾಂ ಅಜಾದ್
- 1941 ರಿಂದ 1946 ಐಎನ್‌ಸಿ ಅಧಿವೇಶನ ನಡೆಯಲಿಲ್ಲ. ಆಜಾದ್‌ರವರು ಅಧ್ಯಕ್ಷರಾಗಿ ಮುಂದುವರಿದರು.
- 1947 – ದೆಹಲಿ – ಜೆ.ಬಿ.ಕೃಪಲಾನಿ
- 1948 – ಜೈಪುರ – ಪಟ್ಟಾಭಿ ಸೀತರಾಮಯ್ಯ
- 1950 – ನಾಸಿಕ್ – ಪುರುಷೋತ್ತಮ ದಾಸ್ ತಂಡನ್

ಐಎನ್‌ಸಿಯ ಅಧ್ಯಕ್ಷತೆ ವಹಿಸಿದ ಕನ್ನಡಿಗರು

- 1900ರಲ್ಲಿ ಶ್ರೀನಾರಾಯಣ ಚಂದಾವರ್ಕರ್
- 1969 – ಎಸ್. ನಿಜಲಿಂಗಪ್ಪ
- ಸ್ವಾತಂತ್ರ್ಯ ನಂತರ ಅಧಿಕ ಅವಧಿಯ ಕಾಂಗ್ರೆಸ್ ಅಧ್ಯಕ್ಷರು – ಸೋನಿಯಾಗಾಂಧಿ. ಇವರು 1998 ರಿಂದ ಇಲ್ಲಿಯವರೆಗೆ ಅಧ್ಯಕ್ಷರಾಗಿದ್ದಾರೆ.

ಎ.ಒ. ಹ್ಯೂಮ್ ಐಎನ್‌ಸಿ ಸ್ಥಾಪನೆಯ ಎರಡು ಉದ್ದೇಶಗಳು

ಅಸಮಧಾನ ಶಕ್ತಿಯನ್ನು ಸೇಫ್ಟಿ ವ್ಯಾಲ್ಯೂ / ಸುರಕ್ಷ ಕವಾಟದ ಮೂಲಕ ತಡೆಯುವುದು.

- ಸುರಕ್ಷ ಕವಾಟದ ಐತಿಹಾಸಿಕ ಸಮರ್ಥನೆ **ಸೀಕ್ರೇಟ್ ರಿಪೋರ್ಟರ್ಸ್** ಎಂಬ 7 ಸಂಪುಟಗಳಲ್ಲಿ ದೊರೆಯುತ್ತದೆ.

2. ಅಸಮಧಾನಗೊಂಡ ಭಾರತೀಯ ವಿದ್ಯಾವಂತ ವರ್ಗವು, ಅಸಮಧಾನಗೊಂಡ ರೈತ ವರ್ಗದ ಜೊತೆ ಸೇರಿ ಅಖಿಲ ಭಾರತ ವಿರೋಧಿ ಚಳುವಳಿ ತಡೆಯುವುದು.

- ಕಾಂಗ್ರೆಸ್ ಸ್ಥಾಪನೆಯ ಮೂಲವನ್ನು ಪಟ್ಟಾಭಿ ಸಿತಾರಾಮಯ್ಯ **ಗೂಢತೆಯಲ್ಲಿ ಮಸುಕಿರುವ ಅಂಶ** ಎಂದಿದ್ದಾರೆ.

ಐ.ಎನ್.ಸಿಯನ್ನು ಟೀಕಿಸಿದವರು

- ಲಾರ್ಡ್ ಡಫರಿನ್ – **ಅಸಂಖ್ಯಾತ ವಿದ್ಯಾವಂತ ವರ್ಗವನ್ನು ಪೋಷಿಸುವ ರಾಜದ್ರೋಹಿ ಸಂಸ್ಥೆ** ಎಂದು ಕರೆದರು.
- ಲಾರ್ಡ್ ಕರ್ಜನ್ – **ಐಎನ್‌ಸಿ ಒಂದು ಕೊಳಕು ವಸ್ತು** ಎಂದನು.

25.2. ಐಎನ್‌ಸಿಯ ನೇತೃತ್ವದಲ್ಲಿ ರಾಷ್ಟ್ರೀಯ ಚಳುವಳಿ

- 1885 – 1947ರವರೆಗೆ ರಾಷ್ಟ್ರೀಯ ಚಳುವಳಿಯನ್ನು ರಘುವಂಶಿಯವರು 3 ಹಂತಗಳಲ್ಲಿ ಗುರುತಿಸಿದ್ದಾರೆ.

I. ಹಂತ : – ಮಂದಗಾಮಿಗಳ ರಾಜಕೀಯ ಭಿಕ್ಷೆಗಳ ಕಾಲ – 1885 – 1905

- 1907ರ ಸೂರತ್ (ಐಎನ್‌ಸಿ) ಅಧಿವೇಶನದಲ್ಲಿ ಐಎನ್‌ಸಿಯಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳೆಂದು ವಿಭಾಗವಾಯಿತು.
- ಮಂದಗಾಮಿಗಳೆಂದರೆ – ದಾದಾಬಾಯಿ ನವರೋಜಿ, ಎಸ್.ಎನ್. ಬ್ಯಾನರ್ಜಿ, ಫಿರೋಜ್ ಷಾ ಮೆಹ್ತಾ, ಗೋಪಾಲಕೃಷ್ಣ ಗೋಖಲೆ, ಮದನ್ ಮೋಹನ್ ಮಾಳವೀಯ, ಎಂ.ಜಿ. ರಾನಡೆ, ಎ.ಸಿ. ಮಜುಂದಾರ್, ಆನಂದಚಾರ್ಲು, ಆನಂದ ಮೋಹನ್ ಬೋಸ್, ಬಹ್ರುದ್ದೀನ್ ತ್ಯಾಬ್ಜಿ, ಸುಬ್ರಹ್ಮಣ್ಯ ಅಯ್ಯರ್ ಮತ್ತು ವೀರರಾಘವಚಾರಿ ಮುಂತಾದವರು.
- ಈ ಹಂತದಲ್ಲಿ ಕಾಂಗ್ರೆಸ್ ಒಂದು ಜಾತ್ಯಾತೀತ ಮತ್ತು ರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಿತು. ಇವರು – ಸ್ವರಾಜ್ಯವನ್ನು ಅಹಿಂಸಾತ್ಮಕವಾಗಿ ಪಡೆಯುವುದು ಇವರು 3p ಗಳಾಗಿದ್ದರು. ಮನವೊಲಿಕೆಗೆ ಮಹತ್ವ ಹಾಗೂ ಬ್ರಿಟೀಷರ ನ್ಯಾಯಪರತೆಯಲ್ಲಿ ನಂಬಿಕೆಯಿಟ್ಟಿದ್ದರು. (3P- Petition, Prayer, Protest)

ಮಂದಗಾಮಿಗಳ ನೀತಿಗಳು ಮತ್ತು ಕಾರ್ಯಕ್ರಮಗಳು
Maderate policies & Programmes

1. ರಾಜಕೀಯ ವಿಷಯ

- ಪ್ರಾಂತೀಯ ಮತ್ತು ಕೇಂದ್ರೀಯ ಶಾಸನ ಸಭೆಗಳ ರಚನೆ.
- ಸಾಮ್ರಾಜ್ಯಶಾಹಿಯ ಆರ್ಥಿಕ ವಿಶ್ಲೇಷಣೆ.

- ಇಂಗ್ಲೆಂಡ್ ಮತ್ತು ಭಾರತದಲ್ಲಿ ಐಸಿಎಸ್ ಪರೀಕ್ಷೆಗಳನ್ನು ಏಕ ಕಾಲದಲ್ಲಿ ನಡೆಸಬೇಕು.
- ಸರ್ಕಾರಿ ಸೇವೆಗಳನ್ನು ಭಾರತೀಕರಣಗೊಳಿಸಬೇಕು.

3. ಆರ್ಥಿಕ ವಿಷಯ

- ಬ್ರಿಟಿಷ್ ಸರ್ಕಾರ ಬಡತನ ಹೆಚ್ಚಳ ಮತ್ತು ಬರಗಾಲದ ವಿಚಾರಣೆ ಮಾಡುವುದು.
- ಹೋಂ ಚಾರ್ಜಸ್ ಮತ್ತು ಮಿಲಿಟರಿ ವೆಚ್ಚಗಳ ಕಡಿತ
- ತಾಂತ್ರಿಕ ಶಿಕ್ಷಣಕ್ಕೆ ನಿಧಿ ಮತ್ತು ಉಪ್ಪಿನ ಕರ ರದ್ದುಮಾಡುವುದು.
- ಸಂಪತ್ತಿನ ಹರಿಯುವಿಕೆಗೆ ತಡೆ, ಸ್ವದೇಶಿ ವಸ್ತುಗಳ ಬಳಕೆಗೆ ಕರೆ.
- ದಾದಾಬಾಯಿ ನವರೋಜಿಯ ಕೃತಿ – Proverty & Un British Rule in India OR Drain Theory
- 1892ರ ಶಾಸನವು ಭ್ರಮೆಯೆಂದು ತಿರಸ್ಕರಿಸಿದರು ಮತ್ತು ಶಾಸನ ಸಭೆಗಳಲ್ಲಿ ಇನ್ನೂ ಹೆಚ್ಚಿನ ಪ್ರಾತಿನಿಧ್ಯ ಮತ್ತು ಅಧಿಕಾರ ನೀಡಲು ಹಣಕಾಸಿನ ಮೇಲೆ ಅಧಿಕಾರ ಬಯಸಿ ಪ್ರಾತಿನಿಧ್ಯವಿಲ್ಲದ ತೆರಿಗೆಯಿಲ್ಲ ಎಂಬ ಚಳುವಳಿ ಆರಂಭಿಸಿದರು.
- ಗೋಖಲೆಯವರು 1905 ಜೂನ್ 15ರಂದು **ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ** ಮೊದಲ ಸೇವಕರಾದರು. ಇದರ ಸದಸ್ಯರಾಗಿ ಜಿ.ಕೆ. ದೇವದರ್, ಪಟವರ್ಧನ್, ಹೃದಯನಾಥ ಕುಂಜ್ರು, ಎನ್.ಎಂ. ಜೋಷಿ, ಕನ್ನಡದ ದಿನಕರ ದೇಸಾಯಿ, ಎ.ವಿ. ಠಕ್ಕರ್, ರಾಜೇಂದ್ರ ಪ್ರಸಾದ್ ಮತ್ತು ಎಂ.ಆರ್. ಜಯಕರ್ ಮುಂತಾದವರಿದ್ದರು.
- ಮಂದಗಾಮಿಗಳು ಶಿಕ್ಷಣದ ಉದ್ದೇಶಕ್ಕಾಗಿ ಭಾರತೀಯರಿಗೆ 1889ರಲ್ಲಿ ಕಾಂಗ್ರೆಸ್ ವಾಣಿಯಂತೆ ಕೆಲಸ ಮಾಡುವ ಬ್ರಿಟಿಷ್ ಕಮಿಟಿ ಪ್ರಾರಂಭಿಸಿ 1890ರಲ್ಲಿ ಡಾ. ನವರೋಜಿ ನೇತೃತ್ವದಲ್ಲಿ ಇಂಡಿಯಾ ಪತ್ರಿಕೆ ಆರಂಭಿಸಿದರು.

ಮಹತ್ವ

- ಆಧುನಿಕ ಕಾಲದಲ್ಲಿ ರಾಷ್ಟ್ರೀಯತೆಯ ಹುಟ್ಟಿಗೆ ಕಾರಣರಾದರು.
- ರಾಜಕೀಯ ಪಕ್ವತೆ ಸಾಧಿಸುವಲ್ಲಿ ಯಶಸ್ವಿಯಾದರು.
- ಬ್ರಿಟಿಷರ ಆರ್ಥಿಕ ಶೋಷಣೆಯನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು.
- ವಿವಿಧ ಧರ್ಮ, ಭಾಷೆ ಮತ್ತು ಜನಾಂಗದೊಡನೆ ಸಂಪರ್ಕ ಸಾಧಿಸುವಲ್ಲಿ ಯಶಸ್ವಿಯಾದರು.

ಟೀಕೆಗಳು

- ಭಾರತೀಯರಿಗೆ ಕೆಲ ಸವಲತ್ತುಗಳನ್ನು ಕೇಳಿದರೆ ವಿನಃ ಸ್ವಾತಂತ್ರ್ಯ ಕೇಳಲಿಲ್ಲ.
- ಮಂದಗಾಮಿ ಚಟುವಟಿಕೆಗಳು ಕೇವಲ 3pಗಳಿಗೆ ಸೀಮಿತವಾಯಿತು.
- ಮಂದಗಾಮಿ ಯುಗದಲ್ಲಿ ಕಾಂಗ್ರೆಸ್ ಚಟುವಟಿಕೆಗಳು ಕೇವಲ ಸುಶಿಕ್ಷಿತರೆನಿಸಿಕೊಂಡಿದ್ದ ವಕೀಲರು, ವೈದ್ಯರು, ಟೀಚರ್ಸ್ ಮತ್ತು ಪತ್ರಿಕೋದ್ಯಮಿಗಳಿಗೆ ಸೀಮಿತವಾಗಿತ್ತು.
- ಕೇವಲ ಮನವೊಲಿಕೆಗೆ ಪ್ರಯತ್ನಿಸಿದರು.
- ರಾಜಕೀಯ ಚಟುವಟಿಕೆಗಳು ರಾಜಕೀಯ ಭಿಕ್ಷೆಗೆ ಸೀಮಿತವಾಗಿತ್ತು.
- ತಿಲಕರು ಮಂದಗಾಮಿಗಳ ಕಾಂಗ್ರೆಸ್ಸನ್ನು ಹೊಗಳು ಭಟ್ಟರ ಕಾಂಗ್ರೆಸ್ ಎಂದರು.
- ತಿಲಕರು ಕಾಂಗ್ರೆಸ್ ಅಧಿವೇಶನಗಳನ್ನು **ರಜೆಯ ವಿನೋದ**
- ಅಶ್ವಿನಿಕುಮಾರ ದತ್ತರು ಅಧಿವೇಶನಗಳನ್ನು **3 ದಿನಗಳ ವಿನೋದ**
- ಲಾಲಲಜಪತರಾಯ ಅಧಿವೇಶನಗಳನ್ನು **ಭಾರತೀಯ ವಿದ್ಯಾವಂತ ವರ್ಗದ ವಾರ್ಷಿಕ ಹಬ್ಬ** ಎಂದರು.
- ಮಂದಗಾಮಿಗಳು ಪಟ್ಟಣದ ಮಧ್ಯಮ ಮತ್ತು ಮೇಲ್ವರ್ಗದ ವಿದ್ಯಾವಂತ ಯುವಕರ ಅವಲಂಬನೆ.

2ನೇ ಹಂತ – 1905-1919 ತೀವ್ರಗಾಮಿಗಳ ಕಾಲ / ಕ್ರಿಯಾತ್ಮಕ ಕಾಲ (Extremists)

- **ತೀವ್ರಗಾಮಿ ನಾಯಕರು** – ಲಾಲ್ ಲಜಪತ್‌ರಾಯ್, ಬಾಲ ಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಅರವಿಂದ ಘೋಷ್, ಅಶ್ವಿನಿಕುಮಾರದತ್ತ (ಪಶ್ಚಿಮ ಬಂಗಾಳ), ವಿಷ್ಣುಶಾಸ್ತ್ರಿ ಚಿಪ್ಲುಂಕರ್ (ಮಹಾರಾಷ್ಟ್ರ), ಸಿ.ಆರ್. ದಾಸ್, ಗುರುದಾಸ್ ಬ್ಯಾನರ್ಜಿ, ಅನಿಬೆಸೆಂಟ್, ಜಿ.ಎಸ್. ಕರ್ಪಡೆ ಮತ್ತು ಅಜಿತ್‌ಸಿಂಗ್ ಮುಂತಾದವರು.
- ತೀವ್ರಗಾಮಿಗಳ ಗುಂಪು – ಪಟ್ಟಣದ ಮಧ್ಯಮ ಮತ್ತು ಮೇಲ್ವರ್ಗದ ವಿದ್ಯಾವಂತ ಯುವಕರು, ಕಾರ್ಮಿಕರು ಮತ್ತು ರೈತರು, ಬುದ್ಧಿಜೀವಿಗಳ ಬೆಂಬಲ ಪಡೆದಿತ್ತು.

ತೀವ್ರಗಾಮಿ ಚಟುವಟಿಕೆಗಳ ಉಗಮಕ್ಕೆ ಕಾರಣಗಳು

1. **ಯುವ ಪೀಳಿಗೆಯ ಅತೃಪ್ತಿ** – ಮಂದಗಾಮಿಗಳ ಬೇಡಿಕೆ ಮತ್ತು ಮನವಿಗಳ ತಿರಸ್ಕಾರ ಮಾಡಿದರು.
2. **ಗತ ವೈಭವದ ಸಂಸ್ಕೃತಿಯ ನೆನಪು** – ಗಣೇಶ ಉತ್ಸವ ಮತ್ತು ಶಿವಾಜಿ ಉತ್ಸವ ಆರಂಭವಾದವು
3. **1904ರ ವಿ.ವಿ. ಕಾಯ್ದೆ** – ಬ್ರಿಟಿಷ್ ಸರ್ಕಾರದ ನಿಯಂತ್ರಣ
4. **ಬಂಗಾಳ ವಿಭಜನೆ 1905 ಅಕ್ಟೋಬರ್ 16** – ಲಾರ್ಡ್ ಕರ್ಜನ್ (ಪೂರ್ವ ಬಂಗಾಳ, ಪಶ್ಚಿಮ ಬಂಗಾಳ)

- **ಬಂಗಾಳ ವಿಭಜನೆಗೆ ನೀಡಿದ ಕಾರಣ** – ಬಂಗಾಳ ಬಹುದೊಡ್ಡ ಪ್ರಾಂತ್ಯವಾಗಿದ್ದರಿಂದ ಆಡಳಿತದ ಅನುಕೂಲಕ್ಕಾಗಿ ವಿಭಜಿಸುವುದು ಅನಿವಾರ್ಯ. ಅಂದರೆ ಕರ್ಜನ್ ಒಳ ಉದ್ದೇಶಗಳೆಂದರೆ

1. ಬಂಗಾಳದಲ್ಲಿ ಹಿಂದೂ-ಮುಸ್ಲಿಂರ ಒಗ್ಗಟ್ಟು ಒಡೆಯುವುದು

ಭಿನ್ನಾಭಿಪ್ರಾಯ ಸೃಷ್ಟಿಸುವುದು

3. ರಾಷ್ಟ್ರೀಯ ಕೇಂದ್ರವಾದ ಬಂಗಾಳಿಗಳ ರಾಷ್ಟ್ರೀಯತೆಗೆ ಭಂಗ ತರುವುದು.

ಬಾಲಗಂಗಾಧರ ತಿಲಕ್ (1856 – 1920)

- ತಿಲಕರು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಚಿಖಲ ಎಂಬಲ್ಲಿ 1856 ಜುಲೈ 23ರಂದು ಜನಿಸಿದರು. ಪೂನಾದಲ್ಲಿ **ಡೆಕ್ಕನ್ ಎಜುಕೇಷನ್ ಸೊಸೈಟಿ** ಸ್ಥಾಪಿಸುವ ಮೂಲಕ ಸಾರ್ವಜನಿಕ ಜೀವನ ಆರಂಭಿಸಿದರು.
- ತಿಲಕರು ಪ್ರಾರಂಭಿಸಿದ 2 ಪತ್ರಿಕೆಗಳು 1) ಕೇಸರಿ (ಮರಾಠಿ) 2) ಮರಾಠ (ಇಂಗ್ಲೀಷ್)
- ಭಾರತೀಯರಲ್ಲಿ ರಾಷ್ಟ್ರಾಭಿಮಾನ ಬೆಳಗಿಸಲು ಸ್ವಾತಂತ್ರ್ಯ ಸಂದೇಶ ಪ್ರಚಾರ ಮಾಡಲು ಧಾರ್ಮಿಕ ಮತ್ತು ಐತಿಹಾಸಿಕ ಪರಂಪರೆಗಳ ಅಂಶಗಳನ್ನು ತಿಳಿಸಲು ನಾವೆಲ್ಲಾ ಒಂದೇ ಎಂಬ ಭಾವನೆ ಬೆಳಗಿಸಲು 1894ರಲ್ಲಿ ಗಣೇಶ ಉತ್ಸವ, 1896ರಲ್ಲಿ ಶಿವಾಜಿ ಉತ್ಸವವನ್ನು ಮಹಾರಾಷ್ಟ್ರದಲ್ಲಿ ಆರಂಭಿಸಿದರು.

ತಿಲಕರ 4 ಮಂತ್ರಗಳು

1) ಸ್ವದೇಶಿ 2) ಸ್ವರಾಜ್ಯ

3) ಬಹಿಷ್ಕಾರ 4) ರಾಷ್ಟ್ರೀಯ ಶಿಕ್ಷಣ

- 'ಸ್ವರಾಜ್ಯ ನನ್ನ ಆಜನ್ಮ ಸಿದ್ಧ ಹಕ್ಕು ಅದನ್ನು ನಾನು ಪಡೆದೇ ತೀರುವೇ' ಎಂದರು.
- ಲಾರ್ಡ್ ಎಲ್ಗಿನ್ ಭಾರತದಲ್ಲಿ ತಯಾರಾದ ವಸ್ತುಗಳಿಗೆ ತೆರಿಗೆ ವಿಧಿಸಿದಾಗ ಜನರಿಗೆ ಆಂಗ್ಲ ಬಟ್ಟೆಗಳನ್ನು ಬಳಸಬಾರದೆಂದು ಕರೆ ನೀಡಿದರು. ಇದರಿಂದ 18 ತಿಂಗಳು ಜೈಲು ಶಿಕ್ಷೆಯಾಯಿತು.
- ತಿಲಕರು ಕೇಸರಿ ಪತ್ರಿಕೆಯಲ್ಲಿ ಬರೆದ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಯ ಲೇಖನ ಮತ್ತು ರಾಜ ದ್ರೋಹದ ಆಪಾದನೆ ಹೊರಿಸಿ 1908ರಲ್ಲಿ 6 ವರ್ಷಗಳ ಶಿಕ್ಷೆ ವಿಧಿಸಿ ಮಾಂಡಲೆಯಲ್ಲಿ ಸೆರೆಯಿಟ್ಟರು. ಅಲ್ಲಿಯೇ ಅವರು 'ಗೀರತಹಸ್ಯ' ಕೃತಿ ರಚಿಸಿದರು. ನಂತರ 1914ರಲ್ಲಿ ಬಿಡುಗಡೆಯಾಗಿ **ಹೋಂರೂಲ್ ಚಳುವಳಿಯನ್ನು** ಮಹಾರಾಷ್ಟ್ರದಲ್ಲಿ ತೀವ್ರಗೊಳಿಸಿದರು.
- ಆರ್.ಸಿ. ಮಜುಂದಾರ್ ತಿಲಕರನ್ನು ಕುರಿತು ಭಾರತದ ರಾಜಕೀಯ ತತ್ವಜ್ಞಾನವನ್ನು ಸಾಕ್ರಟೀಸ್‌ನಂತೆ ಸ್ವರ್ಗದಿಂದ ಧರೆಗೆ, ಕೌನ್ಸಿಲ್ ಹಾಲ್‌ನಿಂದ ಅಥವಾ ಕಾಂಗ್ರೆಸ್ ಸಮ್ಮೇಳನಗಳ ಮಂಟಪದಿಂದ ರಸ್ತೆ ಬಜಾರಿಗೂ ತಂದಿಳಿಸಿದರು ಎಂದಿದ್ದಾರೆ.
- ಗಾಂಧೀಜಿಯವರು **'ಲೋಕಮಾನ್ಯರು ನವಭಾರತದ ನಿರ್ಮಾಪಕರು ಹಾಗೂ ಭಾರತದ ಅತೃಪ್ತಿಯ ನೇತಾರರು'** ಎಂದಿದ್ದಾರೆ.
- ತಿಲಕರನ್ನು ಭಾರತೀಯ **ಅಸಮಧಾನದ ಪಿತಾಮಹಾ** ಎಂದು ಕರೆಯಲಾಗಿದೆ.
- ತಿಲಕರು ಆಗಸ್ಟ್1, 1920ರಂದು ನಿಧನರಾದರು.
- ಅರವಿಂದರು ಅಕ್ರಮವಾಗಿ ಪ್ರತಿಭಟಿಸಲು ಮುಜಾಫರ್‌ದಲ್ಲಿನ ಬಾಂಬ್ ಸಿಡಿತಗಳು, ಮಾಣಿಕತಲದಲ್ಲಿನ ಬಾಂಬ್ ತಯಾರಿಕಾ ಕೃತ್ಯಗಳಿಗೆ ತಿಲಕರು ಬೆಂಬಲ ನೀಡಿದ್ದರು.

2. ಬಿಪಿನ್ ಚಂದ್ರಪಾಲ್ (1858–1932)

- ಬಿಪಿನ್ ಚಂದ್ರಪಾಲ್‌ರನ್ನು ಭಾರತದಲ್ಲಿ **'ಕ್ರಾಂತಿಕಾರದ ವಿಚಾರಗಳ ಜನಕ'** ಎಂದು ಕರೆಯುತ್ತಾರೆ. 1905–06ರಲ್ಲಿ ಬಹಿಷ್ಕಾರ ಚಳುವಳಿಯಲ್ಲಿ ಧುಮುಕಿ ಬಂಗಾಳದಲ್ಲಿ ಬಹಿಷ್ಕಾರಕ್ಕೆ ಪ್ರೇರೇಪಿಸಿದರು.
- ಬಿಪಿನ್ ಚಂದ್ರಪಾಲ್‌ರು **ಪರಸಾದಕ್** ಎಂಬ ವಾರಪತ್ರಿಕೆ ಪ್ರಕಟಿಸಿದರು. ಅಲ್ಲದೆ ಬೆಂಗಾಲ್ ಪಬ್ಲಿಕ್ ಯೂನಿಯನ್ & ಟ್ರಿಬ್ಯೂನ್, ಪತ್ರಿಕೆಗಳ ಸಂಪಾದಕರಾಗಿದ್ದರು.
- ಇಂಗ್ಲೆಂಡಿನಲ್ಲಿ ಸ್ವರಾಜ್ ಪತ್ರಿಕೆಯನ್ನು ಬ್ರಿಟಿಷ್ ವಿರೋಧಿ ಲೇಖನಗಳನ್ನು ಪ್ರಕಟಿಸಿದರು. ಲಂಡನ್ ಮತ್ತು ಪ್ಯಾರಿಸ್ ಕ್ರಾಂತಿಗಳ ಜೊತೆ ತನ್ನ ತಮ್ಮ ನಿರಂಜನ ಪಾಲ್ ಮೂಲಕ ಸಂಬಂಧವಿತ್ತು. ಅಲ್ಲದೆ ವಿ.ಡಿ. ಸಾವರ್ಕರ್, ವಿರೇಂದ್ರನಾಥ ಚಟ್ಟೋಪಾಧ್ಯಾಯರ ಸಂಪರ್ಕವಿತ್ತು.
- ಬಿಪಿನ್‌ಚಂದ್ರಪಾಲ್‌ರು ರಚಿಸಿದ ಗ್ರಂಥ –`Memories of my life & times'

3. ಲಾಲ ಲಜಪತರಾಯ್ (1865–1928)

- **ಪಂಜಾಬಿನ ಕೇಸರಿ** ಎಂದು ಹೆಸರಾದ ಲಾಲ್‌ಲಜಪತ್‌ರಾಯ್ ವಂದೇ ಮಾತರಂ (ಉರ್ದು ಪತ್ರಿಕೆ) ಮತ್ತು ಪೀಪಲ್ (ಆಂಗ್ಲ ಪತ್ರಿಕೆ) ಎಂಬ ಪತ್ರಿಕೆಗಳನ್ನು ಆರಂಭಿಸಿದರು.
- ಲಾಹೋರಿನಲ್ಲಿ **'ಡಿಎವಿ' ಕಾಲೇಜನ್ನು** ಆರಂಭಿಸಿದರು. ಸಮಾಜವಾದದಿಂದ ಪ್ರಭಾವಿತರಾಗಿ ಎಐಟಿಯುಸಿ ಸಂಸ್ಥಾಪಕರೊಬ್ಬರಾದರು.
- ಆರ್ಯ ಸಮಾಜದ ಅನುಯಾಯಿಯಾದ ಇವರು ರಚಿಸಿದ ಕೃತಿಗಳು
- 1. Young India
  2. The Arya Samaj
  3. Englands Debt to India
- 1928 ಅಕ್ಟೋಬರ್ 30ರಂದು ಸೈಮನ್ ಕಮಿಷನ್ ಲಾಹೋರಿಗೆ ಬಂದಾಗ ಅದನ್ನು ದಿಕ್ಕರಿಸಿ ಚಳುವಳಿಗಳಿದು ಅಂದಿನ ಪೊಲೀಸ್ ಸ್ಯಾಂಡರ್ಸ್‌ನ ಲಾಠಿ ಏಟಿನಿಂದ ಸತ್ತರು.

4. ಅರಬಿಂದೋ ಘೋಷ್ (1872–1950)

- ಅರಬಿಂದೋ ಘೋಷ್ **ಬಂಗಾಳದ ಪ್ರಥಮ ಕ್ರಾಂತಿಕಾರಿ** ಬಂಗಾಳದ ವಿಭಜನೆ ವಿರೋಧಿಸಲು ಸ್ವದೇಶಿ ಬಹಿಷ್ಕಾರಗಳೆಂಬ ಅಸ್ತ್ರಗಳನ್ನು

ಪರಿಚಯಿಸಿದರು.

- 1906ರ ಐಎನ್‌ಸಿ ಅಧಿವೇಶನದ ಅಧ್ಯಕ್ಷರಾಗಿ ಪೂರ್ಣ ಸ್ವಾತಂತ್ರ್ಯಕ್ಕೆ ಕರೆ ನೀಡಿದರು. ನಂತರ 1908ರಲ್ಲಿ ಇವರನ್ನು ಸರ್ಕಾರವು ಮಣಿಕ್ತಲ ಬಾಂಬ್ ಪಿತೂರಿ ಮೊಕದ್ದಮೆಯನ್ನು ಹೊರಿಸಿ ಸೆರೆಮನೆಯಲ್ಲಿಟ್ಟಿತು.
- 1910ರಲ್ಲಿ ಬಿಡುಗಡೆಯಾದ ಅರಬಿಂದರು ಪಾಂಡಿಚೆರಿಯಲ್ಲಿ ನೆಲೆಸಿ ಯೋಗ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ತೀವ್ರಗಾಮಿಗಳ ನೀತಿಗಳು ಮತ್ತು ಕಾರ್ಯಕ್ರಮಗಳು

- **ತೀವ್ರಗಾಮಿಗಳ ಪ್ರಮುಖ ಗುರಿ:** ವಿದೇಶಿಯರ ಹತೋಟಿಯಿಂದ ಬಿಡುಗಡೆಯಾಗಿ ದೇಶೀಯ ವ್ಯವಹಾರಗಳನ್ನು ಸ್ವತಂತ್ರವಾಗಿ ನಡೆಸಿಕೊಂಡು ಹೋಗುವ ಸ್ವರಾಜ್ಯವಾಗಿತ್ತು. ಇವರ ಕಾರ್ಯಕ್ರಮಗಳೆಂದರೆ

ಎ. ಸಾತ್ವಿಕ ಚಳುವಳಿ

- ದೇಶೀಯ ಜನತೆ ಸರ್ಕಾರಕ್ಕೆ ಸಹಕಾರ ನೀಡುವ ವಿಚಾರದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಿಂದೆ ಸರಿಯುವುದು. ಆದರೆ ಆಂಗ್ಲ ಸರ್ಕಾರದ ಆರ್ಥಿಕ ಶೋಷಣೆ, ಆಡಳಿತ ಮತ್ತು ಇತರ ವಿಚಾರಗಳಲ್ಲಿ ದೇಶೀಯ ಜನತೆಯು ಸಹಕರಿಸದೆ ಇರುವುದನ್ನು **ಸಾತ್ವಿಕ ಚಳುವಳಿ** ಎನ್ನುವರು.
- **ಸಾತ್ವಿಕ ಚಳುವಳಿ:** ಸರ್ಕಾರಕ್ಕೆ ಸಹಾಯ ಮಾಡದಿರುವುದು ಇದರಿಂದಲೂ ಸರ್ಕಾರಕ್ಕೆ ಅಪಾರ ನಷ್ಟವಾಗುವುದು.
- **ಆಕ್ರಮಣಕಾರಿ ಚಳುವಳಿ:** ಆಕ್ರಮಣದ ಮೂಲಕ ಚಳುವಳಿಗಾರರು ಸರ್ಕಾರಕ್ಕೆ ನಷ್ಟ ಉಂಟುಮಾಡುವುದು.
- ಭಾರತದ ಸ್ವಾತಂತ್ರ್ಯ ಗಳಿಸುವ ಮಾರ್ಗ ಸಾತ್ವಿಕ ಚಳುವಳಿ ಎಂದು ತಿಲಕರು ಹೇಳಿದ್ದರು.

ಬಿ. ಸ್ವದೇಶಿ ಚಳುವಳಿ / ಬಂಗಾಳ ವಿಭಜನೆ – 1905 (Swadeshi movement / Partition of Bengal)

- ಬ್ರಿಟಿಷ್ ಸರ್ಕಾರದ ವಿರುದ್ಧ ಬಳಸಲ್ಪಡುತ್ತಿದ್ದ ಅಸ್ತ್ರ ಸ್ವದೇಶಿ ಚಳುವಳಿ. ಇದರ ಉದ್ದೇಶ ಭಾರತದ ಕೈಗಾರಿಕೆಗಳು ಮತ್ತು ಉದ್ದಿಮೆಗಳನ್ನು ಪ್ರೋತ್ಸಾಹಿಸುವುದು. ಭಾರತೀಯರು ಸ್ಥಾಪಿಸಿದ ಉದ್ದಿಮೆಗಳೆಂದರೆ
- ಬೆಂಗಾಳ ಕೆಮಿಕಲ್ ಸ್ವದೇಶಿ ಸ್ಟೋರ್ – **ಪಿ.ಸಿ. ರಾಯ್**
- ಟಾಟಾ ಐರನ್ ಮತ್ತು ಸ್ಟೀಲ್ ಕಂಪನಿ – **ಟಾಟಾ**
- ಸ್ವದೇಶಿ ಸ್ಟೋರ್ – **ತಿಲಕರ** ಸಹಕಾರದಿಂದ ಸ್ಥಾಪನೆ.
- ಬಂಗಾಳ ನ್ಯಾಷನಲ್ ಕಾಲೇಜ್ 1906ರಲ್ಲಿ ಸ್ಥಾಪನೆ.
- 1905ರಲ್ಲಿ ಸ್ವದೇಶಿ ಚಳುವಳಿ ಬಂಗಾಳದಲ್ಲಿ ಆರಂಭಿಸಲು ನಿರ್ಧರಿಸಲಾಯಿತು. ಬಂಗಾಳವು ಬಂಗಾಳ, ಬಿಹಾರ, ಒರಿಸ್ಸಾ ಮತ್ತು ಛೋಟನಾಗ್ಪುರಗಳನ್ನು ಒಳಗೊಂಡ ಭಾರತದ
- ಆಂಗ್ಲರು ರಾಜಕೀಯ ಉದ್ದೇಶಗಳನ್ನಿಟ್ಟುಕೊಂಡು ಬಂಗಾಳ ವಿಭಜನೆ ವಿಷಯವು ಮೊದಲಿಗೆ ಕಲ್ಕತ್ತಾ ಪತ್ರಿಕೆಗಳಲ್ಲಿ **ಜುಲೈ 6, 1905**ರಲ್ಲಿ (ಸಿಮ್ಲಾ ಘೋಷಣೆ) ಪ್ರಕಟವಾಯಿತು
- ಜುಲೈ 20, 1905ರಲ್ಲಿ ಲಾರ್ಡ್ ಕರ್ಜನ್ ಬಂಗಾಳ ಪ್ರಾಂತ್ಯವನ್ನು 2 ಭಾಗಗಳಾಗಿ ವಿಂಗಡಿಸಿ ಆಜ್ಞೆ ಮಾಡಿದನು. ಇದರಿಂದ ತೀವ್ರಗಾಮಿ ರಾಷ್ಟ್ರೀಯತೆ ಮತ್ತು ಭಾರತದ ರಾಷ್ಟ್ರೀಯ ಚಳುವಳಿಯ 2ನೇ ಹಂತಕ್ಕೆ ಪ್ರವೇಶಿಸಲು ಕಾರಣವಾಯಿತು.
- ಬಂಗಾಳದ ಪಶ್ಚಿಮ ಭಾಗದಲ್ಲಿ ಹಿಂದೂಗಳು ಅಧಿಕವಾಗಿದ್ದರು – **ಕಲ್ಕತ್ತಾ** ಇದರ ಕೇಂದ್ರ
- ಬಂಗಾಳದ ಪೂರ್ವ ಭಾಗದಲ್ಲಿ ಮುಸ್ಲಿಂರು ಅಧಿಕವಾಗಿದ್ದರು – **ಢಾಕಾ** ಇದರ ಕೇಂದ್ರ.
- ಬಂಗಾಳ ವಿಭಜನೆಗೆ ಸರ್ಕಾರ ಕೊಟ್ಟ ಕಾರಣ: ಬಂಗಾಳ ಬೃಹತ್ ಪ್ರಾಂತ್ಯವಾಗಿದ್ದು ವ್ಯವಸ್ಥಿತ ಆಡಳಿತವನ್ನು ಒಂದೇ ಆಡಳಿತ ಕೇಂದ್ರದಿಂದ ನಿರ್ವಹಿಸಲು ಸಾಧ್ಯವಿಲ್ಲ ಎಂಬುದಾಗಿತ್ತು.
- ಆಂಗ್ಲರ ಒಳ ಉದ್ದೇಶ – ಬಂಗಾಳವು ರಾಷ್ಟ್ರೀಯತೆಯ ಉಗಮ ಸ್ಥಾನ, ಭಾರತದ ರಾಷ್ಟ್ರೀಯ ಚಳುವಳಿಯ ನರತಂತುವಿನ ಕೇಂದ್ರ, ಹಿಂದೂ ಮತ್ತು ಮುಸ್ಲಿಂರ ನಡುವೆ ಐಕ್ಯತೆಯನ್ನು ಒಡೆಯುವುದಾಗಿತ್ತು.
- ಬಂಗಾಳ ವಿಭಜನೆಯಿಂದ ಮುಂದೆ ದ್ವಿರಾಷ್ಟ್ರದ ಪ್ರತಿಪಾದಕ ಮಹಮ್ಮದಾಲಿ ಜಿನ್ನಾರಂತಹವರಿಗೆ ಭಾರತ ಒಡೆಯಲು ಸಹಾಯಕವಾಯಿತು.
- ಬಂಗಾಳವು ಅಧಿಕೃತವಾಗಿ ವಿಭಜನೆಯಾದ ದಿನ ಅಕ್ಟೋಬರ್ 16, 1905. ಈ ದಿನವನ್ನು ಬಂಗಾಳದ ಶೋಕ ದಿನವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಂಕಿಮಚಂದ್ರ **ಚಟರ್ಜಿಯವರ ವಂದೇ ಮಾತರಂ ಗೀತೆ, ರವೀಂದ್ರನಾಥ ಠಾಕೂರರ ಅಮಾರ ಸೋನಾರ್ ಬಾಂಗ್ಲ** ಗೀತೆಗಳನ್ನು ಬೀದಿಗಳಲ್ಲಿ ಹಾಡಲಾಯಿತು. (ಮುಂದೆ ಇದು ಬಾಂಗ್ಲಾದ ರಾಷ್ಟ್ರಗೀತೆಯಾಯಿತು)
- ಬಂಗಾಳ ವಿಭಜನೆ ವಿರೋಧಿ ಚಳುವಳಿ ಎಸ್.ಎನ್. ಬ್ಯಾನರ್ಜಿ ಮತ್ತು ಕೃಷ್ಣಕುಮಾರ್ ಮಿತ್ರ ನೇತೃತ್ವದಲ್ಲಿ ಆರಂಭವಾಯಿತು.
- ಲಾರ್ಡ್ ಕರ್ಜನ್ ಸಲೀಮುಲ್ಲಾ ಖಾನನಿಗೆ ಕಡಿಮೆ ಬಡ್ಡಿದರಲ್ಲಿ ಮುಂಗಡ ಸಾಲ ನೀಡಿ ಮುಸ್ಲಿಂರ ವಿಭಜನೆ ವಿರೋಧಿ ಭಾವನೆ ತಾಳದಂತೆ ಮಾಡಿದನು.

2. ವಿದೇಶಿ ವಸ್ತುಗಳ ಬಹಿಷ್ಕಾರ

- ಮಂದಗಾಮಿಗಳು ವಿದೇಶಿ ವಸ್ತುಗಳ ಬಹಿಷ್ಕಾರವನ್ನು ಒಲ್ಲದ ಮನಸ್ಸಿನಿಂದ ಬಂಗಾಳ ಪ್ರಾಂತ್ಯಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿದ್ದರು. ಆದರೆ ತೀವ್ರಗಾಮಿಗಳು ಭಾರತದಾದ್ಯಂತ ವಿದೇಶಿ ವಸ್ತು ಬಹಿಷ್ಕಾರ ಚಳುವಳಿಗೆ ಕರೆ ಕೊಟ್ಟರು.

- ವಿದೇಶಿ ಬಳೆಗಳ ಧರಿಸುವಿಕೆ, ವಿದೇಶಿ ಪತ್ರಿಕೆಗಳು, ವಿದೇಶಿ ವಸ್ತ್ರಗಳು ಹಾಗೂ ಸರ್ಕಾರಿ ಶಾಲಾ ಕಾಲೇಜುಗಳನ್ನು ನಿಲ್ಲಿಸಿದರು. ವಿದೇಶಿ ವಸ್ತುಗಳ ಮಾರಾಟ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು.
- ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಮೊದಲ ಬಾರಿಗೆ ಜುಲೈ 13, 1905ರಲ್ಲಿ ಕಲ್ಕತ್ತಾದ **ಸಂಜೀವಿನಿ ಪತ್ರಿಕೆ** ಕರೆ ನೀಡಿತ್ತು. ಜುಲೈ 16ರಂದು ಬಗರ್‌ಹಟ್ ಸಾರ್ವಜನಿಕ ಸಭೆಯಲ್ಲಿ ಬಹಿಷ್ಕಾರವನ್ನು ಸ್ವೀಕರಿಸಲಾಯಿತು.
- ಬಹಿಷ್ಕಾರ ಚಳುವಳಿಯನ್ನು ಮೊದಲು ಐರಿಷ್‌ರು ಬ್ರಿಟಿಷರ ವಿರುದ್ಧ ಆರಂಭಿಸಿದರು.
- 1874ಕ್ಕಿಂತ ಹಿಂದೆಯೇ ಬ್ರಿಟಿಷರಿಂದ ನಾಶವಾದ ಭಾರತೀಯ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಬಹಿಷ್ಕಾರವನ್ನು ಆಯುಧವಾಗಿ ಬಳಸಲಾಯಿತು.
- ಸ್ವದೇಶಿ ಚಳುವಳಿ ಬಲಗೊಳಿಸಲು ಬಾರಿಸಾಲ್‌ನ ಶಾಲಾ ಪ್ರಾಧ್ಯಾಪಕ ಅಶ್ವಿನಿಕುಮಾರ್‌ದತ್ತರಿಂದ **ಸ್ವದೇಶಿ ಬಂದಬ್ ಸಮಿತಿ** ಸಂಘಟಿಸಲ್ಪಟ್ಟು ಇದರ ಮೂಲಕ ಸ್ವದೇಶಿ ಚಳುವಳಿಯನ್ನು ಹಳ್ಳಿ ಹಳ್ಳಿಗೂ ಪ್ರಚಾರ ಮಾಡಲಾಯಿತು.
- ಸ್ವದೇಶಿ ಚಳುವಳಿಯ ಪ್ರಮುಖ ಅಂಶ – **ಆತ್ಮಶಕ್ತಿಯ ಪ್ರತಿಪಾದನೆ,** ಆರ್ಥಿಕ ಪರಿಣಾಮವೆಂದರೆ ದೇಶೀಯ ಕೈಗಾರಿಕೆಗಳಿಗೆ ಬೆಂಬಲ ನೀಡುವುದು.
- ಜನರಲ್ಲಿ ಆತ್ಮವಿಶ್ವಾಸ ಬೆಳೆಸಲು ಶಿಕ್ಷಣ ನೀಡುವುದಕ್ಕಾಗಿ 1906ರಲ್ಲಿ **ಬೆಂಗಾಲ ನ್ಯಾಷನಲ್ ಕಾಲೇಜ್** ಪ್ರಾರಂಭವಾಗಿ ಅದರ ಪ್ರಾಂಶುಪಾಲರಾಗಿ ಅರಬಿಂದರು ನೇಮಕವಾದರು.
- ಸ್ವದೇಶಿ ಚಳುವಳಿಕಾರರು "ಕಲ್ಕತ್ತಾ ವಿ.ವಿಯನ್ನು ಗುಲಾಮರನ್ನು ತಯಾರಿಸುವ ಕಾರ್ಖಾನೆ" ಎಂದು ಕರೆದರು.

ತೀವ್ರಗಾಮಿ ಚಳುವಳಿಯ ಮಹತ್ವ

1. ಭಾರತದ ರಾಷ್ಟ್ರೀಯ ಚಳುವಳಿ ಮಾನವೀಯ ಹಂತ ದಾಟಿ ಜನತಾ ಸಮರವಾಗಿ ಬೆಳೆಯಿತು.
2. ಭಾರತದ ಸ್ವಾತಂತ್ರ್ಯ ಹೋರಾಟ ತೀವ್ರವಾಗಿ ಬ್ರಿಟನ್ ರಾಜಕುಮಾರ 5ನೇ ಜಾರ್ಜ್ ಭಾರತದ ತನ್ನ ಪ್ರವಾಸ ಕಾಲದಲ್ಲಿ 1911ರಲ್ಲಿ ಬಂಗಾಳ ವಿಭಜನೆ ರದ್ದು ಮಾಡಿದನು.
3. **ಬಂಗಾಳ** ಭಾರತದ ಮೊಟ್ಟ ಮೊದಲ ಭಾಷಾವಾರು ಪ್ರಾಂತ್ಯವಾಗಿ ರಚನೆಯಾಯಿತು.
4. ತೀವ್ರಗಾಮಿಗಳ ಪ್ರಮುಖ ಅಸ್ತ್ರ **ಸ್ವದೇಶಿ ಚಳುವಳಿ** ವಿವಿಧ ವರ್ಗದ ಜನರನ್ನು ಆಕರ್ಷಿಸುವಲ್ಲಿ ಯಶ್ವಿಯಾಯಿತು.

ತೀವ್ರಗಾಮಿಗಳ ದೌರ್ಬಲ್ಯಗಳು

1. ಧಾರ್ಮಿಕ ಮನೋಭಾವನೆ ಕೆರಳಿಸಲು ಧಾರ್ಮಿಕ ಚಿಂತನೆ, ಪೋಷಣೆ ಮತು ಚಿಹೆ.ಗಳ ಬಳಕೆ.
2. ಹಿಂದೂಗಳ ಹಿಡಿತದಲ್ಲಿದ್ದ ಕಾಂಗ್ರೆಸ್ ವಿರೋಧಿಸಲು 1906ರಲ್ಲಿ ಮುಸ್ಲಿಂ ಲೀಗ್ ಸ್ಥಾಪನೆ.
3. ಕೃಷಿಕರು ಮತ್ತು ಕಾರ್ಮಿಕರನ್ನು ಸೆಳೆಯುವಲ್ಲಿ ವಿಫಲರಾದರು.
4. ತೀವ್ರಗಾಮಿಗಳಿಗೆ ಬಂಡವಾಳಶಾಹಿ ವ್ಯಾಪ್ತಿ ದಾಟುವುದು ಇನ್ನೂ ಸಾಧ್ಯವಾಗಿರಲಿಲ್ಲ.
5. ತೀವ್ರಗಾಮಿಗಳು ಮುಸ್ಲಿಂರನ್ನು ಆಕರ್ಷಿಸುವಲ್ಲಿ ವಿಫಲರಾದರು.
6. ಭಾರತ ಬಹು ಧರ್ಮೀಯರ ದೇಶವಾಗಿದೆ ಎಂಬ ಮಹತ್ವ ಅರಿಯದಾದರು.
7. ಇವರು ಉಗ್ರ ರಾಷ್ಟ್ರೀಯತೆ ರಾಷ್ಟ್ರದ ಐಕ್ಯ ಸಾಧನೆಗೆ ದಾರಿಯೆಂದರೆ ಅವಕ್ಕೆ ಬಳಸಿದ ಹಿಂದೂ ಛಾಯೆ ರಾಷ್ಟ್ರದ ಐಕ್ಯತೆಯನ್ನು ದುರ್ಬಲಗೊಳಿಸಿತು.
8. ವಿದೇಶಿ ವಸ್ತುಗಳ ಬಹಿಷ್ಕಾರ ಸಂಪೂರ್ಣ ಯಶಸ್ವಿಯಾಗಲಿಲ್ಲ.

ಸ್ವದೇಶಿ ಚಳುವಳಿಯ ಅಂತ್ಯ – 1908

- ಸ್ವದೇಶಿ ಚಳುವಳಿಗಾರರನ್ನು ದಮನ ಮಾಡಲು **ಗೂರ್ಖಿ ರೆಜಿಮೆಂಟ್** ಸ್ಥಾಪನೆ. 1906ರ ಬಾರಿಸಾಲ್ ಸಮ್ಮೇಳನದಲ್ಲಿ ಭಾಗವಹಿಸಿದ ವ್ಯಕ್ತಿಗಳನ್ನು ಅಮಾನವೀಯವಾಗಿ ಶಿಕ್ಷಿಸಲಾಯಿತು.
- ಸ್ವದೇಶಿ ಚಳುವಳಿ ಪ್ರೋತ್ಸಾಹಿಸಿದ ಸರ್ಕಾರಿ ನೌಕರರನ್ನು ವಜಾ ಮಾಡಲಾಯಿತು. ಎಸ್.ಎನ್. ಬ್ಯಾನರ್ಜಿಗೆ (ನಿಂದನೆ ಮತ್ತು ಚಳುವಳಿ ಕೈಗೊಂಡಿದ್ದಕ್ಕೆ) 200 ರೂ ದಂಡ ವಿಧಿಸಿತು.
- 1907ರಲ್ಲಿ ಕಾಂಗ್ರೆಸ್ ವಿಭಜನೆಯಾಯಿತು.
- ಯುಗಾಂತರ್ ಪತ್ರಿಕೆಯು ಏಪ್ರಿಲ್ 22, 1906ರಲ್ಲಿ ಬರೆದಂತೆ ಪರಿಹಾರವೂ ಜನರಲ್ಲೇ ಇದೆ. 30 ಕೋಟಿ ಭಾರತ ವಾಸಿಗಳು 60 ಕೋಟಿ ಕೈಗಳನ್ನೆತ್ತಿ ಈ ಧಮನ ನೀತಿಯನ್ನು ತಡೆಯಬೇಕು. ರಭಸವನ್ನು ರಭಸದಿಂದಲೇ ತಡೆಯಬೇಕು ಎಂದರು.
- 1897ರಲ್ಲಿ ಚಾಪೇಕರ್ ಸಹೋದರರು ಪೂನಾದಲ್ಲಿ ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕೊಂದರು.
- ಸ್ವದೇಶಿ ಚಳುವಳಿಯಿಂದ ಜನರಲ್ಲಿ ರಾಷ್ಟ್ರೀಯತೆ ಬೆಳೆಯಲು ಆರಂಭವಾಯಿತು. ರವೀಂದ್ರರು ಕತ್ತಿಗಿಂತ ಲೇಖನಿಯು ಶಕ್ತಿಯುತವಾದುದೆಂದು ರುಜುಮಾಡಿದರು.
- 1911ರಲ್ಲಿ ಬ್ರಿಟನ್ ರಾಜ 5ನೇ ಜಾರ್ಜ್ ತನ್ನ ಭಾರತದ ಪ್ರವಾಸದಲ್ಲಿ (ಲಾರ್ಡ್ ಹಾರ್ಡಿಂಜ್ ವೈಸ್‌ರಾಯ್) ಬಂಗಾಳದ ವಿಭಜನೆ ರದ್ದು ಮಾಡಿದನು. ಬಿಹಾರ, ಒರಿಸ್ಸಾ ಪ್ರಾಂತ್ಯಗಳನ್ನು ರಚಿಸಿ, ಬಂಗಾಳ ಮತ್ತು ಅಸ್ಸಾಂನ್ನು ರಚಿಸಿದನು.

ಸೂರತ್ ಕಾಂಗ್ರೆಸ್ ಅಧಿವೇಶನ–1907

- ಬಂಗಾಳ ವಿಭಜನೆಯಿಂದಾಗಿ ಐ.ಎನ್.ಸಿಯಲ್ಲಿ ಎರಡು ಯೋಚನಾ ಮಾರ್ಗಗಳು ಬೆಳವಣಿಗೆಗೊಂಡು ಮಂದಗಾಮಿಗಳು ಮತ್ತು

- **ಮಂದಗಾಮಿಗಳ ಗುರಿ:** 1905ರ ಕಾಂಗ್ರೆಸ್ ಅಧಿವೇಶನವು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ನಿಯಂತ್ರಣದಲ್ಲಿರುವ ಸ್ವಸರ್ಕಾರವನ್ನು ಪಡೆಯುವುದು.
- **ತೀವ್ರಗಾಮಿಗಳ ಗುರಿ:** ತಮ್ಮ ಸ್ವರಾಜ್ ಆಡಳಿತದಲ್ಲಿ ಯಾವ ವಿದೇಶಿ ನಿಯಂತ್ರಣವಿಲ್ಲದಿರುವುದನ್ನು ಸಾಧಿಸುವುದು.
- ಕಾಂಗ್ರೆಸ್‌ನ ಈ ಗುಂಪುಗಳ ಬಿರುಕು 1905ರ ವಾರಣಾಸಿ ಅಧಿವೇಶನದಲ್ಲೇ ಗೋಚರಿಸಿತು. ಈ ವಿರಸವು ರಾಷ್ಟ್ರೀಯ ವಿಚಾರಗಳ ಬಗ್ಗೆ ತೀವ್ರಗಾಮಿಗಳಾದವರು ಕಾಂಗ್ರೆಸ್‌ನ ಕ್ಷೇತ್ರದಲ್ಲೇ ಸಮಾವೇಶಗೊಂಡು ಹೊಸ ನ್ಯಾಷನಲ್ ಪಾರ್ಟಿ ಕಟ್ಟಿ ಕಾಂಗ್ರೆಸ್‌ನಲ್ಲಿದ್ದುಕೊಂಡೆ ತಮ್ಮದೇ ಕಾರ್ಯಕ್ರಮಗಳನ್ನು ರಚಿಸಿಕೊಂಡಿತು.
- 1906ರ ಕಲ್ಕತ್ತಾ ಅಧಿವೇಶನದಲ್ಲಿ ತೀವ್ರವಾದಿಗಳನ್ನು ಹತೋಟಿಯಲ್ಲಿಡಲು ಎಲ್ಲರೂ ಒಪ್ಪುವ ದಾದಾಬಾಯಿ ನವರೋಜಿಯನ್ನೇ ಅಧ್ಯಕ್ಷರನ್ನಾಗಿ ನೇಮಿಸಿದರು. ಕಾಂಗ್ರೆಸ್‌ನ ಇಭ್ಭಾಗವನ್ನು ಇವರು ತಡೆಯಲು **ಸ್ವರಾಜ್ಯ** ಎಂಬ ಪದವನ್ನು ಮೊದಲಿಗೆ ನವರೋಜಿ ಬಳಸಿದರು.
- ಈ ಅಧಿವೇಶನದಲ್ಲಿ **ಸ್ವದೇಶಿ ಬಹಿಷ್ಕಾರ** ಮತ್ತು **ರಾಷ್ಟ್ರೀಯ ಶಿಕ್ಷಣದ** ಯೋಜನೆಗಳನ್ನು ಹೋರಾಟದ ಅಂಶಗಳಾಗಿ ಅಂಗೀಕರಿಸಲಾಯಿತು. ಇದು ಮಂದಗಾಮಿಗಳಿಗೆ ಹಿಡಸಲಿಲ್ಲ.
- 1907ರ ಸೂರತ್ ಕಾಂಗ್ರೆಸ್ ಅಧಿವೇಶನದಲ್ಲಿ **ರಾಸ್ ಬಿಹಾರಿ ಬೋಸ್‌**ರನ್ನು ಆಯ್ಕೆ ಮಾಡಲಾಯಿತು. ತೀವ್ರವಾದಿಗಳನ್ನು ದೂರವಿಡುವುದು ಇದರ ಉದ್ದೇಶವಾಗಿತ್ತು.
- ಮಂದಗಾಮಿಗಳನ್ನು ಖುಷಿಪಡಿಸಲು **1909ರ ಮಿಂಟೋಮಾರ್ಲೆ ಸುಧಾರಣೆ**ಗಳನ್ನು ಆಂಗ್ಲರು ಜಾರಿಗೆ ತಂದರು.

ಹೋಂರೂಲ್ ಚಳುವಳಿ ಅಥವಾ ಸ್ವಯಂ ನಿರ್ಣಯಾಧಿಕಾರ ಚಳುವಳಿ (The home role league movement)

- ಶ್ರೀಮತಿ ಅನಿಬೆಸೆಂಟ್‌ರು **ಸೆಪ್ಟೆಂಬರ್ 25, 1915ರಲ್ಲಿ ಹೋಂ ರೂಲ್ ಲೀಗ್** ಸ್ಥಾಪಿಸಿದರು. ಅದರ ಕೇಂದ್ರ **ಅಡ್ಯಾರ್**. ತಿಲಕರು ಲೀಗ್‌ನ ಕೇಂದ್ರವಾಗಿ ಪೂನಾ ರಚಿಸಿಕೊಂಡರು. (1914ರಲ್ಲಿ ಬಿಡುಗಡೆಗೊಂಡ ತಿಲಕರು) ಐಎನ್‌ಸಿ 1916ರಲ್ಲಿ ಅನಿಬೆಸೆಂಟ್ ಆಗಮನದಿಂದ ಮತ್ತೆ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಒಂದಾದರು.
- ಹೋಂರೂಲ್ ಚಳುವಳಿಯ (ಸ್ವಯಂ ಆಡಳಿತ) ಉದ್ದೇಶ ಪ್ರಚಾರ ಮಾಡಲು ಅನಿಬೆಸೆಂಟರು ಆರಂಭದಲ್ಲೇ **'ಕಾಮನ್ ವೀಲ್'** ಮತ್ತು **'ನ್ಯೂ ಇಂಡಿಯಾ'** ಪತ್ರಿಕೆಗಳನ್ನು ಆರಂಭಿಸಿದರು. ಅವರ ಅನುಯಾಯಿಗಳು (ಜಮ್ನಾದಾಸ್, ದ್ವಾರಕದಾಸ್, ಶಂಕರಲಾಲ್ ಬ್ಯಾಂಕರ್, ಹಿಂದೂಲಾಲ ಯಾಜ್ನಿಕ್) ಬಾಂಬೆಯಲ್ಲಿ **'ಯಂಗ್ ಇಂಡಿಯಾ'** ಎಂಬ ಪತ್ರಿಕೆ ಆರಂಭಿಸಿದರು. ಇದರಿಂದಾಗಿ ಬೊಂಬಾಯಿ, ಕಾನ್ಪುರ, ಅಲಹಾಬಾದ್, ವಾರಣಾಸಿ, ಮಥುರಾ, ಕ್ಯಾಲಿಕಟ್, ಅಹ್ಮದ್‌ನಗರ ಮುಂತಾದ ಕಡೆ ಶಾಖೆಗಳು ಆರಂಭವಾದವು.
- ತಿಲಕರು ತಮ್ಮ **ಕೇಸರಿ** ಮತ್ತು **ಮರಾಠ** ಪತ್ರಿಕೆಗಳ ಮೂಲಕ ಲೀಗಿನ ಪ್ರಚಾರ ಕೈಗೊಂಡು ಬಾಂಬೆ, ಉತ್ತರ ಕರ್ನಾಟಕ, ಬೇರಾರ್, ಸೆಂಟ್ರಲ್ ಪ್ರಾಂತ್ಯಗಳಿಗೆ ಸೀಮಿತಗೊಳಿಸಿದರು. (ತಿಲಕ್ ಮತ್ತು ಕೇಳ್ಕರ್ ಪೂನಾದಿಂದ, ಅನಿಬೆಸೆಂಟ್ – ಅಡ್ಯಾರ್‌ನಿಂದ ಸದಸ್ಯರ ಒಗ್ಗೂಡಿಸಿದರು)
- ತಿಲಕರು 1916ರಲ್ಲಿ ಕರ್ನಾಟಕದ ಬೆಳಗಾಂಗೆ ಭೇಟಿ ನೀಡಿ ಲೀಗಿನ ಉದ್ದೇಶ ತಿಳಿಸಿದರು.
- ಅನಿಬೆಸೆಂಟ್‌ರಿಗೆ ಸಹಾಯಕರಾಗಿದ್ದವರು ಅರುಂಡಲೆ, ಸಿಪಿ ರಾಮಸ್ವಾಮಿ ಅಯ್ಯರ್, ಬಿಪಿ. ವಾಡಿಯ.
- ತಿಲಕರು **ಭಾರತದ ರೋಗಗ್ರಸ್ಥ ರಾಜಕೀಯ ಸ್ಥಿತಿಯನ್ನು ಗುಣಪಡಿಸುವುದು** ಲೀಗ್‌ನ ಉದ್ದೇಶ ಎಂದರು. ಈ ಲೀಗ್ ಗಾಂಧೀಜಿಯ ಮುಂದಿನ ತತ್ವ ಸಿದ್ಧಾಂತಕ್ಕೆ ನಾಂದಿಯಾಯಿತು.
- ಅನಿಬೆಸೆಂಟ್ ಉದ್ದೇಶವು ಭಾರತದ ವಿವಿಧ ಕಡೆಗೆ ಸ್ವಾತಂತ್ರ್ಯ ಚಳುವಳಿಯ ತೀವ್ರತೆಯನ್ನು ಹರಡುವುದಾಗಿತ್ತು.
- ಲಾಲ ಲಜಪತ್‌ರಾಯ್, ಎನ್.ಎಸ್. ಹರ್ಡೇಕರ್ –ಅಮೇರಿಕಾಕ್ಕೆ ತೆರಳಿ ಸ್ವಯಂ ಆಡಳಿತದ ಪರ ಪ್ರಚಾರ ಮಾಡಿದರು. ಅಡ್ಯಾರ್ ಲೀಗಿನ ಅಧ್ಯಕ್ಷ **ಜಿ. ಸುಬ್ರಹ್ಮಣ್ಯ ಅಯ್ಯರ್** ಜೂನ್ 24, 1917ರಂದು ಯು.ಎಸ್.ಎ. ಅಧ್ಯಕ್ಷ ವುಡ್ರೋ ವಿಲ್ಸನ್‌ರಿಗೆ ಪತ್ರ ಬರೆದು ತಮ್ಮ ಯುದ್ಧ ಕಾಲದ ಘೋಷಣೆಯನ್ನು ಭಾರತಕ್ಕೂ ಅನ್ವಯಿಸುವಂತೆ ಕೇಳಿಕೊಂಡರು. ಹಾಗೆಯೇ ಲಂಡನ್‌ನಲ್ಲಿ ಲೀಗ್ ತನ್ನ ಶಾಖೆ ಸ್ಥಾಪಿಸಿ ಕಾರ್ಮಿಕರ ಬೆಂಬಲ ಪಡೆಯಿತು.
- 1917ರಲ್ಲಿ ಬ್ರಿಟನ್ನಿನಲ್ಲಿ ಸ್ವಯಂ ಆಡಳಿತ ಶಕ್ತಿಗಳನ್ನು ತಡೆಯಲು ಅನಿಬೆಸೆಂಟರು ಜೋಸೆಫ್ ಬ್ಯಾಪ್ಟಿಸ್ಟ್ ನಿಯೋಗಗಳನ್ನು ಕಳುಹಿಸಿದರು. ಹೀಗೆಯೇ ಮಾರ್ಚ್ 27, 1918ರಲ್ಲಿ ಕಪರ್ಡೆ, ಕರುಂದಿಕರ್, ಕೇಳ್ಕರ್, ಬಿಪಿನ್ ಚಂದ್ರಪಾಲ್ ಒಳಗೊಂಡ ತಿಲಕ್ ನಾಯಕತ್ವದ ನಿಯೋಗ ಲಂಡನ್‌ಗೆ ಭೇಟಿ ಕೊಡಲು ನಿರ್ಧರಿಸಲಾಯಿತು.
- ಹೀಗೆ ತಿಲಕರು ಇಂಗ್ಲೆಂಡ್ ಪ್ರವಾಸದಲ್ಲಿದ್ದಾಗ ಭಾರತದಲ್ಲಿ ರೌಲತ್ ಮಸೂದೆ ಜಲಿಯನ್ ವಾಲಾಭಾಗ್ ದುರಂತ. ಪಂಜಾಬ್‌ನಲ್ಲಿ ಮಾರ್ಷಲ್ ಕಾನೂನು ಜಾರಿ ಚಳುವಳಿ ಜರುಗಿದವು. ಹೀಗೆ ಹಂತ ಹಂತವಾಗಿ ಭಾರತದ ರಾಜಕೀಯ ನಾಯಕತ್ವ ಗಾಂಧೀಜಿಯ ಕೈಸೇರಿತು.

ಲೀಗ್‌ನ ದಮನ

- ತಿಲಕರನ್ನು ಅವರ ಹುಟ್ಟು ಹಬ್ಬದಂದು (23 ಜುಲೈ 1916) ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಲು ಪ್ರಯತ್ನಿಸಿದಾಗ ಬೊಂಬಾಯಿ ನ್ಯಾಯಾಲಯ ತಡೆಯೊಡ್ಡಿತು.

- ಚಳುವಳಿ ತೀವ್ರ ಸ್ವರೂಪ ತಾಳಲು ಕಾರಣರಾಗಿದ್ದ ಅನಿಬೆಸೆಂಟ್ (ಬಿಪಿ ವಾಡಿಯಾ, ಅಡುಂಡಲೆ)ರನ್ನು ಬಂಧಿಸಲಾಯಿತು.
- ಇದುವರೆಗೂ ಚಳುವಳಿಯಿಂದ ದೂರವಿದ್ದ ಮದನ್ ಮೋಹನ್ ಮಾಳವೀಯ, ಎಂ.ಎ. ಜಿನ್ನಾ ಮತ್ತು ಎಸ್.ಎನ್ ಬ್ಯಾನರ್ಜಿ ಬೆಸೆಂಟ್ ಬಂಧನದಿಂದಾಗಿ ಲೀಗ್ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿದರು.
- **ಎಸ್. ಸುಬ್ರಮಣ್ಯ ಅಯ್ಯರ್** ನೈಟ್ ಹುಡ್ ಪದವಿ ಹಿಂದಿರುಗಿಸಿದರು. ಅಲ್ಲದೆ ಎ.ಐ.ಸಿ.ಸಿ ಸಮಿತಿಯ ಸಭೆಯಲ್ಲಿ ಅನಿಬೆಸೆಂಟ್ ಮತ್ತು ಇತರರನ್ನು ಬಿಡುಗಡೆ ಮಾಡಲು ತಿಲಕರು ಕೇಳಿಕೊಂಡರು.
- 1917ರಲ್ಲಿ ಬಿಡುಗಡೆಯಾದ ಅನಿಬೆಸೆಂಟ್‌ರು 1917ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಪ್ರಥಮ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾದರು.

ಹೋಂರೂಲ್ ಲೀಗಿನ ಮಹತ್ವ

- ಗಾಂಧೀಜಿಯು ನೇತೃತ್ವದಲ್ಲಿ ನಡೆದ ಚಳುವಳಿಗೆ ರಾಷ್ಟ್ರೀಯವಾದಿಗಳನ್ನು ತಯಾರು ಮಾಡಿತು.
- ಪಟ್ಟಣ ಮತ್ತು ಗ್ರಾಮಗಳ ಮಾನ್ಯ ಸಂಘಟನಾತ್ಮಕ ಸಂಬಂಧ ಕಲ್ಪಿಸಿತು.
- ಲೀಗ್–ಸ್ವಯಂ ಆಡಳಿತ ಭಾವನೆ ಪರಿಚಯಿಸಿ ದೇಶದಲ್ಲಿ ರಾಷ್ಟ್ರದ ಸ್ವಾತಂತ್ರ್ಯವನ್ನು ಸಮರ್ಥಿಸುವ ವಾತಾವಣರ ಸೃಷ್ಟಿಸಿತು.

ಲೀಗ್‌ನ ವಿಫಲತೆ

- ಸಾತ್ವಿಕ ಪ್ರತಿಭಟನೆಯ ವಿಚಾರದಲ್ಲಿ ದೃಢವಾದ ನಿಲುವು ತಾಳಲಿಲ್ಲ.
- ಅನಿಬೆಸೆಂಟ್ ಬಂಧನದ (1917) ನಂತರ ಮಂದಗಾಮಿಗಳು ಚಳುವಳಿಗೆ ಪಾಲ್ಗೊಂಡಿದ್ದು ಅಷ್ಟೆ.
- ತಿಲಕರು ಇಂಗ್ಲೆಂಡ್‌ಗೆ ತೆರಳಿದ್ದು ಲೀಗ್ ನಾಯಕತ್ವವಿಲ್ಲದಂತಾಯಿತು.

ಮೊದಲನೆ ಮಹಾಯುದ್ಧ ಮತ್ತು ಭಾರತದ ರಾಷ್ಟ್ರೀಯ ಚಳುವಳಿ

- ಬ್ರಿಟನ್ ಆಗಸ್ಟ್ 1914ರಂದು ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿತು. ಈ ಯುದ್ಧಕ್ಕೆ ಭಾರತದ ಅರಸರು, ಸೈನಿಕರು ಮತ್ತು ಅಂತಿಮವಾಗಿ ಗಾಂಧೀಜಿಯು ಬೆಂಬಲ ನೀಡಿದರು.
- 1914ರ ಐ.ಎನ್.ಸಿ ಅಧಿವೇಶನದ ಅಧ್ಯಕ್ಷ ಭೂಪೇಂದ್ರನಾಥ ಬಸು ಯುದ್ಧಕ್ಕೆ ಬೆಂಬಲ ಸೂಚಿಸಿ ಭಾರತೀಯರಿಗೆ ಇದೊಂದು ಉತ್ತಮ ಅವಕಾಶ. ಮಹಾರಾಣಿಯ ಪ್ರಜೆಗಳಾಗಿ ಭುಜಕ್ಕೆ ಭುಜ ಕೊಟ್ಟು ಹೋರಾಡಬೇಕೆಂದರು.
- 1917ರಲ್ಲಿ ರೌಲತ್‌ಪುರ ಕಾಲೇಜಿನ ಪ್ರಾಂಶುಪಾಲ ಮುನೀಂದ್ರನಾಥ್ ಸೇಟ್‌ರನ್ನು ಬ್ರಿಟಿಷ್ ವಿರೋಧಿ ಚಳುವಳಿ ಆಧಾರದ ಮೇಲೆ ಬಂಧನ. ಹೂಗ್ಲಿಯ ಜ್ಯೋತಿಷ್‌ಚಂದ್ರ ಘೋಷ್ ಬಂಧನವಾಯಿತು.
- (ಯುದ್ಧ ಮುಗಿದ ನಂತರ) ಭಾರತೀಯ ಪ್ರತಿನಿಧಿಗಳಾದ ಬಿಕಾನೇರ್ ಮಹಾರಾಜ ಮತ್ತು ಸತ್ಯೇಂದ್ರ ಸಿನ್ಹರವರು ಲಂಡನ್ನಿನಲ್ಲಿ ನಡೆದ ಇಂಪೀರಿಯಲ್ ಯುದ್ಧ ಸಮ್ಮೇಳನದಲ್ಲಿ ಮತ್ತು ಶಾಂತಿ ಸಮ್ಮೇಳನದಲ್ಲೂ ಭಾಗವಹಿಸಿದ್ದರು.
- 1919ರಲ್ಲಿ ಭಾರತ League of Nationsಗೆ ಸದಸ್ಯತ್ವ ಪಡೆಯಿತು.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಲಕ್ನೋ ಒಪ್ಪಂದ – 1916

- 1916ರಲ್ಲಿ ತಿಲಕರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗನ್ನು ಒಟ್ಟುಗೂಡಿಸಿದರು.

ಮುಖ್ಯಾಂಶಗಳು

1. ಪ್ರತ್ಯೇಕತಾ ಮತದಾರ ಕ್ಷೇತ್ರ ನೀಡಲು ಕಾಂಗ್ರೆಸ್ ಒಪ್ಪಿತು.
2. ಪ್ರಾಂತೀಯ ವಿಧಾನಸಭೆಗೆ ಆರಿಸಲ್ಪಡುವ ಮುಸ್ಲಿಂ ಸದಸ್ಯರ ಶೇಕಡವಾರು ಸಂಖ್ಯೆ.
3. ಇಂಪಿರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನ ಮುಸ್ಲಿಂ ಸದಸ್ಯರ ಸಂಖ್ಯೆ ಒಟ್ಟು ಚುನಾಯಿತ ಸಂಖ್ಯೆಯಲ್ಲಿನ 1/3 ರಷ್ಟಕ್ಕೆ ಏರಿಕೆ.
4. ಸದನದಲ್ಲಿ ಮಂಡಿಸುವ ಮಸೂದೆ ಒಂದು ಕೋಮಿನ 1/3ರಷ್ಟು ಸದಸ್ಯರು ಬೇಡವೆಂದರೆ ರದ್ದು ಮಾಡುವುದು.

- ಇದು 1947ರಲ್ಲಿ ಅಸ್ತಿತ್ವಕ್ಕೆ ಬಂದ ಪಾಕಿಸ್ತಾನದ ಹುಟ್ಟಿಗೆ ಕಾರಣವಾಯಿತು.

25.3 ಪ್ರಮುಖ ಕ್ರಾಂತಿಕಾರಿಗಳು

- ಪ್ರಥಮ ಹಂತ 1902 – ಕ್ರಾಂತಿಕಾರಿಗಳಿಗೆ ಪ್ರೇರೇಪಿಸಿದ ಅಂಶಗಳು.
- ವಿವೇಕಾನಂದ ಪ್ರಚೋದನಾಕಾರಿ ವಿಚಾರಗಳು ಮತ್ತು ಬಂಕಿಮಚಂದ್ರ ಆನಂದ ಮಠ ಪ್ರಭಾವ ಬೀರಿದವು.
- ತಿಲಕರ ಉದ್ರೇಕಿಸುವ ಲೇಖನಗಳು. ಯುಎಸ್‌ಎ ಫ್ರಾನ್ಸ್ ಹಾಗೂ ರಷ್ಯಾ ಕ್ರಾಂತಿಗಳಿಂದ ಪ್ರಭಾವಿತರಾಗಿದ್ದರು.
- ಲಾಲ ಲಜಪತ್‌ರಾಯರನ್ನು ಗುಮಾನಿಯ ಮೇಲೆ ವಿಚಾರಣೆ ಒಳಪಡಿಸದೆ 6 ತಿಂಗಳುಗಳ ಕಾಲ ಬರ್ಮಾಕ್ಕೆ ಗಡಿಪಾರು ಮಾಡಲಾಯಿತು.

ಮಹಾರಾಷ್ಟ್ರ

- ಕ್ರಾಂತಿಕಾರಿಗಳ ಚಟುವಟಿಕೆ ಮೊದಲು (ಆಧಾರ ರಾಜದ್ರೋಹ ಸಮಿತಿ 1918) ಮಹಾರಾಷ್ಟ್ರದಲ್ಲಿ ಪ್ರಾರಂಭವಾಗಿ ನಂತರ ಬಂಗಾಳದಲ್ಲಿ ಪ್ರಬಲವಾಗಿ ಬೆಳೆಯಿತು. ಮೊದಲ ಕ್ರಾಂತಿಕಾರಿ **ವಾಸುದೇವ ಬಲವಂತ ಫಡಕೆ** ಇವನು ಪುಣೆಯ ಮಿಲಿಟರಿ ವಿಭಾಗದ ನೌಕರ.
- ಫಡಕೆ 1879ರಲ್ಲಿ ಬ್ರಿಟಿಷರ ವಿರುದ್ಧ ಆದಿವಾಸಿಗಳು ಮತ್ತು ಕ್ರಾಂತಿಕಾರಿಗಳನ್ನು ಸಂಘಟಿಸಿದನು. 1879ರಲ್ಲಿ ಜುಲೈ 20ರಂದು ಸೆರೆಯಾದ ಫಡಕೆ ಏಡನ್ ಸೆರೆಮನೆಯಲ್ಲೇ 1883ರಲ್ಲಿ ನಿಧನ.
- ರಾಜದ್ರೋಹ ಸಮಿತಿ 1918ರ ವರದಿಯ ಪ್ರಕಾರ ಪ್ರಥಮತಃ

ಪೇಶ್ವೆಗಳ ವಂಶಸ್ಥರು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ನಿರತರಾದರು ಎಂದಿದೆ.

- ಚಾಪೇಕರ್ ಸಹೋದರರು (ದಾಮೋದರ ಮತ್ತು ಬಾಲಕೃಷ್ಣ): 1896–97ರಲ್ಲಿ **ವ್ಯಾಯಾಮ ಮಂಡಲ್** ಸ್ಥಾಪಿಸಿದರು. ಇವರು ಹಿಂದೂ ಧರ್ಮ ಸಂಘದ ಕಾರ್ಯಕರ್ತರಾಗಿದ್ದರು. 1898 ಜೂನ್‌ನಲ್ಲಿ **ರ್‍ಯಾಂಡ್** ಎಂಬ ಬ್ರಿಟಿಷ್ ಅಧಿಕಾರಿಯನ್ನು ಕೊಂದರು. ಇದು ತೀವ್ರವಾದಿಗಳಾದ ಆಂಗ್ಲರ ಮೇಲೆ ನಡೆದ ಮೊದಲ ರಾಜಕೀಯ ಕೊಲೆಯಾಗಿತ್ತು. (ರ್‍ಯಾಂಡ್–1897ರ ಪ್ಲೇಗ್ ಸಮಿತಿಯ ಅಧ್ಯಕ್ಷ)

ಬಂಗಾಳ

- 1902ರಲ್ಲಿ ಬಂಗಾಳದಲ್ಲಿ ರಾಷ್ಟ್ರೀಯ ಚಳುವಳಿಗಳನ್ನು ಸಂಘಟಿಸಿದ ಕೀರ್ತಿ ಮಿಡ್ನಾಪುರದ **ಜ್ಞಾನೇಂದ್ರನಾಥ ಬಸು** ಮತ್ತು **ಅನುಶೀಲನಾ ಸಮಿತಿಗೆ** ಸಲ್ಲುತ್ತದೆ.
- **ಪ್ರಮುಖ ಮುಖಂಡರು:** ಬರೀಂದರ್ ಕುಮಾರ್ ಘೋಷ್ (ಅರವಿಂದರ ಸಹೋದರ) ಭೂಪೇಂದ್ರನಾಥ್ ದತ್ತ (ವಿವೇಕಾನಂದರ ಸಹೋದರ)ಮತ್ತು ಪುಲಿನ್ ಬಿಹಾರಿದಾಸ್.
- ಬಂಗಾಳದ ಪ್ರಥಮ ಕ್ರಾಂತಿಕಾರಿ ಸಂಘಟನೆ ಅನುಶೀಲನಾ ಸಮಿತಿ – ಇದನ್ನು 1906ರಲ್ಲಿ ಬರೀಂದರ್‌ಘೋಷ್ ಸ್ಥಾಪಿಸಿದರು. ಮತ್ತು 1906ರಲ್ಲಿ ಯುಗಾಂತರ್ ಪತ್ರಿಕೆ ಆರಂಭಿಸಿದರು.
- ಬರೀಂದರ್ ಘೋಷ್ **1905ರಲ್ಲಿ ಭವಾನಿ ಮಂದಿರ** ಮತ್ತು **1907ರಲ್ಲಿ ವರ್ತಮಾನ್ ರಣನೀತಿ** ಎಂಬ ಪುಸ್ತಕ ಪ್ರಕಟಿಸಿದರು. (ಗೆರಿಲ್ಲಾ ಯುದ್ಧಗಳ ತರಬೇತಿ ಪಡೆಯಬೇಕೆಂದು ತಿಳಿಸಿದರು)
- ಬರೀಂದರ್ ಘೋಷ್ ಬಾಂಬ್ ತಯಾರಿಸಲು ಮಾಣಿಕ್ತಲದ ಮುರಾರಿಪುರ್ ಎಂಬ ತೋಟದ ಮನೆ ಕೇಂದ್ರವಾಗಿಸಿಕೊಂಡರು.
- ಬಂಗಾಳದ **ಕಿಂಗ್ಸ್‌ಫರ್ಡ್ ಮ್ಯಾಜಿಸ್ಟ್ರೇಟರ್**‌ನನ್ನು ಕೊಲೆ ಮಾಡಲು ಪ್ರಫುಲ್ಲ ಚೌಕಿ ಮತ್ತು ಖುದಿರಾಂ ಬೋಸ್‌ರನ್ನು ನೇಮಿಸಲಾಯಿತು. ಆದರೆ ಇವರು ಕೆನಡಿ ಕುಟುಂಬವನ್ನು ಕೊಲೆಗೈದರು. 1908 ಆಗಸ್ಟ್ 1ರಂದು ಇವರನ್ನು ಗಲ್ಲಿಗೇರಿಸಲಾಯಿತು. ಈ ರೀತಿ ಹುತಾತ್ಮನಾದ ಪ್ರಪ್ರಥಮ ತೀವ್ರಗಾಮಿ ರಾಷ್ಟ್ರೀಯ ಹೋರಾಟಗಾರ **ಖುದಿರಾಂ ಬೋಸ್**.

ಅಲಿಪುರ್ ಸಂಚಿನ ಮೊಕದ್ದಮೆ

- ಹೇಮಚಂದ್ರ ಕನುಂಗೋನಿಂದ ತೀವ್ರವಾದಿಗಳ ಪ್ರಥಮ ಪೀಳಿಗೆ ಆರಂಭವಾಯಿತು.
- ಪ್ಯಾರಿಸ್‌ನಿಂದ ಹಿಂದಿರುಗಿದ ಕನುಂಗೊನು ಸಿಡಿಗುಂಡಿನ ಪಂಥ ಹುಟ್ಟು ಹಾಕಿದನು. ದೇಶ ಸೇವೆಯಲ್ಲಿ ನಿರತರಾಗಬೇಕು ಎಂದು ಪ್ರಚಾರ ಮಾಡಿದ್ದರಿಂದ **ಹುತಾತ್ಮರ ಪಂಥ** ಹುಟ್ಟಿಕೊಂಡಿತು.
- ಕನುಂಗೋ ಮಾಣಿಕ್‌ತಲ ತೋಟದಲ್ಲಿ ಸಿಡಿಮದ್ದು ತಯಾರಿಸುವ ಕಾರ್ಖಾನೆಯನು ಆರಂಭಿಸಿದರು. ಅಜಾಗರೂಕತೆಯಿಂದಾಗಿ ಅರವಿಂದರೂ ಸೇರಿದಂತೆ ತೀವ್ರವಾದಿಗಳು 1908ರಲ್ಲಿ ಬಂಧನವಾದರು. ವಿಚಾರಣೆ ಸಂದರ್ಭದಲ್ಲಿ ಮಾಫಿ ಸಾಕ್ಷಿಯಾಗಿ ಪರಿವರ್ತಿತನಾದ ನರೇಂದ್ರ ಗೋಸಿನ್‌ನನ್ನು ಬಂಧಿಖಾನೆಯಲ್ಲಿ ಕೊಲೆ ಮಾಡಲಾಯಿತು.
- ಬಂಗಾಳದಲ್ಲಿ ಜ್ಯೋತೀಂದ್ರನಾಥರ ನೇತೃತ್ವದಲ್ಲಿ **ಸಂಜೀವನಿ ಸಭಾ** ಸ್ಥಾಪಿಸಲ್ಪಟ್ಟಿತು. ಇದರ ಮುಖ್ಯ ನಿಯಮ **ಮಂತ್ರದೀಪ್ತಿಯಾಗಿತ್ತು**.

ಪಂಜಾಬ್ (Punjab)

- ಪಂಜಾಬಿನಲ್ಲಿ ಸರ್ದಾರ್ ಅಜಿತ್‌ಸಿಂಗ್ **ಭಾರತ್ ಮಾತಾ ಸೊಸೈಟಿ** ಎಂಬ ಕ್ರಾಂತಿಕಾರಿ ಸಂಘವನ್ನು **ಲಾಹೋರ್‌ನಲ್ಲಿ** ಆರಂಭಿಸಿದರು. ಇವರು ರೈತರು ಸ್ವಾಭಿಮಾನವನ್ನು ಬೆಳೆಸಿಕೊಳ್ಳಲು ಕರೆ ನೀಡಿದರು.

ದೆಹಲಿ (Dehli)

- 1912ರಲ್ಲಿ ಆನೆಯ ಮೇಲೆ ಮೆರವಣಿಗೆ ಹೋಗುತ್ತಿದ್ದ ಲಾರ್ಡ್‌ಹಾರ್ಡಿಂಜ್‌ನನ್ನು ಕೊಲ್ಲುವ ಉದ್ದೇಶದಿಂದ ರಾಸ್ ಬಿಹಾರಿ ಘೋಷ್ ಮತ್ತು ಸಚಿನ್ ಸೆನ್ಯಾಲ್ ಬಾಂಬ್ ಎಸೆದರು. ನಂತರ ಸುಳ್ಳು ಹೇಳಿ ರಾಸ್ ಬಿಹಾರಿ ಘೋಷ್ ಜಪಾನ್‌ಗೆ ಪರಾರಿಯಾದರು.
- ಈ ಮೊಕದ್ದಮೆಯಲ್ಲಿ ವಸಂತಕುಮಾರ, ಬಾಲಮುಕುಂದ, ಅವಧಬಿಹಾರಿ ಮತ್ತು ಅಮೀರಚಂದರನ್ನು ಮರಣದಂಡನೆಗೆ ಗುರಿಪಡಿಸಲಾಯಿತು.
- ಕ್ರಾಂತಿಕಾರಿ ಚಟುವಟಿಕೆಗಳ ಪ್ರಮುಖ ಸಂಸ್ಥೆ **ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್**. ಇದನ್ನು 1924ರಲ್ಲಿ ಕಾನ್ಪುರದಲ್ಲಿ ಸೇರಿದ ಕ್ರಾಂತಿಕಾರಿಗಳು ಒಗ್ಗೂಡಿ ಸ್ಥಾಪಿಸಿದರು. ಈ ಸಂಸ್ಥೆಯ ಕ್ರಾಂತಿಕಾರಿಗಳು – ಭಗತ್‌ಸಿಂಗ್, ರಾಜಗುರು, ಆಜಾದ್ ಮತ್ತು ರಾಂ ಬಿಸ್ಮಿಲ್ಲಾ ಮುಂತಾದವರು.

ಕಾಕೋರಿ ರೈಲು ಡಕಾಯಿತಿ:

- 1925 ಆಗಸ್ಟ್ 9ರಂದು (ಷಹಾಜಾನ್‌ಪುರ್–ಲಕ್ನೋ) ರೈಲು ದರೋಡೆಯು ರಾಂಪ್ರಸಾದ್ ಬಿಸ್ಮಿಲ್ಲಾ ನೇತೃತ್ವದಲ್ಲಿ ನಡೆಯಿತು. ತನಿಖೆ ಮಾಡಿದ ಸರ್ಕಾರ ರಾಂ ಪ್ರಸಾದ್ ಬಿಸ್ಮಿಲ್ಲಾ, ರಾಜೇಂದ್ರ ಲಾಹಿರಿ, ಅಷಾಕ್ ಉಲ್ಲಾ ಮತ್ತು ರೋಷನ್ ಸಿಂಹರನ್ನು ಬಂಧಿಸಿತು.
- 1928 ಅಕ್ಟೋಬರ್ 20ರಂದು ಸೈಮನ್ ಕಮಿಷನ್ ಲಾಹೋರ್‌ಗೆ ಭೇಟಿ ನೀಡಿದಾಗ ಲಾಲ ಲಜಪತ್‌ರಾಯ್ ವಿರೋಧಿಸಿದ್ದರಿಂದ **ಐ.ಪಿ. ಸ್ಯಾಂಡರ್ಸ್** ಎಂಬ ಪೊಲೀಸ್ ಲಾಠಿಗೆ ಬಲಿಯಾದರು. ಪ್ರತೀಕಾರವಾಗಿ ಡಿಸೆಂಬರ್ 17, 1928ರಂದು ಸ್ಯಾಂಡರ್ಸ್‌ನನ್ನು ಭಗತ್‌ಸಿಂಗ್ ಮತ್ತು ರಾಜಗುರು ಸೇರಿ ಗುಂಡಿಟ್ಟು ಕೊಂದರು.
- ಇದಾದ ನಂತರ **1929 ಏಪ್ರಿಲ್ 8**ರಂದು ದೆಹಲಿಯ ಕೇಂದ್ರ ಶಾಸನಸಭೆಯ ಮೇಲೆ ಬಾಂಬ್ ಎಸೆಯಲಾಯಿತು. **ಇಂಕ್ವಿಲಾಬ್ ಜಿಂದಾಬಾದ್** ಎಂಬ ಘೋಷಣೆ ಕೂಗಿದರು. ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವರಿಗೆ ಲಾಹೋರಿನಲ್ಲಿ ಮಾರ್ಚ್ 23, 1931ರಂದು ಗಲ್ಲಿಗೇರಿಸಲಾಯಿತು.

- ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್‌ನ ಚಟುವಟಿಕೆಗಳಲ್ಲೆಲ್ಲಾ ಪಾಲ್ಗೊಂಡಿದ್ದ ಪ್ರಮುಖರೆಂದರೆ **ಚಂದ್ರಶೇಖರ್ ಆಜಾದ್.** ಇವರು ಕಾಕೋರಿ ರೈಲು ಡಕಾಯಿತಿ, ವೈಸ್‌ರಾಯ್ ರೈಲು ಸ್ಫೋಟಿಸುವ ಯತ್ನ, ಸ್ಯಾಂಡರ್ಸ್‌ಗೆ ಗುಂಡು ಹೊಡೆದ ಮತ್ತು ದೆಹಲಿ ಪಿತೂರಿಗಳಲ್ಲಿ ಭಾಗಿಯಾಗಿದ್ದರು. 1931 ಫೆಬ್ರುವರಿ 27ರಂದು (ಅಲಹಾಬಾದ್‌ನಲ್ಲಿ) ಪೊಲೀಸರು ಹಿಡಿಯಲೆತ್ನಿಸಿದಾಗ ನಾನು ಸ್ವತಂತ್ರ, ಸ್ವತಂತ್ರನಾಗಿಯೇ ಉಳಿಯುವೆ ಎಂದು ಆತ್ಮಹತ್ಯೆ ಮಾಡಿಕೊಂಡರು.

ಚಿತ್ತಗಾಂಗ್ ಶಸ್ತ್ರಾಗಾರ – 1930

- ಯುವ ಪೀಳಿಗೆಯಲ್ಲಿ ನಡೆದ ಕ್ರಾಂತಿಕಾರಿ ಗುಂಪುಗಳ ಕಾರ್ಯಾಚರಣೆಯಲ್ಲಿ ಅತ್ಯಂತ ಪ್ರಮುಖವಾಗಿದ್ದು, ಇದು ಸೂರ್ಯಸೇನ್ ನೇತೃತ್ವದಲ್ಲಿ ನಡೆಯಿತು. (ಇವರು ಮಾಸ್ತರ್‌ದಾ ಎಂದು ಪರಿಚಿತರಾಗಿದ್ದರು) ಈ ಘಟನೆ ಏಪ್ರಿಲ್ 18, 1930ರಂದು ನಡೆದು ಸೂರ್ಯಸೇನ್ ಜೊತೆ **ಅನಂತಸಿಂಗ್, ಅಂಬಿಕಾ ಚಕ್ರವರ್ತಿ, ಲೋಕನಾಥ್ ಬಾಕ್, ಗಣೇಶ್ ಘೋಷ್, ಆನಂದಗುಪ್ತ, ತೇಗ್ರಿಬಾಲ್, ಕಲ್ಪನಾದತ್ ಮತ್ತು ಪ್ರೀತಿಲತಾ ವಡ್ಡೇದಾರ್** ಎಂಬ 64 ಅನುಯಾಯಿಗಳಿಂದ ದಾಳಿ ನಡೆಯಿತು.
- ಅಂತಿಮವಾಗಿ ಸೂರ್ಯಸೇನರನ್ನು ಜನವರಿ 12, 1934ರಲ್ಲಿ ಗಲ್ಲಿಗೇರಿಸಲಾಯಿತು. ಇದಾದ ನಂತರ 1930ರಲ್ಲಿ ಢಾಕಾದಲ್ಲಿ ಬಿನಯ ಕೃಷ್ಣ ಬೋಸ್‌ನು ಲೋಮನ್ ಮತ್ತು ಹಡ್ಸನ್ ಅಧಿಕಾರಿಗಳನ್ನು ಗಾಯಗೊಳಿಸಿದರು. ಬಿನಯ ಕೃಷ್ಣ, ಬಾದಲ್ & ದಿನೇಶರು ಕಲ್ಕತ್ತಾ ಕಾರಾಗೃಹ ಮುಖ್ಯಸ್ಥ ಕರ್ನಲ್ ಸಿಂಪ್ಸನ್‌ನನ್ನು ಕೊಂದರು.
- ಸೂರ್ಯಸೇನರ ಜೊತೆಗಿದ್ದ ಮಹಿಳಾ ಕ್ರಾಂತಿಕಾರಿಗಳಾದ ಶಾಂತಿಘೋಷ್, ಸುನೀತ ಚೌಧರಿ, ಬಿನಾದಾಸ್, ಕಲ್ಪನಾದತ್, ಪ್ರೀತಿಲತಾ ವಡ್ಡೇದಾರ್, ಸೂರ್ಯಸೇನ್‌ರೊಂದಿಗೆ ಅಜೀವ ಸೆರೆವಾಸ ಅನುಭವಿಸಿದರು.
- **ಶಾಂತಿ ಘೋಷ್** ಮತ್ತು **ಸುನೀತಾ ಚೌಧರಿ** ಎಂಬ ವಿದ್ಯಾರ್ಥಿನಿಯರು ಜಿಲ್ಲಾ ಮ್ಯಾಜಿಸ್ಟ್ರೇಟ್‌ನನ್ನು ಕೊಲೆ ಮಾಡಿದರು.
- 1931 ನವೆಂಬರ್‌ನಲ್ಲಿ ಸರ್ಕಾರವು ಉಗ್ರಾಮಿತ್ವ ತಡೆಯಲು **ತುರ್ತುಪರಿಸ್ಥಿತಿ ಕಾನೂನು** ಜಾರಿಗೆ ತಂದಿತು. ಆದರೆ ಪ್ರದ್ಯೋತಕುಮಾರ್ ಮತ್ತು ಪ್ರೊ. ಬನ್ಸುಪಾಲ್ ಎಂಬುವವರು ಮಿಡ್ನಾಪುರದ ಜಿಲ್ಲಾ ಮ್ಯಾಜಿಸ್ಟ್ರೇಟರನನ್ನು ಕೊಂದರು.

ವಿದೇಶಗಳಲ್ಲಿ ಕ್ರಾಂತಿಕಾರಿಗಳು

ಇಂಗ್ಲೆಂಡ್

1. ಶ್ಯಾಂಜಿ ಕೃಷ್ಣಶರ್ಮ

- ಕಾಥೇವಾಡದ ನಿವಾಸಿಯಾದ ಕೃಷ್ಣಶರ್ಮ ತಮ್ಮ ಚಟುವಟಿಕೆಗಳಿಗೆ ಲಂಡನ್ ಅನ್ನು ಕೇಂದ್ರ ಸ್ಥಾನವಾಗಿ ಮಾಡಿಕೊಂಡರು.
- 1905ರಲ್ಲಿ ಕೃಷ್ಣಶರ್ಮ 'The India Home Rule Society' ಯನ್ನು ಲಂಡನ್‌ನಲ್ಲಿ ಆರಂಭಿಸಿದರು. ಇದು **ಇಂಡಿಯಾ ಹೌಸ್** ಎಂದು ಖ್ಯಾತಿ ಪಡೆದು ಭಾರತೀಯರ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದ **'ದ ಇಂಡಿಯನ್ ಸೋಷಿಯಾಲಿಸ್ಟ್'** ಎಂಬ ಪತ್ರಿಕೆ ಆರಂಭಿಸಿತು. ಭಾರತೀಯ ವಿದ್ಯಾರ್ಥಿಗಳಿಗಾಗಿ 1000ರೂ ವಿದ್ಯಾರ್ಥಿ ವೇತನವನ್ನು ಇಂಡಿಯಾ ಹೌಸ್‌ನಲ್ಲಿ ಆರಂಭಿಸಿದರು. ವಿದ್ಯಾರ್ಥಿ ವೇತನ ಪಡೆದ ಪ್ರಮುಖರೆಂದರೆ **ವಿ.ಡಿ. ಸಾವರ್ಕರ್, ಲಾಲ್‌ಹರದಯಾಳ್, ಮದನ್‌ಲಾಲ್ ದಿಂಘ್ರಾ** ಮುಂತಾದವರು.
- ಬ್ರಿಟನ್ ಸರ್ಕಾರದ ಕೆಂಗಣ್ಣಿಗೆ ಗುರಿಯಾದ ಶ್ಯಾಂಜಿಯವರು ಲಂಡನ್ ಬಿಟ್ಟು ಪ್ಯಾರಿಸ್‌ನಲ್ಲಿ ನೆಲೆಸಿದರು. ಮುಂದೆ ಇಂಡಿಯಾ ಹೌಸ್ ಸಾವರ್ಕರ್ ನೇತೃತ್ವದಲ್ಲಿ ಮುನ್ನಡೆಯಿತು. ಪ್ಯಾರಿಸ್‌ನಲ್ಲಿದ್ದ ಮತ್ತೊಬ್ಬ ಕ್ರಾಂತಿಕಾರಿಯೆಂದರೆ **ಸರ್ದಾರ್‌ಸಿಂಗ್ ರಾಣಾ**

2. ವಿ.ಡಿ. ಸಾವರ್ಕರ್ (1883–1966)

- ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ಜನಿಸಿದರು. ಪೂನಾದ ಚಾಪೇಕರ್ ಸಹೋದರರಿಗೆ ಮರಣದಂಡನೆ ಶಿಕ್ಷೆಯ ಪರಿಣಾಮವು ಇವರ ಮೇಲೆ ಪ್ರಭಾವ ಬೀರಿ ತಮ್ಮ ಪ್ರಥಮ ಗುಪ್ತ ಸಂಘವನ್ನು **ಮಿತ್ರಮೇಳ ನಾಸಿಕ್‌ನಲ್ಲಿ 1899**ರಲ್ಲಿ ಸ್ಥಾಪಿಸಿದರು.
- 1904ರಲ್ಲಿ ಸ್ಥಾಪಿತವಾದ **ಅಭಿನವ್ ಭಾರತ** ಎಂಬ ಗುಪ್ತ ಸಂಘದೊಂದಿಗೆ ಮಿತ್ರಮೇಳವನ್ನು ವಿಲೀನಗೊಳಿಸಿದರು (ಇದರ ಶಾಖೆಗಳು: ಪೂನಾ, ಬಾಂಬೆ, ಮಧ್ಯಭಾರತ, ಕರ್ನಾಟಕ ಇತ್ಯಾದಿ)
- ಅಭಿನವ ಭಾರತ್ ಮ್ಯಾಜಿನಿಯ ಯಂಗ್ ಇಟಲಿಯಂತೆ ಗುಪ್ತ ಸಂಸ್ಥೆಯಾಗಿ ಕೆಲಸ ಮಾಡಿತು. (ಮ್ಯಾಜಿನಿ ಜೀವನ ಕಥೆಯ ಪುಸ್ತಕಗಳನ್ನು ಮರಾಠಿಯಲ್ಲಿ ಮುದ್ರಿಸಲಾಯಿತು.)
- 1907ರಲ್ಲಿ ಲಂಡನ್ನಿನ ಇಂಡಿಯಾ ಹೌಸ್ ನೇತೃತ್ವ ವಹಿಸಿಕೊಂಡ ಸಾವರ್ಕರ್ ಭಾರತೀಯರ ಪರ ಹಾಗೂ ಬ್ರಿಟಿಷ್ ವಿರೋಧಿ ಭಾವನೆ ಪ್ರಚಾರ ಮಾಡುವ ಕೇಂದ್ರವಾಗಿಸಿದರು.
- 1907ರಲ್ಲಿ ಇಂಡಿಯಾ ಹೌಸ್ 1857ರ ದಂಗೆಯ ಸುವರ್ಣ ಮಹೋತ್ಸವವನ್ನು ಆಚರಿಸಿತು. ಈ ಸಂದರ್ಭದಲ್ಲಿ 1857ರ ದಂಗೆಯನ್ನು **ಭಾರತದ ಸ್ವಾತಂತ್ರ್ಯ ಸಂಗ್ರಾಮ** ಎಂದು ಸಾವರ್ಕರು ಬಣ್ಣಿಸಿದರು.
- ತಮ್ಮ ಭಾವನೆಗಳನ್ನು ಪ್ರಚಾರ ಮಾಡುವ ಉದ್ದೇಶದಿಂದ 1908ರಲ್ಲಿ ಸಾವರ್ಕರ್ The Indian war of Independence - 1857 ಕೃತಿ ಪ್ರಕಟಿಸಿದರು. ಅಲ್ಲದೇ 'ಗ್ರೇವ್ ವಾರ್ನಿಂಗ್' ಎಂಬ ಕಿರು ಹೊತ್ತಿಗೆಯನ್ನು ಲಂಡನ್ ಮತ್ತು ಭಾರತದಲ್ಲಿ ವಿತರಿಸಿದರು.

ನಾಸಿಕ್ ಸಂಚಿನ ಮೊಕದ್ದಮೆ–1909

- ವಿ.ಡಿ. ಸಾವರ್ಕರ್ ತಮ್ಮ ಗಣೇಶ್ ದಾಮೋದರ ಸಾವರ್ಕರ್ ನಾಸಿಕ್ ಸಂಘದ ಮುಖ್ಯಸ್ಥರಾಗಿದ್ದು, 1909ರ ಒಂದು ಕರಪತ್ರದಲ್ಲಿ

ಕತ್ತಿ ಹಿಡಿದು ಸರ್ಕಾರವನ್ನು ನಾಶಮಾಡಿ ಏಕೆಂದರೆ ಈ ಸರ್ಕಾರ ವಿದೇಶಿ ಮತ್ತು ಆಕ್ರಮಣವಾದುದು ಎಂದು ಮುದ್ರಿಸಲಾಗಿತ್ತು. ಇವರನ್ನು ಸೆರೆ ಹಿಡಿಯಲಾಗಿ ನಾಸಿಕ್ ಜಿಲ್ಲೆಯ ನ್ಯಾಯಾಧೀಶ ಜಾಕ್ಸನ್‌ನು ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದನು. ಇದರ ಫಲವಾಗಿ ವಿ.ಡಿ. ಸಾವರ್ಕರ್ ಕಳುಹಿಸಿದ ಪಿಸ್ತೂಲಿನಿಂದ ಜಾಕ್ಸನ್‌ನ್ನು ಕೊಲೆ ಮಾಡಲಾಗಿತ್ತು. ಈ ಆಪಾದನೆಯನ್ನು ವಿ.ಡಿ. ಸಾವರ್ಕರ್ ಮೇಲೆ ಹೊರಿಸಿ ಇತರೆ 27 ಜನರೊಂದಿಗೆ ಆಪಾದಿತರೆಂದು 1910ರಲ್ಲಿ ತೀರ್ಮಾನಿಸಿ ಅವರನ್ನು ಶಾಶ್ವತ ಗಡಿಪಾರು ಶಿಕ್ಷೆಗೆ ಗುರಿಪಡಿಸಲಾಯಿತು.

- ಶಿಕ್ಷೆಗೆ ಗುರಿಯಾದ ವಿ.ಡಿ. ಸಾವರ್ಕರ್‌ರನ್ನು **ಅಂಡಮಾನ್ ಸೆಲ್ಯೂಲಾರ್ ಸೆರೆಮನೆ**ಯಲ್ಲಿ ಬಂಧಿಸಲಾಯಿತು. ಸ್ವಾತಂತ್ರ್ಯ ನಂತರ ಬಿಡುಗಡೆಯಾದ ಇವರು 1966ರಲ್ಲಿ ನಿಧನರಾದರು.

3. ಮದನ್‌ಲಾಲ್ ದಿಂಘ್ರಾ

- ಮದನ್‌ಲಾಲ್ ದಿಂಘ್ರಾ ಲಂಡನ್ನಿನ ಇಂಡಿಯಾ ಹೌಸ್‌ನ ಮತ್ತೊಬ್ಬ ಕ್ರಾಂತಿಕಾರಿ. ಈತ **ಪಂಜಾಬ್** ರಾಜ್ಯದವನು. ಇವನು ಇಂಡಿಯಾ ಕಛೇರಿಯ ಅಧಿಕಾರಿ ಕರ್ಜನ್ ವಿಲ್ಲೆಯನ್ನು 1909ರಲ್ಲಿ ಲಂಡನ್ನಿನಲ್ಲಿ ಕೊಲೆ ಮಾಡಿದನು. (ಸರ್ ಕರ್ಜನ್‌ವಿಲ್ಲೆ: ಮಹಾರಾಷ್ಟ್ರದ ಕ್ಷಾಮ ಪರಿಹಾರ ಕಾರ್ಯದ ದೃಷ್ಟತ್ಯದಲ್ಲಿ ಭಾಗಿಯಾಗಿದ್ದನು.) ದಿಂಘ್ರಾನಿಗೆ ಮರಣದಂಡನೆ ವಿಧಿಸಿದಾಗ **"**ನನ್ನ ನಾಡು ಮುಕ್ತವಾಗುವವರೆಗೆ ನಾನು ಪುನಃ ಅಲ್ಲಿಯೇ ಹುಟ್ಟುತ್ತೇನೆ. ಅದೇ ಕಾರಣಕ್ಕಾಗಿ ಹೋರಾಡುತ್ತೇನೆ. ನಾನು ಸಾಯುವುದಾದರೆ ಇದೇ ಪವಿತ್ರ ಕಾರಣಕ್ಕೆ ಪುನಃ ಸಾಯಲು ಇಚ್ಛಿಸುತ್ತೇನೆ**"** ಎಂದು ಹೇಳಿದರು.
- ಲಾಯ್ಡ್ ಜಾರ್ಜ್ ಮತ್ತು ವಿನ್‌ಸ್ಟನ್ ಚರ್ಚಿಲ್ ದಿಂಘ್ರಾನನ್ನು ಮೆಚ್ಚಿ **ಪ್ಲುಟಾರ್ಕ್ ಮರಣವಿಲ್ಲದ ಮಹಾವೀರರಿಗೆ** ಹೋಲಿಸಿದರು.
- ಐರ್ಲೆಂಡ್ ಜನತೆ ಮದನ್‌ಲಾಲ್ ದಿಂಘ್ರಾನನ್ನು ದೇಶಕ್ಕಾಗಿ ಪ್ರಾಣತೆತ್ತ ಮಹಾವೀರನೆಂದು ಗೌರವಿಸಿತು.

ಲಾಲ್ ಹರದಯಾಳ್

- ಮೊದಲನೇ ಮಹಾಯುದ್ಧ ಪ್ರಾರಂಭವಾದಾಗ ಕೆಲವು ಕ್ರಾಂತಿಕಾರರು ಬ್ರಿಟಿಷರ ವಿರುದ್ಧ ಜರ್ಮನಿಯೊಂದಿಗೆ ಮಿತ್ರತ್ವ ಬೆಳೆಸಲು ಯೋಚಿಸಿದ್ದರು. ಒಬ್ಬ ಯುವ ತಮಿಳಿಗೆ **ಚಂಪರಾಮನ್ ಪಿಳ್ಳೈ** ಜ್ಯೂರಿಚ್‌ನ ಒಂದು ಸಂಸ್ಥೆಯ ಅಧ್ಯಕ್ಷನಾಗಿದ್ದು ಜರ್ಮನಿ ಪರ ಕೆಲಸ ಮಾಡಲು ಬರ್ಲಿನ್‌ಗೆ ಹೋದನು. ಅಲ್ಲಿ **ಇಂಡಿಯನ್ ನ್ಯಾಷನಲ್ ಪಾರ್ಟಿ** ಸ್ಥಾಪಿಸಿದನು. ಇದರ ಸದಸ್ಯರಾಗಿ **ಲಾಲ್ ಹರದಯಾಳ್**, ತಾರಕನಾಥದಾಸ್, ಚಂದ್ರಕಾಂತ್ ಚಕ್ರವರ್ತಿ ಮತ್ತು ಹರಂಬಲಾಲ್ ಮುಂತಾದವರಿದ್ದರು.
- ವಿದೇಶಗಳಲ್ಲಿ ಕ್ರಾಂತಿಕಾರಕ ಚಳುವಳಿಗೆ ಬೆಂಬಲವು ಪ್ರಥಮವಾಗಿ ದೊರೆತು **ಸಿಖ್ ಗುರು ಭಗವಾನ್‌ದಾಸ್** 1913ರಲ್ಲಿ ವ್ಯಾಂಕೋವರ್‌ಗೆ ಭೇಟಿ ನೀಡಿದಂದಿನಿಂದ ಇವರು ಹಾಂಕಾಂಗ್ ಮತ್ತು ಮಲಯ ದೀಪಗಳಲಿ ಕೆಲಸ ಮಾಡುತಿದರು.
- ಅಮೇರಿಕಾ ಮತ್ತು ಕೆನಡಾಗಳಲ್ಲಿ ಹಲವಾರು ಸಿಖ್‌ರು ನೆಲೆಸಿದ್ದರು. ಇಲ್ಲಿ ತಾರಕನಾಥ್ ಮತ್ತು ಸೋಹಾನ್‌ಸಿಂಗ್ ಬಾಕ್ನ ಕ್ರಾಂತಿಕಾರಿ ವಿಚಾರಗಳನ್ನು ಹರಡಿದರು. ಇವರ ಜೊತೆಯಲ್ಲಿ ಲಾಲ್ ಹರದಯಾಳ್ ಅಮೇರಿಕಾಕ್ಕೆ ಹೋಗಿದ್ದನು. ಇವರು 1857ರ ದಂಗೆಯ ಜ್ಞಾಪಕಾರ್ಥವಾಗಿ 1913 ನವೆಂಬರ್ 1ರಂದು **ಗದ್ದರ್** ಎಂಬ ಪತ್ರಿಕೆ ಹೊರಡಿಸಿದರು. ನಂತರ **ಗದ್ದರ್ ಪಕ್ಷ** ರಚಿಸಿದರು. ಇದರ ಪ್ರಥಮ ಅಧ್ಯಕ್ಷ **ಸೋಹಾನ್‌ಸಿಂಗ್ ಭಕ್ನ**.
- ಗದ್ದರ್ ಪಕ್ಷದ ಕೇಂದ್ರ ಸ್ಥಾನ **ಯುಗಾಂತರ್ ಆಶ್ರಮ** ಅಥವಾ **ಸ್ಯಾನ್‌ಫ್ರಾನ್ಸಿಸ್ಕೋ** ಆಗಿತ್ತು. (ಕಲ್ಕತ್ತಾದಲ್ಲಿ ಯುಗಾಂತರ್ ಪತ್ರಿಕೆಯ ಸ್ಥಾಪನೆಯ ಜ್ಞಾಪಕಾರ್ಥ)
- ಗದ್ದಾರ್ ಪತ್ರಿಕೆ ಪ್ರತಿ ಪ್ರಕಟಣೆಯ ಶಿರೋನಾಮೆಯಲ್ಲಿ ಬ್ರಿಟಿಷ್ ಆಡಳಿತದ ಶತ್ರು ಎಂದು ಮುದ್ರಸಲಾಗುತ್ತಿತ್ತು. ಗದ್ದಾರ್ ಪಕ್ಷದ ರಾಮಚಂದ್ರ ಎಂಬುವವರು ಅಮೇರಿಕಾದ ಅಧ್ಯಕ್ಷ ವಿಲ್ಸನ್‌ರವರ ಉದಾರ ಧೋರಣೆಯನ್ನು ಹೊಗಳಿ ಅವರಿಂದ ಭಾರತದ ಸ್ವಾತಂತ್ರ್ಯಕ್ಕೆ ಬೆಂಬಲ ಪಡೆಯಲೆತ್ನಿಸಿದರು.
- ಬ್ರಿಟಿಷ್ ಸರ್ಕಾರಕ್ಕೆ ಮಣಿದ ಅಮೇರಿಕಾ ಹರದಯಾಳ್ ವಿರುದ್ಧ ಕ್ರಮ ಜರುಗಿತು. ನಂತರ ಹರದಯಾಳ್ ಅವನ ಸ್ನೇಹಿತರು ಜರ್ಮನ್‌ಗೆ ತೆರಳಿ **ಬರ್ಲಿನ್ ನಗರದಲ್ಲಿ ಇಂಡಿಯನ್ ಇಂಡಿಪೆಂಡೆನ್ಸ್ ಕಮಿಟಿ** ಸ್ಥಾಪಿಸಿದರು.
- ಎಂ.ಎನ್. ರಾಯ್ ಅಮೇರಿಕಾದಲ್ಲಿದ್ದ ಜರ್ಮನಿ ರಾಜ ದೂತರೊಡನೆ ಸೇರಿ ಭಾರತಕ್ಕೆ ಶಸ್ತ್ರಗಳನ್ನು ಕಳುಹಿಸುವ ಯೋಜನೆ ರೂಪಿಸಿ ಜರ್ಮನ್‌ಗೆ **ಮಾವರಿಕ್ ಹಡಗಿನ** ಮೂಲಕ ಕಳುಹಿಸಿದರು. ಇವುಗಳನ್ನು ಇಳಿಸಿಕೊಳ್ಳಲು ಒರಿಸ್ಸಾದ ಬಾಲಸೂರಿನ ಬಳಿ ಜತಿನ್ ಮುಖರ್ಜಿ ನೇತೃತ್ವದ ಕ್ರಾಂತಿಕಾರಿಗಳು ಪೊಲೀಸ್ ಪಡೆಯೊಂದಿಗೆ ಹೋರಾಡಿ ಮಡಿದರು.

ಕೊಮಗಾತ ಮಾರು ಘಟನೆ

- ವ್ಯಾಂಕೋವರ್‌ಗೆ ಪಯಣಿಸುವ ಉದ್ದೇಶದಿಂದ ಬಾಬಾ ಗುರುದಿತ್ ಸಿಂಗ್ ಎನ್ನುವ ಪಂಜಾಬಿ **ಕೊಮಗಾತ ಮಾರು** ಎನ್ನುವ ಜಪಾನಿನ ನೌಕೆಯ ಮೂಲಕ ಸಿಖ್ಖರು ಮತ್ತು ಪಂಜಾಬಿ ಮುಸ್ಲಿಂರನ್ನು ವ್ಯಾಂಕೋವರ್‌ಗೆ ಸಾಗಿಸಬೇಕಿತ್ತು. ಇದಕ್ಕೆ ಕೆನಡಾ ಅವಕಾಶ ಕೊಡಲಿಲ್ಲ. ಇದರಿಂದ ನೌಕೆಯು 27 ಸೆಪ್ಟೆಂಬರ್ 1914ರಂದು ಕಲ್ಕತ್ತಾಗೆ ಹಿಂದಿರುಗಬೇಕಾಯಿತು.
- **ಸಶಸ್ತ್ರ ದಂಗೆ:** ಗದ್ದರ್ ಪಕ್ಷದವರು ಪಂಜಾಬಿನಲ್ಲಿ ಕೆಲ ಸೈನಿಕರ ಮನವೊಲಿಸಿ ಫೆಬ್ರವರಿ 21, 1915ರಲ್ಲಿ ಸಶಸ್ತ್ರ ದಂಗೆ ಆರಂಭಿಸಲು ನಿರ್ಧರಿಸಿದರು. ನಂತರ ಇವರನ್ನು ಶಿಕ್ಷಿಸಲಾಯಿತು.
- ಗದ್ದರ್ ಪಕ್ಷದ ಪ್ರಮುಖರೆಂದರೆ ಬರ್ಕತುಲ್ಲಾ (ಮುಸ್ಲಿಂ) ಲಾಲ್ ಹರದಯಾಳ್, ರಾಮಚಂದ್ರ ಮತ್ತು ರಾಸ್ ಬಿಹಾರ್‌ಬೋಸ್ (ಹಿಂದೂಗಳು).

ಚಳುವಳಿಗೆ ತಳಹದಿ ಹಾಕುವಲ್ಲಿ ಗದ್ದರ್ ಪಕ್ಷದವರು ಸಹಕರಿಸಿದರು.

- **ಪ್ಯಾರಿಸ್ ಮತ್ತು ಜಿನಿವಾ:** ಇಲ್ಲಿಂದ ಪಾರ್ಸಿ ಕ್ರಾಂತಿಕಾರಿಯಾಗಿದ್ದ ಮೇಡಂ ಕಾಮಾ ತನ್ನದೇ ಆದ ಪಾತ್ರ ವಹಿಸಿದ್ದರು. (ಪ್ಯಾರಿಸ್‌ನಲ್ಲಿದ್ದ ಮತ್ತೊಬ್ಬ ಕ್ರಾಂತಿಕಾರಿ – ಸರ್ದಾರ್ ಸಿಂಗ್)
- ಪಂಜಾಬಿನ **ಉದಾಮ್‌ಸಿಂಗ್** ಲಂಡನ್‌ಗೆ ತೆರಳಿ ಮಾರ್ಚ್ 13, 1940ರಂದು ಸರ್ ಓ ಮೈಕೆಲ್ ಡಯೆರ್‌ನನ್ನು ಕಾಕ್ಸ್‌ಟನ್ ಹಾಲ್‌ನಲ್ಲಿ ಕೊಲೆ ಮಾಡಿದನು.

ಕ್ರಾಂತಿಕಾರಿಗಳ ಧಮನಕ್ಕೆ ಜಾರಿಗಳಿಸಿದ ಕಾಯ್ದೆಗಳು

- ರಾಜದ್ರೋಹಗಳ ಪ್ರತಿಬಂಧಕ ಕಾಯ್ದೆ 1907
- ಸ್ಫೋಟಕ ವಸ್ತುಗಳ ಕಾಯ್ದೆ 1908
- ವೃತ್ತ ಪತ್ರಿಕೆಗಳ (ಅಪರಾಧ ಪ್ರೇರೇಪಿಸುವ) ಕಾಯ್ದೆ 1908
- ಪತ್ರಿಕಾ ಕಾಯ್ದೆ The Press Act 1910

ಕ್ರಾಂತಿಕಾರಿ ರಾಷ್ಟ್ರೀಯವಾದಿಗಳ ಚಳುವಳಿಗಳು – (ದ್ವಿತೀಯ ಹಂತ)

ಚಳುವಳಿಗೆ ಪ್ರೇರಣೆ ನೀಡಿದ ಪ್ರಮುಖ ಅಂಶಗಳು

- ಗಾಂಧೀಜಿ ನೇತೃತ್ವದ ಅಸಹಕಾರ ಚಳುವಳಿ ವಾಸ್ತವವಾಗಿ ವಿಫಲವಾಗಿತ್ತು.
- ಈ ಸಮಯದಲ್ಲಿ ಆತ್ಮಶಕ್ತಿ, ಸಾರಥಿ, ಬಿಜೋಲಿ ಪತ್ರಿಕೆಗಳ (ಬಂಗಾಳಿ) ಲೇಖನಗಳು.
- ಸಚಿನ್ ಸನ್ಯಾಲ್‌ರ – ಬಂದಿಜೀವನ್ (ಹಿಂದಿ ಮತ್ತು ಗುರುಮುಖಿ).
- ಸರತ್‌ಚಂದ್ರ ಚಟರ್ಜಿ –ಪಾತರ್‌ದಬಿ (ಕಾದಂಬರಿ).
- ಬಂಗಾಳದ ಅನುಶೀಲನಾ ಸಮಿತಿ ಮತ್ತು ಯುಗಾಂತರ ಪತ್ರಿಕೆಗಳು.
- 1924ರ ಕಾನ್ಪುರದಲ್ಲಿ ತೀವ್ರವಾದಿಗಳು ಸಭೆ ಕರೆದರು. ಸಚಿನ್ ಸನ್ಯಾಲ್ ಜೋಗೇಶ್‌ಚಂದ್ರ ಚಟರ್ಜಿ, ರಾಂಪ್ರಸಾದ್ ಬಿಸ್ಮಿಲ್ಲಾ ಭಾಗವಹಿಸಿದ್ದರು. ಅಲ್ಲದೆ ಭಗತ್‌ಸಿಂಗ್ ಶಿವಶರ್ಮ, ಸುಖದೇವ್, ಭಗವತಿ ಶರಣ್, ಹೊಪ್ರ ಮತ್ತು ಚಂದ್ರಶೇಖರ್ ಆಜಾದ್ ಭಾಗವಹಿಸಿದರು.
- ಕಾನ್ಪುರ ಸಭೆಯ ನಿರ್ಣಯದಂತೆ ಹಿಂದೂಸ್ತಾನ್ ರಿಪಬ್ಲಿಕನ್ ಅಸೋಶಿಯೇಷನ್ ಸಂಘ ಸ್ಥಾಪಿಸಿದರು. ನಂತರದಲ್ಲಿ ಸೆಪ್ಟೆಂಬರ್ 1928ರಲ್ಲಿ ಈ ಸಂಘವನ್ನು ಪುನರ್ರಚಿಸಿ **"Hindustan Socialist Republican Association (HSRA)"** ಎಂದು ಹೆಸರಿಸಲಾಯಿತು. ಇದು ಬಂಗಾಳ, ಬಿಹಾರ, ಯುನೈಟೆಡ್ ಪ್ರಾವಿನ್ಸ್, ದೆಹಲಿ, ಪಂಜಾಬ್ ಮತ್ತು ಮದ್ರಾಸ್‌ಗಳಲ್ಲಿ ಶಾಖೆಗಳನ್ನು ಹೊಂದಿತ್ತು.

25.4 ಭಾರತದಲ್ಲಿ ಸಮಾಜವಾದ ಮತ್ತು ಮತೀಯವಾದದ ಬೆಳವಣಿಗೆ

- ಸಮಾಜವಾದವು ಆಧುನಿಕ ಬಂಡವಾಳಶಾಹಿಯಿಂದ ಸ್ಥಾಪಿತವಾದ ಕಾರ್ಖಾನೆಗಳ ಕಾರ್ಮಿಕರ ಶೋಷಣೆಯ ಪ್ರತಿಕ್ರಿಯೆಯಾಗಿ ಬೆಳೆದ ತತ್ವವಾಗಿದೆ.
- ಗಾಂಧೀಜಿಯವರು ಸ್ವದೇಶಿ, ಅಸಹಕಾರ ಚಳುವಳಿಗಳ ಮೂಲಕ ಕಾರ್ಮಿಕರನ್ನು ಸ್ವಾತಂತ್ರ್ಯ ಚಳುವಳಿಯ ಮುಖ್ಯವಾಹಿನಿಗೆ ತಂದರು.
- ಲಾಲ್ ಹರದಯಾಳ್ 1912ರಲ್ಲಿ ಕಾರ್ಲ್‌ಮಾರ್ಕ್ಸ್‌ರ ಜೀವನ ಚರಿತ್ರೆಯನ್ನು ಬರೆದು **ಮಾಡ್ರನ್ ರಿವ್ಯೂ** ಪತ್ರಿಕೆಯಲ್ಲಿ ಪ್ರಕಟಿಸಿದರು. ಇದೇ ರೀತಿ ರಾಮಕೃಷ್ಣ ಪಿಳ್ಳೈ ಮಲಯಾಳಿ ಭಾಷೆಯಲ್ಲಿ ಕಾರ್ಲ್‌ಮಾರ್ಕ್ಸ್‌ರ ಜೀವನ ಚರಿತ್ರೆ ಬರೆದರು.
- ಬಿ.ಜಿ. ತಿಲಕರ ಕೇಸರಿ, ಹಾರ್ನಿಮನ್‌ರ ಬಾಂಬೆ ಕ್ರಾನಿಕಲ್ ರಮಾನಂದ ಚಟರ್ಜಿಯವರ ಮಾಡ್ರನ್ ರಿವ್ಯೂ ಮುಂತಾದವು ರಷ್ಯಾದ ಕ್ರಾಂತಿ ಮತ್ತು ಲೆನಿನ್ ಬಗ್ಗೆ ಪ್ರಚಾರಿಸಿದವು.
- ಭಾರತದಲ್ಲಿ ಮೊದಲಿಗೆ ಕಮ್ಯುನಿಷ್ಟ್ ಪಾರ್ಟಿ 1920ರಲ್ಲಿ ಸ್ಥಾಪಿಸಿದ ಎಂ.ಎನ್. ರಾಯ್ ಇವರು ರಷ್ಯಾ ಕಮ್ಯುನಿಷ್ಟ್ ಇಂಟರ್‌ನ್ಯಾಷನಲ್ ಮತ್ತು ಭಾರತ ಕಮ್ಯುನಿಷ್ಟರಿಗೆ ಕೊಂಡಿಯಾದರು.
- 1924ರಲ್ಲಿ ರಷ್ಯಾಕ್ಕೆ ಭೇಟಿ ನಿಡಿದ ಎಂ.ಎನ್. ರಾಯ್ ಯೂರೋಪಿನ ಅನೇಕ ಕೇಂದ್ರಗಳಿಂದ ಇಂಗ್ಲೀಷ್‌ನಲ್ಲಿ **ವ್ಯಾಂಗಾರ್ಡ್ ಪತ್ರಿಕೆ** ಪ್ರಕಟಿಸಿದರು. ನಂತರ ಇದನ್ನು **ದಿ ಮೊಸೆಸ್ ಆಫ್ ಇಂಡಿಯಾ** ಎಂದು ನಾಮಕರಣ ಮಾಡಲಾಯಿತು.
- 1923ರಲ್ಲಿ ಎಸ್.ಎ. ಡಾಂಗೆ **ಸೋಷಿಯಾಲಿಸ್ಟ್** ಎಂಬ ಇಂಗ್ಲೀಷ್ ಪತ್ರಿಕೆ ಮತ್ತು ಕಲ್ಕತ್ತಾದಲ್ಲಿ **ಜನವಾಣಿ** ಪತ್ರಿಕೆಗಳು ಪ್ರಕಟವಾದವು.
- ಸಮಾಜವಾದದ ತತ್ವದ ಮೇಲೆ 1918ರಲ್ಲಿ ಕಿಸಾನ್ ಸಭಾ ರೈತ ಸಂಘಟನೆ ಅಲಹಾಬಾದ್‌ನಲ್ಲಿ ಸ್ಥಾಪಿತವಾಯಿತು.
- ಮೋತಿಲಾಲ್ ನೆಹರು ಮತ್ತು ಜವಾಹರ್‌ಲಾಲ್ ನೆಹರು ಕಮ್ಯುನಿಷ್ಟರ ಸಹಾಯದಿಂದ ರಷ್ಯಾಕ್ಕೆ ಭೇಟಿ ನೀಡಿ ತಮ್ಮ ಅನುಭವಗಳನ್ನು ಸೋವಿಯತ್ ರಷ್ಯಾ ಪುಸ್ತಕದಲ್ಲಿ ಬರೆದರು.
- 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರು ತಾವೊಬ್ಬ ಸಮಾಜವಾದಿ ಎಂದರು. 1936ರ ಲಕ್ನೋ ಅಧಿವೇಶನದಲ್ಲಿ ಮತ್ತೆ ಅಧ್ಯಕ್ಷರಾದ ಜವಾಹರಲಾಲ್ ನೆಹರು ಕಾಂಗ್ರೆಸ್ ಕಾರ್ಯಕಾರಿ ಸದಸ್ಯರಾಗಿ ಸಮಾಜವಾದಿಗಳಾದ ಜೆಪಿ ನಾರಾಯಣ್, ನರೇಂದ್ರದೇವ್ ಮತ್ತು ಅಚ್ಯುತ್ ಪಟ್ಟವರ್ಧನ್‌ರನ್ನು ಸೇರಿಸಿಕೊಂಡರು.
- ಜವಾಹರಲಾಲ್ ನೆಹರುರವರು ಸಮಾಜವಾದದ ಸಮರ್ಥಕರಾಗಿ ಕಾರ್ಯಕಾರಿ ಸಮಿತಿಯಿಂದ ಸರೋಜಿನಿ ನಾಯ್ಡು ಅವರನ್ನು ಹೊರಗಿಟ್ಟರು. ಇದು ಗಾಂಧಿ ಮತ್ತು ನೆಹರು ನಡುವೆ ಭಿನ್ನಾಭಿಪ್ರಾಯವಾಯಿತು.
- **ಜಾರ್ಜ್ ಅಲ್ಲಿಸನ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸಿ, ಬಾಂಬೆ ಮತ್ತು ಬಂಗಾಳದ ಕಾರ್ಮಿಕ ಚಳುವಳಿಯಲ್ಲಿ ಭಾಗವಹಿಸಿದರು.**
- ಫಿಲಿಪ್‌ಸ್ಪ್ರಾಟ್ ಎಂಬುವನು 1926 ಡಿಸೆಂಬರ್‌ನಲ್ಲಿ ಭಾರತಕ್ಕೆ

ಬಂದು ಸೋವಿಯತ್ ರಷ್ಯಾದ ಹಣದಿಂದ **ಲೇಬರ್ ರೀಸರ್ಚ್ ಆರ್ಗನೈಜೇಷನ್** ಸ್ಥಾಪಿಸಲು ಮುಂದಾದನು. 1920 ಅಕ್ಟೋಬರ್‌ನಲ್ಲಿ ಕಾರ್ಮಿಕರು ಮತ್ತು ಕೃಷಿಕರ ಒಕ್ಕೂಟವನ್ನು ಮೀರತ್‌ನಲ್ಲಿ ಸ್ಥಾಪಿಸಿದನು. ಇದರ ಶಾಖೆಗಳು ದೆಹಲಿ, ಅಹ್ಮದಾಬಾದ್, ಗೋರಖ್‌ಪುರ, ಝೂನ್ಸಿಯಲ್ಲಿದ್ದವು.

- 1928ರಲ್ಲಿ ಕಲ್ಕತ್ತಾದ ಕಮ್ಯುನಿಷ್ಟ್ ಸಮಾವೇಶ – ಇಲ್ಲಿ ಪಕ್ಷದ ಚಟುವಟಿಕೆ ಮತ್ತು ಪ್ರಚಾರ ಕಾರ್ಯವನ್ನು ಕಮ್ಯುನಿಷ್ಟ್ ಪಾರ್ಟಿ ಆಫ್ ಇಂಡಿಯಾ ಕೈಗೊಳ್ಳಬೇಕೆಂದು ತಿಳಿಸಲಾಯಿತು.
- ಮಾಸ್ಕೋದ ಕಮ್ಯುನಿಷ್ಟ್ ಇಂಟರ್‌ನ್ಯಾಷನಲ್‌ಗೆ **ಮುಜಾಫರ್ ಅಹ್ಮದ್‌ರ** ನಿಯೋಗವನ್ನು ಕಳುಹಿಸಲಾಯಿತು.

ಕಾನ್ಪುರ ಪಿತೂರಿ ಮೊಕದ್ದಮೆ – 1924

- ಎಂ.ಎನ್. ರಾಯ್‌ರ ಅನುಯಾಯಿ ನಳಿನಿಗುಪ್ತ ಮತ್ತು ಅಬನಿ ಚಟರ್ಜಿಯವರು ಭಾರತಕ್ಕೆ **ಮಾರ್ಕ್ಸ್‌ವಾದ** ಪ್ರಚಾರ ಮಾಡಲು ಬಂದರು. ಈ ಸಮಯದಲ್ಲಿ ಭಾರತೀಯ ಮಾರ್ಕ್ಸ್ ವಾದಿಗಳಾದ ಬೊಂಬಾಯಿಯ ಎಸ್.ಎ. ಡಾಂಗೆ, ಕಲ್ಕತ್ತಾದ ಮುಜಾಫರ್ ಅಹ್ಮದ್, ಮದ್ರಾಸ್‌ನ ಸಿಂಗಾರವೇಲು, ಪಂಜಾಬಿನ ಗುಲಾಂ ಹುಸೇನ್ ಮುಂತಾದವರಿದ್ದರು.
- ಮೇ ದಿನಾಚರಣೆ, ಸಾರ್ವಜನಿಕ ಸಭೆ, ಕಾರ್ಮಿಕರ ಮುಷ್ಕರಗಳನ್ನು ಸಂಘಟಿಸುವುದರಲ್ಲಿ ತೊಡಗಿದ್ದ ನಳಿನಿಗುಪ್ತ ಮತ್ತು ಅಬನಿ ಚಟರ್ಜಿಯವರು ಬಂಗಾಳದ ಕ್ರಾಂತಿಕಾರಿಗಳೊಡನೆ ಸಂಪರ್ಕವಿಟ್ಟುಕೊಂಡಿದ್ದರಿಂದ ಈ ಚಟುವಟಿಕೆಗಳ ಮೇಲೆ ಕ್ರಮ ಕೈಗೊಳ್ಳಲು 13 ಜನರ ಮೇಲೆ ಪಿತೂರಿ ಮೊಕದ್ದಮೆ ಹೂಡಿ ಕಾನ್ಪುರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಆಪಾದಿತರು ಮಾಸ್ಕೋದ ಕಮ್ಯುನಿಷ್ಟ್ ಇಂಟರ್‌ನ್ಯಾಷನಲ್ ಏಜೆಂಟರಾದ ಕಾರಣ ಅವರ ಚಟುವಟಿಕೆಗಳು ಬ್ರಿಟಿಷ್ ವಿರೋಧಿಯಾಗಿದ್ದವು. ಇದರಲ್ಲಿ ಪ್ರಮುಖ ಆಪಾದಿತರಾದ ಎಸ್.ಎ. ಡಾಂಗೆ ಮುಜಾಫರ್ ಅಹ್ಮದ್, ಷೌಕತ್ ಉಸ್ಮಾನಿ ಮತ್ತು ನಳಿನಿ ಗುಪ್ತರಿಗೆ 4 ವರ್ಷ ಸಜೆ ವಿಧಿಸಲಾಯಿತು.

ಮೀರತ್ ಪಿತೂರಿ ಮೊಕದ್ದಮೆ – 1929

- 1919ರಲ್ಲಿ ಮಾಸ್ಕೋದಲ್ಲಿ ಸ್ಥಾಪನೆಯಾದ ಕಮ್ಯುನಿಷ್ಟ್ ಇಂಟರ್‌ನ್ಯಾಷನಲ್ ಎಲ್ಲಾ ದೇಶಗಳಲ್ಲಿ ಕಾರ್ಮಿಕ ಗಣರಾಜ್ಯ ಸ್ಥಾಪಿಸುವ ಉದ್ದೇಶ ಹೊಂದಿತ್ತು. ಇದು ಭಾರತದಲ್ಲಿ ಜಾರಿಗೆ ಬರುವಂತಿತ್ತು. ಕಮ್ಯುನಿಷ್ಟ್ ಇಂಟರ್‌ನ್ಯಾಷನಲ್ ಕಮ್ಯುನಿಷ್ಟ್ ಪಕ್ಷ ಮತ್ತಿತರ ಕಾರ್ಮಿಕ ಮತ್ತು ರೈತ ಪಕ್ಷಗಳ ಕಾರ್ಯ ಚಟುವಟಿಕೆಗಳಿಗೆ ಹಣ ಸಹಾಯ ನೀಡಿ ಸಂಘ ಸಂಸ್ಥೆಗಳನ್ನು ಪತ್ರಿಕಾ ಪ್ರಕಟಣೆ, ಮತ್ತಿತರ ಚಳುವಳಿಗೆ ಉಪಯೋಗಿಸಲಾಗಿದೆ. ಈ ವಿರೋಧಿ ಚಟುವಟಿಕೆಗಳಲ್ಲಿ ವಿದೇಶಿಯರೊಂದಿಗೆ ಆಪಾದಿತರು ಪಿತೂರಿಯಲ್ಲಿ ತೊಡಗಿದ್ದಾರೆಂದು ಸೆಷನ್ ನ್ಯಾಯಾಲಯ ತಿಳಿಸಿತು.
- ಪ್ರಮುಖ ಆಪಾದಿತರಾದ 27 ಜನರಿಗೆ ಜೀವಾವಧಿಯಿಂದ 3 ವರ್ಷಗಳವರೆಗೆ ಶಿಕ್ಷೆ ವಿಧಿಸಲಾಯಿತು. ಮುಜಾಫರ್ ಅಹ್ಮದ್‌ಗೆ ಜಿವಾವಧಿ ಶಿಕ್ಷೆ, ಎಸ್.ಎ. ಡಾಂಗೆ, ಎಸ್.ವಿ. ಘಾಟೆ, ಕೆ.ಎನ್. ಜೋಗೆಲ್ಕರ್, ಆರ್.ಎಸ್. ನಿಂಬಾಳ್ಕರ್ ಮತ್ತು ಸ್ಟ್ರಾಟರಿಗೆ 12 ವರ್ಷ ಶಿಕ್ಷೆ, ಬ್ರಾಡ್ಲಿ, ಮಿರಾಜ್ಕರ್ & ಉಸ್ಮಾನಿಯವರಿಗೆ 10 ವರ್ಷ ಗಡಿಪಾರು ಶಿಕ್ಷೆ ನೀಡಲಾಯಿತು.

ಕಾಂಗ್ರೆಸ್ ಸೋಷಿಯಾಲಿಸ್ಟ್ ಪಾರ್ಟಿ – 1934

- 1931ರಲ್ಲಿ **ಬಿಹಾರ್ ಸೋಷಿಯಾಲಿಸ್ಟ್ ಪಕ್ಷ** ಸ್ಥಾಪನೆಯಾಯಿತು. ಸಮಾಜವಾದದಲ್ಲಿ ನಂಬಿಕೆಯಿದ್ದ ಕಾಂಗ್ರೆಸ್ಸಿಗರು 1934ರಲ್ಲಿ ಪಾಟ್ನಾ, ಮುಂಬಯಿಯಲ್ಲಿ ಸಭೆಯನ್ನು ಸೇರಿ **ಕಾಂಗ್ರೆಸ್ ಸೋಶಿಯಾಲಿಸ್ಟ್ ಪಾರ್ಟಿ** ಸ್ಥಾಪಿಸಿದರು. ಇದರ ಕಾರ್ಯದರ್ಶಿಯಾಗಿ ಜೆಪಿ. ನಾರಾಯಣ್ ಹಾಗೂ ಸದಸ್ಯರಾಗಿ ನರೇಂದ್ರದೇವ, ರಾಮಮನೋಹರ್ ಲೋಹಿಯಾ, ಕಮಲಾದೇವಿ ಚಟ್ಟೋಪಾಧ್ಯಾಯ, ಯುಸುಫ್ ಮೆಹ್ರಲಿ, ಮಿನೂ ಮಸಾನಿ ಮತ್ತು ಎಸ್.ಎಂ. ಜ್ಯೋತಿ... ಮುಂತಾದವರಿದ್ದರು.
- **ಪಕ್ಷದ ವೈಶಿಷ್ಟ್ಯತೆ:**– ಕಾಂಗ್ರೆಸ್ಸಿನ ಸದಸ್ಯರಲ್ಲದವರು ಈ ಪಕ್ಷಕ್ಕೆ ಸೇರುವಂತಿರಲಿಲ್ಲ.
- ಸಿ.ಎಸ್.ಪಿ. ಪಕ್ಷವು 1934ರಲ್ಲಿ ಬೊಂಬಾಯಿಯಲ್ಲಿನ ಪ್ರಥಮ ಸಭೆಯಲ್ಲಿ 15 ಅಂಶಗಳ ಕಾರ್ಯಕ್ರಮ ಅಂಗೀಕರಿಸಿತು.
- ಜಯಪ್ರಕಾಶ್‌ರವರು ಗಾಂಧೀಜಿಯ ಅಹಿಂಸಾ ನೀತಿ ಮತ್ತು ರಾಜಕೀಯ ಧರ್ಮವನ್ನು ಟೀಕಿಸುತ್ತಿದ್ದರು. ಕಾಂಗ್ರೆಸ್ ಸೋಷಿಯಾಲಿಷ್ಟ್ ಮತ್ತು ಹಳೆಯ ಕಾಂಗ್ರೆಸಿಗರ ನಡುವೆ ಭಿನ್ನಾಭಿಪ್ರಾಯಗಳಾದವು. ಗಾಂಧೀಜಿ ಸೋಷಿಯಾಲಿಷ್ಟ್ ಪಕ್ಷದ ವಿರೋಧಿಯಾಗಿದ್ದರು.
- 1935ರಲ್ಲಿ ಬ್ರಿಟಿಷ್ ಸರ್ಕಾರ ಭಾರತದಲ್ಲಿ ಕಮ್ಯುನಿಷ್ಟ್ ಪಕ್ಷವನ್ನು ನಿಷೇಧಿಸಿತು.
- ಕಮ್ಯುನಿಷ್ಟ್ ಚಳುವಳಿಯಿಂದಾಗಿ ಜೆ.ಪಿ. ನಾರಾಯಣರು ಹಾಜಾರಿಬಾಗ್ ಜೈಲಿನಲ್ಲಿ ಬಂಧಿತರಾಗಿದ್ದರು. 1940ರಲ್ಲಿ ಅವರು ಜೈಲಿನಿಂದ ತಪ್ಪಿಸಿಕೊಂಡರು.
- ಜಯಪ್ರಕಾಶ್‌ರವರು ಶಸ್ತ್ರಾಸ್ತ್ರ ಹೋರಾಟದ ಮೂಲಕ ಮಾತ್ರ ಗುರಿ ಸಾಧಿಸಬಹುದು ಎಂದು ತಿಳಿಸಿ ಕಾಂಗ್ರೆಸ್‌ನ ಅಹಿಂಸಾ ನೀತಿಗೆ ವಿರುದ್ಧವಾದರು. 1940ರಲ್ಲಿ ಸೋಷಿಯಾಲಿಸ್ಟ್ ಪಕ್ಷ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತು.
- 1948ರಲ್ಲಿ ಸೋಷಿಯಾಲಿಸ್ಟರು ಕಾಂಗ್ರೆಸ್‌ನೊಳಗಿನ ಗುಂಪುಗಾರಿಕೆ ವಿರೋಧಿಸಿ ಕಾಂಗ್ರೆಸ್‌ನಿಂದ ಹೊರಹೋಗಿ **ಸೋಸಿಯಾಲಿಸ್ಟ್ ಪಾರ್ಟಿ ಆಫ್ ಇಂಡಿಯಾ ಪಕ್ಷ** ಸ್ಥಾಪಿಸಿದರು. 1977ರಲ್ಲಿ ಸೋಶಿಯಾಲಿಸ್ಟ್ ಪಕ್ಷವು ಜನತಾ ಪಕ್ಷದೊಂದಿಗೆ ವಿಲೀನವಾಯಿತು.
- ಇನ್ನು ಕಮ್ಯುನಿಷ್ಟರು ಕ್ವಿಟ್ ಇಂಡಿಯಾ ಚಳುವಳಿಯಿಂದ ದೂರ ಉಳಿದಿದ್ದರು.

- 1945ರಲ್ಲಿ ಕಮ್ಯುನಿಷ್ಟರನ್ನು ಕಾಂಗ್ರೆಸ್ಸಿನಿಂದ ಹೊರ ಹಾಕಲಾಯಿತು.
- 1961ರಲ್ಲಿ ವಿಜಯವಾಡದಲ್ಲಿ ಭಾರತೀಯ ಕಮ್ಯುನಿಷ್ಟ್ ಪಕ್ಷವು ಇಬ್ಭಾಗವಾಯಿತು. ಒಂದು ಭಾಗವು ಸಿಪಿಐ(ಎಂ) ಎಂದು ಕರೆದುಕೊಂಡು ಕೇರಳ ಮತ್ತು ವೆಸ್ಟ್ ಬಂಗಾಳದಲ್ಲಿ ತನ್ನ ಬೆಂಬಲ ಪಡೆದುಕೊಂಡಿದೆ.

ಕಾರ್ಮಿಕ ಸಂಘಗಳು

- 1877 ರಲ್ಲಿ ನಾಗಪುರದ **ಎಂಪ್ರೆಸ್ ಮಿಲ್‌ನ ಕಾರ್ಮಿಕರ ಮುಷ್ಕರವೇ** ಮಿಲ್ ಕಾರ್ಮಿಕರ ಮೊದಲ ಮುಷ್ಕರವಾಗಿದೆ.
- ಶಶಿಪಾದ ಬ್ಯಾನರ್ಜಿಯವರು ಕಲ್ಕತ್ತಾದಲ್ಲಿ 1870ರಲ್ಲಿ ವರ್ಕಿಂಗ್ ಮೆನ್ಸ್ ಕ್ಲಬ್ ಸಂಸ್ಥೆ ಸ್ಥಾಪಿಸಿ ಶ್ರಮಜೀವಿ ಪತ್ರಿಕೆಯ ಮೂಲಕ ಕಾರ್ಮಿಕರಿಗೆ ಶಿಕ್ಷಣ ನೀಡಲು ಮುಂದಾದರು.
- 1890ರ **ಬಾಂಬೆ ಮಿಲ್ ಹ್ಯಾಂಡ್ಸ್ ಅಸೋಸಿಯೇಷನ್** ಇದು ಮೊದಲ ಕಾರ್ಮಿಕರ ಸಂಘ. ಎನ್.ಎಂ. ಲೋಖಾಂಡೆ – ಭಾರತದ ಮೊದಲ ಕಾರ್ಮಿಕ ನಾಯಕ.
- ಬಿ.ಪಿ. ವಾಡಿಯಾರವರು 1918ರಲ್ಲಿ ಮದ್ರಾಸ್ಸಿನಲ್ಲಿ **'ಮದ್ರಾಸ್ ಲೇಬರ್ ಯೂನಿಯನ್'** ಸ್ಥಾಪಿಸಿದರು. ಇದು ಭಾರತದ ಮೊದಲ ಆಧುನಿಕ ಟ್ರೇಡ್ ಯೂನಿಯನ್.
- 1920ರಲ್ಲಿ **ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್** (ಎಐಟಿಯುಸಿ) ಸ್ಥಾಪನೆ. ಇದರ ಮೊದಲ ಅಧಿವೇಶನ ಅಕ್ಟೋಬರ್ 1920ರಲ್ಲಿ ಮುಂಬಯಿಯಲ್ಲಿ ನಡೆಯಿತು. ಅಧ್ಯಕ್ಷರು ಲಾಲ ಲಜಪತರಾಯ್.
- 1926ರಲ್ಲಿ **ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್** ಭಾರತದಲ್ಲಿ ಜಾರಿಗೆ ಬಂದು ಕಾನೂನಾತ್ಮಕ ರಕ್ಷಣೆ ದೊರೆಯಿತು.
- 1941ರಲ್ಲಿ ಲಾಹೋರ್‌ನಲ್ಲಿ ಕಾರ್ಮಿಕ ಸಂಘಗಳು ಅಧಿವೇಶನ ನಡೆಸಿ ಹೊಸದಾದ ಇಂಡಿಯನ್ ಫೆಡರೇಷನ್ ಆಫ್ ಲೇಬರ್ ಸಂಸ್ಥೆ ಕಟ್ಟಿದರು.
- 1944ರ ಮೇನಲ್ಲಿ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐಎನ್‌ಟಿಸಿಯು) ಸ್ಥಾಪಿತವಾಗಿ ಇದು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುತ್ತಾ ಗಾಂಧೀಜಿ ತತ್ವದ ಆಧಾರದ ಮೇಲೆ ಚಳುವಳಿ ಮುಂದುವರಿಸಿತು. ಚಳುವಳಿಯ ದೌರ್ಬಲ್ಯತೆ ಎಂದರೆ ಕಾರ್ಮಿಕರು ಅವಿದ್ಯಾವಂತರಾಗಿದ್ದರು.

ಮತೀಯವಾದದ ಬೆಳವಣಿಗೆ

- ಬ್ರಿಟಿಷ್ ಅಧಿಕಾರಿಗಾಳದ ಥಿಯೋಡರ್ ಬೆಕ್ ಮಾರಿಸನ್ ಆರ್ಕಿಬಲ್ಡ್ ಮತ್ತು ವೈಸರಾಯ್ ಲಾರ್ಡ್ ಮಿಂಟೋ ಮುಸ್ಲಿಂ ಕೋಮುವಾದಕ್ಕೆ ಹೊಸ ತಿರುವು ನೀಡಿದರು.
- ಮುಸ್ಲಿಂ ನಿಯೋಗದ ನೇತೃತ್ವದ ನಾಯಕ ಆಗಾಖಾನ್ 1906 ಅಕ್ಟೋಬರ್ 1ರಂದು ಲಾರ್ಡ್ ಮೀಂಟೋನನ್ನು ಭೇಟಿಯಾಗಿ

ಇಸ್ಲಾಂ ಹಕ್ಕುಗಳ ಸನ್ನದು ಎನ್ನುವರು.
- ಮುಸ್ಲಿಂ ನಾಯಕರು ಢಾಕಾದಲ್ಲಿ **1906 ಡಿಸೆಂಬರ್ 30**ರಂದು ಸಭೆ ಸೇರಿ **ಮುಸ್ಲಿಂ ಲೀಗ್** ಸ್ಥಾಪಿಸಿದರು.
- ಪ್ರತ್ಯೇಕ ಪಾಕ್ ರಚನೆಗೆ ಇಬ್ಬರು ಪ್ರಮುಖ ಕಾರಣಕರ್ತರು ವಜಾರ್ ಉಲ್ ಮುಲ್ಕ್ ಮತ್ತು ಜಕಾಉಲ್ಲಾ.
- 1909ರ ಮಿಂಟೊ ಮಾರ್ಲೆ ಕಾಯ್ದೆಯು ಮುಸ್ಲೀಂ ಲೀಗ್ ಬೇಡಿಕೆಯಂತೆ ಪ್ರತ್ಯೇಕತಾ ಮತ ಕ್ಷೇತ್ರಗಳನ್ನು ಮುಸ್ಲಿಂರಿಗೆ ನೀಡಲಾಯಿತು.
- 1913 ರಿಂದ ಮುಸ್ಲಿಂ ಲೀಗಿನ ಉದಾರವಾದಿ ನಾಯಕರೆಂದರೆ – ಮಹಮ್ಮದ್ ಆಲಿ, ವಜಹರ್ ಉಲ್ ಹಕ್, ವಜೀರ್ ಹುಸೇನ್, ಹಸನ್ ಮುಸ್ಲಿಂ ಇಮಾಂ ಮುಂತಾದವರು.
- 1934ರ ನಂತರ ಮಹ್ಮದ್ ಆಲಿ ಜಿನ್ನಾ ಕೋಮುವಾದಿಯಾಗಿ ಮುಸ್ಲಿಂ ಲೀಗಿನ ಪ್ರಶ್ನಾತೀತ ನಾಯಕನಾದನು. ಕಾಂಗ್ರೆಸ್ ವಿರೋಧಿಸಲು ಕಾರಣ ಜಿನ್ನಾನಂತಹ ರಾಷ್ಟ್ರೀಯ ಮುಸ್ಲೀಮನನ್ನು ಮುಸ್ಲಿಂ ನಾಯಕನಾಗಿ ಗುರುತಿಸದೆ ಪಕ್ಷ ಸಂಪ್ರದಾಯವಾದಿಗಳಾದ ಆಲಿ ಸಹೋದರರನ್ನು ಗಾಂಧೀಜಿ ಗುರುತಿಸಿದರು.
- ಮುಸ್ಲಿಮರಿಗೆ ನ್ಯಾಯಬೇಕೇ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಅಧಿಕಾರ ಬೇಕೇ ಎಂಬುದನ್ನು ನಿರ್ಧರಿಸಲು 1938ರಲ್ಲಿ ಮುಸ್ಲಿಂ ಲೀಗ್ ಒಂದು ಆಯೋಗವನ್ನು ಪಿರ್‌ಪುರ್‌ನ ರಾಜನ ನೇತೃತ್ವದಲ್ಲಿ ನೇಮಿಸಿತು.
- 1930ರ ಮುಸ್ಲಿಂ ಲೀಗ್‌ನ ಅಲಹಾಬಾದ್ ಅಧಿವೇಶನದಲ್ಲಿ ಮಹ್ಮದ್ ಇಕ್ಬಾಲ್‌ರ ಸ್ಫೂರ್ತಿದಾಯಕ ಹೇಳಿಕೆಯೇ ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ಉಗಮದ ಸ್ಪಷ್ಟ ಸ್ವರೂಪವೆಂದು ತಿಳಿದು **ಇಕ್ಬಾಲರನ್ನು ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ಜನಕನೆಂದು** ಕರೆಯಲಾಗಿದೆ.
- ಪ್ರತ್ಯೇಕ ಮುಸ್ಲಿಂ ರಾಷ್ಟ್ರ **ಪಾಕಿಸ್ತಾನ** ಎಂಬ ಹೆಸರು ನೀಡಿದವನು ಕೇಂಬ್ರಿಡ್ಜ್ ವಿ.ವಿ. ವಿದ್ಯಾರ್ಥಿ **ರಹಮತ್ ಆಲಿ**, ಇವನು ಪಂಜಾಬ್, ವಾಯುವ್ಯ ಗಡಿ ಪ್ರಾಂತ್ಯ, ಕಾಶ್ಮೀರ, ಸಿಂಧ್ ಮತ್ತು ಬಲೂಚಿಸ್ತಾನ ಸೇರಿ ಮೊದಲ 4 ಪ್ರಾಂತ್ಯಗಳ ಮೊದಲ ಅಕ್ಷರ – 5ನೇ ಪ್ರಾಂತ್ಯದ ಕೊನೆಯ 2 ಅಕ್ಷರಗಳನ್ನು ಸೇರಿಸಿ ಪಾಕಿಸ್ತಾನ ಎಂದನು (1933)
- ರಹಮತ್ ಆಲಿ "ನಾವು ಮುಸ್ಲಿಂರು ಮತ್ತು ಹಿಂದೂಗಳು ಸಹಭೋಜನ ಮಾಡುವುದಿಲ್ಲ. ಅಂತರ್ವಿವಾಹವಿಲ್ಲ. ನಮ್ಮ ರಾಷ್ಟ್ರೀಯ ಆಚರಣೆಗಳು ಮತ್ತು ಕ್ಯಾಲೆಂಡರ್‌ಗಳು, ಕೊನೆಗೆ ಆಹಾರ ಪದ್ಧತಿ ಮತ್ತು ಉಡುಗೆಗಳಲ್ಲೂ ಭಿನ್ನರಾಗಿದ್ದೇವೆ" ಎಂದಿದ್ದಾನೆ.
- 1940 ಮಾರ್ಚ್ 23ರಂದು ಲಾಹೋರ್‌ನಲ್ಲಿ ಮುಸ್ಲಿಂ ಲೀಗ್ ಸಭೆಯಲ್ಲಿ ಭಾರತದ ವಾಯುವ್ಯ ಪೂರ್ವ ಭಾಗಗಳನ್ನು ಮುಸ್ಲಿಂರು ಹೆಚ್ಚಿರುವ ಸ್ವತಂತ್ರ ರಾಜ್ಯಗಳಾಗಿ ಪುನರ್ವಿಂಗಡಣೆ ಮಾಡಬೇಕೆಂದು ತಿಳಿಸಿತು. ಇಲ್ಲಿ ಜಿನ್ನಾರು ತಮ್ಮ **ದ್ವಿರಾಷ್ಟ್ರ ಸಿದ್ಧಾಂತ** ಮಂಡಿಸಿದರು.

25.5 ಸಂವಿಧಾನಾತ್ಮಕ ಬೆಳವಣಿಗೆ
Constitutional Development

ಎ. ಮಿಂಟೋ – ಮಾರ್ಲೆ ಸುಧಾರಣೆಗಳು – 1909
(The Marley - Minto Reforms)

- ಮಿಂಟೋ & ಮಾರ್ಲೆ ಇಬ್ಬರು ಕ್ರಾಂತಿಕಾರಿ ಭಯೋತ್ಪಾದಕತೆಯನ್ನು ದಮನ ಮಾಡಲು ಕಾನೂನುಗಳನ್ನು ಜಾರಿಗೊಳಿಸಿದರು. ಮಂದಗಾಮಿಗಳನ್ನು ತಮ್ಮತ್ತ ಸೆಳೆದುಕೊಂಡು ತೀವ್ರಗಾಮಿಗಳನ್ನು (ಒಡೆದು) ನಿಶ್ಯಕ್ತರನ್ನಾಗಿ ಮಾಡುವ ಉದ್ದೇಶ ಹೊಂದಿದ್ದರು.

ಮುಖ್ಯಾಂಶಗಳು

1. ಚುನಾವಣಾ ತತ್ವವನ್ನು ಪ್ರಪ್ರಥಮವಾಗಿ ಕಾನೂನು ರೀತ್ಯ ಅಂಗೀಕರಿಸಲಾಯಿತು.
2. ಈ ಕಾಯ್ದೆ ಜವಾಬ್ದಾರಿಯುತ ಸರಕಾರದ ಬೆಳವಣಿಗೆಗೆ ನಾಂದಿ ಹಾಡಿತು.
3. ವೈಸ್‌ರಾಯ್ ಕೌನ್ಸಿಲ್‌ನಲ್ಲಿ ಒಬ್ಬ ಭಾರತೀಯನನ್ನು ಇಂಡಿಯಾ ಕೌನ್ಸಿಲ್‌ನಲ್ಲಿ (ಇಂಗ್ಲೆಂಡ್) ಇಬ್ಬರು ಭಾರತೀಯರನ್ನು ನೇಮಿಸಲು ಅವಕಾಶ ಮಾಡಿಕೊಟ್ಟಿತು.
4. ಮುಸ್ಲಿಂರಿಗೆ **ಪ್ರತ್ಯೇಕ ಚುನಾವಣಾ** ಕ್ಷೇತ್ರಗಳನ್ನು ನೀಡಲಾಯಿತು.
5. ಗೌರ್ನರ್‌ಗಳ ಕೌನ್ಸಿಲ್ / ಕಾರ್ಯಕಾರಿ ಮಂಡಳಿಗಳ ಸದಸ್ಯರ ಸಂಖ್ಯೆ 2 ರಿಂದ 4ಕ್ಕೆ ಏರಿಕೆ ಮಾಡಲಾಯಿತು.
6. ಕೇಂದ್ರೀಯ ಶಾಸನಸಭೆಯ ಗಾತ್ರವನ್ನು ವಿಸ್ತರಿಸಿದಂತೆ ಪ್ರಾಂತೀಯ ಶಾಸನ ಸಭೆಗಳ ಗಾತ್ರವನ್ನು ವಿಸ್ತೃತಗೊಳಿಸಲಾಯಿತು.

ಕಾಯ್ದೆಯ ಲೋಪಗಳು

1. ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಮತ ಚಲಾಯಿಸಲು ಸದಸ್ಯರಿಗೆ ಅವಕಾಶವಿರಲಿಲ್ಲ.
2. ಭಾರತ ಸರ್ಕಾರದ ವಿದೇಶ ಸಂಬಂಧ. ದೇಶೀಯ ರಾಜರೊಡನೆ ಸಂಬಂಧ, ರೈಲ್ವೆ ಖರ್ಚು, ಸಾಲಗಳ ಮೇಲಿನ ಬಡ್ಡಿ ಮುಂತಾದ ವಿಷಯಗಳನ್ನು ಚರ್ಚಿಸಲು ಅವಕಾಶವಿರಲಿಲ್ಲ.
3. ಶಾಸನ ಸಭೆಗಳಲ್ಲಿ ಪಾಸು ಮಾಡುತ್ತಿದ್ದ ನಿರ್ಣಯಗಳನ್ನು ತಿರಸ್ಕರಿಸುವ ಅಧಿಕಾರವನ್ನು ಅಧ್ಯಕ್ಷನಿಗೆ ಕೊಡಲಾಗಿತ್ತು.
4. ನಾವೆಲ್ಲ ಒಂದೇ ಎನ್ನುವ ಭಾವನೆ ತೊಡೆದು ಹಾಕಿ ಪ್ರತ್ಯೇಕ ಮತ ಕ್ಷೇತ್ರಗಳನ್ನು ನೀಡಿತು.
5. ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳ ಕೆಲ ಸದಸ್ಯರ ಆಯ್ಕೆಯು ಗೌರ್ನರ್ ಜನರಲ್‌ಗೆ ಸೇರಿತ್ತು.
6. ದೇಶದ ಇಡೀ ಜನ ಸಮೂಹ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ.
7. ಮಂದಗಾಮಿಗಳನ್ನಾಗಲೀ ಮತ್ತು ತೀವ್ರಗಾಮಿಗಳನ್ನಾಗಲೀ

ಬಿ. ಮಾಂಟೆಗೋ– ಚೆಲ್ಮ್ಸ್‌ಫರ್ಡ್ ಸುಧಾರಣೆಗಳು – 1919
(The Montague - Chelms Ford Reforms)

- 1ನೇ ಮಹಾಯುದ್ಧವು 1919ರ ಕಾಯ್ದೆಯನ್ನು ಜಾರಿಗೊಳಿಸಲು ನೇರ ಪ್ರೇರಣೆ ನೀಡಿತು. ಮುಸ್ಲಿಂ ಲೀಗ್ ಮತ್ತು ಬಿಟ್ರೀಷ್ ಸರ್ಕಾರದ ಮಧ್ಯೆ ವಿರಸ ಉಂಟಾಗಲು ಕಾರಣಗಳೆಂದರೆ–
- 1911ರಲ್ಲಿ ಬಂಗಾಳ ವಿಭಜನೆಯ ರದ್ದತಿ.
- 1911–12ರಲ್ಲಿ ಟರ್ಕಿ ಮತ್ತು ಇಟಲಿ ನಡುವಿನ ಯುದ್ಧದಲ್ಲಿ ಆಂಗ್ಲರು ಟರ್ಕಿ ವಿರುದ್ಧದ ಶತ್ರುತ್ವ.
- 1914ರ ಮಹಾಯುದ್ಧದಲ್ಲಿ ಟರ್ಕಿ ಜರ್ಮನಿ ಪರ ಭಾಗವಹಿಸಿತು.

ಮುಖ್ಯಾಂಶಗಳು

1. ಭಾರತವು ಬ್ರಿಟಿಷ್ ಸಾಮ್ರಾಜ್ಯದ ಅವಿಭಾಜ್ಯ ಅಂಗವಾಗಿ ಮುಂದುವರಿಯುವುದು.
2. ಭಾರತದಲ್ಲಿ ಸ್ವಸರ್ಕಾರವನ್ನು ನೆಲೆಗೊಳಿಸುವ ಉದ್ದೇಶದಿಂದ ಭಾರತದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಕ್ರಮೇಣ ಅಭಿವೃದ್ಧಿಪಡಿಸುವುದು.
3. ಬ್ರಿಟಿಷ್ ಭಾರತದಲ್ಲಿ ಜವಾಬ್ದಾರಿಯುತ ಸರ್ಕಾರವನ್ನು ಸ್ಥಾಪಿಸುವುದು.
4. ಆಡಳಿತದ ಪ್ರತಿ ಹಂತದಲ್ಲಿ ಭಾರತೀಯ ಸಂಖ್ಯೆಯನ್ನು ಅಧಿಕಗೊಳಿಸುವುದು.

ಇಂಗ್ಲೆಂಡಿನಲ್ಲಾದ ಬದಲಾವಣೆಗಳು (1919ರ ಕಾಯ್ದೆಯಂತೆ)

1. ಕೇಂದ್ರ / ಪ್ರಾಂತೀಯ ಶಾಸನ ಸಭೆಗಳು ಮಾಡುವ ಕಾಯ್ದೆಗಳು ಭಾರತದ ಕಾರ್ಯದರ್ಶಿಯ ಸಮ್ಮತಿಯನ್ನು ಪಡೆಯುವಂತಾಯಿತು.
2. ಪ್ರಾಂತ್ಯಗಳಲ್ಲಿ ವರ್ಗಾಯಿತ ವಿಷಯಗಳಲ್ಲಿ ಭಾರತದ ಕಾರ್ಯದರ್ಶಿಯ ಹಸ್ತಕ್ಷೇಪ ನಿಷೇಧ.
3. ಭಾರತದ ಕಾರ್ಯದರ್ಶಿಗೆ ಬ್ರಿಟನ್ ಖಜಾನೆಯಿಂದ ಸಂಬಳ ಕೊಡುವಂತಾಯಿತು.
4. ಭಾರತದ ಕಾರ್ಯದರ್ಶಿಯ ಕೌನ್ಸಿಲ್‌ನ ಸದಸ್ಯರ ಅಧಿಕಾರಾವಧಿ 5 ವರ್ಷಗಳು.
5. ಪ್ರಥಮ ಬಾರಿಗೆ ಭಾರತದ ಹೈಕಮಿಷನರ್ ಹುದ್ದೆ ಪ್ರಾರಂಭಿಸಲಾಯಿತು.

ಭಾರತದ ಬದಲಾವಣೆಗಳು (1919ರ ಕಾಯ್ದೆಯಂತೆ)

- **ಕೇಂದ್ರ ಕಾರ್ಯಾಂಗ:** ಗೌರ್ನರ್ ಜನರಲ್ ಕೌನ್ಸಿಲ್‌ನ ಒಟ್ಟು 8 ಸದಸ್ಯರಲ್ಲಿ ಮೂವರು ಭಾರತೀಯರಿರಬೇಕು.
- **ಕೇಂದ್ರೀಯ ವಿಷಯಗಳು** – ರಕ್ಷಣೆ, ವಿದೇಶಾಂಗ, ಅಂಚೆ ಮತ್ತು ತಂತಿ ಇತ್ಯಾದಿ ಎಂದು ವಿಂಗಡಣೆ ಮಾಡಲಾಯಿತು.

- **ಪ್ರಾಂತೀಯ ವಿಷಯಗಳು** – ಕಂದಾಯ, ಕೃಷಿ, ನೀರಾವರಿ, ಶಿಕ್ಷಣ ಇತ್ಯಾದಿ ಎಂದು ವಿಂಗಡಣೆ ಮಾಡಲಾಯಿತು.
- **ಕೇಂದ್ರ ಶಾಸಕಾಂಗ:** ಕೇಂದ್ರದಲ್ಲಿ ಈ ಹಿಂದೆ ಇದ್ದ ಕೇಂದ್ರೀಯ ಶಾಸನ ಸಭೆಯ (ಏಕಸದನ) ಸ್ಥಾನದಲ್ಲಿ Council of State & Legislative Assemblyಗಳ ದ್ವಿಸಭಾ ಆಚರಣೆಗೆ ಬಂದಿತು. ಕೌನ್ಸಿಲ್ ಆಫ್ ಸ್ಟೇಟ್ ಒಟ್ಟು 60 ಸದಸ್ಯರಲ್ಲಿ 33 ಸದಸ್ಯರು ಚುನಾವಣೆ ಮೂಲಕ 27 ಸದಸ್ಯರು ಗೌರ್ನರ್ ಜನರಲ್ ನಾಮಕರಣ ಮಾಡಬಹುದಿತ್ತು.
- ಲೆಜಿಸ್ಲೇಟಿವ್ ಅಸೆಂಬ್ಲಿ 145 ಸದಸ್ಯರಲ್ಲಿ 104 ಸದಸ್ಯರು ಚುನಾವಣೆ, 41 ಸದಸ್ಯರು ನಾಮಕರಣವಾಗಬಹುದಿತ್ತು.
- ಕೌನ್ಸಿಲ್ ಆಫ್ ಸ್ಟೇಟ್‌ನ ಅಧ್ಯಕ್ಷ ವೈಸರಾಯ್ ಆಗಿದ್ದು ಸದನ ಕರೆಯುವ, ಮುಂದೂಡುವ, ವಿಸರ್ಜಿಸುವ ಅಧಿಕಾರ ಹೊಂದಿದ್ದನು.

ದೋಷಗಳು:

1. ವಿದೇಶ ವ್ಯವಹಾರ ಮತ್ತು ಭಾರತದ ರಾಜ್ಯಗಳೊಡನೆ ಸಂಬಂಧದ ವಿಷಯಗಳ, ಮಸೂದೆಗಳ ಮಂಡನೆಗೆ ಗೌರ್ನರ್ ಜನರಲ್ ಅನುಮತಿ ಬೇಕಿತ್ತು.
2. ಯಾವುದಾದರೂ ಮಸೂದೆ ಬ್ರಿಟಿಷ್ ಭಾರತದ ಶಾಂತಿಗೆ ಧಕ್ಕೆ ಬರುವಂತಿದ್ದರೆ ಅದಕ್ಕೆ ಗೌರ್ನರ್ ಜನರಲ್ ಅನುಮತಿ ನೀಡುತ್ತಿರಲಿಲ್ಲ.
3. ತುರ್ತು ಸಂದರ್ಭಗಳಲ್ಲಿ ಆದೇಶಗಳನ್ನು ಹೊರಡಿಸುವ ಅಧಿಕಾರವನ್ನು ಗೌರ್ನರ್ ಜನರಲ್ ಹೊಂದಿದ್ದನು.
4. ಶಾಸನಸಭೆ ಪಾಸು ಮಾಡಿದ ಮಸೂದೆಗೆ ಗೌರ್ನರ್ ಜನರಲ್ ವಿಟೋ ಅಧಿಕಾರ ಚಲಾಯಿಸುತ್ತಿದ್ದನು.
5. ವಾರ್ಷಿಕ ಆಯವ್ಯಯದ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ಕೇಂದ್ರೀಯ ಶಾಸನ ಸಭೆಗೆ ಮಿತವಾದ ಅಧಿಕಾರವಿತ್ತು.

ಪ್ರಾಂತೀಯ ಕಾರ್ಯಾಂಗ

ಗೌರ್ನರ್ ಪ್ರಾಂತೀಯ ಕಾರ್ಯಾಂಗದ ಮುಖ್ಯಸ್ಥನಾಗಿದ್ದು – ಪ್ರಾಂತ್ಯಗಳಲ್ಲಿ ದ್ವಿಪ್ರಭುತ್ವ ಜಾರಿಯಾಯಿತು. ಆ ಪ್ರಕಾರ ಕಾಯ್ದಿರಿಸಿದ ವಿಷಯಗಳು ಮತ್ತು ವರ್ಗಾಯಿಸಿದ ವಿಷಯಗಳೆಂದು ವಿಂಗಡಣೆ ಮಾಡಲಾಯಿತು.

ಪ್ರಾಂತೀಯ ಶಾಸಕಾಂಗ

- ಪ್ರಾಂತೀಯ ಶಾಸನ ಸಭೆಗಳ ಗಾತ್ರವನ್ನು ಈ ಕಾಯ್ದೆ ವಿಸ್ತೃತಗೊಳಿಸಿತು.
- ಪ್ರಾಂತೀಯ ಶಾಸನ ಸಭೆಗಳಲ್ಲಿ ಚುನಾವಣಾ ಪದ್ಧತಿ ಅಳವಡಿಸಲಾಯಿತು.
- ಈ ಕಾಯ್ದೆ ಲೋಕಸೇವಾ ಆಯೋಗವನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿತು.

ದೋಷಗಳು

1. ಗೌರ್ನರ್ ಜನರಲ್ ಕೌನ್ಸಿಲ್‌ನಲ್ಲಿ ಭಾರತೀಯ ಅಧಿಕಾರಿಗಳು ಅಧಿಕವಾಗಿದ್ದರೂ ಮಹತ್ವದ ಅಧಿಕಾರಗಳಿಲ್ಲ.
2. ಇವರು ಶಾಸನ ಸಭೆಗೆ ಜವಾಬ್ದಾರರಾಗಿರಲಿಲ್ಲ.
3. ವಿಷಯಗಳ ವಿಭಜನೆ ಸ್ಪಷ್ಟವಾಗಿರಲಿಲ್ಲ.
4. ಮಂತ್ರಿಗಳಿಗೆ ಅಧಿಕಾರ ರಹಿತ ಜವಾಬ್ದಾರಿಯನ್ನು ಕೊಟ್ಟಿತು.

1935ರ ಭಾರತ ಸರ್ಕಾರ ಕಾಯ್ದೆ
(Government of India Act of 1935)

ಕಾರಣಗಳು

1. 1919ರ ಕಾಯ್ದೆ ಭಾರತೀಯರ ಆಶೋತ್ತರಗಳನ್ನು ಈಡೇರಿಸಲಿಲ್ಲ.
2. ಸೈಮನ್ ಆಯೋಗ ಪ್ರಾಂತ್ಯಗಳಲ್ಲಿ ದ್ವಿಪ್ರಭುತ್ವ ರದ್ದುಗೊಳಿಸುವಂತೆ ತಿಳಿಸಿತು.
3. 3ನೇ ದುಂಡುಮೇಜಿನ ಪರಿಷತ್‌ನಲ್ಲಿ ಭಾರತವನ್ನು ಸಂಯುಕ್ತ ಮಾದರಿಯ ಸರ್ಕಾರ ಜಾರಿಗೆ ಬರಬೇಕೆಂದು ಹೇಳಲಾಯಿತು.

ಲಕ್ಷಣಗಳು

1. ಇಂಡಿಯನ್ ಕೌನ್ಸಿಲ್ ರದ್ದು ಮಾಡಿ ಅಖಿಲ ಭಾರತ ಒಕ್ಕೂಟವನ್ನು ಸ್ಥಾಪಿಸಲಾಯಿತು.
2. ಏಡನ್‌ನ ಆಡಳಿತವನ್ನು ಇಂಗ್ಲೆಂಡಿನ ವಸಾಹತು ಕಛೇರಿಗೆ ವರ್ಗಾಯಿಸಲಾಯಿತು.
3. ಬರ್ಮಾವನ್ನು ಭಾರತದಿಂದ ಪ್ರತ್ಯೇಕಿಸಲಾಯಿತು.
4. ಫೆಡರಲ್ ನ್ಯಾಯಾಲಯವನ್ನು ಸ್ಥಾಪಿಸಲಾಯಿತು.
5. ಕೇಂದ್ರದಲ್ಲಿ ದ್ವಿಪ್ರಭುತ್ವ/ದ್ವಿಸರ್ಕಾರ ಸ್ಥಾಪಿಸಲಾಯಿತು.
6. ಪ್ರಾಂತ್ಯಗಳಿಗೆ ಸ್ವಾಯುತ್ತತೆ ನೀಡಲಾಯಿತು.
7. ಧಾರ್ಮಿಕ ಸಮುದಾಯಗಳು ಮತ್ತು ಇತರೆ ಗುಂಪುಗಳು ಪ್ರತ್ಯೇಕ ಪ್ರಾತಿನಿಧ್ಯ ನೀಡಲು ಅವಕಾಶ ಮಾಡಿಕೊಟ್ಟಿತು.

ದೋಷಗಳು

1. ಗೌರ್ನರ್ ಜನರಲ್ ಮತ್ತು ಗೌವರ್ನರ್‌ಗಳನ್ನು ಉತ್ತುಂಗ ಶಿಖರದಲ್ಲಿರಿಸಿತು.
2. ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಮುಂದುವರಿಸಿತು.
3. ಭಾರತದ ಸೇನೆ, ಹಣಕಾಸು ಮತ್ತು ವಿದೇಶಾಂಗ ವ್ಯವಹಾರಗಳು ಬ್ರಿಟಿಷ್ ಅಧಿಪತ್ಯಕ್ಕೆ ಒಳಗಾದವು.

- ನೆಹರೂರವರು 1935ರ ಕಾಯ್ದೆಯನ್ನು "ಎಂಜಿನ್ ಇಲ್ಲದ, ಆದರೆ ಭದ್ರವಾದ ಹಿಡಿಕೆಯುಳ್ಳ ಒಂದು ಯಂತ್ರ & ಗುಲಾಮಗಿರಿಯ ಹೊಸ ಸನ್ನದು ಎಂದು ಟೀಕಿಸಿದರು.

25.6 ಗೌರ್ನರ್ ಜನರಲ್‌ಗಳು ಮತ್ತು ವೈಸ್‌ರಾಯ್‌ಗಳು

1. ವಾರನ್ ಹೇಸ್ಟಿಂಗ್ಸ್ (1772–1785)

- ಇವನು 02 ವರ್ಷಗಳ ಕಾಲ ಬಂಗಾಳದ ಗೌರ್‍ನರ್ ಆಗಿ ನಂತರ 1773ರ ರೆಗ್ಯುಲೇಟಿಂಗ್ ಕಾಯ್ದೆ ಪ್ರಕಾರ ಬಂಗಾಳದ ಗೌರ್ನರ್ ಜನರಲ್ ಆದನು.
- ರೆಗ್ಯುಲೇಟಿಂಗ್ ಕಾಯ್ದೆ ಪ್ರಕಾರ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪನೆ.
- ದ್ವಿಸರ್ಕಾರ ಪದ್ಧತಿಯ ರದ್ಧತಿ ಮತ್ತು ಖಜಾನೆಯನ್ನು ಕಲ್ಕತ್ತಾದಿಂದ ಮುರ್ಷಿದಾಬಾದ್‌ಗೆ ವರ್ಗಾವಣೆ.
- ಸದರ್ ದಿವಾನಿ ಅದಾಲತ್ (ಉಚ್ಚ ಸಿವಿಲ್ ನ್ಯಾಯಾಲಯ) ಸದರ್ ನಿಜಾಮತ್ ಅದಾಲತ್ (ಉಚ್ಚ ಕ್ರಿಮಿನಲ್ ನ್ಯಾಯಾಲಯ) ಸ್ಥಾಪನೆಯಾದವು.
- 1774 ರೋಹಿಲಾ ಯುದ್ಧ, ಬ್ರಿಟಿಷರ ಸಹಾಯದಿಂದ ಔದ್‌ನ ನವಾಬನು ರೋಹಿಲ ಖಂಡ್‌ನ್ನು ವಶಪಡಿಸಿಕೊಂಡನು.
- 1775 – ನಂದಕುಮಾರ್ ಪ್ರಕರಣ
- 1775–82 ಮೊದಲ ಆಂಗ್ಲೋ ಮರಾಠ ಯುದ್ಧ
- 1782 – ಸಾಲ್ಬಾಯಿ ಒಪ್ಪಂದ
- 1780–84 2ನೇ ಆಂಗ್ಲೋ ಮೈಸೂರು ಯುದ್ಧ
- 1784 – ಪಿಟ್ಸ್ ಇಂಡಿಯಾ ಆಕ್ಟ್
- 1784 – ವಿಲಿಯಂ ಜೋನ್ಸ್‌ನಿಂದ Asiatic Society ಕಲ್ಕತ್ತಾದಲ್ಲಿ ಸ್ಥಾಪನೆ

2. ಲಾರ್ಡ್ ಕಾರ್ನ್‌ವಾಲೀಸ್ (1786–93)

- ಕಂಪನಿ ನೌಕರರ ಖಾಸಗಿ ವ್ಯಾಪಾರ ರದ್ದು.
- 1790–92ರ 3ನೇ ಆಂಗ್ಲೋ ಮೈಸೂರು ಯುದ್ಧ.
- 1793–ಬಂಗಾಳ & ಬಿಹಾರದಲ್ಲಿ ಖಾಯಂ ಜಮೀನ್ದಾರಿ ಪದ್ಧತಿ ಜಾರಿ.
- 1793 – ನ್ಯಾಯಾಂಗ ಸುಧಾರಣೆ ಹಾಗೂ ಕೆಳಹಂತ ನ್ಯಾಯಾಲಯಗಳ ಸ್ಥಾಪನೆ.
- ಜಿಲ್ಲಾ ನ್ಯಾಯಾಧೀಶರ ನೇಮಕ ಮತ್ತು ಅಪೀಲು ನ್ಯಾಯಾಲಯ ಸ್ಥಾಪನೆ.
- ನಾಗರೀಕ ಸೇವೆಗಳ ಜಾರಿ.

3. ಸರ್ ಜಾನ್ ಷೋರ್ (1793–98)

- ಇವನು ರಾಜ್ಯಗಳ ವಿಷಯದಲ್ಲಿ ಹಸ್ತಕ್ಷೇಪ ರಹಿತ ನೀತಿ ಅನುಸರಿಸಿದನು.
- ಖಾಯಂ ಜಮೀನ್ದಾರಿ ಪದ್ಧತಿಯ ಕಂದಾಯ ಬೋರ್ಡಿನ ಅಧ್ಯಕ್ಷನಾಗಿದ್ದನು.

4. ಲಾರ್ಡ್ ವೆಲ್ಲೆಸ್ಲಿ (1798–1805)

- ಇವನು ಸಾಮ್ರಾಜ್ಯಶಾಹಿಯಾಗಿದ್ದನು.
- 1798– ಸಹಾಯಕ ಸೈನ್ಯ ಪದ್ಧತಿ ಜಾರಿಗೊಳಿಸಿದನು.
- 1799 – ನಾಲ್ಕನೇ ಆಂಗ್ಲೋ ಮೈಸೂರು ಯುದ್ಧ.
- 1803–05 – 2ನೇ ಆಂಗ್ಲೋ ಮರಾಠ ಯುದ್ಧ.

5. ಸರ್-ಜಾನ್-ಬಾರ್ಲೊ (1805-07)

- 1806 – ವೆಲ್ಲೂರು ದಂಗೆ.

6. ಲಾರ್ಡ್ ಮಿಂಟೊ (1807–13)

- 1808 – ತಿರುವಾಂಕೂರು ಬಂಡಾಯ
- 1809 – ರಣಜಿತ್‌ಸಿಂಗ್‌ನೊಂದಿಗೆ ಅಮೃತಸರ ಒಪ್ಪಂದ
- 1813 – ಚಾರ್ಟರ್ ಆಕ್ಟ್ ಜಾರಿ.

7. ಮಾರ್ಕ್ವೆಸ್ಟ್ ಆಫ್ ಹೇಸ್ಟಿಂಗ್ಸ್ (1813–23)

- ಇವನು ಹಸ್ತಕ್ಷೇಪ ರಹಿತ ನೀತಿ ತ್ಯಜಿಸಿ ಯುದ್ಧ ನೀತಿ ಅನುಸರಿಸಿದನು.
- ನೇಪಾಳದ ಗೂರ್ಖಾರೊಂದಿಗೆ ಯುದ್ಧ.
- 1816 – ಸಗೌಲಿ ಒಪ್ಪಂದ.
- 1817–18 – 3ನೇ ಆಂಗ್ಲೋ ಮರಾಠ ಯುದ್ಧ.
- 1817–18 – ಪಿಂಡಾರಿಗಳ ದಮನ.
- 1820 – ಮದ್ರಾಸ್ ಪ್ರಾಂತ್ಯದಲ್ಲಿ ರೈತವಾರಿ ಪದ್ಧತಿ ಜಾರಿ.
- ಬೆಂಗಾಲಿ ಟೆನ್ನಿಸ್ ಆಕ್ಟ್ ಜಾರಿ.

8. ಲಾರ್ಡ್ ಅರ್ಮ್ ಹಸ್ಟ್ (1823–28)

- ಮೊದಲ ಬರ್ಮಾ ಯುದ್ಧ (1824–28)
- 1826 – ಭರತ್‌ಪುರ ವಶ.

9. ಲಾರ್ಡ್ ವಿಲಿಯಂ ಬೆಂಟಿಂಕ್ (1828–35)

- ಸಾಮ್ರಾಜ್ಯ ವಿಸ್ತರಣೆಗಿಂತ ಪ್ರಜಾ ಕ್ಷೇಮವೇ ಮುಖ್ಯ ಎಂದು ಭಾವಿಸಿದನು.
- 1833ರ ಚಾರ್ಟರ್ ಆಕ್ಟ್.
- 1829 – ಸತಿಸಹಗಮನ ನಿಷೇಧ.
- 1829–35 ತಗ್ಗಿ ಮತ್ತು ಪಿಂಡಾರಿಗಳ ದಮನ.
- ಸ್ತ್ರೀಹತ್ಯೆ, ಶಿಶು ಹತ್ಯೆ ಹಾಗೂ ಮಾನವ ಬಲಿ ನಿಷೇಧಿಸಿದನು.
- 1831 – ಮೈಸೂರು ಆಕ್ರಮಣ.
- 1834 – ಆಗ್ರಾ ಪ್ರಾಂತ್ಯ ಸ್ಥಾಪನೆ.

- ಅಫೀಮಿನ ಮೇಲೆ ತೆರಿಗೆ ವಿಧಿಸಿದನು.
- 1835 – ಇಂಗ್ಲೀಷ್ ಶಿಕ್ಷಣ ಜಾರಿ (ಮೆಕಾಲೆ ವರದಿ)
- ಕಾರ್ಯಕಾರಿ ಮಂಡಳಿಗೆ ಕಾನೂನು ಸದಸ್ಯನ ಸೇರ್ಪಡೆ.
- ಕಲ್ಕತ್ತಾದಲ್ಲಿ ಪ್ರಥಮ ವೈದ್ಯಕೀಯ ಕಾಲೇಜು ಆರಂಭವಾಯಿತು.
- ಕೂರ್ಗ್ ಪ್ರಾಂತ್ಯ ಕಂಪನಿಯ ನೇರ ಆಡಳಿತಕ್ಕೊಳಪಟ್ಟಿತು.
- 1833 – ಚಾರ್ಟರ್ ಆಕ್ಟ್

10. ಚಾರ್ಲ್ಸ್ ಮೆಟ್ಕಾಫ್ (1835–36)

- ಇವನು ದೇಶೀಯ ಭಾಷಾ ಪತ್ರಿಕೆಗಳ ಮೇಲೆ ವಿಧಿಸಿದ್ದ ನಿರ್ಬಂಧಗಳನ್ನು ತೆಗೆದು ಹಾಕಿದನು. ಪ್ರೆಸ್‌ನ ಉಧಾರೀಕರಣದ ಶಿಲ್ಪಿ ಎನ್ನುವರು.

11. ಲಾರ್ಡ್ ಅಕ್‌ಲ್ಯಾಂಡ್ (1836–42)

- 1836–42 ಮೊದಲ ಆಫ್ಗನ್ ಯುದ್ಧ
- 1839 – ರಣಜಿತ್ ಸಿಂಗ್‌ನ ಮರಣ.

12. ಲಾರ್ಡ್ ಎಲೆನ್ ಬರೊ (1842–44)

- ಮೊದಲ ಆಫ್ಘನ್ ಯುದ್ಧಕ್ಕೆ ತೆರೆ ಎಳೆದನು.
- 1843 – ಸಿಂದ್ ಆಕ್ರಮಣ.
- ಗುಲಾಮಗಿರಿ ರದ್ದು ಮಾಡಿದನು.
- 1843 – ಗ್ವಾಲಿಯರ್ ಜೊತೆ ಯುದ್ಧ

13. ಲಾರ್ಡ್ ಹಾರ್ಡಿಂಜ್ -1 (1844–48)

- 1845–46 ಮೊದಲ ಸಿಖ್ ಯುದ್ಧ.
- 1846 – ಲಾಹೋರ್ ಒಪ್ಪಂದ.
- ಭಾರತೀಯ ಸಂಸ್ಥಾನಗಳಲ್ಲೂ ಸತಿಪದ್ಧತಿ ನಿಷೇಧಿಸಲು ಕ್ರಮ ಕೈಗೊಂಡನು.

14. ಲಾರ್ಡ್ ಡಾಲೌಸಿ (1848–56)

- ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ ಜಾರಿ.
- ಸಿಮ್ಲಾವನ್ನು ಬೇಸಿಗೆ ರಾಜಧಾನಿಯಾಗಿಸಿದನು.
- ಫಿರಂಗಿ ದಳದ ಕೇಂದ್ರ ಕಛೇರಿಯನ್ನು ಕಲ್ಕತ್ತಾದಿಂದ ಮೀರತ್‌ಗೆ ವರ್ಗಾಯಿಸಿದ.
- ಸೇನಾ ಕೇಂದ್ರವನ್ನು ಸಿಮ್ಲಾಕ್ಕೆ ವರ್ಗಾಯಿಸಿದ.
- ಗೂರ್ಖಾ ರೆಜಿಮಂಟ್ ಸ್ಥಾಪನೆ
- 1853 – ರೈಲ್ವೆ ವ್ಯವಸ್ಥೆ ಜಾರಿ (ಬಾಂಬೆ – ಠಾಣಾ)
- 1853 ಟೆಲಿಗ್ರಾಫ್ ವ್ಯವಸ್ಥೆ ಜಾರಿ (ಕಲ್ಕತ್ತಾ – ಆಗ್ರಾ ನಡುವೆ)
- 1853 – ಮೊದಲ ಅಂಚೆ ವ್ಯವಸ್ಥೆ ಜಾರಿ.
- 1855 – ಸಂತಾಲರ ದಂಗೆ
- 1855 – ಲೋಕೋಪಯೋಗಿ ಇಲಾಖೆ
- 1856 – ವಿಧವಾ ಪುನರ್ ವಿವಾಹ ಕಾಯ್ದೆ
- ಕರ್ನಾಟಕ ನವಾಬನ ಬಿರುದು ರದ್ದತಿ

15. ಲಾರ್ಡ್ ಕ್ಯಾನಿಂಗ್ (1856–62)

- 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮ
- 1858 ರಾಣಿ ವಿಕ್ಟೋರಿಯಾ ಘೋಷಣೆ
- ಇವನು ಭಾರತದ ಮೊದಲ ವೈಸ್‌ರಾಯ್
- 1859 ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ ರದ್ದು
- 1859 – ಬಂಗಾಳದ ಇಂಡಿಗೋ ಚಳುವಳಿ
- ರಂಗೂನ್‌ಗೆ ಬಹದ್ದೂರ್ ಷಾನ ಗಡಿಪಾರು
- 1861 – ಕೌನ್ಸಿಲ್ ಆಕ್ಟ್ ಜಾರಿ.
- ಮದ್ರಾಸ್, ಕಲ್ಕತ್ತಾ, ಮುಂಬೈಗಳಲ್ಲಿ ವಿ.ವಿ.ಗಳ ಸ್ಥಾಪನೆ
- ಮದ್ರಾಸ್, ಕಲ್ಕತ್ತಾ, ಮುಂಬೈಗಳಲ್ಲಿ ಹೈಕೋರ್ಟ್‌ಗಳ ಸ್ಥಾಪನೆಗೆ ಒಪ್ಪಿಗೆ.
- ಪ್ರತಿಯೊಂದು ಪ್ರಾಂತ್ಯದಲ್ಲೂ ಪ್ರತ್ಯೇಕ ಪೊಲೀಸ್ ಇಲಾಖೆ ಸ್ಥಾಪನೆ.

16. ಲಾರ್ಡ್ ಎಲ್ಗಿನ್ (1862–62)

- ವಹಾಬಿ ಎಂಬ ಮುಸ್ಲಿಂ ಪಂಥದ ಬಂಡಾಯ ನಡೆಯಿತು.
- ಎಲ್ಗಿನ್ 1862 ಅಕಾಲಿಕ ಮರಣ. ಇದರಿಂದಾಗಿ 1862–64ರವರೆಗೆ ಸರ್. ನೇಪಿಯರ್ ಮತ್ತು ಸರ್ ಡೆನೆಸನ್ ಆಡಳಿತ ನಡೆಸಿದರು.

17. ಸರ್‌ಜಾನ್ ಲಾರೆನ್ಸ್ (1864–69)

- 1865 – ಭೂತಾನ್‌ನೊಂದಿಗೆ ಯುದ್ಧ
- 1866 – ಒರಿಸ್ಸಾ, ಕ್ಷಾಮ ಮತ್ತು ಬರ ಆಯೋಗ ರಚನೆ.
- 1865 – ಕಲ್ಕತ್ತಾ, ಮುಂಬೈ, ಮದ್ರಾಸ್‌ಗಳಲ್ಲಿ ಹೈಕೋರ್ಟ್ ಸ್ಥಾಪನೆ
- ಭಾರತದ ರಕ್ಷಣೆ.

18. ಲಾರ್ಡ್ ಮೆಯೋ (1869–72)

- 1871 – ಮೊದಲ ಜನಗಣತಿ ನಡೆಯಿತು.
- ಭಾರತೀಯ ರಾಜಕುಮಾರರಿಗೆ ಶಿಕ್ಷಣ ಮತ್ತು ರಾಜಕೀಯ ತರಬೇತಿ ನೀಡಲು ಕಾಥೇವಾಡದ ರಾಜ್‌ಕೋಟ್ ಕಾಲೇಜು ಹಾಗೂ ಅಜ್ಮೀರದ ಮೆಯೋ ಕಾಲೇಜು ಸ್ಥಾಪನೆ.
- ಭಾರತೀಯ ಸಾಂಖ್ಯಿಕ ಸಂಸ್ಥೆ ಸ್ಥಾಪನೆ
- ಕೃಷಿ ಮತ್ತು ವಾಣಿಜ್ಯಕ್ಕೆ ಪ್ರತ್ಯೇಕ ವಿಭಾಗ ಸ್ಥಾಪನೆ

- 1872 ಅಂಡಮಾನ್ ನಿಕೋಬಾರ್ ದ್ವೀಪದ ಪಠಾಣನಿಂದ ಕೊಲೆಯಾದನು.
- ರೆಡ್ ಸೀ ಕೇಬಲ್ ಹಾಕಿದ್ದರಿಂದ ಭಾರತ ಮತ್ತು ಇಂಗ್ಲೀಷ್ ಸಂಪರ್ಕ ಉಂಟಾಯಿತು.

19. ಲಾರ್ಡ್ ನಾರ್ತ್ ಬ್ರೂಕ್ (1872-76)

- ಗಾಯಕ ವಾಡನ ಪದಚ್ಯುತಿ
- ಆದಾಯ ತೆರಿಗೆ ರದ್ಧತಿ.
- ಕುಕಾ ಚಳುವಳಿ (ಪಂಜಾಬ್).
- 1875 ಪ್ರಿನ್ಸ್ ಆಫ್ ವೇಲ್ಸ್‌ನ ಭೇಟಿ.

20. ಲಾರ್ಡ್ ಲಿಟ್ಟನ್ (1876-80) (ಕವಿ, ಕಾದಂಬರಿಕಾರ)

- 1877 ದೆಹಲಿ ದರ್ಬಾರ್, ವಿಕ್ಟೋರಿಯಾ ರಾಣಿಗೆ ಭಾರತದ ಸಾಮ್ರಾಜ್ಞಿ(ಕೈಸರ್-ಇ-ಹಿಂದ್) ಎಂಬ ಬಿರುದು ನೀಡಲಾಯಿತು.
- 1878- ವರ್ನಾಕ್ಯುಲರ್ ಪ್ರೆಸ್ ಆಕ್ಟ್ ಮತ್ತು ಸ್ಟ್ಯಾಚುರಿ ಸಿವಿಲ್ ಆಕ್ಟ್.
- 1878 – ಶಸ್ತ್ರಾಸ್ತ್ರ ಕಾಯ್ದೆ.
- ನಾಗರಿಕ ಸೇವಾ ವಯೋಮಿತಿ 21 ರಿಂದ 19ಕ್ಕೆ ಇಳಿಸಲಾಯಿತು.
- ರಿಚರ್ಡ್ ಸ್ಟ್ಯಾಚಿ ನೇತೃತ್ವದ ಮೊದಲ ಬರ ಆಯೋಗ ರಚನೆ.
- 1878 – ಎರಡನೇ ಆಫ್ಘನ್ ಯುದ್ಧ.
- ಆಲಿಘರ್‌ನಲ್ಲಿ ಮಹಮದ್‌ನ ಆಂಗ್ಲೋ ಓರಿಯಂಟಲ್ ಕಾಲೇಜು ಸ್ಥಾಪನೆ.

21. ಲಾರ್ಡ್ ರಿಪ್ಪನ್ (1880-84)

- ಬ್ರಿಟನ್ ಪ್ರಧಾನಿ ಗ್ಲಾಡ್‌ಸ್ಟೋನ್‌ನ ಮಗ.
- 1881 – ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಮೊದಲ ಫ್ಯಾಕ್ಟರಿ ಕಾಯ್ದೆ.
- ವರ್ನಾಕ್ಯುಲರ್ ಪ್ರೆಸ್ ಕಾಯ್ದೆ ನಿಷೇಧ.
- 1881 – ಮೊದಲ ಜನಗಣತಿ । (ಜನಸಂಖ್ಯೆ 254 ಮಿಲಿಯನ್).
- 1882 – ಸ್ಥಳೀಯ ಸರ್ಕಾರಗಳ ರಚನೆ.
- 1882 – ಹಂಟರ್ ಶಿಕ್ಷಣ ಆಯೋಗ.
- 1883-84 – ಇಲ್ಬರ್ಟ್ ಕಾಯ್ದೆ.
- 1883 – ಬರ ಸಂಹಿತೆ.

22. ಲಾರ್ಡ್ ಡಫರಿನ್ (1884-88)

- 1885 – ಐಎನ್‌ಸಿ ಸ್ಥಾಪನೆ.
- 3ನೇ ಆಂಗ್ಲೋ ಬರ್ಮಾ ಯುದ್ಧ.

23. ಲಾರ್ಡ್ ಲ್ಯಾಂಡ್ಸ್ ಡೌನ್ (1888-94)

- ಭಾರತ-ಆಫ್ಘನ್ ಗಡಿ ಡ್ಯುರಾಂಡ್ ರೇಖೆ ನಿಗಧಿ ಮಾಡಲಾಯಿತು.
- 1892 – ಇಂಡಿಯಾ ಕೌನ್ಸಿಲ್ ಕಾಯ್ದೆ.
- 2ನೇ ಫ್ಯಾಕ್ಟರಿ ಕಾಯ್ದೆ ಜಾರಿ.

24. ಲಾರ್ಡ್ ಎಲ್ಗಿನ್ - 2 (1894-99)

- 1896 – ಮುಂಬೈ ಪ್ಲೇಗ್ ದುರಂತ.
- 1896-97 – ಹಿಸ್ಸಾರ್ ಜಿಲ್ಲೆಯಲ್ಲಿ ಭೀಕರ ಬರ.
- ಚಾಪೇಕರ್ ಸಹೋದರರಿಂದ ಹತ್ಯೆ.

25. ಲಾರ್ಡ್ ಕರ್ಜನ್ (1899-1905)

- ಹೊಸ ಪ್ರಾಂತ್ಯದ ರಚನೆ (ವಾಯುವ್ಯ ಗಡಿ ಪ್ರಾಂತ್ಯ).
- ಆಂಡ್ರೂ ಪ್ರೆಸರ್ ನೇತೃತ್ವದ ಪೊಲೀಸ್ ಆಯೋಗ ರಚನೆ.
- ಥಾಮಸ್ ರ್‍ಯಾಲಿಂಗ್ ನೇತೃತ್ವದ ವಿ.ವಿ.ಗಳ ಆಯೋಗ (ಭಾರತದ ಸದಸ್ಯ ಥಾಮಸ್ ಬ್ಯಾನರ್ಜಿ).
- ಪೂಸಾದಲ್ಲಿ ಕೃಷಿ ಸಂಶೋಧನಾ ಕೇಂದ್ರದ ಸ್ಥಾಪನೆ.
- ಅನೇಕ ನೀರಾವರಿ ಕಾಲುವೆಗಳ ನಿರ್ಮಾಣ.
- 1904 – ಪುರಾತನ ಸ್ಮಾರಕಗಳ ಸಂರಕ್ಷಣಾ ಕಾಯ್ದೆ.
- 1904 – ಭಾರತೀಯ ವಿ.ವಿ.ಗಳ ಕಾಯ್ದೆ.
- 1904 – ಭಾರತೀಯ ಪ್ರಾಚ್ಯ ಸಂಶೋಧನಾ ಸಂಸ್ಥೆ ಸ್ಥಾಪನೆ.
- 1902 – ನೀರಾವರಿಗಾಗಿ ಮನ್‌ಕ್ರಿಪ್ ಆಯೋಗದ ರಚನೆ.
- 1905 – ಬಂಗಾಳ ವಿಭಜನೆ.

26. 2ನೇ ಲಾರ್ಡ್ ಮಿಂಟೋ (1905-10)

- 1905 ಸ್ವದೇಶಿ ಚಳುವಳಿ.
- ಎಸ್.ಪಿ. ಸಿನ್ಹಾ ವೈಸ್‌ರಾಯ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ನೇಮಕ.
- 1906 ಮುಸ್ಲಿಂ ಲೀಗ್ ಸ್ಥಾಪನೆ (ಆಗಾಖಾನ್ ಔದ್ ನವಾಬ).
- 1908 – ಕಾಂಗ್ರೆಸ್ ಅಧಿವೇಶನ – ಕಾಂಗ್ರೆಸ್ ಪ್ರತ್ಯೇಕ ಸಂವಿಧಾನ ರಚನೆ.
- 1909 – ಮಿಂಟೋ ಮಾರ್ಲೆ ಸುಧಾರಣೆ.

27. 2ನೇ ಲಾರ್ಡ್ ಹಾರ್ಡಿಂಜ್ (1910-16)

- ಬಿಹಾರ ಮತ್ತು ಒರಿಸ್ಸಾ ರಾಜ್ಯಗಳ ಸೃಷ್ಟಿ.
- 1911 – ಬಂಗಾಳ ವಿಭಜನೆ ರದ್ದು.
- 1911 – ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿ ವರ್ಗಾವಣೆ.
- 1912 – ನಾಗರಿಕ ಸೇವೆಗೆ ಇಸ್ಲಿಂಗ್ಟನ್ ಸಮಿತಿ.

- ಮದನ್ ಮೋಹನ್ ಮಾಳವೀಯ, ಜಯಕರ್, ಮೂಂಜೆರಿಂದ ಹಿಂದೂ ಮಹಾಸಭಾ ಸ್ಥಾಪನೆ.
- ಸ್ಯಾಡ್ಲರ್ ಆಯೋಗ.
- ಹೋಂ ರೂಲ್ ಲೀಗ್ ಸ್ಥಾಪನೆ (ತಿಲಕ್–ಪುಣೆ, ಅನಿಬೆಸೆಂಟ್–ಮದ್ರಾಸ್).
- 1916 – ಬನಾರಸ್ ಹಿಂದೂ ವಿ.ವಿ. ಶಂಕುಸ್ಥಾಪನೆ.

28. ಲಾರ್ಡ್ ಚೆಲ್ಮ್ಸ್‌ಫರ್ಡ್ (1916–21)

- 1916 – ಐ.ಎನ್.ಸಿ ಲಕ್ನೋ ಅಧಿವೇಶನ (ಎಸಿ ಮಜುಂದಾರ್).
- 1915 – ಸಬರಮತಿ ಆಶ್ರಮ ಸ್ಥಾಪನೆ.
- 1917 – ಚಂಪಾರಣ್ಯ ಸತ್ಯಾಗ್ರಹ.
- 1917 – ಆಗಸ್ಟ್ ಘೋಷಣೆ.
- 1918 – ಖೇಡಾ ಸತ್ಯಾಗ್ರಹ.
- 1919 – ರೌಲತ್ ಕಾಯ್ದೆ.
- 1919 – ಜಲಿಯನ್ ವಾಲಾಬಾಗ್ ದುರಂತ.
- 1919 – ಮೌಂಟೆಗೊ ಚೆಲ್ಮ್ಸ್ ಫರ್ಡ್ ಕಾಯ್ದೆ.
- 1919–20 – ಖಿಲಾಫತ್ ಚಳುವಳಿ.
- 1920–22 – ಅಸಹಕಾರ ಚಳುವಳಿ.

29. ಲಾರ್ಡ್ ರೀಡಿಂಗ್ (1921–26)

- 1922 – ಮೇ 2ರಂದು ಚೌರಾಚೌರಿ ಘಟನೆ.
- ಅಸಹಕಾರ ಚಳುವಳಿ ವಾಪಸ್.
- ಸ್ವರಾಜ್ ಪಕ್ಷದ ಸ್ಥಾಪನೆ (ಮೊ. ನೆಹರು).
- 1925 – ಆರ್‌ಎಸ್‌ಎಸ್ ಸ್ಥಾಪನೆ (ಹೆಗಡೆವಾರ್).
- 1922 – ಕಾಲತ್ ಕಾಯ್ದೆ ವಾಪಸ್.
- 1923 – ಲಂಡನ್ ಮತ್ತು ಭಾರತದಲ್ಲಿ ಏಕಕಾಲದಲ್ಲಿ ಸಿವಿಲ್ ಪರೀಕ್ಷೆಗಳು ಆರಂಭ.
- 1925 – ಕಮ್ಯುನಿಷ್ಟ್ ಪಕ್ಷ ಸ್ಥಾಪನೆ.

30. ಲಾರ್ಡ್ ಇರ್ವಿನ್ (1926–31) (ಕ್ರಿಶ್ಚಿಯನ್ ವೈಸ್‌ರಾಯ್ ಎನ್ನುವರು)

- 1927 – ಸೈಮನ್ ಆಯೋಗ ನೇಮಕ
- 1927 – ಬಟ್ಲರ್ ಆಯೋಗ ರಚನೆ
- 1928 – ಪ್ರಥಮ ಅಖಿಲ ಭಾರತ ಯುವ ಕಾಂಗ್ರೆಸ್ ಸಭೆ
- 1928 – ನೆಹರೂ ವರದಿ ಹಾಗೂ 1929 – ವಿಟ್ಲೆ ಆಯೋಗ (ಕಾರ್ಮಿಕ)
- ಲಾರ್ಡ್ ಇರ್ವಿನ್‌ನಿಂದ ದೀಪಾವಳಿ ಘೋಷಣೆ
- 1929 – ಶಾರದಾ ಕಾಯ್ದೆ, ದನ್‌ಬಾದ್‌ನಲ್ಲಿ ಗಣಿಶಾಲೆ ಆರಂಭ.
- 1930 – ಜನವರಿ 26, ಪ್ರಥಮ ಸ್ವಾತಂತ್ರ್ಯ ದಿನಾಚರಣೆ.
- 1930 – ಕಾನೂನು ಭಂಗ ಚಳುವಳಿ.
- ಕೇಂದ್ರ ಶಾಸಕಾಂಗ ಮೇಲೆ ಬಾಂಬ್ ದಾಳಿ (ಭಗತ್‌ಸಿಂಗ್ ಮತ್ತು ಬಟುಕೇಶ್ವರ್‌ರಿಂದ)
- 1930 – ಮಾರ್ಚ್ 3 ದಂಡಿ ಉಪ್ಪಿನ ಸತ್ಯಾಗ್ರಹ.
- 1930 – 1ನೇ ದುಂಡು ಮೇಜಿನ ಪರಿಷತ್.
- 1930 – ಮಾರ್ಚ್ 5ರಂದು ಗಾಂಧಿ – ಇರ್ವಿನ್ ಒಪ್ಪಂದ.

31. ಲಾರ್ಡ್ ವಿಲ್ಲಿಂಗಡನ್ (1931–36)

- 2ನೇ ದುಂಡು ಮೇಜಿನ ಪರಿಷತ್.
- 1932ರ 3ನೇ ದುಂಡು ಮೇಜಿನ ಪರಿಷತ್.
- ಮ್ಯಾಕ್ ಡೊನಾಲ್ಡ್‌ನಿಂದ ಮತೀಯ ಘೋಷಣೆ.
- ಪೂನಾ ಯರವಾಡ ಜೈಲಿನಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹ.
- 1932 ಪೂನಾ ಒಪ್ಪಂದ (ಅಂಬೇಡ್ಕರ್ – ಗಾಂಧಿ ನಡುವೆ).
- 1935 – ಭಾರತ ಸರ್ಕಾರ ಕಾಯ್ದೆ.
- 1935 – ಭಾರತದಿಂದ ಬರ್ಮಾ ಪ್ರತ್ಯೇಕವಾಯಿತು.
- ಕಾಂಗ್ರೆಸ್ ಸೋಶಿಯಾಲಿಸ್ಟ್ ಪಕ್ಷ ಸ್ಥಾಪನೆ (ಜಯಪ್ರಕಾಶ್ ಮತ್ತು ಆಚಾರ್ಯ ನರೇಂದ್ರರಿಂದ).
- 1936 – ಅಖಿಲ ಭಾರತ ಕಿಸಾನ್ ಸಭಾ ಸ್ಥಾಪನೆ.

32. ಲಾರ್ಡ್ ಲಿನ್‌ಲಿತ್‌ಗೊ (1936–43)

- 1937 – ಫೈಜ್‌ಪುರ್ ಕಾಂಗ್ರೆಸ್ ಅಧಿವೇಶನ (ಸಣ್ಣ ಹಳ್ಳಿಯಲ್ಲಿ ನಡೆಯಿತು)
- 1938 – ಹರಿಪುರ ಕಾಂಗ್ರೆಸ್ ಅಧಿವೇಶನ
- 1939 – ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪನೆ
- ಎರಡನೇ ಮಹಾಯುದ್ಧ ಆರಂಭ
- 1940 – ಮಾರ್ಚ್ 23, ಲಾಹೋರ್ ಘೋಷಣೆ (ಮುಸ್ಲಿಂರಿಗೆ ಪ್ರತ್ಯೇಕ ರಾಷ್ಟ್ರ)
- 1940 – ಆಗಸ್ಟ್ ಆಫರ್
- 1942 – ಕಾನೂನು ಭಂಗ ಚಳುವಳಿ
- 1942 – ಕ್ರಿಪ್ಸ್ ಸಂಧಾನ
- 1942 – ಕ್ವಿಟ್ ಇಂಡಿಯಾ ಚಳುವಳಿ
- 1941 – ಸುಭಾಷ್‌ಚಂದ್ರ ಬೋಸ್ ಬರ್ಲಿನ್‌ಗೆ ಭೇಟಿ

33. ಲಾರ್ಡ್ ವೆವೆಲ್ 1943–1947

- 1944 – ಚ. ರಾಜಗೋಪಾಲಚಾರಿ ಸೂತ್ರ
- 1944 – ಗಾಂಧಿ – ಜಿನ್ನಾ ಮಾತುಕತೆ
- 1946 – ಭಾರತೀಯ ರಾಷ್ಟ್ರೀಯ ಸೈನಿಕರ ವಿಚಾರಣೆ
- 1946 – ಕ್ಯಾಬಿನೆಟ್ ಮಿಷನ್
- 1946 – ಮಧ್ಯಂತರ ಸರ್ಕಾರ ರಚನೆ
- 1946 – ಆಗಸ್ಟ್ 16 ಮುಸ್ಲಿಂ ಲೀಗ್‌ನ ನೇರ ಕಾರ್ಯಾಚರಣೆ

34. ಲಾರ್ಡ್ ಮೌಂಟ್ ಬ್ಯಾಟನ್ (1947)

- 1947 ಆಗಸ್ಟ್ 15, ಭಾರತದ ಸ್ವಾತಂತ್ರ್ಯ
- ಭಾರತ ಮತ್ತು ಪಾಕಿಸ್ತಾನ ರಾಷ್ಟ್ರಗಳ ಉದಯ

ಸ್ವಾತಂತ್ರ್ಯ ಚಳುವಳಿ ಕಾಲದ ಪ್ರಮುಖ ಪತ್ರಿಕೆಗಳು

ಬೆಂಗಾಲ್ ಗಜೆಟ್	– 1780	– ಜೇಮ್ಸ್ ಆಗಸ್ಟಸ್ ಹಿಕೆ
ಇಂಡಿಯಾ ಗೆಜೆಟ್	– 1787	– ಹೆನ್ರಿ ವಿವಿಯನ್ ಡಿರೋಜಿಯಾ
ಮದ್ರಾಸ್ ಕೋರಿಯರ್	– 1784	–
ಬಾಂಬೆ ಹೆರಾಲ್ಡ್	– 1789	–
ಟ್ರಿಬ್ಯೂನ್	– 1881	– ದಯಾಳ್‌ಸಿಂಗ್ ಮಜಿತಾ
ದ ಹಿಂದು	– 1878	– ಜಿ.ಎಸ್. ಅಯ್ಯರ್, ವೀರರಾಘವಾಚಾರಿ
ಇಂಡಿಯಾ ಹೆರಾಲ್ಡ್	– 1795	– ಆರ್. ವಿಲಿಯಮ್ಸ್
ದಿಗ್‌ದರ್ಶನ್	– 1818	– –
ಕಲ್ಕತ್ತಾ ಜರ್ನಲ್	– 1818	– ಜಿ.ಎಸ್. ಬಕಿಂಗ್‌ಯಾನ್
ಇಂಡಿಯನ್ ಮಿರರ್	– 1862	– ದೇವೇಂದ್ರನಾಥ ಠಾಕೂರ್
ಸಂವಾದ ಕೌಮುದಿ	– 1821	– ರಾಜಾರಾಮ್ ಮೋಹನರಾಯ್
ಮೀರತ್ ಅಕ್ಬರ್	– 1822	– ರಾಜಾರಾಮ್ ಮೋಹನರಾಯ್
ಬಂಗಧೂತ	– 1822	– ರಾಜಾರಾಮ್ ಮೋಹನರಾಯ್
ಈಸ್ಟ್ ಇಂಡಿಯನ್	– 19ನೇ ಶತಮಾನ	– ಹೆವ್ರಿ ವಿವಿಯನ್ ಡಿರೋಜಿಯೋ
ಬಾಂಬೆ ಟೈಮ್ಸ್	–1838	– ರಾಬರ್ಟ್ ನೈಟ್
ರಸ್ಟ್ ಗೋಫರ್	– 1851	– ದಾದಾಬಾಯಿ ನವರೋಜಿ
ಹಿಂದೂ ಪೆಟ್ರಿಯಾಟ್	– 1853	– ಗಿರೀಶ್‌ಚಂದ್ರ ಘೋಷ್
ಬೆಂಗಾಳಿ	– 1862	– ಗಿರೀಶ್ ಚಂದ್ರ ಘೋಷ್
ಅಮೃತ್ ಬಜಾರ್	– 1868	– ಸಿಶೀರ್ ಕುಮಾರ್ ಘೋಷ್
ಕೇಸರಿ & ಮರಾಠ	– 1881	– ತಿಲಕ್ ಮತ್ತು ಚಿಪ್ಲುಂಕರ್
ಸ್ವದೇಶಿ ಮಿತ್ರಂ	– –	– ಜಿ.ಎಸ್. ಅಯ್ಯರ್
ಪಾರಿದರ್ಶಕ್	– 1886	– ಬಿಪಿನ್ ಚಂದ್ರ ಪಾಲ್
ಯುಗಾಂತರ	– 1906	– ಬರೀಂದಕುಮಾರ್ ಘೋಷ್, ಭೂಪೇಂದ್ರನಾಥ್ ದತ್
ಸಂಧ್ಯ	– 1906	– ಬ್ರಹ್ಮಬಂದಂ ಉಪಾಧ್ಯಾಯ
ಕಾಲ್	– 1906	– ತಿಲಕ್
ತಲ್ವಾರ್	– 1906	– ವೀರೇಂದ್ರನಾಥ್ ಚಟ್ಟೋಪಾಧ್ಯಾಯ
ಕುಡಿ ಅರಸು	– 1910	– ಇ.ವಿ. ರಾಮಸ್ವಾಮಿ ನಾಯ್ಕರ್
ಬಾಂಬೆ ಕ್ರೋನಿಕಲ್	– 1913	– ಫಿರೋಜ್ ಷಾ ಮೆಹ್ತಾ
ಹಿಂದೂಸ್ಥಾನ್ ಟೈಮ್ಸ್	– 1920	– ಕೆ.ಎಂ. ಫಣಿಕ್ಕರ್
ಬಹಿಷ್ಕೃತ ಭಾರತ	– 1927	– ಬಿ.ಆರ್. ಅಂಬೇಡ್ಕರ್
ಕ್ರಾಂತಿ	– 1927	– ಎಸ್.ಎಸ್. ಮೀರಜ್‌ಕರ್, ಜೆ.ಎನ್. ಜೋಗ್ಲೆಕರ್, ಘಾಟಿಕ್
ಲಂಗಲ್ & ಘನಬಣಿ	– 1927	– ಗೋಪು ಚಕ್ರವರ್ತಿ
ನ್ಯಾಷನಲ್ ಹೆರಾಲ್ಡ್	– 1938	– ಜ. ನೆಹರು
ಬಂದೀ ಜೀವನ್		– ಸಚಿನ್ ಸನ್ಯಾಲ್

ಸೋಶಿಯಲಿಸ್ಟ್	– ಎಸ್.ಎ. ಡಾಂಗೆ
ಪತೇದಬೀ	– ಶರತ್‌ಚಂದ್ರ ಚಟರ್ಜಿ
ಪಕ್ತೂನೆ	– ಖಾನ್ ಅಬ್ದುಲ್ ಗಫಾರ್‌ಖಾನ್
ಹರಿಜನ	– ಗಾಂಧೀಜಿ
ಕಂಬ್ರೇಡ್	– ಮಹಮದ್ ಜಿನ್ನಾ
ಯಂಗ್ ಇಂಡಿಯಾ	– ಗಾಂಧೀಜಿ
ಇಂಡಿಯನ್ ಒಪಿನಿಯನ್	– ಗಾಂಧೀಜಿ
ನ್ಯೂ ಇಂಡಿಯಾ, ಕಾಮನ್ ವೀಲ್	– ಅನಿಬೆಸೆಂಟ್
ಸಂಜೀವಿನಿ	– ಕೃಷ್ಣಕುಮಾರ್ ಮಿತ್ರ
ವಂದೇ ಮಾತರಂ	– ಮೇಡಂ ಬಿಕೆಜಿ ಕಾಮ (ಪ್ಯಾರಿಸ್‌ನಿಂದ ಪ್ರಕಟ)
ಪಂಜಾಬಿ	– ಲಾಲಾ ಲಜಪತ್ ರಾಯ್

ಪ್ರಸಿದ್ಧ ಪುಸ್ತಕಗಳು ಮತ್ತು ಲೇಖಕರು

1. ಇಂಡಿಯನ್ ವಿನ್ಸ್ ಫ್ರೀಡಂ	– ಅಬ್ದುಲ್ ಕಲಾಂ ಅಜಾದ್
2. ಇಂಡಿಯಾ ದಿವೈಡೆಡ್	– ರಾಜೇಂದ್ರ ಪ್ರಸಾದ್
3. ಇಂಡಿಯನ್ ಸ್ಟ್ರಗಲ್ ಫಾರ್ ಫ್ರೀಡಂ	– ಸುಭಾಷ್‌ಚಂದ್ರ ಬೋಸ್
4. ವಿಥರ್ ಇಂಡಿಯಾ	– ಜವಹರ್‌ಲಾಲ್ ನೆಹರು
5. ಗ್ಲಿಮ್ಸ್ ಆಫ್ ವರ್ಲ್ಡ್ ಹಿಸ್ಟರಿ	– ಜವಹರ್‌ಲಾಲ್ ನೆಹರು
6. ಆ್ಯನ್ ಆಟೋಬಯೋಗ್ರಫಿ	– ಜವಹರ್‌ಲಾಲ್ ನೆಹರು
7. ಡಿಸ್ಕವರಿ ಆಫ್ ಇಂಡಿಯಾ	– ಜವಹರ್‌ಲಾಲ್ ನೆಹರು
8. ಎ. ಬಂಚ್ ಆಫ್ ಓಲ್ಡ್ ಲೆಟರ್ಸ್	– ಜವಹರ್‌ಲಾಲ್ ನೆಹರು
9. ಬಹಿಷ್ಕೃತ ಭಾರತ್	– ಅಂಬೇಡ್ಕರ್
10. ಅನಿಲೇಷನ್ ಆಫ್ ಕಾಸ್ಟ್	– ಅಂಬೇಡ್ಕರ್
11. ಗೋಲ್ಡನ್ ಥ್ರೆಶೋಲ್ಡ್	– ಸರೋಜಿನಿ ನಾಯ್ಡು
12. ಸಾಂಗ್ಸ್ ಆಫ್ ಇಂಡಿಯಾ	– ಸರೋಜಿನಿ ನಾಯ್ಡು
13. ಗೀತಾ ರಹಸ್ಯ	– ಬಾಲಗಂಗಾಧರ್ ತಿಲಕ್
14. ಕೂಲಿ	– ಮುಲ್ಕರಾಜ್ ಆನಂದ್
15. ಸೆವೆನ್ ಸೊಮೇರುಸ್	– ಮುಲ್ಕರಾಜ್ ಆನಂದ್
16. ದ ಬ್ರೈಡ್ಸ್ ಬುಕ್ ಆಫ್ ಬ್ಯೂಟಿ	- ಮುಲ್ಕರಾಜ್ ಆನಂದ್
17. ಎ ಅನ್‌ಟಚಬಲ್	– ಮುಲ್ಕರಾಜ್ ಆನಂದ್
18. ಸೋಮನಿ ಆ್ಯಂಗ್ರೀಸ್	– ಭವಾನಿ ಬಟ್ಟಾಚಾರ್ಯ
19. ಹಿಂದೂ ಸ್ವರಾಜ್	– ಮಹಾತ್ಮಾ ಗಾಂಧೀಜಿ
20. ಮೈ ಎಕ್ಸ್‌ಪೆರಿಮೆಂಟ್ ವಿತ್ ಟ್ರೂತ್	– ಮಹಾತ್ಮ ಗಾಂಧೀಜಿ
21. ಅನ್‌ಹ್ಯಾಪಿ ಇಂಡಿಯಾ	– ಲಾಲ ಲಜಪತ್‌ರಾಯ್

ಪ್ರಸಿದ್ಧ ಹೇಳಿಕೆಗಳು

1. "Cripps proposal is post dated cheque on crashing Bank" –ಮಹಾತ್ಮ ಗಾಂಧೀಜಿ

2. "If god we to tolerate untauchability. I never consider him as god" - ಬಾಲಗಂಗಾಧರ ತಿಲಕ್

3. "Out of the sands of India I will great movement it is greater than the congress" - ಗಾಂಧೀಜಿ

4. "Give me blood I will give freedom to you" – ಸುಭಾಷ್‌ಚಂದ್ರ ಬೋಸ್

5. "To sound the retrect when public enthuiasam was reaching the boiling was nothing shart of a calamity" - ಸುಭಾಷ್ ಚಂದ್ರ ಬೋಸ್

6. "The only hope for India is from the masses. The upper classes are morally and physically dead" - ವಿವೇಕಾನಂದ

7. "Congress is tottering to its fall one of my great ambition in India is to see its demise" - ಲಾರ್ಡ್ ಕರ್ಜನ್

8. "Hindus and Muslim are two eyes of newly weded couple" – ಸಯ್ಯದ್ ಅಹ್ಮದ್ ಖಾನ್

26. ಗಾಂಧಿಯುಗ - 1919-1947 (The Gandhian Era)

- ಗಾಂಧೀಜಿಯವರು ಅಕ್ಟೋಬರ್ 02, 1869ರಂದು ಗುಜರಾತ್‌ನ **ಪೋರಬಂದರ್‌**ನಲ್ಲಿ ಜನಿಸಿದರು. ಕರಮಚಂದ ಗಾಂಧಿ ಮತ್ತು ಪುತಲೀಬಾಯಿ ಇವರ ತಂದೆ ತಾಯಿಗಳು. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ **ಸತ್ಯ ಮತ್ತು ಅಹಿಂಸೆ** ಆಧರಿಸಿದ ಚಳುವಳಿಯ ಯಶಸ್ಸು ಅವರು ನಾಯಕರಾಗಿ ಬೆಳೆಯಲು ಸಹಕಾರಿಯಾಯಿತು.
- ಗಾಂಧೀಜಿಯವರು **1893–1914ರವರೆಗೆ ದಕ್ಷಿಣ ಆಫ್ರಿಕಾ ಸರ್ಕಾರದ** ವರ್ಣಭೇದ ನೀತಿಯ ವಿರುದ್ಧ ಹೋರಾಟ ಹಾಗೂ ಭಾರತೀಯರ ಮೇಲೆ ಅಲ್ಲಿನ ಸರ್ಕಾರ ಹೇರಿದ್ದ ಕೆಲವು ನಿರ್ಬಂಧಗಳನ್ನು ತೆರವುಗೊಳಿಸುವಲ್ಲಿ ಯಶಸ್ವಿಯಾದರು. ನಂತರ **ಜನವರಿ 09 1915ರಂದು** ಭಾರತಕ್ಕೆ ಬಂದರು.
- ಗಾಂಧಿಯವರ ಪ್ರಮುಖ ಅಸ್ತ್ರಗಳೆಂದರೆ – ಅಹಿಂಸೆ, ಸತ್ಯಾಗ್ರಹ, ಅಸಹಕಾರ, ಸತ್ಯಾಗ್ರಹದ 02 ಅಂಶಗಳೆಂದರೆ ಸತ್ಯ ಮತ್ತು ಅಹಿಂಸೆ. ಸತ್ಯಾಗ್ರಹವನ್ನು ಅವರು ಆತ್ಮಶಕ್ತಿ ಅಥವಾ ಪ್ರೇಮ ಶಕ್ತಿಯೆಂದು ಸೂಚಿಸಿದರು. ಆ ಶಕ್ತಿಯು ಸತ್ಯ ಮತ್ತು ಅಹಿಂಸೆಯಿಂದ ಹುಟ್ಟಿದುದು ಎಂದಿದ್ದಾರೆ.

ಗಾಂಧೀಜಿಯ ಮೇಲೆ ಪ್ರಭಾವ ಬೀರಿದ ಕೃತಿಗಳು

1. ಜಾನ್ ರಸ್ಕಿನ್ ಅವರ UNTO THE LAST
2. ಲಿಯೋನಾರ್ಡ್ ಟಾಯ್‌ಸ್ಟಾಯ್ ಅವರ – Kingdom of God is within you
3. ಹೆನ್ರಿ ಡೆವಿಡ್ ಅವರ – Civil Dis Obidience

- ಗಾಂಧೀಜಿ ಅವರಿಗೆ **ಮಹಾತ್ಮ** ಎಂಬ ಬಿರುದು ನೀಡಿದವರು ರವೀಂದ್ರನಾಥ ಠಾಕೂರ್.
- ಗಾಂಧೀಜಿ ಅವರಿಗೆ **ಕೈಸರ್–ಇ=ಹಿಂದ್** ಎಂಬ ಬಿರುದನ್ನು ಇಂಗ್ಲೆಂಡಿನ ರಾಣಿ ನೀಡಿದಳು.
- ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ **ಇಂಡಿಯನ್ ಒಪಿನಿಯನ್** ಎಂಬ ಪತ್ರಿಕೆ ಆರಂಭಿಸಿದರು.

ಗಾಂಧೀಜಿ ಅವರು ರಚಿಸಿದ ಕೃತಿಗಳು

1. My Experiments with Truth
2. Hindu Swarj

ಗಾಂಧೀಜಿಯವರು ಆರಂಭಿಸಿದ ಪತ್ರಿಕೆಗಳು

1. ಹರಿಜನ
2. ನವಜೀವನ
3. ಸರ್ವೋದಯ
4. ಇಂಡಿಯಾ ಒಪಿನಿಯನ್

- ಗಾಂಧೀಜಿಯವರು UNTO THE LAST ಕೃತಿಯನ್ನು ಗುಜರಾತಿ ಭಾಷೆಗೆ ಸರ್ವೋದಯ ಶೀರ್ಷಿಕೆಯಡಿ ಭಾಷಾಂತರಿಸಿದ್ದಾರೆ.
- ಗಾಂಧೀಜಿಯವರು ಗೋಪಾಲಕೃಷ್ಣ ಗೋಖಲೆಯನ್ನು ತಮ್ಮ ರಾಜಕೀಯ ಗುರು ಎಂದರು.

ಚಂಪಾರಣ್ಯ ಸತ್ಯಾಗ್ರಹ (ತಿಂಕಥಿಯಾ ಪದ್ಧತಿ) – 1917

- ಇದು ಗಾಂಧೀಜಿಯವರು ಕೈಗೊಂಡ ಮೊಟ್ಟ ಮೊದಲ ಸತ್ಯಾಗ್ರಹವಾಗಿದ್ದು, ಜರ್ಮನ್ನರು ಕೃತಕ ನೀಲಿ ಕಂಡುಹಿಡಿದಿದ್ದರಿಂದ ಭಾರತೀಯರ ನೀಲಿಗೆ ಬೇಡಿಕೆ ಇಲ್ಲದಾಯಿತು. ಆಂಗ್ಲರು ನೀಲಿಯನ್ನು ಕಡಿಮೆ ಬೆಲೆಗೆ ಮಾರಲು ರೈತರ ಮೇಲೆ ದಬ್ಬಾಳಿಕೆ ನಡೆಸಿದರು. ಇದನ್ನು ರಾಜೀವ್ ಶುಕ್ಲಾ ಅವರು ಗಾಂಧೀಜಿಗೆ ತಿಳಿಸಿದರು.
- ಬ್ರಿಟಿಷರು 1/20ನೇ ಭಾಗದಲ್ಲಿ ನೀಲಿ ಬೆಳೆಯಲು ಒತ್ತಾಯಿಸುತ್ತಿದ್ದು ಮತ್ತು ಅದನ್ನು ನಿಗದಿಪಡಿಸಿದ ಬೆಲೆಗೆ ಮಾರಾಟ ಮಾಡಬೇಕಿತ್ತು. ಇದನ್ನು **ಥಿಂಕತೀಯ ಪದ್ಧತಿ** ಎನ್ನುವರು.
- ಆಂಗ್ಲರು ರೈತರ ನೇಗಿಲುಗಳನ್ನು ಕಿತ್ತುಕೊಂಡು ಕಾರ್ಖಾನೆ ಯಲ್ಲಿಡುತ್ತಿದ್ದರು. ಇದನ್ನು ಸತ್ತಾ ಎಂದು ಕಾರ್ಖಾನೆಯ ಅಮಾಲರು ರೈತರ ಕೂಲಿಯಿಂದ ಗಾಡಿ ಬಾಡಿಗೆಯಿಂದಲೂ $^1/_5$ನೇ ಭಾಗವನ್ನು ದಸ್ತೂರಿ ಎಂಬುದಾಗಿ ವಸೂಲಿ ಮಾಡುತ್ತಿದ್ದರು.
- ಗಾಂಧೀಜಿಯ ಜೊತೆ ಎ.ಎನ್. ಸಿನ್ಹಾ, ರಾಜೇಂದ್ರ ಪ್ರಸಾದ್, ಜೆ.ಬಿ. ಕೃಪಲಾನಿ, ಇಂದುಲಾಲ್ ಯಾಜ್ಞಿಕ್, ವೆಜ್‌ಹಾರ್–ಉಲ್–ಹಕ್ ಮತ್ತು ಮಹದೇವ ದೇಸಾಯಿಯವರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

- ನಂತರ ಗಾಂಧೀಜಿಯವರು ಅಹ್ಮದಾಬಾದ್‌ಗೆ ತೆರಳಿ ಬಟ್ಟೆ ಗಿರಣಿ, ಕಾರ್ಮಿಕರ ಮತ್ತು ಮಾಲೀಕರ ಬಿಕ್ಕಟ್ಟು ಬಗೆಹರಿಸಲು ಅಮರಣಾಂತ ಉಪವಾಸ ಕೈಗೊಳ್ಳುವ ಮೂಲಕ 21 ದಿನಗಳ ಮುಷ್ಕರ ಹೂಡಿ ಬಿಕ್ಕಟ್ಟನ್ನು 1918ರಲ್ಲಿ ಬಗೆಹರಿಸಿದರು.

ಖೇಡಾ ಸತ್ಯಾಗ್ರಹ-1918

- ಗುಜರಾತಿನ ಖೇಡಾ ಜಿಲ್ಲೆಯಲ್ಲಿ ವ್ಯಾಪಕ ಬರಗಾಲ ತಲೆದೋರಿತು. ಇದರಿಂದ ರೈತರು ಕಂದಾಯ ಮನ್ನಾ ಮಾಡಬೇಕೆಂದು ಕೇಳಿಕೊಂಡರು. ಆದರೆ ಫಲಕಾರಿಯಾಗಲಿಲ್ಲ.
- ಮಾರ್ಚ್ 22, 1918ರಂದು ಪಟ್ಟಿದಾರರು ಗಾಂಧೀಜಿಯವರನ್ನು ಸತ್ಯಾಗ್ರಹ ಹೂಡುವಂತೆ ಕೇಳಿದರು. ಖೇಡಾದಲ್ಲಿ ಸ್ವಯಂ ಸೇವಕರ ಜೊತೆ ಗಾಂಧೀಜಿ ಮತ್ತು ವಲ್ಲಬಾಯ್ ಪಟೇಲ್ ಇದರ ನೇತೃತ್ವ ವಹಿಸಿದರು.
- ಗಾಂಧೀಜಿ ಮತ್ತು ಪಟೇಲ್‌ರ ಬೆಂಬಲಿಗರಾಗಿ ಶಂಕರ್‌ಲಾಲ್ ಬ್ಯಾಂಕರ್, ಅನುಸೂಯ ಬಹೆನ್, ಇಂದುಲಾಲ್ ಯಾಜ್ಞಿಕ್ ಮತ್ತು ಮಹಾದೇವ ದೇಸಾಯಿ ಭಾಗವಹಿಸಿದರು.
- ಗಾಂಧೀಜಿ ಹೇಳುವಂತೆ: ರೈತರ ಗುಂಪು ಸರ್ಕಾರಕ್ಕೆ ತಾವಾಗಿಯೇ ಕಂದಾಯ ಪಾವತಿ ಮಾಡುವುದಿಲ್ಲ, ಆತ್ಮಗೌರವ ಕಳೆದುಕೊಳ್ಳುವುದಕ್ಕಿಂತ ತಮ್ಮ ಜಮೀನು ಕಳೆದುಕೊಳ್ಳಲು ಸಿದ್ಧ ಎಂದರು.
- ಬ್ರಿಟಿಷ್ ಕಮಿಷನರ್‌ಗೆ ಅವಿಧೇಯರಾಗಿರುವವರೆಗೆ ಇನ್ನು ಮುಂದೆ ಜಮೀನು ದೊರಕುವುದಿಲ್ಲ ಮತ್ತು ಜಮೀನು ಹಕ್ಕಿನ ದಾಖಲೆಗಳನ್ನು ವಜಾ ಮಾಡುವುದಾಗಿ ಬೆದರಿಕೆ ಹಾಕಿದರು.
- **ಫಲಿತಾಂಶ:** ಯಾವ ಬಲಿಷ್ಠ ಸರ್ಕಾರವೂ ಜನರ ಸಂಕಲ್ಪಕ್ಕೆ ವಿರುದ್ಧವಾಗಿ ನಿಲ್ಲಲಾರದು ಮತ್ತು ಜನರ ಒಪ್ಪಿಗೆಯಿಲ್ಲದೆ ಆಳುವುದು ಅಸಾಧ್ಯ ಎಂದು ಬ್ರಿಟಿಷರಿಗೆ ಅರಿವಾಯಿತು.
- ಈ ಸತ್ಯಾಗ್ರಹ ದೆಸೆಯಿಂದಾಗಿ ವಲ್ಲಭಬಾಯ್ ಪಟೇಲರು ಬ್ಯಾರಿಷ್ಟರ್ ವೃತ್ತಿ ತ್ಯಜಿಸಿ ಗಾಂಧೀಜಿಯ ಅನುಯಾಯಿಯಾದರು.
- ಗಾಂಧೀಜಿಯವರು 1919ರಲ್ಲಿ ರೌಲತ್ ಕಾಯ್ದೆ ವಿರೋಧಿಸಲು **ಸತ್ಯಾಗ್ರಹ ಸಭಾ** ಸ್ಥಾಪಿಸಿದರು.

ರೌಲತ್ ಕಾಯ್ದೆ / ಕಪ್ಪು ಕಾಯ್ದೆ (Rowlatt Act)-1919

- **ಸಿಡ್ನಿ ರೌಲತ್‌ನು** ಈ ಕಾಯ್ದೆಯನ್ನು ಜಾರಿಗೆ ತಂದನು. ಈ ಸಮಿತಿಯಲ್ಲಿ 35 ಜನ ಸದಸ್ಯರಿದ್ದರು. ಇದರಲ್ಲಿದ್ದ ಭಾರತೀಯ ಏಕೈಕ ಸದಸ್ಯರೆಂದರೆ **ಶಂಕರನ್ ನಾಯರ್**. ಈ ಸಮಿತಿಯ ಮುಖ್ಯ ಶಿಫಾರಸ್ಸುಗಳೆಂದರೆ

1. ಯಾವುದೇ ವ್ಯಕ್ತಿಯನ್ನು ಕಾರಣ ನೀಡದೆ ಬಂಧಿಸುವುದು.
2. ವಿಚಾರಣೆ ಮಾಡದೆ 2 ವರ್ಷಗಳ ಕಾಲ ಬಂಧನದಲ್ಲಿಡುವುದು.
3. ಸರ್ಕಾರದ ಕಾರ್ಯಗಳನ್ನು ಪ್ರತಿಭಟಿಸುವ ಸಾಹಿತ್ಯ ರಚನೆಯ
4. ಸಾರ್ವಜನಿಕ ಸಭೆ ಸೇರುವಂತಿಲ್ಲ, ಮಾರಕಾಸ್ತ್ರ ಬಳಸುವಂತಿಲ್ಲ.
5. ಬಂಧಿತ ವ್ಯಕ್ತಿಯು ತನ್ನ ಪರ ತಾನೇ ವಾದಿಸಲೇಬೇಕಿತ್ತು.
6. ಪತ್ರಿಕಾ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿತು.

- ರೌಲತ್ ಕಾಯ್ದೆಯನ್ನು ವಿರೋಧಿಸಲು ಗಾಂಧೀಜಿ ನೇತೃತ್ವದಲ್ಲಿ ಡಿ.ಇ. ವಾಚಾ, ಸುರೇಂದ್ರನಾಥ್ ಬ್ಯಾನರ್ಜಿ, ತೇಜ್‌ಬಹುದ್ದೂರ್ ಸಪ್ರು, ಶ್ರೀನಿವಾಸ ಶಾಸ್ತ್ರಿ, ಜಿನ್ನಾ ಮುಂತಾದ 15 ಅಧಿಕಾರೇತರ ಕೌನ್ಸಿಲ್ ಸದಸ್ಯರು ಸತ್ಯಾಗ್ರಹ ಮಾಡಲು ತೀರ್ಮಾನಿಸಿದರು. ಇದು ಅಖಿಲ ಭಾರತ ಮಟ್ಟದ ಮೊದಲ ಸತ್ಯಾಗ್ರಹ.
- ಗಾಂಧೀಜಿಯವರು ಈ ಕಾಯ್ದೆಯನ್ನು ವಿರೋಧಿಸಲು **ಸತ್ಯಾಗ್ರಹ ಸಭಾವನ್ನು** ಸ್ಥಾಪಿಸಿದರು. ಗಾಂಧೀಜಿ ಜನರಿಗೆ ಸತ್ಯಾಗ್ರಹಿಗಳಿಗೆ ಅಹಿಂಸೆ ಯಾವಾಗಲೂ ಸ್ವಾಗತಾರ್ಹವೆಂದೂ ಹಾಗೂ ಆತ್ಮ ಬಲಿದಾನವಿಲ್ಲದೆ ಯಾವ ರಾಷ್ಟ್ರವೂ ನಿರ್ಮಾಣವಾಗುವುದಿಲ್ಲ ಎಂದು ಕರೆ ನೀಡಿದರು.
- ಈ ಕಾಯ್ದೆಯನ್ನು ಕಪ್ಪು ಕಾಯ್ದೆ ಎಂದು ಕರೆಯಲು ಕಾರಣ ಬ್ರಿಟಿಷರು ಯಾರೇ ಒಬ್ಬ ವ್ಯಕ್ತಿಯನ್ನು ಬಂಧಿಸಿ ಯಾವುದೇ ವಿಚಾರಣೆಯಿಲ್ಲದೆ 02 ವರ್ಷಕಾಲ ಜೈಲಿನಲ್ಲಿಡಬಹುದಾಗಿತ್ತು.
- ಗಾಂಧೀಜಿಯವರು ಪಂಜಾಬ್ ಪ್ರಾಂತ್ಯ ಪ್ರವೇಶಿಸಲು ಸರ್ಕಾರ ಇಷ್ಟಪಡದೆ ಏಪ್ರಿಲ್ 09, 1919ರಂದು ಅವರನ್ನು ಬಂಧಿಸಿತು. ಈ ಸಂದರ್ಭದಲ್ಲಿ ಪಂಜಾಬ್‌ನ ನಾಯಕರಾದ ಕಿಚ್ಲು ಮತ್ತು ಡಾ. ಸತ್ಯಪಾಲರನ್ನು ಬಂಧಿಸಿತು.
- ಬಹಿಷ್ಕೃತವಾಗಿದ್ದ ಗಾಂಧೀಜಿಯವರ **ಹಿಂದೂ ಸ್ವರಾಜ್** ಮತ್ತು **ಸರ್ವೋದಯ** ಕೃತಿಗಳನ್ನು ಸರೋಜಿನಿನಾಯ್ಡು ಮಾರಾಟ ಮಾಡಲು ಮುಂದಾದರು.

ಜಲಿಯನ್ ವಾಲಾಬಾಗ್ ದುರಂತ-1919 (ಏಪ್ರಿಲ್ 13)
Jallian Wala Bagh Assacee

- ಜಲಿಯನ್ ವಾಲಾಬಾಗ್ ಎಂದು ಹೆಸರು ಬರಲು ಕಾರಣ ರಾಜಾ ರಣಜಿತ್‌ಸಿಂಗ್‌ನ ಆಸ್ಥಾನದ **ಜಲ್ಲ** ಎಂಬುವವನು ಕಟ್ಟಿಸಿದ ಉದ್ಯಾನವವಾಗಿದೆ.
- ರೌಲತ್ ಕಾಯ್ದೆಯನ್ನು ವಿರೋಧಿಸಲು ಪಂಜಾಬಿನ ಅಮೃತಸರ ಜಿಲ್ಲೆಯ ಜಲಿಯನ್ ವಾಲಾಬಾಗ್‌ನಲ್ಲಿ **ಸತ್ಯಪಾಲ್** ಮತ್ತು **ಸೈಫುದ್ದೀನ್ ಕಿಚ್ಲುರವರು** ಕಾಂಗ್ರೆಸ್ ವಾರ್ಷಿಕ ಸಭೆ ನಡೆಸಲು ತಯಾರಿ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಜನರಲ್ ಡಯಾರ್‌ನು ಇವರನ್ನು ಬಂಧಿಸಿದನು.
- ಇದನ್ನು ವಿರೋಧಿಸಿದ ಜನರು ಸಭೆ ಸೇರಿದ್ದರು. ಡಯಾರ್‌ನು ತನ್ನ ಸೈನಿಕರಿಗೆ ಜನರ ಮೇಲೆ ಗುಂಡು ಹಾರಿಸಲು ಸೂಚಿಸಿದ್ದನು. ಇದರಿಂದ **379 ಜನ** ಸಾವಿಗೀಡಾದರು.
- ಈ ಘಟನೆಯನ್ನು ಪ್ರತಿಭಟಿಸಲು ರವೀಂದ್ರನಾಥ ಠಾಕೂರ್ ತಮಗೆ

ಇ-ಹಿಂದ್ ಎಂಬ ಪದವಿಯನ್ನು ತಿರಸ್ಕರಿಸಿದರು.

- ಠಾಕೂರ್ ಮತ್ತು ಅವರ ಸ್ನೇಹಿತರಾದ ಸಿ.ಎಫ್. ಆಂಡ್ರೂಸ್, ನೆಹರೂ, ಗಾಂಧೀಜಿ, ಅಮೃತಸರಕ್ಕೆ ಭೇಟಿ ನೀಡಿದರು. ಮಹದೇವ ದೇಸಾಯಿಯವರು ಈ ಘಟನೆ ಕುರಿತು **ಅದೊಂದು ಕಗ್ಗೊಲೆ, ಒಂದು ಕೊಲೆಗಡುಕತನ** ಎಂದು ಟೀಕಿಸಿದರು.
- ಏಪ್ರಿಲ್ 13, 1919ರಂದು ಡಯರ್ ಕರ್ಫ್ಯೂ ಜಾರಿ ಮಾಡಿ ಎಲ್ಲಾ ಜನರು ರಾತ್ರಿ 08 ಗಂಟೆಯ ನಂತರ ಮನೆಯೊಳಗಿರಬೇಕು. ಹೊರಗಡೆಯಿದ್ದರೆ ಕಂಡಲ್ಲಿ ಗುಂಡು ಹಾರಿಸಲಾಗುವುದೆಂದು ಘೋಷಿಸಿದನು.
- ಗಲಭೆಕಾರರು ಆಂಗ್ಲ ಮುಖ್ಯೋಪಾಧ್ಯಾಯಿನಿ **ಮಿಸ್‌ಶೇರ್‌ವುಡ್‌ಳನ್ನು** ಗಾಯಗೊಳಿಸಿದರು. ಇದನ್ನು ಗಮನಿಸಿದರೆ ಡಯರ್ **ಕುಚಾತವಾರಿನ್** ಮಾರ್ಗದಲ್ಲಿ ಭಾರತೀಯರು ತೆವಳಿಕೊಂಡು ಹೋಗುವಂತೆ **ಕಾಲಿಂಗ್ ಆರ್ಡರ್** ಹೊರಡಿಸಿದನು. ಇದರಿಂದ ಪಂಜಾಬಿನಲ್ಲಿ ಭಯಾನಕ ಆಳ್ವಿಕೆ ಉಂಟಾಯಿತು.
- **ಫಲಿತಾಂಶ:** ರೌಲತ್ ಕಾಯ್ದೆಯ ವಿರುದ್ಧ ಕೈಗೊಂಡ ಹರತಾಳ ವ್ಯವಸ್ಥಿತವಾಗಿ ನಡೆಯಲಿಲ್ಲ. ಗಾಂಧೀಜಿ ಇದನ್ನು **ಹಿಮಾಲಯದೆತ್ತರದ ತಪ್ಪು ಲೆಕ್ಕಾಚಾರ** ಎಂದು ಭಾವಿಸಿ ಸತ್ಯಾಗ್ರಹ ನಿಲುಗಡೆ ಮಾಡಿದರು.
- ಬ್ರಿಟನ್‌ನ ಹೌಸ್ ಆಫ್ ಲಾರ್ಡ್ಸ್ ಡಯಾರನ ಕೃತ್ಯವನ್ನು ಪುರಸ್ಕರಿಸಿತು. ಇದನ್ನು ಗಮನಿಸಿದ ಗಾಂಧೀಜಿ ಬ್ರಿಟನ್ ಸರ್ಕಾರವನ್ನು ಪೈಶಾಚಿಕ ಸರ್ಕಾರ ಎಂದರು. ಡಯಾರ್‌ನನ್ನು ಲಂಡನ್‌ನಲ್ಲಿ ಉದಾಮಸಿಂಗ್‌ನು ಕೊಲೆಗೈದನು.

ಹಂಟರ್ ಆಯೋಗ (ಮಾಂಟೆಗೋ ಚೆಲ್ಸ್‌ಮ ಫರ್ಡ್‌ನ ಅವಧಿ)

- ಪಂಜಾಬಿನ ದುಷ್ಕೃತ್ಯಗಳನ್ನು ವಿಚಾರಿಸಲು **ಹಂಟರ್ ನೇತೃತ್ವದ** ಆಯೋಗ ರಚಿಸಲಾಯಿತು. ಒಟ್ಟು 08 ಜನರಿದ್ದ ಈ ಆಯೋಗದಲ್ಲಿ ಮೂವರು ಭಾರತೀಯರಾದ **ಸುಲ್ತಾನ್ ಅಹ್ಮದ್, ಚಿಮನ್‌ಲಾಲ್ ಸೆಟಲ್‌ವಾಡ್** ಮತ್ತು **ಪಂ. ಜಗತ್‌ನಾರಾಯಣ್** ಇದ್ದರು.
- ಬ್ರಿಟನ್ನಿನ ಕಾಮನ್ಸ್ ಸಭೆಯಲ್ಲಿ ಡಯರ್‌ನ ಈ ಕೃತ್ಯವನ್ನು ಮಾಂಟೆಗೋ ಖಂಡಿಸಿದನು. ಆದರೆ ಬ್ರಿಟನ್ ಸರ್ಕಾರ ಡಯರ್‌ನನ್ನು ಹೊಗಳಿತು.
- ಇದೇ ಕಾಲಕ್ಕೆ ಭಾರತ ಸರ್ಕಾರವು ಶಾಂತಿ ಸುವ್ಯವಸ್ಥೆ ಸ್ಥಾಪಿಸಲು ಏನೇ ಕ್ರಮ ಕೈಗೊಂಡರೂ ಅವರಿಗೆ ರಕ್ಷಣೆ ನೀಡಿ ಶಿಕ್ಷೆ ಮತ್ತು ಜುಲ್ಮಾನೆ ವಿನಾಯ್ತಿ ನೀಡುತ್ತೇವೆಂದು ಭರವಸೆ ಕೊಡುವ **ಇಂಡೆಮ್ನಿಟಿ ಕಾಯ್ದೆಯನ್ನು** ಅಂಗೀಕರಿಸಿತು. ಇದನ್ನು **ವೈಟ್ ವಾಷಿಂಗ್ ಬಿಲ್** ಎಂದು ಟೀಕಿಸಲಾಯಿತು.
- ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲು ಕಾಂಗ್ರೆಸ್ ಸಮಿತಿಯ ಗಾಂಧೀಜಿ, ಮೋತಿಲಾಲ್ ನೆಹರು, ಸಿ.ಆರ್. ದಾಸ್ ಫಜಾ ಉಲ್‌ಹಕ್, ಅಬ್ಬಾಸ್ ತ್ಯಬ್ಜಿ, ಎಂ.ಆರ್. ಜಯಕರ್ ಒಳಗೊಂಡ ಎಂದು ತಿಳಿಸಿತು.
- ಡಯಾರ್‌ನ ಸಹಾಯಾರ್ಥ ನಿಧಿ ಸ್ಥಾಪನೆಗೆ ಮಾರ್ನಿಂಗ್ ಪೋಸ್ಟ್ ಪತ್ರಿಕೆ ಬೆಂಬಲಿಸಿತು. ಲಾಹೋರ್ ಯೂರೋಪಿಯನ್ನರು ಡಯಾರ್‌ನನ್ನು ಬಡವರ ರಕ್ಷಕ ಎಂದರು.

ಅಮೃತ್‌ಸರ್ ಕಾಂಗ್ರೆಸ್ ಅಧಿವೇಶನ-1919

- ಇದರ ಅಧ್ಯಕ್ಷತೆಯನ್ನು **ಮೋತಿಲಾಲ್ ನೆಹರೂ** ವಹಿಸಿದ್ದರು. ಇಲ್ಲಿ ಬ್ರಿಟನ್ ಸರ್ಕಾರಕ್ಕೆ ಭಾರತದಲ್ಲಿ **ಜವಾಬ್ದಾರಿ ಸರ್ಕಾರ** ರಚಿಸಲು ಒತ್ತಾಯಿಸಲಾಯಿತು.
- ಜಲಿಯನ್ ವಾಲಾಬಾಗ್ ದುರಂತದ ಕಾರಣಕರ್ತ ಡಯರ್ ನಿರಪರಾಧಿ ಎಂದು ಚೆಲ್ಸ್‌ಮ ಫರ್ಡ್ ತೀರ್ಪು ನೀಡಿದ್ದನು.
- ಗಾಂಧೀಜಿಯು ಜನತೆಗೆ ಭಾರತೀಯರು ಕೈಕಟ್ಟಿ ಕುಳಿತು ಏನನ್ನು ಬಯಸಬಾರದು. ಬ್ರಿಟನ್ ಸಂವಿಧಾನದಲ್ಲಿ ಹೋರಾಡದೆ ಯಾರೂ ಏನನ್ನು ಗಳಿಸಲಾಗುವುದಿಲ್ಲ ಎಂದರು. ಅದೇ ರೀತಿ ಅವರು ಸೈತಾನನ ಸರ್ಕಾರಕ್ಕೆ ಯಾವುದೇ ರೀತಿಯ ಸಹಕಾರ ತೋರುವುದು ಪಾಪಕರ ಎಂದರು.

ಖಿಲಾಫತ್ ಚಳುವಳಿ-1920 (Khilafat Movement)

- ಪ್ರಥಮ ಜಾಗತಿಕ ಯುದ್ಧದ ನಂತರ (ಸೇವರ್ಸ್ ಒಪ್ಪಂದ-1920) ವಿಶ್ವದ ಮುಸ್ಲಿಂರ ಧಾರ್ಮಿಕ ಗುರುವಾಗಿದ್ದ ಟರ್ಕಿಯ ಸುಲ್ತಾನನ ಅಧಿಕಾರವನ್ನು ಮೊಟಕುಗೊಳಿಸಲಾಗುತ್ತದೆ. ಈ ಅಧಿಕಾರವನ್ನು ಹಿಂತಿರುಗಿ ಪಡೆಯಲು ಭಾರತದ ಮುಸ್ಲಿಂ ಸಹೋದರರಾದ ಮಹ್ಮದ್ ಆಲಿ ಮತ್ತು ಶೌಕತ್ ಆಲಿ ಗಾಂಧೀಜಿಯವರೊಂದಿಗೆ ಖಿಲಾಪತ್ ಚಳುವಳಿ ಆರಂಭಿಸಿದರು.
- ಈ ಚಳುವಳಿಯ ನೇತೃತ್ವವನ್ನು **ಎಂ.ಎ. ಅನ್ಸಾರಿ** ವಹಿಸಿದ್ದರು. 1920 ಮೇ 28 ಬಾಂಬೆಯಲ್ಲಿ ಖಿಲಾಪತ್ ಸಮಿತಿಯು ಖಿಲಾಪತ್ ಸಮಸ್ಯೆ ವಿರುದ್ಧ ಹೋರಾಡಲು ಗಾಂಧೀಜಿಯ ಅಸಹಕಾರವೇ ಉತ್ತಮ ಸಾಧನ ಎಂದಿತು. ನವೆಂಬರ್ **1919ರಲ್ಲಿ ಅಖಿಲ ಭಾರತ ಖಿಲಾಫತ್ ಸಮಿತಿ** (ದೆಹಲಿ) ರಚನೆ. ಇದರ ಮೊದಲ ಅಧ್ಯಕ್ಷರು **ಗಾಂಧೀಜಿಯಾಗಿ**ದ್ದರು.
- ಮೌಲಾನಾ ಆಜಾದ್‌ರು ಹಿಂದೂಗಳ ಸಹಕಾರವನ್ನು ನಾವು ಮರೆತದ್ದೇ ಆದರೆ ಮುಸ್ಲಿಂರ ವಹಿಕ ಅಸ್ತಿತ್ವವೇ ಗಂಡಾಂತರಕ್ಕೆ. ಒಳಗಾದೀತು ಎಂದರು.
- ಗಾಂಧೀಜಿಯವರು ಸುಮಾರು ಒಂದು ಶತಮಾನದಲ್ಲಿ ಸಾಧ್ಯವಾಗದ ಹಿಂದೂ-ಮುಸ್ಲಿಂರನ್ನು ಒಟ್ಟುಗೂಡಿಸುವ ಸದಾವಕಾಶವನ್ನು ಖಿಲಾಪತ್ ತಂದುಕೊಟ್ಟಿದೆ ಎಂದರು.
- ಗಾಂಧೀಜಿ ಖಿಲಾಫತ್ ಸಮಸ್ಯೆ ಬಗೆಹರಿಸಲು **ಅಸಹಕಾರ ಚಳುವಳಿ** ಘೋಷಿಸಿದರು. ಮಹಮದ್ ಆಲಿ ಜಿನ್ನಾ ಮಾತ್ರ ಖಿಲಾಫತ್ ಚಳುವಳಿಯಿಂದ ದೂರ ಉಳಿದರು.

ಅಸಹಕಾರ ಚಳುವಳಿ -1920-22
(Non-co operation movement)

- ಈ ಚಳುವಳಿಗೆ ಪ್ರಮುಖ ಕಾರಣಗಳೆಂದರೆ

1. ರೌಲತ್ ಕಾಯ್ದೆ.
2. ಜಲಿಯನ್ ವಾಲಾಬಾಗ್ ದುರಂತ.
3. ಖಿಲಾಫತ್ ಚಳುವಳಿ.
4. ಸ್ವರಾಜ್ಯದ ಬೇಡಿಕೆ.

- ಅಸಹಕಾರ ಚಳುವಳಿ ಆರಂಭಿಸಲು 1920ರ ಐ.ಎನ್.ಸಿ ವಿಶೇಷ ಅಧಿವೇಶನದಲ್ಲಿ (ಕಲ್ಕತ್ತ) ಅನುಮೋದಿಸಿತಾದರೂ ಸಿ.ಆರ್. ದಾಸ್ ಮತ್ತು ಅನಿಬೆಸೆಂಟ್ ಇದನ್ನು ವಿರೋಧಿಸಿದರು.
- ಗಾಂಧೀಜಿಯವರು 1920 ಮಾರ್ಚ್‌ನಲ್ಲಿಯೇ ಅಸಹಕಾರ ಚಳುವಳಿ ಆರಂಭಿಸಿದರು. ಆದರೆ ದುರಾದೃಷ್ಟವಶಾತ್ ತಿಲಕ್‌ರು ನಿಧನರಾದ ಆಗಸ್ಟ್ 1, 1920ರಂದು ಅಧಿಕೃತವಾಗಿ ಆರಂಭವಾಯಿತು. ನಿಧನರಾದ ತಿಲಕ್‌ರನ್ನು ಗಾಂಧೀಜಿ 'ನನ್ನ ಅತಿ ದೊಡ್ಡ ಬಲವಾದ ಕೋಟೆಯೇ ಉರುಳಿ ಹೋಯಿತು. ಮಾನವರಲ್ಲಿ ಒಬ್ಬ ಭೀಮ ಸದೃಶ್ಯ ವ್ಯಕ್ತಿ ಉರುಳಿ ಹೋಯಿತು ಆ ಸಿಂಹನಾದ ಅಡಗಿ ಹೋಯಿತು' ಎಂದರು.
- **ಚಳುವಳಿ ಉದ್ದೇಶ:** ಸ್ವರಾಜ್ಯ ಪಡೆಯುವುದು.

ಕಾರ್ಯಕ್ರಮಗಳು

1. ಬ್ರಿಟನ್ ಸರ್ಕಾರ ನೀಡಿದ ಬಿರುದು ಬಾವಲಿಗಳನ್ನು ತ್ಯಜಿಸುವುದು
2. ಸರ್ಕಾರಿ, ಅರೆ ಸರ್ಕಾರಿ, ಶಾಲಾ ಕಾಲೇಜುಗಳು & ನ್ಯಾಯಾಲಯಗಳ ಬಹಿಷ್ಕಾರ.
3. ಚುನಾವಣೆ ಮತ್ತು ಶಾಸನ ಸಭೆಗಳ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದು.
4. ಸರ್ಕಾರಿ ಮತ್ತು ಸೈನ್ಯದ ನೌಕರಿ ತ್ಯಜಿಸುವುದು
5. ವಿದೇಶಿ ವಸ್ತುಗಳ ಬಹಿಷ್ಕಾರ.
6. ಖಾದಿ ಮತ್ತು ಸ್ವದೇಶಿ ವಸ್ತುಗಳ ಪ್ರಚಾರ ಮಾಡುವುದು
7. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು.
8. ಸ್ತ್ರೀಯರ ಸಬಲೀಕರಣ.
9. ರಾಷ್ಟ್ರೀಯ ಶಾಲಾ ಕಾಲೇಜುಗಳ ಸ್ಥಾಪನೆ – ಈ ಸಮಯದಲ್ಲಿ ಸ್ಥಾಪನೆಯಾದ 02 ರಾಷ್ಟ್ರೀಯ ಶಾಲೆಗಳೆಂದರೆ
   1. ಜಾಮಿಯಾ ಮಿಲಿಯಾ ಸ್ಕೂಲ್ ದೆಹಲಿ.
   2. ಕಾಶಿ ವಿದ್ಯಾಪೀಠ ಬನಾರಸ್
10. ಸರ್ಕಾರದೊಡನೆ ಎಲ್ಲಾ ರೀತಿಯಲ್ಲೂ ಅಸಹಕಾರ ತೋರುವುದು.
11. ಮೆಸಪಟೋಮಿಯಾದಲ್ಲಿ ನಿರತರಾದ ಸೈನಿಕರು, ಗುಮಾಸ್ತರು

- ಗಾಂಧೀಜಿಯವರು ಒಂದು ವೇಳೆ ಎಲ್ಲಾ ಕಾರ್ಯಕ್ರಮಗಳನ್ನು ನಾವು ವ್ಯವಸ್ಥಿತವಾಗಿ ಆಚರಣೆಗೆ ತಂದಲ್ಲಿ ಒಂದೇ ಒಂದು ವರ್ಷದೊಳಗೆ ಸ್ವರಾಜ್ಯವನ್ನು ಪಡೆಯುತ್ತೇವೆ ಎಂದರು.
- ಮಹ್ಮದ್ದಾಲಿ ಜಿನ್ನಾರೊಬ್ಬನನ್ನು ಬಿಟ್ಟು ಉಳಿದ ಮುಸ್ಲಿಂ ನಾಯಕರು ಗಾಂಧೀಜಿಯನ್ನು ಬೆಂಬಲಿಸಿದರು. ಪ್ರಸಿದ್ಧ ವಕೀಲರಾದ ಸಿ.ಆರ್.ದಾಸ್, ಎಂ.ಆರ್. ಜಯಕರ್, ವ. ಪಟೇಲ್, ರಾಜಗೋಪಾಲಾಚಾರಿ ಮತ್ತು ಮೋತಿಲಾಲ್ ನೆಹರು ಮೊದಲಾದವರು ತಮ್ಮ ವಕೀಲ ವೃತ್ತಿ ತ್ಯಜಿಸಿದರು.
- ರವೀಂದ್ರನಾಥ ಠಾಕೂರ್, ಸುಬ್ರಮಣ್ಯ ಅಯ್ಯರ್, ಜಮ್ನಾಲಾಲ್ ಬಜಾಜ್, ಗಾಂಧೀಜಿ ಮೊದಲಾದವರು ತಮ್ಮ ಬಿರುದುಗಳನ್ನು ತ್ಯಜಿಸಿದರು.
- ಬಂಗಾಳದಲ್ಲಿ **ಶೈಕ್ಷಣಿಕ ಬಹಿಷ್ಕಾರ** ಯಶಸ್ವಿಯಾಯಿತು. ಇದರ ಮುಖ್ಯ ಪಾತ್ರಧಾರಿ ಕಲ್ಕತ್ತಾ ನ್ಯಾಷನಲ್ ಕಾಲೇಜ್‌ನ ಪ್ರಿನ್ಸಿಪಾಲ್‌ರಾದ ಸುಭಾಷ್ ಚಂದ್ರ ಬೋಸ್. 1921–22ರಲ್ಲಿ ಆಲಿಗರ ಜಾಮಿಯಾ ಮಿಲಿಯ ಇಸ್ಲಾಂ ವಿ.ವಿ. ಬಿಹಾರದ ವಿದ್ಯಾಪೀಠ ಹಾಗೂ ಗುಜರಾತ್ ವಿದ್ಯಾಪೀಠ ಸ್ಥಾಪನೆಯಾದವು. ಅಲ್ಲದೆ ಅಲಹಾಬಾದ್‌ನಲ್ಲಿ ಗುಜರಾತ್ ರಾಷ್ಟ್ರೀಯ ವಿ.ವಿ.ಯನ್ನು ಐಕ್ಯ ಭಾರತದ ಗುರಿ ಮತ್ತು ಭಾರತದ ರಾಷ್ಟ್ರೀಯ ಭಾಷೆಗಳನ್ನು ಕಾಪಾಡಿಕೊಂಡು ರಾಷ್ಟ್ರೋತ್ಥಾನವಾಗಿ ಬಳಸುವ ಉದ್ದೇಶದಿಂದ ಸ್ಥಾಪಿಸಿದರು.
- **ವಿದೇಶಿ ವಸ್ತುಗಳ ಬಹಿಷ್ಕಾರ** ಬಹು ಯಶಸ್ವಿಯಾಯಿತು. ಅಸಹಕಾರ ಚಳುವಳಿ ಅಂಶವಾಗಿಲ್ಲದ ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಬಹು ಮುಖ್ಯವಾಗಿ ಆವರಿಸಿತು. **ಖಾದಿ** ಸ್ವಾತಂತ್ರ್ಯದ ಗುರುತು ಎಂಬ ಭಾವನೆ ಬೆಳೆಯಿತು.
- ಖಿಲಾಪತ್ ಸಮಿತಿಯು ಜುಲೈ 1921ರಲ್ಲಿ ಮುಸ್ಲಿಮರಾರು ಸರ್ಕಾರಿ ಸೈನ್ಯದಲ್ಲಿ ಸೇವೆ ಸಲ್ಲಿಸಬಾರದೆಂದು ಠರಾವು ಹೊರಡಿಸಿತು.
- ಗಾಂಧೀಜಿ ನೇತೃತ್ವದ ಸಮಿತಿ ಭಾರತೀಯರು ಸರ್ಕಾರಿ ಸೇವೆ ಸಲ್ಲಿಸಬಾರದು. ಸಲ್ಲಿಸಿದರೆ ಭಾರತವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅವಮಾನಗೊಳಿಸಿದಂತೆ ಎಂದರು.
- ನವೆಂಬರ್ 17, 1921ರಂದು ಬ್ರಿಟನ್ ರಾಜ ವೇಲ್ಸ್ ಬಾಂಬೆಗೆ ಭೇಟಿ ನೀಡಿದನು. ಇದರ ಉದ್ದೇಶ ಭಾರತೀಯರೆಲ್ಲ ಹಿಂದೆ ಇದ್ದ ರಾಜನಿಷ್ಠೆಯನ್ನು ಮೂಡಿಸುವುದು.
- ಬ್ರಿಟಿಷ್ ಅಧಿಕಾರಿಗಳು ಚಳುವಳಿ ದಮನ ಮಾಡಲು **ಹೊಡೆಯಿರಿ ಮತ್ತು ಲೂಟಿ ಮಾಡಿ** ಎಂಬ ಆಜ್ಞೆ ಹೊರಡಿಸಿದರು.
- ಅನಿಬೆಸೆಂಟರು ಗಾಂಧೀರಾಜ್ ಅಧೀನದಲ್ಲಿ ಅಸಹಕಾರ ಚಳುವಳಿಗಾರರು ಬಿಟ್ಟರೆ ಬೇರೆ ಯಾರು ಸಭೆ ಸೇರುವಂತಿಲ್ಲ, ಮಾತನಾಡುವಂತಿಲ್ಲ. ತತ್‌ಕ್ಷಣಕ್ಕೆ ಸ್ವರಾಜ್ಯದ ಗೇಣಿಯಿಲ್ಲ, ತೆರಿಗೆಯಿಲ್ಲ. ಆಶಾಸನೆಗಳು ಗುಂಪು ಬೆಂಬಲಿಸುವಂತೆ ಮಾಡಿದೆ ಎಂದು

ಅಸಹಕಾರ ಚಳುವಳಿಯ ಹಂತಗಳು

ಮೊದಲ ಹಂತ – 1921 ಜನವರಿ–ಮಾರ್ಚ್.

- ಶಾಲಾ ಕಾಲೇಜುಗಳ ಬಹಿಷ್ಕಾರ.
- ನ್ಯಾಯಾಲಯಗಳ ಬಹಿಷ್ಕಾರ.

ಎರಡನೇ ಹಂತ–1921 ಮಾರ್ಚ್–ಏಪ್ರಿಲ್.

- ತಿಲಕ್ ಸ್ವರಾಜ್ ನಿಧಿಗೆ 01 ಕೋಟಿ ರೂ ಸಂಗ್ರಹ.
- ಅಧಿಕ ಸಂಖ್ಯೆಯ ಚರಕಗಳ ಸ್ಥಾಪನೆ.
- ಅಧಿಕ ಸಂಖ್ಯೆಯ ಸಾಮಾನ್ಯ ಜನರು ಐ.ಎನ್.ಸಿ ಸದಸ್ಯರಾದರು.

ಮೂರನೇ ಹಂತ–1921 ಜುಲೈ–ನವೆಂಬರ್.

- ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಒತ್ತು.
- ನವೆಂಬರ್ 17, 1921ರ ಬ್ರಿಟನ್ ರಾಜಕುಮಾರ ವೇಲ್ಸ್ ಭಾರತ ಭೇಟಿ ವಿರುದ್ಧ ಹರತಾಳ.

ನಾಲ್ಕನೇ ಹಂತ (1921 ನವೆಂಬರ್–ಫೆಬ್ರವರಿ)

- ಈ ಅವಧಿಯಲ್ಲಿ ಜರುಗಿದ ಕೆಲವು ಘಟನೆಗಳು ಸರ್ಕಾರದ ಮೇಲೆ ಒತ್ತಡವನ್ನು ಹೇರಿದವು.

ನಾಗಪುರ ಧ್ವಜ ಸತ್ಯಾಗ್ರಹ–1921

- ವೇಲ್ಸ್ ರಾಜಕುಮಾರ ಭಾರತಕ್ಕೆ ಬರುವುದನ್ನು ವಿರೋಧಿಸಿ ಭಾರತೀಯರು 1921ರಲ್ಲಿ ನಾಗಪುರ ಧ್ವಜ ಸತ್ಯಾಗ್ರಹವನ್ನು ಕೈಗೊಂಡರು.
- ಪ್ರಸಿದ್ಧ ವಕೀಲರಾದ **ದೇಶಬಂಧು ಚಿತ್ತರಂಜನ್‌ದಾಸ್ ಮತ್ತು ಮೋತಿಲಾಲ್ ನೆಹರು** ಅವರು ಅಸಹಕಾರ ಚಳುವಳಿ ಅವಧಿಯಲ್ಲಿ ವಕೀಲ ವೃತ್ತಿ ತ್ಯಜಿಸಿದರು.
- ಅಸಹಕಾರ ಚಳುವಳಿಯನ್ನು ಮುಂದುವರಿಸಿದ್ದರೆ ಆಗಲೇ ಸ್ವಾತಂತ್ರ್ಯ ಪಡೆಯಬಹುದಿತ್ತು. ಆದರೆ 1922 ಚೌರಚೌರಿ ಘಟನೆಯಿಂದಾಗಿ ಗಾಂಧೀಜಿಯವರು ಈ ಸತ್ಯಾಗ್ರಹವನ್ನು ವಾಪಸ್ ಪಡೆದರು.

ಚೌರಚೌರಿ ಘಟನೆ–1922

- ಸರ್ಕಾರವು ಅಸಹಕಾರ ಚಳುವಳಿಯ ಕಾರ್ಯಕರ್ತರ ಮೇಲೆ ಉಗ್ರ ಕ್ರಮ ಕೈಗೊಂಡಿದ್ದರಿಂದ ಕಾಂಗ್ರೆಸ್ ಮತ್ತು ಖಿಲಾಫತ್ ಕಾರ್ಯಕರ್ತರ ಉದ್ರಿಕ್ತ ಗುಂಪೊಂದು ಉತ್ತರಪ್ರದೇಶ ಗೋರಕ್‌ಪುರ ಜಿಲ್ಲೆಯ ಚೌರಚೌರಿ ಎಂಬ ಸಣ್ಣ ಹಳ್ಳಿಯ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದಾಗ **22 ಜನ ಪೊಲೀಸರು** ಸಜೀವ ದಹನವಾದರು. ಇದರಿಂದ 225 ರೈತರ ಮೇಲೆ ಆರೋಪಪಟ್ಟಿ, 172 ಮಂದಿಗೆ ಮರಣ ದಂಡನೆ, 19 ರೈತರಿಗೆ ಮೇಲ್ಮನವಿಯಲ್ಲಿ ಮರಣ ದಂಡನೆ ವಿಧಿಸಲಾಯಿತು.
- ಈ ಚಳುವಳಿಯು ಹಿಂಸಾ ದಾರಿಯನ್ನು ಹಿಡಿದಿದೆ ಎಂದು [illegible] ಸಮಿತಿಗೆ ತಿಳಿಸಿ ಫೆಬ್ರವರಿ 12, 1922ರಂದು ಹಿಂಪಡೆದರು.

ಗಾಂಧೀಜಿ ನಿರ್ಣಯದ ಬಗ್ಗೆ ಪ್ರತಿಕ್ರಿಯೆ

- **ಮೋತಿಲಾಲ್ ನೆಹರು** – ಕನ್ಯಾಕುಮಾರಿ ಬಳಿಯ ಗ್ರಾಮವೊಂದು ಅಹಿಂಸೆಯನ್ನು ಆಚರಿಸಲಿಲ್ಲ ಎಂದು ಹಿಮಾಲಯದ ತಪ್ಪಲಿನ ಗ್ರಾಮವೊಂದಕ್ಕೆ ಶಿಕ್ಷೆ ವಿಧಿಸುವುದೇ? ಎಂದರು.
- **ಡಾ. ಮೂಂಜೆಯವರು** – ಗಾಂಧೀಜಿಯವರ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿದರು.
- **ಸುಭಾಷ್‌ಚಂದ್ರ ಬೋಸ್** – ಇದೊಂದು ರಾಷ್ಟ್ರೀಯ ದುರಂತ ಎಂದರು. ಅಲ್ಲದೆ To sound the order of retreat just when public enthusiasm was reaching the boiling was nothing shart of a calamity ಎಂದರು.
- ಸುಭಾಷ್‌ಚಂದ್ರಬೋಸ್‌ರ ಆತ್ಮಕಥನ– Indian Struggle

ಪ್ರಾಮುಖ್ಯತೆ

1. ಆಂಗ್ಲ ಸರ್ಕಾರ ನೀಡಿದ್ದ ಬಿರುದುಗಳನ್ನು 24 ಜನರು ಹಿಂದಿರುಗಿಸಿದರು.
2. ಐ.ಎನ್.ಸಿಯನ್ನು ಡಫರಿನ್‌ನ **ಅಲ್ಪಸಂಖ್ಯಾತರ ಗುಂಪು** ಎಂಬ ತಪ್ಪು ಕಲ್ಪನೆಯ ಮನವರಿಕೆಯಾಯಿತು.
3. ವಿದೇಶಗಳಿಂದ ಆಮದಾಗುತ್ತಿದ್ದ ವಸ್ತುಗಳ ಇಳಿಕೆಯಾಯಿತು.
4. ಐ.ಎನ್.ಸಿ ಈ ಚಳುವಳಿಯಿಂದಾಗಿ ಸಮಾವೇಶದ ಹಂತದಿಂದ ಚಳುವಳಿಯ ಹಂತಕ್ಕೆ ತಲುಪಿತು.
5. ಹಿಂದೂ–ಮುಸ್ಲಿಂರ ನಡುವೆ ಹೊಂದಾಣಿಕೆಯ ಭಾವನೆ ಬೆಳೆಯಿತು.
6. ವಿಧಾನ ಮಂಡಲಗಳ ಚುನಾವಣೆ ಬಹಿಷ್ಕಾರ ಯಶಸ್ವಿಯಾಯಿತು.
7. ಮೊದಲ ಬಾರಿಗೆ ರಾಷ್ಟ್ರೀಯ ಹೋರಾಟ ಪರಿಪೂರ್ಣ ಜನಾಂದೋಲನವಾಯಿತು.
8. ಕಾಂಗ್ರೆಸ್ ತನ್ನದೇ ಆದ ಒಂದು ಸಂವಿಧಾನವನ್ನು ಪಡೆದು ವ್ಯವಸ್ಥಿತ ಸಂಘಟನೆಯಾಯಿತು.

ವಿಫಲತೆಗಳು

1. ಖಿಲಾಫತ್ ಸಮಸ್ಯೆಗೆ ಅಥವಾ ಪಂಜಾಬ್ ದೌರ್ಜನ್ಯಗಳಿಗೆ ನ್ಯಾಯ ದೊರೆಯಲಿಲ್ಲ.
2. ಒಂದೇ ವರ್ಷದಲ್ಲಿ ಸ್ವರಾಜ್ಯ ಎಂಬ ಗಾಂಧೀಜಿಯ ಆಶ್ವಾಸನೆ ಈಡೇರಲಿಲ್ಲ.
3. ಶಾಸನಸಭೆಗಳ, ನ್ಯಾಯಾಲಯಗಳ, ಶೈಕ್ಷಣಿಕ ಸಂಸ್ಥೆಗಳ ಬಹಿಷ್ಕಾರವು ಯಶಸ್ವಿಯಾಗಲಿಲ್ಲ.

- ಅಸಹಕಾರ ಚಳುವಳಿ ಹಿಂತೆಗೆದುಕೊಂಡ ಮೇಲೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ನಾಗರಿಕ ಕಾನೂನು ಭಂಗ ವಿಚಾರಣಾ ಸಮಿತಿಯನ್ನು ಮೋತಿಲಾಲ್ ನೆಹರೂ, ವಲ್ಲಭಾಯ್ ಪಟೇಲ್,

ರಾಜಗೋಪಾಲಾಚಾರಿ ನೇತೃತ್ವದಲ್ಲಿ ರಚಿಸಿತು.

ಸ್ವರಾಜ್ಯ ಪಕ್ಷ (Swaraj Party)

ಗಾಂಧೀಜಿಯವರು ಫೆಬ್ರವರಿ 12, 1922ರಲ್ಲಿ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡ ಮೇಲೆ ಕಾಂಗ್ರೆಸ್‌ನಲ್ಲಿ 02 ಪಂಗಡಗಳಾದವು.

1. ಬದಲಾವಣೆ ಪರ ಗುಂಪು

- ಸಿ.ಆರ್. ದಾಸ್(ಪಶ್ಚಿಮ ಬಂಗಾಳ), ಮೊ. ನೆಹರು, ಎನ್.ಸಿ. ಕೇಳ್ಕರ್(ಮಹಾರಾಷ್ಟ್ರ), ಜಿ.ಎಸ್. ಕಪರ್ಡೆ, ವಿಠ್ಠಲಬಾಯಿ ಪಟೇಲ್ (ಸೆಂಟ್ರಲ್), ಶ್ರೀನಿವಾಸ ಅಯ್ಯಂಗಾರ್(ತಮಿಳುನಾಡು) ಮತ್ತು ಹಕೀಂ ಅಜ್ಮಲ್‌ಖಾನ್ ಮುಂತಾದವರು.
- ಇವರು ಬದಲಾದ ರಾಜಕೀಯ ಸಂದರ್ಭದಲ್ಲಿ ಹೊಸ ರಾಜಕೀಯ ತಂತ್ರಗಳನ್ನು ಬಳಸಬೇಕೆಂದು ವಾದಿಸಿದರು. ಇವರು ಶಾಸನಸಭೆ ಪ್ರವೇಶಿಸಿ ಸರ್ಕಾರದ ನೀತಿಗಳನ್ನು ಒಳಗಿನಿಂದಲೇ ವಿರೋಧಸಬೇಕೆಂಬ ತತ್ವವನ್ನು ಪ್ರತಿಪಾದಿಸಿದರು.
- ಇವರು ಡಿಸೆಂಬರ್ **1922ರಲ್ಲಿ ಸ್ವರಾಜ್ಯ ಪಕ್ಷ** ಸ್ಥಾಪಿಸಿದರು. ಸಿ.ಆರ್. ದಾಸ್, ಇದರ ಅಧ್ಯಕ್ಷರಾದರೆ, ಮೋ.ನೆಹರು ಕಾರ್ಯದರ್ಶಿಯಾದರು.
- **ಉದ್ದೇಶ:** ಸ್ವರಾಜ್ಯ ಗಳಿಸುವುದು.
- **ಗುರಿ:** ಸ್ವಾಯತ್ತತೆ ಹೊಂದಿದ ಸರ್ಕಾರ ಹೊಂದುವುದು.

2. ಬದಲಾವಣೆ ವಿರೋಧಿ ಗುಂಪು

- ವಲ್ಲಭಾಯ್ ಪಟೇಲ್, ರಾಜೇಂದ್ರ ಪ್ರಸಾದ್, ವೀರರಾಘವಚಾರಿ, ಡಾ. ಅನ್ಸಾರಿ, ಸಿ. ರಾಜಗೋಪಾಲಾಚಾರಿ ಮುಂತಾದವರು.
- ಶಾಸನಸಭೆ ಪ್ರವೇಶವೊಂದನ್ನು ಉಳಿದು ಬೇರಾವುದೇ ವಿಷಯದಲ್ಲಿ ಕಾಂಗ್ರೆಸ್ ಹೊಸ ಪಕ್ಷದ ನಡುವೆ ಭಿನ್ನಾಭಿಪ್ರಾಯ ಇಲ್ಲವಾದ್ದರಿಂದ ಸ್ವರಾಜ್ ಪಕ್ಷದವರು ಕಾಂಗ್ರೆಸ್ಸಿನ ಒಂದು ಗುಂಪಾಗಿ ಕಾರ್ಯನಿರ್ವಹಿಸಲು ಇಚ್ಛಿಸಿದರು.
- ಫೆಬ್ರವರಿ 1924ರಲ್ಲಿ ಜೈಲಿನಿಂದ ಹೊರ ಬಂದ ಗಾಂಧೀಜಿಯವರು ಈ ಎರಡು ಬಣಗಳ ಏಕತೆಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಇಬ್ಬರೂ ಕಾಂಗ್ರೆಸ್‌ನಲ್ಲಿಯೇ ಇದ್ದು ಪ್ರತ್ಯೇಕ ವಿಧಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಸ್ವರಾಜ್ ಪಕ್ಷದ ಸಾಧನೆಗಳು

- 1923 ನವೆಂಬರ್ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸಿ ಕೇಂದ್ರ ಶಾಸನ ಸಭೆಯ 101 ಸ್ಥಾನಗಳಲ್ಲಿ 42 ಸ್ಥಾನಗಳಲ್ಲಿ ವಿಜಯಿಯಾಯಿತು. ನಗರ ಸಭೆಯ ಚುನಾವಣೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿತು.
- ಕಲ್ಕತ್ತಾದ ಮೇಯರ್ ಆದ ಮೊದಲ ಭಾರತೀಯ **ಸಿ.ಆರ್. ದಾಸ್**. ಬಾಂಬೆ – ವಿಠ್ಠಲಬಾಯಿ ಪಟೇಲ್, ಅಹ್ಮದಾಬಾದ್ – ವ.ಪಟೇಲ್, ಪಾಟ್ನಾ – ರಾಜೇಂದ್ರ ಪ್ರಸಾದ್ ಹಾಗೂ ಅಲಹಾಬಾದ್ – ಜ. ನೆಹರು ಪುರಸಭೆಗಳ ಅಧ್ಯಕ್ಷರಾದರು.
- ಬದಲಾವಣೆ ಪರರು – ಬ್ರಿಟಿಷ್ ಸರ್ಕಾರದ ನೀತಿಗಳನ್ನು ಬದಲಿಸಲು ವಿಫಲರಾದರೂ ಕೇಂದ್ರ ಮತ್ತು **ಕೆಲವು ಪ್ರಾಂತೀಯ ಶಾಸನ ಸಭೆಗಳಲ್ಲಿ ಸರ್ಕಾರದ ನೀತಿ ಮತ್ತು ಕಾರ್ಯ್ಧಗಳನ್ನು ನಿರಂತರವಾಗಿ ವಿರೋಧಿಸಿದರು.** ಮಾರ್ಚ್ 1926ರಲ್ಲಿ ಸರ್ಕಾರದ ಸರ್ವಾಧಿಕಾರಿ ಪ್ರವೃತ್ತಿಯಿಂದ ಅವರು ಕೇಂದ್ರ ಶಾಸನ ಸಭೆಯಿಂಧ ಹೊರ ನಡೆದರು. ಇದರಿಂದ ಸ್ವರಾಜ್ಯ ಪಕ್ಷ ಇಳಿಮುಖವಾಯಿತು.
- ಮತ್ತೊಂದು ಬದಲಾವಣೆ ವಿರೋಧಿಗಳು **ಖಾದಿ, ಹಿಂದೂ ಮತ್ತು ಮುಸ್ಲಿಂ ಏಕತೆ. ಅಸ್ಪೃಶ್ಯತಾ ನಿವಾರಣೆ, ಗ್ರಾಮೀಣ ಅಭಿವೃದ್ಧಿ** ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡರು.

ಸ್ವರಾಜ್ ಪಕ್ಷದ 03 ವಿಷಯಗಳು.

1. ಸ್ವರಾಜ್ ಆಡಳಿತಕ್ಕೆ ಸಹಾಯಕವಾಗುವ ಸಂವಿಧಾನಾತ್ಮಕ ಸುಧಾರಣೆಗಳು.
2. ದಮನಕಾರಿ ಶಾಸನಗಳ ರದ್ಧತಿ.
3. ಸ್ಥಳೀಯ ಕೈಗಾರಿಕೆಗಳ ಬೆಳವಣಿಗೆ.

- ಮೋತಿಲಾಲ್ ನೆಹರು ಕೇಂದ್ರ ಶಾಸನ ಸಭೆಯ ಅಧಿವೇಶನದಲ್ಲಿ ಭಾರತೀಯರಿಗೆ ನಿಜವಾದ ಅಧಿಕಾರವನ್ನು ನೀಡುವ ಹೊಸ ಸಂವಿಧಾನವನ್ನು ರಚಿಸುವ ಬೇಡಿಕೆಯ ಸಭೆಯನ್ನು ಮುಂದಿಟ್ಟರು.
- **ಯುಗಾದಿ ಉಡುಗೊರೆ:** 1924ರಲ್ಲಿ ಸಿ.ಆರ್. ದಾಸ್ ಮತ್ತು ಅವರ ಅನುಯಾಯಿಗಳ ಬಂಧನವನ್ನು ಯುಗಾದಿ ಉಡುಗೊರೆ ಎನ್ನುವತು.
- **1924ರ ಬೆಳಗಾವಿ ಕಾಂಗ್ರೆಸ್** ಅಧಿವೇಶನದಲ್ಲಿ ಗಾಂಧೀಜಿಯವರು ಸ್ವರಾಜ್ಯ ಪಕ್ಷದವರನ್ನು ಮತ್ತು ಬದಲಾವಣೆ ವಿರೋಧಿಗಳನ್ನು ಒಗ್ಗೂಡಿಸಿ ಭಿನ್ನಾಭಿಪ್ರಾಯ ಬಿಡಲು ಒಪ್ಪಿಸಿ, ಸ್ವರಾಜ್ಯ ಪಕ್ಷವು ಕಾಂಗ್ರೆಸ್‌ನ ಪರವಾಗಿ ಕೌನ್ಸಿಲ್‌ನಲ್ಲಿ ಹೋರಾಡಬೇಕೆಂದು ಘೋಷಿಸಿದರು.
- ಸ್ವರಾಜ್ಯ ಪಕ್ಷವು 1925ರಲ್ಲಿ ಕೌನ್ಸಿಲ್‌ನಿಂದ ಹೊರ ಬಂದು ಸ್ವರಾಜ್ಯ ಪಕ್ಷದ ಮತ್ತೊಂದು ಗುಂಪು ಜಯಕರ್, ಮೂಂಜೆ ಮತ್ತು ಕೇಳ್ಕರ್ ಮುಂತಾದವರು ಸರ್ಕಾರಕ್ಕೆ ಸಹಕಾರ ನೀಡುತ್ತಾ ಸಂವಿಧಾನ ಸುಧಾರಣೆಗಳನ್ನು ಜಾರಿಗೆ ತರಲು ಬೇರೆ ಪಕ್ಷ ಸ್ಥಾಪಿಸಿಕೊಂಡರು.

ಸ್ವರಾಜ್ಯವಾದಿಗಳ ಸಾಧನೆಗಳು

1. ಅಸಹಕಾರ ಚಳುವಳಿ ಹಿಂಪಡೆದ ವೇಳೆಯಲ್ಲಿ ರಾಜಕೀಯ ಶೂನ್ಯತೆ ತುಂಬಿದರು.
2. ಶಾಸನ ಸಭೆಗಳಲ್ಲಿ ಭಾಗವಹಿಸಿ ಭಾರತದ ಸ್ಥಿತಿಗತಿಗಳ ಸುಧಾರಣೆ.
3. ರೈಲು ಪ್ರಯಾಣದಲ್ಲಿದ್ದ ವರ್ಣಭೇದ ನೀತಿ ತಡೆದರು.
4. ರೈಲ್ವೆ ಮತ್ತು ಅಂಚೆ ದರಗಳನ್ನು ಕಡಿಮೆಗೊಳಿಸಿದರು.
5. ಕಾರ್ಮಿಕ ಸಂಘಗಳ ರಕ್ಷಣೆ

6. ಶಿಕ್ಷಣ ಇಲಾಖೆ ತೆರೆದು ಭಾರತೀಯರನ್ನು ಅದರ ಮುಖ್ಯಸ್ಥರಾಗಿಸಿದರು.
7. ಉಚಿತ-ಶಿಕ್ಷಣ ಮತ್ತು ಆರೋಗ್ಯ ಕೇಂದ್ರಗಳನ್ನು ತೆರೆದರು.
8. ಕಲ್ಕತ್ತಾಗೆ ಭೇಟಿ ನೀಡುತ್ತಿದ್ದ ಗೌರವಾನ್ವಿತ ಆಂಗ್ಲರ ಅಭಿನಂದನಾ ಸಮಾರಂಭಕ್ಕೆ ತಡೆ.
9. ಕಲ್ಕತ್ತಾ ರಸ್ತೆಗಳು ಹಾಗೂ ಉದ್ಯಾನವನಗಳಿಗೆ ದೇಶೀಯ ವ್ಯಕ್ತಿಗಳ ಹೆಸರಿಡಲಾಯಿತು.

ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಗಳು

- ಗಾಂಧೀಜಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಬಳಸಿದ ರಾಜಕೀಯ ಅಸ್ತ್ರ-ಸತ್ಯಾಗ್ರಹ
- ಬ್ರಿಟಿಷ್ ಆಡಳಿತ ಮತ್ತು ಶಕ್ತಿಗೆ ವಿರುದ್ಧವಾಗಿ ಆರ್ಥಿಕ ಹತೋಟಿ ಎದುರಿಸಲು ಬಳಸಿದ ಪ್ರಮುಖ ಅಸ್ತ್ರ **ಖಾದಿ** ಮತ್ತು **ಗ್ರಾಮೀಣ ಅಂಶ** ಚಳುವಳಿಯ ಮೂಲ ಅಸ್ತ್ರವಾದವು.
- **ಐ.ಎನ್.ಸಿ** 1917ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾತಂತ್ರ್ಯ ಚಳುವಳಿಯ ವ್ಯಾಪ್ತಿಯುಲ್ಲಿ **ಹರಿಜನ ಚಳುವಳಿಯನ್ನು** ಒಪ್ಪಿಕೊಳ್ಳುವಂತೆ ಮಾಡಿದರು. **ಹರಿಜನ** ಎಂಬ ಪತ್ರಿಕೆ ಆರಂಭಿಸಿದರು.
- ಭಾರತದಾದ್ಯಂತ ಕಾನೂನುಭಂಗ ಚಳುವಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮದ್ಯದಂಗಡಿಗಳ ಮುಂದೆ ಪಿಕೆಟಿಂಗ್ ಮತ್ತು ಈಚಲು ವನ ಕಡಿದು **ಪಾನ ನಿರೋಧ ಚಳುವಳಿ** ಕೈಗೊಂಡರು. ಸಮಸ್ತ ಭಾರತೀಯರನ್ನು ಒಗ್ಗೂಡಿಸಲು **ಹಿಂದಿ ಪ್ರಚಾರ** ಕೈಗೊಂಡರು.

ನಾಗಪುರ ಕಾಂಗ್ರೆಸ್ ಅಧಿವೇಶನ-1920

- ಇದರ ಅಧ್ಯಕ್ಷರು - ವೀರರಾಘವಚಾರಿ.
- ಇದುವರೆಗೂ ಮೇಲ್ವರ್ಗದ ಸಂಸ್ಥೆಯಾಗಿದ್ದ ಕಾಂಗ್ರೆಸ್‌ನ್ನು ಮಹಾಜನತೆಯ ಸಂಸ್ಥೆಯಾಗಿ ಪರಿವರ್ತಿಸಿ ಗ್ರಾಮದಿಂದ ರಾಷ್ಟ್ರಮಟ್ಟದವರೆಗೆ ಕಾಂಗ್ರೆಸ್ ಸಮಿತಿಗಳು ಸ್ಥಾಪಿತವಾದವು. ಸದಸ್ಯತ್ವ ಶುಲ್ಕ ನಾಲ್ಕು ಆಣೆ ಎಂದಾಯಿತು.
- ಭಾಷಾವಾರು ತತ್ವದ ಮೇಲೆ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ರಚನೆಯಾದವು.
- ಗಾಂಧೀಜಿ ಸೂಚಿಸಿದ ಭಾರತೀಯರು ಎಲ್ಲಾ ರೀತಿಯ ನ್ಯಾಯಬದ್ಧ ಶಾಂತಿಯುತ ಮಾರ್ಗಗಳನ್ನುನುಸರಿಸಿ ಸ್ವರಾಜ್ಯ ಸಾಧಿಸುವುದೇ ಕಾಂಗ್ರೆಸ್‌ನ ಮುಖ್ಯ ಗುರಿಯು ಅಂಗೀಕಾರವಾಯಿತು.
- ಗಾಂಧೀಜಿಯವರು ಒಂದೇ ವರ್ಷದಲ್ಲಿ ಸ್ವರಾಜ್ಯ ಎಂದು ಘೋಷಣೆ ಮಾಡಿದರು. ಐ.ಎನ್.ಸಿ ಅಧ್ಯಕ್ಷರು ಜನತೆಯನ್ನು ಕಾಂಗ್ರೆಸ್ ಅಧ್ಯಕ್ಷನೋ, ನಾಯಕರೋ ನಿರ್ದೇಶಿಸುವ ಬದಲು ಜನತೆಯ ನಿರ್ದೇಶನದಲ್ಲಿ ಅಧ್ಯಕ್ಷರೂ, ನಾಯಕರೂ ನಡೆಯುವಂತಾಯಿತು.

ಸೈಮನ್ ಕಮಿಷನ್ -1927

- 1919ರ ಕಾಯ್ದೆಯ ಸುಧಾರಣೆಗಳು ಕಾರ್ಯಗತವಾಗಿವೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಲು ಬ್ರಿಟನ್ ಸರ್ಕಾರವು ನವೆಂಬರ್ **1927ರಲ್ಲಿ ಸೈಮನ್ ಆಯೋಗವನ್ನು** ನೇಮಿಸಿತು.
- ಈ ಆಯೋಗದ ಅಧ್ಯಕ್ಷ ಸೈಮನ್ ಇದು **07** ಜನ ಸದಸ್ಯರನ್ನು ಒಳಗೊಂಡಿತ್ತು. ಆದರೆ ಈ ಸದಸ್ಯರೆಲ್ಲ ಬ್ರಿಟೀಷರೇ ಆಗಿದ್ದರು. ಭಾರತೀಯರಿಗೆ ಅವಕಾಶವಿರಲಿಲ್ಲ. ಈ ಶಾಸನಬದ್ಧ ಆಯೋಗ ರಚಿಸಲು 1919ರ ಕಾಯ್ದೆಯಲ್ಲೇ ತಿಳಿಸಲಾಗಿತ್ತು.
- ಫೆಬ್ರವರಿ 3, 1928ರಂದು ಯೋಜಿಸಿದಂತೆ ಸೈಮನ್ ಆಯೋಗವು **ಬಾಂಬೆಗೆ** ಬಂದಿತು. ಆದರೆ ಲಾಹೋರ್‌ಗೆ ಭೇಟಿ ನೀಡಿದಾಗ ಲಾಲಾ ಲಜಪತ್‌ರಾಯ್ ಇದನ್ನು ವಿರೋಧಿಸಿದರು. ಇದರಿಂದ **ಸ್ಯಾಂಡರ್ಸ್** ಎಂಬ ಪೊಲೀಸನ ಲಾಟಿ ಏಟಿನಿಂದ ತೀವ್ರ ಗಾಯಗೊಂಡು **ಲಜಪತ್‌ರಾಯ್ ನಿಧನರಾದರು.** ಲಕ್ನೋದಲ್ಲಿ ಜವಾಹರಲಾಲ್ ನೆಹರೂ ಲಾಟಿ ಏಟನ್ನು ತಿಂದರೆ, ಗೋವಿಂದ ವಲ್ಲಭಪಂತ್ ಲಾಟಿ ಏಟಿನಿಂದ ಶಾಶ್ವತ ಅಂಗವಿಕಲರಾದರು.
- 1925ರಲ್ಲೇ ಭಾರತದ ರಾಜ್ಯ ಕಾರ್ಯದರ್ಶಿ **ಲಾರ್ಡ್ ಬರ್ಕೆನ್** ಇಂತಹ ಆಯೋಗ ರಚನೆಗೆ ಬೆಂಬಲಿಸಿದ್ದನು. ಕನ್ಸರ್‌ವೇಟಿವ್ ಪಕ್ಷ ಮುಂತಾದ ಚುನಾವಣೆಗಳಲ್ಲಿ ಗೆಲ್ಲುವ ಅವಕಾಶವಿದ್ದ ಲೇಬರ್ ಸರ್ಕಾರವು ಇಂತಹ ಆಯೋಗ ನೇಮಿಸುವಂತಾಗಲಿ ಎಂಬುದಾಗಿತ್ತು. ಸ್ವರಾಜ್ಯ ಪಕ್ಷದಲ್ಲಿ ಉಂಟಾಗಿದ್ದಂತಹ ಬಿರುಕನ್ನು ಮತ್ತಷ್ಟು ಹೆಚ್ಚಿಸುವುದಾಗಿತ್ತು.

ಆಯೋಗದ ಶಿಫಾರಸ್ಸುಗಳು

1. ಪ್ರಾಂತ್ಯಗಳಲ್ಲಿದ್ದ ದ್ವಿಪ್ರಭುತ್ವ ರದ್ದುಗೊಳಿಸಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡುವುದು.
2. ಪ್ರಾಂತೀಯ ಶಾಸನ ಸಭೆಗಳು 200-250 ಸದಸ್ಯರನ್ನು ಒಳಗೊಂಡಿರಬೇಕು.
3. ಬರ್ಮಾವನ್ನು ಭಾರತದಿಂದ ಹಾಗೂ ಸಿಂದ್‌ನ್ನು ಬಾಂಬೆಯಿಂದ ಪ್ರತ್ಯೇಕಿಸುವುದು.
4. ಮತದಾನದ ಅಧಿಕಾರವನ್ನು ಇನ್ನೂ ಹೆಚ್ಚಿನ ನಾಗರಿಕರಿಗೆ ನೀಡಬೇಕು.
5. ಕೋಮುವಾದ ಚುನಾವಣಾ ಕ್ಷೇತ್ರಗಳನ್ನು ಮುಂದುವರಿಸಬೇಕು.
6. ಕೇಂದ್ರೀಯ ಶಾಸನಸಭೆ ಸಂಯುಕ್ತ ಲಕ್ಷಣವನ್ನು ಹೊಂದಿರಬೇಕು.
7. ಭಾರತಕ್ಕೆ ಫೆಡರಲ್ ಸಂವಿಧಾನ ನೀಡುವುದು.
8. ಗೌರ್ನರ್ ಅವರಿಗಿದ್ದ ವಿಶೇಷ ಅಧಿಕಾರವನ್ನು ಮುಂದುವರಿಸಬೇಕು.

ಆಯೋಗದಿಂದಾದ ಬದಲಾವಣೆಗಳು

- 1922ರಿಂದ ಸ್ಥಗಿತವಾಗಿದ್ದ ರಾಜಕೀಯ ಚಳುವಳಿಗೆ ನವಚೇತನ ನೀಡಿತು.
- ಜವಾಹರಲಾಲ್ ನೆಹರು, ಸುಭಾಷ್‌ಚಂದ್ರ ಬೋಸ್‌ರಂತಹ ಯುವ

ನಾಯಕರು ಕಾಣಿಸಿಕೊಂಡರು.

- ಸಮಾಜವಾದಿ ಮತ್ತು ಕಮ್ಯುನಿಷ್ಟ್ ಸಿದ್ಧಾಂತಗಳು ಜನಪ್ರಿಯವಾದವು.
- ಅಂಬೇಡ್ಕರ್ ಸೈಮನ್ ಆಯೋಗದ ಪರವಾಗಿದ್ದರು.

ಟೀಕೆಗಳು

- ಜವಾಬ್ದಾರಿ ಸರ್ಕಾರದ ಬಗ್ಗೆ ಪ್ರಸ್ತಾಪಿಸಿರಲಿಲ್ಲ.
- ಭಾರತದ ರಕ್ಷಣೆಯನ್ನು ಬ್ರಿಟಿಷ್ ನಿಯಂತ್ರಣದಲ್ಲೇ ಮುಂದುವರೆಸಿತು.
- ಸೈನ್ಯದ ಖರ್ಚು ಭಾರತದ ತೆರಿಗೆಗಳಿಂದ ಭರಿಸುತ್ತಿದ್ದರೂ ಬ್ರಿಟನ್ ಸರ್ಕಾರಕ್ಕೆ ನಿಷ್ಠೆಯಿಂದ ಇದ್ದರು.
- **ಫಲಿತಾಂಶ:** ಆಯೋಗದ ಘೋಷಣೆಯು ಭಾರತದಾದ್ಯಂತ ಪ್ರತಿಭಟನೆಗೆ ಕಾರಣವಾಯಿತು. ಆಯೋಗವು ವಿವಿಧ ಬಣ ಮತ್ತು ಪಕ್ಷಗಳನ್ನು ದೇಶಕ್ಕಾಗಿ ತಾತ್ಕಾಲಿಕವಾಗಿಯಾದರೂ ಒಂದುಗೂಡುವಂತೆ ಮಾಡಿತು. **ಮೇ 1930ರಲ್ಲಿ ಸೈಮನ್ ಆಯೋಗದ ವರದಿಯು ಪ್ರಕಟಗೊಂಡಿತು**. ಇದನ್ನು ಚರ್ಚಿಸಲು ಬ್ರಿಟಿಷ್ ಭಾರತೀಯ ಪ್ರತಿನಿಧಿಗಳ ದುಂಡು ಮೇಜಿನ ಪರಿಷತ್‌ಗೆ ಸಿದ್ಧತೆಗಳನ್ನು ಆರಂಭಿಸಿತು.

ಸರ್ವಪಕ್ಷಗಳ ಸಮ್ಮೇಳನ ಅಥವಾ ನೆಹರೂ ವರದಿ

- ಸೈಮನ್ ಆಯೋಗವನ್ನು ಭಾರತೀಯರು ತಿರಸ್ಕರಿಸಿದ್ದರಿಂದ ಭಾರತದ ಕಾರ್ಯದರ್ಶಿ **ಬರ್ಕನ್ ಹೆಡ್** ಭಾರತೀಯರಿಗೆ ಎಲ್ಲಾ ಪಕ್ಷಗಳು ಒಪ್ಪುವಂತಹ ಸಂವಿಧಾನ ರಚಿಸುವಂತೆ ಹಾಕಿದ ಸವಾಲನ್ನು ಸ್ವೀಕರಿಸಲಾಯಿತು. ಎಲ್ಲಾ ರಾಜಕೀಯ ಪಕ್ಷಗಳ ಸಮಾವೇಶವನ್ನು ಡಾ. ಅನ್ಸಾರಿ ಅಧ್ಯಕ್ಷತೆಯಲ್ಲಿ ಮೇ 1928ರಲ್ಲಿ ದೆಹಲಿ, ನಂತರ ಪೂನಾದಲ್ಲಿ ಏರ್ಪಡಿಸಲಾಯಿತು.
- **ಉದ್ದೇಶ:** ಭಾರತದ ಸಂವಿಧಾನದ ತತ್ವಗಳನ್ನು ರೂಪಿಸುವುದು. ಸಮಾವೇಶವು ಸಂವಿಧಾನ ರಚನೆಗೆ ಮೋತಿಲಾಲ್ ನೆಹರು ನೇತೃತ್ವದಲ್ಲಿ ಒಂದು ಉಪ ಸಮಿತಿಯನ್ನು ನೇಮಿಸಿತು. ಇದರಲ್ಲಿ ತೇಜ್ ಬಹದ್ದೂರ್ ಸಪ್ರು, ಸರ್ ಅಲಿ ಇಮಾಂ, ಸರ್ದಾರ್ ಮಂಗಳ್‌ಸಿಂಗ್, ಸಾಹೇಬ್ ಖುರೇಷಿ, ಜೆ.ಆರ್. ಪ್ರಧಾನ್, ಸುಭಾಷ್‌ಚಂದ್ರಬೋಸ್ ಮುಂತಾದವರಿದ್ದರು. ಸಮಿತಿಯು ನೆಹರು ವರದಿಯನ್ನು **ಆಗಸ್ಟ್ 10, 1928**ರಂದು ತನ್ನ ವರದಿ ಸಲ್ಲಿಸಿತು.

ಶಿಫಾರಸ್ಸುಗಳು

1. ಸ್ವ ಆಳ್ವಿಕೆಯ ಡೊಮಿನಿಯನ್ ಸ್ಟೇಟಸ್ ನೀಡುವುದು.
2. ಭಾಷಾವಾರು ಪ್ರಾಂತ್ಯಗಳ ಒಕ್ಕೂಟ ವ್ಯವಸ್ಥೆ.
3. ಕೋಮುವಾರು ಚುನಾವಣಾ ಕ್ಷೇತ್ರಗಳನ್ನು ರದ್ದುಪಡಿಸುವುದು.
4. ಕೇಂದ್ರದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರ ರಚನೆ. ಇದನ್ನು ಗೌರ್ನರ್ ಜನರಲ್ ಅಧೀನಕ್ಕೊಪ್ಪಿಸಲಾಯಿತು.
5. ಕೇಂದ್ರ ಶಾಸಕಾಂಗ ದ್ವಿಸದನದಿಂದ ಕೂಡಿರಬೇಕು (ಸೆನೆಟ್ ಮತ್ತು ಪ್ರತಿನಿಧಿ ಸಭೆ).
6. ಗೌರ್ನರ್ ಜನರಲ್ ಅನ್ನು ಬ್ರಿಟಿಷ್ ಸರ್ಕಾರ ನೇಮಿಸುವುದು. ಅವರ ಸಂಬಳ ಭಾರತದ ಖಜಾನೆಯಿಂದ ನೀಡುವುದು.
7. ಪ್ರಾಂತೀಯ ಸಭೆಗಳು 02 ಸದನಗಳನ್ನು ಹೊಂದಿರುವುದು. ಅವಧಿ 5 ವರ್ಷಗಳು.
8. ಹೈ ಕಮಿಷನರ್ ಮತ್ತು ವಿದೇಶಗಳಲ್ಲಿ ಭಾರತದ ಪ್ರತಿನಿಧಿಗಳನ್ನು ಗೌರ್ನರ್ ಜನರಲ್ ನೇಮಿಸುವುದು.
9. ಭಾರತದ ಸೈನ್ಯವನ್ನು ಭಾರತದ ಮಂತ್ರಿಯ ಅಧೀನಕ್ಕೊಪ್ಪಿಸುವುದು.
10. ಸಾರ್ವಜನಿಕ ಸೇವೆಗಳನ್ನು ಕೇಂದ್ರ ಶಾಸನಸಭೆಯ ನಿಯಂತ್ರಣಕ್ಕೊಪ್ಪಿಸಲಾಯಿತು.
11. ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ಹಂಚಿಕೆ.
12. 19 ಮೂಲಭೂತ ಹಕ್ಕುಗಳ ಸೇರ್ಪಡೆ.

- ಈ ಮೇಲಿನ ಶಿಫಾರಸ್ಸುಗಳಿಗೆ ಕೆಲವು ತಿದ್ದುಪಡಿಗಳನ್ನು ಮಹ್ಮದ್ದಾಲಿ ಜಿನ್ನಾನು ಸೂಚಿಸಿದನು. ಇದನ್ನು ಮತಕ್ಕೆ ಹಾಕಿದಾಗ ಅದು ಸೋಲನ್ನು ಅನುಭವಿಸಿದ್ದರಿಂದ **ಜಿನ್ನಾ ಹೊಸ 14 ಅಂಶಗಳ ಸೂತ್ರವನ್ನು** ಪ್ರಕಟಿಸಿದರು.
- ನೆಹರೂ ವರದಿಯನ್ನು ಅಂತಿಮವಾಗಿ **ಕಲ್ಕತ್ತಾದ ಸರ್ವಪಕ್ಷಗಳ ಸಭೆ, ಡಿಸೆಂಬರ್ 22, 1928**ರಲ್ಲಿ ಅಂಗೀಕರಿಸಲಾಯಿತು.
- ಈ ವರದಿಯ ಮಂಡನೆಯಿಂದಾಗಿ ಮುಸ್ಲಿಂ ಲೀಗ್ ಇಬ್ಭಾಗವಾಯಿತು. ಅಜ್ಮಲ್‌ಖಾನ್, ಡಾ. ಅನ್ಸಾರಿ, ವರದಿಯನ್ನು ಬೆಂಬಲಿಸಿದರೆ, ಮಹ್ಮದ್ ಶಫೀ, ಜಿನ್ನಾರವರು ವಿರೋಧಿಸಿದರು.
- ನೆಹರೂ ವರದಿ ವಿರೋಧಿಸಿದ ಸುಭಾಷ್‌ಚಂದ್ರ ಬೋಸ್, ಜವಾಹರ್‌ಲಾಲ್ ನೆಹರು, ಶ್ರೀನಿವಾಸ ಅಯ್ಯಂಗಾರ್ ಮತ್ತು ಸತ್ಯಮೂರ್ತಿ ಮುಂತಾದವರು 1928ರ ಕಲ್ಕತ್ತಾ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ಬೇಡಿಕೆಯೇ ಕಾಂಗ್ರೆಸ್‌ನ ಗುರಿ ಎಂದರು.
- ನೆಹರೂ ವರದಿ ಒಪ್ಪದ ಸುಭಾಷ್‌ರು ನಮಗೆ ಬೇಕಾಗಿರುವುದು ಡೊಮಿನಿಯನ್ ಸ್ಟೇಟಸ್ ಅಲ್ಲ ಪೂರ್ಣ ಸ್ವರಾಜ್ಯ ಎಂದರು. ಈ ಸಂದರ್ಭದಲ್ಲಿ **1929ರಲ್ಲಿ ಇರ್ವಿನ್ ಘೋಷಣೆ** ಹೊರಡಿಸಿದನು.

ಇದರ ಅಂಶಗಳು

1. ಭಾರತದ ಸಂವಿಧಾನಾತ್ಮಕ ಪ್ರಗತಿಯ ಅಂತಿಮ ಗುರಿ ಆಂತರಿಕ ಸ್ವಾಯತ್ತತೆ ಈ ಅಂಶ 1917ರ ಘೋಷಣೆಯಲ್ಲಿದೆ ಎಂದನು.
2. ಸೈಮನ್ ವರದಿ ಬಂದ ನಂತರ ಲಂಡನ್‌ನಲ್ಲಿ ಸರ್ವಪಕ್ಷಗಳ ದುಂಡು ಮೇಜಿನ ಪರಿಷತ್‌ನ್ನು ವ್ಯವಸ್ಥೆಗೊಳಿಸಲಾಗುವುದು ಎಂದನು.

ಲಾಹೋರ್ ಕಾಂಗ್ರೆಸ್ ಅಧಿವೇಶನ-1929

- ಇದರ ಅಧ್ಯಕ್ಷರು ಜವಾಹರಲಾಲ್ ನೆಹರು. ಇಲ್ಲಿ ಪೂರ್ಣ ಸ್ವರಾಜ್ಯ

ಕೈಗೊಳ್ಳುವುದಾಗಿ ತೀರ್ಮಾನಿಸಿದರು.

- ಡಿಸೆಂಬರ್ 31, 1929ರಂದು ನೆಹರು ರಾವಿ ನದಿ ದಂಡೆಯ ಮೇಲೆ ರಾಷ್ಟ್ರೀಯ ತ್ರಿವರ್ಣ ಧ್ವಜ ಹಾರಿಸಿದರು. **ಜನವರಿ 26, 1930ರಂದು ಮೊದಲ ಸ್ವಾತಂತ್ರ್ಯ ದಿನವೆಂದು** ಘೋಷಿಸಲಾಯಿತು. ಪೂರ್ಣ ಸ್ವರಾಜ್ಯದ ಉದ್ದೇಶದ ಸಾಧನೆಗಾಗಿ ಕಾನೂನುಭಂಗ ಚಳುವಳಿಯನ್ನು ಕೈಗೊಳ್ಳುವ ನಿರ್ಣಯವನ್ನು ಘೋಷಿಸಲಾಯಿತು. ಈ ಚಳುವಳಿಯ ರೂಪುರೇಷೆಗಳನ್ನು ನಿರ್ಣಯಿಸುವ ಅಧಿಕಾರವನ್ನು ಗಾಂಧೀಜಿಗೆ ನೀಡಲಾಯಿತು.
- ಸುಭಾಷ್‌ಚಂದ್ರ ಬೋಸರು **ಪೂರ್ಣ ಸ್ವರಾಜ್ ಘೋಷಣೆ**ಯನ್ನು ಮೊಟ್ಟ ಮೊದಲ ಬಾರಿಗೆ ನೀಡಿದರು.
- 1930ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆಹರೂ ವರದಿ ವಿರೋಧಿಸಿದ ಸುಭಾಷ್‌ಚಂದ್ರ ಬೋಸ್, ಶ್ರೀನಿವಾಸ್ ಅಯ್ಯಂಗಾರ್‌ರನ್ನು ಕಾಂಗ್ರೆಸ್ ಸಮಿತಿಯಿಂದ ಹೊರ ದೂಡಲಾಯಿತು.
- ಲಾಹೋರ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರು **ತಾವೊಬ್ಬ ಸಮಾಜವಾದಿ ಪ್ರಜಾಪ್ರಭುತ್ವವಾದಿ** ಎಂದು ಘೋಷಿಸಿಕೊಂಡರು.
- ಹೀಗೆ ಕಾಂಗ್ರೆಸ್‌ನ ಧ್ಯೇಯೋದ್ದೇಶವು ಸುಧಾರಣೆಯ ಬೇಡಿಕೆಯ ಹಂತದಿಂದ ಜವಾಬ್ದಾರಿ ಸರ್ಕಾರಕ್ಕೂ ನಂತರ ಪೂರ್ಣ ಸ್ವಾತಂತ್ರ್ಯದ ಹಂತಕ್ಕೆ ಬದಲಾಗುತ್ತಾ ಹೋಯಿತು.

ಬಾರ್ದೋಲಿ ಸತ್ಯಾಗ್ರಹ 1929–30

- ಬಾಂಬೆ ಸರ್ಕಾರವು ಕಂದಾಯವನ್ನು ಶೇ 22ರಷ್ಟು ಹೆಚ್ಚಿಸಿದ್ದರಿಂದ ಬಾರ್ದೋಲಿ ಜಿಲ್ಲೆಯ ರೈತರು ವಲ್ಲಭಾಯ್ ಪಟೇಲ್ ನೇತೃತ್ವದಲ್ಲಿ ಬಾರ್ದೋಲಿ ಸತ್ಯಾಗ್ರಹ ನಡೆಸಿದರು. ಪಟೇಲರು "ನಿಮ್ಮ ಜಮೀನನ್ನು ತಾಕತ್ತಿದ್ದರೆ ಬ್ರಿಟನ್‌ಗೆ ತೆಗೆದುಕೊಂಡು ಹೋಗಿರೆಂದು ಸವಾಲು ಹಾಕಿದರು."
- ಪಟೇಲರ ಬಾರ್ದೋಲಿ ತಾಲ್ಲೂಕನ್ನು 13 ವಿಭಾಗಗಳಾಗಿ ವಿಂಗಡಿಸಿ ಸತ್ಯಾಗ್ರಹ ಕೈಗೊಳ್ಳಲು, ಪ್ರಚಾರ ಮಾಡಲು **ಸತ್ಯಾಗ್ರಹ ಪತ್ರಿಕೆ** ಹೊರಡಿಸಿದ್ದರು. ಸ್ತ್ರೀ ಪರ ಪ್ರಚಾರ ಮಾಡಲು ಪಟೇಲರ ಮಗಳು ವಣಿಬೇನ್ ಪ್ರಯತ್ನಿಸಿದರು.
- ನಾಯಕತ್ವ ವಹಿಸಿದ ಪಟೇಲರಿಗೆ ರೈತರು **'ಸರ್ದಾರ್'** ಬಿರುದು ನೀಡಿದರು.

ಜಿನ್ನಾನ 14 ಅಂಶಗಳು

- ನೆಹರೂ ವರದಿ ತಿರಸ್ಕರಿಸಿದ ಜಿನ್ನಾ **1929ರಲ್ಲಿ ದೆಹಲಿಯ ಅಖಿಲ ಭಾರತ ಮುಸ್ಲಿಂ ಲೀಗ್ ಅಧಿವೇಶನದಲ್ಲಿ 14 ಅಂಶಗಳ ವರದಿ** ಮಂಡಿಸಿದನು.

1. ಭಾರತದ ಮುಂದಿನ ಸಂವಿಧಾನ ಸಂಯುಕ್ತ ರೂಪದ್ದಾಗಿರಬೇಕು.
3. ಕೇಂದ್ರ ಶಾಸಕಾಂಗದಲ್ಲಿ ಏನೇ ಬದಲಾವಣೆ ಮಾಡಲು ಅದು ರಾಜ್ಯಗಳ ಒಪ್ಪಿಗೆ ಬೇಕು.
4. ಯಾವುದೇ ಮಸೂದೆ/ತಿದ್ದುಪಡಿ ಅಂಗೀಕರಿಸುವಲ್ಲಿ ಯಾವುದೇ ಜನಾಂಗಕ್ಕೆ ಧಕ್ಕೆ ಆಗಬಾರದು.
5. ಕೇಂದ್ರ / ಪ್ರಾಂತೀಯ ಮಂಡಲದಲ್ಲಿ 1/3ರಷ್ಟು ಪ್ರಾತಿನಿಧ್ಯವಿರಬೇಕು.
6. ಎಲ್ಲಾ ಸ್ಥಳೀಯ ಸರ್ಕಾರಿ ಸೇವೆಗಳಲ್ಲಿ ಮುಸ್ಲಿಮರಿಗೆ ಅವಕಾಶ ನೀಡಲಾಯಿತು.
7. ಎಲ್ಲಾ ಪ್ರಾಂತ್ಯಗಳಲ್ಲಿ ಒಂದೇ ರೀತಿಯ ಸ್ವಯಂ ಆಡಳಿತ ರಚಿಸಬೇಕು.
8. ಎಲ್ಲಾ ಪ್ರಾಂತೀಯ ಸಭೆಗಳು ಮತ್ತು ಸ್ಥಳೀಯ ಸಂಸ್ಥೆಯನ್ನು ಅಲ್ಪಸಂಖ್ಯಾತರು ಪ್ರತಿನಿಧಿಸಬೇಕು.
9. ಪ್ರಾಂತ್ಯಗಳನ್ನು ವಿಂಗಡಿಸುವಾಗ ಮುಸ್ಲಿಂ ಪ್ರಾಂತ್ಯಗಳಿಗೆ ಧಕ್ಕೆಯಾಗಬಾರದು.
10. ಬೇರೆ ಪ್ರಾಂತ್ಯಗಳಂತೆ ವಾಯುವ್ಯ ಪ್ರಾಂತ್ಯ ಮತ್ತು ಬಲೂಚಿಸ್ಥಾನಗಳ ಸುಧಾರಣೆ ಮಾಡಬೇಕು.
11. ಸಿಂದ್ ಪ್ರಾಂತ್ಯವನ್ನು ಬಾಂಬೆಯಿಂದ ಪ್ರತ್ಯೇಕಿಸಬೇಕು.
12. ಪ್ರತ್ಯೇಕ ಮತಕ್ಷೇತ್ರಗಳ ಮುಂದುವರಿಕೆ.
13. ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ನೀಡಬೇಕು.
14. ಮುಸ್ಲಿಂ ಧರ್ಮ ಸಂಸ್ಕೃತಿ ರಕ್ಷಣೆ ಅಭಿವೃದ್ಧಿಗೆ ಅನುದಾನ ಮತ್ತು ಸಂವಿಧಾನ ರಕ್ಷಣೆ

ಕಾನೂನುಭಂಗ ಚಳುವಳಿ – 1930–31
(Civil Disobidience Movement)

ಎ. ಬೇಡಿಕೆಗಳು ಮತ್ತು ಚಳುವಳಿಯ ಆರಂಭ

- ಗಾಂಧೀಜಿಯವರು ಈ ಚಳುವಳಿಗೆ ಮುನ್ನ ವೈಸ್‌ರಾಯ್‌ಗೆ 11 ಅಂಶಗಳ ಬೇಡಿಕೆ ಪತ್ರವನ್ನು ಸಲ್ಲಿಸಿದರು. ಇದರಲ್ಲಿ ಪೂರ್ಣ ಸ್ವರಾಜ್ಯದ ಬೇಡಿಕೆ ಇಲ್ಲದಿದ್ದರೂ ಅವು ಭಾರತೀಯರ ಕುಂದು ಕೊರತೆಗಳನ್ನು ಪ್ರತಿನಿಧಿಸುತ್ತಿದ್ದವು. ಅವರ ಬೇಡಿಕೆಗಳೆಂದರೆ–

1. ಭೂಕಂದಾಯದಲ್ಲಿ ಶೇ. 50% ಕಡಿತ.
2. ಮಿಲಿಟರಿ ಖರ್ಚು 50% ಕಡಿತ.
3. ನಾಗರೀಕ ಆಡಳಿತದ ಖರ್ಚು 50%ಗೆ ಇಳಿಕೆ.
4. ಅಮದು ಪದಾರ್ಥಗಳನ್ನು ಸಂಪೂರ್ಣ ರದ್ದು ಮಾಡುವುದು.
5. ಉಪ್ಪಿನ ತೆರಿಗೆ ರದ್ದುಗೊಳಿಸಿ, ಉಪ್ಪಿನ ಉತ್ಪಾದನೆಯಲ್ಲಿ ಸರ್ಕಾರದ ಏಕಸ್ವಾಮ್ಯ ಸಾಧಿಸುವುದು.
6. ದೇಶೀಯ ಜವಳಿ ಕೈಗಾರಿಕೆಗಳಿಗೆ ರಕ್ಷಣೆ ನೀಡುವುದು.

8. ಶಸ್ತ್ರಾಸ್ತ್ರ ಕಾಯ್ದೆಯಲ್ಲಿ ಬದಲಾವಣೆ.
9. ಎಲ್ಲಾ ರಾಜಕೀಯ ನಾಯಕರನ್ನು ಬಿಡುಗಡೆ ಮಾಡುವುದು.
10. ಕೇಂದ್ರ ಜಾಗೃತ ದಳ ಅಭಿವೃದ್ಧಿಪಡಿಸುವುದು.
11. ಅಸ್ಪೃಶ್ಯತಾ ನಿವಾರಣೆ ಮತ್ತು ಸ್ತ್ರೀ ಸಬಲೀಕರಣ.

- ಈ ಬೇಡಿಕೆಗಳನ್ನು ಪೂರೈಸಲು ಗಾಂಧೀಜಿಯವರು ನೀಡಿದ್ದ 41 ದಿನಗಳಲ್ಲಿ ಸರ್ಕಾರವು ಪೂರಕವಾಗಿ ಏನನ್ನೂ ಪ್ರತಿಕ್ರಯಿಸದೆ ಇದ್ದುದರಿಂದ ಪ್ರಸಿದ್ಧ **ದಂಡಿಯಾತ್ರೆ** (ಮಾರ್ಚ್ 12ರಿಂದ ಏಪ್ರಿಲ್ 06ರವರೆಗೆ)ಯ ಮೂಲಕ **ಕಾನೂನು ಭಂಗ** ಚಳುವಳಿ ಆರಂಭಿಸಿದರು.
- 1930 ಫೆಬ್ರವರಿ ಸಬರಮತಿಯಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಪೂರ್ಣ ಸ್ವರಾಜ್ಯದ ಗುರಿಯನ್ನು ತಲುಪಲು ಕಾನೂನು ಭಂಗ ಚಳುವಳಿ ಆರಂಭಿಸಬೇಕೆಂದು ನಿರ್ಣಯಿಸಲಾಯಿತು.

ಬಿ. ಚಳುಳಿಯ ವಿವಿಧ ಹಂತಗಳು

1. ಮೊದಲ ಹಂತ – 1930 ಮಾರ್ಚ್–ಸೆಪ್ಟೆಂಬರ್

ನಗರದ ವ್ಯಾಪಾರಿಗಳು, ಮಧ್ಯಮ ವರ್ಗದವರು ಮತ್ತು ಗ್ರಾಮಗಳಲ್ಲಿ ರೈತರು ಚಳುವಳಿಯಲ್ಲಿ ಭಾಗವಹಿಸಿ ಉಪ್ಪು ತಯಾರಿಕೆ, ಕರ ನಿರಾಕರಣೆ, ಮದ್ಯದಂಗಡಿಗಳ ಮುಂದೆ ಪಿಕೆಟಿಂಗ್ ಹಾಗೂ ಚೌಕಿದಾರಿ ತೆರಿಗೆ ನಿರಾಕರಣೆ ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡರು.

2. ಎರಡನೇ ಹಂತ – 1930 ಅಕ್ಟೋಬರ್–1931 ಮಾರ್ಚ್)

ನಗರದ ವ್ಯಾಪಾರಿಗಳು, ಕೈಗಾರಿಕೋದ್ಯಮಗಳು ಮುಂತಾದವರು ಭಾಗವಹಿಸುವಿಕೆ ಕಡಿಮೆಯಾಯಿತು. ಅಲ್ಲದೆ ಈ ವರ್ಗವು ಸರ್ಕಾರ ಮತ್ತು ಕಾಂಗ್ರೇಸ್ ಮಧ್ಯೆ ರಾಜಿ ಮಾಡಲು ಯತ್ನಿಸಿತು. ಇದರ ಫಲವಾಗಿ 1931 ಮಾರ್ಚ್‌ನಲ್ಲಿ ಗಾಂಧಿ–ಇರ್ವಿನ್ ಒಪ್ಪಂದ ಏರ್ಪಟ್ಟು ಚಳುವಳಿಯು ತಾತ್ಕಾಲಿಕವಾಗಿ ನಿಲುಗಡೆಯಾಯಿತು.

3. ಮೂರನೇ ಹಂತ (1932 ಜನವರಿ 1934 ಏಪ್ರಿಲ್)

ಈ ಹಂತದ ಚಳುವಳಿಯಲ್ಲಿ ಭಾಗವಹಿಸಿದ ಜನರ ಮೇಲೆ ಸರ್ಕಾರ ದಮನಕಾರಿ ಕ್ರಮಗಳನ್ನು ಕೈಗೊಂಡಿತು. ಅಂತಿಮವಾಗಿ ಈ ಚಳುವಳಿಯನ್ನು ಕಾಂಗ್ರೇಸ್ ಹಿಂದಕ್ಕೆ ಪಡೆಯಿತು.

ದಂಡಿ ಉಪ್ಪಿನ ಸತ್ಯಾಗ್ರಹ ಮಾರ್ಚ್ 12, 1930

- ಗಾಂಧೀಜಿಯವರು (ಮಾರ್ಚ್ 12 ರಿಂದ ಏಪ್ರಿಲ್ 06ರವರೆಗೆ) ಸಬರಮತಿ ಆಶ್ರಮದಿಂದ **78 ಅನುಯಾಯಿಗಳೊಂದಿಗೆ** ಹಳ್ಳಿಗಳ ಮೂಲಕ 240 ಕಿ.ಮೀ. ದೂರದ ದಂಡಿವರೆಗೆ ಪಾದಯಾತ್ರೆ ಮಾಡಿದರು.
- ಗಾಂಧೀಜಿಯವರೊಂದಿಗೆ ಸರೋಜಿನಿನಾಯ್ಡು, ಅರುಣಾ ಅಸಫ್ ಅಲಿ, ಜವಾಹರಲಾಲ್ ನೆಹರೂ, ಪಟೇಲ್, ಮೊರಾರ ಮಹದೇವಪ್ಪ

ಭಂಗಗೊಳಿಸಲು ಗಾಂಧೀಜಿ ದಂಡಿಯಲ್ಲಿ ಎತ್ತಿಕೊಂಡ ಹಿಡಿ ಉಪ್ಪು 1600 ರೂಗೆ ಹರಾಜಾಯಿತು.

- ದಂಡಿ ಯಾತ್ರೆಯನ್ನು ಮೋತಿಲಾಲ್ ನೆಹರುರವರು ಶ್ರೀರಾಮಚಂದ್ರನ ಐತಿಹಾಸಿಕ ಶ್ರೀಲಂಕಾಯಾತ್ರೆ ಎಂದರು.
- ಪಿ.ಸಿ.ರೇ ಅವರು ಮೋಸೆಸ್‌ನ ಜೊತೆಯಲ್ಲಿ ಯಹೂದಿಗಳ ವಲಸೆಯಂತೆ ಎಂದಿದ್ದಾರೆ.
- ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮಹಿಳೆಯರು – ಸರೋಜಿನಿ ನಾಯ್ಡು, ಅರುಣಾ ಅಸಫ್ ಆಲಿ, ವಿಜಯಲಕ್ಷ್ಮಿ ಪಂಡಿತ್, ಸ್ವರೂಪರಾಣಿ ಮತ್ತು ಕಮಲ ಮುಂತಾದವರು.
- 1930 ಮಾರ್ಚ್ 12ರಂದು ಪಾದಯಾತ್ರೆ ಹೊರಟ ಗಾಂಧೀಜಿ **ಬ್ರೂಚ್ ಜಿಲ್ಲೆಯ ಜಂಬೂಸಾರ್** ಎಂಬ ಗ್ರಾಮದಲ್ಲಿ ತಂಗಿದ್ದರು. ಮಾರ್ಚ್ 13ರಂದು ಮೊ.ನೆಹರು ತಮ್ಮ **ಆನಂದ ಭವನವನ್ನು** ಕಾಂಗ್ರೇಸ್‌ಗೆ ಕಾಣಿಕೆಯಾಗಿ ನೀಡಿದರು. ನಂತರ ಈ ಭವನವನ್ನು **'ಸ್ವರಾಜ್ಯ ಭವನ'** ಎಂದು ಕರೆದು ಅದನ್ನು ರಾಷ್ಟ್ರೀಯ ಕಾಂಗ್ರೇಸ್‌ನ ಕಾರ್ಯಸ್ಥಾನವಾಗಿ ಮಾಡಿಕೊಳ್ಳಲಾಯಿತು.
- ದಂಡಿಯಾತ್ರೆಯಂತೆ ತಮಿಳುನಾಡಿನಲ್ಲಿ ರಾಜಗೋಪಾಲಚಾರಿ ನೇತೃತ್ವದಲ್ಲಿ ತಿರುಚನಾಪಳ್ಳಿ–ವೇದಾರಣ್ಯಂಗೆ, ಮಲಬಾರ್‌ನಿಂದ ವೈಕೋಂ ಸತ್ಯಾಗ್ರಹದ ನಾಯಕ ಕೆ. ಕೇಳಪ್ಪನ್ ನೇತೃತ್ವದಲ್ಲಿ ಕ್ಯಾಲಿಕಟ್ – ಪಯನೂರ್‌ಗೆ ಹಾಗೂ ಅಸ್ಸಾಂನ ಸಿಲೋಟ್‌ನಿಂದ ಬಂಗಾಳದ ನಜಾಲಿವರೆಗೆ ಸತ್ಯಾಗ್ರಹಿಗಳಿಗೆ ನೇತೃತ್ವ ವಹಿಸಿದ್ದರು.
- ದಂಡಿ ಸತ್ಯಾಗ್ರಹದಂತೆ ಮೇ 21 1930ರಲ್ಲಿ ಗಾಂಧೀಜಿಯವರು ಯೋಜಿಸಿದ **ದರಸನ ಉಪ್ಪಿನ ಸತ್ಯಾಗ್ರಹ** ಮುಖ್ಯವಾದುದು. ಅವರ ಬಂಧನವಾದಾಗ ಅದರ ನೇತೃತ್ವವನ್ನು ಅಬ್ಬಾಸ್ ತ್ಯಬ್ಜಿ ವಹಿಸಿದರೆ, ದಂಡಿ ಸತ್ಯಾಗ್ರಹ ನೇತೃತ್ವವನ್ನು ಸರೋಜಿನಿನಾಯ್ಡು ವಹಿಸಿಕೊಂಡರು. ಇವರು ಗಾಂಧಿ ದೇಹವು ಸೆರೆಮನೆಯಲ್ಲಿರಬಹುದು ಆದರೆ ಅವರ ಆತ್ಮ ನಿಮ್ಮಲ್ಲೇ ಇದೆ. ಭಾರತದ ಗೌರವವು ನಿಮ್ಮ ಕೈಯಲ್ಲಿದೆ. ನೀವು ಹಿಂಸೆಯನ್ನು ಕೈಗೊಳ್ಳಬಾರದು, ನಿಮ್ಮನ್ನು ಹೊಡೆಯಬಹುದು, ಆದರೆ ವಿರೋಧಿಸಬೇಡಿ. ನೀವು ಹೊಡೆತ ತಡೆಯಲು ಕೈಯನ್ನು ಎತ್ತಬಾರದು ಎಂದರು. ಇಲ್ಲಿ ಸ್ವಯಂ ಸೇವಕರ (2500ಜನ) ಮುಂಚೂಣಿಯಲ್ಲಿ ಗಾಂಧಿ ಪುತ್ರ ಮಣಿಲಾಲ್ ಇದ್ದರು.
- ಅಮೇರಿಕಾದ ಯುನೈಟೆಡ್ ಸುದ್ದಿ ಸಂಸ್ಥೆಯು ಪ್ರತಿನಿಧಿ **ವೆಬ್‌ಮಿಲ್ಲಾರ್** ತನ್ನ ವರದಿಯಲ್ಲಿ ದಂಡಿಯಾತ್ರೆ ಬಗ್ಗೆ ಪ್ರಕಟಿಸಿದನು.
- ಸಬರಮತಿ ಆಶ್ರಮದಿಂದ ದಂಡಿಯವರೆಗೆ ಇರುವ ಹಾದಿಯನ್ನು ಪ್ರಧಾನಿ ಮನಮೋಹನ್‌ಸಿಂಗ್‌ರು (2005ರಲ್ಲಿ) ಈ ಸತ್ಯಾಗ್ರಹದ 75ನೇ ವರ್ಷಾಚರಣೆ ಸಂದರ್ಭದಲ್ಲಿ Great Heritage path ಎಂದು ಕರೆದಿದ್ದಾರೆ.

ಕರ ನಿರಾಕರಣೆ ಮತ್ತು ಇತರೆ ಚಳುವಳಿಗಳು ಹಾಗೂ ಅವುಗಳ ದಮನ

- ಗಾಂಧೀಜಿಯ ಆಶಯದಂತೆ ಸತ್ಯಾಗ್ರಹಿಗಳು ಗುಜರಾತ್‌ನ ಬಾರ್ಡೋಲಿ ಮತ್ತು ಖೇಡಾ ಜಿಲ್ಲೆಗಳಲ್ಲಿ ಯುನೈಟೆಡ್ ಪ್ರಾವಿನ್ಸ್‌ನಲ್ಲಿ ಕರ ನಿರಾಕರಣೆ ಆರಂಭಿಸಿದರು. ಕರ್ನಾಟಕದ **ಅಂಕೋಲ** ಮತ್ತು **ಸಿದ್ದಾಪುರ**ಗಳಲ್ಲಿ ಸುಮಾರು 800 ಕುಟುಂಬಗಳು ಕರನಿರಾಕರಣೆಯಲ್ಲಿ ಭಾಗವಹಿಸಿದ್ದವು.
- ಪೂರ್ವ ಭಾರತದಲ್ಲಿ ಹೊಸ ವಿಧಾನದಲ್ಲಿ ಕರ ನಿರಾಕರಣಾ ಚಳುವಳಿ ಕೈಗೊಳ್ಳಲಾಯಿತು. ಅದೆಂದರೆ ಚೌಕಿದಾರ ತೆರಿಗೆ ನಿರಾಕರಣೆ, ಕರ್ನಾಟಕ, ಮಹಾರಾಷ್ಟ್ರ ಹಾಗೂ ಕೇಂದ್ರೀಯ ಪ್ರಾಂತ್ಯಗಳಲ್ಲಿ ಅರಣ್ಯ ಶಾಸನಗಳನ್ನು ವಿರೋಧಿಸಿದರು. ಉತ್ತರ ಪ್ರದೇಶದಲ್ಲಿ ಕಂದಾಯ ನಿರಾಕರಣೆ, ಗೇಣಿ ನಿರಾಕರಣೆ ಚಳುವಳಿ ಆರಂಭವಾದವು.
- ಕಾನೂನುಭಂಗ ಚಳುವಳಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದನ್ನು ನಿರ್ಬಂಧಿಸಲು **ಕನ್ನಿಂಗ್ ಹ್ಯಾಂ ಸುತ್ತೋಲೆ** ಹೊರಡಿಸಲಾಯಿತು.
- 1930ರಲ್ಲಿ ಬಿಡುಗಡೆಯಾದ ಜವಾಹರಲಾಲ್ ನೆಹರು ಉತ್ತರ ಪ್ರದೇಶದಲ್ಲಿ ಕರ ನಿರಾಕರಣೆ ಘೋಷಿಸಿದರು. ಆಗ್ರ ಮತ್ತು ರಾಯ್ ಬರೇಲಿಯಲ್ಲಿ ಇದು ಯಶಸ್ವಿಯಾಯಿತು.
- ಪೇಷಾವರ್ ಬಳಿಯ ಉಟ್‌ಮುಂಜೈ ಗ್ರಾಮದ ಮುಖಂಡ ಖಾನ್ **ಅಬ್ದುಲ್ ಗಫಾರ್‌ಖಾನ್** ಗಾಂಧೀಜಿಯ ಅಹಿಂಸಾತ್ಮಕ ಸತ್ಯಾಗ್ರಹದ ಪರವಾಗಿ ಅನೇಕ ಪಠಾಣರನ್ನು ಸಂಘಟಿಸಿ ಇವರನ್ನು **ಖುದೈ ಖಿದ್ಮತ್‌ಗಾರ್** ಎಂದು ಕರೆಯಲಾಯಿತು. ಇವರು ಧರಿಸುತ್ತಿದ್ದ ಸಮವಸ್ತ್ರದಿಂದಾಗಿ **ಕೆಂಪು ಅಂಗಿಯವರು** ಎಂದು ಕರೆಯಲ್ಪಟ್ಟರು.
- ಅಲಹಾಬಾದ್ ಜಿಲ್ಲೆಯ ಔದ್‌ನಲ್ಲಿ **ಎಂ.ಎನ್. ರಾಯ್** ನೇತೃತ್ವದಲ್ಲಿ ಕರ ನಿರಾಕರಣಾ ಚಳುವಳಿ ಆರಂಭವಾಯಿತು. 1930ರ ಕೊನೆಗೆ ಬ್ರಿಟನ್‌ನಿಂದ ರಫ್ತಾಗುತ್ತಿದ್ದ ವಸ್ತುಗಳು ಗಣನೀಯವಾಗಿ ಇಳಿಮುಖವಾದವು. ಲಂಡನ್ ಡೈಲಿ ಮೇಲ್ ಪತ್ರಿಕೆಯು ಭಾರತದಿಂದ ಬರುವ ಈಚೆಗಿನ ವರ್ತಮಾನ ನೋಡಿದರೆ ಲ್ಯಾಂಕ್‌ಷೈರಿನ ಭಾರತದ ವ್ಯಾಪಾರ ಪೂರ್ಣ ನಿಂತು ಹೋಗುತ್ತದೆ ಎಂದಿತ್ತು.
- ಬಂಗಾಳದಲ್ಲಿ ಪ್ರಭಾತ್ ಫೆರಿಸ್ ಎಂಬ ಸ್ತ್ರೀಯರು, ವಾನರ ಸೇನೆ ಎಂಬ ಮಕ್ಕಳ ಸಂಘಟನೆ, ಹೆಣ್ಣು ಮಕ್ಕಳ ಮಂಜರಿ / ಬೆಕ್ಕಿನ ಸೇನೆ ಎಂಬ ಸಂಘಟನೆಗಳು ಸ್ಥಾಪಿತಗೊಂಡು ಕಾನೂನು ಭಂಗ ಚಳುವಳಿ ಕಾರ್ಯಕ್ರಮಗಳಿಗೆ ಬೆಂಬಲ ನೀಡಿದವು.
- ಮುಸ್ಲಿಂ ಸಮುದಾಯವು ಕಾನೂನು ಭಂಗ ಚಳುವಳಿಯಿಂದ ದೂರ ಉಳಿಯಿತು. ಆದರೂ ವಾಯುವ್ಯ ಭಾರತದಲ್ಲಿ ಮುಸ್ಲಿಂ ಭಾಗವಹಿಸುವಿಕೆ ಅಧಿಕವಾಗಿತ್ತು. ಮುತ್ತಿಗೆ ಬಿಟ್ಟರೆ ಉಳಿದ ಕಡೆ ಹಿಂಸೆಯಿಲ್ಲದೆ ಅಹಿಂಸಾತ್ಮಕವಾಗಿತ್ತು.
- ಹೀಗೆ 1930–31ರ ಕಾನೂನು ಭಂಗ ಚಳುವಳಿ ಸಾಮಾನ್ಯವಾಗಿ ವಿರೋಧಿ ಆಂದೋಲನದ ಪ್ರಮುಖ ಹಂತವಾಗಿತ್ತು. ಗಾಂಧೀಜಿಯ ವಿಚಾರಧಾರೆಗಳು ಪ್ರತಿ ಗ್ರಾಮದಲ್ಲೂ ಹರಡಿದ್ದರೂ ಬ್ರಿಟಿಷರು ಮುಟ್ಟುಗೋಲು ಹಾಕಿಕೊಂಡ ಸತ್ಯಾಗ್ರಹಿಗಳ ಆಸ್ತಿಗಳನ್ನು ಕೊಳ್ಳಲು ಜನ ಇದ್ದರು ಎನ್ನುವ ಅಂಶವೇ ಇಡೀ ರಾಷ್ಟ್ರ ಗಾಂಧಿ ತತ್ವವನ್ನು ಇನ್ನೂ ಸ್ವೀಕರಿಸಿಲ್ಲ ಎಂಬ ಅಂಶ ವ್ಯಕ್ತವಾಗುತ್ತದೆ. ಹಾಗೇನಾದರೂ ಭಾರತೀಯರೆಲ್ಲರೂ ಪೂರ್ಣ ಪ್ರಮಾಣದಲ್ಲಿ ಗಾಂಧಿ ತತ್ವ ಅನುಸರಿಸಿದ್ದೇ ಹಾಗಿದ್ದಲ್ಲಿ ಅಂದೇ ನಮಗೆ ಸ್ವಾತಂತ್ರ್ಯ ದೊರೆಯುತ್ತಿತ್ತು.
- ಕಾನೂನು ಭಂಗ ಚಳುವಳಿ ದಮನ ಮಾಡಲು ಸರ್ಕಾರ ಐ.ಎನ್.ಸಿಯನ್ನು ಕಾನೂನು ಬಾಹಿರ ಸಂಸ್ಥೆ ಎಂದು ಘೋಷಿಸಿತು. ನಾಗರೀಕ ಸೇನಾ ಕಾಯ್ದೆ ಜಾರಿಗೊಳಿಸಿತು.
- ಬಂಗಾಳದ ಕೆಲವು ಜಿಲ್ಲೆಗಳಲ್ಲಿ ಇಡೀ ನಾಗರೀಕ ಸಮುದಾಯವನ್ನು ಅಪರಾಧಿಗಳು ಎಂದು ಸರ್ಕಾರ ಪರಿಗಣಿಸಿ 12–25 ವರ್ಷದೊಳಗಿನ ಪುರುಷ ಮತ್ತು ಸ್ತ್ರೀಯರು ಗುರುತಿನ ಚೀಟಿ ಪಡೆಯುವುದನ್ನೇ ಕಡ್ಡಾಯಗೊಳಿಸಿತು. ಪತ್ರಿಕಾ ನಿರ್ಬಂಧ ಕಾಯ್ದೆ ಜಾರಿಗೊಳಿಸಲಾಯಿತು.
- ಗಾಂಧೀಜಿ ಅಸ್ಪೃಶ್ಯತಾ ವಿರೋಧಿ ಆಂದೋಲನವನ್ನು ಸವರ್ಣೀಯ ಹಿಂದೂಗಳಿಗೆ ಮನವರಿಕೆ ಮಾಡಿಕೊಡಲು ಆತ್ಮಶುದ್ಧಿ ಎಂಬ ಉಪವಾಸ (21ದಿನ) ಕೈಗೊಂಡರು.
- 1933 ಆಗಸ್ಟ್ 1ರಂದು ಗಾಂಧೀಜಿ ಸಬರಮತಿಯಿಂದ ರಾಸ್‌ವರೆಗೆ ಯಾತ್ರೆ ಮಾಡುವ ಮೂಲಕ ವೈಯಕ್ತಿಕ ಸತ್ಯಾಗ್ರಹ ಆರಂಭಿಸಿದರು.

ಪರಿಣಾಮಗಳು

- ಹತ್ತಿ ಬಟ್ಟೆ ಆಮದು 25% ಕಡಿಮೆಯಾಯಿತು.
- ಮಧ್ಯ ಪ್ರಾಂತ್ಯಗಳಲ್ಲಿ ಅರಣ್ಯ ಕಾಯ್ದೆ ಭಂಗದಿಂದ ಸರ್ಕಾರಕ್ಕೆ 16 ಲಕ್ಷ ನಷ್ಟ ಉಂಟಾಯಿತು..
- ಆಂಗ್ಲರ ಅಧೀನದಲ್ಲಿನ ಬಾಂಬೆಯ 16 ಗಿರಣಿಗಳು ಮುಚ್ಚಿದರು.
- ಖಾದಿ ಬಟ್ಟೆಯ ಉತ್ಪತ್ತಿ ಖಾದಿ ಸಂಗ್ರಹಾಲಯಗಳ ಸಂಖ್ಯೆ ಏರಿಕೆ

ದುಂಡುಮೇಜಿನ ಸಮ್ಮೇಳನಗಳು
Round - Table Conference

ಸೈಮನ್ ಆಯೋಗ ವಿಫಲವಾದ ನಂತರ ಭವಿಷ್ಯ ಭಾರತಕ್ಕೆ ಸಾಂವಿಧಾನಿಕ ಸುಧಾರಣೆಗಳ ಬಗ್ಗೆ ಏಕಾಭಿಪ್ರಾಯಕ್ಕೆ ಬರಲು ಹಾಗೂ ಚರ್ಚಿಸಲು ಲಾರ್ಡ್ ಇರ್ವಿನ್ ಈ ಸಮ್ಮೇಳನಗಳನ್ನು ಲಂಡನ್‌ನಲ್ಲಿ ಕರೆಯುತ್ತಾರೆ. ಅಕ್ಟೋಬರ್ **31, 1930ರಂದು ಲಾರ್ಡ್ ಇರ್ವಿನ್ ದೀಪಾವಳಿ ಘೋಷಣೆ ಮಾಡುತ್ತಾನೆ**. ಇದರ ಉದ್ದೇಶ ಭಾರತೀಯರಿಗೆ ಡೊಮಿನಿಯನ್ ಸ್ಥಾನಮಾನ ನೀಡುವುದು.

1ನೇ ದುಂಡುಮೇಜಿನ ಸಮ್ಮೇಳನ-ಅಧ್ಯಕ್ಷರು-ಮ್ಯಾಕ್ ಡೊನಾಲ್ಡ್

- ಈ ಸಮ್ಮೇಳನವು ನವೆಂಬರ್ 12, 1930 – ಜನವರಿ 19, 1931ರವರೆಗೆ ನಡೆಯಿತು. ಐ.ಎನ್.ಸಿ ಈ ಸಮ್ಮೇಳನ ಬಹಿಷ್ಕರಿಸಿದರೆ ಮುಸ್ಲೀಂ ಲೀಗ್, ಹಿಂದೂ ಮಹಾಸಭಾ, ಇಂಡಿಯನ್ ಲಿಬರಲ್ ಫೆಡರೇಷನ್ ಮುಂತಾದ ರಾಜಕೀಯ ಪಕ್ಷಗಳು ಪರಿಶಿಷ್ಟ ವರ್ಗ, ಕ್ರೈಸ್ತರು ಮತ್ತು ಆಂಗ್ಲೋ ಇಂಡಿಯನ್ಸ್ ಮುಂತಾದ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದವು. ಐಎನ್‌ಸಿ ಮುಖಂಡರು ಈ ಅವಧಿಯಲ್ಲಿ ಸೆರೆಮನೆಯಲ್ಲಿದ್ದರಿಂದ ಕಾಂಗ್ರೆಸ್ ನಾಯಕರು ಭಾಗವಹಿಸಲಿಲ್ಲ. ಸುಮಾರು 89 ಪ್ರತಿನಿಧಿಗಳು [57 ಬ್ರಿಟಿಷ್ ಭಾರತ 16 ದೇಶೀಯ ಸಂಸ್ಥಾನ ಹಾಗೂ 16 ಬ್ರಿಟನ್ ರಾಜಕೀಯ ಪ್ರತಿನಿಧಿಗಳು] ಭಾಗವಹಿಸಿದ್ದರು.

ಮೊದಲ ಸಮ್ಮೇಳನದಲ್ಲಿ ಭಾಗವಹಿಸಿದ ನಾಯಕರು.

- **ಮುಸ್ಲಿಂ ಲೀಗ್ ಪರವಾಗಿ:** ಮಹ್ಮದ್ ಆಲಿ, ಮಹ್ಮದ್ ಶಫಿ, ಮಹಮದ್ದಾಲಿ ಜಿನ್ನಾ, ಆಗಾಖಾನ್, ಫಜಾಲುಲ್‌ಹಕ್
- **ಹಿಂದೂ ಮಹಾಸಭಾ ಪರವಾಗಿ:** ಮೂಂಜೆ ಮತ್ತು ಜಯಕರ್
- **ಭಾರತ ಪ್ರಜಾಸತಾತ್ಮಕ ಸಂಘದ ಪರವಾಗಿ** ತೇ.ಬ.ಸಪ್ರು, ಸಿ.ವೈ. ಚಿಂತಾಮಣಿ, ಎಂ.ಆರ್. ಜಯಕರ್, ಶ್ರೀನಿವಾಸಶಾಸ್ತ್ರಿ
- **ಹಿಂದುಳಿದ ವರ್ಗಗಳಿಂದ:** ಬಿ.ಆರ್. ಅಂಬೇಡ್ಕರ್ ಮತ್ತು ಮಿರ್ಜಾ ಇಸ್ಮಾಯಿಲ್ ಭಾಗವಹಿಸಿದ್ದರು.

ಸಮ್ಮೇಳನದ 03 ಮುಖ್ಯ ಅಂಶಗಳು

1. ಭಾರತದ ಒಂದು ಒಕ್ಕೂಟ ರಾಜ್ಯವಾಗಿರಬೇಕು.
2. ಕೇಂದ್ರದಲ್ಲಿ ಸಂಯುಕ್ತ ಮಾದರಿ ಸರ್ಕಾರ ರಚಿಸಿ ಶಾಸಕಾಂಗ ಹೊಣೆಯಾಗಿರುವುದು.
3. ಪ್ರಾಂತ್ಯಗಳಿಗೆ ಸ್ವಾಯುತ್ತತೆ ನೀಡಬೇಕು.

- **ಸಮಸ್ಯೆ:** ಕೋಮು ಸಮಸ್ಯೆವುಂಟಾಗಿ ಮಹ್ಮದ್ದಾಲಿ ಜಿನ್ನಾ ಪ್ರತ್ಯೇಕ ಮತ ಕ್ಷೇತ್ರಗಳನ್ನು, ಅಂಬೇಡ್ಕರ್ ಕೂಡ ಪ್ರತ್ಯೇಕ ಮತ ಕ್ಷೇತ್ರಗಳನ್ನು ಹರಿಜನರಿಗೆ ಕೇಳಿದರು.

ನಿರ್ಣಯಗಳು

- ಪ್ರಬಲ ಕೇಂದ್ರ ಸರ್ಕಾರವಿರುವ ಮತ್ತು ದುರ್ಬಲ ರಾಜ್ಯ ಸರ್ಕಾರವಿರುವ ಒಕ್ಕೂಟ ಸರ್ಕಾರಕ್ಕೆ ಅಂಗೀಕಾರ ದೊರೆಯಿತು.

ಗಾಂಧಿ-ಇರ್ವಿನ್ ಒಪ್ಪಂದ – ಮಾರ್ಚ್ 5, 1931
(Gandhi - Irwin Pact)

- ಸಂವಿಧಾನದ ಬಿಕ್ಕಟ್ಟು ಬಗೆಹರಿಸಲು & ಕಾಂಗ್ರೆಸ್ ಪಕ್ಷದೊಂದಿಗೆ ಒಳ್ಳೆಯ ಸಂಬಂಧ ಹೊಂದುವ ಅಭಿಪ್ರಾಯಕ್ಕೆ ಸರ್ಕಾರ ಬಂದಿತು. ಇದರಿಂದಾಗಿ ತೇಜ್ ಬಹದ್ದೂರ್ ಸಪ್ರು ಮತ್ತು ಎಂ.ಆರ್. ಜಯಕರ್ ಮಧ್ಯಸ್ಥಿಕೆಯ ಫಲವಾಗಿ ಮಾರ್ಚ್ 5, 1931ರಂದು ಗಾಂಧಿ–ಇರ್ವಿನ್ ನಡುವೆ ಒಪ್ಪಂದವಾಯಿತು. ಇದರ ಪ್ರಕಾರ ಸರ್ಕಾರ ಕೆಳಗಿನ ಅಂಶಗಳನ್ನು ಒಪ್ಪಿಕೊಂಡಿತು.

1. ಭಾರತೀಯ ರಾಜಕೀಯ ಮುಖಂಡರ ಮೇಲಿದ್ದ ಮೊಕದ್ದಮೆಗಳ ಹಿಂತೆಗೆತ.
2. ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ
3. ಉಪ್ಪನ್ನು ತಯಾರಿಸಲು ಸ್ವಾತಂತ್ರ್ಯ
4. ಮದ್ಯ, ಅಫೀಮು ಮತ್ತು ವಿದೇಶ ವಸ್ತುಗಳ ಪಿಕೆಟಿಂಗ್ ನಡೆಸಲು ಅವಕಾಶ.
5. ಕಾನೂನು ಭಂಗ ಚಳುವಳಿ ವೇಳೆ ಮುಟ್ಟುಗೋಲು ಹಾಕಲಾಗಿದ್ದ ಎಲ್ಲಾ ಆಸ್ತಿಗಳ ಹಿಂದಿರುಗಿಸುವಿಕೆ.
6. ಭೂಕಂದಾಯಕ್ಕೆ ಮುಟ್ಟುಗೋಲು ಹಾಕಿದ್ದ ಆಸ್ತಿಗಳ ಹಿಂದಿರುಗಿಸುವಿಕೆ ಮುಂತಾದವು.

ಗಾಂಧೀಜಿ ಒಪ್ಪಿಕೊಂಡ ಅಂಶಗಳು (ಪರಿಣಾಮಗಳು)

1. ಕಾಂಗ್ರೆಸ್ ಪರವಾಗಿ ಗಾಂಧೀಜಿ ಕಾನೂನು ಭಂಗ ಚಳುವಳಿಯನ್ನು ಹಿಂತೆಗೆದುಕೊಂಡರು.
2. 2ನೇ ದುಂಡುಮೇಜಿನ ಸಭೆಯಲ್ಲಿ ಪಾಲ್ಗೊಳ್ಳಲು ಒಪ್ಪಿಕೊಂಡರು.
3. ಕಾಂಗ್ರೆಸ್ ಹಮ್ಮಿಕೊಂಡಿದ್ದ ಬಹಿಷ್ಕಾರ ಚಳುವಳಿ ಹಿಂತೆಗೆಯಿತು.
4. ಐಎನ್‌ಸಿ ಸರ್ಕಾರಕ್ಕೆ ಸರಿಸಮಾನ ಸಂಸ್ಥೆ ಎಂದು ಘೋಷಣೆ.
5. ಯುವಕರು ಮತ್ತು ವಿದ್ಯಾರ್ಥಿಗಳನ್ನು ಹೊರತುಪಡಿಸಿ ವರ್ತಕರು, ಹಳ್ಳಿ ಜನರು, ಉತ್ಸಾಹ ಕಳೆದುಕೊಂಡಿದ್ದರಿಂದ ಒಪ್ಪಂದ ಅನಿವಾರ್ಯವಾಗಿತ್ತು.

ಪ್ರತಿಕ್ರಿಯೆಗಳು

- ಜವಾಹರಲಾಲ್ ನೆಹರು ಮತ್ತು ಸುಭಾಷ್ ಚಂದ್ರಬೋಸ್‌ರವರು ಗಾಂಧೀಜಿ ಭಾರತವನ್ನು ಮಾರಾಟ ಮಾಡಿದರು ಎಂದರು.
- ಜಮ್ನಾದಾಸ್ ಮೆಹ್ತಾರವರು "ಲಾಹೋರ್ ನಿರ್ಣಯದ ಧ್ವನಿಯನ್ನು ಕುಗ್ಗಿಸಿದೆ" ಎಂದರು.
- ಕೆ.ಎಂ. ಮನ್ಷಿಯವರು "ಭಾರತ ಸಂವಿಧಾನ ಇತಿಹಾಸದಲ್ಲಿ ಒಂದು ಮೈಲಿಗಲ್ಲು" ಎಂದರು.
- **ಮಾರ್ಚ್ 23, 1931ರಲ್ಲಿ ಭಗತ್‌ಸಿಂಗ್, ರಾಜಗುರು, ಸುಖದೇವ್**‌ರನ್ನು ಗಲ್ಲಿಗೇರಿಸಿ ದೇಹವನ್ನು ಶತದ್ರೂ ನದಿ ತೀರದಲ್ಲಿ ದಹನ ಮಾಡಲಾಯಿತು.
- ಜವಾಹರಲಾಲ್ ನೆಹರೂರವರು **ಭಗತ್‌ಸಿಂಗರ ಹೆಣ ನಮಗೂ ಬ್ರಿಟನ್‌ಗೂ ನಡುವೆ ನಿಲ್ಲುತ್ತದೆ** ಎಂದರು.
- ಕೆಂಪುಷರ್ಟಿನ ನವಜವಾನ್ ಸದಸ್ಯರು – "ಗಾಂಧಿ ಸಂದಾನ ಭಗತ್‌ಸಿಂಗ್‌ನನ್ನು ಗಲ್ಲಿಗೇರಿಸಿತು. ಗಾಂಧಿ ತತ್ವಕ್ಕೆ ಧಿಕ್ಕಾರ. ಗಾಂಧಿ ಹಿಂತಿರುಗಿ ಎಂದರು."

2ನೇ ದುಂಡುಮೇಜಿನ ಸಭೆ-1931

- ಮೊದಲ ಸಭೆಯಲ್ಲಿ ಕೇವಲ **ಅಲ್ಪಸಂಖ್ಯಾತರು** ಭಾಗವಹಿಸಿದ್ದರು. ಆದರೆ ಇಲ್ಲಿ ಐ.ಎನ್.ಸಿ ಭಾಗವಹಿಸಬೇಕೆಂದು ಗಾಂಧಿ-ಇರ್ವಿನ್ ಒಪ್ಪಂದವಾಯಿತು. ಅದರಂತೆ ಈ ಸಭೆಯು ಸೆಪ್ಟೆಂಬರ್ 07 1931-ಡಿಸೆಂಬರ್ 1931ರವರೆಗೆ ನಡೆಯಿತು. ಅಧ್ಯಕ್ಷರು ಮ್ಯಾಕ್ ಡೊನಾಲ್ಡ್.

2ನೇ ಸಮ್ಮೇಳನದಲ್ಲಿ ಭಾಗವಹಿಸಿದ ನಾಯಕರು

- ಐಎನ್‌ಸಿ ಪ್ರತಿನಿಧಿ – ಗಾಂಧೀಜಿ
- ಮುಸ್ಲಿಂಪರ – ಮಹ್ಮದ್ ಇಕ್ಬಾಲ್
- ಕ್ರಿಶ್ಚಿಯನ್ ಪರ – ಎಸ್.ಕೆ. ದತ್ತ
- ಹಿಂದೂಗಳ ಪರ – ಮದನ್ ಮೋಹನ್ ಮಾಳವೀಯ, ಸರೋಜಿನಿ ನಾಯ್ಡು, ಅಂಬೇಡ್ಕರ್
- ಕಾರ್ಮಿಕ ವರ್ಗ – ವಿ.ವಿ. ಗಿರಿ
- ಕೈಗಾರಿಕೋದ್ಯಮಿ – ಜಿ.ಡಿ. ಬಿರ್ಲಾ ಭಾಗವಹಿಸಿದ್ದರು.
- ಈ ಸಭೆಯಲ್ಲಿ ಗಾಂಧೀಜಿ ಕಾಂಗ್ರೆಸ್ ಕೋಮು ಸಂಘಟನೆಯಾಗಿರದೆ ಎಲ್ಲಾ ವರ್ಗ ಮತ್ತು ಎಲ್ಲಾ ಅಲ್ಪಸಂಖ್ಯಾರತರನ್ನು ಪ್ರತಿನಿಧಿಸುವ ರಾಷ್ಟ್ರೀಯ ಸಂಘಟನೆ ಎಂದರು.
- ನಿಮ್ನ ವರ್ಗಗಳಿಗೆ ಪ್ರತ್ಯೇಕ ಮತ ಕ್ಷೇತ್ರಗಳು ಬೇಕು ಎಂದು ಅಂಬೇಡ್ಕರ್ ಮಹ್ಮದ್ದಾಲಿ ಜಿನ್ನಾರವರು 14 ಅಂಶಗಳಿಗೆ ಕಟುಬಿದ್ದರು. ಸಿಖ್ ಸಮುದಾಯ ಬಿಟ್ಟು ಉಳಿದೆಲ್ಲ ಅಲ್ಪಸಂಖ್ಯಾತ ವರ್ಗಗಳು ಇವರಿಗೆ ಬೆಂಬಲ ನೀಡಿದ್ದವು. ಇದನ್ನು ವಿರೋಧಿಸಿದ ಗಾಂಧೀಜಿ ಈ ಸಭೆಯಲ್ಲಿ ಯಾವುದೇ ನಿರ್ಣಯ ಕೈಗೊಳ್ಳಲಾಗದೆ ಬರಿಗೈಯಲ್ಲಿ ಭಾರತಕ್ಕೆ ಹಿಂತಿರುಗಿದರು.
- ಬ್ರಿಟಿಷ್ ಪ್ರಧಾನಿ ಮ್ಯಾಕ್ ಡೊನಾಲ್ಡೊ ಇದರಲ್ಲಿ **ಕಮ್ಯುನಿಯಲ್ ಘೋಷಣೆ** ಮಾಡಿದನು. ಅಂದರೆ ಸಿಖ್, ಮುಸ್ಲಿಂ, ಪಾರ್ಸಿ, ಕ್ರಿಶ್ಚಿಯನ್ ಮತ್ತು ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾದಂತಹ ಮತಗಟ್ಟೆಗಳನ್ನು ನೀಡುವುದು.
- ಹಿಂದುಳಿದ ವರ್ಗದವರಿಗೂ ಪ್ರತ್ಯೇಕ ಮತಗಟ್ಟೆ ವಿಚಾರಕ್ಕಾಗಿ ಗಾಂಧೀಜಿ ನಿರಾಶರಾಗಿ ಭಾರತಕ್ಕೆ ಹಿಂದಿರುಗುತ್ತಾರೆ. ಕಾರಣ ಹಿಂದುಳಿದವರು ಹಿಂದೂ ಧರ್ಮದ ಒಂದು ಭಾಗ ಎಂದು ಗಾಂಧೀಜಿ ವಾದಿಸುವರು. ಇದರಿಂದ ಬ್ರಿಟಿಷರು ಗಾಂಧೀಜಿಯನ್ನು ಬಂಧಿಸಿ ಪೂನಾದ ಯರವಾಡ ಜೈಲಿಗೆ ಕಳುಹಿಸುತ್ತಾರೆ. ಅಲ್ಲಿಯೇ ಗಾಂಧೀಜಿಯವರು ಅಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಾರೆ. ಅನಾರೋಗ್ಯದ ಕಾರಣ 02 ವರ್ಷ ನಂತರ ಗಾಂಧೀಜಿ ಬಿಡುಗಡೆಯಾಗುತ್ತಾರೆ.
- ಗಾಂಧೀಜಿಯವರು ಕಾಂಗ್ರೆಸ್ ಅಸ್ಪೃಶ್ಯರನ್ನು ಪ್ರತಿನಿಧಿಸುವ ಸಂಸ್ಥೆ ಹಾಗೂ ಸ್ವತಃ ತಾವೇ ಅಸ್ಪೃಶ್ಯರ ಪ್ರತಿನಿಧಿಯೆಂದು ತಿಳಿಸಿದರು.
- ಗಾಂಧೀಜಿಯವರು ತರ್ಕಬದ್ಧವಾದ ಮತ್ತು ಪೂರ್ಣವಾದದ ಮೂಲಕ ಕೇಳಿದ ಪೂರ್ಣ ಸ್ವರಾಜ್ಯದ ಕೂಗು ಎಂ.ವಿ. ಪೈಲಿ ಹೇಳುವಂತೆ "ಸಂತೆಯ ಗದ್ದಲದಲ್ಲಿ ಕೂಗಿದಂತಾಗಿತ್ತು" ಎಂದಿದ್ದಾರೆ.

2ನೆ ದುಂಡುಮೇಜಿನ ಸಮ್ಮೇಳನದ ಪರಿಣಾಮಗಳು

- ಸಂಯುಕ್ತ ಶಾಸಕಾಂಗ ಮತ್ತು ನ್ಯಾಯಾಂಗದ ವಿನ್ಯಾಸ ಪೂರ್ಣಗೊಳಿಸುವುದು.
- ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಹಣಕಾಸಿನ ಮುಂಗಡ ಹಂಚಿಕೆ.
- ಸಂಯುಕ್ತಕ್ಕೆ ರಾಜ್ಯಗಳನ್ನು ಸೇರಿಸಿಕೊಳ್ಳುವ ಇಚ್ಛೆ.

ಮ್ಯಾಕ್ ಡೊನಾಲ್ಡ್‌ನ ಮತೀಯ ತೀರ್ಪು – ಆಗಸ್ಟ್ 16, 1932

1. ಮುಸ್ಲಿಂ, ಸಿಖ್, ಪಾರ್ಸಿ, ಆಂಗ್ಲೋ ಇಂಡಿಯನ್‌ರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ನಿಡಲಾಯಿತು.
2. ನಿಮ್ನ ವರ್ಗದವರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಪ್ರತ್ಯೇಕ ಮತಕ್ಷೇತ್ರ ನೀಡಿಕೆ.
3. ಉಳಿದ ವರ್ಗದವರಿಗೆ ಸಾಮಾನ್ಯ ಮತ ಕ್ಷೇತ್ರಗಳಲ್ಲಿ ಮತ ಚಲಾಯಿಸಬಹುದಿತ್ತು.
4. ಪ್ರಾಂತೀಯ ಶಾಸನ ಸಭೆಗಳಲ್ಲಿ ಮುಸ್ಲಿಂರಿಗೆ ಹೆಚ್ಚಿನ ಸವಲತ್ತು ನೀಡಿಕೆ.
5. ಮುಸ್ಲಿಂರು ಅಲ್ಪಸಂಖ್ಯಾತವಾಗಿರುವ ಕಡೆ ಹೆಚ್ಚಿನ ಸವಲತ್ತು ನೀಡಿಕೆ. ಆದರೆ ಹಿಂದೂಗಳು ಅಲ್ಪಸಂಖ್ಯಾತವಾಗಿರುವ ಕಡೆ ಕಡಿಮೆ ಸವಲತ್ತು ನೀಡಲಾಯಿತು.
6. ಕಾರ್ಮಿಕ ವರ್ಗ, ಜಮೀನ್ದಾರರು, ವಾಣಿಜ್ಯ ಸಂಸ್ಥೆಗಳು ಮತ್ತು ಮೀಸಲು ವಿವಿಧ ಕ್ಷೇತ್ರಗಳಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ನೀಡಲಾಯಿತು.
7. ಮುಸ್ಲಿಮರಿಗೆ ವಾಯುವ್ಯ ಗಡಿ ಮತ್ತು ಸಿಂದ್ ಪ್ರಾಂತ್ಯ ಪ್ರತ್ಯೇಕವಾಗಿ ನೀಡಿಕೆ.

- ಗಾಂಧೀಜಿಯವರು ಈ ತೀರ್ಪಿನ ವಿರುದ್ಧ ಸೆಪ್ಟೆಂಬರ್ 20, 1930ರಂದು ಅಮರಣಾಂತ ಉಪವಾಸ ಕೈಗೊಂಡರು.

ಪೂನಾ ಒಪ್ಪಂದ ಸೆಪ್ಟೆಂಬರ್ 24, 1932

- ಅಮರಣಾಂತ ಉಪವಾಸ ಕೈಗೊಂಡ ಗಾಂಧೀಜಿಯ ಪ್ರಾಣ ಉಳಿಸಲು ನಿಮ್ನ ವರ್ಗದ ನಾಯಕ ಎಂ.ಸಿ. ರಾಜಾ ಪ್ರತ್ಯೇಕ ನಿರ್ಣಯಗಳನ್ನು ಖಂಡಿಸಿ ಸರ್ವರೂ ಒಟ್ಟುಗೂಡಬೇಕೆಂದರು. ಎಲ್ಲಾ ದೇವಾಲಯಗಳಲ್ಲಿ ಅಸ್ಪೃಶ್ಯರ ಪ್ರವೇಶ ಉಂಟೆಂದು ಸೆಪ್ಟೆಂಬರ್ 19ರಂದು ಘೋಷಿಸಲಾಯಿತು.
- ವಿಶೇಷ ಪ್ರಾತಿನಿಧ್ಯ ಎಷ್ಟು ವರ್ಷವಿರಬೇಕೆಂದು ಗಾಂಧೀಜಿ 05 ವರ್ಷ ಸಾಕು ಎಂದರೆ, ಅಂಬೇಡ್ಕರ್ 10 ವರ್ಷ ಎಂದರು. ಈ ಭಿನ್ನಾಭಿಪ್ರಾಯ ಉಂಟಾಗಿ ಕೊನೆಗೆ ರಾಜಗೋಪಾಲಚಾರಿ

ಮಧ್ಯಸ್ಥಿಕೆಯಿಂದ ಗಾಂಧೀಜಿ 10 ವರ್ಷಗಳಿಗೆ ಒಪ್ಪಿಕೊಂಡರು.

- ಮದನ್‌ಮೋಹನ್ ಮಾಳವೀಯ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ **24, 1932**ರಂದು ಯರವಾಡ ಒಪ್ಪಂದ ಅನುಮೋದಿಸಲಾಯಿತು. ಇದನ್ನು **ಪೂನಾ ಒಪ್ಪಂದ** ಎನ್ನುವರು.

ಪೂನಾ ಒಪ್ಪಂದದ ಕರಾರುಗಳು

1. ಪ್ರತ್ಯೇಕ ಮತ ಕ್ಷೇತ್ರಗಳ ಬದಲಿಗೆ ದಲಿತರಿಗೆ 18 ಸ್ಥಾನಗಳನ್ನು ನೀಡಲಾಯಿತು.
2. ಕೇಂದ್ರ ಶಾಸಕಾಂಗದಲ್ಲಿ ಶೇ 18ರಷ್ಟು ಸ್ಥಾನ ನಿಮ್ನ ವರ್ಗದವರಿಗೆ ಮೀಸಲು.
3. ನಿಮ್ನ ವರ್ಗದವರಿಗೆ ಸ್ಥಳೀಯ ಸಂಸ್ಥೆ ಮತ್ತು ಸಾರ್ವಜನಿಕ ಸೇವೆಯಲ್ಲಿ ಪ್ರಾತಿನಿಧ್ಯ.
4. ನಿಮ್ನ ವರ್ಗದವರಿಗೆ ವಿದ್ಯಾಭ್ಯಾಸ, ಆರ್ಥಿಕ ನೆರವು ನೀಡಲು ಒಪ್ಪಿಕೊಳ್ಳಲಾಯಿತು.

ಗಾಂಧೀಜಿಯವರ ಹರಿಜನ ಚಳುವಳಿ

- ಗಾಂಧೀಜಿ ಹರಿಜನ ಚಳುವಳಿ ಕಡೆ ಗಮನ ಹರಿಸಿ ಕಾನೂನುಭಂಗ ಚಳುವಳಿಯನ್ನು ಹಿಂಪಡೆದರು. ಪೂನಾ ಒಪ್ಪಂದದ ನಂತರ ಗಾಂಧೀಜಿಯವರು **ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಘ** ಹಾಗೂ **ಹರಿಜನ ವಾರಪತ್ರಿಕೆ** ಆರಂಭಿಸಿದರು.
- ಕುಡಿಯುವ ನೀರಿನ ಬಾವಿಗಳು, ರಸ್ತೆ, ದೇವಾಲಯಗಳು ಇತ್ಯಾದಿ ಬಳಕೆಗೆ ಹರಿಜನರಿಗೆ ಅವಕಾಶ ನೀಡಲಾಯಿತು. ಏಪ್ರಿಲ್ 1934ರಲ್ಲಿ ಈ ಚಳುವಳಿಯನ್ನು ಹಿಂತೆಗೆದುಕೊಂಡರು.

3ನೇ ದುಂಡುಮೇಜಿನ ಸಮ್ಮೇಳನ

- ಇದು ನವೆಂಬರ್ 17, 1932ರಿಂದ ಡಿಸೆಂಬರ್ 1932ರ ವರೆಗೆ ಲಂಡನ್‌ನಲ್ಲಿ ಚರ್ಚಿಲ್ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರದ ಹೌದಪ್ಪಗಳ ಸಭೆ ಎಂದು ಕರೆಯಲ್ಪಡುವ ಈ ಸಮ್ಮೇಳನದಲ್ಲಿ 46 ಪ್ರತಿನಿಧಿಗಳು ಭಾಗವಹಿಸಿದ್ದರು. ಆದರೆ ಐಎನ್‌ಸಿ ಮತ್ತು ಲೇಬರ್ ಪಕ್ಷಗಳು ಭಾಗವಹಿಸಲಿಲ್ಲ.
- **ಗುರಿ:** ಭಾರತದ ಸಂವಿಧಾನಾತ್ಮಕ ಸುಧಾರಣೆ.

ಚರ್ಚಿತ ವಿಷಯಗಳು

- ಮತೀಯ ತೀರ್ಪು ಮತ್ತು ಅದರ ಪರಿಣಾಮಗಳು ಹಾಗೂ 2ನೇ ದುಂಡುಮೇಜಿನ ಪರಿಷತ್‌ನಲ್ಲಿ ರಚಿಸಲಾಗಿದ್ದ ಸಮಿತಿಗಳು ಮತ್ತು ಉಪ ಸಮಿತಿಗಳ ಕಾರ್ಯವೈಖರಿಗಳು.
- ಒಟ್ಟಿನಲ್ಲಿ ಚರ್ಚಿಲ್ ಭಾರತದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಯಾವುದೇ ಕಾಯ್ದೆ ಹೊರಡಿಸಲಿಲ್ಲ. ಭವಿಷ್ಯ ಭಾರತಕ್ಕೆ ಸಂವಿಧಾನ ರಚಿಸಲು ಬ್ರಿಟನ್ ಸರ್ಕಾರ ಸಮ್ಮೇಳನದಲ್ಲಿ ಶ್ವೇತಪತ್ರ ಹೊರಡಿಸಿತು. ಇದರ ಪ್ರಕಾರ 1935ರ ಭಾರತ ಸರ್ಕಾರ ಕಾಯ್ದೆ ಜಾರಿಗೆ ಬಂದಿತು.

1933ರ ಶ್ವೇತಪತ್ರ

- 3ನೇ ದುಂಡುಮೇಜಿನ ಸಮ್ಮೇಳನದ ನಂತರ ಇಂಗ್ಲೆಂಡಿನಲ್ಲಿ ಹೊರಡಿಸಲಾದ ಇದು ಭಾರತ ಸಂವಿಧಾನದ ಕಾರ್ಯ ವೈಖರಿಯನ್ನು ಒಳಗೊಂಡಿದ್ದು ಕೇಂದ್ರದಲ್ಲಿ ದ್ವಿಪ್ರಭುತ್ವ ಮತ್ತು ಪ್ರಾಂತ್ಯಗಳಲ್ಲಿ ಜವಾಬ್ದಾರಿಯುತ ಸರ್ಕಾರವನ್ನು ಪ್ರತಿಪಾದಿಸಿತು.
- ಬ್ರಿಟನ್‌ನ ಜಂಟಿ ಸದನಗಳ ಸಂಯುಕ್ತ ಆಯ್ದ ಸಮಿತಿ ಏಪ್ರಿಲ್ 1933ರಲ್ಲಿ ರಚಿಸಲಾಯಿತು. ಇದೇ ಮುಂದೆ ಆಗಸ್ಟ್ 4, 1935ರ ಭಾರತ ಸರ್ಕಾರ ಕಾಯ್ದೆಯಾಯಿತು.

1937ರ ಚುನಾವಣೆಗಳು ಹಾಗೂ ಕಾಂಗ್ರೆಸ್ ಮಂತ್ರಿಮಂಡಲಗಳು

- 1935ರ ಕಾಯ್ದೆ ಪ್ರಾಂತ್ಯಗಳಲ್ಲಿ ದ್ವಿ ಪ್ರಭುತ್ವವನ್ನು ರದ್ದು ಮಾಡಿತು ಹಾಗೂ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ ಜವಾಬ್ದಾರಿ ಸರ್ಕಾರ ರಚನೆಗೆ ಅವಕಾಶ ಮಾಡಿಕೊಟ್ಟಿತು. ಈ ಕಾಯ್ದೆಯು ಪ್ರಾಂತೀಯ ಸ್ವಾಯತ್ತತೆಗೆ ಸಂಬಂಧಿಸಿದ ಅಂಶಗಳನ್ನು 1937ರಲ್ಲಿ ಆಚರಣೆಗೆ ತರಲಾಯಿತು.
- ಪ್ರಾಂತೀಯ ವಿಧಾನಸಭೆಗಳಿಗೆ **ಫೆಬ್ರವರಿ 1937ರಲ್ಲಿ ಚುನಾವಣೆ** ನಡೆಯಿತು. ಜವಾಹರಲಾಲ್ ನೆಹರು ಚುನಾವಣಾ ಪ್ರವಾಸದಲ್ಲಿ ಜನತೆಗೆ ತಕ್ಷಣದ ವಿಷಯವೆಂದರೆ ರಾಜಕೀಯವಾಗಿ ಸಂಪೂರ್ಣ ಸ್ವಾತಂತ್ರ್ಯ ಪಡೆಯುವುದು ಎಂದು ತಿಳಿಸಿದರು.
- ಅನಕ್ಷರಸ್ಥ ಜನರಿಗೆಲ್ಲ ಕಾಂಗ್ರೆಸ್‌ನ ಘೋಷಣೆ ಗಾಂಧೀಜಿಗೂ ಹಳದಿ ಬಣ್ಣಕ್ಕೂ ಮತ ನೀಡಿ ಎಂಬುದಾಗಿತ್ತು.
- ಚುನಾವಣೆಯಲ್ಲಿ ಕಾಂಗ್ರೆಸ್ 1161 ಕ್ಷೇತ್ರಗಳ ಪೈಕಿ 714 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಕಾಂಗ್ರೆಸ್ 07 ಪ್ರಾಂತ್ಯಗಳಲ್ಲಿ ಅಧಿಕಾರ ಪಡೆಯಿತು.
- ಮದ್ರಾಸ್‌ನ ರಾಜಗೋಪಾಲಚಾರಿ, ಬಾಂಬೆಯ ಬಿ.ಜಿ. ಖೇರ್, ಮಧ್ಯ ಪ್ರಾಂತ್ಯದಲ್ಲಿ ಬಿ.ಎನ್. ಖಾರೆ ಹಾಗೂ ಸಂಯುಕ್ತ ಪ್ರಾಂತ್ಯಗಳಲ್ಲಿ ಗೋವಿಂದವಲ್ಲಭಪಂತ್, ಪ್ರಾಂತೀಯ ಪ್ರಧಾನಿಗಳಾದರು.
- ಕಾಂಗ್ರೆಸ್ ಶಾಸಕರು ಮತ್ತು ಮಂತ್ರಿಮಂಡಲದ ಮೇಲೆ ಹತೋಟಿ ಹೊಂದಲು ಪಟೇಲ್, ಪ್ರಸಾದ್, ಅಜಾದ್ ಒಳಗೊಂಡ ವರಿಷ್ಠ ಮಂಡಳಿ ರಚನೆಯಾಯಿತು. ಕಾಂಗ್ರೆಸ್ ಮಂತ್ರಿಮಂಡಲಗಳು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಮದ್ರಾಸ್ ಸರ್ಕಾರವು ಪಾನ ನಿರೋಧ ಜಾರಿಗೆ ತಂದಿತು.
- ಆದರೆ 1939ರಲ್ಲಿ 2ನೇ ಮಹಾಯುದ್ಧ ಆರಂಭವಾಗಿ ಯಾವ ಭಾರತೀಯ ಪ್ರತಿನಿಧಿಯೊಡನೆ ಸಮಾಲೋಚಿಸಿದೆ ಭಾರತದ ಸರ್ಕಾರದ ಪರವಾಗಿ ವೈಸ್‌ರಾಯ್ **ಲಿನ್‌ಲಿತಿಗೋ** ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದನು.
- 2ನೇ ಮಹಾಯುದ್ಧದಲ್ಲಿ ಕಾಂಗ್ರೆಸ್ ಭಾಗವಹಿಸಬೇಕೇ? ಬೇಡವೇ? ಎಂಬ ಬಗ್ಗೆ ಚರ್ಚೆ ನಡೆದು ಕೊನೆಗೆ ಕಾಂಗ್ರೆಸ್ ಸರ್ಕಾರಗಳು ನವೆಂಬರ್ 1, 1939ರಂದು ರಾಜೀನಾಮೆ ನೀಡಿದವು.

- ಮಹ್ಮದ್ದಾಲಿ ಜಿನ್ನಾನು ಡಿಸೆಂಬರ್ 22, 1939ರ ದಿನವನ್ನು ಕಾಂಗ್ರೆಸ್ ಆಡಳಿತದಿಂದ ಮುಕ್ತಿಗೊಂಡ ದಿನವೆಂದು ಆಚರಿಸಲು ಮುಸ್ಲಿಂರಿಗೆ ಕರೆ ನೀಡಿದನು.
- ಗಾಂಧೀಜಿ ಅಕ್ಟೋಬರ್ **1940ರಲ್ಲಿ ವೈಯಕ್ತಿಕ ಸತ್ಯಾಗ್ರಹ** ಆರಂಭಿಸಿದರು.

ದ್ವಿರಾಷ್ಟ್ರ ಸಿದ್ಧಾಂತ ಮತ್ತು ಪಾಕಿಸ್ತಾನ ಚಳುವಳಿ

- ಇಸ್ಲಾಂ ಕವಿ ಹಾಗೂ ರಾಜಕೀಯ ಚಿಂತಕನಾದ **ಮಹ್ಮದ್ ಇಕ್ಬಾಲ್** ಮೂಲಕ ಸ್ಫೂರ್ತಿಗೊಂಡ ಮುಸ್ಲಿಂ ಲೀಗ್ 1930ರಲ್ಲಿ ಅಲಹಾಬಾದ್ ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಪ್ರತ್ಯೇಕ ಮುಸ್ಲಿಂ ರಾಜ್ಯಕ್ಕೆ ಕರೆ ನೀಡಿತು.
- ಭಾರತೀಯ ಮುಸ್ಲಿಂರಿಗೆ ಪ್ರತ್ಯೇಕ ತಾಯ್ನಾಡು ಬೇಕೆಂಬ ಪರಿಕಲ್ಪನೆ ಪಾಕಿಸ್ತಾನ್ ಎಂದು ಸ್ಪಷ್ಟ ರೂಪವನ್ನು ಕೇಂಬ್ರಿಡ್ಜ್ ವಿ.ವಿ. ವಿದ್ಯಾರ್ಥಿಯಾದ ರಹಮತ್ ಆಲಿ 1933ರಲ್ಲಿ ಸ್ಪಷ್ಟಪಡಿಸುತ್ತಾನೆ.
- ಮಹ್ಮದ್ದಾಲಿ ಜಿನ್ನಾ ಮಾರ್ಚ್ **1940ರ ಲಾಹೋರ್ ಅಧಿವೇಶನದಲ್ಲಿ ಪ್ರತ್ಯೇಕ ರಾಷ್ಟ್ರ ಸಿದ್ಧಾಂತವನ್ನು** ಸಾರುತ್ತಾನೆ. ಮುಸ್ಲಿಂ ಲೀಗ್ ಭಾರತದ ವಿಭಜನೆಗೆ ಒತ್ತಾಯಿಸುವ ನಿರ್ಣಯ ಕೈಗೊಂಡಿತು.
- ಪಾಕಿಸ್ತಾನ ನಿರ್ಣಯವು ಸಿಕಂದರ್ ಹಯತ್‌ಖಾನ್‌ನಿಂದ ಸಿದ್ಧಪಡಿಸಿ ಫಜಲ್‌ಹಕ್‌ನ ಮೂಲಕ ಅನುಮೋದಿಲಸಲ್ಪಟ್ಟಿತ್ತು. ಮುಂದೆ ಇದು **'ವಿಭಜಿಸಿ ಮತ್ತು ತೊಲಗಿ'** (Divide & Quit) ಚಳುವಳಿ ಮಟ್ಟಕ್ಕೇರಿತು.

ಸುಭಾಷ್‌ಚಂದ್ರ ಬೋಸ್

- ಇವರು **1897ರಲ್ಲಿ ಒರಿಸ್ಸಾದಲ್ಲಿ** ಜನಿಸಿದರು. ರಾಜ್‌ಬಹದ್ದೂರ್ **ಜಾನಕಿದಾಸ್ ಬೋಸ್** ಮತ್ತು **ಪ್ರತಿಭಾ ಬೋಸ್** ಇವರ ತಂದೆ ತಾಯಿಗಳು.
- ಖಿಲಾಫತ್ ಚಳುವಳಿ ಮತ್ತು ಅಸಹಕಾರ ಚಳುವಳಿ ನಂತರ ಸುಭಾಷ್‌ರು **ಚಿತ್ತರಂಜನ್‌ದಾಸ್ ಅವರನ್ನು ರಾಜಕೀಯ ಗುರುವಾಗಿ** ಸ್ವೀಕರಿಸುತ್ತಾರೆ. ಅಲ್ಲದೆ ಇವರು ಅರಬಿಂದೋ ಘೋಷ್ ಮತ್ತು ಸ್ವಾಮಿ ವಿವೇಕಾನಂದರಿಂದ ಪ್ರೇರೇಪಿತರಾದರು.
- ಗಾಂಧೀಜಿಯವರು ಸುಭಾಷ್‌ರನ್ನು **'ದೇಶಭಕ್ತರಲ್ಲೇ ರಾಜಕುಮಾರ'** ಎಂದು ಕರೆದು ಹಾಗೂ **'ನೇತಾಜಿ'** ಎಂಬ ಬಿರುದನ್ನು ಕೂಡ ನೀಡುತ್ತಾರೆ. ರವೀಂದ್ರನಾಥ ಠಾಕೂರ್ ಸುಭಾಷ್ ಚಂದ್ರ ಬೋಸ್‌ರನ್ನು **'ದೇಶನಾಯಕ'** ಎಂದು ಕರೆಯುತ್ತಾರೆ.
- 1942ರ ಕ್ವಿಟ್ ಇಂಡಿಯಾ ಚಳುವಳಿಯ ನಂತರ ಗಾಂಧೀಜಿಗೆ ಸುಭಾಷ್‌ಚಂದ್ರ ಬೋಸ್‌ರು **ರಾಷ್ಟ್ರಪಿತ** ಎಂಬ ಬಿರುದು ನೀಡುತ್ತಾರೆ.
- ಪೂರ್ಣ ಸ್ವಾತಂತ್ರ್ಯ ಎಂಬ ಘೋಷಣೆ ಸುಭಾಷ್ ಅವರದು. ಇದನ್ನು 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಘೋಷಿಸಲಾಯಿತು.

ಹರಿಪುರ ಕಾಂಗ್ರೆಸ್ ಅಧಿವೇಶನ ಫೆಬ್ರವರಿ 19, 1938

ಗುಜರಾತಿನ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಸುಭಾಷ್‌ಚಂದ್ರ ಬೋಸ್ ವಹಿಸಿದ್ದರು. ಅವರು ಅಧಿವೇಶನದಲ್ಲಿ ಸಾಮ್ರಾಜ್ಯಶಾಹಿ ಯುದ್ಧಕ್ಕೆ ಬೆಂಬಲವಿಲ್ಲವೆಂದು ಘೋಷಿಸಿದರು.

ತ್ರಿಪುರ ಕಾಂಗ್ರೆಸ್ ಅಧಿವೇಶನ 1939 (ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು)

- ಈ ಅಧಿವೇಶನದ ಅಧ್ಯಕ್ಷರಾಗಿ ಸುಭಾಷ್‌ಚಂದ್ರ ಬೋಸರು ಆಯ್ಕೆಯಾಗಲು ವಾಮಪಂಥೀಯರು ಬೆಂಬಲ ನೀಡಿದರು. ಆದರೆ ಸುಭಾಷ್‌ಚಂದ್ರಬೋಸ್ ಮತ್ತು ಗಾಂಧೀಜಿ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಈ ಅಧಿವೇಶನಕ್ಕೆ ಬೋಸ್‌ರು ರಾಜೀನಾಮೆ ನೀಡುತ್ತಾರೆ. ಗಾಂಧೀಜಿ ಪಟ್ಟಾಭಿ ಸೀತಾರಾಮಯ್ಯರನ್ನು ಬೆಂಬಲಿಸಿದರು. ಕೊನೆಗೆ ಚುನಾವಣೆ ನಡೆದು ಸುಭಾಷರು ಜಯಗಳಿಸಿ ಅಧ್ಯಕ್ಷರಾದರು. ಇದರಿಂದ ನೊಂದ ಗಾಂಧೀಜಿಯವರು **'ಈ ಸೋಲು ಪಟ್ಟಾಭಿಯವರಿಗಿಂತಲೂ ಹೆಚ್ಚಾಗಿ ನನ್ನದು'** ಎಂದರು.
- ಹೀಗೆ ಕಾಂಗ್ರೆಸ್‌ನಲ್ಲಿ ಉಂಟಾದ ಬಿಕ್ಕಟ್ಟು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ 15 ಸದಸ್ಯರಲ್ಲಿ 12 ಸದಸ್ಯರು ಸುಭಾಷ್‌ರನ್ನು ವಿರೋಧಿಸಿ ರಾಜೀನಾಮೆ ನೀಡಿದರು. ಆದರೆ ಜವಾಹರಲಾಲ್ ನೆಹರೂ, ಶರತ್‌ಬೋಸ್ ಮತ್ತು ಸುಭಾಷರು ಮಾತ್ರ ಹಾಗೇ ಉಳಿದರು.
- ಕೊನೆಗೆ ಸುಭಾಷ್‌ಚಂದ್ರಬೋಸ್ ಅಧ್ಯಕ್ಷ ಪದವಿಗೆ ಏಪ್ರಿಲ್ 29, 1939ರಲ್ಲಿ ರಾಜೀನಾಮೆ ನೀಡಿದರು. ನಂತರ ರಾಜೇಂದ್ರ ಪ್ರಸಾದ್‌ರನ್ನು ಅಧ್ಯಕ್ಷರಾಗಿ ನೇಮಿಸಲಾಯಿತು.
- ರಾಜೀನಾಮೆ ನೀಡಿದ ಸುಭಾಷ್‌ಚಂದ್ರ ಬೋಸ್‌ರು 1939ರಲ್ಲಿ **ಫಾರ್ವರ್ಡ್ ಬ್ಲಾಕ್ ಪಕ್ಷ**ವನ್ನು ಕಟ್ಟಿದರು.

ಫಾರ್ವರ್ಡ್ ಬ್ಲಾಕ್ ಸ್ಥಾಪನೆ

- ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಸುಭಾಷ್‌ಚಂದ್ರ ಬೋಸ್‌ರನ್ನು 03 ವರ್ಷಗಳವರೆಗೆ ಹೊರದೂಡಿ ಆಗಸ್ಟ್ 1939ರಲ್ಲಿ ಘೋಷಿಸಿತು. ಇವರು ಏಪ್ರಿಲ್ **1939ರಂದು ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪಿಸಿ ಇದರ ಮೊದಲ ಅಧಿವೇಶನ ಮುಂಬಯಿಯಲ್ಲಿ** ನಡೆಯಿತು.
- ಬ್ರಿಟಿಷ್ ಸರ್ಕಾರವು ಸುಭಾಷ್‌ಚಂದ್ರ ಬೋಸ್‌ರನ್ನು ಅಪಾಯಕಾರಿ ಕ್ರಾಂತಿಕಾರಿಯೆಂದು 1940 ಜುಲೈ 2ರಂದು ಭಾರತೀಯ ಭದ್ರತಾ ಕಾಯ್ದೆಯನ್ವಯ ಬಂಧಿಸಿತು. ಉಪವಾಸ ಆರಂಭಿಸಿದ ಸುಭಾಷ್‌ಚಂದ್ರಬೋಸರನ್ನು ಡಿಸೆಂಬರ್ 05ರಂದು ಬಿಡುಗಡೆ ಮಾಡಿ **ಕಲ್ಕತ್ತಾದ ಎಲ್ಗಿನ್ ಹೌಸ್‌ನಲ್ಲಿ ಗೃಹಬಂಧನದಲ್ಲಿಡಲಾಯಿತು.** ಎಲ್ಗಿನ್ ಹೌಸ್‌ನಿಂದ ಸಿಸಿರ್ ಜೊತೆ ಪೇಷಾವರ್‌ಗೆ ಪರಾರಿಯಾಗಿ, ಅಲ್ಲಿಂದ ಒರ್ಲಾಂಡೊ ಮಸೂಟ ಅವರ ಪಾಸ್‌ಪೋರ್ಟ್ ಬಳಸಿ ಜರ್ಮನಿಯ ಬರ್ಲಿನ್‌ಗೆ ಹೋಗುತ್ತಾರೆ.
- ಜರ್ಮನಿಯಲ್ಲಿ ಹಿಟ್ಲರ್‌ನನ್ನು ಭೇಟಿಯಾಗಿ ಅಲ್ಲಿಯ ರೇಡಿಯೋ

ಸ್ಟೇಷನ್‌ನಿಂದ **'ಮುಕ್ತಭಾರತ'** ಎಂದು ಘೋಷಿಸುವರು.

- ಸುಭಾಷ್‌ಚಂದ್ರ ಬೋಸ್‌ರು "ನೀವು ನನಗೆ ರಕ್ತಕೊಡಿ ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ." [give me blood, I will give freedom to you] ಎಂದು ಘೋಷವಾಕ್ಯ ಹೇಳುತ್ತಾರೆ.
- 1942ರಲ್ಲಿ ರಾಸ್ ಬಿಹಾರಿಬೋಸ್ ಜಪಾನಿನ ಟೋಕಿಯೋದಲ್ಲಿ **ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್** ಸ್ಥಾಪಿಸಿದರು. ಸುಭಾಷ್‌ಚಂದ್ರ ಬೋಸ್‌ರನ್ನು ಬರ್ಲಿನ್‌ನಿಂದ ಟೋಕಿಯೋಗೆ ಆಮಂತ್ರಿಸಿ ಅವರ ಪರವಾಗಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ಗೆ ರಾಜೀನಾಮೆ ನೀಡುತ್ತಾರೆ.
- ಭಾರತೀಯ ರಾಷ್ಟ್ರೀಯ ಸೇನೆಯನ್ನು ಮೊದಲು ಸಂಘಟಿಸಿದವನು **ಕ್ಯಾಪ್ಟನ್ ಮೋಹನ್ ಸಿಂಗ್**. ಇವನು ಬ್ರಿಟೀಷ್ ಸೈನ್ಯದಲ್ಲಿದ್ದ ಭಾರತೀಯ ಅಧಿಕಾರಿ.
- ಭಾರತೀಯ **ರಾಷ್ಟ್ರೀಯ ಸೈನ್ಯವನ್ನು / ಆಜಾದ್ ಹಿಂದ್ ಫೌಜ್‌ನ್ನು** ಸುಭಾಷ್‌ಚಂದ್ರಬೋಸ್‌ರು ಪುನರ್ ನಿರ್ಮಿಸಿದರು.
- 1944ರಲ್ಲಿ ಸುಭಾಷ್‌ಚಂದ್ರಬೋಸ್‌ರು **ಸಿಂಗಾಪುರದಲ್ಲಿ ಮುಕ್ತ ಭಾರತಕ್ಕಾಗಿ ಹಂಗಾಮಿ ಸರ್ಕಾರವನ್ನು** ರಚಿಸುತ್ತಾರೆ.
- ಭಾರತೀಯ ರಾಷ್ಟ್ರೀಯ ಸೈನ್ಯವು ಮೊದಲಿಗೆ ನಾಗಲ್ಯಾಂಡಿನ ಕೊಹಿಮಾಕ್ಕೆ ತಲುಪಿ ಅಲ್ಲಿಂದ ಮಣಿಪುರದ ಇಂಫಾಲ್‌ನಲ್ಲಿ ಆಕ್ರಮಿಸಿತು.
- 1945ರಲ್ಲಿ ಭಾರತೀಯ ರಾಷ್ಟ್ರೀಯ ಸೈನಿಕರನ್ನು ಬ್ರಿಟಿಷ್ ಸೈನ್ಯವು ...ನು ಕೆಂಪುಕೋಟೆಗೆ ಕರೆ ತರುತ್ತಾರೆ. ಭಾರತೀಯ ಸೈನ್ಯದಲ್ಲಿದ್ದ ...ವರು ಅಧಿಕಾರಿಗಳೆಂದರೆ ಶಾನವಾಜ್ ಹುಸೇನ್, ಗುರುದತ್ ಸಿಂಗ್ ದಿಲ್ಲಾನ್ ಹಾಗೂ ಕ್ಯಾ. ಲಕ್ಷ್ಮೀಸೆಹಗಲ್ ಇದ್ದರು.
- ಐಎನ್‌ಎ ಬಂಧಿಗಳ ಪರವಾಗಿ ಬಲುಭಾಯಿ ದೇಸಾಯಿ, ತೇಜ್‌ಬಹುದ್ದೂರ್ ಸಪ್ರು ಜವಾಹರಲಾಲ್ ನೆಹರು ವಾದ ಮಂಡಿಸಿದರು.
- ಐಎನ್‌ಎ ತನ್ನ ಗುರಿ ಸಾಧನೆಯಲ್ಲಿ ವಿಫಲವಾದರೂ ಹಲವು ಕಾರಣಗಳಿಗಾಗಿ ಭಾರತದ ಸ್ವಾತಂತ್ರ್ಯ ಇತಿಹಾಸದಲ್ಲಿ ಮಹತ್ವ ಪಡೆದುಕೊಂಡಿದೆ.

1. ಐಎನ್‌ಎ ಭಾರತದ ರಾಷ್ಟ್ರೀಯತೆಯನ್ನು ಅಂತ ರಾಷ್ಟ್ರೀಕರಣಗೊಳಿಸುವುದರ ಮೂಲಕ ಭಾರತ ಸ್ವಾತಂತ್ರ್ಯ ಪ್ರಕ್ರಿಯೆ ವೇಗವಾಗಲು ಕಾರಣವಾಯಿತು.
2. ಬ್ರಿಟೀಷರಿಗೆ ಭಾರತೀಯ ಕೂಲಿ ಸೈನಿಕರನ್ನು ನಂಬಿ ಈ ದೇಶವನ್ನು ಆಳುವುದು ಕಷ್ಟ ಎಂದು ಮನವರಿಕೆಯಾಯಿತು.
3. ಐಎನ್‌ಎ ಸಂಘಟನೆಯು ಕೋಮು ಸಾಮರಸ್ಯ ಹಾಗೂ ನಾಯಕತ್ವಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

ಸ್ವಾತಂತ್ರ್ಯ ಚಳುವಳಿಯ ಅಂತಿಮ ಹಂತ

- ಜಿನ್ನಾನ ಮೊದಲ 14 ಅಂಶಗಳ ಜೊತೆಗೆ 11 ಅಂಶಗಳು ಸೇರಿದ್ದವು. 1940ರ ಐ.ಎನ್.ಸಿ ರಾಮಘರ್ ಅಧಿವೇಶನದಲ್ಲಿ ಮೌಲಾನ ಆಜಾದ್‌ರು ಹಿಂದೂ ಮುಸ್ಲಿಮರ ಐಕ್ಯತೆಯು ಪರಂಪರಾನುಗತವಾಗಿ ಬಂದುದೆಂದು ತಿಳಿಸುತ್ತಾ ನಾವು ಇಷ್ಟಪಡುತ್ತೇವೆಯೋ ಇಲ್ಲವೊ ಭಾರತದಲ್ಲಿ ಲೀನರಾಗಿ ವಿಭಜಿಸಲಾರದಂತಿದ್ದೇವೆ ಎಂದು ತಿಳಿಸಿದರು.
- ಆದರೆ 1940 ಲಾಹೋರ್ ಅಧಿವೇಶನದಲ್ಲಿ ಮುಸ್ಲಿಂ ಲೀಗ್ ಪಾಕಿಸ್ಥಾನ ನಿರ್ಣಯ ಅಂಗೀಕರಿಸಿತು. ಮಹ್ಮದ್ದಾಲಿ ಜಿನ್ನಾ ಮಾತನಾಡಿ ಮುಸ್ಲಿಮರಿಗೆ ತಮ್ಮದೇ ಆದ ರಾಜ್ಯಭಾರ ಇರಬೇಕೆಂದು ದ್ವಿರಾಷ್ಟ್ರ ಸಿದ್ಧಾಂತಕ್ಕೆ ಬೀಜ ಬಿತ್ತಿದರು. ಇದನ್ನು ಮುಸ್ಲಿಂ ಲೀಗ್ ಅಂಗೀಕರಿಸಿತು.

1940 ಆಗಸ್ಟ್ 8ರ ಕೊಡುಗೆ

- ಈ ಪ್ರಸ್ತಾವನೆಗೆ ಮೂಲ ಕಾರಣ 1935ರ ಕಾಯ್ದೆ ಅಖಿಲ ಭಾರತ ಸಂಯುಕ್ತ ಒಕ್ಕೂಟವನ್ನು ಕೇಂದ್ರದಲ್ಲಿ ಸ್ಥಾಪಿಸಿ ಪ್ರಾಂತ್ಯಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ರಚಿಸಿತು.
- ಭಾರತೀಯರ ಒಪ್ಪಿಗೆಯಿಲ್ಲದೆ 2ನೇ ಮಹಾಯುದ್ಧಕ್ಕೆ ಜರ್ಮನಿಯ ಮೇಲೆ ಭಾರತದ ಪರವಾಗಿ ಯುದ್ಧ ಘೋಷಿಸಿದುದು ವಿರೋಧಕ್ಕೆ ಕಾರಣವಾಯಿತು. ಯುದ್ಧಕ್ಕೆ ಸಹಕರಿಸಲು ನಿರಾಕರಿಸಿ **ಕಾಂಗ್ರೇಸ್ ಮಂತ್ರಿಮಂಡಲಗಳು 1939ರಲ್ಲಿ ರಾಜೀನಾಮೆ ನೀಡಿದವು.**
- ಕಾಂಗ್ರೇಸ್ ಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಈಡೇರಿಸಿದರೆ ತಾನು ಯುದ್ಧದಲ್ಲಿ ಸಹಕಾರ ನೀಡುವುದಾಗಿ ತಿಳಿಸಿತು. ಆಗ ಲಾರ್ಡ್ ಲಿನ್‌ಲಿತಿಗೋ **ಆಗಸ್ಟ್ 8ರ ಕೊಡುಗೆಯನ್ನು** ಮುಂದಿಟ್ಟನು.

ಆಗಸ್ಟ್ ಕೊಡುಗೆಯ ಭರವಸೆಗಳು.

1. ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವುದು.
2. ಯುದ್ಧ ಮುಗಿದ ನಂತರ ಭಾರತೀಯರನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಅದು ಭಾತತ ಸಂವಿಧಾನದ ಸ್ವರೂಪವನ್ನು ನಿರ್ಧರಿಸುವುದು.
3. ಗೌರ್ನರ್ ಜನರಲ್ ಕೌನ್ಸಿಲ್‌ಗೆ ಭಾರತೀಯರನ್ನು ಸೇರಿಸಿಕೊಳ್ಳಲಾಗುವುದು.
4. ಬ್ರಿಟಿಷ್ ಇಂಡಿಯಾ ಮತ್ತು ಭಾರತೀಯ ಸಂಸ್ಥಾನಗಳ ಪ್ರತಿನಿಧಿಗಳನ್ನೊಳಗೊಂಡ ಯುದ್ಧ ಸಲಹಾ ಸಮಿತಿ ರಚಿಸಲಾಗುವುದು.
5. ಯುದ್ಧದ ತರುವಾಯ ಡೊಮಿನಿಯನ್ ಮಾದರಿಯ ಆಧಾರದ ಮೇಲೆ ಜವಾಬ್ದಾರಿ ಸರ್ಕಾರ ರಚಿಲಾಗುವುದು.

ವೈಯಕ್ತಿಕ ಕಾನೂನು ಭಂಗ ಚಳುವಳಿ-1940

- ಗಾಂಧೀಜಿಯವರು ಬ್ರಿಟನ್ನಿನ ಸಂಕಷ್ಟದ ಸ್ಥಿತಿಯ ಲಾಭವನ್ನು

ಆರಂಭಿಸಲು ತೀರ್ಮಾನಿಸಿದರು. ಅದರ ವೈಶಿಷ್ಟ್ಯತೆಗಳೆಂದರೆ:-

1. ಈ ಚಳುವಳಿ ಆಯ್ದ ವ್ಯಕ್ತಿಗಳಿಗೆ ಸೀಮಿತವಾಯಿತು.
2. ಗಾಂಧೀಜಿಯಿಂದ ಆಯ್ಕೆಯಾಗುತ್ತಿದ್ದ (ಚಳುವಳಿಗೆ) ವ್ಯಕ್ತಿಗಳು ಸರ್ಕಾರಕ್ಕೆ ಮೊದಲೇ ತಿಳಿಸಬೇಕಾಗಿತ್ತು.
3. ಬಹಿರಂಗ ಸಭೆ ಏರ್ಪಡಿಸುವುದು ಆ ಮೂಲಕ ವಸಾಹತು ಸರ್ಕಾರಕ್ಕೆ ಯುದ್ಧದ ವಿಚಾರದಲ್ಲಿ ಯಾವುದೇ ರೀತಿಯ ಸಹಾಯ ಮಾಡದಂತೆ ಜನತೆಯ ಮನವೊಲಿಸುವುದು.

- ಈ ಚಳುವಳಿಯ ಪ್ರಥಮ ಸತ್ಯಾಗ್ರಹಿಯಾಗಿ **ಆಚಾರ್ಯ ವಿನೋಭಭಾವೆಯನ್ನು** ಆಯ್ಕೆ ಮಾಡಲಾಯಿತು. ಇವರು ಆಗಸ್ಟ್ 17, 1940ರಲ್ಲಿ ವಾರ್ದಾ ಬಳಿ **'ಪೌನಾರ್'** ಗ್ರಾಮದಲ್ಲಿ ವೈಯಕ್ತಿಕ ಕಾನೂನು ಭಂಗ ಚಳುವಳಿ ಆರಂಭಿಸಿದರು. ನಂತರ ಇವರ ಬಂಧನವಾಯಿತು. ಗಾಂಧೀಜಿ ಮತ್ತು ಜವಾಹರಲಾಲ್ ನೆಹರು ಚಳುವಳಿಯಲ್ಲಿ ಪಾಲ್ಗೊಂಡರು.
- ಭಾರತದಲ್ಲಿ ವೈಯಕ್ತಿಕ ಕಾನೂನು ಭಂಗ ಚಳುವಳಿ ತೀವ್ರವಾಗಿದ್ದ ಸಮಯದಲ್ಲಿ 2ನೇ ಮಹಾಯುದ್ಧದಲ್ಲಿನ ಇಂಗ್ಲೆಂಡ್‌ನ ವಿಷಮ ಪರಿಸ್ಥಿತಿ ಎದುರಿಸಬೇಕಾಯಿತು. ಇದರಿಂದ ಭಾರತೀಯ ಸಹಕಾರ ಪಡೆಯಲು ಸರ್ಕಾರ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮಾಡಿತು. ಇದರ ಫಲವಾಗಿ ಕಾಂಗ್ರೆಸ್ ಡಿಸೆಂಬರ್ 1940ರಲ್ಲಿ ಈ ಚಳುವಳಿಯನ್ನು ಹಿಂಪಡೆಯಿತು.

ಕ್ರಿಪ್ಸ್ ಆಯೋಗ – 1942 (Cripps Mission)

- ದ್ವಿತೀಯ ಮಹಾಯುದ್ಧದಲ್ಲಿ ಜಪಾನ್ 1941ರಲ್ಲಿ ಅಮೇರಿಕಾದ ಪರ್ಲ್ ಹಾರ್ಬರ್ ಬಂದರು ಮೇಲೆ ದಾಳಿ ನಡೆಸಿತು. ಅಲ್ಲದೆ ರಂಗೂನ್‌ನನ್ನು ವಶಪಡಿಸಿಕೊಂಡಾಗ ಅಮೇರಿಕಾ ಇಂಗ್ಲೆಂಡ್ ಮೇಲೆ ಒತ್ತಡ ಹೇರಿತು. ಈ ಅವಧಿಯಲ್ಲಿ ಬ್ರಿಟನ್ ಮತ್ತು ಅದರ ಮಿತ್ರ ಪಕ್ಷಗಳು ಸೋಲಿನ ದವಡೆಗೆ ಸಿಲುಕಿದ್ದವು. ಈ ಸಂದರ್ಭದಲ್ಲಿ ವಸಾಹತು ರಾಷ್ಟ್ರಗಳ ಬೆಂಬಲ ಪಡೆಯುವ ಉದ್ದೇಶದಿಂದ ಅಮೇರಿಕಾದ ರೂಸ್‌ವೆಲ್ಟ್ ಮತ್ತು ಬ್ರಿಟನ್ ಪ್ರಧಾನಿ ಚರ್ಚಿಲ್ ಆಗಸ್ಟ್ **1941ರಲ್ಲಿ 'ಅಂಟ್ಲಾಂಟಿಕ್ ಘೋಷಣೆ'** ಹೊರಡಿಸಿದರು. ಇದು ಜಗತ್ತಿನ ಎಲ್ಲಾ ಜನರಿಗೂ ತಮ್ಮ ಇಚ್ಛೆಯ ಪ್ರಕಾರ ಸರ್ಕಾರ ರಚಿಸಿಕೊಳ್ಳುವ ಹಕ್ಕಿದೆ ಎಂದಿತು.
- ಅಂತಿಮವಾಗಿ **ಚಿಯಾಂಗ್ ಕೈಷೆಕ್** ಮತ್ತು **ರೂಸ್‌ವೆಲ್ಟ್‌ರ** ಒತ್ತಡಕ್ಕೆ ಮಣಿದ ಚರ್ಚಿಲ್‌ನು **ಮಾರ್ಚ್ 22, 1942ರಲ್ಲಿ ಕ್ರಿಪ್ಸ್ ಆಯೋಗವನ್ನು** ರಾಜಕೀಯ ಸಂಧಾನಕ್ಕೆ ಮತ್ತು ಸ್ವಾತಂತ್ರ್ಯದ ಬಗ್ಗೆ ಚರ್ಚಿಸಲು ಭಾರತಕ್ಕೆ ಕಳುಹಿಸಲಾಯಿತು.

ಕ್ರಿಪ್ಸ್ ಪ್ರಸ್ತಾವನೆಗಳು

1. ಯುದ್ಧದ ನಂತರ ಭಾರತದ ಒಕ್ಕೂಟ ರಚಿಸುವುದು
2. ಹೊಸ ಸಂವಿಧಾನ ರಚನೆ ಸಭೆಯಲ್ಲಿ ದೇಶೀಯ ರಾಜ್ಯಗಳು ಭಾಗವಹಿಸುತ್ತವೆ.
3. ಈ ರೀತಿ ರಚಿಸಿದ ಸಂವಿಧಾನವನ್ನು ಯಾವುದೇ ಪ್ರಾಂತ್ಯ ಒಪ್ಪದಿದ್ದರೆ ಆ ಪ್ರಾಂತ್ಯ ಹಾಲಿ ಇರುವ ಸಂವಿಧಾನ ಸ್ಥಾನಮಾನ ಉಳಿಸಿಕೊಂಡು
4. ಅಲ್ಪಸಂಖ್ಯಾತರಿಗೆ ಅಗತ್ಯವಾದ ರಕ್ಷಣೆ ನೀಡುವುದು.
5. ಕಾಮನ್‌ವೆಲ್ತ್ ರಾಷ್ಟ್ರಗಳೊಂದಿಗೆ ಭಾರತ ಸಂಬಂಧದ ಬಗ್ಗೆ ನಿರ್ಬಂಧ ಹೇರಕೂಡದು.
6. ಹೊಸ ಸಂವಿಧಾನ ರಚನೆಯವರೆಗೆ ಭಾರತದ ರಕ್ಷಣಾ ಜವಾಬ್ದಾರಿ ಬ್ರಿಟಿಷ್ ಹತೋಟಿಯಲ್ಲಿರುವುದು.
7. ವೈಸ್‌ರಾಯ್ ಕಾರ್ಯಕಾರಿ ಮಂಡಳಿಯಲ್ಲಿ ಭಾರತೀಯರು ಸೇರಿಕೊಂಡು ಯುದ್ಧಖಾತೆ ಬಿಟ್ಟು ಉಳಿದ ಖಾತೆಗಳನ್ನು ನೋಡಿಕೊಳ್ಳುವುದು.
8. ಜಾಗತಿಕ ಯುದ್ಧದ ಪರಿಣಾಮವಾಗಿ ಬ್ರಿಟನ್ ಭಾರತದ ರಕ್ಷಣೆಯ ಜವಾಬ್ದಾರಿ ಹೊಂದುವುದು.

- ಕ್ರಿಪ್ಸ್ ಪ್ರಸ್ತಾವನೆಯನ್ನು ಗಾಂಧೀಜಿಯವರು ದಿವಾಳಿಯಾಗುವ ಸ್ಥಿತಿಯಲ್ಲಿದ್ದ ಬ್ಯಾಂಕಿನ ಹೆಸರಿನಲ್ಲಿ ಮುಂದಿನ ದಿನಾಂಕದ ಚೆಕ್ಕು (Crips proposal is a post dated cheque on crashing bank) ಎಂದರು.
- ಕ್ರಿಪ್ಸ್ ಸಂಧಾನ **ಆಗಸ್ಟ್ 8, 1942ರಲ್ಲಿ** ವಿಫಲವಾದ ನಂತರ **ಭಾರತ ಬಿಟ್ಟು ತೊಲಗಿ ಚಳುವಳಿ** ಆರಂಭವಾಯಿತು.

ಕ್ರಿಪ್ಸ್ ಪ್ರಸ್ತಾವನೆ ತಿರಸ್ಕರಿಸಲು ಕಾರಣಗಳು.

1. ಪ್ರಾಂತ್ಯಗಳಿಗೆ ಕೊಟ್ಟ ಅಧಿಕಾರಗಳು ಭಾರತದ ಏಕತೆಗೆ ಬಲವಾದ ಪೆಟ್ಟನ್ನು ಕೊಡುತ್ತದೆ.
2. ರಕ್ಷಣಾ ಇಲಾಖೆಯನ್ನು ಭಾರತೀಯರಿಗೆ ಬಿಟ್ಟುಕೊಡಬೇಕು.
3. ಮುಸ್ಲಿಂ ಲೀಗ್ ಮುಸ್ಲಿಂರಿಗೆ ಅಗತ್ಯವಾದ ರಕ್ಷಣೆಯಿಲ್ಲ ಎಂದಿತು.

ಪ್ರತಿಕ್ರಿಯೆಗಳು

- ನೆಹರೂರವರು 'ಹಳೆಯ ಸ್ನೇಹಿತ ಕ್ರಿಪ್ಸ್ ಭಾರತಕ್ಕೆ ಸೈತಾನನಾಗಿ ಬಂದನು' ಎಂದರು.
- ಎಂ.ವಿ. ಪೈಲಿಯವರು 'ಕ್ರಿಪ್ಸ್ ಸಲಹೆಗಳು ಎಲ್ಲಾ ಭಾರತೀಯರನ್ನು ಸಮಾಧಾನಪಡಿಸಲು ಪ್ರಯತ್ನಿಸಿದವು. ಆದರೆ ಯಾರನ್ನೂ ಸಮಾಧಾನಪಡಿಸಲಿಲ್ಲ' ಎಂದರು.
- ಗಾಂಧೀಜಿಯ ಬಗ್ಗೆ ಗೌರವವಿರದ ಚರ್ಚಿಲ್‌ನು ಗಾಂಧೀಜಿಯನ್ನು 'ಅರೆಬೆತ್ತಲೆಯ ಫಕೀರ' (Half naked Fakir) ಎಂದು ಟೀಕಿಸಿದರು.

ಕ್ವಿಟ್ ಇಂಡಿಯಾ ಚಳುವಳಿ – 1942 (ಚಲೇಜಾವ್ ಚಳುವಳಿ) Quit India Movement

- ಅಂದಿನ ಐ.ಎನ್.ಸಿ ಅಧಿವೇಶನದ ಅಧ್ಯಕ್ಷರು ಮೌಲಾನಾ ಕಲಾಂ ಅಜಾದ್ ಗಾಂಧೀಜಿಯವರು ಜುಲೈ 12, 1942ರಂದು ವಿದೇಶಿ ಪತ್ರಿಕೆಗೆ ಇದೊಂದು ಶಾಂತಿಯುತ ಮತ್ತು ಅಹಿಂಸೆಯ ಹೋರಾಟ ಎಂದರು. ಈ ಹೋರಾಟಕ್ಕೆ ಚಿಯಾಂಗ್ ಕೈಷೆಕ್ ಮತ್ತು ರೋಸ್‌ವೆಲ್ಟ್‌ಗೆ ಬರೆದ ಪತ್ರದಲ್ಲಿ ಮಧ್ಯಸ್ಥಿಕೆ ವಹಿಸಬೇಕೆಂದು ತಿಳಿಸಿದರು. ಚರ್ಚಿಲ್ ಇದನ್ನು ಪರಿಗಣಿಸಲಿಲ್ಲ.
- ಕ್ರಿಪ್ಸ್ ಸಲಹೆಗಳು ವಿಫಲವಾದವು. ಮುಸ್ಲಿಂ ಲೀಗ್ ಪ್ರತ್ಯೇಕ ರಾಷ್ಟ್ರಕ್ಕೆ ಅಂಟಿಕೊಂಡಿತು. ಜಪಾನ್ ಭಾರತಕ್ಕೆ ನುಗ್ಗಲು ಮುಂದಾಗಿತ್ತು.

ಕಾರ್ಯಕಾರಿ ಸಮಿತಿ ಗಾಂಧೀಜಿಯ ಸಲಹೆಯಂತೆ ಭಾರತ ಬಿಟ್ಟು ತೊಲಗಿ ಎಂಬ ನಿರ್ಣಯ ಅಂಗೀಕರಿಸಿ ಬ್ರಿಟಿಷರಿಗೆ ರಾಜಕೀಯ ಒಪ್ಪಂದಕ್ಕೆ ಬರಲು 24 ದಿನಗಳ ಅಂತಿಮ ಗಡುವು ನೀಡಿತು. ಇದು ಹರಿಜನ ಪತ್ರಿಕೆಯಲ್ಲಿ ಪ್ರಕಟವಾಯಿತು. ಬ್ರಿಟಿಷರು ಯಾವುದೇ ಪ್ರತಿಕ್ರಿಯೆ ತೋರಲಿಲ್ಲ.

- ಆದ್ದರಿಂದ ಬಾಂಬೆಯಲ್ಲಿ ಸೇರಿದ ಐ.ಎನ್.ಸಿ ಕಮಿಟಿ ಆಗಸ್ಟ್ 1942ರಂದು ಕ್ವಿಟ್ ಇಂಡಿಯಾ ಠರಾವು ಪಾಸು ಮಾಡಿತು.
- ಗಾಂಧೀಜಿ **'ಮಾಡು ಇಲ್ಲವೆ ಮಡಿ'** ಎಂದು ಕರೆಕೊಟ್ಟರು. ಈ ಸಂದರ್ಭದಲ್ಲಿ ಗಾಂಧೀಜಿ ಭಾರತದ ಸ್ವಾತಂತ್ರ್ಯಕ್ಕಾಗಿ ನಾನು ಇನ್ನಷ್ಟು ಕಾಲ ಕಾಯಲಾರೆ. ಇನ್ನು ಕಾಲಾಹರಣ ಮಾಡಿದರೆ ದೇವರು ಕ್ಷಮಿಸಲಾರ. ಇದು ನನ್ನ ಜೀವನದ ಅಂತಿಮ ಹೋರಾಟ ಎಂದು ಹೇಳಿದರು.
- ಈ ಚಳುವಳಿ ಪ್ರಾರಂಭಕ್ಕೂ ಮುಂಚೆಯೇ ಗಾಂಧೀಜಿ ಅವರ ಕಾರ್ಯದರ್ಶಿ ಮಹಾದೇವ ದೇಸಾಯಿ, ಕಸ್ತೂರಬಾ ಹಾಗೂ ಸರೋಜಿನಿ ನಾಯ್ಡುರನ್ನು ಪೂನಾದಲ್ಲಿ ಬಂಧಿಸಿದ್ದರೆ, ಉಳಿದವರನ್ನು ಅಹ್ಮದ್‌ನಗರ ಕೋಟೆಗೆ ಕೊಂಡೊಯ್ಯಲಾಯಿತು. (ನೆಹರು, ಜೆಪಿ ನಾರಾಯಣ್, ರಾಮಮನೋಹರ್ ಲೋಹಿಯಾ, ಅರಣ್ ಅಸಫ್ ಆಲಿ, ಸಾಣೆ ಗುರೂಜಿ, ಪಟವರ್ಧನ್, ಆಜಾದ್, ಪಟೇಲ್, ಆಚಾರ್ಯ ಕೃಪಾಲನಿ ಮತ್ತು ರಾಜೇಂದ್ರ ಪ್ರಸಾದ್ ಮೊದಲಾದ 148 ನಾಯಕರನ್ನು ಬಂಧಿಸಿತು.)
- ನೆಹರು ಹೇಳಿದಂತೆ 1857ರ ದಂಗೆಯ ನಂತರ ಪ್ರಥಮ ಭಾರಿಗೆ ಇಷ್ಟೊಂದು ಬಾರಿ ಜನಸ್ತೋಮ ಬಲ ಪ್ರಯೋಗದಿಂದ ಪ್ರತಿಭಟಿಸಲು ಎದ್ದು ನಿಂತಿತು ಎಂದರು.

ಚಳುವಳಿಗೆ ಕಾರಣಗಳು

1. ಕ್ರಿಪ್ಸ್ ಸಂಧಾನದ ವಿಫಲ.
2. ಜಪಾನ್ ಭಾರತವನ್ನು ಆಕ್ರಮಿಸುವ ಭಯವಿತ್ತು.
3. ಯುದ್ಧದಿಂದಾಗಿ ಬೆಲೆ ಏರಿಕೆ ಮತ್ತು ಆಹಾರದ ಕೊರತೆ ಗಳುಂಟಾದವು.
4. ಭಾರತದಲ್ಲಿ ಯುದ್ಧ ಕಾಲದಲ್ಲಿ ನೆಲೆನಿಂತಿದ್ದ ಬ್ರಿಟನ್ ಅಮೇರಿಕಾ ಮತ್ತು ಆಸ್ಟ್ರೇಲಿಯಾ ಸೈನಿಕರ ಹದ್ದು ಮೀರಿದ ವರ್ತನೆ.
5. ರಾಷ್ಟ್ರೀಯ ಹೋರಾಟದ ಬಗ್ಗೆ ಬ್ರಿಟಿಷರ ನಿರ್ಲಕ್ಷ್ಯ ಮತ್ತು ಚಳುವಳಿ ಆರಂಭಿಸಿದ ದಮನಕಾರಿ ಕ್ರಮಗಳು.

ಚಳುವಳಿಯ ಸಂಘಟನೆ

1. ಹರತಾಳ (ಆಗಸ್ಟ್ 9-15, 1942)

ಬಾಂಬೆ, ದೆಹಲಿ, ಅಲಹಾಬಾದ್, ಪಾಟ್ನಾ, ಬಿಹಾರ, ಬಂಗಾಳ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಹರತಾಳ ಆರಂಭವಾದವು. ಆದರೆ ದೆಹಲಿಯಲ್ಲಿ ಗೋಲಿಬಾರ್ ನಡೆದು 76 ಜನರು ಸಾವಿಗೀಡಾದರು.

2. ಭೂಗತ ಚಳುವಳಿ (ಅಕ್ಟೋಬರ್-ಡಿಸೆಂಬರ್ 1942)

- ಜೆಪಿ ನಾರಾಯಣ್‌ರ ಮುಂದಾಳತ್ವದಲ್ಲಿ ಸಮಾಜವಾದಿಗಳಾಗಿದ್ದ ರಾಮ್ ಮನೋಹರ್ ಲೋಹಿಯಾ, ಅರುಣ್ ಅಸಫ್ ಅಲಿ ಬಿಜು ಪಟ್ನಾಯಕ್, ಆರ್.ಪಿ. ಗೋಯೆಂಕಾ ಕರ್ನಾಟಕದ ಮೈಲಾರ ಮಹಾದೇವಪ್ಪ - ಭೂಗತ ಚಳುವಳಿಯಲ್ಲಿ ಭಾಗವಹಿಸಿದರು.

3. ಪರ್ಯಾಯ ಸರ್ಕಾರಗಳು

- ತಾಮ್ಲಾಕ್-(ಬಂಗಾಳ), ಬಲಿಯಾ-(ಸಂಯುಕ್ತ ಪ್ರಾಂತ್ಯ), ಕುಂಡಲಗ್ರಾಮ, ಬಾಂಬೆ ಹಾಗೂ ಈಸೂರು-(ಶಿವಮೊಗ್ಗ)ಗಳಲ್ಲಿ ಪರ್ಯಾಯ ಸರ್ಕಾರಗಳು ರಚನೆಯಾದವು.
- ಕ್ವಿಟ್ ಇಂಡಿಯಾ ಚಳುವಳಿಯ ಗೋಲಿಬಾರ್‌ನಲ್ಲಿ **940**ಜನ ಸತ್ತರು. 60,000 ಜನರು ಬಂಧಿಸಲ್ಪಟ್ಟರು. ಗಾಂಧೀಜಿ ಬೇಷರತ್ತಾಗಿ ಬಿಡುಗಡೆಗೊಳಿಸಬೇಕೆಂದು ಕೇಳಿದಾಗ ವೈಸ್‌ರಾಯ್ ಲಿನ್‌ಲಿತಿಗೊ ತಿರಸ್ಕರಿಸಿದ್ದರಿಂದ ವೈಸ್‌ರಾಯ್ ಕೌನ್ಸಿಲ್‌ನ ಮೂವರು ಭಾರತೀಯರಾದ **ಎನ್.ಆರ್. ಸರ್ಕಾರ್, ಎಂ.ಎಸ್. ಆಣೆ, ಎಚ್.ಪಿ. ಮೋದಿಯವರು** ರಾಜೀನಾಮೆ ನೀಡಿದರು.

ವಿಫಲತೆಗೆ ಕಾರಣಗಳು

1. ಕಾಂಗ್ರೆಸ್ ನಾಯಕರ ಬಂಧನ.
2. ರಾಷ್ಟ್ರೀಯ ಚಳುವಳಿಗಾರರು ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು.
3. ಅಸಮರ್ಪಕ ಸಂಘಟನೆ.
4. ಕಮ್ಯುನಿಷ್ಟರು ಸಾಮ್ರಾಜ್ಯಶಾಹಿಯ ಏಜೆಂಟರಾದರು.
5. ಸರ್ವಾಧಿಕಾರಿಗಳ ನಿಷ್ಠೆ, ಸರ್ಕಾರದ ಪ್ರಾಬಲ್ಯ.
6. ಸಿಖ್‌ರು ಮತ್ತು ಮುಸ್ಲಿಂರು ಚಳುವಳಿಯಿಂದ ದೂರ ಉಳಿದರು.
7. ಶ್ರೀಮಂತರು, ಜಮೀನ್ದಾರರು, ದೊಡ್ಡ ವರ್ತಕರು ಚಳುವಳಿ ಬೆಂಬಲಿಸಲಿಲ್ಲ.

- ಡಾ. ಈಶ್ವರಿ ಪ್ರಸಾದ್‌ರು ಈ ಚಳುವಳಿಯನ್ನು ಫ್ರಾನ್ಸಿನ ಬ್ಯಾಸ್ಟೈಲ್ ಪತನಕ್ಕೂ, ರಷ್ಯಾದ ಅಕ್ಟೋಬರ್ ಕ್ರಾಂತಿಗೂ ಹೋಲಿಸಿದ್ದಾರೆ.
- ಕ್ವಿಟ್ ಇಂಡಿಯಾ ಚಳುವಳಿಯ ಕಾಲಕ್ಕೆ ನಡೆದ ಹಿಂಸಾತ್ಮಕ ಘಟನೆ, ಅದಕ್ಕೆ ಕಾರಣವಾದ ಪೊಲೀಸ್ ಹಾಗೂ ವೈಸ್‌ರಾಯರ ಕಠಿಣ ಧೋರಣೆಗಳನ್ನು ಖಂಡಿಸಿದ ಗಾಂಧೀಜಿ ಫೆಬ್ರವರಿ 10, 1943ರಂದು 21 ದಿನಗಳ ಕಾಲ ಉಪವಾಸ ಸತ್ಯಾಗ್ರಹ ಕೈಗೊಂಡರು.

ರಾಜಾಜಿ ಸೂತ್ರ - 1944 (C.R. Formula)

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಹಿಂದೂ-ಮುಸ್ಲಿಂರ ಒಗ್ಗಟ್ಟನ್ನು ಅರಿತ ರಾಜಗೋಪಾಲಚಾರಿ 1944ರಲ್ಲಿ ರಾಜಾಜಿ ಸೂತ್ರ ರಚಿಸಿದರು. ಮುಸ್ಲಿಂಲೀಗ್ ಮತ್ತು ಐ.ಎನ್.ಸಿಯನ್ನು ಒಟ್ಟುಗೂಡಿಸಲು ಪ್ರಯತ್ನಿಸಿದರು.

ರಾಜಾಜಿ ಸೂತ್ರದ ಪ್ರಮುಖಾಂಶಗಳು

1. ಮುಸ್ಲಿಂಲೀಗ್ ಭಾರತದ ಸ್ವಾತಂತ್ರ್ಯಕ್ಕೆ ಒಪ್ಪಿಕೊಳ್ಳಬೇಕು. ಐ.ಎನ್.ಸಿಯೊಂದಿಗೆ ಸಹಕರಿಸಿ ಮಧ್ಯಂತರ ಸರ್ಕಾರ ರಚಿಸಬೇಕು.
2. ಯುದ್ಧ ಮುಗಿದ ನಂತರ ಮುಸ್ಲಿಂ ಪ್ರದೇಶಗಳನ್ನು ಗುರುತಿಸಲು ಸಮಿತಿಯ ನೇಮಕ. ಅಲ್ಲಿನ ಜನಾಭಿಪ್ರಾಯ ಪಡೆದು ನಂತರ ವಿಭಜನೆಗೆ ತೀರ್ಮಾನ.

ರಚಿಸಿದಾಗ ಮಾತ್ರ ಮೇಲಿನ ಅಂಶಗಳು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಆದರೆ ಜಿನ್ನಾನು ರಾಜಾಜಿ ಸೂತ್ರವನ್ನು ತಿರಸ್ಕರಿಸಿದನು.

ದೇಸಾಯಿ-ಲಿಯಾಕತ್ ಒಪ್ಪಂದ – Desai - Liaqat Pact

- ಇವರಿಬ್ಬರ ನಡುವೆ ಹಿಂದೂ–ಮುಸ್ಲಿಂಮರು ಒಟ್ಟಾಗಿ ಮಧ್ಯಂತರ ಸರ್ಕಾರ ರಚನೆ ಬಗ್ಗೆ ಒಪ್ಪಂದವಾಯಿತು. ಆದರೆ ಕಾಂಗ್ರೇಸ್ ಮತ್ತು ಮುಸ್ಲಿಂ ಲೀಗ್‌ಗೆ ಇದು ತೃಪ್ತಿಯಾಗಲಿಲ್ಲ. ಕೇಂದ್ರದಲ್ಲಿ ಹಿಂದೂ ಮುಸ್ಲಿಮರಿಗೆ ಸಮಾನ ಪ್ರಾತಿನಿಧ್ಯ ನೀಡಿ ದೇಶವನ್ನು ಐಕ್ಯತೆಯಿಂದ ಬಲಪಡಿಸಬೇಕೆಂಬ ತೇಜ್‌ಬಹದ್ದೂರ್ ಸಪ್ರು ಅವರ ಸಲಹೆ ತಿರಸ್ಕೃತವಾಯಿತು.

ಗಾಂಧಿ-ಜಿನ್ನಾ ಮಾತುಕತೆ-1944 (Gandhi-Jinnah Talks)

- ರಾಜಾಜಿ ಸೂತ್ರದ ಮೇರೆಗೆ ಸೆಪ್ಟೆಂಬರ್ 09, 1944ರಲ್ಲಿ ಮುಸ್ಲಿಂರ ಪ್ರತ್ಯೇಕತೆ ಕೈಬಿಟ್ಟು, ದ್ವಿರಾಷ್ಟ್ರದ ಗುರಿ ಬಿಟ್ಟು ಸ್ವಾತಂತ್ರ್ಯ ಸಾಧನೆಗೆ ಮುಸ್ಲಿಂರ ಸಹಕಾರ ಅಗತ್ಯ ಕುರಿತು ಇಬ್ಬರು ನಾಯಕರ ನಡುವೆ ಮಾತುಕತೆ ನಡೆಯಿತು.
- ಆದರೆ ಜಿನ್ನಾರು ದ್ವಿರಾಷ್ಟ್ರ ಸಿದ್ಧಾಂತಕ್ಕೆ ಅಂಟಿಕೊಂಡಿದ್ದರಿಂದ ಮಾತುಕತೆ ವಿಫಲವಾಯಿತು. ಜಿನ್ನಾನು ಗಾಂಧಿಯ ಸಲಹೆಯನ್ನು ನುಸಿತಿಂದ ಪಾಕಿಸ್ತಾನ್ ಎಂದು ಹೇಳಿ ತಿರಸ್ಕರಿಸಿದನು.

ವೇವೆಲ್ ಯೋಜನೆ – 1945 (Wavell Plan)

- ದ್ವಿತೀಯ ಮಹಾಯುದ್ಧದಲ್ಲಿ ಭಾರತೀಯ ಸಹಾಯ ಯಾಚಿಸಿದ ವೈಸ್‌ರಾಯ್ ವೇವೆಲ್‌ನು ಜೂನ್ 14, 1945ರಂದು ರೇಡಿಯೋ ಮೂಲಕ ಸುದ್ದಿ ಭಿತ್ತರಿಸಿದನು. ಇದನ್ನು ವೇವೆಲ್ ಯೋಜನೆ ಎನ್ನುವರು.

ಯೋಜನೆಯ ಅಂಶಗಳು

1. ವೈಸ್‌ರಾಯ್ ಕಾರ್ಯಕಾರಿ ಸಮಿತಿ ಪುನರ್‌ರಚಿಸಿ ಹಿಂದೂ–ಮುಸ್ಲಿಂರಿಗೆ ಸಮಾನ ಪ್ರಾತಿನಿಧ್ಯವಿರುತ್ತದೆ.
2. ವೈಯಕ್ತಿಕ ಕಾನೂನು ಸಮಿತಿಯಲ್ಲಿ ವೈಸರಾಯ್ ಮತ್ತು ಪ್ರಧಾನ ದಂಡನಾಯಕ ಇಬ್ಬರನ್ನು ಬಿಟ್ಟು ಉಳಿದೆಲ್ಲ ಸದಸ್ಯರು ಭಾರತೀಯರಾಗಿರುತ್ತಾರೆ. ಅಂದರೆ ಯುದ್ಧ ಖಾತೆ ಸರ್ಕಾರದ ಕೈಯಲ್ಲಿದ್ದರೆ ವಿದೇಶಾಂಗ ಭಾರತೀಯರಿಗೆ ಸೇರಿರುತ್ತದೆ.
3. ಬ್ರಿಟಿಷ್ ವಾಣಿಜ್ಯ ಹಿತಾಸಕ್ತಿಗೆ ಹೈಕಮಿಷನರ್ ನೇಮಕ.
4. ಭಾರತದ ವಿದೇಶಾಂಗ ಕಾರ್ಯದರ್ಶಿ ಬ್ರಿಟನ್ ಹೊರತಾಗಿ ಭಾರತದ ಹಿತಾಸಕ್ತಿಯಲ್ಲಿ ಮಾತ್ರ ಹಸ್ತಕ್ಷೇಪಿಸುವುದು
5. ಪ್ರಾಂತ್ಯಗಳಲ್ಲಿ ಗೌರ್ನರ್ ಮತ್ತು ಮಂತ್ರಿಗಳುಳ್ಳ ಸಮ್ಮಿಶ್ರ ಸರ್ಕಾರ ರಚನೆ.
6. ಯುದ್ಧ ಮುಗಿದ ನಂತರ ಭಾರತ ಸಂವಿಧಾನವನ್ನು ಅವರೇ ರಚಿಸಿಕೊಳ್ಳುವುದು.

ಸಿಮ್ಲಾ ಸಮ್ಮೇಳನ – 1945 (Simla conference)

- ರಾಜಾಜಿ ಸೂತ್ರ ವಿಫಲವಾದ ನಂತರ ವೈಸ್‌ರಾಯ್ ವೇವೆಲ್‌ನು ಸಾಂವಿಧಾನಿಕ ಬಿಕ್ಕಟ್ಟಿಗೆ ಅಂತಿಮ ತೆರೆ ಎಳೆಯುವ ವೇವೆಲ್ ಯೋಜನೆಯ ಅಂಶಗಳ ಕುರಿತು ಚರ್ಚಿಸಲು ಜೂನ್ 25, 1945ರಲ್ಲಿ ಸರ್ವಪಕ್ಷಗಳ ಸಮ್ಮೇಳನ ಕರೆದನು. ಇಲ್ಲಿ ಐ.ಎನ್.ಸಿ ಮುಸ್ಲಿಂ ಲೀಗ್ ಮತ್ತು ಅಕಾಲಿದಳ ಭಾಗವಹಿಸಿದ್ದವು.
- ಇಲ್ಲಿ ವೈಸ್‌ರಾಯ್ ಕಾರ್ಯಕಾರಿ ಸಮಿತಿಯಲ್ಲಿ ಭಾರತೀಯರನ್ನು ನೇಮಿಸಿಕೊಳ್ಳುವ ವಿಷಯ ಚರ್ಚಿಸಲಾಯಿತು. ಜಿನ್ನಾನು ಈ ಸಮಿತಿಯಲ್ಲಿ ಹಿಂದೂ – ಮುಸ್ಲಿಂರು ಸಮ ಸಂಖ್ಯೆಯಲ್ಲಿರಬೇಕೆಂದು ವಾದಿಸಿದನು. ಆದರೆ ಗಾಂಧೀಜಿ ಅದಕ್ಕೆ ಆಕ್ಷೇಪಿಸಿದರು.

ಲೇಬರ್ ಪಕ್ಷ ಅಧಿಕಾರಕ್ಕೆ (1945)

- 1945ರಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿ ಮೇಲೆ ಎರಡು ಘಟನೆಗಳು ಅನುಕೂಲಕರ ಪ್ರಭಾವ ಬೀರಿದವು.

1. ದ್ವಿತೀಯ ಮಹಾಯುದ್ಧದ ಅಂತ್ಯ.
2. ಇಂಗ್ಲೆಂಡಿನಲ್ಲಿ ಕಾರ್ಮಿಕ ಪಕ್ಷ ಅಧಿಕಾರಕ್ಕೆ ಬಂದಿತು.

- 1945 ಜೂನ್‌ನಲ್ಲಿ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ್‌ಗೆ ಚುನಾವಣೆಗಳು ನಡೆದವು. ಕನ್ಸರ್‌ವೇಟಿವ್ ಪಕ್ಷವು ಸೋತು ಕಾರ್ಮಿಕ ಪಕ್ಷ ಅಧಿಕಾರಕ್ಕೆ ಬಂದು ಕ್ಲೆಮೆಂಟ್ ಅಟ್ಲಿ ಬ್ರಿಟನ್ ಪ್ರಧಾನಿಯಾದನು.
- ನೂತನ ಸರ್ಕಾರದ ಕಾರ್ಯದರ್ಶಿ ಲಾರ್ಡ್ ಪೆಥಿಕ್ ಲಾರೆನ್ಸ್ ಭಾರತವು ಶೀಘ್ರವಾಗಿ ಬ್ರಿಟಿಷ್ ಕಾಮನ್‌ವೆಲ್ತ್‌ನೊಳಗೆ ಸ್ವತಂತ್ರ ರಾಷ್ಟ್ರವಾಗಿ ತನಗೆ ಸಲ್ಲತಕ್ಕ ಸ್ಥಾನವನ್ನು ಶೀಘ್ರವಾಗಿ ಹೊಂದಬೇಕೆಂದು ಘೋಷಿಸಿದನು.
- 1945–46ರ ಸಂದರ್ಭದಲ್ಲಿ ಭಾರತದ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಚುನಾವಣೆಗಳಾಗಿ ಮುಸ್ಲಿಂ ಲೀಗ್ ಕೇವಲ ಪಂಜಾಬ್, ಸಿಂಧ್, ಬಂಗಾಳದಲ್ಲಿ ಅಧಿಕಾರಕ್ಕೆ ಬಂದರೆ ಉಳಿದೆಲ್ಲ ಕಡೆಗಳಲ್ಲಿ ಐಎನ್‌ಸಿ ಅಧಿಕಾರಕ್ಕೆ ಬಂದಿತು.
- 1946 ಜನವರಿಯಲ್ಲಿ ಬ್ರಿಟನ್ ಸಂಸತ್ತು 10 ಸದಸ್ಯರಿದ್ದ ರಾಬರ್ಟ್ ರಿಚರ್ಡ್ ತಂಡವನ್ನು ಭಾರತದ ರಾಜಕೀಯ ನಾಯಕರೊಂದಿಗೆ ಮಾತುಕತೆಗೆ ಕಳುಹಿಸಿತು. ಈ ತಂಡ ನಡೆಸಿದ ಮಾತುಕತೆಗಳಿಂದ ಭಾರತೀಯ ನಾಯಕರಿಗೆ ಅಧಿಕಾರ ಹಸ್ತಾಂತರ ಸನ್ನಿಹಿತವಾಗಿದೆ ಎಂದು ತಿಳಿಯಿತು.

ರಾಯಲ್ ನೌಕಾಪಡೆಯ ಬಂಡಾಯ (ಫೆಬ್ರವರಿ 18–26, 1946)

- **ಕಾರಣ:** ಸೈನಿಕರಿಗೆ ನೀಡುತ್ತಿದ್ದ ಕಡಿಮೆ ಸವಲತ್ತುಗಳು. ಆಂಗ್ಲರ ದಂಡನಾಯಕರು ಭಾರತದ ರಾಷ್ಟ್ರೀಯತೆ ಬಗ್ಗೆ ಅವಮಾನಕರ ಮಾತುಗಳು ಇದರಿಂದ ಬಾಂಬೆಯ ರಾಯಲ್ ನೌಕಾಪಡೆಯ 3000 ಸೈನಿಕರು ದಂಗೆಯೆದ್ದರು.
- ಐ.ಎನ್.ಎ ಸೈನಿಕರ ಬಿಡುಗಡೆ ಅವರ ಬೇಡಿಕೆಯಾಗಿತ್ತು. ಬಾಂಬೆ

ಜಿಂದಾಬಾದ್, ಹಿಂದೂ ಮುಸ್ಲಿಂ ಏಕ್ ಹೋ ಎಂಬ ಘೋಷಣೆಯಿತ್ತರು. ಗಾಂಧಿ ಮತ್ತು ಪಟೇಲರ ಸಂಧಾನದಿಂದಾಗಿ ಸೈನಿಕರು ಶರಣಾದರು.

- ಇದೇ ಕಾಲಕ್ಕೆ ಬಂಗಾಳದ ತೆಭಾಗ ದಂಗೆ ಕೇರಳದ ಪೊನ್ನಪ್ಪ ವಯ್ಯಲಾಲ್ ದಂಗೆ ಹಾಗೂ ತೆಲಂಗಾಣ ರೈತ ದಂಗೆಗಳು ನಡೆದವು.

ಕ್ಯಾಬಿನೇಟ್ ಮಿಷನ್–1946 (Cabinet Mission Plan)

- ದ್ವಿತೀಯ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದು ಕ್ಲೆಮೆಂಟ್ ಅಟ್ಲೆ ಪ್ರಧಾನಿಯಾದನು. ಇವನಿಗೆ ಭಾರತೀಯ ಸ್ವಯಂ ನಿರ್ಣಯಾಧಿಕಾರದ ಬಗ್ಗೆ ನಂಬಿಕೆ ಹುಟ್ಟಿತು. ಸಂವಿಧಾನ ಸುಧಾರಣೆ ಮತ್ತು ಭಾರತದಲ್ಲಿನ ಸ್ಥಿತಿಗತಿಯ ಬಗ್ಗೆ ಅಧ್ಯಯನಿಸಲು ಕ್ಯಾಬಿನೆಟ್ ಆಯೋಗವನ್ನು ಭಾರತಕ್ಕೆ ಕಳುಹಿಸಿದ. ಅದು ಮಾರ್ಚ್ 23, 1946ರಲ್ಲಿ ದೆಹಲಿಗೆ ಬಂದಿತು.
- ಇದರ ಸದಸ್ಯರು **ಪೆಥಿಕ್ ಲಾರೆನ್ಸ್, ಸ್ಟಾಫರ್ಡ್ ಕ್ರಿಪ್ಸ್ ಮತ್ತು ಎ.ವಿ. ಅಲೆಗ್ಸಾಂಡರ್**. ಈ ಆಯೋಗ ವಿವಿಧ ಪಕ್ಷಗಳ ನಾಯಕರೊಡನೆ ಸಮಾಲೋಚಿಸಿ ಮೇ 16ರಂದು ತನ್ನ ಯೋಜನೆ ಸಿದ್ಧಪಡಿಸಿತು. ಅದರ ಅಂಶಗಳು

1. **ಫೆಡರೇಷನ್:** ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳನ್ನು ಒಳಗೊಂಡ ಫೆಡರಲ್ ಸರ್ಕಾರ ರಚಿಸುವುದು.
2. **ಸಂವಿಧಾನ ರಚನಾ ಸಭೆ:** ಪ್ರಾಂತ್ಯ ವಿಧಾನಸಭೆಗಳು ಮತ್ತು ದೇಶೀಯ ಸಂಸ್ಥಾನಗಳನ್ನೊಳಗೊಂಡ ಸಂವಿಧಾನ ರಚನಾ ಸಭೆಯನ್ನು ಪರೋಕ್ಷ ಚುನಾವಣೆ ಮೂಲಕ ರಚಿಸುವುದು.
3. **ಗ್ರೂಪಿಂಗ್ ಸ್ಟೇಟ್ಸ್:** ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳನ್ನು 03 ಭಾಗಗಳಾಗಿ ವಿಂಗಡಿಸಲು ಆಯೋಗ ಸೂಚಿಸಿತು.

   ಎ–ಗುಂಪು: ಹಿಂದೂ ಬಹುಸಂಖ್ಯಾತ ರಾಜ್ಯಗಳು.

   ಬಿ–ಗುಂಪು: ಮುಸ್ಲಿಂ ಬಹುಸಂಖ್ಯಾತ ರಾಜ್ಯಗಳು.

   ಸಿ–ಗುಂಪು: ಹಿಂದೂ ಮುಸ್ಲಿಂ ಎರಡೂ ರಾಜ್ಯಗಳು (ಅಸ್ಸಾಂ–ಬಂಗಾಳ)
4. **ತಾತ್ಕಾಲಿಕ ಸರ್ಕಾರ:** ಸಂವಿಧಾನ ರಚನೆಯವರೆಗೆ ವಿವಿಧ ಪಕ್ಷಗಳನ್ನು ಒಳಗೊಂಡ ತಾತ್ಕಾಲಿಕ ಸರ್ಕಾರ ರಚನೆ.

ದೋಷಗಳು:

1. ದುರ್ಬಲ ಕೇಂದ್ರ ಸರ್ಕಾರ ರಚನೆಗೆ ಶಿಫಾರಸ್ಸು
2. ಪ್ರಾಂತ್ಯಗಳನ್ನು ಗುಂಪು ಗುಂಪಾಗಿ ವಿಂಗಡಿಸಿತು.
3. ಸಂವಿಧಾನ ರಚನಾ ಸಮಿತಿ ರಚಿಸಲು ಮಾಡಿದ ಸಲಹೆ ಅವೈಜ್ಞಾನಿಕವಾಗಿತ್ತು.
4. ಮುಸ್ಲಿಮರಲ್ಲದ ಅಲ್ಪಸಂಖ್ಯಾತರ ಕೋಮುಗಳ ನಿರ್ಲಕ್ಷ್ಯ
5. ಸಲಹೆಗಳು ಪ್ರಾಂತ್ಯಗಳಿಗೆ ಅನಿಶ್ಚಿತವಾಗಿದ್ದವು.

- ಮುಸ್ಲಿಂ ಲೀಗ್ ಈ ಯೋಜನೆಯಿಂದಾಗಿ ಪ್ರತ್ಯೇಕ ಪಾಕಿಸ್ತಾನದ ಕನಸನ್ನು ಕಾಣಲಾರಂಭಿಸಿತು.

ಮುಸ್ಲಿಂ ಲೀಗಿನ ನೇರ ಕ್ರಮ

- ಕ್ಯಾಬಿನೆಟ್ ಮಿಷನ್ ತನ್ನನ್ನು ಮೋಸಗೊಳಿಸಿತು ಎಂದು ಖಂಡಿಸಿ ಮುಸ್ಲಿಂ ಲೀಗ್ ತನ್ನ ರಾಷ್ಟ್ರೀಯ ಧ್ಯೇಯವಾದ ಪಾಕಿಸ್ತಾನವನ್ನು ಗಳಿಸಿಕೊಳ್ಳಲು **ಆಗಸ್ಟ್ 16, 1946**ರಂದು ನೇರ ಕ್ರಮ ದಿನವನ್ನಾಗಿ ಆಚರಿಸಲು ಕರೆ ನೀಡಿತು.
- ಇದರಿಂದಾಗಿ ಕಲ್ಕತ್ತಾದಲ್ಲಿ ಕೋಮು ಗಲಭೆ ನಡೆದು 5000 ಜನ ಕೊಲ್ಲಲ್ಪಟ್ಟರು ಮುಸ್ಲಿಮರು ಲರ್ಕ್ ಲೇಂಗೆ ಪಾಕಿಸ್ತಾನ, ಬಂತ್ ಕೇರಹಂಗ ಹಿಂದೂಸ್ತಾನ್ ಎಂಬ ಘೋಷಣೆ ಕೂಗಿದರು.

ತಾತ್ಕಾಲಿಕ ಸರ್ಕಾರ – 1946 (Interim Government)

- ಸೆಪ್ಟೆಂಬರ್ 02, 1946ರಂದು ವೈಸರಾಯ್ ಆದೇಶದಂತೆ ಜ.ನೆಹರು ಅವರು 15 ಮಂತ್ರಿಗಳನ್ನು ಒಳಗೊಂಡ ಸಚಿವ ಸಂಪುಟ ರಚಿಸಿ ಮಧ್ಯಂತರ ಸರ್ಕಾರ ರಚಿಸಿದರು. ಮುಸ್ಲಿಂ ಲೀಗ್ ಮೊದಲು ಈ ಹಂಗಾಮಿ ಸರ್ಕಾರ ಸೇರಲು ನಿರಾಕರಿಸಿತು. ಜ.ನೆಹರು ಉಪಾಧ್ಯಕ್ಷರಾದರು. ಕಾಂಗ್ರೆಸ್ ಸಚಿವ ಸಂಪುಟಕ್ಕೆ ಮುಸ್ಲಿಮರಾರು ಸೇರಬಾರದೆಂದು ಜಿನ್ನಾನು ತಿಳಿಸಿದನು.
- ನೆಹರೂ ಸರ್ಕಾರದಲ್ಲಿದ್ದ ಅರ್ಥ ಸಚಿವ ಲಿಯಾಕತ್ ಆಲಿಖಾನ್ ಕಾಂಗ್ರೆಸ್‌ಗೆ ತಡೆಗೋಡೆಯಾಗಿ ಮುಸ್ಲಿಂ ಮಂತ್ರಿಗಳನ್ನು ಪ್ರಚೋದಿಸುತ್ತಾ ಬಂದನು. 1946 ಡಿಸೆಂಬರ್ 9ರಂದು ಸಂವಿಧಾನ ರಚನಾ ಸಭೆಯಲ್ಲಿ ಲೀಗ್ ಭಾಗವಹಿಸಲಿಲ್ಲ.

ಮಧ್ಯಂತರ ಸರ್ಕಾರದ ಸದಸ್ಯರು

1. ಜವಾಹರಲಾಲ್ ನೆಹರೂ – ಉಪಾಧ್ಯಕ್ಷರು, ಕಾಮನ್‌ವೆಲ್ತ್ ಮತ್ತು ವಿದೇಶಾಂಗ ಖಾತೆ
2. ವಲ್ಲಭಾಯ್ ಪಟೇಲ್ – ಗೃಹ, ಮಾಹಿತಿ ಮತ್ತು ಪ್ರಸಾರ
3. ಬಲದೇವಸಿಂಗ್ – ರಕ್ಷಣಾ ಖಾತೆ
4. ಜಾನ್ ಮಾಥಾಯ್ – ಕೈಗಾರಿಕೆ
5. ಸಿ. ರಾಜಗೋಪಾಲಚಾರಿ – ಶಿಕ್ಷಣ
6. ಸಿ.ಎಚ್. ಬಾಬಾ – ಗಣಿ ಮತ್ತು ಇಂಧನ
7. ರಾಜೇಂದ್ರ ಪ್ರಸಾದ್ – ಆಹಾರ ಮತ್ತು ಕೃಷಿ
8. ಅರುಣ ಅಸಫ್ ಆಲಿ – ರೈಲ್ವೆ
9. ಜಗಜೀವನರಾಂ – ಕಾರ್ಮಿಕ
10. ಲಿಯಾಕತ್ ಆಲಿಖಾನ್ – ಅರ್ಥಖಾತೆ
11. ಟಿ.ಟಿ. ಚಂದ್ರಿಗಾರ್ – ವಾಣಿಜ್ಯ
12. ಅಬ್ದುಲ್‌ರಾಖಿ ನಿಸ್ಥರ್ – ಸಾರಿಗೆ
13. ಗಜನ್‌ಫರ್ ಖಾನ್ – ಆರೋಗ್ಯ
14. ಜೋಗೇಂದ್ರನಾಥ ಮಂಡಲ್ – ಕಾನೂನು

ಅಟ್ಲಿ ಘೋಷಣೆ ಫೆಬ್ರವರಿ 20 1947

- ಬ್ರಿಟನ್ ಪ್ರಧಾನಿ ಕ್ಲೇಮೆಂಟ್ ಅಟ್ಲೆ ಫೆಬ್ರವರಿ 20 1947ರಂದು ಕಾಮನ್ಸ್ ಸಭೆಯಲ್ಲಿ ಭಾರತದ ವಿಷಯಗಳಿಗೆ ಸಂಬಂಧಿಸಿದ ಘೋಷಣೆ ಹೊರಡಿಸಿದ. ಬ್ರಿಟಿಷ್ ಪಾರ್ಲಿಮೆಂಟಿನ ಜವಾಬ್ದಾರಿಯನ್ನು ಹೊಂದಿದ್ದ ಭಾರತೀಯರಿಗೆ 1948 ಜೂನ್ ವೇಳೆಗೆ ಅಧಿಕಾರ ವರ್ಗಾವಣೆ ಮಾಡುವುದಾಗಿ ಘೋಷಿಸಿದನು.
- ವೆವೆಲ್‌ನ ಉತ್ತರಾಧಿಕಾರಿಯಾಗಿ ಮೌಂಟ್ ಬ್ಯಾಟನ್‌ನ್ನು ನೇಮಿಸಿ ಅಧಿಕಾರ ಹಸ್ತಾಂತರದ ಉಸ್ತುವಾರಿ ವಹಿಸಲಾಯಿತು.

ಬ್ಯಾಟನ್ ಪ್ಲಾನ್ / ಜೂನ್-3 ಪ್ಲಾನ್-1947

- 1947 ಮಾರ್ಚ್ 24ರಂದು ಭಾರತದ ವೈಸ್‌ರಾಯ್ ಆದ ಇವನು ಅಧಿಕಾರ ವರ್ಗಾವಣೆ ಆದೇಶ ಹೊರಡಿಸಿದನು. ಸರ್ವಪಕ್ಷಗಳ ಮುಖಂಡರೊಡನೆ ಚರ್ಚಿಸಿ ತನ್ನದೇ ಆದ ಯೋಜನೆ ಮುಂದಿಟ್ಟರು. ಇದರ ಆಧಾರದ ಮೇಲೆ ಅಧಿಕಾರ ವರ್ಗಾವಣೆ ಯೋಜನೆಯೇ **ಜೂನ್ ಪ್ಲಾನ್** ಆಗಿದೆ.
- ಇದರಲ್ಲಿ ವಿಭಜನೆ ಮತ್ತು ಸ್ವಾತಂತ್ರ್ಯ ಸೂತ್ರ ಇದ್ದಿತು.

ಮುಖ್ಯಾಂಶಗಳು

1. ದೇಶ ವಿಭಜನೆ ಅನಿವಾರ್ಯ.
2. ಕೋಮು ಆಧಾರದಂತೆ ವಿಭಜನೆ.
3. ಅಸ್ಸಾಂನ ಸಿಲ್ಹೆಟ್ ಜಿಲ್ಲೆಯ ಜನಮತ ಸಂಗ್ರಹ.
4. ವಾಯುವ್ಯ ಗಡಿ ಪ್ರಾಂತ್ಯ ಮತ್ತು ಬಲೂಚಿಸ್ತಾನ ಭಾರತಕ್ಕೆ / ಪಾಕಿಸ್ತಾನಕ್ಕೆ ಸೇರಬೇಕು.
5. ಸಿಂದ್ ಪ್ರಾಂತ್ಯ ಯಾವುದಕ್ಕೆ ಸೇರಬೇಕೆಂದು ಅದರ ವಿಧಾನಸಭೆ ನಿರ್ಧಾರ.
6. ಬಂಗಾಳ - ಪಂಜಾಬ್‌ಗಳಲ್ಲಿ ಹಿಂದೂ-ಮುಸ್ಲಿಂ ಪ್ರಾಂತ್ಯಗಳ ಗಡಿ ನಿರ್ಧಾರ.
7. ದೇಶೀಯ ರಾಜ್ಯಗಳು ಯಾವುದಕ್ಕೆ ಸೇರಬೇಕೆಂಬ ನಿರ್ಧಾರ.

- ಗಾಂಧೀಜಿಯವರು ವಿಭಜನೆಯ ಸೂತ್ರವನ್ನು ವಿರೋಧಿಸಿದರು. ವಿಭಜನೆ ಎಂದರೆ ನನ್ನ ಶವಪೆಟ್ಟಿಗೆ ಮೇಲೆ ಹೊಡೆದ ಮೊಳೆ ಎಂದರು.
- ಯೋಜನೆಯ ವಿರೋಧಿಗಳೆಂದರೆ ಗಫರ್‌ಖಾನ್ ಮತ್ತು ಪುರುಷೋತ್ತಮದಾಸ್, ಯೋಜನೆಯ ಪರವಾಗಿ ಜವಾಹರಲಾಲ್ ನೆಹರು, ಗಾಂಧಿ, ಪಟೇಲ್ ಮತ್ತು ಕೃಪಲಾನಿ ಇದ್ದರು.

ಭಾರತ ಸ್ವಾತಂತ್ರ್ಯ ಕಾಯ್ದೆ - 1947

- ಬ್ಯಾಟನ್ ಪ್ಲಾನ್‌ನಂತೆ ಜುಲೈ 18, 1947ರಂದು ಬ್ರಿಟನ್ ಪಾರ್ಲಿಮೆಂಟ್ ಭಾರತ ಸ್ವಾತಂತ್ರ್ಯ ಕಾಯ್ದೆಯನ್ನು ಪಾಸು ಮಾಡಿತು.

1. ಭಾರತ ವಿಭಜಿಸಿ (ಆಗಸ್ಟ್ 15 ರಿಂದ) ಭಾರತ ಮತ್ತು ಪಾಕ್ ರಾಷ್ಟ್ರಗಳ ರಚನೆ.
2. ಸ್ವಾತಂತ್ರ್ಯದ ನಂತರ ಬ್ರಿಟಿಷ್ ಸರ್ಕಾರಕ್ಕೆ ಯಾವುದೇ ನಿಯಂತ್ರಣ ಹಕ್ಕಿಲ್ಲ.
3. ಸಂವಿಧಾನ ರಚನೆವರೆಗೆ 1935ರ ಕಾಯ್ದೆಯಂತೆ ಆಡಳಿತ ನಡೆಸುವುದು.
4. ಸಂವಿಧಾನ ರಚನಾ ಸಮಿತಿಗಳ ನೇಮಕ.
5. ಬ್ರಿಟಿಷ್ ಚಕ್ರವರ್ತಿ ಎರಡು ದೇಶಗಳಿಗೂ ಗೌರ್ನರ್ ಜನರಲ್‌ನ್ನು ನೇಮಿಸುವುದು.
6. ಆಡಳಿತಕ್ಕೆ ಅನುಕೂಲವಾಗುವ ಕಾನೂನು ರಚಿಸಿಕೊಳ್ಳಲು ಅವಕಾಶ.
7. ಎರಡೂ ದೇಶಗಳಿಗೆ ಸೇನಾಪಡೆಗಳ ನೇಮಕ. ಅವು ಗೌರ್ನರ್ ಅಧೀನದಲ್ಲಿರುವುದು.
8. ಬ್ರಿಟಿಷ್ ಚಕ್ರವರ್ತಿ ಭಾರತದ ಸಾರ್ವಭೌಮ ಎಂಬ ಬಿರುದು ರದ್ದು.
9. 'Secretary of State for India' ಪದವಿ ರದ್ದು ಮಾಡಿ ಆ ಕಾರ್ಯ ಕಾಮನ್‌ವೆಲ್ತ್‌ಗೆ.
10. ಬ್ರಿಟಿಷ್ ಸಾರ್ವಭೌಮತ್ವ ತೆಗೆದು ಹಾಕುವುದು.
11. ಪ್ರಾಂತ್ಯಗಳ ಯಾವುದೇ ಮಸೂದೆಗೆ ಚಕ್ರವರ್ತಿ ಅಂಗೀಕಾರಕ್ಕೆ ಕಾಯಬೇಕಿಲ್ಲ.
12. ಭಾರತೀಯ ರಾಜ್ಯಗಳಿಗೆ ಮುಕ್ತ ಸ್ವಾತಂತ್ರ್ಯ.
13. ವಾಯುವ್ಯ ಭಾಗದ ಬುಡಕಟ್ಟು ಜನರೊಂದಿಗೆ ಶಾಂತಿಯುತ ಮಾತುಕತೆ

ರ್‍ಯಾಡ್‌ಕ್ಲಿಫ್ ಗಡಿ ಆಯೋಗ

- ಭಾರತದ ಉಪಖಂಡ ವಿಭಜಿಸಲು ಪಂಜಾಬ್ ಮತ್ತು ಬಂಗಾಳ ಗಡಿ ಆಯೋಗಗಳನ್ನು ರಚಿಸಿ ಅದರ ಅಧ್ಯಕ್ಷರಾಗಿ ರ್‍ಯಾಡ್‌ಕ್ಲಿಫ್ ನೇಮಕವಾದನು.

ಬಂಗಾಳ ಗಡಿ ಆಯೋಗದ ಸದಸ್ಯರು

- ಐ.ಎನ್.ಸಿ ಸದಸ್ಯರು - ಬಿ.ಕೆ. ಮುಖರ್ಜಿ, ಸಿಎಸ್ ವಿಶ್ವಾಸ್
- ಮುಸ್ಲಿಂ ಲೀಗ್ ಸದಸ್ಯರು - ಅಬ್ದುಲ್ ಸಲೇಂ ಅಹ್ಮದ್, ಎಸ್.ಎ ರೆಹಮಾನ್

ಪಂಜಾಬ್ ಗಡಿ ಆಯೋಗ

- ಐಎನ್‌ಸಿ ಸದಸ್ಯರು - ಮೆಹರ್‌ಚಂದ್, ಮಹಾಜನ್ ತೇಜ್‌ಸಿಂಗ್
- ಮುಸ್ಲಿಂ ಲೀಗ್ ಸದಸ್ಯರು - ದೀನ್ ಮಹ್ಮದ್, ಮಹ್ಮದ್ ಮನೀರ್
- ರ್‍ಯಾಡ್ ಕ್ಲಿಪ್ ವರದಿಯನ್ನು ಆಗಸ್ಟ್ 17, 1947ರಂದು ಪ್ರಕಟಿಸಲಾಯಿತು.

ಕರ್ನಾಟಕದ ಇತಿಹಾಸ

27. ಕರ್ನಾಟಕ ಪ್ರಾಚೀನತೆ

1. ಕವಿರಾಜಮಾರ್ಗ ಮತ್ತು ಕಬ್ಬಿಗರ ಕಾವ್ಯದಲ್ಲಿ ಕನ್ನಡ ಶಬ್ದವು ಪ್ರದೇಶ ವಾಚಿಯಾಗಿ ಬಳಕೆ ಯಾಗಿದೆ.
2. ತಮಿಳು ಕೃತಿಗಳಾದ ಶಿಲಪ್ಪಾದಿಗಾರಂ ಮತ್ತು ತೋಲ್ಕಾಪಿಯಂನಲ್ಲಿ **ಕರುನಾಟ್** ಎಂಬ ಶಬ್ಧ ಬಳಕೆಯಾಗಿದೆ.
3. ಮಹಾಭಾರತ, ಮೃಚ್ಛಕಟಿಕ ಹಾಗೂ ಬೃಹತ್ ಸಂಹಿತೆಗಳಲ್ಲಿ ಕರ್ನಾಟಕದ ಪ್ರಸ್ತಾಪವಿದೆ.
4. ಕರ್ನಾಟಕದ ಭೂ ಭಾಗಗಳನ್ನು ಇತಿಹಾಸಕಾರರು ಮತ್ತು ಕವಿಗಳು **ಕುಂತಳ ದೇಶ, ಬನವಾಸಿ ದೇಶ** ಹಾಗೂ **ಮಹೀಷಕ** ಎಂದು ಕರೆದಿದ್ದಾರೆ.
5. ಶಂ.ಭಾ. ಜೋಶಿಯವರು ಕರ್ನಾಟಕ ಎಂಬ ಶಬ್ದ **ಕರ್ಣ್/ಕಳ್** ಪದದಿಂದ ಬಂದಿದೆ.
6. **ಕರ್+ನಾಡು** = ಕಪ್ಪು ಮಣ್ಣಿನ ನಾಡು ಎಂಬುದರಿಂದ ನಿಷ್ಪತ್ತಿಯಾಗಿದೆ.
7. ಬಾದಾಮಿ ಚಾಲುಕ್ಯ ಸೈನ್ಯಕ್ಕೆ **ಕರ್ನಾಟಕ ಬಲ** ಎಂಬ ಹೆಸರಿತ್ತು. ಸ್ವಾತಂತ್ರ್ಯದ ಅವಧಿಯಲ್ಲಿ ಕರ್ನಾಟಕದ ಭೂ ಭಾಗಗಳು 20 ಆಡಳಿತದ ಭಾಗಗಳಿಗೆ ಸೇರಿದ್ದವು. ನಂತರ ಇವುಗಳನ್ನು 5 ಆಡಳಿತ ವಿಭಾಗಗಳಿಗೆ ವ್ಯವಸ್ಥೆಗೊಳಿಸಲಾಯಿತು. ಅವುಗಳೆಂದರೆ,

1. **ಮೈಸೂರು ಸಂಸ್ಥಾನ**– 9 ಜಿಲ್ಲೆಗಳು ಮತ್ತು ಬಳ್ಳಾರಿ ಜಿಲ್ಲೆ
2. **ಮುಂಬೈ ಪ್ರಾಂತ್ಯ** – ಬೆಳಗಾವಿ, ಬಿಜಾಪುರ,ಧಾರವಾಡ ಮತ್ತು ಉತ್ತರ ಕನ್ನಡ
3. **ಮದ್ರಾಸ್ ಪ್ರಾಂತ್ಯ**– ದಕ್ಷಿಣ ಕನ್ನಡ ಮತ್ತು ಕೊಳ್ಳೆಗಾಲ
4. **ಹೈದರಾಬಾದ್ ಪ್ರಾಂತ್ಯ**– ಬೀದರ್, ಕಲ್ಬುರ್ಗಿ ಮತ್ತು ರಾಯಚೂರು.
5. **ಕೊಡಗು ಪ್ರಾಂತ್ಯ** – ಕೊಡಗು ಜಿಲ್ಲೆ

- ಸ್ವಾತಂತ್ರ್ಯದ ನಂತರ ಭಾಷಾವಾರು ರಾಜ್ಯಗಳ ಬೇಡಿಕೆ ಕರ್ನಾಟಕದಲ್ಲಿ ಮುಂದುವರಿಯಿತು. ಕರ್ನಾಟಕದ ಏಕೀಕರಣವು 1913 ರಲ್ಲಿಯೇ ರಾಜ್ಯದಾದ್ಯಂತ ಅಂತರಿಕವಾಗಿ ಆರಂಭವಾಯಿತು. ಇದರ ಮುಂದಾಳತ್ವವನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ವಹಿಸಿತು. ಜೊತೆಗೆ 1915ರಲ್ಲಿ ಬೆಂಗಳೂರಿನಲ್ಲಿ **ಕನ್ನಡ ಸಾಹಿತ್ಯ ಪರಿಷತ್** ಆರಂಭವಾಯಿತು.
- **1924ರಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನವು ಬೆಳಗಾವಿಯಲ್ಲಿ** ನಡೆಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಭಾಷಾವಾರು ರಾಜ್ಯಗಳ ಹೋರಾಟವನ್ನು ಬೆಂಬಲಿಸಿತು. 1953ರಲ್ಲಿ **ಆಂಧ್ರ ಪ್ರದೇಶವು** ಮೊದಲ ಭಾಷಾವಾರು ರಾಜ್ಯವಾಗಿ ಅಸ್ತಿತ್ವಕ್ಕೆ ಬಂದಿತು. ನಂತರ **1953ರಲ್ಲಿ ಫಜಲ್ ಆಲಿ ನೇತೃತ್ವದ ರಾಜ್ಯ ಪುನರ್ ವಿಂಗಡಣಾ ಆಯೋಗ** ನೇಮಕವಾಯಿತು. ಇದರ ವರದಿಯ ಪರಿಣಾಮವಾಗಿ **ನವಂಬರ್ 1 1956 ರಲ್ಲಿ ಮೈಸೂರು ರಾಜ್ಯ** ಉದಯವಾಯಿತು. ನಂತರ ಮುಖ್ಯಮಂತ್ರಿ **ದೇವರಾಜ ಅರಸುರವರ** ಕಾಲದಲ್ಲಿ ನವೆಂಬರ್ **1, 1973 ರಂದು ಕರ್ನಾಟಕ ಎಂದು ನಾಮಕರಣ** ಮಾಡಿದರು.
- ಹೀಗೆ 5 ಆಡಳಿತ ವಿಭಾಗದಲ್ಲಿ ಹಂಚಿ ಹೋಗಿದ್ದ ಕರ್ನಾಟಕದ ಭೂಭಾಗಗಳು 1953ರಲ್ಲಿ ಆಂಧ್ರದಿಂದ ಬಳ್ಳಾರಿ ಜಿಲ್ಲೆ 1956ರಲ್ಲಿ ಮುಂಬೈ ಪ್ರಾಂತ್ಯದ ಭಾಗಗಳು, ಹೈದರಾಬಾದ್ ಪ್ರಾಂತ್ಯದ ಭಾಗಗಳು, ಮದ್ರಾಸ್ ಪ್ರಾಂತ್ಯದ ಭಾಗಗಳು ಹಾಗೂ ಕೊಡಗು ರಾಜ ಸಂಸ್ಥಾನವು ಮೈಸೂರು ರಾಜ್ಯದಲ್ಲಿ ವಿಲೀನವಾದವು. ಕರ್ನಾಟಕವು ಇಂದು 4 ಪ್ರಾದೇಶಿಕ ವಿಭಾಗಗಳನ್ನು ಒಳಗೊಂಡಿದೆ.

28. ಶಾತವಾಹನರು

ಪುಟ ಸಂಖ್ಯೆ 42 ರಿಂದ 44ರಲ್ಲಿ ಓದಿಕೊಳ್ಳುವುದು

29. ಬನವಾಸಿ ಕದಂಬರು (ಕ್ರಿ.ಶ.315–540)

- ಕನ್ನಡದ **ಮೊಟ್ಟ ಮೊದಲ** ರಾಜವಂಶ ಕದಂಬರು.
- ಕದಂಬರ ರಾಜಧಾನಿ **ಬನವಾಸಿ/ವೈಜಯಂತಿಯಾಗಿತ್ತು.**
- ಕದಂಬರ ರಾಜ ಲಾಂಛನ ಸಿಂಹ ಮತ್ತು ವಾನರ ಧ್ವಜವಾಗಿತ್ತು.

ಆಧಾರಗಳು

1. **ಚಂದ್ರವಳ್ಳಿ ಶಾಸನ** (ಚಿತ್ರದುರ್ಗ) ಇದು **ಸಂಸ್ಕೃತ ಶಾಸನ, ಮಯೂರವರ್ಮ** ಇದನ್ನು ರಚಿಸಿದ್ದಾನೆ.
2. **ತಾಳಗುಂದ ಶಾಸನ** (ಶಿವಮೊಗ್ಗ) – ಸಂಸ್ಕೃತ ಶಾಸನವಾದ ಇದನ್ನು **ಕಾಕುತ್ಸ ವರ್ಮನು** ರಚಿಸಿದ್ದು ಕದಂಬರ ಮೂಲದ ಬಗ್ಗೆ ತಿಳಿಸುತ್ತದೆ. ಕದಂಬರು ಮಾನವ್ಯಗೋತ್ರಕ್ಕೆ ಸೇರಿದ ಹಾರೀಪುತ್ರ ಬ್ರಾಹ್ಮಣ ಕುಟುಂಬದವರೆಂದಿದೆ.

ಕದಂಬರು ಬ್ರಾಹ್ಮಣ ವಂಶಸ್ಥರೆಂದಿದೆ.

4. **ಹಲ್ಮಿಡಿ ಶಾಸನ** (ಹಾಸನ) : ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. (ರಚನೆ **ಕಾಕುತ್ಸವರ್ಮ**) 16 ಸಾಲುಗಳಿಂದ ಕೂಡಿದೆ. 1934ರಲ್ಲಿ ಎಂ.ಎಸ್.ಕೃಷ್ಣರವರು ಇದನ್ನು ಶೋಧಿಸಿದರು. ಇದು **ಕನ್ನಡದ ಮೊದಲ ಶಾಸನ.**

ರಾಜಕೀಯ ಇತಿಹಾಸ

ಮಯೂರವರ್ಮ (ಕ್ರಿ.ಶ.345–360)

- ಬಂದುಷೇಣನ ಮಗ ಮಯೂರವರ್ಮ.
- ತಾಳಗುಂದ ಶಾಸನದ ಪ್ರಕಾರ **ಮಯೂರವರ್ಮ** ಕದಂಬ ವಂಶ ಸ್ಥಾಪಕ. ಇವನು ತನ್ನ ಗುರು ವಿಷ್ಣುಶರ್ಮನೊಂದಿಗೆ ವಿದ್ಯಾರ್ಜನೆಗೆ

ವರ್ಮನನ್ನು ಸೋಲಿಸಿದನು.

- ಇವನ ಸಮಕಾಲೀನ ಉತ್ತರದ ದೊರೆ **ಸಮುದ್ರಗುಪ್ತ.**
- ಇವನು **ಚಂದ್ರವಳ್ಳಿ ಕೆರೆಯನ್ನು** ನೀರಾವರಿಗಾಗಿ ಕಟ್ಟಿಸಿದನು.

ಕಂಗವರ್ಮ (365- 390)

- ಮಯೂರ ವರ್ಮನ ಮಗ ಕಂಗವರ್ಮನು ವಾಕಾಟಕರ ರಾಜ ವಿಂದ್ಯಸೇನನ್ನು ಸೋಲಿಸಿದನು. **'ಧರ್ಮ ಮಹಾರಾಜಾಧಿರಾಜ'** ಎಂಬ ಬಿರುದಿತ್ತು.

ಭಗೀರಥ ವರ್ಮ (390-415)

- ಇವನು ಕಂಗವರ್ಮನ ಮಗ. ಇವನು **ಭಗಿ ನಾಣ್ಯವನ್ನು** ಟಂಕಿಸಿದ್ದನು.
- ಇವನ ಮಗ ರಘುವು ಕ್ರಿ.ಶ.415-425 ವರೆಗೆ ಆಳಿದನು.

ಕಾಕುತ್ಸ್ಥವರ್ಮ (425-450)

- ಮಯೂರವರ್ಮನ ನಂತರ ಪ್ರಸಿದ್ಧನಾದವನು **ಕಾಕುತ್ಸ್ಥವರ್ಮ.** ಇವನ ಸಮಕಾಲೀನರಾಗಿ ಉತ್ತರದ 1ನೇ ಕುಮಾರಗುಪ್ತ ಹಾಗೂ ದಕ್ಷಿಣದಲ್ಲಿ ವಾಕಾಟಕರು ಆಳುತ್ತಿದ್ದರು.
- **ತಾಳಗುಂದ ಶಾಸನವು ಕರ್ನಾಟಕದಲ್ಲಿ ದೊರೆತ ಮೊದಲ ಸಂಸ್ಕೃತ ಶಾಸನ.** ಇದರ ಪ್ರಕಾರ ಕಾಕುತ್ಸ್ಥವರ್ಮನಿಗೆ **'ಕದಂಬ ಕುಲ ಶಿರೋಮಣಿ', 'ಕೀರ್ತಿ ಸೂರ್ಯ'** ಎಂಬ ಬಿರುದುಗಳಿದ್ದವು. ಈತ ಶ್ರೇಷ್ಠ ಕವಿ ಮತ್ತು ರಾಜಪರಿಪಾಲಕನಾಗಿದ್ದನೆಂದಿದೆ.
- ಹಲಸಿ ಶಾಸನವು ಇವನನ್ನು ಕದಂಬ ಕುಲದ ಅತ್ಯಂತ ಭವ್ಯ ವ್ಯಕ್ತಿ ಮತ್ತು ಹಲ್ಮಿಡಿ ಶಾಸನವು ಇವನು ಉತ್ತಮ ರಾಜಾಡಳಿತ ಮಾಡುತ್ತಿದ್ದನೆಂದಿವೆ.
- ಇವನು ನೆರೆಹೊರೆ ರಾಜರಿಗೆ ತನ್ನ ಕುವರಿಯರನ್ನು ವಿವಾಹ ಮಾಡಿಕೊಟ್ಟು ಆ ಮೂಲಕ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದ್ದನು.
- ಇವನ ನಂತರ ಕುಮಾರವರ್ಮ ಮತ್ತು ಕೃಷ್ಣವರ್ಮರ ನಡುವೆ ಆಧಿಕಾರ ಕಿತ್ತಾಟವಾಗಿ ಕದಂಬ ರಾಜ್ಯವು 02 ಗುಂಪುಗಳಾಗಿ ಒಂದು ಗಂಗರ ಬೆಂಬಲ ಪಡೆದ **ಬನವಾಸಿ ಗುಂಪು,** ಮತ್ತೊಂದು ಪಲ್ಲವರ ಬೆಂಬಲ ಪಡೆದ **ಉಚ್ಛಂಗಿ (ಕೃಷ್ಣವರ್ಮ) ಗುಂಪುಗಳು** ಅಧಿಕಾರ ನಡೆಸಿದವು.

ಮೃಗೇಶವರ್ಮ (479 - 490)

- ಮೃಗೇಶವರ್ಮನಿಂದ ಭಯಭೀತರಾದ **ಗಂಗರು** ತಮ್ಮ ರಾಜಧಾನಿಯನ್ನು **ಕೋಲಾರದಿಂದ ತಲಕಾಡಿಗೆ** ವರ್ಗಾಯಿಸಿದರು. ನಂತರ ಪಲ್ಲವರನ್ನು ಇವನು ಸೋಲಿಸಿದ ನೆನಪಿಗಾಗಿ ತನ್ನ 2ನೇ ರಾಜಧಾನಿ **ಹಲಸಿಯಲ್ಲಿ** ದೇವಾಲಯ ಕಟ್ಟಿಸಿದನು.
- ಮೃಗೇಶನ ನಂತರ ಅವನ ಮಗ ರವಿವರ್ಮ(490-510) ಆಳಿದನು. **ಕದಂಬರ ಕೊನೆಯ ದೊರೆ ಹರಿವರ್ಮ** 519-540 ವರೆಗೆ ಆಳಿದನು. ವಾಕಾಟರ ಹರಿಸೇನದಿಂದ ಇವನು ಸೋತನು.

ಕದಂಬರ ಆಡಳಿತ

- ಕದಂಬರು ಶಾತವಾಹನರ ಆಡಳಿತ ಪದ್ಧತಿಯನ್ನು ಮುಂದುವರಿಸಿ ಬನವಾಸಿಯನ್ನು **12000** ನಾಡು ಎಂದು ಕರೆಯುತ್ತಿದ್ದರು.
- ರಾಜ್ಯವನ್ನು ರಾಜ್ಯ, ಮಂಡಲ/ದೇಶ, ಕಂಪಣ (ಜಿಲ್ಲೆ), ಮಹಾಗ್ರಾಮ, ದಶಗ್ರಾಮ ಹಾಗೂ ಗ್ರಾಮ ಎಂಬುದಾಗಿ ವಿಭಾಗಿಸಿದ್ದರು.
- **ಪಂಚ ಪ್ರಧಾನ** ಅಥವಾ **ಐದು ಮಂತ್ರಿಗಳ ಪರಿಷತ್** ಕದಂಬ ಆಡಳಿತ ವ್ಯವಸ್ಥೆಯ ಮುಖ್ಯ ಲಕ್ಷಣವಾಗಿತ್ತು. ಅವರೆಂದರೆ –

1. ಪ್ರಧಾನಿ – ಮುಖ್ಯ ಆಡಳಿತಾಧಿಕಾರಿ
2. ಮನವರ್ಗಡೆ – ಖಜಾಂಚಿ
3. ತಂತ್ರಪಾಲ – ವಿದೇಶಾಂಗ ಮಂತ್ರಿ
4. ಪ್ರಮುಖಪಾಲ – ಆಸ್ಥಾನಾಧಿಕಾರಿ
5. ಸಭಾ ಸಚಿವ - ಮಂಡಳಿ ಕಾರ್ಯದರ್ಶಿ

ಸಾಮಾಜಿಕ ಜೀವನ

- ಸಾಮಾಜಿಕ ವ್ಯವಸ್ಥೆಯಲ್ಲಿ ಚಾತುರ್ವರ್ಣ ಪದ್ಧತಿ, ಅವಿಭಕ್ತ ಕುಟುಂಬ ಸತಿಸಹಗಮನ ಪದ್ಧತಿ ಮತ್ತು ಸ್ತ್ರೀ ಸ್ವಾತಂತ್ರ್ಯವಿತ್ತು. ಆದರೆ **ಅಂತರ್‌ಜಾತಿ ವಿವಾಹವಿರಲಿಲ್ಲ.**
- ಕದಂಬರ ಕಾಲದಲ್ಲಿ **ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆ** ಬೆಳವಣಿಗೆಗಳಾದವು. ಇವರ ಆರಂಭದ **ಶಾಸನಗಳು ಪ್ರಾಕೃತದಲ್ಲಿದ್ದು ಜೈನರಿಂದ ಪ್ರಾಕೃತ ಭಾಷೆಗೆ ಪ್ರೋತ್ಸಾಹ** ದೊರೆಯಿತು.

ಧಾರ್ಮಿಕ ಜೀವನ

- ಧಾರ್ಮಿಕ ಅನುಯಾಯಿಗಳಾಗಿದ್ದ ಕದಂಬರು ಹಲಸಿಯಲ್ಲಿ ಜೈನ ಬಸದಿ, ತಾಳಗುಂದಲ್ಲಿ ಶಿವ ದೇವಾಲಯ, ಬನವಾಸಿಯಲ್ಲಿ ಬೌದ್ಧ ಸ್ತೂಪಗಳನ್ನು ನಿರ್ಮಿಸಿದ್ದಾರೆ.
- ಕ್ರಿ.ಶ. 7ನೇ ಶತಮಾನದಲ್ಲಿ ಬನವಾಸಿಗೆ ಭೇಟಿ ನೀಡಿದ **ಹ್ಯೂಯತ್ಸಾಂಗ್** ಬೌದ್ಧ ಸ್ತೂಪಗಳ ಬಗ್ಗೆ ವಿವರಿಸಿದ್ದಾನೆ.
- ಕದಂಬ ಅರಸರ ಮುಂದಿರುವ **'ವರ್ಮ'** ಎಂಬ ಉಪನಾಮವು ಅವರು ವೈಷ್ಣವ ಮತಾವಲಂಬಿಗಾಗಿದ್ದರೆಂದು ತಿಳಿಸುತ್ತದೆ.

ಸಾಹಿತ್ಯ

- ಕದಂಬ ಅರಸರು ಸಾಹಿತ್ಯಾಭಿಮಾನಿಗಳಾಗಿದ್ದರಿಂದ ಇವರ ಕಾಲದಲ್ಲಿ ಹಲವಾರು ಸಾಹಿತ್ಯಕ ಕೃತಿಗಳು ರಚನೆಯಾದವು

1. ಶಾಂತಿನಾಥ – ಸುಕುಮಾರ ಚರಿತೆ
2. ನಾಗವರ್ಮ – ಚಂದ್ರಚೂಡಾಮಣಿ
3. ಚಂದ್ರರಾಜ – ಮದನ ತಿಲಕ
4. ಟಾಲಮಿ – ಭೂಗೋಳ
5. ಕಾಳಿದಾಸ II – ಕೌಂತಳೇಶ್ವರ ದೌತ್ಯಂ

ಕದಂಬರ ಕಲೆ ಮತ್ತು ವಾಸ್ತುಶಿಲ್ಪ

- ಕರ್ನಾಟಕದ ದೇವಾಲಯಗಳ ವಾಸ್ತುಶಿಲ್ಪಕ್ಕೆ ಕದಂಬರು **ಮೊದಲು ಅಸ್ತಿಭಾರ ಹಾಕಿದರು.** ಮೃಗೇಶವರ್ಮನಿಂದ ನಿರ್ಮಿತವಾದ ಹಲಸಿಯ ಜೈನ ಬಸದಿ ಅತ್ಯಂತ ಪ್ರಾಚೀನ ಕಟ್ಟಡಗಳಲ್ಲೊಂದಾಗಿದೆ. ಇವರ ಕಾಲದ ದೇವಾಲಯಗಳೆಂದರೆ:-
- ತಾಳಗುಂದ – ಪ್ರಣವೇಶ್ವರ ದೇವಾಲಯ (ಕದಂಬರ ಮೂಲ ದೈವ)
- ಹಲಸಿ – ಕಲ್ಲೇಶ್ವರ ದೇವಾಲಯ (ಜಾಲಂಧ್ರ ಕಿಟಕಿಗಳಿವೆ)
- ದೇವಗಾವೆ – ಕಮಲಿ ನಾರಾಯಣ ದೇವಾಲಯ
- ಬನವಾಸಿ – ಮಧುಕೇಶ್ವರ ದೇವಾಲಯ
- ಬೆಳಗಾವಿ – ಶಂಕರದೇವ ದೇವಾಲಯ ಮಂದಿರವು ವಿಮಾನದಿಂದ ಮತ್ತು ಗರ್ಭಗೃಹವು ಪಿರಮಿಡ್ಡಿನಂಥ ಮೆಟ್ಟಲುಗಳಾಗಿ ಮೇಲೇರಿರುವ ಗೋಪುರ ಹೊಂದಿವೆ ಎಂದು ಡಾ.ಮೊರೆಸ್ ತಿಳಿಸಿದ್ದಾರೆ.
- ಅರ್ವಲಂ (ಗೋವಾ) – ತ್ರಿಕೂಟವಾದ ವೈದಿಕ ಗುಹೆಯಿದೆ.
- ಕಳಿಂಗದಲ್ಲೂ ಒಂದು ಕದಂಬ ಶಾಖೆ ಮುಂದೆ ಆಳ್ವಿಕೆ ನಡೆಸಿತು.

30. ತಲಕಾಡಿನ ಗಂಗರು (ಕ್ರಿ.ಶ.350 – 1004)

- ಗಂಗರು ಕರ್ನಾಟಕದಲ್ಲಿ ಸುಮಾರು 650 ವರ್ಷಗಳ ದೀರ್ಘಕಾಲ ಆಳಿದ ಮನೆತನವಾಗಿದೆ. ಇವರ ರಾಜ್ಯವು ಉತ್ತರದ ಮರುಂದಲೆ, ದಕ್ಷಿಣದ ಕೊಂಗುನಾಡು, ಪೂರ್ವದ ತೊಂಡೈನಾಡು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರವರೆಗಿತ್ತು.
- ಗಂಗರು ಆಳಿದ ಪ್ರದೇಶವನ್ನು **'ಗಂಗವಾಡಿ 96,000'** ಎಂದು ಕರೆಯಲಾಗಿದೆ. ಇವರು 4 ರಾಜಧಾನಿಗಳನ್ನು ಹೊಂದಿದ್ದರು. ಅವುಗಳೆಂದರೆ:-

1. 1ನೇ ರಾಜಧಾನಿ ಕೋಲಾರ (ದಡಿಗ ಮತ್ತು ಮಾಧವನ ಕಾಲ)
2. 2ನೇ ರಾಜಧಾನಿ ತಲಕಾಡು (ದುರ್ವಿನೀತನ ಕಾಲ)
3. 3ನೇ ರಾಜಧಾನಿ ಮಾಕುಂದ (ಭೂವಿಕ್ರಮನ ಕಾಲ)
4. 4ನೇ ರಾಜಧಾನಿ ಮಣ್ಣೆ (ಶ್ರೀಪುರುಷನ ಕಾಲ)

- ಗಂಗರ ರಾಜ ಲಾಂಛನ ಮದಗಜ/ ಮುದ್ರ ಆನೆ.

ಆಧಾರಗಳು

1. **ಕಲ್ಲೂರ ಗುಡ್ಡ ಶಾಸನವು** ಗಂಗರು ಅಯೋಧ್ಯೆ ಆಳುತ್ತಿದ್ದ ಇಕ್ಷ್ವಾಕು ಸಂತತಿಯವರು ಎಂದಿದೆ.
2. ದಕ್ಷಿಣ ಭಾರತಕ್ಕೆ ಬಂದ ಪದ್ಮನಾಭ ಪುತ್ರರಾದ **ದಡಿಗ** ಮತ್ತು **ಮಾಧವರು** ಕರ್ನಾಟಕದಲ್ಲಿ ಗಂಗವಂಶ ಸ್ಥಾಪಿಸಿದರು.
3. ದುರ್ವಿನೀತನ ಹೆಬ್ಬೆಟ್ಟ ಶಾಸನ ಮತ್ತು ನಾಣ್ಯಗಳು.
4. ಶ್ರೀಪುರುಷ – ಗಜಶಾಸ್ತ್ರ
5. ಚಾವುಂಡರಾಯ – ಚಾವುಂಡರಾಯ ಪುರಾಣ
6. ಬಾರವಿ – ಕಿರಾತರ್ಜುನೀಯ

ರಾಜಕೀಯ ಇತಿಹಾಸ

ದಡಿಗ / ಕೊಂಗಣಿಶರ್ಮ

- ಇವನು ಗಂಗ ವಂಶದ ಸ್ಥಾಪಕ.
- ಇವನಿಗೆ ಬಾಣವಂಶ ದಾವಾನಲ ಎಂಬ ಬಿರುದಿತ್ತು.

ದುರ್ವಿನೀತ (ಕ್ರಿ.ಶ.529–578)

- ಈತ ಗಂಗರ ಪ್ರಸಿದ್ಧ ದೊರೆ. ಇವನ ಹೆಬ್ಬೆಟ್ಟ ಶಾಸನ ಗಂಗ ವಂಶದ
- ದುರ್ವಿನಿತನು ಚಾಲುಕ್ಯರ ವಿಕ್ರಮಾದಿತ್ಯನೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದನು. ಪಲ್ಲವರ ವಿಜಯಾದಿತ್ಯನನ್ನು ಸೋಲಿಸಿದನು. ಆದರೆ ರಾಷ್ಟ್ರಕೂಟರ 1ನೇ ಕೃಷ್ಣನಿಂದ ಸೋತನು.
- ಬಿರುದುಗಳು : ಅವನೀತಂ ಪ್ರಜ್ವಲ, **'ದಕ್ಷಿಣ ರಾಜ್ಯ ಸಂರಕ್ಷಣಾ ಸಮರ್ಥ ಕೊಂಗಣಿವರ್ಮ ಮಾಧವ ದುರ್ವಿನೀತ'** ಮುಂತಾದವು.
- ಸ್ವತಃ ಕವಿಯಾದ ದುರ್ವಿನಿತನು ಬಾರವಿಯ ಕಿರಾತರ್ಜುನಿಯದ 15ನೇ ಸ್ವರ್ಗಕ್ಕೆ ಭಾಷ್ಯ ಬರೆದಿದ್ದಾನೆ. ಗುಣಾಡ್ಯನ ಬೃಹತ್ಕಥಾ (ಪೈಶಾಚಿ ಭಾಷೆ)ವನ್ನು ಸಂಸ್ಕೃತಕ್ಕೆ ಅನುವಾದಿಸಿದ್ದಾನೆ.

ಭೂವಿಕ್ರಮ

- ಇವನ ಕಾಲದಲ್ಲಿ **ಮಾಕುಂದ** ಗಂಗರ ರಾಜಧಾನಿಯಾಗಿತ್ತು. ಈ ಅವಧಿಯಲ್ಲಿ ನೊಳಂಬ ಸಾಮಂತರು ದಂಗೆ ಎದ್ದರು.
- ಚಾಲುಕ್ಯರ ಮಾಂಡಲೀಕರಾಗಿದ್ದ ಇವನು ಚಾಲುಕ್ಯ ಮತ್ತು ಪಲ್ಲವರಿಗೆ ನಡೆದ **ಮಿಳಂದೆ ಯುದ್ಧ (670)**ದಲ್ಲಿ ಚಾಲುಕ್ಯ ವಿಕ್ರಮಾದಿತ್ಯನ ವಿಜಯಕ್ಕೆ ಕಾರಣನಾದನು.

ಶ್ರೀಪುರುಷ (725–788)

- ಇವನು ಗಂಗರ ವೈರಿಯಾಗಿದ್ದ ಬಾಣರನ್ನು ಸೋಲಿಸಿದನು. ಆದರೆ ಪಲ್ಲವರ ಮಹೇಂದ್ರವರ್ಮನಿಂದ ಸೋತನು. ಆದರೂ ಪಲ್ಲವ ಸೈನ್ಯವನ್ನು ಮಿಳಂದೆಯಲ್ಲಿ ಸೋಲಿಸಿ **'ಪೆರ್ಮಾಡಿ'** ಬಿರುದು ಧರಿಸಿದನು.
- ಶ್ರೀಪುರುಷನ ಕಾಲದಲ್ಲಿ ಚಾಲುಕ್ಯ–ಪಲ್ಲವ, ಪಾಂಡ್ಯ–ಪಲ್ಲವ ಹಾಗೂ ರಾಷ್ಟ್ರಕೂಟ–ಪಲ್ಲವರಿಗೆ ಘರ್ಷಣೆಗಳಾದವು.
- **ಶ್ರೀಪುರುಷನು** ತನ್ನ ರಾಜಧಾನಿಯನ್ನು **ಮಾಕುಂದದಿಂದ ಮಣ್ಣೆಗೆ** ವರ್ಗಾಯಿಸಿ, ಅದನ್ನು ರಾಷ್ಟ್ರಕೂಟ ಅಧೀನಕ್ಕೊಪ್ಪಿಸಿದನು. ಇವನು ತನ್ನ ಜೀವಿತದುದ್ದಕ್ಕೂ ರಾಷ್ಟ್ರಕೂಟರೊಡನೆ ಹೋರಾಡಿದನು.
- **ಬಿರುದುಗಳು:** ಭೀಮರೂಪ, ಪರಮನಂದಿ, ಪೆರ್ಮಾಡಿ, ಶ್ರೀವಲ್ಲಭ, ಮೆತ್ತರಸ ಮತ್ತು ಕೊಂಗಣಿ ರಾಜ ಮುಂತಾದವು.

II ನೇ ಶಿವಮಾರ (788–816)

- ಶ್ರೀಪುರುಷನ ಮಗನಾದ ಇವನು ಕ್ರಿ.ಶ.788ರಲ್ಲಿ ಅಧಿಕಾರಕ್ಕೆ ಬಂದನು. ರಾಷ್ಟ್ರಕೂಟ ಸಿಂಹಾಸನಕ್ಕೆ ಧ್ರುವ[illegible] ಮತ್ತು 2ನೇ

ಗೋವಿಂದನಿಗೂ ಘರ್ಷಣೆಯಾಗಿ, 2ನೇ ಗೋವಿಂದ ಪರವಹಿಸಿದನು. ಆದರೆ 2ನೇ ಗೋವಿಂದನು ದ್ರುವನಿಂದ ಸೋತನು.

- ದ್ರುವನು ಶಿವಮಾರನನ್ನು ಸೆರೆಯಲ್ಲಿಟ್ಟು ತನ್ನ ಮಗನಾದ **ಕಂಬನನ್ನು** ಗಂಗವಾಡಿಯ ಯುವರಾಜನಾಗಿ ನೇಮಿಸಿದನು. ಆದರೆ 3ನೇ ಗೋವಿಂದನು **2ನೇ ಶಿವಮಾರನನ್ನು** ಬಿಡುಗಡೆ ಮಾಡಿದನು.
- 2ನೇ ಶಿವಮಾರನು ರಾಷ್ಟ್ರಕೂಟರ ಅಮೋಘವರ್ಷನ ವಿರುದ್ಧ ಕ್ರಿ.ಶ.816 ರಲ್ಲಿ ಹೋರಾಡುತ್ತಲೇ ಕಾಗ ಮೊಗೆಯೂರಲ್ಲಿ ಸತ್ತನು.
- 2ನೇ ಶಿವಮಾರನು ರಚಿಸಿದ ಕೃತಿ **ಗಜಾಷ್ಟಕ**. ಈತ ಶ್ರವಣಬೆಳಗೊಳದಲ್ಲಿ ಜೈನಬಸದಿ ನಿರ್ಮಿಸಿದನು.
- ಕ್ರಿ.ಶ.816–843 ವರೆಗೆ ರಾಚಮಲ್ಲ ಆಳಿದನು.

ನೀತಿಮಾರ್ಗ ಎರೆಗಂಗ (843–870)

- ಇವನು ನೊಳಂಬವಾಡಿಯ ಮಹೇಂದ್ರನನ್ನು ಸೋಲಿಸಿ **ಮಹೇಂದ್ರಾಂತಕ** ಎಂಬ ಬಿರುದು ಧರಿಸಿದನು. ಇವನ ಮರಣದ ಶಾಸನ ಬೆಂಗಳೂರು ಮ್ಯೂಸಿಯಂನಲ್ಲಿದೆ.
- ಎರೆಗಂಗನು ರಾಷ್ಟ್ರಕೂಟರ ಅಮೋಘವರ್ಷನನ್ನು ಸೋಲಿಸಿದನು.

ಬೂತುಗ II

- 2ನೇ ನೀತಿಮಾರ್ಗನ ಕೊನೆಯ ಮಗನಾದ ಇವನು ರಾಷ್ಟ್ರಕೂಟರ ನೆರವಿನಿಂದ ತನ್ನ ಅಣ್ಣ ರಾಚಮಲ್ಲನನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬಂದನು.
- ಇವನ ಗಣ್ಯ ಸಾಧನೆಯೆಂದರೆ ರಾಷ್ಟ್ರಕೂಟರು & ಚೋಳರಿಗೂ ನಡೆದ **'ತಕ್ಕೋಳಂ ಯುದ್ಧ' (948–49)** ದಲ್ಲಿ ಚೋಳರ ರಾಜಾದಿತ್ಯನನ್ನು ಬೂತುಗನು ಕೊಂದನು. ಈ ವಿಜಯಕ್ಕಾಗಿ ರಾಷ್ಟ್ರಕೂಟರ 3ನೇ ಕೃಷ್ಣನು ಬನವಾಸಿ 1200 ಪ್ರಾಂತ್ಯವನ್ನು ಬೂತುಗನಿಗೆ ಕೊಟ್ಟನು.

ಚಾವುಂಡರಾಯ (963–975)

- ಚಾವುಂಡರಾಯನು ಗಂಗರ **2ನೇ ಮಾರಸಿಂಹನ** ಕಾಲದಲ್ಲಿ ಮಂತ್ರಿಯಾಗಿ ನಿಯುಕ್ತಿಯಾಗಿ **4ನೇ ರಾಚಮಲ್ಲನ** ಕಾಲದವರೆಗೆ ಮುಂದುವರೆದನು. ಇವನು ಸಾಮಂತ ಮಧುರಾಚಯ್ಯನನ್ನು ಸೋಲಿಸಿದ್ದರಿಂದ ಇವನಿಗೆ 4ನೇ ರಾಚಮಲ್ಲನು **ಸಮರ ಪರಶುರಾಯ** ಎಂಬ ಬಿರುದು ನೀಡಿದನು.
- ರಾಯನು 4ನೇ ರಾಚಮಲ್ಲನಿಗೆ ಪಟ್ಟವನ್ನು ಕೊಡಿಸಿದ್ದನು. ನೊಳಂಬರ ಜಗದೇಕವೀರ ಮತ್ತು ಪಾಂಡ್ಯರ ರಾಜಾದಿತ್ಯರನ್ನು ಸೋಲಿಸಿ **ಧೀರ ಮಾರ್ತಾಂಡ ರಣರಂಗಸಿಂಹ** ಎಂಬ ಬಿರುದು ಪಡೆದನು.
- ರಾಯನ ಕೃತಿಗಳು

1) ಚರಿತ್ರಸಾರ (ಸಂಸ್ಕೃತ ಕೃತಿ)
2) ಚಾವುಂಡರಾಯ ಪುರಾಣ (ಕನ್ನಡ ಕೃತಿ)

ಮತ್ತು ರನ್ನ.

- ರಾಯನು ಕ್ರಿ.ಶ.981–82ರಲ್ಲಿ ಶ್ರವಣಬೆಳಗೊಳದಲ್ಲಿ ವಿಶ್ವವಿಖ್ಯಾತ 58 ಅಡಿ ಎತ್ತರದ ಗೋಮ್ಮಟ ವಿಗ್ರಹವನ್ನು ಕೆತ್ತಿಸಿದನು.

ಗಂಗರ ಕೊಡುಗೆಗಳು.

- ಕದಂಬರ ಆಡಳಿತ ಪದ್ಧತಿ ಅನುಸರಿಸಿದ ಗಂಗರು ಮಂತ್ರಿಮಂಡಲವನ್ನು ಆಡಳಿತದ ಮುಖ್ಯ ಘಟಕವಾಗಿಸಿದ್ದರು. ರಾಜತ್ವವು ವಂಶಪಾರಂಪರ್ಯವಾಗಿತ್ತು.
- ಮಂತ್ರಿವರ್ಗವು:– ಸರ್ವಾಧಿಕಾರಿ– ಪ್ರಧಾನಿ. ಶ್ರೀಭಂಡಾರಿ– ಖಜಾನೆ ಅಧಿಕಾರಿ. ಸಂಧಿವಿಗ್ರಹಿ– ಯುದ್ಧಮಂತ್ರಿ, ಯುವರಾಜ– ಪ್ರಾಂತ್ಯಾಧಿಕಾರಿ, ಹೆಗ್ಗಡೆ ಮತ್ತು ನಾಡಗೌಡ–ನಾಡುಗಳ ಮುಖ್ಯಸ್ಥರು. ಹಾಗೂ ಗೌಡ ಮತ್ತು ಕರಣಿಕರು ಗ್ರಾಮಗಳ ಮುಖ್ಯಸ್ಥರಾಗಿದ್ದರು.
- ರಾಜ್ಯವನ್ನು ಪ್ರಾಂತ್ಯ, ವಿಷಯ, ನಾಡು, ಕಂಪಣ ಹಾಗೂ ಗ್ರಾಮಗಳಾಗಿ ವಿಂಗಡಿಸಿದ್ದರು. ಗ್ರಾಮ ಸಭೆಯು ಭೂಕಂದಾಯ, ತೆರಿಗೆ, ನ್ಯಾಯ ಮತ್ತು ನೈರ್ಮಲ್ಯ ರಕ್ಷಣೆಯನ್ನು ಗಮನಿಸುತ್ತಿತ್ತು.
- ರಾಜನು ಮುಖ್ಯವಾದ ನ್ಯಾಯವನ್ನು ತೀರ್ಮಾನಿಸುತ್ತಿದ್ದನು. ನಾಡುಗಳಲ್ಲಿ ಮಹಾದಂಡನಾಯಕ, ಗ್ರಾಮಗಳಲ್ಲಿ ಗೌಡ, ಗಾವುಂಡ, ಪೆರ್ಗಡೆಗಳೆಂಬ ನ್ಯಾಯಾಧಿಕಾರಿಗಳಿದ್ದರು.
- **ಗಂಗರ ನಾಣ್ಯಗಳು**– ಗದ್ಯಾಣ, ಸುವರ್ಣ, ನಿಷ್ಕ–ಚಿನ್ನದ ನಾಣ್ಯಗಳು ಮತ್ತು ಕೊಡುವೆನ , ಕಾಸು, ದ್ರಮ್ಮ– ಇತರೆ ನಾಣ್ಯಗಳಿದ್ದವು.

ಧಾರ್ಮಿಕ ವ್ಯವಸ್ಥೆ

- ಗಂಗರ ಕಾಲದಲ್ಲಿ ಜೈನಮತ ಅತ್ಯಂತ ಪ್ರಾಬಲ್ಯವಾಗಿತ್ತು. **2ನೇ ಶಿವಮಾರ ಜೈನಮತ ಸ್ವೀಕರಿಸಿದ ಗಂಗರ ಮೊದಲ ಅರಸ.**
- ದುರ್ವಿನೀತನ ಆಸ್ಥಾನದಲ್ಲಿ **ಪೂಜ್ಯಪಾದ** ಮತ್ತು **ಬಾರವಿ** ಎಂಬ ಜೈನ ವಿದ್ವಾಂಸರಿದ್ದರು.
- ಗಂಗರು ಸರ್ವಧರ್ಮ ಪರಿಪಾಲಕರಾಗಿದ್ದರು. ಬೌದ್ಧ ಧರ್ಮ ಅವನತಿ ಹಾದಿಯಲ್ಲಿತ್ತು. ಕಾಳಮುಖ, ಚಾರ್ವಾಕ ಎಂಬ ಪಂಥಗಳಿದ್ದವು.
- **ಸಾಹಿತ್ಯ**:– ಗಂಗರ ಕಾಲದಲ್ಲಿ ಕನ್ನಡ, ಸಂಸ್ಕೃತಿ ಸಾಹಿತ್ಯ ಬೆಳೆಯಿತು.
- **ಮಾಧವ II** –ದತ್ತಕಸೂತ್ರವೃತ್ತಿ ಮೇಲೆ ಬಾಷ್ಯ ಬರೆದಿದ್ದಾನೆ.
- **ದುರ್ವಿನೀತ (ಶಬ್ದಾಮಾರ)**– ಗುಣಾಢ್ಯನ ಬೃಹತ್ಕಥಾವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾನೆ.
- **ಪೂಜ್ಯಪಾದ** – ಪಾಣಿನಿ ವ್ಯಾಕರಣಕ್ಕೆ ಶಬ್ದವತಾರ ವ್ಯಾಖ್ಯಾನ ನೀಡಿದ್ದಾನೆ.
- **2ನೇ ಶಿವಮಾರ** – ಗಜಾಷ್ಟಕ ಮತ್ತು ಸೇತುಬಂಧ (ಕನ್ನಡ).
- **ಚಾವುಂಡರಾಯ** – ಚರಿತ್ರಸಾರ (ಸಂಸ್ಕೃತ) ಮತ್ತು ಚಾವುಂಡರಾಯ ಪುರಾಣ (ಕನ್ನಡ)
- **ಶ್ರೀಪುರುಷ** – ಗಜಶಾಸ್ತ್ರ

- ನಾಗವರ್ಮ – ಛಂದೋಂಬುದಿ
- ವೀರನಂದಿ – ಚಂದ್ರಪ್ರಭ ಪುರಾಣ,
- ಅಸಗ – ವರ್ಧಮಾನ ಪುರಾಣ.
- ನೇಮಿಚಂದ್ರ – ದ್ರವ್ಯಸಾರ ಸಂಗ್ರಹ.

ಕಲೆ ಮತ್ತು ವಾಸ್ತುಶಿಲ್ಪ

- **ಗಂಗವಾಡಿಯು** ಗಂಗರ ಕಲೆ ಮತ್ತು ವಾಸ್ತುಶಿಲ್ಪದ ಕೇಂದ್ರವಾಗಿತ್ತು. ಇವರ ಆರಂಭದ ದೇವಾಲಯಗಳು ಕೇವಲ **ಗರ್ಭಗೃಹ** ಮುಖಮಂಟಪಗಳಿಂದ ಕೂಡಿದ್ದವು.
- ಗಂಗರ ವಿಶಿಷ್ಟ ಕೊಡುಗೆ ಎಂದರೆ **ಮಾನಸ್ತಂಭ** ಮತ್ತು **ಬ್ರಹ್ಮ ಮಾನಸ್ತಂಭಗಳು**. ಕ್ರಿ.ಶ.800ರಲ್ಲಿ ಶಿವಮಾರನು ಬೆಳಗೊಳದಲ್ಲಿ ಚಂದ್ರಪ್ರಭ ಬಸದಿ ನಿರ್ಮಿಸಿದನು. **ಕ್ರಿ.ಶ.982**ರಲ್ಲಿ ಚಾವುಂಡರಾಯ ಬಸದಿ (ವಿಮಾನವುಳ್ಳ) & **ಗೊಮ್ಮಟೇಶ್ವರ** ವಿಗ್ರಹ ಕೆತ್ತಿಸಲಾಯಿತು.
- ಮಣ್ಣೆಯ ಕಪಿಲೇಶ್ವರ, ಕೋಲಾರದ ಕೋಲಾರದಮ್ಮ, ತಲಕಾಡಿನ ಪಾತಾಳೇಶ್ವರ, ಬೇಗೂರಿನ ನಾಗೇಶ್ವರ ದೇವಾಲಯಗಳು ನಿರ್ಮಾಣವಾದವು.

31. ಬಾದಾಮಿ ಚಾಲುಕ್ಯರು ಪುಟ 54–56 ಓದಿಕೊಳ್ಳುವುದು.

32. ರಾಷ್ಟ್ರಕೂಟರು ಪುಟ 68 ರಿಂದ 70 ಓದಿಕೊಳ್ಳುವುದು.

33. ಕಲ್ಯಾಣ ಚಾಲುಕ್ಯರು ಪುಟ 72 ರಿಂದ 74 ಓದಿಕೊಳ್ಳುವುದು

34. ಕಲ್ಯಾಣದ ಕಲಚೂರಿಗಳು (Kalachuris of Kalyana)

- ಕಲ್ಯಾಣದ ಕಲಚೂರಿಗಳ ಆಳ್ವಿಕೆಯ ಕಾಲದಲ್ಲಿ ವೀರಶೈವ ಧರ್ಮದ ಪುನರುದ್ಧಾರ ವಚನಸಾಹಿತ್ಯದ ಸೃಜನೆಯಾಯಿತು.
- ಕಲಚೂರಿಗಳ ರಾಜಕೀಯ ಇತಿಹಾಸವನ್ನು ಬಂದಳಿಕೆ ಶಾಸನ ತಿಳಿಸುತ್ತದೆ.
- ಅಶ್ವತ್ಥಾಮನ ಶಿಷ್ಯ **ಸೋಮನು** ಈ ಕುಲದ ಸ್ಥಾಪಕ.
- ಉತ್ತರ ಭಾರತದಲ್ಲಿ ಉದಯಿಸಿದ ಕಲಚೂರಿಗಳು ಮಧ್ಯ ಹಾಗೂ ಉತ್ತರ ಭಾಗಗಳನ್ನು ಆಳುತ್ತಿದ್ದರು.
- **ಇವರ ಶಾಖೆಗಳು** 1. ಚೇದಿ ಕಲಚೂರಿಗಳು (ಹೈದೇಯವಂಶ), 2. ಗೋರಕ್‌ಪುರದ ಕಲಚೂರಿಗಳು, 3. ರತ್ನಪುರದ ಕಲಚೂರಿಗಳು
- **ಚೇದಿ ಕಲಚೂರಿಗಳು:** ಕರ್ನಾಟಕಕ್ಕೆ ಬಂದು ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡರು. ಪ್ರಥಮವಾಗಿ ತಲಕಾಡು ನಾಡಿನ ಮಂಗಳವೇಡದಲ್ಲಿ ಚಿಕ್ಕ ಮನೆತನವಾಗಿ ಆಳಿದರು.

ವಚನಕಾರರು	ಅಂಕಿತನಾಮ	ಕನ್ನಡ ಕೃತಿಗಳು
ಬಸವೇಶ್ವರ	ಕೂಡಲ ಸಂಗಮದೇವ	ವಚನಗಳು
ಜೇಡರ ದಾಸಿಮಯ್ಯ	ರಾಮನಾಥಾ	ವಚನಗಳು (ಪ್ರಥಮ ವಚನಕಾರ)
ಮಡಿವಾಳ ಮಾಚಯ್ಯ	ಕಲಿದೇವರದೇವ	ವಚನಗಳು
ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	ವಚನಗಳು
ಅಕ್ಕಮಹಾದೇವಿ	ಚನ್ನಮಲ್ಲಿಕಾರ್ಜುನ	ವಚನಗಳು
ಅಲ್ಲಮಪ್ರಭು	ಗುಹೇಶ್ವರ	ಶೂನ್ಯ ಸಂಪಾದನೆ
ಸಿದ್ದರಾಮ	ಕಪಿಲ ಸಿದ್ದಿರಾಮೇಶ್ವರ	ವಚನಗಳು
ಆಯ್ದಕ್ಕಿ ಮಾರಯ್ಯ	ಅಮರೇಶ್ವರ	ವಚನಗಳು
ಚನ್ನಬಸವ	ಕೂಡಲ ಚೆನ್ನ ಸಂಗಮದೇವ	ವಚನಗಳು
ಅಕ್ಕನಾಗಲಾಂಬಿಕೆ	ಬಸವಪ್ರಿಯ ಚನ್ನಸಂಗ	ವಚನಗಳು
ಮುಕ್ತಾಯಕ್ಕ	ಅಜಗಣ್ಣ	ವಚನಗಳು
ಉರಿಲಿಂಗಪೆದ್ದಿ	ವಿಶ್ವೇಶ್ವರ	ವಚನಗಳು

2ನೇ ಬಿಜ್ಜಳ (1156–67)

- ಇವನು ಕಲ್ಯಾಣ ಚಾಲುಕ್ಯ ರಾಜ್ಯವನ್ನು ವಿಸ್ತರಿಸಿದನು.
- ಬಿಜ್ಜಳನ ಮುಖ್ಯಮಂತ್ರಿ, ಸೇನಾಧಿಪತಿ ಹಾಗೂ ಕೋಶಾಧ್ಯಕ್ಷ ಬಸವಣ್ಣನವರು.
- ಬಿಜ್ಜಳನ ಆಳ್ವಿಕೆ ಕಾಲ ಶೈವ ಧರ್ಮದ ಪುನರುಜ್ಜೀವನಕ್ಕೆ ಅತ್ಯಂತ ಪ್ರಸಿದ್ಧವಾಗಿದೆ.
- ಬಿಜ್ಜಳನ ಉತ್ತರಾಧಿಕಾರಿ ಸೋಮೇಶ್ವರನಾಗಿದ್ದನು.
- **ಬಿರುದುಗಳು:** ಭುಜಬಲ ಚಕ್ರವರ್ತಿ, ಕಲಚೂರಿ ಚಕ್ರವರ್ತಿ, ತ್ರಿಭುವನಮಲ್ಲ, ಶನಿವಾರಸಿದ್ಧಿ ಗಿರಿದುರ್ಗಮಗ ಮತ್ತು ಮಹಾರಾಜಾಧಿರಾಜ

35. ಹೊಯ್ಸಳರು ಪುಟ 77 ರಿಂದ 82 ಓದಿಕೊಳ್ಳುವುದು

36. ವಿಜಯನಗರ ಸಾಮ್ರಾಜ್ಯ ಪುಟ 105 ರಿಂದ 113 ಓದಿಕೊಳ್ಳುವುದು

37. ಬಹುಮನಿ ಸಾಮ್ರಾಜ್ಯ ಪುಟ 113 ಯಿಂದ 117 ಓದಿಕೊಳ್ಳುವುದು

38. ಚಿತ್ರದುರ್ಗದ ಪಾಳೆಯಗಾರರು (paleyagaras of Chitradurga)

- ಚಿತ್ರದುರ್ಗದ ನಾಯಕರು ವಿಜಯನಗರದ ಸಾಮಂತರಾಗಿ ಏಳಿಗೆಗೆ ಬಂದರು.
- ಇವರು ಬೇಡರಾಗಿದ್ದು ವಾಲ್ಮೀಕಿ ಗೋತ್ರಕ್ಕೆ ಸೇರಿದವರು.
- ಇವರ ರಾಜಧಾನಿ ಚಿತ್ರದುರ್ಗ. (ಪ್ರಾಚೀನ ಹೆಸರು ಚಂದ್ರವಳ್ಳಿ)
- ಸುಮಾರು 211 ವರ್ಷಗಳ ಕಾಲ 14 ನಾಯಕರು ಆಳ್ವಿಕೆ ಮಾಡಿದರು.
- ಮತ್ತಿ ತಿಮ್ಮಣ್ಣ ನಾಯಕ ಈ ವಂಶದ ಸ್ಥಾಪಕ.
- 1ನೇ ಓಬಣ್ಣ ನಾಯಕ(1588-1602) ನಿಗೆ ಮದಕರಿ ನಾಯಕ ಎಂಬ ಬಿರುದಿತ್ತು.
- 2ನೇ ಮದಕರಿ ನಾಯಕ (1052-1674)ನು ತನ್ನ ದಳವಾಯಿಯಿಂದ ಕೊಲೆಗೀಡಾದನು.
- ಭರಮಪ್ಪ ನಾಯಕ (1689-1721) ನ ಆಳ್ವಿಕೆ ಕಾಲದಲ್ಲಿ ಪ್ಲೇಗ್‌ನಿಂದಾಗಿ ಅಧಿಕ ಸಂಖ್ಯೆಯ ಜನರು ಸಾವಿಗೀಡಾದರು. ಇವನು ಭೀಮಸಮುದ್ರ, ಭರಮಸಮುದ್ರ ಕೆರೆಗಳನ್ನು ಕಟ್ಟಿಸಿದನು.

5ನೇ ಮದಕರಿ ನಾಯಕ (ಕ್ರಿ.ಶ.1755-1779)

- ಇವನು ಚಿತ್ರದುರ್ಗದ ನಾಯಕರಲ್ಲೇ ಪ್ರಸಿದ್ಧ ಅರಸ.
- ಇವನು ಚಿತ್ರದುರ್ಗಕ್ಕೆ 7 ಸುತ್ತಿನ ಕೋಟೆಯನ್ನು ಕಟ್ಟಿಸಿದನು.
- ಆರಂಭದಲ್ಲಿ ಇವನು ಹೈದರಾಲಿಯೊಂದಿಗೆ ಯುದ್ಧ ಮಾಡಿದನು. ನಂತರ ಅವನೊಂದಿಗೆ ಸ್ನೇಹ ಬೆಳೆಸಿ ಅವನಿಗೆ ಬಿದನೂರಿನ ಧಾಳಿ, ಬಂಕಾಪುರ ಹಾಗೂ ನಿಡಗಲ್ ಕೋಟೆ ಮುತ್ತಿಗೆಯಲ್ಲಿ ಸಹಾಯ ಮಾಡಿದನು.
- ಮರಾಠರು ಮೈಸೂರಿನ ಮೇಲೆ ಧಾಳಿ ಮಾಡಿದಾಗ ಅವರನ್ನು ಹಿಮ್ಮೆಟ್ಟಿಸಲು ಹೈದರಾಲಿಗೆ ಸಹಾಯ ಮಾಡಿದನು.
- ಮರಾಠರ ಪಕ್ಷ ಸೇರಿದ್ದ 5ನೇ ಮದಕರಿ ನಾಯಕನನ್ನು ಸದೆಬಡಿಯಲು ಚಿತ್ರದುರ್ಗದ ಮೇಲೆ ಹೈದರಾಲಿ ಧಾಳಿ ಮಾಡಿ ಕಳ್ಳಕಿಂಡಿ / ಓಬವ್ವನ ಕಿಂಡಿಯ ಮೂಲಕ ಕೋಟೆ ಪ್ರವೇಶಿಸಿದನು ಆದರೆ ಹೈದರಾಲಿ ಸೋತನು.
- 1779ರಲ್ಲಿ ವೀರ ಮದಕರಿಯ ಮರಣದಿಂದಾಗಿ ಚಿತ್ರದುರ್ಗ ಹೈದರಾಲಿಯ ಕೈ ಸೇರಿತು.

39. ಕೆಳದಿ ನಾಯಕರು (Keladi Nayakas)

- ವಿಜಯ ನಗರ ಸಾಮ್ರಾಜ್ಯದ ಸಾಮಂತರಾಗಿ ಕೆಳದಿ ಸಂಸ್ಥಾನ ಪ್ರವರ್ಧಮಾನಕ್ಕೆ ಬಂದಿತು.
- ಇಕ್ಕೇರಿ, ಬಿದನೂರು, ಭುವನಗಿರಿಗಳು ಇವರ ರಾಜಧಾನಿಗಳು.
- ವೀರಶೈವ ಧರ್ಮೀಯರಾದ ಇವರ ಕುಲದೇವರು ರಾಮೇಶ್ವರ.
- ಗಂಡಭೇರುಂಡ ಇವರ ರಾಜ ಲಾಂಛನವಾಗಿತ್ತು.
- ಚೌಡಪ್ಪ ಮತ್ತು ಭದ್ರಪ್ಪರು ಕೆಳದಿ ಸಂಸ್ಥಾನದ ಸ್ಥಾಪಕರು.
- **ಚೌಡಪ್ಪ ನಾಯಕ** (**1499-1514**) ನಿಗೆ ಶ್ರೀಕೃಷ್ಣ ದೇವರಾಯನು 'ಕೆಳದಿ ಮೂಲ ಸಂಸ್ಥಾನದ ಮನ್ನೇಯ ಚೌಡಪ್ಪ ನಾಯಕ ಎಂಬ ಬಿರುದು ನೀಡಿ ಗೌರವಿಸಿದನು. ಇವನು ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಹಿಸಿದನು.
- **ಸದಾಶಿವ ನಾಯಕ** (**1714-1716**) ನು ವಿಜಯನಗರದ ಕೃಷ್ಣ ದೇವರಾಯ ಹಾಗೂ ರಾಮರಾಯರ ಅಮರ ನಾಯಕನಾಗಿದ್ದು ನಿಷ್ಠೆಯಿಂದ ಇದ್ದನು. ರಾಮರಾಯನು ಇವನಿಗೆ ಬರಿದ್‌ಷಾತುಷಹಾ ಎಂಬ ಮುದ್ರೆಯುಂಗುರ ನೀಡಿ ರಾಮನಾಯಕ ಬಿರುದು ಧರಿಸಲು ಹಕ್ಕು ನೀಡಿದನು.

ಚಿಕ್ಕ ಸಂಕಣ್ಣ ನಾಯಕ. (1559-1570)

- ಇವನು ಇಕ್ಕೇರಿಯಲ್ಲಿ ಭವ್ಯ ಅರಮನೆ ಕಟ್ಟಿಸಿದನು.
- ಇವನು ರಾಮರಾಯನ ಪರವಾಗಿ ತಾಳಿಕೋಟೆ ಕದನದಲ್ಲಿ ಹೋರಾಡಿದನು.
- **ವೆಂಕಟಪ್ಪ ನಾಯಕ(1582-1679)**ನು ಮೆಣಸಿನ ರಾಣಿ ಎಂದು ಸೋಲಿಸಿದನು. ಇವನಿಗೆ ಶೃಂಗೇರಿಯ ಪುನರ್‌ನಿರ್ಮಾಪಕ ಎಂಬ ಬಿರುದು ಇತ್ತು.
- **ವೀರಭದ್ರನಾಯಕ(1624-1645)**ನು 1639ರಲ್ಲಿ ತನ್ನ ರಾಜಧಾನಿಯನ್ನು ಇಕ್ಕೇರಿಯಿಂದ ಬಿದನೂರಿಗೆ ವರ್ಗಾಯಿಸಿದನು.

ಶಿವಪ್ಪ ನಾಯಕ (1645-1660)

- ಶಿವಪ್ಪ ನಾಯಕನು ಕೆಳದಿ ಅರಸರ ಅತ್ಯಂತ ಪ್ರಸಿದ್ಧ ದೊರೆ
- ಇವನು ಶ್ರೀ ರಂಗಪಟ್ಟಣದ ಮೇಲೆ ಮುತ್ತಿಗೆ ಹಾಕಿ ದೊಡ್ಡದೇವರಾಜರ ಸೇನಾನಿ ಹಂಪರಾಜಯ್ಯನನ್ನು ಸೋಲಿಸಿ 'ಇಕ್ಕೇರಿಯ ಪಿಂಡ ಮೈಸೂರಿನ ಮಿಂಡ' ಎಂಬ ಬಿರುದು ಪಡೆದನು.
- ವಿಜಯನಗರದ ಶ್ರೀರಂಗರಾಯನು ಶಿವಪ್ಪನಿಗೆ ರಾಮಭಾಣ ಎಂಬ ಆನೆ, ಅ[illegible] ಆಭರಣಗಳು ಮತ್ತು ಜಗತ್ ಝುಂಡಾ ಎಂಬ ಛತ್ರಿಯ[illegible]ರವಿಸಿದನು.
- ಶಿವಪ್ಪನಾಯಕನು [illegible]ದಲ್ಲಿ 'ಶಿವಪ್ಪನಾಯಕನ ಶಿಸ್ತು' ಎಂಬ ಭೂ ಸುಧಾರಣೆಗೆ ಹೆಸರು ವಾಸಿಯಾಗಿದ್ದಾನೆ.
- ನಂತರ ಬಂದ ಭದ್ರಪ್ಪ ನಾಯಕನು ಶಿವರಾಜಪುರ, ವೆಂಕಟಪುರ, ಭದ್ರಪುರ ಎಂಬ 3 ಅಗ್ರಹಾರಗಳನ್ನು ನಿರ್ಮಿಸಿದನು. ಕೊಲ್ಲೂರು ಮೂಕಾಂಬಿಕಾ ದೇವಾಲಯಕ್ಕೆ ಧಾನದತ್ತಿ ನೀಡಿದನು.

ಚೆನ್ನಮ್ಮಾಜಿ (1671-1697)

- ಸೋಮಶೇಖರ ನಾಯಕನ ರಾಣಿಯಾದ ಚೆನ್ನಮ್ಮಾಜಿ ಕೆಳದಿಯನ್ನಾಳಿದ ಅತ್ಯಂತ ವೀರ ಮಹಿಳೆ.

- ಇವಳು ಶಿವಾಜಿಯ 2ನೇ ಮಗ ರಾಜರಾಮನಿಗೆ ಕೆಳದಿಯಲ್ಲಿ ಆಶ್ರಯ ನೀಡಿದ್ದರಿಂದ ಮೊಗಲರೊಡನೆ ಯುದ್ಧ ಮಾಡಬೇಕಾಯಿತು.
- ಮೊಗಲರಿಗೂ ಈಕೆಗೂ ಭೀಕರ ಯುದ್ಧ ನೆಡೆದು ಔರಂಗಜೇಬನು ಸೋತನು.ಹೀಗೆ ಮರಾಠ ರಾಜ್ಯ ರಕ್ಷಕಳಾದಳು.
- ಕ್ರಿ.ಶ. 1763ರಲ್ಲಿ ಹೈದರಾಲಿಯು ಬಿದನೂರಿಗೆ ಮುತ್ತಿಗೆ ಹಾಕಿ 3 ನೇ ಸೋಮೇಶ್ವರ ನಾಯಕನನ್ನು ಬಂಧಿಸಿ ಬಿದನೂರನ್ನು ಮೈಸೂರಿಗೆ ಸೇರಿಸಿಕೊಂಡನು.

ಕೆಳದಿ ಅರಸರ ಕೊಡುಗೆಗಳು.

- ಇವರು ಆಡಳಿತ ಅನುಕೂಲಕ್ಕಾಗಿ ರಾಜ್ಯವನ್ನು ರಾಷ್ಟ್ರ, ಸೀಮೆ, ನಾಡು, ಕಂಪನ ಮತ್ತು ಗ್ರಾಮಗಳಾಗಿ ವಿಂಗಡಿಸಿದ್ದರು.
- ವಿಜಯ ನಗರದ ರಾಜರು ರೂಢಿಸಿಕೊಂಡಿದ್ದ ರಾಯರೇಖಾ ಕಂದಾಯ ನಿಗದಿಯನ್ನು ಇವರು ಮುಂದುವರಿಸಿದರು.

ಶಿವಪ್ಪ ನಾಯಕನ ಕಂದಾಯ ನೀತಿ.

- ಶಿವಪ್ಪನ ಕಂದಾಯ ಆಚರಣೆಯು ಭೂಮಿಯ ವರ್ಗೀಕರಣ ಮತ್ತು ಕಂದಾಯ ನಿಷ್ಕರ್ಷೆ ಎಂಬ 2 ಲಕ್ಷಣಗಳಿಂದ ಕೂಡಿತ್ತು.

1 **ಭೂಮಿಯ ವರ್ಗೀಕರಣ–** ಭೂಮಿಯನ್ನು 5 ವಲಯಗಳಾಗಿ ವಿಂಗಡಿಸಲಾಗಿತ್ತು.

1) **ಉತ್ತಮ ಭೂಮಿ–** ಫಲವತ್ತತೆ ಮತ್ತು ನೀರಾವರಿ ಹೊಂದಿದ ಭೂಮಿ.
2) **ಮಧ್ಯಮಭೂಮಿ–** ಫಲವತ್ತತೆ ಮತ್ತು ಮಳೆಯಾಶ್ರಿತ ಭೂಮಿ.
3) **ಕನಿಷ್ಠ ಭೂಮಿ–** ಕಡಿಮೆ ಮಳೆಯಾಗುವ ಕಪ್ಪು ಮಣ್ಣಿನ ಭೂಮಿ.
4) ಅಧಮ ಭೂಮಿ– ಕಡಿಮೆ ಮಳೆಯಾಗುವ ಕಲ್ಲು ಬಂಡೆಗಳಿಂದ ಕೂಡಿದ ಭೂಮಿ.
5) **ಅಧಮಾಧಮ –** ಸಮುದ್ರ ಮರಳು ಆವೃತ ಭೂಮಿ.

- ಗದ್ದೆ,ಹೊಲ, ಬಗಾಯ್ತ್, ಅರಣ್ಯ ಮತ್ತು ಕುಮ್ರಿ ಎಂಬ 5 ಬಗೆಯಲ್ಲಿ ಕಂದಾಯ ನಿಗದಿ ಪಡಿಸುತ್ತಿದ್ದರು.

2. **ಕಂದಾಯ ನಿಷ್ಕರ್ಷೆ –** ಶಿವಪ್ಪನು ಸರ್ಕಾರಿ ವೆಚ್ಚದಲ್ಲಿ ಪ್ರತಿ ಭೂಮಿಯನ್ನು 12 ವರ್ಷಗಳ ಕಾಲ ಕೃಷಿ ಮಾಡಿಸಿದನು. ಒಟ್ಟು ಉತ್ಪನ್ನದ 1/3 ಭಾಗದಷ್ಟು ಕಂದಾಯ ನಿಗಧಿ ಮಾಡಿದನು. ಇವನ ಕಂದಾಯ ನೀತಿಯು ರಾಜತೋದರ ಮಲ್ಲನ ಕಂದಾಯ ನಿಗಧಿಗಿಂತ ಹೆಚ್ಚು ಸುಧಾರಿತ ಕ್ರಮವಾಗಿತ್ತು.

- ಕೆಳದಿ ಅರಸರ ಕಾಲದಲ್ಲಿ ಚಿನ್ನದ ನಾಣ್ಯಗಳಾದ ವರಹಾ, ಗದ್ಯಾಣ. ಹೊನ್ನು, ಧರಣಿ ಚಲಾವಣೆಯಲ್ಲಿದ್ದವು.
- ಬೆಳ್ಳಿಯ ನಾಣ್ಯಗಳಾದ ಹಣ, ಬೇಳೆ, ವಿಸಾ, ತಾರಾ ಹಾಗೂ ತಾಮ್ರದ ನಾಣ್ಯವಾದ ಕಾಸು ಚಲಾವಣೆಯಲ್ಲಿದ್ದವು.
- **ಸಾಹಿತ್ಯ–** ದೊರೆ ಬಸಪ್ಪ ನಾಯಕನು ಶಿವತತ್ವ ರತ್ನಾಕರ, ಸುಭಾಷಿತ, ಸೂಕ್ತಿ ಸುಧಾಕರ,
- ವೆಂಕಟಪ್ಪನಾಯಕನು ವೀರಶೈವ ಸುಧಾನಿಧಿ, 2ನೇ ಬಸಪ್ಪ ನಾಯಕನು ಶೈವಸಂಜೀವಿನಿ, ಲಿಂಗಣ್ಣ ಕವಿ ಕೆಳದಿ ನೃಪವಿಜಯ, ಪಾರ್ವತಿ ಪರಿಣಯ ಹಾಗೂ ಗಂಗಾಧೇವಿ ಕೆಳದಿ ರಾಜ್ಯಾಭ್ಯುದಯಂ ಕೃತಿಗಳನ್ನು ರಚಿಸಿದರು.
- ಕೆಳದಿ ನಾಯಕರ ಕಾಲದಲ್ಲಿ ದೊಡ್ಡ ಸಂಕಣ್ಣನು ಕೆಳದಿಯ ವೀರಭದ್ರೇಶ್ವರ, ಇಕ್ಕೇರಿ ಅಘೋರೇಶ್ವರ ಮತ್ತು ವೆಂಕಟಪ್ಪನು ಕೊಲ್ಲೂರು ಮೂಕಾಂಬಿಕ ದೇವಾಲಯಗಳನ್ನು ಕಟ್ಟಿಸಿದನು. ಇವರ ವಾಸ್ತುಶಿಲ್ಪದಲ್ಲಿ ದ್ರಾವಿಡ ಮತ್ತು ಹೊಯ್ಸಳರ ಶೈಲಿ ಮಿಶ್ರಣವಿದೆ.

40. ಯಲಹಂಕದ ನಾಡ ಪ್ರಭುಗಳು (The Yelahanka Nadaprabhus)

- ನಾಡಪ್ರಭುಗಳು ವಿಜಯನಗರದ ಸಾಮಂತರಾಗಿ (1418–1728) ಆಳ್ವಿಕೆ ಮಾಡಿದರು.
- ನಾಡಪ್ರಭುಗಳನ್ನು ಆವತಿ ಪ್ರಭುಗಳು ಮತ್ತು ಮೊರಸು ಒಕ್ಕಲಿಗರು ಎನ್ನುವರು.
- ಕೆಂಪಮ್ಮ ಇವರ ಕುಲದೇವತೆ.
- ಯಲಹಂಕ. ಮಾಗಡಿ, ಬೆಂಗಳೂರು ಮತ್ತು ಆವತಿ ಇವರ ರಾಜಧಾನಿಗಳು.
- ರಣಭೈರೇಗೌಡ ಈ ಸಂತಿಯ ಸ್ಥಾಪಕ. ಇವನ ಮಗ ಜಯಗೌಡನು ಯಲಹಂಕಕ್ಕೆ ಪಾಳೆಯ ಪಟ್ಟವನ್ನು ಸ್ಥಾಪಿಸಿ ಯಲಹಂಕ ನಾಡ ಪ್ರಭು ಎಂಬ ಬಿರುದು ಧರಿಸಿದನು.

ಒಂದನೇ ಕೆಂಪೇಗೌಡ.(ಕ್ರಿ.ಶ.1513–1569)

- ಇವನು ಯಲಹಂಕ ನಾಡಪ್ರಭುಗಳ ಪ್ರಸಿದ್ಧ ಅರಸ.
- ಇವನು ವಿಜಯನಗರದ ಕೃಷ್ಣ ದೇವರಾಯ ಹಾಗೂ ಶ್ರೀರಂಗರಾಯನ ಸಮಕಾಲೀನ ದೊರೆ.
- ಕೆಂಪೇಗೌಡನು ಕ್ರಿ.ಶ.1537ರಲ್ಲಿ ...

ಸ್ಥಾಪಿಸಿದನು.

- ಹೊಯ್ಸಳರ 2 ನೇ ಬಲ್ಲಾಳನು ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಅವನಿಗೆ ಮುದುಕಿಯೊಬ್ಬಳು ತಿನ್ನಲು ಬೆಂದ ಕಾಳುಗಳನ್ನು ಕೊಟ್ಟಳು ಹಾಗಾಗಿ ಇವನು ಬೆಂದ ಕಾಳೂರು ಎಂದು ಕರೆದನು.
- ಶಿವಗಂಗೆಯನ್ನು ದಕ್ಷಿಣ ಕಾಶಿ ಎಂದು ಕರೆಯುವರು.

2ನೇ ಕೆಂಪೇಗೌಡ.

- ಮಾಗಡಿ ಕೆಂಪೇಗೌಡ ಎಂದು ಪ್ರಸಿದ್ಧನಾದ ಇವನ ರಾಜಧಾನಿ ಮಾಗಡಿಯಾಗಿತ್ತು.
- 1638ರಲ್ಲಿ ಬಿಜಾಪುರ ಸುಲ್ತಾನರು ಬೆಂಗಳೂರಿನ ಮೇಲೆ ಆಕ್ರಮಣ ಮಾಡಿದ್ದರಿಂದ ಇವನು ತನ್ನ ರಾಜಧಾನಿಯನ್ನು ಬೆಂಗಳೂರಿನಿಂದ ಮಾಗಡಿಗೆ ವರ್ಗಾಯಿಸಿದನು.
- 1728ರಲ್ಲಿ ಮೈಸೂರಿನ ಧಳವಾಯಿ ದೇವರಾಜಯ್ಯನು ಕೆಂಪವೀರಪ್ಪಗೌಡನನ್ನು ಸೆರೆಹಿಡಿದು ಶ್ರೀರಂಗಪಟ್ಟಣದಲ್ಲಿ ಬಂಧಿಸಿದನು. ಅವನು ಅಲ್ಲಿಯೇ ಕಾಲವಾದನು. ನಂತರ ಮಾಗಡಿ ರಾಜ್ಯವು ಮೈಸೂರು ಸಂಸ್ಥಾನದಲ್ಲಿ ವಿಲೀನವಾಯಿತು.

41. ಮೈಸೂರಿನ ಒಡೆಯರು (1399-1761) (The Odeyars of Mysore)

ಮೂಲ (Origin)

- ವಿಜಯನಗರ ಸಾಮ್ರಾಜ್ಯದ ಪತನದ ನಂತರ ದಕ್ಷಿಣ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ, ರಾಜ ಮನೆತನ ಎಂದರೆ ಮೈಸೂರು ಒಡೆಯರು.
- ಮಾರ್ಕ್ ವಿಲ್ಕ್ಸ್‌ರವರು ಒಡೆಯರ್ ಎಂಬ ಪದವು 33 ಗ್ರಾಮಗಳನ್ನೊಳಗೊಂಡ ಮೈಸೂರು ಪ್ರಾಂತ್ಯಾಧಿಪತಿಯನ್ನು ಸೂಚಿಸುತ್ತಿತ್ತು ಎಂದಿದ್ದಾರೆ.
- ಒಡೆಯರ್ ವಂಶದ ಸ್ಥಾಪಕರಾದ **ಯದುರಾಯ** ಮತ್ತು **ಕೃಷ್ಣರಾಯರು** ಉತ್ತರದ ಶ್ರೀಕೃಷ್ಣನ **ಯದು ವಂಶಕ್ಕೆ** ಸೇರಿದವರು.
- **ಮಹಿಷಮಂಡಲ** ಮೈಸೂರಿನ ಪ್ರಾಚೀನ ಹೆಸರಾಗಿದೆ.
- ಒಡೆಯರ ಪೂರ್ವಜರು ಯದುವಂಶೀಯರು ಮತ್ತು ಚಂದ್ರವಂಶೀಯರೆಂದು ಹಾಗೂ ಉತ್ತರದ ದ್ವಾರಕದಿಂದ ಬಂದವರೆಂದು ಹೇಳಲಾಗಿದೆ.

ರಾಜಕೀಯ ಇತಿಹಾಸ

- **ಶ್ರೀರಂಗಪಟ್ಟಣ**ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು **ಹದಿನಾಡ**ನ್ನು ಆಳುತ್ತಿದ್ದ ಚಾಮರಾಜನು 1399ರಲ್ಲಿ ನಿಧನನಾದನು.
- ಚಾಮರಾಜನ ರಾಣಿಯ ಇಚ್ಛೆಯಂತೆ ಅವನ ಮಗಳಾದ **ದೇವರಾಜಮ್ಮಣ್ಣಿ**ಯನ್ನು ಯದುರಾಯನು ವಿವಾಹವಾಗಿ **ಒಡೆಯರ್** ಎಂಬ ಬಿರುದು ಪಡೆದನು. ಹೀಗೆ ಯದುರಾಯನು **ಒಡೆಯರ್ ವಂಶವನ್ನು 1399**ರಲ್ಲಿ ಸ್ಥಾಪಿಸಿದನು.
- ಯದುರಾಯನಿಗೆ ಬೆಟ್ಟದ ಚಾಮರಾಜ ಮತ್ತು ಚಾಮರಾಜ ಒಡೆಯರ್ ಎಂಬ ಇಬ್ಬರು ಮಕ್ಕಳಿದ್ದರು.

ರಾಜ ಒಡೆಯರ್

- ರಾಜ ಒಡೆಯರ್ **ಈ ವಂಶದ ಮೊದಲ ಪ್ರಸಿದ್ಧ ದೊರೆ**. ಇವನಿಗೆ **ಮಹಾರಾಜ** ಎಂಬ ಬಿರುದಿತ್ತು.
- ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ರಾಜಪ್ರತಿನಿಧಿ **ತಿರುಮಲನು** ಅತಿ ದುರ್ಬಲನಾಗಿದ್ದ. ಹಾಗಾಗಿ ವೆಂಕಟನು ಶ್ರೀರಂಗಪಟ್ಟಣವನ್ನು 1612ರಲ್ಲಿ ರಾಜ ಒಡೆಯರಿಗೆ ಅನುವಂಶಿಕ ಸ್ವತ್ತಾಗಿ ನೀಡಿದನು. ಇದು ಒಡೆಯರ ರಾಜಧಾನಿಯಾಗುತ್ತದೆ.
- ರಾಜ ಒಡೆಯರ್ ವಿಜಯನಗರದ ವೈಸರಾಯ್ ಶ್ರೀರಂಗನಿಂದ ಶ್ರೀರಂಗಪಟ್ಟಣದ ಸಿಂಹಾಸನವನ್ನು ಆಕ್ರಮಿಸಿಕೊಂಡನು.
- ಶ್ರೀರಂಗನ ಪತ್ನಿ ರಂಗಮ್ಮನ ವಜ್ರ ದೊಡವೆಗಳ ಮೇಲೆ ಕಣ್ಣು ಹಾಕಿ ಅವುಗಳನ್ನು ಪಡೆಯಲು ಸೈನಿಕರನ್ನು ಕಳುಹಿಸಿದನು. ಸೈನಿಕರ ಆಕ್ರಮಣಕ್ಕೆ ಗುರಿಯಾಗುವುದಕ್ಕಿಂತ ಪ್ರಾಣ ಬಿಡುವುದೇ ಲೇಸೆಂದು ರಂಗಮ್ಮ ತಲಕಾಡಿನ ಕಾವೇರಿ ದಡದ ಮಾಲಿಂಗಿಯ ಸುಳಿಯಲ್ಲಿ ಬಿದ್ದು **ತಲಕಾಡು ಮರಳಾಗಲಿ, ಮಾಲಿಂಗಿ ಮಡುವಾಗಲಿ, ಮೈಸೂರು ಮಹಾರಾಜರಿಗೆ ಮಕ್ಕಳಾಗದಿರಲಿ** ಎಂಬ ಮೂರು ಶಾಪಗಳನ್ನು ಕೊಟ್ಟು ಪ್ರಾಣ ಬಿಟ್ಟಳು.
- **ರಣಕೇಸರಿ** ಎಂದು ಪ್ರಖ್ಯಾತನಾದ ರಾಜ ಒಡೆಯರ್ ಸೇನಾಡಳಿತದ ಗ್ರಾಮಾಡಳಿತದ ಸುಧಾರಣೆಗೆ ಗ್ರಾಮಾಧಿಕಾರಿಗಳನ್ನು ಕಂದಾಯ ವಸೂಲಿಗೆ ಕಂದಾಯಾಧಿಕಾರಿಗಳನ್ನು ನೇಮಿಸಿದನು.
- ಇವನ ಆಸ್ಥಾನದಲ್ಲಿದ್ದ **ಸಿಂಗರಾರ್ಯನು ಶ್ರೀರಂಗಮಹಾತ್ಮೆ** ಮತ್ತು **ತಿರುಮಲ ಅಯ್ಯಂಗಾರರು ಕರ್ಣವೃತ್ತಾಂತ ಕಥೆಗಳನ್ನು** ರಚಿಸಿದರು.
- 1610ರಲ್ಲಿ ರಾಜ ಒಡೆಯರ್ ವಿಜಯನಗರದ ಮಾದರಿಯಲ್ಲಿ **ಮೈಸೂರು ದಸರಾ ಆಚರಣೆ**ಯನ್ನು ಆರಂಭಿಸಿದರು.
- ರಾಜ ಒಡೆಯರ್‌ನನ್ನು **ಆಧುನಿಕ ಮೈಸೂರು ರಾಜ್ಯದ ಮೊದಲ ನಿರ್ಮಾಪಕ** ಎನ್ನುವರು.

6ನೇ ಚಾಮರಾಜ ಒಡೆಯರ್ (ಕ್ರಿ.ಶ. 1617–1637)

- ರಾಜ ಒಡೆಯರ್‌ನ ಉತ್ತರಾಧಿಕಾರಿಯಾಗಿ ಅವನ ಮೊಮ್ಮಗನಾದ 6ನೇ ಚಾಮರಾಜನು ಅಧಿಕಾರಕ್ಕೆ ಬಂದನು.
- ಇವನ ಕಾಲದಲ್ಲಿ ಚನ್ನಪಟ್ಟಣ ಮತ್ತು ಇಕ್ಕೇರಿ ಸಂಸ್ಥಾನಗಳು ಪತನವಾಗಿ ಮೈಸೂರು ರಾಜ್ಯ ವಿಸ್ತರಿಸಿತು.
- ಇವನು ಕಾವೇರಿ ನದಿಗೆ ಒಂದು ಅಣೆಕಟ್ಟೆ, ಮೇಲುಕೋಟೆಯಲ್ಲಿ ಒಂದು ಕೆರೆ ಹಾಗೂ ಈಜುಕೊಳ ನಿರ್ಮಿಸಿದನು.
- ಇವನು **ಶ್ರೀರಂಗಪಟ್ಟಣದಲ್ಲಿ ಶಸ್ತ್ರಾಗಾರ**ವನ್ನು ನಿರ್ಮಿಸಿದನು.
- ಸ್ವತಃ ಕವಿಯಾದ ಚಾಮರಾಜನು ವಾಲ್ಮೀಕಿ ರಾಮಾಯಣದ ಕನ್ನಡ ಗದ್ಯ ರೂಪಾಂತರವಾಗಿ ಶ್ರೀ ಚಾಮರಾಜೋಕ್ತಿ ವಿಲಾಸವನ್ನು ಬರೆದರು.
- ಚಾಮರಾಜನ ಆಸ್ಥಾನದಲ್ಲಿದ್ದ **ರಾಮಚಂದ್ರನು ಅಶ್ವಶಾಸ್ತ್ರ, ಪೆದ್ದಣ್ಣನು** ಹಯಸಾರ ಸಮುಚ್ಚಯ ಮತ್ತು ಬ್ರಹ್ಮೋತ್ತರಖಂಡ ಕೃತಿಗಳನ್ನು ಬರೆದರು.
- ಇವನು ಶ್ರವಣಬೆಳಗೊಳದ ಧರ್ಮಾಚರಣೆಗಳಿಗೆ ದಾನದತ್ತಿಗಳನ್ನು ನೀಡಿದನು.
- ಇವನ ಕಾಲದಲ್ಲಿ ಕರ್ನಾಟಕದ ಚಟುವಟಿಕೆಗಳೆಲ್ಲಾ **ಪೆನುಗೊಂಡದಿಂದ ಶ್ರೀರಂಗಪಟ್ಟಣಕ್ಕೆ** ವರ್ಗವಾದವು.

ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ. 1638–1659)

- ಇವರ ಕಾಲದಲ್ಲಿ ಬಿಜಾಪುರದ ಮಹಮದ್ ಆದಿಲ್‌ಷಾನು ಕರ್ನಾಟಕದ ಲೂಟಿಗಾಗಿ ತನ್ನ ದಳಪತಿ ರಣದುಲ್ಲಾಖಾನನ್ನು ಕಳುಹಿಸಿದನು. ಈ ಆದಿಲ್‌ಷಾಹಿಗಳ ದಾಳಿಗಳಿಂದ ನರಸರಾಜರು ಶ್ರೀರಂಗಪಟ್ಟಣವನ್ನು ರಕ್ಷಿಸಿದರು.
- 1647ರಲ್ಲಿ ತುರುವೇಕೆರೆ ಬಳಿ ನಡೆದ ಘೋರ ಯುದ್ಧದಲ್ಲಿ ಆದಿಲ್‌ಷಾ ಸೈನ್ಯ ನಿರ್ನಾಮವಾಯಿತು.
- ವಿಜಯನಗರದ ಅರಸ ಶ್ರೀರಂಗನಿಗೆ ನರಸರಾಜರು ಆಶ್ರಯ ನೀಡಿದ್ದರು. ಇದರೊಂದಿಗೆ **ವಿಜಯನಗರದೊಂದಿಗಿದ್ದ ಸಾಮಂತತ್ವವನ್ನು ಕಿತ್ತೊಗೆದು ಪೂರ್ಣ ಸ್ವಾತಂತ್ರ್ಯ ಪಡೆದರು.**
- ನರಸರಾಜರು **ಶ್ರೀರಂಗಪಟ್ಟಣದಲ್ಲಿ ಟಂಕಸಾಲೆ ತೆರೆದು ಕಂಠೀರವ ಪಣ ನಾಣ್ಯ**ವನ್ನು ಅಚ್ಚು ಹಾಕಿಸಿದರು.

ಮೈಸೂರಿನ ಕೋಟೆ ಮತ್ತು ಅರಮನೆ, ಶ್ರೀರಂಗಪಟ್ಟಣ ಬಳಿಯ ಬಂಗಾರದೊಡ್ಡಿ ಎಂಬ ನಾಲೆಯನ್ನು ನಿರ್ಮಿಸಿದರು.

- ನರಸರಾಜರ ಆಸ್ಥಾನದಲ್ಲಿದ್ದ **ಗೋವಿಂದವೈದ್ಯನು** ಕಂಠೀರವ ನರಸರಾಜ ವಿಜಯ ಮತ್ತು **ತಿಮ್ಮರಸನು** ಮಾರ್ಕಂಡೇಯ ರಾಮಾಯಣ, **ಭಾಸ್ಕರನು** ಬೆಹರಗಣಿತ ಕೃತಿಗಳನ್ನು ಬರೆದರು.
- **ಶ್ರೀರಂಗಪಟ್ಟಣ ಶಾಸನವು ಹೇಳುವಂತೆ** ತುರ್ಕರ ಉಪಟಳದಿಂದ ಮೈಸೂರನ್ನು ರಕ್ಷಿಸಿದ ನರಸರಾಜರನ್ನು ಶ್ರೀಕೃಷ್ಣನ ಅವತಾರವೆಂದಿದೆ.

ದೊಡ್ಡದೇವರಾಜ ಒಡೆಯರ್ (ಕ್ರಿ.ಶ. 1659-73)

- ದೇವರಾಜರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ ಇಕ್ಕೇರಿಯ **ಶಿವಪ್ಪನಾಯಕನನ್ನು** ಸೋಲಿಸಿದರು.
- ಬೇಲೂರಿನಲ್ಲಿ ಕೆಳದಿ ನಾಯಕರ ಆಶ್ರಯ ಪಡೆದಿದ್ದ ವಿಜಯನಗರದ ರಾಜ ಮೂರನೇ ಶ್ರೀರಂಗನನ್ನು ಅಲ್ಲಿಂದ ಹೊರದೂಡಿ ಹಾಸನ ಮತ್ತು ಸಕ್ಕರೆ ಪಟ್ಟಣಗಳನ್ನು ವಶಪಡಿಸಿಕೊಂಡಿದ್ದುದು ವಿಜಯನಗರ ಸಾಮ್ರಾಜ್ಯದ ಅಂತ್ಯ ಸೂಚಕವಾಯಿತು.
- ದೊಡ್ಡದೇವರಾಜರ ಬಿರುದುಗಳು – ಮೂರು ಮನ್ನೆಯರ ಗಂಡ, ಹಿಂದೂರಾಯ ಸುರತ್ರಾಣ ಮತ್ತು ಪರಕಾಯ ಭಯಂಕರ.
- ಇವರು **ಚಾಮುಂಡಿ ಬೆಟ್ಟಕ್ಕೆ ಸಾವಿರ ಮೆಟ್ಟಿಲು** ಹಾಕಿಸಿ ಹಾದಿಯಲ್ಲಿ ನಂದಿ ವಿಗ್ರಹ ಸ್ಥಾಪಿಸಿದರು.
- ಇವರ ಆಸ್ಥಾನದಲ್ಲಿದ್ದ ಪಂಡಿತ ಚಾಮಯ್ಯನು ದೊಡ್ಡ ದೇವರಾಜ ಸಾಂಗತ್ಯ ಕೃತಿ ಬರೆದನು.

ಚಿಕ್ಕದೇವರಾಜ ಒಡೆಯರ್ (ಕ್ರಿ.ಶ. 1673-1704)

- ಚಿಕ್ಕದೇವರಾಜ ಒಡೆಯರ್ ಮೈಸೂರು ಒಡೆಯರ ಅತ್ಯಂತ ಪ್ರಸಿದ್ಧ ದೊರೆ.
- 1677ರಲ್ಲಿ ಶಿವಾಜಿಯು ಬೆಂಗಳೂರಿನ ಮೇಲೆ ಹಕ್ಕು ಸ್ಥಾಪಿಸಲು ಬಂದು ದೊಡ್ಡಬಳ್ಳಾಪುರ, ಹೊಸಕೋಟೆ, ಶಿರಾ, ಬೆಂಗಳೂರುಗಳನ್ನು ಆಕ್ರಮಿಸಿ, ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದಾಗ ಅವನನ್ನು ಸೋಲಿಸಿದ ಒಡೆಯರ್ **ಅಪ್ರತಿಮ ವೀರ** ಎಂಬ ಬಿರುದು ಗಳಿಸಿದರು.
- 1682ರಲ್ಲಿ ಚಿಕ್ಕದೇವರಾಜರು ಸಾಂಬಾಜಿ, ಇಕ್ಕೇರಿ ನಾಯಕ ಗೊಲ್ಕೊಂಡ ಮತ್ತು ಬಿಜಾಪುರ ಸುಲ್ತಾನರ ಸಂಯುಕ್ತ ಸೈನ್ಯವನ್ನು ಬಾಣವಾರ ಎಂಬಲ್ಲಿ ಸೋಲಿಸಿ **ಮಹಾರಾಷ್ಟ್ರ ಭೂಪಾಲ ಜಾಲರಿಘು** ಎಂಬ ಬಿರುದು ಪಡೆದರು.
- ಮೊಗಲ್ ಸೇನಾನಿ **ಖಾಸಿಂಖಾನನು** 1687ರಲ್ಲಿ ಬೆಂಗಳೂರನ್ನು ಆಕ್ರಮಿಸಿ ಅದನ್ನು ಒಡೆಯರಿಗೆ ಮೂರು ಲಕ್ಷ ರೂಪಾಯಿಗಳಿಗೆ ಮಾರಿದನು.
- ಮೊಗಲ್ ಚಕ್ರವರ್ತಿ **ಔರಂಗಜೇಬನು ಚಿಕ್ಕದೇವರಾಜ** ಒಡೆಯರ್‌ನ ಸಮಕಾಲೀನ ದೊರೆ.
- ಚಿಕ್ಕದೇವರಾಜರು ತನ್ನ **ಮಂತ್ರಿ ಲಿಂಗಣ್ಣಯ್ಯನನ್ನು** ಕಾಣಿಕೆಗಳೊಂದಿಗೆ ರಾಯಭಾರಿಯಾಗಿ ಮೊಗಲ್ ಆಸ್ಥಾನಕ್ಕೆ ಕಳುಹಿಸಿದ್ದರು.
- ಔರಂಗಜೇಬನು **ಲಿಂಗಣ್ಣಯ್ಯನನ್ನು** ಸ್ವಾಗತಿಸಿ ಚಿಕ್ಕದೇವರಾಜರಿಗೆ **ರಾಜ ಜಗದ್ದೇವ** ಎಂಬ ಬಿರುದು ನೀಡಿದನು.
- ದಖ್ಖನ್ನಿನ ಮರಾಠರ ದಾಳಿಯ ವಿರುದ್ಧ ರಾಜ ಒಡೆಯರು ಔರಂಗಜೇಬನೊಂದಿಗೆ ಮೈತ್ರಿ ಮಾಡಿಕೊಂಡರು. ಔರಂಗಜೇಬನು ಮೈತ್ರಿಯ ಸಂಕೇತವಾಗಿ ಒಡೆಯರಿಗೆ ಒಂದು ಹಂತದ ಸಿಂಹಾಸನ ನೀಡಿ ಕರ್ನಾಟಕದ ಮೇಲಿನ ಅಧಿಪತ್ಯವನ್ನು ಮಾನ್ಯ ಮಾಡಿದನು.

ಆಡಳಿತ ಸುಧಾರಣೆಗಳು

- ಮೊದಲ ಬಾರಿಗೆ ಮೈಸೂರಿನಲ್ಲಿ **ಅಂಚೆ ಮತ್ತು ಪೋಲೀಸ್** ಪದ್ಧತಿಗಳನ್ನು ಜಾರಿಗೊಳಿಸಿದರು.
- ಮೈಸೂರಿನಲ್ಲಿ **ಅಠಾರಾ ಕಛೇರಿಯ** ಸ್ಥಾಪನೆ.
- ಕೇಂದ್ರಾಡಳಿತದ ಉಸ್ತುವಾರಿಗೆ **ಪಂಚ ಸಚಿವರಿರುವ ಮಂತ್ರಿಮಂಡಲ** ರಚನೆ.
- ಕಂದಾಯ ಪದ್ಧತಿಯನ್ನು ಸುಧಾರಿಸಿ ಭ್ರಷ್ಟಾಚಾರ ತಡೆದು ಸುಮಾರು **9 ಕೋಟಿ ರೂಪಾಯಿ** ಉಳಿತಾಯ ಮಾಡಿ ಚಿಕ್ಕದೇವರಾಜರು **'ನವಕೋಟಿ ನಾರಾಯಣ'** ಎಂಬ ಬಿರುದು ಪಡೆದರು.
- ಫ್ರೆಂಚರೊಂದಿಗೆ ವಾಣಿಜ್ಯ ಒಪ್ಪಂದ ಮಾಡಿಕೊಂಡು ವಿದೇಶಿ ವ್ಯಾಪಾರವನ್ನು ಪ್ರೋತ್ಸಾಹಿಸಿದರು.
- ಗ್ರಾಮಾಡಳಿತ ಸರಳವಾಗಿಸಲು **'ಬಾರ್ಬಾಲೋತಿ ಪದ್ಧತಿ'** ಜಾರಿಗೊಳಿಸಿದರು.
- ಕೃಷಿಗೆ ಆದ್ಯತೆ ನೀಡಿ ಕಾವೇರಿ ನದಿಗೆ ಚಿಕ್ಕ ದೇವರಾಜನಾಲೆ ಮತ್ತು ದೊಡ್ಡ ದೇವರಾಜನಾಲೆ ಕಾಲುವೆಗಳು ಹಾಗೂ ಶ್ರವಣಬೆಳಗೊಳದ ಕೆರೆಯನ್ನು ಕಟ್ಟಿಸಿದರು.

ಧರ್ಮ ಕಲೆ ಮತ್ತು ಸಾಹಿತ್ಯ ಪೋಷಣೆ

- ಚಿಕ್ಕದೇವರಾಜರು **ವೈಷ್ಣವ** ಮತ ಅನುಯಾಯಿಯಾಗಿದ್ದರು.
- ಚೆಲುವನಾರಾಯಣನನ್ನು ಕುರಿತು ಚಿಕ್ಕದೇವರಾಜರು **'ಚಿಕ್ಕದೇವರಾಜ ಭಿನ್ನಪಂ'** ಎಂಬ ಕೃತಿ ಬರೆದರು.
- ಶ್ರವಣಬೆಳಗೊಳದ ಬಾಹುಬಲಿಗೆ ಮಹಾಮಸ್ತಾಭಿಷೇಕವನ್ನು ನಡೆಸಿಕೊಟ್ಟರು.
- ಚಿಕ್ಕದೇವರಾಜರಿಗೆ **ಧರ್ಮಪ್ರಭು** ಎಂಬ ಬಿರುದಿತ್ತು.
- ಇವರು ಮೈಸೂರಿನ ವರಹಾ ದೇವಾಲಯ ಮತ್ತು ಬೆಂಗಳೂರಿನ ಕೋಟೆ ವೆಂಕಟರಮಣ ದೇವಾಲಯಗಳನ್ನು ನಿರ್ಮಿಸಿದರು.
- ಚಿಕ್ಕದೇವರಾಜ ಆಸ್ಥಾನದಲ್ಲಿದ್ದ ಕವಿಗಳೆಂದರೆ

1. **ಮಂತ್ರಿ ತಿರುಮಲಾರ್ಯ** – ಚಿಕ್ಕದೇವರಾಜ ವಂಶಾವಳಿ, ಚಿಕ್ಕದೇವರಾಜ ವಿಜಯ, ಚಿಕ್ಕದೇವರಾಜ ಶತಕ, ಅಪ್ರತಿಮ ವೀರಚರಿತೆ ಕೃತಿಗಳನ್ನು ಬರೆದನು.
2. **ಸಿಂಗರಾರ್ಯ** – ಕನ್ನಡದ ಮೊದಲ ನಾಟಕ ಮಿತ್ರಾವಿಂದ ಗೋವಿಂದ ರಚಿಸಿದರು (ಹರ್ಷನ ರತ್ನಾವಳಿ ನಾಟಕ ಇದರ ಮೂಲ)

3. **ಚಿಕ್ಕೊಪಾಧ್ಯಾಯ** – 'ವಿಷ್ಣುಪುರಾಣ', ಕಂಚಿಮಹಾತ್ಮೆ, ಶ್ರೀರಂಗಮಹಾತ್ಮೆ, ವೆಂಕಟಗಿರಿ ಮಹಾತ್ಮೆ, ಚಿಕ್ಕದೇವರಾಜ ಶೃಂಗಾರ
4. **ಸಂಚಿ ಹೊನ್ನಮ್ಮ** – ಹದಿಬದೆಯ ಧರ್ಮ
5. **ಶೃಂಗಾರಮ್ಮ** – ಪದ್ಮಿಣಿಕಲ್ಯಾಣ ಮತ್ತು ತಲಕಾವೇರಿ ಮಹಾತ್ಮೆ
6. **ಲಕ್ಷ್ಮೀಶ** – 'ಜೈಮಿನಿ ಭಾರತ'
7. **ತಿಮ್ಮರಸ** – ಕ್ಷೇತ್ರಗಣಿತ, ಯದುಗಿರಿ ಮಹಾತ್ಮೆ
8. ಸ್ವತಃ ಕವಿಗಳಾದ ಚಿಕ್ಕದೇವರಾಜರು ಗೀತಗೋಪಾಲ, ಚಿಕ್ಕರಾಜ ಭಿನ್ನಪಂ, ಶೇಷಧರ್ಮ, ಭಾಗವತ ಮತ್ತು ಭಾರತ ಕೃತಿಗಳನ್ನು ರಚಿಸಿದ್ದಾರೆ.

ಚಿಕ್ಕದೇವರಾಜರ ಬಿರುದುಗಳು

- ನವಕೋಟಿ ನಾರಾಯಣ, ಮಹಾರಾಷ್ಟ್ರ ಭೂಪಾಲ ಜಾಲರಿಪು, ತೆಂಕಣರಾಜ, ಕರ್ನಾಟಕ ಚಕ್ರವರ್ತಿ, ಧರ್ಮಪ್ರಭು ಮುಂತಾದವು.

ಎರಡನೇ ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ. 1704–1713)

- ಇವರು ಕಿವುಡ ಮತ್ತು ಮೂಖ ರಾಜರಾಗಿದ್ದರು.
- ಅಧಿಕಾರವೆಲ್ಲವು ದಳವಾಯಿ ದೇವರಾಜಯ್ಯ ಮತ್ತು ಸರ್ವಾಧಿಕಾರಿ ನಂಜರಾಜಯ್ಯರ ಕೈಸೇರಿತು.
- ಕಂಠೀರವ ನರಸರಾಜರ ನಂತರ ಒಂದನೇ ದೊಡ್ಡ ಕೃಷ್ಣರಾಜ ಒಡೆಯರ್ (ಕ್ರಿ.ಶ. 1713–1731) ಹಾಗೂ 7ನೇ ಕೃಷ್ಣರಾಜ ಒಡೆಯರ್ (ಕ್ರಿ.ಶ.1731–1742) ಆಳ್ವಿಕೆ ನಡೆಸಿದರು.

ಚಿಕ್ಕ ಕೃಷ್ಣರಾಜ ಒಡೆಯರ್ (ಕ್ರಿ.ಶ.1734–1766)

- ಇವರ ಕಾಲದಲ್ಲಿ ದಳವಾಯಿಗಳ ಪ್ರಾಬಲ್ಯ ಆರಂಭವಾಗುತ್ತದೆ.
- ಇವರು ಹೈದರಾಲಿಯನ್ನು ದಿಂಡಿಗಲ್ಲಿನ ಫೌಜುದಾರನಾಗಿ ನೇಮಿಸಿದರು.
- ಹೈದರನು ಮೈಸೂರಿನಲ್ಲಿ ಮಧ್ಯಂತರ ಅವಧಿ (1761 ರಿಂದ 1799) ಮುಸ್ಲಿಂ ಪ್ರಭುತ್ವ ಸ್ಥಾಪಿಸಿದನು.

ಒಡೆಯರ ಆಡಳಿತ

- ಒಡೆಯರು ವಿಜಯನಗರ ಆಡಳಿತ ಪದ್ಧತಿಯನ್ನು ಮುಂದುವರಿಸಿದರು.
- ಒಡೆಯರ ಆಡಳಿತದ ಬಗ್ಗೆ ಚಿದಾನಂದ ಕವಿಯ **ಮುನಿವಂಶಾಭ್ಯುದಯ** ಹಾಗೂ **ಲಿಂಗಣ್ಣನ ಕೆಳದಿ ನೃಪವಿಜಯ** ಕೃತಿಗಳು ತಿಳಿಸುತ್ತವೆ.
- ರಾಜ ಪದವಿ ವಂಶಪಾರಂಪರ್ಯವಾಗಿದ್ದು ತಮ್ಮ ಜ್ಯೇಷ್ಠ ಪುತ್ರರನ್ನು ಯುವರಾಜರಾಗಿ ನೇಮಿಸುತ್ತಿದ್ದರು.
- ರಾಜನಿಗೆ ಸಹಕಾರ ನೀಡಲು **ಮಂತ್ರಿಪರಿಷತ್ ಸಭೆ** ಇದ್ದು ಪ್ರಧಾನನು ಪ್ರಮುಖನಾಗಿದ್ದನು.
- ಚಿಕ್ಕ ದೇವರಾಜರ ಕಾಲದಲ್ಲಿ ವಿಶಾಲಾಕ್ಷ ಪಂಡಿತ, ತಿರುಮಲಯಂಗರ್, ಷಡಕ್ಷರಯ್ಯ, ಚಿಕ್ಕೋಪಾಧ್ಯಾಯ, ಕರಣಿಕ ಲಿಂಗಣ್ಣಯ್ಯರವರು ಪ್ರಧಾನರಾಗಿ ಮತ್ತು ಕರಣಿಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಆಡಳಿತ ವ್ಯವಸ್ಥೆಯ 4 ಇಲಾಖೆಗಳೆಂದರೆ

1. **ಅಠವಣ:** ಕಂದಾಯ ವಿಭಾಗ ಪ್ರಧಾನ/ಸರ್ವಾಧಿಕಾರಿಯ ಅಧೀನದಲ್ಲಿತ್ತು.
2. **ಬೊಕ್ಕಸ:** ಖಜಾನೆ ವಿಭಾಗ ಇದು ಕೋಶಾಧಿಕಾರಿ ಅಧೀನದಲ್ಲಿತ್ತು.
3. **ಕಂದಾಚಾರ:** ಸೇನಾ ವಿಭಾಗ ಇದು ದಳವಾಯಿಯ ವಶದಲ್ಲಿತ್ತು.
4. ಅರಮನೆ ವಿಭಾಗ

- ಆಡಳಿತ ಕಾರ್ಯಾಲಯಕ್ಕೆ ಅಠಾರ ಕಛೇರಿ ಇತ್ತು. (18 ಇಲಾಖೆಗಳ ವಿಭಾಗ)

42. ಮೈಸೂರಿನಲ್ಲಿ ವಸಾಹತು ಸಂಘರ್ಷ (Colonial Conflict in Mysore)

- ಕ್ರಿ.ಶ. 1760ರ ದಶಕದಲ್ಲಿ ಮೈಸೂರಿನಲ್ಲಿ ಏರ್ಪಟ್ಟ ರಾಜಕೀಯ ಕ್ಷೋಭೆ, ಒಡೆಯರ ದುರ್ಬಲತೆ ಹಾಗೂ ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದ ದಳವಾಯಿಗಳ ಲಾಭ ಪಡೆದ ಹೈದರನು ಕ್ರಿ.ಶ. **1761ರಿಂದ 1799ರವರೆಗೆ ಮಧ್ಯಂತರ ಅವಧಿಯಲ್ಲಿ ಮೈಸೂರಿನಲ್ಲಿ** ಮುಸ್ಲಿಂ ಪ್ರಭುತ್ವ ಸಾಧಿಸಿದನು.

ಹೈದರಾಲಿ (ಕ್ರಿ.ಶ. 1721–1782)

- ಹೈದರನು 1721ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಜನಿಸಿದನು. ಇವನ ತಂದೆ ಫತೇ ಮಹಮ್ಮದ್ ಶಿರಾದ ನವಾಬ ದುಲಿಖಾನ್‌ನ ಸೈನ್ಯದಲ್ಲಿದ್ದನು.
- ದೇವನಹಳ್ಳಿ ಮುತ್ತಿಗೆಯಲ್ಲಿ ಹೈದರನು ತೋರಿದ ಸಾಹಸಕ್ಕಾಗಿ 2ನೇ ಕೃಷ್ಣರಾಜ ಒಡೆಯರ್ ಅವನಿಗೆ **'ಫತೇಹೈದರ್ ಬಹದ್ದೂರ್'** ಎಂಬ ಬಿರುದು ನೀಡಿ ಗೌರವಿಸಿದರು.
- 1750ರಲ್ಲಿ ಹೈದರಾಬಾದಿನ ನಿಜಾಮ ಹುದ್ದೆಯ ಅಧಿಕಾರಕ್ಕಾಗಿ ನಾಸಿರಜಂಗ್ ಮತ್ತು ಮುಜಾಫರ್‌ಜಂಗ್‌ನ ನಡುವೆ ಕಲಹ ಉಂಟಾದಾಗ ಹೈದರನು **ನಾಸಿರ್‌ಜಂಗ್** ಪರ ವಹಿಸಿದನು. ಖಜಾನೆಯನ್ನು ಲೂಟಿ ಮಾಡಿದನು.
- ಆರ್ಕಾಟ್ ಮುತ್ತಿಗೆ ಸಮಯದಲ್ಲಿ ಹೈದರನು ತೋರಿದ ಸಾಹಸವನ್ನು ಮೆಚ್ಚಿ ದಳವಾಯಿ ನಂಜರಾಜಯ್ಯರು ಹೈದರನನ್ನು **ದಿಂಡಿಗಲ್ ಫೌಜುದಾರನನ್ನಾಗಿ (1755)** ನೇಮಿಸಿದರು.
- ಹೈದರನು ಮರಾಠರ ದಾಳಿಯನ್ನು ಹಿಮ್ಮೆಟಿಸಿದ್ದಕ್ಕಾಗಿ ಒಡೆಯರ್ **ಬೆಂಗಳೂರನ್ನು ಜಹಗೀರಾಗಿ ಹೈದರನಿಗೆ** ನೀಡಿದನು.
- ಮೈಸೂರು ಸೈನಿಕ ದಂಗೆಯನ್ನು ಅಡಗಿಸಿ **ನವಾಬ್ ಹೈದರ್ ಅಲಿಖಾನ್** ಬಿರುದು ಪಡೆದು ಬೆಂಗಳೂರಿನ ಕೋಟೆಯನ್ನು ಜಹಗೀರಾಗಿ ಪಡೆದನು.
- ಒಡೆಯರ ಅಧಿಕಾರವನ್ನು 1781ರಲ್ಲಿ ಬದಿಗೊತ್ತಿದ ಹೈದರನು ಮೈಸೂರಿನ ಸರ್ವಾಧಿಕಾರಿಯಾದನು. ಇವನ ರಾಜಧಾನಿ ಶ್ರೀರಂಗಪಟ್ಟಣವಾಗಿತ್ತು.
- 1763ರಲ್ಲಿ 5ನೇ ಮದಕರಿ ನಾಯಕನ ನೆರವಿನಿಂದ ಬಿದನೂರನ್ನು ವಶಪಡಿಸಿಕೊಂಡು ಅದಕ್ಕೆ 'ಹೈದರ್‌ನಗರ' ಎಂಬ ಹೆಸರಿಟ್ಟನು.
- ಕಲ್ಲಿಕೋಟೆ ದೊರೆ ಜಾಮೋರಿನ್/ಮಾನವಿಕ್ರಂನನ್ನು ಸೋಲಿಸಿ

- 3ನೇ ಪಾಣಿಪತ್ ಕದನದಲ್ಲಿ ಅಹಮದ್‌ಷಾ ಅಬ್ದಾಲಿಗೆ ಹೈದರನು ಬೆಂಬಲ ಸೂಚಿಸಿದನು
- 1765ರಲ್ಲಿ ರಟ್ಟಹಳ್ಳಿ ಮತ್ತು ಅನವಟ್ಟಿ ಕದನಗಳಲ್ಲಿ ಮರಾಠರಿಂದ ಸೋತ ಹೈದರನು **ಬಿದನೂರು ಒಪ್ಪಂದ** ಮಾಡಿಕೊಂಡು ಸವಣೂರು ಮತ್ತು ಗುತ್ತಿಯನ್ನು ಮರಾಠರಿಗೆ ಬಿಟ್ಟನು.
- 1769ರಲ್ಲಿ ಮರಾಠ ಪೇಶ್ವೆಯ ಮಂತ್ರಿ ತ್ರಿಯಂಬಕನಿಂದ **ಚಿನಕುರುಳಿ** ಕದನದಲ್ಲಿ ಹೈದರನು ಸೋತು **ಶ್ರೀರಂಗಪಟ್ಟಣ ಒಪ್ಪಂದ** ಮಾಡಿಕೊಂಡನು.

1ನೇ ಆಂಗ್ಲೋ ಮೈಸೂರು ಯುದ್ಧ (ಕ್ರಿ.ಶ. 1767-1769)

- ಹೈದರಾಲಿಯ ಏಳಿಗೆಯನ್ನು ಸಹಿಸದ ಬ್ರಿಟಿಷರು ಅವನ ವಿರುದ್ಧ 1767ರಲ್ಲಿ ಹೈದರಾಬಾದ್ ನಿಜಾಮ ಮತ್ತು ಮರಾಠರೊಂದಿಗೆ ತ್ರಿಪಕ್ಷ ಕೂಟವನ್ನು ರಚಿಸಿ ಯುದ್ಧ ಘೋಷಿಸಿದರು. ಆದರೆ ರಾಜನಿಪುಣ ಹೈದರನು ಮರಾಠ ಮತ್ತು ನಿಜಾಮರಿಗೆ ಹಣ ನೀಡಿ ತನ್ನಡೆಗೆ ಸೆಳೆದುಕೊಂಡು ಮೈತ್ರಿಯನ್ನು ಮುರಿದನು.
- ಬ್ರಿಟಿಷ್ ಸೇನೆಯು ಕರ್ನಲ್ ಸ್ಮಿತ್ ನಾಯಕತ್ವದಲ್ಲಿ ಹೈದರ್ ಮತ್ತು ನಿಜಾಮರ ಸೇನೆಯನ್ನು ಚಂಗವು, ತಿರುವಣ್ಣಮಲೈ, ಮಣಿಯಂಬಾಡಿಗಳ ಬಳಿ ಸೋಲಿಸಿತು. ಆಗ ವಿಶ್ವಾಸ ದ್ರೋಹಿ ನಿಜಾಮನು ಬ್ರಿಟಿಷರೊಂದಿಗೆ **'ಮಚಲಿಪಟ್ಟಣ ಒಪ್ಪಂದ'** ಮಾಡಿಕೊಂಡನು.
- ಹೈದರನು ಮದ್ರಾಸನ್ನು ಮುತ್ತಿಗೆ ಹಾಕಿದಾಗ ಬ್ರಿಟಿಷ್ ಯುದ್ಧ ಸಾಮಾಗ್ರಿ ಮತ್ತು ಹಣಕಾಸು ಪೂರೈಕೆ ಹರಿದು ಬರಲಿಲ್ಲ. ಆಗ ದಿಕ್ಕು ತೋಚದ ಬ್ರಿಟಿಷರು ಏಪ್ರಿಲ್ 4,1769ರಲ್ಲಿ ಹೈದರನೊಡನೆ **'ಮದ್ರಾಸ್ ಒಪ್ಪಂದ'** ಮಾಡಿಕೊಂಡರು.
- ಒಪ್ಪಂದದ ಪ್ರಕಾರ ಗೆದ್ದ ಪ್ರದೇಶಗಳ ಹಿಂದಿರುಗಿಸುವಿಕೆ, ಯುದ್ಧ ಕೈದಿಗಳ ವಿನಿಮಯ ಮಾಡಿಕೊಳ್ಳುವುದು, ಹೈದರನಿಗೆ ಯುದ್ಧ ವೆಚ್ಚ ಕೊಡುವುದು ಹಾಗೂ ಹೈದರನ ಮೇಲೆ ಯಾರಾದರೂ ದಾಳಿ ಮಾಡಿದರೆ ಬ್ರಿಟಿಷರು ಅವನ ರಕ್ಷಣೆಗೆ ಧಾವಿಸುವುದು.

2ನೇ ಆಂಗ್ಲೋ ಮೈಸೂರು ಯುದ್ಧ (1780-1784)

- ಈ ಯುದ್ಧಕ್ಕೆ ಕಾರಣ ಮೊದಲ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಸೋತು ಅವಮಾನಿತರಾಗಿದ್ದರು. 1778ರಲ್ಲಿ ಯೂರೋಪಿನಲ್ಲಾದ ಇಂಗ್ಲೀಷ್ ಮತ್ತು ಫ್ರೆಂಚರ ಯುದ್ಧ ಇವುಗಳ ಜೊತೆಗೆ 1770ರಲ್ಲಿ ಪೇಶ್ವೆ ಮಾಧವರಾವ್ ಮೈಸೂರಿನ ಮೇಲೆ ದಾಳಿ ಮಾಡಿದಾಗ ಮದ್ರಾಸ್ ಒಪ್ಪಂದದಂತೆ ಬ್ರಿಟಿಷರು ಅವನ ಸಹಾಯಕ್ಕೆ ಬರದಿದ್ದುದು.
- ತಕ್ಷಣದ ಕಾರಣವೆಂದರೆ ಬ್ರಿಟಿಷರು ಫ್ರೆಂಚರ ಮಾಹೆಯನ್ನು 1779ರಲ್ಲಿ ಆಕ್ರಮಿಸಿದರು. ಇದು ಹೈದರಾಲಿಗೆ ಫ್ರಾನ್ಸ್‌ನಿಂದ ಶಸ್ತ್ರಾಸ್ತ್ರಗಳು ಸರಬರಾಜಾಗುತ್ತಿದ್ದವು. ಈ ಉದ್ದೇಶದಿಂದ ಮಾಹೆಯನ್ನು ತೆರವು ಮಾಡಲು ಬ್ರಿಟಿಷರಿಗೆ ಹೈದರನು ಕೇಳಿದಾಗ ಅವರು ಒಪ್ಪದಿದ್ದಾಗ ಯುದ್ಧ ಘೋಷಿಸಿದನು.
- ಆರಂಭದಲ್ಲಿ ಹೈದರನು ಆರ್ಕಾಟನ್ನು ಮುತ್ತಿ ಬ್ರಿಟಿಷ್ ಸೇನಾನಿಗಳಾದ ಹೆಕ್ಟರ್ ಮನ್ರೋ ಮತ್ತು ಕರ್ನಲ್ ಬೈಲಿಯವರನ್ನು ಪಾಲಿಲೂರು ಕದನದಲ್ಲಿ ಸೋಲಿಸಿ **ಆರ್ಕಾಟನ್ನು** ಕೊಳ್ಳೆ ಹೊಡೆದು ಸುಟ್ಟು ಹಾಕಿದನು. **ಹೈದರನ ಮಗ ಕರೀಮನು ಪೋರ್ಟೋನೋವಾವನ್ನು** ಸುಲಿಗೆ ಮಾಡಿದನು.
- ಆಗಿನ ಬ್ರಿಟಿಷ್ ಗವರ್ನರ್ ವಾರನ್ ಹೆಸ್ಟಿಂಗ್ಸ್‌ನು ನಿಜಾಮ ಸಿಂಧ್ಯ ಬೊನ್ಸ್ಲೆರೊಂದಿಗೆ ಜಾಣ್ಮೆಯಿಂದ ವರ್ತಿಸಿ ಹೈದರನ ಪಕ್ಷ ಬಿಡುವಂತೆ ಮಾಡಿದನು. ಅಲ್ಲದೆ ಅವರೊಂದಿಗೆ ತ್ರಿಪಕ್ಷ ಕೂಟ ರಚಿಸಿ ಹೈದರನ ಮೇಲೆ ದಾಳಿ ಮಾಡಲು ಸರ್ ಐರ್‌ಕೂಟನನ್ನು ಕಳುಹಿಸಿದನು. ಐರ್‌ಕೂಟನು 1781ರಲ್ಲಿ **ಪೋರ್ಟೋನೋವೋ** ಮತ್ತು **ಸೋಲಿಗನೂರ್ ಕದನದಲ್ಲಿ** ಹೈದರನನ್ನು ಸೋಲಿಸಿದನು.
- ಆದರೆ ಹೈದರನು ಫ್ರೆಂಚರ ನೆರವಿನಿಂದ ಟ್ರಿಂಕೊಮಲಿ, ಕೋಯಿಲ್‌ನಗರ ಮತ್ತು ಕಡಲೂರನ್ನು ಗೆದ್ದು ತಾಂಜಾವೂರಿನ ಬ್ರಿಟಿಷ್ ಸೇನಾನಿ ಬ್ರೈತ್‌ವೈಟ್‌ನನ್ನು ಬಂಧಿಸಿದನು. ದುರಾದೃಷ್ಟವಶಾತ್ **ಬೆನ್ನುಫಣಿ** ರೋಗದಿಂದ ಬಳಲುತ್ತಿದ್ದ ಹೈದರನು ಡಿಸೆಂಬರ್ 7, 1782ರಂದು ಹೋರಾಡುತ್ತಲೇ **ನರಸಿಂಗರಾಯ ಪೇಟೆಯಲ್ಲಿ** ಮರಣ ಹೊಂದಿದನು. ಅನಂತರ ಶ್ರೀರಂಗಪಟ್ಟಣಕ್ಕೆ ತಂದು ಸಮಾಧಿ ಮಾಡಲಾಯಿತು.

ಮಂಗಳೂರು ಒಪ್ಪಂದ

- ಹೈದರನ ಮರಣದ ನಂತರ ಟಿಪ್ಪುಸುಲ್ತಾನ್ ಯುದ್ಧ ಮುಂದುವರಿಸಿ ಬ್ರಿಗೇಡಿಯರ್ ಮ್ಯಾಥ್ಯೂಸ್‌ನನ್ನು ಸೋಲಿಸಿ ಬಿದನೂರು ಮತ್ತು ಮಂಗಳೂರನ್ನು ವಶಪಡಿಸಿಕೊಂಡನು. ಆದರೆ ಮುಂದಿನ ಪರಿಸ್ಥಿತಿ ಅರಿತ ಟಿಪ್ಪು ಮಾರ್ಚ್ 11, 1784ರಲ್ಲಿ ಬ್ರಿಟಿಷರೊಂದಿಗೆ ಮಂಗಳೂರು ಒಪ್ಪಂದ ಮಾಡಿಕೊಂಡನು. ಇದರಿಂದ 2ನೇ ಆಂಗ್ಲೋ ಮೈಸೂರು ಯುದ್ಧ ಕೊನೆಗೊಂಡಿತು.

ಹೈದರನ ಆಡಳಿತ

- ಹೈದರನು ಸಾಮ್ರಾಜ್ಯವನ್ನು 6 ಪ್ರಾಂತ್ಯ(ಫೌಜು)ಗಳಾಗಿ ವಿಂಗಡಿಸಿ ಅವುಗಳ ಮುಖ್ಯಸ್ಥರಾಗಿ ಫೌಜುದಾರರನ್ನು ನೇಮಿಸಿದನು.
- ಹೈದರನ ಆಡಳಿತದಲ್ಲಿ ಪೂರ್ಣಯ್ಯ, ಶಾಮಯ್ಯ, ಕೃಷ್ಣರಾವ್ ಮತ್ತು ಖಾಂಡೇರಾಯರಂತಹ ಹಿಂದೂ ಅಧಿಕಾರಿಗಳಿದ್ದರು. ಹೈದರನು ಶ್ರೀರಂಗಪಟ್ಟಣದಲ್ಲಿ ದರಿಯಾ ದೌಲತ್ ಅರಮನೆ, ಬೆಂಗಳೂರಿನಲ್ಲಿ ಬೇಸಿಗೆ ಅರಮನೆ, ಕಲ್ಲಿನಕೋಟೆ ಮತ್ತು ತೋಟಗಳನ್ನು ನಿರ್ಮಿಸಿದನು.
- ಹೈದರನು **'ಬಹದೂರಿ'** ಎಂಬ ನಾಣ್ಯಗಳನ್ನು ಟಂಕಿಸಿದನು. ಶ್ರೀರಂಗಪಟ್ಟಣ, ಬಿದನೂರು, ಚಿತ್ರದುರ್ಗ ಮತ್ತು ಗುತ್ತಿಗಳಲ್ಲಿ ಟಂಕಸಾಲೆಗಳಿದ್ದವು.
- **ಮಂಗಳೂರಿನಲ್ಲಿ** ಹೈದರನು ಒಂದು **ನೌಕಾಶಾಲೆಯನ್ನು** ತೆರೆದನು.
- ಹೈದರನು ಅನಕ್ಷರಸ್ಥನಾದರೂ ಪ್ರಭಾವಶಾಲಿ ಮುತ್ಸದ್ದಿ ಮತ್ತು ರಾಜನಿಪುಣನಾಗಿದ್ದನು.

ಟಿಪ್ಪು ಸುಲ್ತಾನ್ (ಕ್ರಿ.ಶ. 1753–1799)

- ಟಿಪ್ಪು ಸುಲ್ತಾನನು ಹೈದರಾಲಿ ಮತ್ತು ಫಕ್ರುನ್ನಿಸಾ ಬೇಗಂ ಮಗನಾಗಿ ನವೆಂಬರ್ 20, 1753ರಲ್ಲಿ ದೇವನಹಳ್ಳಿಯಲ್ಲಿ ಜನಿಸಿದನು. ಇವನ ಮೊದಲ ಹೆಸರು **ಫತೆ ಆಲಿಖಾನ್**
- ಹೈದರನು ಟಿಪ್ಪುವಿಗೆ ತನ್ನ ಮಂತ್ರಿ **ಪೂರ್ಣಯ್ಯ** ಮತ್ತು ಗುರು **ಮೌಲವಿ ಅಬ್ದುಲ್ಲಾ**ನಿಂದ ಉತ್ತಮ ಶಿಕ್ಷಣ ಕೊಡಿಸಿದನು.
- ಹೈದರಾಬಾದ್ ನಿಜಾಮನು ಟಿಪ್ಪುವಿಗೆ **'ಫತೆ ಆಲಿಖಾನ್'** ಎಂಬ ಬಿರುದು ನೀಡಿದ್ದನು.
- ಟಿಪ್ಪುವು ಬ್ರಿಟಿಷ್ ಸೇನಾನಿಗಳಾದ ಜನರಲ್ ಸ್ಟುವರ್ಟ್‌ನನ್ನು ವಾಂಡಿವಾಷ್ ಬಳಿ, ಕರ್ನಲ್ ಬೈಲಿಯನ್ನು ಆರ್ಕಾಟ್ ಬಳಿ, **ಬ್ರೈತ್‌ವೈಟ್**‌ನನ್ನು ತಾಂಜಾವೂರು ಬಳಿ ಹಾಗೂ 1783ರಲ್ಲಿ **ವಾಂಡಿವಾಷ್** ಕದನದಲ್ಲಿ ಬ್ರಿಟಿಷರನ್ನು ಸೋಲಿಸಿದನು.
- ಟಿಪ್ಪು ಸುಲ್ತಾನನು 1782ರಲ್ಲಿ **'ನವಾಬ್ ಟಿಪ್ಪು ಸುಲ್ತಾನ್ ಬಹದ್ದೂರ್ ಪಾದಷಹ'** ಎಂಬ ಬಿರುದಿನೊಂದಿಗೆ ಮೈಸೂರಿನಲ್ಲಿ ಅಧಿಕಾರಕ್ಕೆ ಬಂದನು.
- ಹಿಂದಿನ ಸಾಲ್‌ಬಾಯ್ ಒಪ್ಪಂದದಂತೆ ಹೈದರನು ಮರಾಠರಿಂದ ಗೆದ್ದ ತುಂಗಭದ್ರೆಯ ಉತ್ತರದ ಪ್ರದೇಶಗಳನ್ನು ಕೊಡುವಂತೆ ನಾನಾಫಡ್ನವೀಸ್ ಟಿಪ್ಪುವನ್ನು ಕೇಳಿ ವಿಫಲನಾದನು. ಆಗ ನಾನಾಫಡ್ನವೀಸ್‌ನು ನಿಜಾಮನೊಂದಿಗೆ ಸೇರಿಕೊಂಡು 1786ರಲ್ಲಿ ಟಿಪ್ಪುವಿನ ಮೇಲೆ ಯುದ್ಧ ಸಾರಿದರು. ಈ ಯುದ್ಧದಲ್ಲಿ ಸೋತ ಮರಾಠರು ಟಿಪ್ಪುವಿನೊಂದಿಗೆ **1787ರಲ್ಲಿ ಗಜೇಂದ್ರಗಢ ಒಪ್ಪಂದಕ್ಕೆ** ಸಹಿ ಹಾಕಿದರು.
- ಕೊಡಗಿನ ದಂಗೆಯನ್ನು ಅಡಗಿಸಿ ಟಿಪ್ಪುವು **ಪಾದಷಹ** ಎಂಬ ಬಿರುದು ಗಳಿಸಿದನು.

3ನೇ ಆಂಗ್ಲೋ ಮೈಸೂರು ಯುದ್ಧ (ಕ್ರಿ.ಶ. 1790–1792)

- ಟಿಪ್ಪುವು ಬ್ರಿಟಿಷರ ಮಿತ್ರ ರಾಜ್ಯವಾದ ತಿರುವಾಂಕೂರು ಮೇಲೆ ಯುದ್ಧ ಸಾರಿದ್ದು, ಈ ಯುದ್ಧಕ್ಕೆ ನೇರ ಕಾರಣವಾಯಿತು. ಇದರಿಂದ ಯುದ್ಧದಲ್ಲಿ ಬ್ರಿಟಿಷರು ಪಾಲ್ಗೊಂಡಿದ್ದರು.
- ಅಂದಿನ ಗವರ್ನರ್ **ಜನರಲ್ ಲಾರ್ಡ್ ಕಾರ್ನ್ ವಾಲಿಸ್‌ನು** ಟಿಪ್ಪುವನ್ನು ಮಣಿಸಲು ಮರಾಠ ಮತ್ತು ಹೈದರಾಬಾದ್ ನಿಜಾಮರೊಂದಿಗೆ ತ್ರಿಪಕ್ಷ ಕೂಟವನ್ನು ರಚಿಸಿದನು. ಆರಂಭದಲ್ಲಿ **ಮೇಜರ್ ಜನರಲ್ ಮೆಡೋಸ್**‌ನನ್ನು ಟಿಪ್ಪುವು ಸೋಲಿಸಿದನು. ಅಂತಿಮವಾಗಿ ತ್ರಿಪಕ್ಷಕೂಟದ ನೇತೃತ್ವ ವಹಿಸಿಕೊಂಡು ಕಾರ್ನ್‌ವಾಲೀಸನು ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದಾಗ ಟಿಪ್ಪು ಪ್ರತಿಭಟಿಸದೆ ಬ್ರಿಟಿಷರೊಂದಿಗೆ **ಶ್ರೀರಂಗಪಟ್ಟಣ ಒಪ್ಪಂದಕ್ಕೆ** ಸಹಿ ಹಾಕಿದನು.
- ಒಪ್ಪಂದ ಪ್ರಕಾರ ಟಿಪ್ಪುವು ತನ್ನ ಅರ್ಧ ರಾಜ್ಯ **ಬಿಟ್ಟು ಕೊಡುವುದು**, ಯುದ್ಧ ವೆಚ್ಚವಾಗಿ **3 ಕೋಟಿ ರೂಪಾಯಿಗಳ ಬದಲಾಗಿ** ತನ್ನ ಇಬ್ಬರು ಮಕ್ಕಳನ್ನು ಒತ್ತೆಯಿಡಲಾಯಿತು. (**ಟಿಪ್ಪುವಿನ ಮಕ್ಕಳಾದ** ಅಬ್ದುಲ್‌ಖಾಲಿದ್ ಮತ್ತು ಮುಜಾವುದೀನ್)

4ನೇ ಆಂಗ್ಲೋ ಮೈಸೂರು ಯುದ್ಧ (ಕ್ರಿ.ಶ. 1799)

- ಈ ಯುದ್ಧಕ್ಕೆ ಪ್ರಮುಖ ಕಾರಣ **ಲಾರ್ಡ್ ವೆಲ್ಲೆಸ್ಲಿಯು** ತನ್ನ **ಸಹಾಯಕ ಸೈನ್ಯ ಪದ್ಧತಿಯನ್ನು** ಸ್ವೀಕರಿಸುವಂತೆ ಹಾಗೂ ಫ್ರೆಂಚರ ಮಿತ್ರತ್ವವನ್ನು ಬಿಡುವಂತೆ ಟಿಪ್ಪುವನ್ನು ಕೇಳಿಕೊಂಡನು. ಆದರೆ ಟಿಪ್ಪುವು ಇದನ್ನು ನಿರಾಕರಿಸಿದಾಗ ಆತನ ವಿರುದ್ಧ ಯುದ್ಧ ಘೋಷಿಸಲಾಯಿತು.
- ವೆಲ್ಲೆಸ್ಲಿಯು ಮರಾಠ ಮತ್ತು ನಿಜಾಮನೊಂದಿಗೆ ತ್ರಿಪಕ್ಷೀಯ ಮೈತ್ರಿಕೂಟ ರಚಿಸಿ ಮದ್ರಾಸ್ ಕಡೆಯಿಂದ ಜನರಲ್ ಹ್ಯಾರಿಸ್‌ನ ಬ್ರಿಟಿಷ್ ಸೇನೆ, ಬಾಂಬೆ ಕಡೆಯಿಂದ **ಅರ್ಥರ್ ವೆಲ್ಲೆಸ್ಲಿ** ಮತ್ತು **ಸ್ಟುವರ್ಟ್** ನೇತೃತ್ವದಲ್ಲಿ ಸಜ್ಜಾಗಿ ಮೂರು ಕಡೆಯಿಂದ ಶ್ರೀರಂಗ ಪಟ್ಟಣವನ್ನು ಮುತ್ತಿಗೆ ಹಾಕಿದರು. ಆಗ ಟಿಪ್ಪುವು ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಮೇ 4, 1799ರಲ್ಲಿ ಮರಣ ಹೊಂದಿದನು.
- ಯುದ್ಧದ ಪರಿಣಾಮ ಟಿಪ್ಪುವಿನ ಹಿರಿಯ ಮಗ ಫತೇ ಹೈದರ್ ಮತ್ತು **ದಿವಾನ್ ಪೂರ್ಣಯ್ಯ**ರವರು ಬ್ರಿಟಿಷರಿಗೆ ಶರಣಾದರು. ಕೊನೆಗೆ ಟಿಪ್ಪುವಿನ ಮಕ್ಕಳನ್ನು **ವೆಲ್ಲೂರಿನಲ್ಲಿ** ಬಂಧಿಸಲಾಯಿತು.
- ಈ ಯುದ್ಧದ ವಿಜಯದ ರೂವಾರಿ **ಲಾರ್ಡ್‌ವೆಲೆಸ್ಲಿಯು ಮಾರ್ಕ್ವಿಸ್** ಪದವಿಗೆ ಏರಿದನು.

ಯುದ್ಧದ ಪರಿಣಾಮಗಳು

- 4ನೇ ಆಗ್ಲೋ–ಮೈಸೂರು ಯುದ್ಧ ಕೊನೆಗೊಂಡು ಜೂನ್ 22, 1799ರಂದು ಶ್ರೀರಂಗಪಟ್ಟಣ ಒಪ್ಪಂದವಾಗಿ ಮೈಸೂರನ್ನು 4 ಭಾಗಗಳಾಗಿ ವಿಂಗಡಿಸಲಾಯಿತು.
- ಯುದ್ಧದಲ್ಲಿ ಭಾಗಿಯಾದ ಬ್ರಿಟಿಷರು ಮರಾಠರು ಮತ್ತು ನಿಜಾಮರು 3 ಭಾಗಗಳನ್ನು ಪಡೆದು ಉಳಿದ 46,200 ಚ.ಕಿ.ಮೀ ವಿಸ್ತೀರ್ಣದ ಒಂದು ಭಾಗವನ್ನು ಪುನಃ ಮೈಸೂರು ಒಡೆಯರಿಗೆ ಬಿಟ್ಟು ಕೊಟ್ಟು 3ನೇ ಕೃಷ್ಣರಾಜ ಒಡೆಯರನ್ನು ಅಧಿಕಾರಕ್ಕೆ ತಂದರು.
- ಒಡೆಯರಿಂದ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿಸಿಕೊಂಡು ಮೈಸೂರಿನಲ್ಲಿ ಕೋಲ್ ಬರ್ರಿ ಎಂಬ ರೆಸಿಡೆಂಟನ್ನು ಇಟ್ಟರು.

ಟಿಪ್ಪುವಿನ ಆಡಳಿತ ಸುಧಾರಣೆಗಳು

- ಟಿಪ್ಪುವಿನ ರಾಜ್ಯವು ಉತ್ತರದಲ್ಲಿ ಕೃಷ್ಣಾ ನದಿ, ದಕ್ಷಿಣದಲ್ಲಿ ದಿಂಡಿಗಲ್, ಪಶ್ಚಿಮದಲ್ಲಿ ಮಲಬಾರ್, ಪೂರ್ವದಲ್ಲಿ ಘಟ್ಟಗಳವರೆಗೆ ವ್ಯಾಪಿಸಿತ್ತು.
- ಆಡಳಿತದಲ್ಲಿ ಷರಿಯತ್ ಮತ್ತು ಹಿಂದೂ ಕಾನೂನುಗಳು ಅಸ್ತಿತ್ವದಲ್ಲಿದ್ದವು.
- ಕಂದಾಯ ಮತ್ತು ಹಣಕಾಸು ಮಂತ್ರಿಯಾಗಿ ದಿವಾನ್ ಪೂರ್ಣಯ್ಯನವರಿದ್ದರು.
- ಆಡಳಿತದಲ್ಲಿ ಪ್ರಮುಖವಾಗಿ 7 ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದವು.

1. ಮೀರ್ ಆಸಫ್ ಇಲಾಖೆ – ಕಂದಾಯ
2. ಮೀರ್ ಮಿರಾನ್ ಇಲಾಖೆ – ಸೈನ್ಯ

4. ಮೀರ್ ಖಜೀನ್ ಇಲಾಖೆ – ಭಂಡಾರ ಮತ್ತು ಟಂಕಸಾಲೆ
5. ಮಲ್ಲಿಕ್ ಉತ್ ತಿಜುರ್ ಇಲಾಖೆ – ವಾಣಿಜ್ಯ
6. ಮೀರ್ ಜುಮ್ರ ಇಲಾಖೆ – ಹಡಗು
7. ಅಂಚೆ ಮತ್ತು ಬೇಹುಗಾರಿಕೆ ಇಲಾಖೆ

- ಮೇಲಿನ 7 ಕಛೇರಿಗಳನ್ನು 4 ಮಂತ್ರಿಗಳು ನೋಡಿಕೊಳ್ಳುತ್ತಿದ್ದರು.

1. ಮೀರ್‌ಮೀರಾನ್ – ಯುದ್ಧಮಂತ್ರಿ
2. ಮೀರ್ ಆಸಫ್ – ಕಂದಾಯ ಮಂತ್ರಿ
3. ಮೀರ್‌ಏಮ್ – ಹಡಗು ವಿಭಾಗ ಮಂತ್ರಿ
4. ಮಲ್ಲಿಕ್ ಉತ್ ತಿಜುರ್ – ಹಣಕಾಸು ಮಂತ್ರಿ

- ಅಮೃತ್‌ಮಹಲ್ ಇಲಾಖೆಯು ಸರಕಾರಿ ಸಾಮ್ಯದ ವಸ್ತುಗಳು ಮತ್ತು ಜಾನುವಾರುಗಳನ್ನು ನೋಡಿಕೊಳ್ಳುತ್ತಿತ್ತು.
- ಜನಗಣತಿ ಮಾಡುವ ಮೂಲಕ ಜನನ ಮರಣಗಳ ದಾಖಲೆ ಇಡುವ ಪದ್ಧತಿ ಪ್ರಾರಂಭಿಸಿದನು.
- ಸರ್ಕಾರಿ ಪತ್ರಗಳ ರವಾನೆಗಾಗಿ ಅಂಚೆ ಇಲಾಖೆಯನ್ನು ಪ್ರಾರಂಭಿಸಿದನು.
- ಪ್ರಾಂತ್ಯಗಳ ಉಸ್ತುವಾರಿಗಾಗಿ **ಆಸಪ್** ಎಂಬ ಸಿವಿಲ್ ಗವರ್ನರ್‌ಗಳನ್ನು ನೇಮಿಸಿದ್ದನು.
- ಶಾನುಭೋಗ ಮತ್ತು ಪಟೇಲರು ಗ್ರಾಮಾಡಳಿತ ನೋಡಿಕೊಳ್ಳುತ್ತಿದ್ದರು.

ಆರ್ಥಿಕ ಸುಧಾರಣೆಗಳು

- ಒಟ್ಟು ಉತ್ಪನ್ನದಲ್ಲಿ 1/3 ಭಾಗದಷ್ಟು ಕಂದಾಯ ನಿಗದಿ ಮಾಡಲಾಗಿತ್ತು.
- ಟಿಪ್ಪು ಸುಲ್ತಾನ್ ರೈತ್ವಾರಿ ಪದ್ಧತಿಯ ಪರವಾಗಿದ್ದನು.
- ಇವನು ಜಹಗೀರು ಪದ್ಧತಿಯನ್ನು ಅಂತ್ಯಗೊಳಿಸಿ **ಉಳುವವನೇ ಭೂಮಿಯ ಒಡೆಯ** ಎಂದು ಆದೇಶಿಸಿದ್ದನು.
- ಟಿಪ್ಪುವು ಲಕ್ಷ್ಮಣತೀರ್ಥ ಮತ್ತು ಸಾಗರಕಟ್ಟೆ ನೀರಾವರಿ ಯೋಜನೆ ಹಾಗೂ ಕಾವೇರಿ ನದಿಗೆ ಮಳ್ಳೂರಿನಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿದನು.
- ಬೆಂಗಳೂರು ಮತ್ತು ಶ್ರೀರಂಗಪಟ್ಟಣದ **ಲಾಲ್‌ಬಾಗ್ ತೋಟ**ಗಳನ್ನು ವಿದೇಶಗಳಿಂದ ತಂದ ಮರ-ಗಿಡಗಳಿಂದ ಅಲಂಕರಿಸಿದನು.
- ರೇಷ್ಮೆ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿ, ಬಂಗಾಳದಿಂದ ಹಿಪ್ಪುನೇರಳೆ ಗಿಡವನ್ನು ತಂದು ನೆಡಿಸಿದನು.
- ಮೈಸೂರು, ಶ್ರೀರಂಗಪಟ್ಟಣ, ಚನ್ನಪಟ್ಟಣ, ರಾಮನಗರ ಮತ್ತು ಬೆಂಗಳೂರಿನಲ್ಲಿ ಹಿಪ್ಪುನೇರಳೆ ಬೆಳೆಯ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿದನು.
- ಮೈಸೂರಿನಲ್ಲಿ ಬಂದೂಕು-ಸಿಡಿಮದ್ದು, ಉಕ್ಕಿನ ತಂತಿಗಳು, ಸಂಗೀತ ವಾದ್ಯಗಳು ಮತ್ತು ಗಾಜಿನ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳಿದ್ದವು.
- ಬೆಂಗಳೂರಿನಲ್ಲಿ ನೇಯ್ಗೆ ಮತ್ತು ಬಟ್ಟೆ ಕೈಗಾರಿಕೆ ಚನ್ನಪಟ್ಟಣ, ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಸಕ್ಕರೆ ಕೈಗಾರಿಕೆಗಳನ್ನು ಸ್ಥಾಪಿಸಿದನು.
- ಟಿಪ್ಪುವು ಆರ್ಥಿಕ ಕ್ಷೇತ್ರದಲ್ಲಿ ಜಾರಿಗೊಳಿಸಿದ ಸರ್ಕಾರಿ ಗುತ್ತಿಗೆಗಳು ಅತ್ಯಂತ ಕ್ರಾಂತಿಕಾರಕ ಆವಿಷ್ಕಾರವಾಗಿದೆ.
- ರಾಯಲ್ ಬೋರ್ಡ್ ಆಫ್ ನೈನ್ ಕಮಿಷನ್ಸ್ ಆಫ್ ಟ್ರೇಡ್ ಎಂಬ ಸರ್ಕಾರಿ ಸಂಘ ಸ್ಥಾಪಿಸಿ ಅದರ ಮೂಲಕ ವಿದೇಶಿ ವ್ಯಾಪಾರವನ್ನು ನಿಯಂತ್ರಿಸಿದನು.
- ಟಿಪ್ಪುವು ಫ್ರಾನ್ಸಿನ **ಜಾಕೋಬಿನ್ ಕ್ಲಬ್**‌ನ ಸದಸ್ಯನಾಗಿದ್ದನು.
- ಟಿಪ್ಪುವು **ಕ್ಷಿಪಣಿಗಳನ್ನು** ಹೊಂದಿದ್ದನೆಂದು ಹೇಳಲಾಗಿದೆ. (ಕ್ಷಿಪಣಿ ತಂತ್ರಜ್ಞಾನ ಬಳಕೆ ಮಾಡಿದ್ದನು)
- ಮಂಗಳೂರಿನಲ್ಲಿ 40 ಯುದ್ಧ ನೌಕೆಗಳಿದ್ದವು.
- ಕಬ್ಬಿಣ ಎರಕ ಒಯ್ಯುವ 5 ಘಟಕಗಳು ಶ್ರೀರಂಗಪಟ್ಟಣದಲ್ಲಿದ್ದವು.
- ರಕ್ಷಣಾವಸ್ತು ಉತ್ಪಾದನಾ ಘಟಕವಾದ **'ತಾರಾಮಂಡಲ'** ಶ್ರೀರಂಗಪಟ್ಟಣದಲ್ಲಿತ್ತು.
- ಕಾನಕನಹಳ್ಳಿಯಲ್ಲಿ ಶಸ್ತ್ರಾಸ್ತ್ರ ತಯಾರಿಸುವ ಘಟಕವಿತ್ತು.
- **ಫ್ರಾನ್ಸಿಸ್ ಬುಕನನ್**‌ನು ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಮೈಸೂರು ಎರಡನೆ ಯುರೋಪ್ ಆಗಿತ್ತು ಎಂದಿದ್ದಾನೆ.
- ದೂದ್‌ವೆಲ್ಲರು ಹೇಳುವಂತೆ ಟಿಪ್ಪು ತನ್ನ ಆಡಳಿತದಲ್ಲಿ ಪಾಶ್ಚಿಮಾತ್ಯರ ಉತ್ತಮಾಂಶಗಳನ್ನು ಅಳವಡಿಸಿಕೊಂಡು ಪ್ರಥಮ ಭಾರತೀಯ ಎಂದಿದ್ದಾರೆ.
- ಟಿಪ್ಪುವು ನಂಜನಗೂಡಿನ ಶ್ರೀಕಂಠೇಶ್ವರನಿಗೆ ಟಿಪ್ಪು ಷಾದ್‌ಶಾಹಿ ಎಂಬ ಚಿನ್ನದ ದೂಪ ಕೊಟ್ಟು **ಹಕ್ಕಿಂ ನಂಜುಡ** ಎಂಬ ಶಿಖರ ಕಟ್ಟಿಸಿದನು.
- ಶ್ರೀರಂಗಪಟ್ಟಣದ ರಂಗನಾಥಸ್ವಾಮಿಗೆ ಬೆಳ್ಳಿದೂಪ ಮತ್ತು ಕಾಂಚೀವರಂ ದೇವಾಲಯಕ್ಕೆ ಸಾವಿರ ಹೊನ್ನುಗಳನ್ನು ದಾನ ಮಾಡಿದನು.
- ಶೃಂಗೇರಿ ಮಠದ ಉದ್ದಾರಕ್ಕೆ ಅಪಾರ ದಾನಗಳನ್ನು ನೀಡಿದನು.
- ಟಿಪ್ಪುವು ಶ್ರೀರಂಗಪಟ್ಟಣದಲ್ಲಿ ಹೈದರನ ಸಮಾಧಿ, ಸುಂದರ ಹೂದೋಟ, ಲಾಲ್‌ಮಹಲ್, ಜುಮ್ಮಾ ಮಸೀದಿ, ಚಿನ್ನದ ಹುಲಿಯ ಪ್ರತಿಮೆ ನಿರ್ಮಿಸಿದನು ಮತ್ತು ಬೆಂಗಳೂರಿನ ಕೋಟೆ ಮತ್ತು ಟಿಪ್ಪುವಿನ ಅರಮನೆ ನಿರ್ಮಿಸಿದನು.
- ಟಿಪ್ಪು ಸುಲ್ತಾನನು **ಮುಹರ್, ಪರುಕಿ, ಪಣ** ಎಂಬ ಚಿನ್ನದ ನಾಣ್ಯಗಳು **ಹೈದರಿ (2ರೂ)** ಇನಾಮಿ **(1ರೂ)** ಅಭೀದಿ **(1/2ರೂ), ಜಪಾರಿ (1/4 ರೂ) ಕಜೀಮಿ (1/10ರೂ)** ಎಂಬ ಬೆಳ್ಳಿ ನಾಣ್ಯಗಳು **ಮತ್ತು ಓಸ್ಮಾನಿ, ಜೋಹ್ರಾ, ಬಹ್ರಾಂ, ಅಖ್ತರ್, ಕುತುಬ್** ಎಂಬ ತಾಮ್ರದ ನಾಣ್ಯಗಳನ್ನು ಜಾರಿಗೊಳಿಸಿದ್ದರು.
- ಟಿಪ್ಪುವನ್ನು **ಮೈಸೂರು ಹುಲಿ, ರಣಕೇಸರಿ** ಎಂದು ಕರೆಯುವರು.
- ದೂದ್‌ವೆಲ್‌ರವರು ಟಿಪ್ಪುವನ್ನು ಗ್ರಾಂಡ್‌ಮ್ಯಾನ್ ಆಫ್ ಇಂಡಿಯಾ ಎಂದು ಕರೆದಿದ್ದಾರೆ.

43. ಮೈಸೂರು ಒಡೆಯರ ಪುನರ್‌ಸ್ಥಾಪನೆ (Restoration of Mysore Wodeyar)

- ಮೈಸೂರು ಒಡೆಯರ್ ಸಂತತಿಯ ಪುನರ್‌ಸ್ಥಾಪನೆಯಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಮತ್ತು ಆಕೆಯ ಪ್ರತಿನಿಧಿ ತಿರುಮಲರಾವ್‌ರವರು ಮುಖ್ಯ ಪಾತ್ರ ವಹಿಸಿದರು.
- ಮೈಸೂರು ಆಸ್ಥಾನದ ಪ್ರಥಮ ಬ್ರಿಟಿಷ್ ರೆಸಿಡೆಂಟ್ ಆಗಿ ಲೆ.ಕ. **ಬ್ಯಾರಿಕ್ಲೋಸ್‌**ನು ಪ್ರಥಮ ಬ್ರಿಟಿಷ್ ರೆಸಿಡೆಂಟ್ ಆಗಿ ನೇಮಕವಾದನು. ಮುಮ್ಮಡಿ ಕೃಷ್ಣರಾಜರು ಪ್ರಾಪ್ತ ವಯಸ್ಕರಾಗುವವರೆಗೆ ರಾಜ ಪ್ರತಿನಿಧಿಯಾಗಿ ಹಾಗೂ ದಿವಾನರಾಗಿ ಪೂರ್ಣಯ್ಯನವರು ಆಡಳಿತ ನಡೆಸಬೇಕೆಂದು ತೀರ್ಮಾನಿಸಲಾಯಿತು. ಇದನ್ನು ಮೈಸೂರು ಒಡೆಯರ್ ಸಂತತಿಯ ಮರುಸ್ಥಾಪನೆ ಎನ್ನಲಾಗಿದೆ.
- ಲಾರ್ಡ್ ವೆಲ್ಲೆಸ್ಲಿಯು ಮೈಸೂರನ್ನು ಒಡೆದು ಹಂಚಲು ಜನರಲ್ ಹ್ಯಾರಿಸ್, ಅರ್ಥರ್ ವೆಲ್ಲೆಸ್ಲಿ, ಹೆನ್ರಿ ವೆಲ್ಲೆಸ್ಲಿ, ಜನರಲ್ ಕ್ಲಿರ್ಕ್ ಹ್ಯಾಟ್ರಿಕ್ ಮತ್ತು ಬ್ಯಾರಿಕೋಸ್‌ರವರನ್ನು ಒಳಗೊಂಡ ಒಂದು ಆಯೋಗ ನೇಮಿಸಿದನು. ಇದರ ಕಾರ್ಯದರ್ಶಿಯಾಗಿ ಕ್ಯಾಪ್ಟನ್ ಮನ್ರೊ ನೇಮಕವಾದನು.
- ಒಡೆಯರ್ ಸಂತತಿಯು ಮರು ಸ್ಥಾಪನೆಯು ಮೂರು ಅಸಮ ಒಪ್ಪಂದಗಳನ್ನು ಸ್ವೀಕರಿಸಿತು.

1. ಮೈಸೂರಿನ ವಿಭಜನಾ ಕರಾರು (ಜೂನ್ 22, 1799)
2. ಸಹಾಯಕ ಸೈನ್ಯ ಪದ್ಧತಿ ಒಪ್ಪಂದ (ಜುಲೈ 8, 1799)
3. ಪೂರಕ/ಸಪ್ಲಿಮೆಂಟರಿ ಒಪ್ಪಂದ (1807)

- ಮೈಸೂರು ಒಡೆಯರ್ ಸಂತತಿಯ ಪುನರ್‌ಸ್ಥಾಪನೆಯ ಆಡಳಿತವು ಮೂರು ಹಂತಗಳನ್ನು ಹೊಂದಿದೆ.

1. ಮುಮ್ಮಡಿ ಕೃಷ್ಣರಾಜರ ಆಳ್ವಿಕೆ (1799–1831)
2. ವಸಹತುಶಾಹಿ ನೇರ ಆಳ್ವಿಕೆ (1831–1881)
3. ಪ್ರತಿದಾನ ಕಾಲ (1881–1947)

ಮುಮ್ಮಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ. 1799–1868)

- ಚಾಮರಾಜ ಒಡೆಯರ್ ನಿಧನರಾದಾಗ ಅವರ ದತ್ತು ಪುತ್ರ ಮುಮ್ಮಡಿ ಕೃಷ್ಣರಾಜರಿಗೆ 5 ವರ್ಷ. ಹಾಗಾಗಿ ರಾಜಪ್ರತಿನಿಧಿ ಮತ್ತು ದಿವಾನರಾಗಿ ಪೂರ್ಣಯ್ಯ ಮತ್ತು ಮೈಸೂರು ಪ್ರಥಮ ರೆಸಿಡೆಂಟ್ ಆಗಿ ಸರ್ ಬ್ಯಾರಿಕ್ಲೋಸ್‌ನು ನೇಮಕವಾದರು.

ದಿವಾನ್ ಪೂರ್ಣಯ್ಯರ ಆಡಳಿತ (1799–1811)

- ಪೂರ್ಣಯ್ಯನವರು 1732ರಲ್ಲಿ ಕೊಯಮತ್ತೂರು ಜಿಲ್ಲೆಯ ತಿಹಕಂಬೂರು ಎಂಬಲ್ಲಿ ಜನಿಸಿದರು.
- ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಇವರು 12 ವರ್ಷಗಳ ಕಾಲ ದಿವಾನರಾಗಿದ್ದನು.
- ಪೂರ್ಣಯ್ಯನವರು ಮೈಸೂರು ಸಂಸ್ಥಾನದ ಪ್ರಥಮ ದಿವಾನರು.
- ಇವರು ಆಡಳಿತದ ಅನುಕೂಲಕ್ಕಾಗಿ **ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ** ವರ್ಗಾಯಿಸಿದರು.
- 3ನೇ ಕೃಷ್ಣರಾಜರಿಗೆ ಶಿಕ್ಷಣ ಮತ್ತು ರಾಜಕೀಯ ತರಬೇತಿ ನೀಡಿದರು.
- ರಾಜ್ಯದ ಸಿವಿಲ್ ಆಡಳಿತ ನೋಡಿಕೊಳ್ಳಲು ಹಣಕಾಸು ಇಲಾಖೆ, ಕಂದಾಯ ಇಲಾಖೆ, ರಕ್ಷಣಾ ಇಲಾಖೆ ಮತ್ತು ಇತರ ಎಲ್ಲಾ ವಿಷಯಗಳ ಇಲಾಖೆಗಳನ್ನು ವಿಂಗಡಿಸಿದ್ದರು.
- ಆಡಳಿತ ಮತ್ತು ನ್ಯಾಯ ವಿತರಣೆಗಾಗಿ ಸಂಸ್ಥಾನವನ್ನು **ಅಷ್ಟಗ್ರಾಮ (ಪಟ್ಟಣ), ಚಿತ್ರದುರ್ಗ**, ಬಿದನೂರು(ನಗರ) ಎಂಬ ಆಡಳಿತ ವಿಭಾಗಗಳನ್ನು ವಿಭಜಿಸಿ ಸುಬೇದಾರರನ್ನು ನೇಮಿಸಿದರು.
- ಇವರು **'ಕಂದಾಚಾರಿ'** ಎಂಬ ಪೊಲೀಸ್ ಸೈನ್ಯ ಪದ್ಧತಿಯನ್ನು ಜಾರಿಗೊಳಿಸಿದರು.
- 1805ರಲ್ಲಿ ಮೈಸೂರು ಅದಾಲತ್ ನ್ಯಾಯಾಲಯ ನಿರ್ಮಿಸಿ ಅದಕ್ಕೆ **ವ್ಯಾಸರಾಯ್** ಮತ್ತು **ಅಹಮದ್ ಖಾನ್** ಎಂಬ ನ್ಯಾಯಾಧೀಶರನ್ನು ನೇಮಿಸಿದನು.
- ಲಕ್ಷ್ಮಣತೀರ್ಥ ನದಿಗೆ **ಸಾಗರ ಅಣೆಕಟ್ಟೆ** ಹಾಗೂ ರೈತರ ಅನುಕೂಲಕ್ಕಾಗಿ **ತಕ್ಕಾವಿ ಸಾಲಗಳನ್ನು** ನೀಡಿದರು.
- ಪೂರ್ಣಯ್ಯನವರು **ದೋಂಡಿಯಾವಾಘನ ದಂಗೆ** (1800), 1806ರ **ವೆಲ್ಲೂರು ದಂಗೆ** (ಟಿಪ್ಪುವಿನ ಮಕ್ಕಳಾದ ಫತೇ ಹೈದರ್ ಮತ್ತು ಮೀರ್ ಆಲಂ ನೇತೃತ್ವ) ಮತ್ತು 1809ರ ಯೂರೋಪ್ ಅಧಿಕಾರಿಗಳ ದಂಗೆಗಳನ್ನು ಅಡಗಿಸಿದರು.
- ಮೈಸೂರು ಮತ್ತು ಶ್ರೀರಂಗಪಟ್ಟಣಗಳ ನಡುವೆ ಕಾವೇರಿ ನದಿಗೆ **ವೆಲ್ಲೆಸ್ಲಿ ಸೇತುವೆ** ನಿರ್ಮಿಸಿದರು.
- ರಾಜ್ಯದಲ್ಲಿ ಮೊದಲ ಬಾರಿಗೆ ಸಿಡುಬು ರೋಗ ನಿವಾರಣೆಗೆ ಔಷಧಿ ಬಳಕೆ ಜಾರಿಗೊಳಿಸಿದರು.

ಮುಮ್ಮಡಿ ಕೃಷ್ಣರಾಜರ ನೇರ ಆಡಳಿತ (ಕ್ರಿ.ಶ. 1811–1831)

- 3ನೇ ಕೃಷ್ಣರಾಜರ ಕಾಲದಲ್ಲಿ ಬ್ರಿಟಿಷ್ ರೆಸಿಡೆಂಟ್ ಎ.ಹೆಚ್.ಕೋಲ್ ಮತ್ತು ಹಲವು ದಿವಾನರು ಆಡಳಿತದಲ್ಲಿ ನೆರವಾಗಿದ್ದರು.
- ಇವರು ರಾಜ್ಯವನ್ನು 6 ಫೌಜುಗಳಾಗಿ ವಿಂಗಡಿಸಿ ಅವುಗಳಿಗೆ ಫೌಜುದಾರರನ್ನು ನೇಮಿಸಿದರು.
- ಕಾವೇರಿ ನದಿಗೆ 1829ರಲ್ಲಿ ಶಿವನ ಸಮುದ್ರ ಬಳಿ **ಲೋಕಪಾವನಿ ಮತ್ತು ಅರ್ಕಾವತಿ ಅಣೆಕಟ್ಟು**ಗಳನ್ನು ನಿರ್ಮಿಸಿದರು.
- ಒಡೆಯರ್ ಹೊಸದಾಗಿ ಇಬ್ಬರು ಭಕ್ಷಿ ನ್ಯಾಯಾಧೀಶರಿದ್ದ ಸದರ್ **ನ್ಯಾಯಾಲಯ** ಸ್ಥಾಪಿಸಿದರು.
- 3ನೇ ಕೃಷ್ಣರಾಜರು ಮೈಸೂರು **ಪ್ರಾಣಿ ಸಂಗ್ರಹಾಲಯವನ್ನು** ಪ್ರಾರಂಭಿಸಿದರು.
- ಇವರು ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿ, ಪಬ್ಲಿಕ್ ಲೈಬ್ರರಿ ಮತ್ತು ಇಂಗ್ಲೀಷ್ ಶಾಲೆ, ಅಲೋಪತಿ ಆಸ್ಪತ್ರೆ ಮತ್ತು ಜಗನ್ಮೋಹಿನಿ ಅರಮನೆಯನ್ನು ನಿರ್ಮಿಸಿದರು.
- ಸ್ವತಃ ಕವಿಗಳಾದ 3ನೇ ಕೃಷ್ಣರಾಜರು ಶ್ರೀತತ್ವನಿಧಿ, ಸೌಗಂಧಿಕ ಪರಿಣಯ, ಸೂರ್ಯಚಂದ್ರ ವಂಶಾವಳಿ, ರಾಮಕಥಾ, ಮೈಸೂರಿನ ಇತಿಹಾಸ ಮುಂತಾದ ಕೃತಿಗಳನ್ನು ರಚಿಸಿದರು.

- ಇವರ ಆಸ್ಥಾನದಲ್ಲಿದ್ದ **ಅಭಿನವ ಕಾಳಿದಾಸ ಬಿರುದಾಂಕಿತ ಬಸಪ್ಪಶಾಸ್ತ್ರಿಯು** ಶಕುಂತಲ, ವಿಕ್ರಮೋರ್ವಶೀಯ ಉತ್ತರರಾಮಚರಿತೆ, ರತ್ನಾವಳಿ, ಒತೆಲೋ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು.
- ಇವರ ಆಸ್ಥಾನದಲ್ಲಿ ಉತ್ತರ ಕನ್ನಡದ ಪ್ರಸಿದ್ಧ **ಯಕ್ಷಗಾನ ಪಟು ಪರ್ತಿಸುಬ್ಬು** ಇದ್ದನು.

ಬಿದನೂರು ದಂಗೆ / ನಗರ ದಂಗೆ (ಹೈದರ್ ನಗರ)

- ಶಿವಮೊಗ್ಗ ಜಿಲ್ಲೆಯ ಬಿದನೂರು ಮೈಸೂರು ರಾಜ್ಯದ ಒಂದು ಪ್ರಾಂತ್ಯ / ಫೌಜುದಾರಿಯಾಗಿತ್ತು.
- ಬಿದನೂರು ದಂಗೆಯ ನೇತೃತ್ವವನ್ನು **ಸಾದರಮಲ್ಲ/ಬೂದಿಬಸಪ್ಪ** (ಕುಂಸಿಯ ರೈತರ ಮಗ) ವಹಿಸಿಕೊಂಡಿದ್ದನು. **ಹೊನ್ನಾಳಿ** ಈ ದಂಗೆಯ ಕೇಂದ್ರವಾಗಿತ್ತು.
- ಬಿದನೂರು ದಂಗೆಯನ್ನು ಅಡಗಿಸಲು 3ನೇ ಕೃಷ್ಣರಾಜರು **ಕರ್ನಲ್‌ಬ್ರಿಕ್ಸ್** ಮತ್ತು **ರಾಜ್‌ಕೋಟ್** ನೇತೃತ್ವದ ಸೈನ್ಯದ ನೆರವಿನಿಂದ ದಂಗೆಯನ್ನಡಗಿಸಿದರು.
- ಬಿದನೂರು ದಂಗೆಯ ಪರಿಣಾಮವಾಗಿ 3ನೇ ಕೃಷ್ಣರಾಜರು ಆಡಳಿತದಲ್ಲಿ ಅಸಮರ್ಥರಾಗಿದ್ದಾರೆಂದು ದುರಾಡಳಿತದ ನೆಪವೊಡ್ಡಿ 1831ರಲ್ಲಿ **ವಿಲಿಯಂ ಬೆಂಟಿಕ್‌ನು** ಮೈಸೂರು ಆಡಳಿತವನ್ನು ಕೊನೆಗೊಳಿಸಿ **ಕಮೀಷನರ್ ಆಳ್ವಿಕೆಗೆ** ಒಳಪಡಿಸಿದನು.

44. ವಸಾಹತು ನೇರ ಆಳ್ವಿಕೆ (Direct Colonial Rule)

- 1831ರಿಂದ 1881ರವರೆಗಿನ ಕಮಿಷನರ್‌ಗಳ ಆಳ್ವಿಕೆಯನ್ನು ವಸಾಹತು ನೇರ ಆಳ್ವಿಕೆಯ ಕಾಲ (Direct colonial rule) ಎಂದು ಕರೆಯುವರು.
- 1831ರಲ್ಲಿ ಮೈಸೂರಿನ ಮೊದಲ ಬ್ರಿಟಿಷ್ ಹಿರಿಯ ಕಮಿಷನರ್ ಆಗಿ **ಕರ್ನಲ್ ಬ್ರಿಕ್ಸ್** ಮತ್ತು ಕಿರಿಯ ಕಮಿಷನರ್ ಆಗಿ **ಲೂಷಿಂಗ್‌ಟನ್‌ರು** ನೇಮಕವಾದರು.
- 1832ರಲ್ಲಿ **ಡೂರ್ರಿ ಮತ್ತು ಮ್ಯಾಕ್ಡಿಯೋಲ್ಡ್‌ರವರು** ಕಮಿಷನರ್ ಆಗಿ ನೇಮಕವಾದರು.
- 1834ರಿಂದ **ಮಾರ್ಕ್‌ಕಬ್ಬನ್** ಒಬ್ಬರೇ ಕಮಿಷನರ್ ಆಗಿ ನೇಮಕವಾದರು.

ಸರ್ ಮಾರ್ಕ್ ಕಬ್ಬನ್ (1834–1861)

- ಕಬ್ಬನ್‌ರವರು ಮೈಸೂರಿನಿಂದ ಬೆಂಗಳೂರಿಗೆ ರಾಜಧಾನಿಯನ್ನು ವರ್ಗಾಯಿಸಿದರು.
- ಅಠಾರ ಕಛೇರಿಯನ್ನು ರದ್ದು ಮಾಡಿ 9 ಇಲಾಖೆಗಳುಳ್ಳ ಕೇಂದ್ರ ಕಛೇರಿ ತೆರೆದರು.
- ಪ್ರತಿ ಇಲಾಖೆಯ ಉಸ್ತುವಾರಿಗೆ ಒಬ್ಬೊಬ್ಬ ಕಾರ್ಯದರ್ಶಿಯನ್ನು ನೇಮಿಸಿದರು.
- ಇವರು ಆಡಳಿತ ವಿಭಾಗಗಳ ಸಂಖ್ಯೆಯನ್ನು 6 ರಿಂದ 4ಕ್ಕೆ (ಬೆಂಗಳೂರು, ಅಷ್ಟಗ್ರಾಮ, ಚಿತ್ರದುರ್ಗ,ಹೈದರ್‌ನಗರ) ಇಳಿಸಿದರು.
- ತಾಲ್ಲೂಕುಗಳಿಗೆ ಅಮುಲ್ದಾರರನ್ನು, ಹೋಬಳಿಗಳಿಗೆ ಶೇಖ್‌ದಾರರನ್ನು ನೇಮಿಸಿದನು.
- ಇವರು ಗ್ರಾಮ ಜನತೆಯ ಆತ್ಮ ರಕ್ಷಣೆಗೆ ಬಂದೂಕು ಹೊಂದುವ ಅವಕಾಶ ಕಲ್ಪಿಸಿದರು.
- **ಹುಜೂರ್ ಅದಾಲತ್** (ಮೇಲ್ಮನವಿ) ನ್ಯಾಯಾಲಯವನ್ನು ಕಬ್ಬನ್‌ರವರು ಸ್ಥಾಪಿಸಿದರು.
- ಕಬ್ಬನ್ ಕಾಲದಲ್ಲಿ ಮುಖ್ಯ ಕಮಿಷನರ್ ನ್ಯಾಯಾಲಯ, ಹುಜುರ್ ಅದಾಲತ್ ನ್ಯಾಯಾಲಯ, ಸೂಪರಿಟೆಂಡೆಂಟ್ ನ್ಯಾಯಾಲಯ, ತಾಲ್ಲೂಕು ನ್ಯಾಯಾಲಯ, ಸದರ್ ಮುನ್ಸಿಪ್‌ಕೋರ್ಟ್ಸ್ ಮತ್ತು ಅಮಿಲ್‌ಕೋರ್ಟ್ಸ್ ಎಂಬುದಾಗಿ ವಿಂಗಡಿಸಿದ್ದರು.
- 1856ರಲ್ಲಿ **ಲೋಕೋಪಯೋಗಿ ಇಲಾಖೆ** ಸ್ಥಾಪಿಸಿದರು.
- ರಾಜ್ಯದಲ್ಲಿ ಮೊದಲ ಬಾರಿಗೆ 1859ರಲ್ಲಿ **ಬೆಂಗಳೂರು ಮತ್ತು ಜೋಲಾರ್** ಪೇಟೆಗಳ ನಡುವೆ ರೈಲುಮಾರ್ಗ ಹಾಕಿಸಿದರು.
- ಬೆಂಗಳೂರಿನ **ಕಬ್ಬನ್ ಪಾರ್ಕ್‌ನ್ನು** ತಮ್ಮ ಹೆಸರಿನಲ್ಲಿ ನಿರ್ಮಿಸಿದನು.
- **ಅಕ್ರಾಯ್ ಸುಂಕ** ರದ್ದು ಮಾಡಿದರು ಹಾಗೂ ಭೂಕಂದಾಯ ವಸೂಲಿಯ ಬಟಾಯಿ ಪದ್ಧತಿ ತೆಗೆದುಹಾಕಿ **ರೈತ್ವಾರಿ ಪದ್ಧತಿ** (ನಗದುರೂಪ)ಯನ್ನು ಜಾರಿಗೊಳಿಸಿದರು.
- **ಸಾರ್ವಜನಿಕ ಶಿಕ್ಷಣ ಇಲಾಖೆ** ಹಾಗೂ **ಮೊದಲ ಮುದ್ರಣಾಲಯವನ್ನು** (1840) ಸ್ಥಾಪಿಸಿದರು.
- ಇವರ ಕಾಲದಲ್ಲಿ ಸ್ಯಾಂಡರ್‌ಸನ್ ಕನ್ನಡದಲ್ಲಿ ನಿಘಂಟು ಬಿಡುಗಡೆ ಮಾಡಿದರು.
- ಕಾಫಿ ತೋಟಗಾರಿಕೆ ಅಭಿವೃದ್ಧಿ ಪಡಿಸಿ ಅದರ ಮೇಲೆ **ಅಲಾತ್** ಎಂಬ ತೆರಿಗೆ ಹಾಕಲಾಗಿತ್ತು.
- ನಂದಿದುರ್ಗದಲ್ಲಿ ನೆಹರು ಮೆನ್ಷನ್ ಅನ್ನು ನಿರ್ಮಿಸಿದರು.
- ಕಬ್ಬನ್‌ರವರ ನಂತರ ಸ್ಯಾಂಡರ್ಸ್ ತಾತ್ಕಾಲಿಕವಾಗಿ 1 ವರ್ಷ ಕಮಿಷನರ್ ಆಗಿದ್ದನು.

ಲೇವಿಂಗ್ ಬೆಂಥಾಮ್ ಬೌರಿಂಗ್

- ಮೈಸೂರಿನ ಆಡಳಿತ ವಿಭಾಗಗಳನ್ನು 4 ರಿಂದ 3ಕ್ಕೆ (ಅಷ್ಟಗ್ರಾಮ, ನಂದಿದುರ್ಗ, ಹೈದರ್‌ನಗರ) ಇಳಿಸಿದರು.
- ರಾಜ್ಯದ ಕಮಿಷನರ್ ಅನ್ನು **'ಚೀಫ್ ಕಮಿಷನರ್'** ಎಂದು ಕರೆಯಲಾಯಿತು.
- ಇವರು ಇಲಾಖೆಗಳಲ್ಲಿ **ಆಡಿಟ್ ಮಾಡುವ ಪದ್ಧತಿ** ಜಾರಿಗೊಳಿಸಿದರು.
- 1863ರಲ್ಲಿ **ಇನಾಂ ಕಮಿಷನ್** ಸ್ಥಾಪಿಸಿ ಅವಶ್ಯಕ ಭೂ ಸುಧಾರಣೆ ಮಾಡಲು ನೂತನ ಇಲಾಖೆಯ ರಚನೆ.
- ಬೌರಿಂಗರು **1864ರಲ್ಲಿ ಬೆಂಗಳೂರು ಹೈಕೋರ್ಟ್** ಸ್ಥಾಪಿಸಿದರು.
- ಇವರು ಹುಜೂರ್ ಅದಾಲತ್ ಮತ್ತು ಸದರ್ ಮುನ್ಸಿಪ್ ನ್ಯಾಯಾಲಯಗಳನ್ನು ರದ್ದುಪಡಿಸಿದರು.
- ಬೌರಿಂಗರು 1862ರಲ್ಲಿ

ಕೋಡ್ ಆಫ್ ಕ್ರಿಮಿನಿನಲ್ ಪ್ರೊಸಿಜರ್ (ಸಿಆರ್‌ಪಿಸಿ)ಗಳನ್ನು ಜಾರಿಗೆ ತಂದರು.

- ಬೌರಿಂಗರು ಜುಡಿಷಿಯಲ್ ಕಮಿಷನರ್ ಕೋರ್ಟ್ಸ್, ಕಮಿಷನರ್ಸ್ ಕೋರ್ಟ್ಸ್, ಡೆಪ್ಯುಟಿ ಕಮಿಷನರ್ ಕೋರ್ಟ್ಸ್ ಮತ್ತು ಬೆಂಗಳೂರು ಸ್ಮಾಲ್ ಕ್ಲಾಸ್ ಕೋರ್ಟ್ಸ್ ಎಂದು ವಿಭಾಗಿಸಿದರು.
- 1868ರಲ್ಲಿ **ಅಠಾರ ಕಛೇರಿ (ಹೈಕೋರ್ಟ್ ಕಟ್ಟಡ)** ನಿರ್ಮಾಣ.
- 1863ರಲ್ಲಿ **ಭೂಮಾಪನ ಹುತ್ತು ನಿಷ್ಕರ್ಷೆ ಇಲಾಖೆ** ಸ್ಥಾಪನೆ.
- ಲ್ಯಾಂಡ್ ಸೆಟಲ್‌ಮೆಂಟ್‌ಗಾಗಿ ಸರ್ವೆ ಅಂಡ್ ಸೆಟಲ್‌ಮೆಂಟ್ ಇಲಾಖೆ ಸ್ಥಾಪನೆ.
- 1864ರಲ್ಲಿ **ರಿಜಿಸ್ಟ್ರೇಷನ್ ಕಾಯ್ದೆ** ಪಾಸ್ ಮಾಡಿದರು.
- ಹಣಕಾಸಿನ ಬಡ್ಜೆಟ್‌ನ್ನು ಜಾರಿಗೆ ತಂದರು.
- ಪೊಲೀಸ್ ಇಲಾಖೆಯಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ (ಡಿಐಜಿ), ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಐಜಿಪಿ) ಪೊಲೀಸ್ ಸೂಪರಿಂಟೆಂಡೆಂಟ್ (ಎಸ್‌ಪಿ) ಹುದ್ದೆಗಳನ್ನು ಸೃಷ್ಟಿಸಿದರು.
- 1861ರ **ಪೊಲೀಸ್ ಕಾಯ್ದೆ** ಜಾರಿ ಮಾಡಿ ಪೊಲೀಸರಿಗೆ ಸಮವಸ್ತ್ರ ನೀಡಲಾಯಿತು.
- 1863ರಲ್ಲಿ ಬೆಂಗಳೂರಿನ ಕೇಂದ್ರ ಸೆರಮನೆ ಸ್ಥಾಪಿಸಿದನು.
- 1868ರಲ್ಲಿ ಬೌರಿಂಗ್ **ಕೇಂದ್ರ ಶಿಕ್ಷಣ ಇಲಾಖೆ** ಸ್ಥಾಪಿಸಿದರು.
- 1864ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜು ಸ್ಥಾಪನೆ ಹಾಗೂ ಬೆಂಗಳೂರು ಮ್ಯೂಸಿಯಂನ್ನು ಸ್ಥಾಪಿಸಿದರು.
- ಬೆಂಗಳೂರಿನ **ಬೌರಿಂಗ್ ಆಸ್ಪತ್ರೆಯನ್ನು** ನಿರ್ಮಿಸಿದನು.
- ಬೌರಿಂಗರು **'ದಿ ನೇಟಿವ್ ರೂಲರ್ಸ್ ಆಫ್ ಇಂಡಿಯಾ'** ಎಂಬ ಕೃತಿ ರಚಿಸಿದರು.
- ಬೌರಿಂಗರು ಬೆಂಗಳೂರಿನ **ಕಬ್ಬನ್ ಪಾರ್ಕ್** ನಿರ್ಮಾಣ ಪೂರ್ಣಗೊಳಿಸಿದರು.
- ಬೌರಿಂಗ್ ನಂತರ ಮೈಸೂರ್ ಕಮಿಷನರ್‌ಗಳಾಗಿ ರಿಚರ್ಡ್‌ಮೀಡ್ (1870–75). ಸಿ.ಬಿ. ಸ್ಯಾಂಡರ್ಸ್ (1875–78) ಮತ್ತು ಮೈಸೂರಿನ ಕಡೆಯ ಬ್ರಿಟೀಷ್ ಕಮಿಷನರ್ ಆಗಿ ಜೆ.ಡಿ.ಗೋರ್ಡನ್ (1878–89) ಆಳ್ವಿಕೆ ನಡೆಸಿದರು.

45. ಮೈಸೂರಿನ ಪ್ರತಿದಾನ (Rendition of Mysore)

10ನೇ ಚಾಮರಾಜ ಒಡೆಯರ್ (1881–1894)

- 1858ರ ವಿಕ್ಟೋರಿಯಾ ಮಹಾರಾಣಿಯ ಘೋಷಣೆಯಂತೆ 1867ರಲ್ಲಿ ಮೈಸೂರು ರಾಜ್ಯವನ್ನು ಒಡೆಯರಿಗೆ ಹಿಂದಿರುಗಿಸಲು ತೀರ್ಮಾನಿಸಲಾಯಿತು.
- ಪ್ರತಿದಾನ ಸೂತ್ರದಂತೆ 10ನೇ ಚಾಮರಾಜ ಒಡೆಯರ್ ಮೈಸೂರಿನ ಮಹಾರಾಜರಾದರು.
- ಮೈಸೂರಿನ ಪ್ರತಿದಾನದ ಇನ್‌ಸ್ಟ್ರುಮೆಂಟ್ ಆಫ್ ಆಕ್ಸೇಷನ್‌ನ ಕರಾರಿನಲ್ಲಿ 24 ಅನುಚ್ಛೇದಗಳಿದ್ದವು. ಕರಾರಿನಂತೆ ಒಡೆಯರ್ ಪ್ರತಿವರ್ಷ ಬ್ರಿಟಿಷರಿಗೆ **35 ಲಕ್ಷ ರೂ** ರಕ್ಷಣಾ ಜವಾಬ್ದಾರಿಗಾಗಿ ನೀಡುವುದು.

ದಿವಾನ್ ಸಿ. ರಂಗಚಾರ್ಲು (1881–1883)

- ಇವರು 1831ರಲ್ಲಿ ಚಂಗಲ್‌ಪೇಟೆಯ ಶೆಟ್ಟಿಪುಣ್ಯ ಎಂಬಲ್ಲಿ ಜನಿಸಿದರು.
- ಇವರು ತಹಶೀಲ್ದಾರ್‌ರಾಗಿ ಡೆಪ್ಯುಟಿ ಕಲೆಕ್ಟರ್ ಆಗಿ ಅನಂತರ ಮೈಸೂರು ಅರಮನೆಯ ಮೇಲ್ವಿಚಾರಕರಾಗಿದ್ದರು.

ಸುಧಾರಣೆಗಳು

- ಪ್ರಜಾಪ್ರಭುತ್ವವನ್ನು ಆಚರಣೆಗೆ ತರುವುದಾಗಿ ರಂಗಚಾರ್ಲುರವರು **ಅಕ್ಟೋಬರ್ 7, 1881ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ** ಸ್ಥಾಪಿಸಿದರು. ಇದರಲ್ಲಿ 144 ಸದಸ್ಯರಿದ್ದರು. (ಇವರು ಅಧಿಕಾರೇತರ ಸದಸ್ಯರಾಗಿದ್ದರು) ಇದರ ಅಧಿಕಾರಾವಧಿ 3 ವರ್ಷಗಳು. ದಿವಾನರು ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದರು.
- 1911ರವರೆಗೆ ವರ್ಷಕ್ಕೆ ಒಮ್ಮೆ ಮಾತ್ರ ಪ್ರಜಾಪ್ರತಿನಿಧಿ ಸಭೆಯ

ಈ ಪ್ರಜಾಪ್ರತಿನಿಧಿ ಸಭೆಯು ಇಂದಿನ ಶಾಸಕಾಂಗ ಸಭೆಯಾಗಿದೆ.

- ಭಾರತದಲ್ಲಿಯೇ ಮೊಟ್ಟ ಮೊದಲ ಪ್ರಜಾಸಂಸ್ಥೆ ಹೊಂದಿದ ಸಂಸ್ಥಾನ ಮೈಸೂರು ಸಂಸ್ಥಾನವಾಗಿದೆ.
- 1907ರಲ್ಲಿ ನ್ಯಾಯ ವಿಧೇಯಕ ಸಭೆ ಸ್ಥಾಪಿಸಲಾಯಿತು.
- 1881ರಲ್ಲಿ ಮೈಸೂರಿನ ಮಹಾರಾಣಿ ಬಾಲಕಿಯರ ಪ್ರೌಢಶಾಲೆ ಮತ್ತು ಮೈಸೂರು ಸಾಕ್ಷರತಾ ಸಂಘ ಸ್ಥಾಪಿಸಿದರು.
- ಇವರು ಸ್ತ್ರೀಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು. ನರಸಿಂಗ ಐಯ್ಯಂಗಾರರು ಮೊದಲ ಬಾರಿಗೆ ಹೆಣ್ಣು ಮಕ್ಕಳ ಶಾಲೆಗಳನ್ನು ತೆರೆದರು.
- ಇವರು ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಿದರು.
- 1882ರಲ್ಲಿ ಬೆಂಗಳೂರು–ಮೈಸೂರು ಮತ್ತು ಬೆಂಗಳೂರು – ತಿಪಟೂರು ರೈಲ್ವೆ ಮಾರ್ಗಗಳನ್ನು ನಿರ್ಮಿಸಲು ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿದರು.
- ರಂಗಚಾರ್ಲು ಜಾನ್ ಟೈಲರ್ ಅಂಡ್ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡು **ಕೋಲಾರದ ಚಿನ್ನದ ಗಣಿಗಾರಿಕೆಗೆ** ಗುತ್ತಿಗೆ ಕೊಟ್ಟರು.
- ಬ್ರಿಟಿಷರು ಬೆಂಗಳೂರು ಕಂಟೋನ್ಮೆಂಟ್‌ನ್ನು ಪಡೆದು ಪ್ರತಿಯಾಗಿ ಶ್ರೀರಂಗ ಪಟ್ಟಣವನ್ನು ಮೈಸೂರಿಗೆ ಬಿಟ್ಟುಕೊಟ್ಟರು.
- ಬ್ರಿಟಿಷರು ರಂಗಚಾರ್ಲುರವರಿಗೆ **'ಕಂಪೇನಿಯನ್ ಆಫ್ ದಿ ಇಂಡಿಯನ್ ಎಂಪೈರ್'** ಎಂಬ ಬಿರುದು ನೀಡಿದರು.

ದಿವಾನ್ ಕೆ. ಶೇಷಾದ್ರಿ ಅಯ್ಯರ್ (1885–1901)

- ಇವರು 1845ರಲ್ಲಿ ಕ್ಯಾಲಿಕಟ್‌ನಲ್ಲಿ ಜನಿಸಿದರು.
- ಪ್ರಜಾಪ್ರತಿನಿಧಿ ಸಭೆಯ ಸುಧಾರಣೆ ಮಾಡಿದರು.

- 1898ರಲ್ಲಿ ಕೃಷಿ ಮತ್ತು ಸಂಖ್ಯಾಶಾಸ್ತ್ರ ಇಲಾಖೆಗಳನ್ನು ಸ್ಥಾಪಿಸಿದರು.
- ಭಾರತದಲ್ಲೇ ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ 1896ರಲ್ಲಿ **ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ** ಏರ್ಪಡಿಸಿದ್ದರು.
- 1894ರಲ್ಲಿ **ಕೃಷಿ ಬ್ಯಾಂಕನ್ನು** ಸ್ಥಾಪಿಸಿದರು.
- ಬೆಂಗಳೂರಿನ ಬಿನ್ನಿಮಿಲ್ ಮತ್ತು ಮೈಸೂರಿನ ನೇಯ್ಗೆ ತಯಾರಿಕಾ ಮಿಲ್‌ಗಳನ್ನು ತೆರೆದರು.
- ಇವರು ಮೈಸೂರು ರೈಲ್ವೆಯನ್ನು ಸದರನ್ ಮರಾಠ ಕಂಪನಿಗೆ ಬಿಟ್ಟುಕೊಟ್ಟು 68 ಲಕ್ಷ ರೂಗಳನ್ನು ಪಡೆದರು.
- ನೀರಾವರಿಗಾಗಿ **ಮಾರಿಕಣಿವೆ** (ವಾಣಿವಿಲಾಸ ಜಲಾಶಯ ಹಿರಿಯೂರು)ಯನ್ನು ನಿರ್ಮಿಸಿದರು.
- ಲ್ಯಾಂಡ್ ರೆವೆನ್ಯೂ ಟ್ರಿಬ್ಯುನಲ್ ಸ್ಥಾಪಿಸಿದರು.
- ಮೈಸೂರು ಅಂಚೆ ಸೇವೆಯನ್ನು ಬ್ರಿಟಿಷ್ ಅಂಚೆ ಇಲಾಖೆಯಲ್ಲಿ (1889ರಲ್ಲಿ) ಸಮೀಕರಿಸಿದರು.
- 1891ರಲ್ಲಿ ಜೀವ ವಿಮಾ ಯೋಜನೆಯನ್ನು ಜಾರಿಗೊಳಿಸಿತು.
- ಮೈಸೂರು **ಸಿವಿಲ್ ಸರ್ವೀಸ್** ಪರೀಕ್ಷೆಗಳನ್ನು ಸ್ಥಾಪಿಸಿದರು.
- ಲೋಕಲ್ ಬೋರ್ಡ್ ಮತ್ತು ತಾಲ್ಲೂಕ್ ಬೋರ್ಡ್‌ಗಳನ್ನು ಸ್ಥಾಪಿಸಿದರು.
- ಬಿ.ಎಲ್.ರೈಸ್ ನೇತೃತ್ವದಲ್ಲಿ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಣೆಗೆ ಓರಿಯಂಟಲ್ ಲೈಬ್ರರಿ, ಓರಿಯಂಟಲ್ ರೀಸರ್ಚ್ ಸಂಸ್ಥೆ ಮತ್ತು **ಮೈಸೂರು ಪುರಾತತ್ವ ಇಲಾಖೆಯನ್ನು** ಸ್ಥಾಪಿಸಿದರು.
- ಬ್ರೂಸ್‌ಪುಟ್ ನೇತೃತ್ವದಲ್ಲಿ **ಭೂಗರ್ಭಶಾಸ್ತ್ರ ಇಲಾಖೆ** ಸ್ಥಾಪಿಸಿದರು.
- ಶೇಷಾದ್ರಿ ಅಯ್ಯರ್‌ರವರು ಐತಿಹಾಸಿಕ ಸ್ಮಾರಕಗಳ ರಕ್ಷಣಾ ಕಾಯ್ದೆಯನ್ನು ಪಾಸು ಮಾಡಿದರು.
- ಮೈಸೂರಿನ ಚಾಮರಾಜೇಂದ್ರ ಮೃಗಾಲಯುವನ್ನು ಸ್ಥಾಪಿಸಲಾಯಿತು.
- ಬೆಂಕಿಯಿಂದ ನಾಶವಾಗಿದ್ದ **ಮೈಸೂರು ಅರಮನೆಯ ಪುನರ್ ನಿರ್ಮಾಣ** ಕಾರ್ಯವನ್ನು ಆರಂಭಿಸಿದರು.
- ತುಮಕೂರಿನ ಎಂಪ್ರೆಸ್ ಗರ್ಲ್ಸ್ ಹೈ ಸ್ಕೂಲ್ ಮತ್ತು ಬೆಂಗಳೂರಿನ ಆರ್ಯಬಾಲಿಕ ಪ್ರೌಢಶಾಲೆಗಳನ್ನು ತೆರೆದರು.
- ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯನ್ನು ಸ್ಥಾಪಿಸಿದರು.
- ಟಿಪ್ಪು ಕಾಲದಿಂದ ನಿಂತು ಹೋಗಿದ್ದ ಮೈಸೂರು **ದಸರಾ ಉತ್ಸವವನ್ನು** ಪುನರ್ ಆರಂಭಿಸಿದರು.
- 1887ರಲ್ಲಿ **ಕರ್ನಾಟಕ ಭಾಷೋಜ್ಜೀವಿನಿ ಸಭಾವನ್ನು** ತೆರೆದರು.
- ಮೈಸೂರು ಬಾಲ್ಯ ವಿವಾಹ ನಿಷೇಧ ಕಾಯ್ದೆ–1894ಅನ್ನು ಜಾರಿಗೊಳಿಸಿದರು.
- ಶೇಷಾದ್ರಿ ಅಯ್ಯರ್ ಕಾಲದಲ್ಲಿ ಮೈಸೂರಿಗೆ ಬಂದಿದ್ದ ಸ್ವಾಮಿ ವಿವೇಕಾನಂದರು ಮಹಾರಾಜರು ಕೊಟ್ಟ ನೆರವಿನಿಂದ 1893ರ ಅಮೇರಿಕಾದ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದರು.
- ಮೈಸೂರಿನ ಚೀಫ್ ಕೋರ್ಟ್ ರೆಗ್ಯುಲೇಶನ್ ಪಾಸು ಮಾಡಿ ಒಂದು ಹೈಕೋರ್ಟ್ ತೆರೆದರು.
- **ಜ್ಯೂರಿ ನ್ಯಾಯಾಂಗ ಪದ್ಧತಿಯನ್ನು** ಪರಿಚಯಿಸಲಾಯಿತು.
- ಶೇಷಾದ್ರಿ ಅಯ್ಯರ್‌ರವರು **ಶಿವನ ಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನಾ** ಕೇಂದ್ರವನ್ನು 1899–1900ರಲ್ಲಿ ಸ್ಥಾಪಿಸಿದರು. ಇದರಿಂದ 1902 ಕೆ.ಜಿ.ಎಫ್‌ಗೆ ಹಾಗೂ 1905ರಲ್ಲಿ ಬೆಂಗಳೂರಿಗೆ ವಿದ್ಯುತ್ ಪೂರೈಸಲಾಯಿತು. ಭಾರತದಲ್ಲಿ ವಿದ್ಯುತ್ ಬೆಳಕು ಪಡೆದ ಮೊದಲ ನಗರ ಬೆಂಗಳೂರು. ಈ ಜಲವಿದ್ಯುತ್ ಕೇಂದ್ರ ಭಾರತದ ಮೊದಲ ಜಲವಿದ್ಯುತ್ ಕೇಂದ್ರ.
- ಬ್ರಿಟಿಷ್ ಸಾಮ್ರಾಜ್ಞೆ ಶೇಷಾದ್ರಿ ಅಯ್ಯರ್‌ರವರಿಗೆ **ಗ್ರಾಂಡ್ ಕಮಾಂಡರ್ ಆಫ್ ಬ್ರಿಟಿಷ್ ಎಂಪೈರ್** ಮತ್ತು **ಗ್ರಾಂಡ್ ಕಮಾಂಡರ್ ಸ್ಟಾರ್ ಆಫ್ ಇಂಡಿಯಾ** ಎಂಬ ಬಿರುದುಗಳನ್ನು ನೀಡಿದಳು.
- 10ನೇ ಚಾಮರಾಜರು ಕಲ್ಕತ್ತಾ ಪ್ರವಾಸದಲ್ಲಿದ್ದಾಗ ದಿಫ್ತೀರಿಯಾ ರೋಗದಿಂದ ಬಳಲಿ ನಿಧನರಾದರು. ಆಗ ಅವರ ಮಗ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಅಧಿಕಾರಕ್ಕೆ ತಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ (1895–1940)

- ನಾಲ್ವಡಿ ಕೃಷ್ಣರಾಜರು ಅಧಿಕಾರಕ್ಕೆ ಬಂದಾಗ ಅವರಿಗೆ 10 ವರ್ಷ. ಆದ್ದರಿಂದ ಕೆಂಪನಂಜಮ್ಮಣ್ಣಿ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದಳು.
- ಜೆ.ಜೆ. ವಿಠ್ಠಲ ಮತ್ತು ಪ್ರೇಸರ್‌ರ ನಾಲ್ವಡಿ ಕೃಷ್ಣರಾಜರ ಶಿಕ್ಷಕರಾಗಿದ್ದರು.
- ನಾಲ್ವಡಿ ಕೃಷ್ಣರಾಜರಿಗೆ 1902ರಲ್ಲಿ ಲಾರ್ಡ್ ಕರ್ಜನ್ ಸಮ್ಮುಖದಲ್ಲಿ ಪಟ್ಟಾಭಿಷೇಕವಾಯಿತು. ಅದೇ ವರ್ಷ ಕರ್ನಲ್ ಆಂಡರ್‌ಸನ್ ಬ್ರಿಟಿಷ್ ರೆಸಿಡೆಂಟ್ ಆಗಿ ನೇಮಕವಾದನು.
- ಇವರಿಗೆ ಆಡಳಿತದಲ್ಲಿ ನೆರವಾಗಲು **ತಂಬುಚೆಟ್ಟಿ, ಪಿ.ಎನ್. ಕೃಷ್ಣಮೂರ್ತಿ** ಮತ್ತು **ಮೊದಲಿಯಾರ್**‌ಗಳಿದ್ದ ಒಂದು ಸಲಹಾ ಸಮಿತಿ ನೇಮಿಸಲಾಯಿತು.
- ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಪಿ.ಎನ್. ಕೃಷ್ಣಮೂರ್ತಿ, ಮಾಧವರಾವ್, ಆನಂದರಾವ್, ಸರ್.ಎಂ. ವಿಶ್ವೇಶ್ವರಯ್ಯ, ಕಾಂತರಾಜ್ ಅರಸ್ ಮತ್ತು ಮಿರ್ಜಾ ಇಸ್ಮಾಯಿಲ್‌ರವರು ದಿವಾನರಾಗಿದ್ದರು.
- ಗಾಂಧೀಜಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಮೈಸೂರನ್ನು ರಾಮರಾಜ್ಯ ಹಾಗೂ ಮಹಾರಾಜರನ್ನು **ರಾಜರ್ಷಿ** ಎಂದು ಕರೆದಿದ್ದಾರೆ.
- ನಾಲ್ವಡಿ ಕೃಷ್ಣರಾಜರು ಕಾಶಿ ವಿಶ್ವವಿದ್ಯಾನಿಲಯದಿಂದ ಗೌರವ ಎಲ್.ಎಲ್.ಡಿ. ಪದವಿ ಪಡೆದಿದ್ದರು.
- ನಾಲ್ವಡಿ ಕೃಷ್ಣರಾಜರು **ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು.**
- 1911ರಲ್ಲಿ ನಡೆದ ರಾಜ ದರ್ಬಾರ್ (5ನೇ ಜಾರ್ಜ್)ನ ನೆನಪಿಗಾಗಿ ಮೈಸೂರು ಸಂಸ್ಥಾನ, ಹೈದರಾಬಾದ್ ಸಂಸ್ಥಾನ ಮತ್ತು ಬರೋಡ ಸಂಸ್ಥಾನಗಳನ್ನು **21 ಸುತ್ತಿನ ಗನ್‌ಸೆಲ್ಯೂಟ್** ಸಂಸ್ಥಾನಗಳು ಎನ್ನಲಾಯಿತು. ನಂತರ 1947ರಲ್ಲಿ ಮೈಸೂರು, ಹೈದರಾಬಾದ್

ಸುತ್ತಿನ ಗನ್ ಸೆಲ್ಯೂಟ್ ಸಂಸ್ಥಾನಗಳು ಎನ್ನಲಾಯಿತು.

ದಿವಾನ್ ಪಿ.ಎನ್. ಕೃಷ್ಣಮೂರ್ತಿ (1901-1906)

- 1905ರಲ್ಲಿ ಸಹಕಾರಿ ಸಂಘ ಮತ್ತು ಸಹಕಾರಿ ಬ್ಯಾಂಕುಗಳು ಸ್ಥಾಪಿತವಾದವು.
- ಟಾಟಾ ಅವರ ನೆರವಿನಿಂದಾಗಿ **1906ರಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಭಾರತೀಯ ವಿಜ್ಞಾನ ಸಂಸ್ಥೆ)** ಅನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು.
- 1906ರಲ್ಲಿ ಒಕ್ಕಲಿಗರ ಸಂಘ ಸ್ಥಾಪಿಸಿದರು.

ದಿವಾನ್ ವಿ.ಪಿ. ಮಾಧವರಾವ್ (1906-1909)

- ಮೈಸೂರಿನಲ್ಲಿ **1907ರಲ್ಲಿ ಮೈಸೂರು ವಿಧಾನ ಪರಿಷತ್ ಸ್ಥಾಪನೆಯಾಗಿ** ದ್ವಿಸದನ ಶಾಸಕಾಂಗ ಬೆಳವಣಿಗೆಗೆ ಸಹಕಾರಿಯಾಯಿತು.
- ಬೆಂಗಳೂರು ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಇವರ ಕಾಲದಲ್ಲಿ ಸ್ಥಾಪನೆಯಾಯಿತು.
- ಇವರು **1908ರಲ್ಲಿ ನ್ಯೂಸ್‌ಪೇಪರ್ಸ್ ರೆಗ್ಯುಲೇಷನ್ ಆಕ್ಟ್** ಜಾರಿ ಮಾಡಿ ಪತ್ರಿಕಾ ಸ್ವಾತಂತ್ರ್ಯವನ್ನು ಮುಟ್ಟುಗೋಲು ಹಾಕಿದರು.
- ಮಾಧವರಾವ್‌ರ ಕಾಲದಲ್ಲಿ ಸಾರ್ವಜನಿಕ ಆರೋಗ್ಯ ಇಲಾಖೆ, ಪಶುಸಂಗೋಪನಾ ಇಲಾಖೆ ಮತ್ತು ಅರಣ್ಯ ಸಂರಕ್ಷಣಾ ಇಲಾಖೆಗಳು ಸ್ಥಾಪಿತವಾದವು.

ದಿವಾನ್ ಟಿ. ಆನಂದರಾವ್ (1909-1912)

- ಆನಂದರಾವ್‌ರವರು 1912ರಲ್ಲಿ ಮೈಸೂರು ಅರಮನೆಯನ್ನು (ಶಿಲ್ಪಿ–ಹೆನ್ರಿಇರ್ಲಿನ್) ನಿರ್ಮಿಸಿದರು.
- **1912ರಲ್ಲಿ ಮೈಸೂರು ಸಹಕಾರ ಸಂಘ ಕಾಯ್ದೆ** ಜಾರಿಯಾಯಿತು.
- 1912ರಲ್ಲಿ ಎಂಸಿಎಸ್ ಪರೀಕ್ಷೆಗಳಿಗೆ ನೂತನ ನಿಯಮಾವಳಿಗಳನ್ನು ರೂಪಿಸಲಾಯಿತು.
- ಕ್ಷಯರೋಗ ಆಸ್ಪತ್ರೆ ಮತ್ತು ಬೆಂಗಳೂರಿನ ಗಾಜಿನ ಅರಮನೆ ಸ್ಥಾಪನೆ ನಿರ್ಮಾಣ.
- ವಿಶ್ವೇಶ್ವರಯ್ಯ ಅವರ ಸಲಹೆ ಮೇರೆಗೆ ಕಾವೇರಿ ನದಿಗೆ **ಕನ್ನಂಬಾಡಿ ಅಣೆಕಟ್ಟೆ** ಕಟ್ಟಲಾಯಿತು.

ದಿವಾನ್ ಸರ್.ಎಂ. ವಿಶ್ವೇಶ್ವರಯ್ಯ (1912-1918)

- ವಿಶ್ವೇಶ್ವರಯ್ಯನವರು 1861ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದರು. ಇವರು ಬೆಂಗಳೂರಿನ ವೆಸ್ಲಿಯನ್ ಮಿಷನ್ ಶಾಲೆಯಲ್ಲಿ ಪ್ರೌಢಶಿಕ್ಷಣ ಹಾಗೂ ಪೂನಾದ ಸೈನ್ಸ್ ಕಾಲೇಜಿನಿಂದ ಇಂಜಿನಿಯರಿಂಗ್ ಪದವಿ ಪಡೆದರು.
- 1894ರಲ್ಲಿ ಬಾಂಬೆ ಸರ್ಕಾರದ ಸಹಾಯಕ ಇಂಜಿನಿಯರ್ ಆಗಿ ವೃತ್ತಿ ಕೈಗೊಂಡರು.
- **1912ರಲ್ಲಿ ನಾಲ್ವಡಿ ಕೃಷ್ಣರಾಜರು** ಇವರನ್ನು ಮೈಸೂರು ದಿವಾನರಾಗಿ ನೇಮಿಸಿಕೊಂಡರು.

ದಿವಾನರಾಗಿ ಜಾರಿಗೆ ತಂದ ಸುಧಾರಣೆಗಳು

ಕಾಯ್ದೆ 1918 ಜಾರಿ.

2. ಮೈಸೂರು **ಚೇಂಬರ್ ಆಫ್ ಕಾಮರ್ಸ್** ಮತ್ತು **ಇಂಡಿಯನ್ ಚೇಂಬರ್ ಕಾಮರ್ಸ್** ಸ್ಥಾಪನೆ.
3. 1916ರಲ್ಲಿ **ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ** (ವಿಎಸ್‌ಐಎಲ್) ಸ್ಥಾಪನೆ
4. ಬೆಂಗಳೂರಿನ **ಗಂಧದ ಎಣ್ಣೆ ಮತ್ತು ಸೋಪ್ ಫ್ಯಾಕ್ಟರಿ** ಸ್ಥಾಪನೆ.
5. ಏಷ್ಯಾದ ದೊಡ್ಡ ವಿಮಾನ ಬಿಡಿಭಾಗ ತಯಾರಿಕೆಯ **ಎಚ್‌ಎಎಲ್** ಸ್ಥಾಪನೆ.

- ವುಡ್ ಡಿಸ್ಟಿಲೇಷನ್ ಕೈಗಾರಿಕೆ, ಕೇಂದ್ರ ಕೈಗಾರಿಕಾ ಕಾರ್ಯಗಾರ ಮತ್ತು ಲೋಹದ ಕೈಗಾರಿಕೆ ಸ್ಥಾಪನೆ.
- ಮೈಸೂರು **ಲ್ಯಾಂಪ್ಸ್ ಕೈಗಾರಿಕೆ** ಮತ್ತು **ಮೈಸೂರು ಸ್ಯಾಂಡಲ್ ಸೋಪ್** ಫ್ಯಾಕ್ಟರಿ ಸ್ಥಾಪನೆ.
- ಚರ್ಮ ಹದ ಮಾಡುವ ಕೈಗಾರಿಕೆ, ಕಾಗದ ತಯಾರಿಕಾ ಕೈಗಾರಿಕೆ ಮತ್ತು ಹೆಂಚಿನ ಕಾರ್ಖಾನೆ ಸ್ಥಾಪನೆ.
- ಕೈಗಾರಿಕಾ ಸಂಶೋಧನಾ ಬ್ಯೂರೋ ಮತ್ತು ಭೂಗರ್ಭಶಾಸ್ತ್ರ ಇಲಾಖೆಗಳ ಸ್ಥಾಪನೆ.
- ಕಾವೇರಿ ನದಿಗೆ **1911ರಲ್ಲಿ ಕನ್ನಂಬಾಡಿ ಅಣೆಕಟ್ಟೆ** ನಿರ್ಮಾಣ.
- ಬೆಂಗಳೂರು **ಕೃಷಿ ವಿಶ್ವವಿದ್ಯಾನಿಲಯ** ಮತ್ತು ಮಿಂಟೋ ಕಣ್ಣಿನ ಆಸ್ಪತ್ರೆ ಸ್ಥಾಪನೆ.
- 1914ರಲ್ಲಿ ಚೆನ್ನಪಟ್ಟಣ ಸಿಗ್ನರ್ ಮೇರಿ ನೇತೃತ್ವದಲ್ಲಿ ರೇಷ್ಮೆ ಸಂಶೋಧನಾ ಫಾರಂ ಸ್ಥಾಪನೆ.
- ಬೆಂಗಳೂರಿನ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜು ಮತ್ತು ಮೈಸೂರಿನ ಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜುಗಳನ್ನು ತೆರೆದರು.
- **1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ** ಸ್ಥಾಪನೆ. (ಮೊದಲ ಕುಲಪತಿ ಎಚ್.ವಿ. ನಂಜುಂಡಯ್ಯ)
- 1917ರಲ್ಲಿ ಎಂ. ಬಸವಯ್ಯರವರಿಂದ **ಪ್ರಜಾಮಿತ್ರ ಮಂಡಳಿ** ಸ್ಥಾಪನೆ.
- ಇವರ ಕಾಲದ ಮೈಸೂರು ವಿದ್ಯಾಧಿಕಾರಿ ಸಿ. ರಾಮಲಿಂಗರೆಡ್ಡಿ ಹಿಂದುಳಿದವರ ಶಿಕ್ಷಣಕ್ಕೆ 1 ಲಕ್ಷ ರೂ. ಮೀಸಲಿಟ್ಟರು.
- ವಿಶ್ವೇಶ್ವರಯ್ಯನವರು **1913ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು** ಸ್ಥಾಪಿಸಿದರು.
- ಇವರು **1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಂಗಳೂರಿನಲ್ಲಿ** ಸ್ಥಾಪಿಸಿದರು.
- ಭಾರತದ ಮೊಟ್ಟ ಮೊದಲ **ಹಿಂದುಳಿದ ವರ್ಗಗಳ ಆಯೋಗ ಜಸ್ಟಿಸ್ ಲೆಸ್ಲಿ ಮಿಲ್ಲರ್ ಸಮಿತಿ** ರಾಜ್ಯ ಸರ್ಕಾರಿ ಸೇವೆಗೆ ಹಿಂದುಳಿದವರನ್ನು ಸೇರಿಸಿಕೊಳ್ಳಲು ಅವರಿಗೆ ಮೀಸಲಾತಿ ಕೊಡುವಂತೆ ಸೂಚಿಸಿದಾಗ ವಿಶ್ವೇಶ್ವರಯ್ಯನವರು ದಕ್ಷ ಹಾಗೂ ಯೋಗ್ಯರನ್ನು ಮಾತ್ರ ನೇಮಿಸಿಕೊಳ್ಳಬೇಕೆಂದು ವಾದಿಸಿದರು. ಇದರಿಂದಾಗಿ 1918ರಲ್ಲಿ ಇವರು ದಿವಾನ ಹುದ್ದೆಗೆ ರಾಜೀನಾಮೆ ನೀಡಿದರು.

- ವಿಶ್ವೇಶ್ವರಯ್ಯನವರು **ಕೈಗಾರೀಕರಣ ಇಲ್ಲವೇ ನಾಶ, ಯೋಜನೆ ಇಲ್ಲವೇ ವಿನಾಶಿಸಿ** ಎಂದರು.
- **ಇವರ ಕೃತಿಗಳು:** ಪ್ಲಾನ್ಡ್ ಎಕನಾಮಿ ಫಾರ್ ಇಂಡಿಯಾ, ಎ ಮಿಷನ್ ಆಫ್ ಪ್ರಾಸ್ಪರಸ್ ಮೈಸೂರ್, ಮೈ ಮೆಮೋರಿಸ್ ಆಫ್ ಮೈ ವರ್ಕಿಂಗ್ ಲೈಫ್, ರಾಪಿಡ್ ಡೆವಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್.
- ಬ್ರಿಟಿಷರು ಇವರ ಸೇವೆಯನ್ನು ಗುರುತಿಸಿ **ಕೈಸರ್-ಎ ಹಿಂದ್** ಮತ್ತು **ಸರ್** ಪದವಿಗಳನ್ನು ನೀಡಿ ಗೌರವಿಸಿದರು.
- ವಿಶ್ವೇಶ್ವರಯ್ಯನವರನ್ನು **'ಭಾರತದ ಯೋಜನಾ ಬ್ರಹ್ಮ'** ಎಂದು ಕರೆಯುವರು.

ದಿವಾನ್ ಎಂ. ಕಾಂತರಾಜ್ ಅರಸ (1918-1922)

- ಕಾಂತರಾಜ್ ಅರಸರು ಮೈಸೂರಿನ ಮೊದಲ ಬ್ರಾಹ್ಮಣೇತರ ದಿವಾನರು. ಇವರು ಹಿಂದುಳಿದ ವರ್ಗಗಳ ಹಿತರಕ್ಷಕ ಎಂದು ಪ್ರಸಿದ್ಧಿಯಾಗಿದ್ದಾರೆ.

ದಿವಾನ್ ಎ. ಬ್ಯಾನರ್ಜಿ (1922-1926)

- ಇವರು ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ವಿಸ್ತರಿಸಿ ಅದನ್ನು ಶಾಸಕಾಂಗವಾಗಿ ಅಂಗೀಕಾರ ಮಾಡಿದರು. ಸ್ತ್ರೀಯರಿಗೆ ಮತದಾನದ ಹಕ್ಕು ನೀಡಲಾಯಿತು.
- ಇವರು 1923ರಲ್ಲಿ ತಾಲ್ಲೂಕ್ ಬೋರ್ಡ್‌ಗಳನ್ನು ರದ್ದು ಮಾಡಿ ಗ್ರಾಮ ಪಂಚಾಯಿತಿಗಳಿಗೆ ಕಾನೂನುಬದ್ಧ ಮಾನ್ಯತೆ ನೀಡಿದರು.
- ಇವರ ಕಾಲದಲ್ಲಿ ನಗರ ಮತ್ತು ಪುರಸಭೆಗಳ ಅಧ್ಯಕ್ಷರನ್ನು ಚುನಾಯಿಸಲಾಯಿತು.
- **ಭಜೇಂದ್ರನಾಥ್** ಸೀಲ್ ಅಧ್ಯಕ್ಷತೆಯಲ್ಲಿ 1922ರಲ್ಲಿ ರಾಜ್ಯಾಂಗ ಸುಧಾರಣಾ ಸಮಿತಿ ರಚನೆ.
- **ಅಪೆಕ್ಸ್ ಬ್ಯಾಂಕ್ ಸ್ಥಾಪನೆ.**
- 1923ರಲ್ಲಿ ವೈಸರಾಯ್ ರೀಡಿಂಗ್ ಭೇಟಿ ನೀಡಿದ್ದನು.

ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ (1926-1941)

- ಇವರು 1883ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು.
- ಇವರು 1905ರಲ್ಲಿ ಪೊಲೀಸ್ ಹುದ್ದೆಗೆ ಸೇರಿದರು. ನಂತರ 1916ರಲ್ಲಿ ಮಹಾರಾಜರ ಸಹಾಯಕ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು.
- ಮಿರ್ಜಾ ಇಸ್ಮಾಯಿಲ್‌ರು **1927ರಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಅಧಿನಿಯಮ** ಜಾರಿಗೊಳಿಸಿದರು.
- 1927ರಲ್ಲಿ ಕಾರ್ಮಿಕ ದ್ರವ್ಯ ಪರಿಹಾರ ಕಾಯ್ದೆ ಜಾರಿಗೆ ತಂದರು.
- 1927ರಲ್ಲಿ ಮೈಸೂರು ಲ್ಯಾಂಡ್ ರೆಕಾರ್ಡ್ ರೈಟ್ಸ್ ಅಧಿನಿಯಮ ಜಾರಿಗೊಳಿಸಿದರು.
- 1938ರಲ್ಲಿ ಸಂವಿಧಾನ ಸುಧಾರಣೆಗಾಗಿ ಶ್ರೀನಿವಾಸ ಅಯ್ಯಂಗಾರ್ ಸಮಿತಿ ನೇಮಕ ಮಾಡಿದರು.
- ಬೆಂಗಳೂರಿನ ಪಿಂಗಾಣಿ ಬಟ್ಟಲು ಕೈಗಾರಿಕೆ, ಟೆಲಿಫೋನ್ ಕೈಗಾರಿಕೆ, ಎಲೆಕ್ಟ್ರಿಕಲ್ ಉಪಕರಣಗಳ ಕೈಗಾರಿಕೆ, ರೇಷ್ಮೆ ಮತ್ತು ಗಾಜು ಕೈಗಾರಿಕೆ, ಹೊಗೆಸೊಪ್ಪು ಕಾರ್ಖಾನೆಗಳು ನಿರ್ಮಾಣವಾದವು.
- ಭದ್ರಾವತಿಯಲ್ಲಿ **ಸಿಮೆಂಟ್ ಕೈಗಾರಿಕೆ ಮತ್ತು ಕಾಗದ ಕೈಗಾರಿಕೆಗಳು** ಸ್ಥಾಪನೆಯಾದವು.
- ಬೆಳಗೊಳದ **ರಾಸಾಯನಿಕ ಮತ್ತು ರಸಗೊಬ್ಬರ ಕೈಗಾರಿಕೆ** ಸ್ಥಾಪನೆ.
- ಶಿವಮೊಗ್ಗದ **ಬೆಂಕಿಕಡ್ಡಿ ತಯಾರಿಕಾ ಕೈಗಾರಿಕೆ, ಮಂಡ್ಯದ ಸಕ್ಕರೆ ಕೈಗಾರಿಕೆ** ಸ್ಥಾಪನೆ.
- ದಾವಣಗೆರೆಯ ಜವಳಿ ಕೈಗಾರಿಕೆ ಮತ್ತು ಹರಿಹರದ ಕಿರ್ಲೋಸ್ಕರ್ ಯಂತ್ರೋಪಕರಣಗಳ ತಯಾರಿಕಾ ಕೈಗಾರಿಕೆ ಸ್ಥಾಪನೆ.
- ಮೈಸೂರು ಮತ್ತು ಹಾಸನದ ಕೃಷಿ ಉಪಕರಣಗಳ ಕೈಗಾರಿಕೆ ಸ್ಥಾಪನೆ.
- ಮೈಸೂರಿನ ಗಂಧದ ಸೋಪು ಅಗರಬತ್ತಿ ಮತ್ತು ರೇಷ್ಮೆ ಉತ್ಪನ್ನಗಳ ಮಾರುಕಟ್ಟೆಗಾಗಿ ಲಂಡನ್‌ನಲ್ಲಿ ಒಂದು ವ್ಯಾಪಾರಿ ಕಮಿಷನ್ ನೇಮಕ ಮಾಡಿದರು.
- ವ್ಯಾಪಾರ ಪ್ರಗತಿಗಾಗಿ ಬಾಂಬೆ ಎಂಪೋರಿಯಂ (ಮುಂಬೈನಲ್ಲಿ) ಸ್ಥಾಪನೆ.
- ಬದನವಾಳು ಖಾದಿ ಉತ್ಪಾದನಾ ಕೇಂದ್ರ ಸ್ಥಾಪನೆಯಲ್ಲಿ ದೇಶೀಯ ಸಂಸ್ಥಾನಗಳಲ್ಲೇ ಮೈಸೂರು ಮೊಟ್ಟ ಮೊದಲನೆಯದು.
- ಪ್ರಾಥಮಿಕ ಶಿಕ್ಷಣ ಅಧಿನಿಯಮ ಜಾರಿಗೊಳಿಸಿ ಸ್ಥಳೀಯ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ಶಿಕ್ಷಣದಲ್ಲಿ ಬಂಡವಾಳ ತೊಡಗಿಸುವಂತೆ ಮಾಡಿದರು.
- ಮಿರ್ಜಾ ಇಸ್ಮಾಯಿಲ್‌ರು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆ, ಮೈಸೂರಿನ ವಾಣಿವಿಲಾಸ ಹೆರಿಗೆ ಆಸ್ಪತ್ರೆ, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಸ್ಥಾಪಿಸಿದರು.
- 1927ರಲ್ಲಿ **ಲೋಕಲ್ ಡಿಸ್ಪೆನ್ಸರಿ ಫಂಡ**ನ್ನು ಸ್ಥಾಪಿಸಿದರು.
- **ಮೈಸೂರು ಮೆಡಿಕಲ್ ಕಾಲೇಜು** ಸ್ಥಾಪನೆ ಮಾಡಿದರು.
- ಇವರು ಮಿತ ಸಂತಾನವನ್ನು ಪ್ರೋತ್ಸಾಹಿಸಿದರು. ಜೊತೆಗೆ ರಾಕ್‌ಫೆಲ್ಲರ್ ನಿಧಿ ವತಿಯಿಂದ ಆರೋಗ್ಯ ಸಮೀಕ್ಷೆ ಕೈಗೊಂಡರು.
- ಇಸ್ಮಾಯಿಲ್‌ರ ಅವಧಿಯಲ್ಲಿ **ಮೈಸೂರು ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳು (1927ರಲ್ಲಿ)** ಸ್ಥಾಪನೆಯಾದವು.
- ಕೃಷ್ಣರಾಜ ಸಾಗರದ ಬಳಿ ಜಗತ್ಪ್ರಸಿದ್ಧ ಬೃಂದಾವನ, ಹೂದೋಟವನ್ನು ನಿರ್ಮಿಸಿ ಅದಕ್ಕೆ ವಿದ್ಯುತ್ ದೀಪಾಲಂಕಾರ ಮಾಡಿದರು.
- ಭಾರತದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ **ಗ್ರಾಮ ವಿದ್ಯುದೀಕರಣ ಯೋಜನೆ**ಯನ್ನು ಜಾರಿಗೆ ತಂದರು.
- ಇವರು 1939ರಲ್ಲಿ ಶರಾವತಿ ವಿದ್ಯುತ್ ಉತ್ಪಾದನಾ ಸ್ಥಾವರವನ್ನು ಪ್ರಾರಂಭಿಸಿದರು.
- 1941ರಲ್ಲಿ ಮೈಸೂರು ದಿವಾನ ಪದವಿಯಿಂದ ನಿವೃತ್ತವಾದ ಇಸ್ಮಾಯಿಲ್‌ರು ಜೈಪುರದ ದಿವಾನರಾಗಿ ಮತ್ತು ಅನಂತರ ಹೈದರಾಬಾದ್ ದಿವಾನರಾಗಿ ಕಾರ್ಯ ನಿರ್ವಹಿಸಿದರು.

- ಮಹಾರಾಜರು ಮಿರ್ಜಾ ಇಸ್ಮಾಯಿಲ್‌ರಿಗೆ **ಅಮೀನ್-ಉಲ್-ಮುಲ್ಕ್** ಎಂಬ ಬಿರುದು ನೀಡಿ ಗೌರವಿಸಿದರು.

ಜಯಚಾಮರಾಜ ಒಡೆಯರ್ (1940-1947)

- ಇವರು ಮೈಸೂರು ಒಡೆಯರ ವಂಶದ ಕೊನೆಯ ಮಹಾರಾಜ. ಇವರ ಕಾಲದಲ್ಲಿ ಎನ್. ಮಾಧವರಾವ್ ಮತ್ತು ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಎಂಬ ದಿವಾನರು ಕಾರ್ಯ ನಿರ್ವಹಿಸಿದರು.
- ಜಯಚಾಮರಾಜರ ಕಾಲದಲ್ಲಿ ಮೈಸೂರಿನಲ್ಲಿ ಸ್ವತಂತ್ರ ಹಾಗೂ ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿಗಳು ತೀವ್ರವಾಗಿ ನಡೆದವು.
- 1947ರಲ್ಲಿ ಭಾರತ ಸ್ವತಂತ್ರವಾಗಿ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗಿ **1948ರಲ್ಲಿ ದಿವಾನ ಹುದ್ದೆ ರದ್ದಾಯಿತು.**
- **ಕೆ.ಸಿ. ರೆಡ್ಡಿಯವರು** ಮೈಸೂರಿನಲ್ಲಿ ಅಕ್ಟೋಬರ್ 24, 1947ರಂದು ಜವಾಬ್ದಾರಿ ಸರ್ಕಾರವನ್ನು ರಚಿಸಿ **ಮೈಸೂರಿನ ಮೊದಲ ಮುಖ್ಯಮಂತ್ರಿಯಾಗಿ** ಆಯ್ಕೆಯಾದರು.
- **ಜಯಚಾಮರಾಜ ಒಡೆಯರ್ ಮೈಸೂರು** ರಾಜ್ಯದ ಮೊದಲ ರಾಜ್ಯಪಾಲರಾಗಿ ಆಯ್ಕೆಯಾದರು.
- ಜಯಚಾಮರಾಜರ ಕೃತಿಗಳು: 'ದತ್ತಾತ್ರೇಯ', 'ದಿ ಗೀತ ಅಂಡ್ ಇಂಡಿಯನ್ ಕಲ್ಚರ್', 'ದಿ ವೇ ಅಂಡ್ ದಿ ಗೋಲ್, ದಿ ರಿಲಿಜಿಯನ್ ಅಂಡ್ ಮ್ಯಾನ್.'
- 1956ರಲ್ಲಿ ಮಹಾರಾಜ ಪದವಿಯು ರದ್ದುಗೊಂಡಿತು.

46. ಕರ್ನಾಟಕ ಸ್ವಾತಂತ್ರ್ಯ ಚಳುವಳಿ (Freedom Movement in Karnataka)

- ಕರ್ನಾಟಕ ಸ್ವಾತಂತ್ರ್ಯ ಚಳುವಳಿಯನ್ನು ಪ್ರಮುಖವಾಗಿ 2 ಭಾಗಗಳಾಗಿ ವಿಂಗಡಿಸಬಹುದು. ಅವೆಂದರೆ

1. ಸಶಸ್ತ್ರ ಬಂಡಾಯದ ಕಾಲ (1769-1885)

- ಈ ಅವಧಿಯಲ್ಲಿ ಮೈಸೂರು ಸಂಸ್ಥಾನ, ಬಾಂಬೆ ಮತ್ತು ಹೈದರಾಬಾದ್‌ಗಳಲ್ಲಿ ಕರ್ನಾಟಕ ಸ್ವಾತಂತ್ರ್ಯ ಚಳುವಳಿಯು ತೀವ್ರವಾಗಿತ್ತು. ಈ ಹಂತದಲ್ಲಿ ಹಲವು ಸಶಸ್ತ್ರ ಬಂಡಾಯಗಳು ನಡೆದವು.

ಎ) ಹೈದರಾಲಿ ಮತ್ತು ಟಿಪ್ಪುವಿನ ಹೋರಾಟ (1769-1799)

- ಹೈದರಾಲಿ ಮತ್ತು ಟಿಪ್ಪು ಬ್ರಿಟಿಷರ ವಿರುದ್ಧ ನಾಲ್ಕು ಆಂಗ್ಲೋ ಮೈಸೂರು ಯುದ್ಧಗಳನ್ನು ಮಾಡುವ ಮೂಲಕ ಸ್ವಾತಂತ್ರ್ಯಕ್ಕಾಗಿ ನೆತ್ತರು ಹರಿಸಿದರು.

ಬಿ) ಧೋಂಡಿಯಾವಾಘ್‌ನ ದಂಗೆ

- ಧೋಂಡಿಯಾವಾಘ್‌ನು ಚನ್ನಗಿರಿಯ ಮರಾಠಿ ವಂಶಸ್ಥರ ಒಬ್ಬ ಕೂಲಿ ಸೈನಿಕ. ಇವನು ಹೈದರಾಲಿ ಮತ್ತು ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದನು. ಟಿಪ್ಪು ಇವನನ್ನು ಮುಸ್ಲಿಂಗೆ ಮತಾಂತರಿಸಿ ಶ್ರೀರಂಗಪಟ್ಟಣದಲ್ಲಿಟ್ಟನು. ಟಿಪ್ಪು ಮರಣ ಹೊಂದಿದ ನಂತರ ಆತನು ಬಿದನೂರು ರಾಜನೆಂದು ಘೋಷಿಸಿಕೊಂಡನು. ಬ್ರಿಟಿಷ್ ವಿರೋಧಿಗಳನ್ನೆಲ್ಲ ಸಂಘಟಿಸಿದ ಇವನು 1800ರಲ್ಲಿ ಬ್ರಿಟಿಷರ ವಿರುದ್ಧ ದಂಗೆ ಆರಂಭಿಸಿದನು. ಆದರೆ ಮರಾಠ ಮತ್ತು ನಿಜಾಮರ ಸಹಾಯದಿಂದ ವಾಘನನ್ನು ಆರ್ಥರ್ ವೆಲ್ಲೆಸ್ಲಿಯು ರಾಯಚೂರಿನ ಕೊನಗಲ್ ಬಳಿ ಕೊಲೆ ಮಾಡಿದನು. ವಾಘನ ಬಂಡಾಯವು ದಕ್ಷಿಣ ಭಾರತದ ಬಂಡಾಯ ಎಂದು ಪ್ರಸಿದ್ಧಿಯಾಗಿದೆ.

ಸಿ) **ಐಗೂರು ದಂಗೆ (1802):-** ಇದರ ನಾಯಕ ಐಗೂರು ವೆಂಕಟಾದ್ರಿ, ಕರ್ನಲ್ ವೆಲ್ಲೆಸ್ಲಿ ವೆಂಕಟಾದ್ರಿ ನಾಯಕನನ್ನು ಬಂಧಿಸಿ 1802ರಲ್ಲಿ ಗಲ್ಲಿಗೇರಿಸಿದನು.

ಡಿ) **ಎಲ್ಲೂರು ಬಂಡಾಯ (1806):-** ಬ್ರಿಟಿಷರು ಯೂರೋಪಿಯನ್ ಟೋಪಿಗಳನ್ನು ಧರಿಸಬೇಕೆಂಬ ಆಜ್ಞೆಯನ್ನು ವಿರೋಧಿಸಿ ಟಿಪ್ಪುವಿನ ಮಕ್ಕಳಾದ ಫತೇ ಹೈದರ್ ಮತ್ತು ಮೀರ್ ಆಲಮ್‌ರು ಸೈನಿಕರಿಗೆ ಬ್ರಿಟಿಷರು ಟಿಪ್ಪುವಿನ ಮಕ್ಕಳನ್ನು ಕಲ್ಕತ್ತಾಗೆ ವರ್ಗಾಯಿಸಿದರು.

ಇ) **ಕೊಪ್ಪಳ ದಂಗೆ (1819):-** ವೀರಪ್ಪನ ನೇತೃತ್ವದಲ್ಲಿ ಈ ದಂಗೆಯನ್ನು ಮೇಜರ್ ಪ್ರಿಜ್ಲರ್ ಹತ್ತಿಕ್ಕಿದನು.

ಎಫ್) **ಉದ್‌ಗೀರ್ ದಂಗೆ (1821):-** ದೇಶಮುಖ್‌ರ ನೇತೃತ್ವದ ಈ ದಂಗೆಯನ್ನು ಬ್ರಿಟಿಷರ ಸೇನಾನಿ ಸುಂದರಲ್ಯಾಂಡನು 1821ರಲ್ಲಿ ದಮನಗೊಳಿಸಿದನು.

ಜಿ) **ಸಿಂದಗಿ ಬಂಡಾಯ:-** ಸಿಂದಗಿಯಲ್ಲಿ ನಿಜಾಮರ ಆಳ್ವಿಕೆಯ ವಿರುದ್ಧ ದಂಗೆಯೆದ್ದ ದಿವಾಕರ ದೀಕ್ಷಿತ್, ಶೆಟ್ಟಿಯಪ್ಪ ರಾಸ್ತೆ ಮತ್ತು ದೇಶಪಾಂಡೆಯವರನ್ನು ಬ್ರಿಟಿಷರ ಸ್ಟೀವನ್‌ಸನ್‌ನ್ನು ಹತ್ತಿಕ್ಕಿದನು.

ಎಚ್) **ಕಿತ್ತೂರು ಬಂಡಾಯ (1824):-** 1824ರಲ್ಲಿ ಕಿತ್ತೂರು ಸಂಸ್ಥಾನದ ದೊರೆ ಶಿವಲಿಂಗರುದ್ರಸರ್ಜನು (ಗಂಡು ಸಂತಾನವಿಲ್ಲದೆ) ನಿಧನನಾದನು. ಆಗ ಅವನ ಮಲತಾಯಿ ರಾಣಿ ಚೆನ್ನಮ್ಮಳು ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡು ಅವನ ಪರವಾಗಿ ರಾಜಸೂತ್ರ ವಹಿಸಿಕೊಂಡಳು. ಆದರೆ ಚನ್ನಮ್ಮಾಳ ದತ್ತು ಸ್ವೀಕಾರವನ್ನು ಧಾರವಾಡದ ಬ್ರಿಟಿಷ್ ಕಲೆಕ್ಟರ್ ಜಾಂಗ್ ಥ್ಯಾಕರೆ ನಿರಾಕರಿಸಿದನು. 1824ರಲ್ಲಿ ಕಿತ್ತೂರಿನ ಮೇಲೆ ದಾಳಿ ಮಾಡಿದ ಥ್ಯಾಕರೆಯನ್ನು ಚೆನ್ನಮ್ಮಳು ಕೊಲೆ ಮಾಡಿದಳು. ಈ ಸೇಡು ತೀರಿಸಿಕೊಳ್ಳಲು ಬ್ರಿಟಿಷರು ಅಪಾರ ಸೈನ್ಯದೊಂದಿಗೆ ಕಿತ್ತೂರಿನ ಸೈನ್ಯದ ಮಲ್ಲಪ್ಪ ಮತ್ತು ವೆಂಕಟರಾಮನ ಸಹಾಯದೊಂದಿಗೆ ಕಿತ್ತೂರು ಸೈನ್ಯದ ಫಿರಂಗಿಗಳಲ್ಲಿ ಸಗಣಿ ಬೆರೆಸಿ ಆ ಮೂಲಕ ಚೆನ್ನಮ್ಮಳನ್ನು ಸೋಲಿಸಲಾಯಿತು. ನಂತರ ಆಕೆಯನ್ನು ಬೈಲಹೊಂಗಲ ಜೈಲಿನಲ್ಲಿ ಬಂಧಿಸಲಾಯಿತು. ಅಲ್ಲಿಯೇ ಅವಳು ಕಾಲವಾದಳು.

ಐ) **ಸಂಗೊಳ್ಳಿರಾಯಣ್ಣನ ದಂಗೆ (1830):-** ಕಿತ್ತೂರು ರಾಣಿ ಚೆನ್ನಮ್ಮಾಳ ನಿಷ್ಠಾವಂತ ಸೇವಕನಾದ ಸಂಗೊಳ್ಳಿ ರಾಯಣ್ಣನು ಕಿತ್ತೂರಿನ ಹೋರಾಟವನ್ನು ಮುಂದುವರಿಸಿದನು.

- ಶಿವಲಿಂಗಪ್ಪನನ್ನು ಪುನಃ ಕಿತ್ತೂರಿನ ಸಿಂಹಾಸನಕ್ಕೆ ತರುವುದು ಇವನ ಉದ್ದೇಶವಾಗಿತ್ತು. ಅದಕ್ಕಾಗಿ ಬ್ರಿಟಿಷರ ವಿರುದ್ಧ ಯೋಜನೆ

ರೂಪಿಸಿ ಯೋಧರ ತಂಡವೊಂದನ್ನು ರಚಿಸಿಕೊಂಡು ಬ್ರಿಟಿಷರ ವಿರುದ್ಧ ಗೆರಿಲ್ಲಾ ಯುದ್ಧ ತಂತ್ರ ಹೂಡಿದನು. ಆದರೆ ಬ್ರಿಟಿಷರು ಅವನ ಮಿತ್ರ ಬಾಳಪ್ಪ ರಂಗನಗೌಡರ ನೆರವಿನಿಂದ ರಾಯಣ್ಣನನ್ನು ಬಂಧಿಸಿ 1830ರಲ್ಲಿ ನಂದಗಢದಲ್ಲಿ ಗಲ್ಲಿಗೇರಿಸಲಾಯಿತು.

ಜೆ) **ಬಾದಾಮಿ ದಂಗೆ (1841):–** ಸತಾರ ಚಕ್ರವರ್ತಿ ಅಧಿಕಾರಿ ನರಸಿಂಗ ದತ್ತಾತ್ರೇಯ ಫಾಟ್ಕರ್ ಇಲ್ಲಿ ದಂಗೆಯೆದ್ದನು.

ಕೆ) **ನಗರ ದಂಗೆ (1830–1831):–** ಇದರ ನಾಯಕ ಕುಂಸಿಯ ಸಾದರಮಲ್ಲ/ಬೂದಿಬಸಪ್ಪ. ಈ ದಂಗೆಯನ್ನು ಕಂದಾಯದಲ್ಲಿ ರಿಯಾಯಿತಿ ನೀಡುವ ಮೂಲಕ ದಮನಗೊಳಿಸಲಾಯಿತು.

ಎಲ್) **ಕೊಡಗು ಬಂಡಾಯ:** ಇದರ ನಾಯಕರು ಅಪರಾಂಪರ ಸ್ವಾಮಿ ಮತ್ತು ಕಲ್ಯಾಣಸ್ವಾಮಿ (ಪುಟ್ಟಬಸಪ್ಪ). ಈ ದಂಗೆಯನ್ನು 1837ರಲ್ಲಿ ಬ್ರಿಟಿಷರು ಅಡಗಿಸಿ ಪುಟ್ಟಬಸಪ್ಪನನ್ನು ಮಂಗಳೂರಿನಲ್ಲಿ ಗಲ್ಲಿಗೇರಿಸಿದರು.

ಎಂ) **ಬೆಳಗುತ್ತಿ ಬಂಡಾಯ** (1915) ತಿಮ್ಮಪ್ಪನಾಯಕ ಮತ್ತು ಮರಿಯಪ್ಪರು ಈ ದಂಗೆಯ ನಾಯಕರು.

ಎನ್) **ನಿಪ್ಪಾಣಿ ದಂಗೆ (1841)** ಈ ದಂಗೆಯ ನಾಯಕ ರಘುನಾಥ ರಾಮ್.

ಒ) **ಸೂಫಾ ದಂಗೆ (1858):** ನಾನಾ, ಬಾಬಾ ಮತ್ತು ಹನುಮಂತ ಈ ದಂಗೆಯ ನಾಯಕರುಗಳು.

1857ರಲ್ಲಿ ಕರ್ನಾಟಕದಲ್ಲಾದ ದಂಗೆಗಳು

ಪಿ) **ಹಲಗಲಿ ಬೇಡರ ದಂಗೆ (1858):** ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಹಲಗಲಿಯ ಬೇಡರು ಧೈರ್ಯ ಮತ್ತು ಸಾಹಸಗಳಿಗೆ ಹೆಸರುವಾಸಿಯಾಗಿದ್ದರು. ಬ್ರಿಟಿಷರ ನಿಶಸ್ತ್ರೀಕರಣ ಕಾಯಿದೆ ಜಾರಿಗೆ ತಂದು ಶಸ್ತ್ರಾಸ್ತ್ರಗಳನ್ನು ಹೊಂದುವವರು ಪರವಾನಗಿ ಪಡೆದುಕೊಳ್ಳಬೇಕಾಗಿತ್ತು. ಕರ್ನಲ್ ಸೆಟನ್‌ಕರ್ ಹಳ್ಳಿಗೆ ಬೆಂಕಿ ಇಟ್ಟಾಗ ಬೇಡರು ಸುಟ್ಟು ಹುತಾತ್ಮರಾದರು. (ಬಾಲಾಜಿ ನಿಂಬಾಳಕರ್ ಹೋರಾಡಿದ) ಬೇಡರ ದಂಗೆಯನ್ನು ನಿಗ್ರಹಿಸಲಾಯಿತು.

ಕ್ಯು) **ಸುರಪುರದ ದಂಗೆ (1858)** ರಾಜಾ ವೆಂಕಟಪ್ಪನಾಯಕನು ಬ್ರಿಟಿಷ್ ರೆಸಿಡೆಂಟನ್ನು ಇಟ್ಟುಕೊಳ್ಳಬೇಕೆಂಬ ಸಲಹೆಯನ್ನು ತಿರಸ್ಕರಿಸಿ ಕ್ರಾಂತಿ ಆರಂಭಿಸಿದನು. ಇವನು ನಾನಾ ಸಾಹೇಬ್, ತಾಂತ್ಯಾಟೋಪಿಯ ಸಂಪರ್ಕದಲ್ಲಿದ್ದನು. ವೆಂಕಟಪ್ಪನಾಯಕನು ಬ್ರಿಟಿಷರ ವಿರುದ್ಧ ದಂಗೆ ಏಳಲು ಜನರಿಗೆ ಪ್ರೇರೇಪಿಸಿದನು. ಬ್ರಿಟಿಷ್ ಸೇನಾಧಿಕಾರಿ ನ್ಯೂಬೆರಿಯನ್ನು ಕೊಂದು ಹಾಕಿದನು. 1858ರಲ್ಲಿ ಕ್ಯಾಪ್ಟನ್ ವಿಂಗ್‌ಹ್ಯಾಮನು ಸುರಪುರವನ್ನು ಆಕ್ರಮಿಸಿ, ವೆಂಕಟಪ್ಪನನ್ನು ಸೆರೆಹಿಡಿದನು. ಸೆರೆಮನೆಗೆ ಕೊಂಡೊಯ್ಯುವ ಮಾರ್ಗದಲ್ಲಿ ಅವನು ಗುಂಡು ಹಾರಿಸಿಕೊಂಡು ಪ್ರಾಣ ಬಿಟ್ಟನು.

ಆರ್) **ನರಗುಂದದ ಬಂಡಾಯ:** ಧಾರವಾಡ ಜಿಲ್ಲೆಯ ನರಗುಂದದಲ್ಲಿ 1857ರಲ್ಲಿ ಭಾಸ್ಕರರಾವ್ ದತ್ತುಪುತ್ರರನ್ನು ತೆಗೆದುಕೊಳ್ಳಲು ಬ್ರಿಟಿಷರು ಅನುಮತಿ ಕೊಡಲಿಲ್ಲ. ಆಗ ಇವನು ನೆರೆಹೊರೆಯ ಪಾಳೆಗಾರರ

ಭಾಸ್ಕರರಾವ್‌ನನ್ನು ಸೆರೆಹಿಡಿದು 1858ರಂದು ಬೆಳಗಾವಿಯಲ್ಲಿ ಗಲ್ಲಿಗೇರಿಸಿದರು.

ಎಸ್) **ಮುಂಡರಗಿ ಬಂಡಾಯ (1858)** ಧಾರವಾಡ ಜಿಲ್ಲೆಯ ಮುಂಡರಗಿಯಲ್ಲಿ ಭೀಮರಾಯನು ದಂಗೆಯೆದ್ದನು. ಇವನು ಕೊಪ್ಪಳ, ಬಳ್ಳಾರಿಯ ತಹಶೀಲ್ದಾರನಾಗಿದ್ದನು. ಇವನು ಡಂಬಳ ಮತ್ತು ಗದಗದ ಖಜಾನೆ ಲೂಟಿ ಮಾಡಿ, ಹೆಮ್ಮಿಗೆಯ ಶಸ್ತ್ರಾಸ್ತ್ರಗಳನ್ನು ಕೊಳ್ಳೆ ಹೊಡೆದನು. ಕೊಪ್ಪಳ ಕದನದಲ್ಲಿ ಬ್ರಿಟಿಷರಿಂದ ಸೋತು ತಾನೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡನು.

2. ಕಾಂಗ್ರೆಸ್ ನೇತೃತ್ವದ ಅಹಿಂಸಾತ್ಮಕ ಹೋರಾಟ (1885–1947)

- 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ ಇದರ ಮೊದಲ ಅಧಿವೇಶನ **ಡಬ್ಲ್ಯು.ಸಿ. ಬ್ಯಾನರ್ಜಿ ಅಧ್ಯಕ್ಷತೆಯಲ್ಲಿ ಬಾಂಬೆಯಲ್ಲಿ** ನಡೆಯಿತು. ಇಲ್ಲಿ ಕೋಲಾಚಲಂ ವೆಂಕಟರಾವ್, ಬಾಲಾಚಾರಿ, ಚಂದಾವರ್ಕರ್ ಮುಂತಾದ ಕನ್ನಡಿಗರು ಭಾಗವಹಿಸಿದ್ದರು. 1900ರ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ನಾಣಯ್ಯ ಚಂದಾವರ್ಕರ್ ಅಧ್ಯಕ್ಷತೆಯಲ್ಲಿ ಜರುಗಿತ್ತು. 1918ರ ಬಿಜಾಪುರ ಸಮಾವೇಶ ವಿಠ್ಠಲಬಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಜರುಗಿತ್ತು.

ಸ್ವದೇಶಿ ಚಳುವಳಿ

- 1905ರಲ್ಲಿ ಲಾರ್ಡ್ ಕರ್ಜನ್‌ನು ಬಂಗಾಳ ವಿಭಜನೆ ಮಾಡಿದನು. ಇದು **ಸ್ವದೇಶಿ ಚಳುವಳಿ** ಆರಂಭಕ್ಕೆ ಮೂಲ ಕಾರಣವಾಯಿತು.
- ಕರ್ನಾಟಕದಲ್ಲಿ ಈ ಚಳುವಳಿ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬಳ್ಳಾರಿ, ಬಾಗಲಕೋಟೆ, ಹಾನಗಲ್, ಗದಗ ಮುಂತಾದ ಕಡೆ ಆರಂಭವಾಗಿ ವಿದೇಶಿ ವಸ್ತುಗಳನ್ನು ಸುಟ್ಟು ಸ್ವದೇಶಿ ವಸ್ತುಗಳನ್ನು ಬಳಸಿದರು.
- ಸ್ವದೇಶಿ ಚಳುವಳಿಯಲ್ಲಿ **ಕರ್ನಾಟಕದ ಸಿಂಹ ಗಂಗಾಧರರಾವ್ ದೇಶಪಾಂಡೆ**. ಆಲೂರು ವೆಂಕಟರಾವ್, ಶ್ರೀನಿವಾಸ ಕೌಜಲಗಿ, ಬಾಲಾಚಾರಿ, ಜೋಷಿ, ಜಯರಾವ್‌ರವರು ಪಾಲ್ಗೊಂಡಿದ್ದರು.
- ಬೆಂಗಳೂರು, ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಮಂಗಳೂರುಗಳಲ್ಲಿ ಅನೇಕ ರಾಷ್ಟ್ರೀಯ ಶಾಲೆಗಳು ಪ್ರಾರಂಭವಾದವು.
- ಎನ್.ಎಸ್. ಹರ್ಡೀಕರ್‌ರವರು ಬೀದಿ–ಬೀದಿಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿ ಜನಪ್ರಿಯಗೊಳಿಸಿದರು.
- **1907ರ ಸೂರತ್ ಕಾಂಗ್ರೆಸ್ ಅಧಿವೇಶನ:** ಈ ಅಧಿವೇಶನದಲ್ಲಿ ಬೆಳಗಾವಿಯ ಅಣ್ಣಾಚಾರ್ಯ ಹೊಸ ಕೇಸರಿ. ಗಂಗಾಧರರಾವ್ ದೇಶಪಾಂಡೆ, ಗೋವಿಂದರಾವ್ ಯಾಳಗಿ, ಶ್ರೀನಿವಾಸ ಕೌಜಲಗಿ ಮತ್ತು ಧಾರವಾಡದಿಂದ ಆಲೂರು ವೆಂಕಟರಾಯರು ಪಾಲ್ಗೊಂಡು ತಿಲಕರಿಗೆ ಬೆಂಬಲ ನೀಡಿದರು.
- ಹನುಮಂತರಾವ್ ದೇಶಪಾಂಡೆ 1907ರಲ್ಲಿ ಗುಪ್ತ ಕ್ರಾಂತಿಕಾರಿ ಸಂಘವಾದ **'ಮ್ಯಾಜಿನಿ ಕ್ಲಬ್‌ನ್ನು'** ಬೆಳಗಾವಿಯಲ್ಲಿ ಸ್ಥಾಪಿಸಿದರು.

ಇದರ ಶಾಖೆಯನ್ನು **1916ರಲ್ಲಿ ಕರ್ನಾಟಕದ ಕೇಸರಿ** ಗಂಗಾಧರರಾವ್ ದೇಶಪಾಂಡೆಯವರು ಧಾರವಾಡದಲ್ಲಿ ಸ್ಥಾಪಿಸಿದರು. ಕರ್ನಾಟಕಕ್ಕೆ ಭೇಟಿ ನೀಡಿದ ತಿಲಕರು ಸ್ವದೇಶಿ ಪ್ರಚಾರ ಮಾಡಿದರು.

- 1916ರಲ್ಲಿ ಧಾರವಾಡದಲ್ಲಿ **ಕರ್ನಾಟಕ ಸಭಾ** ಅಸ್ತಿತ್ವಕ್ಕೆ ಬಂದಿತು.
- 1917ರಲ್ಲಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಸ್ಥಾಪನೆಯಾಗಿ ಅದು ಸೇವಾದಳದ ಚಟುವಟಿಕೆ ಕೇಂದ್ರವಾಯಿತು.
- ತಿಲಕರು 1920ರಲ್ಲಿ ನಿಧನ ಹೊಂದಿದರು.

ಗಾಂಧಿ ಯುಗ (1919-1947)

- ಗಾಂಧೀಜಿಯವರು 1915ರಲ್ಲಿ ಮೊದಲ ಬಾರಿಗೆ ಬೆಂಗಳೂರಿಗೆ ಭೇಟಿ ನೀಡಿ ಗೋಖಲೆಯವರ ಪುತ್ಥಳಿಯನ್ನು ಅನಾವರಣ ಮಾಡಿದರು.
- 1920ರಲ್ಲಿ ತಿಲಕರ ನಿಧನದಿಂದಾಗಿ ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ವಹಿಸಿಕೊಂಡರು.

ಖಿಲಾಫತ್ ಚಳುವಳಿ

- ಹುಬ್ಬಳ್ಳಿಯಲ್ಲಿ ಖಿಲಾಪತ್ ದಿನಾಚರಣೆಯನ್ನು ಮಾರ್ಚ್ 21, 1919ರಂದು ಹಿಂದೂ ಮುಸ್ಲಿಮರು ಆಚರಿಸಿ ಕರಪತ್ರ ಹಂಚಿದರು. ಸಿರ್ಸಿ, ಸಿದ್ದಾಪುರ, ಕುಮುಟಾಗಳಲ್ಲಿ ಖಿಲಾಪತ್ ಚಳುವಳಿ ನಡೆಯಿತು. 1921ರಲ್ಲಿ ಅಬಿಬುಲ್ಲಾಖಾನ್‌ನು ಕಾರವಾರ ಜಿಲ್ಲೆಯಲ್ಲಿ ಸಂಚರಿಸಿ ಸಭೆಗಳನ್ನು ನಡೆಸಿ ಖಿಲಾಪತ್ ಚಳುವಳಿ ಪ್ರಾರಂಭ ಮಾಡಿದನು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

- ಅಖಿಲ ಕರ್ನಾಟಕ ಮೊದಲ ರಾಜಕೀಯ ಸಮ್ಮೇಳನವು 1920ರಲ್ಲಿ ವಿ.ಪಿ.ಮಾಧವರಾವ್ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ನಡೆಯಿತು.
- 1920ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಗದಗದಲ್ಲಿ ಅಸ್ತಿತ್ವಕ್ಕೆ ಬಂದಿತು. ಅದರ ಮೊದಲ ಅಧ್ಯಕ್ಷರಾಗಿ ಗಂಗಾಧರರಾವ್ ದೇಶಪಾಂಡೆ ಆಯ್ಕೆಯಾದರು.

ಅಸಹಕಾರ ಚಳುವಳಿ (1920-1922)

- ರೌಲತ್ ಕಾಯಿದೆ ಹಾಗೂ ಜಲಿಯನ್ ವಾಲಾಬಾಗ್ ದುರಂತಗಳನ್ನು ಖಂಡಿಸಿದ ಗಾಂಧೀಜಿ 1920ರಲ್ಲಿ ಅಸಹಕಾರ ಚಳುವಳಿ ಆರಂಭಿಸಿದರು. 1921ರಲ್ಲಿ ಗಾಂಧೀಜಿ ಬೆಂಗಳೂರಿಗೆ ಪ್ರಚಾರಕ್ಕಾಗಿ ಬಂದಿದ್ದರು.
- ಕರ್ನಾಟಕದಲ್ಲಿ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಗದಗ, ಅಂಕೋಲಾ, ಸಿರ್ಸಿ ಸಿದ್ದಾಪುರ ಮುಂತಾದ ಕಡೆ ಅಸಹಕಾರ ಚಳುವಳಿ ಆರಂಭವಾಯಿತು.
- ಈ ಚಳುವಳಿಯಲ್ಲಿ ಆರ್.ಆರ್.ದಿವಾಕರ್, ಡಾ. ಹರ್ಡೀಕರ್, ಆಲೂರು ವೆಂಕಟರಾವ್, ಎಸ್. ಕೌಜಲಗಿ, ಕೆ. ಸದಾಶಿವರಾವ್, ನಾರಾಯಣರಾವ್, ಆರ್.ಆರ್. ಕಾರಂತ ಮುಂತಾದವರು ಭಾಗಹಿಸಿದ್ದರು.

ತೆರೆದರು.

- **ಕರ್ನಾಟಕದ ಗಾಂಧಿ** ಎಂದು ಪ್ರಖ್ಯಾತರಾದ **ಹರ್ಡೀಕರ್ ಮಂಜಪ್ಪ** ಖಾದಿ ಪ್ರಚಾರ ಕೈಗೊಂಡರು.
- ಗಾಂಧೀಜಿಯವರು ಫೆಬ್ರವರಿ 5, 1922ರ ಚೌರಾಚೌರಿ ದುರಂತದಿಂದಾಗಿ ಅಸಹಕಾರ ಚಳುವಳಿಯನ್ನು ವಾಪಸ್ ಪಡೆದರು.
- 1923ರಲ್ಲಿ ಎನ್.ಎಸ್. ಹರ್ಡೇಕರ್‌ರು **'ಹಿಂದೂಸ್ಥಾನ್ ಸೇವಾದಳ'**ವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿದರು.
- ಕರ್ನಾಟಕ ರಾಜಕೀಯ ಸಮ್ಮೇಳನಗಳು 1922ರಲ್ಲಿ ಮಂಗಳೂರು ಮತ್ತು 1924ರಲ್ಲಿ ಗೋಕರ್ಣದಲ್ಲಿ **ಎಸ್. ನಾಯ್ಡು** ಮತ್ತು **ದ್ವಾರಕನಾಥ್** ಅಧ್ಯಕ್ಷತೆಯಲ್ಲಿ ಜರುಗಿದವು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ (1924)

- 1924ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಜರುಗಿತು. ಸಭೆಯಲ್ಲಿ ವಲ್ಲಭಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ಮಾಳವಿಯ, ಮೌಲನಾ ಆಜಾದ್, ರಾಜಾಜಿ, ನೆಹರೂ, ಆಲಿ ಸಹೋದರರು, ಸರೋಜಿನಿ ನಾಯ್ಡು, ಬಜಾಜ್ ಮೊದಲಾದವರು ಭಾಗವಹಿಸಿದ್ದರು.
- ಈ ಸಭೆಯಲ್ಲಿ ಹುಯಿಲಗೋಳ ನಾರಾಯಣರು **'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'** ಎಂಬ ಗೀತೆಯನ್ನು ಹಾಡಿದರು.
- 1926ರಲ್ಲಿ ಬೆಳಗಾಂನಲ್ಲಿ **ಖಾದಿ ಸಂಘ** ಸ್ಥಾಪನೆಯಾಯಿತು.
- ಮೈಸೂರು ಸಂಸ್ಥಾನದಲ್ಲಿ ಜನವರಿ 26, 1930ರಂದು ತ್ರಿವರ್ಣ ಧ್ವಜ ಹಾರಿಸಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು.
- 1927ರಲ್ಲಿ ಗಾಂಧೀಜಿಯವರು ಸುಮಾರು 4 ತಿಂಗಳ ಕಾಲ ನಂದಿ ಬೆಟ್ಟದಲ್ಲಿ ವಿಶ್ರಾಂತಿ ಪಡೆದರು.
- 1934ರಲ್ಲಿ ಗಾಂಧೀಜಿ ಹರಿಜನ ಪ್ರವಾಸ ಕೈಗೊಂಡು ಕನ್ನಡಿಗರನ್ನು ಪ್ರೇರೇಪಿಸಿದರು.

ಅಂಕೋಲಾ ಉಪ್ಪಿನ ಸತ್ಯಾಗ್ರಹ

- 1930ರಲ್ಲಿ ಗಾಂಧೀಜಿಯವರು ದಂಡಿ ಉಪ್ಪಿನ ಸತ್ಯಾಗ್ರಹ ಕೈಗೊಂಡು ಉಪ್ಪಿನ ಮೇಲೆ ತೆರಿಗೆ ವಿಧಿಸಿದ್ದ ಕಾಯ್ದೆಯನ್ನು ಭಂಗ ಮಾಡಿದರು. ಈ ಸತ್ಯಾಗ್ರಹದಲ್ಲಿ **ಕರ್ನಾಟಕದ ಮೈಲಾರ ಮಹದೇವಪ್ಪ** ಭಾಗವಹಿಸಿದ್ದರು.
- ಕರ್ನಾಟಕದಲ್ಲಿ ಕಾನೂನುಭಂಗ ಚಳುವಳಿಯನ್ನು **ಎನ್.ಎಸ್. ಹರ್ಡೀಕರ್**‌ರವರು ಘೋಷಿಸಿದರು.
- ಕರ್ನಾಟಕದ ಉಪ್ಪಿನ ಸತ್ಯಾಗ್ರಹ ಪ್ರಮುಖ ಕೇಂದ್ರ ಅಂಕೋಲಾವಾಗಿತ್ತು. ಈ ಸತ್ಯಾಗ್ರಹದಲ್ಲಿ **ಮೈಲಾರ ಮಹಾದೇವಪ್ಪ, ಎಂ.ಪಿ. ನಾಡಕರ್ಣಿ** ಭಾಗವಹಿಸಿದ್ದರು.
- ಉಪ್ಪಿನ ಸತ್ಯಾಗ್ರಹ ಕೇಂದ್ರವಾದ ಅಂಕೋಲಾವನ್ನು **'ಕರ್ನಾಟಕದ ಬಾರ್ಡೋಲಿ'** ಎನ್ನುವರು.
- ಕರ್ನಾಟಕದಲ್ಲಿ ಸಿರ್ಸಿ, ಸಿದ್ದಾಪುರ, ಬೆಳಗಾಂಗಳಲ್ಲಿ ಸತ್ಯಾಗ್ರಹಗಳು

ನಡೆದವು.

ಕರ ನಿರಾಕರಣ ಚಳುವಳಿ

- ವಲ್ಲಭಭಾಯಿ ಪಟೇಲರು ಬಾರ್ದೋಲಿಯಲ್ಲಿ ಪ್ರಾರಂಭಿಸಿದ ಚಳುವಳಿಯಿಂದ ಉತ್ತೇಜಿತರಾದ ಕನ್ನಡಿಗರು ಧಾರವಾಡ, ಸಿರ್ಸಿ, ಸಿದ್ಧಾಪುರ, ಅಂಕೋಲಾ, ಶಿಕಾರಿಪುರ, ಶಿರಾಳಕೊಪ್ಪ ಮತ್ತು ಹಿರೇಕೆರೂರುಗಳಲ್ಲಿ ಕರ ನಿರಾಕರಣ ಚಳುವಳಿ ಕೈಗೊಂಡರು.
- ಕರ ನಿರಾಕರಣ ಚಳುವಳಿಯ ನೇತೃತ್ವವನ್ನು ಆರ್.ಆರ್. ದಿವಾಕರ್, ವೆಂಕಟರಾಮಯ್ಯ ಮತ್ತು ವೀರನಗೌಡ ಪಾಟೀಲ ವಹಿಸಿದ್ದರು.
- ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಬಳ್ಳಾರಿ ಸಿದ್ಧಮ್ಮ, ಯಶೋಧರಮ್ಮ, ಕಮಲಾಬಾಯಿ ಚಟ್ಟೋಪಾಧ್ಯಾಯ, ಉಮಾಬಾಯಿ ಮುಂತಾದ ಸ್ತ್ರೀಯರು ಭಾಗವಹಿಸಿದ್ದರು.
- ಲಂಡನ್‌ನಲ್ಲಿ ಜರುಗಿದ ದುಂಡು ಮೇಜಿನ ಸಮ್ಮೇಳನಗಳಲ್ಲಿ ಮಿರ್ಜಾ ಇಸ್ಮಾಯಿಲ್ ಮತ್ತು ಬೆನಗಲ್ ರಾಮರಾಯರು ಪ್ರತಿನಿಧಿಸಿದರು.
- 1930ರಲ್ಲಿ ಜೂನ್ 2ರಲ್ಲಿ ನೆಹರೂರವರು ಬೆಂಗಳೂರಿನ ರೈಲ್ವೆ ನಿಲ್ದಾಣದ ಬಳಿ ತ್ರಿವರ್ಣ ಧ್ವಜ ಹಾರಿಸಿದರು.
- 1938ರಲ್ಲಿ ಮೈಸೂರು ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದು ಟಿ. ಸಿದ್ಧಲಿಂಗಯ್ಯ ಅದರ ಮೊದಲ ಅಧ್ಯಕ್ಷರಾದರು.

ಶಿವಪುರದ ಧ್ವಜ ಸತ್ಯಾಗ್ರಹ (ಏಪ್ರಿಲ್ 11, 12, 13, 1938)

- ಮೈಸೂರು ಕಾಂಗ್ರೆಸ್‌ನ ಮೊದಲ ಅಧಿವೇಶನದ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ 1930ರಲ್ಲಿ ಜರುಗಿತು. ಇದರ **ಅಧ್ಯಕ್ಷತೆಯನ್ನು ಟಿ. ಸಿದ್ಧಲಿಂಗಯ್ಯ** ವಹಿಸಿದ್ದರು. ನಿಷೇಧಾಜ್ಞೆಯನ್ನು ಲೆಕ್ಕಿಸದೆ ಸಿದ್ಧಲಿಂಗಯ್ಯ ಧ್ವಜಾರೋಹಣ ಮಾಡಿ ದಸ್ತಗಿರಿಯಾದರು. ಜೊತೆಗೆ ಕೆ.ಸಿ. ರೆಡ್ಡಿ. ಕೆ.ಟಿ. ಭಾಷ್ಯಂ, ಹೆಚ್. ಸಿದ್ಧಯ್ಯ, ಹೆಚ್.ಸಿ. ದಾಸಪ್ಪ, ವಿ. ವೆಂಕಟಪ್ಪ ಮತ್ತು ಬಳ್ಳಾರಿ ಸಿದ್ಧಮ್ಮ ದಸ್ತಗಿರಿಯಾದರು.

ವಿದುರಾಶ್ವತ್ಥ ದುರಂತ (ಏಪ್ರಿಲ್ 25, 1938)

- ಚಿಕ್ಕಬಳ್ಳಾಪುರ ಜಿಲ್ಲೆಯ ವಿದುರಾಶ್ವತ್ಥದಲ್ಲಿ ಜನರು ಕಾಂಗ್ರೆಸ್ ಪ್ರಚಾರ ಕೈಗೊಂಡು ಶಾಂತಿಯುತವಾಗಿ ವಿಹರಿಸಿಕೊಳ್ಳುತ್ತಿದ್ದ ಜನರ ಮೇಲೆ 92 ಸುತ್ತು ಗುಂಡು ಹಾರಿಸಿದ್ದರಿಂದ ಸ್ಥಳದಲ್ಲೇ 35 ಜನ ಸತ್ತರು. ಈ ಕಾರಣಕ್ಕಾಗಿ ವಿದುರಾಶ್ವತ್ಥವನ್ನು ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಕರೆಯಲಾಗಿದೆ. ಇದರ ಜ್ಞಾಪಕಾರ್ಥ 1959ರಲ್ಲಿ ಇಲ್ಲಿ ಸತ್ಯಾಗ್ರಹ ಸ್ಮಾರಕ ಪ್ರೌಢಶಾಲೆ ತೆರೆಯಲಾಗಿದೆ. ಈ ಘಟನೆಯನ್ನು ಕುರಿತು ಪಟ್ಟಾಭಿ ಸೀತಾರಾಮಯ್ಯನವರು ಅದು ಪಂಜಾಬಿನ ಜಲಿಯನ್ ವಾಲಾಬಾಗ್ ಘಟನೆಯನ್ನು ನೆನಪಿಗೆ ತರುತ್ತದೆ ಎಂದರು.

ಹ್ಯಾಮಿಲ್ಟನ್ ಸತ್ಯಾಗ್ರಹ (1939)

- ಮೈಸೂರಿನಲ್ಲಿ ಹೊಸದಾಗಿ ನಿರ್ಮಿಸಿದ ಪೊಲೀಸ್ ಠಾಣೆಗೆ ಆಂಗ್ಲ ಇನ್ಸ್‌ಪೆಕ್ಟರ್ ಜನರಲ್ ಆದ ಹ್ಯಾಮಿಲ್ಟನ್ ಹೆಸರು ಇಡುವುದನ್ನು ವಿರೋಧಿಸಿ ತಗಡೂರು ರಾಮಚಂದ್ರರಾಯ ಮತ್ತು

ಕ್ವಿಟ್ ಇಂಡಿಯಾ ಚಳುವಳಿ (1942)

- ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯು ಆಗಸ್ಟ್ 8, 1942ರಂದು ಮುಂಬೈನಲ್ಲಿ ಕ್ವಿಟ್ ಇಂಡಿಯಾ/ಚಲೇಜಾವ್ ಠಾರಾವನ್ನು ಹೊರಡಿಸಿತು. ಗಾಂಧೀಜಿಯವರು ಜನರಿಗೆ **ಮಾಡು ಇಲ್ಲವೇ ಮಡಿ** ಎಂಬ ಕರೆ ಕೊಟ್ಟರು. ಈ ಕರೆಗೆ ಓಗೊಟ್ಟ ಹಲವು ಪ್ರದೇಶಗಳಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಜರುಗಿತು. ಚಳುವಳಿಯ ಕಾರ್ಯಕ್ರಮಗಳಾದ ವಿದೇಶಿ ವಸ್ತುಗಳ ಬಹಿಷ್ಕಾರ, ಮಧ್ಯಪಾನ ಅಂಗಡಿಗಳ ಮುಂದೆ ಪಿಕೆಂಟಿಗ್ ಮಾಡುವುದು, ಟಿಕೆಟ್ ಇಲ್ಲದೆ ರೈಲಿನಲ್ಲಿ ಪ್ರಯಾಣಿಸುವುದು, ರೈಲ್ವೆ, ಟೆಲಿಗ್ರಾಫ್, ಅಂಚೆ ತಂತಿಗಳನ್ನು ಧ್ವಂಸ ಮಾಡುವುದು ಮುಂತಾದವು.
- 1943ರ ಏಪ್ರಿಲ್ 1ರಂದು ಧಾರವಾಡ ಬಳಿಯ ಹೊಸರತ್ತಿ ಗ್ರಾಮದಲ್ಲಿ ಕಂದಾಯ ಹಣ ಲೂಟಿ ಮಾಡಲು ಯತ್ನಿಸಿದಾಗ ಮೈಲಾರ ಮಹಾದೇವಪ್ಪ ಪೊಲೀಸರ ಗುಂಡೇಟಿಗೆ ಬಲಿಯಾದರು.

ಈಸೂರು ದುರಂತ

- ಶಿವಮೊಗ್ಗ ಜಿಲ್ಲೆ ಈಸೂರು ಗ್ರಾಮದಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲಾಯಿತು. ರೈತರು, ಮಕ್ಕಳು, ವೃದ್ಧರು ಸೇರಿದಂತೆ ಎಲ್ಲರೂ ರಾಷ್ಟ್ರಗೀತೆ ಹಾಡುತ್ತಾ, ಸ್ವತಂತ್ರ ಚಳುವಳಿಯಲ್ಲಿ ಪಾಲ್ಗೊಂಡಿದ್ದರು.
- 1942ರ ಸೆಪ್ಟೆಂಬರ್ 26ರಂದು ಸ್ವರಾಜ್ಯ ಸ್ಥಾಪಿಸಿಕೊಂಡು ಸ್ವಾತಂತ್ರ್ಯ ಹಳ್ಳಿ ಎಂಬ ಫಲಕವನ್ನು ಊರಿನ ಮುಂದೆ ನೇತು ಹಾಕಿದರು. ಈ ರೀತಿ ಸ್ವಾತಂತ್ರ್ಯ ಘೋಷಿಸಿಕೊಂಡ ಮೊದಲ ಹಳ್ಳಿ 'ಈಸೂರು ಗ್ರಾಮ'ವಾಗಿದೆ.

ಮೈಸೂರು ಚಲೋ ಚಳುವಳಿ

- ಭಾರತ ಸ್ವಾತಂತ್ರ್ಯ ಪಡೆದ ನಂತರ ಮೈಸೂರಿನ ಮಹಾರಾಜ ಜಯಚಾಮರಾಜರು ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ವಿಲೀನ ಮಾಡಿದರು. ಮೈಸೂರಿನಲ್ಲಿ ಜವಾಬ್ದಾರಿಯುತ ಸರ್ಕಾರ ಸ್ಥಾಪನೆಗೆ **ಸೆಪ್ಟೆಂಬರ್ 1, 1947ರಂದು ಮೈಸೂರು ಚಲೋ / ಅರಮನೆ ಸತ್ಯಾಗ್ರಹ ಚಳುವಳಿ** ಕೈಗೊಳ್ಳಲು ನಿರ್ಧರಿಸಲಾಯಿತು. ಕೆ.ಸಿ.ರೆಡ್ಡಿ, ಕೆ.ಟಿ. ಬಾಷ್ಯಂ, ಟಿ. ಸಿದ್ಧಲಿಂಗಯ್ಯ, ಎಸ್. ನಿಜಲಿಂಗಪ್ಪ, ಸಿದ್ಧಯ್ಯ, ಎಚ್.ಸಿ.ದಾಸಪ್ಪ, ಮರಿಯಪ್ಪ ಮತ್ತು ಬಳ್ಳಾರಿ ಸಿದ್ಧಮ್ಮ ಚಳುವಳಿಯ ಮುಂಚೂಣಿ ನಾಯಕರು.
- ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ಸೆಪ್ಟೆಂಬರ್ 4, 1947ರಂದು **ಕೆ.ಸಿ. ರೆಡ್ಡಿಯವರು** ಅರಮನೆ ಸತ್ಯಾಗ್ರಹವನ್ನು ಕೈಗೊಂಡು ಮೈಸೂರು ಚಲೋ ಚಳುವಳಿಯನ್ನು ಘೋಷಿಸಿದರು. ಈ ಚಳುವಳಿಯ ಪ್ರಮುಖ ಬೇಡಿಕೆಗಳೆಂದರೆ ಜವಾಬ್ದಾರಿ ಸರ್ಕಾರದ ಸ್ಥಾಪನೆ, ರಾಜ್ಯಾಂಗ ರಚನಾ ಸಭೆ, ರಾಜ್ಯಾಂಗ ರಚನೆಯಾಗುವವರೆಗೆ ತಾತ್ಕಾಲಿಕ ಸರ್ಕಾರ ರಚನೆ, ರಾಜಕೀಯ ಕೈದಿಗಳ ಬಿಡುಗಡೆ ಮುಂತಾದವು.
- ಮೈಸೂರಿನಲ್ಲಿ ಸತ್ಯಾಗ್ರಹಿಗಳು **ಆರ್ಕಾಟ್, ಬಾಯ್ಕಾಟ್,**

- ಮೈಸೂರು ಅರಮನೆ ಸತ್ಯಾಗ್ರಹವು ಸುಮಾರು **42** ದಿನಗಳ ಕಾಲ ನಡೆದು ಕೆ.ಸಿ.ರೆಡ್ಡಿಯವರು **ಅಕ್ಟೋಬರ್ 24**ರ ವಿಜಯದಶಮಿಯಂದು ಜವಾಬ್ದಾರಿ ಸರ್ಕಾರ ರಚಿಸಿದರು. ಇನ್ನು ಮುಂದೆ ಮೈಸೂರು ಪ್ರಜಾಪ್ರತಿನಿಧಿ ಸಭೆಯು, ಶಾಸನಸಭೆಯಾಗಿ ಮಾರ್ಪಾಡಾಯಿತು.
- 1947 ಅಕ್ಟೋಬರ್ 27ರಂದು ಮೈಸೂರಿನ ಮೊದಲ ಮುಖ್ಯಮಂತ್ರಿಯಾಗಿ ಕೆ.ಸಿ.ರೆಡ್ಡಿಯವರು ಆಯ್ಕೆಯಾದರು. ಮೊದಲ ರಾಜ್ಯಪಾಲರಾಗಿ ಜಯಚಾಮರಾಜೇಂದ್ರ ಒಡೆಯರ್ ಆಯ್ಕೆಯಾದರು.

ಕೆ.ಸಿ.ರೆಡ್ಡಿ ನೇತೃತ್ವದ ಮಂತ್ರಿಮಂಡಲ

1. ಕೆ.ಸಿ.ರೆಡ್ಡಿ – ಮುಖ್ಯಮಂತ್ರಿ
2. ಟಿ. ಮರಿಯಪ್ಪ – ಗೃಹಸಚಿವ
3. ಹೆಚ್.ಸಿ. ದಾಸಪ್ಪ – ಹಣಕಾಸು ಮತ್ತು ಕೈಗಾರಿಕಾ ಖಾತೆ
4. ಕೆ.ಟಿ. ಬಾಷ್ಯಂ – ಕಾನೂನು ಮತ್ತು ಕಾರ್ಮಿಕ ಖಾತೆ
5. ಆರ್. ಚನ್ನಿಗರಾಮಯ್ಯ – ಸ್ಥಳೀಯ ಸಂಸ್ಥೆಗಳ ಖಾತೆ
6. ಹೆಚ್. ಸಿದ್ಧಯ್ಯ – ಕಂದಾಯ ಮತ್ತು ರೈಲ್ವೆ
7. ಮಹಮದ್ ಷರೀಪ್ – ಆರೋಗ್ಯ ಮತ್ತು ಅಬಕಾರಿ
8. ಪಿ. ಸುಬ್ಬರಾಮಶೆಟ್ಟಿ – ನಗರಾಭಿವೃದ್ಧಿ
9. ಡಿ.ಹೆಚ್. ಚಂದ್ರಶೇಖರಯ್ಯ – ಶಿಕ್ಷಣ ಸಚಿವ

47. ಕರ್ನಾಟಕ ಏಕೀಕರಣ ಚಳುವಳಿ (Unification Movement of Karnataka)

- ಕರ್ನಾಟಕ ಏಕೀಕರಣ ಚಳುವಳಿ ಮತ್ತು ಸ್ವಾತಂತ್ರ್ಯ ಚಳುವಳಿ ಜೊತೆಯಲ್ಲಿ ಸಾಗಿದವು.
- ಕನ್ನಡ ಮಾತನಾಡುವ ಜನರು ವಿವಿಧ ಆಡಳಿತ ಘಟಕಗಳಲ್ಲಿ ಹಂಚಿ ಹೋಗಿದ್ದರು. ಇವರನ್ನೆಲ್ಲಾ ಒಂದೇ ಆಡಳಿತಕ್ಕೆ ಒಳಪಡಿಸಬೇಕೆಂದು ಕರ್ನಾಟಕ ಏಕೀಕರಣ ಚಳುವಳಿ ಪ್ರಬಲವಾಯಿತು.
- ಮೊದಲ ಬಾರಿಗೆ ಕನ್ನಡದ ಉಳಿವಿಗಾಗಿ **ಡೆಪ್ಯುಟಿ ಚೆನ್ನಬಸಪ್ಪ** ಬಾಂಬೆ ಕರ್ನಾಟಕದಲ್ಲಿ ಅನೇಕ ಕನ್ನಡ ಶಾಲೆಗಳನ್ನು ತೆರೆದರು.
- 1890ರಲ್ಲಿ ಕರ್ನಾಟಕದ ಅಖಂಡತೆಗಾಗಿ ಆರ್.ಹೆಚ್. ದೇಶಪಾಂಡೆಯವರು **ಕರ್ನಾಟಕ ವಿದ್ಯಾವರ್ಧಕ ಸಂಘ**ವನ್ನು ಧಾರವಾಡದಲ್ಲಿ ಸ್ಥಾಪಿಸಿದರು. **ಕೆ. ಶಾಮರಾವ್** ಅದರ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ, ಸಂಸ್ಕೃತಿ ರಕ್ಷಣೆ, ಕನ್ನಡ ಗ್ರಂಥ ರಚನೆಗೆ ಪ್ರೋತ್ಸಾಹ, ಕನ್ನಡ ಭಾಷಾಭಿಮಾನ ಮೂಡಿಸುವುದು ಅದರ ಧ್ಯೇಯೋದ್ದೇಶಗಳು.
- ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಲು ಕೆ. ಶೇಷಾದ್ರಿ ಅಯ್ಯರ್ ಕರ್ನಾಟಕ ಭಾಷೋಜ್ಜೀವನಿ ಸಂಘ, ಕರ್ನಾಟಕ ಸಂಘ, ಮಿಥಿಕ್ ಸೊಸೈಟಿಗಳು ಶ್ರಮಿಸಿದವು.
- **1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್** ರಚನೆಯಾಗಿ ಹಲವು ಸಮ್ಮೇಳನಗಳನ್ನು ನಡೆಸುತ್ತಾ ಏಕೀಕರಣ ಗೊತ್ತುವಳಿಯನ್ನು ಅದು ಅಂಗೀಕರಿಸಿತು.
- 1916ರಲ್ಲಿ ಧಾರವಾಡದಲ್ಲಿ **ಕರ್ನಾಟಕ ಸಭಾವು** ಆಲೂರು ವೆಂಕಟರಾವ್, ಕಡಪ ರಾಘವೇಂದ್ರರಾವ್ ಮತ್ತು ಮುದವೀಡು ಕೃಷ್ಣರಾವ್‌ರಿಂದ ಸ್ಥಾಪನೆಯಾಗಿ ಏಕೀಕರಣ ಬೇಡಿಕೆಯನ್ನು ಮುಂದಿಟ್ಟಿತು. ಮುಂದೆ ಇದು **ಕರ್ನಾಟಕ ಏಕೀಕರಣ ಸಭಾ** ಎಂಬುದಾಗಿ ಪರಿವರ್ತನೆಯಾಯಿತು.
- ಕರ್ನಾಟಕ ಏಕೀಕರಣ ಚಳುವಳಿ ಬುದ್ಧಿಜೀವಿಗಳ ಚಳುವಳಿಯಾಗಿತ್ತು. ಏಕೆಂದರೆ ಆಲೂರು ವೆಂಕಟರಾಯರ ಕರ್ನಾಟಕ ಗತವೈಭವ, ಭಂಡಾರ್ಕರ್‌ರವರ ದಿ ಆರ್ಲಿ ಹೆಸ್ಟರಿ ಆಫ್ ಡೆಕ್ಕನ್, ಬಿ.ಎಲ್. ರೈಸ್‌ರ ಕರ್ನಾಟಕ ಎಫಿಗ್ರಾಫಿಕ್ಸ್, ರಾಬರ್ಟ್ ಸಿವೆಲ್‌ರ ಮರೆತುಹೋದ ಸಾಮ್ರಾಜ್ಯ, ಮಾರ್ಕ್‌ವಿಲ್ಕ್ಸ್‌ರ ಕರ್ನಾಟಕ ಇತಿಹಾಸ, ಹುಯಿಲಗೋಳ ನಾರಾಯಣರ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಬಿ.ಎಂ.ಶ್ರೀರವರ ಹಾರಿಸಿ ಕನ್ನಡ ಭಾವುಟ, ಕುವೆಂಪು ಅವರ ಜಯಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ, ಶಾಂತಕವಿಯ ಮಾತೃಭೂಮಿ ಜನನಿ, ನಿನ್ನ ಚರಣವ ಸೇವೆ ಮಾಡುವೆ ಮುಂತಾದವು ಕನ್ನಡಿಗರಲ್ಲಿ ಭಾಷಾಭಿಮಾನ ಮೂಡಿಸಿದರು.
- **ಕರ್ನಾಟಕ ಕುಲ ಪುರೋಹಿತ** ಎಂದು ಪ್ರಖ್ಯಾತರಾದ **ಆಲೂರು ವೆಂಕಟರಾವ್**‌ರವರು ಕನ್ನಡಿಗರಲ್ಲಿ ಏಕೀಕರಣ ಭಾವನೆ ಮೂಡಿಸಲು ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿಯನ್ನು ಧಾರವಾಡದಲ್ಲಿ ಸ್ಥಾಪಿಸಿದರು. ತಮ್ಮ ಏಕೀಕರಣ ತತ್ವವನ್ನು ವಾಗ್ಭೂಷಣ ಪತ್ರಿಕೆಯಲ್ಲಿ ಭಿತ್ತರಿಸಿದರು. ಇವರ ಕರ್ನಾಟಕದ ಗತವೈಭವವು ಕರ್ನಾಟಕದ ಭವ್ಯ ಪರಂಪರೆಯನ್ನು ತಿಳಿಸುತ್ತದೆ. ಇವರು ತಿಲಕರ ಗೀತರಹಸ್ಯ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು.
- ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಜಯಕರ್ನಾಟಕ, ಸಂಯುಕ್ತ ಕರ್ನಾಟಕ, ತರುಣ ಕರ್ನಾಟಕ, ಕರ್ನಾಟಕ ಕೇಸರಿ, ಕನ್ನಡ ವೃತ್ತ ವಾಗ್ಭೂಷಣ, ಸೂರ್ಯೋದಯ, ಕರ್ಮವೀರ, ವೀರಕೇಸರಿ, ಜನವಾಣಿ ಮುಂತಾದವು ಕನ್ನಡಿಗರಲ್ಲಿ ಭಾಷಾಭಿಮಾನ ಮೂಡಿಸಿದವು
- 1920ರಲ್ಲಿ ವಿ.ಪಿ. ಮಾಧವರಾವ್ ಅಧ್ಯಕ್ಷತೆಯಲ್ಲಿ **ಧಾರವಾಡದಲ್ಲಿ ಪ್ರಥಮ ಕರ್ನಾಟಕ ರಾಜಕೀಯ ಸಮ್ಮೇಳನ** ಜರುಗಿತು. ಇದು ಕರ್ನಾಟಕ ಏಕೀಕರಣ ಗೊತ್ತುವಳಿಯನ್ನು ಅಂಗೀಕರಿಸಿತು.
- **ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿ 1920** ಗದಗ್‌ನಲ್ಲಿ ರಚನೆಯಾಗಿ ಗಂಗಾಧರರಾವ್ ದೇಶಪಾಂಡೆ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.
- 1927ರಲ್ಲಿ ಸಿದ್ದಪ್ಪ ಕಂಬಳಿ ಮುಂಬೈ ಶಾಸನ ಸಭೆಯಲ್ಲಿ ಕರ್ನಾಟಕ ಏಕೀಕರಣ ಬೇಡಿಕೆಯನ್ನು ಸಮರ್ಥಿಸಿಕೊಂಡರು.

ನಾರಾಯಣರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯನ್ನು ಹಾಡಿದರು.

ಮೊದಲ ಕರ್ನಾಟಕ ಏಕೀಕರಣ ಸಮ್ಮೇಳನ–1924

- **ಮೊದಲ ಕರ್ನಾಟಕ ಏಕೀಕರಣ ಸಮ್ಮೇಳನ 1924ರಲ್ಲಿ ಸಿದ್ದಪ್ಪ ಕಂಬಳಿ ಅಧ್ಯಕ್ಷತೆಯಲ್ಲಿ** ಬೆಳಗಾವಿಯಲ್ಲಿ ಜರುಗಿತು. ಇದು ಕರ್ನಾಟಕ ಏಕೀಕರಣ ನಿರ್ಣಯವನ್ನು ಅಂಗೀಕರಿಸಿತು. ಕರ್ನಾಟಕ ಏಕೀಕರಣ ಸಭಾ ಸ್ಥಾಪನೆಯಾಗಿ ಮುಂದೆ ಅದು ಕರ್ನಾಟಕ ಏಕೀಕರಣ ಸಂಘವಾಯಿತು. ಅದು 1927ರಲ್ಲಿ ಬಾಂಬೆ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ನಿರ್ಣಯವನ್ನು ಅಂಗೀಕರಿಸಿತು.
- **ನೆಹರು ಸಮಿತಿ:** 1928ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆ, ಅದರಲ್ಲೂ ಕರ್ನಾಟಕದ ಏಕೀಕರಣ ಬೇಡಿಕೆಯನ್ನು ಪರಿಶೀಲಿಸಲು ಮೋತಿಲಾಲ್ ನೆಹರೂ ನೇತೃತ್ವದಲ್ಲಿ ಸಮಿತಿ ರಚಿಸಲಾಯಿತು. ಇದು ಕರ್ನಾಟಕವನ್ನು ಪ್ರತ್ಯೇಕವಾಗಿ ರಚಿಸುವ ನಿಯಮವನ್ನು ಮುಂದಿನ ಅಧಿವೇಶನದಲ್ಲಿ ಚರ್ಚಿಸಲು ತಿಳಿಸಿತು.

ಸೈಮನ್ ಕಮಿಷನ್

- 1928ರಲ್ಲಿ ಭಾರತಕ್ಕೆ ಬಂದ ಸೈಮನ್ ಕಮಿಷನ್ ಸಹ ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಆಶ್ವಾಸನೆಯನ್ನು ಕೊಟ್ಟಿತು.
- ದುಂಡುಮೇಜಿನ ಸಮ್ಮೇನಗಳಲ್ಲಿ ಮಿರ್ಜಾ ಇಸ್ಮಾಯಿಲ್ ಮತ್ತು ಜಿನಗಲ್ ರಾಮರಾಯರು ಕರ್ನಾಟಕ ಏಕೀಕರಣ ವಿಷಯವನ್ನು ಪ್ರಸ್ತಾಪಿಸಿದರು.
- 1936ರಲ್ಲಿ ಕರ್ನಾಟಕ ಏಕೀಕರಣ ಸಮಾವೇಶ ಬೆಳಗಾಂನಲ್ಲಿ ಜರುಗಿತು.
- ಕರ್ನಾಟಕ ಏಕೀಕರಣ ಸಂಘ ಬೆಂಗಳೂರಿನಲ್ಲಿ ಬಿ. ರಾಮರಾಯರ ಅಧ್ಯಕ್ಷತೆಯಲ್ಲಿ 1938ರಲ್ಲಿ ಅಸ್ತಿತ್ವಕ್ಕೆ ಬಂತು. ಇದು ಸ್ವತಂತ್ರ ಕರ್ನಾಟಕ ಎಂಬ ಪತ್ರಿಕೆ ಪ್ರಕಟಿಸಿತು.
- **1946ರಲ್ಲಿ ಅಖಿಲ ಕರ್ನಾಟಕ ಮಹಾ ಸಮ್ಮೇಳನವನ್ನು** ಎಂ.ಪಿ. ಪಾಟೀಲರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ನಡೆಸಲಾಯಿತು.
- **1947ರಲ್ಲಿ ಕರ್ನಾಟಕ ಏಕೀಕರಣ ಮಹಾಸಮಿತಿ** ಸ್ಥಾಪನೆಯಾಗಿ ಅದರ ಅಧ್ಯಕ್ಷರಾಗಿ ಎಸ್. ನಿಜಲಿಂಗಪ್ಪ ಮತ್ತು ಅಂದಾನಪ್ಪ ದೊಡ್ಡಮೇಟಿ, ಶ್ರೀನಿವಾಸರಾಯರು ಕಾರ್ಯದರ್ಶಿಗಳಾದರು.

ಎಸ್.ಕೆ. ಧಾರ್ ಸಮಿತಿ

- 1948ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಬಗ್ಗೆ ಅಧ್ಯಯನಿಸಿ ವರದಿ ನೀಡಲು ನೇಮಿಸಲಾಯಿತು. ಇದು ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದರೆ ರಾಷ್ಟ್ರೀಯ ಏಕತೆಗೆ ದಕ್ಕೆ ಉಂಟಾಗುವುದೆಂದು ವರದಿ ಮಾಡಿತು.

ಜೆ.ವಿ.ಪಿ.ಕಮಿಟಿ

- ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಜವಹರ್‌ಲಾಲ್ ನೆಹರೂ ವಲ್ಲಬಭಾಯ್ ಪಟೇಲ್ ಮತ್ತು ಪಟ್ಟಾಭಿಸೀತಾರಾಮಯ್ಯರ ನೇತೃತ್ವದಲ್ಲಿ ಈ ಸಮಿತಿ ರಚಿಸಲಾಯಿತು. ಇದು ಕರ್ನಾಟಕ, ಆಂಧ್ರ, ಕೇರಳ ರಾಜ್ಯಗಳ ರಚನೆ ಕುರಿತು ವರದಿ ನೀಡಬೇಕಿತ್ತು. ಆದರೆ ಆಂಧ್ರ ರಚನೆಗೆ ಒಪ್ಪಿಗೆ ನೀಡಿ ಕರ್ನಾಟಕ ಮತ್ತು ಕೇರಳಗಳ ಬೇಡಿಕೆಗಳನ್ನು ಮುಂದೂಡಿತು.
- 1952 ಅಕ್ಟೋಬರ್‌ನಲ್ಲಿ ಪೊಟ್ಟಿ ಶ್ರೀರಾಮುಲು 58 ದಿನ ಅಮರಣಾಂತ ಉಪವಾಸ ಕೈಗೊಂಡು ನಿಧನರಾದರು. ಇದರ ಪರಿಣಾಮ **1953ರಲ್ಲಿ ಮೊದಲ ಭಾಷಾವಾರು ರಾಜ್ಯವಾಗಿ ಆಂಧ್ರ ಪ್ರದೇಶ** ರಚನೆಯಾಯಿತು.

ಫಜಲ್ ಆಲಿ ಕಮಿಟಿ (1953)

- ಭಾರತ ಸರ್ಕಾರವು ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಲು 1953ರಲ್ಲಿ ಫಜಲ್ ಆಲಿ ನೇತೃತ್ವದಲ್ಲಿ ರಾಜ್ಯ ಪುನರ್ ವಿಂಗಡಣಾ ಸಮಿತಿಯನ್ನು ನೇಮಿಸಿತು. ಎಚ್.ಎನ್. ಖುಂಜ್ರು ಮತ್ತು ಕೆ.ಎಮ್. ಫಣಿಕ್ಕರ್ ಇದರ ಸದಸ್ಯರಾಗಿದ್ದರು. ಸಮಿತಿಯು ಅಕ್ಟೋಬರ್ 10, 1955ರಲ್ಲಿ ತನ್ನ ವರದಿ ನೀಡಿತು.

ಏಕೀಕೃತ ಮೈಸೂರು ಉಗಮ

- ಫಜಲ್ ಆಲಿ ಆಯೋಗದ ವರದಿಯಂತೆ ಹರಿದು ಹಂಚಿ ಹೋಗಿದ್ದ ಕನ್ನಡ ಮಾತನಾಡುವ ಪ್ರದೇಶಗಳು ಒಂದಾಗಿ **ಮೈಸೂರು ರಾಜ್ಯ** ಉಗಮವಾಯಿತು. ಆಗ ಮೈಸೂರಿಗೆ ಸೇರ್ಪಡೆಯಾದ ಪ್ರದೇಶಗಳೆಂದರೆ.

1. **ಆಗಿನ ಮೈಸೂರು ರಾಜ್ಯದ 9 ಜಿಲ್ಲೆಗಳು:** ಬೆಂಗಳೂರು, ಮೈಸೂರು, ಕೋಲಾರ, ತುಮಕೂರು, ಮಂಡ್ಯ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ
2. **ಮದ್ರಾಸ್ ಪ್ರಾಂತ್ಯದಿಂದ:** ದಕ್ಷಿಣ ಕನ್ನಡ ಜಿಲ್ಲೆ, ಕೊಳ್ಳೆಗಾಲ, ಕೊಡಗು, ಬಳ್ಳಾರಿ
3. **ಬೊಂಬಾಯಿ ಪ್ರಾಂತ್ಯದಿಂದ:** ಬೆಳಗಾಂ, ಧಾರವಾಡ, ಬಿಜಾಪುರ, ಕಾರವಾರ
4. **ಹೈದರಾಬಾದ್ ಪ್ರಾಂತ್ಯದಿಂದ:** ರಾಯಚೂರು, ಬೀದರ್, ಗುಲ್ಬರ್ಗಾ
5. **ಸ್ವತಂತ್ರವಾಗಿದ್ದ ಸಂಸ್ಥಾನಗಳು:** ಸೊಂಡೂರು, ಜಮಖಂಡಿ, ಮುಧೋಳ, ಸವಣೂರು

- ಏಕೀಕೃತ ವಿಶಾಲ **ಮೈಸೂರು ರಾಜ್ಯವು ನವೆಂಬರ್ 1, 1956ರಲ್ಲಿ** ಅಸ್ತಿತ್ವಕ್ಕೆ ಬಂದಿತು. **ಇದರಲ್ಲಿ 19 ಜಿಲ್ಲೆಗಳಿದ್ದವು.** ವಿಶಾಲ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ **ಎಸ್. ನಿಜಲಿಂಗಪ್ಪನವರು** ಆಯ್ಕೆಯಾದರು. ಬೆಂಗಳೂರು ಅದರ ಅಧಿಕೃತ ರಾಜಧಾನಿಯಾಯಿತು.

ಭೂಗೋಳಶಾಸ್ತ್ರ

ಭಾಗ-1 ಶಿಲಾಗೋಳ

1. ಭೂಗೋಳಶಾಸ್ತ್ರದ ವಿಕಾಸ: (Evolution of Geography)

- ಭೂಗೋಳಶಾಸ್ತ್ರವು ಮನುಕುಲದಷ್ಟೇ ಪ್ರಾಚೀನವಾದ ವಿಷಯವಾಗಿದ್ದು ಭೂಮೇಲ್ಮೈನ ಪ್ರಾಕೃತಿಕ ಲಕ್ಷಣಗಳು, ವಾಯುಗುಣ, ಸಸ್ಯವರ್ಗ, ಮಣ್ಣು, ಜನಸಂಖ್ಯೆ ಹಾಗೂ ಮಾನವನ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುತ್ತದೆ.

ಎ. ಪುರಾತನ ಕಾಲ (Ancient Period)

- ಕ್ರಿ.ಶ.3ನೇ ಶತಮಾನದಲ್ಲೇ ಸೂರ್ಯಕೇಂದ್ರವಾದವನ್ನು ಮೊದಲಿಗೆ ಗ್ರೀಸ್‌ನ **ಅರಿಸ್ಟಾರ್ಕಸ್** (Aristarchus) ಪ್ರತಿಪಾದಿಸಿದನು.
- ಭೂಮಿಯು ವೃತ್ತಾಕಾರವಾಗಿರುವುದರ ಬಗ್ಗೆ ಮೊದಲು ಪ್ರತಿಪಾದಿಸಿದವನು ಅರಿಸ್ಟಾಟಲ್ (ಕ್ರಿ.ಪೂ.384-322). ಈತನ ಕೃತಿ **ಮಿಟಿಯೋರೋಲಾಜಿಕ** (Meteorolo gica) ಇದರಲ್ಲಿ ಗ್ರಹಣದ ಅವಧಿಯಲ್ಲಿ ಭೂಮಿಯ ನೆರಳು ಚಂದ್ರನ ಮೇಲೆ ವೃತ್ತಾಕಾರವಾಗಿ ಬೀಳುತ್ತದೆಂದು ಪ್ರತಿಪಾದಿಸಿದನು.
- ಪುರಾತನ ಕಾಲದ ಪ್ರಮುಖ ಭೂಗೋಳಶಾಸ್ತ್ರಜ್ಞರಾದ ಹೆರೋಡಟಸ್,ಎರಾಟಸ್ತನೀಸ್, ಟಾಲೆಮಿ, ಸ್ಟ್ರಾಬೋ ಮೊದಲಾದವರು.
- ಟಾಲೆಮಿಯು ಪ್ರತಿಪಾದಿಸಿದ ಭೂಕೇಂದ್ರವಾದವು ಸುಮಾರು 16ನೇ ಶತಮಾನದ ಮಧ್ಯದವರೆಗಿತ್ತು.
- ಭೂಗೋಳಶಾಸ್ತ್ರ ಎಂದು ಅರ್ಥಕೊಡುವ 'Geography' ಎಂಬ ಪದವನ್ನು ಮೊದಲು ಬಳಸಿದವನು **ಎರಾಟಸ್ತನೀಸ್**. ಗ್ರೀಕ್ ಭಾಷೆಯಲ್ಲಿ 'Geo' ಎಂದರೆ **ಭೂಮಿ** 'graphy'ಎಂದರೆ **ವಿವರಣೆ** ಎಂದರ್ಥ ವಾಗುತ್ತದೆ.
- ಭೂಗೋಳಶಾಸ್ತ್ರದ ಪಿತಾಮಹ **'ಎರಾಟಸ್ತನೀಸ್'** ಈತನ ಗ್ರಂಥ **ಜಿಯೊಗ್ರಫಿಕಾ**. ಈತನು ರೇಖಾಗಣಿತದ ಆಧಾರದಿಂದ ಭೂಮಿಯ ಸುತ್ತಳತೆಯನ್ನು ಕರಾರುವಕ್ಕಾಗಿ ಅಳೆಯಲು ಪ್ರಯತ್ನಿಸಿದನು.
- **ಟಾಲೆಮಿ** ಅಂದಿನ ಪ್ರಪಂಚದ ನಕ್ಷೆಯನ್ನು ಅಕ್ಷಾಂಶ ಮತ್ತು ರೇಖಾಂಶಗಳೊಡನೆ ರಚಿಸಿ **ನಕ್ಷಾಶಾಸ್ತ್ರದ** ಆರಂಭಕ್ಕೆ ಕಾರಣವಾದನು.
- ಟಾಲೆಮಿಯ ಕೃತಿಗಳು : The Almagast, The Geography. ಮುಂತಾದವು.
- ಸ್ಟ್ರಾಬೋನ ಕೃತಿ **ಜಿಯೋಗ್ರಫಿಕಾ**. ಸ್ಟ್ರಾಬೋ ಭೂಗೋಳಶಾಸ್ತ್ರದಲ್ಲಿ **ಪ್ರಾದೇಶಿಕ ಅಧ್ಯಯನವನ್ನು**(Regional Geography) ಆರಂಭಿಸಿದನು.
- ಪುರಾತನ ಕಾಲದ ಭೂಗೋಳದ ಬರವಣಿಗೆಗಳನ್ನು **ಗೆಝೆಟಿಯರ್ ಭೂಗೋಳಶಾಸ್ತ್ರ** ಎಂದು ಕರೆಯಲಾಗಿದೆ.

ಬಿ. ಮಧ್ಯಯುಗ (ಕ್ರಿ.ಶ.5ನೇಶತಮಾನ ದಿಂದ 15ನೇ ಶತಮಾನ) Middle Age

- ಯೂರೋಪಿಯನ್ ಇತಿಹಾಸಕಾರರು ಈ ಅವಧಿಯನ್ನು 'ಅಂಧಕಾರ ಯುಗ'(Dark age) ಎಂದಿದ್ದಾರೆ. ಈ ಕಾಲದಲ್ಲಿ ಭೌಗೋಳಿಕ ಜ್ಞಾನದ ಅಭಿವೃದ್ಧಿಯು ಅರಬ್ಬರಿಂದ ಮುಂದುವರೆಯಿತು.
- ಪ್ರಸಿದ್ಧ ಅರಬ್ ಭೂಗೋಳಶಾಸ್ತ್ರಜ್ಞರಾದ ಅಲ್‌ಮಸೂದಿ, ಅಲ್ಬೆರೂನಿ, ಅಲ್‌ಇದ್ರಿಸಿ, ಇಬನ್‌ಬತೂತ, ಇಬ್ನ್ ಖಾಲ್ದೂನ್ ಮುಂತಾದವರು.
- ಈ ಅವಧಿಯಲ್ಲಿ ಮಾರ್ಕೋಪೋಲೋ ಮತ್ತು ನಿಕೋಲೋ ಕಾಂಟಿ ಚೈನಾ ದೇಶವನ್ನು ಸಂದರ್ಶಿಸಿದ್ದರು.

ಸಿ. ಆಧುನಿಕ ಯುಗ (Modern Period)

- **ಕ್ರಿಸ್ಟೋಫರ್ ಕೊಲಂಬಸ್** ಕ್ರಿ.ಶ.1492 ರಲ್ಲಿ ಅಮೇರಿಕಾ ಖಂಡಗಳನ್ನು ತಲುಪಿದನು.
- **ವಾಸ್ಕೋಡಿಗಾಮನು** ಕ್ರಿ.ಶ.1498ರಲ್ಲಿ ಗುಡ್‌ಹೋಪ್ ಭೂಶಿರ ಬಳಸಿ ಭಾರತದ ಕಲ್ಲಿಕೋಟೆ ತಲುಪಿದನು.
- **ಮೆಗಲನ್** ದಕ್ಷಿಣ ಅಮೇರಿಕಾ ಖಂಡವನ್ನು ಬಳಸಿ ಕ್ರಿ.ಶ.1519-21 ರ ಅವಧಿಯಲ್ಲಿ ಪ್ರಪಂಚವನ್ನು ಸುತ್ತುಹಾಕಿ ಭೂಮಿಯು ದುಂಡಾಗಿದೆ ಎಂದನು.
- **ಕ್ಯಾಪ್ಟನ್‌ಕುಕ್‌ನು** ಕ್ರಿ.ಶ.1768-69ರ ಅವಧಿಯಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ಗಳನ್ನು ಶೋಧಿಸಿದನು.
- **ರಾಬರ್ಟ್ ಪ್ರಿಯರಿ** ಕ್ರಿ.ಶ.1909ರಲ್ಲಿ ಉತ್ತರ ದ್ರುವವನ್ನು ಶೋಧಿಸಿದನು.
- **ಅಮುಂಡ್‌ಸೆನ್ ರೊನಾಲ್ಡ್** ಕ್ರಿ.ಶ.1911ರಲ್ಲಿ ದಕ್ಷಿಣ ದ್ರುವವನ್ನು ಶೋಧಿಸಿದನು.
- **ಕೊಪರ್ನಿಕಸ್** ಕ್ರಿ.ಶ.1543ರಲ್ಲಿ ಸೂರ್ಯಕೇಂದ್ರವಾದವನ್ನು ಪ್ರತಿಪಾದಿಸಿ ಅಂದಿನವರೆಗಿದ್ದ ಅಂಧ ಧಾರ್ಮಿಕ ವಾದಗಳ ಅಂತ್ಯಕ್ಕೆ ಕಾರಣನಾದನು. ಈ ವಾದವು ಕೆಪ್ಲರ್ (1571-1630) ಮತ್ತು ಗೆಲಿಲಿಯೋ (1564-1642) ರಿಂದ ವ್ಯವಸ್ಥೆಗೊಂಡಿತು.
- **ನ್ಯೂಟನ್‌ನು** ಗುರುತ್ವಾಕರ್ಷಣಾ ಸಿದ್ಧಾಂತವನ್ನು ಕ್ರಿ.ಶ.1686ರಲ್ಲಿ ಪ್ರಕಟಿಸಿದನು.

ಪರಿಣಾಮಗಳು.

- ಮರ್ಕೆಟರನು ತನ್ನ ಪ್ರಸಿದ್ಧ **ನಕ್ಷಾ ಪ್ರಕ್ಷೇಪವನ್ನು** ಕ್ರಿ.ಶ.1569ರಲ್ಲಿ ರಚಿಸಿದನು.
- ಭೂ ಮೇಲ್ಮೈನ ಎಲ್ಲಾ ಬಗೆಯ ವಿವರಣೆಯನ್ನು **'ಕಾಸ್ಮೋಗ್ರಾಫಿಯ'** ಒಳಗೊಂಡಿರುವುದು

- ಜರ್ಮನಿಯ ವರೇನಿಯಸ್ **'Geographia Generalis'** ಗ್ರಂಥವನ್ನು ಕ್ರಿ.ಶ.1650 ರಲ್ಲಿ ಪ್ರಕಟಿಸಿದನು.
- ವರೇನಿಯಸ್ ಭೂಗೋಳಶಾಸ್ತ್ರಕ್ಕೆ ನೀಡಿದ ಎರಡು ಮಹತ್ತರ ಕೊಡುಗೆಗಳೆಂದರೆ.

1) ಅಂದಿನವರೆಗೆ ತಿಳಿದಿದ್ದ ಖಗೋಳಶಾಸ್ತ್ರ, ನಕ್ಷಾಶಾಸ್ತ್ರ ಮೊದಲಾದವುಗಳನ್ನು ಒಟ್ಟುಗೂಡಿಸಿದನು.

2) ಭೂಗೋಳವನ್ನು ಸಾಮಾನ್ಯ ಭೂಗೋಳಶಾಸ್ತ್ರ ಮತ್ತು ವಿಶೇಷ ಭೂಗೋಳಶಾಸ್ತ್ರ ಎಂಬ ಎರಡು ಭಾಗಗಳನ್ನು ಮೊದಲಿಗೆ ವಿಂಗಡಿಸಿದನು.

- ಸಾಮಾನ್ಯ ಭೂಗೋಳವು ಪ್ರಪಂಚದ ಅಧ್ಯಯನ ಮತ್ತು ವಾಯುಗುಣ ಅಧ್ಯಯನಗಳಿಗೆ ಸಂಬಂಧಿಸಿದೆ.
- ವಿಶೇಷ ಭೂಗೋಳವು ಪ್ರಪಂಚದ ಯಾವುದಾದರೊಂದು ಭಾಗದ ಅಧ್ಯಯನ ಮಾಡುವುದಕ್ಕೆ ಸಂಬಂಧಿಸಿದೆ.

ಇಮ್ಯಾನ್ಯುಯೆಲ್ ಕ್ಯಾಂಟ್ (1724–1804)

- ವೈಜ್ಞಾನಿಕ ಭೂಗೋಳಶಾಸ್ತ್ರದ ಬೆಳವಣಿಗೆಗೆ ಇಮ್ಯಾನ್ಯುಯೆಲ್. ಕ್ಯಾಂಟ್ ಕಾರಣನಾದನು.
- ಭೂಗೋಳದಲ್ಲಿ ಅಧ್ಯಯನಿಸುತ್ತಿದ್ದ ಜ್ಞಾನದ ಸಂಪತ್ತನ್ನು **'ತಾರ್ಕಿಕ ಮತ್ತು ಭೌತಿಕ'** ವಿಜ್ಞಾನಗಳಾಗಿ ವಿಂಗಡಿಸಿದನು.
- **ತಾರ್ಕಿಕ ವಿಂಗಡನಾ ಕ್ರಮ:–** ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೌತ ಮತ್ತು ರಸಾಯನಶಾಸ್ತ್ರ ಇತ್ಯಾದಿ.
- **ಭೌತಿಕ ವಿಂಗಡಣೆ:–** ಐತಿಹಾಸಿಕ ಹಾಗೂ ಸ್ಥಾನಿಯ ವಿಜ್ಞಾನವೆಂಬ ಎರಡು ಭಾಗಗಳಾಗಿ ವಿಂಗಡಿಸಿದನು.
- **19ನೇ ಶತಮಾನ ಭೂಗೋಳಶಾಸ್ತ್ರದ ಸುವರ್ಣಯುಗ.** 19ನೇ ಶತಮಾನದ ಪ್ರಮುಖ ಭೂಗೋಳದ ದಿಗ್ಗಜರಾದ ಹಂಬೋಲ್ಟ್ ಮತ್ತು ರಿಟ್ಟರ್. ಇವರ ಕಾಲವನ್ನು ಹಾರ್ಟೊಶೋರ್ನ್‌ನು ಭೂಗೋಳಶಾಸ್ತ್ರದ **ಕ್ಲಾಸಿಕಲ್ ಪಂಥ** ಎಂದಿದ್ದಾನೆ.

ಹಂಬೋಲ್ಟ್ (1769–1859)

- ಜರ್ಮನಿಯ ಪ್ರಸಿದ್ಧ ಭೂಗೋಳಶಾಸ್ತ್ರಜ್ಞ ಮತ್ತು ಆಧುನಿಕ ವೈಜ್ಞಾನಿಕ ಶಾಸ್ತ್ರದ ಬೆಳವಣಿಗೆಗೆ ಕಾರಣನಾದನು. **'ಸಸ್ಯ ಭೂಗೋಳಶಾಸ್ತ್ರವು'** ಈತನಿಂದ ಆರಂಭಗೊಂಡಿತು.
- ಭೂ ಮೇಲ್ಮೈನ ಭೂಸ್ವರೂಪ, ವಾಯುಗುಣ, ಸಸ್ಯವರ್ಗ ಮತ್ತು ಪ್ರಾಣಿವರ್ಗ ಮೊದಲಾದವು ಪರಸ್ಪರ ಪೂರಕವಾಗಿರುವುದನ್ನು ಪರಸ್ಪರ ತೂಗಾಡುವಿಕೆ/ಜುಸಮೆನ್ ಹ್ಯಾಂಗ್ ಎಂದು ಕರೆದನು. ಇದರ ವಿವರಣೆಗೆ **ಗೆಸ್ಟಾಲ್** ಮತ್ತು **ಗ್ಯಾಂಜೆಟ್** ಪದಗಳನ್ನು ಬಳಸಿದ್ದಾನೆ.
- **'ಕಾಸ್ಮೋಸ್'** ಎಂಬುದು ಈತನ ಪ್ರಮುಖ ಕೃತಿಯಾಗಿದೆ.
- ಪ್ರಾದೇಶಿಕ ಭೂಗೋಳಶಾಸ್ತ್ರ ಮತ್ತು ಪ್ರಾಕೃತಿಕ ಭೂಗೋಳಶಾಸ್ತ್ರಗಳು ಹಂಬೋಲ್ಟ್‌ನಿಂದ ಪ್ರಸಿದ್ಧಿ ಪಡೆದವು.

ಬಳಸಿದನು.

- ಪ್ರಪಂಚದ ನಕ್ಷೆಯಲ್ಲಿ ಮೊದಲ ಬಾರಿಗೆ 'ಸಮೋಷ್ಣ ರೇಖೆ'ಗಳನ್ನು ಎಳೆದನು.

ಕಾರ್ಲ್‌ರಿಟ್ಟರ್ (1779–1859)

- ಪ್ರಾದೇಶಿಕ ಭೂಗೋಳಶಾಸ್ತ್ರಕ್ಕೆ ಈತನು ಅಪಾರ ಕೊಡುಗೆ ನೀಡಿದ್ದಾನೆ. ಈತನ ಪ್ರಸಿದ್ಧ – ಕೃತಿ **'ಡೈ ಎರ್ಡ್‌ಕುಂಡೆ'**.
- ಪ್ರಾದೇಶಿಕ ಭೂಗೋಳಶಾಸ್ತ್ರ ಮತ್ತು ವ್ಯವಸ್ಥಿತ ಭೂಗೋಳಶಾಸ್ತ್ರಗಳು ಒಂದೇ ನಾಣ್ಯದ ಎರಡು ಮುಖಗಳು ಎಂದಿದ್ದಾನೆ.
- ಈತನು ಹಂಬೋಲ್ಟ್‌ನನ್ನು 'ಹೋಲಿಕೆಯ ಭೂಗೋಳಶಾಸ್ತ್ರದ ಸ್ಥಾಪಕ' ಎಂದಿದ್ದಾನೆ.
- ಭೂಭಾಗ ಏಕತೆಯಿಂದ ಕೂಡಿರುವುದನ್ನು **'ಗ್ಯಾಂಜೆಟ್'** ಎಂದನು.
- ಡಾರ್ವಿನ್‌ನು ಜೀವವಿಕಾಸ ಸಿದ್ಧಾಂತವನ್ನು ಪ್ರತಿಪಾದಿಸಿದನು.
- ಆಟ್ಟೊಶ್ಲುಂಚರ್‌ನು ಪ್ರಾಕೃತಿಕ ಭೂಗೋಳವು ಪ್ರಾಕೃತಿಕ ಭೂದೃಶ್ಯಾವಳಿ ಮತ್ತು ಮಾನವ ಭೂಗೋಳವು ಸಾಂಸ್ಕೃತಿಕ ದೃಶ್ಯಾವಳಿಯನ್ನು ಅಭ್ಯಸಿಸುತ್ತದೆ ಎಂದಿದ್ದಾನೆ.
- ಅರ್ಕಿಬಾಲ್ಡ್‌ಗೈಕಿ ಪ್ರಾಕೃತಿಕ ಭೂಗೋಳಶಾಸ್ತ್ರವನ್ನು **Physical Geography** ಎಂದು ಕರೆದನು.
- ರಾಟ್ಜೆಲ್ ಮಾನವ ಪರಿಸರಗಳ ಸಂಬಂಧಗಳ ಅಧ್ಯಯನವೇ ಮಾನವ ಭೂಗೋಳಶಾಸ್ತ್ರ ಎಂದನು.
- ಪ್ರಾಕೃತಿಕ ಭೂಗೋಳಶಾಸ್ತ್ರ ಗ್ರಂಥ ಪ್ರಕಟಿಸಿದವರು ಸೋಮರ್‌ವಿಲ್ಲೆ.
- ಎಚ್.ಜೆ. ಮೆಕಿಂಡರ್ ರಾಜಕೀಯ ಭೂಗೋಳಶಾಸ್ತ್ರದ ಅಭಿವೃದ್ಧಿಗೆ ಕಾರಣನಾದನು.
- ಬರ್ರೋಸ್‌ನು ಮಾನವ ಜೀವಿ ಪರಿಸ್ಥಿತಿ ಶಾಸ್ತ್ರದ ಅಭಿವೃದ್ಧಿಗೆ ಕಾರಣನಾದನು.

ಭೂಗೋಳಶಾಸ್ತ್ರದ ಶಾಖೆಗಳು	ಪ್ರತಿಪಾದಕರು
ವೈಜ್ಞಾನಿಕ ಭೂಗೋಳಶಾಸ್ತ್ರ	ಇಮ್ಯಾನುಯಲ್ ಕ್ಯಾಂಟ್
ಸಸ್ಯ ಭೂಗೋಳಶಾಸ್ತ್ರ	ಹಂಬೋಲ್ಟ್.
ಪ್ರಾದೇಶಿಕ ಭೂಗೋಳಶಾಸ್ತ್ರ	ಸ್ಟ್ರಾಬೋ.

ಪ್ರಾಕೃತಿಕ ಭೂಗೋಳಶಾಸ್ತ್ರ

ಪ್ರಾಕೃತಿಕ ಪರಿಸರದ ಮೂಲಾಂಶಗಳು, ಭೂಮೇಲ್ಮೈನ ಸ್ವರೂಪಗಳು, ವಾಯುಗುಣ, ಸಸ್ಯವರ್ಗ ಮತ್ತು ಪ್ರಾಣಿವರ್ಗ, ಸಾಗರಗಳು ಮುಂತಾದವುಗಳನ್ನು ಕುರಿತು ಅಧ್ಯಯನ ಮಾಡುವುದೇ ಪ್ರಾಕೃತಿಕ ಭೂಗೋಳಶಾಸ್ತ್ರವಾಗಿದೆ.

2. ಸೌರವ್ಯೂಹ (Solar System)

ವಿಶ್ವ (Universe)

- ಅಸಂಖ್ಯಾತ ನಕ್ಷತ್ರಪುಂಜಗಳ ಮತ್ತು ನಿಹಾರಿಕೆಗಳ ಸಮೂಹವೇ ವಿಶ್ವ. ನಕ್ಷತ್ರಪುಂಜಗಳು ಅನಿಲರಾಶಿ ಮತ್ತು ಧೂಳಿನ ಕಣಗಳಿಂದ ಕೂಡಿರುವುದನ್ನು ನಿಹಾರಿಕೆಗಳೆಂದು ಕರೆಯುವರು.
- ವಿಶ್ವವು 15 ಬಿಲಿಯನ್ ವರ್ಷಗಳ ಹಿಂದೆ ಉಗಮವಾಗಿದೆ.
- ಆಕಾಶ ಕಾಯಗಳ ಗಾತ್ರ, ದೂರ, ಚಲನೆ ಮತ್ತು ಗುಣಲಕ್ಷಣಗಳ ಅಧ್ಯಯನವನ್ನು ಖಗೋಳಶಾಸ್ತ್ರ (Austronomy) ಎಂದು ಕರೆಯುವರು.
- ವಿಶ್ವದ ಸೃಷ್ಟಿ, ಸ್ಥಿತಿ, ಲಯ ಮತ್ತು ವ್ಯಾಪ್ತಿ ಮುಂತಾದವುಗಳ ಅಧ್ಯಯನವೇ ಕಾಸ್ಮೋಲಜಿ (Cosmology).
- ಅಸಂಖ್ಯಾತ ನಕ್ಷತ್ರಗಳ ಸಮೂಹವೇ ನಕ್ಷತ್ರಪುಂಜಗಳು. ಉದಾ:– ಆಂಡ್ರೋಮಿಡಾ, ಮೆಗಲನ್, ಸ್ಕಲ್ಪಟರ್, ಮಿಲ್ಕಿವೇ/ಕ್ಷೀರಪಥ/ಹಾಲುಹಾದಿ ಮುಂತಾದವು.
- ನಮ್ಮ ಸೂರ್ಯನು ಒಂದು ನಕ್ಷತ್ರವಾಗಿದ್ದು Milky Way / ಕ್ಷೀರಪಥ ಎಂಬ ನಕ್ಷತ್ರಪುಂಜಕ್ಕೆ ಸೇರಿದ್ದಾನೆ.

ಆಕಾಶಗಂಗೆ (Galaxy)

- ಗ್ಯಾಲಕ್ಸಿಯು ಅಸಂಖ್ಯಾತ ನಕ್ಷತ್ರಗಳ ಸಮೂಹವಾಗಿದೆ.
- ನಕ್ಷತ್ರ ಸಮೂಹಗಳು ಸಾಲಾಗಿ ಬೆಳ್ಳಗೆ ಬೆಳಗುವ ದಾರಿಯಂತೆ ಹರಡಿರುತ್ತವೆ ಇದರಿಂದಾಗಿಯೇ ಇದನ್ನು ಕ್ಷೀರಪಥ/ಆಕಾಶಗಂಗೆ ಎನ್ನುವರು.
- ಸೌರವ್ಯೂಹವು ಆಕಾಶಗಂಗೆಯ ಕೇಂದ್ರದ ಸುತ್ತಲೂ ಪ್ರತಿ ಗಂಟೆಗೆ 7,92,000 ಕಿ.ಮೀ ವೇಗದಲ್ಲಿ ಸುತ್ತುತ್ತದೆ.
- ಸೂರ್ಯನು ಇರುವ ಕ್ಷೀರಪಥವೆಂದರೆ **'ಆಂಡ್ರೋಮಿಡಾ ಗೆಲಾಕ್ಸಿ'**. ಸೂರ್ಯನು ಆಕಾಶಗಂಗೆಯಲ್ಲಿ ಎಡಭಾಗದ ಅಂಚಿನಲ್ಲಿರುವ ಒಂದು ನಕ್ಷತ್ರವಾಗಿದೆ.

2.1 ನಕ್ಷತ್ರಗಳು (Stars)

- ಸ್ವಯಂ ಪ್ರಕಾಶಮಾನವಾಗಿ ಹೊಳೆಯುವ ಆಕಾಶಕಾಯಗಳೇ ನಕ್ಷತ್ರಗಳು. ವಿಶ್ವದಲ್ಲಿ ಧೂಳು ಮತ್ತು ಅನಿಲದಿಂದ ಕೂಡಿದ ಹಲವಾರು ವಿಸ್ತೃತ ವಸ್ತುರಾಶಿಗಳಿದ್ದು ಇವುಗಳನ್ನು ಜ್ಯೋತಿರ್ಮೇಘ/ನೆಬುಲಾ ಎನ್ನುವರು.
- ನಕ್ಷತ್ರಗಳು ತಮ್ಮ ವಸ್ತುರಾಶಿಯನ್ನು ನಿರಂತರವಾಗಿ ಎರಚುವುದರಿಂದ **ಜ್ಯೋತಿರ್ಮೇಘಗಳು** ಉಂಟಾಗುತ್ತವೆ.
- ನಕ್ಷತ್ರಗಳ ಬಣ್ಣವು ವಿವಿಧ ರೀತಿಯಲ್ಲಿದ್ದು ಅದು ಅವುಗಳ ಬಾಲ್ಯ, ಯೌವನ ಮತ್ತು ಮುಪ್ಪು ಆವಸ್ಥೆಗಳನ್ನು ಸೂಚಿಸುವುದು (ಕೆಂಪು,ಹಳದಿ, ಬಿಳಿ ಹಾಗೂ ನೀಲಿ).
- ನಕ್ಷತ್ರಗಳು ಹೀಲಿಯಂ ಮತ್ತು ಜಲಜನಕಗಳನ್ನು ಒಳಗೊಂಡಿರುತ್ತವೆ.
- ಭೂಮಿಗೆ ಅತಿ ಸಮೀಪದ ನಕ್ಷತ್ರ **'ಸೂರ್ಯ'**.
- ಸೂರ್ಯನಿಗೆ ಸಮೀಪವಿರುವ ನಕ್ಷತ್ರ **'ಪ್ರಾಕ್ಸಿಮಾಸೆಂಟರಿ'**.
- ಹೆಚ್ಚು ಪ್ರಕಾಶಮಾನವಾದ ನಕ್ಷತ್ರ **'ಸಿರಿಯಸ್'**.
- ಸೌರವ್ಯೂಹಕ್ಕೆ ಅತ್ಯಂತ ಸಮೀಪವಿರುವ ಜ್ಯೋತಿರ್ಮೇಘ **'ಓರಿಯನ್'**.
- ನಕ್ಷತ್ರಗಳ ಬೆಳಕನ್ನು ಅಳೆಯುವ ಮಾನ **'ಕಾಂತಿಮಾನ'** (1 ಕಾಂತಿಮಾನ ಎಂದರೆ 3.55 ಜ್ಯೋತಿರ್ವರ್ಷಗಳು).

ಜ್ಯೋತಿರ್ವರ್ಷ (Light Year)

- ನಕ್ಷತ್ರಗಳ ನಡುವಿನ ಅಂತರವನ್ನು ಜ್ಯೋತಿರ್ವರ್ಷದಿಂದ ಅಥವಾ 'ಪಾರ್ಸೆಕ್' ನಿಂದ ಅಳೆಯುವರು.
- ಒಂದು ಜ್ಯೋತಿರ್ವರ್ಷವು 950 ಶತಕೋಟಿ ಕಿ.ಮೀಗಳನ್ನು ಹೊಂದಿರುತ್ತದೆ.
- ಒಂದು ಜ್ಯೋತಿರ್ವರ್ಷವು ಒಂದು ವರ್ಷದಲ್ಲಿ ಬೆಳಕು ಪ್ರತಿ ಸೆಕೆಂಡಿಗೆ 2,99,460 ಕಿ.ಮೀ ವೇಗದಲ್ಲಿ ಚಲಿಸುವ ದೂರವನ್ನು ಒಳಗೊಂಡಿರುತ್ತದೆ.
- ಸೂರ್ಯ ಮತ್ತು ಭೂಮಿಯ ನಡುವಿನ ಸರಾಸರಿ ದೂರ 149,59,700 ಕಿ.ಮೀ. ಈ ದೂರವನ್ನು **ಅಸ್ಟ್ರಾನಾಮಿಕಲ್ ಯೂನಿಟ್** ಎನ್ನುವರು. ಒಂದು ಜ್ಯೋತಿರ್ವರ್ಷ 60,000 ಅಸ್ಟ್ರಾನಾಮಿಕಲ್ ಯೂನಿಟ್‌ಗೆ ಸಮವಾಗಿದೆ.

ನಕ್ಷತ್ರಗಳ ಬೆಳವಣಿಗೆ.

ಹಂತ 1 – ಯೌವ್ವನಾವಸ್ಥೆ

ಹಂತ 2 – ಕೆಂಪು ದೈತ್ಯಾವಸ್ಥೆ.

ಹಂತ 3 – ಬಿಳಿ ಕುಬ್ಜಾವಸ್ಥೆ

ಹಂತ 4 – ಕಪ್ಪು ರಂಧ್ರ

- ನಕ್ಷತ್ರಗಳು ಕೊನೆಯ ಹಂತದಲ್ಲಿ ಒಡೆದು ಸ್ಫೋಟಗೊಳ್ಳುವ ಬೆಳಕಿಗೆ **ಸೂಪರ್‌ನೋವಾ** ಎನ್ನುವರು.
- ಕಪ್ಪು ರಂಧ್ರವು ನಕ್ಷತ್ರದ ಘನೀಕರಿಸಿದ ಕೊನೆಯ ಸ್ಥಿತಿಯಾಗಿದ್ದು ಕಪ್ಪುರಂಧ್ರದ ಮೂಲಕ ಬೆಳಕು ಸಹ ಹೊರ ಹೋಗಲಾರದು.
- ನಕ್ಷತ್ರಗಳ ಜೀವತಾವಧಿ **10 ಶತಕೋಟಿ ವರ್ಷಗಳು** ಎಂದು ಅಂದಾಜಿಸಲಾಗಿದೆ.
- ಸೂರ್ಯನನ್ನು ಸುತ್ತುತ್ತಿರುವ **8 ಗ್ರಹಗಳು** ಮತ್ತು ಅವುಗಳ ಉಪಗ್ರಹಗಳು, ಉಲ್ಕೆಗಳು, ಧೂಮಕೇತುಗಳು ಹಾಗೂ ಕ್ಷುದ್ರಗ್ರಹಗಳ ಪರಿವಲಯವೇ ಸೌರವ್ಯೂಹ.
- ಸೂರ್ಯನು ಆಕಾಶ ಗಂಗೆಯಲ್ಲಿರುವ ಮಧ್ಯಮ ಗಾತ್ರದ ನಕ್ಷತ್ರವಾಗಿದೆ. ಇದು ಸೌರವ್ಯೂಹದ ಒಟ್ಟು ದ್ರವ್ಯರಾಶಿಯ ಶೇ99ರಷ್ಟನ್ನು ಹೊಂದಿದೆ.